Regd. No. M. 3618. Estd. 1921 ಸ್ಥಾಪನೆ. ಬೆಲೆ: 0—1—6.

ನವಯುಗ

ಚಂದಾ ವಿವರ:
(ನುಂಗಡ)
ವರ್ಷಕ್ಕೆ ರೂ. 4—8—0
6 ತಿಂಗಳಿಗೆ ರೂ. 2—8—0
6 ತಿಂಗಳಿಗಿಂತ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ.
ಸೂಚನೆ ಸಂಚಿಕೆಗೆ ಬರೆಯಿರಿ.
ಮೆನೇಜರ್,
ನವಯುಗ, ಉಡುಪಿ, ದ. ಕ.



ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ.

ವರ್ಷ ೨೬ ವಾರ ೫ | FOUNDER SRI. A. B. SHETTY, M. L. A. | Vol. 26 No. 5

ಉಡುಪಿ • 3—10—1946 • ಮಂಗಳೂರು.

ಅಮೃತಾಂಜನ.
ತಲೆನೋವನ್ನು, ತಿರುಗು, ನೋವನ್ನು, ಉಳುಕು ಉತ್ತರಿಗೆ, ಥುಜ, ಹಲ್ಲು ನೋವುಗಳಿಗೂ ಎದೆನೋವು, ಪಾಯಗಳು ಬಾಹು ಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ ಪಕ್ಕವಾಗಿ ನೋಡಿನು ನೋವಾದರೂ ಎಲ್ಲಾ ರೋಗಗಳಿಗೂ ಸಿದ್ಧ ಹುಳುಳ್ಳಿ ಮದ್ದು ಸಕ ನಮ್ಮಲ್ಲಿ ಸಿಕ್ಕುತ್ತದೆ.
REGD.
ಅಮೃತಾಂಜನ ಲಿಮಿಟೆಡ್.
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

The best preventive in epidemics of CHOLERA
"BHUVANENDRA"
CHANDRAMAS
Also a sovereign remedy for diarrhoea, Stomachache, Vomiting and Nausee.
BHUVANENDRA PRODUCTS LTD., Kaupadi.

'ಭುವನೇಂದ್ರ'
ಚಂದ್ರಮಸ್ ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೂಡನಿರಕಕ್ಕ ಅತ್ಯುತ್ತಮ ಔಷಧಿ.
ದೊಡ್ಡವರಿಗೆ 40ಂದ 8ಬೊಟ್ಟು, ಸಣ್ಣಮಕ್ಕಳಿಗೆ 10ಂದ 2ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.
ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.
ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ
ಉಡುಪಿ ಸ್ವಾಕಿಸ್ಟರು:—ಡಾ। ಸಾಯಿಕ್ರಿಷ್ಣಯ್ಯಂಗಾರ್ ರೂಮ್ಸ್ ಎಂಡ್ ಫಾರ್ಮೆಸಿ; ಡಾ। ಆರ್। ಎಸ್। ಶೆಣೈ, ರಥಬೀದಿ; ಡಾ। ಪಿ। ಜಿ। ಆಚಾರ್ಯ ಫಾರ್ಮೆಸಿ; ಡಾ। ಕೆ। ವೇಣು ಗೂಪ್ಯೆ L. I. M.; ಡಾ। ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೊ

For prompt and efficient Banking Service
Bank with
THE VIJAYA BANK LIMITED.
Head Office:—MANGALORE.
Branches: **Byndoor, Coondapoor, Brahmavar, Udipi, Kaup, Karkal, City-Mangalore, Kasaragod, Kanhangad, Puttur, Mercara & Bombay.**

THE
Bombay Life Assurance Company Ltd.
(ESTD·1908)
A PREMIER INSURANCE COMPANY.
New Business in 1945 - - 2,77,23,100.
KOCHIKAR BROTHERS, LTD.
(ESTD. 1910)
Chief Agents for South India including
Travancore. Cochin and Mysore State.
New Business in 1945 in our area:- **Over 5 Millions.**
OUR Expert advice gained by 35 years Experience is at your door FREE.
Drop a card to any of our Offices at —
MADRAS * BANGALORE * MADURA * CALICUT
TRIVENDRUM * UDIPI * AND BOMBAY.

ಉಡುಪಿ ಬೋರ್ಡಿಂಗ್
ಎಂಡ್
ಲೋಜಿಂಗ್ ಮಧುರಾ.

ಕಾ 8—8—1945ರಲ್ಲಿ ಜರಗಿದ ಆರನೆ ಹುಟ್ಟುಹಬ್ಬದ ಸಮಾರಂಭದ ಸಂತೋಷ ಕಾಲದಲ್ಲಿ ನಮಗೆ ಸಕಲ ವಿಧದಿಂದಲೂ ಬೆಂಬಲವಿತ್ತು ಪ್ರೋತ್ಸಾಹಿಸಿದ ಸಾಹಿತೀಯರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಇವಕ್ಕಿಂತಲೂ ದ್ವಿಗುಣಿತವಾಗಿ ನಮ್ಮ ಸೇವೆಯನ್ನು ಹೊಸ ವರುಷದಲ್ಲಿ ಸಲ್ಲಿಸಲು ಮಹಾಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನೀಯುವರೆಂದು ನಿರೀಕ್ಷೆ.

ಎಲ್. ನರಸಿಂಗ ರಾವ್,
ಪ್ರೊಪ್ರೈಟರ್.

—ಮಕ್ಕಳನ್ನು ಹಡೆಯುವುದು ಸಾಕು—
ಅಕಕ್ಕ ಸ್ತ್ರೀಯರಿಗೆ ಬರ್ಥ ಕಂಟ್ರೋಲ್ ರೋಗಗ್ರಹಪ್ತ ಹೆಣ್ಣಾ ಮಕ್ಕಳಿಗೆ
ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಶೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.
ಹತ್ತೆ:—ಹರವೀಪಲ್ಲೆ ೨ಗಳೆ. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟೆ ಚಾರ್ಜು ೧೫ಆಣೆ.
ಮಾಲಕರು:—ಹಾಲಪ್ಪ ಹಕೀರಪ್ಪಾ ಡಾವಣಗೇರಿ
ಆಯುರ್ವೇದ ಔಷಧಾಲಯ, ಗದಗ-ಸಿಟಿ.
ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಫಾರನಾಡ, ವಿಜಾಪುರ—ಬಾನಪ್ಪ ಸಿದ್ಧಲಿಂಗಪ್ಪ ಫಾರವಾಡಕರ್, ವಿಜಾಪುರ. ಚಿಕ್ಕೋಡಿಯಲ್ಲಿ:—ಹುಂಬರವಾಡಿ ಸ್ಟೋರ್ಸ್, ಡಾವಣಗೇರಿ:—ಡಾವಣಗೇರಿ ಪ್ರೆಸ್ಸ್. ಆರ್. ಎಲ್. ಕೆವಲಪಾನಿ, ಕೆಮಿಸ್ಟ, ಹಾವೇರಿ, ಬ್ಯಾಡ್ಗಿ
Ayurveda Oushadalaya, GADAG CITY.

ದಿ ಜುಪಿಟರ್
ಜನರಲ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,
ಬೊಂಬಾಯಿ.
ನಿಮ್ಮದೇ ಆಗಿದೆ; ನಿಮಗಾಗಿಯೇ ಇದೆ.
ಗಳಿಸಿದುದು ಸಂಪಾದನೆಯೆಲ್ಲ; ಉಳಿಸಿದುದೇ ಸಂಪಾದನೆ.
ನಿಮ್ಮ ಅಪರ ವಯಸ್ಸಿನ ಆಶ್ರಯವಾಗಿ—ನಿಮ್ಮನ್ನು ಹೊಂದಿಕೊಂಡವರ ಸಂರಕ್ಷಣೆಗಾಗಿ—ಇಂದೇ ವಿಮಾ ತೆಗೆಯಿರಿ.
ವಿಮೆ ತೆಗೆಯುವವರೂ, ಏಜಂಟರು ಹಾಗೂ ಬ್ರಾಂಚ್‌ಗಳನ್ನು ಇಡುವವರೂ ಬನ್ನಿರಿ—
ಪಿ. ಡಿ. ನವಯು, ಉಡುಪಿ.
ದ. ಕ. ಜಿಲ್ಲೆಯ ಜೇಂಟ್ಸ್.
THE JUPITER
General Insurance Company, Ltd.

ಒಂದು ಕುಚೋದ್ಯ.

ಮಿ. ಜಿನ್ನರಿಗೊಂದು ಕರೆ.

'ಕುಚೋದ್ಯಗಾರ'ನಿಂದ



ತಾ. 25-9-46ನೇ ಬುಧವಾರ ರಾತ್ರಿ ನವಢಿಲ್ಲಿಯಲ್ಲಿರುವ ಕ್ವಯಿದೀ ಆಝಾಮರ ಭವ್ಯ ಬಂಗಲೆ. ಮಿ ಜಿನ್ನರಿಗೆ ಘಂಟೆ 10 ಹೊಡೆಯುವಾಗಲೇ ಗಾಢ ನಿದ್ರೆ ಹಿಡಿದಿತ್ತು. ಕಾರಣ ಅದಿನ ವೈಸರಾಯರೊಡನೆ ಅವರು ನಡೆಸಿದ್ದ ಸಂಭಾಷಣೆಯ ಶ್ರಮ ಸಾಯಂಕಾಲ ಘಂಟೆ 5-30ರಿಂದ 7-15ರ ವರೆಗೆ ಅವರು ವೈಸರಾಯರೊಡನೆ ಮಾತಾಡಿದ್ದರು ಆ ಮಾತುಕತೆಯ ಅವಧಿಯಲ್ಲಿ ತನ್ನ ಉದ್ದ ಕೈಗಳನ್ನವರು ಕದಿಮೆಯೆಂದರೆ 10 ಸಲವಾದರೂ ಮೇಜಿಗೆ ಬಡಿದಿರಬೇಕು ಅವರ ತೋರ್ಬೆರಳೊಮ್ಮೆ ಹಿಸ್ ಎಕ್ಸೆಲ್ಲೆನ್ಸಿಯವರ ಕಣ್ಣಗೊಂಬೆಗೇನೇ ತಾಗಿದ್ದಿತು ಆದರೆ ಮಾಜೀ ಸೇನಾನಿಯ ದೃಢಕೆಯ ಸ್ಪರ್ಶಶಕ್ತಿಯೋ, ಸುದೈವವಶಾತ್ ಅದು ಕೃತಕಾಕ್ಷಿಯಾಗಿದ್ದುದರಿಂದಲೋ, ವೈಸರಾಯಿಗಳು ಯಾತನೆಯನ್ನೇನೂ ಪ್ರದರ್ಶಿಸಿರಲಿಲ್ಲ ಆ ಸಂಭಾಷಣೆಯಲ್ಲಿ ಆರ್ಭಟೆ, ಅಳು, ಖಾರ ಸ್ವರ, ಮಧುರ ರಸ, ನಂಜುಧಾರೆ, ವೈಯಾರ ಧ್ವನಿ, ತೊದಲು ನಿನಾದ— ಸಪ್ತಸ್ವರಗಳನ್ನೂ ಮಿ. ಜಿನ್ನರು ಆಲಾಪಿಸಿದ್ದರು. 1½ ಘಂಟೆಗಳಿಗೂ ಮಿಕ್ಕಿದ ಆ ದೀರ್ಘ ಮಾತುಕತೆಗಳಲ್ಲಿ ಮಿ ಜಿನ್ನರು ಕುರ್ಚಿಯಲ್ಲೇ ಕುಳಿತಿದ್ದ ಸಮಯ ಅತ್ಯಲ್ಪ, ಅವರು ಎದ್ದು ಮಾತಾಡಿದ್ದರು, ಹಾಡಾಡಿದ್ದರು, ಕೂಡಿದು ಭರತನಾಟ್ಯ ಪ್ರದರ್ಶಕರಂತೆಯೂ ವರ್ತಿಸಿದ್ದರು. ಹೀಗಾಗಿ ಆ ದಿನ ಪರಮಾವಧಿ ಆಯಾಸಗೊಂಡಿದ್ದರು; ಆದ್ದರಿಂದಲೇ ರಾತ್ರಿ ಹತ್ತು ಘಂಟೆಯಲ್ಲೇ ನಿದ್ರಾದೇವಿಯ ವಶವಾಗಿದ್ದರು. ಮಿ. ಜಿನ್ನರ ವಿಕಾರ ತಾಂಡವದಿಂದ ವೈಸರಾಯ ನೇವೆಲರೇನೂ ಸಿಟ್ಟಾಗಿರಲಿಲ್ಲ. ತನ್ನಿದಿರಲ್ಲಿ ವೈಸರಾಯರೀತಿ ಸಾಮ್ಯವಾಗಿದ್ದುದರಿಂದ ತಾನು ಅದ್ವಿತೀಯ, ಅಜೇಯ, ಅನುಪಮನೆಂಬ ಹೆಗ್ಗಳಿಕೆ ಮಿ. ಜಿನ್ನರಲ್ಲಿ ಮೂಡಿದ್ದಿತಾದ್ದರಿಂದ ಉತ್ಪ್ರೇಕ್ಷತಾ ಭಾವನೆಯ ಜೋಪೂಜತೆಗೂಡಿ ನಿದ್ರೆ ಗಾಢವಾಗಿತ್ತು; ಎಚ್ಚರ ರಹಿತ ಮೂರ್ಛಾವಸ್ಥೆಗೇನೇ ಬಂದಿದ್ದರು. ಆದರೆ ವೈಸರಾಯರು ಮಿ ಜಿನ್ನರ ಸಿಕ್ಕಾಬಟ್ಟೆ ವರ್ತನೆಯನ್ನು ಕ್ಷಮಿಸಿದ್ದುದು ಬೇರೆ ಕಾರಣದಿಂದಲೇ. ನೆಹರು ಮಂತ್ರಿಮಂಡಲದ ಸಭೆಯ ಅಧ್ಯಕ್ಷತೆ ವಹಿಸಿದ್ದಾಗ ವೈಸರಾಯರಿಗೆ ಆ ಕಾರಣ ಹೊಸತಾಗಿ ಹೊಳೆದಿತ್ತು ಲೋರ್ಡ್ ವೇವೆಲರ ಅಧ್ಯಕ್ಷತೆಯಲ್ಲಿ ಕ್ರಮ ಬದ್ಧವಾಗಿ ಸೇರುವ ಮೊದಲು ರಾಷ್ಟ್ರೀಯ ಸರಕಾರದ ಸಚಿವರು ಗಾಂಧಿಜೀಯ ನೇತೃತ್ವದಲ್ಲಿ ವಾಲ್ಮೀಕಿ ಭವನದಲ್ಲಿ ಸೇರಿದ್ದಾಗ ಸರ್ದಾರ್‌ಪಟೇಲರು ಮಿ. ಜಿನ್ನರನ್ನು ದಸ್ತಗಿರಿಮಾಡಿಸಬೇಕೆಂಬ ಸೂಚನೆಕೊಟ್ಟರಂತೆ. ರಾಷ್ಟ್ರದಲ್ಲಿ ಜಾತೀಯ ಗೊಂದಲಗಳೆದ್ದು ಲಕ್ಷಾವಧಿಮಂದಿ ಅಹುತಿಯಾಗಲು ಮಿ ಜಿನ್ನರ ಕ್ಷುದ್ರ ಪರ್ಜನೆಯೂ ಅವರ ವಿಕಾರ ನಟನೆಯೂ ಕಾರಣ ಆದ್ದರಿಂದ ಅವರನ್ನು ಬಂಧಿಸುವದು ಖಾಸಿ' ಎಂಬ ಅಭಿಪ್ರಾಯ ಎಲ್ಲಾ ಸದ್ಯಸರದೂ ಅಗಿತ್ತಂತೆ ಆದರೆ ಅದು ಹಾಗಲ್ಲವೆಂದು ಗಾಂಧಿಜೀ ಸಮಾಧಾನ ಪಡಿಸಿದರೆಂತೆ "ಮಿ. ಜಿನ್ನರಿಗೀಗ ಪ್ರಾಣಭಯ ಭೀತಿಯಿಂದಲೂ ಕಾರ್ಯ ಬಾಹುಳ್ಯದಿಂದಲೂ ಮೈ ಬಿಟ್ಟು ತಿರುಗಾಡಲಿಕ್ಕಿಲ್ಲ ಸರಿಯಾದ ದೇಹ ವ್ಯಾಯಾಮವಂಗುವುದಿಲ್ಲ. ಆದ್ದರಿಂದ ಸಂಭಾಷಣೆ ಅಥವಾ ಭಾಷಣಗಳ ವೇಳೆಯಲ್ಲಾದರೂ ಅವರು ತನ್ನ ಕಂಠ, ಕೈ, ಬಾಯಿ, ಕಾಲುಗಳಿಗೆ ಸರಿಯಾದ ವ್ಯಾಯಾಮ ಕೊಡದಿದ್ದಲ್ಲಿ ಕ್ಷೀಣ ಪ್ರಕೃತಿಯ ಜಿನ್ನರ ಆರೋಗ್ಯ ಕಟ್ಟು ಪ್ರಾಣಾಪಾಯವೊದಗುವ ಸಂಭವವಿದೆ. ಆದ್ದರಿಂದ ಮಿ. ಜಿನ್ನರ ಅವೆಲ್ಲಾ ವರ್ತನೆಗಳೂ ಕೇವಲ ಆರೋಗ್ಯ ಸಾಧನೆಗಳು ಒಂದೊಮ್ಮೆಗೆ ಜಿನ್ನರನ್ನು ಕೈದ.ಮಾಡಿ ಕೋರ್ಟಿಗೆಳೆದರೂ ಅವರು ಡಾಕ್ಟರರ ಈ ಕಾರಣಗಳನ್ನು ಹಾಜರು ಪಡಿಸಿ ಕ್ವಯದೀ ಆಝಾಮರನ್ನು ಬಿಡುಗಡೆ ಮಾಡಿಸುವದು ಏಂ ಡಿತ" ಎಂದು ಗಾಂಧಿಜೀ ಗುಟ್ಟನ್ನು ಬಹಿರಂಗಪಡಿಸಿ ರಾಷ್ಟ್ರೀಯ ಮಂತ್ರಿಗಳನ್ನು ಸುಮ್ಮಗಿರಿಸಿದರಂತೆ ವೈಸರಾಯರ ಅಧ್ಯಕ್ಷತೆಯಲ್ಲಿ ನಡುಗಾಲ ಸರಕಾರದ ಮಂತ್ರಿಮಂಡಲದ ಸಭೆ ಸೇರಿದಾಗ ಈ ಕಾರಣಗಳನ್ನು ನಮೂದಿಸಿ ಮಿ ಜಿನ್ನರನ್ನು ದಸ್ತಗಿರಿ ಮಾಡಬಾರದೆಂಬ ನಿರ್ಣಯವನಾಗಿತ್ತಂತೆ. ಆದ್ದರಿಂದಲೇ ಲೋರ್ಡ್ ವೇವೆಲರು ತನ್ನ ಖಾಸಗೀ ಸಂಭಾಷಣೆಯಲ್ಲಿ ಮಿ ಜಿನ್ನರು ಪ್ರದರ್ಶಿಸಿದ ಅತಿರೇಕಗಳನ್ನೆಲ್ಲಾ ಸಹಿಸಿಕೊಂಡಿದ್ದರು. ಯಾಕಂದರೆ ಯಾರೊಬ್ಬನ ಆರೋಗ್ಯ ಸಾಧನೆ ಆಥವಾ ವ್ಯಾಯಾಮವನ್ನು ಪ್ರತಿಬಂಧಿಸುವ ವಿಶೇಷಾಧಿಕಾರವೂ ವೈಸರಾಯರಿಗಿಲ್ಲ. ಹೀಗೆ ತಡೆಯಿಲ್ಲದೆ ವ್ಯಾಯಾಮ ಮಾಡಿ ಬಂದಿದ್ದ ಜಿನ್ನರಿಗೆ ಅಯಾಸಬಲದಿಂದ ಗಡದ್ದಿನ ನಿದ್ರೆ ಹಿಡಿದುದು ಹೆಚ್ಚಲ್ಲ.

೦೦ ೦೦ ೦೦

ಹೊರ ಸುತ್ತಿನ ಎಂಟು ಕೋಣೆಗಳ ಒಳಗಿನ ಕೋಣೆ ಆಥವಾ ಕೋಟೆಯೊಳಗೆ ಪ್ರಜ್ಞೆಯಿಲ್ಲದೆ ಪಪಡಿಸಿದ್ದ ಮಿ ಜಿನ್ನರ ಕೆವಿಗೆ ಬೀಳದೆಂದು ತಿಳಿದಿದ್ದರೂ, ಗಾಂಧಿಜೀಯ ಮರ್ಜಿಯನ್ನು ಸುಸರಿಸಿ ಘಂಟೆ ತನ್ನ ಕೆಲಸಮಾಡಿತು, ಹೆನ್ನೆರಡು ಹೊಡೆಯಿತು ಆದೇ ಹೊತ್ತಿನಲ್ಲಿ ಮಿ. ಜಿನ್ನರ ಕಿವಿಗೆ ದೂರದಿಂದೇನೋ ಕೇಳಸುತಿತ್ತು. ದರದರುತ್ತಾ ಆ ಸೋಷ ಹತ್ತಿರ ಹತ್ತಿರ ವಾಯಿತು. ಅದು ಮತ್ತಾವುದು? "ಪಾಕಿಸ್ತಾನ್ ಝಿಂದಾಬಾದ್" ಜಯ ಘೋಷ. ಹೋ, ಏನಿದು? ವೇವೆಲರು ಹೆದರಿ ಪಾಕಿಸ್ತಾನಕ್ಕೊಪ್ಪಿಗೆ ಕೊಟ್ಟರಬೇಕು ಮುಸ್ಲಿಮರು ತಮ್ಮ ಉದ್ಧಾರಕನನ್ನು ಜೀವಸಮೇತ ಸ್ವರ್ಗಕ್ಕೇರಿಸಬೇಕೆಂಬಷ್ಟು ಉತ್ಸಾಹದಿಂದ ಸ್ವಾಗತಿಸಲು ಬಂದಿರಬೇಕು ಹೌದು, ಸಾವಿರಾರು ಜನರೆಬ್ಬಿಸುತ್ತಿರುವ ಘೋಷ- 'ಪಾಕಿಸ್ತಾನ್ ಝಿಂದಾಬಾದ್'. ಕಣ್ಣಿ ಮುಚ್ಚಿಕೊಂಡಿದ್ದರೂ ಮಿ ಜಿನ್ನರ ವದನಕಮಲವರಳಿತು ಆದರೆ ಇದೇನು? ಆ ಘೋಷವು ತೀರಾ ಸಮೀಪದಲ್ಲಿ ಕೇಳಿಸ ಹತ್ತಿದಂತೆಲ್ಲಾ ಕ್ವಯದೀ ಆಝಾಮರ ಮುಖ ಕಪ್ಪೇರುತ್ತಾ ಬಂತು; ತಲೆಗೂದಲು ನೆಟ್ಟಗೆ ನಿಗುರಿನಿಂತಿತು; ಅದು 'ಪಾಕಿಸ್ತಾನ್ ಝಿಂದಾಬಾದ್' ಅಲ್ಲ, ಅಲ್ಲ! 'ಪಾಪಿಜಾನ್ ಮುರ್ದಾಬಾದ್'! (ಪಾಕಿಕೆ ಜೀವವೇ ನಾಶವಾಗು) ಘೋಷಣೆಯಿದು. ಆಕ್ಷರಕ್ಷರ ಸ್ಪಷ್ಟವಾಗಿ ಕೇಳಿ ಬರುತ್ತಿದೆ. ಚಾಂಡಾಲರು! ಕಾಫರರು! ಒಂಜೋ ಆ ಸನೂಜ ಭಾತುಕ ರಾಷ್ಟ್ರೀಯ ಮುಸಲ್ಮಾನರಿರಬೇಕು. ಅಥವಾ ಹಿಂದೂ ಕಾಫರರಿರಬೇಕು. ಜಿನ್ನರು ಆಲ್ಲಿಯೇ ಎತ್ತಗಾಲನ್ನು ಬಲವಾಗಿ ಝಾಡಿಸಿದರು, ಕಾಲಡಿಯ ದಿಂಬು ಕಲ್ಕತ್ತಾದ ಡಿಂಬಗಳಂತೆ ಉರುಳಿಬಿತ್ತು ಪುರುಷ್ಣದಲ್ಲಿ ಅದೇ ಹೇಯಸ್ವರ -ಘನ ಪರ್ಜನೆ- ತನ್ನ ಸುತ್ತಲೂ-'ಪಾಪಿಜಾನ್ ಮುರ್ದಾಬಾದ್'! 'ಪಾಪಿಜಾನ್ ಮುರ್ದಾಬಾದ್'!

ಸಿಟ್ಟು ಮತ್ತು ಜಿಗುಪ್ಸೆ ಅಸಹನೀಯವಾಗಿ ಮಿ ಜಿನ್ನರು ಸುತ್ತಲೂ ನೋಡಿದರು. ಸಾವಿರಾರು ವಿಕಾರರೂಪದ ವಿಶೇಷಾಕಾರದ ಪ್ರೇತಗಳು ತನ್ನನ್ನು ಸುತ್ತಲಿಂದಲೂ ಮುತ್ತಿಗೆ ಹಾಕಿ ಬೊಬ್ಬಿಡುತ್ತಿವೆ ಕಾಂಗ್ರೆಸಿಗರರಬಹುದೇ ಎಂದು ತಲೆಯಿಂದ ಕಾಲಿನ ವರೆಗೂ ಅವುಗಳನ್ನು ಪರೀಕ್ಷಿಸಿ ನೋಡಿದರು; ಆದರೆ ಹಾರ್ಯ! ಕೆಲವಕ್ಕೆ ತಲೆಯೇ ಇಲ್ಲ, ಇದ್ದ ತಲೆಗಳಲ್ಲಿ ಕಾಂಗ್ರೆಸಿನ ಬಿಳಿ ಟೋಪಿಯೂ ಇಲ್ಲ ಲೀಗಿನ ಕರಿ ಟೋಪಿಯೂ ಇಲ್ಲ--ಕೆಂಪು ಕೆಂಪಾಗಿವೆ! ಕದಂಬಗಳು ಕೆಲವು, ಕೈ ಕಾಲಿಲ್ಲದವು ಕೆಲವು, ಹೊಟ ಬಿಡಪು ಕೆಲವು, 'ಹೇ ದಮ್ಮಯ್ಯ' ಎಂದು ಬಾಯರಳಿಸಿ ಕಣ್ಣು ಹೊರಳಿಸಿ ನಿಂತಿಹವು ಕೆಲವು, ಪರ್ರನೇ ತಿರುಗುವ--ಓಡ್ಯೋಡಿ ಆಲ್ಲಿಯೇ ನಿಲ್ಲುವ--ಏನನ್ನೋ ಎದೆಗಪ್ಪಿಕೊಂಡಂತಿರುವ---ಕಂಗವೊಂದೆಡೆಯಿದ್ದರೆ ಕಾಲಿಂದೆಡೆಯಿರುವ--ಒಂತೂ ವರ್ಣನಾತೀತ ವಿಕಾರ ರೂಪದ ಸುಮಾರು ಏಳೆಂಟು ಸಾವಿರಗಳಿವೆ! ಎಲ್ಲವೂ ತನ್ನನ್ನಾಹುತಿಗೊಳ್ಳಲೆಂಬಂತೆ ಅಲುಗುತ್ತಿವೆ ಮಿ. ಜಿನ್ನರು ಗಡಗಡನೇ ನಡುಗಿದರು

[೧೧ನೇ ಪುಟ ನೋಡಿರಿ]

ನೀವು ನಿಮ್ಮ ವ್ಯಾವಹಾರಿಕ ಪಟ್ಟಿ ಉಪಭೋಗಿಸಬೇಕಾದರೆ

ಒಮ್ಮೆ ಲೆ | ಹಣವ ರಾಶಿಯಲ್ಲಿರಬೇಕಾದ / ನಿರಿಂತರಾಗಬೇಕಾದ / ಲಕ್ಷ್ಮೀಪುತ್ರರಾಗಬೇಕಾದ / ಆನ್ನುಕೂಲಕ್ತರಾಗಬೇಕಾದ | ಕಾರಣವಿಲ್ಲ.

ನೀವು ಅನುಸರಿಸುವ ವ್ಯಾವಹಾರಿಕ ಮಾರ್ಗ ಸುಗಮವಿದ್ದರೆ ಎಲ್ಲವೂ ನಿಮ್ಮ ಕೈಯಲ್ಲಿವೆ ಯಾಕಂದರೆ ಆಯ ನಿಮ್ಮ ಉತ್ಪನ್ನದ ಮಿತಿಗಿಂತಲೂ ಮಿಗಿದ್ದು ಹಂಗೂ ಮಹತ್ವದ್ದು.

ಕಳೆದ ಸುಮಾರು 40 ವರ್ಷಗಳಿಂದ ನೀವು ಕೆನರಾ ಬ್ಯಾಂಕಿನಲ್ಲಿಟ್ಟುಕೊಂಡ ಚಾಲ್ತಿ ಖಾತೆಯೇ ನಿಮಗೆ ವ್ಯಾವಹಾರಿಕ ಪ್ರಪಂಚದಲ್ಲಿ ಅಚಲವಾದ ಸ್ಥಾನ ಗಳಿಸಿಕೊಟ್ಟಿದೆ

"ನಾನು ಕೆನರಾ ಬ್ಯಾಂಕಿನ ಒಂದು ಚೆಕ್ ಕೊಡುತ್ತೇನೆ"ಂದು ಹೇಳುವುದರಲ್ಲಿ ನಿಮಗೆ ಬಹಳ ಹೆಮ್ಮೆಯಿದೆಂಬುದು ನಮಗೂ ಗೊತ್ತು!

ಮರೆಯಬೇಡಿರಿ! ಕೆನರಾ ಬ್ಯಾಂಕಿನಲ್ಲಿ ಯಾವ ಚೆಕ್ ವಟಾಯಿಸುವುದಕ್ಕೂ ನಿಮಿಷಕ್ಕಿಂತ ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲವೆಂಬುದನ್ನು!!

Estd 1906

CANARA BANK LIMITED

(Incorporated in British India, liability of Members Limited)

ದಿ ಮೂಲ್ಕಿ ಬೇಂಕ್,
ಲಿಮಿಟೆಡ್.

ಗ್ರಾಮಸ್ಥರ ನಡುವೆ ಸಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,
Moolky, S K.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸಕ್ಕಾರಿಯರುಗಳೂ ಪ್ರಕಟವಾಗುತ್ತವೆ

ವಾರ್ಷಿಕ ಚಂದಾ
ರೂ. 1-8-0 ಮಾತ್ರ.

ಬೈಂಡು ಮಾಡಿದ ಪ್ರತಿಯೊಂದು ಸಂಪುಟಕ್ಕ ರೂ 2/-

ಹೆಚ್ಚಿನ ವಿಚಾರಕ್ಕೆ ಬರೆಯಿರಿ—
ಬಾಲಚಂದ್ರ ಆಫೀಸು, ಉಡುಪಿ

ದಿಲ್ಲಿಯ ಕಾಂಗ್ರೆಸ್ ಸಮಿತಿ ಸಭೆ—

ಒಂದು ಒಳನೋಟ.

'ದೂರದ ನೋಟಗಾರ'ನಿಂದ

ಬೊಂಬಾಯಿಯಲ್ಲಿ ಕಾಂಗ್ರೆಸಿನ ಜಾಹೀರು ಅಧಿವೇಶನ ನಡೆದ ವರುಷ (ಯಾವ ಇಸವಿಯೆಂದು ಆದರೆ ಸಂಗತಿ ಸ್ಮರಣೆಯಲ್ಲಡಿ ನೆನಪಿಲ್ಲ) ನನ್ನ ಕಾಂಗ್ರೆಸ್‌ಭಕ್ತ ನಿತ್ರರೊಬ್ಬರು ಆದಕ್ಕಾಗಿಯೇ ಬೊಂಬಾಯಿಗೆ ತೋಗಿಬಂದಿದ್ದರು. ಬಾಬು ರಾಜೇಂದ್ರರ ಹೃದಯವಿದ್ದರೂ, ಅದನ್ನು ಪ್ರದರ್ಶಿಸಲು ಅಂತಹ ಅನುಕೂಲತೆ ಮಾತ್ರವಿಲ್ಲದ್ದರಿಂದ ಕಾಂಗ್ರೆಸಿನ ಸಹವರ್ತಿಪ್ರೇಕ್ಷಕರಾಗಿ ಉಳಿದ ಸಾವಿರಾರುಮಂದಿಗಳಲ್ಲಿ ಈ ಮಿತ್ರರೂ ಒಬ್ಬರು. ಬೊಂಬಾಯಿ ಅಧಿವೇಶನದ ಸರ್ವ ಕಾರ್ಯಕಲಾಪಗಳನ್ನೂ ಅಲ್ಲಿ ಏರ್ಪಾಟ್ಕಿಯಿಂದ ಅವರು ಕಂಡು ಬಂದಿದ್ದರೆಂದು ಬೇರೆ ಹೇಳಬೇಕಾಗಿಲ್ಲ. ಅವರ ಬೊಂಬಾಯಿ ಪ್ರಯಾಣದ ಉದ್ದೇಶವೇ ಅದು. ಆದ್ದರಿಂದ ಬೊಂಬಾಯಿ ಕಾಂಗ್ರೆಸಿಗೆ ಧುರೀಣರು ಹೊರಟ ಹೊತ್ತನ್ನೆಲ್ಲೀ ಹೊಂಟು, ಅವರು ಹಿಂದಿರುಗಿದಸಮಯದಲ್ಲೀ ಇವರೂಹಿಂದಿರುಗಿದ್ದರ್. ಆದರೆ ಊರಿಗೆ ಬಂದೊಡನೆ ಕಾಂಗ್ರೆಸ್ ಅಧಿವೇಶನದ ವಾರ್ತೆಗಳು ಪ್ರಕಟವಾಗಿದ್ದ ಎಲ್ಲಾ ದಿನದ ಪತ್ರಿಕೆಗಳನ್ನೂ ತರಿಸಿಕೊಂಡು ಓದಿಕೊಂಡ ವೇಲೆಯೇ ಬೊಂಬಾಯಿಯಲ್ಲೇ ನೆಲ್ಲಾ ನಡೆಯಿತು ಎಂಬುದವರಿಗೆ ಗೊತ್ತಾಯಿತೆ. ಈ ವರ್ತನೆಯಿಂದಾಶ್ಚರ್ಯಗೊಂಡ ನಾನು ಪ್ರಶ್ನಿಸಿದಾಗ ಅವರೆಂದರು:- "ಆಡುಗೇ ಮನೆಯಲ್ಲಿದ್ದವನಿಗೂ ಊಟದ ರುಚಿ ಗೊತ್ತಾಗಬೇಕು ಪಂಗಿಯಲ್ಲಿ ಕುಳಿತಾಗಲೇ ಅಲ್ಲಿ ಒಂದು ಕಡೆಯಿದ್ದರೆ ಮತ್ತೊಂದು ಕಡೆಯಲ್ಲಾದುದು ತಿಳಿಯುವುದಿಲ್ಲ ಇದ್ದಲ್ಲಿಯೂ ಎಲ್ಲವನ್ನೂ ಸರೀ ಅರ್ಥ ಮಾಡಿಕೊಳ್ಳಲಾಗುವದಿಲ್ಲ ಒಂದೊಮ್ಮೆಗೆ ಅರ್ಥವಾದರೂದೂರವಿದ್ದು ತಿಳಿಯುವದರಲ್ಲಿರುವ ಆಕರ್ಷಣೆ ಆಲ್ಲಿರುವಾಗ ಇಲ್ಲವೇ ಇಲ್ಲ ಯಾವುದು ತಪ್ಪು, ಯಾವುದು ಸರಿ ಎಂಬುದನ್ನು ಅಲ್ಲಿಯೇ ಗ್ರಹಿಸುವುದೂ ಅನಾಧ್ಯ ಕ- ಸಿ



ಮೌಲಾನಾ ಅಜಾದ್



ಸರ್ದಾರ್ ಪಟೇಲ್

ಕಡೆಗೆ ಇಲ್ಲಿಂದಲೇ ಒಳನೋಟ ಬೀರಬೇಕೆಂದು ಮನಸ್ಸಾದ್ದರಿಂದ. ಆ ಯೋಗ್ಯತೆಯಿರುವದು ದೂರದಿಂದ ಕಂಡ ನಮಗಲ್ಲದೆ, ಅಲ್ಲಿದ್ದ ಪರಿಗಲ್ಪನೆಂಬ ದಸ್ಸು ಸ್ಪಷ್ಟಪಡಿಸುವದಕ್ಕಾಗಿ ಈ ಕೆಳಗಿನ ಅಭಿಪ್ರಾಯಗಳು. ತಪ್ಪೋ ಸರಿಯೋ ಎಂಬ ಪ್ರಶ್ನೆ ಎರಡನೆಯದು, ಸಂಗತಿ ನಿಜಾ ಎಂಬ ಮೊದಲ ಪ್ರಶ್ನೆಯೇ ಅಲ್ಲಿ ಹಾಜರಿದ್ದವರ ತಲೆಯಲ್ಲಿ ಹೊಳೆದಿರಲಾರದೆಂದು ಪಂಡಿತ ನೆಹರೂ

೦೦ ೦೦ ೦೦

ಕಾಂಗ್ರೆಸನ್ನು ಒಂದು ಸರಪಣಿಯಂತಿಟ್ಟುಕೊಂಡರೆ, ದಿಲ್ಲಿಯ ಈ ಸಮಿತಿಯಲ್ಲೆದ್ದಿದ್ದ ಪ್ರಶ್ನೆಯಿಂದ ಆ ಸರಪಣಿಯಿಂದ ಅಳಿಯಬೇಕೋ ಬಿಗಿಯಿ ಬೇಕೋ ಎಂಬ ಪ್ರಶ್ನೆಗೆ ಒಪಲಿಗೆ ಆ ಸರಪಣಿ ಸಂಬಂಧ ವ್ಯಕ್ತಿಯಾಂದರೆ ಜೈ ಪ್ರಕಾಶ್ ನಾರಾಯಣ್. ಅವರು ಕಾಂಗ್ರೆಸಿನೊಳಗಿನ ಇದಿರು ಪಕ್ಷದ ನಾಯಕರು ಸಮತಾವಾದಿಗಳ ಸೂತ್ರಧಾರಿಗಳು ನಡುಗಾಲ ಸರಕಾರದಲ್ಲಿ ಕಾಂಗ್ರೆಸ್ ಸೇರಿಕೊಂಡುದಕ್ಕೊಪ್ಪಿಗೆ ಕೊಡುವ ಏಕೈಕ ಸಭೆಯ ರಂಪವನ್ನು ಅವರು ವಿರೋಧಿಸಲಾ ಇಷ್ಟ, ಅನುಮೋದಿಸಲೂ ಇಷ್ಟ, ತಟಸ್ಥರಾಗಿದ್ದರು--ಬಣ್ಣ ರಹಿತ ಮಾತೇ ಇರುವುದೆಂಬ ಉಗ್ರವಾದಿಗಳ್ಳಿವಿಧ ನಡೆಂದಾಡುವದಾದರೆ ಪ್ರಿಶಂಕು ನಾಗಿ ಸಹಿಸಿದ್ದರು! 'ಈ ಅರ್ಧದೊಟ್ಟಿಗೆ ಕೈಯೂಡ್ಡಲಾರದು' ಎಂಬ ಸಮತಾವಾದಿ ಮೋರಾಜಿಯೂ ಜೈ ಪ್ರಕಾಶರನ್ನು ವಿರೋಧದತ್ತ ಎಳೆದರೆ ನೆಹರು ಪ್ರಭಾವ ಮತ್ತು ಅಸ್ತದ ಕರಗೊಳಗಾಗಿ ಕಾಂಗ್ರೆಸ್ ಕಾರ್ಯ ಸಮಿತಿಯಲ್ಲಿ ಸೇರಿಕೊಂಡ ಅವರ ಸ್ಥಾನವೇ ಅನುಮೋದನೆಯತ್ತ 'ಎಳೆಯಿತು--ಇಕ್ಕಡೆಯ ಎಳೆದಾಟ ಸಮಬಲವಾಗಿ ಜೈ ಪ್ರಕಾಶರು ಮಧ್ಯದಲ್ಲೇ ಉಳಿದರು "ಒಳ್ಳೆಯದಕ್ಕೋ ಕೆಟ್ಟದ್ದಕ್ಕೋ-ಹೇಗಿದ್ದರೂ ನಡುಗಾಲ ಸರಕಾರವೆಂಬುದು ವಾದಾತೀತ ವಸ್ತುಸ್ಥಿತಿಯಾಗಿ ಆಲ್ಲಿದೆ" ಎಂದು ಬಿಟ್ಟರು ಆದರೂ ಸ್ವಾಮಿ ಸಹಜಾನಂದ, ಸುರೇಶಚಂದ್ರ ಬೆನರ್ಜಿ, ಮೌಲಾನಾ ಹಿಫ್ಜುರ್ ರಹಿಮಾನ್, ಅಚ್ಯುತ ಪಟ್ಟವರ್ಧನಂತಹ ಸಮತಾವಾದಿಗಳು ಅದನ್ನು ವಿರೋಧಿಸದೆ ಬಿಡಲಿಲ್ಲ, "ರಾಜಕೀಯದಲ್ಲಿ ಹೊಟ್ಟೆ ತುಂಬಾ ರೊಟ್ಟಿಯೊಂದನ್ನಲ್ಲದೆ, ಹಸುಗೇಯನ್ನವುಣ್ಣಲೇ ಬಾರದು' ಎಂಬ ತಮ್ಮ ಉಜ್ವಲಾಭಿಪ್ರಾಯಗಳನ್ನು ಪ್ರಕಟಿಸದೆ ಈ ಸಂದರ್ಭವನ್ನೂ ಕಳಕೊಳ್ಳಲಿಲ್ಲ ಆದರ ಅಷ್ಟೆ, ಅದು ವಿರೋಧದ ಪ್ರದರ್ಶನ ಮಾತ್ರವಾಗಿತ್ತು ಹೊರತು ವಿರೋಧ ಸಾಧನವಾಗಿರಲಿಲ್ಲ. ಆದ್ದರಿಂದ ೨೦೦ ಸದಸ್ಯರಿದ್ದ ಸಭೆಯಲ್ಲಿ 12 ಮಂದಿಯ-ಬೆಂಕಾದರ ಅವರನ್ನು ಕಾಂಗ್ರೆಸಿನ ದ್ವಾದಶ ರುದ್ರರೆಂದೇ ಹೇಳೋಣ-ವಿರೋಧ ಮಾತ್ರವಿದ್ದು ನಡುಗಾಲ ಸರಕಾರ ಕ್ಕೊಪ್ಪಿಗ ದೂರತೆಂದು ಹೆಜ್ಜೆ ಇ

೦೦ ೦೦ ೦೦

ಇಲ್ಲಿ ಒರೆಗಲ್ಲಿನ ಆಕರ್ಷಣೆಯಿಂದ ಕಾಣುತ್ತಿರುವದೆಂದರೆ ಎರಡನೇ ನಿರ್ಧಾರ. 'ನಡುಗಾಲ ಸರಕಾರದಲ್ಲಿ ಅಧಿಕಾರ ವಹಿಸಿದ ನೆಂಬ ಕಾರಣದಿಂದ ಯಾರೊಬ್ಬನನ್ನೂ ಕಾರ್ಯಕಾರೀ ಸಮಿತಿಯ ಸದಸ್ಯತ್ವದಿಂದಾಗಲೀ, ಕಾಂಗ್ರೆಸಿನ ಇತರ ಯಾವುದೇ ಅಂಗಸಂಸ್ಥೆಯಿಂದಾಗಲೀ ಹೊರದೂಡಬೇಕೆಂದಿಲ್ಲವೆಂಬ ರಾಯು ಇದನ್ನು ಅಖಿಲ ಭಾರತ ಸಮಿತಿಯಲ್ಲಿ ಪಂಡಿತ ಗೋವಿಂದ ವಲ್ಲಭ ಪಂತರು ತಂದಿದ್ದರು. ಎರಡು ದಿನಗಳ ಚರ್ಚೆಯ ನಂತರ 135 ಅನುಕೂಲ 80 ಪ್ರತಿಕೂಲ ಮತಗಳಿಂದದು ಮಂಜೂರಾಯಿತು ಜೈ ಪ್ರಕಾಶ್ ನಾರಾಯಣ್, ಅನ್ವರ್ ಹರ್ವಾನಿ, ಮಹಾವೀರ ತ್ಯಾಗಿ,

NOTICE

In the Court of the District Munsif of Mangalore

R E P No 208/46
in O S No 134/42

Between

Dr P Venkat Rao Petitioner

and

Narayana Shambhatta and others —Respondents

To Respondents -

2 Anantha Shambhatta, 5 Srinivasa Shambhatta—sons of Vasudeva Shambhatta, residing in Agadiyoor village, Trichur District.

Please take notice that the petitioner above named has filed the above execution for sale of the properties and the same is posted to 7-10-1946 for your appearance If you fail to appear on that date the same will be decided in your absence

By order of the Court

Mangalore 25-9-1946. } *S Venkat Rao,* Vakil for Petitioner

Life is full of Opportunities.

Life is full Every moment opportunities created by God for man to work for himself and his fellowmen Now the prosperous family, employment, education contented citizen, good relations, friends, cultured society and also new ups and downs to spice life with Have you made sure that you cannot reasonably aspire to and find a life even in our absence

The Canara Mutual Assurance Co ,Ltd.,

Head Office **UDIPI.** (S India)

Local Agents of the Bombay and Madras Presidencies in Indian States and the States of Mysore and Hyderabad

The Commercial Corporation of India, Ltd,

UDIPI (S. India)

NOTICE.

ಉಡುಪಿ ಡಿ ಮು. ಕೋರ್ಟಿನಲ್ಲಿ.

O. S No 272/1940

ಮಹಾಲಿಂಗ ಸ್ಪಟ್ಟಿ—ವಾದಿ

ಮತ್ತು

1 ರಾಮ ಭಟ್ಟ. 2 ಶ್ಯಾಮ ಭಟ್ಟ. 3 ಕಾಳು ಭಟ್ಟ 4 ಶ್ರೀನಿವಾಸ ಭಟ್ಟ—ಪ್ರತಿವಾದಿರು.

ಇವರೊಂದಿಗೆ

ಮೇಲ್ಕಂಡ ಸ್ಯಾಜ್ಯದ 3ನೇ ಪ್ರತಿವಾದಿ ಕಾಳು ಭಟ್ಟ 4ನೇ ಪ್ರತಿವಾದಿ ಶ್ರೀನಿವಾಸ ಭಟ್ಟರಿಗೆ ತಿಳಿಯಪಡಿಸುವದು ಮೇಲ್ಕಂಡ ಸ್ಯಾಜ್ಯದ ವಾದಿಯು ಘೋಷ್ಯಾದಿ ಆಸ್ತಿ ಸ್ಥಿರವಿತ ಕೇಳಿ ನಿಮ್ಮ ಮೇಲೆ ಕೊಡಾ ಮಾಡಿದ ಸದ್ರಿ ಸ್ಯಾಜ್ಯವನ್ನು 10-10-1946 ಕ್ಕೆ ತೀರ್ಪಿಗೆ ಇಡೋಣಾಗಿಯವೆ ನಿಮಗು ಅಕ್ಷೇಪ ವಗೈರೆ ಇದ್ರೆ ಸದ್ರಿ ದಿವಸ ನೀವು ಸ್ವತಹಾ ವ ಕೀಲರ ಮುಕಾಂತ್ರ ಕೋರ್ಟಿಗೆ ಹಾಜ್ರಾಗಿ ಜಾಹೀರುಮಾಡಿಕೊಳ್ಳತಕ್ಕದ್ದು. ಕ ಸ್ಪಿವಲ್ಲಿ ನಿಮಗುನ್ನು ಎಕ್ಪಾರ್ಟೆಮಾಡಿ ನಿಂಬ್ರ ತೀರ್ಮಾನಿಸಲ್ಪಡುವದು.

P. Padmanabha Rao, Vakil Vakil for Plaintiff.

ಉಡುಪಿ
ತಾ. 26 9 46.

ಪಟ್ವರ್ಧನ್, ಬುರುಜೋತ್ತಮ ತ್ರಿಕು ಮ್ಯಾಸ್, ಮಾಸ್ಟರ್ ಮೋಟಾಸಿಂಗ್, ಬೆಬೆನ್ ರೋಯಿ, ಶ್ರೀಮತಿ ರಾಮ್ ದುಲಾರಿ ಮೊದಲಾದವರು ಅದನ್ನು ವಿರೋಧಿಸಿದುದರಲ್ಲಿ ಆಶ್ಚರ್ಯವಿಲ್ಲ ಜಗನ್ನಾಥ ರಾವ್, ಸಯ್ಯದ್ ನಾಶಿರ್ ಅಲಿ, ಆರ್. ಕೆ. ಸಿಧ್ವ ಮುಂತಾದವರು ತಿದ್ದುಪಡಿ ಸೂಚನೆ ತಂದುದೂ ಸೋಜಿಗವನ್ನಿಸುವ ದಿಲ್ಲ. ಯಾಕಂದರೆ ಇವರಲ್ಲಿ ಹಿಚ್ಚಿನವರು ಸಮತಾವಾದಿ ಎಡಪಕ್ಷೀಯರು; ಕೆಲವರು ತಾವು ಕಾಂಗ್ರೆಸ್ ಅಧಿನಾಯಕರ ಜೋಹು ಕುಂವಾಲರಲ್ಲ ಎಂಬುದನ್ನು ಆಗಾಗ ಪ್ರದರ್ಶಿಸುವದಗತ್ಯವೆಂಬಪ್ಪನ್ನು ಮನಗಂಡವರು. ಆಂತೆಯೇ ಡಾ। ಸಿ. ಸಿ.

ಪಂಡಿತ ನೆಹರು.

ಘೋಷರು ಈ ಸೂಚನೆಯನ್ನು ಅನುಮೋದಿಸಿದ್ದಾಗಲೀ, ಕಾಳೇಶ್ವರರಾವ್, ಪ್ರತಾಪಸಿಂಗ್, ಅಮಿರ್ ಮಹಮ್ಮದ್ ಖಾನ್, ಕೃಪಾಲನಿ, ಎಸ್. ಕೆ. ಪಾಟೀಲ್ ಮೊದಲಾವರು ಅದನ್ನು ಸಮರ್ಥಿಸಿದುದಾಗಲೀ ವಿಶೇಷವೇನೂ ಇಲ್ಲ. ಯಾಕಂದರೆ ಇವರೆಲ್ಲಾ ಬಲ ಪಕ್ಷೀಯರೆದ್ದು, ಹಿರಿಯ ಪ್ರಮುಖರು ರಾಜೀನಾಮೆ ಕೊಟ್ಟು, ಆ ಸ್ಥಾನಗಳಿಗೆ ಬಿಸಿ ರಕ್ತದ 'ಜೇಜವಾಬ್ದಾರಿಗಳು ತುಂಬುವ ಅನಾಹುತವೊಂದು ತಮ್ಮ ಜೀವಮಾನದ ವರೆಗಾದರೂ ನಡೆಯದಿರಲಿ ಎಂದು ಹಾರೈಸುವವರೇ. ಆದರೆ ಇವರ ಸಾಲಿನವರೆಂದು ಪ್ರತಿಯೊಂದು ಸಂದರ್ಭದಲ್ಲೂ ಖಚಿತವಾಗಿದ್ದ ಮೌಲಾನಾ ಆಝಾದರು ಈ ಸೂಚನೆಯನ್ನು ಕಂಠೋಕ್ತವಾಗಿ ವಿರೋಧಿಸಿದುದಷ್ಟೇ ಅಲ್ಲ; ಶಿಸ್ತನ್ನಲ್ಲವಾದರೂ ಸಂಪ್ರದಾಯದ ಗಡಿಯನ್ನು ಮೀರಿ ಒಂದು ಚಿಟ್ಟನ್ನೂ ಹೊರ ಹಾಕಿದುದು ನಿಜಕ್ಕೂ ವಿಶೇಷ. ಈಗ ನೆಹರು ನಡುಗಾಲ ಸರಕಾರದ ಮಂತ್ರಿಗಳೂ, ನೆಹರೂ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಸದಸ್ಯರೂ ಆಗಿರುವ ಪಂಚೆ ಪಾಂಡವರೆಂದರೆ ಜವಾಹರಲಾಲ ನೆಹರು, ವಲ್ಲಭಾಯಿ ಪಟೇಲ್, ರಾಜೇಂದ್ರ ಪ್ರಸಾದ್, ರಾಜಗೋಪಾಲಾಚಾರಿ, ಶರಚ್ಚಂದ್ರ ಬೋಸ್ "ಇಂಡಿನ ಕಾಂಗ್ರೆಸ್ ರಥದ ಈ ಪಂಚಾಮೃತಗಳನ್ನು-ಕಳದ ಇಪ್ಪತ್ತೈದು ವರ್ಷಗಳಿಂದ ಯಾರು ಕಾಂಗ್ರೆಸಿನ ಮುಂದೆ ತಂದ ಯಾವುದೊಂದು ಸೂಚನೆಯೂ ವ್ಯರ್ಥವಾದುದಿಲ್ಲವೋ ಆ ಕಾಂಗ್ರೆಸ್ ಪಂಚಾಕ್ಷರೀ ಮಂತ್ರವನ್ನೇ-ನಾವು ಕಾರ್ಯಕಾರೀ ಸಮಿತಿಯಿಂದ ಹೊರಗಿಡಲು ನೋಡುವದು ಕೃತಘ್ನತೆಯಲ್ಲವೆ? ಆಮಾನುಷವಲ್ಲವೆ?" ಎಂದು ಸೂಚನೆಯ ಅನುಮೋದಕರ ಸವಾಲು. "ನಡುಗಾಲ ಸರಕಾರ ಹಸ್ತದ ಈ ಐದು ಬೆರಳುಗಳೇ ಕಾಂಗ್ರೆಸಿನ ಕಾರ್ಯಕಾರೀ ಕೈಯ್ಯ ಬೆರಳುಗಳೂ ಆಗಿದ್ದರೆ ನಮ್ಮ ಕೆಲಸವಿಂದು ಪೂರ್ಣವಾಯಿತು. ಪೂರ್ಣ ಸ್ವತಂತ್ರ ಸರಕಾರ ಬಂತು ಎಂಬ ಭಾವನೆ ಸಾರ್ವಜನಿಕರಲ್ಲಿ ಮೊಳೆಯಲಾರದೆ? ಕಾಂಗ್ರೆಸಿನ ಕ್ರಾಂತಿ ಸ್ವರೂಪವೇ ನಿರ್ನಾಮವಾಗದೆ? ಈ ಪಂಚ ಪ್ರಾಣಗಳ ಹೊರತು ಕಾಂಗ್ರೆಸಿನೊಳಗೆ ಬೇರೆ ಜೀವನವೇ ಇಲ್ಲವೆಂಬ ಅರ್ಥವೆ?" ಎಂದು ಸೂಚನೆಯ ವಿರೋಧಿಗಳ ಆಕ್ಷೇಪ. ಮೌಲಾನಾ ಆಜಾದರು ಎರಡನೇ ವರ್ಗಕ್ಕೆ ಸೇರಿದುದರಲ್ಲಿ ಸಾಮಾನ್ಯ ನ್ಯಾಯವೊಂದಿದೆಯಾದರೂ ಅದಕ್ಕೂ ವಿರುದ್ಧವಾದ ವಿಶೇಷವೇನೋ ಪರದೆಯೊಳಗೆ ನಡೆದಿಂಬೇಕು ಎಂಬ ಸಂದೇಹ ಕೈಡೆಯದೆ ಫಲಿತಾಂಶವನ್ನು ಕಂಡು ಮೌಲಾನರ ಮನಸ್ಸು ನೊಂದಿರಬಹುದೆ?

೦೦ ೦೦ ೦೦

ಇಲ್ಲಿ ವಿಪರೀತಾರ್ಥ ಕಟ್ಟುವುದು ಸರಿಯಲ. ಹಿಂದೂ ಸಭಾವಾದಿಗಳಂಥವರು ಮೌಲಾನರ ಮೇಲೆ ಜಾತ್ಯಭಿಮಾನದ ಆರೋಪವನ್ನು ಆರಿಯಿಂದಲೂ ಮಾಡುತ್ತಾ ಬಂದಿದ್ದಾರೆ 'ನಾನು ಪ್ರಥಮತಃ ಮುಸಲ್ಮಾನ್, ಆ ಮೇಲೆಯೇ ಭಾರತೀಯ' ಎಂದು ಹಿಂದೊಮ್ಮೆ ಮೌಲಾನರಾಡಿದ್ದ ಮಾತನ್ನು ಭೂತ ಕನ್ನಡಿಯಲ್ಲಿಟ್ಟು ಹಿಂದೂ ಅಭಿಮಾನಾಕ್ಷಿಯ ಮುಂದೆ ಹಲವು ಬಾರಿ ಪ್ರದರ್ಶಿಸಲಾಗಿದೆ-'ನಾನು ಶುದ್ಧ ಸನಾತನೀ ಹಿಂದು' ಎಂದ ಗಾಂಧೀಯ ಮಾತನ್ನು ಲೀಗ್ ಮುಸಲ್ಮಾನರು ಕಲ್ಪನ ಹಸ್ತದಿಂದ ತಿಕ್ಕಿ ದುರ್ವಾಸನೆ ಬರಿಸಿದಂತೆಯೇ! ಆದರೆ ರಾಷ್ಟ್ರೀಯ ಮುಸಲ್ಮಾನರ-ಅದರಲ್ಲೂ ಆವರ ನೇತಾ ಮೌಲಾನರ-ರಾಷ್ಟ್ರೀಯ ಪ್ರೇಮವು ಇಂದಿನ ವಾತಾವರಣದಲ್ಲಿ ಎಂತಹ ಮುಳ್ಳ ಜಿಡುಸಿನೊಳಗಿಂದ ತಲೆಯೆತ್ತಿ ಕಾಣಿಸಬೇಕಾಗಿದೆ, ಎಂಬುದನ್ನು ಗಮನಿಸಿದವರು ಅದರ ಉಜ್ವಲತೆಗಾಗಿ ಗೌರವದಿಂದ ತಲೆಬಾಗಲೇಬೇಕು. ಅದೇ ಕಾಲದಲ್ಲಿ ಒಂದು ವಿಷಯವನ್ನು ನೆನಪಿನಲ್ಲಿಡಬೇಕು. ಕಾಂಗ್ರೆಸಿನ ಮೂಲ ಭೂತ ತತ್ವಗಳು ಪ್ರಶ್ನಾತೀತವಿದ್ದರೂ ಯಾವುದಾದರೊಂದು ಕಾರ್ಯಕ್ರಮ ಅಥವಾ ವಿಧಿ ನಿಯಮಗಳ ಕುರಿತು ಭಿನ್ನಾಭಿಪ್ರಾಯ ಪಡುವ ಹಕ್ಕು ಪ್ರತಿಯೊಬ್ಬ ಕಾಂಗ್ರೆಸಿಗನಿಗೂ ಇದೆ. ಮೌಲಾನರಂಥವರಿಗೆ ಆ'ಹಕ್ಕಿರುವುದಷ್ಟೇ ಅಲ್ಲ-ಅದನ್ನವರು ಉಪಯೋಗಿಸಲೇಳುವ ಇಂತಹ ಸಂದರ್ಭಗಳಲ್ಲಿ 'ಎಲ್ಲರೆ ನ್ಯಾಯ ಬದ್ಧ ಹಕ್ಕೂ ಇದೇ' ಎಂಬ ಭಾವನೆ ಮಿಕ್ಕವರಲ್ಲೂ ಮೊಳೆಯುತ್ತದೆ. ಥಿಲ್ಲಿ ಕಾಂಗ್ರೆಸ್ ಸಮಿತಿ ಸಭೆಯಲ್ಲಿ ಹಾಗಾಗಿತ್ತು. ಮೌಲಾನಾ ಆಜಾದರು, ಪಂತರ ಸೂಚನೆಗೆ ತನ್ನ ವ್ಯಕ್ತಿಗತ ವಿರೋಧವನ್ನು ಪ್ರಕಟಿಸಿದಾಗ ಅದರ ಭವಿಷ್ಯ ಹಾಳಾದಂತೆ ತೋರಿತು. ಪಂಡಿತ ಪಂತರು ಗಲಿಬಿಲಿಗೊಂಡು ಚಲಿಸಹತ್ತಿದುದು ಕಂಡುಬಂದಿತ್ತು. ಈ ಸಂದರ್ಭದ ಒಂದು ವಿಶೇಷ ವಿದ್ಯಮಾನವು ವಿಚಾರಾರ್ಹವಿದೆ "ನಡುಗಾಲ ಸರಕಾರದ ಮಂತ್ರಿಗಳು ಕಾಂಗ್ರೆಸ್ ಕಾರ್ಯಕಾರೀ ಸದಸ್ಯರಾಗಿರಬಹುದೆಂಬ ಸೂಚನೆಗೆ ಕಾರ್ಯಕಾರೀ ಸಮಿತಿ ಸಭೆಯಲ್ಲಿ 8 ಮಂದಿ ಅನುಕೂಲ 6 ಮಂದಿ ಪ್ರತಿಕೂಲವಿದ್ದರು" ಎಂಬ ಗುಟ್ಟನ್ನು ಮೌಲಾನರು ಮಾತಿನ ಭರದಲ್ಲಿ ಹೊರಗೆಡಹಿದಾಗ "ಇದು ಬೇಡವಾದ ಕೆಲಸ" ಎಂದು ಅಧ್ಯಕ್ಷ ನೆಹರುಗಳಿಗೂ ಅನ್ನಿಸಿತ್ತು. ಅವರು ನಡುವೆ ಬಾಯಿ ಹಾಕಿ, ಮೌಲಾನರನ್ನು ಅಧ್ಯಕ್ಷ ಸ್ಥಾನದಿಂದ ತಿದ್ದುವವರಂತೆ "ವರ್ಕಿಂಗ್ ಕಮಿಟಿಯಲ್ಲಿ ಈ ಕುರಿತು ಏಕಮತವಿರಲಿಲ್ಲ" ಅನ್ನಬೇಕಾಯಿತು. ಮಾಜೀ ರಾಷ್ಟ್ರಪತಿ ಮೌಲಾನರೂ ಇಷ್ಟನ್ನೇ ತಿಳಿಸಬೇಕೆತ್ತಲ್ಲ ಸಂಜ್ಞೆ ಹೇಳಬಾರದಿತ್ತೆಂದು ಅದರ ಅರ್ಥ. ಹಾಗಾದರೆ ಮೌಲಾನ ಆನೆಶ ಭರದಿಂದ ಕಾರ್ಯಕಾರೀ ಸಮಿತಿಯ ಗುಟ್ಟೊಂದನ್ನು ಬಹಿರಂಗಪಡಿಸುವ ಬಾಯಿ ತಪ್ಪು ಮಾಡಿದರೆ? ಜಾಗರೂಕತೆಯಿದ್ದೇ ಮಾತಾಡಿದ್ದಾದರೆ ಉದ್ದೇಶಪೂರ್ವಕ ಅಧಿಕ ಪ್ರಸಂಗ ಮಾಡಿರಬಹುದೆ? ಎರಡೂ ಅಲ್ಲ. ಕಾ. ಸಮಿತಿಯ ಒರ್ವ ಸದಸ್ಯ ಸಂಡಿತ ಪಂತರು ಆ ಸೂಚನೆಯನ್ನು ಮುಂತಂದಾಗ, ಇದು ಹ್ಯಾಕ್ಯಮಾಂಡಿನ ಶಿಫಾರಸು ಪಡೆದಿದೆ ಎಂಬಭಿಪ್ರಾಯವನ್ನು ಸಭೆ ಕಟ್ಟಿಕೊಂಡಿತು. ವರ್ಕಿಂಗ್ ಕಮಿಟಿಯ ನಿರ್ಧಾರವೊಂದಕ್ಕೆ ನಕಾರ ಹೇಳುವ ಅವಿಧೇಯತೆಯು ಆ. ಭಾ. ಸಮಿತಿಯ ಸ್ವಭಾವಕ್ಕೊಗ್ಗದುದು. ಆದ್ದರಿಂದ ಮೌಲಾನರು ಆದರ ಹುಟ್ಟು ಸ್ಥಾನದ ಪೂರ್ಣ ಚಿತ್ರವನ್ನು ಬಿಡಿಸಿ ತೋರಿಸಬೇಕಾಯಿತು; ಇಂತಹ ಪ್ರಸಾದನವನ್ನು ಯಾವ ಸಂದರ್ಭದಲ್ಲೇ ಆದರೂ ಮೌಲಾನರು ಸಹಿಸುವವರಲ್ಲ ಮೊನ್ನೆ ಥಿಲ್ಲಿಯಲ್ಲೂ ಆಜಾಗ್ರತೆಯ ಕಡೆಗೆ ಆಸಹಿಷ್ಣುತೆ ಪ್ರದರ್ಶಿಸುವ ದೊಂದನ್ನಲ್ಲದೆ ವೀರಾವೇಶ ತಪ್ಪನ್ನೂ ಅವರು ಮಾಡಿಲ್ಲ. ಆದರೆ ತನ್ನ ತೂಕದವರು-ತನ್ನ ಮರ್ಜಿಯವರೇ-ಆಗಿರುವ ಕಾಂಗ್ರೆಸಿನ ಸಂಚಿ ಮಹಾ ಹಿರಿಯರು ಕಾರ್ಯಕಾರೀ ಸಮಿತಿ ಮತ್ತು ನಡುಗಾಲ ಸರಕಾರವೆರಡರಲ್ಲೂ ಇರುವುದು ಸರಿಯಲ್ಲವೆಂದು ಮೌಲಾನಾ ಆಜಾದರು ಕೊಡಾಜ್ಞೆ ಪ್ರಕಾಶ ನಾರಾಯಣರ ಅಭಿಪ್ರಾಯವನ್ನೇಕಟ್ಟಿಕೊಂಡುದರ ಗುಟ್ಟೇನು? ಹಿಂದೂ-ಮುಸ್ಲಿಂ ಪ್ರಶ್ನೆಯ ಸಂಬಂಧವಾದ ಸರ್ದಾರ್ ಪಟೇಲರ ಕರಿಣ ಧೋರಣೆಯ ಮೌಲಾನರಿಗಪ್ರಿಯವಾಗಿರಬಹುದು. ನಡುಗಾಲ ಸರಕಾರದ ಮುಖದಿದಿರು ಆಗಾಗ ಕೈಬೆತ್ತ ತಿರುಗಿಸಲಾಗುವಂತೆ ಎಡಪಕ್ಷೀಯರಿಗೆ ಕಾಂಗ್ರೆಸ್ ಕಮಿಟಿಯು ಐದು ನಿಲ್ದಾಣಗಳನ್ನು ಬಿಟ್ಟು ಕೊಡಲು

ಜೈ ಪ್ರಕಾಶ್ ನಾರಾಯಣ್.

ದ್ವಿರಧಾರೂಢ ಹಿರಿಯರಿಗೆ ಮನಸಿಲ್ಲದಿರಬಹುದು, ಹೇಳುವವರೂ ಕೇಳುವವರೂ ಅವರೇ ಆಗಿದ್ದರೆ ಎಲ್ಲಭಾಯಿಗಳಂತಹ ಸರ್ವಾಧಿಕಾರಿಗಳು ಕೆಬ್ಬಿಣದ ಚೆಂಡಾದಾರೆಂದು ಭಯ ಮೌಲಾನರಿಗಿದ್ದಿರಬಹುದು. ಅಂತೂ ಈ ಚಿನ್ನಾಭಿಪ್ರಾಯವು ಟೊಳ್ಳು-ಗಟ್ಟಿಗೆ ಸಂಬಂಧಿಸಿದುದು ಹೊರತು ಹಿಂದೂ-ಮುಸ್ಲಿಂ ಸಂಬಂಧವನ್ನಿದ್ದದಲ್ಲವೆಂಬುದು ಸ್ಪಷ್ಟ ಮೌಲಾನರಲ್ಲಿ ಅಂತಹ ಜಾತ್ಯಾಭಿಮಾನವಿರುತ್ತಿದ್ದರೆ ನಡುಗಾಲ ಸರಕಾರದಲ್ಲಿ ರಾಷ್ಟ್ರೀಯ ಮುಸಲ್ಮಾನರಿಗೆ ಸ್ಥಾನ ಬೇಡವೆಂದು ಘೋಷಿಸಿ ಲೀಗಿನ ಮರ್ಯಾದೆಯುಳಿಸಬಹುದಿತ್ತು. ಆದರೆ ಮೌಲಾನರು ಅಂಧವರಲ್ಲ ಥಿಲ್ಲಿ ಸಭೆಯ ಆಂದೋಲನವು ಅಭಿಪ್ರಾಯ ಮಂಥನವಷ್ಟೇ ಹೊರತು ಜಾತಿ, ಸಪ್ತೆ, ಮೆಂ ಧಾಭಿಮಾನಗಳ ಘರ್ಷಣೆಯಲ್ಲ

ಇಂದ್ರಭವನ ಕಾಫಿ ಹೊಟೆಲ್

ಬಲ್ಮಠ * * * * ಮಂಗಳೂರು.

ಹೊಸ ವ್ಯವಸ್ಥೆ—ಯೋಗ್ಯ ಬ್ರಾಹ್ಮಣರಿಂದ ಲಿಂಡಿ ಪಾಕೀಯಗಳ ತಯಾರಿಕೆಗಳ—ವಿದ್ಯುದ್ದೀಪ, ರೇಡಿಯೊಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.

ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ

ಬಿ. ಬಾಬು ಶೆಟ್ಟಿ

Indra Bhavan Coffee Hotel,

almatta Road, Mangalore.

ಮುಟ್ಟಾಗುವಿಕೆ

ಹಲತಿಂಗಳಿಂದ ಕಟ್ಟಾಗಿದ್ದರೂ, ಕಪ್ಪದ ಗರ್ಭಧಾರಣೆ ಅಥವಾ ಇನ್ನಾವಕಾರಣವಿದ್ದರೂ— 'ಕುಮಾರಿ ಮಾತ್ರೆಗಳು' ನಿಶ್ಚಿತ ನಿರುಪದ್ರವಿ—ಹಿಂದಿನಂತೆಯೇ, ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಹರಿಯಗೊಡುವುದು; ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವುದು; ಸಾವಿರಾರು ಮಂದಿ ಶ್ರೀಮತ್ತರಾಗಿದ್ದಾರೆ! ಬೆಲೆ ರೂ 3|- ಕೈಮೂದ ಕೇಸುಗಳಿಗೆ ರೂ. 5 6 ಕಂಗಳ ಬರ್ತ್ ಕಂಟ್ರೋಲಿಗೆ ರೂ. 4|.. ವಿ. ಪಿ. 12 ಆಣೆ ಆಲಾಯಿದ

Mrs. P. DEVEE,

P. O. B. (A B) Tollygunge, Calcutta.

ಸ್ಟಾಕಿಸ್ಟ್: ಪಾ ಕಂಪೆನ್ಸಿ ಮಂಗಳೂರು

ಭಾರತ ಮತ್ತು ಬರ್ಮ ನಡುಗಾಲ ಸರಕಾರಗಳು

ಇವೆರಡರೊಳಗಿರುವ ಸಂಬಂಧ ಮತ್ತು ಸಾಮ್ಯತೆ.

ಜನತಾ ಸರಕಾರವಿಲ್ಲದೆ ಅಲ್ಪಕ್ಕೆ ಅಸಾಧ್ಯವೆಂದು ಭಾರತದಂತೆಯೇ ಬರ್ಮದಲ್ಲಿಯೂ ಬ್ರಿಟಿಷರಿಗೆ ಮುಂದಬ್ಬಾಗಿ ಕಟ್ಟಕಡೆಗೆ ಸಪ್ಟಂಬರ್ 27ರಲ್ಲಿ ಆಲ್ಲಿಯೂ ಜನಪ್ರತಿನಿಧಿಗಳ ನಡುಗಾಲ ಸರಕಾರಸ್ಥಾಪನೆಯಾಗಿದೆ ಇದು ಆತ್ಯಾವಂದದ ವಿಷಯ. ಭಾರತದ ನಡುಗಾಲ ಸರಕಾರಕ್ಕಿರುವ ಅಧಿಕಾರಗಳೇ ಬರ್ಮದ ತಾತ್ಕಾಲಿಕ ಸರಕಾರಕ್ಕೂ ಕೊಡಲ್ಪಟ್ಟಿವೆ. ಬರ್ಮದ ನೆಹರು ಅನ್ನಬಹುದಾದ ಯು. ಆಂಗ್ ಸೇನರ ನಾಯಕತ್ವದಲ್ಲಿ ರಾಜಕೀಯ ಪಕ್ಷಗಳ ಪ್ರತಿನಿಧಿಗಳುಳ್ಳ ಸರಕಾರ ರಚಿಸಿಗೊಂಡಿದೆ. ನೆಹರುಗಳೂ, ಲೋಕದ ಇತರ ಪ್ರಜಾಸತ್ತಾವಾದಿಗಳೂ ಆಂಗ್ ಸೇನರಿಗೆ ಅಭಿನಂದನೆ ಕಳುಹಿಸಿದ್ದಾರೆ. ಭಾರತ ಮತ್ತು ಬರ್ಮವೆರಡೂ ಏಕಕಾಲದಲ್ಲಿ ಸ್ವಾತಂತ್ರ್ಯದ ಹೆಬ್ಬಾಗಿಲಿಗೆ ಒಟ್ಟೊಟ್ಟಿಗೇರಿದುದು ನಿಜಕ್ಕೂ ಅನುಕೂಲ ಪಾಗೂ ಆನಂದದ ಘಟನೆ.

ರಾಷ್ಟ್ರೀಯ ಭಾರತಕ್ಕೆ ರಾಷ್ಟ್ರೀಯ ಬರ್ಮದ ಅಕ್ಕ!

ಸ್ವತಂತ್ರ ಭಾರತ-ಬರ್ಮಗಳೊಳಗಿನ ಸುಸಂಬಂಧವು ಇಪ್ಪರಲ್ಲೇ ಆರಂಭವಾಗಿದೆ; ಅದೂ ಮುಖ್ಯ ವಿಷಯವಾದ ಆಹಾರ ಧಾನ್ಯಗಳ ಸಂಬಂಧಿಯ ಮೂಲಕವೇ ಬರ್ಮದ ಆಂಗ್ ಸೇನ್ ಸರಕಾರವು ಭಾರತದ ನೆಹರು ಸರಕಾರಕ್ಕೆ ಒಂದು ಲಕ್ಷ ಟನ್ ಅಕ್ಕಿಯನ್ನು ಕಳುಹಿಕೊಡಲು ಇಷ್ಟರಲ್ಲೇ ಮುಂದೆ ಬಂದಿದೆ. ಇದಕ್ಕೆ ಬದಲಾಗಿ ಇತರ ಸಾಮಾನುಗಳ ಸಹಾಯವನ್ನು ಭಾರತದಿಂದ ಬರ್ಮ ಯಾಚಿಸಿದೆ. ಇಂದಿನ ಕಷ್ಟ ಕಾಲದಲ್ಲಿ ಹಿಂದು ಸ್ಥಾನವು ಈ ಸಹಾಯವನ್ನು ಕೃತಜ್ಞತಾಪೂರ್ವಕ ಅಂಗೀಕರಿಸಿಕೊಂಡು, ಸ್ವಂತಾ ಪತ್ತನ್ನು ತಗ್ಗಿಸಿಕೊಳ್ಳಲಿದೆ. ಸಪ್ಟೆಂಬರ್ ಕೊನೆಯ ವಾರದಲ್ಲಿ ಆಹಾರ ಮಂತ್ರಿ ಬಾಬು ... ಪ್ರಸಾದರಿತ್ತಿದ್ದ ಸ್ಪಷ್ಟ ಜಾತಕದಂತಿದ್ದ ಭಾಷಣವು ಭಾರತೀಯರ ಹೃದಯದಲ್ಲಿನ್ನೂ ಪ್ರತಿಧ್ವನಿಸುತ್ತಿದೆ. ಸ್ಪಷ್ಟ ಅಂಕಿಸಂಖ್ಯೆಗಳನ್ನು ಕೂಟ್ಟ "ನವ್ಯ ದೇಶದಲ್ಲಿ ಬೆಳೆ ಹಾಳಾಯಿತು. ಹೊರ ದೇಶಗಳಿಂದ ಆಮದು ಸಾಕಷ್ಟಾಗಲಿಲ್ಲ. ಸಯಾಮ್ ಮತ್ತು ಜಪಾನಿಂದ ಆಮದಾಗುವ ಪಥಾನುಕೂಲತೆ ಕಪ್ಪಕ್ಕಿಟ್ಟಿದ, ಆರ್ಜೆಂಟೈನಿನಿಂದ ಬರುವದೆಂದು ನೀರ್ಕ್ಷಿಸಿದ್ದ ಅಕ್ಕಿ ಬಾರದೆ ಹೋಯಿತು. ಹೀಗಾಗಿ ಮುಂದಿನ ಎರಡು ಮೂರು ತಿಂಗಳು ಅತ್ಯಂತ ವಿಷಮಕಾಲ. ಹಸುಗೇ ಪರಿಮಾಣವನ್ನು ಇನ್ನೂ ತಗ್ಗಿಸಬೇಕಾದೀತು" ಎಂದು ಕರ್ಮವೀರರಾಜೇಂದ್ರ ಪ್ರಸಾದರು ವರ್ಣಿಸಿದ್ದರು. ಇಂತಹ ಕಾಲದಲ್ಲಿ ಬರ್ಮದ ಉಪಕಾರವನ್ನು ಮರೆಯಲಾಗುವದಿಲ್ಲ.

ವಿದೇಶ ಧೋರಣೆಯಲ್ಲಿ ಸಾಮ್ಯತೆ

ಭಾರತ ಮತ್ತು ಬರ್ಮಾ ರಾಷ್ಟ್ರೀಯ ಸರಕಾರಗಳ ವಿದೇಶ ಧೋರಣೆಯಲ್ಲೂ ನಿಕಟ ಸಾಮ್ಯತೆ ಕಾಣುತ್ತಿದೆ. ವಿದೇಶ ಮಂತ್ರಿ ಪಂಡಿತ ನೆಹರುಗಳು ಹಿಂದುಸ್ಥಾನದ ಧೋರಣೆಯನ್ನು ಸುದೀರ್ಘಾನುಭವವುಳ್ಳ ಮಂತ್ರಿಯಂತೆ ಅತ್ಯಂತ ನಾಜೂಕಾಗಿ ಸ್ಪಷ್ಟವಾಗಿ ತಿಳಿಸಿದ್ದಾರೆ: "ಇನ್ನು ಮುಂದೆ ಹೊರ ದೇಶಗಳಲ್ಲಿ ಅಧಿಕ ಸಂಖ್ಯೆಯಲ್ಲಿ ರಾಯಭಾರಿಗಳನ್ನು ನೇಮಿಸುವೆವು. ಆವರ ಸೂತ್ರಧಾರಿತ್ವವು ಇಂಗ್ಲಾಂಡಿನ ವಿದೇಶ ಕಚೇರಿಯದಾಗಿರದೆ, ನಾನೇ ಅದನ್ನು ವಹಿಸುವೆವು. ಈ ಪ್ರತಿನಿಧಿಗಳ ಸ್ಥಾನಮಾನಗಳನ್ನೇರಿಸಿ, ಸಕಾಲದಲ್ಲಿ ಅವರು ಸ್ವತಂತ್ರ ರಾಯಭಾರಿಗಳಾಗುವರು. ಅವರಿಗೆ ಸಲಹೆಗಳನ್ನು ಭಾರತದಿಂದಲೇ ಹೋಗಬೇಕು. ಆಸ್ಯಾ, ಆಫ್ರಿಕಾ, ಮತ್ತಿತರ ಕಡೆಗಳ ವಸಾಹತು ಪದ್ಧತಿಯನ್ನು ಅಂತ್ಯಗೊಳಿಸುವದೇ ನಮ್ಮ ಉದ್ದೇಶ. ಲಂಡನಿನ ಭಾರತ ಕಚೇರಿ ಸದ್ಯದಲ್ಲೇ ಮುಚ್ಚಲ್ಪಡಲು ಬದ್ಧವಿದೆ. ಮೌಲಾನಾ ಆಜಾದರ ನೇತೃತ್ವದಲ್ಲಿ ಸುಧ್ಯ ಪೂರ್ವ ರಾಷ್ಟ್ರಗಳಿಗೂ ಶ್ರೀ. ಕೃಷ್ಣ ಮೆನನರ ಸಹಕಾರದಿಂದ ಪಶ್ಚಿಮ ಮತ್ತು ಪೂರ್ವ ಯುರೋಪು ರಾಷ್ಟ್ರಗಳಿಗೂ ಹಿತ ಸಂಬಂಧ ಸಾಧಕ ಸಮಿತಿಗಳನ್ನು ಕಳುಹಿಸಬೇಕೆಂಬ ನಿರೀಕ್ಷೆಯಿದೆ. ಇಂಡೋನೇಶಿಯದ ರಿಪಬ್ಲಿಕ್ ಸರಕಾರದ ಕಡೆಗೆ ನೇಕಡಾ ನೂರರಷ್ಟು ನಮ್ಮ ಸಹಾನುಭೂತಿಯಿದೆ. ಗಡಿನಾಡಿಗೂ, ಸಿಲೋನಿಗೂ ಸ್ವತಃ ಭೇಟಿ ಕೊಟ್ಟು ಸರಿಸ್ಥಿತಿಯ ಪ್ರತ್ಯಕ್ಷಾವಲೋಕನೆ ಮಾಡಲಿದ್ದೇನೆ" ಎಂಬ ನೆಹರುಗಳ ಘೋಷಣೆಯು ಲೋಕ ಶಾಂತಿ ಪ್ರೇಮಿಗಳೆಲ್ಲರಿಂದಲೂ ಪ್ರಶಂಸಿಸಲ್ಪಟ್ಟಿದೆ. ಬರ್ಮದ ವಿದೇಶ ಮಂತ್ರಿ ಆಂಗ್‌ಸೇನರೂ ಇದೇ ಧೋರಣೆಯನ್ನು ಧ್ವನಿಸಿ, ರಕ್ಷಣಾ ವ್ಯವಸ್ಥೆಯನ್ನು ಬಲಗೊಳಿಸುವದೂ, ಬ್ರಿಟನು ಇಚ್ಛಿಸಿದಲ್ಲಿ ಅದರೊಡನೆ ಮೈತ್ರಿಯಿಂದಿರುವುದೂ ತಮ್ಮ ಉದ್ದೇಶವೆಂದಿದ್ದಾರೆ. "ಪಂಡಿತ ನೆಹರುಗಳು ಭಾರತದ ಶಿರಸ್ಸಾಗಿರುವಾಗ ಅದರೊಡನೆ ನಿಕಟ ಸಂಬಂಧ ವಿಟ್ಟುಕೊಳ್ಳುವದು ನಮಗೆ ಅತ್ಯಂತ ಸುಲಭ" ಆಂದಿದ್ದಾರೆ ವ್ಯಾಖ್ಯಿಸಿನಲ್ಲಿರುವ, ಲಂಡನಿನ ಭಾರತ ಲೀಗಿನ ಕಾರ್ಯದರ್ಶಿಯಾಗಿದ್ದ ಶ್ರೀ. ನಿ. ಕೆ. ಕೃಷ್ಣ ಮೆನನರು ಆಜ್ಞೆಯೇ ರಶ್ಯದ ವಿದೇಶ ಮಂತ್ರಿ ಮೊಲಟವರೊಡನೆ ಗಾಢ ಸಂಭಾಷಣೆ ನಡಿಸಿದ್ದಾರೆ. ರಶ್ಯಾ-ಭಾರತ ಸಂಬಂಧವಿದರಿಂದ ಬಲಗೊಳ್ಳುವದೆಂಬ ಆಶೋದಯವಾಗಿದೆ.

ನಡುಗಾಲ ಸರಕಾರದ ಶಕ್ತಿ ಪರೀಕ್ಷೆ

ಆದರೆ ಒಂದು ವಿಷಯದಲ್ಲಿ ಬರ್ಮಾ ಸರಕಾರವು ಭಾರತ ಸರಕಾರಕ್ಕಿಂತ ಸುದೈವಿ. ಅಲ್ಲಿ ಯಾವುದಾದರೊಂದು ಪಕ್ಷವು ಸರಕಾರಕ್ಕೆ ವಿರುದ್ಧವಾಗಿ ಬಂಡಾಯವೆದ್ದಿಲ್ಲ. ಆದರೆ ಭಾರತದಲ್ಲಿ ರಾಷ್ಟ್ರೀಯ ಸರಕಾರದ ಶಕ್ತಿ ಪರೀಕ್ಷೆಯು ಆದಿ ಭಾಗದಲ್ಲೇ ಆಗ ಬೇಕಾಗಿ ಬಂದಿದೆ. 'ನಡುಗಾಲ ಸರಕಾರ ಬಲಶಾಲಿಯಾದ್ದರೆ ಲೀಗಿನ ಪ್ರತ್ಯಕ್ಷ ಹೋರಾಟ ಅಡಿಗೆ ಬೀಳುವದು. ಪ್ರತ್ಯಕ್ಷ ಹೋರಾಟವೇ ಬಲಶಾಲಿಯಾದರೆ ನಡುಗಾಲ ಸರಕಾರ ಅಡಿಗಾಗುವದು' ಎಂದು ಅಧಿಕಾರಾರೋಹಣದ ನೊದಲೆ ನಿರ್ವಿಕಾರ ಬುದ್ಧಿಯಿಂದಾಡಿದ್ದ ನೆಹರುಗಳ ಮಾತು ಈಗ ಕಾರ್ಯತಃ ಅಸ್ತಿತ್ವಕ್ಕೆ ಬರಬೇಕಾಗಿದೆ. "ಲೀಗನ್ನು ಬಿಟ್ಟು ಕಾಂಗ್ರೆಸು ಸರಕಾರ ರಚಿಸಿದೊಡನೆಯೇ ನಮ್ಮ ಪ್ರಾಂತಾಡಳಿತೆಯನ್ನು 'ಸ್ವತಂತ್ರ ಪಾಕಿಸ್ತಾನ್ ಪ್ರಾಂತ್ಯ'ವೆಂದು ಜಾಹೀರುಮಾಡಿ ಬಿಡುವೆವು" ಎಂದು ಸಿಂಧಿನ ಲೀಗ್ ಪ್ರಧಾನಿಗಳೂ ಬಂಗಾಳದ ಲೀಗ್ ಪ್ರಧಾನಿಗಳೂ ಅಬ್ಬರಿಸಿದ್ದರು. ಆದು ಇದು ವಿಚಿತ್ರವಾಗಿಲ್ಲ; ಇನ್ನೆಂದಾ ಸಾಧ್ಯವಾಗದ ಮಾತು. ಆದರೆ ಬಂಗಾಳದ ಸುಹ್ರವರ್ದಿ ಸರಕಾರದೊಡನೆ ಕೇಂದ್ರದ ನೆಹರು ಸರಕಾರ ಭುಜಪೌರಸಬೇಕಾದ ಸಂದರ್ಭವೊಂದು ಇಷ್ಟರಲ್ಲೇ ಬಂದಂತಿದೆ. ಇದು ವರೆಗೆ ನಾರಿನ ಬೆಲೆ ನಿಯಂತ್ರಣಾಧಿಕಾರವು ಭಾರತ ರಕ್ಷಣಾ ಶಾಸನದನ್ವಯ ಕೇಂದ್ರ ಸರಕಾರಕ್ಕಿದ್ದಿತು. ಆದರೆ ಯುದ್ಧ ಕಾಲದ ಈ ವಿಶೇಷ ಶಾಸನವು ಒಕ್ಟೋಬರ್ 30ನೇ ರಾತ್ರಿಯಿಂದ ವಾಯಿದೆ ಹೋಗಿ ರದ್ದಾಗಿದೆ. ಆದ್ದರಿಂದ ಆ ಅಧಿಕಾರವೀಗ ಬಂಗಾಳದ ಪ್ರಾಂತಿಕ ಸರಕಾರಕ್ಕೆ ಬಂದಿದೆ. ನಾರಿನ ಬೆಲೆ ಹತೋಟಿ ಇನ್ನೂ ಮುಂದುವರಿಯಬೇಕೆಂದು ಕೇಂದ್ರ ಸರಕಾರದ ಅಭಿಮತವಿದ್ದರೆ, ಅದು ಹೋಗಲೇಬೇಕೆಂದು ಬಂಗಾಳದ ಸುಹ್ರವರ್ದಿ ಸರಕಾರದ ಛಲವಿದೆ. ಈ ಸಂಬಂಧವಾಗಿ ಹಿಂದೀ ಸರಕಾರದ ವ್ಯಾಪಾರ ಖಾತೆಯ ಅಧಿಕಾರಿಗಳ ಪ್ರತಿನಿಧಿಗಳು ಸುಹ್ರವರ್ದಿಗಳೊಡನೆ ಪರ್ಯಾಲೋಚಿಸಿದಾಗ ಆವರದನ್ನು ಧಿಕ್ಕರಿಸಿಬಿಟ್ಟದ್ದಾರೆ. ನಾರಿನ ಬೆಲೆ ನಿಯಂತ್ರಣಾಧಿಕಾರವು ಇದೇ ಕಾ 1ರಿಂದ ಬಂಗಾಳ ಸರಕಾರಕ್ಕೆ ಬಂದರೂ ಆದರ ಆಮದು ರಫ್ತಿನ ಬೆಲೆ ನಿಶ್ಚಯಿಸುವ ಅಧಿಕಾರ ಕೇಂದ್ರಕ್ಕೇನೇ ಇದೆ. ಹೆಚ್ಚಿನ ನಾರು ರಫ್ತಾಗುವಂತಹದಿರುವುದರಿಂದ ಕೇಂದ್ರ ಸರಕಾರವು ಈ ಎಳೆದಾಟದಲ್ಲಿ ಸೋಲುವಂತಿಲ್ಲ ಇಂತಹ ಎಷ್ಟು ಘರ್ಷಣೆಗಳಿಗೆ ಭುಜ ಕೂಟ್ಟು— ಎಂತೆಂತಹ ಜವಾಬ್ದಾರಿಗಳಿಗೆ ತಲೆ ಕೊಟ್ಟು-ಕೇಂದ್ರ ಸರಕಾರ ಮುಂದೊತ್ತಬೇಕಾಗಿದೆ ಎಂಬುದನ್ನು ಶಾಂತವಾಗಿ ಒಂದು ಕ್ಷಣ ಯೋಚಿಸುವ ರಾಷ್ಟ್ರಭಿಮಾನಿಗಳು ಅದರ ಬೆಂಬಲಕ್ಕಾಗಿ ಸರ್ವ ಶಕ್ತಿಯಿಂದ ನೆರವಾಗದಿರಲಾರರು.

ESTD. 1926
CROWN RUBBER STAMP Co.
MAKERS OF
RUBBER STAMPS
ENGRAVERS
BALMATTA ROAD. MANGALORE S.K.
Approved firm by the Govt. of Mysor
Certified by the Agent of the Govt. of Cylone Indian.

Why Worry?
Do not feel disheartened for not getting BONUS.
We offer you a guaranteed BONUS of Rs. 10 - per THOUSAND under our New Scheme.
Please apply immediately.—
A. S Kini,
Managing Director
UNITED KARNATAK INSURANCE Co., Ltd.
HEAD OFFICE: DHARWAR.
For further particulars apply to —
Divisional Manager, Court Road UDIPI, S. India. Or
Divisional Manager, Narayan Nivas Market Road Bangalore City.
or
Branch Manager, 10 Bismilla Blds Opp. B. B C I Stn. Dadar, BOMBAY 14. Or
Branch Manager. MULLAKKAL, Alleppey. (Travancore State)
To our nearest Agents.

ಇಂದಿಗೆ ತಕ್ಕ ನಾಟಕ
ದೇಶಭಕ್ತ
ಶ್ರೀ. ಕೆ. ಕೆ. ಶೆಟ್ಟರು ಸುಲಭವಾದ ಶೈಲಿಯಲ್ಲಿ ಎಲ್ಲರಿಗೂ ಮಂದಬ್ಬಾಗುವಂತೆ ಬರೆದ ಬೋಧಪ್ರದ ಸಾಮಾಜಿಕ ನಾಟಕ.
ದೇಶಭಕ್ತನು ಹೇಗಿರಬೇಕು? ಅವನ ಧ್ಯೇಯ ಧೋರಣೆ ಹೇಗೆ ಅರ್ಥವಾಗಿರಬೇಕು? ಜನತಾ ಜನಾರ್ದನನ ಸೇವೆ ಎಂದರೇನು? ಎಂಬಿತ್ಯಾದಿಗಳನ್ನು ಆತ್ಕಾರಳ್ಳಿಯಿಂದ ಚಿತ್ರಿಸಿ. ಸಂಸ್ಥಾನವನ್ನಿ ನರೇಂದ್ರರು ಪೂಡುತ್ತಿರುವ ದಬ್ಬಾಳಿಕೆಯ ಭೀಕರ ಚಿತ್ರವನ್ನು ಮುಂದಿಟ್ಟು ಪ್ರಜಾಸ್ವಾತಂತ್ರ್ಯವು ಹೇಗೆ ಸಾಧ್ಯವೆಂಬುದನ್ನು ವಿವರಿಸುವ ರಾಜಕೀಯ-ಸಾಮಾಜಿಕ ನಾಟಕ.
ಬೆಲೆ ರೂ. 1—4—0
ನವಭಾರತ ಬುಕ್ ಡಿಪೊ,
ಉಡುಪಿ.

The Canara Banking Corporation Limited.

(Incorporated in British India, with limited Liability)

Estd: 1906.

Head Office: **UDIPI**, South Kanara.

CAPITAL

Authorised	...	...	Rs 25,00,000
Issued & Subscribed	...	...	,, 16,00,000
Paid up	...	...	,, 15,64,715
Reserves Over	...	...	,, 4½ Lakhs

Branches at– Bombay, Madras, Bangalore, Coimbatore, Salem, Calicut, Hubli, Mysore, Cochin, Mangalore, Madras etc, etc.

Banking Business of Every Description Transacted.

ಉಡುಪಿ, ಗುರುವಾರ, ೩-೧೦-'೪೬

ಭಾರತದ ವಿದೇಶ ಧೋರಣೆ

ವಿದೇಶ ಮಂತ್ರಿ ಪಂಡಿತ ನೆಹರುಗಳು ಭಾರತದ ಪರದೇಶ ಸಂಬಂಧದ ಧೋರಣೆಯನ್ನು ಈ ಮಹಾ ರಾಷ್ಟ್ರದ ಘನತೆಗೊಪ್ಪುವ ರೀತಿಯಲ್ಲಿ--ತೂಕ ತಪ್ಪದಂತೆ-ಡಾಹೀರು ಮಾಡಿದ್ದಾರೆ. "ನಿರೀಕ್ಷೆಗೆ ಮಿಕ್ಕಿಯೂ ಇಲ್ಲ. ಕಡಿಮೆಯೂ ಆಲ್ಲ. ಆಕ್ಷಂತ ಯೋಗ್ಯ ಹೇಳಿಕೆ" ಎಂದು ಮಿ. ಸೋರೆನ್ಸನರಂತಹ ಬ್ರಿಟಿಷ್ ರಾಜಕಾರಣಿಗಳೂ ಆದನ್ನು ಕೊಂಡಾಡಿದ್ದಾರೆ. ಎಲ್ಲಾ ಕಡೆಗಳ, ಮುಖ್ಯವಾಗಿ ಆಸ್ಯಾ ಮತ್ತು ಆಫ್ರಿಕೆಯ,ವಸಾಹತು ವಷ್ಟಕ್ಕಿಯನ್ನೇ ನಿರ್ಮೂಲಸುವದು; ಪರದೇಶಗಳಿಗೆ ಹಿಂದೀ ಸರಕಾರದ ಕಾರ್ಯವಾಹಕರನ್ನು ಹೆಚ್ಚಿಚ್ಚಾಗಿ ನೇಮಿಸಿ ಭಾರತವು ಸಂಪೂರ್ಣ ಸ್ವತಂತ್ರವಾಗುವಾಗ ಆವರೂ ಸ್ವತಂತ್ರರಾಯ ಭಾರಗಳಾಗುವಂತೆಸಗುವದು; ಇದುವರೆಗಿನ ಕ್ರಮವನ್ನೇ ಅಡಿಮೇಲುಮಾಡಿ ವಿದೇಶಗಳ ಸಂಬಂಧ, ಸಲಹೆಗಳ ಸೂತ್ರವನ್ನು ಲಂಡನ್ನಿನಿಂದ ತಪ್ಪಿಸಿ ತಮ್ಮ ಕೈಯ್ಯಲ್ಲಿಟ್ಟು ಕೊಳ್ಳುವದು; ಲಂಡನಿನ ಭಾರತ ಕಚೇರಿಯನ್ನು ಮುಚ್ಚಿಸುವದು; ಮೈತ್ರಿ ನಿರ್ವಾಸಕ ಸಮಿತಿಗಳನ್ನು ಮಧ್ಯ ಪೂರ್ವ, ಯುರೋಪು ಕಡೆಗಳಿಗೆ ಕಳುಹಿಕೊಡುವದು---ಇವೇ ಮುಂತಾದ ಪ್ರಾಮುಖ್ಯ ಸುಧಾರಣೆಗಳನ್ನು ಪಂಡಿತ ನೆಹರು ಜಾಹೀರು ಮಾಡಿದ್ದಾರೆ. ಪ್ರಬಲ ರಾಷ್ಟ್ರಗಳು ಸ್ವಕಾರ್ಯ ಸಾಧನೆಗಾಗಿ ಹೂಡುವ ರಾಜಕೀಯಾಟದಲ್ಲಿ ತಾವು ಸಹಭಾಗಿಗಳಾಗುವಂತಿಲ್ಲವೆಂದು ಕಂಠೋಕ್ತವಾಗಿ ಹೇಳುವ ಶಕ್ತಿ, ಸ್ಥಾನ ಮತ್ತು ಸಂದರ್ಭ ಪಂಡಿತ ನೆಹರುಗಳಿಗೆ ಬಂದುದನ್ನು ಕಂಡು ಹಿಂದೀಯರು ನಿಜಕ್ಕೂ ಹೆಗ್ಗಳಿಕೆಪಡಬೇಕು. ರಾಷ್ಟ್ರೀಯ ಸರಕಾರದ ಆಂತರಿಕ ವ್ಯವಸ್ಥೆಗಿರುವ ಆತಂಕ ಈ ಬಹಿರಂಗ ಸುಧಾರಣೆಯ ಮಟ್ಟಿಗಿಲ್ಲ;ಪಶ್ಚಿಮಾಪ್ತ ಕವ ಹಿಂದೀಯರಿಗೆ ನ್ಯಾಯದಾನ, ಮಧ್ಯ ಪೂರ್ವದ ಮುಸ್ಲಿಂ ರಾಷ್ಟ್ರಗಳೊಡನೆ ಸಂಬಂಧ ನಿರ್ಮಾಣದಂತಹ ಕಾರ್ಯಗಳಲ್ಲಿ ಕಾಂಗ್ರೆಸಿಗರುವಸ್ಟೇ ಆತುರ ಮುಸ್ಲಿಂ ಲೀಗಿಗೂ ಇದೆ; ಇವು ಸರ್ವ ಸಮ್ಮತಿಯ ವಿಷಯಗಳು. ಆದರೆ ಬ್ರಿಟಿಸರಿಗಿಪ್ಪ ಯವಾಗುವ ಆಂಶಗಳೆಷ್ಟೋ ಇಲ್ಲವೆ.ಧಾರತವು ರಶ್ಯದೊಡನಿಟ್ಟುಕೊಳ್ಳುವ ಸಂಬಂಧವು ಇವುಗಳಲ್ಲಿ ಮುಖ್ಯವಾದುದು. ರಶ್ಯಾ ಮತ್ತು ಇಂಗ್ಲಾಂಡು ಪರಸ್ಪರ ವಿರುದ್ಧ ಪಥ ಹಿಡಿಯುತ್ತವಾದರೆ. ಆವೆರಡರ ಲ್ಲೊಂದನ್ನಾರಿಸಿಕೊಳ್ಳುವ ಸಂದರ್ಭ ಬಂದಾಗ ಸ್ವತಂತ್ರ ಭಾರತವು ಸ್ವೇಚ್ಛೆಯಿಂದ ಯಾವ ಪಕ್ಷ ಹಿಡಿಯುವುದೋ ಹೇಳುವ ದಸಾಧ್ಯ; ಅದು ನ್ಯಾಯವನ್ನಾಧರಿಸಿರಬಹುದು ಹೊರತು ಹಂಗನ್ನವಲಂಬಿಸಿರಲಾರದು. ಅಧಿಕಾರದ ಅಂಟಿನಿಂದ ಇಂಗ್ಲಾಂಡು ಹಿಂದುಸ್ಥಾನಕ್ಕಿನ್ನೂ ತಾಗಿದೆ; ಹಲವು ನೂರು ಮೈಲುಗಳ ವರೆಗೆ ರಶ್ಯಾವು ಭಾರತಕ್ಕೆ ತಾಗಿರುವ ದೃಶ್ಯವು ಇವೆರಡು ಮಹಾ ರಾಷ್ಟ್ರಗಳು ಭುಜಕ್ಕೆ ಭುಜ ಕೊಟ್ಟು ನಿಂತಂತಿದೆ. ಮಿಕ್ಕೆಲ್ಲವನ್ನೂ ಬದಿಗಿಟ್ಟು, ಪಕ್ಷವಾತವೊಂದನ್ನೇ ಆರಿಸಿ ಹಿಂದುಸ್ಥಾನದಲ್ಲಿ ಪಾತಗಣನೆ ಮಾಡುವದಾದರೂ ಇಂಗ್ಲಾಂಡಿನ ಧೋರಣೆಗಿಂತ ರಶ್ಯದ ಧೋರಣೆಗೇನೇ ಹೆಚ್ಚಿನ ಮತ ದೊರೆಯಬಹುದೆಂದು ನಿಸ್ಸಂದೇಹವಾಗಿ ಹೇಳಬಹುದು. ಒಂದು ರಾಷ್ಟ್ರೀಯ ಸರಕಾರವು ರಾಷ್ಟ್ರದ ಜನಮತಕ್ಕೆ ವಿರುದ್ಧವಾಗಿ ವರ್ತಿಸಲಾರದು. ಬ್ರಿಟನು--ರಶ್ಯಾಗಳೀಗ ಲೋಕ ಪ್ರಾಮುಖ್ಯ ವಿಷಯಗಳಲ್ಲಿ ಭಿನ್ನಾಭಿಪ್ರಾಯದಿಂದಿವೆ ಇನ್ನೊಂದು ಮಹಾ ಯುದ್ಧದ ಮಾತು ಮೈಲುದ್ದ ದೂರ ದಲ್ಲಿದ್ದುದು ಈಗ ಮಾರುದ್ದ ಸಮೀಪಕ್ಕೆ ಬಂದಂತಿದೆ. ಮುಂದಿನ ಮಹಾಪತ್ತನ್ನು ನಿರೀಕ್ಷಿಸಿ, ಆ ಕಾಲದಲ್ಲಿಯೂ ಭಾರತವು ತಮ್ಮ ಮೇಲೆ ದ್ವೇಷದಿಂದಿರಬಾರದೆಂಬ ದೂರದೃಷ್ಟಿಯಿಂದಲೇ ಬ್ರಿಟಿಷರು ಹಿಂದೀಯರಿಗೆ ಸ್ವಾತಂತ್ರ್ಯ ದಾನ ಮಾಡಲು ಮುಂದಾದೆಂದು ರಾಜ ಕಾರಣಿಗಳ ಊಹೆ. ಸಂಗತಿ ಹೀಗಿರುವಾಗ ಸ್ವತಂತ್ರ ಭಾರತದ ವಿದೇಶ ಸಂಬಂಧ ಧೋರಣೆಯು ತಮಗೆ ಪ್ರತಿಕೂಲವಾಗುವದನ್ನು ಬ್ರಿಟಿಷರು ಸಹಿಸಬಲ್ಲರೆ? ಭಾರತದ ಪ್ರತಿನಿಧಿಗಳು ಬ್ರಿಟಿಷರ ಬಾಲವಾಗಿ ಇನ್ನು ಮುಂದಿನಲಾರರೆಂಬುದು ವ್ಯಾರಿಸಿನ ಶಾಂತಿ ಸಮ್ಮೇಲನದ ಒಂದು ಸಂದರ್ಭನಲ್ಲಿ ಪ್ರತ್ಯಕ್ಷ ಪ್ರದರ್ಶಿಸಲ್ಪಟ್ಟಿದೆ ಎಲ್ಲವನ್ನೂ ಗಾಢವಾಗಿ, ಸೂಕ್ಷ್ಮವಾಗಿ ಪರಿಶೀಲಿಸುವದಾದರೆ ಕಾಲವೇ ಬ್ರಿಟನಿಗನ ಕೂಲವಾಗಿಲ್ಲ; ಭಾರತವು ಬ್ರಿಟನಿಗನುಕೂಲವಾಗಿರಬೇಕೆಂದಿಲ್ಲ. ಆದರೆ ಇಂಗ್ಲಾಂಡು ನ್ಯಾಯದ ಕಡೆಗಿದ್ದಿತೆ, ಎಲ್ಲಿಪೂ ಬ್ರಿಟನಿನ ಕಡೆಗಾಗುವದು. ಅಮೇರಿಕ ಮತ್ತು ರಶ್ಯ ಮೈತ್ರಿಯೇ ಯುದ್ಧಾನಂತರ ಸಬಲ ರಾಷ್ಟ್ರಗಳಾಗಿ ಉಳಿದಿವೆ; ಬ್ರಿಟನು ಬಲ ಗುಂದಿದೆ. 'ನ್ಯಾಯವೇ ಬಲ'ವೆಂದಿಟ್ಟು ಕೊಂಡು ಆದಿನ್ನು ಪ್ರಬಲ ರಾಷ್ಟ್ರವನ್ನು ಸಬೇಕು. ತನ್ನ ಸ್ವಂತ ಭಾಷೆಯಲ್ಲೇ ಮಾತಾಡಲಿರುವ ಭಾರತವು ಇಂಗ್ಲಾಂಡಿಗೂ ಲೋಕದ ಇತರ ರಾಷ್ಟ್ರಗಳಿಗೂ ಕೊಡುವ ಕರೆಯೆಂದರೆ ಇದೇ. ಸ್ವತಂತ್ರ ಭಾರತವು ಜಾಗತಿಕ ಶಾಂತಿಸಹಕಾರಕ್ಕೂ ನೆಂಬುದು ಈ ಮೂಲಕ ಇತ್ಯರ್ಥಲ್ಲೇ ಮಂಬಟ್ಟಾಗಿದೆ. ಎಲ್ಲವೂ ಹೀಗೆಯೇ ಮುಂದುವರಿದಲ್ಲಿ, ವ್ಯಪಂಚದಲ್ಲೆಲ್ಲಾ ನ್ಯಾಯ ಸಾವ್ರಾಜ್ಯವೊಂದೇ ಸ್ಥಾಪಿಸಲ್ಪಡಬಹುದೆಂದೂ, ಭಾರತವು ಆದರ ಸಾಮ್ರಾಟ ನಾಗಬಲ್ಲುದೆಂದೂ ಆಶಿಸಬಹುದು.

ಭಾರತೀಯರೆಲ್ಲರಿಗೆ–

ತನ್ನ 78ನೇ ಹುಟ್ಟು ಹಬ್ಬದ ಸಂದರ್ಭದಲ್ಲಿ ಮಹಾತ್ಮಾ ಗಾಂಧಿಯವರು ನವ ದಿಲ್ಲಿಯ ಅಪರಾಹ್ನದ ಪ್ರಾರ್ಥನಾ ಸಭೆಯೊಂದರಲ್ಲಿ ಸ್ವತಃ ಹಾಡಿದ ಕೆಲವು ಸೊಲ್ಲುಗಳ ಭಾವಾನುವಾದ ಇಲ್ಲಿದೆ ಇದನ್ನು ಬಂಗಾಳಿ ಭಜನಾ ಸಂಘವೊಂದು ಪ್ರಕಟಿಸಿತೆಂದೂ, ಒಂದಾಣೆ ಬೆಲೆಗದು ದೊರೆಯುತ್ತದೆಂದೂ ಗಾಂಧಿಜೀ ತಿಳಿಸಿದರು.--

ಮಿತ್ರ ಬಾಂಧವರೆಲ್ಲ ನಿನ್ನ ಬಿಟ್ಟಗಲಿದರು।
ಆದಕಾಗಿ ಎಳ್ಳಷ್ಟು ಅಳುಕಬೇಡ।
ಆಶೆಯ ಕುಸುಮಮಾಲೆ ಇದ್ದಲ್ಲೆ ಒಣಗಿ ದೆರು।

ಮುಂದಿಡುವ ಆ ಹೆಜ್ಜೆಗುಳುಕುಬೇಡ।
ಎಷ್ಟೆಷ್ಟು ಹೊತ್ತಿಸಿದರೂ ದೀವಟಿಗೆ ಯದೇ?।

ಕಣ್ಣೆ ಕತ್ತಲೆ ಮಾತ್ರ ಬಾರದಿರಲಿ।
ಕಾಡಿನಾ ಹಕ್ಕಿನ್ಯಗ ನಿನ್ನ ದನಿಯನ್ನು ಕೇಳಿ।

ನಿನ್ನ ನವು ಮೂಸುತಿನೆ ಸುತ್ತುವರಿದು।
ಆದರೇನಂತೆ, ನಿನ್ನವರೆ ಕಲು ಹೃದಯ ದಲಿ।

ಧಿಕ್ಕರಿಸಿ ಬಿಡಬಹುದು ಎತ್ತಿ ಜರೆದು।
ಅಂಜದಿರು, ಅಳುಕದಿರು,ವಿಷಯವನೆ ಗಣಿಸದಿರು।

ನೀನಿರುವೆ, ಹಾದಿಯಿದೆ, ಅತ್ತ ನೋಡು।
ಅಗೊ, ನಿನ್ನ ಗುರಿಯ ಕದ ಮುಚ್ಚಿಹುದು ನೋಡಿದಯ।

ಏಗೈವೆ, ಹಿಂದಿರುಗಲಿರುವೆಯೇನು? ।
ಊಂಹು, ಕೂಡದು! ಹೋಗು, ಬಡಿ, ತಟ್ಟು ಬಾಗಿಲನು।
ತೆರೆಯದಿದ್ದರು ಆಗ ವಿಜಯಿ ನೀನು।

ಯಾರೊಪ್ಪದಿದ್ದರೂ ಸ್ವಾತಂತ್ರ್ಯ ಸಿದ್ಧ!

"ಭಾರತವು ಸ್ವಾತಂತ್ರ್ಯಕ್ಕಾಗಿ ಮುಂದೊತ್ತುತ್ತಾ ಇದೆ; ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗುಗಳೊಳಿಗೆ ಸಂಧಾನವಾಗಲಿ, ಆಗದಿರಲಿ, ಸ್ವಾತಂತ್ರ್ಯ ಬರುತ್ತಿದೆ-ಆದನ್ನು ನಿಲ್ಲಿಸಲು ಯಾರಿಂದಲೂ ಸಾಧ್ಯವಿಲ್ಲ; ಅದು ಭಾರತಾಂಬೆಯ ಅದೃಷ್ಟವೇ ಆಗಿದೆ. ಆದಕ್ಕಾಗಿ ಅವಳು ಸಾಕಷ್ಟು ರಕ್ತಸುರಿಸಿದ್ದಾಳೆ. ಸಂದೇಹಕರ ಪ್ರತಿಫಲ ವೊಂದನ್ನು ಪಡೆಯುವದಕ್ಕಾಗಿ ತತ್ವವನ್ನು ತ್ಯಾಗ ಮಾಡಲಾಗುವದಿಲ್ಲ". ಎಂದು ಗಾಂಧಿಜೀ ವಿದೇಶೀ ಬಾತ್ಮೀದಾರನೊಬ್ಬನಿಗೆ ಸಿಗದಿದ್ದಾರೆ. ಸದ್ಯದ ದುಸ್ಥಿತಿ ನಿವಾರಣೆಗಾಗಿ ಲೀಗಿಗೆ ಇನ್ನೂ ಸ್ವಲ್ಪ ರಿಯಾಯತಿ ತೋರಿಸಬಾರದೇಕೆ?" ಎಂದು ಬಾತ್ಮೀದಾರ ಪ್ರಶ್ನಿಸಿದ್ದಕ್ಕೆ ಮಹಾತ್ಮರ ಸ್ವಪ್ನ ಉತ್ತರವಿದು.

ಉಡುಪಿ ಕರ್ನಾಟಕ ಸಂಘದ ಸಾಹಿತ್ಯೋತ್ಸವ

ಅಧ್ಯಕ್ಷ ಶ್ರೀ. ಎಸ್. ರಾಜಗೋಪಾಲ ಕೃಷ್ಣರಾಯರ ನೇತೃತ್ವದಲ್ಲಿ "ಕರ್ನಾಟಕ ಸಂಘ' ಉಡುಪಿ, ಇದರ ತೃತೀಯ ಸಾಹಿತ್ಯೋತ್ಸವವು ವಿವಿಧ ಕಾರ್ಯಕ್ರಮಗಳಿಂದ ಜೋರ್ ಹ್ಯಾಸ್ಯೂಲಿನ "ಜನತಾ ಭವನ"ದಲ್ಲಿ ಕರ್ನಾಟಕದ ಪ್ರಸಿದ್ಧ ಸಾಹಿತಿಗಳ ಕೂಡುವಿಕೆಯಿಂದ ಇದೇ ತಾ. 1ರಿಂದಾರಂಭವಾಗಿದೆ. ಪ್ರಥಮ ದಿನ ಸೂರ್ವಾಹ್ನ ಡಾ। ಟಿ ಮಾಧವ ಪೈಗಳ ಅಧ್ಯಕ್ಷತೆಯಲ್ಲಿ ಸಂಘದ ದ್ವಿತೀಯ ವರ್ಷಾಂತ್ಯೋತ್ಸವವು ಜರಗಿಪಾಚನ, ಸಭಾನದರ ಭಾಷಣ, ಅಧ್ಯಕ್ಷರ ಸಿತವಚನ ಇತ್ಯಾದಿ ಕಾರ್ಯಕ್ರಮಗಳಿಂದ ಜರಗಿತು.

'ಮೂಲ ಕನ್ನಡ' ಚರ್ಚಾಕೂಟ

ಅಂದೇ ಅಪರಾಹ್ನ ಪ್ರೊ. ಆರ್. ವಿ. ಜಪಗೀರದಾರರ ಅಧ್ಯಕ್ಷತೆಯಲ್ಲಿ ಚರ್ಚಾಕೂಟ ನೆರೆಯಿತು. ಸಂಘದ ಕಾರ್ಯದರ್ಶಿ ಶ್ರೀ ಬಿ. ರಾಮಕೃಷ್ಣಾಚಾರ್ಯರು, ರುದ್ಧೀ ಕೃತ 'ಮೂಲ (Basic) ಕನ್ನಡ' ಬೇಕೆಂಬ ಸೂಚನೆ ಮುಂದಿಟ್ಟರು ಇದನ್ನು ವಿರೋಧಿಸಿಯೂ ಸಮರ್ಥಿಸಿಯೂ ಶ್ರೀಗಳಾದ ಕ. ಅನಂತಪದ್ಮನಾಭ ಉಡುಪ, ಕೊರಡ್ಕಲ್ ಶ್ರೀನಿವಾಸರಾವ್, ಕೆ. ಪಿ ವೆಂಕ್ಯ ಬ್ಬಿ ಕೆದಿಲಾಯ, ಜಿ. ಪಿ ರಾಜರತ್ನಂ. ಕೆ ಸಂಪದ್ಗಿರಿರಾವ್, ನರೇಗಲ್ಲ ಪ್ರಹ್ಲಾದರಾವ್ ಮೊದಲಾದವರು ಭಾಷಣವಿತ್ತರು. ಅಧ್ಯಕ್ಷ 'ಶ್ರೀರಂಗ'ರು ಸೂಚನೆಯನ್ನು ಮತಕ್ಕೆ ಹಾಕಿದಾಗ ಅದಕ್ಕೆ ಬಹುಮತ ದೊರೆಯಿತು ಸಭಯ ತೀರ್ಮಾನದ ಕುರಿತು ತನ್ನ ಭಿನ್ನಾಭಿಪ್ರಾಯವನ್ನು ಸೂಚಿಸುತ್ತಾ ಅಧ್ಯಕ್ಷರು "ಮೂಲಕನ್ನಡ"ದ ಸ್ವರೂಪವನ್ನೂ ಅದಿನ ಭಾಷಣಗಳಲ್ಲಿನ್ನೂ ವಿವರ್ಶಿಸಿದರು ಸಾ. ಕಾರ್ಯದರ್ಶಿ ಶ್ರೀ. ಕೆ. ಎಲ್. ಎಸ್. ಉಪಾಧ್ಯಾಯರು ಧನ್ಯವಾದವಿತ್ತರು. ರಾತ್ರಿ ಉಡುಪಿಯ ಟ್ರೈನಿಂಗ್ ಸ್ಕೂಲ್'ವಿದ್ಯಾರ್ಥಿ ಅಧ್ಯಾಪಕರಿಂದ ಯಕ್ಷಗಾನ "ಸುಧನ್ವ" ಪ್ರಸಂಗ ಕಾಲಕ್ಷೇಪ ನಡೆಯಿತು. ತಾ. 2ನೇ ಪೂರ್ವಾಹ್ನ ಶ್ರೀಮತಿ ಲೀಲಾಬಾಯಿ ಕಾಮತ್, ಶ್ರೀ ಪಿ. ದಯಾನಂದ ನಾಯಕ್ ಶ್ರೀ ಶ್ರೀಪಾದಭಾಸ ಪಂಡಿಯವರ ನಿರ್ವಾಯಕತ್ವದಲ್ಲಿ ಕಾವ್ಯ ವಾಚನ ಇತ್ಯಾದಿ ಸಾಹಿತ್ಯ ಸಂಗೀತಗಳಲ್ಲಿ ಬಾಲಕಿಯರ ಸ್ಪರ್ಧೆ ನಡೆಯಿತು ಪ್ರೊ. ಜಯಗೀರರು 'ಕರ್ನಾಟಕ ವೈಶಿಷ್ಟ್ಯ'ದ ಕುರಿತು ಭಾಷಣವಿತ್ತರು.

ಗಾಂಧೀಜಯಂತಿ

ಇದೇ ತಾ. 2ನೇ ಮುಂಜಾನೆ ನಿರ್ವಾಧ್ಯಿಗಳು ಸುತ್ತಿತ್ತರಿಂದ ರಾಷ್ಟ್ರಧ್ವಜ, ಗಾಂಧೀಯ ಭಾವಚಿತ್ರಗಳೊಡನೆ ಪ್ರಭಾತ ಫೇರಿನಡೆದು ರಥಬೀದಿಯಲ್ಲಿ ಗಾಂಧೀಜೀಯ ಜೀವನ ಸಂದೇಶವನ್ನು ತಿಳಿಸಲಾಯಿತು. ಅಪರಾಹ್ನ ಸಾರ್ವಜನಿಕ ಸಭೆಯಿವೆ.

ಆರೋಗ್ಯ ಪಾಲನೆ—
ವರ್ಧನೆಯ ಕೈಗನ್ನಡಿ
ಅಂತರಂಗ
ಆಯುರ್ವೇದ ಸಂಚಿಕೆ
ಪ್ರತಿ ಮನೆಯಲ್ಲೂ ಇರಲೇ ಬೇಕಾದ
ಪ್ರತಿಯೊಬ್ಬರೂ ಓದಲೇ ಬೇಕಾದ
ಹೊಸಮಾದರಿಯ ವಿಶಿಷ್ಟ ಸಂಚಿಕೆ
ಬೆಲೆ ರೂ. 1-0-0. ಟ. ಖ. 0-4-0.
—ಬರೆಯಿರಿ:—
1 ಅಂತರಂಗ ಆಫೀಸು, ಉಡುಪಿ.
2. ನವಭಾರತ ಬುಕ್ ಡಿಪೊ, ಉಡುಪಿ.
3. S. N. ನ್ಯೂಸ್ ಏಜನ್ಸಿ, ಉಡುಪಿ.

ಸತ್ಯಾಹಿಂಸೆ ಮತ್ತು ಆಹಾರಾಭಾವದ ಕುರಿತು ಗಾಂಧಿಜೀಯ ಸ್ಪಷ್ಟಾಭಿಪ್ರಾಯ.

ಪೂರ್ವ ಅಹಿಂಸಾವಾದಿ ಕಾಂಗ್ರೆಸ್ ಭಕ್ತರು ಗಾಂಧಿಜೀಗೊಂದು ಪತ್ರ ಬರೆಯುತ್ತಾ ಹೀಗೆ ವಿಜ್ಞಾಪಿಸಿಕೊಂಡಿದ್ದರು:—

ಅನಧಿಕಾರಿಯಾಗಿರುವ ವರೆಗೆ ಮಾತ್ರ ಕಾಂಗ್ರೆಸ್ ಅಹಿಂಸೆಗೆ ಕಟ್ಟು ಬೀಳಬೇಕು; ಈಗ ಅಧಿಕಾರ ಬಂದಿರುವುದರಿಂದ ಸತ್ಯಾಹಿಂಸೆಯು ನಿಷ್ಠೆ ಅಗತ್ಯವಿಲ್ಲ, ಎಂಬ ಭಾವನೆ ಜನರಲ್ಲಿದೆ. 'ಕಾಂಗ್ರೆಸಿನ ನಿಬಂಧನೆಯಿಂದ ಸತ್ಯ ಮತ್ತು ಅಹಿಂಸೆಯ ಶಬ್ದಗಳನ್ನು ತೆಗೆಯಬೇಕೆಂದು ನಾನು ಹೇಳುತ್ತಾ ಬಂದಿದ್ದೇನೆ ಎಂದು ನೀವೂ ಶಂಕರರಾವ್ ದೇವ್‌ರಿಗೆ ಬರೆದ ಪತ್ರದಲ್ಲಿದ್ದಿರಿ. ಮುಸ್ಲಿಂ ಲೀಗಿನ 'ಪ್ರತ್ಯಕ್ಷ ಹೋರಾಟ'ವನ್ನಿದಿರಿಸುವದಕ್ಕಾಗಿಯೂ ಈ ಶಬ್ದಗಳನ್ನು ಉಜ್ಜುವುದು ಹಿತಕರವೆಂದು ಜನರೆಲ್ಲಾ ಭಾವಿಸ ಹತ್ತಿದ್ದಾರೆ ಹಾಗೆ ಉಜ್ಜಿದಲ್ಲಿ ಕಾಂಗ್ರೆಸ್ಸು ಈಗ ಎರಿಯವ ಎರಿಕೆಯ ಮಟ್ಟದಿಂದ ಉರುಳಿ ಬಿದ್ದು ಪತನ ಹೊಂದುವುದು. ಆದ್ದರಿಂದ ಪ್ರತಿಯೊಬ್ಬ ಕಾಂಗ್ರೆಸಿಗನೂ ಸತ್ಯಾಹಿಂಸೆಗೆ ಕಟ್ಟುಬೀಳಲೇಬೇಕೆಂದೂ ಒಪ್ಪದವನನ್ನು ಕಾಂಗ್ರೆಸಿನಿಂದ ಹೊರಗಟ್ಟಬೇಕೆಂದೂ ನೀವು ವಿಧಿಸಬೇಕು."

ಗಾಂಧಿಜೀಯ ಸ್ಪಷ್ಟೀಕರಣ

ನಾನು-ಅಹಿಂಸೆಯ ಪ್ರಜೋದಕನು-ಒಂದು ಸತ್ಕಾರ್ಯವನ್ನೇ ಆದರೂ ಒಬ್ಬನು ಮಾಡಲೇಬೇಕೆಂದು ಒತ್ತಾಯಿಸುವವದು ಹೇಗೆ? 'ತಮ್ಮಗಳನ್ನು ನಿವಾರಿಸಿಕೊಳ್ಳುವುದಕ್ಕಾಗಿ ಬಂಧನಕ್ಕೊಳಗಾಗುವುದಕ್ಕಿಂತ ಸ್ವತಂತ್ರ ಮನುಷ್ಯನಾಗಿ ಆ ತಪ್ಪುಗಳನ್ನ ಮಾಡುವದೇ ಮಾಸಿ' ಎಂದೊಬ್ಬ ಸುಪ್ರಸಿದ್ಧ ಇಂಗ್ಲಿಷರವನೇ ಹೇಳಿದ್ದಾನಲ್ಲವೆ? ಇದರಲ್ಲಿ ಸತ್ಯವಿದೆಯೆಂದೇ ನನ್ನ [illegible] ಕೆಲಸಕ್ಕಾಗಿ ಸೌಜನ್ಯ ವಹಿಸುವಪನ ಬುದ್ಧಿಯು ಸುಧಾರಣೆ ಹೊಂದುವಂತಿಲ್ಲ, ವಸ್ತುತಃ ಅದು ಮತ್ತಷ್ಟು ಕೆಟ್ಟು ಹೋಗುವದು. ಮೇಲಾಗಿ ಯಾರೊಬ್ಬನೂ ಸರ್ವಾಧಿಕಾರಿಯಾಗಿರಕೂಡದು. ತನ್ನ ಸದಸ್ಯರು ಸತ್ಯ ಮತ್ತು ಅಹಿಂಸೆಗೆ ಅಧೀನರಾಗಿಂಬೇಕೆಂದು ನಿರ್ಬಂಧಿಸಲು ಕಾಂಗ್ರೆಸಿನಿಂದ ಕೂಡಾ ಸಾಧ್ಯವಿಲ್ಲ. ಹೃದಯ ಪೂರ್ಣ ಸಮ್ಮತಿಯಿಂದಲೇ ಅವನ್ನು ಸ್ವೀಕರಿಸಬೇಕು. ನಾನು ಕಾಂಗ್ರೆಸ್ ಘಟನೆಯಿಂದ ಈ ಪದಗಳನ್ನು ತೆಗೆಯಬೇಕೆಂದು ಕಳದ ಒಂದು ವರುಷಕ್ಕೂ ಮಿಕ್ಕೆ ಶಿಫಾರಸು ಮಾಡುತ್ತಾ ಬಂದಿದ್ದೇನೆ. ಇದು, ಹಿಂಸೆ ಅಥವಾ ಅಹಿಂಸೆಯಲ್ಲವೆಂದನ್ನೂ ಗಣಿಸದ ಮುಸ್ಲಿಂ ಲೀಗಿನ ನಿಯೋಜಿತ-ಪ್ರತ್ಯಕ್ಷ ಹೋರಾಟ'ದ ಪ್ರಸ್ತಾಪನೆಯಿಲ್ಲವುದಕ್ಕೆ ಮುಂಚೆಯೇ. ಆದ್ದರಿಂದ ಇನ್ನೀ ಲಕ್ಷಣಕ್ಕೆ ಸಿಗೂ ಮುಸ್ಲಿಂ ಲೀಗಿನ ರಚನೆಗೂ ಸಂಬಂಧವೇ ಇಲ್ಲ. ಆದರೆ ನನ್ನ ಮಾತುಗಳಿಗಲ್ಲಾದುರುದ್ದೇಶದ ಅಪಾರ್ಥವನ್ನೇ ದ್ವೇಷ ಬುದ್ಧಿಯಿಂದ ಕಟ್ಟುತ್ತಾ ಹೋಗುವವರಿಗೆ ನಾನೇನನ್ನೂ ಮಾಡುವಂತಿಲ್ಲ ನನ್ನ ಶಿಫಾರಸಿಗೆ ಬಲವಾದ ಕಾರಣಗಳಿವೆ. ಸತ್ಯ ಅಹಿಂಸೆಯು ನೆಪದಿಂದ ಕಾಂಗ್ರೆಸ್ ಎಂದಿಗೂ ಅಸತ್ಯ ಮತ್ತು ಹಿಂಸೆಯನ್ನು ಮುಚ್ಚಿಕೊಳ್ಳಲಾರದು. ಇದೂಂದೇ ಸರ್ವಕ್ಕೂ ಸಾಕಾಗುವ ಕಾರಣವಲ್ಲವೇನು? ಕಾಂಗ್ರೆಸಿಗರಲ್ಲಿ ಕಪಟಾಚರಣೆಯಿಲ್ಲವೋ-ಹಾಗಿದ್ದಲ್ಲಿ ಇವೆರಡು ಮೂಲ ಮಂತ್ರಗಳಿಗೆ ಕಟ್ಟು ಬೀಳುವದಕ್ಕಿಂತ ಉತ್ತಮವಾದುದು ಮತ್ತೊಂದಿರಲಾರದು. ಕಾಂಗ್ರೆಸ್ ಅಧಿಕಾರಕ್ಕೆ ಬಂದ ಕೂಡಲೇ, ಆದನ್ನು ಇಜ್ಜೋಂದು ಎತ್ತರಕ್ಕೇರಿಸಿದ ಈ ವಿಣಿಯನ್ನು ತಪ್ಪಿಸಿಬಿಡಬೇಕೆಂಬ ಇಚ್ಛೆಯೇ ನನಗಿಲ್ಲ. ಅಧಿಕಾರದಲ್ಲಿರುವ ಕಾಂಗ್ರೆಸಿಗರು ಸತ್ಯಾ ಹಿಂಸೆಯನ್ನು ಧಿಕ್ಕರಿಸಿ ಬಿಟ್ಟಿದ್ದಲ್ಲಿ ಅವರ ಸುತ್ತಲಿನ ಪ್ರಕಾಶವು ಮಂದವಾಗಿ ಮಬ್ಬು ಕವಿಯುವದೆಂದು ನನಗನ್ನಿಸುತ್ತದೆ. ಇಲ್ಲಿ ಒಂದು ಪ್ರಮಾದದ ಕುರಿತು ನಾವೆಲ್ಲಾ ಎಚ್ಚರಿಕೆಯಲ್ಲಿರಬೇಕು ನಿಬಂಧನೆಯಲ್ಲಿಲ್ಲದುದನ್ನು ಅಂಗೀಕರಿಸಬಾರದೆಂಬ ನಿಯಮವೇ ಇಲ್ಲ. ಮೇಲಿನ ಪದಗಳು ವಜಾ ಹೊಂದಿದಾಗ, ಎಲ್ಲರೂ ಅಥವಾ ಕಾಂಗ್ರೆಸಿಗರಲ್ಲಿ ಬಹು ಸಂಖ್ಯಾಕರು, ಆತ್ಮತ್ಯಾಗದ ತುದಿಯ ಗಡಿಯ ವರೆಗೂ ಸತ್ಯ ಮತ್ತು ಅಹಿಂಸೆಯನ್ನು ಹೃತ್ಪೂರ್ವಕವಾಗಿ ಪಾಲಿಸುವರೆಂದು ನನ್ನ ದೃಢವಾದ ಆಶೆ. ನನಗೆ ಪತ್ರ ಬರೆದವರು ಒಂದು ವಿಷಯವನ್ನು ಮರೆತುಬಿಟ್ಟಿದ್ದಾರೆ; ನಾನಿಲ್ಲಿಅದನ್ನು ಸ್ಪಷ್ಟಪಡಿಸಲಿಚ್ಛಿಸುತ್ತೇನೆ. ಕಾಂಗ್ರೆಸ್ ನಿಬಂಧನೆಯಲ್ಲಿ "ಶಾಂತವಾದ ಮಾಗೂ ನ್ಯಾಯವಾದ"ಎಂಬಪದಗಳು ಮಾತ್ರವಿವೆ.ಅವುಗಳ ಸ್ವಂತಾರ್ಥವೇ ಬೇರೆ ಅದಲ್ಲಿ"ಸತ್ಯ ಹಾಗೂ ಅಹಿಂಸೆ"ಎಂದು ಅವುಗಳಿಗರ್ಥ ಕಟ್ಟುವ ಅಧಿಕಾರ ನನಗಿಲ್ಲ ಕಾಂಗ್ರೆಸ್ ಅವುಗಳನ್ನೊಂದು ಧೋರಣೆಯಾಗಿ ಅಂಗೀಕರಿಸಿಕೊಂಡಿದೆ ಹೊರತು ಮೂಲತತ್ವವಾಗಿ ಅಲ್ಲ. ಅವುಗಳನ್ನು ಹಾಗೆಯೇ ಇರಗೊಡಿಸುವ ಅಥವಾ ತೆಗೆಯುವ ಅಧಿಕಾರ ನನಗಿದೆಯೇ ಎಂಬ ಪ್ರಶ್ನೆಯೇಳುವದಿಲ್ಲ. ಆದರೆ ಅದು ಇರುವ ವರೆಗೆ, ಧೋರಣೆಯೆಂಬುದು ಮೂಲತತ್ವಕ್ಕೆ ಸರಿಸಮಾನವಾಗದೆ. ಆದ್ದರಿಂದ ಕಡ್ಡಾಯವಾಗಿದೆ. ಆದರೆ 'ಶಾಂತವಾದ' ಎಂಬುದಕ್ಕೆ 'ಹಿಂಸೆಯಿಂದ' ಎಂದೂ 'ನ್ಯಾಯವಾದ' ಎಂಬುದಕ್ಕೆ 'ಅಬದ್ಧವಾಗಿ' ಎಂದೂ ಅರ್ಥ ಕಟ್ಟುವವಂದ್ದರೆ ಆಗ ನನ್ನ ಈ ಶಿಫಾರಸು ನಿರರ್ಥಕವೇ ಸರಿ!"

'ನಿಮ್ಮ ಆಹಾರ ನೀವೇ ಬೆಳೆಸಿರಿ'

'ಆಹಾರಾಭಾವ'ದ ಕುರಿತು ಗಾಂಧಿಜೀ ಹೀಗೆ ಬರೆದಿದ್ದಾರೆ: "ನಮ್ಮ ಕರಾವಳಿಯ ಹೊರಗಿನಿಂದ ಸಾಕಷ್ಟು ಪರಿಮಾಣದಲ್ಲಿ ಆಹಾರ ಸರಬರಾಯಿಯಾಗುವ ಸಂಭವ ಇದುವರೆಗಿಲ್ಲವೆಂಬುದನ್ನು ಅಖಿಲಭಾರತವು ತಿಳಿದಿರಲಿ. ನಮಗೆ ಸಹಾಯ ಮಾಡಲು ಸಿದ್ಧರಿರುವ ಹಲವರಿದ್ದಾರೆ. ಆದರೆ ಬಹುತೇಕವಾಗಿ ಆಂಧ್ರದವರಲ್ಲಿ ಹೆಚ್ಚಿನವರು ಸ್ವತಹಾ ಆಭಾವ ಸಂಕಟಕ್ಕೊಳಗಾಗಿರುವರು. ಅಥವಾ ತಮ್ಮಿಂದ ಮಾಡಲು ಸಾಧ್ಯವಿರುವದಕ್ಕೆ ಮಿಕ್ಕಿದ ಸಹಾಯಗಳ ಬೇಡಿಕೆಗಳನ್ನು ಬೇರೆಯವರಿಂದ ಕೇಳುತ್ತಿರುವವರು. ಸರಬರಾಯಿ ವಾಹನಗಳ ಅನಾನುಕೂಲತೆಯಂತೂ ಅವರೆಲ್ಲರಿಗೂ ಇದೆ. ನಮ್ಮ ಪಡಕ್ಕೆ ಬಂದ ಕೂಡಲೇ ಒಳಗಡೆಯ ಅದೇ ಅನಾನುಕೂಲತೆ ಇಲ್ಲಿ ಮುಂದೆಬರುತ್ತದೆ ಒಳಗಡೆಯ ವಸ್ತುಸಂಚಾರ ವ್ಯವಸ್ಥೆ ಮತ್ತು ವಿತರಣೆಗಳು ಸ್ವತಃ ಸಮಸ್ಯೆಗಳಾಗಿವೆ. ಸಂಗತಿ ಹೀಗಿರುವುದರಿಂದ, ಈ ಹೋರಾಟಕ್ಕೆ ನಾವು ಸ್ವತಃ ಧುಮುಕಿ, ನಮ್ಮ ಆಹಾರ ವಸ್ತುಗಳನ್ನು ನಾವೇ ಬೆಳಿಸಿಕೊಳ್ಳುವೆವು—ಇಲ್ಲವೇ ಸಂದರ್ಭ ಬಂದರೆ ಆ ಪ್ರಯತ್ನದಲ್ಲೇ ಸಾಯುವೆವು, ಎಂದು ಪ್ರತಿಜ್ಞೆಯನ್ನು ನಾವೆಲ್ಲಾ ಏಕಕಂಠದಿಂದ ಈಗ ಘೋಷಿಸಬೇಕಾದುದು ವ್ಯವಹಾರ ಧರ್ಮವಾಗಿದೆ. ಇದೊಂದೇ ಹಾದಿ ಹೊರತು ಬೇರೆಯಿಲ್ಲ.

ಒಂದು ನೆನಪು

ಭಯಪ್ರೇರಿತ ವಾತಾವರಣದಷ್ಟು ಆಸಿಫ್ಟೀರಿಯಾದುದು ಮತ್ತೊಂದಿಲ್ಲ. ಈ ಸಂದರ್ಭದಲ್ಲಿ ನನಗೆ ಹಿಂದಿನ ಒಂದು ಘಟನೆ ನೆಫಪಾಗುತ್ತಿದೆ. ಸಬರ್ಮತಿ ಹೊಳೆಯಲ್ಲಿ ವಿಶೇಷ ನೆರೆಯಿಂದ ನೀರು ಉಕ್ಕಿ ಕೊಂಡು ಬರುತಿತ್ತು. ಆ ಮಧ್ಯ ರಾತ್ರಿ ಸರ್ದಾರ್ ಪಟೇಲರು ಒಂದು ಸಂದೇಶ ಮೂಲಕ, ಇನ್ನೊಂದೇ ಘಂಟೆಯೊಳಗೆ ಸಬರ್ಮತಿ ಹೊಳೆಯ ನೀರು ಆಶ್ರಮವನ್ನು ಮುಳುಗಿಸಲಿದೆಯೆಂದೂ, ನಾವೆಲ್ಲಾ ಕೂಡಲೇ ಹೊರಡದಿದ್ದಲ್ಲಿ ಮುಳುಗಿ ಸಾಯಬೇಕಾಗುವದೆಂದೂ ತಿಳಿಸಿದರು. ಗಂಡಸರು, ಹೆಂಗಸರು ಮತ್ತು ಮಕ್ಕಳ ಸಮೇತ ನಮಗೆಲ್ಲರಿಗೂ ಅತ್ಯಂತ ಗಾಬರಿಯ ಮುಹೂರ್ತವಾಗಿತ್ತದು. ಆದರೂ, ಕೆರಳಿದ ಪ್ರವಾಹ ಕೆಲವು ಸೊತ್ತು ನಷ್ಟವನ್ನೆಪ್ಪೇ ಮಾಡಿ, ಎನ್ನೊಂದೂ ಜೀವಹಾನಿಯೆಸಗದೆ, ಇಳಿಯ ಹತ್ತಿದುದನ್ನು ಕಂಡಾಗ ನಮಗಾದ ಆನಂದ ಅಷ್ಟಿಷ್ಟಲ್ಲ. ಇದೇ ರೀತಿ ಅಧಿಕಾರಿಗಳಿಂದ ಬರುತ್ತಿರುವ ಆಹಾರಾಭಾವದ ಅವಾಯಕರ ವಾರ್ತೆಯನ್ನು ನಿಜವಾದ ಹಸಿವು ಪೀಡೆಗಿಂತಲೂ ಭೀಕರವಾದ ರೀತಿಯಿಂದ ನಮ್ಮನ್ನು ಸಂಕಟಕ್ಕೀಡು ಮಾಡುತ್ತದೆ".

ನವೋಲ್ಲಾಸಗೊಳಿಸುವ ನವೀನ ನಗೆ ಪತ್ರಿಕೆ

ಅಂತರಂಗ

ಮಾಸಪತ್ರಿಕೆಯಂತೆ ಸಂಗ್ರಹಿಸಿಡಲು ಯೋಗ್ಯವಾದ
ಪೂರ್ಣ ಮಾದರಿಯ ಸಚಿತ್ರ ವಾರಪತ್ರಿಕೆ

ವಿಚಾರದ ಕಿಡಿಗಳಿಗಾಗಿ—ವಿನೋದ ಹರಟೆಗಳಿಗಾಗಿ—
ಮನಮೋಹಕ ಕತೆಗಳಿಗಾಗಿ—ಚುಟುಕು ಸುದ್ದಿಗಳಿಗಾಗಿ—
ಅಂತರಂಗವು ಅಖಿಲ ಕರ್ನಾಟಕದಲ್ಲಿ ಪೆಸರಾಗಿದೆ.

ವಾರ ವಿವಿಷ್ಯವೂ ಬಿಡದೆ ಪ್ರಕಟವಾಗುತ್ತಿದೆ.

ವಾರ್ಷಿಕ ಚಂದಾ (ಮುಂಗಡ) ಅಂಚೆ ಪೆಚ್ಚ ಸೇರಿ 4-8-0.
ಬಿಡಿ ಸಂಚಿಕೆ 0-1-6
ಏಜೆಂಟರಾಗು ಪರಗಡೆಗೂ ಸೂಚನೆಗಳಿಗೂ ಬರೆಯಿರಿ—
ಮೆನೇಜರ್, ಅಂತರಂಗ, ಉಡುಪಿ

ವಿಶೇಷ ವಾರ್ತೆಗಳು.

ಕಾಂಗ್ರೆಸ್-ಲೀಗ್ ಒಪ್ಪಂದ ಯತ್ನ

ನವಢಿಲ್ಲಿಯಲ್ಲಿ ಮಿ. ಜಿನ್ನರು ವೈಸರಾಯರ ಮೂರನೇ ಭೇಟಿಯನ್ನು ಕಳದ ವಾರ ನಡಿಸಿದರು. ಆ ಮೊದಲೇ ಲೋಡ್ ವೇವೆಲರು ಗಾಂಧಿಜೀ, ಮತ್ತು ಪಂಡಿತ ನೆಹರುಗಳೊಡನೆ ಸಂಭಾಷಿಸಿದ್ದರು. ದಿನ ಸಮಯ ನಿಶ್ಚಯವಾಗಿಲ್ಲವಾದರೂ ಜಿನ್ನಾ-ವೇವೆಲ್ ನಾಲ್ಕನೇ ಭೇಟ ನಡಿಯವದೆಂದು ಗೊತ್ತಾಗಿದೆ. ಯಾವ ಹೊಸ ಸೂಜನೆಯೂ ಇದುವರೆಗೆ ಮುಂದೆ ಬಂದಂತೆ ಕಾಣುವದಿಲ್ಲ. ನೆಹರು-ಜಿನ್ನರ ಮುಖಾಮುಖಿ ಸಂಭಾಷಣೆಗಾಗಿ ವೈಸರಾಯರು ಪೂರ್ವ ರಂಗವನ್ನಪ್ಪೇ ತಯಾರು ಮಾಡುತಿದ್ದಾರೆ. ನಿಜವಾದ ತೀರ್ಮಾನವು ನೆಹರು ಸಮ್ಮುಖದಲ್ಲೇ ಆಗಬೇಕಾಗಿದೆ. ನಾನಾ ವಾರ್ತೆಗಳೆದ್ದಿವೆಯಾದರೂ ಆಶೆ ಕಾಣುವದಿಲ್ಲ.

ಜಾತೀಯ ಗೊಂದಲಗಳು

ಬೊಂಬಾಯಿ, ಕಲ್ಕತ್ತಾ ಮತ್ತಿತರ ಕಡೆಗಳಲ್ಲಿ ಹಿಂದೂ ಮುಸ್ಲಿಂ ಗಲಭೆಗಳು ನಡೆಯುತ್ತಿವೆಯಲ್ಲದೆ ಆಗ್ರಾದಂತಹ ಬೇರೆಬೇರೆ ಕಡೆಗಳಲ್ಲೂ ಹೊಸತಾಗಿ ತಲೆಯೆತ್ತುತ್ತಿವೆ. ಆದರೆ ಪ್ರತಿಯೊಂದು ಕಡೆಯ ಕಾಂಗ್ರೆಸ್ ಸರಕಾರವೂ ಅದನ್ನು ಹೊಳಕೆಯಲ್ಲೇ ನಿರ್ದಾಕ್ಷಿಣ್ಯವಾಗಿ ಚಿವುಟುತ್ತಿರುವದರಿಂದ ಎಲ್ಲಿಯೂ ಸ್ಥಿತಿ ಹತೋಟೆಯನ್ನು ಮೀರಿಲ್ಲ.

ವ್ಯಾಪಾರೀ ಕ್ಷೇತ್ರದಲ್ಲಿ ರಾಜಾಜೀ ಬೋಂಬು!

ಆಹಾರ ಧಾನ್ಯಗಳನ್ನು ಬಿಟ್ಟು ಮಿಕ್ಕೆಲ್ಲಾ ವ್ಯಾಪಾರಗಳ ಮಟ್ಟಗೂ 'ಲೈಸೆನ್ಸ್' ಕೊಡುವ ಪದ್ಧತಿಯನ್ನೇ ರದ್ದುಮಾಡಿ ಹಳೇ ಕಾಲದ ಮೇಲಾಟದ ವ್ಯಾಪಾರ ಕ್ರಮವನ್ನು ಪುನಃ ಜಾರಿಗೆ ತರುವುದು ವಿಹಿತವೆಂದು ನಡುಗಾಲ ಸರಕಾರದ ಔದ್ಯೋಗಿಕ ಮಂತ್ರಿ ರಾಜಾಜಿಯಂದಿದ್ದಾರೆ. ಆದರಿಂದು ತನ್ನ ವ್ಯಕ್ತಿಗತ ಅಭಿಪ್ರಾಯ ಹೊರತು ಸರಕಾರೀ ಧೋರಣೆಯಲ್ಲವೆಂದು ತಿಳಿಸಿದ್ದಾರೆ.

ಉಡುಪಿ

ತೈಲ ಚಿತ್ರ ಅನಾವರಣ—ನಗರಸಭೆಯು ನಾಕರ ಸಂಘವು ನಗರ ಸಭೆಗೆ ಅರ್ಪಿಸಿದ ನಗರ ಸಭಾಧ್ಯಕ್ಷ ಶ್ರೀ ಎ. ಲಕ್ಷ್ಮೀನಾರಾಯಣರಾಯರ ತೈಲ ಚಿತ್ರವನ್ನು ತಾ. 30ರಲ್ಲಿ ಸಂಜೆ ಡಾ। ಸಂಜೀವರಾಮ ಪೈಗಳವರು ಬೇಂಡ್ ವಾದ್ಯ, ಗರ್ನಾಲು ಹೊಡೆತಗಳ ಘರ್ಜನೆಯೊಂದಿಗೆ ಅನಾವರಣಮಾಡಿದರು. ಡಾ। ಮಾಧವ ಪೈಗಳವರು ಅಧ್ಯಕ್ಷತೆ ವಹಿಸಿದ್ದರು. ಸಭಿಕರಲ್ಲಿ ಹಲವರು ಶ್ರೀ ಆರೂರ ಗುಣರಾಯವವರಿದರು. ಮುನಿಸಿಪಲ್ ನೌಕರರ ಹಾಗೂ ಭಾಷಣಗಾರರ ಸನಿಸುದಿಗಳಿಗೆ ಶ್ರೀ ಆರೂರವರು ಉತ್ತರವೀಯುತ್ತ ಸದ್ಯವೇ ಜರಗಲಿರುವ ಮುನಿಸಿಪಲ್ ಮತ್ತು ಜಿಲ್ಲಾ ಬೆಕಡೂರ್ ಚುನಾವಣೆಗಳಲ್ಲಿ ತಾನು ಉಮೇದ್ವಾರನಾಗಿ ನಿಲ್ಲುವುದಿಲ್ಲವೆಂದು ಸ್ಪಷ್ಟ ಮಾತುಗಳನ್ನಾಡಿದರು.

ಕಲಾವೃಂದ—೩೦-೪-೪೬ರಂದು ಕಲಾವೃಂದದಲ್ಲಿ "ಕನ್ನಡ ನುಡಿ"ಯ ಸಂಪಾದಕರಾಗಿದ್ದ ಶ್ರೀ ಕೆ. ಬಿ. ವೆಂಕೋಬರಾಯರ ಅಧ್ಯಕ್ಷತೆಯಲ್ಲಿ ಒಂದು ಚಿಕ್ಕ ಸಭೆಯು ಜರಗಿತು. ಮಂಗಸೂರ ಗೆಳೆಯ 'ಸದಾ' ರು "ಕರಿಯರ ಕರ್ತವ್ಯ"ದ ಕುರಿತು ಉಪನ್ಯಾಸವಿತ್ತರು. ಉ.ವೆಂ ಪುತ್ತೂರಾಯರು ಬೇಂದ್ರೆಯವರ ಒಂದೆರಡು ಕವನಗಳನ್ನು ಹಾಕಿದ ನಂತರ ಅಧ್ಯಕ್ಷರ ಭಾಷಣವಾಗಿ ಕಾರ್ಯಕ್ರಮವು ಕೊನೆಗೊಂಡಿತು.

ಸ್ಕೌಟ್ಸು ವಿಜಂಟರ ಸಭೆ—ಹೊಸ ಜೆಳೆಯ ಭರ್ತ್ತಿ, ಅಕ್ಕ್ಯಯನ್ನು ಸಂಗ್ರಹಿಸಲು ಅಧಿಕೃತರಾದ ಎಸ್. ಕೆ. ಸಿ. ಸ್ಕೌಟ್ಸಿನ ಉಡುಪಿ ತಾಲೂಕಿನ ಡಿಪೋ ವಿಜಂಟರ ಸಭೆಯು ತಾ. 28ರಲ್ಲು ಬಡಗಬೆಟ್ಟು ಸಹಕಾರ ಸಂಘದ ಆಫೀಸಿನಲ್ಲಿ ಶ್ರೀ. ಎಮ್. ಶಿವರಾಯರ ಅಧ್ಯಕ್ಷತೆಯಲ್ಲಿ ಜರಗಿತ್ತು. ಗ್ರಾಮ ಸಮಿತಿಗಳೊಡನೆ 'ಮೀಸ್ತಿ'ಯಿಂದಿದ್ದು, ಭರ್ತ್ತಿ, ಅಕ್ಕ್ಯಯನ್ನು ಒಪ್ಪಿಸಲು ಬರುವವರೊಡನೆ ಮನಪೊಪ್ಪುವ ರೀತಿಯಲ್ಲಿ ವರ್ತಿಸಿ ಹೋಲ್‌ಸೇಲ್ ಸ್ಟೋರ್ಸಿನ ಮೇಲೆ ಜನರು ಅಪಾರವಾದ ಹೊರಿಸಿದೆಂತೆ ವರ್ತಿಸಬೇಕೆಂದು ಅಧ್ಯಕ್ಷರು ಹಸನ್ಮುಖರಾಗಿ ಉಪದೇಶಗಳನ್ನಿತ್ತರು. ಹಾಜರಿದ್ದ ಉಡುಪಿ ತಹಸಿಲ್ದಾರ್ ಶ್ರೀ. ಸದಾನಂದ ಪೈಗಳವರೂ ತನ್ನ ತಾಪೆಯ ಗ್ರಾಮ ಉದ್ಯೋಗಸ್ಥರಿಂದ ರಿಪು ಬಾಧಕ ವಾರದಂತೆ ಈ ಮುಂಜಿಯೇ ತಿಳಿಸಿರುವೆನಾಗಿ ಹೇಳಿದರು. ಅಲ್ಲಿಗೆ ವಿಜಂಟರ ರಫ್ತು ಮಾಡಬೇಕೆಂದು ಸಭೆಯು ಮುಗಿಯಿತು.

ಕೆ. ಅಬ್ದುಲ್ ಗಫರ್ ಸಾಹೇಬರ ನಿಧನ—ಉಡುಪಿಯ ಅಗ್ರಗಣ್ಯ ಬೀಡಿ ಸಾಹುಕಾರರೆಲ್ಲೊಬ್ಬರೂ, ಉಡುಪಿಯ ಮುಟ್ಟಿಗೆ ಬೀಡಿ ಕೈಗಾರಿಕೆಯ ಮೂಲ ಪುರುಷರೂ ಆಗಿದ್ದ, ಖಾ. ಕೆ. ಅಬ್ದುಲ್‌ಗಫರ್ ಸಾಹೇಬರು ತಾ. 26-8-46ರಲ್ಲಿ ನಿಧನ ಹೊಂದಿದರೆನ್ನಲು ವಿಷಾದಿಸುತ್ತೇವೆ. 1920ರಲ್ಲಿ ಸರ್ವ ಪ್ರಥಮವಾಗಿ ಬೀಡಿ ಉದ್ಯೋಗವನ್ನಾರಂಭಿಸಿದಂದಿನಿಂದ ಸಾಹೇಬರು ತನ್ನ ಸೌಜನ್ಯ, ಜಾತಿಭೇದ ರಹಿತ ಬಂಧುಭಾವ, ಉದಾರ ಧೋರಣೆ, ವಿನಯಶೀಲತೆಯಿಂದ ಸರ್ವಜನ ಪ್ರೀತರಾಗಿದ್ದರು. ಈ ಕಾಲದಲ್ಲಿ ಇಂತಹ ಸಜ್ಜನರ ವಿಯೋಗವು ಅತ್ಯಂತ ಶೋಚನೀಯವಿದೆ.

ತಿದ್ದುಪಡಿ—ತಾ. 29-8-46ನೇ ಸಂಚಿಕೆಯಲ್ಲಿ ಪ್ರಕಟವಾದ ಖಾ. ಎಂ. ಜಿ. ನಜರೇತರ ಜಿಲ್ಲಾ ಬೋರ್ಡು ಚುನಾವಣೆಯ ವಿನಂತಿ ಎಂಬ ಪ್ರಕಟಣೆಯಲ್ಲಿ ಕಾಪು ಸರ್ಕಲಿನ ಕ್ರಿಶ್ಚಿಯನ್ ರಿಜರ್ವ್ ಸೀಟಿಗೆ ಎಂದು ತಪ್ಪಾಗಿ ಬಿದ್ದಿದೆ. ಇದನ್ನು ಕಲ್ಯಾಡಿ ಸರ್ಕಲಿನ ಎಂದು ಓದಿಕೊಳ್ಳಬೇಕಾಗಿದೆ.

ಸಂ. ನ.

ಬೆಳ್ಳೆ—ಇಲ್ಲಿಯ ಜರ್ಜ್ ಹಾಯರ್ ಎಲಿಮೆಂಟರಿ ಶಾಲಾ ಹಳೆಯ ವಿದ್ಯಾರ್ಥಿಗಳ ಸಂಘವು ಗೋವಾದ ರೆ. ಪಾ ಎ.ಪೀರೇರಾರವರಿಂದ ಸ್ಥಾಪಿಸಲ್ಪಟ್ಟಿತು.

ಕಾರ್ಕಳ ತಾಲೂಕು ಕಾಂಗ್ರೆಸ್ ಪ್ರಾಥಮಿಕ—ಸದಸ್ಯರ ನುಮಾ ಸಭೆಯು ಕಳದ ತಾ. 29ರಲ್ಲು ಬಂಟರ ಹಾಸ್ಟೆಲಿನಲ್ಲಿ ಪಕೀಲ್ ಶ್ರೀ ಎಚ್. ಪದ್ಮರಾಜ ಆರಿಗ ಪೈ ನಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಸರ್ಕಲ್ ಕಾಂಗ್ರೆಸ್ ಸಮಿತಿಗಳಿಗೆ ಸದಸ್ಯರನ್ನು ವೋಟುಗಳ ಮೂಲಕ ಆರಿಸಲು ಪುರ ಬದಲು ನಾಮಕರಣ ಮಾಡಿದ ಸುತ್ತು ಇನ್ನು ಮಾಡಲಿರುವ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಧೋರಣೆಯನ್ನು ನಿಷೇಧಿಸುವ, ನಾಮಕರಣದ ಸದಸ್ಯರು ಕೂಡಲೇ ತಮ್ಮ ಸದಸ್ಯತನಕ್ಕೆ ರಾಜಿನಾಮೆಕೊಡಬೇಕೆಂದು ವಿನಂತಿಸುವ, ಜಿಲ್ಲಾ ಕಾಂಗ್ರೆಸ್ ಕಮಿಟಿಯ ನಿಬಂಧನೆಗಳಲ್ಲಿ "ನಾಮಕರಣ ಮಾಡುವ" ಒಕ್ಕಣೆಯನ್ನು ಉಚ್ಚಿ ಮೂಲ ವಿಧಾನವನ್ನೇ ಬಳಕೆಯಲ್ಲಿ ತರಬೇಕೆನ್ನುವ ಇತ್ಯಾದಿ ನಿರ್ಣಯಗಳಾಡುವು.

ಮಂಗಳೂರು.

ಆಹಲ್ಯಾಕ್ರಮ—ದ ಪಾರ್ಷಿಕೋತ್ಸವವು ತಾ. 6-10-46 ಆದಿತ್ಯವಾರ ಆಪರಾಹ್ನ ಘಂ. 4ಕ್ಕೆ ಶ್ರೀ ಎಮ್. ಸುಬ್ಬರಾಯರ ಅಧ್ಯಕ್ಷತೆಯಲ್ಲಿ ಜರಗಲಿರುವುದು.

ದಕ್ಷಿಣ ಕನ್ನಡ ಕೃಷಿಕರ ಬಂಡ ಸಾಲೆಯ ಸಹಕಾರಿ ಸಂಘ, ಲಿಮಿಟೆಡ್ ಪುತ್ತೂರು

ನೋಟೀಸು

1946ನೇ ಇಸವಿ ಆಕ್ಟೋಬರ ತಾ. 15ನೇ ಮಂಗಳವಾರ ದಿನ ಆಪರಾಹ್ನ ಗಂಟೆ 2ಕ್ಕೆ ಪುತ್ತೂರು ಸಹಕಾರೀ ಕಟ್ಟಡದಲ್ಲಿ ಸಂಘದ ಮಹಾಸಭೆಯು ಈ ಕೆಳಗಿನ ವಿಷಯಗಳನ್ನು ತೀರ್ಮಾನಿಸುವುದಕ್ಕಾಗಿ ಸೇರುತ್ತದೆ. ಎಲ್ಲಾ ಸದಸ್ಯರೂ ಬರಬೇಕಾಗಿ ವಿನಂತಿ.

ಪುತ್ತೂರು, 14-9-46. } ಬಿ. ಪ್ರಭಾಕರ ರಾವ್, ಅಧ್ಯಕ್ಷ.

ವಿಷಯಗಳು

I. 1944-45ನೇ ವರ್ಷದ ಆಡಳಿತೆ ವರದಿ ಮತ್ತು ಆಡಿಟ್ ಸರ್ಟಿಫಿಕೇಟುಗಳನ್ನು ಪರಿಶೀಲಿಸುವುದು.

2 1945 46ನೇ ವರ್ಷದ ತಿದ್ದುಪಡಿಯಾದ ಆಯವ್ಯಯ ಪಟ್ಟಿ (ನಿಜವಾದ ಆಯವ್ಯಯಗಳು) ಮತ್ತು 1946-47ನೇ ವರ್ಷದ ಅಂದಾಜು ಆಯವ್ಯಯ.

3. ಸಂಘದ ಈಗ ಇರುವ ಉಪನಿಬಂಧನೆಗಳಿಗೆ ಈ ಕೆಳಗಿನಂತೆ ತಿದ್ದುಪಡಿ ಮಾಡುವ ವಿಚಾರ.

ಉಪನಿಬಂಧನೆ I. "ದಿ. ಸೌತ್ ಕೆನರಾ ಎಗ್ರಿಕಲ್ಚರಿಸ್ಟ್ಸ್ ಕೊಆಪರೇಟಿವ್ ಹೋಲ್‌ಸೇಲ್ ಸೊಸ್ಯಾಟಿ, ಲಿಮಿಟೆಡ್" ಎಂಬುದರ ಬದಲು "ದಿ. ಸೌತ್ ಕೆನರಾ ಎಗ್ರಿಕಲ್ಚರಿಸ್ಟ್ಸ್ ಕೊಆಪರೇಟಿವ್ ಮಾರ್ಕೆಟಿಂಗ್ ಸೊಸೈಟಿ" ಎಂದು ಬದಲಾಯಿಸುವುದು.

ಉಪನಿಬಂಧನೆ 16- ಮೊದಲಿನಷ್ಟಿವಾಕ್ಯದಲ್ಲಿ 'ಎರಡು' ಎಂಬುದರ ಬದಲು 'ಮೂರು' ಎಂದು ತಿದ್ದುವುದು.

ಉಪನಿಬಂಧನೆ 17A-"ಅಧ್ಯಕ್ಷರು ಕಾರ್ಯಕಾರೀ ಕಮಿಟಿಯ ಸಭೆಗಳನ್ನು 15ದಿನಗಳಿಗೊಮ್ಮೆ ಅಥವಾ ಆದಕ್ಕೂ ಹೆಚ್ಚಿನ ಬಾರಿ ಕರೆಯತಕ್ಕದ್ದು" ಎಂಬುದರ ಬದಲು "ಅಧ್ಯಕ್ಷರು ಕಾರ್ಯಕಾರೀ ಕಮಿಟಿಯ ಸಭೆಗಳನ್ನು ತಿಂಗಳಿಗೊಮ್ಮೆ ಅಥವಾ ಆದಕ್ಕೂ ಹೆಚ್ಚಿನ ಬಾರಿ ಕರೆಯತಕ್ಕದ್ದು" ಎಂದು ತಿದ್ದುವುದು.

4. ಈ ಕೆಳಗಿನ ಐಟಮ್ಮುಗಳನ್ನು ಲೆಕ್ಕದಿಂದ ತೆಗೆದು ಹಾಕಿದ ಬಗ್ಗೆ ಮಂಜೂರಾತಿ.

1. ಕುಂಞ ಹಮ್ಮದ್ ಬ್ಯಾರಿ.....— ರೂ. 2,236,

2. ಬೊಂಬ್ಯಾ ಶಾಪೆಯಲ್ಲಿ ಬೆಂಕಿಯಿಂದಾದ ನಷ್ಟದ ಪೈಕಿ ಕರೆಂಟ ಎಕೌಂಟಿನಲ್ಲಿದ್ದ ಹಣ, ರೂ. 21-328.

ಸೂಚನೆ—ಸಂಘದ ಸದಸ್ಯರು ತಮ್ಮ ವ್ಯತಿನಿಧಿಗಳನ್ನು ಅವರನ್ನು ನೇಮಿಸಿದ ನಿರ್ಣಯದ ಯಥಾ ನಕ್ಲು ಸಮೇತ ಕಳುಹಿಸಬೇಕಾಗಿ ವಿನಂತಿ.

NOTICE

ಕಾಸರಗೋಡು ಡಿ. ಮು. ಕೋರ್ಟಿನಲ್ಲಿ.

ಸ್ಪೆಷಲ್ ನಂಬ್ರ 399/1941. A. S. No. 136/1944. R. E. P. 331/46.

ಆಪ್ಪು ಪೆಂಗ್ಸು—ವಾದಿ—ಅರ್ಜಿದಾರಳು,

ಮತ್ತು

ತಿಂಮಪ್ಪಂಣ ಸೆಟ್ಟಿ ಸಪಾ-ರೆಸ್ಪಾಂಡೆಂಟರು, ಯವರೊಳಗೆ

4ನೇ ರೆಸ್ಪಾಂಡೆಂಟ. ಆಕ್ಕುಬಂಟ, ಪಂಮುಂಞ ಹೆಂಗ್ಸಿನ ಮಗ. ತಂದೆ ಕುಟುಂಬದ ಎಜಮಾನ ಮತ್ತು ಆಡಳ್ತೆದಾರ. ಕುಡಾಲು ಮೇರ್ಕಳ ಗ್ರಾಮಸ್ಥ. ಹಾಲ್‌ಕಯ್ಯಾರು ಗ್ರಾಮದ ಪಿಲಿಯಂಪೂರಲ್ಲಿರುವನೆ.

ಮೇಲ್ಕಂಡ ಡಿಕ್ರಿ ಪ್ರಕಾರ ರೆಸ್ಪಾಂಡೆಂಟರಿಂದ ಬಹಾ ಅ್ಯವಜಿನ ವ್ಯಸು ಕುರಿತು ಆ ವರನ್ನು ವಾರಂಟು ಮೂಲ್ಕ ಹಿಡ ತಂದು ಅ್ಯವಜು ವ್ಯಸ್ ಕೊಡುವಂತೆಯೂ ತಪ್ಪಿದ್ರೆ ಸಿವಿಲ್ ಜೈದೀಗೆ ರವಾನಿಸಬೇಕೆಂತ ಆಪೇಕ್ಷಿಸಿ ಅರ್ಜಿದಾರಳು ದಾಕ್ಲು ಮಾಡಿದ ಮೇಲ್ಕಂಡ ಅಮ್ಲಜ್ಯಾರಿ ಅರ್ಜಿಯು ತಾ 18-10-46ಕ್ಕೆ ಯಿಟ್ಟರುತ್ತದೆಂತಲೂ ಆ ದಿನ ಸದ್ರಿ 4ನೇ ರೆಸ್ಪಾಂಡೆಂಟನು ಹಾಜರಾಗಲು ತಪ್ಪಿದ್ರೆ ಆತನ ಗೈರ ಹಾಜರಿಯಲ್ಲಿ ಸದ್ರಿ ಅರ್ಜಿಯು ತೀರ್ಮಾನಿಸಲ್ಪಡುವುದೆಂತಲೂ ಈ ಮೂಲಕ ತಿಳಿಸೋಣಾಗುತ್ತದೆ

B. S. Kakkilaya.
Advocate for Petitioner.

ಮಗ್ಗದ ಮ್ಯಾಲಿಕರಿಗೆ ಸುಸಂದರ್ಭ

ನಂಬ್ರ P II ಪರ್ಮಿಟುದಾರರಾದ ಮಗ್ಗದ ಮ್ಯಾಲಿಕರು ತಮ್ಮ ನೂಲಿಗೆ ಬೇಕಾಗುವ ರಂಗುಗಳಿಗೆ ಮಂಗಳೂರು ಇಲ್ಲವೆ ಕಣ್ಣಾನೂರು ರಂಗಿನ ವ್ಯಾಪಾರಸ್ಥರನ್ನು ಅವಲಂಬಿಸಬೇಕಾಗಿತ್ತು. ಈಗ ಅವರಿಗೆ ಬೇಕಾಗುವ ಎಲ್ಲಾ ತರದ ರಂಗುಗಳನ್ನು ಒದಗಿಸಲು ನಾವು ಲೈಸನ್ಸನ್ನು ಪಡೆದಿರುತ್ತೇವೆ.

ಪಿ. ಎ. ಪೈ ಬ್ರದರ್ಸ್, ಉಡುಪಿ.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್‌ನಲ್ಲಿ

ತಾರೀಕು 1—10—1946ರಿಂದ

★ ಕೃಷ್ಣಪ್ರೇಮ ★

ಶಾಂತು ಕುಮಾರಿ, ಭಾನುಮತಿ, ಜಿ. ವಿ. ರಾವ್,
ಉದ್ದಂಕಿ, ಹಿರಣ್ಮಯಯ್ಯ
ಮೊದಲಾದವರು ನಟಿಸಿರುವರು

ಮುಂದಿನ ಬದಲಾವಣೆ—

ಪಗ್ಲಿ ದುನಿಯಾ

ಮುನವ್ವರ್ ಖಾನ್, ಮೋತಿಲಾಲ್.

೧ ರೂಪಾಯಿಗೆ ೧೦ ಪುಸ್ತಕಗಳು

(ಟಪ್ಪಾಲು ಖರ್ಚು ಫ್ರೀ)

(1) ನಾಡಕತೆಗಳು 0-3-0; (2) ಬಾಲ ಸಾಹಿತ್ಯ 0-3-0; (3) ಬೆಲಚ್ಚಿತ್ರ ಪದ್ಯಾವಳಿ 0-3-0; (4) ವೀರ ಭೂಮಿ 0-2-0; (5) ತರಂಭುಕ ವಧೆ 0-2-0 (6) ಆಡ್ಡ ಬೆಳೆದ ಗಿಡ್ಡಿಯ ಮದುವೆ 0-2-0 (7) ಮುದುಕನ ಹೆಂಡ್ತಿ ಹಳಕ ಪೈ ರಾಧೆ 0-2-0 (8) ಬಂಗಾರ್ದಂಗಿದ ಕತೆ 0-1-0; (9) ವಿಕ್ರಾಂತ ರಾಮಾಯಣ 0-1-0; (10) ಭಾರತ ಗೀತಾಂಜಲಿ 0-2-0; ಒಂಳು ರೂಪಾಯಿ ಮಣಿಯಾರ್ಡರು ಮಾಡಿದವರಿಗೆ ಯಾ ಒಂದು ರೂಪಾಯಿಯ ಸ್ಟಾಂಪು ಯಾ ಒಂದು ರೂಪಾಯ್ಕ ಫೋಸ್ಟಲ್ ಆರ್ಡರ್ ಕಳಿಸಿದವರಿಗೆ ಮೇಲಿನ 10 ಪುಸ್ತಕಗಳನ್ನು ಬುಕ್ ಪೋಸ್ಟ್‌ಮಾಡಿ ಕಳಿಸಲಾಗುವುದು.

ನವಭಾರತ ಪುಸ್ತಕ ಭಂಡಾರ, ಉಡುಪಿ.

P. Madhava Rao, Vakil.

Mangalore, 30-9-46.

ಮಂಗಳೂರು.

ಜಿಲ್ಲಾ ವರ್ಗದಾರರ ಮಹಾ ಸಭೆಯು—ತಾ 13-10-46ನೆ ಆದಿತ್ಯವಾರ ಅಪರಾಹ್ನ 3 ಗಂಟೆಗೆ ಎಸ್. ಆರ್. ಎಸ್. ಹೋಮಿನಲ್ಲಿ ಜರಗಿ ಧನಿಗೂ ಒಕ್ಕಲಿಗೂ ಇರುವ ಸಂಬಂಧದ ಕುರಿತು ನ್ಯಾಯವಿಧಾಯಕ ಸಭೆಯಲ್ಲಿ ಬರಲಿರುವ ಮಸೂದೆ ಹಾಗೂ ಹೊಸ ಬೆಳೆಯ ಭತ್ತ, ಅಕ್ಕಿಯನ್ನು ಸಂಗ್ರಹಿಸುವ ಸರಕಾರದ ಧೋರಣೆ ಇತ್ಯಾದಿ ಸ್ಯಾಮುಖ್ಯ ವಿಷಯಗಳನ್ನು ಆಲೋಚಿಸಲಾಗುವುದು. ರೈತ ಮಹಾಜನರು ಬಹುತೇಕವಾಗಿ ಸಭೆಗೆ ಚಿತ್ತೈಸಬೇಕಾಗಿ ಜ. ಕ. ಜಿಲ್ಲಾ ವರ್ಗದಾರ ಸಂಘದ ಜತೆ ಕಾರ್ಯದರ್ಶಿಯರಾದ ಶ್ರೀ ಕೆ. ಬಿ ಜಿನರಾಜ ಹೆಗ್ಡೆ ಮತ್ತು ಶ್ರೀ ಕೆ. ಸದಾನಂದ ಹೆಗ್ಡೆಯವರ ವಿನಂತಿಯಿದೆ.

ಅದೇ ದಿನ ಬೆಳಿಗ್ಗೆ 9 ಗಂಟೆಗೆ ಜಿಲ್ಲಾ ವರ್ಗದಾರರ ಸಂಘದ ಮಹಾಸಭೆ ಜರಗಿ ಹೊಸ ವರುಷದ ನಾಯಕ ಮಂಡಲಿಯ ಸದಸ್ಯರ ಚುನಾವಣೆ ನಡೆಯಲಿದೆ. ಸದಸ್ಯರೆಲ್ಲಾ ಹಾಜರಾಗಬೇಕಾಗಿಯೂ ವಿನಂತಿ.

ಸ್ಥಳೀಯ ರೆ. ಡಿವಿಜನಲ್—ಆಪೀಸರ್ ಶ್ರೀ ಭೂತರಾಜ ರಾವ್ ಅವರಿಗೆ ಬೇರೆ ಕಡೆಗೆ ವರ್ಗವಾಗಿ ಶ್ರೀ ಎಸ್. ಬಾಲರಾಜ ರಾಯರು ಇಲ್ಲಿಯ ರೆವಿನ್ಯೂ ಡಿವಿಜನಲ್ ಅಧಿಕಾರಿಯಾಗಿ ನೇಮಿಸಲ್ಪಟ್ಟಿದ್ದಾರೆ.

ಮಂಗಳೂರಿಗೊಂದು ರೇಡಿಯೋ—ಪ್ರಸಾರಾಲಯವು ಆಗತ್ಯವಿದೆ-ಎನ್ನುತ್ತಿ ಜಿಲ್ಲಾ ಪಬ್ಲಿಸಿಟಿ ಸಂಘದವರು ಸರಕಾರದ ಮುಂದೆ ಸೂಚನೆಯೊಂದನ್ನಿತ್ತಿರುವರಾಗಿ ತಿಳಿದುಬರುತ್ತದೆ.

ಗಾಂಧೀ ಜಯಂತ್ಯುತ್ಸವವು—ಕಳೆದ ತಾ. ೨೨ರಿಂದ ನಗರದಲ್ಲಿ ವಿವಿಧ ಕಾರ್ಯಕ್ರಮಗಳಿಂದ ಆರಂಭವಾಗಿದೆ. ಪ್ರತಿದಿನ ಪ್ರಭಾತ ಫೇರಿ, ಮೆರವಣಿಗೆ, ಸಾರ್ವಜನಿಕ ಸಭೆಗಳು ಜರಗುತ್ತಿವೆ. ತಾ. ೨೩ರಂದು ಗಾಂಧಿಯವರ ಜೀವನ ತತ್ವದ ಕುರಿತು ಕೆನರಾ ಹೈಸ್ಕೂಲಿನ ವತಾರದಲ್ಲಿ ಶ್ರೀ ಅಚ್ಯುತಪೈ ಳಿಗರು ಉಪನ್ಯಾಸವಿತ್ತರು. ತಾ. ೨೪ರಂದು, ಶ್ರೀ ಏಕಾಂಬರ ರಾಯರ್ತ ಅಧ್ಯಕ್ಷತೆಯಲ್ಲಿ ಸೇರಿದ ಸಭೆಯಲ್ಲಿ ಶ್ರೀ ಎಸ್. ಮುಕುಂದ ರಾಯರು "ಯುವಜನರು ಶಿಕ್ಷಣ" ಕುರಿತು ಭಾಷಣವಿತ್ತರು.

ಶ್ರೀ ವಿ. ಸೀತಾರಾಮಯ್ಯ—(ವಿ. ಸಿ.) ಅವರು ಮಂಗಳೂರಿಗೆ ಬಂದಿದ್ದು, ತಾ. ೨೬ರಂದು ಥಿಯಸಾಫಿಕಲ್ ಲೋಜಿನಲ್ಲಿ ಉಪನ್ಯಾಸವಿತ್ತರು.

ಕನ್ನಡದ ಪ್ರಚಾರಕ್ಕಾಗಿ—ಶ್ರೀ. ವಿ. ಸಿ. ಅವರೂ ಸುಪ್ರಸಿದ್ಧ ಗಮಕಿಗಳಾದ ಶ್ರೀ. ಕೆ. ಕೃಷ್ಣರಾಯರೂ, ಮೈಸೂರಿಂ ಅಕ್ಷರ ಪ್ರಚಾರ ಸಮಿತಿಯ ಕಾರ್ಯದರ್ಶಿ ಶ್ರೀ ಶ್ರೀನಿವಾಸರಾಯರೂ ಸಮ್ಮಿಲ್ಲಿಯಲ್ಲಿ ಸಂಚರಿಸಲಿರುವರು.

ಸ್ಥಳೀಯ ಕಲ್ಚರಲ್—ಎಸೋಸಿಯೇಶನ್ನಿನ ಆಶ್ರಯದಲ್ಲಿ ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಯ ಶ್ರೀ. ಕೆ ಜಿ ವಿಜಸ್ವಾಮಿ ಆವರು ಗ್ರಾಮಾಭಿವೃದ್ಧಿ ಸಂಸ್ಥೆಗಳ ಕುರಿತು ಭಾಷಣವಿತ್ತರು

ಡಾ| ಎಲ್. ಹೆ. ಪೆರ್ನಾಂಡೀಸ್ ಸ್ಮಾರಕನಿಧಿಗೆ ನೆರವಾಗಿರಿ—ಮಂಗಳೂರು ಕಂಕನಾಡಿಯಲ್ಲಿರುವ ಫಾದರ್ ಮುಲ್ಲರ್ ಆಸ್ಪತ್ರೆಯ ನಮ್ಮ ಡಾಕ್ಟರರಾಗಿದ್ದು ಬಡಜನ ಸೇವೆಯನ್ನು ಸಲ್ಲಿಸಿ ತೀರ್ಥಶೇಷವಾದ ಡಾ| ಎಲ್. ಹೆ. ಪೆರ್ನಾಂಡೀಸರ ಸ್ಮಾರಕಕ್ಕೊಂದು ಚಿರಸ್ಥಾಯಿಯಾಗಿರುವಂತೆ ಮಂಗಳೂರಿನ ಜನರು ಒಂದು ಕಮಿಟಿಯನ್ನೇರ್ಪಡಿಸಿ ಸ್ಮಾರಕನಿಧಿ ಸಂಗ್ರಹಕ್ಕೆ ತೊಡಗಿರುತ್ತಾರೆ ಈ ವಾರದ ಆರಂಭದಲ್ಲಿ ಮಂಗಳೂರಿಗೆ ಬರುವ ಸುದ್ದಾಸ್ ಗವರ್ನರ್ ರಥ್ ಮತ್ನಿಯವರು ಫಾದರ್ ಮುಲ್ಲರ್ ಆಸ್ಪತ್ರೆಯ ವಿಸ್ತರಣ ಕಟ್ಟಡದ ಬುನಾದಿಕಲ್ಲನ್ನು ಹಾಕಲಿರುವರು. ಜಿಲ್ಲೆಯ ಸರ್ವ ಜನರೂ ಭಕ್ತಿಪೂರ್ವಕ ಬಡಜನ ಸೇವಾ ಕಾರ್ಯಕ್ಕೆ ಮುಂದಾಗಿ ಈ ಕಾರ್ಯದಲ್ಲಿ ಸಹಕರಿಸಬೇಕಾಗಿದೆ.

ಪುತ್ತೂರು

ವಂಡಾಜೆ—ತಾ. ೨೧ರಂದು ಜರಗಿದ ಸಭೆಯಲ್ಲಿ ಈ ನಿರ್ಣಯಗಳು ಸ್ವೀಕೃತವಾದವು.—ಸಲಹೆಗಾರ ಸರಕಾರದವರು ಹೊರಡಿಸಿದ ಅಕ್ಕಿ ಭತ್ತ ಸಂಗ್ರಹ ವಿತರಣೆಯ ಕಾನೂನುಗಳು ಈ ಜಿಲ್ಲೆಯಲ್ಲಿ ಜಾರಿಗೆ ಬಂದಂದಿನಿಂದ, ಈ ಮಲೆನಾಡು ಪ್ರಾಂತವೆ ಅಡಿಕೆ ತೋಟಗಾರರ ಸ್ಥಿತಿಯು ಶೋಚನೀಯವಾಗಿರುತ್ತಾ ಬಂದಿದೆ ಮುಖ್ಯವಾಗಿ ಈ ಮಲೆ ಪ್ರಾಂತವು ಮಲೇರಿಯದಿಂದ ಕಾಡಲ್ಪಡುವ ಕಾರಣದಿಂದ ಕೃಷಿಯ ಬಗ್ಗೆ ಹೊರಗಿನಿಂದ ಕೂಲಿಗಳ ಆಶ್ರಯವನ್ನೇ ಪಡೆಯಬೇಕಾಗುತ್ತದೆ. ಮತ್ತು ಈ ಮಲೇರಿಯಾ ಪ್ರದೇಶಕ್ಕೆ ಆವರನ್ನು ಆಕರ್ಷಿಸುವ ಬಗ್ಗೆ ಅವರಿಗೆ ಸರಿಯಾದ ಆಹಾರವನ್ನು ಒದಗಿಸಿ ಕೊಡಬೇಕಾಗುತ್ತದೆ. ತೋಟಗಾರರ ಸಂಕಷ್ಟಕ್ಕೆ ಮಿಮಿ ಮಾಡುವ ಬಗ್ಗೆ ಈ ಕೆಳಗೆ ಮಾಡಿರುವ ಸೂಚನೆಗಳನ್ನು ಅನುಸರಿಸಲು ಸರಕಾರವನ್ನು ಮುಂದಾಡಿ ಮತ್ತು ಕಲ್ಮಂಜ ಗ್ರಾಮಾಸ್ಥರ ಈ ಸಭೆಯು ಕೇಳಿಕೊಳ್ಳುತ್ತದೆ. ಉಳಿತಾಯವನ್ನು ನಿರ್ಣಯಿಸುವಾಗ ಅಡಿಕೆ ತೋಟದ ಕೂಲಿಗಳ ನಿರ್ವಾಹಕ್ಕೆ ಬೇಕಾದ ಧಾನ್ಯವನ್ನು ಕೆಳಗಿನ ಪ್ರಕಾರ, ಎಂದರೆ ಸರಾಸರಿ ಎಕ್ರೆಗೆ ೧೮ ದಿನಕ್ಕೆ ೨ಸೇರು ಅಕ್ಕಿಯಂತೆ ಲೆಕ್ಕಮಾಡಿ, ಆ ದಾಮಾಶಾಯಿಯಂತೆ ಗೇಣಿಯ ಅಥವಾ ಇತರ ಸ್ವಂತ ಉತ್ಪನ್ನದಿಂದ ಆಥವಾ ದಿಪೋದಿಂದ ಪಡೆಕೊಂಡು ಇಟ್ಟುಕೊಳ್ಳಲು ತೋಟಗಾರರಿಗೆ ಹಕ್ಕು ಇರಬೇಕು. (ಇದೇ ರೀತಿ ಜಿಲ್ಲೆಯ ಬೇರೆ ಬೇರೆ ಕಡೆಗಳಲ್ಲಿ ತೋಟಗಾರರು ಠರಾವುಗಳನ್ನು ಪಾಸುಮಾಡಿದರು.)

ಪ್ರಕಟಣೆ

ಜಿಲ್ಲಾ ಕೋಂಗ್ರೆಸು ಕೆಲಸಗಾರರ ಪರಿಷತ್ತು, ಕಾರ್ಕಳ

ಕಳೆದ ಸಲ ಕೂಡಿಗೆ ಜಿಲ್ಲಾ ಕಾಂಗ್ರೆಸ್ ಕಮಿಟಿಯಲ್ಲಿ ಈ ಸಲ ಮತದಾರರು ತಮ್ಮ ವಿವೇಕ ಮತ್ತು ಜಾಗ್ರತೆಯನ್ನು ಉಪಯೋಗಿಸಿ ಸ್ಥಳೀಯ ಸಂಸ್ಥೆಗಳಿಗೆ ಯೋಗ್ಯ ಪ್ರತಿನಿಧಿಗಳನ್ನು ಆರಿಸಬೇಕೆಂಬ ತಮ್ಮ ಅಭಿಪ್ರಾಯವನ್ನು ಸ್ಪಷ್ಟಪಡಿಸಿರುವರು. ಮುತ್ತು ಇವರು ಆ ರೀತಿ ಯೋಗ್ಯ ಪ್ರತಿನಿಧಿಗಳನ್ನು ಆರಿಸಬೇಕಾದರೆ ಆಂತಹ ಪ್ರತಿನಿಧಿಗಳು ಚುನಾವಣಾ ರಂಗದಲ್ಲಿ ಇರಬೇಕು. ಹಾಗಿದ್ದರೆ ಸೇ ಮುಂದೆ ಬಂದಿರುವ ಉ.ಮೇದ್ವಾರರಲ್ಲಿ ತಮ್ಮ ಪ್ರತಿನಿಧಿಯಾಗಿ ಪೋರ್ಡಿಗೆ ಮೋಗಿ ತಮ್ಮ ಹಿತವನ್ನು ಸಾಧಿಸಬಲ್ಲ ಪ್ರತಿನಿಧಿಗಳು ಯಾರೆಂದು ಅರಿಸುವ ಸಂದರ್ಭ ಮತದಾರರಿಗೆ ದೊರೆಯುವುದು. ಹೀಗಲ್ಲದೆ ತಮ್ಮ ಪ್ರತಿನಿಧಿಯಾಗಲು ಯೋಗ್ಯತೆ ಇಲ್ಲದವರೇ ಉಮೇದ್ವಾರರಾಗಿ ಬಂದರೆ ಮತದಾರರಾದರೂ ನನು ಮಾಡಬಲ್ಲರು? ಆದುದರಿಂದ ಜಿಲ್ಲೆಯ ಎಲ್ಲಾ ಕೇಂದ್ರಗಳಲ್ಲೂ ಮತದಾರರ ಹಿತವನ್ನು ಅರಿತು ಬೋರ್ಡಿನ ಕೆಲಸವನ್ನು ನಿರ್ವಹಿಸಲು ಶಕ್ತರಾದ ಯೋಗ್ಯ ಉಮೇದ್ವಾರರನ್ನು ನಿಲ್ಲಿಸುವ ಭಾರವು ಕಾಂಗ್ರೆಸ್ ಕೆಲಸಗಾರರದ್ದೇ ಆಗಿರುತ್ತದೆ.

ಬೋರ್ಡಿನಲ್ಲಿ ಜಿಲ್ಲೆಯ ಎಲ್ಲಾ ಜಾತಿಮತಗಳಿಂದಲೂ ವಿದ್ಯಾವಂತ, ಯೋಗ್ಯ ಪ್ರತಿನಿಧಿಗಳು ಇರಬೇಕಾದರೆ ಎಲ್ಲಾ ಜಾತಿಮತಗಳಿಂದ ಕೂಡಿದ ಎಕ್ಸ್ಟರ ವಿದ್ಯಾಸಕ್ತಿ ಪಾತ್ರವಾದ ಒಂದು ನಮಿತಿಯು ಉಮೇದ್ವಾರರನ್ನು ಆರಿಸಿ ನಿಲ್ಲಿಸಬೇಕು. ಇಂತಹದೊಂದು ಸಮಿತಿಯನ್ನು ಏರ್ಪಡಿಸುವುದು ಈ ಜಿಲ್ಲಾ ಕಾಂಗ್ರೆಸ್‌ನ ರಚನಾತ್ಮಕ ಕಾರ್ಯಕ್ರಮವನ್ನು ನುಂಡೊತ್ತುವಲ್ಲಿಕ್ಕೋಸ್ಕರ ಕೆಲಸಗಾರರ ಸಂಘವೊಂದನ್ನು ಸ್ಥಾಪಿಸುವುದು ಆಗತ್ಯವಿದೆ. ಅಂತಹದೊಂದು ಸಂಘವು ಈ ಪರಿಷತ್ತಿನಲ್ಲಿ ಸ್ಥಾಪಿಸಲ್ಪಡುವುದು. ಆದುದರಿಂದ ಕಾಂಗ್ರೆಸಿನ ಕಾರ್ಯಕ್ರಮಗಳಲ್ಲಿ ಉತ್ಸಾಹವಿರುವ ಎಲ್ಲಾ ಕಾಂಗ್ರೆಸ್ ಕೆಲಸಗಾರರು ಈ ಪರಿಷತ್ತಿನಲ್ಲಿ ಭಾಗವಹಿಸಬೇಕಾಗಿ ವಿನಂತಿ.

ಈ ಪರಿಷತ್ತಿನ ಅಧ್ಯಕ್ಷ ಸ್ಥಾನವನ್ನು ಶ್ರೀ. ಕೆ. ಬಿ. ಜಿನರಾಜ ಹೆಗ್ಡೆಯವರು ವಹಿಸಲು ಒಪ್ಪಿರುವರು. ಪರಿಷತ್ತು ತಾ.6-10-46ನೇ ಆದಿತ್ಯವಾರ ಅಪರಾಹ್ನ ೩ ಗಂಟೆಗೆ ಸ್ಥಳೀಯ ಬಂಟರ ಹಾಸ್ಟೆಲಿನಲ್ಲಿ ಜರಗಲಿರುವುದು ಎಂದು ಶ್ರೀ. ಪಾದೂರು ಸಾಸನದೇವ ಉಪಾಧ್ಯಾಯ (ಪರಿಷತ್ತಿನ ಪ್ರಕಟಣಾ ಕಾರ್ಯದರ್ಶಿ) ರು ಬರೆಯುತ್ತಾರೆ.

ವಿವಿಧ ಪಾತ್ರೆಗಳು

ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ನೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾನ್ಯಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಕಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

ಶಾಲೋಪಯೋಗಿ ಸಾಹಿತ್ಯಗಳು

ಡ್ರಾಯಿಂಗ್ ಮತ್ತು ಮೇಪ್ ಡ್ರಾಯಿಂಗ್ ಪುಸ್ತಕಗಳು, ಲೇಖನ ಪುಸ್ತಕಗಳು, ಹಾಜರಿ ರಿಜಿಸ್ಟ್ರಿಗಳು, ಮುಂತ್ತಿರಿಟರ್ನ್ ಫಾರ್ಮುಗಳು, ರಿಕಾರ್ಡು ಶೀಟ್‌ಗಳು, ಮಗ್ಗಿ ಪುಸ್ತಕಗಳು ಚಿಲ್ಲರೆಯಾಗಿಯೂ ರಖಂ ಆಗಿಯೂ ದೊರೆಯುತ್ತವೆ. ವಿದ್ಯಾರ್ಥಿಗಳಿಗೂ ಉಪಾಧ್ಯಾಯರಿಗೂ ಸುಸಂದರ್ಭ!

ನವಯುಗ ಪ್ರೆಸ್,
ಉಡುಪಿ.

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.

R. I. A. 813/46.
O. S. 405/45.

ಕಾಮಾಕ್ಷಿ ಯಾನೆ ರುಕ್ಮಿಣಿ ಅಮ್ಮ-ವಾದಿಳು—

ಮತ್ತು

ಲ್ಯಬ್ಬಿ ಇಬ್ರಾಹಿಮ್ ಸಹಾ—ಎದ್ರಿಯವರಿಬರೊಳಗೆ

4 ಮೆಕ್ಕ, ಮಂಜಿ ಮಗ. 5 ಮಲ್ಲಿ, ಮಂಜ ಮಗಳು. 6. ಲಜ್ಜಬಿನ್ ಪಕೀರ. 7. ಮಾಸ್ತಮ್ಮ ಕೊಂ ಮಾಸ್ತಪ್ಪ.

4 5ನೇ ಎದ್ರಿರು ನಂಬ್ರ 1ನೇ ಶೀರೂರು ಗ್ರಾಮದಲ್ಲಿಯೂ 6ನೇ ಎದ್ರಿ ಉತ್ತರ ಕನ್ನಡ ಜಿಲ್ಲಾ ಬಟ್ಕಳ ಪೇಟಾ ಗೋಳಿ ಗ್ರಾಮದಲ್ಲಿಯೂ 7ನೇ ಎದ್ರಿ ಬೇಳ್ಕೆ ಗ್ರಾಮದಲ್ಲಿಯೂ ಇರುತ್ತಾರೆ.

ಮೇಲ್ಕಂಡ ನಂಬ್ರದಲ್ಲಿ ಕೊಡೋಕಾದ ಪ್ರಿಲಿಮಿನರಿ ಡಿಕ್ರಿ ಕರ್ಚಿ ಪ್ರಕಾರ ಪೈನಲ್ ಡಿಕ್ರಿ ಆಗಬೇಕೆಂತ ಅರ್ಜಿದಾರಳು ಕೊಟ್ಟ ಅರ್ಜಿಯು ತಾ. 17 10-46ಕ್ಕೆ ಆಪ್ಪೈರೆ ತನ್ನಿಗೆ ಇಡೋಣಾಗಿಯಿದೆ. ಆ ಕುರಿತು ನಿಮ್ಮ ಜೇನಾದ್ರೂ ಆಕ್ಷೇಪವಿದ್ರೆ ಸದ್ರಿ ದಿವ್ಸ ಹಗ್ಗಲು 11 ಗಂಟೆಗೆ ಸ್ವತಹಾ ವ ಪತೀಲರ ದ್ವಾರಾ ಕೋರ್ಟಿಗೆ ಬಂದೆ ತಾಜ್ಞಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರ ಹಾಜರಿಯಲ್ಲಿ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದು ಎಂಬ ಸಂಗ್ತಿ ಆರ್ಜಿದಾರಳ ಕಡೆಯಿಂದ ತಿಳಿಯಪಡ್ಸಿಯದೆ.

G. Sanjiva Rao,
Pleader for Petitioner.

Kundapur,
Date 28-9-46.

ಮಹಾತ್ಮಾಗಾಂಧಿಯವರು

"ನನಗೆ ಸಂದೇಹಗಳು ಬರುವಾಗ, ನಿರಾಶೆಯು ನನ್ನ ಮುಂದೆ ನಿಂತಾಗ, ಮತ್ತು ಆಕಾಶ ಮಂಡಲದಲ್ಲಿ ಯಾವ ಜ್ಯೋತಿಯೂ ಗೋಚರಿಸದಿರುವಾಗ ನಾನು ಗೀತೆಯನ್ನು ಓದುತ್ತೇನೆ. ಆಗ ನನ್ನ ಮನಸ್ಸಿಗೆ ಶಾಂತಿಯನ್ನು ಕೊಡುವಂತಹ ಶ್ಲೋಕವು ಒಂದಿಲ್ಲದಿದ್ದರೆ ಮತ್ತೊಂದು ಸಿಕ್ಕುವುದು." ಎಂದು ಗೀತೆಯ ಕುರಿತು ಹೇಳಿದ್ದಾರೆ.

ಗೀತೆಯ ಕೈಗನ್ನಡಿ

ದಿವಂಗತ ಹೊಸಕೆರೆ ಬಿದಂಬರಯ್ಯನವರಿಂದ ರಚಿಸಲ್ಪಟ್ಟ

ಗೀತೆಯ ಸಮೂಲ ಭಾಷಾಂತರ.

ಪುಟಗಳು 400ಕ್ಕೂ ಮಿಕ್ಕಿವೆ. ಬೆಲೆ 0-8-0 ಮಾತ್ರ.

ಪ್ರತಿಗಳು ಎಲ್ಲ ಪ್ರಸಿದ್ಧ ಪುಸ್ತಕ ವ್ಯಾಪಾರಿಗಳಲ್ಲೂ ದೊರೆಯುತ್ತವೆ.

ಹನ್ನೆರಡಾಣೆ ಸ್ಟಾಂಪನ್ನು ನವಭಾರತ ಪುಸ್ತಕ ಭಂಡಾರ, ಉಡುಪಿ ಇವರಿಗೆ ಕಳಿಸಿದರೆ ಒಂದು ಪ್ರತಿಯನ್ನು ರಿಜಿಸ್ಟ್ರಿಮಾಡಿ ಕಳಿಸುವರು.

ಸ್ವೀಕಾರ-ವಿಮರ್ಶೆ

೩೧. ಚಿತ್ತಗಾಂಗ್ ಕ್ರಾಂತಿವೀರರು–ಬರೆದವರು: ಕಲ್ಪನಾದತ್. ಆನುವಾದ: ಲಲಿತಾ. ಪ್ರಕಾರಕರು: ಜನತಾಸಾಹಿತ್ಯ ಹುಬ್ಬಳ್ಳಿ. ಪುಟಗಳು: ೧೧೦. ಬೆಲೆ-೧ ರೂಪಾಯಿ.

ಭಾರತದ ಸ್ವಾತಂತ್ರ್ಯ ಸಮರದ ಇತಿಹಾಸವನ್ನು ಬರೆವಾಗ, ಭಗತ್ ಸಿಂಗ್ ಮತ್ತು ಅವರ ಸಹೋದ್ಯೋಗಿಗಳಷ್ಟೇ ಮಹತ್ತಾದ ಸಾಹಸ ಕಾರ್ಯಗಳನ್ನು ಮಾಡಿ ಕ್ರಾಂತಿ ಜ್ವಲ ಜ್ವಲನ್ಯ ಹೂಡಿ ತಮ್ಮ ದೇಹವನ್ನರ್ಪಿಸಿಯೂ ಕಾರಾಗೃಹಗಳಲ್ಲಿ ನರಳಿಯೂ ಸೇವೆ ಸಲ್ಲಿಸಿದ ಚಿತ್ತಗಾಂಗ್ ಕ್ರಾಂತಿಕಾರರನ್ನು ಮರೆಯಲು ಸಾಧ್ಯವಿಲ್ಲ. ಚಿತ್ತಗಾಂಗ್ ಶಸ್ತ್ರಾಗಾರದ ಮೇಲೆ ನಡದ ಇತಿಹಾಸ ಪ್ರಸಿದ್ಧವಾದ ಧಾಳಿಯ ನಾಯಕ ಸೂರಜಸೇನ್ ಮತ್ತು ಅವರ ಸಂಗಾತಿಗಳಾದ ಅನಂತಸಿಂಗ್, ಗಣೇಶ ಘೋಷ್, ಸಾವಿತ್ರಿ ದೇವಿ ಮುಂತಾದವರ ವ್ಯಕ್ತಿ ಪರಿಚಯವನ್ನೊಳಗೊಂಡ ಈ ಗ್ರಂಥವನ್ನು ಶ್ರೀ ಲಲಿತಾ ಅವರು ಕನ್ನಡಕ್ಕೆ ಅನುವಾದಿಸಿ, ಇನ್ನೂ ಕತ್ತಲಲ್ಲೇ ಅಡಗಿರುವ ಈ ಕ್ರಾಂತಿಕಾರ ರತ್ನಗಳನ್ನು ಕನ್ನಡ ನಾಡಿನಲ್ಲಿ ಬೆಳಕಿಗೆ ತಂದಿದ್ದಾರೆ. "ಕಲ್ಪನಾ ದತ್ತರ" ಮೂಲ ಬಂಗಾಳಿಕೃತಿ, ಮತ್ತು ಅದರ ಇಂಗ್ಲಿಷ್ ಪ್ರತಿಗಳ ಮೇಲೆ ಸರಕಾರದ ನಿಷೇಧವಿದೆಯೆನ್ನುವಾಗ, ಹಾಗೂ ಆವೆನ್ನು ಲೇಖಕಿ ಕಲ್ಪನಾ ದತ್ತರೇ ತನ್ನ ಸ್ವಂತ ಅನುಭವದಿಂದ ಬರೆದಿದ್ದಾರೆನ್ನುವಾಗ, ಪುಸ್ತಕದ ಮಹತ್ವವನ್ನು ಬೇರೆ ಹೇಳಬೇಕೆಂದಿಲ್ಲ. ಇದರಲ್ಲಿ, ಸಾಮಾನ್ಯ ಬಂದು ಕಾದಂಬರಿಯ ಸಾಕ್ಷಿತ್ರವಿದ ತಯಾರಿಗೆ ಬೇಕಾಗುವಷ್ಟು ಘೋಷಾಜಕಾರಿ ಘಟನೆಗಳು ವರ್ಣಿತವಾಗಿವೆ ಅನುವಾದವು ಸುಲಲಿತವಾಗಿದೆ.

೩೨. Vegetable & its cultivation–ಲೇಖಕರು. ಶ್ರೀ. ಸಿ. ವಿ ರಾವ್. ಪ್ರಕಾರಕರು: ಅತ್ರೇಯಿ ಜನರಲ್ ಏಜನ್ಸಿ- ೪೪, ಸರಸ್ವತಿ ಬಿಲ್ಡಿಂಗ್ಸ್, ಶ್ರೀ ನರಸಿಂಹ ರಾಜರಸ್ತೆ; ಬೆಂಗಳೂರು ನಗರ. ಪುಟಗಳು: ೧೦೬, ಬೆಲೆ ರೂ ೧-೪-೦

ಅಂದವಾಗಿ ಮುದ್ರಿತವಾದ ಈ ಪುಸ್ತಕದಲ್ಲಿ, ತರಕಾರಿಗಳು ಮತ್ತು ಅವುಗಳನ್ನು ಬೆಳೆಯುವ ಬಗೆಯು ವರ್ಣಿತವಾಗಿದೆ. ಮೊದಲನೆಯ ಭಾಗದಲ್ಲಿ, ಪರದೇಶೀಯ ಹಾಗೂ ಹಿಂದೀ ನಾನಾಬಗೆಯ ತರಕಾರಿಗಳ ವೈವಿಧ್ಯಮಯ ಕೃಷಿ, ಬಿತ್ತನೆಯ ಕಾಲ, ಅವುಗಳಿಗೆ ತಗಲುವ ಹುಳುಗಳು ಮತ್ತು ನಿವಾರಣೆ-ಇವು ಕೊಡಲ್ಪಟ್ಟಿವೆ. ಎರಡನೆಯ ಭಾಗದಲ್ಲಿ, ತರತರದ ಗೊಬ್ಬರಗಳು ಮತ್ತು ಅವುಗಳ ಉಪಯೋಗ ವಿಧಾನಗಳಿವೆ. ಮೂರನೆಯ ವಿಭಾಗದಲ್ಲಿ, ಗಿಡಗಳ ರಕ್ಷಣೆಗಳಾದ ಕೃಷಿಕೀಟಗಳು ಮತ್ತು ಅವುಗಳನ್ನು ನಾಶಮಾಡುವ ರೀತಿಗಳನ್ನು ಸಂಕ್ಷೇಪವಾಗಿ ಬರೆದಿದ್ದಾರೆ. ಮನೆ ಮನೆಗಳಲ್ಲಿ ಆಹಾರ ಬೆಳೆಯಿಸಬೇಕಾದ ಪರಿಸ್ಥಿತಿಯೊದಗಿರುವ ಈ ಕಾಲಕ್ಕೆ ಇಂತಹ ಕೈಪಿಡಿಯು ಕಾಲೋಚಿತವೂ, ಉಪಯುಕ್ತವೂ ಆಗಿದೆ ಪುಸ್ತಕವು ಕನ್ನಡದಲ್ಲಿದೆಯೆಂದರೂ, ಮುಖಪುಟದಲ್ಲಿ ಹೆಸರು ಇಂಗ್ಲೀಷಿನಲ್ಲೇ ಇರುವುದು ಉಚಿತವಲ್ಲ.

೩೩ ಆಕಾಶಗಂಗೆ–ಬರೆದವರು. ಶ್ರೀ ಯಸ್. ವೆಂಕಟರಾಜರು. ಪ್ರಕಾಶಕರು ಕಿರಿಯರ ಪ್ರಪಂಚ, ಉಡುಪಿ ಪುಟಗಳು: ೧೭೦ ಬೆಲೆ ೧ ರೂ. ೧೨ ಆಣೆಗಳು.

ಈ ಪುಸ್ತಕವಲ್ಲಿ, ಈಗಾಗಲೇ ಉತ್ತಮ ಕವಿಗಳೆಂದು ಪ್ರಸಿದ್ಧರಾಗಿರುವ ತರುಣಸಾಹಿತಿ ಶ್ರೀ ವೆಂಕಟರಾಜರ ಇಪ್ಪತ್ತು ಕತೆಗಳು ಸಂಗ್ರಹಿಸಲ್ಪಟ್ಟಿವೆ. ಶ್ರೀಯುತರ ಕತೆಗಳಲ್ಲಿ ವಸ್ತುವಿನಿಂತಲೂ ಲಾವಣಿಗಳಿಗೆ ಪ್ರಾಧಾನ್ಯತೆ ಹೆಚ್ಚು, ಶೈಲಿಯಲ್ಲಿ, ಅಲ್ಲಲ್ಲಿ, ಕವಿತಾಭಾಯೆ ಕಂಡುಬರುತ್ತದೆ. ಸಂಗ್ರಹದೊಳಗಿನ "ಸೂಳೆಯ ಸಂಪತ್ತು" "ಜೀವನ ಸಂಗೀತ" "ಬಳೆನೋಟ" "ಮನೋಗತ" ಮೊದಲಾದ ಕೆಲವು ಕತೆಗಳು ನಿಜವಾಗಿಯೂ ಉತ್ತಮ ಕಲಾಕೃತಿಗಳಾಗಿವೆ. ಪಲವು ಕತೆಗಳಲ್ಲಿ, ಸಮಾಜದ ರೀತಿ ನೀತಿಗಳ ಸೂಕ್ಷ್ಮವಾದ ನಿಮರ್ಶೆ, ದೀನ ದಲಿತರ ಬಗ್ಗೆ ಕೊರಗು, ಹಣ್ಣಿನ ಮುಖ್ಯತ. ನಿರುಪಾಯವಾಗಿ ವೇಶ್ಯಾ ಜೀವನವನ್ನನುಲಂಬಿಸಿದವರ ಹೃದಯದ ಮಾರ್ಮಿಕ ಚಿತ್ರಣಗಳು ತೋರಿಬರುತ್ತವೆ ಯಾದರೆ, ಉಳಿದವುಗಳಲ್ಲಿ ನೂತನ ದಂಪತಿಗಳ ಪ್ರಣಯದ ಹುಚ್ಚಾಟಗಳು ಸರಲವಾಗಿ ಸ್ವಾಭಾವಿಕವಾಗಿ ವರ್ಣಿತವಾಗಿವೆ ಒಟ್ಟಿನಲ್ಲಿ ಸಂಗ್ರಹವು ನಾಚಿನೀಯವಾಗಿದೆ.

ಕರ್ನಾಟಕ ಸೇವಾ ಸಂಘ-ಮದ್ರಾಸು- ಇದರ ಮೊದಲನೆಯ ವರದಿ, ೧೯೪೪ರ ಫೆಬ್ರವರಿಯಲ್ಲಿ ಆರಂಭವಾದ ಈ ಸಂಘವು, ಇಪ್ಪತ್ತರಲ್ಲೇ ಭಾಷಣ, ಸಂಗೀತಗೋಷ್ಠಿ, ಪುಸ್ತಕಭಂಡಾರ, ಭಜನೆ, ಕೈ ಬರೆಹದ ಪತ್ರಿಕೆ, ಭಾಷಣ ಸ್ಪರ್ಧೆಗಳೇ ಮುಂತಾದ ಹಲವು ಬಗೆಯ ಚಟುವಟಿಕೆಗಳನ್ನು ಜರಗಿಸಿ, ಮದ್ರಾಸಿನ ಕನ್ನಡಿಗರ ಸಾಂಸ್ಕೃತಿಕ, ಸಾಮಾಜಿಕ ಹಾಗೂ ಸಾಹಿತ್ಯಿಕ ಅಭಿವೃದ್ಧಿಯನ್ನೂ ಸಾಧಿಸುವ ತನ್ನ ಗುರಿಯತ್ತ ಸಾಗುತ್ತಿರುವದು ಸಂತೋಷಕರ. ಇನ್ನೂ ತೀರ ಶಿಶುವಾಗಿರುವ ಈ ಸಂಘಕ್ಕೆ ಬಲವನ್ನು ಕೋರುತ್ತೇವೆ.

ಕೆ. ವಿ ಯಸ್.

ದಕ್ಷಿಣ ಕನ್ನಡ

ವರ್ಕಾಡಿ–ತಾ. 23-9-46ರಲ್ಲಿ ವರ್ಕಾಡಿ ತಸಿನ ಗ್ರಾಮಸ ಕಮಿಟಿಯ ಸಭೆಯು ಕಾಪ್ರ ಎಲಿಮೆಂಟರಿ ಶಾಲೆಯಲ್ಲಿ, ಶ್ರೀ. ವಿ. ನಾರಾಯಣ ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿ ಸದ್ರಿ ತಸಿನ ಗ್ರಾಮಗಳ ಆಹಾರ ಸಮಸ್ಯೆ, ಮತ್ತು ಸದ್ಯದಲ್ಲೇ ಏರ್ಪಡಲಿರುವ ಸ್ಥಳೀಯ ಸಹಕಾರಿ ಸ್ಟೋರಿಗೆ ಕಮಿಟಿಯು ಕೊಡತಕ್ಕ ಬೆಂಬಲ ಇತ್ಯಾದಿ ಮುಖ್ಯ ವಿಷಯಗಳು ಚರ್ಚಿಸಲ್ಪಟ್ಟವು.

ಕೆಟಪಾಡಿ–ಬಹ್ಮ ಶ್ರೀ ನಾರಾಯಣ ಗುರು ಸ್ವಾಮಿ ಸೇವಾಸಮಿತಿಯು ಪ್ರಾಥಮಿಕ ವಿದ್ಯಾಭ್ಯಾಸ ನೂಡುತ್ತಿರುವ ಬಿಲ್ಲವ ಜಾತಿಯ ಮಕ್ಕಳಲ್ಲಿ ಅಗತ್ಯಪುಸ್ತಕಗಳಿಗೆ, ಬೇಕಾಗುವ ಸಹಾಯವನ್ನು ಕೊಡಲು ನಿರ್ಧರಿಸಿ, ಚಾಲ್ತಿ ವರ್ಷದಲ್ಲಿಯೂ ಧನ ಸಂಗ್ರಹಿಸಿರುತ್ತದೆ. ಪ್ರಾಥಮಿಕ ವಿದ್ಯಾಭ್ಯಾಸ ನೂಡುತ್ತಿರುವ ಯೋಗ್ಯ ಮಕ್ಕಳು ಆಯಾ ಶಾಲಾ ಮುಖ್ಯೋಪಾಧ್ಯಾಯರ ಶಿಫಾರಸು ಪತ್ರದೊಂದಿಗೆ ತಮ್ಮ ಅರ್ಜಿಗಳನ್ನು ತಾ 31 12 1946 ಒಳಗೆ ಕಳುಹಿಸಿದರೆ ಆ ಚೆ ಪರಿಶೀಲಿಸಲ್ಪಟ್ಟು, ಯೋಗ್ಯರೆನಿಸುವಾರವಾಗಿ ಸಹಾಯ ಕೊಡಲಾಗುವುದು ಎಂದು ಗೌ. ಕಾರ್ಯದರ್ಶಿ ಶ್ರೀ ರಂಗರು ತಿಳಿಸುತ್ತಾರೆ.

ಸೋಮೇಶ್ವರ—ತಾ 21 9-46ರಲ್ಲು ಸೋಮೇಶ್ವರ ಪೇಟೆ ಬೋ. ಎ ಶಾಲಾ ಮಕ್ಕಳ ಪೆತ್ತವರ ಕೂಟವು ಶ್ರೀ ಟಿ. ಮೋ ಜರಾಜ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿತು. ಪಿಸಿದ ವಿಷಯ ಪಾವಳಿಗಳನ್ನು ತೋರಿಸಿದ ಮಕ್ಕಳಿಗೆ ರಕ್ಷಕರಿಂದ ಅಲ್ಲದೆ ಕೋನಂದೂರು ಸುಬ್ಬಯ್ಯನವರಿಂದ ಇನಾಮುಗಳು ಹಂಚಲಾಯ್ತು ಧನ್ಯವಾದ ಸಮರ್ಪಣೆಯಾದ ನಂತರ ವಂದೇ ಮಾತರಂ ಗೀತೆಯೊಂದಿಗೆ ಸಭೆ ಮುಕ್ತಾಯವಾಯಿತು.

ಕುರುಕಾಲು—ಶ್ರೀ ಕುರುಕಾಲು ಗಣಪಯ್ಯ ಸೆಟ್ರ ಮನೆಯಲ್ಲಿ ಕೆಲಸಕ್ಕೆ ನಿಂತು ತಾ. 7 6-46ರಲ್ಲು ಕಳವುಮಾಡಿ ಪರಾರಿಯಾದವನನ್ನು ಪತ್ತೆ ಹಚ್ಚಕೊಟ್ಟವರಿಗೆ ರೂ ಪ್ಯಾ 15 0 0ನ್ನು ಬಹುಮಾನವಾಗಿ ಕೊಡುವುದಾಗಿ ಶ್ರೀ ಸೆಟ್ರು ಪತ್ರಿಕೆಯಲ್ಲಿ ಜಾಹೀರುಮಾಡಿದ ಪ್ರಕಾರ ರೂಪ್ಯಾ 15-0-0 ನ್ನೂ ಪತ್ತೆಹಚ್ಚುವ ಒಸ್ಕೆ ತಗಲಿದ ಬಾರ್ಜು ರೂಪ್ಯಾ 12-0 0ನ್ನೂ ಒಡಗೂಡಿಜಾರು ಗ್ರಾಮದ ಶ್ರೀ ಬಿ. ಶ್ಯಾಂಪಣ್ಣ ಸೆಟ್ರಿಗೆ ಕಳುಹಿಸಿವ್ವಾರೆಂತಲೂ, ಸದ್ರಿ ಕಳ್ಳನಿಗೆ 6 ತಿಂಗಳು ಶಿಕ್ಷೆಯಾಯಿತೆಂತಲೂ ತಿಳಿದುಬರುತ್ತದೆ.

ಬೈಲೂರು—ಮಹಾತ್ಮರ ಜನ್ಮದಿನಾಚರಣೆಯು ತಾ. 25ರಲ್ಲು ಶ್ರೀ ಜಾರ್ಕಳ ಸಾಗಿನ್ನಿ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ ಆಚರಿಸಲಾಯಿತು. ಶ್ರೀಗಳಾದ ಬಿ. ಕೇರನಕೆರೆ, ಆನಂತಪ್ಪ ಕಿಣಿ, ಆರ್. ಜಿ. ಕಿಣಿ, ಆರ್. ಡಿ. ಶೆಣೈ, ರಾಮ ಪೊದುವಾಳರೇ ಮೊದಲಾದವರು ಭಾಷಣಮಾಡಿದರು.

ಕುಂದಾಪುರ—ಗಾಂಧಿ ಜಯಂತ್ಯುತ್ಸವವು ತಾ. 22ರಲ್ಲು ಕುಂದಾಪುರ ಸರ್ಕಲ್ ಕಾಂಗ್ರೆಸ್ ಕಮಿಟಿಯ ನೇತೃತ್ವದಲ್ಲಿ ಸಾರ್ವಜನಿಕ ಮೆರವಣಿಗೆ ಸಭೆಗಳಿಂದ ಆಚರಿಸಲಾಯಿತು. ಶ್ರೀ ಎಜ್. ಕೆ. ನಕ್ಕತ್ತಾಯರು ಆಂದಿನ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಶ್ರೀಗಳಾದ ಬಿ. ಸುಬ್ಬಣ್ಣ ಸೆಟ್ಟಿ, ಕೆ. ಆರ್. ಭಂಡಾರಿಕರ್ ಮೊದಲಾದವರು ಮಹಾತ್ಮಾಜೀಯವರ ಜೀವನಚರಿತ್ರೆಯ ಆದರ್ಶ ವಿಷಯಗಳನ್ನೆತ್ತಿ ಭಾಷಣನಿತ್ತರು. ಶ್ರೀ ಎ. ಎಸ್. ವಿಟ್ಟಲಸೆಟ್ಟರು ಧನ್ಯವಾದಗಳನ್ನರ್ಪಿಸಿದರು.

ನಮಗೆ ಬಂದ ಪತ್ರಗಳ ಸಾರಾಂಶ

ಪೊಳಲಿಯ ವಿನಂತಿಗಳು—ಎಂಬ ಶಿರೋನಾಮೆಯ ಪತ್ರವಲ್ಲಿ ಗುರುಪುರದಿಂದ ಪೊಳಲಿಗಾಗಿ ಬಂಟ್ವಾಳಕ್ಕೆ ಹೊಂದು ರಾಜರಸ್ತೆಯ ಸಂಪೂರ್ಣತೆ, ಪಾಯರ್ ಎಲಿಮೆಂಟರಿ ಶಾಲೆ ಮತ್ತು ಬಿಡ್ಡಾಯ ಶಿಕ್ಷಣದ ವ್ಯವಸ್ಥೆ, ಪೋಸ್ಟಾಫೀಸಿನ ವಿಸ್ತಾರವು ಪೊಳಲಿ ಪೊಳಿಗೆ ಅಮುಂಡಂಜೆಯ ಬಳಿ ಕಟ್ಟಿಹಾಕಿಸಿ ತನ್ಮೂಲಕ ದಪಸ್ಥಾನಗಳನ್ನು ಜಾಸ್ತಿಯಾಗಿ ಬಳಿಸುವರೆ ಅನುಕೂಲತೆ, ಗ್ರಾಮ ಕೇಂದ್ರವಲ್ಲಿ ಸೀದಾ ಅಂಗಡಿಯ ವಿಚಾರದು, ಸಕ್ಕರೆ, ಗಿರಣಿ ಬಟ್ಟೆಯ ವಿತರಣೆ ಇತ್ಯಾದಿ ವಿಷಯಗಳು ಸೂಚಿಸಲಾಗಿವೆ.

ನಮಗೂ ಜಿಲ್ಲಾ ಯೂನಿಯನ್ ಬೇಡವೇ—ಎಂಬೀ ವಿಷಯದಲ್ಲಿ ಕಾಸರಗೋದು ತಾಲೂಕು ಬೋರ್ಡು ಎಲಿಮೆಂಟರಿಶಾಲಾ ಟೀಚರ್ಸ್ ಯೂನಿಯನ್ನಿನ ಕಾರ್ಯದರ್ಶಿಯವರು ಒಂದು ಪತ್ರ ಬರೆಯುತ್ತ ಜಿಲ್ಲೆಯ ಬೋರ್ಡ್ ಸ್ಕೂಲುಗಳ ಸಿಪಲ್, ಯಾನಗೀ ಶಾಲಾ ಮಾಸ್ತರುಗಳು ಸುಸಂಘಟಿತರಾಗಿ ತಾಲೂಕು ಹಾಗೂ ಜಿಲ್ಲಾ ಯೂನಿಯನ್ನುಗಳನ್ನು ಬೇಗನೆ ಸ್ಥಾಪಿಸಿ ತನ್ಮೂಲಕ ಅಧ್ಯಾಪಕ ವೃತ್ತಿಯ ಕಷ್ಟ ನಿರಾಸಕರಗಳನ್ನು ದೂರ ಸ್ತಿ ಪಡಿಸುವರೆ ಎಲ್ಲಾ ಅಧ್ಯಾಪಕರೂ ಮನಸ್ಸುಮಾಡಬೇಕಾಗಿ ಆಗ್ರಹಪೂರ್ವಕ ವಿನಂತಿಸುವರು.

ಲಾಭ ಬಡಕ ಕಾಫಿ ಹೋಟೇಲುಗಳು—ಎಂಬ ತಲೆ ಬರಹದ ಲೇಖನವೊಂದನ್ನು ಶ್ರೀ. ಎನ್ ಎಸ್. ಬೇಳೂರ ಅವರು ಬರೆದಿರುತ್ತಾರೆ. ಗೋಧಿ, ಗೋಧಿಹಿಟ್ಟು ಇತ್ಯಾದಿ ತಿಂಡಿ ಸಾಮಾನುಗಳು ಕಡಿಮೆ ಬೆಲೆಯಲ್ಲಿ ಸಿಕ್ಕುವಾಗ ತಿಂಡಿ ಬೆಲೆಯೂ ಅದೇ ಪ್ರಮಾಣದಲ್ಲಿ ಕಡಮೆಯಾಗಬೇಕೆಂಬುದೇ ಲೇಖನದ ಸಾರಾಂಶ.

ನೋಟೀಸು.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O S. 94/1946

ವೆಂಕಟಕೃಷ್ಣ ಮೈಯ.-ಅರ್ಜಿದಾರ.

ಈ ಮೂಲಕ ಯಾವತ್ತೂ ಜನರಿಗೆ ತಿಳಿಯಪಡಿಸುವುದೇನಂದ್ರೆ.

ಅರ್ಜಿದಾರನ ಅಜ್ಜ ಮೃತ ಬೆಳ್ಳಯ್ಯಗೆ ಶ್ರಿಂಗೇರಿ ಪಾರದಾ ಕೋಪರೇಟಿವ್ ಸೊಸ್ಯಟಿಯಿಂದ ಬರಕೇಕಾದ ರೂ. 250-0-0ರ ಪ್ಪಲಿಗೆ ತನಗೆ ವಾರೀಸ ಸರ್ಟಿಫಿಕೇಟು ಕೊಡಿಸಬೇಕೆಂಕ ಅರ್ಜಿದಾರನು ದಾಕ್ಲು ಮಾಡಿದ ಮೇಲಿನ ಅರ್ಜಿಯನ್ನು ತಾ. 7-10-46 ಕ್ಕೆ ಈ ಕೋರ್ಟು ಮುಂದೆ ತನಿಖೆಗೆ ಇಡುವ ಜಾಗಿಯದೆ. ಆಕ್ಷೇಪಣೆಯಿರುವವರು ಸದರೀ ದಿನ ಹಗ್ಲು 11 ಗಂಟೆಗೆ ಈ ಕೋರ್ಟು ಮುಂದೆ ಹಾಜೀರು ಮಾಡಿಳ್ಳಬಹುದು.

(Sd). **K. Ramappaiya,**
Advocate for Petitioner.

Kundapur,
26.9.1946.

ದೇಶಕಾಲಕ್ಕೊಪ್ಪುವ ನವೀನ ಪುಸ್ತಕ

ಸ್ವಾತಂತ್ರ್ಯವೀರ ಸಾವರಕರರು

ಹಿಂದೂ ಸಂಸ್ಕೃತಿ ಮತ್ತು ಹಿಂದೂರಾಷ್ಟ್ರಕ್ಕಾಗಿ ಸರ್ವತ್ಯಾಗ ಮಾಡಿದ ವೀರ ಸಾವರಕರರ ಉಜ್ವಲಜೀವನ ಚರಿತ್ರೆ

ಮೈಜುಮ್ಮೆನ್ನಿಸುವ ಹಲವು ಸನ್ನಿವೇಶಗಳು!

ವಿಚಾರ ಕ್ರಾಂತಿಯನ್ನುಂಟುಮಾಡುವ ಘಟನೆಗಳು!

ಪ್ರಸಿದ್ಧ ಹಿಂದೀ ಲೇಖಕ ಪಂಡಿತ ಚಂದ್ರಗುಪ್ತ ವೇದಾಲಂಕಾರ ಇವರ ಹಿಂದೀ ಗ್ರಂಥದ ಕನ್ನಡ ಅನುವಾದ.

ಕನ್ನಡಿಸಿದವರು-ಶ್ರೀಮತಿ ಇಂದಿರಾಬಾಯಿ,
ಮೈಸೂರು, ಸಂಸ್ಥಾನ.

ಬೆಲೆ ಬರೇ ರೂ. **1—4—0**

ರೂ. 1—8—0 ಕಳಿಸಿದರೆ ! ಪ್ರತಿಯನ್ನು ರಿಜಿಸ್ಟರ್ ಮಾಡಿ ಕಳಿಸಲಾಗುವುದು.

ಪ್ರತಿಗಳು ಸಿಗುವ ಸ್ಥಳಗಳು:—

1. ಸ್ಕೂಲ್ ಬುಕ್ ಕಂಪೆನಿ, ಮಂಗಳೂರು. 2. ಸತ್ಯಶೋಧನ ಪುಸ್ತಕ ಭಂಡಾರ, ಬೆಂಗಳೂರು. 3 ನವಭಾರತ ಪುಸ್ತಕ ಭಂಡಾರ, ಉಡುಪಿ. 4. ಸಾನಂಡಿ ಗುರುರಾವ್, ಉಡುಪಿ. 5. ನವಯುಗ ಆಫೀಸು, ಉಡುಪಿ.

ಮದರಾಸು ಸ್ಕೂಲ್ ಬುಕ್ ಮತ್ತು ಲಿಟರೇಚರ್ ಸೊಸೈಟಿಯವರಿಂದ ಬಹು ಮಾನವಾದ ಉಪಯುಕ್ತ ಗ್ರಂಥ

ಪ್ರಸವ ವಿಜ್ಞಾನ

ಬರೆದವರು

ಡಾ|| ಡೊಡ್ಡೇರಿ ವೆಂಕಟಗಿರಿರಾವ್.

ಸುಮಾರು ಮುನ್ನೂರು ಚಿತ್ರಗಳಿವೆ.

ವಿ. ಪಿ. ಕಳಿಸುವುದಿಲ್ಲ. ರೂ. ೩-೪-೦ನ್ನು ಮನಿಯಾರ್ಡರ್ ಮಾಡಿದರೆ ರಿಜಿಸ್ಟರ್ ಮೂಲಕ ಕಳಿಸಲಾಗುವುದು. ಪುಸ್ತಕ ವ್ಯಾಪಾರಿಗಳಿಗೆ ರಿಯಾಯಿತಿಯುಂಟು

ಮಾರಾಟಗಾರರು

ಮಾಡರ್ನ್ ಔಷಧಾಲಯ
ದೊಡ್ಡ ಬಳ್ಳಾಪುರ (ಬೆಂಗಳೂರು)

[೨೦ನೇ ಪುಟದಿಂದ]

"ಹೆಕ್, ಪ್ರೇತಗಳು, ಕಾಫರರು; ಯಾರು ನೀವು?"—ಭಯಕ್ರೌಧ್ಧ ವಿಶ್ರಾವೇಶದಿಂದ ಜಿನ್ನೆರು ಗರ್ಜಿಸಿದರು.

"ಹೆ ಹ್ಹೆ ಹ್ಹೆ ಹ್ಹೆ ಹ್ಹೆ!"— ಲೀಗ್ ನಾಯಕನ ರಕ್ತ ಮಂದುಗಡ್ಡೆಯಾಗುವಂತೆ ಸಾಮೂಹಿಕ ನಗೆಯೆದ್ದಿತು.

'ಯಾರು ನೀವು? ಏನು ಬೇಕು?'—ಸ್ವತಃ ಪ್ರೇತದಂತಾಗಿದ್ದ ಜಿನ್ನರು ಕೈ ಸಂಜ್ಞೆಯಿಂದಲೇ ಪ್ರಶ್ನಿಸಿದರು.

"ನಾವು ಕಲ್ಕತ್ತೆದ ಕತ್ತಿ, ಕೈದು, ಖಡ್ಗ, ಕೊಡಲಿ, ಕಲ್ಲು, ಬೆಂಕಿಗೆ ಬಲಿಯಾದವರು. ನಮ್ಮ ಆತ್ಮಕ್ಕೆ ಶಾಂತಿಬೇಕು; ಶಾಂತಿಬೇಕು; ಶಾಂತಿಬೇಕು!"

"ನಿ....ನಿ.....ನಿ....ಮಗೆ ಶಾಂತಿಬೇಕೆ? ನೀವು ಯಾರು, ಹಿಂದುಗಳೋ ಮುಸಲ್ಮಾನರೋ?"

"ಹೆ ಹ್ಹೆ ಹ್ಹೆ ಹ್ಹೆ ಹ್ಹೆ!" ಎಲ್ಲವೂ ಒಟ್ಟಿಗೆ ಎಬ್ಬಿಸಿದ ನಗೆಯು ಜಿನ್ನರ ರೋಮ ವುದುರುವಂತಿತ್ತು. "ನಮ್ಮನ್ನು ಹಿಂದುಗಳೋ ಮುಸಲ್ಮಾನರೋ ಎಂದು ಕೇಳುವಿಯಾ? ಮಂಕಾ! ನಾವು ಆತ್ಮಗಳು! ಆತ್ಮಕ್ಕೂ ಭೇದವುಂಟೇ? ನರಪಿಶಾಚಿ....."

ಮಿ. ಜಿನ್ನರಲ್ಲಿಯೇ ತಬ್ಬಿಬ್ಬಾದರು. ಶಾಂತವಾಗಿ ಕೈಯೆತ್ತಿ ಹೇಳಿದರು: 'ನಾವು ಧಾನ. ನಾನಿದ್ದೇನೆ. ಸದ್ಯದಲ್ಲೇ ಪಾಕಿಸ್ತಾನ ಸಂಪಾದಿಸಿ, ನಿಮ್ಮ ಬಲಿದಾನ ಸಾರ್ಥಕವಾಗುವಂತೆ ಮಾಡುತ್ತೇನೆ;ಲ ಮೂಲಕ ನಿಮ್ಮ ಆತ್ಮಗಳಿಗೆ-ಹಿಂದೂ ಮುಸ್ಲಿಂ ಎಂಬ ಭೇದವಿಲ್ಲದೆ ಎಲ್ಲಾ ಆತ್ಮಗಳಿಗೂ-ಚಿರಶಾಂತಿಯೊದಗಿಸಿಕೊಡುತ್ತೇನೆ"

"ಹ್ಹೆ ಹ್ಹೆ ಹ್ಹೆ ಹ್ಹೆ ಹ್ಹೆ!" ಪುನ: ಆದೇ ನಗು. "ಪಾಕಿಸ್ತಾನವೆಂದೆಯಾ? ಏನದು? ನಮ್ಮ ಲೋಕದಲ್ಲಿರುವದು ಪಾಪಿಸ್ಥಾನ ಮತ್ತು ಪುಣ್ಯಸ್ಥಾನ ಎರಡೇ— ನಿನ್ನ ಮಾತುಕೇಳಿ ಬಡಿದಾಡಿಕೊಂಡು ಸತ್ತುದಕ್ಕಾಗಿ ನಮ್ಮನ್ನೆಲ್ಲರನ್ನೂ ಪಾಪಿಸ್ಥಾನದಲ್ಲಿ ಕೂಡಹಾಕಿದ್ದಾರೆ. ಬೇಗ ಪ್ರಾಯಶ್ಚಿತ್ತ ಮಾಡು; ಪುಣ್ಯಸ್ಥಾನಕ್ಕೆ ನಮ್ಮನ್ನು ಸೇರಿಸು. ಹಾಂ. ಹೋ! ಹೋ ಹೋ!! ಪಾಪಿಜಾನ್ ಮುರ್ದಾಬಾದ್!"

ಜಿನ್ನರ ದೇಹವಿಡೀ ಕಂಪಿಸ ಹತ್ತಿತು; ವೈಯೆಲ್ಲಾ ಬೆವರಿ ನಾಲಿಗೆ ಮಾತ್ರ ಜಿಣಗಿತು. ಗಂಟಲಿನೊಳಗಿಂದಲೇ: "ಏ...ಏ ಏ...ಏನು ಮಾಡಬೇಕು ನಾನು?"

"ನೀನು ನಮಗೆ ಪಾಪಿ ಸ್ಥಾನ ದೊರಕಿಸಿ ಕೊಟ್ಟೆ; ಪಾಪಿಜಾನ್ ಮುರ್ದಾಬಾದ್' ಏಳೆಂಟು ಸಾವಿರ ಆತ್ಮಗಳಿದ್ದೇವೆ. ಇನ್ನಾದರೂ ಆ ಪಾಕಿಸ್ತಾನ ಬಿಟ್ಟು ನಮ್ಮನ್ನೂ ಈ ಪಾಪಿಸ್ತಾನದಿಂದ ಬಿಡಿಸು. ಅಲ್ಲಿ ಪುಣ್ಯ ಭೂಮಿಯೊಂದೇ ಉಳಿದರೆ ಇಲ್ಲಿ ಪುಣ್ಯಸ್ಥಾನ ಮಾತ್ರವುಳಿಯುವದು. ಅಲ್ಲಿಯ ಪಾಕಿಸ್ತಾನದಿಂದ ಇಲ್ಲಿ ಪಾಪಿಸ್ತಾನವಾಗಿದೆ. ಹೇ! ಅಹಹಹ ಹೆಹೆಹೆ ಹೇ ಹೇ ಹೋ! ನಮಗೆ ಶಾಂತಿ ಬೇಕು; ಶಾಂತಿ ಬೇಕು, ರಾಂತಿ! ಅನ್ನು, ಪಾಕಿಸ್ಥಾನವೇ ಬೇಡ ಅನ್ನು! ಪಾಪಿಜಾನ್ ಮುರ್ದಾ.....".

"ಅಯ್ಯಯ್ಯೋ!" ಎಂದು ಕೂಗುತ್ತಾ ಜಿನ್ನರು ಕಣ್ಣು ಕೆದರಿದರು. ಬೊಬ್ಬೆ ಕೇಳಿ ಓಡಿ ಬಂದ ಲೀಗ್ ಅನುಯಾಯಿಗಳೇ ಆ ಕೋಣೆಯಲ್ಲಿ ತುಂಬಿದ್ದುದನ್ನು ಕಂಡು ಪುನಃ ಮೊದಲ ಸ್ಥಿತಿಗೇ ಬಂದರು.

ಆದರೊಂದು ವೈತ್ಯಾಸ ಕಂಡು ಬರುತ್ತಿದೆ. ಗಾಂಧಿಜೀಯ 'ಅಸಹಕಾರ' 'ಕಾಯಿದೇ ಭಂಗ' 'ಪ್ರತ್ಯಕ್ಷ ಹೋರಾಟ'ಗಳನ್ನು ಅಣಕಿಸುತ್ತಿರುವಂತೆಯೇ ತಾ. 23 ರಿಂದ ಮಿ. ಜಿನ್ನರಿಗೆ 'ಅಂತರ್ವಾಣಿ'ಯೂ ಕೇಳಿಸುತ್ತಿದೆಯಂತೆ! ಮುಂದಿನ ಜಿನ್ನಾ--ವೇವೆಲ್ ಸಂಭಾಷಣೆ ಫಲಕಾರಿಯಾದರೆ ಕಲ್ಕತ್ತಾ ಆತ್ಮಗಳ ಹೆಸರಲ್ಲಿ ವಿಜಯ ಗೋರಿಯೊಂದನ್ನು ನಡುಗಾಲ ಸರಕಾರ ಕಟ್ಟಿಸಲಿದೆಯಂತೆ.



ಕ್ಷಣಿಕ ಗುಣಕೊಡುವ ಔಷಧದ ಬೆನ್ನು ಹತ್ತಿ ಮರುಳಾಗಬೇಡಪ್ಪಾ

ಪುರೋಹಿತ ಶ್ವಾಸಹಾರೀ ಔಷಧ ಮಾತ್ರ ಬೇಕೆ ಆದು ದಮ್ಮನ್ನು, ೧೦ ದಿವಸಕ್ಕೆ, ಇಡಬೆ ಆದೆನ್ನು ಬೇರುಸಿಬು- ಕತ್ತು ಬಿ- ವುದು. ಈ ಔಷಧ ಸುರುವು ಮಾಡಿದಾಗಲೇ ಕೆಮ್ಮೂ ತೇಕೂ ನಿಲ್ಲುವವು, ಹೊಟ್ಟೆ ಹಸನಾಗುವದು; ಪಚನಕ್ರಿಯೆಯು ಶಿದ್ದುಪಡು; ಪುಷ್ಟುಸಗಳು ಗಟ್ಟಿಯಾಗುವುವು. ಆ ಮೇಲೆ ದಮ್ಮಿರಲಿಕ್ಕೆ ಸ್ಥಳವೇ ಸಿಗುವದಿಲ್ಲ.

ದಮ್ಮು, ತೇಕು, ಬೆನ್ನು ನೋವು, ಗಂಟಲ ಉರಿಯುನಂಥ ಕೆಮ್ಮು ಮುಂತಾದ ವಿಕಾರಕ್ಕೆ ಪುರೋಹಿತಶ್ವಾಸಹಾರೀ ಸ್ಪೇನ (ನೀಲೀ ಪ್ಯಾಕಿಂಗ್) ತೆಗೆದುಕೊಳ್ಳಬೇಕು. ಅಜೀರ್ಣ ಮತ್ತು ಆಮ್ಲಪಿತ್ತದಿಂದ ಬಳಲುವ ದಮ್ಮಿನವರು ಶ್ವಾಸಹಾರೀ ಕಂಪೌಂಡ (ಕೆಂಪು ಪ್ಯಾಕಿಂಗ್) ತೆಗೆದುಕೊಳ್ಳಬೇಕು.

೩ ಔನ್ಸ್ ೬ ಔನ್ಸ್ ೧೨ ಔನ್ಸ್ ಬಾಟ್ಲಿಗೆ ಕ್ರಮವಾಗಿ ರೂ.೧.೬-೦; ೩ ೧೨.೦ ಮತ್ತು ೧೨-೦-೦

ಪುರೋಹಿತ ಫಾರ್ಮಸಿ, ಕೊಲ್ಹಾಪುರ

ಸ್ಪಾಕಿಸ್ಟರು ಪೊಪ್ಯುಲರ್ ಸ್ಟೋರ್ಸ್, ಮಂಗಳೂರು; ಟಿ.ಸಿ.ನಟರಾಜನ್ & ಕೊ, ಮೈಸೂರು.

ಮುಂಬಯಿ ಸೋಲ ಏಜಂಟರು:—



ವನಮಾಲೀ ಭಿಕಾಜೀ ಮತ್ತು ಕಂಪನಿ,

ಪ್ರಿನ್ಸೆಸ್ ಸ್ಟೀಟ್, ಮುಂಬಯಿ ೨.

PUROHIT SHWAS-HARI

ದಿ ಆರ್ಯನ್ ಚಾಂಪಿಯನ್
ಇನ್ಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಪ್ರಧಾನ ಕಾರ್ಯಾಲಯ:

7-10, ಎಲ್ಫಿನ್‌ಸ್ಟನ್ ಸರ್ಕಲ್, ಪೋರ್ಟ್, ಬೊಂಬಾಯಿ.

ಈ ಸಂಸ್ಥೆಯಲ್ಲಿ ನಿಮ್ಮ ವಿಮಾ ಇಳಿಸಲು ಆಗ್ರಹಪಡಿರಿ.

ನಿಮ್ಮ ಸರ್ವ ಆವಶ್ಯಕತೆಗಳನ್ನು ಪೂರೈಸಲು ಆಕರ್ಷಕ ವಿಮಾ ಯೋಜನೆಗಳಿರುವ ಅಭಿವೃದ್ಧಿಕರ ಇನ್ಶೂರೆನ್ಸ್ ಕಂಪೆನಿಯಿದು.

ಜೆಯರ್‌ಮೆನ್.

ಶೇಟ್ ಭೋಗಿಲಾಲ್ ಎಚ್. ಪಟೇಲ್

ಕಂಪೆನಿಯ ಸುವ್ಯವಸ್ಥಿತ ಯೋಜನೆಯಲ್ಲಿ ಸಮರ್ಥ ತರುಣರಿಗೆ ಜೀವವಿಮಾ ಉದ್ಯೋಗದಲ್ಲಿ ಸ್ವತಂತ್ರ ಜೀವನವನ್ನು ಸಾಧಿಸಲು ಬೇಕಾಗುವ ಸಂಸಂದರ್ಭಗಳನ್ನು ಒದಗಿಸಿ ಕೊಡುವೆವು. ವಿಶೇಷ ಅನುಭವಗಳಿಗಾಗಿ—

ಕಂಪೆನಿಯ ಪ್ರಧಾನ ಆಫೀಸಿಗೆ ಯಾ ಎ.ಸೀತಾರಾಮ ಶೆಟ್ಟಿ,ಎಸ್ಯ್ಯಾರ್, ಚೀಫ್ ಏಜಂಟ್, ನೈದಾನ್ ರೋಡು, ಮಂಗಳೂರು, ಇವರಿಗೆ ಬರೆಯಿರಿ.

ಧಾತುಪುಷ್ಟಿ ಲೇಹ

ಇದುಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಸ್ಥಾವಸ್ಥೆ ಶರೀರದ ಉಷ್ಣತೆ ಧಾತುಮೂತ್ರದೊಡನೆ ಕೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ,ಇವು ಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಆದಲ್ಲದೆ ನರಗಳ ನ್ಯೂಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು. ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಕಿಶುವಿಗೂ ಬೇಕಾದಷ್ಟು ಹಾಲೂ ಸಿಗುವಂತೆ ನೂಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಕೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು

ಪೌಂಡು 1ರ ರೂ. ೮—8—0; ½ ಪೌಂಡು ರೂ. 3—0—0.

ಮಹಾಮದನಕಾಮೇಶ್ವರೀ ಲೇಹ
(ಬಂಗಾರ, ಪುಸುಗು, ಕಸ್ತೂರಿ ಮಿಶ್ರಿತವಾದದ್ದು)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ನುಲಬಚ್ಚೆತೆ, ಬೆನ್ನುನೋವು, ವಾಯು ಉನಪ್ರೆ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು.

ಒಂತ್ಲೆ 1ರ 10-0-0, ½ ರಾತ್ಲೆ ೨-4-0, ¼ ರಾತ್ಲೆ 2-12-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಎಲ್ಲಾ ನವೀನವೆನೆಯ ಔಷಧಗಳ ದೊರೆಯುತ್ತವೆ. ಕ್ಯಾರೆ ಸಂಗ್ತಿ ಬರದಲ್ಲಿ ರೋಗಕ್ಕೆ ತಕ್ಕಹಾಗೆ ಔಷಧಿ ಕಡಾನಸಲಾಗುವುದು. (1) ಉಡುಪಿ ಎಜಂಟರು:—ನವಭಾರತ ಬುಕ್ ಡಿಪೊ, (2) ಬೊಂಬಾಯಿ ಏಜೆಂಟರು: ಪೊಪ್ಯುಲರ್ ಸ್ಟೋರ್ಸ್, ಲೈಮಿಸ್ಟ್183, ಸುರಾಬಾಜಾರ್ ರೋಡ್, ಪಿ. ಐ. ಪಿ ರೈಲ್ವೆ ವರ್ಕ್ ಶೋಪ್ ಎದುರುಗಡೆ, ಪರೇಲ್. (3) ಜನರಲ್ ಸ್ಟೋರ್ಸ್, ಲೈಮಿಸ್ಟ್, ಪಿ. ಐ. ಪಿ. ಸೋಡಂಗಾ.

ಅಂತರಂಗವು ಮನಸೆಳೆವ—
ಬಹಿರಂಗವು ಕಣ್ಸೆಳೆವ—
ಜನಪ್ರಿಯ ಪತ್ರಿಕೆಯಿಂದ ಆಯ್ದು
ಪ್ರಕಟಿಸಿದ 2 ಕಥಾಸಂಗ್ರಹಗಳು.

೧ ಅಂತರಂಗದ ಕಥೆಗಳು

ಶ್ರೀಗಳಾದ ಪಿ ಕೆಂಕಟರಮಣಾರ್ಯ; ಎಸ್. ವೆಂಕಟರಾಜ, ಎಂ. ವಿ. ಹೆಗ್ಡೆ, ದೇವದಾಸ, ಕೆ. ಹೈದರಾ; ಬಿ. ಎಸ್. ಆರಾಧ್ಯ ಮೊದಲಾದವರ ೧೫ ಉತ್ತಮ ಕತೆಗಳ ಸಂಗ್ರಹ.

ಬೆಲೆ 0-12-0. ಟಿ. ಖರ್ಚು 0-3-0.

೨ ಪ್ರೇಮ-ಪ್ರವಾಹ

ಶ್ರೀಗಳಾದ ಎಂ. ವಿ. ಹೆಗ್ಡೆ, ಎಸ್. ಎಲ್. ಸುಬ್ರಹ್ಮಣ್ಯಂ; ಶ್ರೀಮತಿ ಸರಸ್ವತಿ ಬಾಯಿ ರಾಜವಾಡೆ ಮೊದಲಾದವರು ಬರೆದ ೫ ಕತೆಗಳ—ಪ್ರಣಯ ಪ್ರಲಯದ ಕತೆಗಳ ಸಂಗ್ರಹ

ಬೆಲೆ 0-8-0 ಟಿ ಖರ್ಚು 0-2-0.

ಎರಡೂ ಪುಸ್ತಕಗಳನ್ನು ಒಮ್ಮೆ ತರಿಸಿಕೊಳ್ಳುವವರಿಗೆ ಟಪ್ಪಾಲು ಖರ್ಚು ಮುಷ್ಠತ್ತು.

ಪ್ರತಿಗಳಿಗೆ ಬರೆಯಿರಿ—
(1) ಅಂತರಂಗ ಆಫೀಸು, ಉಡುಪಿ.
(2) ನವಭಾರತ ಬುಕ್ ಡಿಪೊ, ಉಡುಪಿ,
(3) ಯು. ಆರ್. ಶೆಣೈ ಎಂಡ್ ಸನ್ಸ್, ಮಂಗಳೂರು.

ಕುಟುತ್ತಿರುವ ದೊಳಗಿನ ಚಿಲ್ಲರೆ ಬೇನೆ

ಬೆಲೆಯಿಕ್ಕಿಸಲು ಹೋಗಬಾದ್ದಿ ಮಮಷ್ಯಾಗಿ ಇಶ್ಟರ ಮತ್ತು ವೈದ್ಯರ ಕಡೆ ಸ್ರತಿ ಸಾರಿ ಬೋಗುವಷ್ಟು ಕಶ್ಟಸಿರುವುಲ್ಲ — ಮತ್ತು ಅಷ್ಟೊಂದು ಅವಶ್ಯಕತೆಯೂ ಇರುವುಲ್ಲ. ಮಜ್ಜಿಗೂಡಾ ಮಾಡಿ, ಅಜವಾಸ, ಕಾಯಿ, ಮೈಸೂರಾ ಕೆಲ್ಲುಪೊಡಿ ಮಕ್ಕಳ ಕಾಲ ವಿಶಾಲ ಇಷ್ಟಾವಿ ಅಳತೆ ಚಿಕ್ಕರಿ ಪೆಪ್ಪರ್‌ಮೆಂಟ್ ಇದ್ದು, ಜವೇರಿಯನ್ ಜೀವನ ಮಿಕ್ಚ್ರೆರ್ ಬಸ್ಟಿಯಾಯಿತು. ಸಂಗಾಬಾಕ್ಕರೆ ಕಾಲಾ ಮತ್ತು ಕಪಾಂಡಗಳಳ್ಳ ಶಾಶ್ವತವಾ ಹೊಂಬು ಬೀಗಗಳ ಮೇರೆ ಕಾಪಾಡಿಕೆ ಬರಲು ಅಮೋಘಗಾಯಕ್ಕದೆ. ಪ್ರಾಸ್ಪಾಯಾಗಿ ಯಾವಾಗಲೂ ಇರಬೇಕಾದಂಥ ಅಂಶಗಳನ್ನು ಇದರ ಒಂದು ಬಾಟ್ಲಿಯನ್ನು ಸೇವಿಸಿದರೆ ಸಾಕು ಮತ್ತು ಶ್ರಮವಾಗಿ ಕಶ್ಟಪಟ್ಟು ಬಿಟ್ಟಿರುವುದು (ಅಶ್ಟಕ್ಕೆ ಮಂಜಾಗ್ರತೆಯಿಂ ಅಭ್ಯಾಸವಾಗಿದ್ದು ಯಾವುದೇ ಲಕ್ಷಣವಾಗಿ ಕಾಣ್ಪಡ್ಡಲಾಗಿ (ಔಷಧ ನ್ಯಾಶಾಲ್ ಇಲ್ಲದಾಗಿಯೂ ದೀರ್ಘಾವಧಿಯಾಗಿ ದೊರೆಯುತ್ತದೆ.

ಎಮ್ಮೂ.ಜವೇರಿಯನ್ ಮೆಡ್ಡಿಕಂ ಪ್ರುನ್ಸ್ ಲಿಮಿ. ಘುಂಬಾಯಿ ೨.

ಸ್ವೀಕಾರ-ವಿಮರ್ಶೆ

೪೧. ಚಿತ್ತಗಾಂಗ್ ಕ್ರಾಂತಿವೀರರು-ಬರೆದವರು: ಕಲ್ಪನಾದತ್. ಅನುವಾದ: ಲಲಿತಾ. ಪ್ರಕಾಶಕರು: ಜನತಾಸಾಹಿತ್ಯ ಹುಬ್ಬಳ್ಳಿ. ಪುಟಗಳು: ೧೧೦. ಬೆಲೆ ೧ ರೂಪಾಯಿ.

ಭಾರತದ ಸ್ವಾತಂತ್ರ್ಯ ಸಮರದ ಇತಿಹಾಸವನ್ನು ಬರೆಸಾಗ, ಭಗತ್ ಸಿಂಗ್ ಮತ್ತು ಅವರ ಸಹೋದ್ಯೋಗಿಗಳಷ್ಟೇ ಮಹತ್ತಾದ ಸಾಹಸ ಕಾರ್ಯಗಳನ್ನು ಮಾಡಿ ಕ್ರಾಂತಿ ಜ್ಯೋತಿಯನ್ನು ಹೊಡಿ ತಮ್ಮ ದೇಹವನ್ನರ್ಪಿಸಿಯೂ ಕಾರಾಗೃಹಗಳಲ್ಲಿ ನರಳಿಯೂ ಸೇವೆ ಸಲ್ಲಿಸಿದ ಚಿತ್ತಗಾಂಗ್ ಕ್ರಾಂತಿಕಾರರನ್ನು ಮರೆಯಲು ಸಾಧ್ಯವಿಲ್ಲ. ಚಿತ್ತಗಾಂಗ್ ಶಸ್ತ್ರಾಗಾರದ ಮೇಲೆ ನಡದ ಇತಿಹಾಸ ಪ್ರಸಿದ್ಧವಾದ ಧಾಳಿಯ ನಾಯಕ ಸೂರಜಸೇನ್ ಮತ್ತು ಅವರ ಸಂಗಾತಿಗಳಾದ ಅನಂತಸಿಂಗ್, ಗಣೇಶ ಘೋಷ್, ಸಾವಿತ್ರಿ ದೇವಿ ಮುಂತಾದವರ ವ್ಯಕ್ತಿ ಪರಿಚಯವನ್ನೊಳಗೊಂಡ ಈ ಗ್ರಂಥವನ್ನು ಶ್ರೀ ಲಲಿತಾ ಅವರು ಕನ್ನಡಕ್ಕೆ ಅನುವಾದಿಸಿ,-ಇನ್ನೂ ಕತ್ತಲಲ್ಲೇ ಆಡಗಿರುವ ಈ ಕ್ರಾಂತಿಕಾರ ರತ್ನಗಳನ್ನು ಕನ್ನಡ ನಾಡಿನಲ್ಲಿ ಬೆಳಕಿಗೆ ತಂದಿದ್ದಾರೆ. "ಚಲ್ಪನಾ ದತ್ತರ" ಮೂಲ ಬಂಗಾಳಿಕೃತಿ, ಮತ್ತು ಅದರ ಇಂಗ್ಲಿಷ್ ಪ್ರತಿಗಳ ಮೇಲೆ ಸರಕಾರದ ನಿಷೇಧಾಜ್ಞೆಯಿದೆಯೆನ್ನುವಾಗ, ಡಾಗೂ ಆಸನ್ನು ಲೇಖಕಿ ಕಲ್ಪನಾ ದತ್ತರೇ ತನ್ನ ಸ್ವಂತ ಅನುಭವದಿಂದ ಬರೆದಿದ್ದಾರೆನ್ನುವಾಗ, ಪುಸ್ತಕದ ಮಹತ್ವವನ್ನು ಬೇರ ಹೇಳಬೇಕೆಂದಿಲ್ಲ. ಇದರಲ್ಲಿ, ಸಾಮಾನ್ಯ ಒಂದು ಕಾದಂಬರಿಯ ವಾಕ್ಚಿತ್ರದ ತರಿಯಾಗಿ ಬೇಕಾಗುವಷ್ಟು ರೋಮಾಂಚಕಾರಿ ಘಟನೆಗಳು ವರ್ಜಿತವಾಗಿವೆ ಅನುವಾದವು ಸುಲಭವಾಗಿದೆ.

೪೨. Vegetable & its cultivation-ಲೇಖಕರು. ಶ್ರೀ. ಸಿ. ವಿ. ರಾವ್. ಪ್ರಕಾಶಕರು. ಆತ್ರೇಯಿ ಜನರಲ್ ಏಜನ್ಸಿ. ೪೪, ಸರಸ್ವತಿ ಬಿಲ್ಡಿಂಗ್ಸ್, ಶ್ರೀ ನರಸಿಂಹ ರಾಜರಸ್ತೆ; ಬೆಂಗಳೂರು ನಗರ. ಪುಟಗಳು: ೧೦೮, ಬೆಲೆ. ರೂ ೧-೪-೦

ಅಂದವಾಗಿ ಮುದ್ರಿತವಾದ ಈ ಪುಸ್ತಕದಲ್ಲಿ, ತರಕಾರಿಗಳು ಮತ್ತು ಅವುಗಳನ್ನು ಬೆಳೆಯುವ ಬಗೆಯು ವರ್ಣಿತವಾಗಿದೆ.ಮೊದಲನೆಯ ಭಾಗದಲ್ಲಿ, ಪರದೇಶೀಯ ಹಾಗೂ ಹಿಂದೀ ನಾನಾಲಗೆಯ ತರಕಾರಿಗಳ ವೃವಸಾಯ ಕ್ರಮ, ಬಿತ್ತನೆಯ ಕಾಲ, ಅವುಗಳಿಗೆ ತಗಲುವ ಹುಳುಗಳು ಮತ್ತು ನಿವಾರಣೆ-ಇವು ಕೊಡಲ್ಪಟ್ಟಿವೆ. ಎರಡನೆಯ ಭಾಗದಲ್ಲಿ, ತರ ತರವ ಗೊಬ್ಬರಗಳು ಮತ್ತು ಅವುಗಳ ಉಪಯೋಗ ನಿಧಾನಗಳಿವೆ. ಮೂರನೆಯ ವಿಭಾಗದಲ್ಲಿ, ಗಿಡಗಳ ರತ್ರುಗಳಾದ ಕ್ರಿಮಿಕೀಟಗಳು ಮತ್ತು ಅವುಗಳನ್ನು ನಾಶಮಾಡುವ ರೀತಿಗಳನ್ನು ಸಂಕ್ಷೇಪವಾಗಿ ಬರೆದಿದ್ದಾರೆ. ಮನೆ ಮನೆಗಳಲ್ಲಿ ಆಹಾರ ಬೆಳೆಯಿಸಬೇಕಾದ ಪರಿಸ್ಥಿತಿಯೊದಗಿರುವ ಈ ಕಾಲಕ್ಕೆ ಇಂತಹ ಕೈಪಿಡಿಯು ಕಾಲೋಚಿತವೂ, ಉಪಯುಕ್ತವೂ ಆಗಿದೆ ಪುಸ್ತಕವು ಕನ್ನಡದಲ್ಲಿದೆಯೆಂಬುದೂ, ನುಬಿಪತ್ರದಲ್ಲಿ ಹೆಸರು ಇಂಗ್ಲೀಷಿನಲ್ಲೇ ಇರುವುದು ಉಚಿತವಲ್ಲ.

೪೩ ಆಕಾಶಗಂಗೆ-ಬರೆದವರು. ಶ್ರೀ ಯಸ್. ವೆಂಕಟರಾಜರು. ಪ್ರಕಾಶಕರು: ಕರಿಯರ ಪ್ರಪಂಚ, ಉಡುಪಿ ಪುಟಗಳು. ೧೬೦ ಬೆಲೆ ೧ ರೂ. ೧೨ ಆಣೆಗಳು,

ಈ ಪುಸ್ತಕದಲ್ಲಿ, ಈಗಾಗಲೇ ಉತ್ತಮ ಕವಿಗಳೆಂದು ಪ್ರಸಿದ್ಧರಾಗಿರುವ ತರುಣಸಾಹಿತಿ ಶ್ರೀ. ವೆಂಕಟರಾಜರ ಇಪ್ಪತ್ತು ಕತೆಗಳು ಸಂಗ್ರಹವಾಗಿವೆ. ಶ್ರೀಯುತರ ಕತೆಗಳಲ್ಲಿ ವಸ್ತುನಿರೀತಲೂ ರಾವಗಳಿಗೆ ಪ್ರಾಧಾನ್ಯತೆ ಹೆಚ್ಚು, ಶೈಲಿಯಲ್ಲಿ, ಅಲ್ಲಲ್ಲಿ, ಕವಿತಾಛಾಯೆ ಕಂಡುಬರುವುದೆ. ಸಂಗ್ರಹದೊಳಗಿನ "ಸೂಳೆಯ ಸಂಪತ್ತು" "ಜೀವನದ ಸಂಗೀತ" "ಬಿಳಿಯನೋಟ" "ಮನೋಗತ" ಮೊದಲಾದ ಕೆಲವು ಕತೆಗಳು ನಿಜವಾಗಿಯೂ ಉತ್ತಮ ಕಲಾಕೃತಿಗಳಾಗಿವೆ. ಹಲವು ಕವಿಗಳಲ್ಲಿ, ಸಮಾಜಪರೀತಿ ನೀತಿಗಳ ಸೂಕ್ಷ್ಮವಾದ ವಿಮರ್ಶೆ, ದೀನ ದಲಿತರ ಒಗ್ಗೆ ಕೊರಗು, ಹನ್ನೆನ ಮುಖ್ಯತಃ ನಿರುಪಾಯವಾಗಿ ಬೇರ್ಯಾಜೀವನವನ್ನನುಲಂಬಿಸಿದವರ ಹೃದಯದ ಮರ್ಮಿಕ ಚಿತ್ರಣಗಳು ತೋರಿಬರುತ್ತವೆ ಯಾವರೆ, ಉಳಿದವುಗಳಲ್ಲಿ ನೂತನ ದಂಪತಿಗಳ ಪ್ರಣಯದ ಹುಚ್ಚಾಟಗಳು ಸರಲವಾಗಿ ಸ್ವಾಭಾವಿಕವಾಗಿ ನರ್ಜಿತವಾಗಿವೆ ಒಟ್ಟಿನಲ್ಲಿ ಸಂಗ್ರಹವು ಪಾಚನೀಯವಾಗಿದೆ.

ಕರ್ನಾಟಕ ಸೇವಾ ಸಂಘ-ಮದ್ರಾಸು- ಇದರ ಮೊದಲನೆಯ ವರದಿ, ೧೯೪೪ರ ಫೆಬ್ರವರಿಯಲ್ಲಿ ಆರಂಭವಾದ ಈ ಸಂಘವು, ಇಪ್ಪತ್ತರಲ್ಲೇ ಭಾಷಣ, ಸಂಗೀತಗೋಷ್ಠಿ, ಪುಸ್ತಕಭಂಡಾರ, ಭಜನೆ, ಕೈ ಬರೆಹದ ಪತ್ರಿಕೆ, ಭಾಷಣ ಸ್ಪರ್ಧೆಗಳೇ ಮುಂತಾದ ಹಲವು ಬಗೆಯ ಚಟುವಟಿಕೆಗಳನ್ನು ಜರಗಿಸಿ, ಮುಪ್ಪಾನಿನ ಕನ್ನಡಿಗರ ಸಾಂಸ್ಕೃತಿಕ, ಸಾಮಾಜಿಕ ಹಾಗೂ ಸಾಹಿತ್ಯಿಕ ಅಭಿವೃದ್ಧಿಯನ್ನೂ ಸಾಧಿಸುವ ತನ್ನ ಗುರಿಯತ್ತ ಮುಂದೆ ಸಾಗುತ್ತಿರುವದು ಸಂತೋಷಕರ ಇನ್ನೂ ತೀರ ಶಿಶುವಾಗಿರುವ ಈ ಸಂಘಕ್ಕೆ ರುಚಿಪ್ರವನ್ನು ಕೋರುತ್ತೇವೆ.

ಕೆ. ವಿ ಯಸ್.

ದಕ್ಷಿಣ ಕನ್ನಡ

ವರ್ಕಾಡಿ-ತಾ 23 9-46ರಲ್ಲಿ ವರ್ಕಾಡಿ ತರಿನ ಗ್ರಾಮ ಕವಿಟಯ ಸಭೆಯು ಕಾಪ್ರಿ ಎಲಿಮೆಂಟರಿ ಶಾಲೆಯಲ್ಲಿ, ಶ್ರೀ. ಪಿ. ನಾರಾಯಣ ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿ ಸದ್ರಿ ತರಿನ ಗ್ರಾಮಗಳ ಆಡಾರ ಸಮಸ್ಯೆ, ಮತ್ತು ಸದ್ಯದಲ್ಲೇ ಏರ್ಪಡಲಿರುವ ಸ್ಥಳೀಯ ಸಪಕಾರಿ ಸ್ಟೋರಿಗೆ ಕವಿಟಯು ಕೊಡಬೇಕ್ಕ ಬೆಂಬಲ ಇತ್ಯಾದಿ ಮುಖ್ಯ ವಿಷಯಗಳು ಚರ್ಚಿಸಲ್ಪಟ್ಟವು.

ಕಟಪಾಡಿ-ಬಹ್ಮ ಶ್ರೀ ನಾರಾಯಣ ಗುರು ಸ್ವಾಮಿ ಸೇವಾಸಮಿತಿಯು ಸ್ಥಾಪಿಸಿ ಕ ವಿದ್ಯಾಭ್ಯಾಸ ಮಾಡುತ್ತಿರುವ ಬಿಲ್ಲವ ಜಾತಿಯ ಮಕ್ಕಳಲ್ಲಿ ಆಗತ್ಯವುಳ್ಳವರಿಗೆ, ಬೇಕಾಗುವ ಸಹಾಯವನ್ನು ಕೊಡಲು ನರ್ಧರಿಸಿ, ಚಾಲ್ತಿ ನರ್ಷದಲ್ಲಿಯೂ ಪಣ ಮಂಜೂರು ಮಾಡಿರುತ್ತದೆ. ಪ್ರಾಥಮಿಕ ವಿದ್ಯಾಭ್ಯಾಸ ಮಾಡುತ್ತಿರುವ ಯೋಗ್ಯ ಮಕ್ಕಳು ಆಯಾ ಶಾಲಾ ಮುಖ್ಯೋಪಾಧ್ಯಾಯರ ಶಿಫಾರಸು ಪತ್ರದೊಂದಿಗೆ ತಮ್ಮ ಅರ್ಜಿಗಳನ್ನು ತಾ 31 12 1946 ಒಳಗೆ ಕಳುಹಿಸಿದರೆ ಅರ್ಜಿ ಪುರೀಲಿಸಲ್ಪಟ್ಟು, ಯೋಗ್ಯತೆಗನುಸಾರವಾಗಿ ಸಹಾಯ ಕೊಡಲಾಗುವದು ಎಂದು ಗೌ ಕಾರ್ಯದರ್ಶಿ ಶ್ರೀ ರಂಗರು ತಿಳಿಸುತ್ತಾರೆ.

ಸೋಮೇಶ್ವರ—ತಾ 21 9-46ರಲ್ಲಿ ಸೋಮೇಶ್ವರ ಪೇಟೆ ಯೋ ಎ ಶಾಲಾ ಮಕ್ಕಳ ಹತ್ತರ ಕೂಟವು ಪ್ರೌ ಟಿ. ಬೂ ಜರಬಿ ಹೆಗ್ಗನೆಯವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿತು. ವಿವಿಧ ವಿನೋದಾವಳಿಗಳನ್ನು ತೋರಿಸಿದ ಮಕ್ಕಳಿಗೆ ರಕ್ಷಕರಿಂದ ಅಲ್ಲಜೆ ಕೋನಪುರು ಸುಬ್ಬಯ್ಯನವರಿಂದ ಇನಾಮುಗಳು ಪಂಚಲಾಯ್ತು. ಧನ್ಯವಾದ ಸಮರ್ಪಣೆಯೊದ ನಂತರ ವಂದೇ ಮಾತರಂ ಗೀತೆಯೊಂದಿಗೆ ಸಭೆ ಮುಕ್ತಾಯವಾಯಿತು

ಕುರುಕಾಲು—ಶ್ರೀ ಕುರುಕಾಲು ಗಣಪಯ್ಯ ನಟ್ರ ಮನೆಯಲ್ಲಿ ಕೆಲಸಕ್ಕೆ ನಿಂತು ತಾ. 7-6-46ರಲ್ಲು ಕಳವುಮಾಡಿ ಪರಾರಿಯಾದವನನ್ನು ಪತ್ತೆ ಹಚ್ಚಿಕೊಟ್ಟವರಿಗೆ ರೂಪ್ಯಾ 15-0 0ನ್ನು ಬಹುಮಾನವಾಗಿ ಕೊಡುವುದಾಗಿ ಶ್ರೀ ನಟ್ರು ಪತ್ರಿಕೆಯಲ್ಲಿ ಜಾಹೀರುಮಾಡಿದ ಪ್ರಕಾರ ರೂಪ್ಯಾ 15-0 0 ನ್ನೂ ಪತ್ತೆಹಚ್ಚುವ ಒಳ್ಳೆ ತಗಲಿದ ಖಿರ್ಚು ರೂಪ್ಯಾ 12-0 0ನ್ನೂ ಬದಗುವಿಚಾರು ಗ್ರಾಮದ ಶ್ರೀ ಪಿ. ತ್ಯಾಂಪಣ್ಣ ಶೆಟ್ಟಿಗೆ ಕಳುಹಿಸಿದ್ದಾರೆಂತಲೂ, ಸದ್ರಿ ಕಳ್ಳನಿಗೆ ೬ತಿಂಗಳು ಶಿಕ್ಷೆಯಾಯಿತೆಂತಲೂ ತಿಳಿದುಬರುತ್ತದೆ.

ಬೈಲೂರು—ಮಹಾತ್ಮರ ಜನ್ಮದಿನಾಚರಣೆಯು ತಾ. 25ರಲ್ಲು ಶ್ರೀ ಜಾರ್ಕಳ ಸಾಣ್ಣಜ್ಜೆಗ್ಗೆಯವರ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ ಆಚರಿಸಲಾಯಿತು. ಶ್ರೀಗಳಾದ ಬಿ. ಕೇಶವತಿಣಿ, ಆನಂತಪ್ಪ ಕಿಣಿ, ಆರ್. ಜಿ. ಕಿಣಿ, ಆರ್ ಡಿ. ಶೆಣೈ, ರಾಮು ಪೂದುವಾಳರೇ ಮೊದಲಾದವರು ಭಾಷಣಮಾಡಿದರು.

ಕುಂದಾಪುರ—ಗಾಂಧಿ ಜಯಂತ್ಯುತ್ಸವವು ತಾ. 22ರಲ್ಲು ಕುಂದಾಪುರ ಸರ್ಕಲ್ ಕಾಂಗ್ರೆಸ್ ಕಮಿಟಿಯ ನೇತೃತ್ವದಲ್ಲಿ ಸಾರ್ವಜನಿಕ ಮೆರವಣಿಗೆ ಸಭೆಗಳಿಂದ ಆಚರಿಸಲಾಯಿತು. ಶ್ರೀ ಎಚ್, ಕೆ. ನಕ್ಕತ್ತಾಯರು ಅಂದಿನ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಶ್ರೀಗಳಾದ ಬಿ. ಸುಬ್ಬಣ್ಣ ಶೆಟ್ಟಿ, ಕೆ. ಆರ್. ಭಂಡಾರಕರ್ ಮೊದಲಾದವರು ಮಹಾತ್ಮಾಜೀಯವರ ಜೀವನಚರಿತ್ರೆಯ ಅಪರ್ಣ ವಿಷಯಗಳನ್ನೆತ್ತಿ ಭಾಷಣಿಸಿದರು. ಶ್ರೀ ಎ. ಎಸ್. ವಿಟ್ಟಲಶೆಟ್ಟರು ಧನ್ಯವಾದಗಳನ್ನರ್ಪಿಸಿದರು.

ನಮಗೆ ಬಂದ ಪತ್ರಗಳ ಸಾರಾಂಶ

ಪೊಳಲಿಯ ವಿನಂತಿಗಳು—ಎಂಬ ಶಿರೋನಾಮೆಯ ಪತ್ರದಲ್ಲಿ ಗುರುಪುರದಿಂದ ಪೊಳಲಿಗಾಗಿ ಬಂಟ್ವಾಳಕ್ಕೆ ಬಂದು ರಾಜರಸ್ತೆಯ ಸಂಪೂರ್ಣತೆ, ಸಾರ್ವರ್ ಎಲಿಮೆಂಟರಿ ಶಾಲೆ ಮತ್ತು ಖಾಸ್ಯಾಯ ಶಿಕ್ಷಣದ ವ್ಯವಸ್ಥೆ, ಪೋಸ್ಟಾಫೀಸಿನ ವಿಸ್ತಾರದು ಪೊಳಲಿ ಹೊಳೆಗೆ ಅಮುಂಡಾಜೆಯ ಬಳಿ ಕಟ್ಟಿಹಾಕಿಸಿ ತನ್ಮೂಲಕ ದಪಸಧಾನ್ಯಗಳನ್ನು ಜಾಸ್ತಿಯಾಗಿ ಬೆಳೆಸುವರೆ ಅನುಕೂಲತೆ, ಗ್ರಾಮ ಕೇಂದ್ರವಲ್ಲಿ ಸೀದಾ ಆಂಗಡಿಯ ವಿಚಾರದು, ಸಕ್ಕರೆ, ಗಿರಣಿ ಬಟ್ಟೆಯ ವಿತರಣೆ ಇತ್ಯಾದಿ ವಿಷಯಗಳು ಸೂಚಿಸಲಾಗಿವೆ

ನಮಗೂ ಜಿಲ್ಲಾ ಯೂನಿಯನ್ ಬೇಡವೇ—ಎಂದೀ ವಿಷಯದಲ್ಲಿ ಕಾಸರಗೋದು ತಾಲೂಕು ಬೋರ್ಡ್ ಎಲಿಮೆಂಟರಿ ಶಾಲಾ ಟೀಚರ್ಸ್ ಯೂನಿಯನ್ನಿನ ಕಾರ್ಯದರ್ಶಿಯವರು ಒಂದು ಪತ್ರ ಬರೆಯುತ್ತ, ಜಿಲ್ಲೆಯ ಬೋರ್ಡ್, ಮುನಿಸಿಪಲ್, ಖಾಸಗೀ ಶಾಲಾ ಮಾಸ್ತರುಗಳು ಸಂಸಂಘಟಿತರಾಗಿ ತಾಲೂಕು ಹಾಗೂ ಜಿಲ್ಲಾ ಯೂನಿಯನ್ನುಗಳನ್ನು ಬೇಗನೆ ಸ್ಥಾಪಿಸಿ ತನ್ಮೂಲಕ ಅಧ್ಯಾಪಕ ವೃತ್ತಿಯ ತಪ್ಪು ಪರಿಪಠಿಗಳನ್ನು ಪುನಸ್ತಿ ಪಡಿಸುವ, ಎಲ್ಲ ಅಧ್ಯಾಪಕರೂ ಮನಸ್ಸುಮಾಡಬೇಕಾಗಿ ಆಗ್ರಹಪೂರ್ವಕ ವಿನಂತಿಸುವರು.

ಲಾಭ ಬಡಕ ಕಾಫಿ ಹೋಟೆಲುಗಳು—ಎಂಬ ತಲೆ ಬರಹದ ಲೇಖನವೊಂದನ್ನು ಶ್ರೀ. ಎಸ್ ಎಸ್. ಬೇಳೂರ ಅವರು ಬರೆದಿರುತ್ತಾರೆ. ಗೋಧಿ, ಗೋಧಿಹಿಟ್ಟು ಇತ್ಯಾದಿ ತಿಂಡಿ ಸಾಮಾನುಗಳು ಕಡಿಮೆ ಬೆಲೆಯಲ್ಲಿ ಸಿಕ್ಕುವಾಗ ತಿಂಡಿ ಬೆಲೆಯೂ ಅದೇ ಪ್ರಮಾಣದಲ್ಲಿ ಕಡಮೆಯಾಗಬೇಕೆಂಬುದೇ ಲೇಖನದ ಸಾರಾಂಶ.

ದೇಶಕಾಲಕ್ಕೊಪ್ಪುವ ನವೀನ ಪುಸ್ತಕ

ಸ್ವಾತಂತ್ರ್ಯವೀರ ಸಾವರಕರರು

ಹಿಂದೂ ಸಂಸ್ಕೃತಿ ಮತ್ತು ಹಿಂದೂರಾಷ್ಟ್ರಕ್ಕಾಗಿ ಸರ್ವತ್ಯಾಗ ಮಾಡಿದ ವೀರ ಸಾವರಕರರ ಉಜ್ವಲಜೀವನ ಚರಿತ್ರೆ

ಮೈಜುಮ್ಮೆನ್ನಿಸುವ ಹಲವು ಸನ್ನಿವೇಶಗಳು!

ವಿಚಾರ ಕ್ರಾಂತಿಯೆನ್ನುಂಟುಮಾಡುವ ಘಟನೆಗಳು!

ಪ್ರಸಿದ್ಧ ಹಿಂದೀ ಲೇಖಕ ಪಂಡಿತ ಚಂದ್ರಗುಪ್ತ ವೇದಾಲಂಕಾರ ಇವರ ಹಿಂದೀ ಗ್ರಂಥದ ಕನ್ನಡ ಅನುವಾದ.

ಕನ್ನಡಸಿದವರು-ಶ್ರೀಮತಿ ಇಂದಿರಾಬಾಯಿ,
ಮೈಸೂರು, ಸಂಸ್ಥಾನ.

ಬೆಲೆ ಬರೇ ರೂ. 1—4—0

ರೂ. 1—8—0 ಕಳಿಸಿದರೆ 1 ಪ್ರತಿಯನ್ನು ರಿಜಿಸ್ಟರ್ ಮಾಡಿ ಕಳಿಸಲಾಗುವುದು.

ಪ್ರತಿಗಳು ಸಿಗುವ ಸ್ಥಳಗಳು:—

1. ಸ್ಕೂಲ್ ಬುಕ್ ಕಂಪೆನಿ, ಮಂಗಳೂರು. 2. ಸತ್ಯಶೋಧನ ಪುಸ್ತಕ ಭಂಡಾರ, ಬೆಂಗಳೂರು. 3. ನವಭಾರತ ಪುಸ್ತಕ ಭಂಡಾರ, ಉಡುಪಿ. 4. ಪಾವಂಜೆ ಗುರುರಾವ್, ಉಡುಪಿ. 5. ನವಯುಗ ಆಫೀಸು, ಉಡುಪಿ.

ನೋಟೀಸು.

ಕುಂದಾಪುರ ಡಿ ಮು. ಕೋರ್ಟಿನಲ್ಲಿ

O S. 94/1946

ವೆಂಕಟಕೃಷ್ಣ ಮೈಯ..ಅರ್ಜಿದಾರ.

ಈ ಮೂಲಕ ಯಾವತ್ತೂ ಜನರಿಗೆ ತಿಳಿಯಪಡಿಸುವುದೇನಂದ್ರೆ-

ಅರ್ಜಿದಾರನ ಅಜ್ಜ ಮೈಸ ಬೆಳ್ಳಯ್ಯಗೆ ಶ್ರೀಂಗೇರಿ ಶಾರದಾ ಕೋಪರೇಟಿವ್ ಸೊಸ್ಯಾಟಿಯಿಂದ ಬರಕೇಕಾದ ರೂ. 250-0-0ರ ವ್ಯಲಿಗೆ ತನಗೆ ವಾರೀಸ ಸರ್ಟಿಫಿಕೇಟು ಕೊಡಿಸಬೇಕೆಂತ ಅರ್ಜಿದಾರನು ಪಾಕ್ಟು ಮಾಡಿದ ಮೇಲಿನ ಅರ್ಜಿಯನ್ನು ತಾ. 7-10--46 ಕ್ಕೆ ಈ ಕೋರ್ಟು ಮುಂದೆ ತನಿಖೆಗೆ ಇಡುವಹಾಗಿಯಿದೆ. ಅಕ್ಷೇಪಯಿರುವವರು ಸದರೀ ದಿನ ಹಗ್ಗಲ 11 ಗಂಟೆಗೆ ಈ ಕೋರ್ಟು ಮುಂದೆ ಹಾಜರಿರುವಹಾಗಿಕೊಳ್ಳಬಹುದು.

(Sd). **K. Ramappaiya,**
Advocate for Petitioner.

Kundapur, 26-9-1946.

ಮದರಾಸು ಸ್ಕೂಲ್ ಬುಕ್ ಮತ್ತು ಲಿಟರೇಚರ್ ಸೊಸೈಟಿಯವರಿಂದ ಬಯಮಾನಿತವಾದ ಉಪಯುಕ್ತ ಗ್ರಂಥ

ಪ್ರಸವ ವಿಜ್ಞಾನ

ಬರೆದವರು
ಡಾ|| ನೊಡ್ಡೇರಿ ವೆಂಕಟಗಿರಿರಾವ್.
ಸುಮಾರು ಮೂನತ್ತು ಚಿತ್ರಗಳಿವೆ.
ಖಿ. ಪಿ ಕಳಿಸುವುದಿಲ್ಲ. ರೂ. ೩-೪-೦ನ್ನು ಮನಿಯಾರ್ಡರ್ ಮಾಡಿದರೆ ರಿಜಿಸ್ಟರ್ ಮೂಲಕ ಕಳಿಸಲಾಗುವುದು. ಪುಸ್ತಕ ವ್ಯಾಪಾರಿಗಳಿಗೆ ರಿಯಾಯತಿಯುಂಟು ಮಾರಾಟಗಾರರೆ.

ಮಾಡರ್ನ್ ಔಷಧಾಲಯ
ದೊಡ್ಡ ಬಳ್ಳಾಪುರ (ಬೆಂಗಳೂರು)

[೨ನೇ ಪುಟದಿಂದ]

"ಹೆಕ್, ಪ್ರೇತಗಳು, ಕಾಫರರು; ಯಾರು ನೀವು?"—ಭಯಕೆರ್ರಿಂಧ ಮಿಶ್ರವೇ ಶದಿಂದ ಜಿನ್ನರು ಗರ್ಜಿಸಿದರು.

"ಹೆ ಹ್ಹೆ ಹ್ಹೆ ಹ್ಹೆ ಹ್ಹೆ!"— ಲೀಗ್ ನಾಯಕನ ರಕ್ತ ಮಂಜುಗಡ್ಡೆಯಾಗುವಂತೆ ಸಾಮೂಹಿಕ ನಗೆಯೆದ್ದಿತು.

'ಯಾರು ನೀವು? ಏನು ಬೇಕು?'—ಸ್ವತಃ ಪ್ರೇತದಂತಾಗಿದ್ದ ಜಿನ್ನರು ಕೈ ಸಂಜ್ಞೆಯಿಂದಲೇ ಪ್ರಶ್ನಿಸಿದರು.

"ನಾವು ಕಲ್ಕತ್ತದ ಕತ್ತಿ, ಕೈದು, ಖಡ್ಗ, ಕೊಡಲಿ, ಕಲ್ಲು, ಬೆಂಕಿಗೆ ಬಲಿಯಾದವರು. ನಮ್ಮ ಆತ್ಮಕ್ಕೆ ಶಾಂತಿಬೇಕು; ಶಾಂತಿಬೇಕು; ಶಾಂತಿಬೇಕು!"

"ನಿ....ನಿ.....ನಿ....ಮಗೆ ಶಾಂತಿಬೇಕೆ? ನೀವು ಯಾರು, ಹಿಂದುಗಳೋ ಮುಸಲ್ಮಾನರೋ?"

"ಹ್ಹೆ ಹ್ಹೆ ಹ್ಹೆ ಹ್ಹೆ ಹ್ಹೆ!" ಎಲ್ಲರೂ ಒಟ್ಟಿಗೆ ಎಬ್ಬಿಸಿದ ನಗೆಯು ಜಿನ್ನರ ರೋಮವುದುರುವಂತಿತ್ತು. "ನಮ್ಮನ್ನು ಹಿಂದುಗಳೋ ಮುಸಲ್ಮಾನರೋ ಎಂದು ಕೇಳುವಿಯಾ? ಮಂಕಾ! ನಾವು ಆತ್ಮಗಳು! ಆತ್ಮಕ್ಕೂ ಭೇದವುಂಟೇ? ನರಸಿಂಹಾಜಿ.....!"

ಮಿ. ಜಿನ್ನರಲ್ಲಿಯೇ ಶಬ್ದಿಲಾದರು. ಶಾಂತವಾಗಿ ಕೈಯೆತ್ತಿ ಹೇಳಿದರು: 'ಸಾವಧಾನ. ನಾನಿದ್ದೇನೆ. ಸದ್ಯದಲ್ಲೇ ಪಾಕಿಸ್ತಾನ ಸಂಪಾದಿಸಿ, ನಿಮ್ಮ ಬಲಿದಾನ ಸಾರ್ಥಕವಾಗುವಂತೆ ಮಾಡುತ್ತೇನೆ;ಆ ಮೂಲಕ ನಿಮ್ಮ ಆತ್ಮಗಳಿಗೆ-ಹಿಂದೂ ಮುಸ್ಲಿಂ ಎಂಬ ಭೇದವಿಲ್ಲದೆ ಎಲ್ಲಾ ಆತ್ಮಗಳಿಗೂ-ಚಿರಶಾಂತಿಯೊದಗಿಸಿಕೊಡುತ್ತೇನೆ"

"ಹ್ಹೆ ಹ್ಹೆ ಹ್ಹೆ ಹ್ಹೆ ಹ್ಹೆ!" ಪುನಃ ಅದೇ ನಗು. "ಪಾಕೆಸ್ತಾನವೆಂದೆಯಾ? ಏನದು? ನಮ್ಮ ಲೋಕದಲ್ಲಿರುವದು ಪಾಪಿಸ್ಥಾನ ಮತ್ತು ಪುಣ್ಯಸ್ಥಾನ ಎರಡೇ— ನಿನ್ನ ಮಾತುಕೇಳಿ ಬಡಿದಾಡಿಕೊಂಡು ಸತ್ತುದಕ್ಕಾಗಿ ನಮ್ಮನ್ನೆಲ್ಲರನ್ನೂ ಪಾಪಿಸ್ಥಾನದಲ್ಲಿ ಕೂಡಹಾಕಿದ್ದಾರೆ. ಬೇಗ ಪ್ರಾಯಶ್ಚಿತ್ತ ಮಾಡು; ಪುಣ್ಯಸ್ಥಾನಕ್ಕೆ ನಮ್ಮನ್ನು ಸೇರಿಸು. ಹಾಂ. ಹೋ! ಹೋ ಹೋ!! ಪಾಪಿಜಾನ್ ಮುರ್ದಾಬಾದ್!"

ಜಿನ್ನರ ದೇಹವಿಡೀ ಕಂಪಿಸ ಹತ್ತಿತು; ಮೈಯೆಲ್ಲಾ ಬೆವರಿ ನಾಲಿಗೆ ಮಾತ್ರ ಒಣಗಿತು. ಗಂಟಲಿನೊಳಗಿಂದಲೇ: "ಏ...ಏ ಏ...ಏನು ಮಾಡಬೇಕು ನಾನು?"

"ನೀನು ನಮಗೆ ಪಾಪಿ ಸ್ಥಾನ ದೊರಕಿಸಿ ಕೊಟ್ಟೆ; ಪಾಪಿಜಾನ್ ಮುರ್ದಾಬಾದ್! ಎಳೆಂಟು ಸಾವಿರ ಅತ್ಮಗಳಿಲ್ಲದ್ದೇವೆ. ಇನ್ನಾದರೂ ಆ ಪಾಕಿಸ್ತಾನ ಬಿಟ್ಟು ನಮ್ಮನ್ನೂ ಈ ಪಾಪಿಸ್ತಾನದಿಂದ ಬಿಡಿಸು. ಅಲ್ಲಿ ಪುಣ್ಯ ಭೂಮಿಯೊಂದೇ ಉಳಿದರೆ ಇಲ್ಲಿ ಪುಣ್ಯಸ್ಥಾನ ಮಾತ್ರವುಳಿಯುವದು. ಅಲ್ಲಿಯ ಪಾಕಿಸ್ತಾನದಿಂದ ಇಲ್ಲಿ ಪಾಪಿ ಸ್ತಾನವಾಗಿದೆ. ಹೇ! ಅಹಹಹ ಹೆಹಹೆ ಹೇ ಹೇ ಹೂ! ನಮಗೆ ಶಾಂತಿ ಬೇಕು; ಶಾಂತಿ ಬೇಕು, ಶಾಂತಿ! ಅನ್ನು, ಪಾಕಿಸ್ತಾನವೇ ಬೇಡ ಅನ್ನು! ಪಾಪಿಜಾನ್ ಮುರ್ದಾ.....".

"ಅಯ್ಯಯ್ಯೋ!" ಎಂದು ಕೂಗುತ್ತಾ ಜಿನ್ನರು ಕಣ್ಣು ತೆರೆದರು. ಬೊಬ್ಬೆ ಕೇಳಿ ಓಡಿ ಬಂದ ಲೀಗ್ ಅನುಯಾಯಿಗಳೇ ಆ ಕೋಣೆಯಲ್ಲಿ ತುಂಬಿದ್ದುದನ್ನು ಕಂಡು ಪುನಃ ಮೊದಲ ಸ್ಥಿತಿಗೇ ಬಂದರು.

ಆದರೊಂದು ವ್ಯತ್ಯಾಸ ಕಂಡು ಬರುತ್ತಿದೆ. ಗಾಂಧೀಜಿಯ 'ಅಸಹಕಾರ' 'ಕಾಯಿದೇ ಭಂಗ' 'ಪ್ರತ್ಯಕ್ಷ ಹೋರಾಟ'ಗಳನ್ನು ಅಣಕಿಸುತ್ತಿರುವಂತೆಯೇ ತಾ. 23 ರಿಂದ ಮಿ. ಜಿನ್ನರಿಗೆ 'ಅಂತರ್ವಾಣಿ'ಯೂ ಕೇಳಿಸುತ್ತಿದೆಯಂತೆ! ಮುಂದಿನ ಜಿನ್ನಾ--ವೇವೆಲ್ ಸಂಧಾಪಣೆ ಫಲಕಾರಿಯಾದರೆ ಕಲ್ಕತ್ತಾ ಆತ್ಮಗಳ ಹೆಸರಲ್ಲಿ ವಿಜಯ ಗೋರಿಯೊಂದನ್ನು ನಡುಗಾಲ ಸರಕಾರ ಕಟ್ಟಿಸಲಿದೆಯಂತೆ.



ಕ್ಷಣಿಕ ಗುಣಕೊಡುವ ಔಷಧದ ಬೆನ್ನು ಹತ್ತಿ ಮರುಳಾಗಬೇಡಪ್ಪಾ

ಪುರೋಹಿತ ಶ್ವಾಸಹಾರೀ ಔಷಧ ಮಾತ್ರ ಬೇರೆ ಅದು ದಮ್ಮನ್ನು ಬರೇ ದುಮುಕಿ, ಇಡದೆ ಅದ[illegible] ವುದು. ಈ ಔಷಧ ಸುರುವು ನೂಡಿದಾಗಲೇ ಕೆಮ್ಮೂ ತೇಕೂ ನಿಲ್ಲುವವು; ಹೊಟ್ಟೆ ಹಸಾಗುವದು; ಪಚನಶಕ್ತಿಯೆಯು ಶಿದ್ದವು; ಪುಷ್ಟುಗಳು ಗಟ್ಟಿಯಾಗುವುವು. ಆ ಮೇಲೆ ದಮ್ಮಿರಲಿಕ್ಕೆ ಸ್ಥಳವೇ ಸಿಗುವದಿಲ್ಲ.

ದಮ್ಮು, ತೇಕು, ಬೆನ್ನು ನೋವು, ಗಂಟಲ ಉರಿಯುವಂಥ ಕೆಮ್ಮು ಮುಂತಾದ ವಿಕಾರಕ್ಕೆ ಪುರೋಹಿತಶ್ವಾಸಹಾರೀ ಫ್ಲೇನ (ನೀಲೀ ಪ್ಯಾಕಿಂಗ್) ತೆಗೆದುಕೊಳ್ಳಬೇಕು. ಅಜೀರ್ಣ ಹುತ್ತು ಅಮ್ಲಪಿತ್ತದಿಂದ ಬಳಲುವ ದಮ್ಮಿಸವರು ಶ್ವಾಸಹಾರೀ ಕಂಪೌಂಡ (ಕೆಂಪು ಪ್ಯಾಕಿಂಗ್) ತೆಗೆದುಕೊಳ್ಳಬೇಕು.

೩ ಔನ್ಸ್ ೫ ಔನ್ಸ್‌ಗಿ ಔನ್ಸ್ ಬಾಟ್ಲಿಗೆ ಕ್ರಮವಾಗಿ ರೂ.೧-೪-೦; ೨-೧೨-೦ ಮತ್ತು ೧೦-೦-೦

ಪುರೋಹಿತ ಫಾರ್ಮಸಿ, ಕೊಲ್ಹಾಪುರ

ಸ್ವಾಕೆಸ್ವರು. ಪೊಪ್ಯುಲರ್ ಸ್ಟೋರ್ಸ್, ಮಂಗಳೂರು;ಟಿ.ಸಿ.ನಟರಾಜನ್ & ಕೊ.ಮೈಸೂರು.

ಮುಂಬಯಿ ಸೋಲ ವಿಜಾಟರು:-

ವನಮಾಲೀ ಭಿಕಾಜಿ ಮತ್ತು ಕಂಪನಿ,

ಪ್ರಿನ್ಸೆಸ್ ಸ್ಟ್ರೀಟ್, ಮುಂಬಯಿ ೨.



ದಿ ಆರ್ಯನ್ ಚಾಂಪಿಯನ್
ಇನ್ಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಪ್ರಧಾನ ಕಾರ್ಯಾಲಯ.

7-10, ಎಲ್ಫಿನ್‌ಸ್ಟನ್ ಸರ್ಕಲ್, ಪೋರ್ಟು, ಬೊಂಬಾಯಿ.

ಈ ಸಂಸ್ಥೆಯಲ್ಲಿ ನಿಮ್ಮ ವಿಮಾ ಇಳಿಸಲು ಆಗ್ರಹಪಡಿರಿ.

ನಿಮ್ಮ ಸರ್ವತ್ರ ಆವಶ್ಯಕತೆಗಳನ್ನು ಪೂರೈಸಲು ಆಕರ್ಷಕ ವಿಮಾ ಯೋಜನೆಗಳಿರುವ ಅಭಿವೃದ್ಧಿಕರ ಇನ್ಶೂರೆನ್ಸ್ ಕಂಪೆನಿಯಿದು.

ಜೆಯರ್‌ಮೆನ್:

ರೇಟ್ ಭೋಗಿಲಾಲ್ ಎಚ್. ಪಟೇಲ್

ಕಂಪೆನಿಯ ಸುವ್ಯವಸ್ಥಿತ ಯೋಜನೆಯಲ್ಲಿ ಸಮರ್ಥ ತರುಣರಿಗೆ ಜೀವನಪೂರಾ ಉದ್ಯೋಗ ದಲ್ಲಿ ಸ್ವತಂತ್ರ ಜೀವನವನ್ನು ಸಾಧಿಸಲು ಬೇಕಾಗುವ ಸುಸಂದರ್ಭಗಳನ್ನು ಒದಗಿಸಿ ಕೊಡುವೆವು. ವಿಶೇಷ ಅನುಭವಗಳಿಗಾಗಿ--

ಕಂಪೆನಿಯ ಪ್ರಧಾನ ಆಫೀಸಿಗೆ ಯಾ ಎ.ಸೀತಾರಾಮು ಶೆಟ್ಟಿ,ಎಸ್ಕ್ಯಾರ್, ಚೀಫ್ ಏಜಂಟ್, ಮೈದಾನ್ ರೋಡು, ಮಂಗಳೂರು, ಇವರಿಗೆ ಬರೆಯಿರಿ.

ಧಾತುಪುಷ್ಟಿ ಲೇಹ

ಇದುಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ ಧಾತುಮೂಶ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ,ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ಬೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಆತ್ಯಂತ ರಕ್ತವರ್ಧಕ ರಸಾಯನ, ಕೆಮ್ಮು, ಏಕ, ಉಬ್ಬಸ, ಕ್ಷಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಸಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಮಹಾಮದನಕಾಮೇಶ್ವರೀ ಲೇಹ

(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು.)

ನರಗಳ ಮತ್ತು ಜನನೇಂದ್ರಿಯನ ಶಕ್ತಿಹೀನತೆ, ಎದೆನೋವು, ನುಲಬದ್ಧತೆ, ಬೆನ್ನುನೋವು, ನಾಯು ಉವಶ್ರಮ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು.

ಬಾತ್ಲು 1ರ 10-0-0, ½ ಬಾತ್ಲು 5-4-0, ¼ ಬಾತ್ಲು 2-12-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ: ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯೆನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ. ಕ್ಯಾಲಿಕಟ್‌ನಲ್ಲಿ ಶರೀರಕ್ಕೆ ಕೋಗಳಿಕ್ಕೆ ತಕ್ಕಂಥಾದ ಔಷಧಿ ದವಾನಖಾನೆಯಿದೆ.

(1) ಉತ್ತರದ ವಿಜಾಗರು:—ನವಭಾರತ ಬುಕ್ ಡಿಪೊ, (2) ಬೊಂಬಾಯಿ ವಿಜೆಂಟರು: ಪೊಪ್ಯುಲರ್ ಸ್ಟೋರ್ಸ್, ಕೆಮಿಸ್ಟ್183, ಸುಪಾರಿಬಾಗ್ ರೋಡ್, ಹ. ಇ. ಪಿ ರೈಲ್ವೆ ವರ್ಕ್ ಶೆಡ್ ಎದುರುಗಡೆ, ಪರೇಲ್. (3) ಜನರಲ್ ಸ್ಟೋರ್ಸ್, ಕೆಮಿಸ್ಟ್ಸ್ ಹ. ಇ. ಪಿ. ಸಾಲುಂಗಾ.

CHAMPAE'S
Snow & Lastrex

(Sole Distributers for Inaia.)

Prop: K. G. NAYAK,
Santhekatte, UDIPI, S K.

ಅಂತರಂಗವು ಮನಸೆಳೆವ.—
ಬಹಿರಂಗವು ಕಣ್ಸೆಳೆವ—
ಅಂತರಂಗ ಪತ್ರಿಕೆಯಿಂದ ಆಯ್ದು ಪ್ರಕಟಿಸಿದ 2 ಕಥಾಸಂಗ್ರಹಗಳು.

೧ ಅಂತರಂಗದ ಕಥೆಗಳು

ಶ್ರೀಗೋವಾದ ಪಿ. ವೆಂಕಟರಮಣಾರ್ಯ; ಎಸ್. ವೆಂಕಟರಾಜ, ಎಂ. ವಿ. ಹೆಗ್ಡೆ, ದೇವದಾಸ; ಕೆ. ಹೈದರ್; ಬಿ. ಎಸ್. ಆರಾಧ್ಯ ಮೊದಲಾದವರ ೧೩ ಉತ್ತಮ ಕತೆಗಳ ಸಂಗ್ರಹ.

ಬೆಲೆ 0-12-0. ಟಿ. ಖರ್ಚು 0-2-0.

೨ ಪ್ರೇಮ-ಪ್ರವಾಹ

ಶ್ರೀಗೋವಾದ ಎಂ. ವಿ. ಹೆಗ್ಡೆ; ಎಸ್.ಎಲ್. ಸುಬ್ರಹ್ಮಣ್ಯಂ; ಶ್ರೀಮತಿ ಸರಸ್ವತಿ ಬಾಯಿ ರಾಜವಾಡೆ ಮೊದಲಾದವರು ಬರೆದ ೫ ಕತೆಗಳು- ಪ್ರಣಯ ವ್ಯಥಲಯದ ಕತೆಗಳ ಸಂಗ್ರಹ.

ಬೆಲೆ 0-8-0 ಟಿ ಖರ್ಚು 0-2-0.

ಎರಡೂ ಪುಸ್ತಕಗಳನ್ನು ಒಮ್ಮೆ ತರಿಸಿಕೊಳ್ಳುವವರಿಗೆ ಟಪ್ಪಾಲು ಖರ್ಚು ಮುಫತ್ತು.

ಪ್ರತಿಗಳಿಗೆ ಬರೆಯಿರಿ—
(1) ಅಂತರಂಗ ಆಫೀಸು, ಉಡುಪಿ.
(2) ನವಭಾರತ ಬುಕ್ ಡಿಪೊ, ಉಡುಪಿ,
(3) ಯು. ಆರ್. ಶೆಣೈ ಎಂಡ್ ಸನ್ಸ್, ಮಂಗಳೂರು.



ಕುಟುಂಬದ ಒಳಗಿನ ಚಿಲ್ಲರೆ ಬೇನೆ

ಬೇಸಿಗೆಗಳನ್ನು ಹೋಗಲಾಡಿಸುವದಕ್ಕಾಗಿ ಡಾಕ್ಟರ ಮಿಲ್ಸ್ ವೈದ್ಯರ ಈಗೆ ಪ್ರತಿ ಮನೆ ಮನೆಗಳಲ್ಲಿ ಯೂ ಅಗತ್ಯವಿರುವದಿಲ್ಲ —ಮತ್ತು ಅವಶ್ಯಕತೆಯೂ ಇರುವದಿಲ್ಲ. ಹುಳಿತೇಗು, ಎದೆಉರಿ, ಅಜೀರ್ಣ, ಹುಳಿ, ಮೈನೋವು, ತಲ್ಲುಪೋಗು ಸುಸ್ತಿಗೆ ಕಾರಣವಾದ ಇನ್ನಿತರ ಚಿಲ್ಲರೆ ಬೇನೆಗಳಿಗೆಲ್ಲ ಜಪಾನೀಸ್ ಪೆಪ್ಪರ್‌ಮಿಂಟ್ ಜಪೇರಿಯನ್ ಚೀವನ ಮಿಕ್ಶ್ಚರ್ ಒಳ್ಳೆಯದಾಗಿ ನಾಲ್ಕಾರು ಸಲ ಕಾಲು ಮತ್ತು ಅರ್ಧಾಂಶಗಳಷ್ಟು ಭಾಗವಾಗಿರುವ ಮೂಲಂಗಿ ಬೀಜಗಳ ಮೇಲೆ ಕಾಯಿಪಡಿಸಿ ಇದರ ಉಪಯೋಗಾಯುಕ್ತವಾದ ಶಕ್ತಿಯನ್ನಾಗಿ ಮಾಡಲಾಗಿದೆ. ಇದರ ಉಪಯೋಗಾಯುಕ್ತವಾದ ಇದರ ಒಂದು ಬಾಟ್ಲಿಯನ್ನು ಮನೆಯಲ್ಲಿಯೂ ಪ್ರತಿಯೊಬ್ಬರೂ ಪ್ರಯಾಣದಲ್ಲಿ ತಪ್ಪದೆ ತೆಗೆದುಕೊಳ್ಳಬೇಕು (ಕಾಲ್ಕಸ್ಟ್ ಮಂಗಳಾದೇವಿ ಕಾಲಾಪಾಣಿ) ರೂಪಾಯಿಕ್ಕೂ ಅಧಿಕವಾಗಿ ಕೊಳ್ಳಬೇಕಾಗಿಲ್ಲ (ವಿವರ ಪತ್ರಿಕಾ ಸಂಚಿಯಲ್ಲಿ) ಕಲ್ಕತ್ತಾದಲ್ಲಿ ಅಂಗಾಂಗವಲ್ಲದೆಯೂ ದೊರೆಯುತ್ತದೆ.

ಎಮ್.ಎಸ್.ಪಿ.ವೇರಿಯನ್ ಮತ್ತು ಕಂ. ಪುಸ್ತಕ ಕೇಂದ್ರ, ಮುಂಬಾಯಿ ೨

FOR LIFE ASSURANCE
CONSULT
The New Gaurdian of India Life Insrce. Co., Ltd,
(Chairman - The Hon'ble Mr. M. C. M. Chidambaram Chettyar.)
A policy in this progressive Life Office is a good investment; its Agency is a valuable business connection.

LOCAL OFFICES IN SOUTH KANARA
MANGALORE
&
KARKALA.

HEAD OFFICE
"United India Life Bldg"
Esplanade, Post Box No. 142,
MADRAS.

ಗೆನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಮೋತರಕ್ಕೆ ಹಳದೀ ಹಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಆರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಹೊಸಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೀಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ಡಾವಣಗೇರಿ:ಡಾವಣಗೇರಿ ಮೆಡಿಕಲ್ ಸ್ಟೋರ್ಸ್. ಪತ್ರವ್ಯವಹಾರ ಮಾಡಬೇಕಲ್ಲ ಮಾಲಿಕರ ವಿಳಾಸ.

ರೇವಣಸಿದ್ದಪ್ಪ ಹಾಲಪ್ಪ ಡಾವಣಗೇರಿ,
ಆಯುರ್ವೇದ ಔಷಧಾಲಯ, ಗದಗ.
Ayurveda Oushadalaya GADAG

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ಸಿಕ್ಕೈಸಿ ತಯಾರಿಸಲ್ಪಟ್ಟ ಅಮೋಘ ವಾವೆ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಜಿಸ್ಟರು ಮಾಡಲ್ಪಟ್ಟಿದೆ.)



೪ ದಿವಸ ತಪ್ಪಾಟ್ಟಿಗಳು ಹೆಚ್ಚು ಕಡಿಮೆ ಆಗದಿರಬೇಕಾಗಿ ಬರುವದು. ಅಂದರೆ ಕೇವಲ ೪ ರೂಪಾಯಿಗಳು ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ.ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.೨ ಕೊಡಿಯಾಲಬೈಲು, ದ.ಕ.

ಸ್ಥಾನಿಕರು- ಡಾ| ಐ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಸ್ವರ್ಗಸ್ಥ ಡಾಕ್ಟರ್ ಎಂ. ಮಾಧವಾಚಾರ್ಯರಿಂದ ರಚಿಸಲ್ಪಟ್ಟ ಎರಡು ಅತ್ಯುತ್ತಮ ನಾಟಕಗಳು.

ಸರಸ್ವತಿ ಬೆಲೆ **0-12-0**

ಅಲ್ಪ ಎಕ್ಷಣದಿಂದಮಂಟಾಗುವ ಅನರ್ಥ ಪರಂಪರೆಗಳನ್ನು ಪ್ರತ್ಯಕ್ಷವಾಗಿ ಹೃದಯದ್ರಾವಕವಾದ ರೀತಿಯಲ್ಲಿ ಕಾಣಿಸುವ ನಾಮಾಜಿಕ ನಾಟಕ.

ಮೀರಾಬಾಯಿ ಬೆಲೆ **0-10-0**

ಶ್ರೀಕೃಷ್ಣ ಪರಮಾತ್ಮನ ಆರಾಧನೆಗೆ ಸಂಸಾರಿಗಳಾಗಿರುವವರಿಗೂ ಅವಕಾಶವಿದೆ. ಕಪಟ, ವಿಶ್ವಾಸಘಾತಕತನ, ಅವಿಚಾರ, ವ್ಯಮೂಢ ಇವುಗಳಿಂದುಂಟಾದ ಮಾನಾವನ್ನು ದೂರೀಕರಿಸಲು ಭಗವದ್ಭಕ್ತಿಯೊಂದೇ ಉತ್ತಮ ಸಾಧನವೆಂಬುದನ್ನು ಸಾರುವ ಭಕ್ತಿಪ್ರಾಧಾನ್ಯ ನಾಟಕ.

ಎರಡೂ ಪ್ರತಿ ಬೇಕಾದವರು ರೂ. 1-8-0 ಕಳಿಸಬೇಕು

ನವಭಾರತ ಪುಸ್ತಕ ಭಂಡಾರ, ಉಡುಪಿ — ಕಿರಿಯರ ಪ್ರಪಂಚ, ಉಡುಪಿ

'ಇಂಗ್ಲಿಷ್ ಬರುವುದಿಲ್ಲವಲ್ಲಾ' ಎಂದು ಚಿಂತಿಸುವಿರೇಕೆ?
ಸುಲಭದಲ್ಲಿ ಇಂಗ್ಲಿಷ್ ಕಲಿಯಲು ಅನುಕೂಲವಾದ ಪುಸ್ತಕ ಇಲ್ಲಿದೆ–

ಶ್ರೀ. ಕೊರಡ್ಕಲರ ಇಂಗ್ಲಿಷ್ ಸ್ವಯಂಬೋಧಿನಿ

ENGLISH MADE EASY

ಈ ಪುಸ್ತಕದಿಂದ ನೂರಾರು ಜನರು ತಾವಾಗಿ ಸುಲಭದಲ್ಲಿ ಇಂಗ್ಲಿಷ್ ಕಲಿತುಕೊಂಡಿದ್ದಾರೆ.
ನೀನೇಕೆ ಕಾಲಹರಣ ಮಾಡಬೇಕು? ಇಂದೇ ಒಂದು ಪ್ರತಿಯನ್ನು ಕೊಂಡುಕೊಳ್ಳಿರಿ.

ಬೆಲೆ ಬರೇ ರೂ. 1-8-0 ಟಪ್ಪಾಲು ಖರ್ಚು 0-4-0 ಪ್ರತ್ಯೇಕ

ಪ್ರತಿಗಳಿಗೆ ಬರೆಯಿರಿ—

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

Printed & Published by K. U. Shenoy at the Navayuga Press, Udipi, S. India.

Regd. No. M. 3618. Estd. 1921 ಸ್ಥಾಪನೆ. ಬೆಲೆ: 0—1—6.

ನವಯುಗ

ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 4—8—0
6 ತಿಂಗಳಿಗೆ ರೂ. 2—8—0
6 ತಿಂಗಳಿಗಿಂತ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ.
ಮೂದರಿ ಸಂಚಿಕೆಗೆ ಬರೆಯಿರಿ.
ಮೆನೇಜರ್,
ನವಯುಗ, ಉಡುಪಿ, ದ. ಕ.



ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ.

ವರ್ಷ ೨೬ ವಾರ ೬ | FOUNDER: SRI. A. B. SHETTY, M. L. A. | Vol. 26 No. 6
ಉಡುಪಿ • 10—10—1946 • ಮಂಗಳೂರು.

ಅಮೃತಾಂಜನ.
ತಲೆನೋವನ್ನು, ತಿರುಗು, ವೇದನೆ, ಉಲುಕು ಕೂತ್ತಿಗೆ, ಘುಡು, ಹಲ್ಲು ವೇದನೆಗೂ ಎದನೋವು, ಘಾಯಗಳು ಬಾಸು ಕೊಳ್ಳುವುದು, ಚೇಳು ವಿಷ ಮುಂಜಾದ ಬೇನೆ ಕಷ್ಟವನ್ನು ಮೊದಲು. ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧ.
REGD.
ಸದ್ಯ ಹುಳುಕಿಲ್ಲ ಮತ್ತು ಸಹ ನಮ್ಮಲ್ಲಿ ಸಿಕ್ಕುತ್ತದೆ.
ಅಮೃತಾಂಜನ ಲಿಮಿಟೆಡ್.
ಮುಂಬಯಿ ಮತ್ತು ಕಲ್ಕತ್ತ.

The best preventive in epidemics of CHOLERA
"BHUVANENDRA"
CHANDRAMAS
Also a sovereign remedy for diarrhoea, Stomachache, Vomiting and Nausea.
BHUVANENDRA PRODUCTS LTD., Katapadi.

'ಭುವನೇಂದ್ರ'
ಚಂದ್ರಮಸ್ ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೂ ಇರಿಸಿಕ್ಕ ಅತ್ಯುತ್ತಮ ಔಷಧಿ.
ದೊಡ್ಡವರಿಗೆ 40ರಿಂದ 8 ಬೊಟ್ಟು, ಸಣ್ಣ ಮಕ್ಕಳಿಗೆ 10ರಿಂದ 2 ಬೊಟ್ಟು, ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂದಂತೆ ಕೊಡುಪುದು.
ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.
ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ
ಉಡುಪಿ ಸ್ಟಾಕಿಸ್ಟರು:—ಡಾ। ವಾಯಕ್ಕೆಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಶ್ರೀ। ಆರ್। ಎಸ್। ಶೆಣೈ, ರಥಬೀದಿ; ಡಾ। ಪಿ. ಜಿ. ಹೆಬ್ಬಾರ್ ಫಾರ್ಮಸಿ; ಡಾ। ಕೆ. ಶೇಷ ಗಿರಿ ಪೈ, L. I. M.; ಡಾ। ಪೆಂಕಟರಾವ್, ಕೊರ್ಡ್ಲ್; ನವಭಾರತ ಬುಕ್ ಡಿಪೊ

THE
Bombay Life Assurance Company Ltd.
(ESTD·1908)
A PREMIER INSURANCE COMPANY.
New Business in 1945 - - 2,77,23,100.
KOCHIKAR BROTHERS, LTD.
(ESTD. 1910)
Chief Agents for South India including
T[illegible]com Cochin and Mysore State.
New Business in 1945 in our area:— **Over 5 Millions.**
OUR Expert advice gained by 35 years Experience is at your door FREE
Drop a card to any of our Offices at —
MADRAS * BANGALORE * MADURA * CALICUT
TRIVENDRUM * UDIPI * AND BOMBAY

—ಮಕ್ಕಳನ್ನು ಹಡೆಯುವುದು ಸಾಕು—
ಒಕ್ಕ ಸ್ತ್ರೀಯರಿಗೆ **ಬರ್ಥ್ ಕಂಟ್ರೋಲ್** ತೋಗಗೃಹಸ್ಥ ಹೆಣ್ಣುಮಕ್ಕಳಿಗೆ
ಏಳು ವಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಕೆರಗು, ಪ್ರದರರೋಗ, ಹೊಲಿಕುಟ್ಸು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ಗಿಗುಳಿಗೆ ಮಧ್ಯಾಹ್ನಕ್ಕೆ ಗಿಗುಳಿಗೆ, ಸಂಜೆಗೆ ಗಿಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.
ಕಿಮ್ಮತ್ತು:—ಹರವೀಪಲ್ಲೆ ಬಿಡಿಬಿಡಿಸಿ ಒಂದಕ್ಕೆ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ಗಿಜಿಣಿ.
ಮಾಲಕರು:—ಹಾಲಪ್ಪ ಫಕೀರಪ್ಪಾ ಡಾವಣಗೇರಿ
ಆಯುರ್ವೇದ ಔಷಧಾಲಯ, ಗದಗ-ಸಿಟಿ.
ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಫಾರವಾಡ, ವಿಜಾಪೂರ—ಮಾನಪ್ಪ ಕಿದ್ದಿಂಗೆಪ್ಪ ಧಾರವಾಡಕರ, ವಿಜಾಪೂರ, ಚಿಕ್ಕೋಡಿಯಲ್ಲಿ:—ಹುಂಬರವಾಡಿ ಸ್ಟೋರ್ಸ್. ಡಾವಣಗೇರಿ:—ಡಾವಣಗೇರಿ ಪೈಸ್. ಆರ್. ಎಲ್. ಕರ್ತಲದಾನಿ, ಕಮಿಸ್ಯ, ಹಾನೇರಿ, ಬ್ಯಾಡ್ಗಿ
Ayurveda Oushadalaya, GADAG CITY.

Life is full of Opportunities.

Life is full of events and opportunities created by God for man and by man for himself and his fellowmen Normal life presupposes a prosperous family, a happy home, good education, congenial vocation, good relations, friends, a cultured society and also a few ups and downs to spice them all with Have you made sure that your family too can reasonably aspire to lead such a life even in your absence?

The Canara Mutual Assurance Co., Ltd.,
HEAD OFFICE: **UDIPI.** (S. India.)
Chief Agents for the Bombay and Madras Presidencies including States and the States of Mysore and Hyderabad.
The Commercial Corporation of India, Ltd.,
UDIPI. (S. India.)

ಉಡುಪಿ ಬೋರ್ಡಿಂಗ್ ಎಂಡ್ ಲೋಜಿಂಗ್ ಮಧುರಾ.

ತಾ 8—8—1945ರಲ್ಲಿ ಜರಗಿದ ಆರನೆ ಹುಟ್ಟುಹಬ್ಬದ ಸಮಾರಂಭದ ಸಂತೋಷ ಕಾಲದಲ್ಲಿ ನಮಗೆ ಸಕಲ ವಿಧದಿಂದಲೂ ಬೆಂಬಲವಿತ್ತು ಪ್ರೋತ್ಸಾಹಿಸಿದ ಮಹನೀಯರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇವೆ. ಇದಕ್ಕಿಂತಲೂ ದ್ವಿಗುಣಿತವಾಗಿ ನಮ್ಮ ಸೇವೆಯನ್ನು ಹೊಸ ವರುಷದಲ್ಲಿ ಸಲ್ಲಿಸಲು ಮಹಾಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನೀಯುವರೆಂದು ನಿರೀಕ್ಷೆ.

ಎಲ್. ನರಸಿಂಗ ರಾವ್,
ಪ್ರೊಪ್ರೈಟರ್.

For prompt and efficient Banking Service
Bank with
THE VIJAYA BANK LIMITED.
Head Office:—**MANGALORE.**
Branches: **Byndoor, Coondapoor, Brahmavar, Udipi, Kaup, Karkal, City-Mangalore, Kasaragod, Kanhangad, Puttur, Mercara & Bombay.**

ಮಹಾತ್ಮ ಗಾಂಧಿ

ಸಕ್ತಪದಿಯ ಪ್ರತಿಜ್ಞೆಯಲ್ಲಂತೂ ಸಂತಾನೋತ್ಪತ್ತಿಯು ಭಾವನೆಗೆ ಸ್ಥಾನವಿರಬೇಕು. ಯಾವುದನ್ನು ವಿರೋಧಿಸದೆ ಇದ್ದರೂ, ಅದು ನಡೆದೇ ನಡೆಯುವುದು. ಅಂತಹುದರ ಪ್ರತಿಜ್ಞೆಯನ್ನು ಮಾಡಬೇಕೇಕೆ? ಸಂತಾನೋತ್ಪತ್ತಿಯು ಕರ್ತವ್ಯವೆಂದು ಒಪ್ಪದೇ ಇದ್ದರೂ ಅದು ನಡೆಯುತ್ತಲೇ ಇದೆ. ಆದುದರಿಂದ ಅದರ ವಿಷಯದಲ್ಲಿ ಪ್ರತಿಜ್ಞೆ ನಡೆಯಬೇಕಾದರೆ ಈ ರೀತಿ ನಡೆಯಬೇಕು; ನಾವು ರತಿ ಸುಖಕ್ಕಾಗಿ ಅಲ್ಲದೆ ಸಂತಾನ ಪೋಷಣೆಗಾಗಿ, ನಮ್ಮ ಯೋಗ್ಯತೆಯಲ್ಲಿ ವಿಶ್ವಾಸವಿಟ್ಟುಕೊಂಡೇ ಸಂತಾನೋತ್ಪತ್ತಿಗಾಗಿ ಆ ಸುಖವನ್ನು ಭೋಗಿಸೋಣ. ಇದಕ್ಕೂ ಸಂತಾನೋತ್ಪತ್ತಿಯ ಪ್ರತಿಜ್ಞೆಗೂ ಭೂಮ್ಯಾಕಾಶದಷ್ಟು ಅಂತರವಿರುವುದು. ಇಲ್ಲಿ ಎಲ್ಲರಿಗೂ ತಿಳಿಯುತ್ತದೆ. ಸಂತಾನೋತ್ಪತ್ತಿಯ ಕಾರಣದಿಂದ ಇಂದು ಹಿಂದೂ ಜಗತ್ತಿನಲ್ಲಿ ಮಕ್ಕಳ ಆಸೆಯಿಂದ ಹಗಲೂ ರಾತ್ರಿ ನಡೆಯುತ್ತಿರುವ ಅನಿಷ್ಟಗಳು ಯಾರಿಗೆ ತಿಳಿದಿಲ್ಲ? ಫ್ರಾನ್ಸಿನಲ್ಲಿ ಈಗ ಇದೇ ರೀತಿ ಇದೆ. ಅಲ್ಲಿನ ಜನರು ಲಂಗುಲಗಾಮಿಲ್ಲದವರಾಗಿ ವಿಷಯೋಪಭೋಗಕ್ಕಾಗಿ ಸಂತಾನೋತ್ಪತ್ತಿಯ ಮೇಲೆ ಕೃತ್ರಿಮ ಅಂಕುಶವನ್ನು ಹಾಕಿದ್ದಾರೆ. ಆದರ ಪರಿಣಾಮವಾಗಿ ಅಲ್ಲಿ ಜನನಕ್ಕಿಂತ ಮರಣ ಸಂಖ್ಯೆಯೇ ಹೆಚ್ಚಾಗಿದೆ. ಇದು ಆಸಿವಾರ್ಯವಾದ ಪರಿಣಾಮ. ಆದುದರಿಂದ ಒಂದು ಕಾಲದಲ್ಲಿ ಅಧರ್ಮವೆಂದು ಪರಿಗಣಿಸಲ್ಪಟ್ಟಿದ್ದುದು ಈಗ ಆ ದೇ ಧರ್ಮವಾಗಿ ಹೋಗಿದೆ. "ನೀವು ಸಾಕಷ್ಟು ವಿಷಯೋಪಭೋಗಮಾಡಿದಿರಿ. ಈಗ ನೀವು ಸಾವಕಾಶವಾಗಿ ಹೋಗಿ. ನೀವು ಪಶುವಿಗಿಂತಲೂ ನೀಚರಾಗಿ ಹೋಗಿರುವಿರಿ. ಉಳಿದಿರುವವರೂ ಕೂಡ ಹಾಳಾಗಿ ಹೋಗದೆ ಇದು ವಾಸ್ತವಿಕ ಧರ್ಮವಾಗಬೇಕಾಗಿತ್ತು. ಇಂತಹ ವಿನಾಶದಲ್ಲಿ ಜಗತ್ತಿನ ಹಿತವಿದೆ. ಏಕೆಂದರೆ ಇದರಲ್ಲಿ ಕರ್ಮದ ಫಲವು ದೊರೆಯುತ್ತದೆ. ಭಗವದ್ಗೀತೆಯು ಇದನ್ನೇ ಹೇಳುತ್ತದೆ. ನಾವು ಈಗ ವಿವಾಹದ ಆನೇಕ ಇತರ ಉಪಭೋಗಗಳನ್ನೂ ಅನುಭವಿಸುತ್ತಿದೇವೆ. ಅವುಗಳನ್ನೇ ನಾವು ಏಕೆ ನಮ್ಮ ಗುರಿಯನ್ನಾಗಿ ಮಾಡಿಕೊಂಡು, ಸಂತಾನೋತ್ಪತ್ತಿಯನ್ನು ಆದರ ಸ್ಥಾನದಲ್ಲಿ ಇಟ್ಟಿರುವೆವು? ಸಂತಾನೋತ್ಪತ್ತಿಯು ಭಾವನೆಯಲ್ಲಿ ಮಾತ್ರ ಇರಬೇಕಾಗಿದೆ. ಅದು ಕರ್ತವ್ಯವಾಗಿ ಹೋಗಿದೆ. ಅದು ಕರ್ತವ್ಯವಾಗಿ ಹೋಗಿರುವುದರಿಂದಲೇ ಅದರ ಪ್ರತಿಜ್ಞೆಯು ಅಗತ್ಯವಾ

ನೂರೆಂಬರ್ಗ್ ತೀರ್ಪು—ನಾಜೀ ನಾಯಕರ ಅವತಾರ ಸಮಾಪ್ತಿ!

೧೨ ಮಂದಿಗೆ ಫಾಶಿ—ಮೂವರಿಗೆ ಜೀವಾವಧಿ ಸಜೆ—ನಾಲ್ವರಿಗೆ ಕಠಿಣ ಸಜೆ—೩ ಮಂದಿಯ ಬಿಡುಗಡೆ.

ಇಪ್ಪತ್ತು ಮಂದಿ ನಾಜೀ ಪ್ರಮುಖರ ವಿಚಾರಣೆಗಾಗಿ ನೇಮಿಸಲ್ಪಟ್ಟಿದ್ದ ಇಂಗ್ಲಾಂಡು, ಅಮೇರಿಕ, ರಶ್ಯಾ, ಫ್ರಾನ್ಸ್, ಚೀನಾ ಮೊದಲಾದ ಪ್ರಮುಖ ರಾಷ್ಟ್ರಗಳ ನ್ಯಾಯಾಧೀಶರನ್ನೊಳಗೊಂಡ ಆಂತರ್ರಾಷ್ಟ್ರೀಯ ನ್ಯಾಯಾಧೀಶ ಮಂಡಲಿಯು 1945ನೇ ನವಂಬರಿನಲ್ಲಿ ನೂರೆಂಬರ್ಗ್ ನಲ್ಲಾರಂಭಿಸಿದ್ದ ವಿಚಾರಣೆಯನ್ನು ಒಕ್ಟೋಬರ್ ತಾ 1ರಲ್ಲಿ ತೀರ್ಪನ್ನೀಯುವ ಮೂಲಕ ಮುಗಿಸಿದೆ. ಗೋರಿಂಗ್, ರಿಬ್ಬಂಟ್ರಾಪ್, ಕೀಟೆಲ್ ಮೊದಲಾದ 12 ಮಂದಿ ಅಗ್ರಗಣ್ಯ ನಾಜೀ ಪ್ರಮುಖರಿಗೆ ಫಾಶೀ ಶಿಕ್ಷೆ ವಿಧಿಸಲ್ಪಟ್ಟಿದೆ. ಇತರರು ಕಠಿಣ ಶಿಕ್ಷೆಗೊಳಗಾಗಿದ್ದಾರೆ. ಈ ತೀರ್ಮಾನವು ಇಡೀ ಪ್ರಪಂಚದ ಹೃದಯವನ್ನೊಮ್ಮೆ ಇರಿದೆಬ್ಬಿಸಿದೆ.

ಗೋರಿಂಗ್, ರಿಬ್ಬಂಟ್ರೋಪ್, ಕೀಟೆಲ್, ಕಾಲ್ಟೆನ್‌ಬ್ರನ್ನರ್, ರೋಸೆನ್‌ಬರ್ಗ್, ಫ್ರೇಂಕ್, ಫ್ರಿಕ್, ಸ್ಟ್ರೈಚರ್, ಸಾಮ್ಮೆಲ್, ಜೋಡ್ಲ್, ಸೈಸ್ ಇಂಕ್ವಾರ್ಟ್, ಬೋರ್ಮಾನ್—ಇಷ್ಟು ಮಂದಿಗೆ ಮರಣ ದಂಡನೆ; (ಈ ಪೈಕಿ ಬೋರ್ಮಾನ್ ಕಾಣೆಯಾಗಿದ್ದು ಸತ್ತಿಂಬೇಕೆಂಬ ಊಹೆಯಿದೆ) ಅದೂ ನೇತಾಡಿಸಿ ಕೊಲ್ಲುವ ಶಿಕ್ಷೆ. ಹೆಸ್, ಫಂಕ್, ರೈಡರ್,-ಇವರಿಗೆ ಜೀವಾವಧಿ ಸಜೆ ಡೊಯೆನಿಟ್ಸ್‌ಗೆ 10 ವರುಷ; ಸ್ಪಿರಾಜ್‌ಗ್ 20 ವರುಷ; ಸ್ಪೀರ್‌ಗೆ 20 ವರುಷ, ಪೋನ್ ನ್ಯೂರಾತ್ ರಿಗೆ 15 ವರುಷ ಸಜೆ ಸ್ಚಾಟ್ಸ್, ನೋನ್ ಪೇಪನ್, ಮತ್ತು ಫ್ರಿಟ್ಶೆ-ಈ ಮೂವರು ನಿರಪರಾಧಿಗಳೆಂದು ಖುಲಾಸೆಪಡಿಸಲ್ಪಟ್ಟಿದ್ದಾರೆ.

ಈ ನಾಜೀ ನಾಯಕರ ಮೇಲೆ ನಾಲ್ಕು ಆರೋಪಗಳಿದ್ದುವು. ಆಕ್ರಮಣ ಯುದ್ಧ ಹೂಡುವದಕ್ಕಾಗಿ ಉದ್ದೇಶ ಪೂರ್ವಕ ಸಂಚು ಹಂಚಿಕೆಗಳನ್ನು ತಯಾರಿಸಿದುದು ಮತ್ತು ಸ್ವೀಕೃತ ಒಪ್ಪಿಂಗಗಳನ್ನು ಮುರಿದುದು ಒಂದು ಮತ್ತು ಎರಡನೆಯ ಆ [illegible]ಲೆ, ದಾಸ್ಯ ಮತ್ತು ಅಮಾನುಷ ದಬ್ಬಾಳಿಕೆಗಳನ್ನು ನಡೆಸಿದುದು ಮೂರನೆಯ ಆರೋಪ ಯುದ್ಧದ ನೊದಲೇ ಜರ್ಮನರ ಮೇಲೂ ಯೆಹೂದಿಗಳ ಮೇಲೂ ಬೇಕಾಬಿಟ್ಟಿ ಕ್ರೂರ ಜುಲುಮೆ ನಡೆಸಿದ್ದುದು ನಾಲ್ಕನೇ ಆರೋಪ.

ನ್ಯಾಯಾಧೀಶ ಮಂಡಲಿಯು ಸೋವಿಯೆಟ್ ಜಡ್ಜರು ಮೂವರು ಆರೋಪಿಗಳ ಬಿಡುಗಡೆಯನ್ನೂ ಹೆಸ್ಸನಿಗೆ ಮರಣದಂಡನೆ ಕೊಡದೆ ಜೀವಾವಧಿ ಸಜೆ ಕೊಡುವದನ್ನೂ ಬಲವಾಗಿ ವಿರೋಧಿಸಿದ್ದರು.

ನಾಜೀ ಹೈಕಮಾಂಡ್ ಮತ್ತು ಸೇನಾನಿ ಮಂಡಲವನ್ನು 'ಕ್ರಿಮಿನಲ್ ಕೂಟ' ವೆಂದು ತೀರ್ಮಾನಿಸಬೇಕೆಂಬ ಪ್ರೊಸಿಕ್ಯೂಶನ್ ವಾದಕ್ಕೆ ಮಂಡಲಿ ಒಪ್ಪಿಗೆ ಕೊಟ್ಟಿಲ್ಲ, ಇದಕ್ಕೂ ರಶ್ಯನ್ ಜಡ್ಜರು ಅಸಮ್ಮತಿ ಸೂಚಿಸಿದ್ದಾರೆ

ಈ ತೀರ್ಮಾನದ ಮೇಲೆ ಜರ್ಮನಿಯಲ್ಲಿರುವ ಮಿತ್ರ ರಾಷ್ಟ್ರೀಯ ಕಂಟ್ರೋಲ್ ಕೌನ್ಸಿಲಿಗೆ ನಾಲ್ಕು ದಿನಗಳೊಳಗೆ ಅಪ್ಪೀಲು ಮಾಡಬಹುದು. ಇದೇ ಒಕ್ಟೋಬರ್ ತಾ 16ಕ್ಕೆ ಫಾಶೀಗೇರಿಸುವದೆಂದು ದಿನ ನಿಶ್ಚಯವಾಗಿದೆ ಗೋರಿಂಗ್ ಮೊದಲಾದ ವರ ಮೇಲೆ ಆಂಗ್ಲೋ-ಅಮೆರಿಕಾನರಿಗೆ ಮಮತೆಯಿದೆ ಎಂದು ಇನ್ನೂ ಕೆಲವರಲ್ಲಿರುವ ಸಂದೇಹ ನಿವಾರಣೆಗಾಗಿ ಇದಬೇಕು-ನೂರೆಂಬರ್ಗ್ ಆಪಾದಿಗಳಲ್ಲಿ ಯಾರನ್ನೇ ಆದರೂ, ಜರ್ಮನಿಯ ಒಕ್ಕಮಿತ ರಾಷ್ಟ್ರಗಳಲ್ಲಿ ಪ್ರತಿಯೊಂದು ರಾಷ್ಟ್ರದ ಇಬ್ಬರಿಬ್ಬರು ಪತ್ರಿಕಾ ಪ್ರತಿನಿಧಿಗಳ ಸಮ್ಮುಖದಲ್ಲೇ ಫಾಶೀ ಕಂಭಕ್ಕೇರಿಸಬೇಕೆಂದು ನಿರ್ಧರಿಸಲ್ಪಟ್ಟಿದೆ. ಕೆಲವರು ತಮ್ಮನ್ನು ತಾವೇ ಗುಂಡಿಟ್ಟು ಕೊಲ್ಲುವಂತೆಯೂ, ಇನ್ನು ಕೆಲವರು ಕಮ್ಮಿ ನಿಷ್ಠೆ ತಗ್ಗಿಸುವಂತೆಯೂ ಕಂಟ್ರೋಲ್ ಕೌನ್ಸಿಲಿಗೆ ಬರಕೊಂಡಿದ್ದಾರೆಂದು ತಿಳಿದುಬರುತ್ತದೆ. ತೀರ್ಪನ್ನು ಕೇಳಿದೊಡನೆಯೇ ಆರೋಪಿಗಳ ಮುಖಗಳು ತೀರಾ ವಿವರ್ಣವಾಗಿ ಹೋದುವಂತೆ. ಒಳಗೆ ಬರುವಾಗ ಎದೆಯುಬ್ಬಿಸಿಕೊಂಡು ಬಂದಿದ್ದ ಗೋರಿಂಗನ ನಿಸ್ತೇಜವದನವು ಆ ಮೇಲೆ ಒಲೆದಾಡಹತ್ತಿತ್ತು; ಆತನು ನಡುಗುವ ಕೈಗಳ ಮೇಲೆ ತನ್ನ ದಿನ ತುಂಬಿದ ತಲೆಯ ಭಾರವನ್ನೆಲ್ಲಾ ಹಾಕಿ ಕುಳಿತು ಬಿಟ್ಟ. ಜಡ್ಜರು ತನ್ನ ಮೇಲಿನ ತೀರ್ಪನ್ನೋದುತ್ತಿದ್ದಾಗ ಫ್ರಂಕನು ತನ್ನ ಒಣಗಿದ ತುಟಿಗಳನ್ನು ನೆಕ್ಕುತ್ತಿದ್ದು ತೀರ್ಪು ಕೇಳಿದೊಡನೆ ಎಂಜಲು ಗುಟುಕನ್ನು ಅತಿಪ್ರಯಾಸದಿಂದ ನುಂಗಿಕೊಂಡ. ಕಣ್ಣೀರು ಧಾರೆ ಧಾರೆಯಾಗಿ ಗಲ್ಲಗಳಿಂದ ಇಳಿಯ ಹತ್ತಿತು; ಆ ತೀರ್ಪಿನೊಡನೆ ಎಲ್ಲವೂ ತೀರಿತೋ ಎಂಬಂತೆ ಅಪರಾಧಿಗಳ ಮುಖ ಶವಸದೃಶವಾಗಿತ್ತು.

ಒಂದು ಕಾಲದಲ್ಲಿ ಇಡೀ ಪ್ರಪಂಚವನ್ನೇ ನಡುಗಿಸಿದ್ದ ಜರ್ಮನ್ ಸ್ತಮುಖರನ್ನು ಅದೃಷ್ಟವು ಎಳತಂದುದು ಈ ಗಡಿಗೆ! ಶಾಶ್ವತವಾದ ಶಾಂತಿ, ಸೌಖ್ಯ, ಅಥವಾ ಸಾರ್ಥಕತೆಯನ್ನು ತರುವಂತಹದು ಏಶ್ವರ್ಯವೂ ಅಲ್ಲ, ಅಧಿಕಾರವೂ ಅಲ್ಲ—ಆತ್ಮಬಲವೊಂದೇ ಎಂಬ ಪಾಠವೊಂದನ್ನು ಎಂದೆಂದಿಗೂ ಮರೆಯದಂತೆ ನೂರೆಂಬರ್ಗ್ ಕಲಿಸಿತು. ಈ ಜರ್ಮನ್ ಪ್ರಮುಖರು ಹೀಗಿದ್ದವರು-ಎನ್ನಾಗಿ ಹೋದರು! ನೆನಸುವಾಗ ಹೃದಯ ಕಂಪಿಸುತ್ತಿದೆ.

ಯಾರು ಯಾರಾಗಿದ್ದರು?

ಗೋರಿಂಗ್—ಹಿಟ್ಲರನಿಗೆರಡನೆಯವ, ಜರ್ಮನಿಯ ಆಕಾಶ ಮಂತ್ರಿ. ಯಾವ ಮಹಾ ರಾಜನ ಆಡಂಬರವೂ ಈತನ ವೈಭವ ಜೀವನದಿದಿರು ನಿಲ್ಲುವಂತಿರಲಿಲ್ಲ. ಹಿಟ್ಲರನನ್ನು ಬಿಟ್ಟರೆ ಗೋರಿಂಗನ ಮೇಲೆಯೇ ಜರ್ಮನ್ ಜನತೆಯ ಭಯಭಕ್ತಿ ವಿಶೇಷವಿತ್ತು. ತಾನಾಗಿ ಬ್ರಿಟಿಷರಿಗೆ ಸೆರೆ ಸಿಕ್ಕಿ, ತನ್ನನ್ನು ಕೈದುಮಾಡಿದ ಸೇನಾನಿಗೆ ಹಸ್ತಲಾಘವ ಕೊಟ್ಟಿದ್ದ. ಒಂದು ಕಾಲದಲ್ಲಿ ಬ್ರಿಟಿಷರ ನರಮಾಸ್ತ್ರ; ಹಿಟ್ಲರಿಗೂ ಮೊದಲು, ಪ್ರಥಮ ಮಹಾ ಯುದ್ಧದಲ್ಲೇ ಜರ್ಮನ್ ನಾಯಕನಾಗಿ ಹೋರಾಡಿದ್ದವ. ನಾಜೀ ನಾಯಕರ ಪೈಕಿ ದೊಡ್ಡ ಕುಟುಂಬದವನೂ ವಿಶಾಲ ಮನೋವೃತ್ತಿಯವನೂ ಇವನೇ ಪ್ರಾಯ 64 ಇನ್ನು ಆ ಫನಕಾಯ ಫಾಶೀ ಹಗ್ಗದಲ್ಲಿ ನೇತಾಡಿದರಾಯಿತು!

ರಿಬ್ಬಂಟ್ರಾಪ್—ನಾಜೀ ವಿದೇಶ ಮಂತ್ರಿ ಅತಿಚತುರ. ಪ್ರಾಯ 52. ರಶ್ಯಾ-ಜರ್ಮನಿ ಒಪ್ಪಂದ ಕರ್ತ ಇವನೇ ಜರ್ಮನಿಯಲ್ಲಿ ಇವನಿಗೊಲಿಯದ ಶ್ರೀಮಂತ ಮಹಿಳಾವರ್ಗವೇ ಇರಲಿಲ್ಲ. ಮೊದಲೊಮ್ಮೆ ಜರ್ಮನಿಯ ರಾಯಭಾರಿಯಾಗಿ ಲಂಡನ್ನಿನಲ್ಲಿದ್ದ. ಕೀರ್ತಿಸ್ತಂಭ ನೆಟ್ಟವ ಫಾಶೀ ಕಂಭವೇರಬೇಕಾಗಿ ಬಂತು

ಹೆಸ್—52 ವರ್ಷ ಪ್ರಾಯ. ಹಿಟ್ಲರನ ಉತ್ತರಾಧಿಕಾರಿಯಾಗಿ ನೇಮಕಗೊಂಡಿದ್ದ. ರಶ್ಯಾ ಯುದ್ಧಾರಂಭದ ಮೊದಲು ಸಂಧಾನಕ್ಕಾಗಿ ವಿಮಾನ ಮೂಲಕ ಬಂದು ಸ್ಕೊಟ್ಲೇಂಡಿನಲ್ಲಿಳಿದ. ಕೈದಿಯಾಗಿದ್ದ; ಹುಚ್ಚಾಗಿದ್ದಾನೆ ಎಂಬ ವಾರ್ತೆ ಹರಡಿತ್ತು. ರಶ್ಯದ ಮೇಲಿದ್ದಷ್ಟು ದ್ವೇಷ ಇವನಿಗ ಬ್ರಿಟನಿನ ಮೇಲಿರಲಿಲ್ಲ; ಮನುಷ್ಯ ಕರೋರನಲ್ಲ, ಇನ್ನು ಜೈಲಲ್ಲಿದ್ದೇ ಸತ್ತರಾಯಿತು

ಕೀಟೆಲ್—ಪ್ರಾಯ 63. ನಾಜೀ ಸೇನಾನೀ ಮಂಡಲದಲ್ಲಿ ನೊದಲು ಅಧಿನಾಯಕನಾಗಿದ್ದವ. ಜರ್ಮನಿಯ ಶರಣು ಪತ್ರಕ್ಕೆ ಸಹಿ ಹಾಕಲು ಸಿಕ್ಕಿದವನು ಮಹಾ ಪ್ರಭಾವಶಾಲಿ ವ್ಯಕ್ತಿ. ಎದೆಗಾರಿಕೆ ಮತ್ತು ಬಂಧದ ಜನ; ಗಲ್ಲಿನೆ ಪಾಶ ಕರೆಯುತ್ತಿದೆ.

ಕಾಲ್ಟೆನ್ ಬ್ರನ್ನರ್—ಪ್ರಾಯ.43. ಗೆಸ್ಟಪೋ ನಾಯಕ ಹಿಮ್ಲರನ ಬಲಗೈ ಬಂಟ, ಆಸ್ಟ್ರಿಯಾದ ನರಭಕ್ಷಕ ಹುಲಿ. ಬಹಳ ಮಂದಿಯನ್ನು ಕೊಚ್ಚಿಸಿದವ, ಉದ್ಯೋಗಾನುಸಾರವಾಗಿ ಅವನಿಗೂ ಅದೇ ದೊರಕಿದೆ —ಫಾಶಿ.

ರೋಸೆನ್ ಬರ್ಗ್—52 ವರುಷ ನಾಜೀ ತತ್ವದ ಶಾಸ್ತ್ರಿಯೀತ. ಎಲ್ಲಾ ರಾಷ್ಟ್ರಗಳಲ್ಲಿ ನಾಜೀ ಪ್ರಚಾರ ನಡೆಸುವ ಸಲ್ಲಸ್ಯ ನಾಯಕತ್ವ ಇವನ ಕೈಯಲ್ಲಿತ್ತು. ಈ ಗಂಟಲಿಗೆ ಫಾಶೀ ಕೊಕ್ಕೆಯೆಂದು ತೀರ್ಮಾನಿದೆ

ಫ್ರೇಂಕ್—ಹಿಂದೆ ಪೋಲೆಂಡಿನಲ್ಲಿ ನಾಜೀ ಗವರ್ನರ್ ಆಗಿದ್ದವ, ಮುಚ್ಚೆ ಗಲ್ಲಿಸೇರತಕ್ಕುವ. ಪ್ರಾಯ 45.

ಫ್ರಿಕ್—60ರ ಹಳೇ ಹುಲಿ ಟೂ ಹೇಮಿಯಾ ಮತ್ತು ಮೋರೇವಿಯಾದ ನಾಜೀ ಗವರ್ನರ್. ಜರ್ಮನಿಯ ಗೃಹ

ವಿವಿಧ ಪಾತ್ರೆಗಳು

ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ನೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಿಯಿಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ

ಕಲ್ಮಂಜೆ ವ್ಯಾಸಾಚಾರ್ಯ,
ರತ್ನಾಕರ, ಉಡುಪಿ.

Why Worry?

Do not feel disheartened for not getting BONUS.
We offer you a guaranteed BONUS of Rs 10/- per THOUSAND under our New Scheme

Please apply immediately.—

A. S Kini,
Managing Director

UNITED KARNATAK INSURANCE Co., Ltd.

HEAD OFFICE. **DHARWAR.**

For further part culars apply to —

Divisional Manager,
Court Road
UDIPI, S India

Or

Divisional Manager,
Narayan Nivas
Market Road Bangalore (t).

or

Branch Manager,
10 Bismilla Bldg Opp B B
C I Stn Dadar BOMBAY 14

Or

Branch Manager,
MULLAKKAL
Alleppey. (Travancore State)

Or

To our nearest Agents.

ದಿ ಮೂಲ್ಕಿ ಬೇಂಕ್, ಲಿಮಿಟೆಡ್.

ಗ್ರಾಮಸ್ಥರ ನಡುವೆ ಸಾ ಪಿತವಾಗಿ 15 ವರ್ಷಗಳಿಂದ ಡಿವೊಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಇವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,
Moolky, S. K.

ಮಂತ್ರಿ. ನಾಜೀ ತತ್ವ ಬೇರೂರುವಂತೆ ಸಾಧಿಸಿದ ಅಧಿಕಾರಿಯೀತ. ಇವನಿಗೂ ಫಾಶಿ.

ಸ್ಟ್ರೈಚರ್—60 ವರುಷ. 'ಯೆಹೂದೀ ಭಂಜಕ'ನೆಂದು ಲೋಕ ವ್ಯಾಪೀ ಕೀರ್ತಿ ಪಡೆದವ. ನಾಜೀ ತತ್ವದ ಕಠೋರ ಪಾಠಶಗಳಲ್ಲೇ ಇವನ ಮೆಚ್ಚುಗೆ. ಹಿಟ್ಲರನ ಆಪ್ತನಾಗಿದ್ದು ನಾಜೀ ನಾಯಕ ಮಂಡಲಿಯ ಒಳ ಮಹಾವಟುಗಳಲ್ಲೆಲ್ಲಾ ಇದ್ದವ ಇಸಪಿಂದಾಗಿ ಸತ್ತ ಯೆಹೂದಿಗಳು ಅಗಣಿತ; ಈಗ ಇವನೂ ನೇತಾಡಿ ಸಾಯಬೇಕಿದ್ದಾನೆ.

ಫಂಕ್—55 ವರುಷ. ಅರ್ಥ ಶಾಸ್ತ್ರ ನಿಪುಣ. ಜರ್ಮನಿಯ ಮಾಜೀ ಅರ್ಥ ಮಂತ್ರಿ. ಹಣ ಖಾತೆಯ್ತನುಟ್ಟಿಗೆ ಹಿಟ್ಲರನ ಖಾಸಗೀ ಸಲಹೆಗಾರನಾಗಿಯೂ ಇದ್ದ. ನಾಜೀ ಸರಕಾರೀ ಬೇಂಕು 'ರೀಕ್ಸ್ ಬೇಂಕ್'ನ ಅಧ್ಯಕ್ಷನಾಗಿಯೂ ಇದ್ದ. ಆಷ್ಟೇ ಆದ್ದರಿಂದ ಸಾಯುವ ತನಕ ಸಜೆ ಮಾತ್ರ.

ಶಾಟ್—68 ವರುಷ. 'ಹಣಕಾಸಿನ ಮಂತ್ರವಾದಿ' ಎಂದು ಕೀರ್ತಿವೆತ್ತವ. ಅಧಿಕಾರಕ್ಕೆ ಬರುವ ಮೊದಲೇ ನಾಜೀ ಪಕ್ಷವನ್ನು ಸಮರ್ಥಿಸುತ್ತಿದ್ದವ. ದುಡ್ಡಿನ ಕಾರ್ಯ ವಿಚಾರದಲ್ಲಿ ಇವನ ಮೆದುಳಿಗೆ ಸರಿಗಟ್ಟುವಂತಹದು ಬೇರೊಂದಿರುವದು ಅಪೂರ್ವ. ಮೊದಲು ನಾಜೀ ಸರಕಾರದ ಅರ್ಥ ಖಾತೆಯ ಶಿರಸ್ಸಾಗಿದ್ದ. ಬರಬರು ಹ್ಯಾ ವರ್ಚಸ್ಸು ಕಳಕೊಂಡ. ಅರ್ಥ ಖಾತೆಯ ಅಧಿಕಾರಿಗಳು ಯಾರಿದ್ದರೂ ಅಲ್ಲಿ ನಿಜವಾದ ಕೈವಾಡವಿದ್ದುದು ಗೋರಿಂಗನದ್ದೇ. ಕೊನೆಗಂತೂ ಶಾಟ್ ಪೂರ್ತಿ ಮೂಲೆ ಪಾಲಾಗಿದ್ದ; ಜರ್ಮನರೆಲ್ಲಾ ಆತನನ್ನು ಜಿಗುಪ್ಸೆಯಿಂದ ಕಾಣುತಿದ್ದರು. ಯುದ್ಧ ಕಾಲದಲ್ಲಿ ಯಾರಿಗೂ ಬೇಡವಾದ ಮನುಷ್ಯನಾಗಿದ್ದ; ಆದ್ದರಿಂದ ಬಿಡುಗಡೆ ಹೊಂದಿದ್ದಾನೆ.

ಡೊಯೆನೆಟ್ಜ್—53 ವರುಷ. ಜರ್ಮನಿಯ ನಾವೆ ಒಲದ ನಾಯಕನಾಗಿದ್ದವ; ಹಿಟ್ಲರ್ ಮಡಿದೊಡನೆ ಕೆಲವು ದಿನ ಜರ್ಮನಿಯ ಸರ್ವಾಧಿಕಾರಿಯಾಗಿದ್ದ. ನ್ಯಾಯಶಃ ಕೊನೆಯ ಭಾಗದ ಇವನ ಕಾರ್ಯಗಳಿಂದ ಮಿತ್ರ ರಾಷ್ಟ್ರಗಳಿಗನುಕೂಲವಾಗಿರಬೇಕು. ಇವನಿಗೆ ಹತ್ತೇ ವರುಷ ಶಿಕ್ಷೆ ದೊರೆತಿದೆ.

ರೇಯಿಡರ್—ಇವನೂ ಮಾಜೀ ನಾಜೀ ನಾವಿಕಾಧಿಪತಿ. 69 ವರುಷ. ನೋರ್ವೆಯಾಕ್ರಮಣದ ಹಂಚಿಕೆ ಹಿಟ್ಲರನಿಗೆ ಹೇಳಿ ಕೊಟ್ಟವ ಇವನೇ ರಶ್ಯದ ಮೇಲೆ ಬೀಳದೆ ಮಧ್ಯ ಪೂರ್ವದ ಮೇಲೆ ಧಾಳಿಯಿಡುವಂತೆ ಹಿಟ್ಲರನನ್ನು ಕೊನೆತನಕ ತ್ಯಾಯಿಸಿ ಸೋತಿದ್ದ. ಕಟಸ್ಥ ರಾಷ್ಟ್ರಗಳ ಮೇಲೆ ಜಲ ಧಾಳಿ ನಡಿಸಿದುದು ಇವನ ಮಹಾಪರಾಧ; ಜೀವಾವಧಿ ಸಜೆಗೊಳಗಾಗಿದ್ದಾನೆ.

ಶ್ಪಿರಾಚ್—38 ವರುಷದ ತರುಣ. ಜರ್ಮನ್ ನಾಜೀ ಯುವಕ ದಳದ ನಾಯಕ. 'ಹಿಟ್ಲರ್ ಯುವಕ ಸೇನೆ' ಇವನ ತಯಾರಿ ನೆಹರುಗಳಿಗೆ ಜೈ ಪ್ರಕಾಶರಿರುವಂತೆ, ಹಿಟ್ಲರನಿಗೆ ಶ್ಪಿರಾಚ್ ಇದ್ದ. ಕಠೋರ ವ್ಯಕ್ತಿ; 20 ವರುಷ ಜೈಲಲ್ಲಿರುವ ಶಿಕ್ಷೆಯಾಯಿತು.

ಸಾವುಕೆಲ್—48 ವರುಷ. ನಾಜೀ ಸೇನಾ ಸಂಗ್ರಹದ ನಿರ್ದೇಶಕ. ಅಕ್ರಮಿತ ರಾಷ್ಟ್ರಗಳವರನ್ನು ಹಿಂಸಿಸಿ, ಬಲಾತ್ಕರಿಸಿ ಸೇನೆಗೆ ಸೇರಿಕೊಳ್ಳುವದರಲ್ಲಿ ಇವ ಅಗ್ರಗಣ್ಯ. ಕಾರ್ಯಕ್ಕೆ ಬೇಕಾದ ನೀತಿಯನ್ನೇ ಒಪ್ಪದವ. ನೇತಾಡಿ ಸಾಯಬೇಕೆಂದಾಗಿದೆ.

ಜೋಡ್ಲ್—50 ವರುಷ. ನಾಜೀ ಮಂಡಲದ ಮಾಜೀ ನಾಯಕ. ಧಾಳಿ ಯೋಜನೆಗಳ ತಯಾರಿಯಲ್ಲಿ ಅನುಪಮ; ಯುದ್ಧ ನಡೆಸುವ ಹೆಚ್ಚಿನ ಹಂಚಿಕೆಗಳನ್ನು ತಯಾರಿಸಿ ಮುಂದಿಟ್ಟವ ಇವನೇ. ಫಾಶೀ ಕಂಭ ಕಾದಿದೆ.

ವೋನ್ ಪೇಪೆನ್—66 ವರುಷ. ಮೊದಲು ಆಸ್ಟ್ರಿಯದಲ್ಲೂ ಆ ಮೇಲೆ ಟರ್ಕಿಯಲ್ಲೂ ಜರ್ಮನ್ ರಾಯಭಾರಿಯಾಗಿದ್ದವ. ಹಿಟ್ಲರನು ಅಧಿಕಾರಕ್ಕೆ ಬರಲು ಬಹಳ ಸಹಾಯ ಮಾಡಿದವ. ಆಸ್ಟ್ರಿಯಾ ಕ್ರಮಣ ಮಾಡದಂತೆ ಹಿಟ್ಲರನನ್ನು ಸಮಜಾಯಿಸಲು ನೋಡಿ ೌಲಿದ್ದ. ಕೊನೆಗೆ ಛಿನ್ನಾಭಿನ್ನತೆಯ ವೈರಾಗ್ಯ ಬಂದು ತನ್ನಷ್ಟಕ್ಕೆ ತಾನಿದ್ದ. ಕಡೆಯ ಭಾಗದಲ್ಲಿ ಟರ್ಕಿಯ ರಾಯಭಾರಿಯಾಗಿದ್ದರೂ ಅಪರಾಧ ಸಿದ್ಧವಾಗದ್ದರಿಂದ ಬಿಡುಗಡೆ ಹೊಂದಿದ್ದಾನೆ.

ಸೆಯಿಸ್-ಇಂಕ್ವಾರ್ಟ್—43 ವರುಷ; ನಾಜೀ ಸರಕಾರದ ಮುಖ್ಯಾಡಳಿತಗಾರ. ಯೆಹೂದೀ ಸೊತ್ತುಗಳ ಅಪಹಾರ; ಗುಸ್ತ ಮೋಲಿಸರಿಗೆ ಸಹಕಾರ ಇತ್ಯಾದಿ ಕಾರ್ಯ ವಿಭಾಗಗಳು ಇವನಿಗೆ ಸೇರಿದ್ದುವು. ಆಕ್ರಮಣ ಮತ್ತು ಆಕ್ರಮಿತ ಸ್ಥಳದ ಸರ್ವಾಪಹಾರ ಇವನ ತತ್ವಗಳಾಗಿದ್ದುವು. ಮರಣ ಶಿಕ್ಷೆಯಾಗಿದೆ.

ಸ್ಪೀರ್—39ರ ಜವ್ವನಿಗ. ಹಿಂದಿನ ಯುದ್ಧ ಸಾಮಾಗ್ರಿಗಳ ಮಂತ್ರಿ. ಅಂತ್ಯ ಭಾಗದಲ್ಲಿ 'ನಾವು ಯುದ್ಧ ಸೋತಾಯಿತು' ಎಂದು ಹಿಟ್ಲರನಿದಿರು ಹೇಳಲು ಧೈರ್ಯಗೊಂಡವರಲ್ಲಿ ಇವನೊಬ್ಬ. ಆದ್ದರಿಂದ 20 ವರಷ ಸಜೆ.

ವೋನ್ ನ್ಯೂರಾತ್—72ರ ಹಳೇ ಠಣ ಹೆದ್ದು. ರಿಬ್ಬಂಟ್ರಾಪನ ಮೊದಲು ವಿದೇಶ ಮಂತ್ರಿಯಾಗಿದ್ದ. ನೊದಲ ರಾಷ್ಟ್ರಕೂಟದಿಂದ ಹಿಂದೆಗೆಯುವದಕ್ಕೂ, ಸ್ಟೈನ್ ಪುನರಾಕ್ರಮಣಕ್ಕೂ ಹಿಟ್ಲರನಿಗೆ ಸಲಹೆ ಕೊಡುತಿದ್ದುದು ಇವನೇ. ವಿದೇಶ ಮಂತ್ರಿ ಸ್ಥಾನಕ್ಕೆ ತಾನಾಗಿ ರಾಜಿ ಕೊಟ್ಟರೂ ನಾಜೀ ಪ್ರಮುಖಾಧಿಕಾರಿಗಳ ಬೇರೆ ಉದ್ಯೋಗ ನಿರ್ವಹಿಸಿದ್ದ. 15 ವರ್ಷ ಸಜೆ.

ಹೇನ್ಸ್ ಫ್ರಿಟ್ಸ್ಚೆ—46 ವರುಷ. ಗೋಬೆಲ್ಸನಿಗೆರಡನೆಯ ಸ್ಥಾನದಲ್ಲಿದ್ದು ಅವನಿಗೆ ಸಹಾಯ ಮಾಡುತಿದ್ದ. ಯುದ್ಧಾಂತ್ಯ ಭಾಗದಲ್ಲಿ ನಾಜೀ ರೇಡಿಯೋ ಖಾತೆಯ ಶಿರಸ್ಸಾಗಿ ಕೆಲಸ ಮಾಡಿದ್ದ. ಹಿಟ್ಲರ್ ಮತ್ತು ನಾಜೀ ಸಂಘಗಳನ್ನು ಲೋಕಪ್ರಿಯಗೊಳಿಸುವ ಎಲ್ಲಾ ವಿಧದ ಪ್ರಚಾರ ನಡೆಸಿದ್ದ; ಆದರೂ ಬಿಡುಗಡೆ ಹೊಂದಿದ್ದಾನೆ.

ಜೊರ್ಮಾನ್—46 ವರುಷ ಪ್ರಾಯ. ಹೆಸ್ಸನಂತೆಯೇ ಈತನೂ ಹಿಟ್ಲರನ ಡೆಪ್ಯುಟಿಯಾಗಿದ್ದ. ಆದಿಯಲ್ಲಿ ಅಲ್ಪ ಮನುಷ್ಯನಾಗಿದ್ದ ಈತ ಕೊನೆಗೆ ಅಗ್ರಗಣ್ಯ ನಾಜಿಗಳ ಸಾಲಿಗೆ ಸೇರಿ ಹಿಟ್ಲರನಿಗೆ ಪ್ರಾಣಾಪ್ತನಾದ. ಯುರೋಪಿನ ದೇವಾಲಯಗಳನ್ನೂ ಯೆಹೂದಿಗಳನ್ನೂ ನಿರ್ನಾಮಗೊಳಿಸುವದು ಇವನನಚ್ಚಿನ ಕಾರ್ಯ. ಒಂದು ಕಾಲದಲ್ಲಿ ಹಿಟ್ಲರನ ಕಾರ್ಯದ ಶಿರಿಯಾಗಿದ್ದ. ವಿದೇಶೀ ಗುಲಾಮ ಜನರಿಂದ ಕೆಲಸ ಮಾಡಿಸುವ ವ್ಯವಸ್ಥೆಗಳ ಕ್ರೂರತೆಗೆ ಈತ ಹೆಸರು ಹೊದಿವ. ಸೆರೆಸಿಕ್ಕದೆ ಆದಿಯಲ್ಲೇ ತಪ್ಪಿಸಿಕೊಂಡಿದ್ದ. ಅಪರಾಧಿಯ ಗೈರು ಹಾಜರಿಯಲ್ಲಿ ವಿಚಾರಣೆ ನಡೆದು ಮರಣಸಜೆ ವಿಧಿಸಲ್ಪಟ್ಟಿದೆ.

ಹೆಸ್, ಸ್ಪೇಜರ್, ಫ್ರೆಂಕ್, ಫ್ರಿಕ್, ರೋಸೆನ್‌ಬರ್ಗರು ಜೀವದಾನದ ಕ್ಷಮೆಯಾಚಿಸಿ ಅಪ್ಪೀಲು ಮಾಡಿಕೊಂಡಿದ್ದಾರೆ. ಜೋಡ್ಲನ ಹೆಂಡತಿ ತನ್ನ ಗಂಡನ ಪ್ರಾಣವುಳಿಸುವಂತೆ ಪ್ರಯತ್ನಿಸಬೇಕೆಂದು ಜನರಲ್ ಈಸನೋವರನ್ನು ಪ್ರಾರ್ಥಿಸಿಕೊಂಡಿದ್ದಾಳೆ. ಪೋಪ್‌ರು ಈ ಪ್ರಯತ್ನದಲ್ಲಿ ಕೈ ಹಾಕುವದಿಲ್ಲವೆಂಬ ಹೇಳಿಕೆ ಹೊರಟಿದೆ. ಬಿಡುಗಡೆ ಹೊಂದಿದ ಶಾಟ್, ಪೇಪನ್, ಮತ್ತು ಫ್ರಿಟ್ಶೆಯವರು ನೂರೆಂಬರ್ಗಿನಿಂದ ಹೊರಡದಂತೆ ಸೇನಾ ಜ್ಞೆಯಾಗಿದೆಯಲ್ಲದೆ. ನೂರೆಂಬರ್ಗಿನ 'ಜರ್ಮನ್ ಉಚ್ಚಾಟನಾ ಕೋರ್ಟ್'ನಿಂದ ಅವರ ಮೇಲೆ ಪ್ರತ್ಯೇಕ ವಾರಂಟು ಹೊರಟಿದೆ.

ಹಿಟ್ಲರ್, ಹಿಮ್ಲರ್, ಗೋಬೆಲ್ಸರು ಸ್ವತಃ ಜೀವ ಕಳಕೊಂಡು, ತಮ್ಮನ್ನು ಕೊಲ್ಲುವ ಒಂದು ಅಧಿಕಾರವಾದರೂ ನೈರಿಗಳ ಕೈಗೆ ಹೋಗದಂತೆ ಮಾಡಿದ್ದರು. ಉಳಿದವರಿಗೆ ಈ ಗತಿಯೊದಗಿತು. ಸುಮಾರು ಇಪ್ಪತ್ತು ವರುಷಗಳ ವರೆಗೆ ಲೋಕದ ಮಿಕ್ಕೆಲ್ಲಾ ರಾಷ್ಟ್ರಗಳ ನಡುವೆ ಜರ್ಮನಿಯು ಸಿಂಹ ಸದೃಶವಾಗಿರುವಂತೆ ಮಾಡಿದ್ದ ಈ ಮಹಾ ವ್ಯಕ್ತಿಗಳೆಲ್ಲರ ಅವತಾರವೂ ಈ ರೀತಿ ಮುಗಿಯಿತು; ನುಹಾಭಾರತ ಯುದ್ಧದ 19ನೇ ದಿನದ ಸ್ಮರಣ ಬರುತ್ತಿದೆ; ಅಸಾಧ್ಯ ಯೋಧರ ಒಂದು ಸಾಲು ತಲೆಯೇ ಉರುಳಿ ಬಿದ್ದಂತಾಗಿ ಲೋಕಕ್ಕೊಂದು ಅಭಾವದ ಅನುಭವ ಆಗುತ್ತಿದೆ

ಪ್ರಕಟಣೆ

ದಿ ಜುಪಿಟರ್
ಜನರಲ್ ಇನ್ಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,
ಬೊಂಬಾಯಿ.

ಈ ವಿಮಾ ಕಂಪೆನಿಯ ಚೀಫ್ ಏಜಂಟರಾಗಿ ಉಡುಪಿಯಲ್ಲಿದ್ದ ಶ್ರೀ. ಪಿ. ಡಿ. ನನಯನವರು ತಾ. 25—9—'46ರಿಂದ ಕಂಪೆನಿಯ ಪ್ರಾತಿನಿಧ್ಯವನ್ನು ಕಳಕೊಂಡಿರುತ್ತಾರೆ. ದ ಕ. ಜಿಲ್ಲೆಯ ಏಜಂಟರೂ ಪೊಲಿಸಿದಾರರೂ ಸದ್ರಿ ತಾರೀಕಿನಿಂದ ಪೂರ್ವತೆ ಮಾಡತಕ್ಕ ಪ್ರೀಮಿಯಮ್ ಹಣವನ್ನು ಕೆನರಾ ಬೇಂಕ್ ಲಿಮಿಟೆಡ್ ಮಂಗಳೂರು ಮತ್ತು ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಉಡುಪಿ, ಇವುಗಳಲ್ಲಿ ಯಾ ಇವುಗಳ ಶಾಖಾ ಆಫೀಸುಗಳಲ್ಲಿ ಹಿಂದಿನಂತೆ ಪಾವತಿ ಮಾಡಬೇಕಾಗಿ ಈ ಮೂಲಕ ತಿಳಿಸೋಣವಾಗಿಯದೆ.

E. S Joel.
General Manager

ಇಂದ್ರಭವನ ಕಾಫಿ ಹೊಟೆಲ್
ಬಲ್ಮಠ * * * * ಮಂಗಳೂರು.

ಹೊಸ ವ್ಯವಸ್ಥೆ—ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾಕೀಯಗಳ ತಯಾರಿಕೆಗಳು—ವಿದ್ಯುದ್ದೀಪ, ರೇಡಿಯೊಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.

ಟೀಸಾರ್ಟ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ

ಬಿ: ಬಾಬು ಶೆಟ್ಟಿ

Indra Bhavan Coffee Hotel,
Balmatta Road, Mangalore.



Approved firm by the Govt. of Mysor
Certified by the Agent of the Govt. of Ceylone Indian.

ಇಂದಿಗೆ ತಕ್ಕ ನಾಟಕ
ದೇಶಭಕ್ತ

ಶ್ರೀ. ಕೆ. ಕೆ. ಶೆಟ್ಟರು ಸುಲಭವಾದ ಶೈಲಿಯಲ್ಲಿ ಎಲ್ಲರಿಗೂ ಮಂದಟ್ಟಾಗುವಂತೆ ಬರೆದ ಬೋಧಪ್ರದ ಸಾಮಾಜಿಕ ನಾಟಕ.

ದೇಶಭಕ್ತನು ಹೇಗಿರಬೇಕು? ಅವನ ಧ್ಯೇಯ ಧೋರಣೆ ಹೇಗೆ ಆದರ್ಶಪ್ರಾಯವಾಗಿರಬೇಕು? ಜನತಾ ಜನಾರ್ದನನ ಸೇವೆ ಎಂದರೇನು? ಎಂಬಿತ್ಯಾದಿಗಳನ್ನು ಅತಿ ಕೌಶಲ್ಯದಿಂದ ಚಿತ್ರಿಸಿ. ಸಂಸ್ಥಾನವೊಂದಕ್ಕೆ ನಡೆಂದ್ರರು ಮಾಡುತ್ತಿರುವ ದಬ್ಬಾಳಿಕೆಯ ಭೀಕರ ಚಿತ್ರವನ್ನು ಮುಂದಿಟ್ಟು ಪ್ರಜಾಸ್ವಾತಂತ್ರ್ಯವು ಹೇಗೆ ಸಾಧ್ಯವೆಂಬುದನ್ನು ವಿವರಿಸುವ ರಾಜಕೀಯ-ಸಾಮಾಜಿಕ ನಾಟಕ.

ಬೆಲೆ ರೂ. 1—4—0

ನವಭಾರತ ಬುಕ್ ಡಿಪೊ,
ಉಡುಪಿ.

ವಿನೋದಕರ— ಆದರೆ— ನಿರಾಧಾರ ವಾರ್ತೆಗಳು

ನೇತಾಜೀ ಸುಭಾಸರು ಗಡಿನಾಡಿಗೆ ಬಂದಿದ್ದಾರೆಂದು ಲಾಹೋರಿಗೆ ತಂತಿ ಬಂದು ಒಮ್ಮೆ ರಾಷ್ಟ್ರನ್ಯಾಪೀ ಆನಂದಾವೇಗ ವೆದ್ದದು ನೆನಪುಂಟಷ್ಟೆ. ಆದು ನಿರಾಧಾರವಾಗುದೆಂದು ವಿಚಿತವಾದ ಮೇಲೆ ಮತ್ತೊಂದು ಹೊಸ ಸುದ್ದಿ ಹುಟ್ಟಿಕೊಂಡಿತು ನೇತಾಜಿಯಿಂದ ಅವರ ಸಂಬಂಧಿಕರಿಗೆ ಪತ್ರ ಬಂದಿದೆ. ತನ್ನನ್ನು ಭಾರತದ ಸೇನಾನಿಯಾಗಿ ಮಾಡುವದಾದರೆ ಮಾತ್ರ ತಾನು ಭಾರತಕ್ಕೆ ಬರಲು ತಯಾರೆಂಬ ಶರ್ತವನ್ನದರಲ್ಲಿ ಕಾಣಿಸಿದ್ದಾರೆ-ಎಂಬ ಆ ವಾರ್ತೆ ಭಾರತೀಯರು ನೇತಾಜಿಯ ಮೇಲಿಟ್ಟಿರುವ ಗೌರವಕ್ಕನುಗುಣವಾಗಿಯೇ ಇದೆ. ಪ್ರಕಟಗೊಂಡು ಈಗ ಹೆಚ್ಚಿನವರಿಂದ ನಂಬಲ್ಪಟ್ಟಿರುವ ಸುದ್ದಿಯೆಂದರೆ, ಗಡಿನಾಡಿನ ಇಫಿಫಕೇರರೊಂದಿಗೆ ಸುಭಾಸರಿಗೆ ವಾಸಿಸುತಿದ್ದಾರೆಂಬುದೇ. ಈ ಕುರಿತು ಪರಮಾವಧಿ ಆತುರ ಹುಟ್ಟುವಂತೆ ಕತೆ ಕಟ್ಟುವವರಿದ್ದಾರೆ. ಇತ್ತೀಚೆಗೆ ಇಸಿಯು ಮೇಲೆ ಬೋಂಬು ಧಾಳಿ ನಡೆದುದಕ್ಕೆ ಸುಭಾಸರು ಅಲ್ಲಿರುವರೆಂಬುದು ಬ್ರಿಟಿಷರಿಗೆ ಮಂದಟ್ಟಾಗುದೇ ಕಾರಣ. ನೆಹರು ಅಧಿಕಾರಕ್ಕೆ ಬಂದೊಡನೆ ಆ ಧಾಳಿಯನ್ನು ಸಟಕ್ಕದೇ ನಿಲ್ಲಿಸಿಬಿಟ್ಟು ದಕ್ಕೂ ಇದೇ ಕಾರಣ. ಸದ್ಯದಲ್ಲೇ ಪಂಡಿತ ನೆಹರುಗಳು ಆ ಭಾಗಕ್ಕೆ ಭೇಟಿ ಕೊಡುವ ಗುಪ್ತೋದ್ದೇಶವೆಂದರೆ ಇಫಿಫಕೇರರಲ್ಲಿ ಹೋಗಿ ಸುಭಾಸರೊಡನೆ ಮುಖತಃ ಮಾತಾಡಿ ಬಂಬೇಕೆಂಬುದೇ"—ಎಂದೆಲ್ಲಾ ಮನ ಮೋಹಕ ವಾರ್ತೆಗಳು ಹೆರಡಿ ಹೋಗಿವೆ. ಪ್ರಚಲಿತ ವಾರ್ತೆಗಳೇ ಹೀಗಿರುವಾಗ ರಾಮಾಯಣ, ಭಾರತ, ಆಧಮಾಚರಿತ್ರೆಗಳಲ್ಲಿ ಅತಿಶಯೋಕ್ತಿಯ ಅದ್ಭುತ ವರ್ಣನೆಗಳಿರುವುದರಲ್ಲಿ ತಪ್ಪೇನು?

oo oo oo

ಕೇಂದ್ರದಲ್ಲಿ ನೆಹರು ಸರಕಾರ ಬಂದ ಕೂಡಲೇ ನವಢಿಲ್ಲಿಯ ಕೇಂದ್ರ ಸರಕಾರೀ ಕಚೇರಿಯೊಳಗಿನ ಕಾರ್ಯಕಲಾಪಗಳಲ್ಲಿ ಕ್ರಾಂತಿಕಾರಿ ಬದಲಾವಣೆಯಾಗಿ ಹೋಯಿತು. ಆ ಮೊದಲು ಬ್ರಿಟಿಷಾಯೇ ಕೌನ್ಸಿಲಿನ ಹಿಂದೀ ಸದಸ್ಯರೆಲ್ಲಾ ನಾಮ ಮಾತ್ರವಾಗಿದ್ದರು; ಆಫೀಸು ಕಾರ್ಯದರ್ಶಿಗಳು ಪ್ರತಿಯೊಂದು ಪ್ರಾಮುಖ್ಯ ವಿಷಯಕ್ಕೂ ವೈಸರಾಯರನ್ನು ಸಂದರ್ಶಿಸುತಿದ್ದರೇ ಹೊರತು ಸದಸ್ಯರನ್ನು ಗಣಿಸುತ್ತಿರಲಿಲ್ಲ ಹೀಗಾಗಿ ಕೇಂದ್ರ ಕಚೇರಿಯ ಕಾರ್ಯಕಲಾಪಗಳ ಮೇಲೆ ವೈಸರಾಯರೊಬ್ಬರ ಸರ್ವಾಧಿಕಾರ ಮಾತ್ರ ನಡೆಯುತಿತ್ತು. ಹಿಂದೀ ಸದಸ್ಯರು ವಾರಕ್ಕೊಂದರಂತೆ ವೈಸರಾಯರನ್ನು ಸಂದರ್ಶಿಸಿ ಡಾವರ್ಶಿ ಪ್ರೇಕ್ಷಕರಂತೆ ತಂತಮ್ಮ ಆಫೀಸಿಗೆ ಭೇಟಿ ಕೊಟ್ಟು ಕಾರ್ಯಗಳನ್ನೆಲ್ಲಾ ಹಚ್ಚಾಗಿ ತಮ್ಮ ಸ್ವಗೃಹಗಳಲ್ಲೇ ಮಾಡುತಿದ್ದರು; ನಾಮ ಮಾತ್ರ ಸದಸ್ಯರಾಗಿದ್ದರು. ಆದರೆ ರಾಷ್ಟ್ರ ಪ್ರಮುಖರ ನಡುಗಾಲ ಸರಕಾರ ಬಂದೊಡನೆ ಕಚೇರಿ ಕಾರ್ಯದರ್ಶಿಗಳು ಮತ್ತು ವೈಸರಾಯರ ನಡುವೆ ಇದ್ದ ಸಂಬಂಧ ಪೂರ್ತಿ ಕಡಿದು ಹೋಯಿತು; ಹಿಂದೀ ಮಂತ್ರಿಗಳು ತಮ್ಮ ತಮ್ಮ ವಿಭಾಗಗಳ ಮೇಲಧಿಕಾರವನ್ನು ಸಂಪೂರ್ಣವಾಗಿ ತಮ್ಮ ಕೈಯಲ್ಲೇ ಇಟ್ಟುಕೊಂಡರು. ಕಾರ್ಯದರ್ಶಿಗಳಿಗೇ ನಾವರೂ ತಿಳಿಸುವದಿದ್ದರೆ ನೆಹರುಗಳಿಗದನ್ನು ತಿಳಿಸಬೇಕೇ ಹೊರತು ನೇವೆಲರ ಕಡೆಗೋಡಬಾರದೆಂದಾಯಿತು. ಇದರಿಂದಾಗಿ ನಮ್ಮತ: ಸರ್ವ ಕಾರ್ಯಗಳ ಸೂತ್ರಧಾರಿಗಳಾಗಿ ದೀರ್ಘ ಕಾಲದಿಂದಿದ್ದ ಯುರೋಪಿಯನ್ ಕಾರ್ಯದರ್ಶಿಗಳು ಅತ್ಯಂತಪೇಚಿನಲ್ಲಿ ಬಿದ್ದರು; ಆಫಮಾನೀ ಹಿಂದೀ ನಾಕರರು ಮಾತ್ರ ಉತ್ಸಾಹಗೊಂಡರು. ಕೆಲವು ಯುರೋಪಿಯನ್ ನೌಕರರು ರಜೆ, ವಿರಾನು, ವಿದಾಯಪಡಕೊಂಡು ಇಂಗ್ಲಾಂಡಿಗೆ ಹೊರಟು ಹೋದುದೂ ಇದೆ. ಈ ಬದಲಾವಣೆ ರಾಷ್ಟ್ರದ ಸಾಲಿಗೆ ಅಭಿಮಾನಪಡತಕ್ಕ ವಿಷಯ. ಆದರೆ ಸುದ್ದಿ ನಿರ್ಮಾಪಕರು ಈ ಸಂದರ್ಭದಲ್ಲಿ ತಮ್ಮ ಕಲಾನೈಪುಣ್ಯ ಪ್ರದರ್ಶಿಸದೆ ಬಿಡಲಿಲ್ಲ. ನವಢಿಲ್ಲಿಯಲ್ಲೆಲ್ಲಾ ನಡುಗಾಲ ಸರಕಾರೀ ಮಂತ್ರಿಗಳ ಕುರಿತು ಹಲವು ವಿಧದರಮ್ಯ ವಾರ್ತೆಗಳು ಹರಡಿವೆ. ಆವುಗಳಲ್ಲಿ ಕೆಲವನ್ನಿಲ್ಲಿ ಕೊಡಲಾಗಿದೆ:-ಪಂಡಿತ ನೆಹರುಗಳು ತನ್ನ ಯುರೋಪಿಯನ್ ಕಾರ್ಯದರ್ಶಿಗಳನ್ನು ಕೆರಿಸಿಕೊಂಡು, ಪತ್ರವೊಂದನ್ನು ತಡಮಾಡಲು ಕಾರಣವೇನೆಂಬುದಕ್ಕೆ ಉದಾಹರಣೆ ಕೊಡತಕ್ಕದ್ದೆಂದು ಆಜ್ಞಾಪಿಸಿದರು; ಮಿ. ಆಸಫ್ ಆಲಿಗಳು ತನ್ನ ಕಾರಿನಲ್ಲಿ ಕುಳಿತು ದಿನಂಪ್ರತಿ ನಗರದ ಸುತ್ತು ತೆಗೆದು ಕಾರಿನಲ್ಲಿದ್ದಂತೆಯೇ ಜನರ ದೂರು ಹವಾಲೆಗಳ ಅರ್ಜಿಗಳನ್ನು ಪಡೆಕೊಂಡು ಆಲ್ಲಿಯೇ ಅವುಗಳಿಗೆ ಆಜ್ಞೆಯನ್ನು ಕೊಡುವ ಸಂಪ್ರದಾಯ ಏರ್ಪಡಿಸಿಕೊಂಡಿದ್ದಾರೆ. ನವಢಿಲ್ಲಿಯ ಒಂದು ಪೋಲೀಸ್ ಸ್ಟೇಶನಿಗೆ ಸರ್ದಾರ್ ಪಟೇಲರು ಅಕಸ್ಮಾತ್ ಭೇಟಿಕೊಟ್ಟು ರಿಕಾರ್ಡುಗಳನ್ನೆಲ್ಲಾ ಕಸಿಯಿಮಾಡಿ ಬಂದರು. 18 ತಿಂಗಳಿಂದ ಮನೆ ಹುಡುಕಿ ಸೋತವರೊಬ್ಬರು ಶರಚ್ಚಂದ್ರ ಬೋಸರು ಹೋಗುತ್ತಿದ್ದಾಗ ಅವರ ಕಾರನ್ನು ತಡೆದು ಅಡ್ಡಕ್ಕೊಯ್ದು, ತನಗೆ ಕೂಡಲೇ ವಸತಿಯೊದಗಿಸಿ ಕೊಡಬೇಕೆಂಬ ಅರ್ಜಿ ಕೊಟ್ಟರು. ಮತ್ತೊಂದು ಗಾಳಿ ಸುದ್ದಿಯೆ: ಪಂಡಿತ ನೆಹರುಗಳ ಅಳಿಯ ಫಿರೋಜ್ ಗಾಂಧಿ ಒಬ್ಬ ಅಮೇರಿಕನ ನೊಡನೆ ಮಾತಾಡುತಿದ್ದಾಗ" ಹಿಸ್ ಎಕ್ಸೆಲ್ಲೆನ್ಸಿಗೆ ಸಾಕಷ್ಟು ಸಂದರ್ಭದೊರೆತರೆ ಆವರು ಮಹತ್ಕಾರ್ಯಗಳನ್ನು ಸಾಧಿಸಬಲ್ಲರು" ಎಂದು ಅಮೇರಿಕನನೆಂದನಂತೆ. "ನಿಮ್ಮ ಎಕ್ಸೆಲ್ಲೆನ್ಸಿಯನ್ನು ಇನ್ನಾರು ಕೇಳುತ್ತಾರೆ?" ಎಂದು ಫಿರೋಜ್ ಗಾಂಧಿ ತಾತ್ಸಾರದ ನಗೆ ಬೀರಿದರಂತೆ. ಅಮೇರಿಕನನಿಗೆ ಆಶ್ಚರ್ಯವಾಗಿ "ಹಾಗಾದರೆ? ನೀವು ನಿಮ್ಮ ಪ್ರೀತಿಯ ವಿದೇಶ ಮಂತ್ರಿಯನ್ನು ಗೌರವಿಸಲೇಬೇಕು ತಾನೆ?" ಎಂದನಂತೆ. ಆಗ 'ಹಿಸ್ ಎಕ್ಸೆಲ್ಲೆನ್ಸಿ'ಯೆಂದು ಅಮೇರಿಕಾನನು ಸಂಬೋಧಿಸಿದುದು ಪಂಡಿತ ನೆಹರು ವನ್ನೆಂದೂ ಪದ್ಧತಿಯಂತೆ ವೈಸರಾಯರನ್ನೇ ಹೇಳುತ್ತಾನೆಂದು ಭಾವಿಸಿ ತಾನು ಪ್ರಸಾದ ಮಾಡಿದೆನೆಂದೂ ಗೊತ್ತಾಗಿ ಫಿರೋಜ್ ಗಾಂಧಿ ನಾಚಿಕೊಂಡರಂತೆ. ಭಾರತೀಯರಲ್ಲಿ ಎಂತೆಂತಹ ಕಲ್ಪನಾ ಕಥೆ ಕಟ್ಟುವ ಪ್ರತಿಭಾವಂತರಿದ್ದಾರೆ! ಆದರೆ ಒಂದು ಮಾತು ಸತ್ಯ, ಕಾಂಗ್ರೆಸ್ ಪ್ರಮುಖರು ಮಂತ್ರಿಗಳಾದೊಡನೆಯೇ "ರಾಜದ್ರೋಹಿ"ಗಳಾಗಿದ್ದ ತಮ್ಮ ಕುರಿತು ಆ ಕಾಲದಲ್ಲಿ ಏನೆಲ್ಲಾ ರಿಕಾರ್ಡು ಮಾಡಿದ್ದರೆಂಬುದನ್ನು ನೋಡಬೇಕೆಂದು ಶೋಧಿಸಿದಾಗ ತುಂಡು ಕಾಗದವೂ ಸಿಕ್ಕಲಿಲ್ಲವಂತೆ. ಇವರು ಮಂತ್ರಿಗಳಾಗುತ್ತಾರೆಂದಾದೊಡನೆಯೇ ಅವನ್ನೆಲ್ಲಾ ಸುಟ್ಟು ಬಿಡಲಾಗಿದೆಯೆಂದು ತಿಳಿದುಬಂತು. ಆ ರಿಕಾರ್ಡು ಇವರೂ ಅಲ್ಲಿ ಒಟ್ಟೊಟ್ಟಿಗಿಡಿದ್ದರೆ ಈ ದೇಶ ಭಕ್ತರೆಲ್ಲಾ ಕೇಡಿ 'ಮಂತ್ರಿಗಳು' ಆನ್ನಿಸುತಿದ್ದರು!

oo oo oo

ಕೆಲ್ಕತ್ತಾ ಗಲಭೆಯಲ್ಲಿ ಸಿಕ್ಖರು ಪ್ರಾಮುಖ್ಯ ಭಾಗವಹಿಸಿದ್ದರೆಂದು ನೀನೇನೋ ಅದ್ಭುತ ರಮ್ಯ ವಾರ್ತೆಗಳು ದೇಶ ತುಂಬಾ ಹರಡಿವೆ ಆ ಮೇಲೂ ಸಿಕ್ಖರು ಮುಸಲ್ಮಾನರನ್ನು ಸದೆಬಡಿಯುವದಕ್ಕಾಗಿ ಶಸ್ತ್ರಾಸ್ತ್ರಗಳನ್ನು ಆಲ್ಲಲ್ಲಿ ಕೂಡ ಸಾಕಷ್ಟಿರುವರೆಂಬ ವಾರ್ತೆ ಹರಡಿತ್ತು. ಈ ಕುರಿತು ಮಿ. ಸುಹ್ರವರ್ದಿಗಳು ಸ್ವತಃ ಶೋಧ ನಡಿಸಿ ಇವೆಲ್ಲಾ ವಾರ್ತೆಗಳು ಪೂರ್ತಿ ನಿರಾಧಾರವಾದುವೆಂದೂ ಸಿಕ್ಖರು ಹಿಂದೂ-ಮುಸ್ಲಿಂ ಜಗಳದಲ್ಲಿ ತಟಸ್ಥರಾಗಿ ಉಳಿಯಲು ಯತ್ನಿಸಿದ್ದಾರೆಂದೂ ದೊಂಬಿಯ ವೇಳೆ ತಮ್ಮ ಹೆಂಗಸರು ಮಕ್ಕಳ ಪ್ರಾಣ ರಕ್ಷಣೆಗಾಗಿ ಅವರು ವಾಹನಗಳಲ್ಲಿ ತಿರುಗುತಿದ್ದುದೆಂದೂ 5000 ಮುಸ್ಲಿಂ ಪ್ರಾಣಗಳನ್ನಾದರೂ ಅವರು ರಕ್ಷಿಸಿರಬೇಕೆಂದೂ ಪ್ರಕಟಿಸಿಕೊಟ್ಟಿದ್ದಾರೆ. ಲೀಗ್ ಪ್ರಧಾನಿ ಸುಹ್ರವರ್ದಿಗಳು ಒಳಗಿಂದೊಳಗೆ ಸಿಖ್ಖರನ್ನೊಲಿಸಿಕೊಂಡು ಹಿಂದುಗಳಿಗೆ ಮಾತ್ರ ಪ್ರತೀಕಾರ ಮಾಡುವ ಜೆಜಿಕೆಯೆಲ್ಲಿದ್ದಾರೆಂದೂವಾರ್ತೆಯೆದ್ದಿದೆ.

oo oo oo

[ಇನೇ ಪುಟ ನೋಡಿರಿ]

THE MAHARASHTRA APEX BANK, LTD., UDIPI

Notice is hereby given that the Register of Members and share transfer books of the Bank will remain closed from 17th October, 1946 to 15th November 1946 (both days inclusive).

By order

U. A. Pai,
Managing Director.

Ramanjaneya Buildings,
UDIPI.
20th September, 1946

ದೇಶಕಾಲಕ್ಕೊಪ್ಪುವ ನವೀನ ಪುಸ್ತಕ

ಸ್ವಾತಂತ್ರವೀರ ಸಾವರಕರರು

ಹಿಂದೂ ಸಂಸ್ಕೃತಿ ಮತ್ತು ಹಿಂದೂರಾಷ್ಟ್ರಕ್ಕಾಗಿ ಸರ್ವತ್ಯಾಗ ಮಾಡಿದ ವೀರ ಸಾವರಕರರ ಉಜ್ವಲಜೀವನ ಚರಿತ್ರೆ

ಮೈಜುಮ್ಮೆನ್ನಿಸುವ ಹಲವು ಸನ್ನಿವೇಶಗಳು!

ವಿಚಾರ ಕ್ರಾಂತಿಯನ್ನುಂಟುಮಾಡುವ ಘಟನೆಗಳು!

ಪ್ರಸಿದ್ಧ ಹಿಂದೀ ಲೇಖಕ ಪಂಡಿತ ಚಂದ್ರಗುಪ್ತ ವೇದಾಲಂಕಾರ ಇವರ ಹಿಂದೀ ಗ್ರಂಥದ ಕನ್ನಡ ಅನುವಾದ.

ಕನ್ನಡಿಸಿದವರು-ಶ್ರೀಮತಿ ಇಂದಿರಾಬಾಯಿ,
ಮೈಸೂರು, ಸಂಸ್ಥಾನ.

ಬೆಲೆ ಬರೇ ರೂ. 1—4—0

ರೂ. 1—8 0 ಕಳಿಸಿದರೆ 1 ಪ್ರತಿಯನ್ನು ರಿಜಿಸ್ಟರ್ ಪೋಸ್ಟಿ ಕಳಿಸಲಾಗುವುದು.

ಪ್ರತಿಗಳು ಸಿಗುವ ಸ್ಥಳಗಳು:—

1 ಸ್ಕೂಲ್ ಬುಕ್ ಕಾಂಪನಿ, ಮಂಗಳೂರು. 2. ಸತ್ಯಶೋಧನ ಪುಸ್ತಕ ಭಂಡಾರ, ಬೆಂಗಳೂರು. 3. ನವಭಾರತ ಪುಸ್ತಕ ಭಂಡಾರ, ಉಡುಪಿ. 4. ಪಾವಂಜೆ ಗುರುರಾವ್, ಉಡುಪಿ. 5. ನವಯುಗ ಆಫೀಸು, ಉಡುಪಿ.

ಮದರಾಸು ಸ್ಕೂಲ್ ಬುಕ್ ಮತ್ತು ಲಿಟರೇಚರ್ ಸೊಸೈಟಿಯವರಿಂದ ಬಹು ಮಾನಿತವಾದ ಉಪಯುಕ್ತ ಗ್ರಂಥ

ಪ್ರಸವ ವಿಜ್ಞಾನ

ಲೇಖಕರು
ಡಾ|| ದೊಡ್ಡೇರಿ ವೆಂಕಟಗಿರಿರಾವ್.
ಸುಮಾರು ಮೂವತ್ತು ಚಿತ್ರಗಳಿವೆ.
ವಿ. ಪಿ. ಕಳಿಸುವುದಿಲ್ಲ. ರೂ. ೩-೪-೦ನ್ನು ಮನಿಯಾರ್ಡರ್ ಮಾಡಿದರೆ ರಿಜಿಸ್ಟರ್ ಮೂಲಕ ಕಳಿಸಲಾಗುವುದು. ಪುಸ್ತಕ ವ್ಯಾಪಾರಿಗಳಿಗೆ ರಿಯಾಯಿತಿಯುಂಟು ಮಾರಾಟಗಾರರು

ಮೋಡರ್ನ್ ಔಷಧಾಲಯ
ದೊಡ್ಡ ಬಳ್ಳಾಪುರ (ಬೆಂಗಳೂರು)

ಆರೋಗ್ಯ ಪಾಲನೆ—
ವರ್ಧನೆಯ ಕೈಗನ್ನಡಿ

ಅಂತರಂಗ

ಆಯುರ್ವೇದ ಸಂಚಿಕೆ

ಪ್ರತಿ ಮನೆಯಲ್ಲೂ ಇರಲೇ ಬೇಕಾದ ಪ್ರತಿಯೊಬ್ಬರೂ ಓದಲೇ ಬೇಕಾದ ಹೊಸಮಾದರಿಯ ವಿಶಿಷ್ಟ ಸಂಚಿಕೆ

ಬೆಲೆ ರೂ. 1-0-0. ಟಿ. ಖ. 0-4-0.

—ಬರೆಯಿರಿ:—

1. ಅಂತರಂಗ ಆಫೀಸು, ಉಡುಪಿ.
2. ನವಭಾರತ ಬುಕ್ ಡಿಪೊ, ಉಡುಪಿ.
3. S. N. ಸ್ಕೂಲ್ಸ್ ಏಜನ್ಸಿ, ಉಡುಪಿ.

The Canara Banking Corporation Limited.
(Incorporated in British India, with limited Liability.)
Estd: 1906
Head Office: **UDIPI**, South Kanara.

CAPITAL

Authorised	... ...	Rs. 25,00,000
Issued & Subscribed	...	,, 16,00,000
Paid up	... ...	,, 15,64,715
Reserves Over	... ...	,, 4½ Lakhs

Branches at– Bombay, Madras, Bangalore, Coimbatore, Salem, Calicut, Hubli, Mysore, Cochin, Mangalore, Madras etc., etc.
Banking Business of Every Description Transacted.

ನವಯುಗ
ಉಡುಪಿ, ಗುರುವಾರ, ೧೦-೧೦-'೪೬

ಪಾನ ನಿಷೇಧ

ಸೇಲಮ್, ಚಿತ್ತೂರು, ಕಡಪಾ, ಉತ್ತರ ಆರ್ಕಾಟು, ಕೊಯಮುತ್ತೂರು, ಕರ್ನೂಲು, ಅನಂತಪುರ, ಬಳ್ಳಾರಿ–ಈ ಎಂಟು ಜಿಲ್ಲೆಗಳಲ್ಲಿ ಇದೇ ತಿಂಗಳ ೧ನೇ ತಾರೀಕಿನಿಂದ ಮದ್ಯಪಾನ ನಿಷೇಧ ಜಾರಿಗೆ ಬಂದಿದೆ. ಇವೆಂಟರ ಪೈಕಿ ಮೊದಲನ ನಾಲ್ಕು ಜಿಲ್ಲೆಗಳು. ರಾಜಾಜೀ ಮುಂತ್ರಿಮಂಡಲವನಿದ್ದ 1937ರಲ್ಲೂಮ್ಮೆ ಪಾನ ನಿಷೇಧದ ಅನುಭವ ಪಡೆದಿದ್ದುವು. ಆದರೆ ಕಾಂಗ್ರೆಸ್ ಸರಕಾರ ರಾಜಿ ಕೊಟ್ಟು ಸಲ ಹೆಗಾರ ಸರಕಾರ ಬಂದ ಮೇಲೆ ಭಾಗಗಳಲ್ಲಿ ಸುರಾರಾಕ್ಷಸ ಪುನರವತಾರವಾಗಿದ್ದ. ಈ ಬಾರಿಯ ಕಾಂಗ್ರೆಸ್ ಮಂತ್ರಿಮಂಡಲವು, ಅಧಿಕಾರಾರೂಢವಾದ ಅಲ್ಪಾವಧಿಯಲ್ಲೇ, ಒಂದೇ ಸಲ ಎಂಟು ಜಿಲ್ಲೆಗಳನ್ನೊಣಗಿಸುವ ಧೈರ್ಯಗೊಂಡುದು ಅಭಿನಂದನೀಯ. ಇನ್ನು ಮುಂದೆ ವರುಷಕ್ಕೆಂಟು ಜಿಲ್ಲೆಗಳಂತೆ ಒಣಗಿಸುತ್ತಾ ಹೋಗಿ ಮೂರು ವರುಷಗಳಲ್ಲಿ ಇಡೀ ಮದ್ರಾಸ್ ಪ್ರಾಂತ್ಯದಲ್ಲೇ ಸುರಾಪಾನಕ್ಕೆ ಬಹಿಷ್ಕಾರ ಬೀಳಲಿದೆ; 1950 ಬರುವಾಗ ಮದ್ರಾಸ್ ಪ್ರಾಂತ್ಯದಲ್ಲಿ ಮದಿರೆಯಿಲ್ಲವೆಂದಾಗಲಿದೆ. ಇದೊಂದು ವಿಶೇಷಾನುಭವ; ಚರಿತ್ರಾರ್ಹ ಘಟನೆ.

ತನ್ನ ಉತ್ಪತ್ತಿಯಲ್ಲಿ ಭೂಕಂದಾಯ ಕ್ಕಿಂತಲೆಯದಾದ ಅಬ್ಕಾರಿ ಉತ್ಪನ್ನವನ್ನು ಕಳಕೊಳ್ಳಲು ಹಜ್ಜೆ ಮುಂದಿಟ್ಟು ಮದ್ರಾಸ್ ಸರಕಾರವೆಂತಹ ಹೊರಿಗೆ ತಲೆಯೊಡ್ಡಿದೆ ಎಂಬುದನ್ನು ವರ್ಣಿಸಿ ಹೇಳಬೇಕಾಗಿಲ್ಲ. ಅವಮಲು ತ್ಯಾಗದಿಂದ ಜನತೆಗಾಗುವ ವ್ಯಯೋಜನವೆಷ್ಟೊಡನೆ ಹೋಲಿಸಿದರೆ ಸರಕಾರಕ್ಕೆ ಬೀಳುವ ನಷ್ಟವು ಕಡಿಮೆಯೆಂಬಷ್ಟಿದು. ಆದರೆ ಆ ಲಾಭ ದೊಡ್ಡದಿದ್ದರೂ ಅವ್ಯಶ್ಯವಿಸೆ; ಈ ನಷ್ಟ ಮಾತ್ರ ಕಣ್ಮುಂದೆ ಪ್ರತ್ಯಕ್ಷವಾಗಲಿದೆ. ಮಾತ್ರವಲ್ಲ, ಪಾನನಿಷೇಧದಿಂದ ಆರ್ಥಿಕ ಲಾಭ ಹೊಂದುವ ಜನರ ಮೇಲೆ ಮಾತ್ರವೇ ನಷ್ಟ ಭರ್ತಿಯಕರ ಕಂದಾಯಗಳು ಬೀಳುವಂತಿಲ್ಲ. ಹೀಗಾಗಿ ಪ್ರಾಂತ್ಯದ ಆರ್ಥಿಕ ಸ್ಥಿತಿ ಒಮ್ಮೆ ಕಂಸಿಸಬಹುದು; ಜನರ ದೂರು ದೂಷಣೆಗಳೇಳಬಹುದು. ಆದೇ ಸಮಯದಲ್ಲಿ ಯಾರ ಸ್ಥಿತಿಸುಧಾರಣೆಗಾಗಿ ಈ ಕ್ರಾಂತಿಕಾರಿ ಬದಲಾವಣೆ ಬಂದಿದೆಯೋ ಆ ಅಮಲು ಜೋರರ ಪಾಲಿಗಂತೂ ಈ ಒಕ್ಕಾಯದ ಸ್ವಾಭಿವೃದ್ಧಿಗಿಂತ ಸಾವೇ ಮೇಲೆಂದು ಕಾಣಬಹುದು! ಪಾನ ನಿಷೇಧವಾದ ಕ್ಷೇತ್ರಗಳಿಂದ ಆತ್ಮಹತ್ಯೆಯಂತಹ ವಾರ್ತೆಗಳು ಬರುತ್ತಿರುವುದೇ ಇದಕ್ಕೆ ಸಾಕ್ಷಿ. ಸರಕಾರವು ಇಷ್ಟೆಲ್ಲಾ ನಷ್ಟ ಕಷ್ಟಗಳನ್ನೊಡ್ಡುವದು ಒಂದು ಸದುದ್ದೇಶದ ಸಾಧನೆಗಾಗಿ ಎಂಬುದು ನಿರ್ವಿವಾದ. ಪಾನಾಭ್ಯಾಸವು ಇತ್ತೀಚೆಗೆ ಪ್ರಬಲಿಸುತ್ತಾ ಹೋಗಿದೆ ಎಂಬುದನ್ನೂ, ದೈಹಿಕ, ನೈತಿಕ, ಆರ್ಥಿಕಾವನತಿಯ ಹೊರತು ನಿತ್ಯಲವೇನೊಂದೂ ಅದರಲ್ಲಿಲ್ಲವೆಂಬುದನ್ನೂ ಅಲ್ಲವೆನ್ನುವವರಿಲ್ಲ. ಆದರೆ ಇದೇ ಪರಿಮಾಣದಿಂದ, ಮಿಕ್ಕ ಆನಾಚಾರ, ಅಂಧ ಶ್ರದ್ಧೆ, ದುರ್ಬಟಗಳ ನಿವಾರಣೆಯ ಯೋಜನಗಳನ್ನೇನಾದರೂ ಸರಕಾರ ಕೈಕೊಂಡುದಿದೆಯೇ? ಇಲ್ಲ; ಯಾಕೆಂದರೆ ಹಾಗೆ ಎಲ್ಲವನ್ನೂ ಕೈಕೊಳ್ಳುವದು ಸಾಧ್ಯವೂ ಅಲ್ಲ; ಕಾಂಗ್ರೆಸ್ ಸರಕಾರಕ್ಕೆ ಪಾನ ನಿಷೇಧದಲ್ಲಿರುವಂತಹ ಆತುರ ಕೂಡಾ ಮಿಕ್ಕ ನಿಷೇಧಗಳ ಮಟ್ಟಿಗೆ ಇಲ್ಲ. ಪಾನ ನಿಷೇಧವು ಗಾಂಧಿಜೀಯ ಮೊದಲ ತತ್ವಗಳಲ್ಲೊಂದು; ಕಾಂಗ್ರೆಸಿನ ಅದಿಯಿಂದಿದುವರೆಗಿನ ಸ್ವಾತಂತ್ರ್ಯ ಹೋರಾಟದ ಕಾರ್ಯಕ್ರಮಗಳಲ್ಲೊಂದು. ತಾವು ಯಾವುದಕ್ಕಾಗಿ ದುಡಿಯುತ್ತಾ ಬಂದಿದ್ದರೋ ಕಾಲ ಬಂದಾಗ ಅದನ್ನೇ ಮುಂದಾಗಿ ನಡುವ ಸ್ವಭಾವ ಸಹಜವಾದುದೇ–ಅದ್ದರಿಂದ ಲಾಭ-ನಷ್ಟ, ಉಚಿತಾನುಚಿತತ್ವ ನ್ಯಾಯಾನ್ಯಾಯಗಳ ತುಲನೆ ಮಾಡುವದಕ್ಕಿಂತಲೂ ಹೆಚ್ಚಾಗಿ ಕಾಂಗ್ರೆಸ್ ಸರಕಾರವು ತನ್ನ ತತ್ವವಾಲನೆ ಮಾಡಿಕೊಂಡಿತೆಂದೇ ನಮಗನ್ನಿಸುತ್ತದೆ. ಹೇಗಿದ್ದರೂ, 'ನಿಧಾನಿ ಸಬಹುದಿತ್ತು,' 'ಒಮ್ಮೆಗೇ ನಿರ್ಮೂಲಿಸುವ ಬದಲಿಗೆ ನಿರ್ಬಂಧ ಹಾಕಬಹುದಿತ್ತು' ಎಂದು ತಿದ್ದುಪಡಿ ಸೂಚಿಸುವರಿರಬಹುದು ಹೊರತು ಈ ಸುಧಾರಣೆಯೇ ಅನಗತ್ಯವೆನ್ನುವ ನ್ಯಾಯವಾದಿಗಳಿಲ್ಲವಾಲರು. ಈಗಂತೂ ಪಾನ ನಿಷೇಧದ ಸ್ರಫಮಾಂಕವಾರಂಭವಾಗಿದೆ; ಇನ್ನು ಚರ್ಚೆಗೆ ಅವಕಾಶವಿಲ್ಲ; ಆದನ್ನು ಯಶಸ್ವಿಗೊಳಿಸಲು ಸರ್ವರೂ ನೆರವಾಗಬೇಕಾದುದು ಅಗತ್ಯ.

ಈ ಸಂದರ್ಭದಲ್ಲಿ ದಕ್ಷಿಣ ಕನ್ನಡದ ಮದ್ಯ ಸೇವಕರಿಗೂ, ಆ ಸಂಬಂಧದ ವೃತ್ತಿಗಳನ್ನವಲಂಬಿಸಿರುವವರಿಗೂ ಈಗಲೇ ಎಚ್ಚರಿಕೆ ಕೊಡುವದು ಕಾಲೋಚಿತವಿದೆ. ಮುಂದಿನ ವರುಷವೇ ಈ ಜಿಲ್ಲೆಯ ಸರದಿ ಎಂಬುದನ್ನು ಎಲ್ಲರೂ ತಿಳಿದಿರಲಿ. ಆಕ ಸ್ಮಾತ್ತಾಗಿ ಹೊ ಜೆಂಡು ಬಂದು ಬಿದ್ದರೂ ಕಲ್ಲುಗುಂಡು ಬಂದು ಬಿದ್ದಂತಾಗಿ ಮನುಷ್ಯ ಸ್ವಭಾವ ದಿಗಿಲುಗೊಳ್ಳುವದು ಸಹಜ. ಆದರೆ ಆ ಆಘಾತದಿಂದ ಸಾವರಿಸಿಕೊಂಡ ಮೇಲೆ ಆ ಘಟನೆಯ ಕಾರಣ ಪರಿಣಾಮಗಳ ಬಗ್ಗೆ ಸಮಚಿತ್ತದಿಂದ ಯೋಚಿಸಿದಾಗ ಆ ಘಟನೆಯ ಹಿಂದೆ ಒಂದು ಸಂಕಲ್ಪವಿರುವುದು ಕಂಡುಬರುತ್ತದೆ. ಆ ಸಂಕಲ್ಪವೇ ಆ ಘಟನೆಯ ಕರ್ತೃವಿನ ಉದ್ದೇಶವಾಗಿರುತ್ತದೆ. ಆ ಉದ್ದೇಶವನ್ನು ಅರಿತಾಗ ಆ ಘಟನೆಯ ಮಹತ್ವ ಅರಿವಾಗುತ್ತದೆ. ಆ ಮಹತ್ವವನ್ನು ಅರಿತಾಗ ಆ ಘಟನೆಯ ಕರ್ತೃವಿನ ಮೇಲೆ ಗೌರವ ಮೂಡುತ್ತದೆ. ಆ ಗೌರವವೇ ಆ ಘಟನೆಯ ಕರ್ತೃವಿನ ಪ್ರತಿಫಲವಾಗಿರುತ್ತದೆ. ಆ ಪ್ರತಿಫಲವನ್ನು ಪಡೆಯಲು ಆ ಕರ್ತೃವು ಆ ಘಟನೆಯನ್ನು ಸೃಷ್ಟಿಸಿರುತ್ತಾನೆ. ಆ ಸೃಷ್ಟಿಯ ಹಿಂದೆ ಆ ಕರ್ತೃವಿನ ಸ್ವಾರ್ಥವಿರುತ್ತದೆ. ಆ ಸ್ವಾರ್ಥ

ನಡುಗಾಲ ಸರಕಾರದೊಳಗೆ ಲೀಗ್ ನುಗ್ಗಬಹುದು!

ನವಢಿಲ್ಲಿಯ ಕಾಂಗ್ರೆಸ್—ಲೀಗ್ ಒಪ್ಪಂದದ ಈ ಬಾರಿಯ ಮಾತುಕತೆಗಳು ವಿಜಯ ಹೊಂದುವ ಲಕ್ಷಣ ಕಾಣುತ್ತಿದೆ; ಆದರೆ ಮುಸ್ಲಿಂ ಲೀಗಿನ ಧೋರಣೆಯರಿತವರು, ಒಪ್ಪಂದವಾಯಿತು ಎಂಬ ನಿಶ್ಚಯಕ್ಕೆ ಬಂದ ಮೇಲೂ ಅದು ಶಾಶ್ವತವಾಗುವದೆಂದು ಭರವಸೆ ಪಡಲು ನಾಧ್ಯವಿಲ್ಲ. ಹೀಗಿರುವಾಗ ಒಪ್ಪಂದವಾದ ಸುದ್ದಿ ಪ್ರಕಟವಾಗುವ ವರೆಗೂ ಆ ಕುರಿತು ಆಶೆ ಕಟ್ಟಿಕೊಳ್ಳಲಾಗುವದಿಲ್ಲ. ಈ ಸಂಚಿಕೆಯೊಂದಿಗೇನೇ ಫಿಲ್ಲ ಮಾತುಕತೆಗಳ ಪರಿನಾಮವೂ ಪ್ರಕಟವಾಗಬಹುದು.

ನವಢಿಲ್ಲಿಯ ಓಡಾಟಗಳು

ಕಳೆದ ಎರಡುಮೂರು ವಾರಗಳಲ್ಲಿ ನೈಸರಂತಾಯ, ಲೀಗ್, ಕಾಂಗ್ರೆಸ್ ಮತ್ತಿತರ ಪ್ರಮುಖರೊಳಗೆ ನಡೆದಿದ್ದ ವಹಿವಾಟುಗಳು ವಿಶೇಷ ರೀತಿಯವು. ಮಿ. ಜಿನ್ನರು ನಾಲ್ಕು ಬಾರಿ ಲೋರ್ಡ್ ವೇವೆಲ್‌ರ ಭೇಟಿ ಮಾಡಿದ ಮೇಲೆ ಲೀಗಿನ 'ಪ್ರತ್ಯಕ್ಷ ಹೋರಾಟ ಸಮಿತಿ'ಯ ಕೊನೆಗೊಂದು ಹೊಸ ಸೂಚನೆಯನ್ನು ನೈಸರಾಯರಿಗೆ ಕಳುಹಿಕೊಟ್ಟತೆಂದು ತಿಳಿದುಬಂದತ್ತದೆ. ನೈಸರಾಯರು ಬ್ರಿಟಿಷ್ ಸರಕಾರ ಮತ್ತು ನೆಹರು ಮಂಡಲದೊಡನೆ ಈ ಕುರಿತು ಅಭಿಪ್ರಾಯ ವಿನಿಮಯ ನಡೆಸಿಪ್ಪರು. ಕೊನೆಗೆ ಲೀಗಿಗೆ ವೇವೆಲರ ಉತ್ತರ ಬಂತೆಂದೂ ತಿಳಿದುಬರುತ್ತದೆ. ಲೀಗಿನ ಹೋರಾಟ ಸಮಿತಿಯು ಆಗಾಗ ಸಭೆ ಕೂಡುತಿದ್ದುದು ನಾತ್ರವಲ್ಲ; ಇದೇ ತಾ 7ಂದ ಲೀಗ್ ಕಾರ್ಯಕಾರೀ ಸಮಿತಿಯೂ ನವಬಲ್ಲಿಯಲ್ಲಿ ಸೇರಿ ವೈಸರಾಯರ ಉತ್ತರವನ್ನು ಪರ್ಯಾಲೋಚಿಸಕತ್ತಿದೆ.

ಭೋಪಾಲದ ನವಾಬರ ಮಧ್ಯಸ್ಥಿಕೆ

ಈ ಬಾರಿ ಫಿಲ್ಲಿಗೋಡಿ ಬಂದು ಸಂಧಾನಕ್ಕಾಗಿ ವಿಶೇಷ ಪರಿಶ್ರಮ ವಹಿಸಿದವರೆಂದರೆ ಭೋಪಾಲದ ನವಾಬರು. ಅವರು ವೈಸರಾಯಿ, ಜಿನ್ನಾ, ಗಾಂಧಿ, ನೆಹರು, ವಲ್ಲಭ [illegible] ಅವರ ಬಳಿಗೆ ಪ್ರತ್ಯಕ್ಷ ಓಡಾಡಿ ಒಣಗುತಿದ್ದ ಸಂಧಾನತರು ಚಿಗುರುವಂತೆ ಮಾಡಿದ್ದರು. ತಾ 5ರಲ್ಲಿ ನೆಹರು ಮತ್ತು ಜಿನ್ನರನ್ನು ತನ್ನಲ್ಲಿಗೆ ಔತಣ ಕ್ಕಾಮಂತ್ರಿಸಿ ಮುಖಾಮುಖಿ ಸಮಿಲ ಚರ್ಚೆ ನಡೆಯುವಂತೆ ಮಾಡಿದ್ದರು ತಾ 7 ಮತ್ತು 8ರಲ್ಲಿ ನವಾಬರ ಓಡಾಟ ವಿಶೇಷವಿತ್ತು. ನೆಹರುಗಳು ಗಾಂಧಿ, ವಲ್ಲಭಾಯಿ, ಅಜಾದ್ ಮುಂತಾದವರ ಅಭಿಮತ ಪಡೆದಿದ್ದಾರೆ; ಪುನ: ನಹರು-ಜಿನ್ನಾ ಭೇಟಿಯಾಗುವದೆಂದು ಕಾಣುತ್ತದೆ. ತಾ 9ನೇ ರಾತ್ರಿಯಲ್ಲಿ ಕೊನೆಯ ನಿರ್ಧಾರವಾಗಿರಬೇಕು.

ಸಂಗತಿ ಹೇಗಿದೆ?

ಇವ್ವರ ವರೆಗೆ ಎಲ್ಲವೂ ಅತ್ಯಂತ ಗುಟ್ಟಿನಲ್ಲೇ ಇದೆ; ಆದರೆ ನಾಧಾರ ಊಹೆಗಳೆದ್ದಿವೆ ಹರಡಿವೆ. ಹೋರಾಟಕ್ಕೆ ಲೀಗ್ ಪ್ರಮುಖರೂಢ ತಯಾರಿರುವಂತೆ ಕಾಣುವದಿಲ್ಲ; ಆವರಿಗಾ ಕುರಿತು ಇತ್ತರಲ್ಲೇ ಆಪ್ರಿಯಾನುಭವವಾಗಿರುವುದರಿಂದ ಎಲ್ಲರೂ ಹಿಂಜರಿಯುತಿದ್ದಾರೆ. ಮಿ. ಜಿನ್ನರಿಗೆ ಕೆಳಗಿಳಿಯಲೊಪ್ಪಿಗೆಯಿಲ್ಲವಾದರೂ ಆವರ ಅನುಯಾಯಿಗಳ ಒತ್ತಾಯದಿಂದ ಮೃದುತ್ವಕ್ಕೆ ಬಂಪಂತಿದೆ. ಆದ್ದರಿಂದ ಸುಧ್ಯ ಹಾದಿಯಾಗಿ ರಾಷ್ಟ್ರೀಯ ಮುಸಲ್ಮಾನನ ಬದಲಿಗೆ ಲೀಗೇತರ ಸ್ವತಂತ್ರ ಮುಸಲ್ಮಾನೊಬ್ಬನನ್ನು ಕೇಂದ್ರ ಸರಕಾರಕ್ಕೆ ಸೇರಿಸಬಹುದು ಪ್ರತಿಯೊಂದು ವಿಭಾಗದಲ್ಲೂ ಮಂತ್ರಿ ಮಂಡಲದ ಮಿಶ್ರ ಜವಾಬ್ದಾರಿಯೆಂಬುದಕ್ಕೂ ಮಿ. ಜಿನ್ನರೊಪ್ಪಬಹುದೆಂದು ಕಾಣುತ್ತದೆ. ಆದರೆ ಜಾತೀಯ ಪ್ರಶ್ನೆಗಳು ಬರುವಾಗ ಎರಡು ಪ್ರಮುಖ ಜಾತಿಗಳ ಸದಸ್ಯರ ಒಪ್ಪಿಗೆಬೇಕೆಂಬ ವಾದವನ್ನು ಮಿ. ಜಿನ್ನರು ಬಿಡುವದು ಅಸಂಭವ. ಮುಖ್ಯ ಜಾತಿಗಳನ್ನು ಕಾಂಗ್ರೆಸ್ ಮತ್ತು ಲೀಗುಗಳೊಳಗೆ ಸಮಾನವಾಗಿ ಹಂಚಬೇಕೆಂದು ಜಿನ್ನರ ಒತ್ತಾಯ. ಗೃಹ, ಉದ್ಯೋಗ ಸರಬರಾಯಿ, ಸಂಜಾರ ಖಾತೆಗಳು ತಮಗೆಬೇಕೆಂದು ಜಿನ್ನರ ಆಗ್ರಹವಿದೆಯಂತೆ. ನೆಹರುಗಳ ವಿದೇಶ ಸಂಬಂಧ ಖಾತೆ, ಬಲದೇವಸಿಂಗರ ರಕ್ಷಣಾ ಖಾತೆಗಳಿಗೇನೂ ಚ್ಯುತಿಯಿಲ್ಲ. ರಾಜಾಜಿ, ವಲ್ಲಭಭಾಯಿ, ಆಸಫ್ ಅಲಿ ಮೊದಲಾದವರು ಉದ್ಯೋಗಗಳು ಲೀಗಿಗೆ ಬೇಕಾಗಿವೆ. ಆಂತೆಯೇ ಮಂತ್ರಿಮಂಡಲದ ಉಪಾಧ್ಯಕ್ಷ ಸ್ಥಾನವನ್ನು ತನಗೀಯತಕ್ಕದ್ದೆಂದು ಜಿನ್ನರ ಆಗ್ರಹವಿದೆಯಂತೆ. ರಾಜೀಯಾದ ಸಂದರ್ಭದಲ್ಲಿ ಆಸಫಾಲಿ ಮತ್ತು ರಾಜಾಜಿ ತಮ್ಮ ಸ್ಥಾನಬಿಡಬೇಕಾದೀತು. ನಾಜಿವುದ್ದೀನ್, ಲಿಯಾಖತ್ ಅಲಿಖಾನ್, ಅಬ್ದುಲ್‌ರಾಬ್ ನಿಸ್ತಾರ್, ಹುಸ್ಸೇನ್ ಇಮಾಮ್, ಸರ್. ಫಿರೋಜ್‌ಖಾನ್-ಲೀಗ್ ಕಡೆಯಿಂದ ನಡುಗಾಲ ಸರಕಾರದ ಸದಸ್ಯರಾಗಬಹುದು. ಜಿನ್ನರು ಸ್ವತಃ ಬರುವದೂ ಸಂಭವನೀಯ. ಅಂತೂ ಹತ್ಯರಲ್ಲಿ ಏಳಂಶ ಈಗ ಸಂಧಾನದ ಆಶೆಕಾಣುತ್ತಿದೆ.

ಭೀಕರ ರೈಲ್ ಅವಘಡ

ಇದೇ ತಾ 4ನೇ ಮಂಜಾನೆ ಮದ್ರಾಸಿನಿಂದ ಕಲ್ಕತ್ತಕ್ಕೆ ಹೊರಟಿದ್ದ ಮದ್ರಾಸ್-ಕಲ್ಕತ್ತಾ ಮೈಲ್ ಬಂಡಿಯು ಮದ್ರಾಸಿನಿಂದ 182 ಮೈಲು ದೂರದ ಓಂಗೊಲೆ ಸ್ಟೇಶನಿನಲ್ಲಿ 'ಗುಡ್ಸ್‌ಟ್ರೈನ್' ಒಂದರ ಎಂಜಿನಿಗೆ ಫಿಕ್ಕಿ ಹೊಡೆದು ಭಯಂಕರ ಅವಘಡವಾಗಿ ಡ್ರೈವರ್ ಸಮೇತ 36 ಮಂದಿ ಮಡಿದು 81 ಜನ ಜಖಂಗೊಂಡಿದ್ದಾರೆ.

ಬ್ರಿಟಿಷ್ ಆಪ್ರಾಗತಿಕರು

ಇಂಗ್ಲಾಂಡಿನ ಕನ್ಸರ್ವೇಟಿವ್ ಪಕ್ಷದ ವಾರ್ಷಿಕ ಸಮ್ಮೇಲನವು ಕಳೆದ ವಾರ ಬ್ಲೇಕ್ ಪೂಲಿನಲ್ಲಿ ಜರಗಿತು.. ಹಿಂದುಸ್ಥಾನಕ್ಕೆ ಸ್ವಾತಂತ್ರ್ಯ ಕೊಡುವ ಮೊದಲು ಅಲ್ಪ ಸಂಖ್ಯಾಕರ ಮತ್ತು ಆಶ್ರಿತ ರಾಜರ ಹಿತ ಸಂಬಂಧಗಳ ರಕ್ಷಣೆ ಮತ್ತು ಬ್ರಿಟಿಷರ ಜವಾಬ್ದಾರಿ ನಿರ್ವಹಣದ ವ್ಯವಸ್ಥೆ ಮಾಡಿಕೊಳ್ಳಬೇಕೆಂಬ ನಿರ್ಧಾರವಾಯಿತು. ಮಿ. ಡೊಗ್ಲಾಸ್ ಕೀಡರು ಬ್ರಿಟಿಷ್ ಟೋರಿಗಳ ಮೇರ ಹಿಂದೀಯರಿಗೆ ತೀವ್ರ ಜಿರುಪ್ಪೆಯಿದೆಯೆಂದು ತಿಳಿಸಿ, ಹಿಂದೀ ಸ್ವಾತಂತ್ರ್ಯವನ್ನೂ ಕಾಂಗ್ರೆಸನ್ನೂ ಸಮರ್ಥಿಸಿ ಸ್ಫೂರ್ತಿಯ ಭಾಷಣವಿತ್ತರು. ಚರ್ಚಿಲ್ಲರು ಕೂಲಿಗಾರ ಸರಕಾರದ ಧೋರಣೆಯನ್ನು ಕಟುವಾಗಿ ಖಂಡಿಸಿ, ರತ್ಯದ ಧೋರಣೆಯನ್ನೂ ಟೀಕಿಸಿದರು. ಬ್ರಿಟಿಷ್ ಸಾಮ್ರಾಜ್ಯವೆಂಬ ಹೆಡಗವನ್ನು ಕೂಲಿಗಾರ ಸರಕಾರ ಮುಳುಗಿಸುತ್ತಿದೆಯೆಂದೂ, ಬ್ರಿಟಿಷ್ ದ್ರೋಹಿ ಕಾಂಗ್ರೆಸಿಗರಿಗೆ ಅಧಿಕಾರ ಕೊಟ್ಟದ್ದೂ, ಪೂರ್ಣ ಸ್ವಾತಂತ್ರ ಹೊಂದುವ ಅವಕಾಶ ಕೊಟ್ಟದ್ದು ತಪ್ಪೆಂದೂ ಚರ್ಚಿಲ್ಲರು ಖಾದ. ವಿಂಟರ್‌ಟನ್ ಮೊದಲಾದವರೂ ಹಿಂದೀ ಸ್ವಾತಂತ್ರ್ಯ ಮತ್ತು ಕಾಂಗ್ರೆಸನ್ನು ಖಂಡಿಸಿದರು.

ಇರಾನಿನಲ್ಲಿ

ಸರಹದ್ದು ವ್ಯಾಂತ್ಯದವರು ದಂಗೆಯೆದ್ದು ಒಂದೊಂದೇ ನಗರಾಕ್ರಮಣ ಮಾಡಿಹತ್ತಿದ್ದಾರೆ. ಎಣ್ಣೆವಲಯಕ್ಕೂ ಆಪಾಯ ತಟ್ಟಬಹುದು.

ಹೆಲಸ್ಕೈನಿನೊಳಗೆ

100000 ಯೆಹೂದಿಗಳ ಪ್ರವೇಶಕ್ಕೆ ಅನುಮತಿಕೊಡಬೇಕೆಂದೂ, ಯೆಹೂದೀ ಪ್ಯಾಂತ್ಯವೊಂದನ್ನು ನಿರ್ಮಿಸುವದು ವಿಹಿತವೆಂದೂ ಅಮೇರಿಕಾಧ್ಯಕ್ಷ ಟ್ರುಮೇನರು ಸೂಚಿಸಿದುದಕ್ಕೆ ಬ್ರಿಟಿಷ್ ಪ್ರಧಾನಿ ಅಟ್ಲಿಯವರು ಅಸಮ್ಮತಿಕೊಟ್ಟಿದ್ದಾರೆ. ಈ ಕಲಹವು ಅಮೇರಿಕಾ-ಬ್ರಿಟನುಗಳೊಳಗೆ ತೀವ್ರಭಿನ್ನಾಭಿಪ್ರಾಯವೆದ್ದಿದೆ.

ಕುಂಬಳೆ—ಕುಂಬಳೆ ಫಿರ್ಕಾದ 25 ಗ್ರಾಮಗಳ ಅಭಿವೃದ್ಧಿ ಯೋಜನೆಗಾಗಿ ಸಾರ್ವಜನಿಕ ಕೆಲಸಗಳಲ್ಲಿ ಹೆಚ್ಚಿನ ಸೇವೆ ಸಲ್ಲಿಸಿದ್ದ ಶ್ರೀ. ಬಾಬು ಕಟ್ಟರು ಡೆವಲಪ್‌ಮೆಂಟ್ ಆಫೀಸರರಾಗಿ ನೇಮಿಸಲ್ಪಟ್ಟರುವರು. ಶ್ರೀ. ತಿಟ್ಟರು ತಾ 2ರಲ್ಲಿ ಇಲ್ಲಿ ಹೊಣ್ಣಾಂ ಮಾಡಿರುವರು. ಇವರಿಗೆ ಸಹಾಯಕರಾಗಿ ಇನ್ನೂ ಐದು ಜನರ ನೇಮಕವಾಗಲಿರುವುದೆಂದೂ ಈ ಫಿರ್ಕಾದಲ್ಲಿರುವ ಎಲ್ಲ ಹೆಂಡ ಮಂಗಡಿಗಳನ್ನೂ ಮುಚ್ಚಲಾಗಿದೆ ಎಂದೂ ತಿಳಿದುಬರುತ್ತದೆ.

ಕಟಪಾಡಿ—ಹಿಂದೂಸ್ಥಾನ್ ಸ್ಕೌಟು ಸಪ್ತಾಹವು ಇಲ್ಲಿಯ ಎಸ್ ವಿ. ಎಸ್. ಹೈಸ್ಕೂಲಿನಲ್ಲಿ ಇದೇ ತಾ 1ರಿಂದ 7ರವರೆಗೆ ಪ್ರಾಂತಿಕ ದಳದವರು ಸೂಚಿಸಿದಕಾರ್ಯಕ್ರಮಗಳಂತೆ ಜಿಲ್ಲಾ ಆಸಿಸ್ಟಾಂಟ್ ಕಮಿಶನರ್ ಶ್ರೀ ಪಿ. ರಾಮದಾಸ ನಾಯಕರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಆಚರಿಸಲಾಯಿತು ಸಪ್ತಾಹದ ಕೊನೆಯ ದಿನ ಸಾರ್ವಜನಿಕ ಸಭೆಯು ಪಂಚಾಯತ್ ಬೋರ್ಡ್ ಪ್ರಸಿಡೆಂಟ್ ಶ್ರೀ ಪಿ. ವೆಂಕಟ್ರಾಯ ನಾಯಕರ ಅಧ್ಯಕ್ಷತೆಯಲ್ಲಿ ಜರಗಿತು. ಸಭಿಕರ ಸಂದರ್ಭೋಚಿತ ಭಾಷಣಗಳಾದ ಬಳಿಕ ಅಧ್ಯಕ್ಷರು ಒಂದು ಕಸಿಸಾನಿನ ಸಮಯನ್ನು ನೆಟ್ಟರು. ಧನ್ಯವಾದಾರ್ಪಣೆ, ರಾಷ್ಟ್ರಗೀತೆಯೊಂದಿಗೆ ಸಭೆ ಮುಕ್ತಾಯವಾಯಿತು.

ಉಪ್ಪೂರು—ತಾ. 4 10 46ಸ್ಥಿ ಶ್ರೀಯುತ. ಯಸ್ ಭಟ್ಟ, ಬಿ. ಎ. ಬಿ. ಟಿ ಯವರ ಅಧ್ಯಕ್ಷತೆಯಲ್ಲಿ ಶ್ರೀ ಯುತ ನಾರಾಯಣ ಕಲ್ಕೂರ ಮತ್ತು ಶ್ರೀಯುತ. ಕೆ. ಕೆ. ಕಟ್ಟೆ, ಇವರ ಮುಂದಾಳತನದಿಂದ ಮಹಾತ್ಮಾಜಿಯವರ ಜನ್ಮದಿನಾಚರಣೆ ಸಾಂಗಗೊಳಿಸಲ್ಪಟ್ಟತು. ಮೆರವಣಿಗೆ, ಭಾಷಣ, ನೂಲುವ ಸ್ಪರ್ಧೆ ಇತ್ಯಾದಿ ಕಾರ್ಯ ಕಲಾಪಗಳಿದ್ದು ಶಾಲಾ ಮಕ್ಕಳಿಗೆ ಖಂಡಿತಿನಸು ಪಡಚಿ, ಮುಂಗಳಗೀತೆಯೊಂದಿಗೆ ಮುಕ್ತಾಯವಾಯ್ತು.

ಕಿರ್ವ ಹಿಂದೂ ಹೈಸ್ಕೂಲಿನಲ್ಲಿ ಸಾಹಿತ್ಯೋತ್ಸವ

ಕಿರ್ವದ "ಕಿರಿಯರ ಕೂಟ"ದವರು ಶ್ರೀ. ಎಸ್. ಎಸ್ ರಾಯರ ನೇತೃತ್ವದಲ್ಲಿ ಸ್ಥಾಪಿತ ತ್ಯಾಪಿತ ಹಿಂದೂ ಹೈಸ್ಕೂಲಿನ ಪತಿಯಿಂದ ನಿತ್ಯಾನಂದ ಭವನದಲ್ಲಿಇದೇ ತಾ.2ರಿಂದ5ರ ವರೆಗಿನ ನಾಲ್ಕು ದಿನಗಳಲ್ಲಿ ನಾಡ ಹಬ್ಬವನ್ನು ವಿಸ್ತರ ಭಣೆಯಿಂದ ಜರಗಿಸಿದರು. ಪ್ರಥಮ ದಿನ ಹೈಸ್ಕೂಲಿನ ಮುಖ್ಯೋಪಾಧ್ಯಕ ಶ್ರೀ ಯುತ. ಶಿವರಾಯರ ಅಧ್ಯಕ್ಷತೆಯಲ್ಲಿ ಶ್ರೀ ಕೊರದ್ದಲ್ ಶ್ರೀನಿವಾಸರಾಯರು 'ಮುದ್ರಣದ ಕಾವ್ಯ'ದ ಕುರಿತುಉಪನ್ಯಸಿಸಿದರು. ಎರಡನೇದಿನ ಡಾ। ಕುಸ್ತಗ್ಗಾಚಾರ್ಯರ ಅಧ್ಯಕ್ಷತೆಯಲ್ಲಿ ಶ್ರೀ ಬನ್ನಂಜೆ ರಾಮಾಚಾರ್ಯರು 'ನಮ್ಮ ಸಂಸ್ಕೃತಿ'ಯ ಕುರಿತಾಗಿಯೂ ಶ್ರೀ ಎ. ವಿ. ಹೆಗ್ಡೆಯವರು 'ಸಾಹಿತಿ—ಗಾಂಧಿ'ಯ ವಿಷಯವಾಗಿಯೂ ಭಾಷಣವಿತ್ತರು. ಮೂರನೇ ದಿನ ಡಾ। ಮುಡಿಯಾರರ ಅಧ್ಯಕ್ಷತೆಯಲ್ಲಿ ಶ್ರೀ ಕಟ್ಟಿಂಗಾಡಿ ಶ್ರೀನಿವಾಸ ಶೆಟ್ಟಿ ಮತ್ತಿತರರ ಭಾಷಾ ಸಂಬಂಧದ ಉಪನ್ಯಾಸವಾಯಿತು ಸಾಲ್ಕನೇ ದಿನ, ಹಲವರ ಭಾಷಣಗಳು, ಭಜನೆ, ಇತ್ಯಾದಿ ಕಾರ್ಯಕ್ರಮಗಳಿದ್ದುವು; ನಾಲ್ಕು ರಾತ್ರಿಗಳಲ್ಲಿಯೂ ಆಖ್ಯಾಪಕರಿಂದ ಹಾಗೂ ವಿದ್ಯಾರ್ಥಿ ವಿದ್ಯಾರ್ಥಿನಿಯರಿಂದ, ನಾಟಕ ಮತ್ತು ವಿನೋದಾವಳಿಗಳ ಪ್ರದರ್ಶನಗಳಿದ್ದುವು.

ಉಡುಪಿ ಕಲಾಸಮ್ಮಂದ—ದಿನಾಂಕ ೧೦ ಮತ್ತು ೧೧ರಂದು ಶ್ರೀ ಆರ್. ಪಿ. ಜಯಗೀರ್‌ದಾರರು 'ಕವಿ' 'ಸಾಹಿತ್ಯ' 'ಕರ್ನಾಟಕ ಏಕೀಕರಣ' ದ ಕುರಿತು ಉಪನ್ಯಾಸವಿತ್ತರು. ಶ್ರೀ ನರೇಗಲ್ಲ ಪ್ರಹ್ಲಾದರಾಯರಿಂದ ವ್ಯಕ್ತದ ಚಟುವಟಿಕೆಯ ಬಗ್ಗೆ ಅನಂದ ಪ್ರದರ್ಶನವಿತ್ತರು. ದಿನಾಂಕ ೧೨ರಂದು ಶ್ರೀ ಕಯ್ಯಾರ ಕಿಞ್ಞಣ್ಣ ರೈಗಳು ಸಂಸ್ಕೃತ ಶಿಕ್ಷಣದ ಕುರಿತು ಭಾಷಣವಿತ್ತರು. ದಿನ ೧೩ರಂದು ಶ್ರೀ. ಜಿ. ಪಿ. ರಾಜರತ್ನಂ ಅವರು 'ಸಾಹಿತ್ಯ'ದ ಕುರಿತು ಶ್ರೀ ಸುಪದ್ರಿರಾಯರು ಗಾಂಧಿಜೀಯವರ ಉಪದೇಶವನ್ನೆತ್ತಿಯೂ ಜೋಧಪ್ರದ ಉಪನ್ಯಾಸವಿತ್ತರು. ದಿನ ೧೪ರಂದು ಕನ್ನಡ ಸಾಹಿತ್ಯ ಪರಿಷತ್ತಿನ ಗಮಕ ಕಲಾ ಪ್ರಚಾರಕರಾದ ಶ್ರೀ ಕೆ. ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಶ್ರೀ ಮಡಿಕೇರಿ ಅನಂತಪದ್ಮನಾಭರಾಯರು ಸಾಲಿರಾಮಚಂದ್ರರಾಯರ ಕವನಗಳನ್ನೂ ನರೇಗಲ್ಲ ಪ್ರಹ್ಲಾದರಾಯರು ಬೇಂದ್ರೆಯವರ "ಕಾಡಿಯೋಣ ಬಾರಾ" ಕವನವನ್ನೂ ಸುಶ್ರಾವ್ಯವಾಗಿ ಹಾಡಿದ ಬಳಿಕ ಅಧ್ಯಕ್ಷರೂ ಭಾರತದಲ್ಲಿನ ಕೆಲವು ಪದ್ಯಗಳನ್ನು ಹಾಡಿದರು. ದಿನ ೧೫ರಂದು ಶ್ರೀ ಕೆ. ಬಿ. ಜನಾರ್ದನ ಹೆಗ್ಡೆಯವರು ಕರ್ನಾಟಕ ಏಕೀಕರಣದ ಕುರಿತು ಒಳ್ಳೆ ಜೋಧಪ್ರದ ಉಪನ್ಯಾಸವಿತ್ತರು.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ

ತಾರೀಕು **13—10—1946**ರಿಂದ

ಕೇಳಲು ವಿಷವೆಂದಿದ್ದರೂ ನೋಡಲು ಅಮೃತ ಉಣಿಸುವ
ಅಮರ ಕೃತಿ. ಕೆದಾರ ಕರ್ಮರ ಕೈವಾಡ

ವಿಷ ಕನ್ಯೆ

ಸಾಧನಾ ಬೋಸ್, ಪೃಥ್ವಿರಾಜ್, ಸುರೇಂದ್ರ

ಮೊದಲಾದವರು

ನಿರೀಕ್ಷಿಸಿರಿ— ಚಂದ್ರಗುಪ್ತ

[ಜನೇ ಪುಟದಿಂದ]

ನಿಜಕ್ಕೂ ಹಿಂದುಗಳೊಡನೆ ಬಡಿದಾಡುವುದೇ ಹಿತಕರವೆಂದಾದಲ್ಲಿ ಗಡಿನಾಡಿನ ಪಠಾಣರು ಅದಕ್ಕೆ ಎಂದೂ ಹಿಮ್ಮೆಟ್ಟುವವರಲ್ಲ; ಆದರೆ ಲೀಗಿನ ದೋರಣೆ ತಪ್ಪು—ಎಂದು ಗಡಿನಾಡಿನ ಗಾಂಧಿ ಖಾನ್ ಅಬ್ದುಲ್ ಗಫರ್ ಖಾನರು ತನ್ನ ಪತ್ರಿಕೆಯಲ್ಲಿ ಬರೆದಿದ್ದರಂತೆ. ಬೊಂಬಾಯಿ ದಂಗೆಯಲ್ಲಿ ಪಠಾಣರಿಗಾಗಿರುವ ಅನ್ಯಾಯಗಳಿಂದಾಗಿ ಗಡಿನಾಡಿನ ಗಾಂಧಿ ಹಿಂದುಗಳ ಮೇಲೆ ಮನನೊಂದಿದ್ದಾರೆಂದೂ, ಲೀಗಿಗೆ ಸೇರುವ ಸಂಭವವಿದೆಯೆಂದೂ ಕೆಲವರು ಊಹೆ. ಪಂಜಾಬಿನ ಪ್ರಧಾನ ಮಂತ್ರಿ ಸರ್. ಖಿವಾನಾ ಲಂಡನ್ನಿನಲ್ಲಿದ್ದಾಗ ಅಲ್ಲಿಯೇ ತಾನು ಲೀಗಿಗೆ ಸೇರುವ ವಾಗ್ದಾನವಿತ್ತಿದ್ದಾರೆಂದು ನಾರ್ತೆ ಬಂದಿತ್ತು. ಇದುವರೆಗೆ ಅದು ನಿರಾಧಾರವನ್ನಿಸಿದೆ. ಕಿತ್ತಳೇ ಹಣ್ಣಿನ ವೆಟ್ಟಿಗೆ ಬಂದರೆ ಚೂರಿ ಅಮದಯಿತೆಂದು ಹೇಳುವಂತಹ ವಿಲಕ್ಷಣ ವಾರ್ತಗಳು ದೇಶದ ಸರ್ವದೆಗಳಲ್ಲೂ ಹುಟ್ಟುತ್ತಿವೆ

೦೦ ೦೦ ೦೦

ಜನತೆಯಲ್ಲಿ ಸಹಜವಾಗಿರುವ ಅದ್ಭುತಾಶ್ಚರ್ಯಕರ ವಾರ್ತೆ ಮತ್ತು ಆಂಧ್ರಾ ಚಾಂದಗಳ ಮೇಲಿರುವ ಮಮತೆಯು ಇಂದಿನ ವಿಶೇಷ ಸಂದರ್ಭದಲ್ಲಿ ಹೇಗೆ ಕೆಲಸ ಮಾಡುತ್ತಿದೆ ಎಂಬುದಕ್ಕೆ ಪ್ರತಿದಿನವೆಂಬಂತೆ ನಿದರ್ಶನಗಳು ದೊರಕುತ್ತಿವೆ. ನವ ಫಿಲ್ಲಿಯಲ್ಲಿಬ್ಬರಿ ಮುಸ್ಲಿಂ ಲೀಗಿನ 'ಪ್ರತ್ಯಕ್ಷ ಹೋರಾಟ ಸಮಿತಿ'ಯ ಸಭೆಗಳೂ ಜಿನ್ನಾ-ನೇವೆಲ್, ನೇವೆಲ್-ಕಾಂಗ್ರೆಸ್, ಜಿನ್ನಾ—ನೆಹರು—ಬೋಪಾಲ್ ನವಾಬ್ ಭೇಟಿಗಳು ಎಡೆಬಿಡದೆ ನಡೆದಿದ್ದುವಷ್ಟೆ. ಒಕ್ಟೋಬರ್ 4ರಲ್ಲಿ 'ಪ್ರತ್ಯಕ್ಷ ಹೋರಾಟ ಸಮಿತಿ'ಯ ಸದಸ್ಯರಾದ ಕ್ವಾಜಾ ನಾಜಿಮುದ್ದೀನ್, ಮಮ್ತಾಜ್ ದೌಲ್ತಾನಾ, ಮತ್ತು ಅಬ್ದುಲ್ ರಾಬ್ ನಿಸ್ತಾರರು ಕಾರು ಹತ್ತಿ ಹೋಗುತ್ತಿದ್ದಾಗ ಢಿಲ್ಲಿಯಿಂದ 12 ಮೈಲು ದೂರದಲ್ಲಿ ಕಾರು ಢಿಕ್ಕಿ ಹೊಡೆದು ಗಂಡಾಂತರವುಂಟಾಯಿತು. ಕ್ವಾಜಾ ನಾಜಿಮುದ್ದೀನರು ಮುಖಕ್ಕೂ ಬಲ ತೋಳಿಗೂ ವಿಶೇಷ ಜಖಮಾಗಿದೆಯಂತೆ; ದೌಲ್ತಾನಾರಿಗೆ ಸ್ವಲ್ಪ ಪೆಟ್ಟಾಗಿದೆ; ನಿಸ್ತಾರರಿಗೇನೂ ಆಗಿಲ್ಲ. ಪ್ರತ್ಯಕ್ಷ ಹೋರಾಟದ ಕಾರ್ಯಕ್ರಮ ರಚಿಸಲಿಕ್ಕಿರುವ ಈ ಸದಸ್ಯರಿಗೆ ಹೀಗಾದುದು ಮಹಾ ಅಪಶಕುನವೆಂದು ಕೆಲವರು ಅಂಬೋಣ; ಲೀಗಿನ ಹೋರಾಟ ರಥ ಅವಘಡಕ್ಕೊಳಗಾಗಿ ಅದನ್ನೇರಿದವರೆಲ್ಲ ಪೆಟ್ಟು ತಿಂದು ಮೂಲೆ ಪಾಲಾಗುವರೆಂಬುದರ ಪೂರ್ವ ಸೂಚನೆಯಿದು, ಎಂದು ಕವನ ಕಟ್ಟಿ ವರ್ಣಿಸುವವರಿದ್ದಾರೆ. ನಡುಗಾಲ ಸರಕಾರ ಸೇರುವ ನಿರ್ಧಾರ ಮಾಡುವದಕ್ಕಾಗಿ ವಾರ್ಧಾದಲ್ಲಿ ಕೂಡಿದ್ದ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಸಭೆಗಾಗಿ ಸ್ವತಃ ಫೈ ವ್ ಮಾಡುತ್ತಾ ಪಂಡಿತ ನೆಹರುಗಳು ಹೊಂಟಿದ್ದಾಗ ಅವರ ಕಾರಿಗೊಬ್ಬ ಹುಡುಗ ಬಿದ್ದು ಸತ್ತುದು ಎಲ್ಲರಿಗೂ ನೆನಪಿರಬಹುದು. ಕಲ್ಕತ್ತಾ, ಬೊಂಬಾಯಿ, ಮೊದಲಾದ ಕಡೆಗಳಲ್ಲಿ ಮಕ್ಕಳು, ಮಹಿಳೆಯರ ಸಮೇತ ಸಾವಿರಾರು ಮಂದಿ ಬಲಿ ಬಿದ್ದ ದುರ್ಘಟನೆಗಳ ಪೂರ್ವ ಸೂಚನೆ ಕೊಡಲು ಅಘಟನೆ ನಡೆಯಿತೆಂದುಈಗ ಹೇಳಿದರೆ ಒಪ್ಪುತ್ತದೆ.ಅಂತೆಯೇ ಲೀಗ್‌ಪ್ರಮುಖ ಶ್ರೀ. ಕೆ. ಕೃಷ್ಣರಾಯರು ಶಿಷ್ಯೆಯ ಒತ್ತು ಹಾಡುವಿಕೆಯೊಂದಿಗೆ ನಡೆಸಿದ ಭಾರತ ವಾಚನವು ಅತ್ಯುತ್ತಮವಿದ್ದುದಾಗಿ ಸರ್ವರ ಮೆಚ್ಚುಗೆ ಪಡೆಯಿತು. ಅಪರಾಹ್ನ ಉತ್ಸವದ ಜತು ರ್ಥಾಧಿವೇಶನವು ಶ್ರೀ ಎಮ್. ಎಸ್. ಆನಂತ ಪದ್ಮನಾಭರಾಯರ ಆಧ್ಯಕ್ಷತೆಯಲ್ಲಿ ನೆರೆದಾಗ ಶ್ರೀ ಬಿ. ಎಮ್. ಇದಿನಬ್ಬನವರು ಮನೋಹರವಾಗಿ ಆಧುನಿಕ ಕವಿತಾ ವಾಚನ ಮಾಡಿದರು. "ಯಕ್ಷಗಾನದ ಸ್ವರೂಪವನ್ನು ವಿವರಿಸಿ ಶ್ರೀ ಎನ್. ಎಸ್. ಕಲ್ಕೆಯವರ ಮನೋರಂಜಕ ಭಾಷಣವಾಯಿತು. ಅಧ್ಯಕ್ಷರು ಉಪನ್ಯಾಸವಿತ್ತರು. ರಾತ್ರಿ ಸಿಸಿಲಿ ಹೈಸ್ಕೂಲ್ ವಿದ್ಯಾರ್ಥಿನಿಯರು "ಪುರುಳಿಗೆ ಮಮತೆ 'ನಾಟಕವನ್ನೂ ಕಿದಿಯೂರು ಎಚ್ ಇ ಸ್ಕೂಲ್ ವಿದ್ಯಾರ್ಥಿ ವಿದ್ಯಾರ್ಥಿನಿಯರು 'ಭರತ ಮಿಲಾಪ್' ನಾಟಕವನ್ನೂ ಅಭಿನಯಿಸಿ ತೋರಿಸಿದರು.

ಕೊನೆಯ ಅಧಿವೇಶನ

ತಾ 5ನೇ ಸೋಮವಾರ ಶ್ರೀ. ಕೆ. ಬಿ ಜಿನರಾಜ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಕೂಡಿತು. ಶ್ರೀ. ಬಿ. ವಾಸುದೇವ ರಾಯರಿಂದ ಅಧ್ಯಕ್ಷರ ಪರಿಚಯವಾದನಂತರ 'ಭಾಂತೀಯ ಸಂಸ್ಕೃತಿ'ಯ ಕುರಿತು ಶ್ರೀ ಗಣಪತಿ ಶರ್ಮರ ಪಿಸಿಯಗರ್ಭಿತ ಉಪನ್ಯಾಸವಾಯಿತು. ಶ್ರೀ ನರೇಗಲ್ಲರು ರವೀಂದ್ರ ಗೀತೆಗಳನ್ನು ಮನೋಹರವಾಗಿ ಹಾಡಿದ ಮೇಲೆ ಶ್ರೀ.ಯು. ಶ್ರೀನಿವಾಸ ಭಟ್ಟರು 'ಕರ್ನಾಟಕ ಸಂಘ'ದ ನಿರ್ಮಾಣಕ್ಕೆ ಮೂಲ ಕಾರಣರಾದ ಕಿರಿಯವನ್ನು ಸಂಸ್ಥೆದ ಹಿರಿಯರು ಕಷ್ಟಗಳಿಸಿರುವುದನ್ನು ಜ್ಞಾಪಕಕ್ಕೆ ತಂದರು. ಸ್ಪರ್ಧೆಗಳಲ್ಲಿ ಗೆದ್ದವರಿಗೆ ಅಧ್ಯಕ್ಷರ ಹಸ್ತದಿಂದ ಬಹುಮಾನ ವಿತರಣೆಯಾಯಿತು. ಅಧ್ಯಕ್ಷ ಶ್ರೀಮಾನ್ ಹೆಗ್ಡೆಯವರು ಕನ್ನಡ ನಾಡಿನ ಇಂದಿನ ಪರಿಸ್ಥಿತಿಯನ್ನು ಮುಂದಿಟ್ಟಾಗುವಂತೆ ವರ್ಣಿಸಿ, ಏಕೀಕರಣ ಸಂಬಂಧದ ವಿಧಾಯಕ ಸಲಹೆಗಳನ್ನಿತ್ತರು ಶ್ರೀ. ಬಿ. ರಾಮಕೃಷ್ಣಾಚಾರ್ಯರು ಧನ್ಯವಾದ ವಿಧಿಯನ್ನಿತ್ತಾ ಶ್ರೀ. ಯು. ಶ್ರೀನಿವಾಸ ಭಟ್ಟರ ಪಾಡಿವನ್ನು ಪ್ರತಿಫಲಿಸಿದರು. ಮತ್ತು ಪಂಚ ವೈನಿಕ ಉತ್ಸವಕ್ಕೆ ಸಹಕಾರ ಸಮಿತಿಯಸ್ಥರಿಸಿದ ಸರ್ವರನ್ನೂ ಅಭಿನಂದಿಸಿದರು.

ಲೇಖಕ ಪ್ರಕಾಶಕರ ಸಮ್ಮೇಲನ—

ತಾ 3ನೇ ಅಪರಾಹ್ನ ನೆರೆಯಿತು. ಉತ್ಸಾಹೀ ಹಿರಿಯ ರಾದೆಶ್ರೀ. ಎಸ್ ರಾಜಗೋಪಾಲಕೃಷ್ಣ ರಾಯರ ಮುನ್ನುಡಿಯೂಪ ಮೇಲೆ ಶ್ರೀ. ಪೈಲೂರು ಅಚ್ಯುತ್ರನಾರಾಯಣ ರಾಯರು ಸ್ವಾಗತಭಾಷಣವನ್ನೀವಿದರು. ಉಪಾಧ್ಯಾಕ್ಷ ಶ್ರೀ. ಕೆ. ಬಿ. ಜಿನರಾಜ ಹೆಗ್ಡೆಯವರ ಭಾಷಣವು ನಾಡಿನ ಮತ್ತು ಲೇಖಕರ ಸದ್ಯಸ್ಥಿತಿಯ ಚಿತ್ರಣಕ್ಕೆ ಮುಂದಿಡುವ ಕೈಗನ್ನಡಿಯಂತಿತ್ತು. ಶ್ರೀ. ಕೆ. ಕೃಷ್ಣ ರಾಯರು ಅಧ್ಯಕ್ಷರಿಗೆ ನಮನ ಸಲ್ಲಿಸಿ ಸ್ವಾನುಭವ ಪೂರ್ಣ ನಾದ ವಿಚಾರಪ್ರಚೋದಕ ಭಾಷಣವಿತ್ತರು. ಆ ಮೇಲೆ ನಿರ್ಣಯಗಳು ಒಂದೊಂದಾಗಿ ಮುಂದಿಡಲು ಸರ್ವಾನುಮತಿಯ ಅಂಗೀಕಾರ ಪಡೆದುವು ಕಾಲೇಜುಗಳಲ್ಲಿ ಕನ್ನಡ ವನ್ನೇ ಮಾಧ್ಯಮವಾಗಿ ಮಾಡಬೇಕು ಪ್ರಾದೇಶಿಕ ಭಾಷೆಗಳನ್ನು ಶೈಕ್ಷಣಿಕ ಕಾಲೇಜುಗಳಲ್ಲಿ ಕಲಿಸುತ್ತಿರುವ ಅಧ್ಯಾಪಕರ ಸಂಬಳ ಹೆಚ್ಚಬೇಕು ವಿಕರೂಪೀ ಕನ್ನಡದ ಪಾಠಪುಸ್ತಕವನ್ನು ಸರಕಾರವೇ ಅಚ್ಚುಹಾಕಿಸಬೇಕು ಲೇಖಕ, ಪ್ರಕಾರಕರ ಒಂದು ಜಿಲ್ಲಾ ಸಂಘ ಸ್ಥಾಪಿಸಬೇಕು.ಸಾಹಿತ್ಯ, ಪತ್ರಿಕೋದ್ಯೋಗಿಗಳು ಹಾಗೂ ಪ್ರಕಾರಕರ ಪರಿಚಯಂಗಳನ್ನೊಳಗೊಂಡ ದೈರೆಕ್ಟರಿಯೊಂದನ್ನು ತಯಾರಿಸಬೇಕು ಲೇಖಕರಿಗೆ ಪ್ರತಿಫಲ ಸಿಗುವ ವ್ಯವಸ್ಥೆ ಬೇಕು.ಜಿಲ್ಲೆಯ ಅದರಲ್ಲೂ ವಿಶೇಷವಾಗಿ ಉಡುಪಿಯ ಕರಿಯರು ಕೈಬರೆಹದ ಪತ್ರಿಕೆಗಳನ್ನು ಉತ್ತಮ ರೀತಿಯಿಂದ ಹೊರಡಿಸುತ್ತಿರುವುದನ್ನು ಅಭಿನಂದಿಸಬೇಕು.ಮುಂತಾದ ಹಲವು ನಿರ್ಧಾರಗಳಾದುವು. ಮ. ಳ ಲೇಖಕ ಪ್ರಕಾಶಕರ ಸಂಘ ಸ್ಥಾಪನೆಗೂ,ಅವರ ಪೈರೆಕ್ಟರಿ ತಯಾರಿಸುವ ನಿಟ್ಟಿಗಾಗಿಯೂ ಎರಡು ಉಪಸಮಿತಿಗಳನ್ನು ರಚಿಸಲಾಯಿತು ಅಧ್ಯಕ್ಷರ ಮುಕ್ತಾಯಭಾಷಣ, ಧನ್ಯವಾದಗಳೊಂದಿಗೆ ಸಮ್ಮೇಲನ ಮುಗಿಯಿತು.

ರಾತ್ರಿ ಶ್ರೀ. ಕೆ. ಎಚ್. ಎಸ್ ಪುಂಡೆಯವರ 'ಯಕ್ಷಗಾನ'ದ ಕುರಿತು ಭಾಷಣ; ಉಡುಪಿಯ "ಯಕ್ಷಗಾನ ಕಲಾಮಂಡಲಿ"ಯವರಿಂದ "ಕೃಷ್ಣ ಸಂಧಾನ" ಪ್ರಸಂಗದ ತಾಳಮದ್ದಳೆ ನಡೆಯಿತು.

ಉಡುಪಿ ಕರ್ನಾಟಕ ಸಂಘದ ಸಾಹಿತ್ಯೋತ್ಸವ.

ಒಕ್ಟೋಬರ್ ತಾ. 1ರಲ್ಲಿ ವರ್ಧಂತ್ಯುತ್ಸವ, ತಾ 2ನೇ ಸೋಮವಾರ ವಾಚನ ಗಾಯನ ಸ್ಪರ್ಧೆ ಜರಗಿಸಿದ ಕರ್ನಾಟಕ ಸಂಘದ ಸಾಹಿತ್ಯೋತ್ಸವದ ಉದ್ಘಾಟನೆಯು 2ನೇ ಅಪರಾಹ್ನ ಪುತ್ತಿಗೆ ಮಠದ ಶ್ರೀ ಸುಜ್ಞಾನೀಂದ್ರ ತೀರ್ಥ ಶ್ರೀ ಪಾದಂಗಳವರಿಂದ ಬೋರ್ಡ್ ಹೈ ಸ್ಕೂಲ್ ಪೀಪ್ಲ್ಸ್ ಹಾಲ್‌ನಲ್ಲಿ ಜರಗಿತು.

ಮುಖಂಗಡದ ಕಾರು ಅವಘಡದ ಕುರಿತೂ ಏನೇನೋ ಭವಿಷ್ಯಗಳು ಹೇಳಲ್ಪಡುತ್ತಿವೆ. ನೆಹರುಗಳ ಕಾರಿನಡಿಗೆ ಹಾದಿಹೋಕ ಹುಡುಗ ಬಿದ್ದನಲ್ಲದೆ ನೆಹರುಗಳಿಗೇನೂ ಘಾಯವಾಗಿರಲಿಲ್ಲ; ಈ ಶಕುನಕ್ಕನುಗುಣವಾಗಿ ನಿರಪರಾಧಿ ಜನತೆಗೆ ಪಾಕಿಸ್ಥಾನಿಯಾದರೂ ರಾಷ್ಟ್ರೀಯ ಸರಕಾರಕ್ಕೆ ಚ್ಯುತಿಯಿಲ್ಲ. ಆದರೆ ಲೀಗ್ ಪ್ರಮುಖರು ಕಾರು ಅವಘಡಗೊಂಡು, ಅವರಿಗೆ ಸ್ವತಃ ಜಖಮಾದುದನ್ನು ಕಾಣುವಾಗ, ಇದು ಮುಸ್ಲಿಂ ಲೀಗಿನ ಭಾವೀ ಪ್ರತ್ಯಕ್ಷ ಹೋರಾಟದ ಅನ್ಯಪ್ರಪನ್ನು ತಿಳಿಸುತ್ತದೆ-ಎಂದೆಲ್ಲಾ ಜನ ಹೇಳ ಹತ್ತಿದ್ದಾರೆ. ಇದಕ್ಕನುಗುಣವಾಗಿ 'ಪ್ರತ್ಯಕ್ಷ ಹೋರಾಟ ಸಮಿತಿಯ ಒಳಗುಟ್ಟೊಂದನ್ನು ಅಲಿಘಾರ್ ವಿಶ್ವವಿದ್ಯಾಲಯದ ವೈಸ್ ಚಾನ್ಸೆಲರ್ ಡಾ ಝಿಯಾವುದ್ದೀನರು ಸಂಯುಕ್ತ ಪತ್ರಿಂತ್ರಿಕೆಯ ಪೃಥ್ವಿನ ಮಂತ್ರಿ ಗೋವಿಂದ ವಲ್ಲಭ ಪಂತರಿಗೆ ತಿಳಿಸಿದುದು ಬೆಳಕಿಗೆ ಬಂದಿದೆ. ಗಡಿನಾಡಿನ ಆಬ್ದುಲ್ ರಾಬ್ ನಿಸ್ತಾರ ರೊಬ್ಬರೇ ಹೊರತು ಹೋರಾಟ ಸಮಿತಿಯ ಬೇರಾವ ಸದಸ್ಯನೂ ಪ್ರತ್ಯಕ್ಷ ಹೋರಾಟ ಹೂಡಲು ತಯಾರಿಲ್ಲವಂತೆ. ಕಾರು ಅವಘಡದಲ್ಲಿ ಜಖಂ ಹೊಂದವರೆಂದರೆ ಈ ನಿಸ್ತಾರರೇ. ಸಂಗತಿ ಹೇಗಿದ್ದರೂ ಕಲ್ಪನೆಯೂ ವಸ್ತು ಸ್ಥಿತಿಯೂ ಒಂದಕ್ಕೊಂದು ಹೊಂದಿಕೆಯಾಗುವದರಿಂದ ನಂಬುಗೆ ಕುದುವದಿಲ್ಲ; ಜನತೆಯ ಮನಸ್ಸು ಆಕಾಶಗಾಮಿಯಾಗುತ್ತಿದೆ. ಈ ಕಾಲದಲ್ಲಿ ಸುದ್ದಿಗಳ ಮೇಲೆ ಲಕ್ಷ್ಯ ಪೂರ್ಣ ಸತೋಟೆ ಬೀಳಬೇಕಾದುದು ಅತ್ಯಗತ್ಯ.

ಸಂಘದ ಅಧ್ಯಕ್ಷ ಹಾಗೂ ಉತ್ಸವದ ಉತ್ಸಾಹೀ ಸ್ವಾಗತಾಧ್ಯಕ್ಷ ಶ್ರೀ. ಎನ್. ರಾಜಗೋಪಾಲಕೃಷ್ಣರಾಯರು ಸ್ವಾಗತ ಭಾಷಣವಿತ್ತು ಸಂದೇಶಗಳನ್ನೋದಿ ಹೇಳಿದರು. ಅಧ್ಯಕ್ಷ ಪ್ರೊ. ಆರ್. ವಿ. ಜಯಗೀರದಾರರು ಕನ್ನಡದ ಸ್ಥಾನಮಾನಗಳನ್ನು ಸರಳವಾಗಿಯೂ ವಿವರಿಸಿ ಸಭಾಧ್ಯಕ್ಷ ಸ್ಥಾನವನ್ನು ಶ್ರೀ ವಿ. ಸೀತಾರಾಮಯ್ಯನವರಿಗೊಪ್ಪಿಸಿ ನಿರ್ಗಮಿಸಿದರು. 'ಸ್ವತಂತ್ರ ರಾಷ್ಟ್ರದಲ್ಲಿ ಸ್ವತಂತ್ರ ಸಾಹಿತ್ಯ' ಎಂಬ ಕುರಿತು ಶ್ರೀ. ಕಯ್ಯಾರ ಕಿಂಞಣ್ಣರೈಗಳ ವಿಚಾರ ಪ್ರಚೋದಕ ಭಾಷಣವಾಯಿತು. ಶ್ರೀ. ಜಿ. ಪಿ. ರಾಜರತ್ನಂ ಇವರು ವಿನೋದ ವಾಣಿಯಲ್ಲಿ ಕಯ್ಯಾರರಿಗುತ್ತರವಿತ್ತು ತನ್ನ ಕವಿತೆಗಳನ್ನು ಸಂತ್ರಾವ್ಯವಾಗಿ ಹಾಡಿದರು. ಶ್ರೀಗಳಾದ ಸಂಪದ್ಗಿರಿ ರಾವ್, ನರೇಗಲ್ಲು ಮೊದಲಾದರು ಉತ್ತರಿಸಿದ ಮೇಲೆ ಅಧ್ಯಕ್ಷರ ಬೋಧಪ್ರದ ಭಾಷಣವಾಗಿ ಧನ್ಯವಾದಾರ್ಪಣೆಯಾಯಿತು ರಾತ್ರಿ ಕ್ರಿಶ್ಚನ್ ಹೈಸ್ಕೂಲಿನ ವಿದ್ಯಾರ್ಥಿಯರು "ವರ ಪರೀಕ್ಷೆ" ನಾಟಕವನ್ನಭಿನಯಿಸಿದರು.

ಮೂರನೆಯ ದಿನ

ತಾ 3ರಲ್ಲಿ ಪ್ರಾತಃಕಾಲ ಲೇಖನ ಸ್ಪರ್ಧೆ ನಡೆಯಿತು. ಶ್ರೀ. ರಾಜರತ್ನಂ ಅಧ್ಯಕ್ಷರಾಗಿ ಶ್ರೀ. ನರೇಗಲ್ಲ ಪ್ರಜ್ಞಾಪ ರಾಯರ ಸಾಮಧುರ ಕವಿತಾ ವಾಚನದೊಂ ಶ್ರೀ. ಸಂಪದ್ಗಿರಿ ರಾಯರ ಸರಸ ಭಾಷಣವೂ, ಕೊನೆಗೆ ಅಧ್ಯಕ್ಷರ ಭಾಷ್ಯೋದ್ದೀಪಕ ಉಪನ್ಯಾಸವು ಸಭಿಕರಿಗೆ ಸಾಹಿತ್ಯೋದ್ಯಾನದ ಕಂಪನ್ನು ಉಣ್ಣಿಸಿದುವು. ಆಂದು ಸಂಜೆ ಶ್ರೀ ಎ. ಎಸ್. ಕುಡ್ತರ ಅಧ್ಯಕ್ಷತೆಯಲ್ಲಿ ಶ್ರೀ. ಎಮ್. ಎಸ್ ಆನಂತ ಪದ್ಮನಾಭ ರಾಯರು ಸುಬ್ರಾವ್ಯವಾಗಿ ಕಾವ್ಯ ವಾಚನ ಮಾಡಿದರು ಶ್ರೀ. ಉಗ್ರಾಣ ಮಂಗೇಶ ರಾಯರು 'ಹಾಸ್ಯರಸ'ದ ಕುರಿತು ಉಪನ್ಯಾಸವಿತ್ತರು. ಅಧ್ಯಕ್ಷರ ಪ್ರೌಢಪ್ರದ ಭಾಷಣವಾಯಿತು. ಕೊನೆಗೆ ಶ್ರೀ ನರಸಿಂಹ ಸೇರಿಗಾರ ಮತ್ತು ಪಾರ್ಟಿಯ ಕೂಟ ಸಂಗೀತ, 'ಕಲಾವ್ಯಂ'ದವರಿಂದ 'ಕೂಪ್ರತಿಷ್ಠಸ್ವೀ' ನಾಟಕಾಭಿನಯ, 'ಮಂಕಳ ಕೂಟ'ದವರಿಂದ ವಯಸ್ಕರ ವಿದ್ಯಾಭ್ಯಾಸ' ನಾಟಕ ಪ್ರದರ್ಶನ ನಡೆದುವು.

ನಾಲ್ಕನೆಯ ದಿನ

ತಾ 4ರಲ್ಲಿ ಕಿರಿಯರೊಳಗೆ ಅಶುಭಾಷಣ ಸ್ಪರ್ಧೆ ನಡೆಯಿತು. ಮೈಸೂರಿನ ಹಿರಿಯಗ

• ಮಗ್ಗದ ವ್ಯಾಲಿಕರಿಗೆ ಸುಸಂದರ್ಭ •

ನಂಬ್ರ P II ಪರ್ಮಿಟುದಾರರಾದ ಮಗ್ಗದ ವ್ಯಾಲಿಕರು ತನ್ಮ ನೂಲಿಗೆ ಬೇಕಾಗುವ ರಂಗುಗಳಿಗೆ ಮಂಗಳೂರು ಇಲ್ಲವೆ ಶಣ್ಣಾನೂರು ರಂಗಿನ ವ್ಯಾಪಾರಸ್ಥರನ್ನು ಅವಲಂಬಿಸಬೇಕಾಗಿತ್ತು. ಈಗ ಅವರಿಗೆ ಬೇಕಾಗುವ ಎಲ್ಲಾ ತರದ ರಂಗುಗಳನ್ನು ಒದಗಿಸಲು ನಾವು ಲೈಸನ್ಸನ್ನು ಪಡೆದಿರುತ್ತೇವೆ.

ಸಿ. ಎ. ಪೈ ಬ್ರದರ್ಸ್, ಉಡುಪಿ.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ **ಆನೋಳು ವಾವ ಮಧುರದ್ರವ ರಸಾಯನ.** ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಚೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ.)



ಬೆನ್ನಸೆಬ್ಬುಗಳು ಹೆಚ್ಚು ಕಡಿಮೆ ಆದವರಿಗೆಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯಿಗಳು ಒಂದು ಬಾಣಂತಿತನಕ್ಕೆ ಸಾಕಾಗುವುದು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ.ವಿ. ಕಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ಮ.ಳ.

ಸ್ವಾಧಿಕಸ್ಥರು- ಡಾ| ಐ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ದ. ಕ. ಜಿಲ್ಲೆಯ ಸರ್ಕಲ್ ಕಾಂಗ್ರೆಸ್ ಕಮಿಟಿಗಳಿಗೆ ನಾಮಕರಣ— ಈ ಸಾರಿ ಜಿಲ್ಲಾ ಕಾಂಗ್ರೆಸ್ ಕಮಿಟಿಯವರು ಸರ್ಕಲ್ ಕಾಂಗ್ರೆಸ್ ಕಮಿಟಿಗಳಿಗೆ ಜನಾನಾಮೆಗೆ ಏರ್ಪಾಡುಮಾಡದೆ ಅವುಗಳಿಗೆ ನಾಮಕರಣ (nomination) ಮಾಡಿದ ಅವರ ಧೋರಣೆಯನ್ನು ನಿಷೇಧಿಸಿ ಕಾರ್ಕಳ ತಾಲೂಕಿನ ಪ್ರಾಥಮಿಕ ಸದಸ್ಯರು ತಾ 29-9-46ರಲ್ಲಿ ಸಭೆಕೂಡಿ ಸರ್ವಾನುಮತದಿಂದ ನಿರ್ಣಯ ಮಾಡಿದ ಸಂಗತಿಯು ಪತ್ರಿಕೆಗಳ ಮೂಲಕ ಜಿಲ್ಲೆಯ ಕಾಂಗ್ರೆಸ್ ಸದಸ್ಯರಿಗೆ ತಿಳಿದಿರಬಹುದು. ಕಾಂಗ್ರೆಸು ಪ್ರಜಾಸತ್ತಾತ್ಮಕ ತತ್ವವೇ ಕಟ್ಟಲ್ಪಟ್ಟಿದೆ. ತಮ್ಮ ಪೋಟುಗಳನ್ನು ಉಪಯೋಗಿಸ ತಮಗೆ ಬೇಕಾದ ಸದಸ್ಯರನ್ನು ಆರಿಸುವಧಾಂದಲ್ಲಿ ಪ್ರತಿಯೊಬ್ಬ ಪ್ರಾಥಮಿಕ ಕಾಂಗ್ರೆಸ್ ಸದಸ್ಯರ ಪವಿತ್ರವಾದ ಮತ್ತು ಮೂಲ ಭೂತವಾದ ಹಕ್ಕು ಆಗಿರುತ್ತದೆ. ಆದಧಾರಹಕ್ಕನ್ನು ಜಲ್ಲಾ ಕಾಂಗ್ರೆಸ್ ಕಮಿಟಿಯವರು ಅಪಹರಿಸಿದ್ದು ಸರಿಯಿಲ್ಲ, ಕಾಂಗ್ರೆಸ್ ಸದಸ್ಯರಿಗೆ ವರ್ಷಾರ್ಪಿತ 4 ಆಣೆ ಕೊಡುವ ಪ್ರಹ್ಲಾದ ಪೋಟು ಕೊಡುವ ಪಕ್ಷ ಕೂಡ ಇದೆ. ಸ್ಥಳೀಕ ಸಂಸ್ಥೆಗಳಿಗೆ ಮತ್ತು ನ್ಯಾಯವಿಧಾಯಕ ಸಭೆಗಳಿಗೆ ನಾಮಕರಣ ಮಾಡಿದ ಬ್ರಿಟಿಷ್ ಸರಕಾರದ ಧೋರಣೆಯನ್ನು ಕಾಂಗ್ರೆಸಿನವರು ಅನೇಕಸಾರಿ ಖಂಡಿಸಿರುತ್ತಾರೆ. ಹಿಟ್ಲರ್ ಮತ್ತು ಮುಸೊಲೋನಿ ಸರಕಾರಗಳಲ್ಲಿ ಕೂಡ ಇದೇನಾ ಮಕರಣ ತತ್ವ ಇರಲಿಲ್ಲ. ಅವುಗಳಲ್ಲಿ ಕೂಡ ಹೆಸರಿಗಾದರೂ ಜನಾನಪಡೆಗಳು ಆಗುತ್ತಿದ್ದವು. ಜಿಲ್ಲಾ ಕಾಂಗ್ರೆಸ್ ಕಮಿಟಿಯವರಿಂದ ನಾಮಕರಣ ಮಾಡಲ್ಪಟ್ಟ ಸದಸ್ಯರು ಕೂಡ್ಲ ತಮ್ಮ ಸದಸ್ಯತನಕ್ಕೆ ರಾಜಿನಾಮೆ ಕೊಡುವುದಲ್ಲದೆ ಜಿಲ್ಲೆಯ ಪ್ರತಿ ತಾಲೂಕಿನ ಮತ್ತು ಸರ್ಕಲುಗಳ ಕಾಂಗ್ರೆಸ್ ಪ್ರಾಥಮಿಕ ಸದಸ್ಯರು ತಮ್ಮ ಸಭೆಗಳನ್ನು ಜರಗಿಸಿ ಸರ್ಕಲ್ ಕಾಂಗ್ರೆಸ್ ಕಮಿಟಿಗಳಿಗೆ ಜನಾನಪ ಆಗುವಂತೆಮಾಡಿ ತಮ್ಮ ಪವಿತ್ರವಾದ ಹಕ್ಕನ್ನು ಕಾಪಾಡಿಕೊಳ್ಳುವದು ಅವರ ಕರ್ತವ್ಯವಾಗಿರುತ್ತದೆ.

ಎಂ. ಎಸ್. ಅಧಿಕಾರಿ

ಕಾರ್ಕಳ, ತಾ 5-10-1946

NOTICE.

In the Court of the District Munsif of Mangalore.

ಓ ಎಸ್. ೮ ಆಫ್ ೧೯೪೬

K. Sundar Rao son of Kubevoor Krishnaya, residing in Dindigal Town. —Plaintiff.

1. Ramanna Bhat, 2. Keshava Bhat, sons of Shrinivasa Bhat, residing in Kompadavu village, Mangalore Taluk, 3. Narayana Bhat. —Defendants.

To the defendants 1 and 2 above named.

Whereas the plaintiff has instituted a suit against you for the reliefs claimed in the plaint filed in the above court, you are hereby informed to appear in the above court in person or by a pleader on 14th day of October 1946 at 11 O'clock in the forenoon and in default of your appearance on the said day the suit will be heard and determined in your absence.

P. Sanjiva Rao,
Vakil for Plaintiff,

Mangalore,
Date 7-10-'46.

ಎಲ್ಲೆಲ್ಲೂ .. ಧಿ ಜಯಂತಿ ಮತ್ತು ದಸರಾ ಮಹೋತ್ಸವಗಳು— ಸುರತ್ಕಲ್ ವಿದ್ಯಾಯಿನೀ ಹೈಸ್ಕೂಲಿನಲ್ಲಿ ತಾ. 2 ಮತ್ತು 3ರಲ್ಲಿ ಶ್ರೀಗಳಾದ ಬಿ. ಯೋಗೀಶ್ವರ ಹೊಳ್ಳ ಮತ್ತು ಕೆ. ಆರ್ ಆಚಾರ್, ಎಡ್ವೋಕೇಟ್ ಅವರ ಅಧ್ಯಕ್ಷತೆಯಲ್ಲಿ ಅನುಕ್ರಮವಾಗಿ ವಿವಿಧ ಕಾರ್ಯಕ್ರಮಗಳಿಂದ ದಸರಾ ಉತ್ಸವ ಜರಗಿತು. ನುಂಡ್ಕೂರು ಪಿನ್ನಮ್ಮುಲ್ಲಡ್ಡ ಆಳಿಪಾಡಿ ಗ್ರಾಮಗಳ ಮಹಾಜನರು ಗಾಂಧಿ ಜಯಂತಿಯನ್ನು ಶ್ರೀ ಪಂಗಾಡೇವಿ ಗೋಪುರದಲ್ಲಿ ಶ್ರೀ. ದಾಮೋದರಪೈಗಳವರ ಅಧ್ಯಕ್ಷತೆಯಲ್ಲಿ ಆಚರಿಸಿದರು. ಕಲ್ಲಡ್ಕ ಪಂಚಾಯತ ಬೋರ್ಡು ಎಲಿಮೆಂಟರಿ ಶಾಲೆಯಲ್ಲಿ ಶ್ರೀ ಪಿ. ಸೀತಾರಾಮಯ್ಯನವರ ನೇತೃತ್ವದಲ್ಲಿಯೂ ಪಡುಬಿದ್ರೆಯಲ್ಲಿ ಶ್ರೀ ಪದ್ಮನಾಭ ರೈಯವರ ಅಧ್ಯಕ್ಷತೆಯಲ್ಲೂ ಬೈಲೂರಲ್ಲಿ ಶ್ರೀ ಜೆ. ನಾಗಣ್ಣ ಹೆಗ್ಡೆಯವರ ಅಧ್ಯಕ್ಷತೆಯಲ್ಲೂ, ಪಾಣಾಜೆಯಲ್ಲಿ ಶ್ರೀ ಗಿಳಿಯಾರ ಈಶ್ವರ ಭಟ್ಟರ ಅಧ್ಯಕ್ಷತೆಯಲ್ಲಿಯೂ ಪಾಲಾಡಿಯಲ್ಲಿ ಶ್ರೀ ಹಾಲಾಡಿ ಮಹಾಬಲ ಶೆಟ್ರ ನೇತೃತ್ವದಲ್ಲಿಯೂ ಶ್ರೀ. ಕೆ. ರಾಮಕೃಷ್ಣ ಅಡಿಗಳ ಅಧ್ಯಕ್ಷತೆಯಲ್ಲೂ ಬಸ್ರೂರಲ್ಲಿ ಮಹಾಜನರ ಪೌರವಗಳ ಜಯಘೋಷಣೆಗಳಿಂದಲೂ ಚರಕಾ ನೂಲನ್ನು ಶ್ರೀ ಬಿರಿಸುವುದರೊಂದಿಗೂ, ಕಂದಾಪುರದಲ್ಲಿ ಕೆಳದಿ ತಾ. 22ರಿಂದ ತಾ. 2ರ ವರೆಗೂ ಶ್ರೀಗಳಾದ ಭಾಸ್ಕರ ಭಟ್ಟಿ, ಮುತ್ತಯ್ಯ ಹೆಗ್ಡೆ, ಎಮ್. ಎಮ್. ಹೆಗ್ಡೆ, ಸುಬ್ಬಣ್ಣಿ ಶೆಟ್ಟಿ, ತಿನರಾಮ ಶೆಟ್ಟಿ, ಬಿ ಎಸ್. ವಿರಲಸಟ್ಟ ಮೊದಲಾದವರ ಕೊಡುಪಿಕೆಯೊಂದಿಗೂ ಅತ್ಯಂತ ಯಶಸ್ವಿಯಾಗಿ ಗಾಂಧಿ ಜಯಂತಿ ಆಚರಿಸಲ್ಪಟ್ಟಿತು. ಇನ್ನೂ ಅನೇಕ ಸ್ಥಳಗಳಲ್ಲಿ ಆಚರಿಸಲ್ಪಟ್ಟ ಗಾಂಧಿ ಜಯಂತಿ ದಸರಾ ಮಹೋತ್ಸವಗಳ ವರದಿಗಳು ಬಂದಿವೆ. ಸ್ಥಳಾಭಾವದಿಂದ ಪ್ರಕಟಿಸಲಾಗಲಿಲ್ಲ.

ಕಲ್ಯಾಣಪುರ— ತಾ 2ರಲ್ಲಿ ಗಾಂಧಿ ಜಯಂತಿಯು, ಸಾರ್ವಜನಿಕ ಮೆರವಣಿಗೆ, ಸಭೆ ಖಾಷಣಗಳಿಂದ ಜರಗಿತು ಸಾಯಂಕಾಲ ಶಾಲಾವಠಾರದಲ್ಲಿ ಸೇರಿದ ಸಭೆಯು ಶ್ರೀ ಸನ್ಮಿ ಶ್ರೀಪತಿ ಆಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಪಾವಂಜೆ ಪಡಿಯಾರರು, ಕವಿಶಿಜ ಮಂಜಾಲ್ ಶೆಟ್ಟರು, ಶ್ರೀ ಕೆ ಎಲ್. ಸಾಮಿಗ ಮೊದಲಾದವರೂ ಭಾಷ್ಯಜಿಯವರ ವಿಷಯ ಸುರಸವಾದ ಭಾಷಣಗಳನ್ನು ಮಾಡಿದರು. ಶ್ರೀ ಟಿ ಆರ್. ಕಿಣಿಯವರು ಮತ್ತು ಪಾರ್ಟಿಯವರು ಮಹಾತ್ಮಾಜಿಯವರ "ಪ್ರಿಯಗಾನ" ಎಂಬ ಹಾಡನ್ನು ಹಾಡಿದರು. ಮಹಾತ್ಮಾಜಿಯವರಿಗೆ ಅಯುರಾರೋಗ್ಯವನ್ನು ಕೋರಿ, ವಂದೇ ಮಾತರಂ ಹಾಡಿ ಸಭೆಯು ಅಂತ್ಯವಾಯಿತು

ಕುಂಜಾರು— ಪುರಾಣ ಪ್ರಸಿದ್ಧವಾದ ಪ್ರಾಚಕ್ಷೇತ್ರಾಂತರ್ಗತವಾದ ವಿಮಾನ ಗಿರಿಯ ಪಡುಬದಿಯಲ್ಲಿ. ಗಧಾ ತೀರ್ಥದ ಮೇಲ್ಗಡೆ ದೊಡ್ಡ ಬಂಡೆಕಲ್ಲಿನ ಮೇಲೆ ಇರುವ ಪರಬ್ರಹ್ಮನೆ ದೇವಸ್ಥಾನವು ಬಹಳ ಜೀರ್ಣವಾಗಿ ಭಕ್ತಾದಿಗಳ ಸೇವೆಗೆ ಕೂಡ ಅವಕಾಶವಿಲ್ಲದಂತಾಗಿದೆ. ಇದನ್ನು ಜೀರ್ಣೋದ್ಧಾರ ಮಾಡಲು ಕನಿಷ್ಠ ಪಕ್ಷ ಹತ್ತು ಸಾವಿರ ರೂ ಬಾಡಿಗಳಾದರೂ ಬೇಕಾಗಬಹುದು. ಆಸ್ತಿಕ ಮಹಾಜನರೆಲ್ಲಾ ಈ ಜೀರ್ಣೋದ್ಧಾರ ಕಾರ್ಯಕ್ಕೆ ಕೊಡುಗೈಯಿಂದ ಸಹಾಯ ಮಾಡಿ ಪರಶುರಾಮನ ಅನುಗ್ರಹಕ್ಕೆ ಪಾತ್ರರಾಗಬೇಕಾಗಿ ಪ್ರಾರ್ಥಿಸುತ್ತೇವೆ. ಎಂದು ಶ್ರೀ ಕುರ್ಕಾಲು ಗಣಪಯ್ಯ ಕಟ್ಟರು ತಿಳಿಸುತ್ತಾರೆ.

ಪೆಕ್ಕಟ್ಟೆ— ತಾ. 1 10 46ನೇ ದಿನ ಜರಗಿದ ಗಾಂಧಿ-ಜಯಂತಿಯ ಸಮಾರಂಭದಲ್ಲಿ ಅಧ್ಯಕ್ಷರಾಜ B. ಸುಬ್ಬಣ್ಣ ಸೆಟ್ಟರ ನೇತೃತ್ವದಲ್ಲಿ ಇಲ್ಲಿ ಒಂದು ಕೇಂದ್ರ ಕೋಂಗ್ರೆಸ್ ಕಮಿಟಿಯನ್ನು ಸ್ಥಾಪಿಸಲಾಯಿತು ಈ ಕಮಿಟಿಗೆ ಕೆಳಗಣ ಗ್ರಾಮಗಳಿಂದ ಮೆಂಬರರನ್ನು ಆರಿಸಲಾಯಿತು. 1, ಪೆಕ್ಕಟ್ಟೆ. 2, ಉಳ್ತೂರು 3 ವಕ್ವಾಡಿ, 4, ಕೆಮೂರು 5, ಬೆಳೂರು, 6, ಮಣೂರು, ಸದ್ರ ಕೇಂದ್ರ ಕಾಂಗ್ರೆಸ್ ಕಮಿಟಿಗೆ ಅಧ್ಯಕ್ಷ ಶ್ರೀಯುತ ವಿ. ಕೆ. ಶ್ರೀಕಾಳರನ್ನೊಳಗೊಂಡು 10ಜನರನ್ನು ಕಾರ್ಯಕಾರಿ ಸಮಿತಿಯ ಮೆಂಬರರನ್ನಾಗಿ ಆರಿಸಲಾಯಿತು.

ಕಟೀಲು— ಶ್ರೀ ದುರ್ಗಾಪರಮೇಶ್ವರಿ ದೇವಾಲಯದ ಆಶ್ರಯದಲ್ಲಿ ಸಾಮಹಬ್ಬದ ಆಂಗವಾಗಿ ಚರಕಾಜಯಂತಿ ಧರ್ಮ ಸಮ್ಮೇಳನ ಮತ್ತು ಶಾಲಾ ವರ್ಧಂತಿಗಳು ತಾ 2 10 46ರಿಂದ ಇವತ್ತು ದಿನಗಳಲ್ಲಿ ಬಹು ವಿಜೃಂಭಣೆಯಿಂದ ಜರಗಿದವು ತಾ 2ರಲ್ಲಿ ರಾಷ್ಟ್ರ ಧ್ವಜಾರೋಹಣ, ಸೂಲುವ ಸ್ಪರ್ಧೆ ಮೊದಲಾದವುಗಳಾದ ಮೇಲೆ ಮಹಾತ್ಮಾ ಗಾಂಧೀಜಿಯವರ ಆದರ್ಶ ಜೀವನದ ವಿಚಾರವಾಗಿ ಭಾಷಣಗಳಾದವು ರಾತ್ರಿ ಪೂಜೆ ನಡೆಯಿತು ತಾ 3ರಲ್ಲಿ ಶ್ರೀ ಲಕ್ಷ್ಮೀ ದೇವಿ ವಿಗ್ರಹಗಳಿಗೆ ಪಂಚಾಮೃತಾಭಿಷೇಕ ಸಹಿತ "ಶ್ರೀ ರಾಮ ಪಟ್ಟಾಭಿಷೇಕ" ಸಹಿತ ನಡೆಯಿತು ತಾ 4ರಲ್ಲಿ ಶ್ರೀ ನಿತ್ಯೋದಿ ಅನಂತ ಉಪಾಧ್ಯಾಯರವರ ಅಧ್ಯಕ್ಷತೆಯಲ್ಲಿ ಧರ್ಮ ಸಮ್ಮೇಳನವು ಆರಂಭವಾಗಿ ಶ್ರೀ ಕೆ ಆರ್ ಉಡುಪ, ಬಿ ಓ ಎಲ್ ರವರಿಂದ ಗತ ಸಭೆಗಳ ವರದಿ ವಾಚನ, ಎಚ್, ರಾಮ ರಾವ್ M.A.L.T. ಶ್ರೀ ಎಮ್ ಆರ್ ಶಾಸ್ತ್ರಿ, B. O. L. B.T. ಶ್ರೀ ಲಕ್ಷ್ಮಣ ದೇವ ವಿದ್ಯಾಧಿಕ್ಷ ಶ್ರೀ ಕೆ. ಶ್ರೀನಿವಾಸ, ಇವರ ಭಾಷಣಗಳಾದವು. ತಾ 5 10 46ರಲ್ಲಿ ಶಾಲಾ ವರ್ಧಂತಿಯು ಶ್ರೀ ಕೆ. ಶ್ರೀನಿವಾಸ ಉಡುಪರವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು.

ಉಡುಪಿ.

ಗಾಂಧಿ ಜಯಂತಿ ಮಹೋತ್ಸವವು— ಉಡುಪಿಯಲ್ಲೂ ತಾ. 2ರಲ್ಲು ಬಹು ವಿಧ ಕಾರ್ಯಕ್ರಮಗಳಿಂದ ಜರಗಿತು. ಆ ದಿವಸ ಸಂಜೆ ರಥಬೀದಿಯಲ್ಲಿ ಶ್ರೀ ಯು. ಎಸ್. ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿದ ಮಹಾಜನ ಸಭೆಯಲ್ಲಿ ಶ್ರೀಗಳಾದ ಯು. ನಾಗಪ್ಪ ಕಾಮತ್, ಎಮ್. ವಿ. ಹೆಗ್ಡೆ, ಪಿ. ಮಂಜುನಾಥನಾಯ್ಕರು ಗಾಂಧಿಜೀಯವರ ಆದರ್ಶ ಧ್ಯೇಯಗಳನ್ನೆತ್ತಿ ಭಾಷಣಗಳಿತ್ತರು. ಮಹಾತ್ಮರಿಗೆ ಶ್ರೇಯಃ ಪ್ರಾರ್ಥನೆಯೊಂದಿಗೆ ಸಭಾಂತ್ಯವಾಯಿತು.

ಶೈಲ ಚಿತ್ರ ಅನಾವರಣ— ಶ್ರೀ. ಯು ಎ. ಪೈಗಳವರು ಹೊಸತಾಗಿ ಕಟ್ಟಿಸಿದ ಜಯ ಪ್ರಕಾರ ಕೃಷಿ ಕೈಗಾರಿಕೆಯ ಶ್ರೀಮದ ಶಾರದಾಲಯದಲ್ಲಿ ತಾ. 2ಲ್ಲು ಪಂಡಿತ ನೆಹರು ಮತ್ತು ನೇತಾಜಿಯವರ ಶೈಲ ಚಿತ್ರಗಳನ್ನು ಶ್ರೀಗಳಾದ ಟಿ. ರಮೇಶ ಪೈ ಮತ್ತು ಟಿ. ಅನಂತ ಪೈಯವರು ಅನುಕ್ರಮವಾಗಿ ಅನಾವರಣ ಮಾಡಿದರು. ಡಾ। ಪಿ. ಆರ್. ನಾಯ್ಕರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಶ್ರೀ ಕೃಷ್ಣ ಮಹೋತ್ಸವ— ನವರಾತ್ರಿ ಮಹೋತ್ಸವವು ಪರ್ಯಾಯ ಶ್ರೀ ಶೀರೂರು ಮುಂದೆ ಶ್ರೀ ಲಕ್ಷ್ಮೀಂದ್ರ ತೀರ್ಥ ಶ್ರೀ ಪಾದಂಗಳವರಿಂದ ಧಾರ್ಮಿಕ ಕ್ರಮ ಸಂಪ್ರದಾಯಗಳಿಗನುಸಾರವಾಗಿ ಜರಿಗೋ ರೀತಿಯಲ್ಲಿ ಜರಗಿತು. ಮಹಾಭಾರತ ಪಾರಾಯಣ, ಪುರಿಕ್ಷಾ ಕಾಲಕ್ಷೇಪ, ಧರ್ಮ ಗ್ರಂಥಗಳ ಪಾರಾಯಣ ಇತ್ಯಾದಿ ಕಾರ್ಯಕ್ರಮಗಳಿದ್ದುವು.

ಆರೋಗ್ಯಕರವಲ್ಲದ ಗೋಧಿಯು— ಈಗೆರಡು ವಾರದಿಂದ ಸೀದಾ ಕ್ಷೇತ್ರದಲ್ಲಿ ಕೊಡಲಾಗುತ್ತಿದೆ. ಪುಡಿ, ಧೂಳು, ಕುಟ್ಟೆ ಹಿಡಿದ ಈ ಗೋಧಿಯು ಈ ತನಕ ಎಲ್ಲಿಯೆತ್ತೆಂದು ಜನರಿಗೆ ತಿಳಿಯದಾಗಿದೆ. ಹೆಲ್ತ್ ಇಲಾಖೆಯವರು ದೇಶದಾದ್ಯಂತ ಎಷ್ಟಾಂಶವಿ ಕಮಿಟಿಯ ಮೆಂಬರರೂ ಎಸ್, ಕೆ, ಸಿ, ಸಿ, ಹೋಲ್‌ಸೇಲ್ ಸ್ಟೋರಿನ ಅಧಿಕಾರಿಗಳೂ ಮಹಾಜನರ ಗೋಳಿಗೆ ಸದುತ್ತರವನ್ನೀಯುವರೇ ಎಂಬುದೀಗ ಎಲ್ಲೆಲ್ಲೂ ಕೇಳಿ ಬರುವ ಪ್ರಶ್ನೆ.

CHAMPAE'S
Snow & Lastrex
(*Sole Distributers for India.*)
Prop: K. G. NAYAK,
Santhekatte, UDIPI, S K.

ಮಹಾತ್ಮಾಗಾಂಧಿಯವರು

"ನನಗೆ ಸಂದೇಹಗಳು ಬರುವಾಗ, ನಿರಾಶೆಯು ನನ್ನ ಮುಂದೆ ನಿಂತಾಗ, ಮತ್ತು ಆಕಾಶ ಮಂಡಲವಲ್ಲಿ ಯಾವ ಜ್ಯೋತಿಯೂ ಗೋಚರಿಸದಿರುವಾಗ ನಾನು ಗೀತೆಯನ್ನು ಓದುತ್ತೇನೆ. ಆಗ ನನ್ನ ಮನಸ್ಸಿಗೆ ಶಾಂತಿಯನ್ನು ಕೊಡುವಂತಹ ಶ್ಲೋಕವು ಒಂದಿಲ್ಲದಿದ್ದರೆ ಮತ್ತೊಂದು ಸಿಕ್ಕುವುದು." ಎಂದು ಗೀತೆಯ ಕುರಿತು ಹೇಳಿದ್ದಾರೆ.

ಗೀತೆಯ ಕೈಗನ್ನಡಿ

ದಿವಂಗತ ಹೊಸಕೆರೆ ಬೆದಂಬರಯ್ಯನವರಿಂದ ರಚಿಸಲ್ಪಟ್ಟ

ಗೀತೆಯ ಸಮೂಲ ಭಾಷಾಂತರ.

ಪುಟಗಳು 400ಕ್ಕೂ ಮಿಕ್ಕಿನ. ಬೆಲೆ 0-8-0 ಮಾತ್ರ.

ಪ್ರತಿಗಳು ಎಲ್ಲ ಪ್ರಸಿದ್ಧ ಪುಸ್ತಕ ವ್ಯಾಪಾರಿಗಳಲ್ಲೂ ದೊರೆಯುತ್ತವೆ.

ಹನ್ನೆರಡಾಣೆ ಸ್ಟ್ಯಾಂಪನ್ನು ನವಭಾರತ ಪುಸ್ತಕ ಭಂಡಾರ, ಉಡುಪಿ ಇಲ್ಲಿಗೆ ಕಳಿಸಿದರೆ ಒಂದು ಪ್ರತಿಯನ್ನು ರಿಜಿಸ್ಟ್ರಿಮಾಡಿ ಕಳಿಸುವರು.

ಮಂಗಳೂರು

ಮದ್ರಾಸು ಗವರ್ನರರು—ಪತ್ನೀ ಸಹಿತರಾಗಿ ತಾ ೬ರಂದು ಸಂಜೆ ಮಡಿಕೇರಿ ಪುತ್ತೂರು ಮಾರ್ಗವಾಗಿ ೬.೩೦ಗೆ ಮಂಗಳೂರಿಗೆ ಬಂದು, ತಾ. ೭-೪-೪೬ರಲ್ಲಿ ನಗರದ ನಾನಾ ಸಂಸ್ಥೆಗಳನ್ನು ಸಂದರ್ಶಿಸಲಿರುವರು. ಆಹಾರಾಭಾವದ ಕುರಿತೂ ಅನುಭವ ಪೂರಿತಿಕೊಳ್ಳುವರಂತೆ.

ಗಣಪತಿ ಹೈಸ್ಕೂಲಿನಲ್ಲಿ—ವಿಜಯ ದಶಮಿ ಉತ್ಸವವು ತಾ. ೨೮ರಂದು ಜರಿ ತನಿಕ ನಡೆಯಿತು. ತಾ ೨೮ರಂದು ಸ್ತ್ರೀಯರ ದಿನಾಚರಣೆಯು ಶ್ರೀಮತಿ ಲಕ್ಷ್ಮೀಬಾಯಿ ಚಂದರ್ ರವರ ಅಧ್ಯಕ್ಷತೆಯಲ್ಲಿ ಜರಗಿತು. ತಾ ೪ರಂದು ಹಳೆ ವಿದ್ಯಾರ್ಥಿಗಳ ದಿನಾಚರಣೆ ನಡೆಯಿತು. ತಾ. ೫ರಂದು, ಬಾಲಾ ದಿನಾಚರಣೆಯು ರಾ. ಬ. ಎಂ. ಆರ್. ಚಂದರ್ ಅವರ ಅಧ್ಯಕ್ಷತೆಯಲ್ಲಿ ಜರಗಿತು.

ನಾಡಹಬ್ಬವನ್ನು—ಈ ವರ್ಷ ಕೆನರಾ ಹೈಸ್ಕೂಲಿನ ಭುವನೇಂದ್ರ ಸಭಾಸದಲ್ಲಿ ಮಿತ್ರ ಮಂಡಲಿ, ಪಂಡಿತ ಸಂಘ, ಪ್ರಕಾಶ ಸಂಘ, ಕಲ್ಚರ್ ಎಸೋಸಿಯೇಷನ್ ಮೊದಲಾದ ಸಂಘಗಳ ಆಶ್ರಯದಲ್ಲಿ ಆಚರಿಸಲಾಯಿತು. ತಾ. ೪ರಂದು ಶ್ರೀ ಎ. ಬಿ. ಶೆಟ್ಟರ ಅಧ್ಯಕ್ಷತೆಯಲ್ಲಿ ಉಪಾಹಾರನೆಯಾದ ಬಳಿಕ ಶ್ರೀ ಎಂ. ತಿಮ್ಮಪ್ಪಯ್ಯನವರು ಭಾಷಣವಿತ್ತರು. ತಾ. ೫ರಂದು ಮೈಸೂರಿನ ಗವಾಕಿ ಶ್ರೀ ಕೃಷ್ಣ ರಾಯರಿಂದ ಸಂಜೆ ಭಾರತ ಪಾಜನ ನಡೆಯಿತು. ತಾ ೬ರಂದು ಶ್ರೀ ಗೋವಿಂದ ಪೈ ಅವರ ಅಧ್ಯಕ್ಷತೆಯಲ್ಲಿ ಸಹಿತ್ಯವಿಮರ್ಶಾ ಭಾಷಣ ನಡೆಯಿತು. ಶ್ರೀ ಕೆ. ಶಂಕರ ಭಟ್ಟರು ಭಾಷಣವಿತ್ತರು. ಪ್ರತಿ ದಿನ ೭ಗಂಟೆಯಿಂದ ವಿನೋದಾವಳಿಯೂ ಇತ್ತು.

ಬಿಲ್ಲವ ಯೂನಿಯನಿನ—ಆಶ್ರಯದಲ್ಲಿ ತಾ. ೯ರಂದು ಸಂಜೆ ಗೋಕರ್ಣನಾಥ ದೇವಸ್ಥಾನದ ವರಾಂಡದಲ್ಲಿ ಶ್ರೀ ಎ. ಬಿ. ಶೆಟ್ಟರ ಅಧ್ಯಕ್ಷತೆಯಲ್ಲಿ ಗಾಂಧೀಜಯಂತಿಯು ಆಚರಿಸಲ್ಪಟ್ಟಿತು. ಶ್ರೀ ಅಣ್ಣಪ್ಪ ಕಾರಂತ, ಬಿ. ವೈಕುಂಠ ಬಾಳಿಗೆ, ಕೆ. ಕೆ. ಶೆಟ್ಟಿ, ಕೆ. ಆರ್. ಗುರು ಮೊದಲಾದವರು ಭಾಷಣವಿತ್ತರು.

ಗಾಂಧೀ ಜಯಂತ್ಯುತ್ಸವ— ಕಳೆದ ತಾ. 2ರಲ್ಲು ಜಿಲ್ಲಾ ಕಾಂಗ್ರೆಸ್ ಕಮಿಟಿ ಆಶ್ರಯದಲ್ಲಿ ಗಾಂಧಿ ಜಯಂತಿ ಸಮಾರಂಭವು ಅತ್ಯಂತ ವಿಜೃಂಭಣೆಯಿಂದ ಜರಗಿತು. ಬೆಳಿಗ್ಗೆ ಪ್ರಭಾತ ಫೇರಿ, ಧ್ವಜವಂದನೆ, ತ್ರಿವರ್ಣ ಬೀಜುಗಳ ಮಾರಾಟ ಮುಂತಾದ ಕಾರ್ಯಕ್ರಮಗಳು ನಡೆದು ಸಾಯಂಂ. ಗಾಂಧೀಜಿಯವರ ದೊಡ್ಡ ಭಾವಚಿತ್ರವೊಂದನ್ನು ಪುಷ್ಪಗಳಿಂದ ಆಲಂಕೃತನಾದ ಒಂದು ಕುದುರೆ ಸಾರೋಟಿದಲ್ಲಿ ಇರಿಸಿ, ಬಳಿಯಲ್ಲೇ ತ್ರಿವರ್ಣ ನೂಲಿನಿಂದ ಅವರಿಸಲ್ಪಟ್ಟ ಚರಕವನ್ನಿರಿಸಿ, ನಗರದ ಪ್ರಮುಖ ಬೀದಿಗಳಲ್ಲಿ ಕಾಂಗ್ರೆಸ್ ಸ್ವಯಂಸೇವಕರ ಪೆರವಣಿಗೆ ನಡೆಯಿತು. ೬.೩೧ ಗಂಟೆಗೆ ಸೆಂಟ್ರಲ್ ಮೈದಾನಿನಲ್ಲಿ ಶ್ರೀ ಎ ಬಿ ಶೆಟ್ಟಿ, ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿತು. ಅರಬ್ಬದಲ್ಲಿ ಆರ್. ಎಸ್. ಡಿ. ಸ್ವಯಂಸೇವಕರಿಂದ ಪ್ರಾರ್ಥನೆ ನಡೆಯಿತ್ತು. ಶ್ರೀ ಬಿ. ವಿ. ಬಾಳಿಗರು ತಾವೇ ರಚಿಸಿದ ಎರಡು ರಾಷ್ಟ್ರಗೀತೆಗಳನ್ನು ಹಾಡಿದರು. ಅನಂತರ ಶ್ರೀ ಎ. ಬಿ. ಶೆಟ್ಟರು ಭಾಷಣ ಮಾಡುತ್ತ, "ಸ್ವಾತಂತ್ರ್ಯವು ಸನ್ನಿಹಿತವಾಗಿದೆ. ಗಾಂಧೀಜಿಯವರ ಇಚ್ಛಾಪೂರ್ತಿಯಾಗುವ ದಿನ ದೂರವಿಲ್ಲ. ಸ್ವಾತಂತ್ರ್ಯವನ್ನು ಎದುರುಗೊಳ್ಳಲು ಜನತೆ ಸಿದ್ಧವಾಗಬೇಕು" ಮುಂತಾಗಿ ಮಾತನಾಡಿದರು. ಗಾಂಧೀಜಿಯವರಿಗೆ ದೀರ್ಘಾಯುರಾರೋಗ್ಯಗಳನ್ನು ಕೋರಿ ಶ್ರೀಮತಿ ಬ್ರಿಟೋ ಮತ್ತು ಶ್ರೀ ಕೆ. ಕೆ. ಶೆಟ್ಟರ ಭಾಷಣಗಳಾದ ನಂತರ, ಶ್ರೀ ಬಿ. ವಿ. ಬಾಳಿಗರು "ಬಾಪುವು ಅಮರನಾಗಲಿ" ಎಂದು ಹಾರೈಸುವ ಒಂದು ಗದ್ಯಪದ್ಯಮಯವನ್ನು ಓದಿದರು. ನಡುವೆ ಮಳೆಯು ಬಂದುದರಿಂದ, ಶ್ರೀ ಎಚ್. ನಾರಾಯಣರಾಯರು ಗಾಂಧಿ ಜಯಂತ್ಯುತ್ಸವದಲ್ಲಿ ಸಪಥಗಿಯಾದವರೆಲ್ಲರಿಗೆ ಧನ್ಯವಾದ ಗಳನ್ನರ್ಪಿಸಿ ಸಭೆ ಜರಿಸಿದರು.

ತೆಂಗಿನ ಕಾಯಿ ಬೆಲೆ—ಒಂದಕ್ಕೆ ೮ ಆಣೆ, ಅರೂವರೆ ಆಣೆ ನಿಂತಿದೆ. ಇನ್ನೂ ಹೆಚ್ಚುವ ಸಂಭವ ಹೊರತು ಇಳಿಮುಖವಾಗುವ ಚಿಹ್ನೆ ತೋರುವುದಿಲ್ಲ. ಬೆಲೆಯನ್ನು ಸ್ಥಿಮಿತಕ್ಕೆ ತರುವುದರ ಕಡೆಗೆ ಸಂಬಂಧಪಟ್ಟ ಅಧಿಕಾರಿಗಳು ಈಗಲೇ ಸಿಗಾ ತೆಗೆದುಕೊಳ್ಳುವುದವಶ್ಯ.

ಕುಚಲು ಅಕ್ಕಿ ಹೆಚ್ಚು ಸಿಗಬೇಕು—ಇದೀಗ ಹೆಚ್ಚಿನ ಅಕ್ಕಿ ಡಿಪೋಗಳಲ್ಲಿ ಬೆಳ್ತಿಗೆ ಮತ್ತು ಪಂಬಾಬಿ ಅಕ್ಕಿಗಳೇ ಹೆಚ್ಚಾಗಿ ಸಿಗುತ್ತವೆ. ಹೊರತು ಕುಚ್ಚಲು ಅಕ್ಕಿ ಸಿಗುವುದಿಲ್ಲ. ಬೆಳ್ತಿಗೆಯು ಅನ್ನ ಹೊಟ್ಟೆಗಾಗದ ವರಿಗೆ ಇದರಿಂದ ತುಂಬಾ ಕಷ್ಟವಾಗಿದೆ ಬೆಳ್ತಿಗೆ ಮತ್ತು ಕುಚ್ಚಲು ಸರಿಸಮವಾಗಿ ದೊರೆಯುವ ವ್ಯವಸ್ಥೆ ಆಡಳಿತ ಯಂತ್ರ ಮಾಡಬೇಕಾಗಿದೆ.

ರೇಶನ್ ವಿತರಣೆ—ರೇಶನ್ ಅಂಗಡಿಗಳಲ್ಲಿ ಹೆಚ್ಚಿನ ಕಡೆಗಳಲ್ಲಿ ಆಳತೆಯಲ್ಲಿ ಅನ್ಯಾಯವಾಗುತ್ತಿರುವುದಾಗಿ, ಪ್ರತಿಸಲವೂ ಆಳತೆಯಲ್ಲಿ ಕಡಿಮೆಬರುವ ನಿದರ್ಶನಗಳು ಸಂಖ್ಯೆಗಟ್ಟಲೆಯಾಗಿವೆ. ಬಡವರು ಗೋಳಿಡುತ್ತಾರೆ. ಆಳತೆಯ ಚಮತ್ಕಾರ ಬಲವಾಗಿದೆ. ಜನತೆಯ ಸರಕಾರ ಇದನ್ನು ಶೀಘ್ರ ಪರಿಹರಿಸುವುದವಶ್ಯವಿದೆ.

ಸಾನ್ನಾನ—ತಾ.1ರಲ್ಲು ಆಯುರ್ವೇದ ಪಂಡಿತ ಶ್ರೀ.ಸಿ.ಲಕ್ಷ್ಮೀನಾರಾಯಣ ಮಂಜರ ಅಧ್ಯಕ್ಷತೆಯಲ್ಲಿ ಅಸುಪಾಸಿನ ತರುಣ ಮಿತ್ರ ವರ್ಗದವತಿಯಿಂದ 'ಮಿತ್ರ ವೈದ್ಯ' ಸ್ಥಾಪಿಸಲಾಯಿತು.

ಕಂಡ್ಲೂರು—ತಾ 4 10-46ರಲ್ಲಿ ಶ್ರೀ ಕೃಷ್ಣ ಉಡುಪರ ಅಧ್ಯಕ್ಷತೆಯಲ್ಲಿ ಸ್ಥಳೀಯ ಗಾಂಧಿ ಮೈದಾನದಲ್ಲಿ ಗಾಂಧಿ ಜಯಂತಿಯ ಮಹೋತ್ಸವವು ಬಹಳ ವಿಜೃಂಭಣೆಯಿಂದ ನಡೆಯಿತು. ಶ್ರೀಗಳಾದ ರಾಮಣ್ಣ ಶೆಟ್ಟಿ, ಎಂ ಶಿವರಾಮ ಹೆಗ್ಡೆ, ಜಿ. ಸದಾನಂದ, ಕಾವಾಡಿ ಮುಖ್ಯೋಪಾಧ್ಯಾಯ, ಎಸ್. ಸೀನಪ್ಪ ಶೆಟ್ಟಿ, ಕೆ. ಶಂಕರ ಶೆಟ್ಟಿ ಮೊದಲಾದವರು ಭಾಷಣಮಾಡಿದರು.

ಕಾರ್ಕಳ-ಅಸಿಸ್ಟಾಂಟ್ ಪಂಚಾಯತ ಆಫೀಸರರಾಗಿದ್ದ ಶ್ರೀ. ಕೆ. ಶೀನ ಶೆಟ್ಟಿ, B.A. -ಸರು ಜಿಲ್ಲಾ ಪಂಚಾಯತ ಆಫೀಸರರಾಗಿ ಸೀಲಿಗಿರಿಗೆ ವರ್ಗಾಯಿಸಲ್ಪಟ್ಟಿದ್ದಾರೆ

ನೋಟೀಸು

ಪುತ್ತೂರು. ಡಿ. ಮು. ಕೋರ್ಟಿನಲ್ಲಿ.

ಕ್ರಮ ನಂಬ್ರ 324/1945.

ವಾದಿ—ಸುಬ್ರಾಯ ಭಟ್ಟ.

ಪ್ರತಿವಾದಿರು— ಜೈನಾಬಿ ಮೈದಿನ್ ಸಾಹೇಬ ಕೂಡಾ.

13th Defendant—Abdul Khadir Saheb, son of Kasim Saheb, c/o. Sheik Mahamad Jadri Brothers, Cloth Merchants. No. 480 Mithai street, camp Devalali.

ಯವರೀಗೆ—

ಮೇಲ್ಕಂಡ ವ್ಯಾಜ್ಯದ ದಾನಾ ಅಸ್ತಿಯಿಂದ 11|2ನೇ ಅಂಶ ವಿಂಗಡ್ಡಿ ತನ್ನ ಸ್ವಾಧೀನ ಬಿಡಿಸಿಕೊಡಬೇಕೆಂದು ವಾದಿ ದಾಖಲು ಮಾಡಿದ ಸದ್ರಿ ವ್ಯಾಜ್ಯವು ಸದ್ರಿ 13ನೇ ಪ್ರತಿವಾದಿಗೆ ನೋಟೀಸು ಬಗ್ಗೆ 1946ನೇ ಜನ್ವರಿ ಆಕ್ಟೋಬರ್ ತಾ. 31ನೇ ದಿವ್ಸ ಪಗ್ಗಲ್ 10 ಘಂಟೆಗೆ ಸದ್ರಿ ಕೋರ್ಟಿನಲ್ಲಿ ವ್ಯಾಪೆ ಆಗಿರುವದ್ರಿಂದ, ಆ ದಿವ್ಸ ಸದ್ರಿ ಪ್ರತಿವಾದಿಯು ಸದ್ರಿ ಕೋರ್ಟಿನಲ್ಲಿ ಹಾಜ್ರಾಗಿ ಉದಪಂಸಲು ತಪ್ಪಿದ್ದಲ್ಲಿ ಆತನನ್ನು ಶಿವಾಯಿ ಮಾಡಿ ವ್ಯಾಜ್ಯವನ್ನು ಯುಕ್ತ ಕಂಡಂತೆ ಮುಂದರ್ಸಿಲಾದೀತು ಎಂಬ ಸಂಗ್ತಿ ಕೋರ್ಟು ಹುಕ್ಂ ಪ್ರಕಾರ ಯಾ ನೂಲ್ಯ ತಿಳಿಸೋಣಾಗುತ್ತದೆ.

Puttur 1-10-46 } (sd) K. K. Shenai. Pleader for Plff.

FOR LIFE ASSURANCE
CONSULT
The New Gaurdian of India Life Insrce. Co., Ltd.,
(Chairman.- The Hon'ble Mr. M. CT. M Chidambaram Chettyar.)
A policy in this progressive Life Office is a good investment; its Agency is a valuable business connection.

LOCAL OFFICES IN SOUTH KANARA	HEAD OFFICE
MANGALORE & KARKALA.	"United India Life Bldg" Esplanade, Post Box No 142. MADRAS.

ನೆನೋರಿಯಾ ಪರವಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಘೋತರಕ್ಕೆ ಹಳದೀ ಡಾಗು ಸೆತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೆಂದ್ರಿ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ೪ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದಶ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ಒಕ್ಕೆ ೫ರೂ. ಪೋಸ್ಟೆ ಚಾರ್ಜ ೮ ಆಣೆ.

ವಿಶೇಷ: ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ಡಾನಾಗೇರಿ:ಹಾವಣಗೇರಿವೈಸ್. ಪತ್ರವ್ಯವಹಾರ ಮಾಡತಕ್ಕ ವಿಳಾಸ ವಿಸ್ತಾರ

ರೇವಣಸಿದ್ದಪ್ಪ ಹಾಲಪ್ಪ ಡಾವಣಗೇರಿ,
ಆಯುರ್ವೇದ ಔಷಧಾಲಯ, ಗದಗ.
Ayurveda Oushadalaya, GADAG

ಪ್ರಕಟಣೆ

ಜಿಲ್ಲಾ ಬೋರ್ಡು ಚುನಾವಣೆ ವಿನಂತಿ

ಇದೇ ಬರುವ ದ ಕ. ಜಿಲ್ಲಾ ಬೋರ್ಡು ಚುನಾವಣೆಯಲ್ಲಿ ಉಡುಪಿ ತಾಲೂಕು ಕಟ್ಟಾಡಿ ಸರ್ಕಲಿನ ಕ್ರಿಶ್ಚಿಯನ್ ರಿಜರ್ವ್ ಸೀಟಿಗೆ ನಾನೊಬ್ಬ ಅಭ್ಯರ್ಥಿಯಾಗಿ ನಿಲ್ಲುತ್ತೇನೆ. ಈ ಸರ್ಕಲಿನ ಮತದಾರರೆಲ್ಲರೂ ತಮ್ಮ ಅಮೂಲ್ಯ ಮತಗಳನ್ನು ನನಗೆನೇ ಕೊಟ್ಟು ಪ್ರೋತ್ಸಾಹಿಸಬೇಕಾಗಿ ಈ ಮೂಲಕ ವಿನಂತಿಸಿಕೊಳ್ಳುತ್ತೇನೆ.

ಎಂ ಜೆ. ನಜರೆತ, ಶಿರ್ವ.

ಬೊಂಬಾಯಿ.

ಹೊಟೆಲಿನಲ್ಲಿ ಹರಿಜನರಿಗೆ ಪ್ರವೇಶ—ಬೊಂಬಾಯಿ ಪ್ರಾಂತದ ರಾಕಾ ಜಿಲ್ಲಾ ದಾಣು ಎಂಬ ಸ್ಥಳದಲ್ಲಿ ಮದ್ರಾಸ್ ಸಂಸ್ಥಾನದ ಯತ್ತು ಹನ್ನೆರಡು ಜಪಾ ಹೊಟಿಲು ಗಳಿದ್ದು ಅವೀಗ ತಾ. 2ರಲ್ಲು ಗಾಂಧಿ ಜಯಂತಿ ದಿನದ ರುಚಿಸೂಜನಾರ್ಥವಾಗಿ ಹರಿಜನರಿಗೆ ಪ್ರವೇಶ ಕೊಟ್ಟಿದ್ದು ಅಭಿನಂದನೀಯವೆಂದೂ ಇದೇ ಮಾದರಿಯನ್ನು ಇತರ ಹೊಟೆಲ್ ಮ್ಯಾಲಕರು ಅನುಸರಿಸುವುದು ಯೋಗ್ಯವೆಂದೂ ಉದ್ಯಾವರ ಶ್ರೀ ಪಿ. ಸಿ. ಕಾಮತರು ಬರೆಯುತ್ತಾರೆ.

ಪ್ಲಣಿಕ ಗುಣಕೊಡುವ ಔಷಧದ ಬೆನ್ನು ಹತ್ತಿ ಮರುಳಾಗಬೇಡಪ್ಪಾ.

ಪುರೋಹಿತ ಶ್ವಾಸಹಾರೀ ಔಷಧ ಮಾತ್ರ ಬೇರೆ ಅಮಿ ದಮ್ಮನ್ನು ಗಳೇ ದುಮುಕಿ, ಇಡದೆ ಅದನ್ನು ಬೇರುಸಹಿತ ಕಿತ್ತು ಹಿಗೆಯುವುದು. ಈ ಔಷಧ ಸೇವನೆ ಮಾಡಿದಾಗಲೇ ಕೆಮ್ಮೂ ತೇಕೂ ನಿಲ್ಲುವದು; ಮೊಟ್ಟೆ ಹಸ ನಾಗುವದು; ಹಜನಕ್ರಿಯೆಯು ತಿದ್ದು ತಪ್ಪು; ಪುಷ್ಪುಸಗಳು ಗಟ್ಟಿಯಾಗುವ್ರವ. ಆ ಮೇಲೆ ದಮ್ಮಿರಲಿಕ್ಕೆ ಸ್ಥಳವೇ ಸಿಗುವದಿಲ್ಲ.

ದಮ್ಮು, ತೇಕು, ಬೆನ್ನು ನೋವು, ಗಂಟಲ ಉರಿಯುವಂಥ ಕೆಮ್ಮು ಮುಂತಾದ ವಿಕಾರಕ್ಕೆ ಪುರೋಹಿತಶ್ವಾಸಹಾರೀ ಪ್ಲೇನ (ನೀಲೀ ಪ್ಯಾಕಿಂಗ್) ತೆಗೆದುತಿಳ್ಳಬೇಕು. ಅಜೀರ್ಣ ಮತ್ತು ಅಮ್ಲಪಿತ್ತದಿಂಪ ಬಳಲುವ ದಮ್ಮಿನವರು ಶ್ವಾಸಹಾರೀ ಕಂಪೌಂಡ (ಕೆಂಪು ಪ್ಯಾಕಿಂಗ್) ತೆಗೆದುಕೊಳ್ಳಬೇಕು.

೩ ಔನ್ಸ್ ೬ ಔನ್ಸ್ ೧೨ ಔನ್ಸ್ ಬಾಟ್ಲಿಗೆ ಕ್ರಮವಾಗಿ ರೂ.೩-೬-೦; ೫.೦೨.೦ ಮತ್ತು ೧೦-೦-೦

ಪುರೋಹಿತ ಫಾರ್ಮಸಿ, ಕೊಲ್ಹಾಪುರ

ಸ್ಟಾಕಿಸ್ಟರು:ಪೊಪ್ಯುಲರ್ ಸ್ಟೋರ್ಸ್, ಹುಂಗಳೂರು;ಟಿ.ಸಿ.ನಟೆಶಾಜನ್&ಕೊ.ಮೈಸೂರು.

ಮುಂಬಯಿ ಸೇಲ್ಸ ಏಜಂಟರು:—

ವನಮಾಲೀ ಭೇಷಕ ಮತ್ತು ಕಂಪನಿ,
ಪ್ರಿನ್ಸೆಸ್ ಸ್ಟ್ರೀಟ್, ಮುಂಬಯಿ ೨.

PUROHIT SHWAS-HARI

ದಕ್ಷಿಣ ಕನ್ನಡ

ಕಡಂದಲೆ—ಬೋರ್ಡು ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ತಾ. 1-10-46ರಲ್ಲು ವಿದ್ಯಾರ್ಥಿಗಳ ತಿಂಗಳ ಹಬ್ಬದ ಉತ್ಸವವೂ ಮಹಾತ್ಮ ಗಾಂಧೀಜಿಯವರ ಜನ್ಮದಿನ ಆಚರಣೆಯೂ ಬಹು ವಿಜೃಂಭಣೆಯಿಂದ ಜರಗಿತು. 300ಕ್ಕೆ ಮಿಕ್ಕಿದ ಬಾಲಕ ಬಾಲಕರಿಗೆ ತಿಂಡಿಯನ್ನು ಹಂಚಲಾಯಿತು.

ಎಡಪದವು—ಎಡಪದವು ಬೋರ್ಡು ಶಾಲೆಯಲ್ಲಿ ಎಂದಿನಂತೆ ಇದೇ ತಾ. 2-10-46ರಲ್ಲು ವಿಜಾರಗುತ್ತಿರುವ ಶ್ರೀ.A. ಸುಬ್ಬಯ್ಯ ಶೆಟ್ಟರ ಅಧ್ಯಕ್ಷತೆಯಲ್ಲಿ ರಾದಾ ಪೂಜೆಯು ಬಹಳ ವಿಜೃಂಭಣೆಯಿಂದ ಜರಗಿತು. ಇದರೊಂದಿಗೆ ಹೆತ್ತವರ ಕೂಟವೂ ಜರಗಿತು. ಮಕ್ಕಳ ವಿವಿಧ ವಿನೋದಾವಳಿಗಳಿದ್ದವು. ಶಾಲೆಯ ಅಭಿವೃದ್ಧಿಗೆ ಕಾರಣರಾದ ಮುಖ್ಯ ಉಪಾಧ್ಯಾಯ ಶ್ರೀ. ಎಂ. ಕೊರಗ ಶೆಟ್ಟರು ವಂದಿಸಿ ಸಭೆಯು ಜರಿತು.

ಕನ್ನಡದಲ್ಲಿ ರೇಡಿಯೋ ಭಾಷಣ—ತಾ. 11-10-46ನೇ ಸಾಯಂಕಾಲ 7, 45 ಕ್ಕೆ ಶ್ರೀ ಮುಳಿಯ ತಿಮ್ಮಪ್ಪಯ್ಯನವರು ಕನ್ನಡಿಗನ ನಾಡು (1) ಕವಿಯ ಕಣ್ಣಿಗೆ—ಭಾಷಣ ಮಾಡಲಿರುವರು.

ಬೆಳ್ಳೆ—ಬೊರ್ಡು ಎಲಿಮೆಂಟ್ರಿ ಶಾಲೆಯಲ್ಲಿ ತಾ 2-10-1946ರಲ್ಲಿ ಶ್ರೀ. ಬಿ. ನಾರಾಯಣ ಶೆಟ್ರ ಅಧ್ಯಕ್ಷತೆಯಲ್ಲಿ, ರಾದಾ ಪೂಜೆಯು ಬಹಳ ವಿಜೃಂಭಣೆಯ ೦ಪ ನೆರವೇರಿತು

ಕಟಪಾಡಿ—ಬ್ರಹ್ಮಶ್ರೀ ನಾರಾಯಣ ಗುರುಸ್ವಾಮಿ ಸೇವಾಸಮಿತಿಯು ಕಟ್ಟಿಸುತ್ತಿರುವ ದೇವಸ್ಥಾನದ ಪವಿತ್ರ ಕೆಲಸಗಳಿಗೆ ಗತ ವರ್ಷದಲ್ಲಿ ತನುಮನ ಧನದಿಂದ ಸಹಾಯ ಮಾಡಿದ ಎಲ್ಲಾ ಉದಾರ ಮಹಾನೀಯರಿಗೆ ಈ ಸಮಿತಿಯು ಹೃತ್ಪೂರ್ವಕಧನ್ಯವಾದಗಳ ನ್ನರ್ಪಿಸುತ್ತದೆ. ಚಾಲ್ತಿ ವರ್ಷದಲ್ಲಿಯೂ ಶ್ರೀ ಸ್ಥಾನ ರಜತೆಯ ಪುಣ್ಯ ಕಾರ್ಯದಲ್ಲಿ, ಧರ್ಮಾಭಿಮಾನಿಗಳೆಲ್ಲರೂ ಸಹಾಯ ಮಾಡಿ, ಪ್ರೋತ್ಸಾಹಿಸಬೇಕಾಗಿ ಸಮಿತಿಯ ಕಾರ್ಯದರ್ಶಿಕ. ಶ್ರೀ ಕೆ. ರಂಗನವರ ವಿನಮ್ರ ವಿನಂತಿಯಾಗಿರುತ್ತದೆ.

PUBLICATION

ಪುತ್ತೂರು ರೆವೆನ್ಯೂ ಡಿವಿಜನಲ್ ಆಫೀಸರರ ಕೋರ್ಟಿನಲ್ಲಿ.

H. R. C - 16

ಉಪ್ಪಳ ಎಂಬುವಿ ಬ್ಯಾರಿ, ಕುಂಞಾಮ್ಮದೆ ಬ್ಯಾರಿ ಮಗ, ಪುತ್ತೂರು ಕ್ಷೇಬಾ ಅರ್ಜಿದಾರ. ಯು ಮಹಮ್ಮದ್ ಬ್ಯಾರಿ, ಉದ್ಯಾವರ ಕೇಕ ಬ್ಯಾರಿ ಮಗ, ಪುತ್ತೂರಲ್ಲಿರುತ್ತಿದ್ದವ. - ಎದ್ರಿ.

ಸದ್ರಿ ಎದ್ರಿಗೆ ಈ ಮೂಲಕ ತಿಳಿಯಪಡಿಸುವದೇನೆಂದ್ರೆ

ಎದ್ರಿಯು ಅರ್ಜಿದಾರನಿಂದ ಪುತ್ತೂರು ಕ್ಷೇಬಾ ಗ್ರಾಮದ ಒಂದು ಆಂಗಡಿ ಕಟ್ಟೋಣವನ್ನು ಬಾಡಿಗೆಗೆ ಪಸ್ಸಿಕೊಂಡು ಕೆಲವು ಬಾಡಿಗೆ ಕೊಡದೆಯೂ, ಕಟ್ಟೋಣ ಬಿಟ್ಟು ಕೊಡದೆಯೂ ಈಗ ಪರಾರಿಯಾಗಿರುವ ಕಾರಣ, ಸದ್ರಿ ಕಟ್ಟೋಣ ಸ್ವಾಧೀನತೆ ಕೇಳಿಯೂ, ಬಾಡಿಗೆ ಕೇಳಿಯೂ ಅರ್ಜಿದಾರನು ಮೇಲ್ಕಂಡ ಕೋರ್ಟಿನಲ್ಲಿ ಮೂಡಿದ ಅರ್ಜಿಯು ತಾ 15-10-1946ಕ್ಕೆ ತನ್ನಿಗೆ ಇಟ್ಟಿರುತ್ತದೆ. ಆದ್ದರಿಂದ ಮೇಲೆ ಹೇಳಿದ ಅರ್ಜಿ ಕುರಿತು ಅಕ್ಷೇಪನೆಗಳೇನಾದರೂ ಇದ್ದರೆ, ಎದ್ರಿಯು, ಸದ್ರಿ ಪ್ಯಾದೆ ದಿನ ವ ಅಪ್ರ ಮುಂಚೆ ಕೋರ್ಟು ಮುಂದೆ ಹಾಜ್ರಾಗಿ ಉದಪರ್ಸಿದಿದ್ದಲ್ಲಿ, ಕೋರ್ಟಿನವರೀಗೆ ಯುಕ್ತಕಂಡಂತೆ ತೀರ್ಮಾನ್ಸಿಲಾದೀತು. ಎಂತ ಕೋರ್ಟುಹ್ಕುಮ್ಮ ಪ್ರಕಾರ ಎದ್ರಿಗೆ ಈ ಮೂಲಕ ತಿಳಿಯ ಪಡಿಸಿಯದೆ.

M. Sadashiva Rao.
Pleader for Petitioner.
Puttur. 30—9—1946.

"ಪೆರ್ಡೂರು—ಮಹಾತ್ಮ ಗಾಂಧಿಯ ವರ ಚರಿತೆ ಹುಟ್ಟು ಸಣ್ಣ ಆಚರಣೆಯ ಕಾರ್ಯಕ್ರಮವು ತಾ ೨೦೫ ರಿಸಾರದಿಂದ ತಾ ೨ನೇ ಬುಧವಾರದವರೆಗೆ ನಡೆಯಿತು. ಪ್ರತಿದಿನ ಪ್ರಭಾತ ಫೇರಿ ಧ್ವಜವಂದನೆ, ರಾಷ್ಟ್ರ ಭಾಷಾ ಪ್ರಚಾರ, ಸೂತ್ರ ಯಜ್ಞಗಳು ನಡೆಯುತ್ತಿದ್ದುವು. ಆಲ್ಲದೆ ತಾ ೨ನೇ ಬುಧವಾರ ಅಪರಾಹ್ನ ಪ್ರಚಂಡ ಪೊರವಣಿಗೆಯೂ ಹೊಸಕಟ್ಟೋಣದ ಮಾಳಿಗೆಯಲ್ಲಿ ಶ್ರೀ ಸೂಸ್ ಎ. ಕೃಷ್ಣಯ್ಯ ಹೆಗ್ಡೇರವರ ಅಧ್ಯಕ್ಷತೆಯಲ್ಲಿ ಸಭೆಯೂ ಜರಗಿತು. ಪ್ರಾರ್ಥನಾನಂತರ ಶ್ರೀಮತಿ ಸುನಂದಾ ಕಾಮತರು ಇದ್ದರೆ ಉದ್ದೇಶವನ್ನು ವಿವರಿಸಿದರು. ಒಳಿಕ ಶಾಲೆಯ ಪಾಲೆಯರೂ, ಶ್ರೀ ವಾಸುದೇವಯ್ಯನವರೂ ಗಾಂಧೀ ಪರವಾದ ಪದ್ಯವನ್ನು ಸ್ವಾರಸ್ಯವಾಗಿ ಹಾಡಿದರು. ಶ್ರೀ ಅನಂತ ಪದ್ಮನಾಭ ಆದಿಗ, ಶ್ರೀ ಡಾ. ಯಸ್. ವಿ ಅಗ್ನಿಹೋತ್ರಿ ಶ್ರೀ ಎಚ್. ಸಂಜೀವ ಹೆಗ್ಡೆ, ಶ್ರೀಮತಿ ಸುನಂದಾ ಕಾಮತ್, ಶ್ರೀ ಬಿ. ಲಕ್ಷ್ಮೀನಾರಾಯಣ ಸೆಟ್ಟಿ ಮೊದಲಾದವರು ಸಂದರ್ಭೋಚಿತ ಭಾಷಣ ಮಾಡಿದರು. ಅಧ್ಯಕ್ಷರು ನೂಲುವ ಅವಶ್ಯಕತೆಯನ್ನು ವಿವರಿಸುತ್ತಾ ಸಭಿಕರು ಸೂಚಿಸಿದ ಚರಕಾ ಸಂಘಸ್ಥಾಪನೆಯ ವಿಚಾರವನ್ನು ಧೃಢಗೊಳಿಸಿ, ಅಧಿಕಾರಿಗಳನ್ನು ನಿರ್ಣಯಿಸಿದರು. ಕೊನೆಗೆ ಶ್ರೀ ಬಿ ಲಕ್ಷ್ಮೀನಾರಾಯಣ ಸೆಟ್ಟಿಯವರು ಧನ್ಯವಾದಾರ್ಪಣೆ ಮಾಡಿದ ಬಳಿಕ "ವಂದೇ ಮಾತರಂ" ಪಾರ್ಥನೆಯೊಂದಿಗೆ ಸಭೆ ವಿಸರ್ಜಿತ"

ಬೆಳ್ಕಾಣಿ—ತಾ 2 10 1946ಲ್ಲಿ ಆರ್ ಕೆ. ಸಾಮಂತಾರರ ರಾದಾ ಹಯರ್ ಎಲಿಮೆಂಟರಿ ಶಾಲೆಯಲ್ಲಿ ರಾದಾ ಪೂಜಾ ಸಮಾರೋಭದ ಮುಹೂರ್ತದಲ್ಲಿ ರಾದಾ ಧರ್ಮಾರ್ಜನಾಲಯವೆ ಉದ್ಘಾಟನೆಯು ಶ್ರೀ ಎ. ರಂಕರರಾಯರ ಅಧ್ಯಕ್ಷತೆಯಲ್ಲಿ ಜರಗಿತು.

ಹಿರಿಯಡಕ—ಸ್ಥಳೀಯ ಬೋರ್ಡು ಹಯರ್ ಎಲಿಮೆಂಟ್ರಿ ಶಾಲೆಯಲ್ಲಿ ತಾ. 2-10-46ರಲ್ಲಿ ಶ್ರೀ ಕೋಲ್ಕಾರು ಜಗನ್ನಾಥ ಶೆಟ್ರ ಅಧ್ಯಕ್ಷತೆಯಲ್ಲಿ ಹೆತ್ತವರಕೂಟ, ಮತ್ತು ರಾದಾ ಪೂಜೆಯು ಬಹಳ ವಿಜೃಂಭಣೆಯಿಂದ ಜರಗಿತು. ಬಾಲಕ ಬಾಲಕಿಯರು, ಹಿಕಾಂಕ ನಾಟಕ, ಗಾಯನ, ನರ್ತನ, ಭಜನೆಮುಂತಾದ ಚಟುವಟಿಕೆಗಳಿಂದ ಸಭಿಕರನ್ನು ಆನಂದಗೊಳಿಸಿದರು. ಶ್ರೀ ಬಸ್ತಿ ನಾಗಪ್ಪಯ್ಯನವರು ಮಕ್ಕಳಿಗೆ ತಿಂಡಿಯನ್ನು ಹಂಚಿದರು.

ಬಾರಕೂರು—ಸ್ಥಳೀಯ ಹಿಂದೀ ಪ್ರೇಮಿ ಮಂಡಲಿಯ ವತಿಯಿಂದ ತಾ. 2-10-46ರಂದು ಊರಾಗಾಂಧಿಕರ ಸಭೆಯು ಶ್ರೀ. U L. N. ಕುಕ್ಕಿಲ್ಲಾಯರ ಅಧ್ಯಕ್ಷತೆಯಲ್ಲಿ ನೆರವಿತು. ಶ್ರೀ ಡಾ। ಬಿ. ಕೃಷ್ಣಬ್ಯಾರಿ ಮತ್ತು ಶ್ರೀ. ಕೆ. ರಾಮಚಂದ್ರ ಉಡುಪರು ಗಾಂಧಿಜೀಯವರ ಜೀವನ ಚರಿತ್ರೆ ಮತ್ತು ರಚನಾತ್ಮಕ ಕಾರ್ಯಕ್ರಮಗಳ ಕುರಿತು ಸುಭೋಪಯೋಗ ಭಾಷಣಗಳನ್ನಿತ್ತರು. ಅಧ್ಯಕ್ಷರೂ ತಮ್ಮ ಭಾಷಣದಲ್ಲಿ ಗಾಂಧಿಜೀಯವರ ಮುಂದಾಳುತನದಿಂದ ಕಳೆದ 30 ವರ್ಷಗಳಲ್ಲಿ ಹಿಂದುಸ್ತಾನವು ಯಾವ ರೀತಿ ಮಾರ್ಪಾಟವಾಯಿತೆಂಬ ವಿಚಾರವನ್ನು ವಿವರಿಸಿದರು. ಧನ್ಯವಾದ ಸಮರ್ಪಣೆಯ ಬಳಿಕ ವಂದೇ ಮಾತರಂ ಗೀತೆಯೊಂದಿಗೆ ಸಭಾಕಾರ್ಯವಾಯಿತು.

ಕೊಕ್ಕರ್ಣೆ—ಇದೇ ತಾ. 2-10-46ರಲ್ಲು ಸ್ಥಳೀಯ ಬೋರ್ಡು ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಡಾ। ರಾಜು ಪೋಂಟ್ ಸರ ಅಧ್ಯಕ್ಷತೆಯಲ್ಲಿ ಶ್ರೀ ರಾದಪೂಜಾ ಸಮಾರಂಭವು ಜರಗಿತು. ಕಾರ್ಯಕ್ರಮವು ಮೊದಲಿಗೆ ಮಹಿಳೆಯರಿಗಾಗಿ ಸಭೆ ಸೇರಿ ಪ್ರಾರ್ಥನೆಯಾದ ಬಳಿಕ ಪಾಲ ಬಾಲಕಿಯರಿಂದ ನಾನಾ ತರದ ಪಿನೋದಾವಳಿ ಚಟುವಟಿಕೆಗಳು ಆದಿ ತೋರಿಸಲ್ಪಟ್ಟವು. ತದನಂತರ ಸಭಿಕರಲ್ಲಿ ಡಾ। ವಸಂತ ಸೆಟ್ರು ಇತ್ತೀಚೆಗೆ ಕಲಿತ ಹಾಯರ್ ಎಲಿಮೆಂಟರಿ ಶಾಲೆ ಅವಗ್ಗೂ ಉಪಾಧ್ಯಾಯರ ಪರಸ್ಪರ ಐಕ್ಯತೆಯಿಂದ ಇನ್ನರ ಸುಟ್ಟನ ಅಭಿವೃದ್ಧಿಯನ್ನು ಹೊಂದಿದುದಕ್ಕೆ ಸಂತೋಷಸಿಕರ ಹಾಗೂ ಮಕ್ಕಳ ಹೆತ್ತವರು ಇದಿನಂತೆಯೇ ಮುಂದೆಯೂ ಕೂಡಾ ಹೆಚ್ಚಿನ ಪ್ರೋತ್ಸಾಹನವನ್ನು ಕೊಟ್ಟು ಶಾಲೆಯನ್ನು ನುತ್ತಮ್ಮ ಸ್ಥಿತಿಗೆ ತರಲು ಪ್ರಯತ್ನಿಸುವರೆಂಬುದು ತಿಳಿಸಿ ಭಾಷಣಮಾಡಿದರು. ಇದೇ ವಿಷಯದಲ್ಲಿ ಹಲವಾರು ಸಭಿಕರು ಮಾತನಾಡಿದ್ದಲ್ಲದೆ ಅಧ್ಯಕ್ಷ ಮುಖಾರೆಯರು ತಮ್ಮ ಅಭಿಪ್ರಾಯವನ್ನು ಸೂಚಿಸಿದರು ಮುಖ್ಯೋಪಾಧ್ಯಾಯರು ಧನ್ಯವಾದವನ್ನರ್ಪಿಸಿದರು.

ಕುಂದಾಪುರ—ಗ್ರಾಮ ಉದ್ಯೋಗ ಪ್ರೋತ್ಸಾಹಿಸುವ ಸಲುವಾಗಿ ತನ್ನೂಲಕ ನೂಲುವ ನೇಯುವ ಹಾಗೂ ಖಾದಿಯನ್ನು ಪ್ರಚಾರ ಮಾಡುವ ಬಗ್ಗೆ ಚರಕಾ ಸಂಘ ಪ್ರೊಂದು ಸ್ಥಾಪಿಸಲ್ಪಟ್ಟಿದೆ. ಸಂಘಟನಾ ಸಮಿತಿಯಲ್ಲಿ ಶ್ರೀಗಳಾದ ವೈ. ಮಂಜಯ್ಯ ಸೆಟ್ಟಿ, ಎಸ್ ಎಸ್. ಕೊಳ್ಳೆ ಬೈಲ್, ನಾರಾಯಣ ಪೈ, ಜಿ. ಪರಮೇಶ್ವರ ಬ್ಯಾರಿ, ಜೋಸ್ ಫೆರ್ನಾಂಡೀಸ್, ಎ. ಎಸ್. ವಿಠಲಶೆಟ್ಟಿ, ಲಿಯೋದೇವಾ, ಕುಮಾರಿ ಸುಶೀಲಾ, ಎಸ್. ಎಸ್. ಹೆಗ್ಡೆ ಮೊದಲಾದವರಿರುವರು.

ಶೀರೂರು—ಇಲ್ಲಿ ಕಳೆದ 3 ವರ್ಷಗಳಿಂದ ಕಟ್ಟಿಡ ವ ಮಂಜೂರಾತಿ ಬಿಲ್ಲುದೇ ಮುಚ್ಚಲ್ಪಟ್ಟ ಸಂತೆ ಮೂರ್ಕೆಟಿನ ಬಳಿಯ ಕನ್ನಡ ಶಾಲೆಯು ತಾ 5 10 46ರಲ್ಲಿ ಶ್ರೀ. ಶೀರೂರು ಪಟೇಲ ಶೇಷ ಶೆಟ್ರ ಅಧ್ಯಕ್ಷತೆಯಲ್ಲಿ ಪುನಃ ತೆರೆಯಲ್ಪಟ್ಟಿರುತ್ತದೆ. ಶ್ರೀ. ವಿನಾಯಕ ರಾಸುಭಾಗರು ಮತ್ತು ಶ್ರೀ. ಗೋಪಾಲ ಪ್ರಭು ವಿದ್ಯೆಯ ಮಹತ್ವದ ಕುರಿತು ಸಂದರ್ಭೋಚಿತ ಭಾಷಣಗಳನ್ನು ಕೊಟ್ಟರು.

ಪುತ್ತೂರು

ಗಾಂಧಿ ಜಯಂತಿ—ಇಲ್ಲಿಯ ಸರ್ಕಾರಿ ಕಾಂಗ್ರೆಸು ಸಮಿತಿಯ ಹಾಗೂ ವಿದ್ಯಾರ್ಥಿ ಕಾಂಗ್ರೆಸಿನ ಸಮಿತಿಯಿಂದ ತಾ 2ರಲ್ಲಿ ವಿಶೇಷ ಆಡಂಬರದಿಂದ ಜರಿಗಿತು. ಬೆಳಿಗ್ಗೆ ಪ್ರಭಾತ ಫೇರಿ, ಕೋರ್ಟು ಮೈದಾನದಲ್ಲಿ 7 30ಕ್ಕೆ ಶ್ರೀ ಎಂ. ಡಿ. ಅಧಿಕಾರಿ ಅವರಿಂದ ಧ್ವಜವಂದನೆ, ಭಾಷಣ ನಡೆಯಿತು. ನಂತರ ರಾಗಿ ಕುಮೇರು ಹರಿಜನ ವಸತಿ. ಸಂದರ್ಶನ, ಲೇಬರ್ ಶಾಲಾ ವಠಾರದಲ್ಲಿ ಶ್ರೀ ಕೆ ಈಶ್ವರ ಎಂ ಎಲ್. ಎ ಅವರ ಅಧ್ಯಕ್ಷತೆಯಲ್ಲಿ ಸಭೆ ಶಾಲಾ ಹುಡುಗ ಹುಡುಗಿಯರಿಗೆ (35 ಮಂದಿ) ಹೊಸ ಡ್ರೆಸು ಸಾಬೂನು ಪಿತರಣೆ. ಶ್ರೀ ಎಂ. ಜಿ. ನರಸಪ್ಪ ಇವರಿಂದ ವರದಿವಾಚನ, ಬಳಿಕ ಸ್ಮರಣೆ ಭಾಷಣ ನಡೆದುವು ಹೈಸ್ಕೂಲು ವಠಾರದಲ್ಲಿ ಶಾಲಾ ಮಕ್ಕಳಿಂದ ನೂಲುವ ಸ್ಪರ್ಧೆ, ಗಾಂಧಿಜೀಯವರ ರಚನಾತ್ಮಕ ಕಾರ್ಯದಿಶೆ ವಿಚಾರದಲ್ಲಿ ನಾಕ್ ಸ್ಪರ್ಧೆ ನಡೆದವು. 5ಗಂಟೆಗೆ ಹೈಸ್ಕೂಲು ವಠಾರದಿಂದ ವಿಶೇಷ ಗಾಡಿಯಲ್ಲಿ ಶೃಂಗಾರಿಟ್ಟ ಪಡುಕೋಣೆ ಶ್ರೀ ನರಸಿಂಹ ರಾಯರಿಂದ ಗಾಂಧೀ ಜಯಂತಿಯು ಬಗ್ಗೆ ರಚಿಸಿದ್ದ ಮಹಾತ್ಮಾಜೀಯವರ ಪ್ರತಿಮೆ, ಬೇಡು ಘೋಷಪೊಜನೆ ಮೆರವಣಿಗೆ ಬಂದು ಕೋರ್ಟು ಮೈದಾನದಲ್ಲಿ ಶ್ರೀ ಕೆ. ಈಶ್ವರ ಅವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿತು. ಸಭೆಗೆ ಸುಮಾರು ಜನರೂ, ಸುಮಿಳೆಯರೂ, ಹರಿಜನರೂ, ಇನ್ನಿತರರೂ ಕಿಕ್ಕಿರಿದು ನೆರೆದಿದ್ದರು. 4, 5ಸಾವಿರ ಜನರು ನೆರೆದು ಬಂದು ಸಭೆಯನ್ನು ಅತ್ಯಂತ ಯಶಸ್ವಿಯನ್ನಾಗಿ ಮಾಡಿದರು. ಸಭೆಯಲ್ಲಿ ಗಾಂಧಿಜೀಯವರ ರಚನಾತ್ಮಕ ಕಾರ್ಯಗಳನ್ನನುಷ್ಠೇರಿಸಿ ಶ್ರೀ ಎಂ. ಸದಾಶಿವ ರಾಯರೂ, ಶ್ರೀ ಕೆ. ನಾರಾಯಣ ರೈಗಳೂ ಉಪನ್ಯಾಸಿದರು. ಸಭಾಧ್ಯಕ್ಷರೂ ಸಂದರ್ಭೋಚಿತವಾಗಿ ಮಾತಾಡಿದ ನಂತರ ಶ್ರೀ ಎಂ ಬಿ. ನರಸಪ್ಪ ಅವರು ಉಪಕಾರ ಸ್ಮರಣೆ ಭಾಷಣ ಮಾಡುತ್ತಾ ಪುತ್ತೂರಿನ ಚರಿತ್ರೆಯಲ್ಲಿ ಇಂದು ವಿಶೇಷ ರೀತಿಯಲ್ಲಿ ಜನರು ನೆರೆದು ಎಂದು ಸಭೆಯನ್ನು ಚಂದಗೊಳಿಸಿದ ಬಗ್ಗೆ ಎಲ್ಲಾ ಜನರನ್ನು ಅಭಿನಂದಿಸಿದರು. ವರ್ತಕರು ತಮ್ಮ ಅಂಗಡಿಗಳ ಮುಂದೆ ತಳಿರು ತೋರಣ, ರಾಷ್ಟ್ರಧ್ವಜಗಳಿಂದ ಅಲಂಕರಿಸಿ ಸಾಇರ ನಂತರ ರಚನೆಯಾಡಿ ಸಭೆಯಲ್ಲಿ ಭಾಗವಹಿಸಿದರು ತಾಳೀಮು ಪ್ರದರ್ಶನ ವಗೈರೆ ರಾತ್ರಿ ೨ರ ವರೆಗೆ ದೊಡ್ಡದೊಂದು ಉತ್ಸವ ನಡೆಯಿತು

ಧಾತುಪುಷ್ಟಿ ಲೇಹ

ಇದುಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ಪಷ್ಟಾವಸ್ಥೆ ಶರೀರದ ಉಷ್ಣತೆ ಧಾತುಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ,ಇವು ಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ಆಯುರ್ವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಜೈವನಪಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆನ್ನು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧಿತವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ನುತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಮಹಾಮದನಕಾಮೇಶ್ವರೀ ಲೇಹ

(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು)

ನರಗಳ ನುತ್ತು ಜನನೇಂದ್ರಿಯದ ಶಕ್ತಿಹೀನತೆ, ಎನಿತೋವ್ಯ, ಮಲಬದ್ಧತೆ, ಬೆನ್ನುನೋವು, ಪಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ, ನಕ್ತವೃದ್ಧಿಯನ್ನೂ ಉಂಟುಮಾಡುತ್ತದೆ.

ರಾತ್ರಿ 1ರ 10-0-0, ½ ರಾತ್ರಿ 5-4-0, ¼ ರಾತ್ರಿ 2-12-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು

ಎಲ್ಲಾ ನಮೂನೆಯ ಔಷಧಿಗಳೂ ದೊರೆಯುತ್ತವೆ. ಕ್ಷಾಲೆಕಿಂಗ್ ಮಾದಲ್ಲಿ ರೋಗಕ್ಕೆ ತಕ್ಕಷ್ಟಾದ ಔಷಧಿ ಕಳಾಸಬಹುದು. (1) ಉಡುಪಿ ಏಜಂಟರು:—ನವಿಭಾರತ ಬುಕ್ ಡಿಪೊ, (2) ಬೊಂಬಾಯಿ ಏಜೆಂಟರು:- ಪೊಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ಸ್183, ಸುರಾರಿವಾಗ್ ರೋಡ್, ಪ್ಲ. ಏ. ಪಿ ರೈಲ್ವೆ ನರ್ಸ್ ಕೆಂಪ್ ಎದುರುಗಡೆ, ಪರೇಲ್ (3) ದಿವಸರ್ ಸ್ಟೋರ್ಸ್, ಕೆಮಿಸ್ಟ್ಸ್, ಜ. ಏ. ಪಿ. ಮಾಟುಂಗಾ.

ಟೆಲಿಗ್ರಾಮ್:- 'ಮಹಾಜನ್', ಕಾಸರಗೋಡು. ಇದು ಯೋಜನಾಪತ್ರಿಕೆಯಲ್ಲ; ಪ್ರಕಟಣೆ ಮಾತ್ರ.

(ಯೋಜನಾಪತ್ರಿಕೆಯ ಒಂದು ಪ್ರತಿಯನ್ನು ಎಸಿಸ್ಟೆಂಟ್ ರೆಜಿಸ್ಟ್ರಾರ್ ಆಫ್ ಜ್ಯೊಂಟ್ ಸ್ಟಾಕ್ ಕಂಪೆನೀಸ್, ಮಂಗಳೂರು—ಇವರಲ್ಲಿ ದಾಖಲು ಮಾಡಲಾಗಿದೆ.)

The Mahajana Chemicals & Pharmaceuticals, Ltd.

ದಿ ಮಹಾಜನ ಕೆಮಿಕಲ್ಸ್ ಎಂಡ್ ಫಾರ್ಮಸ್ಯೂಟಿಕಲ್ಸ್ ಲಿಮಿಟೆಡ್

(ಇಂಡಿಯನ್ ಕಂಪೆನೀಸ್ ಆಕ್ಟಿಗನ್ವಯ ಸ್ಥಾಪಿತವಾದುದು ಮತ್ತು ಜವಾಬ್ದಾರಿಯು ಮಿತವಾದುದು.)

ಅಧಿಕೃತ ಮೂಲಧನ ರೂ. 5,00,000

ರೂ. 20ರ 25,000 ಸಾಮಾನ್ಯ ಷೇರುಗಳಾಗಿ ಹಂಚಲಾಗಿದೆ.

ಸದ್ಯ ಚಂದಾಬಗ್ಗೆ ಆಫರ್ ಸಿದ ಶೇರು ಮೌಲ್ಯ ರೂ. 4,00,000

ರೂ. 20ರ 20,000 ಸಾಮಾನ್ಯ ಶೇರುಗಳು.

ಆಣೆ 8ರ ಪ್ರವೇಶ ಧನದೊಂದಿಗೆ ಪ್ರತಿ ಶೇರಿಗೆ ರೂ. 10ರಂತೆ ಅರ್ಜಿಯೊಂದಿಗೆ ಕೊಡತಕ್ಕದ್ದು. ಮತ್ತಿನ ಹಣವನ್ನು ಕಂಪೆನಿಯು ಅಪೇಕ್ಷಿಸಿವಾಗ ಒಮ್ಮೆಗೆ ಶೇರಿಗೆ ರೂ. ಹತ್ತೆ ಮಿಗದಷ್ಟನ್ನು ತರತಕ್ಕದ್ದು.

ಮೇಲಿನ ಶೇರುಗಳ ಪೈಕಿ ರೂ. 18,060 ಮೌಲ್ಯದ 903 ಸಾಮಾನ್ಯ ಶೇರುಗಳನ್ನು ಕಂಪೆನಿಯ ಡೈರೆಕ್ಟರುಗಳೂ, ರೂ. 81,940 ಮೌಲ್ಯದ 4097 ಸಾಮಾನ್ಯ ಶೇರುಗಳನ್ನು ಡೈರೆಕ್ಟರರ ಪಿತ್ರರು ವ ಪ್ರಮೋಟರರು ಪಡಕೊಂಡಿದ್ದಾರೆ ಅಥವಾ ಪಡಕೊಳ್ಳಲು ಒಪ್ಪಿದ್ದಾರೆ. ಸದ್ಯ ಚಂದಾ ಬಗ್ಗೆ ಆಫರಿಸಿದುದರಲ್ಲಿ ಉಳಿದ ರೂ. 20ರ 15,000 ಸಾಮಾನ್ಯ ಶೇರುಗಳು ಮಾತ್ರ ಸಾರ್ವಜನಿಕರ ಚಂದಾ ಬಗ್ಗೆ ಆಫರಿಸಲಾಗಿವೆ

ಡೈರೆಕ್ಟರರು

1. ಶ್ರೀ। ಬಂಡಿಗೆ ಗಣಪತಿ ಭಟ್, ಡೈರೆಕ್ಟರ್ ಮಂಡಲಿಯ ಅಧ್ಯಕ್ಷ; ವರ್ಗದಾರ, ಪೆಡ್ಡಾಲ, ದ. ಕ.

ಡೈರೆಕ್ಟರರು.-ಗ್ರೀನ್‌ವೆಲ್ಲಿ ಫಾರ್ಮ್ಸ್, ಲಿಮಿಟೆಡ್, ಮಂಗಳೂರು; ಕರ್ನಾಟಕ ವೈಷಸಾಯ ವರ್ತಕ ಸಂಘ ಲಿಮಿಟೆಡ್, ಮಂಗಳೂರು; ಕರ್ನಾಟಕ ಟಿಕ್ಸ್‌ಟೈಲ್ಸ್ ಲಿಮಿಟೆಡ್, ಮಂಗಳೂರು.

ವೃತ್ತಿ:-ಮಹಾಜನ ಸಂಸ್ಕೃತ ಕಾಲೇಜ್, ಪೆಡ್ಡಾಲ.

2. ಶ್ರೀ। ಪಿ. ಶಂಕರನಾರಾಯಣ ಭಟ್, ವರ್ಗದಾರ, ಪಾಣಾಜೆ, ಪುತ್ತೂರು, ದ. ಕ.

3. ಶ್ರೀ। ಪಿ. ಎಮ್. ವೆಂಕಟ್ರಮಣ ಅಯ್ಯ, ವರ್ಗದಾರ, ಮತ್ತು ಏಲಕ್ಕಿ ಪ್ಲಾಂಟರ್, ವಿಟ್ಲ, ದ. ಕ.

ಡೈರೆಕ್ಟರ್:-ದಿ ಕರ್ನಾಟಕ ವೈಷಸಾಯ ವರ್ತಕ ಸಂಘ, ಲಿಮಿಟೆಡ್, ಮಂಗಳೂರು.

4. ಕವಿರಾಜ ಡಾ। ಕೆ. ಸಿ. ಅಳ್ವ, ವೈದ್ಯ ಭೂಷಣ, ಪ್ರೊಪ್ರೈಟರ್, ಶ್ರೀ ಗಣೇಶಾನಂದ ಆಯುರ್ವೇದ ಭವನ್, ವರ್ಗದಾರ, ಕಾಸರಗೋಡು, ದ. ಕ.

ಬೋಧಕರು:-ವಿಜಯ ಬೇಂಕ್, ಲಿಮಿಟೆಡ್, ಮಂಗಳೂರು, (ಕಾಸರಗೋಡುಶಾಖೆ)

5. ಶ್ರೀ। ಎಂ. ಶಂಕರನಾರಾಯಣ ಕಂಬಳಿತ್ತಾಯ, ವರ್ಗದಾರ, ಏಲಕ್ಕಿ, ಅಡಕ್ಕೆ, ದ. ಕ.

ಡೈರೆಕ್ಟರ್:- ದಿ ಗ್ರೀನ್‌ವೆಲ್ಲಿ ಫಾರ್ಮ್ಸ್, ಲಿಮಿಟೆಡ್, ಮಂಗಳೂರು.

6. ಶ್ರೀ। ಎ. ಜಿ. ತಿರುಮಲೇಶ್ವರ ಭಟ್, ವರ್ಗದಾರ ಮತ್ತು ಪತ್ರಿಕೋದ್ಯೋಗಿ ವಿಟ್ಲ, ದ. ಕ.

ಡೈರೆಕ್ಟರರು:-ಗಣೇಶ್ ಇಂಡಸ್ಟ್ರೀಸ್ ಕೊ, (ಇಂಡಿಯ) ಲಿಮಿಟೆಡ್, ಮಂಜೇಶ್ವರ; ದಿ ವೆಸ್ಟ್‌ಕೋಸ್ಟ್ ಇಂಡಸ್ಟ್ರಿಯಲ್ ಏರಿಯಾ ಕಮರ್ಶಿಯಲ್ ಸಿಂಡಿಕೇಟ್, ಲಿಮಿಟೆಡ್, ಮಂಗಳೂರು.

7. ಡಾ। ಎ। ಎಸ್। ಈಶ್ವರ ಭಟ್, ಎಲ್. ಐ. ಎಮ್., ರಿಜಿಸ್ಟರ್ಡ್ ಮೆಡಿಕಲ್ ಪ್ರೆಕ್ಟಿಶನರ್, ವಿಟ್ಲ, ದ. ಕ.

ಡೈರೆಕ್ಟರ್-ದಿ ಸೌತ್‌ಕೋಸ್ಟ್ ಇಂಡಸ್ಟ್ರಿಯಲ್ ಎಂಡ್ ಸಿಂಡಿಕೇಟ್ ಲಿಮಿಟೆಡ್, ಮಂಗಳೂರು.

ಮೆನೇಜಿಂಗ್ ಏಜಂಟರು

ಮೆಸರ್ಸ್ ಪಿ। ಎಸ್। ಭಟ್, ಬ್ರದರ್ಸ್, ಪಾಣಾಜೆ, ದ. ಕ.

ಬೇಂಕರರು

1 ಕೆನರಾ ಬೇಂಕ್, ಲಿಮಿಟೆಡ್.
2 ದಿ ವಿಜಯಾ ಬೇಂಕ್, ಲಿಮಿಟೆಡ್.

ಲೆಕ್ಕ ಪರಿತೋಧಕರು

ಶ್ರೀ। ಪಿ। ಎಮ್। ಹೆಗ್ಡೆ, ಜಿ. ಡಿ. ಎ., ಆರ್. ಎ., ರಿಜಿಸ್ಟರ್ಡ್ ಎಕೌಂಟೆಂಟ್ ಮತ್ತು ಆಡಿಟರರು, ಹಳೆ ಜೇಡಿಗುಡ್ಡೆ ರಸ್ತೆ, ಮಂಗಳೂರು.

ನ್ಯಾಯ ಬೋಧಕರು

ಶ್ರೀ। ಎಸ್. ವೆಂಕಟ್ರಮಣ ಭಟ್, ಬಿ. ಎ, ಎಲ್. ಎಲ್. ಬಿ., ಅಡ್ವೊಕೇಟ್, ಕಾಸರಗೋಡು, ದ. ಕ.

ಶ್ರೀ। ಕೆ. ಶಂಕರ ರಾವ್, ಬಿ. ಎ. ಬಿ. ಎಲ್., ಅಡ್ವೊಕೇಟ್, ಕಾಸರಗೋಡು, ದ. ಕ.

ರಿಜಿಸ್ಟರ್ಡ್ ಹೆಡ್ ಆಫೀಸು

ಕಾಸರಗೋಡು, ದ. ಕ.

ಕಂಪೆನಿಯ ಉದ್ದೇಶ

ಕಂಪೆನಿಯು ಮೆಮೊರೆಂಡಮ್ ಆಫ್ ಎಸೋಸಿಯೇಶನ್‌ನಲ್ಲಿ ವಿವರಿಸಿದಂತೆ, ಮುಖ್ಯವಾಗಿ, ಆಧುನಿಕ ದೇಶೀಯ ಔಷಧಿಗಳನ್ನು ಸುಧಾರಿತ ಹಾಗೂ ಆಧುನಿಕ ವೈಜ್ಞಾನಿಕ ರೀತ್ಯಾ ಸಿದ್ಧ ಗೊಳಿಸುವುದು ಹಾಗೂ ಅದರ ವ್ಯಾಪಾರ ನಡೆಸುವುದೇ ಕಂಪೆನಿಯ ಮುಖ್ಯೋದ್ದೇಶವಾಗಿದೆ.

ಪ. ಕನ್ನಡದ ಉತ್ಕೃಷ್ಟವಾದ ಮಣ್ಣಿನ ಗುಣವು ಔಷಧಿ ಗಿಡಮೂಲಿಕೆಗಳಿಗೆ ಅತ್ಯುತ್ತಮವಾಗಿದೆ ಎಂಬುದು ಸರ್ವವಿದಿತವಾದರೂ ಇದರ ಗುಣವನ್ನು ಉಪಯೋಗಿಸಿಕೊಂಡು, ವ್ಯಾಪಾರಿ ದೃಷ್ಟಿಯಿಂದ ಔಷಧ ಗಿಡಮೂಲಿಕೆಗಳನ್ನು ಬೆಳೆಸಿ ಅವುಗಳಿಂದ ಶಾಸ್ತ್ರೀಯವಾದ ಔಷಧಿಗಳನ್ನು ಸಿದ್ಧ ಗೊಳಿಸಿ, ಜನತೆಗೆ ಒದಗಿಸಿಕೊಡುವ ಯತ್ನ ಈ ವರೆಗೆ ಆಗಿಲ್ಲ. ಈಗ ಸ್ವಾಪಿತವಾಗಿರುವ ರಾಷ್ಟ್ರೀಯ ಸರಕಾರವು ಆಯುರ್ವೇದೀಯ ವೈದ್ಯ ಪದ್ಧತಿಗೆ ಹೆಚ್ಚಿನ ಸಹಾಯ ಪ್ರೋತ್ಸಾಹಗಳನ್ನು ಕೊಡಲಿರುವುದೆಂಬ ಭರವಸೆಯೂ ಡೈರೆಕ್ಟರರನ್ನು ಈ ಉದ್ಯಮದಲ್ಲಿ ಪ್ರೇರೇಪಿಸಿದೆ.

ವಿಟ್ಲದಲ್ಲಿರುವ ಪಾಣಾಜೆ ವೈದ್ಯ ಶಂಕರ ನಾರಾಯಣ ಭಟ್ಟರ ಪಾಣಾಜೆ ಫಾರ್ಮಸ್ಯೂಟಿಕಲ್ಸ್‌ನ ಹೊತ್ತುಗಳನ್ನೆಲ್ಲಿ ಕಂಪೆನಿಯು ಪಡಕೊಂಡಿದೆ. ಈ ಔಷಧಾಲಯದಲ್ಲಿ ಕಳೆದ 1909ರಿಂದ ಸಿದ್ಧ ಗೊಳಿಸಲಾಗುತ್ತಿರುವ ಔಷಧಗಳು, ಅತ್ಯಂತ ಉತ್ಕೃಷ್ಟವಾದುದು ಪಶ್ಚಿಮ ಕರಾವಳಿಯಲ್ಲೆಲ್ಲ, ಮುಖ್ಯವಾಗಿ ಕೊಡಗು ಮತ್ತು ದ. ಕನ್ನಡಗಳಲ್ಲಿ ತುಂಬ ವಿಕ್ರಯವಾಗುತ್ತಿತ್ತು, ಅದುದರಿಂದ ಪ್ರಾರಂಭಿಕ ಉಪಕರಣಗಳೆಲ್ಲ ಸಿದ್ಧವಾದೊಡನೆಯೇ ಕಾರ್ಯವ್ಯಾಪಾರಂಭಿಸಲು ಡೈರೆಕ್ಟರರು ಯೋಚಿಸುತ್ತಿದ್ದಾರೆ.

ಬ್ರಿಟಿಷ್ ಫಾರ್ಮಕೋಪಿಯದಲ್ಲಿ ಪ್ರಸಿದ್ಧಿಸಲಾಗಿರುವ ಔಷಧ ದ್ರವ್ಯಗಳಲ್ಲಿ ಸೇ. ಏಕರಸ್ಸನ್ನು ಭಾರತದಲ್ಲಿ ಜೊರೆಯುತ್ತಿದೆ. ಆದರೂ ಈ ದೇಶಕ್ಕೆ ಪ್ರತಿವರ್ಷ ೨೬ಚಿ ಲಕ್ಷ ರೂಪಾಯಿಗಳ ಸಿದ್ಧ ಗೊಳಿಸಿದ ಔಷಧಿಗಳು ವಿದೇಶಗಳಿಂದ ಬರುತ್ತಿದೆ. ಇದಕ್ಕೆ ಪ್ರತಿಯಾಗಿ ನಮ್ಮಲ್ಲಿಂದ ಪೇರಳೆಯಾಗಿ ಹೋಗುತ್ತಿರುವ ಅಸಿದ್ಧ ಔಷಧ ದ್ರವ್ಯಗಳ ಜೆಲೆ ಬರೆ ೩ ಲಕ್ಷ ರೂಪಾಯಿಗಳು ಮಾತ್ರ! ನನ್ನುಲ್ಲೇ ಈ ಅದರ್ಶ ಔಷಧಗಳನ್ನೆಲ್ಲ ಸಿದ್ಧ ಗೊಳಿಸಿದರೆ, ಪರದೇಶಕ್ಕೆ ಹೋಗುವ ಎಷ್ಟೋ ಹಣವನ್ನು ಉಳಿಸಬಹುದು.

ಕೆಪ್ಟನ್ ಜೆ. ಶ್ರೀನಿವಾಸ ಮೂರ್ತಿ, ಬಿ. ಎ., ಬಿ. ಎಲ್., ಎಂ. ಬಿ. ಸಿ. ಎಮ್., ಅವರು, ಇತ್ತೀಚೆಗೆ ಒಂದೆಡೆ ಭಾಷಣವೀಯುತ್ತ ಹೀಗೆಂದಿದ್ದರು: 'ಆಶಾಶ್ಚಾತ್ಯ ರಸಾಯನ ಶಾಸ್ತ್ರಜ್ಞರೂ, ದೇಶೀಯ ವೈದ್ಯ ವಿಶಾರದರೂ ಸಂಯೋಗದಿಂದ ಕಾರ್ಯಪ್ರವೃತ್ತರಾಗಿ ದೇಶೀಯ ಔಷಧದ ಸರಿಯಾದ ಪೃಥಕ್ಕರಣವಾದರೆ, ಅದರಿಂದ ಭಾರತಕ್ಕೆ ಮಾತ್ರ ಪ್ರಯೋಜನವಲ್ಲ; ಅಖಿಲ ಪ್ರಪಂಚಕ್ಕೇ ಪ್ರಯೋಜನವಿದೆ'. ಈ ಮಾತನ್ನು ದೃಷ್ಟಿಪಥದಲ್ಲಿಟ್ಟುಕೊಂಡು, ಪಾಶ್ಚಾತ್ಯ ನೈಪುಣ್ಯ ಪದ್ಧತಿ ಹಾಗೂ ದೇಶೀಯ ಪದ್ಧತಿಗಳ ಸಮ್ಮಿಲನದಿಂದಲೆ, ಅಧುನಿಕ ಯಂತ್ರೋಪಕರಣಗಳ ಸಹಾಯದಿಂದೆ ಅಲೋಪೆಥಿಕ್ ಹಾಗೂ ಆಯುರ್ವೇದೀಯ ಔಷಧಿಗಳೆರಡನ್ನೂ ತಯಾರಿಸಲು ಕಂಪೆನಿಯು ಯೋಚಿಸುತ್ತಿದೆ.

ನಮ್ಮ ಕಾರ್ಯಕ್ರಮ

ಸದ್ಯ ಕಂಪೆನಿಯು ಈ ಕೆಳಗಿನ ಆಯುರ್ವೇದ ಔಷಧಿಗಳನ್ನು ತಯಾರಿಸಲು ಸಂಕಲ್ಪಿಸಿದೆ. 1 ಆರಿಷ್ಟ, 2 ಆಸವ, 3 ಘೃತ, 4 ತೈಲ, 5 ಲೇಹ್ಯ, 6 ಚೂರ್ಣ, 7 ಪಟ, 8 ಭಸ್ಮ, 9 ಕಷಾಯ, 10 ಲೇಪನ, ಹಾಗೆಯೆ, ಟಿಂಚರ್ಸ್, ಎಕ್ಸ್‌ಟ್ರಾಕ್ಟ್ಸ್, ಇಂಜಕ್ಷ್ಯೂಬಲ್ಸ್, ಸಿರಪ್, ಟೆಬ್ಲೆಟ್ಸ್ ಮೊದಲಾದ ಆಲ್ಲೋಪತಿಕ್ ಔಷಧಿಗಳನ್ನೂ, ಬಾಳೆಹಣ್ಣು, ಅನನಾಸು, ಮಾವು, ಹಲಸು, ಪಪ್ಪಾಯಿ, ಗೇರು ಮೊದಲಾದವುಗಳ ಮುರಬ್ಬಗಳನ್ನೂ ತಯಾರಿಸಲಾಗುವುದು.

ಆಯುರ್ವೇದ ವೈದ್ಯಕೀಯವಲ್ಲಿ 40 ವರ್ಷಗಳ ಅನುಭವವುಳ್ಳ ಶ್ರೀ। ಪಾಣಾಜೆ ವೈದ್ಯ ಶಂಕರನಾರಾಯಣ ಭಟ್ಟರು ಕಂಪೆನಿಗೆ ತಮ್ಮ ಗೌರವಾರ್ಥ ಸೇವೆಯನ್ನು ಸಲ್ಲಿಸಲು ಒಪ್ಪಿರುವರು. ಗಿಡಮೂಲಿಕೆಗಳ ಕುರಿತಾದ ಇವರ ಅನುಭವವು ಅತ್ಯಮೂಲ್ಯವಾಗಿದೆ. ಒಂದೇ ಹೆಸರಿನ ವೇರೆವೇರೆ ಗುಣಗಳ ಗಿಡ ಮೂಲಿಕೆಗಳು ಇವೆಯೆಂಬುದು ಸರ್ವವಿದಿತವಷ್ಟೆ. ಇಂತಹ ಸಂದರ್ಭದಲ್ಲಿ ಉತ್ತಮವಾದ ಮೂಲಿಕೆಗಳನ್ನು ಆರಿಸುವ ವಿಚಾರಕ್ಕೆ ಹೆಚ್ಚಿನ ಗಮನ ಕೊಡಬೇಕಾದುದು ಅವಶ್ಯ. ಶ್ರೀ। ವೈದ್ಯ ಶಂಕರನಾರಾಯಣ ಭಟ್ಟರು ಈ ವಿಚಾರದಲ್ಲಿ ತುಂಬಾ ಬಲ್ಲಿದರು ಎಂಬ ವಿಚಾರವು ಮಂಜೆಪಾಲದಲ್ಲಿ ಜರಗಿದ ೩ಳನೆಯ ಅ. ಭಾ. ಆಯುರ್ವೇದ ಸಮ್ಮೇಲನದಲ್ಲಿ ಸರ್ವವಿದಿತವಾಗಿದೆ. ಹಾಗೆಯೇ ಕಂಪೆನಿಯು ಸಿದ್ಧ ಗೊಳಿಸಲಿರುವ ಔಷಧಗಳ ಪರೀಕ್ಷೆಗಾಗಿ ವೈದ್ಯ ಸಲಹೆಗಾರರ ಮಂಡಲಿಯೊಂದನ್ನು ನೇಮಿಸಲಾಗುವುದು. ಈ ಸಂಬಂ. ದಲ್ಲಿ ನಮ್ಮ ಸುಪ್ರಸಿದ್ಧ ವೈದ್ಯರಾದ ಆಯುರ್ವೇದ ಭೂಷಣ ಎಂ. ವಿ. ಶಾಸ್ತ್ರಿ ಅನರು, ಈ ಗಲಸಗಾರರ ಮಂಡಲಿಯಲ್ಲಿರಲು ಒಪ್ಪಿರುವುದು ಸಂತೋಷ.

ರೈಲ್ವೆಯ ಮೂಲಕ ಮಂಗಳೂರು, ಕಲ್ಲಿಕೋಟೆಗಳಿಗೂ, ಬಸ್ ಮಾರ್ಗ ಮೂಲಕ ಪುತ್ತೂರು ಸುಬ್ರಹ್ಮಣ್ಯ ಮೈಸೂರುಗಳಿಗೂ ಸುಲಭವಾದ ಸಂಚಾರಾನುಕೂಲತೆಗಳಿರುವ ಕಾಸರಗೋಡಿನಲ್ಲೇ ಕಾರಬಾನೆಯು ಸ್ಥಾಪಿಸಲಾಗುವುದು.

ಪಾಣಾಜೆ ಫಾರ್ಮಸ್ಯೂಟಿಕಲ್ಸ್ ವರ್ಕ್ಸ್ ನಿಂದ ಕೊಂಡುಕೊಂಡುದಲ್ಲದೆ, ಇನ್ನೂ ಬೇಕಾಗುವ ಉಪಕರಣಗಳನ್ನೆಲ್ಲ ಬೇಗನೆ ಕೊಂಡುಕೊಳ್ಳಲಾಗುವುದು ಕಂಪೆನಿಯು ಬೇಗನೆ ಲಾಭದಾಯಕವಾಪ ಉದ್ಯೋಗ ನಡೆಸಬಲ್ಲುದೆಂಬ ವಿಶ್ವಾಸ ಡೈರೆಕ್ಟರರಿಗಿದೆ.

ಆಡಳಿತ

ಕಂಪೆನಿಯ ನಿಬಂಧನೆಯಂತೆ, ಕಂಪೆನಿಯು ಮೆ। ಪಿ. ಎಸ್. ಭಟ್ ಬ್ರದರ್ಸ್ ಇವರೊಡನೆ ಕರಾರೊಂದನ್ನು ನೆರವೇರಿಸಿಕೊಂಡಿದೆ. ಇವರನ್ನು 20 ವರ್ಷಗಳ ವರೆಗೆ ಕಂಪೆನಿಯ ಮೆನೇಜಿಂಗ್ ಏಜಂಟರನ್ನಾಗಿ ನೇಮಿಸಿ ಅವರಿಗೆ ಕಂಪೆನಿಯು ರಿಜಿಸ್ಟ್ರೇಷನ್‌ಗಿಂತ ಮುಂಚೆಯೇ ಉತ್ಪೊಗೆಗಳನ್ನು ಆರಂಭಿಸುವ ವರೆಗೆ ತಿಂಗಳಿಗೆ 125 ರೂಪಾಯಿಗಳಂತೆ ಕೆಲಸ ಆರಂಭವಾದ ಬಳಿಕ ತಿಂಗಳಿಗೆ 250 ರೂಪ್ಯಾ ಮತ್ತು ಇನ್ ಲಾಭದಲ್ಲಿ ಸೇ. 10ರಂತೆ ಕಮಿಶನನ್ನೂ ಕೊಡಲಾಗುವುದು.

ಕಂಪೆನಿಯ ಪ್ರಾರಂಭಿಕ ವೆಚ್ಚವನ್ನು ರೂ. 5000 ಎಂದು ನಿರ್ಧರಿಸಲಾಗಿದೆ. ಕಮಿಶನ್ ಇತ್ಯಾದಿಗಳು ಇದರಲ್ಲಿ ಸೇರಿಲ್ಲ.

ಮೆ। ಪಿ ಎಸ್. ಭಟ್, ಬ್ರದರ್ಸ್—ಈ ಸಂಸ್ಥೆಯ ಪಾರ್ಟ್ನರರ ಪೈಕಿ ಶ್ರೀ। ವೈ. ಶಂಕರನಾರಾಯಣ ಭಟ್ ಮತ್ತು ಡಾ. ಪಿ. ಎಸ್. ಈಶ್ವರ ಭಟ್ಟರು ಕಂಪೆನಿಯ ಡೈರೆಕ್ಟರುಗಳಾಗಿದ್ದಾರೆ.

ಡೈರೆಕ್ಟರರ ಯೋಗ್ಯತೆ

ಡೈರೆಕ್ಟರನಾಗಬೇಕಾದರೆ, 100 ಶೇರುಗಳನ್ನಾದರೂ ಪಡಕೊಳ್ಳತಕ್ಕದ್ದು. ಡೈರೆಕ್ಟರರಿಗೆ ಸಭೆಯೊಂದಕ್ಕೆ ರೂ. 25ಕ್ಕೆ ಮಿಗಾರದಷ್ಟು ಹಣವನ್ನು 'ಸಿಟ್ಟಿಂಗ್ ಫೀಸ್' ಆಗಿಯೂ ಮತ್ತು ಡೈರೆಕ್ಟರರ ಮಂಡಲಿಯು ನಿರ್ಧರಿಸುವಂತೆ ಪ್ರಯಾಣ ಭತ್ತೆ-ಇತ್ಯಾದಿಗಳನ್ನೂ ಕೊಡಲಾಗುವುದು.

ಒಬ್ಬ ಡೈರೆಕ್ಟರರು ಕಂಪೆನಿಯ ಬಗ್ಗೆ ಯಾವುದಾದರೊಂದು ಕಾರ್ಯವನ್ನು ನಡೆಸುವ ಬಗ್ಗೆ ಆಪ್ತಾನಿತರಾದರೆ, ಆ ಬಗ್ಗೆ ಅವರಿಗೆ ಹೆಚ್ಚಿನ ಸಂಭಾವನೆಯನ್ನು ಕೊಡಬಹುದು.

ರೂ. 40 ಸಾವಿರದಿಂದ ಡೈರೆಕ್ಟರರು, ಶೇರುಗಳನ್ನು ಚಂದಾ ಬಗ್ಗೆ ಆಫರಿಸಲು ಮೊದಲು ಮಾಡುವರು

ಕರಾರುಗಳು

ಕಂಪೆನಿಯು ಈ ಕರಾರುಗಳನ್ನು ಮಾಡಿಕೊಂಡಿದೆ: 1 ಮೆ। ಪಿ ಎಸ್. ಭಟ್ ಬ್ರದರ್ಸ್ ಇವರನ್ನು 20 ವರ್ಷಗಳ ವರೆಗೆ ಕಂಪೆನಿಯ ಮೆನೇಜಿಂಗ್ ಏಜಂಟರಾಗಿ ನೇಮಿಸಿದ ಬಗ್ಗೆ; 2 ರೂ. 7500 ಮೌಲ್ಯದ 25% ಎಕ್ಕೆ ಆಸ್ತಿಯನ್ನು ಕಂಪೆನಿಯ ಬಗ್ಗಾಗಿ ಡೈರೆಕ್ಟರ್ ಮಂಡಲಿಯ ಅಧ್ಯಕ್ಷರಾದ ಶ್ರೀ. ಕೆ. ಗಣಪತಿ ಭಟ್ಟ ಅವರಿಗೂ ಬೇರೆ ಮೂವರೊಳಗೂ ಆದ ಕರಾರು 3 ಶ್ರೀ. ಪಾಣಾಜೆ ಶಂಕರ ನಾರಾಯಣ ಭಟ್ಟರ, ಪಾಣಾಜೆ ಫಾರ್ಮಸ್ಯೂಟಿಕಲ್ ವರ್ಕ್ಸ್ ಇದನ್ನು ರೂ. 15,000 ಗಳಿಗೆ ಕೊಂಡುಕೊಂಡ ಬಗ್ಗೆ ಆದ ಕರಾರು.

ಈ ಫಾರ್ಮಸ್ಯೂಟಿಕಲ್ ವರ್ಕ್ಸ್‌ನ ಮಾಲ್ಕವನ್ನು ಕವಿರಾಜ ಡಾ. ಕೆ. ಸಿ. ಅಳ್ವ ಮತ್ತು ಡಾ. ಎಂ. ಪರಮೇಶ್ವರಭಟ್ಟರು ಕಟ್ಟಿದವರು.

ಮೇಲಿನ ಕರಾರು ಪತ್ರಗಳಲ್ಲಿ ಕಂಪೆನಿಯ ರಿಜಿಸ್ಟರ್ಡ್ ಆಫೀಸಿನಲ್ಲಿ ಪರಿತೀಲನೆಗೆ ಸಿದ್ಧವಿವೆ.

ಓಟಿನ ಅಧಿಕಾರ

ಕೈಯತ್ತಿ ಓಟು ಕೊಡುವಾಗ ಪ್ರತಿ ಶೇರ್ ಹೋಲ್ಡರರಿಗೆ ಒಂದೊಂದೇ ಓಟು. ಆದರೆ ಮುತ್ತಪತ್ರ ಮೂಲಕ ಓಟು ಕೊಡುವಾಗ, ಪ್ರತಿ ಶೇರಿಗೆ ಒಂದು ಓಟು.

ಶೇರು ಟ್ರಾನ್ಸ್‌ಫರ್

ಎಲ್ಲ ಶೇರುಗಳ ಮೇಲೆಯೂ ಕಂಪೆನಿಗೆ ಪ್ರಧಾನ ಹಕ್ಕು ಇರತಕ್ಕದ್ದು. ಮೊದಲೇ ಬರಹ ನೂಲಕವಾದ ಸೂಚನೆಯಿದ್ದರೆ ಮಾತ್ರ ಶೇರುಗಳನ್ನು ಟ್ರಾನ್ಸ್‌ಫರ್ ಮಾಡಬಹುದು. ಆದೂ ಡೈರೆಕ್ಟರರ ಪೂರ್ವ ಒಪ್ಪಿಗೆಯಿಂದ ಮಾತ್ರ.

ಶೇರಿಗೆ ನೂರಾಡೆಯಂತೆ ಬೇಂಕರ್, ಬ್ರೋಕರ್ ಮತ್ತು ಏಜಂಟರಿಗೆ ಕಮಿಶನ್ ಕೊಡಲಾಗುವುದು

ಶೇರಿನ ಬಗ್ಗೆ ಅರ್ಜಿ

ಶೇರು ಒಂದರ ಪ್ರಥಮ ಮೌಲ್ಯ ರೂಪ್ಯಾ 10ನ್ನೂ ಪ್ರವೇಶ ಧನ 0-8-0ಯೊಂದಿಗೆ ಯೋಜನಾ ಪತ್ರಿಕೆಯ ಜತೆಗಿರುವ ಅರ್ಜಿ ಫಾರ್ಮಿನಲ್ಲಿ ಬರಾಯಿಸಿ ಒಪ್ಪಿಸತಕ್ಕದ್ದು. ಚಕ್ಕು ಕಳುಹುವ ಸಂದರ್ಭದಲ್ಲಿ ಆಫರ್ನು ವಟಾಯಿಸುವ ಖರ್ಚೂ ಸೇರಿರತಕ್ಕದ್ದು. ಶೇರುಗಳ ಬಗ್ಗೆ ಬಂದ ಅರ್ಜಿಯಲ್ಲಿ ಆವೇಕ್ಷಿಸಲಾದಷ್ಟು ಶೇರುಗಳನ್ನು ಕೊಡದಿರುವ ಅಥವಾ ಅರ್ಜಿಯನ್ನೇ ನಿರಾಕರಿಸುವ ಅಧಿಕಾರ ಡೈರೆಕ್ಟರರಿಗಿದೆ. ಅಂತಹ ಸಂದರ್ಭಗಳಲ್ಲಿ ಅರ್ಜಿಯ ಜೊತೆಗೆ ಕಳುಹಿಸಲಾದ ಹಣವನ್ನು ಪರತ ಕಳುಹಲಾಗುವುದು.

ಯೋಜನಾಪತ್ರಿಕೆ ಹಾಗೂ ಶೇರು ಅರ್ಜಿ ಫಾರ್ಮುಗಳನ್ನು ಕಂಪೆನಿಯ ರಿಜಿಸ್ಟರ್ಡ್ ಆಫೀಸು ಅಥವಾ ಕಂಪೆನಿಯ ಬೇಂಕುಗಳಿಂದ ಪಡಕೊಳ್ಳಬಹುದು.

Regd. No. M. 3618. Estd. 1921 ಸ್ಥಾಪನೆ. ಬೆಲೆ: 0—1—6.

ನವಯುಗ

ಚಂದಾ ವಿವರ:
(ಮುಂಗಡ)

ವರ್ಷಕ್ಕೆ ರೂ. 4—8—0
6 ತಿಂಗಳಿಗೆ ರೂ. 2—8—0

6 ತಿಂಗಳಿಗಿಂತ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ.

ಮಾದರಿ ಸಂಚಿಕೆಗೆ ಬರೆಯಿರಿ.

ಮೆನೇಜರ್,
ನವಯುಗ, ಉಡುಪಿ, ದ. ಕ.



ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ.

ವರ್ಷ ೨೬ ವಾರ ೭ | FOUNDER: SPL. A. B. SHETTY, M.L.A. | Vol. 26 No. 7

ಉಡುಪಿ • 17—10—1946 • ಮಂಗಳೂರು.

ಅಮೃತಾಂಜನ.
ತಲೆನೋವು, ತಿರುಗು, ನೆಗಡಿ, ಜ್ವರಕ್ಕೆ, ಕೆಮ್ಮು, ಹಲ್ಲು ನೋವಿಗೂ ಎದೆನೋವು, ಭಾಯುಗಳು ಬಾಸುಂ ಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ ಕಳ್ಳಾಟಕ್ಕೆ ಮೊದಿನೆ. ಮೊದಲಾದ ಎಲ್ಲಾ ರೋಗಗಳಿಗೂ ಉಪಯೋಗಿಸಲ್ಪಡುತ್ತಿದೆ.

ಅಮೃತಾಂಜನ ಲಿಮಿಟೆಡ್.
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

The best preventive in epidemics of CHOLERA

"BHUVANENDRA"
CHANDRAMAS

Also a sovereign remedy for diarrhoea, Stomachache, Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ'
ಚಂದ್ರಮಸ್ ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೂಡನಿರತಕ್ಕ ಅತ್ಯುತ್ತಮ ಔಷಧಿ.

ದೊಡ್ಡವರಿಗೆ 40ರಿಂದ 60ಹೊಟ್ಟು, ಸಣ್ಣಮಕ್ಕಳಿಗೆ 10ರಿಂದ 20ಹೊಟ್ಟು ಲವಂಗ ಜೀರಿಗೆಮಿಶ್ರ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ

ಉಡುಪಿ ಸ್ಟಾಕಿಸ್ಟರು:—ಹಾ। ನಾಯಕ್ಸ್ ಕಿಸ್ಟ್ಸ್ ಡ್ರಗ್ಗಿಸ್ಟ್ ಎಂಡ್ ಕೆಮಿಸ್ಟ್ಸ್; ಶ್ರೀ ಆರ್. ಎಸ್. ಶೆಟ್ಟಿ, ರಥಬೀದಿ; ಹಾ। ಪಿ. ಜಿ. ಆಚಾರ್ಯ ಫಾರ್ಮಸಿ; ಹಾ। ಕೆ. ಶೇಷ ಗಿರಿ ಶೆಟ್ಟಿ L.M.; ಹಾ। ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೊ

Life is full of Opportunities.

Life is full of events and opportunities created by God for man and by man for himself and his fellowmen. Normal life presupposes a prosperous family, a happy home, good education, congenial vocation, good relations, friends, a cultured society and also a few ups and downs to spice them all with. Have you made sure that your family too can reasonably aspire to lead such a life even in your absence?

The Canara Mutual Assurance Co., Ltd.,

HEAD OFFICE: **UDIPI.** (S. India.)

Chief Agents for the Bombay and Madras Presidencies including States and the States of Mysore and Hyderabad:

The Commercial Corporation of India, Ltd,
UDIPI. (S. India.)

THE
Bombay Life Assurance Company Ltd.
(ESTD. 1908)
A PREMIER INSURANCE COMPANY.

New Business in 1945 - - 2,77,23,100.

KOCHIKAR BROTHERS, LTD.
(ESTD. 1910)
Chief Agents for South India including
Travancore, Cochin and Mysore State.

New Business in 1945 in our area:- **Over 5 Millions.**

OUR Expert advice gained by 35 years Experience is at your door FREE.

Drop a card to any of our Offices at —

MADRAS * BANGALORE * MADURA * CALICUT
TRIVENDRUM * UDIPI * AND BOMBAY.

ಉಡುಪಿ ಬೋರ್ಡಿಂಗ್ ಎಂಡ್ ಲೋಜಿಂಗ್ ಮಧುರಾ.

ತಾ. 3—8—1945ರಲ್ಲಿ ಜರಗಿದ ಆರನೆ ಹುಟ್ಟುಹಬ್ಬದ ಸಮಾರಂಭದ ಸಂತೋಷ ಕಾಲದಲ್ಲಿ ನಮಗೆ ಸಕಲ ವಿಧದಿಂದಲೂ ಬೆಂಬಲವಿತ್ತು ಪ್ರೋತ್ಸಾಹಿಸಿದ ಮಹನೀಯರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇವೆ. ಇದಕ್ಕಿಂತಲೂ ದ್ವಿಗುಣಿತವಾಗಿ ನಮ್ಮ ಸೇವೆಯನ್ನು ಹೊಸ ವರುಷದಲ್ಲಿ ಸಲ್ಲಿಸಲು ಮಹಾಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನೀಯುವರೆಂದು ನಿರೀಕ್ಷೆ.

ಎಲ್. ನರಸಿಂಗ ರಾವ್,
ಪ್ರೊಪ್ರೈಟರ್.

—ಮಕ್ಕಳನ್ನು ಹಡೆಯುವುದು ಸಾಕು—
ಒಕ್ಕ ಸ್ತ್ರೀಯರಿಗೆ **ಬರ್ಥ್ ಕಂಟ್ರೋಲ್** ರೋಗಗ್ರಹಸ್ತ ಕಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿತೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ 1 ಗುಳಿಗೆ ಮಧ್ಯಾಹ್ನಕ್ಕೆ 1 ಗುಳಿಗೆ, ಸಂಜೆ 1 ಗುಳಿಗೆಯಂತೆ ಊಟದ ನೋದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಕ್ಕೆ:— [illegible] ಗುಳಿಗೆಗಳು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ್ ಚಾರ್ಜು ಪ್ರತ್ಯೇಕ.

ಮಾಲಕರು:—ಹಾಲಪ್ಪ ಫಕೀರಪ್ಪಾ ಧಾವಣಗೇರಿ
ಆಯುರ್ವೇದ ಔಷಧಾಲಯ, ಗದಗ-ಸಿಟಿ.

ಏಜಂಟರು:—ಹುಬ್ಬಳಿ ಫಾರ್ಮಸಿ,—ಹುಬ್ಬಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪುರ—ಬಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪುರ. ಚಿಕ್ಕೋಡಿಯಲ್ಲಿ.—ಹುಂಬರವಾಡಿ ಸ್ಟೋರ್ಸ್. ಧಾರವಾಡ:—ಧಾರವಾಡ ಪ್ರೆಸ್ಸ್. ಅಲ್. ಎಲ್. ಕಮಲಾಪುರ, ಕೆಮಿಸ್ಟ್, ಹಾವೇರಿ, ಬ್ಯಾಡಗಿ.

Ayurveda Oushadalaya, GADAG CITY.

For prompt and efficient Banking Service

Bank with

THE VIJAYA BANK LIMITED.

Head Office:—**MANGALORE.**

Branches. **Byndoor, Coondapoor, Brahmavar, Udipi, Kaup, Karkal, City-Mangalore, Kasaragod, Kanhangad, Puttur, Mercara & Bombay.**

ಟೆಲಿಗ್ರಾಮ್:- 'ಮಹಾಜನ', ಕಾಸರಗೋಡು. ಇದು ಯೋಜನಾಪತ್ರಿಕೆಯಲ್ಲ; ಪ್ರಕಟಣೆ ಮಾತ್ರ.

(ಯೋಜನಾಪತ್ರಿಕೆಯ ಒಂದು ಪ್ರತಿಯನ್ನು ಎಸಿಸ್ಟೆಂಟ್ ರೆಜಿಸ್ಟ್ರಾರ್ ಆಫ್ ಜ್ಯೊಂಟ್ ಸ್ಟಾಕ್ ಕಂಪೆನೀಸ್, ಮಂಗಳೂರು—ಇವರಲ್ಲಿ ದಾಖಲು ಮಾಡಲಾಗಿದೆ.)

The Mahajana Chemicals & Pharmaceuticals, Ltd.

ದಿ ಮಹಾಜನ ಕೆಮಿಕಲ್ಸ್ ಎಂಡ್ ಫಾರ್ಮಸ್ಯೂಟಿಕಲ್ಸ್ ಲಿಮಿಟೆಡ್

(ಇಂಡಿಯನ್ ಕಂಪೆನೀಸ್ ಆಕ್ಟಿಗನ್ವಯ ಸ್ಥಾಪಿತವಾಗುವುದು ಮತ್ತು ಜವಾಬ್ದಾರಿಯು ಮಿತವಾಗುವುದು.)

ಡೈರೆಕ್ಟರರು

1. ಶ್ರೀ। ಬಂಡಿಗೆ ಗಣಪತಿ ಭಟ್, ಡೈರೆಕ್ಟರ್ ಮಂಡಲಿಯ ಅಧ್ಯಕ್ಷ; ವರ್ಗದಾರ, ಪೆರ್ಡಾಲ, ದ. ಕ.

ಡೈರೆಕ್ಟರರು: ಗ್ರೀನ್‌ವೆಲ್ಲಿ ಫಾರ್ಮ್ಸ್, ಲಿಮಿಟೆಡ್, ಮಂಗಳೂರು; ಕರ್ನಾಟಕ ವ್ಯವಸಾಯ ವರ್ತಕ ಸಂಘ ಲಿಮಿಟೆಡ್, ಮಂಗಳೂರು; ಕರ್ನಾಟಕ ಟಿಕ್ಸ್‌ಟೈಲ್ಸ್ ಲಿಮಿಟೆಡ್, ಮಂಗಳೂರು.

ಟ್ರಸ್ಟಿ:- ಮಹಾಜನ ಸಂಸ್ಕೃತ ಕಾಲೇಜ್, ಪೆರ್ಡಾಲ.

2. ಶ್ರೀ। ಪಿ. ಶಂಕರನಾರಾಯಣ ಭಟ್, ವರ್ಗದಾರ, ಪಾಣಾಜೆ, ಪುತ್ತೂರು, ದ. ಕ.

3. ಶ್ರೀ। ಸಿ. ಎಮ್. ವೆಂಕಟ್ರಮಣಯ್ಯ, ವರ್ಗದಾರ, ಮತ್ತು ಏಲಕ್ಕಿ ಪ್ಲಾಂಟರ್, ವಿಟ್ಲ, ದ. ಕ.

ಡೈರೆಕ್ಟರ್:- ದಿ ಕರ್ನಾಟಕ ವ್ಯವಸಾಯ ವರ್ತಕ ಸಂಘ, ಲಿಮಿಟೆಡ್, ಮಂಗಳೂರು.

4. ಕವಿರಾಜ ಡಾ। ಕೆ. ಸಿ. ಅಳ್ಳ, ವೈದ್ಯ ಭೂಷಣ, ಪೊಪ್ಯುಲರ್, ಶ್ರೀ ಗಣೇಶಾನಂದ ಆಯುರ್ವೇದ ಭವನ್, ವರ್ಗದಾರ, ಕಾಸರಗೋಡು, ದ. ಕ.

ಬೋಧಕರು.- ವಿಜಯ ಬೇಂಕ್, ಲಿಮಿಟೆಡ್, ಮಂಗಳೂರು, (ಕಾಸರಗೋಡುಶಾಖೆ)

5. ಶ್ರೀ। ಎಂ. ಶಂಕರನಾರಾಯಣ ಕಡಂಬಿತ್ತಾಯ, ವರ್ಗದಾರ, ಬಿಲೆಸರು, ಅಡೂರು, ದ. ಕ.

ಡೈರೆಕ್ಟರ್:- ದಿ ಗ್ರೀನ್‌ವೆಲ್ಲಿ ಫಾರ್ಮ್ಸ್, ಲಿಮಿಟೆಡ್, ಮಂಗಳೂರು.

6. ಶ್ರೀ। ಎ. ಜಿ. ತಿರುಮಲೇಶ್ವರ ಭಟ್, ವರ್ಗದಾರ ಮತ್ತು ಪತ್ರಿಕೋದ್ಯೋಗಿ ವಿಟ್ಲ, ದ. ಕ.

ಡೈರೆಕ್ಟರರು:- ಗಣೇಶ್ ಇಂಡಸ್ಟ್ರೀಸ್ ಕೊ, (ಇಂಡಿಯ) ಲಿಮಿಟೆಡ್, ಮಂಗಳೂರು; ದಿ ವೆಸ್ಟ್‌ಕೋಸ್ಟ್ ಇಂಡಸ್ಟ್ರಿಯಲ್ ಎಂಡ್ ಕಮರ್ಶಿಯಲ್ ಸಿಂಡಿಕೇಟ್, ಲಿಮಿಟೆಡ್, ಮಂಗಳೂರು.

7. ಡಾ। ಪಿ. ಎಸ್. ಈಶ್ವರ ಭಟ್, ಎಲ್. ಐ. ಎಮ್., ರಿಜಿಸ್ಟರ್ಡ್ ಮೆಡಿಕಲ್ ಪ್ರೆಕ್ಟೀಶನರ್, ವಿಟ್ಲ, ದ. ಕ.

ಡೈರೆಕ್ಟರ್- ದಿ ವೆಸ್ಟ್‌ಕೋಸ್ಟ್ ಇಂಡಸ್ಟ್ರಿಯಲ್ ಎಂಡ್ ಸಿಂಡಿಕೇಟ್ ಲಿಮಿಟೆಡ್, ಮಂಗಳೂರು.

ಮೆನೇಜಿಂಗ್ ಏಜಂಟರು

ಮೆಸರ್ಸ್. ಪಿ. ಎಸ್. ಭಟ್, ಬ್ರದರ್ಸ್, ಪಾಣಾಜೆ, ದ. ಕ.

ಬೇಂಕರರು

1 ಕೆನರಾ ಬೇಂಕ್, ಲಿಮಿಟೆಡ್.
2 ದಿ ವಿಜಯಾ ಬೇಂಕ್, ಲಿಮಿಟೆಡ್.

ಲೆಕ್ಕ ಪರಿಶೋಧಕರು

ಶ್ರೀ। ವಿ. ಎಮ್. ಹೆಗ್ಡೆ, ಜಿ. ಡಿ. ಎ., ಆರ್. ಎ, ರಿಜಿಸ್ಟರ್ಡ್ ಎಕೌಂಟೆಂಟ್ಸ್ ಮತ್ತು ಆಡಿಟರರು, ಹಳೆ ಜೇಡಿಗುಡ್ಡೆ ರಸ್ತೆ, ಮಂಗಳೂರು.

ನ್ಯಾಯ ಬೋಧಕರು

ಶ್ರೀ। ಎಸ್. ವೆಂಕಟ್ರಮಣ ಭಟ್, ಬಿ. ಎ, ಎಲ್. ಎಲ್. ಬಿ., ಅಡ್ವೊಕೇಟ್, ಕಾಸರಗೋಡು, ದ ಕ.

ಶ್ರೀ। ಕೆ. ಶಂಕರ ರಾವ್, ಬಿ. ಎ. ಬಿ. ಎಲ್., ಅಡ್ವೊಕೇಟ್, ಕಾಸರಗೋಡು, ದ. ಕ.

ರಿಜಿಸ್ಟರ್ಡ್ ಹೆಡ್ ಆಫೀಸು

ಕಾಸರಗೋಡು, ದ. ಕ.

ಕಂಪೆನಿಯ ಉದ್ದೇಶ

ಕಂಪೆನಿಯು ಮೆಮೊರಂಡಮ್ ಆಫ್ ಎಸೋಸಿಯೇಶನಿನಲ್ಲಿ ವಿವರಿಸಿದಂತೆ, ಮುಖ್ಯವಾಗಿ, ಆದರ್ಶ ದೇಶೀಯ ಔಷಧಿಗಳನ್ನು ಸುಧಾರಿತ ಹಾಗೂ ಆಧುನಿಕ ವೈಜ್ಞಾನಿಕ ರೀತ್ಯಾ ಸಿದ್ಧಗೊಳಿಸುವುದು ಹಾಗೂ ಆದರ ವ್ಯಾಪಾರ ನಡೆಸುವುದೇ ಕಂಪೆನಿಯ ಮುಖ್ಯೋದ್ದೇಶವಾಗಿದೆ.

ಪ. ಕನ್ನಡದ ಉತ್ಪನ್ನವಾದ ನುಣ್ಣಿನ ಗುಣವು ಔಷಧಿ ಗಿಡಮೂಲಿಕೆಗಳಿಗೆ ಅತ್ಯುತ್ತಮವಾಗಿದೆ ಎಂಬುದು ಸರ್ವವಿದಿತವಾದರೂ ಇದರ ಗುಣವನ್ನು ಉಪಯೋಗಿಸಿಕೊಂಡು, ವ್ಯಾಪಾರಿ ದೃಷ್ಟಿಯಿಂದ ಔಷಧಿ ಗಿಡಮೂಲಿಕೆಗಳನ್ನು ಬೆಳಸಿ ಅವುಗಳಿಂದ ಶಾಸ್ತ್ರೀಯವಾದ ಔಷಧಿಗಳನ್ನು ಸಿದ್ಧಗೊಳಿಸಿ, ಜನತೆಗೆ ಒದಗಿಸಿಕೊಡುವ ಯತ್ನ ಈ ವರೆಗೆ ಆಗಿಲ್ಲ. ಈಗ ಸ್ಥಾಪಿತವಾಗಿರುವ ರಾಷ್ಟ್ರೀಯ ಸರಕಾರವು ಆಯುರ್ವೇದೀಯ ವೈದ್ಯ ಪದ್ಧತಿಗೆ ಹೆಚ್ಚಿನ ಸಹಾಯ ಪ್ರೋತ್ಸಾಹಗಳನ್ನು ಕೊಡಲಿರುವುದೆಂಬ ಭರವಸೆಯೂ ವೈದ್ಯೆಕ್ಷರನ್ನು ಈ ಉದ್ಯಮದಲ್ಲಿ ಪ್ರೇರೇಪಿಸಿದೆ.

ವಿಟ್ಲಪಟ್ಟಿರುವ ಪಾಣಾಜೆ ವೈದ್ಯ ಶಂಕರನಾರಾಯಣ ಭಟ್ಟರ ಪಾಣಾಜೆ ಸಾರ್ವಮ್ಸ್ಯೂಟಿಕಲ್ಸ್‌ನ ಸೊತ್ತುಗಳನ್ನೆಲ್ಲ ಕಂಪೆನಿಯು ಪಡಕೊಂಡಿದೆ. ಈ ಔಷಧಾಲಯವಲ್ಲಿ ಕಳೆದ 1909ರಿಂದ ಸಿದ್ಧಗೊಳಿಸಲಾಗುತ್ತಿರುವ ಔಷಧಗಳು, ಅತ್ಯಂತ ಉತ್ಕೃಷ್ಟವಾಗಿದ್ದು ಪಶ್ಚಿಮ ಕರಾವಳಿಯಲ್ಲೆಲ್ಲ, ಮುಖ್ಯವಾಗಿ ಕೊಡಗು ಮತ್ತು ದ. ಕನ್ನಡಗಳಲ್ಲಿ ತುಂಬ ವಿಕ್ರಯವಾಗುತ್ತಿತ್ತು, ಆದುದರಿಂದ ಪ್ರಾರಂಭಿಕ ಉಪಕರಣಗಳೆಲ್ಲ ಸಿದ್ಧವಾದೊಡನೆಯೇ ಕಾರ್ಯಾರಂಭಿಸಲು ಡೈರೆಕ್ಟರರು ಯೋಚಿಸುತ್ತಿದ್ದಾರೆ.

ಬ್ರಿಟಿಷ್ ಫಾರ್ಮಕೋಪಿಯದಲ್ಲಿ ಪ್ರಸಿದ್ಧಿ ಸಲಾಗಿರುವ ಔಷಧ ದ್ರವ್ಯಗಳಲ್ಲಿ ಸೇ. ಖಚಿರವನ್ನು ಭಾರತದಲ್ಲಿ ದೊರೆಯುತ್ತಿದೆ. ಆದರೂ ಈ ದೇಶಕ್ಕೆ ಶ್ರತಿವರ್ಷ ೭೮ಚ ಲಕ್ಷ ರೂಪಾಯಿಗಳ ಸಿದ್ಧ ಗೊಳಿಸಿದ ಔಷಧಿಗಳು ವಿದೇಶ ಗಳಿಂದ ಬರುತ್ತಿದೆ. ಇದಕ್ಕೆ ಪ್ರತಿಯಾಗಿ ನಮ್ಮಲ್ಲಿಂದ ಪೇರಳವಾಗಿ ಹೋಗುತ್ತಿರುವ ಅಸಿದ್ಧ ಔಷಧ ದ್ರವ್ಯಗಳ ಬೆಲೆ ಬರಿ ೫ ಲಕ್ಷ ರೂಪಾಯಿಗಳು ಮಾತ್ರ! ನಮ್ಮಲ್ಲೇ ಈ ಅರ್ಧ ಔಷಧಗಳೆನ್ನೆಲ್ಲ ಸಿದ್ಧ ಗೊಳಿಸಿದರೆ, ಪರದೇಶಕ್ಕೆ ಹೋಗುವ ಎಷ್ಟೋ ಧನವನ್ನು ಉಳಿಸಬಹುದು.

ಕೆಪ್ಪುಸ್ ಜಿ. ಶ್ರೀನಿವಾಸ ಮೂರ್ತಿ, ಬಿ. ಎ., ಬಿ. ಎಲ್., ಎಂ. ಬಿ. ಸಿ. ಎಮ್., ಆವರು, ಇತ್ತೀಚೆಗೆ ಬಂದೆಬೆ ಭಾಷಣವೀಯುತ್ತ ಹೀಗೆಂದಿದ್ದರು: "ಪಾಶ್ಚಾತ್ಯ ರಸಾಯನ ಶಾಸ್ತ್ರಜ್ಞರು, ದೇಶೀಯ ವೈದ್ಯ ವಿಶಾರದರೂ ಸಂಯೋಗದಿಂದ ಕಾರ್ಯಪ್ರವೃತ್ತರಾಗಿ ವೇ ದೇಶೀಯ ಔಷಧದ ಸರಿಯಾದ ಪೃಥಕ್ಕರಣವಾದರೆ, ಆದರಿಂದ ಭಾರತಕ್ಕೆ ಮಾತ್ರ ಪ್ರಯೋಜನವಲ್ಲ; ಅಖಿಲ ಪ್ರಪಂಚಕ್ಕೇ ಪ್ರಯೋಜನವಿದೆ". ಈ ಮಾತನ್ನು ದೃಷ್ಟಿಪಥದಲ್ಲಿಟ್ಟು ಕೊಂಡು, ಪಾಶ್ಚಾತ್ಯ ವೈದ್ಯ ಪದ್ಧತಿ ಹಾಗೂ ದೇಶೀಯ ಪದ್ಧತಿಗಳ ಸಮ್ಮಿಲನದಿಂದಲೆ, ಅಧುನಿಕ ಬೃಹತ್ತೋತ್ಪಾದಕಕ್ರಮಗಳ ಸಹಾಯದಿಂದ ಆಲ್ಲೊಪೆಥಿಕ್ ಹಾಗೂ ಆಯುರ್ವೇದೀಯ ಔಷಧಗಳೆರಡನ್ನೂ ತಯಾರಿಸಲು ಕಂಪೆನಿಯು ಯೋಚಿಸುತ್ತಿದೆ.

ನನ್ನು ಕಾರ್ಯಕ್ರಮ

ಸದ್ಯ ಕಂಪೆನಿಯು ಈ ಕೆಳಗಿನ ಆಯುರ್ವೇದ ಔಷಧಿಗಳನ್ನು ತಯಾರಿಸಲು ಸಂಕಲ್ಪಿಸಿದೆ. 1 ಅರಿಷ್ಟ, 2 ಆಸವ, 3 ಘೃತ, 4 ತೈಲ, 5 ಲೇಹ್ಯ, 6 ಚೂರ್ಣ, 7 ವಟ, 8 ಫಸ್ಕ, 9 ಕಷಾಯ, 10 ಟೀಪನ, ಹಾಗೆಯೆ, ಟಿಂಚರ್ಸ್, ಎಕ್ಸ್‌ಟ್ರಾಕ್ಟ್ಸ್, ಇಂಜಕ್ಷೋಲ್ಸ್, ಸಿರಕ್, ಪಿಲ್ಸ್ ಟ್ಯಾಬ್ಲೆಟ್ ಮೊದಲಾದ ಅಲ್ಲೋಪತಿಕ್ ಔಷಧಿಗಳನ್ನೂ, ಜಾಳೆಹಣ್ಣು, ಅನನಾಸು, ಮಾವು, ಹಲಸು, ಪಪ್ಪಾಯಿ, ಗೇರು ಮೊದಲಾದವುಗಳ ಮುರಬ್ಬಗಳನ್ನೂ ತಯಾರಿಸಲಾಗುವುದು.

ಆಯುರ್ವೇದ ವೈದ್ಯಕೀಯದಲ್ಲಿ 40 ವರ್ಷಗಳ ಅನುಭವವುಳ್ಳ ಶ್ರೀ। ಪಾಣಾಜೆ ವೈದ್ಯ ಶಂಕರನಾರಾಯಣ ಭಟ್ಟರು ಕಂಪೆನಿಗೆ ತನ್ನು ಗೌರವಾರ್ಥ ಸೇವೆಯನ್ನು ಸಲ್ಲಿಸಲು ಒಪ್ಪಿರುವರು. ಗಿಡಮೂಲಿಕೆಗಳ ಕುರಿತಾದ ಇವರ ಅನುಭವವು ಅತ್ಯಮೂಲ್ಯವಾಗಿದೆ. ಒಂದೇ ಹೆಸರಿನ ಬೇರೆಬೇರೆ ಗುಣಗಳ ಗಿಡ ಮೂಲಿಕೆಗಳು ಇವೆಯೆಂಬುದು ಸರ್ವವಿದಿತ ವಷ್ಟೆ. ಇಂತಹ ಸಂದರ್ಭದಲ್ಲಿ ಉತ್ತಮವಾದ ಮೂಲಿಕೆಗಳನ್ನು ಆರಿಸುವ ವಿಚಾರಕ್ಕೆ ಹೆಚ್ಚಿನ ಗಮನ ಕೊಡಬೇಕಾದುದು ಅವಶ್ಯ. ಶ್ರೀ। ವೈದ್ಯ ಶಂಕರನಾರಾಯಣ ಭಟ್ಟರು ಈ ವಿಚಾರದಲ್ಲಿ ತುಂಬಾ ಬಲ್ಲಿದರು ಎಂಬ ವಿಚಾರವು ಮಾಣಿಪಾಲದಲ್ಲಿ ಜರಗಿದ ೪ನೆಯ ಅ. ಭಾ. ಆಯುರ್ವೇದ ಸಮ್ಮೇಲನದಲ್ಲಿ ಸರ್ವ ವಿದಿತವಾಗಿದೆ. ಹಾಗೆಯೇ ಕಂಪೆನಿಯು ಸಿದ್ಧ ಗೊಳಿಸಲಿರುವ ಔಷಧಗಳ ಪರೀಕ್ಷೆಗಾಗಿ ವೈದ್ಯ ಸಲಹೆಗಾರರ ಮಂಡಲಿಯೊಂದನ್ನು ನೇಮಿಸಲಾಗುವುದು. ಈ ಸಂದರ್ಭದಲ್ಲಿ ನಮ್ಮ ಸುಪ್ರಸಿದ್ಧ ವೈದ್ಯರಾದ ಆಯುರ್ವೇದ ಭೂಷಣ ಎಂ. ವಿ. ಶಾಸ್ತ್ರಿ ಅವರು, ಈ ಸಲಹೆಗಾರರ ಮಂಡಲಿಯಲ್ಲಿರಲು ಒಪ್ಪಿರುವುದು ಸಂತೋಷ.

ರೈಲ್ವೆಯ ಮೂಲಕ ಮಂಗಳೂರು, ಕಲ್ಲಿಕೋಟೆಗಳಿಗೂ, ಬಸ್ ಮಾರ್ಗ ಮೂಲಕ ಪುತ್ತೂರು ಮಡಿಕೇರಿ ಮೈಸೂರುಗಳಿಗೂ ಸುಲಭವಾದ ಸಂಚಾರಾನುಕೂಲತೆಗಳಿರುವ ಕಾಸರಗೋಡಿನಲ್ಲೇ ಕಾರ್ಖಾನೆಯು ಸ್ಥಾಪಿಸಲಾಗುವುದು.

ಪಾಣಾಜೆ ಫಾರ್ಮಸ್ಯೂಟಿಕಲ್ಸ್ ವರ್ಕ್ಸ್ ನಿಂದ ಕೊಂಡುಕೊಂಡುದಲ್ಲದೆ, ಇನ್ನೂ ಬೇಕಾಗುವ ಉಪಕರಣಗಳನ್ನೆಲ್ಲ ದೇಗನೆ ಕೊಂಡುಕೊಳ್ಳಲಾಗುವುದು ಕಂಪನಿಯು ಹೀಗೆನೆ ಲಾಭದಾಯಕವಾದ ಉದ್ಯೋಗ ನಡೆಸಲು ಎಲ್ಲುದೆಂಬ ವಿಶ್ವಾಸ ಡೈರೆಕ್ಟರ್‌ಗಳಿಗಿದೆ.

ಆಡಳಿತೆ

ಕಂಪೆನಿಯು ನಿಬಂಧನೆಯಂತೆ, ಕಂಪೆನಿಯು ಮೆ। ಪಿ. ಎಸ್. ಭಟ್ ಬ್ರದರ್ಸ್ ಇವರೊಡನೆ ಕರಾರೊಂದನ್ನು ಮಾಡಿಕೊಂಡಿದೆ. ಇದರನ್ವಯ 20 ವರ್ಷಗಳ ವರೆಗೆ ಕಂಪೆನಿಯ ಮೆನೇಜಿಂಗ್ ಏಜಂಟರನ್ನಾಗಿ ನೇಮಿಸಿ, ಅವರಿಗೆ ಕಂಪೆನಿಯು ರಿಜಿಸ್ಟ್ರೇಷನಿನಿಂದ ಗಾ ಉದ್ಯೋಗವನ್ನು ಆರಂಭಿಸುವ ವರೆಗೆ ತಿಂಗಳಿಗೆ 125 ರೂಪಾಯಿಗಳಂತೆ ಕೆಲಸ ಆರಂಭವಾದ ಬಳಿಕ ತಿಂಗಳಿಗೆ 250 ರೂಪ್ಯಾ ಮತ್ತು ವರ್ಷ ಲಾಭದಲ್ಲಿ ಸೇ. 10ರಂತೆ ಕಮಿಶನನ್ನೂ ಕೊಡಲಾಗುವುದು.

ಕಂಪೆನಿಯ ಪ್ರಾರಂಭಿಕ ವೆಚ್ಚವನ್ನು ರೂ. 5000 ಎಂದು ನಿರ್ಧರಿಸಲಾಗಿದೆ. ಕಮಿಶನ್ ಇತ್ಯಾದಿಗಳು ಇದರಲ್ಲಿ ಸೇರಲಿಲ್ಲ.

ಮೆ। ಪಿ. ಎಸ್. ಭಟ್, ಬ್ರದರ್ಸ್—ಈ ಸಂಸ್ಥೆಯ ಪಾರ್ಟ್‌ನರರ ಪೈಕಿ ಶ್ರೀ. ಪಿ. ಶಂಕರನಾರಾಯಣ ಭಟ್ ಮತ್ತು ಡಾ. ಪಿ. ಎಸ್. ಈಶ್ವರ ಭಟ್ಟರು ಕಂಪೆನಿಯ ಡೈರೆಕ್ಟರುಗಳಾಗಿದ್ದಾರೆ.

ಡೈರೆಕ್ಟರರ ಯೋಗ್ಯತೆ

ಡೈರೆಕ್ಟರನಾಗಬೇಕಾದರೆ, 100 ಶೇರುಗಳನ್ನಾದರೂ ಪಡಕೊಳ್ಳತಕ್ಕದ್ದು. ಡೈರೆಕ್ಟರರಿಗೆ ಸಭೆಯೊಂದಕ್ಕೆ ರೂ. 25ಕ್ಕೆ ಮಿಗಾರದಷ್ಟು ಹಣವನ್ನು 'ಸಿಟ್ಟಿಂಗ್ ಫೀಸ್' ಆಗಿಯೂ ಮತ್ತು ಡೈರೆಕ್ಟರರ ಮಂಡಲಿಯು ನಿರ್ಧರಿಸುವಂತೆ ಪ್ರಯಾಣ ಭತ್ತೆ-ಇತ್ಯಾದಿಗಳನ್ನೂ ಕೊಡಲಾಗುವುದು.

ಒಬ್ಬ ಡೈರೆಕ್ಟರರು ಕಂಪೆನಿಯ ಬಗ್ಗೆ ಯಾವುದಾದರೊಂದು ಕಾರ್ಯವನ್ನು ನಡೆಸುವ ಬಗ್ಗೆ ಆಹ್ವಾನಿತರಾದರೆ, ಆ ಬಗ್ಗೆ ಅವರಿಗೆ ಹೆಚ್ಚಿನ ಸಂಭಾವನೆಯನ್ನು ಕೊಡಬಹುದು.

ರೂ. 40 ಸಾವಿರದಿಂದ ಡೈರೆಕ್ಟರರು, ಶೇರುಗಳನ್ನು ಚಂದಾ ಬಗ್ಗೆ ಆರ್ಪಿಸಲು ಮೊದಲು ಮಾಡುವರು

ಕರಾರುಗಳು

ಕಂಪೆನಿಯು ಈ ಕರಾರುಗಳನ್ನು ಮಾಡಿಕೊಂಡಿದೆ: 1 ಮೆ। ಪಿ. ಎಸ್ ಭಟ್ ಬ್ರದರ್ಸ್ ಇವರನ್ನು 20 ವರ್ಷಗಳ ವರೆಗೆ ಕಂಪೆನಿಯ ಮೆನೇಜಿಂಗ್ ಏಜಂಟರಾಗಿ ನೇಮಿಸಿದ ಬಗ್ಗೆ; 2 ರೂ. 7500 ಮೌಲ್ಯದ 25ಕ್ಕೆ ಎಕ್ಕೆ ಆಸ್ತಿಯನ್ನು ಕಂಪೆನಿಯ ಬಗ್ಗಾಗಿ ಡೈರೆಕ್ಟರ್ ಮಂಡಲಿಯ ಅಧ್ಯಕ್ಷರಾದ ಶ್ರೀ. ಕೆ. ಗಣಪತಿ ಭಟ್ ಅವರಿಗೂ ಬೇರೆ ಮೂವರೊಳಗೂ ಆದ ಕರಾರು 3 ಶ್ರೀ। ಪಾಣಾಜೆ ಶಂಕರನಾರಾಯಣ ಭಟ್ಟರ, ಪಾಣಾಜೆ ಫಾರ್ಮಸ್ಯೂಟಿಕಲ್ ವರ್ಕ್ಸ್ ಇದನ್ನು ರೂ. 15,000 ಗಳಿಗೆ ಕೊಂಡುಕೊಂಡ ಬಗ್ಗೆ ಆದ ಕರಾರು.

ಈ ಫಾರ್ಮಸ್ಯೂಟಿಕಲ್ ವರ್ಕ್ಸ್‌ನ ಮೌಲ್ಯವನ್ನು ಕವಿರಾಜ ಡಾ. ಕೆ. ಸಿ. ಅಳ್ಳ ಮತ್ತು ಡಾ. ಎಂ. ಪರಮೇಶ್ವರಭಟ್ಟರು ಕಟ್ಟಿದವರು.

ಮೇಲಿನ ಕರಾರು ಪತ್ರಗಳೆಲ್ಲ ಕಂಪೆನಿಯ ರಿಜಿಸ್ಟರ್ಡ್ ಆಫೀಸಿನಲ್ಲಿ ಪರಿಶೀಲನೆಗೆ ಸಿದ್ಧವಿವೆ.

ಓಟಿನ ಅಧಿಕಾರ

ಕೈಯೆತ್ತಿ ಓಟು ಕೊಡುವಾಗ ಪ್ರತಿ ಶೇರ್ ಹೋಲ್ಡರರಿಗೆ ಒಂದೊಂದೇ ಓಟು. ಆದರೆ ಮತಪತ್ರ ಮೂಲಕ ಓಟು ಕೊಡುವಾಗ, ಪ್ರತಿ ಶೇರಿಗೆ ಒಂದು ಓಟು.

ಶೇರು ಟ್ರಾನ್ಸ್‌ಫರ್

ಎಲ್ಲ ಶೇರುಗಳ ಮೇಲೆಯೂ ಕಂಪೆನಿಗೆ ಪ್ರಧಾನ ಹಕ್ಕು ಇರತಕ್ಕದ್ದು. ಮೊದಲೇ ಬರಹ ಮೂಲಕವಾಗಿ ಸೂಚನೆಯಿಲ್ಲದೆ ಮಾತ್ರ ಶೇರುಗಳನ್ನು ಟ್ರಾನ್ಸ್‌ಫರ್ ಮಾಡಬಹುದು ಆದೂ ಡೈರೆಕ್ಟರರ ಪೂರ್ವ ಒಪ್ಪಿಗೆಯಿಂದ ಮಾತ್ರ.

ಶೇರಿಗೆ ಮೂರಾಣೆಯಂತೆ ದೇಂಕರ್, ಬ್ರೋಕರ್ ಮತ್ತು ಏಜಂಟರಿಗೆ ಕಮಿಶನ್ ಕೊಡಲಾಗುವುದು

ಶೇರಿನ ಬಗ್ಗೆ ಆರ್ಜಿ

ಶೇರು ಒಂದರ ಪ್ರಥಮ ಮೌಲ್ಯ ರೂಪ್ಯಾ 10ನ್ನೂ ಪ್ರವೇಶ ಧನ 0-8-0ಯೊಂದಿಗೆ ಯೋಜನಾ ಪತ್ರಿಕೆಯ ಜತೆಗಿರುವ ಅರ್ಜ ಫಾರ್ಮಿನಲ್ಲಿ ಬರಾಯಿಸಿ ಒಪ್ಪಿಸತಕ್ಕದ್ದು. ಚಕ್ಕು ಕಳುಹುವ ಸಂದರ್ಭದಲ್ಲಿ ಅವನ್ನು ದಟಾಯಿಸುವ ವಿರ್ಜಾ ಸೇರಿರತಕ್ಕದ್ದು. ಶೇರುಗಳ ಬಗ್ಗೆ ಬಂದ ಆರ್ಜಿಯಲ್ಲಿ ತೀರ್ಮಕ್ಷೆ ಸಲಾದಷ್ಟು ಶೇರುಗಳನ್ನು ಕೊಡದಿರುವ ಅಧಿಕಾರ ಆಯುಯನ್ನೇ ನಿರಾಕರಿಸುವ ಅಧಿಕಾರ ಡೈರೆಕ್ಟರರಿಗಿದೆ. ಅಂತಹ ಸಂದರ್ಭಗಳಲ್ಲಿ ಆರ್ಜಿಯ ಜೊತೆಗೆ ಕಳುಹಿಸಲಾದ ಹಣವನ್ನು ಪೂರ್ತ ಕಳುಹಲಾಗುವುದು.

ಯೋಜನಾಪತ್ರಿಕೆ ಹಾಗೂ ಶೇರು ಆರ್ಜಿ ಫಾರ್ಮುಗಳನ್ನು ಕಂಪೆನಿಯ ರಿಜಿಸ್ಟರ್ಡ್ ಆಫೀಸು ಅಥವಾ ಕಂಪೆನಿಯ ಬೇಕುಗಳಿಂದ ಪಡಕೊಳ್ಳಬಹುದು.

Regd. No. M. 3618. Estd. 1921 ಸ್ಥಾಪನೆ. ಬೆಲೆ: 0—1—6.

ನವಯುಗ

ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 4—8—0
6 ತಿಂಗಳಿಗೆ ರೂ. 2—8—0
6 ತಿಂಗಳಿಗಿಂತ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ.
ಮಾದರಿ ಸಂಚಿಕೆಗೆ ಬರೆಯಿರಿ.
ಮೆನೇಜರ್,
ನವಯುಗ, ಉಡುಪಿ, ದ. ಕ.



ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ.

ವರ್ಷ ೨೬ ವಾರ ೭ | FOUNDER: SRI. A. B. SHETTY, M.L.A. | Vol. 26 No. 7
ಉಡುಪಿ • 17—10—1946 • ಮಂಗಳೂರು.

ಅಮೃತಾಂಜನ. ತಲೆನೋವು, ತಿರಿತ, ನೀಡನೆ, ಉಳುಕು ಕೀಲ್ತಿಗೆ, ಘುಟ, ಪಲ್ಲು ನೋವುಗಳಿಗೂ ಎದೆನೋವು, ಭಾಯುಗಲು ಬಾಮು ಕೊಳ್ಳುವಿದು, ಚೇಳು ಬಿಷ ಮುಂತಾದ ಬೇನೆ ಪಕ್ಷವಾತ ಮೊದಿನ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧ ಹುಳುಕಿಡ್ಡಿ ಮತ್ತು ಸಣ ನಮ್ಮಲ್ಲಿ ಸಿಕ್ಕುತ್ತದೆ.

REGD.

ಅಮೃತಾಂಜನ ಲಿಮಿಟೆಡ್.
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

The best preventive in epidemics of CHOLERA
"BHUVANENDRA"
CHANDRAMAS
Also a sovereign remedy for diarrhoea, Stomachache, Vomiting and Nausea.
BHUVANENDRA PRODUCTS LTD., Katapadi.

'ಭುವನೇಂದ್ರ'
ಚಂದ್ರಮಸ್ ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೂ ಅನಿವಾರ್ಯವಾಗಿ ಉಪಯೋಗಿಸಲೇಬೇಕಾದ ಅತ್ಯುತ್ತಮ ಔಷಧಿ
ದೊಡ್ಡವರಿಗೆ 40ಂದ 8ಬೊಟ್ಟು, ಸಣ್ಣ ಮಕ್ಕಳಿಗೆ 1ರಿಂದ 2ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.
ಅತಿಸಾರ, ಹೊಟ್ಟೆನೋವು, ಹಲ್ಲುನೋವು ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ
ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ
ಉಡುಪಿ ಸ್ವಾಪಕರು:—ಡಾ। ನಾಯಕ್ಸ್ ಕಸ್ತೂರಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಡಾ। ಆರ್। ಎಸ್। ಕಿಣ್ಣಿ, ರಥಬೀದಿ; ಡಾ। ಪಿ. ಜೆ. ಜೆಡಾರ್ಸ್ ಫಾರ್ಮಸಿ; ಡಾ। ಕೆ. ಶೇಷ ಗಿರಿ ಸೈ, L.I.M.; ಡಾ। ಮೊಕಬರಾವ್, ಕೊರಡ್ಡಲ್; ನವಭಾರತ ಬುಕ್ ಡಿಪೊ

THE
Bombay Life Assurance Company Ltd.
(ESTD 1908)
A PREMIER INSURANCE COMPANY.
New Business in 1945 - - 2,77,23,100.
KOCHIKAR BROTHERS, LTD.
(ESTD. 1910)
Chief Agents for South India including
Travancore, Cochin and Mysore State.
New Business in our Area:— **Over 5 Millions.**
OUR Expert advice gained by 35 years Experience is at your door FREE.
Drop a card to any of our Offices at —
MADRAS * BANGALORE * MADURA * CALICUT
TRIVENDRUM * UDIPI * AND BOMBAY.

—ಮಕ್ಕಳನ್ನು ಹಡೆಯುವುದು ಸಾಕು—
ಆಕಸ್ಮಿಕ ಸ್ತ್ರೀಯರಿಗೆ **ಬರ್ಥ್ ಕಂಟ್ರೋಲ್** ರೋಗಗ್ರಹಸ್ತ ಕೆಣ್ಣು ಮಕ್ಕಳಿಗೆ
ಏಳು ದಿವಸ ಈ ಮಾತ್ರೆಗಳನ್ನು ಸೇವನ ನಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ ಅಲ್ಲದೆ ಸ್ತ್ರೀಯರ ಬಿಳಿಕೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು
ಸೂಚನೆ:—ಹರಿವೀನಲ್ಲಿ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ಅಲಗೆ.
ಮಾಲಕರು:—ಕಾಲಪ್ಪಾ ಫಕೀರಪ್ಪಾ ಡಾವಣಗೇರಿ
ಆಯುರ್ವೇದ ಔಷಧಾಲಯ. ಗದಗ-ಸಿಟಿ.
ವಜಂಪರು:—ಹುಬ್ಬಳಿ ಫಾರ್ಮಸಿ,—ಹುಬ್ಬಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪುರ—ಡಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪುರ. ಚಿಕ್ಕೋಡಿಯಲ್ಲಿ:—ಹುಂಬರವಾಡಿ ಸ್ಟೋರ್ಸ್. ಡಾವಣಗೇರಿ:—ಡಾವಣಗೇರಿ ಪ್ರಿಸ್ಸ್. ಆರ್. ಎಸ್. ಕಮಲಾಪುರ, ಕೆಮಿಸ್ಟ್, ಹಾವೇರಿ. ಬ್ಯಾಡ್ಗಿ
Ayurveda Oushadalaya, GADAG CITY.

Life is full of Opportunities.

Life is full of events and opportunities created by God for man and by man for himself and his fellowmen. Normal life presupposes a prosperous family, a happy home, good education, congenial vocation, good relations, friends, a cultured society and also a few ups and downs to spice them all with. Have you made sure that your family too can reasonably aspire to lead such a life even in your absence?

The Canara Mutual Assurance Co., Ltd.,
HEAD OFFICE: **UDIPI.** (S. India.)
Chief Agents for the Bombay and Madras Presidencies including States and the States of Mysore and Hyderabad
The Commercial Corporation of India, Ltd.,
UDIPI. (S. India.)

ಉಡುಪಿ ಬೋರ್ಡಿಂಗ್ ಎಂಡ್ ಲೋಜಿಂಗ್ ಮಧುರಾ.

ತಾ 8—8—1945ರಲ್ಲಿ ಜರಗಿದ ಆರನೆ ಹುಟ್ಟುಹಬ್ಬದ ಸಮಾರಂಭದ ಸಂತೋಷ ಕಾಲದಲ್ಲಿ ನನಗೆ ಸಕಲ ವಿಧ ದಿಂದಲೂ ಬೆಂಬಲವಿತ್ತು ಪ್ರೋತ್ಸಾಹಿಸಿದ ಮಹನೀಯರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಇದಕ್ಕಿಂತಲೂ ದ್ವಿಗುಣಿತವಾಗಿ ನಮ್ಮ ಸೇವೆಯನ್ನು ಹೊಸ ವರುಷದಲ್ಲಿ ಸಲ್ಲಿಸಲು ಮಹಾಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನೀಯುವರೆಂದು ನಿರೀಕ್ಷಿಸಿ.

ಎಲ್. ನರಸಿಂಗ ರಾವ್,
ಪ್ರೊಪ್ರೈಟರ್.

For prompt and efficient Banking Service
Bank with
THE VIJAYA BANK LIMITED.
Head Office:—**MANGALORE.**
Branches: **Byndoor, Coondapoor, Brahmavar, Udipi, Kaup, Karkal, City-Mangalore, Kasaragod, Kanhangad, Puttur, Mercara & Bombay.**

ಚುನಾವಣೆ ಸಂಬಂಧದ ಸೂಕ್ತ ಸಲಹೆಗಳು

ವ್ಯಂಗ್ಯ

'ಕುಚೋದ್ಯಗಾರ'ನಿಂದ.

ದಕ್ಷಿಣ ಕನ್ನಡಾ ಜಿಲ್ಲೆಯಲ್ಲಿ ಕಳ್ಳ ಸಂತೆಯ ಹಣ, ಮರಮಟ್ಟುಗಳ ದುಡ್ಡು, ಬಿಸಿನೀರ ಕಾಸು, ಸಟ್ಟಾ ಸಂಪತ್ತು ಮಾಡುತ್ತಿರುವ ವಿಪರೀತ ಹಾವಳಿಯನ್ನು ಮನಗಂಡು ಅದನ್ನು ನಿವಾರಿಸಿ ಜನಜೀವನವನ್ನು ಏಕಮಟ್ಟಕ್ಕೆ ತರುವ ಮೂಲಕ ಸಮತಾವಾದ ಸ್ಥಾಪಿಸುವ ಉತ್ಕಟೇಚ್ಛೆಯಿಂದ ಕೂಡಲೇ ಜಿಲ್ಲಾ ಬೋರ್ಡು ಮತ್ತು ನಗರ ಸಭಾ ಚುನಾವಣೆಗಳನ್ನು ನಡೆಸಲು ಹೊರಟಿರುವ ಮದ್ರಾಸ್ ಸರಕಾರದ ಉಪಕಾರಕ್ಕೆ ಪ್ರಥಮತಃ ಹೃತ್ಪೂರ್ವಕ ಆನಂತಾನಂತ ಅಭಿವಂದನೆಗಳು.

ಎರಡನೆಯದಾಗಿ, ಲಗು ನೋಟುಗಳ ಬದಲಿಗೆ ತನ್ನ ಚೀಟನ್ನು ಮುಂದೊಡ್ಡಿ ಯಾರಾದರೂ ಆ ಸುಲಭದ ದುಡ್ಡನ್ನು ಸುಲಭದಲ್ಲಿ ಉಳಿಸಿಕೊಳ್ಳಲಿಕ್ಕಾಗದಂತೆ, ಈ ಬಾರಿತಾನಾರ ಕೊರಳಿಗೂ ಪಟ್ಟ ತೊಡಿಸುವಂತಿಲ್ಲವೆಂದು ನಿರ್ಧರಿಸಿ ಕರೆನ್ಸೀ ಕಸ ಎಗಡಿಸಿಹೋಗುವಂತೆ ಮಾಡಿದ ದಕ್ಷಿಣ ಕನ್ನಡದ ಜಲ್ಲಾ ಕಾಂಗ್ರೆಸ್ ಕಮಿಟಿಗೆ ಮಹಾಮಹಾ ಧನ್ಯವಾದಗಳು.

ಮೂರನೆಯದಾಗಿ, ಕಂಬಳಗಳ ಹೊರತು ಬೇರಾವ ಸ್ಪರ್ಧೆಯೂ ಇಲ್ಲದ ದಕ್ಷಿಣ ಕನ್ನಡದಲ್ಲಿ, ಕಳದ ಎಸಂಬ್ಲಿ ಚುನಾವಣೆಯು ಕೂಡಾ ಸ್ಪರ್ಧೆಯಿಲ್ಲದೇನೇ ಮುಗಿದು ಹೋಗಿ, ಜನರ ಮನಸ್ಸೆಂಬುದು ಇದ್ದಲ್ಲಿಯೇ ಜಡ್ಡು ಕಟ್ಟಿದಂತಾಗಿರುವಾಗ ದುಡಿಯದ ದುಡ್ಡಿನ ದೂಡಾಟಕ್ಕೊಳಗಾಗಿ ಯಾದರೂ ಉಮೇದ್ವಾರರೆಂದು ಮುಂದೆ ಬಂದು, ಜಿಲ್ಲೆಯಲ್ಲಿ ನವಸ್ಫೂರ್ತಿಯನ್ನೆಬ್ಬಿಸುತ್ತಾ ಚುನಾವಣಾ ಕಂಬಳಕ್ಕಿಳಿಯಲು ನೊಗಕ್ಕೆ ಹೆಗಲೊಡ್ಡುತ್ತಿರುವ ಎಲ್ಲಾ ಉಮೇದ್ವಾರಿಗಳಿಗೂ ಬಗ್ಗಿ ಬಗ್ಗಿ ನಮಸ್ಕಾರಂಗಳು.

ಹೀಗೆ ಮುಂದಾಗಿ ಸ್ಮರಿಸಬೇಕಾದವರನ್ನೆಲ್ಲಾ ಸ್ಮರಿಸಿ, ಮುಂದಿನ ಹೋರಾಟಕ್ಕೆ ಸಂಬಂಧಿಸಿದವರಲ್ಲಿ ಯಾರಾರಿಗೆ ಏನೇನು ಕೇಳಿಸಿದ್ದೆಂಬುದನ್ನು ಶೋಧಿಸಿ ಇವರಿಗೆಲ್ಲಾ ಈ ಮೂಲಕ ತಕ್ಕ ಹಿತಸೂಚನೆಗಳನ್ನೀಯಲೆಸುತ್ತೇನೆ- ಪರಿಗ್ರಹಿಸೋಣಾಗಲಿ.

ಜಾಲ್ತಿ ಸದಸ್ಯರಿಗೆ—

ನೀವು ಸದಸ್ಯರಾಗಿದ್ದ ಸುಮಾರು ಹತ್ತು ವರುಷಗಳ ಅವಧಿಯಲ್ಲಿ ನೀವು ಹಾಕಿರುವ ಆಂತರ್ಯಾಗಗಳಿಂದ ಜನರು ನಿಮ್ಮ ಮೇಲಿನ ವಿಶ್ವಾಸ ಬಿಟ್ಟಿದ್ದಾರೆಂಬುದು ನಿಮ್ಮ ಮನಸ್ಸಿಗೆ ಹೊಳೆದಿದೆಯೆ? 'ವಿಶ್ವಾಸ ಬೇಕಾಗಿದೆ' ಎನ್ನುವ ಬದಲಿಗೆ ವಿಶ್ವಾಂತಿ ಬೇಕಾಗಿದೆ ಎನ್ನುತ್ತಾ ನೀವಾಗಿ ಸುಮ್ಮಗಿದ್ದು ಬಿಡಿ. ಮುಂದಿನ ಬಾರಿ ನಿಮ್ಮನ್ನು ಹುಡುಕಿಕೊಂಡು ಬಂದು ಹೊತ್ತು ತಂದು ಇದಿರಿಗೆ ಹಾಕುವರೆಂಬ ವಿಶ್ವಾಸವಿರಲಿ.

ಇದೇ ನವಂಬರ್ ಒಂದಕ್ಕೆ ಜಾಲ್ತಿ ಸ್ಥಳೀಯ ಸಂಸ್ಥೆಗಳ ಅವಧಿಯನ್ನು ಮುಗಿಸಬೇಕೆಂದೂ ದಶಂಬರಿನಲ್ಲೆ ಮರು ಚುನಾವಣೆ ನಡೆಸಬೇಕೆಂದೂ ಸರಕಾರವು ನಿಶ್ಚಯಿಸಿರುವುದನ್ನು ಲಕ್ಷ್ಯಕ್ಕೆ ತಂದು ಕೊಂಡು ಕೊನೆಯ ಅಧಿವೇಶನದಲ್ಲಿ 'ನೇತಾಜೀ ಬೋಸರ ಸಿಂಗಾಪುರ ಸಾಹಸವನ್ನು ಶ್ಲಾಘಿಸುವ' ಠರಾವನ್ನು ತನ್ನಿ. ಅದು ನಿಯಮವಿರುದ್ಧವೆಂದು ತೀರ್ಮಾನವಾದರೆ, ಅಥವಾ ನಿಮ್ಮೀಉದ್ದೇಶ ಸೂಚನೆಗೆ ಬಹುಮತ ದೊರೆಯದಿದ್ದರೆ-ನಿಮ್ಮಲ್ಲಿರುವ ಪ್ರಚಂಡ ದೇಶಭಕ್ತಿಯನ್ನು ಸಕಾಲದಲ್ಲಿ ಪ್ರದರ್ಶಿಸುತ್ತಾ, ಸ್ಥಾನಕ್ಕೆ ರಾಜೀನಾಮೆ ಕೊಟ್ಟುಬಿಡಿ. ಪತ್ರಿಕಾ ಪ್ರತಿನಿಧಿಗಳಿಗೆ ಚಹಾ ಸಿಗರೇಟ್ ಕೊಟ್ಟು ಈ ದೇಶಭಕ್ತಿ ಪ್ರದರ್ಶನದ ಮಾರ್ತೆ ಮತದಾರರ ಮನೆಮನೆಗೂ ಮುಟ್ಟುವಂತೆ ನೋಡಿಬಿಡಿ. ಮರು ಚುನಾವಣೆಯಲ್ಲಿ ನೇತಾಜಯ ಹೊರತು ಬೇರಾರೂ ನಿಮ್ಮನ್ನು ಸ್ಪರ್ಧಿಸಿ ಗೆಲ್ಲಲಾರರೆಂದು ತಿಳಿದಿರಲಿ.

ನೀವು ಬಲಗೈಯನ್ನೆತ್ತಿದ್ದ ಭಾವಚಿತ್ರ ತೆಗೆಯಿಸಿ ಪಡಿಯಚ್ಚು ಮಾಡಿಸಿರಿ. ಮತ್ತು ನೀವು ಸದಸ್ಯರಾಗಿದ್ದ ಕಾಲದಲ್ಲಿ ನೆಡೆದಂತಹ-ಅಕ್ಕೀ ಮುಡಿಯೊಂದಕ್ಕೆ 1 ರೂಪಾಯಿಯ ಬಹುಮಾನ, ನಿಮ್ಮ ಮತದಾರ ಕ್ಷೇತ್ರದಲ್ಲಾದ ರಸ್ತೆ, ಬಾವಿಗಳ ಸುಧಾರಣೆ ಅಲ್ಲಿ ಜಾರಿಗೆ ಬಂದ ಶಿಕ್ಷಣ ಪ್ರಚಾರ, ನಿಮ್ಮೂರ ಆಸ್ಪತ್ರೆಗೆ ಬಂದ ಸುಂದರ ದಾದಿ-ಇತ್ಯಾದಿ ಇತ್ಯಾದಿ ಸುಧಾರಣೆಗಳ ಎಲ್ಲಾ ಪಟ್ಟಿಯನ್ನೂ ಆ ಭಾವಚಿತ್ರ ದೊಂದಿಗೆಪ್ರಕಟಿಸಿರಿ. ನೀವು ಮತಕೊಟ್ಟೇ ಆಷ್ಟೆಲ್ಲಾ ಸುಧಾರಣೆ ಬಂತೆಂದು ಜನ ಭಾವಿಸುವಂತಾಗಿ ಮುಂದಕ್ಕೂ ನಿಮಗೆ ಖಂಡಿತ 'ಚಾನ್ಸ್' ಇದೆ.

ನಿಮ್ಮ ಮತದಾರ ಕ್ಷೇತ್ರದಲ್ಲಿ ಬೇರಾವುದೂ ಇಲ್ಲದಿದ್ದರೆ, ಬೈದೆರ್ಕಳ ಗರಡಿ, ಬೊಬ್ಬರ್ಯಕಟ್ಟೆಯ ವರ್ಧಂತ್ಯುತ್ಸವಗಳನ್ನು ಮಾಡಿಸಿ ಖರ್ಚಿನ ಹಣದ ಬಹ್ವಂಶವನ್ನು ವಂತಿಗೆ ಕೊಟ್ಟು ಆವುಗಳ ಅಧ್ಯಕ್ಷತೆಯನ್ನು ನೀವೇ ವಹಿಸಿ, ನೀವು ಮಾಡಿದ ಮತ್ತು ಮಾಡಲಿರುವ ಗ್ರಾಮೋದ್ಧಾರಗಳನ್ನು ಅಲ್ಲಿ ವಿವರಿಸಿ ಹೇಳಿರಿ. ಗೆಲ್ಲುವಿರಿ.

ನಿಮ್ಮೂರ ಹೊಳೆಗೊಂದು ಸೇತುವೆ, ರಾತ್ರಿ ವಿಹಾರ ಬೀದಿಯ ಮಧ್ಯದಲ್ಲಿರುವ ದೀಪಸ್ತಂಭವನ್ನು ದೂರಕ್ಕೊಯ್ಯುವ ಸುಧಾರಣೆ ಮಾಡುವ ಜಳವಳಗಳು ಈ ಕಾಲದಲ್ಲಿ ನಿಮ್ಮ ನಾಯಕತ್ವದಲ್ಲೇ ಆರಂಭವಾಗಲಿ. ಮತದೊಟ್ಟಿಗೆ ಮನಸ್ಸೂ ನಿಮ್ಮ ಪೆಟ್ಟಿಗೆಗೆ ಬೀಳಲಿದೆ.

ಈ ಮೊದಲೇ ಹಿಂದೆ ಬಿದ್ದವರಿಗೆ—

ಬುದ್ಧಿವಂತಿಕೆ ಹೆಚ್ಚಾಗಿ ವಿಶ್ವಾಸ ಕಳಕೊಂಡವರು ನೀವು ಹೌದೆ? ಹಾಗಾದರೆ ಆ ಬುದ್ಧಿವಂತಿಕೆಯ ಬಲದಿಂದಲೇ ಹೊಸ ವಿಶ್ವಾಸ ಹುಟ್ಟಿಸಿ-ನಿಮ್ಮ ಮತದಾರ ಕ್ಷೇತ್ರವು ಸಾಗುವಳ್ಳೀ ಪ್ರದೇಶವಾಗಿದ್ದರೆ ನಿಮ್ಮ ನಾಯಕತ್ವದಲ್ಲಿ ಆ ಇಡೀ ಕ್ಷೇತ್ರ ಕ್ಕೊಂದು 'ಕೃಷಿ ಸುಧಾರಣಾ ಸಂಘ' ಸ್ಥಾಪನೆಯಾಗಲಿ. ಮತದಾರರೆಲ್ಲಾರನ್ನೂ ಬಿಡದೆ ಆ ಸಂಘದ ಸದಸ್ಯರನ್ನಾಗಿ ಮಾಡಿಕೊಂಡು ಶಿಸ್ತು ಪಾಲನೆಯ ಮಹತ್ವವನ್ನವರಿಗೆ ಮನಗಾಣಿಸಿರಿ. ನಿಮ್ಮ್ಕದು ವ್ಯಾವಾರೀ ಕ್ಷೇತ್ರವೋ-ಅದೇ ಮಾದರಿಯ 'ಸಾಹುಕಾರ ಸಂಕಷ್ಟ ನಿವಾರಣಾ ಸಂಘ' ಹುಟ್ಟಿಸಿರಿ. ನೀವು ಅವಿರೋಧವಾಗಿ ಗೆದ್ದು ಬರುವಿರಿ.

ದುಡ್ಡಿನ ಒಲ ಇಲ್ಲವೇ ಕಾರ್ಯಶಕ್ತಿ ಅಥವಾ ಯೋಗ್ಯತೆ ಕಡಿಮೆಯಾಗಿ ಹಿಂದೆ ಬಿದ್ದಿರುವಿರಾ? ಯುಕ್ತಿಯನ್ನವಲಂಬಿಸಿರಿ. ಊರಿಗೊಂದು ಸ್ಥಾನ, ಅಥವಾ ಜಾತಿಗೊಂದು ಸ್ಥಾನ, ಅಥವಾ ಪರಕೀಯ ಉಮೇದ್ವಾರಿಯ ಅಹಮಾನ ಬೇಡವೇ ಎಂಬ ಆಭಿಮಾನದ ಪ್ರಶ್ನೆಯನ್ನು (ನೀವಾಗಿ ಎಂದೂ ಹೋಗಬೇಡಿ) ಬೇರೆಯವರಿಂದ ಎಬ್ಬಿಸಿ ಅದು ಸರ್ವತ್ರ ಹಬ್ಬುವಂತೆ ಮಾಡಿರಿ. ಊರ ಅಥವಾ ವರ್ಚಸ್ಸುಳ್ಳವರಾದರೆ ಜಾತಿಯ ಧನಿಕರು ಸ್ವಾಭಿಮಾನದಿಂದ ಕುದಿದು ನಿಮ್ಮನ್ನೇ ಉಮೇದ್ವಾರಿಯಾಗಲು ಬೇಡುವಂತೆ ಮಾಡಿರಿ. ಗೆದ್ದಂತೆಯೇ.

ಇದು ವರೆಗೂ ನಿರಾಶೆಗೀಡಾಗಿದ್ದು ಈಗ ಹೊಸ ಆಶೆ ಮೊಳೆತಿರುವ ನಿಮ್ಮಂಥವರು ಇಡೀ ಜಿಲ್ಲೆಯಲ್ಲೆಷ್ಟುಂಟು ಎಂಬ ಲೆಕ್ಕ ಹಾಕಿ ಅವರನ್ನೆಲ್ಲಾ ಒಂದೆಡೆ ಕೂಡಿಸುವ ವ್ಯವಸ್ಥೆ ಮಾಡಿರಿ. ಮತ್ತು ಅಲ್ಲಿಯೇ 'ಊರು ನಿರ್ಮಾಣ ಸಂಘ (ವಿ. ಸೂ—ಅಕ್ಷರ ಪ್ರಮಾದಗಳಿಗೆ ನಿಯಂತ್ರಣವಿಲ್ಲದ ಈ ಕಾಲದಲ್ಲಿ ಅದು 'ಭೀರು ನಿರ್ಮಾಣ ಸಂಘ'ವೆಂದಾಗದಂತೆ ವಿಶೇಷ ಲಕ್ಷ್ಯವಿರಲಿ) ವೊಂದನ್ನು ಸ್ಥಾಪಿಸಿ ನಿಮ್ಮ ವರ್ಗವೇ ವಿಜಯಿಯಾಗುವಂತೆ ನೋಡಿರಿ. ಆಶೆಗೆ ವಕಾಶವಿದೆ.

ನೀವು ಅಥವಾ ನಿಮ್ಮವರಿಲ್ಲದೆ ಹೋದರೆ ನಿಮ್ಮ ಕಂಪೆನಿ ಅಥವಾ ಕಾರ್ಖಾರುಗಳಿಗೆ ತೊಂದರೆ ಯೊದಗಬಹುದು, ಎಂಬ ಕಳವಳನಿಮಗುಂಟೆ? ಅದೇ ಕಾಲದಲ್ಲಿ ನಿಮಗಾಗಲೀ ನಿಮ್ಮವರಿಗಾಗಲೀ ವಿಜಯ ಭರವಸೆಯಿಲ್ಲವೆ? ಹಾಗಾದರೆ 'ಸಿಕ್ಕಿದ್ದೇ ಸಿಹಿ'ಯೆಂಬ ತತ್ವವನ್ನನುಸರಿಸಿ ಹಣ ಅಥವಾ ಹಿಂಗಿನಿಂದ ಯಾವುದನ್ನು ನಿಮ್ಮದನ್ನಾಗಿ ಮಾಡಿಕೊಳ್ಳಲು ಸಾಧ್ಯವೋ ಅ.....ಗಳಿಗೆ ಬೆಂಬಲಕೊಡಿರಿ. ಆಪದ್ಧರ್ಮ ಭಕ್ತರ ಕೋಶದಲ್ಲಿ ಅಪಜಯವೆಂಬ ಶಬ್ದವೇ ಇಲ್ಲ-ವಿಶ್ವಾಸವಿರಿ.

ಹೊಸ ಉಮೇದ್ವಾರಿಗಳಿಗೆ—

ಕ್ಷಿ-ಮೊಂಗಗೆ ಮುಂದಿನ 15 ದಿನಗಳನ್ನಾದರೂ ಊರ ಕಾರ್ಬಾರೀ ಮನುಷ್ಯನ ಬೆನ್ನ ಹಿಂದೆ ತಿರುಗಲಿಕ್ಕಾಗಿ ಮೀಸಲಿಟ್ಟು ಅವನ ವಿಶ್ವಾಸ ಸಂಪಾದಿಸಿಕೊಳ್ಳಿರಿ. ಆ ಮೇಲಿನ ನಾಲ್ಕು ದಿನಗಳನ್ನು '....

[ಇನ್ನೇ ಪುಟ ನೋಡಿರಿ]

Why Worry?

Do not feel disheartened for not getting BONUS.

We offer you a guaranteed BONUS of Rs 10/- per THOUSAND under our New Scheme

Please apply immediately:—

A. S Kini,
Managing Director,

UNITED KARNATAK INSURANCE Co., Ltd.

HEAD OFFICE: DHARWAR.

For further particulars apply to —

Divisional Manager, Court Road, UDIPI, S. India.
Or
Divisional Manager, Narayan Nivas, Market Road, Bangalore City.

or

Branch Manager, 10, Bismilla Blds Opp B B. C. I. Stn. Dadar, BOMBAY 14.
Or
Branch Manager, MULLAKKAL, Alleppey, (Travancore State)
Or

To our nearest Agents.

ಏಕೈಕ ವಿಷಯಕ ಪ್ರಮುಖ ವಾರಪತ್ರಿಕೆ

ಬಾಲಚಂದ್ರ

ವಿದ್ಯಾಭ್ಯಾಸಕ್ಕೆ ಸಂಬಂಧಿಸಿದ ಸರ್ಕುಲರುಗಳೂ ಪ್ರಕಟವಾಗುತ್ತವೆ.

ವಾರ್ಷಿಕ ಚಂದಾ ರೂ. 2-0-0 ನೂತ್ರ.

ಬೈಂಡು ಮಾಡಿದ ಪ್ರತಿಯೊಂದು ಸಂಪುಟಕ್ಕೆ ರೂ. 2½/-

ಹೆಚ್ಚಿನ ವಿಚಾರಕ್ಕೆ ಬರೆಯಿರಿ—

ಬಾಲಚಂದ್ರ ಆಫೀಸು, ಉಡುಪಿ

ಇಂದಿಗೆ ತಕ್ಕ ನಾಟಕ

ದೇಶಭಕ್ತ

ಶ್ರೀ. ಕೆ. ಕೆ. ಕಟ್ಟಿ ರು ಸುಲಭವಾದ ಶೈಲಿಯಲ್ಲಿ ಎಲ್ಲರಿಗೂ ಮಂದಟ್ಟಾಗುವಂತೆ ಬರೆದ ಬೋಧಪ್ರದ ಸಾಮಾಜಿಕ ನಾಟಕ.

ದೇಶಭಕ್ತನು ಹೇಗಿರಬೇಕು? ಆನನ ಧೈರ್ಯ ಧೋರಣೆ ಹೇಗೆ ಆದರ್ಶನಾಗಿರಬೇಕು? ಜನತಾ ಜನಾರ್ದನನ ಸೇವೆ ಎಂದರೇನು? ಎಂಬಿತ್ಯಾದಿಗಳನ್ನು ಅತಿ ಕೌಶಲ್ಯದಿಂದ ಚಿತ್ರಿಸಿ. ಸಂಸ್ಥಾನವನ್ನಳ್ಳಿ ನರೇಂದ್ರರು ಮಾಡುತ್ತಿರುವ ದಬ್ಬಾಳಿಕೆಯ ಭೀಕರ ಚಿತ್ರವನ್ನು ಮುಂದಿಟ್ಟು ಪ್ರಜಾಸ್ವಾತಂತ್ರ್ಯವು ಹೇಗೆ ಸಾಧ್ಯವೆಂಬುದನ್ನು ವಿವರಿಸುವ ರಾಜಕೀಯ-ಸಾಮಾಜಿಕ ನಾಟಕ.

ಬೆಲೆ ರೂ. 1—4—0

ನವಭಾರತ ಬುಕ್ ಡಿಪೊ, ಉಡುಪಿ.

ತಿರುಪತಿ ಗಿರಿಯಲ್ಲಿ ವಿಶ್ವವಿದ್ಯಾಲಯವಾಗುವದೆ?

ತಿರುಪತಿಯ ವೆಂಕಟ್ರಮಣನ ಹೆಸರರಿಯದ ಹಿಂದುಗಳಿರಬಹುದೆ? 'ಕಾಸಿಗೆ ಕಾಸು ಬಡ್ಡಿ ಕೂಡ ಹಾಕುವ ನಮ್ಮ ತಿರುಪತಿ ತಿಮ್ಮಪ್ಪ' ಎಂದು ಅಭಿಮಾನದಿಂದ ಹಾಡಿ ಕೊಂಡಿಯದವರಿದ್ದಾರೆಯೆ? ದೇವರ ಹೈಕೆ ಅತ್ಯಂತ ಜಿಪುಣನೆಂದರೆ ತಿರುಪತಿ ವೆಂಕಟರಮಣ—ಹೀಗಾಗಿ ಬಹುಶಃ ದೇವಾಲಯಗಳ ಹೈಕೆ ಕಾಣಿಕೆ ರೂಪದ ಅತಿ ಹೆಚ್ಚಿನ ಉತ್ಪತ್ತಿ ಇರುವ ದೇವಸ್ಥಾನವೂ ತಿರುಪತಿಯೇ. ದಕ್ಷಿಣ ಕನ್ನಡದ ಜಿಲ್ಲೆಯ ಅನುಭವದಿಂದ ಹೇಳುವದಾದರೆ 'ಮುಡಿಪು' (ತಿರುಪತಿ ವೆಂಕಟರಮಣನಿಗೆಂದು ನ್ಯತ್ಯೇಕ ತೆಗೆದಿಡುವ ಹಣ) ಕಟ್ಟಿದವರ ಹಿಂದುಗಳ ಮನೆಯೇ ಇಲ್ಲ. ಆ ಮುಡಿಪಿನ ಕಳವಿನಿಂದಾಗಿ ಈಹಿಲೆ ಕಸಾರಿಗಳೇ ಳುವದೇನು—ಅಪಹಾರವಾದ ಮುಡಿಪಿನ ದುಡ್ಡಿನ ಬಡ್ಡಿಗೆ ಬಡ್ಡಿ ಕೂಡಿಸಿ ಜುಲ್ಮಾನೆ ಹಣವನ್ನೂ ಸೇರಿಸಿ ಹಾಕಿದಾಗ ರೋಗ ಸಂಕಟಗಳು ನಿವಾರಣೆಯಾಗುವ ಆ ಏಂ ವೃಜಾಲನೇನು! ಈ ಮುಡಿಪಿನ ಸಂಬಂಧದ ಸುಖಕಷ್ಟಗಳ ಚರಿತ್ರೆಯನ್ನು ಹಳ್ಳಿ ಮನೆಗಳಿಂದ ಕೇಳಿ ಪ್ರಕಟಿಸುವದಾದರೆ ಅದೊಂದು ಅಂತ್ಯರಹಿತ ಮಹಾ ಪುರಾಣವೇ ಆದೀತು.

ಆ ಹಣವೇನಾಗುತ್ತಿದೆ?

ಯುದ್ಧಾರಂಭದ ಮೊದಲು ಅರ್ಧಿಕ ಬಿಕ್ಕಟ್ಟಿದ್ದ ಆ ಕಾಲದಲ್ಲಿ ನವನವಾಗಂತ ತರುಣರಿದ್ದ ಪ್ರತಿಯೊಂದು ಮನೆಯ ಮುಡಿಪೂ ಸಂಕಟಬಂದಾಗ ವೆಂಕಟರಮಣಾ!' ಎಂದು ವಿಲೆವಾರಿ ಆಗಿದ್ದಿರಬಹುದು. ಆದರೆ ಯುದ್ಧಕಾಲದ ಕಳ್ಳಸಂತೇ ಹಣದ ಪಾಪ ಪರಿಹಾರಕ್ಕಾಗಿ ವೆಂಕಟರಮಣನ ಚುಚ್ಚಿ ಅತಿರೇಕ ತುಂಬಿರಬಹುದು! ವಾಸ್ತವಿಕೆಯ ನಂಬುಗೆಯೆಂದರೆ ತಿರುಪತಿ ವೆಂಕಟರಮಣನಿಗೆ ಕಾಸು ಹಾಕಿ, ಆ ಮೇಲೆ ಎಷ್ಟೇ ಸುಳ್ಳನ್ನಾಡಿದರೂ ವ್ಯಾಪಾರಿಗೆ ಪಾಪ ನಿಲ್ಲ. ಹೀಗೆ ಮನೆಮನೆಯಿಂದ ವಂತಿಗೆಯೆತ್ತಿ ಕೂಡ ಹಾಕಿದ್ದ ತಿರುಪತಿ ವೆಂಕಟರಮಣನ ಸಂಪತ್ತಿಗೆ ಈಗ ಎಂತಹ ಗತಿಯೊದಗಿದೆ ಗೊತ್ತೆ? ಮೊದಲು ದೇವಸ್ಥಾನದ ಯಜಮಾನನಾಗಿದ್ದ ಆ ಸಂಪತ್ತನ್ನು ಮೂಲೆವಾಲು ಮಾಡಿ ಸರಕಾರವೇ ಅದರ ಆಡಳಿತೆಯನ್ನು ವಹಿಸಿಕೊಂಡಿದೆ. ಕೈಲಾಸ ಯಾತ್ರೆಗೆ ಸಮಾನವಾಗಿದ್ದ ಆ ಗಿರಿಯನ್ನೀಗ ಮೋಟಾರಿನ ಮೂಲಕ ಏರಲು ರಾಜರಸ್ತೆಯಾಗಿದೆ. ದೇವಸ್ಥಾನದ ಉತ್ಪನ್ನದಿಂದ ಅಲ್ಲೀಗ ಫಸ್ಟ್‌ಗ್ರೇಡ್ ಕಾಲೇಜೊಂದು ಸ್ಥಾಪನೆಯಾಗಿದೆ; ಅದರ ಧರ್ಮಾಭಿಮಾನಿ ಪ್ರಿನ್ಸಿಪಾಲರಿಗೂ ಅಧಿಕಾರಿಗೂ ಇತ್ತೀಚೆಗೊಮ್ಮೆ ವಾದ ಹುಟ್ಟಿ, ಪ್ರಿನ್ಸಿಪಾಲರು ರಾಜೀನಾಮೆ ಕೊಡಬೇಕಾಗಿ ಬಂದಿತ್ತು. ತಿರುಪತಿ ಕಾಲೇಜಿನಲ್ಲಿ ಜಾತಿಮತ ಭೇದವಿಲ್ಲದೆ ಲೌಕಿಕ ಶಿಕ್ಷಣ ಕೊಡಲಾಗುತ್ತಿದೆ. ಹಿಂದುಗಳಿಗೆ ಮಾಯಕದ ಸೀಡೆಕೊಟ್ಟು ಕಾಸಿಗೆ ಕಾಸು ಕೂಡ ಹಾಕುವ ತಿರುಪತಿ ವೆಂಕಟರಮಣನ ಮನೆಮನೆ ಮಹಾತ್ಮೆಯ ಕಥೆ. ಆ ಹಣವನ್ನು ಸರ್ವ ಜಾತಿಮತಗಳವರಿಗೆ ಪಾಶ್ಚಾತ್ಯ ಶಿಕ್ಷಣವೀಯಲು ವ್ಯಯಿಸುತ್ತಿರುವ ಆತನ ಬೆಟ್ಟದ ಮೇಲಿನ ಮರ್ಜಿಯನ್ನೂ ಹೋಲಿಸುವಾಗ ನಗುಬರುತ್ತಿದೆ!

ವಿಶ್ವವಿದ್ಯಾಲಯದ ಯೋಚನೆ

ಸದ್ಯ, ತಿರುಪತಿಯ ಪ್ರಥಮ ತರಗತಿ ಕಾಲೇಜನ್ನು ವಿಸ್ತರಿಸಿ, ವಿಶ್ವವಿದ್ಯಾಲಯವಾಗಿ ಮಾಡುವ ಯೋಚನೆಯನ್ನು ಮದ್ರಾಸ್ ಸರಕಾರ ಮಾಡುತ್ತಿದೆಯಂತೆ. ಅಖಿಲ ಭಾರತ ಖ್ಯಾತಿ ಮತ್ತು ಕ್ಷೇತ್ರವುಳ್ಳ ಈ ದೇವಸ್ಥಾನದ ಸಂಪತ್ತನ್ನು ಹಿಂದುಗಳಲ್ಲದವರಿಗೂ ಲೌಕಿಕ ಶಿಕ್ಷಣ ಕೊಡುವ ವ್ಯವಸ್ಥೆಗಾಗಿ ವ್ಯಯಿಸುವದು1932 ರ ಕಾನೂನಿನಂತೆ ನಿಯಮ ವಿರುದ್ಧವಿದ್ದಿತು. ಆದ್ದರಿಂದ 1944ರಲ್ಲಿದ್ದ ಸಲಹೆಗಾರ ಸರಕಾರವೆ ಕಾಲೇಜು ಮಾಡಲಾಗುವಂತೆ ಕಾನೂನನ್ನು ತಿದ್ದುಪಡಿಮಾಡಿಕೊಂಡಿತು. ಒಂದೆರಡು ವರುಷಗಳಲ್ಲಿ ಅದನ್ನು ಯುನಿವರ್ಸಿಟಿಯಾಗಿ ಮಾರ್ಪಡಿಸುವ ಬಯಕೆ ಮೂಡಬೇಕಾದರೆ ತಿರುಪತಿ ದೇವಸ್ಥಾನದ ಕಾಣಿಕೆಯುತ್ಪತ್ತಿಯೆಷ್ಟಿರಬೇಕೆಂಬುದನ್ನು ಊಹಿಸಬಹುದು. ಅಲ್ಲಿ ವಿಶ್ವವಿದ್ಯಾಲಯ ಸ್ಥಾಪನೆಯಾಗಲಿದೆ; ಅದೂ ತಿರುಪತಿ ಬೆಟ್ಟದ ಮೇಲೇನೇ ಸ್ಥಾಪನೆಯಾಗಲಿದೆ, ಎಂದು ತಿಳಿದು ಬರುತ್ತದೆ. ಮದ್ರಾಸ್ ಸರಕಾರದ ಎಂಡೋಮೆಂಟ್ ಮಂತ್ರಿಗಳಾದ ಮಾನ್ಯ ಕೋಟೆ ರೆಡ್ಡಿಗಳು ಗಿರಿಯಲ್ಲೇ ವಿಶ್ವವಿದ್ಯಾಲಯ ಸ್ಥಾಪನೆಯಾಗಬೇಕೆಂಬ ಆತುರದಲ್ಲಿದ್ದಾರೆ. ಆದರೆ ತಿರುಪತೀ ಹಣವನ್ನು ಸರ್ವ ಜಾತಿಯವರ ಲೌಕಿಕ ಶಿಕ್ಷಣಕ್ಕೆ ಉಪಯೋಗಿಸುವದು ಹಿಂದೂ ಧರ್ಮಕ್ಕೊಂದು ನ್ಯಾಯಾ ಘಾತ; ಅಂತೆಯೇ ನ್ಯಾಯ ನೀತಿಗೂ ವಿರುದ್ಧವೆಂದು ಹೆಚ್ಚಿನ ಹಿಂದುಗಳ ವಿರೋಧವಿದೆ. ಆದರಲ್ಲೂ ವಿಶ್ವವಿದ್ಯಾಲಯವನ್ನು ಗಿರಿಯ ಮೇಲೆಯೇ ಕಟ್ಟುವುದು ಧರ್ಮ ಭ್ರೆಷ್ಟತೆಯೆಂಬ ಪ್ರಬಲವಾಭಿಪ್ರಾಯವೆದ್ದಿದೆ.

ತಿರುಪತಿಯ ಉತ್ಪತ್ತಿ

ತಿರುಪತಿಯ ಭಂಡಾರ ತುಂಬುವದು ಕಾಯಂ ಹುಟ್ಟುವಳಿಯಿಂದಲ್ಲ. ದಿನಂ ಪ್ರತಿ ಸಾವಿರಾರು ಹಿಂದೂ ಯಾತ್ರಿಕರು ತಂದು ಹಾಕುವ ಡಬ್ಬಿ ಹಣ ಮತ್ತು ಇತರ ಕಾಣಿಕೆಗಳಿಂದ. ತಿರುಪತಿ ದೇವಸ್ಥಾನದ ವಿನಿಯೋಗಗಳ ಖರ್ಚಿಗೆ ವರುಷಕ್ಕೆ ಸುಮಾರು 4ಲಕ್ಷ ರೂಪಾಯಿ ಬೇಕಂತೆ. ದೇವಸ್ಥಾನದ ಸಂಪ್ರದಾಯ ಬದ್ಧ ಎಲ್ಲಾ ಖರ್ಚು ವೆಚ್ಚಗಳನ್ನು ಕಳೆದು ವಿಶೇಷ ಹಣ ಉಳಿತಾಯವಾಗುತಿದ್ದರೆ, ಸಲಹೆಗಾರ ಸರಕಾರವು ಎಲ್ಲಾ ಸಂಪ್ರದಾಯಗಳನ್ನೂ ಮಾಡಲು ಬಿಡದೆ ಖರ್ಚು ಕಡಿಮೆಮಾಡಿಕೊಂಡುದೇ ಕಾರಣವೆಂದು ಆಗೋಸ್ಟಿನ ಮದ್ರಾಸ್ ಕೌನ್ಸಿಲ್ ಸಭೆಯಲ್ಲಿ ಶ್ರೀ.ವೆಂಕಟಸ್ವಾಮಿ ನಾಯಿಡುಗಳಂದಿದ್ದರು. ಇತರ ಹಲವು ಪದ್ಧತಿಗಳಂತೆ ದಾರ್ಮಿಕ ಸ್ರುಚಾರಕರ ಸಂಬಳವನ್ನೂ ಸರಕಾರವು ವಜಾ ಮಾಡಿದೆ. ಜನರು ಭಕ್ತಿ ವಿಶ್ವಾಸಗಳಿಗೆ ಕಟ್ಟು ಬಿದ್ದು ಸ್ವೇಚ್ಛೆಯಿಂದ ಒಪ್ಪಿಸುತ್ತಿರುವ ಕಾಣಿಕೆ ಹಣವು ಶಾಶ್ವತವೆಂಬ ನಂಬಲಾಗುವದೆ? ಕಾಲಕಳೆದಂತೆ ದೈವಬಕ್ಕೆ ಕಡಿಮೆಯಾಗುತ್ತಿದೆ; ಭಂಡಾರದ ಹಣ ಇಂಗ್ಲಿಷ್ ವಿದ್ಯೆಗೆ ಹೋಗುತ್ತದೆಂಬುದನ್ನು ಕಂಡ ಹಿಂದುಗಳಲ್ಲಿ 'ಅದಕ್ಕೇಕೆ ದುಡ್ಡು ಕೊಡಬೇಕು?'ಎಂಬ ವೈರಾಗ್ಯ ಬಂದುಬಿಟ್ಟರೆ ತಿರುಪತಿಬೆಟ್ಟ ಸಪ್ಪೆಯಾದ ಹಣದ ಜೇಬ್ಬವೂ ಕುಸಿಯದಿರದು. ಇಂತಹ ದೈನಿಕೋತ್ಪನ್ನವನ್ನು ನಂಬಿ ವಿಶ್ವವಿದ್ಯಾಲಯ ಸ್ಥಾಪಿಸಿದರೆ ವಿದ್ಯಾಲಯವೂ ದೇವಾಲಯವೂ ಒಟ್ಟಿಗೆ ನೆಲಕಚ್ಚಲಾಗಲಾರವೆ? ಬದಲಾಗಿ ಹಿಂದೂ ಧರ್ಮತತ್ವಗಳಿಗನುಸಾರವಾದ, ಧಾರ್ಮಿಕ ವಿದ್ಯೆಯುಳ್ಳ ವೇದ, ಭವಿಷ್ಯ ವಿದ್ಯೆ, ಶಿಲ್ಪಕಲೆ, ಇತ್ಯಾದಿಗಳಿಗೇಕೆ ಆ ಹಣವನ್ನು ವ್ಯಯಿಸಬಾರದು? ಹಿಂದೂ ದೇವರ ಹಣವು ಆ ದೇವರನ್ನು ನಂಬದವರಿಗಾಗಿ-ದೈವಿಕವಲ್ಲದೆ ವಿದ್ಯೇಗಾಗಿ-ವ್ಯಯವಾಗುವದು ಮಾತ್ರಾ ಸರಿಬರವಲ್ಲವೇ-ಎಂದು ಹಿಂದುಗಳ ದೂರಿದ್ದಿದೆ. ಆದರೆ ಪ್ರಧಾನಮಂತ್ರಿ ಮಾನ್ಯ ಪ್ರಕಾಶಮರನ್ನು ತ್ತಾರಿ-'ದೇವರ ಮಟ್ಟಿಗೆ ಯುವಕರಿಗೆ ವಿದ್ಯೆಕೊಡುವದಕ್ಕಿಂತ ಹೆಚ್ಚಿಗೆ ಪ್ರೀತ್ಯರ್ಥವಾದ ಮತ್ತೊಂದು ಕೆಲಸವೇ ಇರಲಾರದು'.

ಬೆಟ್ಟಕ್ಕೇರುವ ಯೋಚನೆ!

ಸಂಪ್ರದಾಯವಾದೀ ಹಿಂದುಗಳ ಮನಸ್ಸನ್ನು ತಿರುಪತಿ ಕಾಲೇಜು ಕೆಡಿಸಿದೆ; ಇನ್ನದನ್ನು ಯುನಿವರ್ಸಿಟಿಮಾಡಿದರೆ ಅಂತಹ ಹಿಂದೂ ಹೃದಯ ಇನ್ನಷ್ಟು ಕೆಡಲಿದೆ. ಅದರಲ್ಲೂ ಪರ್ವತದ ಮೇಲೆಯೇ ಅದರ ಕಟ್ಟಡ ಕಟ್ಟಬೇಕೆಂಬ ಯೋಚನೆಯಿಂದ ಹೆಚ್ಚಿನ ಸನಾತನೀ ಹಿಂದುಗಳ ಮನಸ್ಸು ವಿಶೇಷಕೆರಳಿದೆ. ಮದ್ರಾಸ್ ಸರಕಾರವು ತಿರುಪತಿ ಪಾವಿತ್ರ್ಯವನ್ನು ಭ್ರಷ್ಟಗೊಳಿಸಿ ಹಿಂದುಗಳ ಧಾರ್ಮಿಕ ಭಾವನೆಯನ್ನು ನೋಯಿಸುವ ಮೊಗಲ ಮನೋವೃತ್ತಿ ವಹಿಸಿದೆ ಎಂದಾಕ್ಷೇಪಿಸುವವರಿದ್ದಾರೆ. ಸದ್ಯದ ಕಾಲೇಜು ಕಟ್ಟಡವು ಬೆಟ್ಟದ ಕೆಳಗಿದೆ; ಹೆಚ್ಚೆಂದರೆ ಇಲ್ಲಿಯೇ ಯುನಿವರ್ಸಿಟಿ ಕಟ್ಟಬಹುದು. ಆದರೆ ವಿಶ್ವವಿದ್ಯಾಲಯವನ್ನು ಬೆಟ್ಟದ ಮೇಲೇರಿಸುವ ಆ ಲೋಚನೆಯಂತೆ. ಆ ಗಿರಿ ಮಲೇರಿಯಕ್ಕೆ ಹೆಸರಾದುದು. ಯುನಿವರ್ಸಿಟಿಗಾಗುವ ವಿಶಾಲ ಮೈದಾನು ಸ್ಥಳ ಮೇಲಿಲ್ಲ; ಅಲ್ಲಿಗೆ ನೀರ ಸರಬರಾಯಿ ವ್ಯವಸ್ಥೆಯಂತೂ ಅತೀ ಕಷ್ಟ. ಹಿಂದುಗಳ ಮುಖ್ಯಾಕ್ಷೇಪವು ಈ ಆನಾನುಕೂಲತೆಗಳಿಗಿಂತಲೂ ಹೆಚ್ಚಾಗಿ ಗಿರಿಯ ಪಾವಿತ್ರ್ಯ ಭಂಗವಾಗುವದೆಂದೇ. ತಿರುಪತಿ ಬೆಟ್ಟವು ಹಿಂದುಗಳ ಪವಿತ್ರ ಸ್ಥಳ; ಹಿಂದುವಲ್ಲದವನನ್ನು ಅಲ್ಲಿಗೇರಲು ಇದುವರೆಗೆ ಬಿಟ್ಟಿದ್ದಿಲ್ಲ. ಇದು ಅತಿ ಪುರಾತನ ಕಾಲದಿಂದ ನಡೆದುಬಂದ ಧಾರ್ಮಿಕ ಸಂಪ್ರದಾಯ. ಇಂತಹ ಶ್ರದ್ಧೆ ಹಿಂದುಗಳಲ್ಲಿ ಮಾತ್ರ ಇರುವದಲ್ಲ. ಮುಸಲ್ಮಾನರ ಮಕ್ಕಳಿಗೆ ಮುಸಲ್ಮಾನೇತರರಿಗೆ ಪ್ರವೇಶವಿಲ್ಲ; ಸೆಲಸ್ಟೈನ್ ಪರಧರ್ಮೀಯರ ಪ್ರವೇಶವನ್ನೊಪ್ಪುವದಿಲ್ಲ. ಹಿಂದುಗಳ ಪವಿತ್ರಸ್ಥಳ ವೆಂಕಟಗಿರಿಯಲ್ಲೇ ವಿಶ್ವವಿದ್ಯಾಲಯ ಮಾಡಿ ಹಿಂದುಗಳಲ್ಲದ ವಿದ್ಯಾರ್ಥಿಗಳೂ ಅಲ್ಲಿಗೆ ಬರುವಂತೆ ಮಾಡುವದು ಧರ್ಮದ್ರೋಹವಲ್ಲವೆ?-ಎಂಬ ಆಚಾರ ಪ್ರಿಯರ ಪ್ರಬಲಾಕ್ಷೇಪವಿದೆ. (ತಿರುಪತಿ ಬೆಟ್ಟಕ್ಕೆ ಸರ್ವರ ಪ್ರವೇಶವಿವೆ ಎಂದೂ ಕೆಲವರನ್ನುತ್ತಾರೆ) ಈ ಕುರಿತು ಚಳವಳಿ ನೇಳುವಲಕ್ಷಣ ಕಾಣುತ್ತಿದೆ. ಸರಕಾರ ನೇನು ಮಾಡುವದೋ ನೋಡಬೇಕು.

ಉತ್ತಮ ತೀರ್ಮಾನ ಮತ್ತು ಸೇವೆಗಳಿಗೆ
ಅನುಭವವೇ ತಳಹದಿ

ಕೇವಲಾತಿವಾರರ ಹಿತವನ್ನು ಸಾಧಿಸಲಿಕ್ಕೂ, ಜೆಜ್ಜು ಲಾಭ ದೊರಕುವಂತೆ ಯೋಗ್ಯ ಸಂಚಯದ ಮೂಲಕ ಬೇರಿಕೆಸ ಹಣವನ್ನು ಸರಿಯಾಗಿ ಪೆಜ್ಜ ಮಾಡಲಿಕ್ಕೂ, ಗಿರಾಕಿಗಳ ಹಣದ ಆಗತ್ಯಗಳನ್ನು ಪೂರ್ತಿಸಲಿಕ್ಕೂ ಸಮರ್ಥವಾದ ಉತ್ತಮ ಧೋರಣೆಯನ್ನು ಕೈಕೊಳ್ಳಲು ತಜ್ಞ ಇತ್ಯರ್ಥರಕ್ತಿಯು ಅಗತ್ಯ. ಪೇಟೆಗಳ ಸ್ಥಿತಿ, ಬೆಲೆಗಳ ಏರಿಳಿತ, ವಿವಿಧ ಧನ ಸಂಚಯ ವಿಧಾನಗಳು, ವ್ಯಾಪಾರೋದ್ಯೋಗಗಳ ಸ್ಥಿತಿ, ಇವುಗಳ ಜ್ಞಾನವೂ ಮುಂಬಿನ ಬದಲಾವಣೆಗಳ ಸೂಕ್ಷ್ಮವನ್ನು ಅರಿತುಕೊಳ್ಳುವ ಶಕ್ತಿಯೂ ಉತ್ತಮ ಬೇರಿಕೆನಲ್ಲಿರ ಬೇಕಾಗಿದೆ. ಈ ವಿಷಯಗಳ ಹಿಂದಿನ ಅನುಭವಗಳ ಜ್ಞಾನವು ಅತ್ಯುತ್ಕರ್ಷಯುಕ್ತ ಮಾರ್ಗದರ್ಶಕವಾಗಿದೆ

ಅರ್ಧಿಕಮುಗ್ಗಟ್ಟು, ಬೆಲೆಗಳವಿಕಾನ ನುತ್ತ ಅತಿವಿಸ್ತರಣೆ ಮೊದಲಾದ ಸಂಕಟಸಿಗಳಂದ ಕೂಡಿದ ನಾಲ್ವತ್ತು ವರ್ಷಗಳ ಅನುಭವದಿಂದಲೂ ತನ್ನ ಭದ್ರವಾದ ಸಾಂಪತ್ತಿಕ ಸ್ಥಿತಿಯಿಂದಲೂ ಕೆನರಾ ಬ್ಯಾಂಕ್ ಗಿರಾಕಿಗಳ ಸಾಂಪತ್ತಿಕಹಿತ ರಕ್ಷಣೆಗೂ ಎಲ್ಲಾ ತರಗತಿಗಳ ಜನರ ಆಗತ್ಯಗಳನ್ನು ಒಪಗಿಸಿಕೊಡಲಿಕ್ಕೂ ಸಮರ್ಥವಾಗಿದೆ.

ನಮಗೆ ಹಣದ ಭದ್ರತೆ ಬೇಕಾದಾಗಲಾಗಲೀ, ವ್ಯಾಪಾರ ಆಗತ್ಯಗಳನ್ನು ಪೂರೈಸಬೇಕಾದಾಗಾಗಲೀ ಕೆನರಾ ಬ್ಯಾಂಕ್ ನಮಗೆ ಬೇಕೆನಿಸುವ ಸೇವೆಯನ್ನು ಸಲ್ಲಿಸುವ ಸ್ಥಾನದಲ್ಲಿದೆ.

— ನಮ್ಮ ಏಜೆಂಟರನ್ನು ಇಂದೇ ಕಂಡು ಮಾತನಾಡಿರಿ —

ಕೆನರಾ ಬ್ಯಾಂಕ್ ಲಿಮಿಟೆಡ್

ಮೂಲ ಧನ ೨೮ ಲಕ್ಷ | ಸ್ಥಾಪನೆ 1906 | ಕ್ಷೇಮ ನಿಧಿ ೧೧ ಲಕ್ಷ

ವ್ಯವಹಾರವಲ್ಲಿನ್ನ ಜುಮ್ಲಾ ನಿಧಿ ೫ ಕೋಟಿಗಿಂತಲೂ ಮೀರಿದೆ.

೪೦ ಶಾಖೆಗಳು— ಮುಂಬಯಿ, ಕಲ್ಲಿಕೋಟೆ, ಸೆಕುಂದರಾಬಾದ, ಬೆಂಗಳೂರು, ಕೊಯಮುತ್ತೂರು, ಕೊಚ್ಚಿ, ಶೋರನೂರು, ಮಾಪಣಗೆರೆ, ಮಧುರೆ, ಆಲಪ್ಪೆ, ಹುಬ್ಬಳ್ಳಿ, ವಿಜಯವಾಡಾ, ಸೇಲಂ, ಕ್ವಿಲೋನ್, ಬೆಳಗಾವಿ, ಮುಂಗಳೂರು ಮುಂತಾದವು.....

● ಮುಂಬಯಿ ಮತ್ತು ಅದರ ಸರಹದ್ದುಗಳಲ್ಲಿ ೫ ಶಾಖೆಗಳು ●

CANARA BANK LIMITED

CHAMPAE'S
Snow & Lastrex
(Sole Distributers for Tnaia.)
Prop: K. G. MAYAK,
Santhekatte, UDIPI, S. K.

ಎರಡು ಮನೋರೋಗಗಳಿಗೆ ಮದ್ದು!

ನೇತಾಜೀ ಸತ್ತದ್ದು ನಿಜ - - - ಸೇನೆಯಲ್ಲಿ ಜಾತೀಯತೆಯಿಲ್ಲ.

ನೇತಾಜೀ ಬೋಸರು ಜೀವದಲ್ಲಿದ್ದಾರೆಂದು ಸರ್ವತ್ರ ಹರಡಿರುವ ನಾನಾ ವಿಧದ ಊಹಾ ಪೋಹೆ–ಕಲ್ಪನಾ ಕಥೆಗಳು–ಆಶೆ ಆವೇಗಗಳನ್ನು ಕಂಡು ಮನನೊಂದ ಪಂಡಿತ ನೆಹರುಗಳು ಈ ಕೆಳಗಿನ ಸ್ಪಷ್ಟ ಹೇಳಿಕೆಯಿತ್ತಿದ್ದಾರೆ.—

"ನೇತಾಜೀ ಸುಭಾಸ್‌ಚಂದ್ರ ಬೋಸರ ಕುರಿತು ಒಂದಲ್ಲೊಂದು ವಿಧದ ವಾರ್ತೆಗಳು ಆಗಾಗ ಪತ್ರಿಕೆಗಳಲ್ಲಿ ಬರುತ್ತಾ ಇವೆ. ಅವರು ಬದುಕಿದ್ದಾರೆಂದೋ ಅವರು ಸದ್ಯದಲ್ಲೇ ಭಾರತಕ್ಕೆ ಬರುವವರಿದ್ದಾರೆಂದೋ ಭಾರತದ ಯಾವುದೋ ಒಂದೋ ಕಡೆಯಲ್ಲಿ ಅವರು ಕಾಣಿಸಿಕೊಂಡರೆಂದೋ, ಇಂಥವರಿಗೆ ಆವರಿಂದ ಸಂದೇಶ ಬಂದಿದೆಯೆಂದೋ–ಏನೇನೋ ಸುದ್ದಿಗಳೇ ಳುತ್ತಿವೆ. ಅವರು ಭಾರತದಲ್ಲಿ ಬಹಿರಂಗವಾಗಿ ಕಾಣಿಸಿಕೊಳ್ಳುವ ದಿನ ಕೂಡಾ ಕೆಲವೊಮ್ಮೆ ನಿರ್ಣಯವಾದುದಿದೆ. ಇವನ್ನೆಲ್ಲಾ ಸರಿಯಾಗಿ ಪರೀಕ್ಷಿಸಿದಾಗ ಎಲ್ಲವೂ ಕೇವಲ ಗಾಳೀ ವಾರ್ತೆಗಳು ಅಥವಾ ಬಯಲಾಸೆಗಳೆಂಬುದು ಖಚಿತವಾಗಿದೆ. ಆದರೆ ಮೇಲಿಂದ ಮೇಲೆ ಇವುಗಳ ಪುನರಾವರ್ತನವಾಗುತ್ತಲೇ ಇದ್ದುದರಿಂದ ಹೆಚ್ಚಿನವರು ಶ್ರೀ. ಸುಭಾಸಚಂದ್ರ ಬೋಸರು ಬದುಕಿದ್ದಾರೆಂದೇ ನಿಸ್ಸಂದೇಹವಾಗಿ ನಂಬುವಂತಾಯಿತು. ಇಂತಹ ನಂಬಿಕೆಗೆ ಎಳ್ಳಷ್ಟಾದರೂ ಆಧಾರವಿರಬಹುದೆಂದು ನಾನು ನಂಬುವದಿಲ್ಲ. ಅವರ ಮರಣದ ವಾರ್ತೆ ಬಂದು ಕೆಲವು ತಿಂಗಳುಗಳ ವರೆಗೂ ಆ ಕುರಿತು ನಾನು ಸಂದೇಹದಿಂದಲೇ ಇದ್ದೆ. ಕೊನೆಗೆ, ಸುಭಾಸರ ಮರಣಕ್ಕೆ ಕಾರಣವಾದ ಅವಘಡವನ್ನು ಕಣ್ಣಾರೆ ಕಂಡಿದ್ದ ಕರ್ನಲ್ ಹಬಿಬುರ್ ರಹಿಮಾನರು ಎಲ್ಲವನ್ನೂ ಸವಿವರವಾಗಿ ತಿಳಿಸಿದಾಗ ಸಂಗತಿ ನನಗೆ ಸ್ಪಷ್ಟವಾಯಿತು. ಆ ಮೇಲೆ, ಈ ನಿಶ್ಚಯವು ಸ್ವಲ್ಪವಾದರೂ ಅಲುಗಾಡುವಂತೆ ಮಾಡಬಲ್ಲ ಒಂದೇ ಒಂದು ಸುದ್ದಿಯ ತುಂಡು ನನಗೆ ಸಿಕ್ಕಿದ್ದೂ ಇಲ್ಲ; ಪತ್ರಿಕೆಗಳಲ್ಲಿ ಬಂದದ್ದೂ ಇಲ್ಲ. ಅವರು ಬದುಕಿರಬೇಕೆಂಬುದೇ ನನ್ನೆಲ್ಲರ ಬಯಕೆ. ಆದರೆ ನಿರಾಧಾರವಾದ ಗಾಳೀ ಸುದ್ದಿಗಳನ್ನು ನನ್ನೊಳಗೆ ನಾನೇ ಪುಂಬಿಸಿಕೊಳ್ಳುವದು ಸರಿಯಲ್ಲ. ಏನೇನೋ ಹುಸಿ ಸುದ್ದಿಗಳೇಗ ಸರ್ವತ್ರ ಹರಡಿರುವುದನ್ನು ಕಂಡು ತೀರಾ ಮನನೊಂದ ಕರ್ನಲ್ ಹಬಿಬುರ್ ಹಿಮಾನರು ಪುನಃ ನನಗೇ ಕುರಿತು ಪತ್ರ ಬರೆದಿದ್ದಾರೆ. ತಾವೂ ಸಿಕ್ಕಿ ಬಿದ್ದಿದ್ದ ಆ ಅವಘಡವನ್ನು ತಾನು ಪ್ರತ್ಯಕ್ಷ ಕಂಡವನೆಂದು ಅವರು ನನಗೆ ಪುನಃ ಭರವಸೆ ಕೊಡುತ್ತಾರೆ. ಆ ಅವಘಡದಲ್ಲಿ ನೇತಾಜಿಯ ದೇಹದ ಮೇಲ್ಭಾಗವೆಲ್ಲಾ ಸುಟ್ಟು ಹೋಗಿತ್ತಲ್ಲದೆ, ತಲೆಗೆ ವಿಶೇಷ ಜಖಮವಾಗಿತ್ತು. ಆ ಮೇಲೆ ಆಸ್ಪತ್ರೆಯಲ್ಲಿ ನೇತಾಜಿಯ ಮಂಚದ ಒತ್ತಿನ ಮಂಚದಲ್ಲೇ ಕರ್ನಲ್ ಹಬಿಬುರ್ ಮಲಗಿದ್ದರು. ಆಗೋ ಸ್ತು 11ನೇ ತಾರೀಕಿಗೆ ನೇತಾಜೀ ಮಡಿದಾಗ ಕರ್ನಲ್ ಹಬಿಬುರ್ ಅಲ್ಲೇ ಇದ್ದರು ಬೋಸರ ಶವವನ್ನು ಟೋಕಿಯೋ ವಿಗಾನಗಲೀ ಸಿಂಗಾಪುರಕ್ಕಾಗಲೀ ಕೊಂಡು ಹೋಗುವದಸಾಧ್ಯವೆಂದು ತಿಳಿದು ಬಂದಾಗ ಕರ್ನಲ್ ಹಬಿಬುರ್ ರಹಿಮಾನರ ಸಮಕ್ಷಮದಲ್ಲೇ ಅದನ್ನು ದಹನಮಾಡಲಾಯಿತು, ಅವರು ಅದರ ಬೂದಿಯನ್ನು ತಂದಿದ್ದರು. ಇವೆಲ್ಲಾ ಶೋಚನೀಯ ಘಟನೆಗಳನ್ನು ಕಣ್ಣಾರೆ ಕಂಡಿದ್ದ ಕರ್ನಲ್ ಹಬಿಬುರ್ ರಹಿಮಾನರ ಸುದ್ದಿಗಿಂತ ಸ್ಪಷ್ಟವಾದುದು ಮತ್ತೊಂದಿಲ್ಲ. ಅವರ ಈ ಹೇಳಿಕೆಯ ಮೇಲಿಂದ, ನೇತಾಜೀ ಬದುಕಿದ್ದಾರೆಂಬ ಗಾಳಿಯನ್ನು ಇನ್ನೂ ಹೆಚ್ಚಿಸುವದು ಹಾಸ್ಯಾಸ್ಪದ ಮತ್ತು ಸಂಪೂರ್ಣ ತಪ್ಪೆಂದು ನನಗನ್ನಿಸುತ್ತದೆ. ಕೊನೆಗೆ ನಿರಾಶೆಯೇ ಗತಿಯಾಗಲುಳ್ಳ ಬಯಲಾಸೆಗಳನ್ನು ಹುಟ್ಟಿಸುವ ಈ ಹೊಣೆಗೆಟ್ಟ ಮಾತುಕತೆಗಳಲ್ಲಿ ಜನರು ಇನ್ನಾದರೂ ಕಾಲ ಹರಣ ಮಾಡಲಾರರೆಂದು ನಾನು ಅತಿಸುತ್ತೇನೆ".

೦೦ ೦೦ ೦೦

ಇತ್ತೀಚಿಗಿನ ಹಿಂದೂ ಮುಸ್ಲಿಂ ಗೊಂದಲಗಳ ಕುರಿತು ಹಬ್ಬುರುವ ಕೃತಕ ವಾರ್ತೆಗಳು ನೇತಾಜೀ ಇರಸ್ತಿಕೆಯ ಸುದ್ದಿಗಳಿಗೆ ಸರಿಮಿಗಿಲಾಗುವಷ್ಟಿವೆ. ಜಾತಿ ಗಲಭೆಗಳ ದಮನಕ್ಕಾಗಿ ಮುಸಲ್ಮಾನೇತರರುಳ್ಳ ಸೇನೆಗಳನ್ನು ಪೂರ್ತ್ರನೇ ಹೊರತರಲಾಗಿತ್ತು; ಮತ್ತೀ ಕ್ರಮವು ಭಾರತದ ಸರ್ವ ಸೇನಾನಿ ಹಾಕಿಕೊಟ್ಟ ಧೋರಣೆಗನುಸಾರವಾಗಿಯೇ ನಡೆಯಿತು–ಎಂದು ಕೆಲವು ಪತ್ರಿಕೆಗಳು ಕೂಡಾ ಸ್ಪಷ್ಟಪಡಿಸಿದ್ದುವು. ಈ ಹೇಳಿಕೆ ಮತ್ತು ಸೂಚನೆ, ಎರಡೂ ನಿರಾಧಾರವಾದುವೆಂದು ಭಾರತದ ಮುಖ್ಯ ಸೇನಾ ಕಚೇರಿಯಿಂದ ಇದೇ ತಾ. 11ರಲ್ಲಿ ಈ ಕೆಳಗಿನ ಪತ್ರಿಕಾ ಹೇಳಿಕೆ ಹೊರಟಿದೆ:—

"ಕಲ್ಕತ್ತದ ಗಲಭೆಯಲ್ಲಿ ½ ಮತ್ತು 3/6ಫೂರ್ಕಾ ರೈಫ್ಲ್ಸ್‌ನಗಳಂತೆಯೇ 5ನೇ ಜಾಟ್ ಸೇನಾತುಕಡಿಯನ್ನೂ 4ನೇ ರಜಪೂತ್ ಸೇನಾತುಕಡಿಯನ್ನೂ ಉಪಯೋಗಿಸಲಾಗಿತ್ತು. ಕೊನೆಯ ಎರಡು ದಳಗಳಲ್ಲೂ ಸೇ. 50 ಹಿಂದುಗಳೂ ಸೇ. 50 ಮುಸಲ್ಮಾನರೂ ಇದ್ದಾರೆ. ಬೊಂಬಾಯಿಯಲ್ಲಿ ಉಪಯೋಗಿಸಿದ ಹಿಂದೀ ಸೇನಾ ದಳಗಳೆಂದರೆ ಎರಡೇ–½ ಫೂರ್ಕಾ ರೈಫ್ಲ್ಸ್ ಮತ್ತು 2ನೇ ಸಿಕ್ ದಳ. ಕಾರಣವೆಂದರೆ ಇನೆಂಡೂ ಆಗ ಸಾಂಟಾಕ್ರ್ಸ್‌ನಲ್ಲೇ ಇದ್ದುವು. ಇದೇ ಸಮಯದಲ್ಲಿ ಇದ್ದ ಪೈಕಿ ಸಮೀಪದಲ್ಲಿದ್ದ ಮುಸ್ಲಿಮರುಳ್ಳ ಸೇನಾ ದಳವೆಂದರೆ 30 ಮೈಲು ದೂರದ ಕಲ್ಯಾಣದಲ್ಲಿದ್ದ 3ನೇ ಫ್ರಂಟಿಯರ್ ಫೋರ್ಸ್ ರೈಫಲ್ಸ್. ಸೇನೆಗಳನ್ನು ನಿಲ್ಲಿಸಿದುದಾಗಲೀ ಜಲನೆಯನ್ನಾಗಲೀ ಜಾತೀಯತೆಯನ್ನಾಧರಿಸಿ ಮಾಡಿಲ್ಲ, ಸೇನೆಯಲ್ಲಿ ಆ ಭಾವನೆಗೆ ಸ್ಥಾನವೇ ಇಲ್ಲ. ಸೇನೆಗಳ ಪಾಲಿಗೆ ಬರುವ ಕರ್ತವ್ಯ ಪಾಲನೆಯ ಮಟ್ಟಿಗೆ ತೀರಾ ಅಪ್ರಿಯವಾದ ಹಾಗೂ ಅತಿ ಹೆಚ್ಚಿನ ಜನಾಪವಾದಕ್ಕೆ ಕಾರಣವಾದ ನಾಗರಿಕ ಆವ್ಯವಸ್ಥೆಯ ನಿವಾರಣೋದ್ಯೋಗಕ್ಕಾಗಿ ಸೇನೆಗಳನ್ನು ಕರೆಯುವಾಗ, ಅವುಗಳ ತರಗತಿ ಭೇದವನ್ನು ಗಣಿಸದೇ ತೀರಾ ಸಮೀಪದಲ್ಲಿರುವವುಗಳನ್ನು ನೋಡಿಯೇ ಕರೆಯಲಾಗಿದೆ".

ನವಯುಗಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ನೋಟೀಸು

ಕುಂದಾಪುರ ಡಿ. ಮು ಕೋರ್ಟಿನಲ್ಲಿ

O. P. No. 100/1946

ಅರ್ಜಿದಾರ–ವ್ಯಾಸರ ಕಾಶೀನಾಥ. ಬಿಳ್ಳು ಯಾನೆ ನಾರಾಯಣ ಕಂಮ್ತಿ ಮಗ, ಯಿವನ ಕ್ಷೇಮಚಿಂತಕ ಮೊಡ್ಡ ತಂದೆ ಸಾಸುದೇವ ಕಾಮತ.

ಎದ್ರಿ—ಇಲ್ಲ.

ಅರ್ಜಿದಾರನ ತಂದೆ ಮೃತ ಬಿಳ್ಳು ಯಾನೆ ನಾರಾಯಣ ಕಾಮತರಿಗೆ ಹಿಂದುಸ್ಥಾನಿ ಕೋ-ಆಪರೇಟಿವ್ ಇನ್ಶೂರೆನ್ಸ್ ಸೊಸ್ಯಾಟಿ ಲಿಮಿಟಿಡ್ ಕಲ್ಕತ್ತಾ ಯಿದರಲ್ಲಿ ಸಂಬ್ರ 129309 ಪೊಲಿಸಿ ಪ್ರಕಾರ ಬರತಕ್ಕ ಆ್ಯಬಜು ರೂಪ್ಯಾ 397-5-7 ಪಡಿಯುವರೆ ತಾನು ಹಕ್ಕುದಾರ ನಾಮ್ನಿದಾರನೆಂಬ ಕುರಿತು ಅರ್ಜಿದಾರನು ತನಗೆ ಸರ್ಟಿಫಿಕೇಟು ಕೊಡಬೇಕೆಂದು ಮೇಲ್ಕಂಡ ಕೋರ್ಟಿನಲ್ಲಿ ದಾಕ್ಲು ಮಾಡಿದ ಸದ್ರಿ ಅರ್ಜಿಯು ತಾ. 30-10-1946ಕ್ಕೆ ತನ್ನಾಗೆ ಯಿಟ್ಟುರುತ್ತದೆ ಆ ಕುರಿತು ಯ್ಯಾರ ದ್ದಾದರೂ ಆಕ್ಷೇಪ ಇದ್ದಲ್ಲಿ ಸದ್ರಿ ತನ್ನ ದಿನ್ನ ಕೋರ್ಟಿನವರು ಕರದಾಗ್ಗೆ ಹಾಜ್ರಾಗಿ ಆಕ್ಷೇಪ ಜಾಹೀರ್ನಾಮಿಕೊಳ್ಳತಕ್ಕದ್ದು ಎಂಬುದನ್ನು ಈ ನೂಲಕ ತಿಳಿಸುವಣಾಗಿಯಿದೆ.

K. Narayana Kamath
ಅರ್ಜಿದಾರನ ಕಡೆ ಎಡ್ವೋಕೇಟ್.
ತಾ. 12-10-1946, ಕುಂದಾಪುರ.

ಅಕ್ಬರ್‌ಖಾನನ ಸ್ವಾಮಿಭಕ್ತಿ!
ಹಿಂದುಮುಸ್ಲೀಮರ ಐಕ್ಯಶಕ್ತಿ!!
ಇಂದಿಗೆ ತಕ್ಕುದಾದ ನಾಟಕ

ಕಾಲ ಚಕ್ರ

(ಶ್ರೀ. M. ನಾರಾಯಣ ರಾವ್,)
ಮುಂಬಯಿ, ವಿರಚಿತ)

ಸದ ದಲ್ಲಿಯೇ ಮಂಗಳೂರಿನಲ್ಲಿ ಪ್ರದರ್ಶಿಸಲಿಕ್ಕಿರುವವರು
ಜನಸ್ಫೂರ್ತಿ
ಮಂಗಳೂರು ಸಂಗೀತ ನಾಟಕ ಸಭಾ
ಇವರು
'ವಿಷಮ ಜೀವನ' ನಾಟಕದಲ್ಲಿ ಖ್ಯಾತಿಪಡೆದ ನಟರನ್ನೇ ಇನ್ನೊಮ್ಮೆ ರಂಗ ಭೂಮಿಯಲ್ಲಿ ಕಾಣಲಿರುವ ಸುಯೋಗ
ತಾರೀಕು—ಶ್ಲಳ ನಿರೀಕ್ಷಿಸಿರಿ.
ವ್ಯವಸ್ಥಾಪಕರು: ಶ್ರೀ. ಬಿ. ನರ್ಸಪ್ಪ.

ಮಂದರಾಸು ಸ್ಕೂಲ್ ಬುಕ್ ಮತ್ತು ಲಿಟರೇಚರ್ ಸೊಸೈಟಿಯವರಿಂದ ಬಹು ಮಾನ್ಯತಾವಾದ ಉಪಯುಕ್ತ ಗ್ರಂಥ

ಪ್ರಸವ ವಿಜ್ಞಾನ

ಬರೆದವರು
ಡಾ|| ದೊಡ್ಡೇರಿ ವೆಂಕಟಗಿರಿರಾವ್.
ಸುಮಾರು ಮೂವತ್ತು ಚಿತ್ರಗಳಿವೆ.
ಪಿ. ಪಿ. ಕಳಿಸುವುದಿಲ್ಲ. ರೂ ೩-೪-೦ನ್ನು ಮನಿಯಾರ್ಡರ್ ಮಾಡಿದರೆ ರಿಜಿಸ್ಟರ್ ಸೂಲಕ ಕಳಿಸಲಾಗುವುದು. ಪುಸ್ತಕ ವ್ಯಾಪಾರಿಗಳಿಗೆ ರಿಯಾಯತಿಯುಂಟು
ಸೂರಾಬಟ್ಟಗಾರರು
ಮಾಡರ್ನ್ ಔಷಧಾಲಯ
ದೊಡ್ಡ ಬಳ್ಳಾಪುರ (ಬೆಂಗಳೂರು)

ವಿಶೇಷ ಶೃಂಗಾರದಲ್ಲಿರುವ
ಕೆಲವು ಆಯುರ್ವೇದೀಯ
ಔಷಧಗಳು
— ದೊರೆಯುತ್ತವೆ —
ನವಭಾರತ ಪುಸ್ತಕ ಭಂಡಾರ,
: ಉಡುಪಿ :



ಕುಟುಂಬದೊಳಗಿನ ಚಿಲ್ಲರೆ ಬೇನೆ

ಬೇನೆಗಳನ್ನು ಹೋಗಲಾಡಿಸಲಿಕ್ಕಾಗಿ ಡಾಕ್ಟರ ಮತ್ತು ಸ್ಪೆಷಲಿಸ್ಟರ ಕಡೆಗೆ ಪ್ರತಿ ಸಾರಿ ಹೋಗುವುದು ಕಷ್ಟವಿರುವುದಿಲ್ಲ—ಮತ್ತು ಅಷ್ಟೊಂದು ಅವಶ್ಯಕತೆಯೂ ಇರುವುದಿಲ್ಲ. ತೊಪ್ಪೆಸೋಡಾ, ವಾಂತಿ, ಆತಿಸಾರ, ಕಂಠ, ಮೈನೋವು, ಕಲ್ಲುಸೋಡಾ ಮೈಗೆ ಗಾಜಿ ವೀಳ್ಯಾದಿ ಅಕ್ಷರ ಚುಚ್ಚಿ ವಿಶೇಷವಿದೇಗಳನ್ನು ಜಪೇರಿಯನ್ ಜೀವನ ಮಿಕ್ಶ್ಚರ್ ಸಪ್ಲಿಂಯವಾಗಿ ಸುಧಾರಿಸುವುದಕ್ಕೆ ಕಾರಣ ಮತ್ತು ಅಮೂಲ್ಯಕರವಾದ ಶಾಖವನ್ನು ಪೂರೈಸಿ ಮಿಗಾಗಿ ಮೇರೆ ಜಾಸುವುದಕ್ಕೆ ಇದರ ಉಪಯೋಗವಾಗುವುದಕ್ಕೆ ಕಾರ್ಯದಲ್ಲಿ ಹಾಗೂ ಇದು ಉಪಯೋಗವಾಗುವದರಿಂದ ಇದು ಅಮೃತ ಬಾಟ್ಲಿಯನ್ನು ಸಮಸ್ಥಿತಿಯು ನುಸ್ಸು ಪ್ರಮಾಣದಲ್ಲಿ ಹತ್ತಿರವಾಗಿ ಉಪಯೋಗಿಸುವುದು (ಬಾಳ್ಕನ್ಸ್ ಮೊಡಾಗ್ಸ್‌ಕಿಯು ಉಪಯೋಗವಾಗಿದೆ) ಮೂಲದಲ್ಲಿರುವ ಲಕ್ಷಣವಾಗಿದೆ. ಮಿಸ್ಸರ್ಸ್‌ಯೂ (ವಿಶಿಷ್ಟ ನ್ಯಾಶನಲ್ ಸಲ್ಲಿಯು) ಪಲ್ಸಗಳಲ್ಲಿ ಅಂಗುಷ್ಠಾಂಗಲ್ಲಿಯೂ ದೊರೆಯುತ್ತದೆ.

ವಿಮಲಾ ಫಿಲ್ಮ್ಸ್ ಪ್ರೊಡಕ್ಷನ್ಸ್ ಮತ್ತು ಕಂ
ಪುನಾ ಸದಸ್ಯರು ಮುಂಬಾಯಿ ಎಂಪೈರ್

ಇಂದ್ರಭವನ ಕಾಫಿ ಹೊಟೆಲ್

ಬಲ್ಮಠ * * * * ಮಂಗಳೂರು.

ಹೊಸ ವ್ಯವಸ್ಥೆ—ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳ—ವಿದ್ಯುದ್ದೀಪ, ಸೀಡಿಯೊಗಳ ಅಧುನಿಕ ಸಲಕರಣೆ. ಉತ್ತಮ ಉಪಚಾರ.

ಟೀಸಾರ್ಟ್ ಮುಂತಾದವುಗಳಿಗೆ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

ಬಿ. ಬಾಬು ಶೆಟ್ಟಿ

Indra Bhavan Coffee Hotel,
Balmatta Road, Mangalore.

ಕೇಂದ್ರ ಸರಕಾರ—ಮಂತ್ರಿಗಳ ಮಾತು.

ರಕ್ಷಣಾ ಮಂತ್ರಿ ಸರ್ದಾರ್ ಬಲದೇವ್‌ಸಿಂಘ್

ತಾ. 9ರಲ್ಲಿ ನವದಿಲ್ಲಿಯಿಂದ ಹಿಂದೀ ಸಶಸ್ತ್ರ ಸೇನೆಗಳಿಗೆ ಸ್ಫೂರ್ತಿದಾಯಕ ಆಕಾಶ ವಾಣೀ ಭಾಷಣವಿತ್ತರು. "ಹಲವು ರಣರಂಗಗಳಲ್ಲಿ ಹಿಂಬುಗಳು, ಮುಸ್ಲೀಮರು, ಸಿಖ್ಖರು ಮತ್ತಿತರರು ಒಟ್ಟೊಟ್ಟಿಗೆ ತಮ್ಮ ರಕ್ತ ಚೆಲ್ಲಿದ್ದರು; ಮತ್ತು ಮಹಾ ಗಂಡಾಂತರಗಳ ಸಮಯಗಳಲ್ಲಿ ಒಕ್ಕೊಟ್ಟಾಗಿ ನಿಂತಿದ್ದರು. ನಿಮ್ಮನ್ನು ಸಯೋಗ್ಯರನ್ನಾಗಿಯೂ ಸಶಕ್ತರನ್ನಾಗಿಯೂ ಮಾಡಿದ ಸ್ಫೂರ್ತಿಯೆಂದರೆ ಅದೇ. ಆ ಒಕ್ಕಟ್ಟನ್ನು ನೀವು ಉಳಿಸಿಕೊಳ್ಳಬೇಕು. ಈಗ ಸಶಸ್ತ್ರ ಸೇನೆಗಳ ಹಿಂದೀಕರಣವನ್ನು ದೊಡ್ಡ ಪರಿಮಾಣದಲ್ಲಿ, ಅಷ್ಟೇ ಪರಿಣಾಮಕಾರಿಯಾಗಿ ಶೀಘ್ರಗತಿಯಿಂದ ಕೈಕೊಳ್ಳುವೆವು. ನೀವಾಗಿ ನಿರ್ಮಿಸಿಕೊಂಡಿರುವ ಆ ಫನ ಮಟ್ಟವನ್ನು ಉಳಿಸಿ ಊರ್ಜಿತಕ್ಕೆ ತರುವದೇ ನಮ್ಮ ಏಕ ಮಾತ್ರ ಕರ್ತವ್ಯ" ಎನ್ನುತ್ತಾ ಸೇನಾನಿ ಅಚಿನ್ ಲೆಕ್ಕರಿಗೂ ಶ್ಲಾಘನೆ ಸಲ್ಲಿಸಿರುವರು. "ದೀರ್ಘಾವಧಿಯಿಂದ ಹಿಂದುಸ್ಥಾನಕ್ಕೆ ಸೇನಾ ಸೇವೆಸಲ್ಲಿಸುವರಲ್ಲೇ ಅಯುಷ್ಯವನ್ನು ಸವೆಯಿಸಿರುವ ನಾನು ಸಂದರ್ಭ ಬಂದರ ಭಾರತ ರಾಷ್ಟ್ರೀಯ ಸರಕಾರಕ್ಕೆ ಧರ್ಮಾರ್ಥ ಸೇವೆಸಲ್ಲಿಸಲು ತಯಾರಿದ್ದೇನೆ" ಎಂದು ಫೀಲ್ಡ್‌ಮಾರ್ಶಲ್ ಸರ್. ಕ್ಲಾಡೆ ಆಚಿನ್ ಲೆಕ್ಕರಂದಿದ್ದಾರೆ.

ಗೃಹ ಮಂತ್ರಿ ಸರ್ದಾರ್ ವಲ್ಲಭಾಯಿ

ತಾ. 12ರಲ್ಲಿ ಆಖಿಲ ಭಾರತ ಪತ್ರಿಕಾ ಸಂಪಾದಕರ ಸ್ಥಾಯೀ ಸಮಿತಿಯ ಮುಂದೆ ಭಾಷಣವೀಯುತ್ತಾ, ಪತ್ರಿಕಾ ಕಾನೂನುಗಳ ರದ್ದತಿಯ ಕುರಿತು ವಿಚಾರಿಸಲು ಒಂದು ವಿಚಾರಣಾ ಸಮಿತಿಯನ್ನು ಸರಕಾರವು ನೇಮಿಸಬೇಕೆಂಬ ಸೂಚನೆಗೆ ಸಮಾಧಾನಕರ ಉತ್ತರವಿತ್ತು, ಪತ್ರಿಕೆಗಳ ಕರ್ತವ್ಯವನ್ನು ಒತ್ತಿ ಹೇಳಿದ್ದಾರೆ. "ಅಧಿಕಾರಿಗಳು, ಅನಧಿಕಾರಿಗಳು ಮತ್ತು ಪತ್ರಿಕಾಪ್ರತಿನಿಧಿ ವಿಚಾರಣಾ ಸಮಿತಿಯೊಂದನ್ನು ನೇಮಿಸಿ ಪತ್ರಿಕಾ ಕಾನೂನುಗಳ ರದ್ದತಿ ಅಥವಾ ಸುಧಾರಣೆಯ ಯೋಚನೆ ಮಾಡುವ ಕುರಿತು ಸರಕಾರಕ್ಕೆ ಅಪೇಕ್ಷೆಪವೇನೂ ಇಲ್ಲ. ವಾರ್ತೆಗಳನ್ನೂ ಅಭಿಪ್ರಾಯಗಳನ್ನೂ ಮುಂದಿಡುವ ಅಸಿರ್ಬಂಧ ಸ್ವಾತಂತ್ರ್ಯವು ಪತ್ರಿಕೆಗಳಿಗಿರಬೇಕು. ಆದರೆ ಆದೇ ಸಮಯದಲ್ಲಿ ರಾಷ್ಟ್ರದ ಭಾವೈಕ್ಯತೆಯನ್ನು ಉಳಿಸುವ ಮತ್ತು ಜನತಾ ಸರಕಾರದ ನ್ಯಾಯಬದ್ಧ ಕಾರ್ಯಗಳಿಗೆ ಬೆಂಬಲ ಕೊಡುವ ಕರ್ತವ್ಯ ಭಾರವು ಅವುಗಳ ಮೇಲಿದೆ. ಸಂದರ್ಭ ಬಂದಾಗ ದೇಶದ ಅನಾಹುತಕಾರೀ ಶಕ್ತಿಗಳ ನಿರ್ಮೂಲನಾಕಾರ್ಯದಲ್ಲಿ ಸರಕಾರಕ್ಕೆ ಅವು ಬೆಂಬಲವಾಗಬೇಕು. ಕ್ರಮಬಾಹಿರ ದೃಶ್ಯಕ್ಕೆಗಳನ್ನು ನಿರ್ದಿಷ್ಟ ರೂಪದಿಂದಲೂ ನಿಷೇಧಾತ್ಮಕವಾಗಿಯೂ ಪತ್ರಿಕೆಗಳು ನಿಂತಿಶೆಗೊಳಿಸಬೇಕು ಎಂಬುದು ಸ್ಪಷ್ಟ ನಿರೂಪಣೆಯಿತ್ತಿದ್ದಾರೆ.

ವ್ಯಾಪಾರ ಮಂತ್ರಿ ಶ್ರೀ. ಸಿ. ಎಚ್. ಭಾಭಾ

ಬೊಂಬಾಯಿಯಲ್ಲಿ ಹಿಂದೀ ವ್ಯಾಪಾರಿ ಸಂಘನವರಿತ್ತ ಮಾನಪತ್ರಕ್ಕೆ ತಾ. 11ರಲ್ಲಿ ಉತ್ತರವೀಯುತ್ತಾ, ವ್ಯಾಪಾರೀ ವರ್ಗದ ಪ್ರತಿನಿಧಿಗಳನ್ನು ಆಗಾಗ ಭೇಟಿ ಮಾಡಿ ಪರಿಸ್ಥಿತಿಯೆನ್ನು ಚರ್ಚಿಸಲು ತಾನು ಸದಾ ಸಿದ್ಧನೆಂದೂ ವ್ಯಾಪಾರೋದ್ಯಮವನ್ನು ಪ್ರೋತ್ಸಾಹಿಸುವದೇ ರಾಷ್ಟ್ರೀಯ ಸರಕಾರದ ಧ್ಯೇಯವೆಂದೂ ಸ್ಪಷ್ಟಾಕ್ಷರ ಸನೆ ಕೊಟ್ಟಿದ್ದಾರೆ. ಲಂತೆಯೇ ಹಿಂದೀ ಹೆಡಗ ಚಲುವಣಿಗೂ ಹೆಡಗ ನಿರ್ಮಾಣಕ್ಕೂ ಇರುವ ಇದುವರೆಗಿನ ತೊಡಕುಗಳನ್ನೆಲ್ಲಾ ಸಾಧ್ಯವಿದ್ದಷ್ಟು ಬೇಗನೇ ನಿವಾರಿಸಲಾಗುವದೆಂಬ ಭರವಸೆಯೂ ಮಾನ್ಯ ಮಂತ್ರಿಗಳಿಂದ ಬಂದಿದೆ. "ಸಬಲ ಮತ್ತು ದುರ್ಬಲರೊಳಗೆ ಸ್ವತಂತ್ರವ್ಯಾಪಾರವೆಂಬ ಸೊಲ್ಲು ಅದೊಂದು ಹಿಡಿದುಕೊಳಕುವ ಬೋನ್ಸ — ತಪ್ಪುಭಿಪ್ರಾಯವೆಂದು - ಶಾರಿದವರು ಮಹಾತ್ಮಾ ಗಾಂಧಿಯವರೆಂದು ನನ್ನ ಯೋಚನೆ. ಈ ಪದ್ಧತಿಯಿಂದಾಗಿ ಪಿಡಂಪರಾಗತವಾಗಿರುವ ಅಪಾಯಗಳ ಕಡೆಗೆ ಸರಕಾರವು ಸದಾ ಜಾಗ್ರತೆಯಲ್ಲಿದ್ದೇ ಕಾರ್ಯನಿರ್ವಹಿಸುವದೆಂದು ನಾನು ನಿಮಗೆ ಆಶ್ವಾಸನೆಯೀಯುತ್ತೇನೆ" ಎಂದು ಮಂತ್ರಿ ಭಾಭಾ ನುಡಿದಿದ್ದಾರೆ.

ರೈಲ್ವೇ ಮಂತ್ರಿ ಮಿ ಆಸಫ್ ಅಲಿ

ದ. ಭಾ. ರೈಲ್ವೇ ಮಜೂರ ಸಂಘದವರ ಶಿಷ್ಟಮಂಡಲಿಯೊಂದಕ್ಕೆ ತಾ. 10ರಲ್ಲಿ ಈ ಕೆಳಗಿನ ಹಿತವಚನಗಳನ್ನಾಡಿದರು. "ತಾವು, ರಾಷ್ಟ್ರದ ಆರ್ಥಿಕ ರಂಗದಲ್ಲಿ ಹೋರಾಡುತ್ತಿರುವ ರಾಷ್ಟ್ರೀಯ ಸೇನೆಯ ಯೋಧರೆಂದು ಎಲ್ಲಾ ಕೆಲಸಗಾರರೂ ಭಾವಿಸಬೇಕು. ಸದ್ಯದ ಹಿಂದೀ ಸರಕಾರವು ಕೆಲಸಗಾರರ ನ್ಯಾಯಬದ್ಧನಾದ ಸರ್ವ ಬೇಡಿಕೆಗಳ ಕಡೆಗೂ ಸಹಾನುಭೂತಿಯಿಂದಿದೆ. ಅಧಿಕಾರಕ್ಕೆ ಬಂದೊಡನೆಯೇ ದ. ಭಾ. ರೈಲ್ವೇ ಮುಷ್ಕರದ ಸರ್ವ ಸಂಗತಿಗಳನ್ನೂ ನಾನು ಲಕ್ಷ್ಯಪೂರ್ವಕ ಪರಿಶೀಲಿಸಿದ್ದೇನೆ. ಮತ್ತು ಕೆಲಸಗಾರ ಸಂಘವು ಅವಸರದ ಮುಷ್ಕರ ಹೂಡಿತೆಂಬ ತೀರ್ಮಾನಕ್ಕೆ ಬಂದಿದ್ದೇನೆ. ನಡುಗಾಲ ಸರಕಾರ ಸ್ಥಾಪನೆಯಾದ ಮೇಲೂ ದ. ಭಾ ರೈಲ್ವೇ ಮುಷ್ಕರವನ್ನು ಮುಂದುವರಿಸಿದುದು ತೀರಾ ಅಯೋಗ್ಯ; ಮತ್ತು ಟ್ರೇಡ್ ಯೂನಿಯನ್ ತತ್ವಕ್ಕೇನೇ ಅಘಾತ. ಪತ್ರಿಕಾ ಮೂಲಕ ಪ್ರಕಟವಾದ ಜನತಾಭಿಪ್ರಾಯವು ಈ ಮುಷ್ಕರಕ್ಕೆ ಸ್ಪಷ್ಟವಾಗಿ ವಿರೋಧವಿದ್ದಿತ." ಎಂದೆಲ್ಲಾ ಮಂತ್ರಿ ಆಸಫ್ ಅಲಿಗಳು ಬುದ್ಧಿ ಹೇಳಿ ಕೆಲಸಗಾರರ ನಿಜವಾದ ಸಂಕಷ್ಟಗಳ ನಿವಾರಣೆ ಮಾಡುವ ಆಶ್ವಾಸನೆಯಿತ್ತಿದ್ದಾರೆ.

ವಿದೇಶ ಮಂತ್ರಿ ಪಂಡಿತ ನೆಹರು

ಬ್ರಿಟಿಷ್ ಅವ್ಯಾಗತಕಾರಿಗೆ ಸ್ಪಷ್ಟ ಎಚ್ಚರಿಕೆ ಕೊಟ್ಟಿದ್ದಾರೆ. ಬ್ರಿಟನಿನ ಬ್ಲೇಕ್ ಪೂಲಿನಲ್ಲಿ ನಡೆದ ಕನ್ಸರ್ವೇಟಿವ್ ಪಕ್ಷದ ಸಮ್ಮೇಲನದಲ್ಲಿ ಚರ್ಚಿಲ್, ಮೊದಲಾದ ಕೆಲವು ಅಪ್ರಾಗತಿಕರು ದುರುದ್ದೇಶಪೂರ್ವಕ ಭಾರತ ಸ್ವಾತಂತ್ರ್ಯವನ್ನು ವಿರೋಧಿಸಿ ಕುಯುಕ್ತಿಯ ಮಾತುಗಳನ್ನಾಡಿದ್ದರು. 'ಬ್ರಿಟಿಷ್ ಸೇನೆಯನ್ನು ಹಿಂದೆಗೆಯುವ ಕುರಿತು ಈಗ ನೆಹರುಗಳೇಕೆ ಸುಯ್ಲೆತ್ತುವದಿಲ್ಲ?' ಎಂದು ಪ್ರಶ್ನಿಸಿ, ಜಾತೀಯ ಗಲಭೆಗಳ ನಿವಾರಣೆಗಾಗಿ ಆಂಗ್ಲ ಸೇನೆ ನೆಹರುಗಳಿಗೆ ಬೇಕಾಗಿದೆ ಎಂದು ಲಾರ್ಡ್ ವಿಂಟರ್ಟನ್ ಆಕ್ಷೇಪಿಸಿದ್ದರು. ನೆಹರುಗಳೀಗ ಖಂಡತುಂಡ ಉತ್ತರವಿತ್ತಿದ್ದಾರೆ. "ಬ್ಲೇಕ್‌ಪೂಲಿನ ಇಂತಹ ಭಾಷಣಗಳು ಬೇಜವಾಬ್ದಾರಿಯವಿವೆ. ವಿಶೇಷ ಬಣ್ಣ ಹೆಚ್ಚಲ್ಪಟ್ಟು, ಭಾರತದ ಆಂತರಿಕ ಗೊಂದಲವನ್ನು ಹುರಿದುಂಬಿಸಿ, ಒಕ್ಕಟ್ಟನ್ನೂ ಸುಸ್ಥಾಯೀ ಸರಕಾರವನ್ನೂ ಅತಂಕಿಸುವ ಉದ್ದೇಶದಿಂದ ಕೂಡಿವೆ. ಬ್ರಿಟಿಷ್ ಸೇನೆಯ ಉಪಸಂಹಾರದ ಕುರಿತು ನಾನು ಮೌನ ವಹಿಸಿದ್ದೇನೆಂದೂ, ಜಾತೀಯ ದಂಗೆಗಳ ನಿರ್ನಾಮಕ್ಕಾಗಿ ಅವುಗಳ ಉಪಯೋಗ ನಮಗೆ ಬೇಕಾಗಿದೆಯೆಂದೂ ಅರ್ಥೈಸಬಿದ್ದಿದೆ. ಇನ್ನೆಲ್ಲವೂ ಪೂರ್ಣ ಸುಳ್ಳು ಆರೋಪಗಳು. ಅಂತರಿಕ ಕಲಹ ನಿವಾರಣೆಗೆ ಅವುಗಳನ್ನು ಉಪಯೋಗಿಸುವ ಇಚ್ಛೆ ನಮಗಿಲ್ಲ. ಅಧಿಕಾರಕ್ಕೆ ಬರುವ ಮೊದಲಿದ್ದ ಮತ್ತು ಈಗ ಇರುವ ನಮ್ಮ ಸ್ಪಷ್ಟ ಧೋರಣೆಯೆಂದರೆ ಬ್ರಿಟಿಷ್ ಸೇನೆಗಳು ಹಿಂದುಸ್ಥಾನದಿಂದ ಕೂಡಲೇ ಹೊರಟು ಹೋಗಬೇಕು, ಅಥವಾ ಅವುಗಳ ಸಾಗೋಣ ವ್ಯವಸ್ಥೆ ಸಾಧ್ಯವಿದ್ದಷ್ಟು ಅವಸರದಿಂದ ಆಗಲೇಬೇಕು, ಎಂಬುದೊಂದೇ. ಒಂದೇ ಒಂದು ದಿನದ ವಿಳಂಬಿಗಾದರೂ ಅವು ಹಿಂದುಸ್ಥಾನದಲ್ಲಿ ನಿಂತಿರಬೇಕೆಂದು ನಾವು ಬಯಸುವದಿಲ್ಲ. ಅವರಲ್ಲಿ ನಿಂತಿರುವದು ನಮಗೂ, ಅವರಿಗೂ ಆಯೋಗ್ಯವಾದುದು. ಈ ಕಾರ್ಯದಲ್ಲಿ ನಮಗೆ ಸಹಕಾರವೀಯಲಿ ಎಂದು ನಾನು ಕನ್ಸರ್ವೇಟಿವ್ ಪಕ್ಷ ಪ್ರಮುಖರನ್ನು ಆಮಂತ್ರಿಸುತ್ತೇನೆ. ಬ್ರಿಟಿಷ್ ಸಂಯುಕ್ತ ರಾಜ್ಯಕೂಟದೊಡನೆ ಸಹಕರಿಸುವ ಸದಿಚ್ಛೆಯನ್ನು ನಾವು ವ್ಯಕ್ತಪಡಿಸಿದ್ದೆವು ಆದರೀಗ್ಗ ನಾನು ನನ್ನ ಮತ್ತು ಭಾರತ ಸರಕಾರದಲ್ಲಿರುವ ನನ್ನ ಅನುಯಾಯಿಗಳ ಪರವಾಗಿ ಅತ್ಯಂತ ಸ್ಪಷ್ಟವಾಗಿ ತಿಳಿಸುವದೇನೆಂದರೆ— ನಮ್ಮಕಡೆಗೆ ಮೈತ್ರಿರಹಿತ ಧೋರಣೆ ವಹಿಸುವವರೊಡನೆ, ಅಥವಾ ಭಾರತದ ಸ್ವಾತಂತ್ರ್ಯದೊಡನೆ ಜೆಲ್ಲಾಟವಾಡಲಿಚ್ಛಿಸುವವರೊಡನೆ ನಾವೆಂದಿಗೂ ಸಹಕರಿಸುವಂತಿಲ್ಲ".

'ಕರಿಯರ ಪ್ರಪಂಚ'ದ ಪ್ರಕಟಣೆಗಳು

ಸ್ವತಂತ್ರ ಜೀವನೋಪಾಯ	(ಕೆ. ಹೊನ್ನಯ್ಯ ಶೆಟ್ಟಿ)	0	3	0
ಸಂಚಯ ಪಿಶಾಚಿ	(ಕೆ. ಕೆ ಶೆಟ್ಟಿ)	0	8	0
ನಾಡ ಕತೆಗಳು	(ಸಂಕಲನ)	0	3	0
ಶುಶೀಲವ	(ಕೆ. ಕೆ ಶೆಟ್ಟಿ)	0	5	0
ಕಾವ್ಯ ಸಾಮ್ರಾಜ್ಯ	(ಕವಿತಾ ಸಂಗ್ರಹ)	1	0	0
ಮುಂದಿನ ದೇವರು	(ಕೆ. ಕೆ ಶೆಟ್ಟಿ)	0	3	0
ನೃಭಿಚಾರಿಣಿ ಯಾರು	(,,)	0	12	0
ಪೆಂಡ್ರಿ ಗಂಡನಾದರ	(,,)	0	4	0
ಪುರುಷ ವಧು	(,,)	0	4	0
ಸನ್ಯಾಸಿಯ ಸೋಗಿನಲ್ಲಿ	(,,)	0	8	0
ನಂಬಾ ದೀನ	(ಕೊರಡ್ಕಲ್ ಶ್ರೀನಿವಾಸ ರಾವ್)	0	10	0
ದೇಶಭಕ್ತ	(ಕೆ. ಕೆ. ಶೆಟ್ಟಿ)	1	4	0
ಪ್ರೇಮ ವಿಜಯ	(,,)	1	0	0
ರಂಗಭೂಮಿ	(ಎಸ್ ವೆಂಕಟರಾಜ)	0	8	0
ಸೇವಾಸದ್ಮ	(ಎಸ್ ಎಲ್ ಸುಬ್ರಹ್ಮಣ್ಯಂ)	0	8	0
ನಾರೀ ಹೃದಯ	(,,)	0	14	0
ಭಾರತೀಯ ಕತೆಗಳು	(ಕೊರಡ್ಕಲ್ ಶ್ರೀನಿವಾಸ ರಾವ್)	0	14	0
ಪ್ರಕಾಶ	(ಸರಸ್ವತಿ ಬಾಯಿ ರಾಜವಾಡೆ)	2	4	0
ಮೂರು ಪ್ರಹಸನಗಳು	(ಕೊರಡ್ಕಲ್ ಶ್ರೀನಿವಾಸರಾವ್)	0	14	0
ನಗೆ ನೋಟಗಳು	(ಕೆ. ಎಟ್ಟಲ ಶೆಣೈ, ಬಿ. ಎ. ಎಲ್.ಟಿ)	0	14	0
ಅನ್ನದೇವರು ಮತ್ತು ಇತರ ಕತೆಗಳು	(ಕಯ್ಯಾರ ಕಿಂಞಾಣ್ಣ ರೈ)	1	0	0
ಭಾರತದಲ್ಲಿ ಜಾತಿಭೇದ	(ಎಸ್ ಎಲ್ ಸುಬ್ರಹ್ಮಣ್ಯಂ)	1	0	0
ವಿಷ್ಣುವಿನ ದಶಾವತಾರಗಳು ಅರ್ಥಾತ್ ದಶಾವತಾರಗಳು	(ಎಂ ವಿ ಶೆಣೈ)	0	12	0
ಆಕಾರಗಳಿಗೆ	(ಎಸ್ ವೆಂಕಟರಾಜ)	1	12	0
ಸ್ವಾತಂತ್ರ್ಯವೀರ ಸಾವರಕರರು			4	0
ಜೀವನ ಸಂಗ್ರಾಮ	(ಸಿ. ಜೀನ ಶೆಟ್ಟಿ)	1	8	0



Approved item by the Govt. of Mysor
Certified by the Agent of the Govt. of Cylone Indian.

The Canara Banking Corporation Limited.
((Incorporated in British India. with limited Liability)
Estd: 1906.
Head Office: **UDIPI**, South Kanara.

CAPITAL

Authorised	... ...	Rs. 25,00,000
Issued & Subscribed	...	,, 16,00,000
Paid up	... ...	,, 15,64,715
Reserves Over	... ...	,, 4¾ Lakhs

Branches at- Bombay, Madras, Bangalore, Coimbatore, Salem, Calicut, Hubli, Mysore, Cochin, Mangalore, Madras etc., etc.
Banking Business of Every Description Transacted.

ಉಡುಪಿ, ಗುರುವಾರ, ೧೭-೧೦-'೪೬

ಜಿನ್ನರ ಅಂತರ್ಲಾಗ!

ನಡುಗಾಲ ಸರಕಾರದಲ್ಲಿ ತನ್ನ ಪಾಲಿಗೆ ಮೀಸಲಿಟ್ಟದ್ದ ೫ ಸ್ಥಾನಗಳನ್ನು ಅಂಗೀಕರಿಸುವ ನಿರ್ಧಾರವನ್ನು ಮುಸ್ಲಿಂ ಲೀಗ್ ಮಾಡಿತೆಂಬ ವಾರ್ತೆ ಈಗ ತಾನೇ ಬಂದಿದೆ. ಸಂಗತಿಸಿರೂಪಣೆಯ ಅಧಿಕೃತ ಪ್ರಕಟಣೆಯನ್ನು ಕಾಣದೆ ಈ ಕುರಿತು ಸೂಕ್ಷ್ಮ ವಿಮರ್ಶೆ ನಡಿಸಲಾಗುವದಿಲ್ಲ. ಇದುವರೆಗೆ ತಿಳಿದು ಬಂದ ವಿಷಯಗಳಲ್ಲಿ ಸ್ಪಾರಸ್ಯವಿದೆ. ಆನಂದ, ವಿಷಾದ, ವಿನೋದದಂತಹ ಹೃದಯತರಂಗಗಳನ್ನು ಅವು ಏಕಕಾಲದಲ್ಲಿ ಎಬ್ಬಿಸುತ್ತಿವೆ. ಕೇವಲ ಒಂದೂವರೆ ತಿಂಗಳ ಆಡಳಿತೆಯಿಂದ, ಹಿಂದೀ ಸ್ವಾತಂತ್ರ್ಯವಿರೋಧಿಗಳಹೃದಯ ಪಲ್ಲಟಿಸುವಂತೆ ಮಾಡಿ, ಅವರ ದರ್ಪಗಿರಿಗೆ ಬುಡದಲ್ಲೇ ವಜ್ರಾಘಾತ ಕೊಟ್ಟು ಕುಸಿಯುವಂತೆಸಗಿದ, ರಾಷ್ಟ್ರಪ್ರಮುಖರನ್ನು ಈ ಸಂದರ್ಭದಲ್ಲಿ ನಿಜಕ್ಕೂ ಅಭಿನಂದಿಸಬೇಕು.

ಯಾರ ಒಪ್ಪುಗೆಗೂ ಸಿಗದೆ ಆಕಾಶಕ್ಕೇರಿದ್ದ ಮಿ. ಜಿನ್ನರು ಈ ರೀತಿ ನೆಲಕಾಭಿಮುಖವಾಗಬೇಕಾದರೆ ಅವರ ಬಯಕೆಯಲ್ಲಿದ್ದುದನ್ನು ಕಾಣಿಕೆಯಾಗಿ ಇಲ್ಲಿ ಮಡಗಿದವರಿರಬೇಕು. ಅಂತಹುದೇನೂ ಕಾಣುವುದಿಲ್ಲ. 'ಲೀಗಿಗೆ ಬಾಗಿಲು ಸದಾ ತೆರೆದಿದೆ; ನಡುಗಾಲ ಸರಕಾರದ 5 ಸ್ಥಾನಗಳು ಯಾವಾಗ ಬಂದರೂ ಅದಕ್ಕೆವೆ' ಎಂದು ವೈಸರಾಯರೂ ಅಂದಿದ್ದರು; ನೆಹರು ಗಳೂ ನುಡಿದಿದ್ದರು. ಇದು ಸಾಲದೆಂದೇ ಇದುವರೆಗೂ ಮುಸ್ಲಿಂ ಲೀಗ್ ಮುಖ್ಯರು ಹಿಡಿದಿತ್ತು. 'ಸ್ಪಷ್ಟತೆ ಹೋರಾ'ದ ಡಂಗುರ ಹೊಡೆದಿತ್ತು. ದೇಶವ್ಯಾಪೀ ಜಾತಿ ದಂಗೆಗಳು ನಡೆದಿದ್ದುವು. ಆ ಕೊಡುಗೆ ಅಂದಿನಿಂದಿದುವರೆಗೂ ಇದ್ದಂತೆಯೇ ಇದೆ ಹೊರತು ಮಿ. ಜಿನ್ನರ ಫೆರ್ಜನೆಗೆ ಹೆದರಿ ಬೆಳೆದುದೇನೂ ಕಾಣುವದಿಲ್ಲ. ಆದರೆ ಮಿ. ಜಿನ್ನರು ಸಂದರ್ಭಕ್ಕನುಗುಣವಾಗಿ ವಿಶ್ವರೂಪದಂತೆಯೇ ಅಣುರೂಪವನ್ನೂ ಧರಿಸಬಲ್ಲ ಕಲಿಕಾಲದ ಮುಖ್ಯ ಪ್ರಾಣನೆಂಬಂತೆ ಕಾಣುತ್ತಿದೆ! ಆವಗ್ಗೆ ಆ ಹಿಂದಿನ ಕೊಡುಗೆಯೇ ಸಾಕಷ್ಟಿಸುವಷ್ಟು ಸಣ್ಣ ರೂಪದ್ದೆ ಬಂದಿದ್ದಾರೆ. ರೂಪದಂತೆ ಸ್ವಭಾವವೂ ಬದಲಾಗಿದ್ದರೆ ಈ ಸ್ಥಿತ್ಯಂತರಕ್ಕೆ ಸರ್ವರ ಸುಸ್ವಾಗತ ದೊರೆಯುತ್ತಿತ್ತು; ಮಿ. ಜಿನ್ನರು ಅಭಿನಂದನೆಗೆ ಪಾತ್ರರಾಗುತ್ತಿದ್ದರು. ಆದರೆ ಈಗ ಆಪಹಾಸ್ಯಕ್ಕೆ ಗುರಿಯಾಗಿದ್ದಾರೆ.

'ಮುಂದೇನು?' ಎಂಬುದೇ ಸದ್ಯದ ಪ್ರಶ್ನೆ. ಕಾಂಗ್ರೆಸಿನೊಡನೊಂದು ಒಪ್ಪಂದ ಮಾಡಿಕೊಂಡು ಲೀಗು ನಡುಗಾಲ ಸರಕಾರವನ್ನು ಪ್ರವೇಶಿಸುತ್ತಿಲ್ಲ. ಕಾಂಗ್ರೆಸ್-ಲೀಗ್ ಒಪ್ಪಂದವಾಗಬೇಕೆಂದು ಭೋಪಾಲದ ನವಾಬರೇ ಮೊದಲಾದವರು ವಡಿಸಿದ ಪ್ರಾಣಾವಧಿ ಪ್ರಯತ್ನಗಳು ನಿಷ್ಫಲವಾಗಿವೆ. ಬ್ರಿಟಿಷ್ ಮಂತ್ರಿ ಸಮಿತಿ ಹೇಳಿಕೆ, ವೈಸರಾಯರ ಆಮಂತ್ರಣ ಮತ್ತು ಆಶ್ವಾಸನೆಗಳನ್ನು ನಂಬಿಯೇ ಮುಸ್ಲಿಂ ಲೀಗು ಸರಕಾರದೊಳಗೆ ಪ್ರವೇಶಿಸಲು ನಿಶ್ಚಯಿಸಿದೆ. ಆದ್ದರಿಂದ ಲೀಗ್ ಪ್ರವೇಶಿಸಿತೆಂಬುದಕ್ಕಾಗಿ ಕಾಂಗ್ರೆಸ್ ತನ್ನ ನ್ಯಾಯಬದ್ಧ ಹಕ್ಕನ್ನುವುದನ್ನೂ ಬಿಟ್ಟುಕೊಡಬೇಕೆಂದಿಲ್ಲ. ವೈಸರಾಯರು ಮಾತ್ರ ತನ್ನ ಕರ್ಮದ ಪ್ರತಿಫಲವಾಗಿ ಕತ್ತರಿಯಲ್ಲಿ ಸಿಕ್ಕಿದ್ದಾರೆ 14 ಸ್ಥಾನಗಳ ಪೈಕಿ ೫ಸ್ಥಾನಗಳ ಹಕ್ಕು ಮಾತ್ರ ಲೀಗಿಗೆಂಬ ಕುರಿತು ವೈಸರಾಯರೇನೂ ತಪ್ಪಿಬಿದ್ದಿಲ್ಲ. ತನ್ನ ಪಾಲಿನ ಸ್ಥಾನಗಳಿಗೆ ಮನಬಂದವರನ್ನಾರಿಸುವ ಕಾಂಗ್ರೆಸಿನ ಹಕ್ಕನ್ನಿಲ್ಲಿಗ ಪ್ರಶ್ನಿಸುವವರಿಲ್ಲ. ಮಿಕ್ಕ ಮೂವರು ಅಲ್ಪಸಂಖ್ಯಾತ ಸಮಾಜಗಳ ಪ್ರತಿನಿಧಿಗಳ ಕುರಿತೂ ಯಾರೂ ಮರು ಮಾತಾಡಲಿಕಿಲ್ಲ. ಆದರೆ ಆಗೋಸ್ತು 24ರ ತನ್ನ ಭಾಷಣದಲ್ಲಿ 'ಪ್ರಾಮುಖ್ಯ ಖಾತೆಗಳನ್ನು ಎರಡು ಪ್ರಮುಖ ಸಮಾಜಗಳೊಳಗೆ ಸಮಾನವಾಗಿ ಹಂಚಲು ನೋಡುವೆವು. ಒಂದು ಸಮ್ಮಿಶ್ರ ಸರಕಾರವು ಮುಖ್ಯ ಸಮಾಜಗಳೆಂಡರ ಸಮಾನ ಸನ್ಮತಿಯಿಂದಲೇ ಪ್ರಾಮುಖ್ಯ ಪ್ರಶ್ನೆಗಳನ್ನು ತೀರ್ಮಾನಿಸಬೇಕಾದ್ದರಿಂದ ತಾನು ಅಲ್ಪಸಂಖ್ಯಾಕನಾಗುವೆನೆಂದು ಲೀಗ್ ಹೆದರಬೇಕಾಗಿಲ್ಲ' ಎಂದು ಲೋರ್ಡ್ ವೇವೆಲರು ಅಭಯ ಕೊಟ್ಟಿದ್ದರು. ಮುಳುಗಲಿಕ್ಕಿದ್ದ ಜಿನ್ನರು ಈಗ ಮೇಲೆ ಬಂದಿರುವುದು ಇವೆರಡು ಅಡ್ಡಮರಗಳನ್ನಾಧರಿಸಿಯೇ. ಅನುಮತಿ ವಿನಹ ಕಾಂಗ್ರೆಸಿಗರ ಧೈರ್ಯ ಯಾವುದೇ ಖಾತೆಯನ್ನಾದರೂ ವೈಸರಾಯರಿಗೆ ಮರಳಿಪಡೆಯಬಲ್ಲರೆ? ಲೀಗ್ ಧೋರಣೆಯಿಂದಾಗಿ ಎಂದೂ ಸಾಧ್ಯವಿಲ್ಲದ 'ಇಕ್ಕಡೆಯ ಒಪ್ಪಿಗೆ' ಪಡೆಯಲು ನಡುಗಾಲ ಮಂತ್ರಿಮಂಡಲಕ್ಕೆ ವೈಸರಾಯರು ಸೂಚಿಸುವ ನಿಬಂಧನೆಗಳೇನು? ಕೇಂದ್ರ ಮಂತ್ರಿಮಂಡಲದ ಸಂಯುಕ್ತ ಜವಾಬ್ದಾರಿಯು ಶಾಶ್ವತವಾಗದಿದ್ದಲ್ಲಿ ಜಾತೀಯ ಕಲಹವು ಹೊರಗಿನಂತೆಯೇ ಅಧಿಕಾರ ಕ್ಷೇತ್ರಕ್ಕೂ ವ್ಯಾಪಿಸಿತೆಂದೇ ಭಾವಿಸಬೇಕು; ನೆಹರು ಸರಕಾರದ ಒಬ್ಬತದ ಪ್ರಭಾವಶಾಲೀ ಕಾರ್ಯವಿಧಾನಗಳು ತನ್ನನ್ನು ಇಷ್ಟಂಟ್ಲೇ ಹಿಂದೆಹಾಕಿದುದನ್ನು ಕಂಡು ತಬ್ಬಿಬ್ಬಾದ ವೈಸರಾಯರು, ಲೀಗನ್ನು ಕರತಂದು ಅಲ್ಲಿ ಜಗಳವೆಬ್ಬಿಸಿ ತನ್ನ ವಿಶೇಷಾಧಿಕಾರವನ್ನು ಉಪಯೋಗಿಸುವ ಸಂದರ್ಭದೊಡಕಿಸಿಕೊಂಡರೆಂದೇ ನೆನಸಬೇಕು. ಇಂತಹ ಹಲವು ನಡೆಯಲು ಕಾಂಗ್ರೆಸ್ ಬಿಡುವಂತಿಲ್ಲ. ಆದ್ದರಿಂದ ತಾವು ಹಿಂದಿನ ವಿಧಾಯಕ ಧೋರಣೆಯ ಬದಲಿಗೆ ವಿನಾಶಕ ವಿಧಾನವನ್ನು ಯುಕ್ತಿ ಪೂರ್ವಕ ಅನುಸರಿಸಿದರೆ ಎಂದಿಗೂ ಸಾಧುವಿಲ್ಲ ಎಂಬುದನ್ನು ವೈಸರಾಯರೂ ಬ್ರಿಟಿಷ್ ಸರಕಾರವೂ ಈ ಸಂದರ್ಭದಲ್ಲಿ ತಿಳಿದಿರಬೇಕಾದುದು ಅಗತ್ಯ.

ಮದ್ರಾಸ್ ಸರಕಾರದ ಗಿರಣಿ ವಿರೋಧ ಧೋರಣೆ.

ಪ್ರಾಂತ್ಯದಲ್ಲೆಲ್ಲಾ ಕಳವಳ.

ಮಾದಿ ತಯಾರಿಯನ್ನು ಹೆಚ್ಚಿಸಿ, ಬಟ್ಟೆಯ ಮಟ್ಟಿಗೆ ಇಡೀ ಪ್ರಾಂತ್ಯವು ಖಾದಿಯನ್ನೇ ಆವಲಂಬಿಸಿರುವಂತೆ ಮಾಡಬೇಕೆಂಬ ಉದ್ದೇಶದಿಂದ ಮದ್ರಾಸ್ ಸರಕಾರವು ಇನ್ನು ಮುಂದೆ ಹೆಚ್ಚಿನ ನೂಲಿನ ಗಿರಣಿಗಳನ್ನು ತೆರೆಯದಂತೆಯೂ ಇದ್ದ ಗಿರಣಿಗಳು ಹೆಚ್ಚಿನ ಕದರುಗಳನ್ನಿಡದಂತೆಯೂ ನಿಷೇಧಿಸಬೇಕೆಂದು ನಿರ್ಧರಿಸಿದೆ.

ಪ್ರಧಾನಿ ಪ್ರಕಾಶಮರು ಈ ಬಾರಿ ಢಿಲ್ಲಿಗೆ ಹೋಗಿದ್ದಾಗ "ಸರಕಾರವು ಎರಡು ಕುದುರೆಗಳ ಮೇಲೆ ಸವಾರಿ ಮಾಡಬಾರದು; ಗಿರಣೀ ಉದ್ಯಮ ವಿಸ್ತರಿಸದಂತೆ ತಡೆಹಾಕಿ ಖಾದೀ ಕೈಗಾರಿಕೆ ಬೆಳೆಯುವಂತೆ ಮಾಡಬೇಕು" ಎಂದು ಮಹಾತ್ಮರು ಉಪದೇಶಿಸಿದಂತೆ ಮಾನ್ಯ ಪ್ರಕಾಶಮರೀ ಯೋಜನೆ ಕೈಗೊಂಡರೆಂದು ತಿಳಿದುಬರುತ್ತದೆ. ಆದರೆ "ಖಾದಿಯ ವೇಲೆ ಗಾಂಧಿಜೀಯಂತೆಯೇ ವಿಶ್ವಾಸವಿದ್ದುದರಿಂದ ಗಿರಣಿಗಳ ಪ್ರಾಬಲ್ಯಕ್ಕೆ ತಡೆಹಾಕುತ್ತೇವಲ್ಲದೆ ಕೇವಲ ಗಾಂಧಿಜೀ ಹೇಳಿದರೆಂದಲ್ಲ" ಎಂದೀಗ ಪ್ರಧಾನಿ ಪ್ರಕಾಶಮರಂದಿದ್ದಾರೆ. ಆದರೆ ಬೇರಾವ ಪ್ರಾಂತೀಕ ಸರಕಾರವೂ ಈ ಧೋರಣೆ ವಹಿಸಿಲ್ಲ.

ಮದ್ರಾಸ್ ಸರಕಾರದ ಈ ಧೋರಣೆಯಿಂದ ಪ್ರಾಂತ್ಯದ ಎಲ್ಲಾ ಮಿಲ್ ಮ್ಯಾಲಕರೂ, ಗಿರಣಿ ಮತ್ತು ವ್ಯಾಪಾರೀ ಸಂಘಗಳೂ, ವ್ಯಾಪಾರ ಶಾಸ್ತ್ರ ಪ್ರವೀಣರೂ ದಿಗಿಲುಗೊಂಡಿದ್ದಾರೆ. ಈ ಹೆಜ್ಜೆ ಅನಾಹುತಕಾರಿಯೆಂದು ಸರ್ವತ್ರ ಟೀಕೆ ನಡೆದಿದೆ.

ಪ್ರಾಂತ್ಯದ ಜನತೆಯು ನಿತ್ಯ ಜೀವನಕ್ಕೆ ಸಂಬಂಧಿಸಿರುವ ಈ ಪ್ರಾಮುಖ್ಯ ಪ್ರಶ್ನೆಯ ಕುರಿತು ಮದ್ರಾಸ್ ಮಂತ್ರಿಮಂಡಲದಲ್ಲೇ ಬಿರುಕು ಉಂಟಾಗಿದೆ. ಬೇಸಾಯ ಮಂತ್ರಿ ಶ್ರೀ. ಪಿ ಎಸ್. ಕುಮಾರ ಸ್ವಾಮಿರಾಜರು ಹಠಕ್ಕೆ ಬಿದ್ದು ನಾಗಿ, ಪ್ರಕಾಶಮರ ಈ ಮಿಲ್ ನಿರ್ಬಂಧ ಸೂಚನೆಯನ್ನು ಬಹಿರಂಗವಾಗಿ ಟೀಕಿಸಿದ್ದಾರೆ. ಆದರೆ 13 ಮಂತ್ರಿಗಳ ಪೈಕಿ 10 ಮಂದಿ ಮಂತ್ರಿಗಳು ಹಾಜರಿದ್ದ ಸಭೆಯಲ್ಲೇ ಈ ನಿರ್ಣಯವು ಸರ್ವಾನುಮತದಿಂದ ಮಂಜೂರಾಗಿತ್ತೆಂದು ತಿಳಿದು ಬರುತ್ತದೆ.

ನೂಲಿನ ಅಭಾವದಿಂದಾಗಿ ಕೈಮಗ್ಗಗಳ ಕೆಲಸಗಾರರು ಎಬ್ಬಿಸಿರುವ ಜೊಬ್ಬಿಯು ಸರ್ವಶ್ರುತವಿದೆ; ಬಟ್ಟೆಯ ಅಭಾವ ವಿರುವದಂತೂ ದಿನನಿತ್ಯದ ಮಾತಾಗಿದೆ; ಜಪಾನು ನೆಲಸಮವಾದುದರಿಂದ ಯುದ್ಧೋತ್ತರ ವ್ಯಾಪಾರದಲ್ಲಿ ವಿಶೇಷ ಅರಿವೆ ನಿರ್ಮಾಣವಾಗುವದು ಲಾಭದಾಯಕವೂ ಆಗತ್ಯವೂ ಇರುವುದರಿಂದ ಮದ್ರಾಸ್ ಸಮೇತ ಇಡೀ ರಾಷ್ಟ್ರದಲ್ಲಿ 700 ಹೊಸ ಮಿಲ್ಲುಗಳು ಅನುಮತಿಗಾಗಿ ಕಾದಿವೆ ಎಂದೂ ತಿಳಿದು ಬರುತ್ತದೆ ಇಂತಹ ಕಾಲದಲ್ಲಿ ಖಾದಿ ಪ್ರೇಮುವೆಂಬ 18ನೇ ಶತಮಾನದ ಧೋರಣೆಗೆ ಕಟ್ಟುಬಿದ್ದು ಮದ್ರಾಸ್ ಸರಕಾರವು ಅನರ್ಥವನ್ನುಂಟುಮಾಡುತ್ತಿದೆ ಎಂಬ ದೂರು ಸರ್ವತ್ರ ಕೇಳಿ ಬರಹತ್ತಿದೆ.

ಇದರ ಪರಿಣಾಮವೇನು?

ಮದ್ರಾಸಿನಲ್ಲಿ ಈಗ ಸಾಕಷ್ಟು ನೂಲಿನ ಗಿರಣಿಗಳಿಲ್ಲ. 31 ಮಿಲಿಯ ಜನರಿರುವ ಬೊಂಬಾಯಿ ಪ್ರಾಂತ್ಯದಲ್ಲಿ 6 ಮಿಲಿಯ ನೂಲಿನ ಕದರು (spindles) ಗಳಿವೆ. ಆದರೆ ಮೈಸೂರು, ತಿರುವಾಂಕೂರು, ಕೊಚ್ಚಿಗಳ ಸಮೇತ 85 ಮಿಲಿಯ ಜನರುಳ್ಳ ಮದ್ರಾಸ್ ಪ್ರಾಂತ್ಯದಲ್ಲಿ 2 ಮಿಲಿಯಕ್ಕೂ ಕಡಿಮೆ ಕದರುಗಳಿವೆ. ದಕ್ಷಿಣ ಪ್ರಾಂತ್ಯದ ಹೆಚ್ಚಿನವು ನೂಲಿನ ಗಿರಣಿಗಳು ಹೊಸತು ನೇಯಿಗೆಯವುಗಳಲ್ಲ. 1945ರಲ್ಲಿ ಬೊಂಬಾಯಿಯು 3300 ಮಿಲಿಯ ಗಜ ಮಿಲ್ ಬಟ್ಟೆಯನ್ನೂ 130 ಮಿಲಿಯ ಗಜ ಮಗ್ಗದ ಬಟ್ಟೆಯನ್ನೂ ತಯಾರಿಸಿದ್ದಿತು ಆದರೆ ಮದ್ರಾಸ್ (ಇಡೀ ದಕ್ಷಿಣ ಭಾಗ) ಈ ಅವಧಿಯಲ್ಲಿ ತಯಾರಿಸಿದ್ದುದು 300 ಮಿಲಿಯ ಗಜ ಮಿಲ್ ಬಟ್ಟೆ, 666 ಮಿಲಿಯ ಮಗ್ಗದ ಬಟ್ಟೆಯನ್ನು ಮಾತ್ರ ಬೊಂಬಾಯಿಯಲ್ಲಿ ಅರಿವೆ ಉಪಯೋಗಕ್ಕೆ ಮಿಕ್ಕಿದ್ದರೂ ಅಲ್ಲಿ ನೇಯಿಗೇ ಮಿಲ್ಲುಗಳನ್ನು ಇನ್ನೂ ಹೆಚ್ಚಿಸಲಾಗುತ್ತಿದೆ; ಮದ್ರಾಸಿನಲ್ಲಿ ವಸ್ತ್ರದ ಅಭಾವವಿದ್ದರೂ ಸರಕಾರವು ಇಂತಹ ಅನಾಹುತಕಾರಿ ಧೋರಣೆವಹಿಸಿದೆ. ಮದ್ರಾಸ್ ಸರಕಾರದ ಖಾದಿ ತಯಾರಿ ಹಂಚಿಕೆಯಾದರೂ ಈ ಕೊರತೆಯನ್ನು ನಿವಾರಿಸುವಂತಿದೆಯೆ? 25 ಫರ್ಕಗಳಲ್ಲಿ ಖಾದಿ ತಯಾರಿಯನ್ನು ಪ್ರಾರಂಭಿಸತಕ್ಕದ್ದೆಂದು ಪ್ರಥಮತಃ ಅದರನಿರ್ಧಾರವಿತ್ತು. ಆದನ್ನೇ ಗಣಿಸಿದರೂ ವರುಷಕ್ಕೆ 14 ಮಿಲಿಯ ಗಜ ಬಟ್ಟೆ ಮಾತ್ರ ತಯಾರಾಗಲು ಸಾಧ್ಯವಿತ್ತು. ಆದರೆ ಈಗ ಸರಕಾರವು 8 ಫರ್ಕಗಳಲ್ಲಿ ಮಾತ್ರ ಖಾದಿ ತಯಾರಿಸಲು ಸಂಕಲ್ಪಿಸಿದೆ. ಇಲ್ಲಿ ಹೆಚ್ಚೆಂದರೆ ೫ ಮಿಲಿಯ ಗಜ ಬಟ್ಟೆ ತಯಾರಾದೀತು,

ಕೇಂದ್ರ ಸರಕಾರದ ೫ ಸ್ಥಾನಗಳನ್ನು ಲೀಗ್ ತಿರಸ್ಕರಿಸಿತು!

ನವಢಿಲ್ಲಿಯಲ್ಲಿ ನಡೆದಿದ್ದ ಕಾಂಗ್ರೆಸ್–ಲೀಗ್ ಒಪ್ಪಂದ ಮಾತುಕತೆಗಳು ಇವೇ ತಾ. 11ರಲ್ಲಿ ಪೂರ್ಣವಾಗಿ ಮುರಿದುಬಿದ್ದುವು. ತಾ. 13ರಲ್ಲಿ ನಡೆದ ಲೀಗ್ ಕಾರ್ಯಕಾರೀ ಸಮಿತಿಯು ನಡುಗಾಲ ಸರಕಾರದಲ್ಲಿ ತನ್ನ ಪಾಲಿಗಿಟ್ಟಿದ್ದ 5 ಸ್ಥಾನಗಳನ್ನು ಅಂಗೀಕರಿಸುವ ನಿರ್ಧಾರಮಾಡಿದೆ. ಮಿ. ಜಿನ್ನೆರೀ ನಿರ್ಣಯವನ್ನು ವೈಸರಾಯರಿಗೆ ತಿಳಿಸಿದ್ದಾರೆ. ಆ ಮೇಲೆ ವೈಸರಾಯರಿಂದ ಆಮಂತ್ರಣ ಬಂದಂತೆ ಮಿ. ಜಿನ್ನೆರೂ, ಲಿಯಾಖತ್ ಅಲೀಖಾನರೂ ವೈಸರಾಯರೊಡನೆ ಸಂಭಾಷಣೆ ನಡಿಸಿ ಬಂದಿದ್ದಾರೆ. ನಡುಗಾಲ ಸರಕಾರದಲ್ಲಿ ಲೀಗಿನ ಪ್ರತಿನಿಧಿಗಳಾರು, ಮತ್ತವರಿಗೆ ಯಾವ ಖಾತೆಗಳು ಎಂಬುದಿದುವರೆಗೆ ಗೊತ್ತಾಗಿಲ್ಲ.

ಢಿಲ್ಲಿಯಲ್ಲಿ ನಡೆದುದೇನು?

ವೈಸರಾಯದಿಂದಾಮಂತ್ರಿಸಲ್ಪಟ್ಟು ಮಿ. ಜಿನ್ನರು ನಾಲ್ಕುಬಾರಿ ಲೋರ್ಡ್ ವೇವೆಲ್ ರೊಡನೆ ಸಂಭಾಷಿಸಿದ್ದರು. ಕೊನೆಯ 10 ದಿನಗಳಲ್ಲಿ ಕಾಂಗ್ರೆಸ್ ಮತ್ತು ಲೀಗುಗಳೊಳಗಿನ ಸಂಧಾನ ಮಾತುಕತೆ ಅವಿಶ್ರಾಂತವಾಗಿ ನಡೆಯಿತು. ಭೋಪಾಲದ ನವ್ವಾಬರು ಕಾಂಗ್ರೆಸ್ ಮತ್ತು ಲೀಗು ಪ್ರಮುಖರ ನಡುವೆ ಒಮ್ಮೊನ್ನೆ ದಿನಕ್ಕೆ ಏಳೆಂಟು ಬಾರಿಯೂ ಓಡಾಡಿದ್ದರು. ಆದರೂ ಕೊನೆಗೆ ಆ ಪ್ರಯತ್ನ ನಿಷ್ಫಲವಾಯಿತು ಇಕ್ಕಡೆಯವರೂ ತಮ್ಮ ಮೊದಲಿನ ಮೂಲ ಭೂತ ತತ್ವಗಳನ್ನು ಎಳ್ಳಷ್ಟು ಬಿಟ್ಟುಕೊಡದೆ ಅಚಲರಾಗಿದ್ದರೆಂದು ನಂಬಲಾಗಿದೆ. ಕೊನೆಗೆ ವೈಸರಾಯರು ಆಗೋಸ್ತು 24ರಲ್ಲಿತ್ತಿದ್ದ ಆಶ್ವಾಸನೆಯೊಂದನ್ನೇ ಆಧರಿಸಿ ನಡುಗಾಲ ಸರಕಾರದ 5 ಸ್ಥಾನಗಳನ್ನು ಸ್ವೀಕರಿಸಿಕೊಳ್ಳುವದೆಂದೇ ಮುಸ್ಲಿಂ ಲೀಗ್ ನಿರ್ಧರಿಸಿತು.

ವೈಸರಾಯರಾಡಿದ್ದುದೇನು?

ಪಂಡಿತ ನೆಹರುಗಳಿಗೆ ನಡುಗಾಲ ಸರಕಾರ ರಚಿಸುವ ಹೊಣೆಯೊಪ್ಪಿಸುತ್ತಾ ಆಗೋಸ್ತು 24ರಲ್ಲಿ ವೈಸರಾಯರಿತ್ತಿದ್ದ ಆಕಾಶವಾಣೀ ಭಾಷಣದಲ್ಲಿ ಹೀಗಂದಿದ್ದರು: "೧) ಕಾಂಗ್ರೆಸ್ ನೇಮಿತ ಪ್ರತಿನಿಧಿಗಳೂ ೨ ಅಲ್ಪ ಸಂಖ್ಯಾಕ ಪ್ರತಿನಿಧಿಗಳೂ ಇರುವ 14 ಮಂದಿಯ ಸರಕಾರದ ಉಳಿದ 5 ಸ್ಥಾನಗಳಿಗೆ ಮುಸ್ಲಿಂ ಲೀಗು ತನ್ನ ಹೆಸರನ್ನು ನನಗೆ ಸೂಚಿಸಬಹುದು. ನನಗೂ ಸಾಮ್ರಾಟ ಸರಕಾರಕ್ಕೂ ಆ ಹೆಸರುಗಳು ಸಮ್ಮತವಾದರೆ ಅವರನ್ನು ಸೇರಿಸಿಕೊಂಡು ಕೂಡಲೇ ಸರಕಾರವನ್ನು ಬದಲಾಯಿಸಿಕೊಳ್ಳಲಾಗುವದು. ಯಾವುದೇ ಮುಖ್ಯ ಪ್ರಶ್ನೆಯಲ್ಲಿ ತಾನು ಅಲ್ಪ ಸಂಖ್ಯಾಕನಾಗುತ್ತೇನೆಂದು ಲೀಗ್ ಹೆದರ ಬೇಕಾಗಿಲ್ಲ. ಒಂದು ಸಮ್ಮಿಶ್ರ ಸರಕಾರವು, ಅದರೊಳಗಿನ ಎರಡು ಮುಖ್ಯ ಪಕ್ಷಗಳ ಸಮ್ಮತಿಯ ಶರತ್ತೊಂದರಿಂದಲೇ ಬಾಳುವದಕ್ಕೂ ಕಾರ್ಯ ನಿರ್ವಹಿಸುವದಕ್ಕೂ ಸಾಧ್ಯ. ಆತಿ ಮುಖ್ಯ ಖಾತೆಗಳು ಸಮಾನವಾಗಿ ಹಂಚಲ್ಪಡುವಂತೆ ನಾನು ನೋಡುವನಿನ್ನಿದ್ದೇನೆ".

ಹಾಗಾದರೆ ಮುಂದೇನು?

ಮುಖ್ಯ ಖಾತೆಗಳಲ್ಲಿ ಸಮಾನ ಪಾಲು ದೊರೆಯಲಿದೆ ಮತ್ತು ತಮ್ಮ ಸದಸ್ಯರ ಸಮ್ಮತಿ ಏನಹಾ ಸರಕಾರದಲ್ಲಿ ಪ್ರಾಮುಖ್ಯ ತೀರ್ಮಾನವಾಗಲಾರದು ಎಂಬ ಆಶೆ ಕಟ್ಟಿಕೊಂಡು ಲೀಗ್ ಈಗ ನಡುಗಾಲ ಸರಕಾರ ಪ್ರವೇಶಿಸಲಿದೆ. ಕಾನೂನು ಬದ್ಧವಾಗಿ ಖಾತೆಗಳನ್ನು ಹಂಚುವ ಜವಾಬ್ದಾರಿಯು ವೈಸರಾಯರದ್ದೇ. ಆದರೆ ಒಪ್ಪಂದಾನುಸಾರ ಪಂಡಿತ ನೆಹರುಗಳೇ ಆ ಕಾರ್ಯವನ್ನು ಮಾಡಿದ್ದಾರು. ವೈಸರಾಯರೀಗ ಆ ಒಪ್ಪಂದವನ್ನು ಮುರಿದುಕೊಂಡು ತಾನೇ ಖಾತೆಗಳ ವಿತರಣೆಗೆ ತೊಡಗುವರೆ? ಬದಲಿಗೆ ಸದ್ಯದ ಮಂತ್ರಿಗಳ ಮನಸ್ಸೊಲಿಸಿಯೇ ಕಾರ್ಯ ಮಾಡಲು ಅವರು ಪ್ರಯತ್ನಿಸಬಹುದು. ಗೃಹ, ಉದ್ಯಾನು ಮತ್ತು ಸರಬರಾಯಿ ಹಾಗೂ ವಾಹನ ತಂತ್ರ ಖಾತೆಗಳು ತಮಗೆ ಸಿಗಬೇಕೆಂದು ಲೀಗ್ ಆಗ್ರಹಪಡುತ್ತಿದೆಯಂತೆ ವಿದೇಶ ಸಂಬಂಧ, ರಕ್ಷಣೆ, ವ್ಯಾಪಾರ ಮತ್ತು ಆರ್ಥ ಖಾತೆಗಳು ಪ್ರಸ್ತುತ ಮಂತ್ರಿಗಳ ಕೈಬಿಡುವ ಪ್ರಶ್ನೆಯಿಲ್ಲ. ಎಲ್ಲಕ್ಕಿಂತ ಮುಖ್ಯವಾದುದೆಂದರೆ ಮಂತ್ರಿಮಂಡಲದ ಮಿಶ್ರ ಜವಾಬ್ದಾರಿ. ಯಾವುದೇ ವಿಷಯದಲ್ಲಿ ಲೀಗ್ ಪಕ್ಷೇಯ ಸದಸ್ಯರ ಸಮ್ಮತಿ ಬೇಕೆಂಬ ಶರ್ತವುಳಿದರೆ ಸರಕಾರದ ಕಾರ್ಯವು ಸುಗನುವಾಗಿ ಸಾಗದೆ, ಪ್ರತಿ ಬಾರಿಯೂ ತಿಕ್ಕಾಟವೆದ್ದು ವೈಸರಾಯರು ತನ್ನು ವಿಶೇಷಾಧಿಕಾರ ಉಪಯೋಗಿಸುವ ಸಂದರ್ಭಗಳು ಆಗಾಗ ಬರಬಹುದು; ಪರಿಣಾಮವಾಗಿ ಯಾವ ದಾದರೊಂದು ಪಕ್ಷ ಹೊರಬೀಳಬೇಕಾಗಿರಿದು. ಈ ಕುರಿತ ಯಾವ ವ್ಯವಸ್ಥೆಯಾಗಲಿದೆ ಎಂಬುದನ್ನು ಕಾಣಲಿಕ್ಕಿದೆ. ಕಾಂಗ್ರೆಸ್ ಪ್ರಮುಖರು ಗಾಂಧೀಜಿಯೊಡನೆ ಗಾಢ ಸಂಭಾಷಣೆ ನಡೆಸಿದ್ದಾರೆ. ಕಾಂಗ್ರೆಸ್ ಕಾರ್ಯಕಾರೀ ಸಮಿತಿಯೂ ಕೂಡಲಿಕ್ಕಿದೆ. ಲೀಗ್ ಪರವಾಗಿ ಮುಂಬಯ ವ್ಯವಹಾರಾಧಿಕಾರಿ ಮಿ. ಜಿನ್ನರಿಗೆ ದೊರೆತಿದ್ದರೂ ಆವರೂ ತನ್ನ ಕಾರ್ಯಕಾರೀ ಸಮಿತಿಯನ್ನು ಕರೆಯಲಿದ್ದಾರೆ.

ಜಾಗತಿಕ ಸಂಘಕ್ಕೆ ಹಿಂದೀ ಪ್ರತಿನಿಧಿಗಳು

ನ್ಯೂಯೋರ್ಕಿನಲ್ಲಿ ಸೇರಲಿರುವ ಜಾಗತಿಕ ಸಂಘದ ಮಹಾ ಸಭೆಗೆ ಹಿಂದೀ ರಾಷ್ಟ್ರೀಯ ಸರಕಾರದ ಪ್ರತಿನಿಧಿಗಳಾದ ವಿಜಯಲಕ್ಷ್ಮಿ ಪಂಡಿತ್, ಚಾಗ್ಲ, ಮಹಾರಾಜಾ ಸಿಂಗ್, ಫ್ರೇಂಕ್ ಅಂತೋನಿ, ನವಾಬ್ ಅಲೀಯವಾರ್ ಜಂಗ್, ಕೆ. ಪಿ. ಎಸ್. ಮೆನನ್, ದೇಶಮುಖ್, ಕೃಷ್ಣ ಮೆನನ್, ಪಿ ಎನ್. ಸಪ್ರುಗಳೂ ಸಲಹೆಗಾರರಾದ ಆರ್. ಎನ್. ಬ್ಯಾನರ್ಜಿ, ಎಸ್. ಎ. ಲಲರೂ ನ್ಯೂಯೋರ್ಕಿಗೆ ಹೊರಟಿದ್ದಾರೆ ಅಲ್ಲಿಯೇ ದಕ್ಷಿಣಾಫ್ರಿಕದ ಹಿಂದೀಯರ ಪರಿಸ್ಥಿತಿ ಚರ್ಚೆಗೆ ಬರಲಿದೆ.

ನಾಜೀ ಅಪರಾಧಿಗಳಿಗೆ ಫಾಶಿ

ಗೋರಿಂಗ್, ಮೊದಲಾದ ನಾಜೀ ಪ್ರಮುಖರು ಮಾಡಿದ ಅಪ್ಪೀಲು ಕೂಡಲೇ ನಿರಾಕರಿಸಲ್ಪಟ್ಟು, ನೂರೆಂಟರ್ಗ್ ಕೋರ್ಟು ತೀರ್ಮಾನದಂತೆ ಇಂದೇ ತಾ. 16ರಲ್ಲಿ ಅವರೆಲ್ಲಾ ಗಲ್ಲಿಗೇರಿಸಲ್ಪಟ್ಟರೆಂದು ತಿಳಿದುಬರುತ್ತದೆ.

ಹೈರಿಸಿನಲ್ಲಿ

ಕಳೆದ ಹೆನ್ನೊಂದು ವಾರಗಳಿಂದ ನಡೆಯುತ್ತಿರುವ ರಾಂತಿ ಸಮ್ಮೇಲನದ ಕಾರ್ಯಗಳು ಕೊನೆಯ ಭಾಗದಲ್ಲಿ ವಿಶೇಷ ಗಲಭೆಗಳಿಲ್ಲದೆ ನಾನಿವೆ ಏಕ್ಸಿಸ್ ರಾಷ್ಟ್ರಗಳ ಹಿಂದಿನ ಮಿತ್ರರಾಷ್ಟ್ರಗಳ ಸಂಬಂಧ ನಿರ್ಮಾದವೇ ಈ ಪರಿಷತ್ತಿನ ಕಾರ್ಯಕ್ರಮ. ಯುರೋಪಿನಲ್ಲಿ ಅಲ್ಪಸ್ವಲ್ಪ ಗಡಿ ಬದಲಾವಣೆಗಳುಳ್ಳ ಒಪ್ಪಂದ ಸೂತ್ರಗಳು ಪರಿಷತ್ತಿನಲ್ಲಿ ತಯಾರಾಗಿವೆ ಎಂದೂ ತಿಳಿದು ಬರುತ್ತದೆ.

ಬೆಂಗಳೂರಿನಲ್ಲಿ ಗಲಭೆ

ಇದೇ ತಾ. 11ರಲ್ಲಿ ಬೆಂಗಳೂರಿನಲ್ಲಿ ಹಿಂದೂ ಮುಸ್ಲಿಂ ಗಲಭೆ ನಡೆದು ಒಬ್ಬನಿಗೆ ಮೂವರು ಮಡಿದು ಹಲವರು ಜಖಂಗೊಂಡ ವರ್ತೆ ಬಂದಿದೆ ಈ ಕುರಿತು ಕಲೆಕ್ಟರರ ವರದಿ ಬೀಗಿದೆ. ಬೆಂಗಳೂರಿನ ಶ್ರೀ ಟೋಕೀಸಿನಲ್ಲಿ ಮುಸ್ಲಿಂರೆಜಿಮೆಂಟ್ ಸ್ಥಿರಯಾಗಿ ಒಂದು ಪ್ರದರ್ಶನವಿಟ್ಟಿದ್ದರಂತೆ. ಇದನ್ನು ವಿಕ್ಷಣೆ ಮಾಡಲು ಹೋಗಿದ್ದ ಕೆಲವ್ಯ ಮುಸಲ್ಮಾನರು ಸೆಪ್ಟೆಂಬ್ರೋಡಿಗೆ ಬಂದಾಗ ಅಪ್ಪಿಪ್ಪವಷ್ಟಿಹಿಡನೆ ಜಗಳವೆದ್ದು ಒಬ್ಬನು ಅಪ್ಪಿಯೆ ಚಾಕುವಿಂದ ತಿವಿಯಲ್ಪಟ್ಟು ಸತ್ತಿದ್ದಷ್ಟೆ ಸಾಲ್ದಾರು ಮಂದಿಗೆ ಜಖಮಾಯಿತು. ವಸ್ತ್ರೊಂದು ಬೀದಿಯ ಒಟ್ಟ ವ್ಯಾಪಾರಿಮಳಿಗೆಗಳೂ ತಿವಿದು ಕೊಳ್ಳಲಾಯಿತು. ಸಾಕಾಯ್ತು ಪಿಳ್ಳೆ ಬೀದಿಗುಲ್ಲೂ ಇಟ್ಟರಿಗೆ ಜೊತೆಯವಾಗಿ ಒಬ್ಬನು ಮಡಿದು ಮತ್ತೊಬ್ಬನಿಗೆ ತೀವ್ರ ಜಖಮಾಗಿದೆ. ಅಷ್ಟರಲ್ಲಿಗೆ ಕರ್ಫ್ಯೂ ಜಾರಿಗೆ ಬಂದಿದ.

ಚಂದಾದಾರರಲ್ಲಿ

ಈ ಬಾರಿ ಪ್ರತಿಚಂದಾದಾರರಿಗೂ ಹೊಸ ಚಂದಾನಂಬ್ರವನ್ನು ಕೊಡಲಾಗಿದೆ. ಇನ್ನು ಮುಂದೆ ನಮ್ಮೊಡನೆ ಪತ್ರವ್ಯವಹಾರಮಾಡುವಾಗ ಈ ಹೊಸ ನಂಬ್ರವನ್ನೇ ಸೂಚಿಸಬೇಕಾಗಿಯೂ ಹೊಸತಾಗಿ ವಿಳಾಸ ಸ್ಪಿಂಟುಮಾಡುವಾಗ ಏನಾದರೂ ವ್ಯತ್ಯಾಸವಾಗಿದ್ದರೆ ಅದನ್ನು ತಿಳಿಸಬೇಕಾಗಿಯೂ ಈ ಮೂಲಕ ಕೇಳಿಕೊಳ್ಳೋಣಾಗುತ್ತದೆ.

–ಮೆನೇಜರ್.

ಅನ್ನ ಸತ್ಯಾಗ್ರಹ– ಉಡುಪಿಯ ೫೦ ಮಜೂರರ ಪೈಕಿ ಏಳರಿಗೆ ಮ್ಯಾಲಳಕಿಂದ ಅನ್ಯಾಯವಾಯಿತೆಂದು ಇಬ್ಬರು ಬೀಡಿ ಮಜೂರರು ತಾ. 14ರಲ್ಲಿ ಶ್ರೀ ಸುಬ್ರಾಯ ತ್ಯಾನುಭಾಗರ ಅಂಗಡಿಯಿದುರು ಅನ್ನ ಸತ್ಯಾಗ್ರಹವನ್ನು ಕೈಕೊಂಡರು. ತಾ. 15ರಲ್ಲಿ ಸಂಜೆ ಸಂಧ್ಯಸ್ಥಿಕೆ ಪಂಚಾಯತರ ತೀರ್ಮಾನಕ್ಕೆ ಬೀಡಿ ಮ್ಯಾಲಕರೂ ಮಜೂರ ಪ್ರತಿನಿಧಿಗಳೂ ಒಪ್ಪಿಗೆಯುತ್ತಮುಂದೆ ಆವೇ ದಿನ ನಂಜೆ ಅನ್ನ ಸತ್ಯಾಗ್ರಹ ನಿಲ್ಲಿಸಲಾಯಿತು. ತಾ. 21ರಲ್ಲಿ ದಕ್ಷಿಣ ಕನ್ನಡ ಮತ್ತು ಸುಲಬಾರು ಜಲ್ಲೆಗಳ ಬೀಡಿ ಮಜೂರರ ಒಮ್ಮತದ ಮುಷ್ಕರವಿಯಂತೆ.

ಮ. ಕ. ಜಿಲ್ಲಾ ಬೋರ್ಡು ಚುನಾವಣೆ.

ಮ. ಕ. ಜಿಲ್ಲಾ ಬೋರ್ಡು ಚುನಾವಣೆಗೆ ನಾಮಪತ್ರಗಳನ್ನು ಹಾಕುವ ತಾರೀಕನ್ನು ನವಂಬರ ತಿಂಗಳ 25–26ಕ್ಕೂ ಚುನಾವಣೆಯ ತಾರೀಕನ್ನು ದಶಂಬ್ರ ತಿಂಗಳ 16ಕ್ಕೂ ಸರಕಾರದವರು ಮುಂದರಿಸಿರುತ್ತಾರೆ. ದ ಕ. ಜಿಲ್ಲಾ ಗ್ರಾಮೋದ್ಧಾರ ಸಂಘದ ಕಡೆಯಿಂದ ಜಿಲ್ಲಾ ಬೋರ್ಡಿಗೆ ಉಮೇದ್ವಾರರನ್ನು ಆರಿಸುವ ಬಗ್ಗೆ ಆರಿಸಲ್ಪಟ್ಟ ಕೇಂದ್ರ ಸಮಿತಿಯ ಸಭೆಯು ಆಯಾಯ ತಾಲೂಕಿನಿಂದ ಆಯಾಯ ತಾಲೂಕಿನ ಉಮೇದ್ವಾರರನ್ನು ಆರಿಸುವ ಬಗ್ಗೆ ಮಾತ್ರ 4 ಮಹನೀಯರನ್ನು ಕೂಡಿಸಿಕೊಳ್ಳುವ ಬಗ್ಗೂ ಉಮೇದ್ವಾರರನ್ನು ಆರಿಸುವುದರ ವಿಷಯ ಇತರ ಕಾರ್ಯಕ್ರಮಗಳನ್ನು ಕೈಕೊಳ್ಳುವ ಬಗ್ಗೂ ಇದೇ ತಿಂಗಳ ತಾ. 20ನೇ ಆದಿತ್ಯವಾರ ಸಾಯಂಕಾಲ 4-30 ಘಂಟೆಗೆ ಮಂಗಳೂರಿನ ಎಸ್. ಆರ್. ಎಸ್. ಹೋಟಿನಲ್ಲಿ ಜರಗುವುದು. ಸಂಘದ ಕಡೆಯಿಂದ ಬರುವ ಜಿಲ್ಲಾ ಬೋರ್ಡು ಚುನಾವಣೆಗೆ ನಿಲ್ಲಲು ಅಪೇಕ್ಷೆಯುಳ್ಳ ಮಹನೀಯರು ಆನಂತರ ಈ ಸಂಘದ ಕೇಂದ್ರ ಸಮಿತಿಗೆ ಬರೆದು ಬೇಕಾವ ಮಾಹಿತಿಗಳನ್ನು ಪಡೆದುಕೊಳ್ಳಬಹುದು.

14-10-46 ಎಂ. ಎಸ್. ಆಧಿಕಾರಿ,
ಕಾರ್ಕಳ ಕನ್ವೀನರ್.

ಪ್ರಾಂತ್ಯದ ಜನಸಂಖ್ಯೆಯನ್ನು ಗಣಿಸಿದರೆ ವಯಸ್ಕರೊಬ್ಬನಿಗೆ ಒಂದು ಗಜದ 1/10 ನೇ ತುಂಡು ಬಟ್ಟೆ ಸಿಕ್ಕುವಂತಾಗುತ್ತದೆ. ಒಬ್ಬನಿಗೆ ವಯಸ್ಕಕ್ಕೆ 12ರಿಂದ 18 ಗಜ ಬಟ್ಟೆಯಾದರೂ ಬೇಕೆಂಬುದೇ ಯುದ್ಧೋತ್ಪತ್ತಿಕಾಲದ ಮಿತಯೋಜನೆ. ಮದ್ರಾಸ್ ಸರಕಾರದ ಖಾದೀ ಯೋಜನೆ ಜಯಶೀಲವಾಗದಿದ್ದರೆ, ಇತ್ತ ಗಿರಣಿಗಳ ಅಭಿವೃದ್ಧಿಗೆ ತಡೆಬಿದ್ದು ಜಾಡ್ಯತಾಗಿದರೆ, ಈ ಭಾಗದಲ್ಲಿ ಮುಂದುವರಿದ ಇತರ ಪ್ರಾಂತ್ಯಗಿಳೂ ರಾಸ್ತ್ರಗಳೂ ಇಲ್ಲಿಗೆ ಅರಿವೆ ಸಾಗಿಸಿ ಆ ಪ್ರಯೋಜನವನ್ನು ತಾವು ಹೊಂದುವ ಸಂಭವವಿದೆ. ಆದ್ದರಿಂದ ಮದ್ರಾಸಿನ ಕಾಂಗ್ರೆಸ್ ಸರಕಾರದ ಖಾದಿ ಗ್ರಾಮೋದ್ಯ ಪ್ರಾಂತ್ಯದ ಆರ್ಥಿಕಾಭಿವೃದ್ಧಿಗೆ ಪ್ರಬಲ ಧಕ್ಕೆ ಬಡ್ಡಿಸ್ಥಾಪಿಸುವ ಅವಶ್ಯವಿದೆ ಪ್ರಾಂತ್ಯದ ಬಹುಮತವು ಸರಕಾರದ ಈ ನವಧೋರಣೆಗೆ ಬದ್ಧವಿರೋಧವಿರುವದರಿಂದ ಸರಕಾರವು ಸಕಾಲದಲ್ಲಿ ತನ್ನ ತಪ್ಪನ್ನು ತಿದ್ದಿಕೊಳ್ಳುವದೆಂದು ನಂಬಲಾಗಿದೆ.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ
ತಾರೀಕು 17–10–1946ರಿಂದ
ಇನ್ ಓಲ್ಡ್ ಕೆಲಿಫೋರ್ನಿಯಾ
ಮುಂದಿನ ಬದಲಾವಣೆ—
ಯಾವ್—ಮಜಾರ್ ಖಾನ್, ವೀಣಾ, ಅಜೂರಿ.

ತಾ. 6—10—1946ನೇ ಆದಿತ್ಯವಾರ ಅಪರಾಹ್ನ 2 ಗಂಟೆಗೆ ಶ್ರೀಯುತ ಕೆ ಬಿ. ಜಿನರಾಜ ಹೆಗ್ಡೆರ ಅಧ್ಯಕ್ಷತೆಯಲ್ಲಿ ಜರಗಿದ

ದ. ಕ. ಜಿಲ್ಲಾ ಕಾಂಗ್ರೆಸು ಕೆಲಸಗಾರರ ಪರಿಷತ್ತಿ

ನಲ್ಲಿ ಸ್ವಾಗತ ಕಮಿಟಿಯ ಅಧ್ಯಕ್ಷರಾದ ಶ್ರೀಯುತ ಕೆ. ಮಹಾಬಲ ಹೆಗ್ಡೆರು ಕೊಟ್ಟ ಭಾಷಣದ ಭಾಗ.

ಸ್ನೇಹಿತರೇ, ಜರಗಲಿರುವ ಜಿಲ್ಲಾ ಬೋರ್ಡು ಚುನಾವಣೆಯಲ್ಲಿ ನಮ್ಮ ಹಳ್ಳಿಗಳಿಗೆ ಬೋರ್ಡಿನ ಮುಖಾಂತರ ದೊರೆಯಬಹುದಾದ ಎಲ್ಲಾ ಅನುಕೂಲತೆಗಳನ್ನು ಒದಗಿಸಿಕೊಡಲು ಸಾಕಷ್ಟು ದಕ್ಷತೆಯುಳ್ಳ ಉಮೇದ್ವಾರರೇ ಆರಿಸಿಬರಬೇಕೆಂದು ನಾವು ಬಯಸುತ್ತೇವೆ ನಮ್ಮ ಜಿಲ್ಲಾ ಕೋಂಗ್ರೆಸು ಕಮಿಟಿಯು ಈ ಸಲ ಕೋಂಗ್ರೆಸು ಪಕ್ಷದಿಂದ ಉಮೇದ್ವಾರರನ್ನು ಸ್ಥಳೀಯ ಸಂಸ್ಥೆಗಳಿಗೆ ನಿಲ್ಲಿಸುವುದಿಲ್ಲವೆಂದು ನಿರ್ಣಯಿಸಿರುತ್ತದೆಯಾದರೂ ಜಿಲ್ಲೆಯ ಮತದಾರರು ತಮ್ಮ ವಿವೇಕ ಮತ್ತು ಚಾತುರ್ಯತೆಯನ್ನು ಉಪಯೋಗಿಸಿ ಸ್ಥಳೀಯ ಸಂಸ್ಥೆಗಳಿಗೆ ಯೋಗ್ಯ ಪ್ರತಿನಿಧಿಗಳನ್ನು ಆರಿಸಬೇಕೆಂಬ ತನ್ನ ಅಭಿಪ್ರಾಯವನ್ನು ಅದು ಸ್ಪಷ್ಟಪಡಿಸಿರುತ್ತದೆ. ಅಂದ ಮೇಲೆ ಕೋಂಗ್ರೆಸು ಧ್ಯೇಯಕ್ಕನುಸಾರವಾಗಿ ಬೋರ್ಡಿನ ಕಾರ್ಯವನ್ನು ನರ್ವಹಿಸಬಲ್ಲ ಸದಸ್ಯರೇ ಜಿಲ್ಲಾ ಬೋರ್ಡಿನಲ್ಲಿರಬೇಕೆಂಬ ಉದ್ದೇಶ ಜಿಲ್ಲಾ ಕಮಿಟಿಗಿದೆಯೆಂದು ಪ್ರತ್ಯೇಕ ಹೇಳಬೇಕಾಗಿಲ್ಲ. ಆದರೆ ಅದಕ್ಕಾ ಯೋಗ್ಯ ಉಮೇದ್ವಾರರು ಪ್ರತಿ ಕೇಂದ್ರಪ್ರದೇಶದಲ್ಲಿಯೂ ಚುನಾವಣೆಗೆ ನಿಂತರೇನೇ ಇದು ಸಾಧ್ಯ; ಇಲ್ಲದಿದ್ದರೆ ಸಾಧ್ಯವಲ್ಲವೆಂಬುದು ಸ್ವಯಂವ್ಯಕ್ತ. ಈ ಕಾರ್ಯವನ್ನು ಆಯಾಯ ಉಮೇದ್ವಾರರಿಗೆನೇ ಬಿಟ್ಟುಬಿಡುವುದಕ್ಕಿಂತ ಪ್ರತಿ ಕೇಂದ್ರಪ್ರದೇಶದಲ್ಲಿಯೂ ಅಂತಹ ಸೂಕ್ತ ಉಮೇದ್ವಾರನನ್ನು ಆರಿಸಿ ನಿಲ್ಲಿಸುವ ಕಾರ್ಯವನ್ನು ಜಿಲ್ಲೆಯ ಕೆಲಸಗಾರರು ನಿರ್ವಹಿಸುವುದು ಜಿಲ್ಲೆಯ ಸಾಮೂಹಿಕ ಹಾಗೂ ಪ್ರತಿ ಉಮೇದ್ವಾರನ ಹಿತದೃಷ್ಟಿಯಿಂದ ಸಹಾ ಲೇಸೆಂದು ನಮಗೆ ಅನ್ನಿಸುತ್ತಿದೆ. ಆದಾದರಿಂದಲೇ ಈ ಕಾರ್ಯವನ್ನು ಹೇಗೆ ಸಾಧಿಸಬಹುದು, ಮತ್ತು ಈ ವಿಷಯದಲ್ಲಿ ನಾವು ಏನು ಮಾಡತಕ್ಕದ್ದು ಎಂಬೆಲ್ಲಾ ಸಂಗತಿಗಳನ್ನು ತೀರ್ಮಾನಿಸಲಿಕ್ಕಾಗಿಯೇ ನಾವು ಜಿಲ್ಲೆಯ ಕೇಂದ್ರ ಸ್ಥಳವಾದ ಈ ಕಾರ್ಕಳದಲ್ಲಿ ಜಿಲ್ಲಾ ಕೋಂಗ್ರೆಸು ಕೆಲಸಗಾರರ ಈ ಪರಿಷತ್ತನ್ನು ಕರೆದುದಾಗಿರುತ್ತದೆ.

ಜಿಲ್ಲಾ ಕೋಂಗ್ರೆಸು ಕಮಿಟಿಯ ನಿರ್ಧಾರಕ್ಕೆ ವಿರೋಧವಾಗಿ ನಾವು ಈ ಕಾರ್ಯವನ್ನು ಕೈಗೊಂಡಿರುವೆವೋ ಎಂಬ ಸಂಶಯವು ಕೆಲವರಲ್ಲಿ ಕಲೆದೋರಿರುವಂತೆ ಕಂಡುಬರುತ್ತದೆ. ಜಿಲ್ಲಾ ಕೋಂಗ್ರೆಸಿನ ಧ್ಯೇಯ, ಕಾರ್ಯಕ್ರಮ, ವಿಶಿಸ್ಟಿಗೆ ವಿರೋಧವಾಗಿ ಈ ಪರಿಷತ್ತನ್ನು ಜರಗಿಸಿದುದಲ್ಲವೆಂದು ನಾನು ಇಲ್ಲಿ ಸ್ಪಷ್ಟವಾಗಿ ಹೇಳಬೇಕಾಗಿದೆ. ಈ ಪರಿಷತ್ತನ್ನು ಕರೆದಿರುವ ನಾವೆಲ್ಲರೂ ಕೋಂಗ್ರೆಸಿನ ಅಖಂಡ ಭಕ್ತರಿದ್ದೇವೆ. ಕೋಂಗ್ರೆಸಿನ ಗೌರವಕ್ಕೆ ಧಕ್ಕೆ ತರುವ ಯಾವುದೊಂದು ಕಾರ್ಯಗಳಿಗೆ ನಾವು ಕೈ ಹಚ್ಚುವವರಲ್ಲ. ಜಿಲ್ಲಾ ಬೋರ್ಡಿನಲ್ಲಿ ಯೋಗ್ಯ ಸದಸ್ಯರಿರಬೇಕೆಂಬ ಜಿಲ್ಲಾ ಕೋಂಗ್ರೆಸು ಕಮಿಟಿಯ ಉದ್ದೇಶವನ್ನು ಕಾರ್ಯರೂಪದಲ್ಲಿ ತರುವುದಕ್ಕಾಗಿಯೇ ನಾವು ಈ ಕಾರ್ಯಕ್ರಮವನ್ನು ಕೈಗೊಂಡಿರುತ್ತೇವೆ. ನಮ್ಮ ಈ ಪ್ರಯತ್ನವನ್ನು ಸ್ಥಾಪಿಸಿ ಜಿಲ್ಲಾ ಕೋಂಗ್ರೆಸು ಕಮಿಟಿಯ ಸದಸ್ಯರಲ್ಲಿ ಕೆಲವರ ಪತ್ರಗಳೂ ನಮಗೆ ಬಂದಿರುತ್ತವೆ. ಶ್ರೀಮಾನ್ ಕೆ. ಬಿ. ಜಿನರಾಜ ಹೆಗ್ಡೆಯವರು ಅಧ್ಯಕ್ಷರಾಗಿರುವುದೂ, ನಮ್ಮ ಜಿಲ್ಲೆಯ ಕೋಂಗ್ರೆಸ್ ಎಸೆಂಬ್ಲಿ ಮೆಂಬರರು ಮತ್ತು ಕೋಂಗ್ರೆಸು ಧುರೀಣರು ಅನೇಕರು ಈ ಪರಿಷತ್ತಿನಲ್ಲಿ ಭಾಗವಹಿಸಲಿಕ್ಕಾಗಿ ಬಂದಿರುವುದೂ ಇದಕ್ಕೆ ನಿದರ್ಶನವಾಗಿರುತ್ತವೆ.

ಇನ್ನೊಂದು ಪ್ರಶ್ನೆಯೆಂದರೆ:—ಕೋಂಗ್ರೆಸು ಕೆಲಸಗಾರರೆಂದರೆ ಯಾರು? ಎಂದು. ಪ್ರಕೃತ ಕೋಂಗ್ರೆಸು ಸದಸ್ಯರಾಗಿರಲಿ ಯಾ ಇಲ್ಲದಿರಲಿ, ಕೋಂಗ್ರೆಸಿನ ಧ್ಯೇಯ ಮತ್ತು ರಚನಾತ್ಮಕ ಕಾರ್ಯಗಳಲ್ಲಿ ವಿಶ್ವಾಸವಿಡ್ಡು, ಅವುಗಳಲ್ಲಿ ಕೆಲವನ್ನಾದರೂ ಯಾ ತರಲಿಚ್ಚಿಸುವವನನ್ನು ನಾವು ಕೋಂಗ್ರೆಸು ಕೆಲಸಗಾರನೆಂದು ಉದ್ದೇಶಿಸಿರುತ್ತೇವೆ. ಕೋಂಗ್ರೆಸಿನ ಕೆಲವೇ ಕಾರ್ಯಕ್ರಮಗಳನ್ನು ನಾತ್ರ ಕೈಗೊಳ್ಳುವವರಿಗೂ ಕೋಂಗ್ರೆಸು ಕೆಲಸ ಮಾಡಲಿಕ್ಕೆ ಆಸ್ಪದಕೊಡುವುದಕ್ಕಾಗಿ ಜಿಲ್ಲಾ ಕೋಂಗ್ರೆಸು ಕೆಲಸಗಾರರ ಸಂಘ ಒಂದನ್ನು ಸ್ಥಾಪಿಸುವುದು ಅಗತ್ಯವೆಂತ ನಾವು ಅಭಿಪ್ರಾಯಪಡುತ್ತೇವೆ. ಈ ತನಕ ಕೋಂಗ್ರೆಸು ಸದಸ್ಯರಾಗಿರದವರು ಇನ್ನು ಮೇಲಾದರೂ ಕೋಂಗ್ರೆಸು ಸದಸ್ಯರಾಗಿ ಕೋಂಗ್ರೆಸಿನ ರಚನಾತ್ಮಕ ಹಾಗೂ ಸಾಮಾಜಿಕ ಕಾರ್ಯಕ್ರಮಗಳಲ್ಲಿ ಕೆಲವನ್ನಾದರೂ ಕೈಗೊಳ್ಳುವವರು ಈ ಸಂಘದ ಸದಸ್ಯರಾಗಲು ಸಾಧ್ಯವಿದೆ ಈ ಸಂಘದ ಸದಸ್ಯರು ಜಿಲ್ಲೆಯ ಅಥವಾ ಪ್ರಾಂತಿಕ ಕೋಂಗ್ರೆಸ್ಸು ಕಮಿಟಿಗಳ ಸದಸ್ಯರಾಗಬೇಕೆಂದು ಅಧಿಕಾರಸ್ಥಾನಗಳಿಗೆ ಹೋರಾಡದೆ ಕೇವಲ ಸೇವೆಯ ದೃಷ್ಟಿಯಿಂದ ಕೋಂಗ್ರೆಸು ಕಾರ್ಯಕ್ರಮಗಳನ್ನು ಮುಂದುವರಿಸುತ್ತಿರಬೇಕೆಂದು ನಮ್ಮ ಕೋರಿಕೆಯಾಗಿರುತ್ತದೆ.

ಈಗ ಸ್ಥಾಪಿಸಬೇಕಾಗಿ ನಾವು ಹೇಳುವ ಈ ಕೋಂಗ್ರೆಸು ಕೆಲಸಗಾರರ ಸಂಘವು ಜಿಲ್ಲಾ ಬೋರ್ಡು ಮುನ್ಸಿಪಾಲಿಟಿ ಮತ್ತು ಪಂಚಾತ್ ಬೋರ್ಡುಗಳ ಮುಖಾಂತರ ನಮ್ಮ ಹಳ್ಳಿಗಳ ಅಭಿವೃದ್ಧಿಯನ್ನು ಸಾಧ್ಯವಿದ್ದಷ್ಟು ಸಾಧಿಸಬೇಕೆಂದು ನಮ್ಮ ಅಭಿಪ್ರಾಯವಿದೆ. ಈ ಮೇರೆಗೆ ಮುಂಬರುವ ಜಿಲ್ಲಾ ಬೋರ್ಡಿನ ಎಲ್ಲಾ ಸ್ಥಾನಗಳಿಗೂ ಯೋಗ್ಯ ಪ್ರತಿನಿಧಿಗಳನ್ನು ಆರಿಸುವ ಕಾರ್ಯವನ್ನು ನಿರ್ವಹಿಸುವ ಬಗ್ಗೆ ಜಿಲ್ಲೆಯ ಎಲ್ಲಾ ಜಾತಿಮತಗಳ ಜನರಿಗೂ ಸಂಪೂರ್ಣ ವಿಶ್ವಾಸವಿರುವ 5 ಮಹನೀಯರಿಂದೊಡಗೂಡಿದ ಒಂದು ಕೇಂದ್ರ ಸಮಿತಿಯನ್ನೂ ಮತ್ತು ಆ ಸಮಿತಿಯು ಆಯಾಯ ತಾಲೂಕುಗಳಿಗೆ ಉಮೇದ್ವಾರರನ್ನು ಚುನಾಯಿಸುವಾಗ್ಗೆ ಆವರೊಟ್ಟಿಗೆ ಕುಳಿತುಕೊಂಡುಆಯಾಯ ತಾಲೂಕಿನ ಉಮೇದ್ವಾರರನ್ನು ಚುನ್ನಾಯಿಸಲಿಕ್ಕೆ ಆ ಸಮಿತಿಗೆ ಸಹಾಯ ಮಾಡುವ ಬಗ್ಗೆ ಪ್ರತಿ ತಾಲೂಕಿಗೆ 4 ಮೆಂಬರರಿರುವ 6 ತಾಲೂಕು ಸಮಿತಿಗಳನ್ನೂ ಏರ್ಪಡಿಸಿ ಆ ಕೆಲಸವನ್ನು ಆ ಕಮಿಟಿಗಳಿಗೆ ಒಪ್ಪಿಸುವುದೇ ಯೋಗ್ಯವೆಂದು ನನಗೆನಿಸುತ್ತದೆ. ಈ ಪರಿಷತ್ತು ಈ ತತ್ವವನ್ನು ಒಪ್ಪುವುದಾದರೆ ಆಂತಹ 7 ಸಮಿತಿಗಳನ್ನು ಏರ್ಪಡಿಸಬೇಕು. ಮತ್ತು ಈ ಮೊದಲು ಹೇಳಿದ ಕೋಂಗ್ರೆಸು ಕೆಲಸಗಾರರ ಸಂಘದ ಘಟನಾವಳಿಯನ್ನೂ ನಿರ್ಮಾಣ ಮಾಡಬೇಕು.

ಈ ನಮ್ಮ ಸಂಘದ ಕಡೆಯಿಂದ ಸ್ಥಳೀಯ ಸಂಸ್ಥೆಗಳಿಗೆ ಉಮೇದ್ವಾರರಾಗಲು ಸದಸ್ಯರು ಯಾವ ತತ್ವಗಳನ್ನು ತಮ್ಮ ಮುಂದಿಟ್ಟುಕೊಂಡು ಕೆಲಸ ಮಾಡಬೇಕೆಂಬ ವಿಷಯವನ್ನು ಈಗಲೇ ನಿಶ್ಚಯಿಸಬೇಕಾಗಿದೆ. ಕೋಂಗ್ರೆಸು ಕಾರ್ಯಕ್ರಮಗಳನ್ನು ಜಿಲ್ಲಾ ಬೋರ್ಡು, ಪಂಚಾತ್ ಬೋರ್ಡು ಮತ್ತು ಮುನ್ಸಿಪಾಲಿಟಿ ಮಟ್ಟಿಗೆ ಸ್ಥಳೀಯ ಸಂಸ್ಥೆಗಳು ಆನುಸರಿಸಬೇಕೆಂದು ಎಲ್ಲರೂ ಒಪ್ಪುವರು ಜಿಲ್ಲೆಯಲ್ಲಿ ಎಲ್ಲೆಲ್ಲಿಯೂ ಮುಖ್ಯವಾಗಿ ಹಳ್ಳಿಗಳಲ್ಲಿ ಒಳ್ಳೇ ಮಾರ್ಗಗಳು ಬೇಕು; ಸೇತುವೆಗಳು ಬೇಕು; ಆಸ್ಪತ್ರೆಗಳು ಬೇಗೆ, ಸೂಲಗಿತ್ತಿಯರು ಬೇಕು; ಬಾವಿಗಳು ಬೇಕು ಎಂದು ಎಲ್ಲರೂ ಹೇಳುತ್ತಾರೆ. ಆದರೆ ಇವೆಲ್ಲಾ ಸಾಧಿಸುವರೆಗೆ ಈ ತನಕವೂ ಯಾವ ನಿಯೋಜಿತ ಯೋಚನೆಯೂ ಇಲ್ಲ, ನುತ್ತು ಮುಖ್ಯವಾಗಿ ಇವುಗಳಿಗೆ ಬೇಕಾಗುವ ಹೇರಳ ಹಣವನ್ನು ಈ ಸ್ಥಳೀಯ ಸಂಸ್ಥೆಗಳು ಎಲ್ಲಿಂದ ಒದಗಿಸಿಕೊಳ್ಳಬೇಕೆಂಬ ವಿಧಿ ವಿಧಾನವೂ ಇಲ್ಲ. ಸರಕಾರದಿಂದ ಈಗ ಸಿಗುತ್ತಿರುವ ಯಾ ಇನ್ನು ಮುಂದೆ ಸಿಗಬಹುದಾದ ಗ್ರೇಂಟುಗಳಿಂದ ಇವುಗಳನ್ನೆಲ್ಲ ಪೂರೈಸಿಕೊಳ್ಳಲಿಕ್ಕೆ ಈ ಯುಗಾಂತ್ಯದ ವರೆಗೂ ಸಾಧ್ಯವಿಲ್ಲ ಅಂತೂ ಈ ಬಗ್ಗೆ ಒಡ ರೈತರದೇ ಇನ್ನೂ ತೆರಿಗೆ ಹೊರಿಸಲೂ ಸಾಧ್ಯವಿಲ್ಲ ಶಾಲಾ ಮಕ್ಕಳ ಸಂಬಳ ಪರಿಸಿಯೂ ಪ್ರಯೋಜನವಿಲ್ಲ ಅತ್ಯಂತ ಲಾಭದಾಯಕವಾಗಿರುವ ಬಸ್ಸು, ಲೋರಿ ಸರ್ವಿಸುಗಳನ್ನೂ, ಇಲೆಕ್ಟ್ರಿಸಿಟಿ, ಸಿನೆಮಾ ಇತ್ಯಾದಿ ಸಂಸ್ಥೆಗಳನ್ನೂ ನಡೆಯಿಸುವ Monopoly ಹಕ್ಕೆನ್ನು ಜಿಲ್ಲಾ ಬೋರ್ಡು ವಹಿಸಿಕೊಂಡರೆನೇ ಇವು ಸಾಧ್ಯ. ಹೀಗೆ ಮಾಡಿದರೇನೇ ಗ್ರಾಮೋದ್ಧಾರದ ಈ ಮೊದಲು ಹೇಳಿದ ಕಾರ್ಯಗಳಿಗೆ ಸಾಕಷ್ಟು ಹಣ ಹೊರೆಯುವುದು; ಜಿಲ್ಲಾ ಬೋರ್ಡಿನ ವಸ್ತುರಿ ಸ್ಥಳೀಯ ಸಂಸ್ಥೆಗಳ ಆರ್ಥಿಕ ಸ್ಥಿತಿ ಸುಧಾರಿಸುವುದು. ಹಳ್ಳಿಗಳ ನಿಜವಾದ ಕಲ್ಯಾಣ ಸಾಧಿಸುವುದು. ಆದುದರಿಂದ ಇವೇ ಮೊದಲಾದ ಪ್ರಗತಿಪರ ಧೋರಣೆಗಳನ್ನು ನಿರ್ದಾಕ್ಷಿಣ್ಯವಾಗಿ ಸ್ವೀಕರಿಸಿಕೊಂಡು ನಮ್ಮ ಕೋಂಗ್ರೆಸು ಕೆಲಸಗಾರರ ಸಂಘವು, ಇವುಗಳಿಗೆ ಮನಮುರಿದು ದಕ್ಷತೆಯಿಂದ ದುಡಿಯುವ ಯೋಗ್ಯ ಹಾಗೂ ಸಾಮರ್ಥ್ಯವುಳ್ಳ ಹುರಿಯಾಳುಗಳನ್ನು ಚುನಾವಣೆಗೆ ಎಲ್ಲಾ ಕೇಂದ್ರಗಳಿಗೂ ನಿಲ್ಲಿಸಬೇಕೆಂದೂ ನಾವು ಮೊದಲೇ ನಿರ್ಧರಿಸಬೇಕಾಗಿರುತ್ತದೆ. ಆದು ಏನೇ ನಮ್ಮ ಚುನಾವಣೆ ಕಾರ್ಯಕ್ರಮವನ್ನು ಪೂರೈಸುವ 5 ಯಾ 10 ವರ್ಷಗಳ ಒಂದು ಯೋಜನೆಯನ್ನೂ ಆದಷ್ಟು ತ್ವರಿತಪಡ್ಡಲೇ ನಮ್ಮ ಆ ಸಂಘವು ತಯಾರಿಸಿಕೊಳ್ಳಬೇಕಾಗಿರುತ್ತದೆ. ಈ ಸಂಘವು ಶಾಶ್ವತಿಕ ಸಂಸ್ಥೆಯಾಗಿರದೆ ಒಂದು ಶಾಶ್ವತ ಸಂಸ್ಥೆಯಾಗಿರಬೇಕು.

(ಸಹಿ) ಕೆ. ಮಹಾಬಲ ಹೆಗ್ಡೆ,
ಸ್ವಾಗತ ಕಮಿಟಿಯ ಅಧ್ಯಕ್ಷ.

ಉಡುಪಿ

ಶುದ್ಧಿ—ಕೆಲವು ವರುಷಗಳ ಹಿಂದೆ ರೋಮನ್ ಕೆಥೊಲಿಕ್ ಮತಕ್ಕೆ ಸೇರಿ ಜೆ. ಡಿ. ಸೋಜರೆಂದು ನಾಮಕರಣಹೊಂದಿದ ಶ್ರೀ ಕೊಜೆಕ್ಕೊಳ್ಳಿ ನಾರಾಯಣ ಶೆಟ್ಟರು ಇದೇ ತಾ. 9ರಲ್ಲಿ ಶುದ್ಧಿಗೊಳಿಸಲ್ಪಟ್ಟು ಹಿಂದೂ ಧರ್ಮವನ್ನೇ ಆವಲಂಬಿಸಿದರು.

ಮುನಿಸಿಪಲ್ ಮಿಟಿಂಗು—ತಾ 12 ರಲ್ಲು ಚೆಯರ್‌ಮೆನ್ ಶ್ರೀ ಎ. ಲಕ್ಷ್ಮೀನಾರಾಯಣರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಸೆಂಟ್ರಲ್ ವಾರ್ಡ್ ಬೀನ್ ಷ್ಟಾನಿಂಗ್ ಸ್ಕೀಮಿಗೆ ಸಂಬಂಧಪಟ್ಟ ಸ್ಥಳಗಳನ್ನು ಪಡೆಯುವರೆ ಸುದ್ರಾಸು ಸರಕಾರವು ರೂ. 2,5000 ಸಾಲವನ್ನು ಮುನಿಸಿಪಾಲಿಟಿಗೆ ಸ್ಯಾಂಕ್ಷನ್ ಮಾಡಿದುದನ್ನು ರಿಕಾರ್ಡು ಮಾಡಲಾಯಿತು ಆಂತೆಯೇ ಬಸ್ಸ್ ಸ್ಟೇಂಡಿನಲ್ಲಿ ಕಟ್ಟೋಣಗಳನ್ನು ಕಟ್ಟುವರೆ ರೂಪಾ 3,500 ಸಾಲ ಸೆಂಕ್ಷನ್ ಆದುದು ಸಹ ರಿಕಾರ್ಡು ಮಾಡಲಾಯಿತು. ಬೀಡಿನ ಗುಡ್ಡೆ ಸ್ಮಶಾನವನ್ನು ವಿದ್ಯುದ್ದೀಪಗಳಿಂದ ಅಲಂಕರಿಸಲು ಬೇಕಾಗುವ ದೀಪಗಳನ್ನು ತಾನು ಫರ್ನಿಷ್ ಕೊಡುವೆನೆಂದಾಗಿ ಶ್ರೀ ಯ. ವಿ. ನಾಯ್ಕರು ಬರೆದ ಪತ್ರವನ್ನು ಮುನ್ಸಿಸಿ ಸ್ಮಶಾನದವರೆಗೂ ಇಲೆಕ್ಟ್ರಿಕ್ ಲ್ಯಾಟನ್ನು ಮುಂದಿರಿಸಬೇಕೆಂದಾಯಿತು. ಶ್ರೀ ಆರ್. ಆರ್. ಕುಜೂರರ ಸೂಚನೆಯಂತೆ ಉಡುಪಿಗೆ ಬರಲಿರುವ ಶ್ರೀ ಕೆ. ಆರ್. ಕಾರಂತ ಕಂದಾಯ ಮಂತ್ರಿಗಳಿಗೆ ಬಹುಮಾನ ಪತ್ರವನ್ನೇ ಯಬೇಕೆಂದು ನಿರ್ಧಾರವಾಗಿ ಆ ಬಗ್ಗೆ ರೂಪ್ಯಾ 25 ಬಜೆಟ್‌ಗೆ ಸೆಂಕ್ಷನ್ ಮಾಡಲಾಯಿತು.

ಮುನಿಸಿಪಲ್ ರಸ್ತೆರಿಪೇರಿ(?)—ಒಣಗಿದ ರಸ್ತೆಗಳಿಗೆ ಚರಂಡಿ ಯಾ ಬೇರೆ ಕಡೆಗಳಿಂದ ಒಣಗಿದ ಮಣ್ಣನ್ನು ಬಾಕಿ ದುರಸ್ತಿ (?) ಮಾಡಲಾಗುತ್ತಿದೆ. ಇದರಿಂದ ವಾಹನಗಳು ಸಂಚರಿಸುವಾಗ ಧೂಳು ವಿಪರೀತ ಹೊರಲು ಅಸ್ಪದವಿತ್ತಂತಾಗಿದೆ. ಈ ತರದ ವ್ಯವಸ್ಥೆಯಿಂದ ಫಲವೆಲ್ಲಿ ಸಿದಂತಾಯಿತಲ್ಲದೆ ಬೇರೆ ಯಾವ ಪ್ರಯೋಜನವೂ ಜನಸಾಮಾನ್ಯರಿಗೆ ತಿಳಿಯದಾಗಿದೆ

ಇಲೆಕ್ಟ್ರಿಕ್ ಕರೆಂಟಿನ ಅವಧಿ ಹೆಚ್ಚಿಸಲಾಗಿದೆ. ಆದರೆ ಬೇಕಾದಾಗ ಕರೆಂಟ್ ನಾಸ್ತಿ! ಈ ತಿಂಗಳ ಆರಂಭದಿಂದ ಸ್ಥಳೀಯ ಇಲೆಕ್ಟ್ರಿಕ್ ಕಂಪೆನಿಯವರು ದಿನಾಲೂ ಇಪ್ಪತ್ತರ ಗಂಟೆ ಕಾಲ ಕರೆಂಟನ್ನು ಕೊಡುವ ವ್ಯವಸ್ಥೆ ತೋರಿಸಿದ್ದಾರೆ. ಆದರೆ ಇಡೀ ರಾತ್ರಿ ಕರೆಂಟ್ ಇದ್ದರೂ ಮಧ್ಯಾಹ್ನ ಮೂರು ಗಂಟೆಯಿಂದ ಆರು ಗಂಟೆಯ ತನಕ ಕರಂಟ್ ಸಿಕ್ಕುವುದೇ ಇಲ್ಲ. ಇದರಿಂದ ಕರೆಂಟನ್ನು ಅವಲಂಬಿಸಿರುವ ಕೈಗಾರಿಕೆಗಳವರಿಗೂ ಇತರ ಜನರಿಗೂ ಬಹಳಾ ಅನಾನುಕೂಲತೆಯಾಗಿದೆ. ಇನ್ನಾದರೂ ಹಗಲಿಡೀ ಕರೆಂಟ್ ಕೊಡುವ ವ್ಯವಸ್ಥೆ ಮಾಡುವುದು ಉತ್ತಮ.

ನವೋಲ್ಲಾಸಗೊಳಿಸುವ ನವೀನ ನಗೆ ಪತ್ರಿಕೆ

ಅಂತರಂಗ

ಮಾಸಪತ್ರಿಕೆಯಂತೆ ಸಂಗ್ರಹಿಸಿಡಲು ಯೋಗ್ಯವಾದ
ಹೊಸ ಮಾದರಿಯ ಸಚಿತ್ರ ವಾರಪತ್ರಿಕೆ.

**ವಿಚಾರದ ಕಿಡಿಗಳಿಗಾಗಿ—ವಿನೋದ ಹರಟೆಗಳಿಗಾಗಿ—
ಮನಮೋಹಕ ಕತೆಗಳಿಗಾಗಿ—ಚುಟುಕು ಸುದ್ದಿಗಳಿಗಾಗಿ—
ಅಂತರಂಗವು ಆಖಿಲ ಕರ್ನಾಟಕದಲ್ಲಿ ಹೆಸರಾಗಿದೆ.**

ವಾರ ಭವಿಷ್ಯವೂ ಬಿಡದೆ ಪ್ರಕಟವಾಗುತ್ತಿದೆ.

ವಾರ್ಷಿಕ ಚಂದಾ (ಮುಂಗಡ) ಅಂಚೆ ವೆಚ್ಚ ಸೇರಿ 4-8-0.
ಬಿಡಿ ಸಂಚಿಕೆ 0-1-6
ಜಾಹೀರಾತು ದರಗಳಿಗೂ ಮಾದರಿ ಸಂಚಿಕೆಗಳಿಗೂ ಬರೆಯಿರಿ—

ಮೆನೇಜರ್, ಅಂತರಂಗ, ಉಡುಪಿ

ಆರೋಗ್ಯ ಪಾಲನೆ—
ವರ್ಧನೆಯ ಕೈಗನ್ನಡಿ

ಅಂತರಂಗ

ಆಯುರ್ವೇದ ಸಂಚಿಕೆ

ಪ್ರತಿ ಮನೆಯಲ್ಲೂ ಇರಲೇ ಬೇಕಾದ
ಪ್ರತಿಯೊಬ್ಬರೂ ಓದಲೇ ಬೇಕಾದ
ಹೊಸಮಾದರಿಯ ವಿಶಿಷ್ಟ ಸಂಚಿಕೆ

ಬೆಲೆ ರೂ. 1-0-0. ವಿ. ಖ. 0-4-0.

—ಬರೆಯಿರಿ:—
1. ಅಂತರಂಗ ಆಫೀಸು, ಉಡುಪಿ.
2. ನವಭಾರತ ಬುಕ್ ಡಿಪೊ, ಉಡುಪಿ.
3. S. N. ನ್ಯೂಸ್ ಏಜನ್ಸಿ, ಉಡುಪಿ.

ದಕ್ಷಿಣ ಕನ್ನಡ

ಮಂಗಳೂರು

ಜಿಲ್ಲೆಯಲ್ಲಿ ಗವರ್ನರರು– ಮದ್ರಾಸಿನ ಗವರ್ನರರಾದ ಆರ್ಚಿಬ್ಶಾಲ್ಡ್ ನೈ ಇವರು ಪತ್ನೀಸಹಿತರಾಗಿ ತಾ. ೬ರಂದು ಸಂಜೆ ೬॥ ಗಂಟೆಗೆ ಮಡಿಕೇರಿ ಮಾರ್ಗವಾಗಿ ನಂಗಳೂರಿಗೆ ಬಂದು ತಲುಪಿದರು. ದಾರಿಯುದ್ದಕ್ಕೂ ಗವರ್ನರ್ ದಂಪತಿಗಳಿಗೆ ಅಭೂತಪೂರ್ವ ಸ್ವಾಗತವಿತ್ತು. ತಾ ೭ರಂದು ಮುಂಜಾನೆ ಗವರ್ನಮೆಂಟ್ ಟ್ರೇಡ್ ಸ್ಕೂಲ್, ಕಾಮನ್‌ವೆಲ್ತ್ ಹಂಚಿನ ಕಾರ್ಖಾನೆ, ಸೆಂಟ್ ಜೋಸಫರ ಕೈಗಾರಿಕೆ ಕಾರ್ಖಾನೆ, ಸಾಲ್ವಾನ್ನರ ಕಾಫಿ ಕಾರ್ಖಾನೆ, ಬಂದರಿದ ಸಹಕಾರಿ ಬಂಡಸಾಲೆ ಕೆನರಾ ಕ್ಲಬ್ ಮೊದಲಾದುವುಗಳನ್ನು ಸಂದರ್ಶಿಸಿದರು. ತಾ. ೯ರಂದು ಗುರುವುರ, ಬಜಪೆಗಳಿಗೆ ತೆರಳಿ ಅಲ್ಲಿಯ ಹಸಿರಿಗೆ ಅಂಗಡಿಗಳನ್ನು ಪರಿಶೀಲಿಸಿದರು.

ಸೈಂಟ್ ಅಲೋಸಿಯಸ್– ಕಾಲೇಜಿನ ಸೊತೆನ ಕಟ್ಟಡದ ಶಂಖುಸ್ಥಾಪನೋತ್ಸವವು ತಾ. ೮ರಂದು ಪೂರ್ವಾಹ್ನ ೧೦॥ ಗಂಟೆಗೆ ಗವರ್ನರರಿಂದ ನೆರವೇರಿಸಲ್ಪಟ್ಟಿತು. ಸಿದ್ಧರಿಸಿದ ಚಪ್ಪರಕ್ಕೆ ಗವರ್ನರ್ ದಂಪತಿಗಳು ಆಗಮಿಸಿದೊಡನೆಯೆ ಕಾಲೇಜಿನ ರೆ. ಫಾ. ರೆಕ್ಟರರು ಸ್ವಾಗತಿಸಿ ಮಾನಪತ್ರವನ್ನು ಓದಿದರು. ಅನಂತರ ಬಿಶಪ್‌ರು ಅಡಿಗಲ್ಲನ್ನು ಆಶೀರ್ವದಿಸಿದ ಬಳಿಕ ಗವರ್ನರು ಅದನ್ನು ಸ್ಥಾಪಿಸಿದರು. ಪಂಡಿತ ನೆಹರುರ್ ನೇತೃತ್ವದಲ್ಲಿ ಎಡೆಗಾಲ ಸರಕಾರ ರಚಿಸಲ್ಪಟ್ಟ ಪರ್ಷ ಗವರ್ನರರಿಂದ ಸ್ಥಾಪಿಸಲ್ಪಟ್ಟುದು''–ಎಂಬ ಮುದ್ರಾಕ್ಷರವು ಕಲ್ಲಿನಲ್ಲಿ ಹಾಕಿಸಲ್ಪಟ್ಟಿತು. ಅನಂತರ ಗವರ್ನರ ಚಿಕ್ಕ ಭಾಷಣವಾಗಿ ಸಸೂರಂಭವು ಕೊನೆಗೊಂಡಿತು.

ಸಂಸ್ಕೃತ ಶಾಲಾಧ್ಯಾಪಕ– ಸಂಘವು ಆಯೆಲ ಭಾರತ ವಿದ್ಯಾಸಂಸ್ಥೆಗಳ ಫೆಡರೇಶನ್ ಕಾನ್ಫರೆನ್ಸಿಗೆ ನಮ್ಮ ಜಿಲ್ಲೆಯಿಂದ ಶ್ರೀಗಳಾದ ಕೆ. ಶಾಮ ಭಟ್ಟರು ಪೆರಡಾಲ, ಯಂ. ರಾಮಚಂದ್ರ ರಾವ್ ಉಡುಪಿ, ಕೆ. ಕೃಷ್ಣಮಾಚಾರ್ಯ ಪುತ್ತೂರು ಇವರನ್ನು ಮುಂದಿನ ವರ್ಷಕ್ಕೆ ಪ್ರತಿನಿಧಿ ಸದಸ್ಯರಾಗಿ ಆರಿಸಿದೆ.

ಮಂಗಳೂರು ತಾಲೂಕು ರೈತ ಮಜೂರರ– ಸಭೆಯೊಂದು ಶ್ರೀ ಯಂ. ಬಿ. ಪಿ. ವೈದ್ಯರ್ ಇವರ ಅಧ್ಯಕ್ಷತೆಯಲ್ಲಿ ತಾ ೭ರಂದು ನಂದಿಗುಡ್ಡೆ ಬಳಿಯಲ್ಲಿ ಜರಗಿತು ಜಿಲ್ಲಾ ಮಜೂರ ಸಂಘದ ಅಧ್ಯಕ್ಷ ಶ್ರೀ ಯಸ್. ಜಿ. ಸಾಲೆನ್ನ, ವ ಾಲ್ ಕಾನಿಲರ್ ಶ್ರೀ ಜೆ. ಪಾಮನ್, ಶ್ರೀ ಕೆ. ಎ , ಇವರು ಮಜೂರರ ಸಂಘಟನೆಯ ವಿಷಯ ಭಾಷಣಗೈದರು

Notice.

ಉಡ್ಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. P. No. 46/1946

ಬಿ. ನರ್ಸಿ —ಅರ್ಜಿದಾರರು.

ಅರ್ಜಿದಾರಳ ಮಗ, ಬಿ. ನರಸಿಂಹನು ಅವಿವಾಹಿತನಾಗಿ ಮೃತಪಟ್ಟಿರುವದರಿಂದ ಆತನ ವಬ್ಬಳೇ ವಾರೀಸುದಾರಳಾದ ತಾಯಿ ಅರ್ಜಿದಾರಳೀಗೆ ಮೃತನ ಬಾಬ್ತು The Bombay Mutual Life Assurance Society Ltd., Bombay. ಈ ಕಂಪೆನಿಯಿಂದ Policy No 197545ರ ಪ್ರಕಾರ ಬರತಕ್ಕ ರೂ. 498-6-0ನ್ನು ವ್ಹಲು ಮಾಡುವ ಬಗ್ಗೆ ಸರ್ಟಿಫಿಕೇಟು ಕೊಡ್ಸಬೇಕಾಗಿ ಅರ್ಜಿದಾರಳು ಈ ಕೋರ್ಟಿಗೆ ಕೊಟ್ಟ ಅರ್ಜಿಯು ತಾರೀಕು 1-11-1946ಕ್ಕೆ ಯಿತ್ತೋಕಾಗಿಯದೆ. ಆ ಬಗ್ಗೆ ಆಕ್ಷೇಪ ಯಿದ್ದವರು ತಾ. 1-11-46 ಕ್ಕೆ 10 ಗಂಟೆಗೆ ಈ ಕೋರ್ಟು ಮುಂದೆ ಹಾಜ್ರಾಗಿ ಆಕ್ಷೇಪ ಜ್ಞಾಪೀರು ಮಾಡಿಕೊಳ್ಳತಕ್ಕದ್ದುಯೆಂತ ಈ ಮೊಲಕ ತಿಳಿಸೋಕಾಗಿಯದೆ.

By Order of the Court

K. Varadaraya Pai.
Advocate for Petitioner.

ಉಡ್ಪಿ, ತಾ. 12-10-1946.

ನವ್ಯಜಿಲ್ಲಾ ಕಲೆಕ್ಟರ್–ಶ್ರೀ ಭೂತಲಿಂಗಂ ಆವರು ಕೇಂದ್ರ ಸರಕಾರದ ಕೃಗಾರಿಕೆ ಇಲಾಖೆಗೆ ವರ್ಗಾಯಿಸಲ್ಪಟ್ಟಿದ್ದಾರೆ. ಆವರ ಬದಲಾಗಿ ಮಿ ಜೆ.ಆರ್. ಬೆಟ್, ಇವರು ಕಲೆಕ್ಟರರಾಗಿ ನೇಮಕ ಹೊಂದಿದ್ದಾರೆ.

ಪೊಲಿಸಿದಾರರ ಪ್ರತಿನಿಧಿ– ದಿ ಪೊಲೀಸ್ ಇನ್ಸೂರೆನ್ಸ್ ಕಂಪೆನಿಯ ಡ್ಯಾರೆಕ್ಟರ ಮಂಡಳಿಗೆ ಪೊಲಿಸಿದಾರರ ಪ್ರತಿನಿಧಿಯಾಗಿ ಪುತ್ತೂರಿನ ವಕೀಲ್ ಶ್ರೀ. ಸಿ. ಎಸ್. ಶಾಸ್ತ್ರಿಗಳು ಆರಿಸಲ್ಪಟ್ಟಿರುತ್ತಾರೆ.

ಕೊಲ್ಲಾಡು–ಗಾಂಧಿಜೀಯವರ ಜನದಿವಸವಂದು ಕೊಲ್ಲಾಡು ಮತ್ತು ಸಾಲೆತ್ತೂರು ಸಂಯುಕ್ತ ಗ್ರಾಮ ಕಾಂಗ್ರೆಸ್ ಕಮಿಟಿಯ ಸಭೆಯು ಸಾಣೆಕಲ್ಲು ಶಾಲಾ ಮೈದಾನದಲ್ಲಿ ಶ್ರೀ ಎಮ್. ವತಪ್ಪ ಸಾಂತರ ಅಧ್ಯಕ್ಷತೆಯಲ್ಲಿ ಜರಗಿತು. ಹೊಸ ಸಮಿತಿಗೆ ಹೊಸಬರ ಚುನಾವಣೆ ನಡೆಯಿತು, ಚರಖಾ ಜಯಂತಿಯೂ ಆಚರಿಸಲ್ಪಟ್ಟಿತು.

ಕೆನ್ನಿಗೋಳಿ–ಪೇಟೆಯಲ್ಲಿ ಮಿಲ್ ಬಟ್ಟೆಯನ್ನು ಮಾರಲು ಅಧಿಕೃತರಾದ ನಾಲು ಅಂಗಡಿಯ ಮ್ಹಾಲಕರಲ್ಲಿ ಅಲ್ಲಿಯ ಜನತೆಯು ಮಿಲ್ ಬಟ್ಟೆಗಾಗಿ ಹೋದರೆ ಇವತ್ತು ಬಂದಿಲ್ಲಿ, ಒಂದು ಗಂಟೆಯ ಮುಂಚಿತವಾಗಿ ಕರ್ಚಾಯಿತೆಂದು ಇತ್ಯಾದಿ ಮಾತುಗಳಿಂದ ಜನರನ್ನು ನುಂಕುಗೊಳಿಸುತ್ತಾರೆಂದೂ ಈ ವಿಷಯದಲ್ಲಿ ಸಂಬಂಧಪಟ್ಟ ಸೇಲಧಿಕಾರಿಗಳು ಸೀಘ್ರ ಕೊಡಬೇಕೆಂದೂ ಓರ್ವ ಬಾತ್ಮಿದಾರರು ಬರೆಯುತ್ತಾರೆ

ಸಾಸ್ತಾನ—ಇದೇ ತಾ 1ರಲ್ಲು ಆಯುರ್ವೇದ ಪಂಡಿತ ಪಾಂಡೇಶ್ವರ ಲಕ್ಷ್ಮೀನಾರಾಯಣ ಮಂಜರವರ ಅಧ್ಯಕ್ಷತೆಯಲ್ಲಿ ಅಸುಪಾಸಿನ ತರುಣರ ಸಭೆಯೊಂದು ಜರಗಿ ಮಿತ್ರ ವೃಂದವೆಂಬ ಸಂಘ ಸ್ಥಾಪನೆಯಾಗಿ ಕಾರ್ಯಕಾರೀ ಮಂಡಲಿಯು ರಚನೆಯಾಯಿತು.

ಕೋಟೇಶ್ವರ–ತಾ 5ರಲ್ಲು ಜೇಸ್ಸೆ ಸ್ಕೀಮು ಪ್ರೌಢ ಶಾಲಾ ಪ್ರಾಥಮಿಕ ಶಾಲೆಯಲ್ಲಿ ಶಾರಾದಾ ಪೂಜೆಯು ನಡೆದು ಹಲವಿದ್ಯಾರ್ಥಿ ಸಂಘದ ಆಶ್ರಯದಲ್ಲಿ ನಾಡ ಹಬ್ಬವು ಶ್ರೀ ವಿ. ಸೀತಾರಾಮಯ್ಯನವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಆಚರಿಸಲಾಯಿತು. ಶ್ರೀ ಉಗ್ರಾಣ ಕೃಷ್ಣ ರಾಯರು ನಾಡ ಹಬ್ಬವ ಉದ್ಘಾಟನೆಯನ್ನು ಮಾಡಿದರು.

ಬೈಲೂರು–9-10-46ರಲ್ಲಿ ಆಜಾದ್ ಹಿಂದ್ ಫೌಜಿನ (I.N.A. ಯ) ಶ್ರೀ. ಗೋ ಪಿಪ್ಪರು ಜರ್ಮನಿಯಲ್ಲಿಯ ತಮ್ಮ ಅನುಭವವನ್ನು ವಿವರಿಸಿದ ಕೂಡ್ಲೆ ಇಲ್ಲಿಯ ರಾ. ಸೇ. ದಳದವರು ಸ್ವಯಂ ಪ್ರೇರಕೆಯಿಂದ ರೂ. 12।-ನ್ನು ತಮ್ಮೊಳಗೆ ಸಂಗ್ರಹಿಸಿ ಅವರಿಗೆ ಒಪ್ಪಿಸಿದರು.

ಪೆರ್ಡೂರು– ತಾ. 9 10-46ರಲ್ಲಿ ರಾಷ್ಟ್ರೀಯ ಶಾಲೆಯಲ್ಲಿ ಪೆರ್ಡೂರು ಪಳೆ ವಿದ್ಯಾರ್ಥಿ ಸಂಘವು ಶ್ರೀ.ಯು. ನಂಜುಂಡಾರಾಧ್ಯರ ಆಧ್ಯಕ್ಷತೆಯಲ್ಲಿ ರಾಷ್ಟ್ರ ಗೀತೆಯೊಡನೆ ಸ್ಥಾಪನೆಯಾಗಿ 13ಜನ ಸದಸ್ಯರುಳ್ಳ ಒಂದು ಕಮಿಟಿಯು ಏರ್ಪಟ್ಟಿತು.

ತಿಮ್ಮರೆಡಿ–ತಿರ್ವ ಹಿಂದೂ ಹೈಸ್ಕೂಲಿನ ಸಾಹಿತ್ಯೋತ್ಸವದ ಕುರಿತು ಕಳೆದ ವಾರದ ಸಂಚಿಕೆಯಲ್ಲಿ ಬಂದಿದ್ದ ವಾರ್ತೆಯಲ್ಲಿ ಮೂರನೇ ದಿನವು ಅಧ್ಯಕ್ಷತೆ ವಹಿಸಿದವರು 'ಡಾ। ನುಡಿಯಾರರು' ಎಂದು ತಪ್ಪಿ ಬಿದ್ದಿದೆ. ಆದಿನ ಅಧ್ಯಕ್ಷತೆ ವಹಿಸಿದವರು ಡಾ। ಪದ್ಮನಾಭ ರಾವ್ ಎಲ್. ಎಮ್. ಪಿ. ಇವರು.

ಇನ್ನಂಜೆ–ಸ್ಥಳೀಯ ಶ್ರೀ ವಿಷ್ಣುಮೂರ್ತಿ ಹಯವದನ ಸ್ವಾಮಿ ಹೈಸ್ಕೂಲಿನಲ್ಲಿ ಇದೇ ತಾ 6- 10-46ರಲ್ಲಿ ಹೈಸ್ಕೂಲಿನ ಸ್ಥಾಪಕರಾದ ಶ್ರೀ ಶ್ರೀ ವಿದ್ಯೇಂದ್ರ ತೀರ್ಥ ಶ್ರೀ ಪಾದಂಗಳವರ ಪುಣ್ಯ ನಿಧ್ಯಾರ್ಥಿಗಳಿಗೂ ನೆರೆದ ಮಹನೀಯರಿಗೂ ಎಪಹಾರ ನೀಯಲಾಯ್ತು.

ಸುಬ್ರಹ್ಮಣ್ಯ–ಕುಳುಕುಂದದಲ್ಲಿ ಪರ್ಣಶಕ್ತಿ ಜರಗುವ ಜಾನುವಾರ ಸಂತೆಯು ಈ ವರ್ಷ ನವಂಬರ ತಾ 9ರಿಂದ 23ರವರೆಗೆ ಜರಗುವುದೆಂದೂ ಮೈಸೂರು ಪ್ರಾಂತದಿಂದ ಜಾನುವಾರುಗಳನ್ನು ತರಬೇಕೆದಿರುವವರು ಅಲ್ಲಿಯ ಸಂಬಂಧಪಟ್ಟ ಜಿಲ್ಲಾ ಮೆಜಿಸ್ಟ್ರೇಟ ರಿಂದ ಪುಕ್ಕುಂ ಪಡಕೊಳ್ಳತಕ್ಕದ್ದೆಂದೂ ಪುತ್ತೂರು ಡಿವಿಜನಲ್ ಆಫೀಸರರು ಪ್ರಕಟಿಸುತ್ತಾರೆ.

ಕಟಪಾಡಿ–ಶ್ರೀ. ಎಸ್.ವಿ. ಎಸ್. ಶಾಲಾ ಪಳೆ ವಿದ್ಯಾರ್ಥಿಗಳ ಸಂಘದ 1946-47 ನೇ ವರ್ಷದ ವಾರ್ಷಿಕ ಮಹಾಸಭೆಯು ತಾ. 31 10 46ಲ್ಲು ಅಪರಾಹ್ನ ಗಂಟೆ 5ಕ್ಕೆ ಸದರಿ ಶಾಲಾ ವರಾಂಡದಲ್ಲಿ ಜರಗುವುದಾಗಿಯೂ ಸದರಿ ಸಭೆಗೆ ಸದಸ್ಯರೆಲ್ಲ ಹಾಜರಾಗಿ ಸಹಕರಿಸಿ ಯಶಸ್ವಿಗೊಳಿಸಬೇಕಾಗಿಯೂ ಆಧ್ಯಕ್ಷ ಡಾ. ಕೆ. ಜೆ. ಕಿಣಿಯವರು ತಿಳಿಸುತ್ತಾರೆ.

ಸರ್ಕಲ್ ಕಾಂಗ್ರೆಸ್ ಚುನಾವಣೆಗಳು–ಕುಂದಾಪ್ರ ಸರ್ಕಲಿನ ಪ್ರಾಥಮಿಕ ಸದಸ್ಯರ ಮಹಾಸಭೆಯು ಇದೇ ತಾ. 20 ರಲ್ಲು ಅಪರಾಹ್ನ ಗಂಟೆ 4ಕ್ಕೆ ಕುಂದಾಪುರ ಕಾಂಗ್ರೆಸ್ ಕಚೇರಿಯಲ್ಲಿ ಜರಗಿ ಪ್ರಚಲಿತ ರಾಜಕೀಯ ಪಾತಾವರಣದಲ್ಲಿ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಚಲನವಲನದಲ್ಲುಂಟಾದ ಜನತೆಯ ಭಾವನೆಯನ್ನು ವಿಮರ್ಶಿಸಲಾಗುವುದೆಂದೂ ಸರ್ಕಲ್ ಕಾಂಗ್ರೆಸ್ ಸಮಿತಿಗೆ ಚುನಾವಣೆ ನಡಯಿತೆಂದೂ ತಾ. 5ರ ಪುದ್ರಾಳ ಮೈಲ್ ಪತ್ರಿಕೆಯಲ್ಲಿ ಪ್ರಕಟವಾಗಿದ್ದರೂ ಚುನಾವಣೆ ನಡೆಯಿಲ್ಲವೆಂದು ಸಂಬಂಧಪಟ್ಟವರು ತಿಳಿಸುತ್ತಾರೆ.

ಕಾರ್ಕಳ ಸರ್ಕಲ್ ಕಾಂಗ್ರೆಸ್ ಸಮಿತಿಗೆ ಸಹ ಚುನಾವಣೆ ನಡೆಯಲಿಲ್ಲವೆಂದೂ ಸಂಬಂಧಪಟ್ಟವರು ತಿಳಿಸುತ್ತಾರೆ.

Notice.

ಕಾಸರಗೋಡು ಡಿ. ಮು. ಕೋರ್ಟಿನಲ್ಲಿ.

O. S. No. 222/1943.
R. E. P. 83/1946.

ಜರಪ್ಪರತ್ತ ಅಬ್ದುಲ್ಲ ರಹಿಮಾನ್, ಪಯೆ ಸಾಟ್ಟತ್ತ ಹಂಪಜೆ ಆಳಿಯ, ನಿಲೇಶ್ವರ– II ನೇ ಗ್ರಾಮದಲ್ಲಿರುವವ—ಪ್ರತಿವಾದಿ. ರೈ ಪಾಂಚೆಂಟು.

ಮೇಲ್ಕಂಡ ಅನ್ಸುಜಾರಿಯಲ್ಲಿ ಹಾಜ್ರುಪಡ್ಸಿದ ವಿಲಂ ಇನ್ಸ್‌ಹಾನಿನ ಶರತ್ತುಗಳನ್ನು ನಿರ್ಣಯಿಸುವರೆ ಸದ್ರಿ ಸ್ಯವಹರಣೆಯು ತಾ. 19 10 46ಕ್ಕೆ ತಪ್ಸಿಗೆ ಇಟ್ಟಿರುವದ್ರಿಂದ ಈ ಕುರಿತು ಆಕ್ಷೇಪವಿದ್ದವರು ಸದ್ರಿ ದಿವಸ ಮೇಲ್ಕಂಡ ಕೋರ್ಟಿನಲ್ಲಿ ಹಾಜ್ರಾಗಿ ಉದಹರಿಸಕತ್ಕದ್ದೆಂತ ಈ ಮೂಲಕ ತಿಳಿಸೋಣಾಗುತ್ತದೆ.

K. R Kamath,
ಅರ್ಜಿದಾರನ ಕಡೆ ಎಡ್ವೊಕೇಟ್.

ಕಾಸರಗೋಡು, 5-10-1946.

೧ ರೂಪಾಯಿಗೆ ೧೦ ಪುಸ್ತಕಗಳು

(ಟಪ್ಪಾಲು ಖರ್ಚು ಫ್ರೀ)

(1) ನಾಡಕತೆಗಳು 0 3 0; (2) ಬಾಲ ವಾಜ್ಮಯ 0 3-0; (3) ಜಲಚಿತ್ರ ಸಪ್ತಾವಳಿ 0 3-0; (4) ವೀರ ಭೂಮಿ 0-2-0; (5) ಶಂಖುಕ ವಧೆ 0-2-0 (6) ಅಡ್ಡ ಬೆಳೆದ ಗಿಡ್ಡಿಯ ಮದುವೆ 0 2-0 (7) ಮುದುಕನ ಹೆಂಡ್ತಿ ಥಕ ಥೈ ರಾಧೆ 0 2-0 (8) ಬಂಗಾರ್ದಂಗಿದ ಕತೆ 0 1-0; (9) ಏಕಾಂತ ರಾಮಾಯಣ 0-1-6; (10) ಭಾರತ ಗೀತಾಂಜಲಿ 0-2-0; ಒಂಸು ರೂಪಾಯಿ ಮಡೆಯೊರ್ಡರು ಮಾಡಿದವರಿಗೆ ಆ ಒಂದು ರೂಪಾಯಿಯ ಸ್ಟಾಂಪು ಯಾ ಒಂದು ರೂಪಿಪಾಯ ಪೋಸ್ಟಲ್ ಆರ್ಡರ್ ಕಳಿಸಿದವರಿಗೆ ಮೇಲಿನ 10 ಪುಸ್ತಕಗಳನ್ನು ಬುಕ್ ಪೋಸ್ಟ್‌ಮಾಡಿ ಕಳಿಸಲಾಗುವುದು.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಮಹಾತ್ಮಾಗಾಂಧಿಯವರು

"ನನಗೆ ಸಂದೇಹಗಳು ಬರುವಾಗ, ನಿರಾಶೆಯು ನನ್ನ ಮುಂದೆ ನಿಂತಾಗ, ಮತ್ತು ಆಕಾಶ ಮಂಡಲದಲ್ಲಿ ಯಾವ ಜ್ಯೋತಿಯೂ ಗೋಚರಿಸದಿರುವಾಗ ನಾನು ಗೀತೆಯನ್ನು ಓದುತ್ತೇನೆ. ಆಗ ನನ್ನ ಮನಸ್ಸಿಗೆ ಶಾಂತಿಯನ್ನು ಕೊಡುವಂತಹ ಶ್ಲೋಕವು ಒಂದಿಲ್ಲದಿದ್ದರೆ ಮತ್ತೊಂದು ಸಿಕ್ಕುವುದು." ಎಂದು ಗೀತೆಯ ಕುರಿತು ಹೇಳಿದ್ದಾರೆ.

ಗೀತೆಯ ಕೈಗನ್ನಡಿ

ದಿವಂಗತ ಹೊಸಕೆರೆ ಬಿದಂಬರಯ್ಯನವರಿಂದ ರಚಿಸಲ್ಪಟ್ಟ

ಗೀತೆಯ ಸಮೂಲ ಭಾಷಾಂತರ.

ಪುಟಗಳು 400ಕ್ಕೂ ಮಿಕ್ಕಿವೆ. ಬೆಲೆ 0-8-0 ಮಾತ್ರ.

ಪ್ರತಿಗಳು ಎಲ್ಲ ಪ್ರಸಿದ್ಧ ಪುಸ್ತಕ ವ್ಯಾಪಾರಿಗಳಲ್ಲೂ ದೊರೆಯುತ್ತವೆ.

ಕನ್ನೆರಡಾತ ಸ್ಟಾಂಪನ್ನು ನವಭಾರತ ಪುಸ್ತಕ ಭಂಡಾರ, ಉಡುಪಿ ಇಲ್ಲಿಗೆ ಕಳಿಸಿದರೆ ಒಂದು ಪ್ರತಿಯನ್ನು ರಿಜಿಸ್ಟ್ರಿಮಾಡಿ ಕಳಿಸುವರು.

ಮುಂಬರುವ ಡಿ. ಬೋರ್ಡು ಹೇಗಿರಬೇಕು?

(ಲೇ:—ಎಂ. ಬಿ. ನರಸಪ್ಪ.)

ಕೇಂದ್ರದಲ್ಲಿ ತಾತ್ಕಾಲಿಕ ಸರಕಾರವೂ, ಪ್ರಾಂತ್ಯಗಳಲ್ಲಿ ಜನತಾ ಸರಕಾರಗಳೂ ಆಸ್ತಿತ್ವದಲ್ಲಿರುವುದು ಭಾರತೀಯರಿಗೆ ಸ್ವಾಭಿಮಾನದ ವಿಷಯವಾಗಿದೆ. ಅವುಗಳ ಉಪಯೋಗವನ್ನು ಸರಿಯಾಗಿ ಹೊಂದಿದ್ದಿದರೆ ಅದರ ತಪ್ಪು ದೇಶದ್ದು, ಪ್ರಾಂತ್ಯಗಳ ಹಾಗೂ ಜಿಲ್ಲೆಗಳದ್ದು ಆಗಿದೆ ಎಂದರೆ ತಪ್ಪಾಗದು. ರಾಷ್ಟ್ರೀಯ ಸರಕಾರದ ಛಾಯೆಯು ದೇಶವಿಡೀ ವ್ಯಾಪಕವಾಗಿ ಜನರಲ್ಲಿರೂ ತಾವು ಸ್ವತಂತ್ರರಾಗಿರುವೆವು ಎಂದು ಹೇಳಿಕೊಳ್ಳುವ ಸಂದರ್ಭದಲ್ಲಿ ಜಿಲ್ಲಾ ಬೋರ್ಡುಗಳಂತಹ ಸ್ಥಳೀಯ ಒಳಾಡಳಿತ ವಿಧಾನಕ್ಕೆ ನಮ್ಮ ಜಿಲ್ಲೆಯ ಕಾಂಗ್ರೆಸು ಅಧಿಕೃತವಾಗಿ ಮನಸ್ಸುಮಾಡಿದೆ ಇದ್ದುದು ಜಿಲ್ಲೆಯ ಇತಿಹಾಸಕ್ಕೆ ಒಂದು ಕೊರತೆಯಾಗಿದೆ. ಪ್ರಜಾಪ್ರಭುತ್ವದ ಹಿತಶ್ಚಿಯಲ್ಲಿ ಇದನ್ನು ಕಡೆಗಣಿಸಿದರೂ ಅ. ಭಾ. ಕಾ. ಸಮಿತಿಯ ಪ್ರಭಾವವು ಪ್ರತೀ ಒಬ್ಬ ಕಾಂಗ್ರೆಸ್ಸಿಗನ ನರನಾಡಿಗಳಲ್ಲಿ ತುಳುಕುತ್ತಿರುವಾಗ ಕಾಂಗ್ರೆಸ್ಸಿಗಿಂತ ಇಂದು ಪ್ರಜಾಪ್ರಭುತ್ವದಲ್ಲಿ ಪಿಗಿಲಾದ ಸಂಸ್ಥೆಯು ಬೇರೆ ಇನ್ನೊಂದು ಇಹೆ ಎಂಬ ಹೇಳಬರುವುದಿಲ್ಲ.

ಈ ಮೊದಲಿನ ಹಲವು ಕಾಂಗ್ರೆಸ್ ಸದಸ್ಯರು ಜಿಲ್ಲಾ ಬೋರ್ಡಿನಲ್ಲಿದ್ದು ಶಿಸ್ತು ಪಾಲನೆ ಮಾಡಲಿಲ್ಲವೆಂಬುದು ನಿಶ್ಚಿಯ. ಆದರಂತೆಯೇ ಕತ್ತಲೆಯ ಮಡುವಿನಲ್ಲಿ ಕಾಂಗ್ರೆಸು ತನ್ನ ಆಸ್ತಿತ್ವಕ್ಕಾಗಿ ಹೋರೆದಾಡಿಕೊಳ್ಳುತ್ತಿರುವಾಗ ಜಿಲ್ಲಾ ಕಾಂಗ್ರೆಸು ಸಮಿತಿಯ ಅಧಿಕಾರಿಗಳು ಪ್ರಭಾವಿತರಾಗಿರದೆ ಸಮಯಕ್ಕೊಂದು ರೀತಿಯನ್ನು ಚಲಾಯಿಸಿ ಜಿಲ್ಲಾ ಬೋರ್ಡಿನ, ಹಾಗೂ ಮುನಿಸಿಪಾಲಿಟಿ ಕಾಂಗ್ರೆಸು ಸದಸ್ಯರ ಕಹಿ ಮಾತಿಗೆ ಕಾರಣರಾಗಿದ್ದರು. ಒಂದು ವೇಳೆ ಆ ರೀತಿ ಆಗಿದ್ದಿದ್ದರೂ ಹಲವು ಕಾಂಗ್ರೆಸ್ ಸದಸ್ಯರನ್ನಿಸಿಕೊಂಡವರು ಶಿಸ್ತು ಉಲ್ಲಂಘನೆ ಮಾಡಿದ್ದೆರೂ ಪ್ರಕೃತ ಬೇರೆ ನಿಜವಾದ ಕಾಂಗ್ರೆಸ್ ಸೇವೆ ಮಾಡಲಿರುವ ಯೋಗ್ಯ ಕಾಂಗ್ರೆಸ್ ಸದಸ್ಯರು ಸಿಕ್ಕಲಿಕ್ಕಿಲ್ಲವೆಂದಾಗದು. ಅದರೂ ಜಿಲ್ಲಾ ಕಾಂಗ್ರೆಸು ಶರಾವು ಒಂದು ಸಲ ವಿರೋಧವಾಗಿ ಪಾಸ್ ಕೊಂಡುದರಿಂದ ಹೆಚ್ಚಿನ ತರ್ಕಕ್ಕೆ ಇನ್ನು ಎಡೆ ಇಲ್ಲ.

ಮುಂದೇನು?

ಜಿಲ್ಲೆಯಲ್ಲಿ ಕಾಂಗ್ರೆಸ್ಸಿನ ಘೈಯ್ಯ, ಶಿಸ್ತು, ಆವನ್ನು ಪಾಲಿಸಲು ಶಕ್ತರಾದಂತಹ ಕಲಸಗಾರರೇ ಈ ಸಲದ ಡಿ॥ ಬೋರ್ಡಿಗೆ ಚುನಾಯಿತರಾಗುವಂತೆ ನೋಡಬೇತಾದುದು ಜನತೆಯ ಕರ್ತವ್ಯವಾಗಿದೆ. ಜಿಲ್ಲಾ ಕಾಂಗ್ರೆಸ್ ಅಧಿಕಾರ ವಾಣಿಯಂದೆ ಪ್ರತ್ಯಕ್ಷವಾಗಿ ಭಾಗವಹಿಸುವುದಿಲ್ಲವಾದರೂ ಮೈಯಕ್ತಿಕವಾಗಿ ಕಾಂಗ್ರೆಸ್ ಸದಸ್ಯರು ತಮಗೆ ಇಷ್ಟ ಇರುವ ಯಾವತ್ತೂ ಉಮೇದ್ವಾರರಿಗೆ ಸಹಾಯ ಒದಗಿಸಬಹುದಾಗಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರು ಭರವಸೆ ಕೊಟ್ಟಿರುವರು; ಮಾತ್ರವಲ್ಲ, ಜಿಲ್ಲಾ ಕಾಂಗ್ರೆಸ್ ಸದಸ್ಯರು ಕೂಡಾ ಮೈಯ್ಯಕ್ತಿಕವಾಗಿ ಉಮೇದ್ವಾರರಾಗಿ ನಿಲ್ಲಬಹುದೆಂದು ಅಭಿಪ್ರಾಯಪಟ್ಟಿರುವರು. ಒಟ್ಟಾರೆ ಜಿಲ್ಲೆಯ ಹಿತದೃಷ್ಟಿಯಿಂದ ಜನತಾ ಸೇವೆಮಾಡಲಿರುವ ಯೋಗ್ಯರೇ ಆರಿಸಿ ಬರುವಂತೆ ನೋಡಿಕೊಳ್ಳಬೇಕೆಂದೂ ಸೂಚಿಸಿರುತ್ತಾರೆ ಮುಂಬರುವ ಡಿ॥ ಬೋರ್ಡು ಸಂಸ್ಥೆಯು ಜನತಾ ಸರಕಾರದ ಕೈರಾ ಛತ್ರದ ಒಂದು ಭಾಗವಾಗಿರುವುದರಿಂದ ಆರಿಸಲ್ಪಟ್ಟ ಸದಸ್ಯರಿಗೆ ಹೆಚ್ಚಿನ ಜವಾಬ್ದಾರಿ ಇದೆ ಎಂದು ಹೇಳಿದರೆ ಅದು ತಪ್ಪಾಗಲಾರದು. ಮಿಟಿಂಗಿನ ಸಂದರ್ಭದಲ್ಲಿ ಜಾಜರಾಗಿ ಛತ್ತಿಯನ್ನು ಪಡೆದು ಇನ್ನೊಂದು ಮಿಟಿಂಗಿನ ತಾರೀಕನ್ನು ನೀಕ್ಷಿಸಿದರೆ ಸಾಲದು. ಜಿಲ್ಲೆಯ ಬಡತನ ನಿವಾರಣೆ ಇದ್ಯ, ಬಡಾವಣೆ, ಉಪಯುಕ್ತ ಸೂಗರಗಳು, ಕೃಷಿ, ಕೈಗಾರಿಕಾ ಕ್ಷೇತ್ರಗಳು ಆರೋಗ್ಯ, ಕಡ್ಡಾಯ ಶಿಕ್ಷಣ ಇವೇ ಮೊದಲಾದ ಜನೋಪಯುಕ್ತ ಕಾರ್ಯಕ್ರಮಗಳನ್ನು ಬಗೆ ಹರಿಸಬೇಕಾಗಿ ಬರುವುದರಿಂದ ಈ ಸಲದ ಉಮೇದ್ವಾರರು ಜಿಲ್ಲಾ ಬೋರ್ಡಿನ ಸೇವಕರಾಗಿಯೇ ಮುಂದೆ ಬರಬೇಕಾಗಬಹುದು.

ಸರಕಾರವು ಹಲವು ತರದ ಹೆಚ್ಚಿನ ಅಧಿಕಾರಗಳನ್ನು ಅಂದರೆ ಜವಾಬ್ದಾರಿಗಳನ್ನು ಜಿಲ್ಲಾ ಬೋರ್ಡಿಗೆ ಕೊಡಲಿರುವುದರಿಂದ ಸದಸ್ಯರು ವರ್ಷವಿಡೀ ಜಿಲ್ಲೆಗಾಗಿ ದುಡಿಯಬೇಕಾಗಿ ಬರಬಹುದು. ನ್ಯಾಯವಿಧಾಯಕ ಸಭೆಯ ಸದಸ್ಯರಂತೆ ಜಿಲ್ಲಾ ಬೋರ್ಡು ಸದಸ್ಯರೂ ವೇತನ ಪಡೆದು ತಮ್ಮ ಇಡೀ ವರ್ಷದ ಸೇವೆಯನ್ನು ಕೊಡಬೇಕಾಗಿ ಬರಬಹುದು.

ಯೋಗ್ಯರನ್ನೇ ಆರಿಸಬೇಕು

ಮುಂದಕ್ಕೆ ಕೃಷಿಕ-ಪ್ರಜಾರಾಜ್ಯದ ಬಗ್ಗೆ ತಳಹದಿಯಾಕಬೇಕಾಗಿ ಬರಲಿರುವುದರಿಂದ ಮುಂದಕ್ಕೆ ಶ್ರೀಮಂತರೂ, ಆಡಂಬರಕ್ಕಾಗಿ ಮುಂದೆ ಬರುವವರೂ, ಕಾಂಗ್ರೆಸ್ಸಿನ ಅರ್ಥಾತ್ ಸಾಮಾನ್ಯ ಜನರ ಹಿತದ ಕಡೆಗೆ ನಿರ್ಲಕ್ಷ್ಯ ಭಾವವನ್ನು ತೋರಿಸಿ, ಜಿಲ್ಲಾ ಬೋರ್ಡಿನಲ್ಲಿ ಮುಂದಕ್ಕೂ ತಮ್ಮ ಕೈವಾಡ ನಡೆಸುವರೆ ಮುಂದಾಗುವವರೂ ಆದವರಿಗೆ ಸ್ಥಾನಗಳು ಸಿಕ್ಕದಂತೆ ಮಾಡಬೇಕಾಗಿರುವುದೂ ಮತದಾರರ ಕರ್ತವ್ಯವಾಗಿದೆ.

ಇಂತಹ ಒಂದು ಸಂದರ್ಭವನ್ನು ಜಿಲ್ಲಾ ಕಾಂಗ್ರೆಸ್ ಒದಗಿಸಿ ಕೊಟ್ಟಿರುವುದರಿಂದ ಸೇವಾಬುದ್ಧಿಯ ಜನತೆಯು ಕಾಂಗ್ರೆಸ್ಸಿನ ಅಭಿಮಾನವನ್ನು ಎತ್ತಿ ಹಿಡಿಯುವ ಬಗ್ಗೆ ಜಿಲ್ಲಾ ಕಾಂಗ್ರೆಸ್ಸಿನ ಆದಂ ವಿಶ್ವಾಸಕ್ಕೆ ಪಾತ್ರರಾಗಿರುವರೇ ಅರಿಸಿ ಬರುವಂತೆ ನೋಡಿ ಕಡೆಗೆ ಎಲ್ಲಾ ಸದಸ್ಯರೂ ಸೇರಿ ತಾವು ಕಾಂಗ್ರೆಸು ಸೇವಕರೆಂದೇ ಅನ್ನಿಸಿ ಕಾಂಗ್ರೆಸಾ ಪಕ್ಷ ಎಂಬುದನ್ನು ದೃಢಪಡಿಸಬೇಕು. ಹಾಗೂ ಜಿಲ್ಲೆಯ ನಮ್ರ ಸೇವಕರಾಗಬೇಕು.

ವೇತನ ಕೊಡಬೇಕಾಗಿ ಬರಬಹುದು

ಮುಂದಿನ ಜಿಲ್ಲಾ ಬೋರ್ಡಿನ ಸದಸ್ಯರು ಜಿಲ್ಲೆಯ ಸೇವೆಗೆ ಬದ್ಧ ಕಂಕಣರಾಗಿರಬೇಕಾಗಿ ಬರುವುದರಿಂದ ಅಗತ್ಯ ಇರುವ ಜನೋಪಕಾರಿ ಕೆಲಸಗಳನ್ನಸೂತ್ರವಾಗಿ ಮಾಡಿಕಾಸುವ ಜವಾಬ್ದಾರಿಯನ್ನು ಹೊರಲು ಸಿದ್ಧರಾಜವರೇ ಸದಸ್ಯರಾಗಿ ಮುಂದೆ ಬರಬೇಕು. ಸಾಮಾನ್ಯ ಜನರ ಸೇವೆಗಾಗಿ ತಿಳಿಮನಸ್ಸಿನಿಂದ ಮುಂದೆ ಬರುವವರನ್ನು ಆರಿಸಿ ಕಳುಹಿಸುವ ಜವಾಬ್ದಾರಿಯೂ ಮತದಾರರ ಮೇಲೆಯೆ ಇದೆ. ಜನಸೇವೆಮಾಡಬಯಸುವ ಕೆಲಸಗಾರರು ಭಿಕ್ಷಾಪಾತ್ರವನ್ನಾದರೂ ಹಿಡಿದು ಸದಸ್ಯತನಕ್ಕಾಗಿ ಸರಕಾರಕ್ಕೆ ತೆರಬೇಕಾದ ಹಣವನ್ನು ಭಕ್ತಿಮಾಡಿಕೊಂಡು ಉಮೇದ್ವಾರರಾಗಬೇಕು. ಚುನಾವಣೆಯಲ್ಲಿ ಸೋತರೂ ಅದಕ್ಕಾಗಿ ಚಿಂತಿಸಬಾರದು. ಬಂಡವಾಳ ಶಾಹಿತ್ವಕ್ಕೆ ಸುಲಭದಲ್ಲಿ ಸ್ಥಾನವನ್ನು ಬಿಟ್ಟು ಕೊಡಬಾರದು. ಕೊಡುಗೈಯ ಸಾಮಾನ್ಯ ಮಹನೀಯರ ಮಟ್ಟಿಗೆ ದಿವಾಳಿಗಿರಿಯಾಗಲಿಲ್ಲ. ನಿಜವಾದ ಕೆಲಸಗಾರರು ಸೇವಾಬದ್ಧರಾಗಿ ಮುಂದೆ ಬರುವುದಾದರೆ ಸದ್ವಿನಿಯೋಗದ ಹಣವು ಅವರನ್ನು ಹುಡುಕಿ ಬರಲಿರುವುದು. ಆದುದರಿಂದ ಈ ಮುಂಬನ ಕಾಂಗ್ರೆಸು ಕೆಲಸಗಾರರು ಈಗಿನ ವರ್ಷಕಾಲದಲ್ಲಿ ಮುಂದೆ ಬಂದು ತಮ್ಮ ಪಾಲಿನ ಸೇನೆಯನ್ನುಮಾಡಬೇಕು ಹಾಗೂ ತನ್ನ ಅಡಗಿಸಿಟ್ಟ ಪ್ರತಿಭೆಯನ್ನು ಮತ್ತೊಮ್ಮೆ ಜಿಲ್ಲೆಯಲ್ಲಿ ಪ್ರದರ್ಶಿಸಬೇಕು.

ಮಾದರಿಯ ಜಿಲ್ಲಾ ಬೋರ್ಡಾಗಬೇಕು

ಮುಂದಕ್ಕೆ ಸಂಯುಕ್ತ ಜವಾಬ್ದಾರಿಯುತವಾದ ಜಿಲ್ಲಾ ಬೋರ್ಡು ಮಾದರಿಯಾಗಿ ತಲೆ ಎತ್ತಿನಿಲ್ಲಬೇಕು. ಯಾವ ಸುಧಾರಣೆಗಳನ್ನು ಮಾಡಿ ಜನ-ಸಾಮಾನ್ಯರ ಮುಖ್ಯವಾಗಿ ಹಿಂದುಳಿದವರ ಸೇವೆಯನ್ನು ಮಾಡಬಹುದೋ ಆವಕ್ಕಾಗಿ ಅನೇಕ ತರದ ಯೋಜನೆಗಳನ್ನು ತಯಾರಿಸಿ, ಅದು ಕಾರ್ಯದಲ್ಲಿ ಮುಂದಡಿ ಇಡುವಂತೆ ಪ್ರಯತ್ನಿಸಬೇಕು. ಜಿಲ್ಲಾ ಬೋರ್ಡು ಸ್ಥಳೀಯ ಒಳಾಡಳಿತದಲ್ಲಿ ಯಾವ ಸುಧಾರಣೆಯ, ಸದುದ್ದೇಶದ ಕಾರ್ಯಕ್ರಮಗಳು ಆಗಬೇಕೋ ಅದೆಲ್ಲಾ ಆಗುವಂತೆ ಪ್ರಯತ್ನಿಸಿ ಅದಕ್ಕೆ ಬೇಕಾದ ಸಲಹೆ ಸಹಕಾರ. ಧನ ಸಹಾಯವನ್ನು ಸರಕಾರದಿಂದೆ ಇಲ್ಲವೇ ಬಂಡವಾಳ ಶಾಹೀ ಸಂಸ್ಥೆಗಳಿಗೆ ಅಧಿಕವಾಗಿ ಕರ ಹೊರಿಸಿ ಆ ಹಣ ಮುಟ್ಟಾಂತರ ಜನತಾ ಸೇವೆಮಾಡಬೇಕು.

ಸದಸ್ಯರು ಇಡೀ ಜಿಲ್ಲೆಯನ್ನು ಸಂದರ್ಶಿಸಿ ಆಲ್ಲಲ್ಲಿಯ ಜನಸಾಮಾನ್ಯರ ಕಷ್ಟತೊಂದರೆಗಳನ್ನು ತಿಳಿದು ಜಿಲ್ಲಾ ಬೋರ್ಡಿಗೆ ಉಪಯುಕ್ತ ಸಲಹೆಗಳನ್ನು ಕೊಟ್ಟು ಹಿಂದುಳಿದ ಪರಿಗೆ ಕಡ್ಡಾಯ ಶಿಕ್ಷಣ ಕೊಡುವಂತಾಗಬೇಕು. ಹೈಸ್ಕೂಲು-ಕಾಲೇಜುಗಳು ಕಮ್ಮಿಯಾದರೂ ಚಿಂತಿಲ್ಲ. ಪ್ರಾಥಮಿಕ ವಿದ್ಯಾಭ್ಯಾಸವು ಸರ್ವಸಾಧಾರಣ ಪ್ರತಿ ಒಬ್ಬ ಮಕ್ಕಳಿಗೆ ಸಿಕ್ಕುವಂತಾಗಬೇಕು.

ಜಿಲ್ಲಾ ಬೋರ್ಡುಕೃಮೇಣ ಜಿಲ್ಲೆಯ ಅಧಿಕಾರ ಸೂತ್ರವನ್ನು ಹಿಡಕೊಳ್ಳುವಂತಾದರೂ ಆದಕ್ಕಾಗಿಕೂಡಾ ತಯಾರಿರಬೇಕು.

ದೇಶಕಾಲಕ್ಕೊಪ್ಪುವ ನವೀನ ಪುಸ್ತಕ

ಸ್ವಾತಂತ್ರ್ಯವೀರ ಸಾವರಕರರು

ಹಿಂದೂ ಸಂಸ್ಕೃತಿ ಮತ್ತು ಹಿಂದೂರಾಷ್ಟ್ರಕ್ಕಾಗಿ ಸರ್ವತ್ಯಾಗ ಮಾಡಿದ ವೀರ ಸಾವರಕರರ ಉಜ್ವಲಜೀವನ ಚರಿತ್ರೆ

ಮೈಜುಮ್ಮೆನ್ನಿಸುವ ಹಲವು ಸನ್ನಿವೇಶಗಳು!

ವಿಚಾರ ಕ್ರಾಂತಿಯನ್ನುಂಟುಮಾಡುವ ಘಟನೆಗಳು!

ಪ್ರಸಿದ್ಧ ಹಿಂದೀ ಲೇಖಕ ಪಂಡಿತ ಚಿಂದ್ಯಗುಪ್ತ ವೇದಾಲಂಕಾರ ಇವರ ಹಿಂದೀ ಗ್ರಂಥದ ಕನ್ನಡ ಅನುವಾದ.

ಕನ್ನಡಿಸಿದವರು-ಶ್ರೀಮತಿ ಇಂದಿರಾಬಾಯಿ,
ಮೈಸೂರು, ಸಂಸ್ಥಾನ.

ಬೆಲೆ ಬರೇ ರೂ. 1—4—0

ರೂ. 1—8—0 ಕ್ಕೇಸಿದರೆ 1 ಪ್ರತಿಯನ್ನು ರಿಜಿಸ್ಟರ್ ಮಾಡಿ ಕಳಿಸಲಾಗುವುದು.

ಪ್ರತಿಗಳು ಸಿಗುವ ಸ್ಥಳಗಳು:—

1. ಸ್ಕೂಲ್ ಬುಕ್ ಕಂಪೆನಿ, ಮಂಗಳೂರು. 2. ಸತ್ಯಶೋಧನ ಪುಸ್ತಕ ಭಂಡಾರ, ಬೆಂಗಳೂರು. 3. ನವಭಾರತ ಪುಸ್ತಕ ಭಂಡಾರ, ಉಡುಪಿ. 4. ಪಾವಂಜೆ ಗುರುರಾವ್, ಉಡುಪಿ. 5. ನವಯುಗ ಆಫೀಸು, ಉಡುಪಿ.

ಕಾಸರಗೋಡು—"ಶ್ರೀ ಹಿಂಕಾರಿಣೀ ಭಜನಾ ಸಂಘ"ದ ದ್ವಿತೀಯ ವಾರ್ಷಿಕೋತ್ಸವವು, ಕಳೆದ ಮಹಾನವಮಿಯ ದಿನ ತಳಂಗರೆ-ಶ್ರೀ ವೀರಾಂಜನೇಯ ಭಗವತೀ ಮಂದಿರದಲ್ಲಿ ಪಂ॥ ಕೆ. ಎ. ದೇಸಡಾಸ, ಶಿರೋಮಣಿ, ಬಿ. ಹಿ. ಎಲ್, ಇವರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯದರ್ಶಿ-P. V. ಕಾಂಞರಾಮನವರು ಗತವರ್ಷದ ವರದಿಯನ್ನು ಒಪ್ಪಿಸಿದರು. ಪಂಡಾಸರವರ ಶ್ರೀ M. ಕಾಂಞಕಣ್ಣ ಮಾಸ್ತರರು ಭಜನೆಯಉತ್ಪತ್ತಿ, ಭಕ್ತಿಯ ಮಹಿಮೆ, ಮುಂತಾದ ಕುರಿತು ಭಾಷಣ ಮಾಡಿದರು ಹೊಸ ವರ್ಷದ ಕಾರ್ಯಸಮಿತಿಯನ್ನು ನೇಮಿಸಿದ ಬಳಿಕ ಕಾರ್ಯದರ್ಶಿಯವರ ಕೃತಜ್ಞತಾ ಪ್ರಕಟನೆಯಾಗಿ ಲಘು ಉಪಹಾರದೊಂದಿಗೆ ಸಭಾಕಾರ್ಯವಾಯಿತು.

ಕೊಲ್ಲೂರು—ತಾ. 3-10-46ರಲ್ಲು ಕೊಲ್ಲೂರು ನಿವಾಸಿಕರ ಮತ್ತು ಶ್ರೀ ಮೂಕಾಂಬಿಕಾ ಅಮ್ಮನವರ ಭಜಕರ ಮಹಾ ಸಭೆಯು ಕೊಲ್ಲೂರು ಪಂಚಾಯತ ಬೋರ್ಡಆಫೀಸಿನಲ್ಲಿ ಜರಗಿತು. ಮದ್ರಾಸಿನ ಎಡ್ವೊಕೇಟ್ ಯಂ. ಚಿಂಗಪ್ಪನ್. ನಾಯರ್ ಇವರು ಆ ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಕೊಲ್ಲೂರು ಗ್ರಾಮದ ಸರ್ವತೋಮುಖ ಅಭಿವೃದ್ಧಿಗಾಗಿ ದೂರಲ್ ಡಿಸ್ಪೆನ್ಸರಿ, ಶಾಲೆ, ಸಹಕಾರಿ ಸಂಘ, ಮೊದಲಾದವುಗಳನ್ನು ಈ ಗ್ರಾಮದಲ್ಲಿ ಸ್ಥಾಪಿಸುವಂತೆಯೂ. ಸಾರ್ವಜನಿಕ ಆರೋಗ್ಯವು ಸುಧಾರಿಸುವಂತೆ ಆರೋಗ್ಯ ಯಾತೆಯವರು ನುಲೇರಿಯಾ ನಿವಾರಣೆಯ ಕಾರ್ಯಕ್ರಮ ಕೈಕೊಳ್ಳುವಂತೆಯೂ ಮಾನ್ಯ ಸರಕಾರಕ್ಕೆ ಮನವಿಸಮಾಡಿಕೊಳ್ಳಬೇಕಾಗಿಯೂ ನಿರ್ಧರಿಸಲಾಯ್ತು. ಯಾತ್ರಿಕರ ವಾಸ್ತವ್ಯದ ಬಗ್ಗೆ ಒಂದು ಸಾರ್ವಜನಿಕ ಛತ್ರವನ್ನೂ ಆಗತ್ಯಉಳ್ಳ ಅನುಕೂಲತೆಗಳನ್ನೂ ಒದಗಿಸಿಕೊಡುವ ಬಗ್ಗೆಯೂ. ಶ್ರೀ ಮಾತಾ ಚಾರಿಟಿ ಫಂಡುಎಂಬ ಒಂದುನಿಧಿಯನ್ನು ಸ್ಥಾಪಿಸಿ ಅದರ ಬಗ್ಗೆ ಧನ ಸಂಗ್ರಹ ಮಾಡಬೇಕಾಗಿಯೂ ನಿರ್ಧರಿಸಲಾಯ್ತು. ಸಭೆಯ ಕಾರ್ಯಗಳನ್ನು ನಡಿಸುವ ಬಗ್ಗೆ ಶ್ರೀಗಳಾದ, ಸಿ. ಕೆ. ಮಣ್ಣಾಡಿಯಾರ್. ಜನಿವಾರದಾರ್, ಯಂ. ಚಿಂಗಪ್ಪನ್ ನಾಯರ್, ಎಡ್ವೊಕೇಟ್ ಡಾಕ್ಟರ್. ಟಿ. ಎನ್. ಕೇಳುನಂಬ್ಯಾರ್, ಸೈ ಮಂಜಯ್ಯ ಶೆಟ್ಟರು ಎಡ್ವೊಕೆಟ್. ಯು. ಬಿ. ಕೃಷ್ಣರಾವ್, ಅಡ್ವೊಕೆಟ್, ಕೆ. ತ್ರಿನಿಕ್ಕಮ ಅಡಿಗರು, ದೇವಸ್ಥಾನದ ಆರ್ಚಕರು. ಪಿ. ಎನ್. ಮೂರ್ತಿ ಅಮ್ಮ ಎಂ. ಎ. ಬಿ. ಎಲ್ ದೇವಸ್ಥಾನದ ಎಕ್ಸಿಕ್ಯುಟಿವ್ ಆಫೀಸರರು-ಕಾರ್ಯದರ್ಶಿ. ಮತ್ತು ಕೋಶಾಧ್ಯಕ್ಷರಾಗಿ ಆರಿಸಲಾಯಿತು.

ಮುಂಬಯಿ—ಶ್ರೀ ಭಗವತಿ ನೃತ್ಯಕಲಾ ಮಂದಿರಿಯಲ್ಲಿ ಶಾರದ ಪೂಜೆಯೂ ವೆಸರಾ ಮಹೋತ್ಸವವೂ 5-10-46ರಲ್ಲು ಭಂಡಾರ ಮನೆ ಐತಪ್ಪನವರ ಅಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಿಂದ ಜರಗಿಸಲ್ಪಟ್ಟಿತು. ಶ್ರೀಗಳಾದ ಡಿ. ಆರ್. ಭಟ್ ಸಿಬ್ಬಾರ್ಕರ್, ನಾರಾಯಣ ಹರಿದಾಸ್‌ರು ಗಾಯನ, ನೃತ್ಯ ಕಲೆಯ ವಿಷಯವಲ್ಲಿ ಬೋಧಪ್ರದ ಭಾಷಣಗಳನ್ನಿತ್ತರು.

ವಿವಿಧ ಪಾತ್ರೆಗಳು

ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾನ್ಯಿಗಳೂ ರಿಯಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಣ ವ್ಯಾಸಾಚಾರ್ಯ,
ಕಕಳಂದಿ, ಉಡುಪಿ.

[೩ನೇ ಪುಟದಿಂದ]

ರೂ....ವ್ಹೂ....ಗಳೂ ಆದ ಶ್ರೀನಾನ್.... ....ರು ಅವರೇ ನಮ್ಮ ಪರ ಉಮೇದ್ವಾರಿಗಳಾಗಬೇಕೆಂದು ನಾವು ಅತ್ಯಾಗ್ರಹದಿಂದ ಅವರನ್ನು ಕೇಳಿಕೊಳ್ಳುತ್ತೇವೆ' ಎಂಬ ವಿಜ್ಞಾಪನಾಪತ್ರವೊಂದನ್ನು ಬರೆಯಿಸುವುದಕ್ಕೂ, ಊರವರಿಗೆ ಕಾಫಿಕೊಟ್ಟು ಕಾಲು ಹಿಡಿದು ಅದಕ್ಕೆ ದಸ್ಕತು ಹಾಕಿಸುವದಕ್ಕೂ ವ್ಯಯಿಸಿರಿ. ಆ ಪತ್ರ ಪತ್ರಿಕೆಗಳಿಗೆ ಹೋಗಲಿ.

ಚುನಾವಣೆ ಮುಗಿಯುವ ವರೆಗೆ ಆ ಮೇಲಿನ ಎಲ್ಲಾ ದಿನಗಳಲ್ಲೂ ನಿಮಗೆ ಬರಲಿಕ್ಕಾಗುವದಿಲ್ಲವೆಂಬುದನ್ನು ನಿಮ್ಮ ಹಿಕ್ಕಿನ ಕೇರಿ ಮನೆಗೆ, ಶಿಕಾರಿಬೀದಿಗೆ, ಇಸ್ಪೀಟು ಕ್ಲಬ್ಬಿಗೆ,ಮುಂದಾಗಿ ನೋಟೀಸು ಕೊಟ್ಟು ತಿಳಿಸಿ ಮಿಕ್ಕವರು ಹೇಳಿದಂತೆ ಕೇಳಲು ತಯಾರಿರಿ.

ಇದು ವರೆಗಿನ ಕಾರ್ಯಗಳಿಂದ ರಸ್ತೆಯ ಕಲ್ಲು ಸವೆದುದಿಲ್ಲ; ಬಾವಿಯಕೆಸರು ಹೋದುದಿಲ್ಲ; ರಸ್ತೇ ದೀಪದ ಗ್ಲಾಸು ಶುದ್ಧವಾದುದಿಲ್ಲ; ಸಂಕವಾಗಿಲ್ಲ, ಸುಂಕ ಹೋಗಿಲ್ಲ; ಒಟ್ಟಿನ ಮೇಲೆ ಊರು ಊರು ಟಾಗಿಲ್ಲವೆಂಬುದನ್ನೂ ಅದಕ್ಕೆ ಹಳೇ ಮೆಂಬರರ ದೌರ್ಬಲ್ಯವೇ ಕಾರಣವೆಂಬುದನ್ನೂ ಸಾರಿ ಸಾರಿ, ವರ್ಣಿಸಿ, ಗೊಣಗಿ, ಹೊಸ ತನ್ನಬರಬೇಕಾದರೆ ಹೊಸಬರೇ ಬರಬೇಕು ಎಂಬುದನ್ನು ಮತದಾರರಿಗೆಲ್ಲಾ ಮಂದಟ್ಟು ಮಾಡಿರಿ.

ಕೆಲಸ ಮುಗಿಯುವ ವರೆಗೂ ನಿಮಗೆ ಬರುವ ದೂರನ್ನೆಲ್ಲದೆ, ನಿಮ್ಮ ದುಡ್ಡನ್ನು ಗಣಿಸುವದಿಲ್ಲ, ಎಂಬ ಭೀಷ್ಮ ಪ್ರತಿಜ್ಞೆ ಮಾಡಿರಿ.

ನೀವು ನಿರುದ್ಯೋಗಿಗಳಾಗಿರುವಾಗ ಯಾವ ಕಲೆಯನ್ನು ಅಭ್ಯಾಸಿಸಿದ್ದಿರಿ? ಸಿಕ್ಕಿದವರ ಬೆನ್ನಹಿಂದೆ ಹೋಗುವದೇ?—ಹಾಗಾದರೆ ವೋಟಿನ 'ಕೆನ್ವಾಸ್'ನ್ನೇ ಹೆಚ್ಚಾಗಿ ಮಾಡಿರಿ. ಹರಟೆ ಹೊಡೆಯುವದನ್ನೇ ಕಲಿತಿದ್ದಿರಾ?—ಹಾಗಾದರೆ ಭಾಷಣಕೂಟ್ಟು ಮತದಾರರನ್ನೊಲಿಸಲೆಳಸಿರಿ. 'ಅಧವಾ ಹಿರಿಯರುಗಳಿಸಿಟ್ಟುದನ್ನುಂಡು ಮನೆಯಲ್ಲೇ ಹೊರಳಾಡುತ್ತಿದ್ದಿರಾ?—ಹಾಗಾದರೆ 'ಪಾಪ ಕೂಟ್' 'ಚಹಾ ಸತ್ಕಾರ' 'ಸಾಮೂಹಿಕ ಸಂತರ್ಪಣೆ'ಗಳಿಂದಲೇ ಕಾರ್ಯಸಾಧಿಸುವ ಬುದ್ಧಿಯಿರಲಿ- ಗೆಲ್ಲುವ ಸಂದರ್ಭವಿದೆ.

ಮತದಾರರಿಗೆ—

ನೀವು ಸಾಗುವಳ್ಳೀದಾರರಿರಬಹುದು--ವ್ಯಾಪಾರಿಗಳಿರಬಹುದು--ನೌಕರರಿರಬಹುದು. ಚುನಾವಣೆಯ ದಿನಕ್ಕೆ ಯಾವ ಕೆಲಸವನ್ನೂ ಇಡದೆ ಮುಂದಾಗಿ ಮುಗಿಸಿಕೊಂಡು ತಯಾರಿರಿ. ಆದರೆ ಉಮೇದ್ವಾರಿಗಳು ನಿಮ್ಮ ಭೇಟಿಗೆ ಬಂದಾಗ, ಆ ಯ್ಕೋ, ಅಂದೇ ಬಾಕಿಯಾರು ಬಿತ್ತುವದೆಂದು ನಿಶ್ಚಯಿಸಿದ್ದೇನೆ' ಛೆ! ಛೆ! ಆದರ ನೋದಲದಿನ ಮಧುರೆಯಲ್ಲಿ ಹಾಜರಿದ್ದೇನೆಂದು ವಿಜಂಟರಿಗೆ ತಂತಿಕೊಟ್ಟಾಗಿದೆ' 'ಸಾಧ್ಯವೇ ಇಲ್ಲಪ್ಪಾ. ಧೊರೆಗಳು ಇನ್ಸ್ಪೆಕ್ಷನಿಗೆ ಬರುವುದು ಅದೇ ದಿನ'ಎಂದು ಹೇಳಲು ಮರೆಯಬೇಡಿ.

ನಿಮಗೆ ಆಯುರಾರೋಗ್ಯವುಂಟಾಗಲಿ. ಆದರೆ ಚುನಾವಣೆಯದಿನದ ಮಟ್ಟಿಗೆ ಕಾಲು ನೋವೋ, ತಲೆಸಿಡಿತವೋ, ಹೊಟ್ಟೆನೊವೋ, ಏನಾದರೊಂದು ರೋಗ ನಿಮ್ಮ ಆಸುಪಾಸಲ್ಲುಬಾರದೇನೆ' ಉಮೇದ್ವಾರಿಯ ತಿಳಿವಳಿಕೆಯ ಮಟ್ಟಿಗೆ ಉಂಟಾಗಲಿ.

ಮಂತ್ರಿಗಳು ಬಂದಾಗ ಊರ ನಗರ ಸಭೆಗೆ ತಪಸಿರುವ ಸರ್ವ ಆನಾನುಕೂಲತೆಗಳ ನೆನಪು ಹೇಗೆ ಬರುತ್ತದೋ ಉಮೇದ್ವಾರಿಗಳು ಬರುವಾಗಲೆಲ್ಲಾ ನಿಮಗೂ ಹಾಗೆಯೇ ಆಗಲಿ.

ಬಂದ ಬಂದವರಿಗೆಲ್ಲಾ 'ಸೈ' ಎನ್ನಿ. ಎದೆತಟ್ಟಿಕೊಂಡೇ ಹೇಳುವ ಅಭ್ಯಾಸವಿರಲಿ. ಉಮೇದ್ವಾರಿ ಯಾನೆ ಅವನ ಕಡೆಯವರು ಬರುವ ಹೊತ್ತು ನೋಡಿ, ದೂರದ ಗದ್ದೆಗೋ, ನೆರೆಊರ ಗಿರಾಕಿಯ ಮನೆಗೋ ಹೋಗಿದ್ದು, ಅವರು ನಿಮ್ಮನ್ನು ಹುಡುಕಿ ಹಿಡಿದ ಮೇಲೆ, ಹಿಂದಿರುಗುವಾಗ ಅವರೊಟ್ಟಿಗೆ ಜೀನಸು ಜವಳೀ ಅಂಗಡಿ, ವರಿಗೆ-ಅದು ಹೆಚ್ಚಾಗುತ್ತದಾದರೆ-ಮದ್ಯ, ಕಾಫಿ ನಿಲಯಗಳ ವರೆಗಾದರೂ-ಹೋಗಿ ಸ್ವಯೋಜನ ಹೊಂದಲು ಮರೆಯ ಬೇಡಿ.

-ಆದರೆ ನುಡ್ದು ಈ ಬಾರಿ ಬಹಳ ಅಗ್ಗವಾಗಿದೆಯಲ್ಲಾ, ಎಂಬುದನ್ನವರ ಜ್ಞಾಪಕಕ್ಕೆ ತನ್ನಿ. ಹಿಂದೆ ಪೆಟ್ರೋಲಿಗೆ ಬೀಳಕ್ಕಿದ್ದ ಹಣದ ನಾಲ್ಕಾಡಿ ಇಂದು ಪೆಟ್ಟಿಗೆಗೆ ಬೀಳಲಿ.

ಈ ನೋದಲು ಪೆಟ್ಟು ಕೊಟ್ಟ ಅನುಭವ ನಿಮಗಿರಬಹುದು. ಆದರೆ ಈ ಬಾರಿಯ ಒಂದು ವೈತ್ಯಾಸ ಲಕ್ಷ್ಯದಲ್ಲಿರಲಿ. ಮೊದಲಿನಪ್ಪ ಕಾರಿನ ಅನುಕೂಲತೆ ಈಗ ಇಲ್ಲವೆಂದು ಜವರು ಬೇಡಿಕೊಳ್ಳಬಹುದು

ನಿಂತವರಲ್ಲಿ ಪ್ರತಿಯೊಬ್ಬನೂ ನಿನ್ನು ಉಮೇದ್ವಾರಿಯೇ ಎಂಬುದನ್ನು ಸ್ಪರ್ಧಕರು ಪ್ರತ್ಯಪ್ರತ್ಯೇಕವಾಗಿ ಇದಿರು ಬಿದ್ದಾಗ ನಟಿಸಿಯೂ, ಇಕ್ಕಡೆಯವರೂ ಇದಿರಾದ ಬಿಕ್ಕಟ್ಟಿನ ಸಂಬಂಧಗಳಲ್ಲಿ ಅದೇ ಭಾವವನ್ನು ಮುಖಮುದ್ರೆಯ ಮೂಲಕವೂ ತೋರಿಸುವ ಕಲಾನೈಪುಣ್ಯವಿರಲಿ.

ಕೊನೆಗೆ ಯಾರು ಗೆದ್ದರೂ ನೀವು ಗೆದ್ದವರಾ ಕಡೆಗಿರಿ.

ದಿ ಮೂಲ್ಕಿ ಬೇಂಕ್, ಲಿಮಿಟೆಡ್.

ಗ್ರಾಮಸ್ಥರ ನಡುವೆ ಸಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,
Moolky, S. K.



ಕ್ಷಣಿಕ ಗುಣಕೊಡುವ ಔಷಧದ ಬೆನ್ನು ಹತ್ತಿ ಮರುಳಾಗಬೇಡಪ್ಪಾ

ಪುರೋಹಿತ ಶ್ವಾಸಹಾರೀ ಔಷಧ ಮಾತ್ರ ಬೇರೆ ಆದು ದಮ್ಮನ್ನು ಒರೇ ಮುಮುಕಿ, ಇಡದೆ ಅದನ್ನು ಬೇರುಸಹಿತ ಕಿತ್ತು ಹಿಗೆಯುವುದು. ಈ ಔಷಧ ಸುರುವು ಮಾಡಿದಾಗಲೇ ಕೆಮ್ಮೂ ತೇಕೂ ನಿಲ್ಲುನವು; ಮೊಟ್ಟೆ ಹಸನಾಗುವದು; ಪಚನಶಕ್ತಿಯೆಯು ತಿದ್ದುವದು; ಪುಷ್ಟವಸಗಳು ಗಟ್ಟಿಯಾಗುವುವು. ಆ ಮೇಲೆ ದಮ್ಮಿರಲಿಕ್ಕೆ ಸ್ಥಳವೇ ಸಿಗುವದಿಲ್ಲ.

ದನ್ನು, ತೇಕು, ಬನ್ನು ನುಂವು, ಗಂಟಲ ಉರಿಯುವಂಥ ಕೆಮ್ಮು ನುರಾದ ವಿಕಾರಕ್ಕೆ ಪುರೋಹಿತಶ್ವಾಸಹಾರೀ ಪ್ಲೇಸ್ (ನೀಲೀ ಬ್ಯಾಕೇಗ) ತೆಗೆದುಕೊಳ್ಳಬೇಕು. ಅಜೀರ್ಣ ಮತ್ತು ಆಮ್ಲಪಿತ್ತದಿಂದ ಬಳಲುವ ದಮ್ಮಿನ ನವು ಶ್ವಾಸಹಾರೀ ಕಲಾಯಿಡ (ಕೆಂಪು ಪ್ಯಾಕಿಂಗ) ತೆಗೆದುಕೊಳ್ಳಬೇಕು.

೩ ಔನ್ಸ್ ೩ ಔನ್ಸ್‌ಗಿ ಔನ್ಸ್ ಬಾಟ್ಲಿಗೆ ಕ್ರಮವಾಗಿ ರೂ.೩ ೩-೦, ೧ ೧-೮ ಮತ್ತು ೧೨ ೧೦-೦

ಪುರೋಹಿತ ಫಾರ್ಮಸಿ, ಕೊಲ್ಲಾಪುರ

ಸ್ಟಾಕಿಸ್ಟರು ಪೊಪ್ಯುಲರ್ ಸ್ಟೋರ್ಸ್, ಮಂಗಳೂರು, ಟಿ.ಸಿ.ನಾಯರ್‌ಬಜಾರ್ ಎರ್ನಾಕುಲಂ, ಮೈಸೂರು.

ಮುಂಬಯಿ ಸೋಲ ವಿಜಂಟರು.—



• ಮಗ್ಗದ ಮ್ಯಾಲಿಕರಿಗೆ ಸುಸಂದರ್ಭ •

ನಂಬ್ರ P II ಪರ್ಮಿಟುದಾರರಾದ ಮಗ್ಗದ ಮ್ಯಾಲಿಕರು ತನ್ನು ನೂಲಿಗೆ ಬೇಕಾಗುವ ರಂಗುಗಳಿಗೆ ಮಂಗಳೂರು ಇಲ್ಲವೆ ಕಣ್ಣಾನೂರು ರಂಗಿನ ವ್ಯಾಪಾರಸ್ಥರನ್ನು ಅವಲಂಬಿಸಬೇಕಾಗಿತ್ತು. ಈಗ ಅವರಿಗೆ ಬೇಕಾಗುವ ಎಲ್ಲಾ ತರದ ರಂಗುಗಳನ್ನು ಒದಗಿಸಲು ನಾವು ಲೈಸನ್ಸನ್ನು ಪಡೆದಿರುತ್ತೇವೆ.

ಪಿ. ಎ. ಸೈ ಬ್ರದರ್ಸ್, ಉಡುಪಿ.

ಧಾತುಪುಷ್ಟಿ ಲೇಹ

ಇದುಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ ಧಾತುಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ,ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0

ಕಸ್ತೂರಿಮಿಶ್ರಣ ದಶಮೂಲ

ಇದು ಸ್ತ್ರೀಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತ್ಯೆವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾಬಿಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಮಹಾಮದನಕಾಮೇಶ್ವರೀ ಲೇಹ

(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು.)

ನರಗಳ ನುತ್ತ ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉನರ್ತ್ರ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು

ಔತ್ತು 1ರ 10-0-0. ½ ರಾತ್ತು 5-4-0, ¼ ರಾತ್ತು 2-12-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ. ಕ್ಲಾಲೆ ಕಂಗ್ತಿ ಬರದಲ್ಲಿ ರೋಗಕ್ಕೆ ತಕ್ಕಯಾದ ಔಷಧಿ ರವಾನಿಸಬಹುದು. (1) ಆಯುಸಿ ವಿಜಂಟರು:—ನವಭಾರತ ಬುಕ್ ಡಿಪೊ, (2) ಪೊಂಡಾಯಿ ವಿಜಂಟರು:—ಪೊಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ 183, ಸುಭಾಸಬಜಾರ್ ರೋಡ್, ಡಿ. ವಿ. ಪಿ. ಕ್ಯಾಲ್ಕೆ ವರ್ಕ್ಸ್ ಶೋಪ್ ಎದುರುಗಡೆ, ಎಸೀಲ್ (3) ಆನಂದ್ ಸ್ಟೋರ್ಸ್, ಕೆಮಿಸ್ಟ್, ಡಿ. ಐ. ಪಿ. ಮಾಟುಂಗಾ.

ಅಂತರಂಗವು ಮನಸೆಳೆವ—
ಬಹಿರಂಗವು ಕಣ್ಸೆಳೆವ—

ಕ್ರ [illegible] ಯಿಂದ ಆಯ್ದು ಪ್ರಕಟಿಸಿದ 2 ಕಥಾಸಂಗ್ರಹಗಳು.

೧
ಅಂತರಂಗದ ಕಥೆಗಳು

ಶ್ರೀಗಳಾದ ಪಿ. ವೆಂಕಟರಮಣಾಚಾರ್ಯ; ಎಸ್. ವೆಂಕಟರಾಜ, ಎಂ. ವಿ. ಹೆಗ್ಡೆ, ಪೇವದಾಸ, ಕೆ. ಪೈದರ್; ಪಿ. ಎಸ್. ಅರಾಧ್ಯ ಮೊದಲಾದವರ ೧೨ ಉತ್ತಮ ಕತೆಗಳ ಸಂಗ್ರಹ.

ಬೆಲೆ 0-12-0. ಟಿ. ಖರ್ಚು 0-2-0.

೨
ಪ್ರೇಮ-ಪ್ರವಾಹ

ಶ್ರೀಗಳಾದ ಎಂ. ವಿ. ಹೆಗ್ಡೆ; ಎಸ್. ಎಲ್. ಸುಬ್ರಹ್ಮಣ್ಯಂ; ಶ್ರೀಮತಿ ಸರಸ್ವತಿ ಬಾಯಿ ರಾಜವಾಡೆ ಮೊದಲಾದವರು ಬರೆದ ೨೧ ಕತೆಗಳು—ಪ್ರಣಯ ಪ್ರಲಯದ ಕತೆಗಳ ಸಂಗ್ರಹ.

ಬೆಲೆ 0-8-0. ಟಿ ಖರ್ಚು 0-2-0.

ಎರಡೂ ಪುಸ್ತಕಗಳನ್ನು ಒಮ್ಮೆಲೆ ತರಿಸಿಕೊಳ್ಳುವವರಿಗೆ ಟಪ್ಪಾಲು ಖರ್ಚು ಮುಫತ್ತು.

ಪ್ರತಿಗಳಿಗೆ ಬರೆಯಿರಿ—
(1) ಆಂತರಂಗ ಆಫೀಸು, ಉಡುಪಿ.
(2) ನವಭಾರತ ಬುಕ್ ಡಿಪೊ, ಉಡುಪಿ.
(3) ಯು. ಆರ್. ಶೆಣೈ ಎಂಡ್ ಸನ್ಸ್, ಮಂಗಳೂರು.

FOR LIFE ASSURANCE
CONSULT
The New Gaurdian of India Life Insrce Co , Ltd ,
(Chairman - The Hon'ble Mr. M. CT. M Chidambaram Chettyar.)
A policy in this progressive Life Office is a good investment; its Agency is a valuable business connection.
LOCAL OFFICES IN SOUTH KANARA.
MANGALORE
&
KARKALA.
HEAD OFFICE
"United India Life Bldg"
Esplanade. Post Box No. 142.
MADRAS.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ
೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಘೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದಲ್ಲಿ,....ಚಟ್ಟೆ ಬದ್ದಿದ್ದರೆ, ಉಷ್ಣದಿಂದ ಜೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಪ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೬ ದಿವಸ ಸೇವಿಸಬೇಕು. ಈ ಔಷಧವನ್ನು ಬೇಷಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಮಾರ,ಕುಂಬಳಕಾಯಿ,ಒಳ್ಳಿಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ಡಾವಣಗೇರಿ:ಡಾವಣಗೇರಿವೈದ್ಯ. ಶಕ್ತ್ಯನುಸಾರ ವ್ಯವಹಾರ ಮಾಡತಕ್ಕ ವಾಲಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ಡಾವಣಗೇರಿ,
ಆಯುರ್ವೇದ ಔಷಧಾಲಯ, ಗದಗ.
Ayurveda Oushadalaya GADAG

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ.)



೮ ಔನ್ಸಿನ ಶೀಷ್ಟಿಗಳು ಹೆಚ್ಚು ಕಡಿಮೆ ೪೦ದಿವಸಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯಿಗಳು ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ.ವಿ.ಶಾಸ್ತ್ರಿ, ಆಯುರ್ವೇದ ಭೂಷಣ, ನಂ.೨ ಕೊಡಿಯಾಲಬೈಲು, ದ.ಕ.

ಸ್ವಾಕಿಸ್ವರು- ಡಾ| ಏ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಸ್ವರ್ಗಸ್ಥ ಡಾಕ್ಟರ್ ಎಂ. ಮಾಧವಾಚಾರ್ಯರಿಂದ ರಚಿಸಲ್ಪಟ್ಟ ಎರಡು ಅತ್ಯುತ್ತಮ ನಾಟಕಗಳು.

ಸರಸ್ವತಿ ಬೆಲೆ 0-12-0

ಅಲ್ಪ ಕಿಕ್ಷಣದಿಂದುಂಟಾಗುವ ಅಸಹ್ಯ ಪರಂಪರೆಗಳನ್ನು ಪ್ರತ್ಯಕ್ಷವಾಗಿ ಹೃದಯದ್ರಾವಕವಾದ ರೀತಿಯಲ್ಲಿ ಕಾಣಿಸುವ ಸಾಮಾಜಿಕ ನಾಟಕ.

ಮೀರಾಬಾಯಿ ಬೆಲೆ 0-10-0

ಶ್ರೀಕೃಷ್ಣ ಪರಮಾತ್ಮನ ಆರಾಧನೆಗೆ ಸಂಸಾರಿಗಳಾಗಿರುವವರಿಗೂ ಅವಕಾಶವಿದೆ ಕಪಟ, ವಿಶ್ವಾಸಘಾತಕತನ, ಅನಿವಾರ, ಪ್ರವಾದ ಇವುಗಳಿಂದುಂಟಾದ ದುಃಖವನ್ನು ದೂರೀಕರಿಸಲು ಭಗವದ್ಭಕ್ತಿಯೊಂದೇ ಉತ್ತಮ ಸಾಧನವೆಂಬುದನ್ನು ಸಾರುವ ಭಕ್ತ್ಯುದ್ಧಾರ್ಯ ನಾಟಕ.

ಎರಡೂ ಪ್ರತಿ ಬೇಕಾದವರು ರೂ. 1-8-0 ಕಳಿಸಬೇಕು

ನವಭಾರತ ಪುಸ್ತಕ ಭಂಡಾರ, ಉಡುಪಿ
ಕಿರಿಯರ ಪ್ರಪಂಚ, ಉಡುಪಿ

'ಇಂಗ್ಲಿಷ್ ಬರುವುದಿಲ್ಲವಲ್ಲಾ' ಎಂದು ಚಿಂತಿಸುವಿರೇಕೆ?
ಸುಲಭದಲ್ಲಿ ಇಂಗ್ಲಿಷ್ ಕಲಿಯಲು ಅನುಕೂಲವಾದ ಪುಸ್ತಕ ಇಲ್ಲಿದೆ–

ಶ್ರೀ. ಕೊರಡ್ಕಲರ ಇಂಗ್ಲಿಷ್ ಸ್ವಯಂಬೋಧಿನಿ

ENGLISH MADE EASY

ಈ ಪುಸ್ತಕದಿಂದ ನೂರಾರು ಜನರು ತಾವಾಗಿ ಸುಲಭದಲ್ಲಿ ಇಂಗ್ಲಿಷ್ ಕಲಿತುಕೊಂಡಿದ್ದಾರೆ.
ನೀವೇಕೆ ಕಾಲಹರಣ ಮಾಡಬೇಕು? ಇಂದೇ ಒಂದು ಪ್ರತಿಯನ್ನು ಕೊಂಡುಕೊಳ್ಳಿರಿ.

ಬೆಲೆ ಬರೇ ರೂ. 1–8–0 ಟಪ್ಪಾಲು ಖರ್ಚು 0–4–0 ಪ್ರತ್ಯೇಕ

ಪ್ರತಿಗಳಿಗೆ ಬರೆಯಿರಿ—

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

EDITED, PRINTED & PUBLISHED BY K. H. SHETTY AT THE NAVAYUGA PRESS UDIPI, S. INDIA.

Regd. No. M. 3618. Estd. 1921 ಸ್ಥಾಪನೆ. ಬೆಲೆ: 0—1—6.

ನವಯುಗ

ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 4—8—0
6 ತಿಂಗಳಿಗೆ ರೂ. 2—8—0
6 ತಿಂಗಳಿಗಿಂತ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ.
ಮೂದರಿ ಸಂಚಿಕೆಗೆ ಬರೆಯಿರಿ.
ಮೆನೇಜರ್,
ನವಯುಗ, ಉಡುಪಿ, ದ. ಕ.

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ.

ವರ್ಷ ೨೬ | ವಾರ ೪ | FOUNDER: SRI. A. B. SHETTY, M.L.A. | Vol. 26 | No. 8

ಉಡುಪಿ • 24—10—1946 • ಮಂಗಳೂರು.

ಅಮೃತಾಂಜನ.
ತಲೆನೋವು, ತಿರುಗು, ವೇದನೆ, ಉಳುಕು ಕುತ್ತಿಗೆ, ಭುಜ, ಹಲ್ಲು ನೋವುಗಳಿಗೂ ಎದೆನೋವು, ಭಾಯುಗಳು ಬಾತು ಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ ಪಕ್ಷವಾತ, ಮೊಡಿಸೆ ನೋವಾದಿ ಎಲ್ಲಾ ರೋಗಗಳಿಗೂ ಸಿದ್ಧ ಔಷಧ. REGD.
ಅಮೃತಾಂಜನ ಲಿಮಿಟೆಡ್.
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

The best preventive in epidemics of CHOLERA

"BHUVANENDRA"
CHANDRAMAS

Also a sovereign remedy for diarrhoea, Stomachache, Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ'
ಚಂದ್ರಮಸ್ ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೂಡನಿರತಕ್ಕ ಅತ್ಯುತ್ತಮ ಔಷಧಿ.

ದೊಡ್ಡವರಿಗೆ 40ಂದ 8ಚೊಟ್ಟು, ಸಣ್ಣಮಕ್ಕಳಿಗೆ 1ರಂದ 2ಚೊಟ್ಟು ಲವಂಗ ಯಾ ಏಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ

ಉಡುಪಿ ಸ್ವಾತಿಸ್ಥರು:—ಡಾ। ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಶ್ರೀ। ಆರ್। ಎಸ್। ಶೆಣೈ, ರಥಬೀದಿ; ಡಾ। ಪಿ. ಜಿ. ಆಚಾರ್ಸ್ ಫಾರ್ಮಸಿ; ಡಾ। ಕೆ। ಶೇಷ ಗಿರಿ ಸೈ, L.I.M.; ಡಾ। ವೆಂಕಟರಾವ್, ಕೊರಡ್ಡಲ್; ನವಭಾರತ ಬುಕ್ ಡಿಪೊ

Life is full of Opportunities.

Life is full of events and opportunities created by God for man and by man for himself and his fellowmen. Normal life presupposes a prosperous family, a happy home, good education, congenial vocation, good relations, friends, a cultured society and also a few ups and downs to spice them all with. Have you made sure that your family too can reasonably aspire to lead such a life even in your absence?

The Canara Mutual Assurance Co., Ltd.,
HEAD OFFICE: **UDIPI,** (S. India.)

Chief Agents for the Bombay and Madras Presidencies including States and the States of Mysore and Hyderabad:

The Commercial Corporation of India, Ltd.,
UDIPI. (S. India.)

THE
Bombay Life Assurance Company Ltd.
(ESTD·1908)
A PREMIER INSURANCE COMPANY.

New Business in 1945 - - 2,77,23,100.

KOCHIKAR BROTHERS, LTD.
(ESTD. 1910)
Chief Agents for South India including
Travancore, Cochin and Mysore State.

New Business in 1945 in our area:- **Over 5 Millions.**

OUR Expert advice gained by 35 years Experience is at your door FREE.

Drop a card to any of our Offices at:—
MADRAS * BANGALORE * MADURA * CALICUT
TRIVENDRUM * UDIPI * AND BOMBAY.

ಉಡುಪಿ ಬೋರ್ಡಿಂಗ್ ಎಂಡ್ ಲೋಜಿಂಗ್ ಮಧುರಾ.

ತಾ 8—8—1945ರಲ್ಲಿ ಜರಗಿದ ಅರಮನೆ ಹುಟ್ಟುಹಬ್ಬದ ಸಮಾರಂಭದ ಸಂತೋಷ ಕಾಲದಲ್ಲಿ ನಮಗೆ ಸಕಲ ವಿಧದಿಂದಲೂ ಬೆಂಬಲವಿತ್ತು ಪ್ರೋತ್ಸಾಹಿಸಿದ ಮಹನೀಯರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇವೆ. ಇದಕ್ಕಿಂತಲೂ ದ್ವಿಗುಣಿತವಾಗಿ ನನ್ನು ಸೇವೆಯನ್ನು ಹೊಸ ವರುಷದಲ್ಲಿ ಸಲ್ಲಿಸಲು ಮಹಾಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನಿತ್ತು ಯುವರೆಂದು ನಿರೀಕ್ಷೆ.

ಎಲ್. ನರಸಿಂಗ ರಾವ್,
ಪ್ರೊಪ್ರೈಟರ್.

—ಮಕ್ಕಳನ್ನು ಹಡೆಯುವುದು ಸಾಕು—
ಅಕ್ಕ ಸ್ತ್ರೀಯರಿಗೆ **ಬರ್ಥ್ ಕಂಟ್ರೋಲ್** ರೋಗಗ್ರಹಸ್ತ ಕೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ ಆಲ್ಲದೆ ಸ್ತ್ರೀಯರ ಬಿಳಿಶರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ನೋದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಹಕ್ಕೆ:—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ಬೇರೆ.

ಮೂಲಕರು:—ಹಾಲಪ್ಪ ಫಕೀರಪ್ಪಾ ಡಾವಣಗೇರಿ
ಆಯುರ್ವೇದ ಔಷಧಾಲಯ. ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗವಗ, ಬಾಗಲಕೋಟೆ ಧಾರವಾಡ, ವಿಜಾಪುರ—ಮಾನಪ್ಪ ಶಿವಲಿಂಗಪ್ಪ, ಧಾರವಾಡಕರ, ವಿಜಾಪುರ. ಚಿಕ್ಕೋಡಿಯಲ್ಲಿ:—ಹುಂಬರವಾಡಿ ಸ್ಟೋರ್ಸ್, ಡಾವಣಗೇರಿ:—ಡಾವಣಗೇರಿ ಪ್ರೆಸ್ಸ್. ಆರ್. ಎಲ್. ಕವಲಿದಾಸ, ಹೆಮಸ್ಟ, ಹಾವೇರಿ, ಬ್ಯಾಡಗಿ

Ayurveda Oushadalaya, GADAG CITY.

For prompt and efficient Banking Service

Bank with

THE VIJAYA BANK LIMITED.

Head Office:—**MANGALORE.**

Branches: **Byndoor, Coondapoor, Brahmavar, Udipi, Kaup, Karkal, City-Mangalore, Kasaragod, Kanhangad, Puttur, Mercara & Bombay.**

ನಾಜೀ ನಾಯಕರ ಘಾತೀ ದೃಶ್ಯ

ಗೋರಿಂಗನ ಆತ್ಮಹತ್ಯೆ— 10 ಮಂದಿಯ ಪ್ರಾಣಾಂತ್ಯ ರೋಮಾಂಚಕರ ಘಟನೆಗಳು

ಇದೇ ತಾ. 16ನೇ ಸೂರ್ಯೋದಯವಾಗುವಾಗ ಎಲ್ಲಾ ನಾಜೀ ನಾಯಕರು- ಒಂದು ಕಾಲದಲ್ಲಿ ಇಡೀ ಪ್ರಪಂಚಕ್ಕೆ ಪ್ರಕಾಶವನ್ನೋ ಕಾವನ್ನೋ ಕೊಟ್ಟಿದ್ದ ಉಜ್ವಲ ತಾರೆಗಳು ಅಧವಾ ಧೂಮಕೇತುಗಳು- ಅಸ್ತಂಗತರಾಗಿದ್ದರು; ಪ್ರಪಂಚದ ವೀರ ಮುಕುಟಗಳ ಒಂದುಸಾಲೇ ಉದುರಿ ಬಿದ್ದಿತ್ತು; ಸದುಪಯೋಗದ್ದಿರಲಿ, ದುರುಪಯೋಗದ್ದೇ ಇರಲಿ—ಜಗತ್ತಿನ ಗಣ್ಯ ವಿಷಯವೊಂದು ಕಳೆದುಹೋದ ಅನುಭವವಾಗುತ್ತಿದೆ; ಪ್ರಕೃತಿ ಲೀಲೆ!

ನಾಜೀ ನಾಯಕರ ಯುದ್ಧಾಪರಾಧ ವಿಚಾರಣೆಗಾಗಿ ಸ್ಥಾಪಿತವಾಗಿದ್ದ ನೂರೆಂಬರ್ಗ್ ಅಂತರ್ರಾಷ್ಟ್ರೀಯ ನ್ಯಾಯ ಮಂಡಲವು 11 ಮಂದಿ ಅಗ್ರಗಣ್ಯ ನಾಜಿಗಳಿಗೆ ಘಾತೀ ಶಿಕ್ಷೆ ವಿಧಿಸಿದುದು ಜಗತ್ಪ್ರಸಿದ್ಧವಿದೆ. ಆ ಕುರಿತು 'ಮಿತ್ರ ರಾಷ್ಟ್ರೀಯ ಕೌನ್ಸಿಲ್"ಗೆ ನಡೆದ ಅಪ್ಪೀಲು ಕೂಡಲೇ ನಿರಾಕರಿಸಲ್ಪಟ್ಟು ಪೂರ್ವ ನಿಶ್ಚಯದಂತೆ ತಾ. 16ರಲ್ಲಿ ಎಲ್ಲರನ್ನೂ 'ಘಾತೀ ಕಂಭಕ್ಕೇರಿಸಲಾಯಿತು.

ಆ ಪೈಕಿ ಪ್ರಥಮಾಪರಾಧಿ- ಹಿಟ್ಲರನ ಬಲಗೈ ಬಂಟ- ಜರ್ಮನಿಯ ಅತಿ ಸ್ಮರಣೀಯ ನಾಯಕ- ಹರ್ಮಾನ್ 'ಗೋರಿಂಗ್ ಆ ರಾತ್ರಿಯಲ್ಲೇ ವಿಷ ಸೇವಿಸಿ ತನ್ನನ್ನು ತಾನೇ ಕೊಂದುಕೊಂಡ, ಅವನನ್ನು ನೇತಾಡಿಸುವ ಪುಣ್ಯ ಮಿತ್ರ ರಾಷ್ಟ್ರೀಯರಿಗೆ ಸಿಗಲಿಲ್ಲ, ಉಳಿದ 10 ಮಂದಿಯನ್ನೂ ಕ್ರಮ ಪ್ರಕಾರ ಕಂಭಕ್ಕೇರಿಸಿ ತೀರಿಸಲಾಯಿತು.

ಗೋರಿಂಗ ತಾ. 16 ಹಿಡಿಯುವ ರಾತ್ರಿ 10-45 ಘಂಟೆಗೆ ತನ್ನ ಜೈಲುಕೋಣೆಯಲ್ಲೇ ವಿಷ ಸ್ವೀಕರಿಸಿ ಹೊರಟುಹೋಗಿದ್ದ;ಉಳಿದ ಜೋಕಿಮ್ ವೋನ್ ರಿಬ್ಬಂಟ್ರಾಪ್, ವಿಲ್‌ಹೆಲ್ಮ್ ಕೀಟೆಲ್, ಆಲ್ಫ್ರೆಡ್ ರೋಸೆನ್‌ಬರ್ಗ್, ಕಾಲ್ಟೆನ್ ಬ್ರನ್ನರ್, ಹಾನ್ಸ್ ಫ್ರೇಂಕ್, ವಿಲ್‌ಹೆಲ್ಮ್ ಫ್ರಿಕ್, ಜೂಲಿಯಸ್ ಸ್ಟ್ರೈಚರ್, ಫ್ಲಿಟ್ಸ್ ಸಾವುಕೆಲ್, ಆಲ್ಫ್ರೆಡ್ ಜೋಡ್ಲ್, ಆರ್ಥರ್ ಸೆಯಿಸ್-ಇಂಕ್ವಾರ್ಟ್-ಈ 10ಮಂದಿ ಅನುಕ್ರಮವಾಗಿ ತಾ. 16ನೇ ಪೂರ್ವಾಹ್ನ ಘಂಟೆ 1-11ರಿಂದ 2-45ರ ವರೆಗೆ ಒಬ್ಬೊಬ್ಬರೇ ಘಾತೀ ಕಂಭಕ್ಕೇರಿ ಪ್ರಾಣ ಬಿಟ್ಟರು.

ತಾ. 16ನೇ ರಾತ್ರಿಯ ಕತ್ತಲೆಯೆಷ್ಟು ಭಯಂಕರವಿತ್ತು! ಕಂಟಿ ಹೋಗಿದ್ದ ನೂರೆಂಬರ್ಗಿನಲ್ಲಿ, ಪ್ರಪಂಚದ ಎದೆಯಲ್ಲೇ ಊರಿದಂತಿದ್ದ ಆ ಘಾತೀ ಕಂಭಕ್ಕೆ ಭೂಮಿ ತಾಳಿದ ದೇಹಗಳೇರಿ ಇಳಿಯುತ್ತಿದ್ದ ಆ ಒಂದು ಘಂಟೆ 34 ಮಿನಿಟುಗಳಲ್ಲೂ ಹೆದಾ ಮಳೆ ಸುರಿಯುತಿತ್ತಂತೆ; ಭೂಮಿಯದುರಿಲ್ಲವೆಪ್ಪೆ? ಆ ದೃಶ್ಯ ನೋಡಲಾರದೆ ಹಿಂದೆಗೆಯಲು ಸಾಧ್ಯವಿಲ್ಲದ ಆಕಾಶವು ಕಣ್ಣೀರು ಸುರಿಸಿದುದಾಗಿರಬೇಕು!

ಗೋರಿಂಗನ ಆತ್ಮಹತ್ಯೆ— ಆದ್ಯುತ!

ಇಂದು ಜರ್ಮನ್ ನೆಲವಿರಬಹುದು- ಆದರೆ ಜರ್ಮನಿ ಸತ್ತುಹೋಗಿದೆ. ಆ ಜರ್ಮನಿಯನ್ನು ಸ್ಮರಿಸುವಾಗ ಯಾರನ್ನೇ ಮರೆತರೂ ಗೋರಿಂಗನನ್ನು ಮರೆಯಲಾಗುವದಿಲ್ಲ. ಆತ ಪ್ರಥಮ ಲೋಕಯುದ್ಧದಲ್ಲೇ ಜರ್ಮನಿಗಾಗಿ ಹೋರಾಡಿ ವೀರನೆನ್ನಿಸಿದವ; ಹಿಟ್ಲರನ ಮೇಲೆ ಕೀರ್ತಿಕಿರಣ ಬೀಳುವ ಮೊದಲೇ ಗೋರಿಂಗ ಬೆಳಕಿಗೆ ಬಂದಿದ್ದ. ಪ್ರಥಮ ಜಾಗತಿಕ ಯುದ್ಧದಲ್ಲಿ ಸೋತ ಜರ್ಮನಿ ವರ್ಸೇಲ್ಸ್ ಕರಾರಿಗೆ ಸಹಿ ಹಾಕಿದಾಗ,ಅಂತಹ ದೈನ್ಯಾವಸ್ಥೆ ತನ್ನ ಪಿತೃಭೂಮಿಗೆ ಹೇಳಸಿದ್ದಲ್ಲವೆನ್ನಿತ್ತಾ ತನ್ನ ವಿಮಾನ ಪಡೆಯೊಂದಿಗೆ ತಪ್ಪಿಸಿಕೊಂಡವ ಈ ಗೋರಿಂಗ್. ತೊನೆಗೆ ಹಿಟ್ಲರನ ವ್ಯಕ್ತಿಗತ ಮಹಾತ್ಮೆಯನ್ನು ಕಂಡು ಆತನಿಂದಲೇ ಜರ್ಮನಿಯ ಉದ್ಧಾರವೆಂಬ ವಿಶ್ವಾಸದಿಂದ ಅವನನ್ನು ಮುಂದೂಡಿ ತಾನು ಹಿಂದೆ ನಿಂತು ಬೆಳೆಸಿದವ ಈ ನಾಜೀ ವೀರ. ಸಿನೆಮಾದಲ್ಲಿ ಗೋರಿಂಗ್ ಕಾಣಿಸಿಕೊಂಡರೆ ಜರ್ಮನರೆದ್ದು ಜಯಕಾರನೆಬ್ಬಿಸುತಿದ್ದರು; ಹಿಟ್ಲರನ ಮುಖ ಕಂಡಾಗ ಕೂಡಾ ಹಾಗೆ ಮಾಡುತ್ತಿರಲಿಲ್ಲ. ಈ ಬಾರಿಯ ಯುದ್ಧ ಸೋತಾಗ ಅಜ್ಞಾತವಾಸದಲ್ಲಿದ್ದ ತನ್ನನ್ನು ಸೆರೆಹಿಡಿದ ಬ್ರಿಟಿಷ್ ಸೇನಾನಿಗೆ ಹೈತ್ಕೃವರ್ಕ ಹಸ್ತಲಾಘವ ಕೊಟ್ಟು ಧೀರೋದಾತ್ತ ಯೋಧ ಹೃದಯವೆಷ್ಟು ವಿಶಾಲವಿದ್ದಿದೆ ಎಂಬುದನ್ನು ಲೋಕಕ್ಕೆ ಪ್ರದರ್ಶಿಸಿದ್ದ. "ಹೀಗೆ ಸೋತು ಸಿಕ್ಕಿದವರು ಗೆದ್ದವರಿಗೆ ಹಸ್ತಲಾಘವ ಕೊಡುವದಕ್ಕೆ ಯುದ್ಧವೆಂದರೇನದು ಕ್ರಿಕೆಟ್ ಮೇಟ್ ಏನು?' ಎಂದು ಆಂಗ್ಲೋ ಅಮೇರಿಕನ್ ಪತ್ರಿಕೆಗಳು ಪಟ್ಟಿಸಿ ಕೇಳಿದ್ದುವು. ಮೊನ್ನೆ ನೂರೆಂಬರ್ಗಿನಲ್ಲಿ ತನ್ನ ಮೇಲಿನ ತೀರ್ಪನ್ನು ಕೇಳಲು ಎದೆಯುಬ್ಬಿಸಿಕೊಂಡು ಹಸನ್ಮುಖಿಯಾಗಿ ಕೋರ್ಟಿಗೆ ಪ್ರವೇಶಿಸಿದ್ದ. ಘಾತೀ ಶಿಕ್ಷೆಯ ತೀರ್ಪು ಕಿವಿಗೆ ಬೆದ್ದೊಡನೆ ಕೈಗೆ ಗಲ್ಲವೂರಿ ತೂಗಾಡಿದ ಜರ್ಮನಿಯನ್ನು ಚಿಂತಿಸಿದನೇನೋ! ಅಂದೇ ರಾತ್ರಿ ಸಾಯಲಿಕ್ಕೆದ್ದ ಈ ಮನುಷ್ಯ ತಾ.15ನೇ ಮುಂಜಾನೆ ಡಾಕ್ಟರರು ಬಂದಾಗ "ನನಗೆ ಭಯವೆಂಬುದಿಲ್ಲ; ಕೊನೆಯ ಮುಹೂರ್ತದ ವರೆಗೂ ನನ್ನ ಘನಸ್ಥಿಕೆ ಬಿಡಲಾರೆ" ಎಂದಿದ್ದ. ಇಂಗ್ಲಾಂಡು, ಅಮೇರಿಕ, ರಶ್ಯ, ಫ್ರಾನ್ಸುಗಳ ಇಬ್ಬರಿಬ್ಬರು ಪತ್ರಿಕಾ ಪ್ರತಿನಿಧಿಗಳನ್ನು ಈ ಘಾತೀ ದೃಶ್ಯ ನೋಡಲು ಆಮಂತ್ರಿಸಿದ್ದರು. ಆ ಎಂಟು ಮಂದಿಯೂ ಆ ಮೊದಲೇ ಈ ಮರಣೋನ್ಮುಖರ ಜೈಲು ಕೋಣೆಗಳನ್ನು ಸಂದರ್ಶಿಸಿದ್ದರು. ರಾತ್ರೆ ಸರೀ 9½ ಘಂಟೆಗೆ ಇವರು ಗೋರಿಂಗನ ಕೋಣೆಯೊಳಗಿಣುಕಿದಾಗ ಆತ ತನ್ನ ಹಾಸಿಗೆಯಲ್ಲಿ ಪ್ರಶಾಂತ ನಿದ್ರೆಯಲ್ಲಿದ್ದ; ಟ್ರೌಜರ್ ಹಾಕಿಕೊಂಡು ಮಲಗಿದ್ದ; ಎರಡು ಕೈಗಳನ್ನೂ ನೀಡಿ ಪವಡಿಸಿದ್ದ ಅವನ ಬಲಗೈ ಮುಷ್ಠಿ ಬಿಗಿದಿತ್ತಂತೆ ಅದರಲ್ಲೇ ವಿಷದ ಗ್ಲಾಸಿದ್ದಿರಬೇಕು ಕ್ಷಣಂಪ್ರತಿ ಮರಣ ಸನ್ನಿಹಿತರ ಚಲನವಲನಗಳನ್ನು ನೋಡಲು ಕಾವಲುಗಾರನ್ನಿಟ್ಟಿದ್ದರು; ಗೋರಿಂಗನ ಪಹರೆಯವ ಅವನ ಕೈ ಬಾಯಿಗೆ ಹೋದದ್ದನ್ನು ಕಂಡಿದ್ದಿಲ್ಲ. ಆದರೆ 10½ ಘಂಟೆಗೆ ಗೋರಿಂಗ ಅಲ್ಲಿಯೇ ಮೈಮುದುಡಿಸಿ ವಿಲಕ್ಷಣವಾಗಿ ಕಿರಿಜಿಕೊಂಡುದು ಪಹರೆಯವನ ಕಣ್ಣು ಕಿವಿಯನ್ನರಿಸಿತು. ಆತ ಕೂಡಲೇ ನಾಯಕನಿಗೆ ವರದಿ ಮಾಡಿದ; ನಾಯಕ ಗೋರಿಂಗನ ಕೋಣೆಯೊಳಗ ಧಾವಿಸಿದ. ಸರ್ ಜೈಲರ್, ಅಲ್ಲಿಯೇ ಇದ್ದ ಕಾಲಗುರು ಎಲ್ಲಾ ಓಡಿಬಂದರು. ಇವರು ಒಳಬರುವವಕ್ಕೂ ಗೋರಿಂಗನ ಪ್ರಾಣವಾಯು ಕೊನೆಯ ಕಿರಿಚಾಟಮಾಡಿ ಹೊಂಟುಹೋಗುವದಕ್ಕೂ ಸರಿಹೋಯಿತು: ಸವಿಾಪಿಸಿದುದು ಶವವನ್ನೇ! ಸಕ್ಕದಲ್ಲಿ ಹರಿದದ್ದ ಕವರೊಂದು ಬಿದ್ದಿತ್ತು, ಅದರ ಮೇಲೆ ಎಜ್. ಗೋರಿಂಗ್ ಎಂದು ಪೆನ್ಸಿಲಿನಲ್ಲಿ ವಿಳಾಸ ಬರೆದಿತ್ತು. ಪೆನ್ಸಿಲಿನಲ್ಲೇ ಬರೆದಿದ್ದ ಮೂರು ತುಂಡು ಕಾಗದಗಳು ಇದ್ದುವು. ಆದರಲ್ಲೊಂದರ ಮೇಲೆ ಜೈಲು ಗವರ್ನರ್ ಪಿಳಾಸವಿತ್ತಂತೆ. ಒಂದು ಸಣ್ಣ ಲೋಹದ ಪೆಟ್ಟಿಗೆ, ಶವದ ಬಾಯಿ ಬಿಡಿಸಿ ನೋಡುವಾಗ ಗ್ಲಾಸಿನ ತುಂಡುಗಳು- ಕಾಣಿಸಿಕ್ಕಿದುದಿಷ್ಟು ಆ ಕಾಗದಗಳಲ್ಲಿದ್ದ ಬರೆಹವನ್ನು ಭಾಷಾಂತರಿಸಿ ಓದಿಕೊಂಡಿದ್ದಾರೆ.

ಗೋರಿಂಗನು 'ಫೋಟೇಸಿಯಮ್' ಸಿಯಾನೈಡ್' ಎಂಬ ಭಯಂಕರ ವಿಷ ನುಂಗಿದ್ದ. ಲಕ್ಸೆಂಬರ್ಗಿನಲ್ಲಿ ಸೆರೆ ಸಿಕ್ಕಿದಾಗ ಗೋರಿಂಗನ ಹತ್ತಿರ ಈ ವಿಷದ ಒಂದು ಬಾಟ್ಲಿ ದೊರೆತಿತ್ತಂತೆ. ಕೊನೆಯ ದಿನ

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಲ್ಲ, ತಾಮ್ರ ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾನ್ಯಿಗಳೂ ರಿಯಾಯಿತಿ ದರದಲ್ಲಿ ಯಾಗಿಯೂ ದೊರೆಯುತ್ತವೆ.

ಕಲ್ಲಂಶೆಟ್ಟಿ ವ್ಯಾಪಾರ್ಯರ್ಯ,
ರಥಬೀದಿ, ಉಡುಪಿ.

ಉತ್ತಮ ತೀರ್ಮಾನ ಮತ್ತು ಸೇವೆಗಳಿಗೆ ಅನುಭವವೇ ತಳಹದಿ

ರೇವಣಾತಿದಾರರ ಹಿತವನ್ನು ಸಾಧಿಸಲಿಕ್ಕೂ, ಹೆಚ್ಚು ಲಾಭ ದೊರಕುವಂತೆ ಯೋಗ್ಯ ಸಂಚಯದ ಮೂಲಕ ಬೇಂಕಿನ ಹಣವನ್ನು ಸರಿಯಾಗಿ ವೆಚ್ಚಮಾಡಲಿಕ್ಕೂ, ಗಿರಾಕಿಗಳ ಹಣದ ಅಗತ್ಯಗಳನ್ನು ಪೂರೈಸಲಿಕ್ಕೂ ಸಮರ್ಥವಾದ ಉತ್ತಮ ಧೋರಣೆಯನ್ನು ಕೈಕೊಳ್ಳಲು ತಜ್ಞ ಇತ್ಯರ್ಥಶಕ್ತಿಯು ಅಗತ್ಯ ಪೇಟೆಗಳ ಸ್ಥಿತಿ, ಬೆಲೆಗಳ ಏರಿಳಿತ, ವಿವಿಧ ಧನ ಸಂಚಯ ವಿಧಾನಗಳು, ವ್ಯಾಪಾರೋದ್ಯೋಗಗಳ ಸ್ಥಿತಿ, ಇವುಗಳ ಜ್ಞಾನವೂ ಮುಂದಿನ ಬದಲಾವಣೆಗಳ ಸೂಕ್ಷ್ಮವನ್ನು ಅರಿತುಕೊಳ್ಳುವ ಶಕ್ತಿಯೂ ಉತ್ತಮ ಬೇಂಕಿನಲ್ಲಿರ ಬೇಕಾಗಿದೆ ಈ ವಿಷಯಗಳ ಹಿಂದಿನ ಅನುಭವಗಳ ಜ್ಞಾನವು ಆತ್ಮಪಯುಕ್ತ ಮಾರ್ಗದರ್ಶಕವಾಗಿದೆ

ಆರ್ಥಿಕಪುನರ್ಗಟ್ಟು, ಬಲೆಗಳವಿಕಾಸ ಮತ್ತು ಆತಿವಿಸ್ತರಣೆ ಮೊದಲಾದ ಘಟನೆಗಳಿಂದ ಕೂಡಿದ ನಾಲ್ವತ್ತು ವರ್ಷಗಳ ಅನುಭವದಿಂದಲೂ ತನ್ನ ಭದ್ರವಾದ ಸಾಂಪತ್ತಿಕ ಸ್ಥಿತಿಯಿಂದಲೂ ಕೆನರಾ ಬ್ಯಾಂಕ್ ಗಿರಾಕಿಗಳ ಸಂಪತ್ತಿಸಹಿತ ರಕ್ಷಣೆಗೂ ಎಲ್ಲಾ ತರಗತಿಗಳ ಜನರ ಅಗತ್ಯಗಳನ್ನು ಒದಗಿಸಿಕೊಡಲಿಕ್ಕೂ ಸಮರ್ಥವಾಗಿದೆ.

ನಮಗೆ ಹಣದ ಭದ್ರತೆ ಬೇಕಾದಾಗಲಾಗಲೀ, ವ್ಯಾಪಾರ ಅಗತ್ಯಗಳನ್ನು ಪೂರೈಸಬೇಕಾದಾಗಾಗಲೀ ಕೆನರಾ ಬ್ಯಾಂಕ್ ನಮಗೆ ಬೇಕೆನಿಸುವ ಸೇವೆಯನ್ನು ಸಲ್ಲಿಸುವ ಸ್ಥಾನದಲ್ಲಿದೆ.

— ನಮ್ಮ ವಿಜಿಂಟರನ್ನು ಇಂದೇ ಕಂಡು ಮಾತನಾಡಿರಿ —

ಕೆನರಾ ಬ್ಯಾಂಕ್ ಲಿಮಿಟೆಡ್

ಮೂಲ ಧನ ೨೮ ಲಕ್ಷ | ಸ್ಥಾಪನೆ ೧೯೦೬ | ಕ್ಷೇಮ ನಿಧಿ ೧೧ ಲಕ್ಷ

ವ್ಯವಹಾರದಲ್ಲಿದ್ದ ಜುಮ್ಲಾ ನಿಧಿ ೫೫ ಕೋಟಿಗಿಂತಲೂ ಮೀರಿದೆ

೪೦ ಶಾಖೆಗಳು— ಮಜ್ಯಾಸು, ಕಲ್ಲಿಕೋಟಿ, ಸೆಕುಂದರಾಬಾದ್, ಬೆಂಗಳೂರು, ಕೊಯಮುತ್ತೂರು, ಕೊಚ್ಚಿ, ತೋಲಾಪುರೆ, ಪಾವಣಗೆರೆ, ಮಧುರೆ, ಅಲಪ್ಪೆ, ಹುಬ್ಬಳ್ಳಿ ಇವ ಮೊಗ್ಗಾ, ಸೇಲಂ, ಕ್ವಿಲೋನ್, ಬೆಳಗಾಂವ್, ಮುಂಗಳೂರು ಮುಂತಾದವು . .

● ಮುಂಬಯಿ ಮತ್ತು ಅದರ ಸರಹದ್ದುಗಳಲ್ಲಿ ೫೫ ಶಾಖೆಗಳು ●

CANARA BANK LIMITED

ದಿ ಮೂಲ್ಕಿ ಬೇಂಕ್, ಲಿಮಿಟೆಡ್.

ಗ್ರಾಮಸ್ಥರ ನಡುವೆ ಸಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ಗಣದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು

The Moolky Bank Ltd.,
Moolky, S. K.

ಗೋರಿಂಗನಿಗೆ ವಿಷವೆಲ್ಲಿಂದ?

ಆ ವಿಷ ಅವನಿಗೆ ಹೇಗೆ ಸಿಕ್ಕಿತು? ತಂದು ಕೊಟ್ಟವರಾರು? ಯಾವುದೂ ಗೊತ್ತಾಗಿಲ್ಲ; ಶೋಧ ನಡೆದುಬಿಟ್ಟಿದೆ. ಕೊನೆಯ ಬಾರಿ ಪತ್ನಿಯನ್ನು ಚುಂಬಿಸಲು ಗೋರಿಂಗನನ್ನು ಬಿಟ್ಟಿದ್ದರಂತೆ; ಆವಳು ತನ್ನ ಬಾಯಿಂದ ಇವನ ಬಾಯಿಗೆ ವಿಷದ ಕುಪ್ಪಿ ವರ್ಗಾಯಿಸಿರಬೇಕೆಂಬ ಊಹೆಯಿದೆ.

ಗೋರಿಂಗನಾಗಲೀ ಇತರ ನಾಜೀ ಪ್ರಮುಖರಾಗಲೀ ಮರಣಕ್ಕಂಜಲಿಲ್ಲ. ಆದರೆ ಅಪಮಾನಕ್ಕಂಜಿದ್ದರು. ತಮ್ಮನ್ನು ಕೇಡಿಗಳಂತೆ ಫಾಶಿಗೇರಿಸುವ ಬದಲು ಗುಂಡಿಟ್ಟು ಕೊಲ್ಲುವುದನ್ನು ಅವರು ಆಪೇಕ್ಷಿಸಿದ್ದರು; ಆದೂ ಆಗದೆಂದಾಗ ತಮ್ಮನ್ನು ಬಹಿರಂಗವಾಗಿ ಪ್ರದರ್ಶಿಸಿ ಕೊಲ್ಲುತ್ತಾರೆಂದು ಅವರೆಲ್ಲಾ ಮನಸೊಂದಿದ್ದರು. ಮುಸಲಿನಿಯ ಜಾಹೀರು ದುರ್ಮರಣ ವಾರ್ತೆ ಕೇಳಿದಾಗ ತನಗೂ ಹಿಟ್ಲರನಿಗೂ ವಿಶೇಷಸಂಕಟವಾಗಿತ್ತೆಂದು ಗೋರಿಂಗ ಮೊದಲ ದಿನ ಡಾಕ್ಟರನೊಡನಂದಿದ್ದ. ಆದರೆ ಸಂಬಂಧಪಟ್ಟ ಅಧಿಕಾರಿಗಳು ಮತ್ತು ೩ಮಂದಿ ಬಾತ್ಮೀದಾರರಿದ್ದಲ್ಲಿ ಗುಟ್ಟಿನಲ್ಲೇ ಫಾಶಿಗೆ ಕೊಡುವರೆಂಬುದನ್ನು ತಿಳಿದು ಸಾಯುವ ಅಪರಾಹ್ನ ಗೋರಿಂಗ್ ಸಮಾಧಾನ ಪ್ರದರ್ಶಿಸಿದ್ದ. ವೈರಿಗಳಿಗೆ ಪ್ರಾಣಕೊಡಲಾರೆನೆಂಬ ಶಪಥ ಆ ಶಾಂತ ಹೃದಯದಲ್ಲಿ ಹುದುಗಿದ್ದುದನ್ನು ಯಾರೂ ಅರಿತಿರಲಿಲ್ಲ. ಏನೇ ಆದರೂ ವಿಜೆತ್ಯ ಮತ್ತು ಮರಣ ಗೋರಿಂಗನಿಗೆ ಗೋರಿಂಗನದೇ ಆಗಿತ್ತು; ಅವ ಮನುಷ್ಯ!

ಫಾಶಿಗೇರಿದವರ ಹೃದಯ-ಭೇದ್ಯ!

ತಮ್ಮ ಪ್ರಾಣಪ್ರಿಯ ನಾಯಕರ ಬಿಡುಗಡೆಗಾಗಿ ಕೊನೆಯ ಘಳಿಗೆಯಲ್ಲಿ ಜರ್ಮನರೆಲ್ಲಿಯಾದರೂ ಪ್ರಯತ್ನಿಸಿಯಾರೆಂಬ ಘೋಷಿಯಿಂದ ನೂರಿಂಬಗ್-ನಲ್ಲಿ ವಿಶೇಷ ಮುಂಜಾಗ್ರತೆ ವಹಿಸಲಾಗಿತ್ತು; ಮೃತ್ಯು ಭಕ್ತದಡಿಯಲ್ಲೂ ರಾಜರೀತಿಯಿಂದ ರಬಲ್ಲ ಆ ಅಜೇಯ ನಾಜೀ ನಾಯಕರ ಹೊರತು ಮಿಕ್ಕವರೆಲ್ಲರೂ ಆವೇಗಗೊಂಡಿದ್ದರು. ಆ ನಾಜೀನಾಯಕರೋ-ಅವರು ತಮ್ಮ ಜೀವಮಾನದಲ್ಲಿ ಲೋಕ ಭೀಕರರನ್ನು ಸಿದ್ಧರಿ ಮರಣಕಾಲದಲ್ಲಿ ಫಾಶೀ ನಿರ್ಭಯರನ್ನು ಒಕೊಂಡರು. ತಮ್ಮ ಕೊನೆಯ ಘಳಿಗೆಯನ್ನು ಹೆಚ್ಚನವರು ಅತೀ ಶಾಂತವಾಗಿ ಬೈಬಲ್ ವಾಚನದಲ್ಲೂ, ಪದ್ಧತಿಯಂತೆ ಪುಣ್ಯದಾನಮಾಡಲು ಬಂದಿದ್ದ ಪಾದ್ರಿಯ ಬಾಯಿಯ ಪುಣ್ಯಶ್ರವಣದಲ್ಲೂ ಕಳೆದರು. ಅವರಲ್ಲಿ ನಾಸ್ತಿಕ ತತ್ವನೇತ್ರನೊಬ್ಬನಿದ್ದ ೨ ಆಲ್ಫ್ರೆಡ್ ರೋಸೆನ್ ಬರ್ಗ್. ಅವನು ಕೊನೆಯ ವರೆಗೂ ಎಲ್ಲಾ ಪಾರಲೌಕಿಕ ಕ್ರಿಯೆಗಳನ್ನೂ ಕಂಠೋಕ್ತವಾಗಿ ನಿರಾಕರಿಸಿಬಿಟ್ಟ. ರಿಬ್ಬಂಟ್ರಾಪನಿಗೆ ಹಿಂದಿನ ರಾತ್ರಿ ನಿದ್ರೆ ಬೀಳಲು ಕೇಳಲಿಲ್ಲ-ಅದಕ್ಕಾಗಿ ಅಮಲು ಗುಳಿಗೆ ಕೊಟ್ಟಿದ್ದರು. "ನನಗೆ ಧರ್ಮದಲ್ಲಿ ಮತ್ತಾ ವಿಶ್ವಾಸ. ಎಲ್ಲಾ ಧರ್ಮಗಳ ಮೂಲ ಬೋಧನೆಯೆಂದರೆ ಪ್ರೇಮ ಪೊಂದೇ. ನಾನು ಗಡದ್ದಿನ ನಿದ್ರೆ ಮಾಡಿದ್ದೆ" ಧರ್ಮಪ್ರಚಾರಕ್ಕೆ ಹೊರಡುವವನಂತೆ ಜೋಡ್ಲನ ಮಾತು. "ನನಗೊದಗಿರುವ ಅದೃಷ್ಟವು ಅನಿವಾರ್ಯವೆಂಬುದನ್ನು ಬಲ್ಲೆ. ಆದರೆ ನಾನನ್ನುತ್ತೇನೆ-ನನಗಾಗಿರುವ ಶಿಕ್ಷೆಯುಂಟಲ್ಲಾ, ಅದು ತಪ್ಪು"—ಒಂದು ಕಥಾ ವಸ್ತುವನ್ನು ವಿಮರ್ಶೆ ಮಾಡುವವನಂತೆ ಸಾವುಕೆಲನೆ ನಿರ್ಲಿಪ್ತಭಾವದ ಉದ್ಗಾರ. ತಾನು ಫಾಶೀ ಕಂಭಕ್ಕಾಗಿ ಹೊರಡುವಾಗ ಕೀಟೆಲ್ ತನ್ನ ಜೈಲು ಕೋಣೆಯನ್ನು ನಾಜೂಕಾಗಿ ಸಜ್ಜುಗೊಳಿಸಿಟ್ಟಿದ್ದ.

"ಹಿಟ್ಲರನು ಸತ್ತಿದ್ದಾನೆಂಬುದನ್ನು ನೀವು ನಂಬುವಿರಾ?" ಎಂದು ಆ ಮೊದಲೇ ಪ್ರಶ್ನಿಸಿ ಇವರನ್ನು ಪರೀಕ್ಷಿಸಿದ್ದರು. "ಹೌದು" ಎಂದೇ ಎಲ್ಲರೂ ಉತ್ತರಿಸಿದ್ದರು

ಫಾಶಿಗೆ ಕೊಡಲು ಕೊಂಡುಹೋಗುವ ಮೊದಲು ಇವರಿಗೆಲ್ಲಾ ವಿಶೇಷ ಊಟ [illegible]ಆಗಿತ್ತು; ವಿಶೇಷವೆಂದರೆ ಈ ಮೊದಲು ಕೊಟ್ಟುದಕ್ಕಿಂತ ಹೆಚ್ಚು ಆಹಾರ ಮಾತ್ರ, ಉತ್ತಮ ಫಲಾಹಾರವೇನೂ ಇಲ್ಲ

ಗೋರಿಂಗ ಆತ್ಮಹತ್ಯೆ ಮಾಡಿಕೊಂಡುದು ತಿಳಿದು ಬಂದೊಡನೆಯೇ ಮಿಕ್ಕ ಹತ್ತು ಮಂದಿಗೂ ಕೈಕೋಳ ಸಿಕ್ಕಿಸಿಬಿಟ್ಟರು; ಎಂಟು ಮಂದಿ ಮಾತ್ರ ಮಾತಾಡದೆ ನಿರ್ಲಿಪ್ತಭಾವದಿಂದ ಕೋಳಕ್ಕೆ ಕೈಯೊಡ್ಡಿದ್ದರು. ಆದರೆ ಸಾವುಕೆಲ್ ಮಾತ್ರ ಡ್ರೆಸ್ಸು ಬದಲಾಯಿಸಲು ಕೇಳಲಿಲ್ಲ ಕಾವಲುಗಾರರು ಕೋಳವನ್ನು ತನ್ನ ಮಣಿಗಂಟಿಗೆ ಸಿಕ್ಕಿಸುವಾಗ ಅತ್ಯಂತ ರೇಗಿ ತನ್ನಿಂದ ಸಾಧ್ಯವಿದ್ದಷ್ಟು ಗಟ್ಟಿಯಾಗಿ ಘರ್ಜಿಸಿದ—"ಅಮೇರಿಕನ್ ಸೋಲ್ಜರರಿಗೂ ಆಫೀಸರರಿಗೂ ನಾನು ಗೌರವ ಸಲ್ಲಿಸುತ್ತೇನೆ-ಆದರೆ ಅಮೇರಿಕನ್ ಯೆಹೂದಿಗಳಿಗಲ್ಲ!" ಸೈಚರನ ಕೈಗೆ ಕೋಳ ತೊಡಿಸಲು ಕಾವಲುಗಾರರು ಬಂದಾಗ ಅವನೆಂತಹ ಉಗ್ರ ಮೂರ್ತಿಯಾಗಿ ಹೋದನೆಂದರೆ ಕರ್ನಲ್ ಏಂಡ್ರಸ್ ಫಡುವೆ ಬಂದು ನಿಲ್ಲಬೇಕಾಯಿತು.

ಮಾನವ ಮನೋಶಕ್ತಿಯ ಪರಮಾವಧಿಯ ಗಡಿಕಲ್ಲುಗಳಂತೆ ಆ ಹತ್ತು ಮಂದಿಯೂ ಮರಣಕಾಲದಲ್ಲಿ ನಿಶ್ಚಲ ಚಿತ್ತದಿಂದಿದ್ದರು. ಅಧಿಕಾರದಲ್ಲಿದ್ದಾಗಿನ ಘನಸ್ಥಿಕೆಯನ್ನೇ ಅಂತ್ಯಕಾಲದಲ್ಲೂ ಪ್ರದರ್ಶಿಸಿ ಇಹಯಾತ್ರೆ ಮುಗಿಸಿಕೊಂಡರು.

ಗಲ್ಲಿಗೇರಿದಾಗಿನ ಗಾಂಭೀರ್ಯ ಅನುಪಮ!

ಮರಣ ಶಿಕ್ಷೆ ಹಿಂತೆಗೆಯಲಿಕ್ಕೆಂದೇ ಮಹಾವ್ಯಕ್ತಿಗಳಿಗೆ ಫಾಶಿಗೆ ಕೊಡುವ ಸಮಯವನ್ನು ಆ ಮೊದಲೇ ಎರಡು ಬಾರಿ ಜ್ಞಾಪಕಕ್ಕೆ ತರಲಾಗಿತ್ತು. ಎರಡು ಫಾಶೀ ಕಂಭಗಳನ್ನು ನೆಟ್ಟಿದ್ದರು. ಮತ್ತೊಂದನ್ನು ರಜವಾಗಿ ನಿಲ್ಲಿಸಿದ್ದರು. ಫಾಶಿಗೆ ಕೊಡುವವರ ಒಂದು ದಳವೇ ಸಿದ್ಧವಾಗಿತ್ತು. ಅನರಲ್ಲೊಬ್ಬ ಮಾರ್ಶಲ್ ಸಾರ್ಜಂಟ್ ಜೋನ್ ಸಿ. ವುಡ್. 1945ನೇ ನವಂಬರದಿಂದ ಆದು ವರೆಗೆ ಆತ 299 ಮಂದಿಯನ್ನು ಫಾಶೀ ಕಂಭಕ್ಕೆ ನೇತಾಡಿಸಿದವ. ಹೆಚ್ಚಾಗಿ ಜರ್ಮನ್ ಯುದ್ಧ ಕೈದಿಗಳೇ ಇದ್ದ 89 ಮಂದಿಯನ್ನು ಇತ್ತೀಚೆಗೆ ಗಲ್ಲಿಗೇರಿಸಿ ಅನುಭವವಿದ್ದವ. ವಿಚಾರಣಾ ವೇಳೆ ಅವರು ಕೋರ್ಟಿನಲ್ಲಿ ಹೇಗೆ ಹಿಂದೆ ಮುಂದೆ ಕುಳಿತಿದ್ದರೋ ಅದೇ ಕ್ರಮದಂತೆ ಅನುಕ್ರಮವಾಗಿ ಫಾಶಿಗೆ ಕೊಡಲಾಯಿತು.

ಮಧ್ಯ ರಾತ್ರಿ 1 ಘಂಟೆಗೆ ಜೋಕಿಮ್ ವೋನ್ ರಿಬ್ಬಂಟ್ರಾಪನ ಕೋಣೆಯ ಕದ ತೆರೆಯಲಾಯಿತು. ಸುತ್ತಲೂ ಅಮೇರಿಕನ್ ಕಾವಲು ಸೋಲ್ಜರರು- ಪಕ್ಕದಲ್ಲಿ ಒಬ್ಬ ಗುರು- ಕೈಗೆ ಕೋಳ ಸಿಕ್ಕಿಸಿದ್ದ ರಿಬ್ಬಂಟ್ರಾಪ್ ಗಂಭೀರ ಮುಖ ಮುದ್ರೆಯಿಂದ ಒತ್ತಿನ ವಿಶಾಲ ಜೈಲು ಭವನವನ್ನು ಹಾದು ಬರುತ್ತಿದ್ದ. ಪಕ್ಕದ ಜಮ್ಮೆಸಿಯಮಿನಲ್ಲಿ ಸುತ್ತು ಬಂದೋಬಸ್ತಿನ ಬಾಗಿಲುಳ್ಳ ಕಟ್ಟೆಯಲ್ಲಿ ಮೂರು ಫಾಶೀ ಕಂಭಗಳು ನಿಂತಿದ್ದವು; ಯಾವ ಮುಂಜಾವಿಗೂ ದೊರೆಯದ ಅತಿದೊಡ್ಡ ಬಲಿಗಳನ್ನು ಪಡೆಯಲು ಕಾಯುತ್ತಿದ್ದುವು! ಮೌನ ವ್ಯಾಪಿಸಿದ್ದ ಆ ಭೀಕರ ವಾತಾವರಣದಲ್ಲಿ 10 ಇಲೆಕ್ಟ್ರಿಕ್ ದೀಪಗಳು ಒಮ್ಮೆಗೇ ಝಗ್ಗನೇ ಬೆಳಗಿದಾಗ ರಿಬ್ಬಂಟ್ರಾಪನ ಬಾಡದ ಹಳದೀ ಮುಂದಲೆ ಗಾಳಿಗೆ ಹಾರಾಡುವುದು ಕಾಣಿಸುತಿತ್ತು. ಸಾವು ಮೆರವಣಿಗೆ ಗಡಿಮುಟ್ಟಿದೊಡನೆ ಫಾಶಿಯ ಆವರಣದ ಮುಂಬಾಗಿಲನ್ನು ಪದ್ಧತಿಯಂತೆ ಮೂರು ಬಾರಿ ಬಲವಾಗಿ ತಟ್ಟಲಾಯಿತು. ಒಳಗಡೆಯಲ್ಲಿ ತಾಗಿ ನಿಂತುಕೊಂಡಿದ್ದ ಓರ್ವ ಕರ್ನಲನು ಸಟಕ್ಕನೆ ತಿರುಗಿ ನಿಂತ. ಬಾಗಿಲು ತೆರೆಯಿತು. ಝಗ್ಗನೊಮ್ಮೆ ಹುಕಾಶಬಿದ್ದಾಗ ರಿಬ್ಬಂಟ್ರಾಪ್ ತನ್ನ ತಲೆಯನ್ನೆತ್ತಿ ಹಿಡಿದ. ಗಂಭೀರವಾಗಿ ನಿಂತಿದ್ದುದು ಕಾಣಿಸುತಿತ್ತು. ಅಲ್ಲಿಂದ ಕಂಭದ ಬುಡಕ್ಕೆ 13 ಮೆಟ್ಟಲುಗಳು; ಶತ್ತತಿದಿಯ ಮೆಟ್ಟಲ ಮೇಲೆ ಫಾಶೀ ಉರುಲು ನೇತಾಡುತಿತ್ತು. ಬುಡದ ಮೆಟ್ಟಲಲ್ಲಿ ನಿಲ್ಲಿಸಿ ರಿಬ್ಬಂಟ್ರಾಪನ ಕೈಕೋಳವನ್ನು ತಪ್ಪಿಸಿ, ಎರಡೂ ಕೈಗಳನ್ನು ಬೆನ್ನ ಹಿಂಗಡೆಗೆ ಹೆಡಮುರಿ ಬಿಗಿಯಲಾಯಿತು. ಓರ್ವ ಅಮೇರಿಕನ್ ಅಧಿಕಾರಿಯೆಂದು:—"ನಿನ್ನ ಹೆಸರನ್ನು ಹೇಳು". ಅದನ್ನು ಜರ್ಮನಿಗೆ ಭಾಷಾಂತರಿಸಿ ಹೇಳಲಾಯಿತು; ರಿಬ್ಬಂಟ್ರಾಪ್ ಉತ್ತರ ಕೊಡಲಿಲ್ಲ; ಮತ್ತೊ

(ಗಗನೇ ಪುಟ ನೋಡಿರಿ)

ಆಕ್ಟರ್ ಜ್ಞಾನದ ಸ್ವಾಮಿಭಕ್ತಿ! ಹಿಂದುಮುಸ್ಲೀಮರ ಐಕ್ಯಶಕ್ತಿ!! ಇಂದಿಗೆ ತಕ್ಕುದಾದ ನಾಟಕ

ಕಾಲ ಚಕ್ರ

(ಶ್ರೀ. M. ನಾರಾಯಣ ರಾವ್, ಮುಂಬಯಿ, ವಿರಚಿತ)

ಸದ ದಲ್ಲಿಯೇ ಮಂಗಳೂರಿನಲ್ಲಿ ಪ್ರದರ್ಶಿಸಲಿಕ್ಕಿರುವವರು

ಜನಪ್ರೀತ

ಮಂಗಳೂರು ಸಂಗೀತ ನಾಟಕ ಸಭಾ. ಇವರು

'ವಿಷಮ ಜೀವನ' ನಾಟಕದಲ್ಲಿ ಖ್ಯಾತಿಪಡೆದ ನಟರನ್ನೇ ಇನ್ನೊಮ್ಮೆ ರಂಗ ಭೂಮಿಯಲ್ಲಿ ಕಾಣಲಿರುವ ಸುಯೋಗ

ತಾರೀಕು—ಕ್ಕೆ ನಿರೀಕ್ಷಿಸಿರಿ.

ದಿಗ್ದರ್ಶಕರು:-ಶ್ರೀ. ಎ. ಸರ್ವಸ್ವ.

Greetings

This season of Deepavali
I greet you heartily,
And wish all through
New Year there be
Joy, Happiness, Prosperity.

Rao Bahadur B. S. SAWKAR, B. A. L. L. B.,
Chairman Board of Directors,
UNITED KARNATAK INSURANCE Co., Ltd.
DHARWAR.

ಇಂದಿಗೆ ತಕ್ಕ ನಾಟಕ

ದೇಶಭಕ್ತ

ಶ್ರೀ. ಕೆ. ಕೆ. ಶೆಟ್ಟರು ಸುಲಭವಾದ ಶೈಲಿಯಲ್ಲಿ ಎಲ್ಲರಿಗೂ ಮಂದಟ್ಟಾಗುವಂತೆ ಬರೆದ ಬೋಧಪ್ರದ ಸಾಮಾಜಿಕ ನಾಟಕ.

ದೇಶಭಕ್ತನು ಹೇಗಿರಬೇಕು? ಅವನ ಧ್ಯೇಯ ಧೋರಣ ಹೇಗೆ ಆದರ್ಶವಾಗಿರಬೇಕು? ಜನತಾ ಜನಾರ್ದನನ ಸೇವೆ ಎದರೇನು? ಎಂಬಿತ್ಯಾದಿಗಳನ್ನು ಅತಿ ಕೌಶಲ್ಯದಿಂದ ಚಿತ್ರಿಸಿ ಸಂಸ್ಥಾನವಲ್ಲಿ ನಡೆಯುತ್ತಿರುವ ದಬ್ಬಾಳಿಕೆಯ ಭೀಕರ ಚಿತ್ರವನ್ನು ಮುಂದಿಟ್ಟು ಪ್ರಜಾಸ್ವಾತಂತ್ರ್ಯವು ಹೇಗೆ ಸಾಧ್ಯವೆಂಬುದನ್ನು ವಿವರಿಸುವ ರಾಜಕೀಯ-ಸಾಮಾಜಿಕ ನಾಟಕ.

ಬೆಲೆ ರೂ. 1—4—0

ನವಭಾರತ ಬುಕ್ ಡಿಪೊ,
ಉಡುಪಿ.

ಗಾಂಧಿಜೀ ಬಾಯಿಮುಚ್ಚಿಕೊಳ್ಳಲಿ

ಇಲ್ಲವೇ ಅವರ ಮಾತಿಗೆ

ಎಲ್ಲರೂ ಕಿವಿಮುಚ್ಚಿಕೊಳ್ಳಲಿ!

ವಿಜ್ಞಾಪಿಸಿಕೊಂಡವ—ಓರ್ವ 'ಮನುಷ್ಯ'.

ಮಹಾತ್ಮಾ ಗಾಂಧಿ ತನ್ನಿಚ್ಛೆಯಂತೆ ಪೂರ್ತಿ 125 ವರುಷ ಬದುಕಲಿ; ಅವರು ಭಾರತ ಭೂಮಿಗೂ ಮಾನವ ಜನಾಂಗಕ್ಕೂ ಮಾಡಿರುವ ಸೇವೆಯನ್ನು ಅಲ್ಲುಗಳೆಯುವಷ್ಟು ಕೃತಘ್ನರು ಯಾರಿದ್ದಾರೆ? ಆದರ ಬಾಪುಜೀಯ ಮಹಾತ್ಮೆ ಮತ್ತು ಅವರ ಮೇಲಿರುವ ಭಕ್ತಿಗೆ ವಿಶೇಷಾಕಾರ ಕೊಟ್ಟು ಸ್ಮರಿಸಿಕೊಂಡು, ಪೂರ್ವಾಪರ ವಿಚಾರಮಾಡಿಕೊಂಡು, ಅಂತೆಯೇ ಆವೇಶವರನೆಂಬ ಅಪವಾದಬಾರದಂತೆ ಹೃದಯದ ಉಬ್ಬರವನ್ನು ಸಾಧ್ಯವಿದ್ದಷ್ಟು ತಗ್ಗಿಸಿಕೊಂಡು, ತೀರಾ ಕಠಿನವೆನಿಸಬೇಡಿಕೆಯನ್ನು ಮುಂದಿಡುವುದಾದರೆ–ಅವರ ನಾಲಿಗೆ ಇನ್ನು ಕೆಲವು ಸಮಯದ ಮಟ್ಟಿಗಾದರೂ ಬಿದ್ದು ಹೋಗಲಿ! ಹಿಂದುಸ್ಥಾನದ ಜಾತೀಯ ಗೊಂದಲವು ಅಂತ್ಯಗೊಳ್ಳುವವರೆಗಾದರೂ ವಾರದ ಏಳು ದಿನಗಳೂ ಮಹಾತ್ಮರ ಪಾಲಿಗೆ ಸೋಮವಾರವೇ (ಮೌನ ದಿವ) ಆಗಲಿ! ಯಾಕಂದರೆ ಮಹಾತ್ಮರ ಈಗಿನ ಮಾತುಗಳಿಂದ ಹಿಂದುಗಳಿಗೆ ಅನ್ಯಾಯವಾಗುತ್ತಿದೆ· ಅಧೋಗತಿಯೊದಗುತ್ತಿದೆ. ಆತ್ಮನಾಶವಾಗುತ್ತಿದೆ! ಮಹಾತ್ಮರೀಗ ಉಪದೇಶ ಮಾಡುತ್ತಿಲ್ಲ; ಹಿಂದುಗಳನ್ನು ಪುಂಡರ ಕತ್ತಿಚೂರಿಗಳಿಗೆ ಬಲಿಕೊಡುವ ಆಹುತಿ ಮಂತ್ರಪಠಿಸುತಿದ್ದಾರೆ! ಇದು ಅಸಹನೀಯ. ಮೊದಲನೆಯದಾಗಿ ಈ ಕಾಲದಲ್ಲೂ ಅವರು ಅಹಿಂಸಾ ಬೋಧೆಕೊಡುತ್ತಿರುವದು ಆತ್ಮಹತ್ಯೆಗೆ ಸಮಾನ. ಎರಡನೆಯದಾಗಿ, ಅವರು ಮಹಾತ್ಮರಾದರೂ ಮನುಷ್ಯನೇ ಅದ್ದರಿಂದ 78 ರ ಪ್ರಾಯದ ಮಬ್ಬು ಅವರ ಮೆದುಳಿಗೆ ತಾಗಿದೆ; ಅಲ್ಲೀಗ ಯದ್ವಾತದ್ವಾ ಭಾವನೆ ಹುಟ್ಟುತ್ತಿದೆ. ಆ ಮೆದುಳ ಒತ್ತಿಯಲ್ಲಿ ಪ್ರಕಾಶಿಸಿದುದೇ ತಮ್ಮ ಪಾಲಿನ ಕೈದೀವಿಗೆಯೆಂದು ಭಾವಿಸುತ್ತಿರುವ ಹಿಂದುಗಳ ಹಾದಿ ತಪ್ಪುತ್ತಿದೆ; ಕಲಸ ಕೆಡುತ್ತಿದೆ! ಆದ್ದರಿಂದ ಗಾಂಧಿಜೀ ತಾನಾಗಿ ಮೌನವಹಿಸಬೇಕು ಇಲ್ಲವೇ ಮುಸಲ್ಮಾನರಂತೆಯೇ ಹಿಂದುಗಳೂ ಅವರ ಮಾತನ್ನು ಕಡೆಗಣಿಸಬೇಕು.

ಯಾಕಾಗಿ ಗೊತ್ತೆ? ಈ ಕೆಳಗಿನ ಕಾರಣಗಳಿಗಾಗಿ:—

ಗಾಂಧಿಜೀ ಹೇಳುವಂತೆ "ಸಹೋದರ ಮುಸಲ್ಮಾನನು ತನ್ನನ್ನು ಇರಿಯುವಾಗ ಹೃದಯದಲ್ಲಿ ವೈರಭಾವನೆಯಿಲ್ಲದೆ, ತಟಯಲ್ಲ ನಗೆ ಮಿಂಚಿಸಿಕೊಂಡೇ ಹಿಂದುಗಳು ಪ್ರಾಣಕೊಡಬೇಕಾದರೆ" ಅದನ್ನು ಹಿಂದೂ ಗಾಂಧಿಯೊಬ್ಬನೇ ಮಾಡಬೇಕು; ಯಾಕಂದರೆ ಅದು ಗಾಂಧಿಜೀಗೆ ಮಾತ್ರ ಸಾಧ್ಯ. ಇದು ಗಾಂಧಿಜೀಗೂ ತಿಳಿದಿರುವಾಗ ಅವರು ಬಹಿರಂಗವಾಗಿ ಈ ಮಾತನ್ನು ಉಪದೇಶಿಸಬಹುದೆ? ತನಗೆ ತಾನೇ ಅಂದುಕೊಂಡು, ತನ್ನ ಹೃದಯವನ್ನು ಇನ್ನಷ್ಟಗಟ್ಟಿಪಡಿಸಿಕೊಳ್ಳುವದಷ್ಟೇ ಅವರ ಕರ್ತವ್ಯ. ಬಾಪೂಜೀ ತನಗಾಡಿದ ಮಾತಿದು ಎಂದು ನೆನಸಿಕೊಂಡು ಹಿಂದುವೊಬ್ಬನಿಗೆ ಪುಂಡರನ್ನು ಪ್ರತಿಭಟಿಸಬೇಕಾಗಿ ಬಂದಾಗ ತಾನು ಗಾಂಧಿಜೀಯನ್ನೂ ಪ್ರತಿಭಟಿಸಿದಂತಾಗುವೆಯೆಂದು ಅತ ಶಂಕಿಸಬೇಕೆ?

ಅಹಿಂಸಾ ತಪಸ್ಸಿನ ಪರಮಾವಧಿ ಸಿದ್ಧಿಹೊಂದಿದವನಿಂದ ಮಾತ್ರ ನಗುತ್ತಾ ಪ್ರಾಣಬಿಡಲು ಸಾಧ್ಯ. ಅಹಿಂಸಾ ಶಿಕ್ಷಣದಲ್ಲಿ ಅತ್ಮಾರ್ಪಣೆಯೆಂಬುದು ಏ. ಸಿ. ಯಸ್, ಪರೀಕ್ಷೆ. ಜನ ಸಾಮಾನ್ಯರು ಅಹಿಂಸೆಯ ಪ್ರಥಮ ಪಾಠವನ್ನೇ ಕಲಿತಿಲ್ಲ ವೆಂಬುದನ್ನು ಅರಿತಿರುವ ಗಾಂಧಿಜೀ 'ಆ ಪರೀಕ್ಷೆ ಕೊಡಿ' ಎಂದು ಹಿಂದುಗಳನ್ನು ಕೇಳಿಕೊಳ್ಳಬಹುದೆ? ಮಗುಚಿ ಬೀಳಲಾರದ ಮಗು ಮರವೇರಬೇಕೆಂದು ಒತ್ತಾಯಿಸುವದಕ್ಕಿಂತ ಹೆಚ್ಚಿನ ಹಿಂಸೆಯಾವುದು?

ಗಾಂಧಿಜೀ ಜಾತೀಯ ಗಲಭೆಯ ಸೃಷ್ಟಿಕರ್ತ ಹೊರಡುವದು ಬೇಡ; ಹೊರಡಲೆದ್ದರೆ ಕಾಂಗ್ರೆಸ್ ಸರಕಾರವು ಅವರನ್ನು 144ನೇ ಸೆಕ್ಷನಿನನ್ವಯ ತಡೆಗಟ್ಟಲಿ; ಕಾನೂನು ಮುರಿದರೆ ಕೈದುಮಾಡಿ ಆಗಾ ಖಾನ್ ಅರಮನೆಯನ್ನು ಮತ್ತೊಮ್ಮೆ ಬಾಡಿಗೆಗೆ ಹಿಡಿಯಲಿ. ಆದರೆ ಅಹಮ್ಮದಾಬಾದ್ ದಂಗೆಯ ವೇಳೆ ಕರೆಬಂದಾಗಲೂ "ನಾನು ಸ್ವತಃ ಹೋಗುವುದೇ ಸರಿ; ಆ ಸಮಯ ಬಂದೀತು" ಎಂದಿದ್ದರು. ಮೊನ್ನೆ ನವಖಾಲಿಯನ್ನು ಸಂದರ್ಶಿಸಿರೆಂದು ಕರೆ ಬಂದಾಗಲೂ "ನನ್ನ ಹೃದಯ ಅಲ್ಲಿದೆ; ಹೋಗುವ ಸ್ಫೂರಣೆಯುಂಟಾಗುತ್ತಿದೆ" ಎಂದಿದ್ದರು. ಆದರೆ ಆ ಬಾರಿ ಪೂನೆಯನ್ನು ಬಿಡಲಿಲ್ಲ. ಈಬಾರಿ ಢಿಲ್ಲಿಯನ್ನು ಬಿಡಲಿಲ್ಲ. ಯಾಕೆ? ತನ್ನ ಆತ್ಮಾರ್ಪಣೆಯ ಬೆಲೆಬಾಳುವಷ್ಟು ಆ ಸಂಗತಿ ದೊಡ್ಡದಲ್ಲ ಎಂಬ ಯೋಚನೆಯಿಂದಲ್ಲವೆ? ಹಾಗಾದರೆ ಮಿಕ್ಕವರು ಸಾಧ್ಯಾಸಾಧ್ಯತೆ, ಹಿತಾಹಿತವಾವುದನ್ನೂ ಗಣಿಸದೆ ಕಣ್ಣು ಮುಚ್ಚಿ ಚೂರಿ ಗೆದೆಯೊಡ್ಡಬೇಕೆಂದು ಹೇಳುವ ಹಕ್ಕು ಗಾಂಧಿಜಿಗಿದೆಯೆ?

ಇಂದಿನ ವಾತಾವರಣದಲ್ಲಿ "ಅಹಿಂಸೆ ಮತ್ತು 'ಅಸಾಹಯ ಕತೆ' ಗಳೊಳಗಿನ ವ್ಯತ್ಯಾಸವನ್ನು ಗುರುತಿಸುವುದು ಹೇಗೆ? ಅಹಮ್ಮದಾಬಾದಿನಲ್ಲಿಬ್ಬರು, ಬೊಂಬಾಯಿಯಲ್ಲಿ ಇಬ್ಬರು ಕಾಂಗ್ರೆಸ್ ಸ್ವಯಂ ಸೇವಕರು ಜಾತೀಯ ಗಲಭೆಯ ನಡುವೆ ಶಾಂತಿ ಸ್ಥಾಪನೆಗಾಗಿ ನಿಂಗ್ರಿ ಪ್ರಾಣಕೊಟ್ಟಾಗ ಅದು ಅಹಿಂಸಾತ್ಮಕ ಬಲಿದಾನವೆಂಬುದು ಸ್ಪಷ್ಟವಾಯಿತು. ಹಾಗೆ ತಿಳಿದುದು ಅವರು ಸತ್ಯ ರೀತಿಯ ಮೇಲಿಂದಲ್ಲ; ಅವರು ಅಹಿಂಸಾತ್ಮಕ ಸ್ವಯಂ ಸೇವಕರೆಂದು ಮೊದಲೇ ಗೊತ್ತಿದ್ದುದರಿಂದ! ಇಂತಹ ಪೂರ್ವ ಪರಚಿತರು ಬಹಳ ಮಂದಿಯಿಲ್ಲದಿರುವಾಗ ಜನಸಾಮಾನ್ಯರು ಅಹಿಂಸಾ ಧೈರ್ಯದಿಂದ ಸತ್ಪರೂ ಉಳಿದವರ ನೋಲಾಗುವ ಪರಿಣಾಮ ಒಂದೇ ತಾನೆ? ಅಂದ ಮೇಲೆ ಹೆಚ್ಚೆಂದರೆ ತಾನು ತಯಾರು ನಾಡಿಟ್ಟವರಿಗಲ್ಲವೆ ಇತರರಿಗೂ ಆಕಸ್ಮಿಕ ಅಹಿಂಸಾತ್ಮಕ ಆತ್ಮಾರ್ಪಣೆಯ ಬೋಧೆ ಕೊಡಲು ಗಾಂಧಿಜಿಗೆ ಅಧಿಕಾರವಿದೆಯೆ?

ಪ್ರತೀಕಾರೇಚ್ಛೆಯಿಲ್ಲದೆ ಪ್ರಾಣಕೊಡುವದಾದರೂ ಯಾವ ಸಾಧನೆಗಾಗಿ– ಪುಂಡರ ಹೃದಯಕರಗಿ ವಾತಾವರಣ ತಿಳಿಯಾಗಬೇಕೆಂಬ ಉದ್ದೇಶ ತಾನೆ? ವರುಷ ತುಂಬಿದ ಮಗುವನ್ನು ಹಲಗೆಗೆ ತಾಗಿಸಿ ಮೊಳೆ ಜಡಿವವರ–ಪ್ರಾಣದಾನ ಯಾಚಿಸುತ್ತಾ ಬೊಬ್ಬಿಡುವ ಹೆಂಗಸರು ಮಕ್ಕಳನ್ನು ಕೈಯೆತ್ತಿ ತಿವಿಯವವರ–ಸೇಡು ತೀರಿಸುವೆನೆಂದ ಬಿದ್ದ ಹೆಣಕ್ಕೂ ಚೂರಿ ಹಾಕುವವರ ಹೃದಯ ಇಂತಹ ಸಂದರ್ಭಗಳಲ್ಲೂ ಕರಗದ ತಿಲೆ ನಗುತ್ತಾ ಎದೆಯೊಡ್ಡಿ ನಿಂತವನನ್ನು ಕಂಡು ಕರಗೀತೆ? ಚಿತ್ರ ಹಿಂಸೆಮಾಡಿ ಕೊಲ್ಲಲು ಬಂದ ತನ್ನನ್ನು ಹಲ್ಲು ಕಿರಿದು ಅಣಕಿಸುತ್ತಾನೆಂದು ಅವನ ಪಶು ಮನೋವೃತ್ತಿ ಮತ್ತಷ್ಟು ಕೆರಳಲಾರದೆ?

ಮೊನ್ನೆ ಶಾಂತಿ ಕಂಭದಲ್ಲಿ ನಗುಮೊಗದಿಂದ ಪ್ರಾಣಕೊಟ್ಟ ನಾಜೀ ನಾಯಕರು ಅಹಿಂಸಾವಾದಿಗಳೋ? ಅಥವಾ ಅವರಲ್ಲಿದ್ದುದು ಕರ್ತವ್ಯ ಪಾಲನಾ ಸಂತುಷ್ಟಿ ಮಾತ್ರವೋ?

ಢಿಲ್ಲಿಯಲ್ಲಿ ತಿವಿತದ ಭೀತಿಯದ್ದಾಗ ಗಾಂಧಿಜೀಯ ಗುಡಿಸಲಿಗೂ ಪಹರೆಯಿತ್ತಷ್ಟೆ? ಆ ಪಹರೆಗಾರರು ಆತ್ಮಾರ್ಪಣೆಮಾಡಲು ನಿಂತಿದ್ದರೋ–ಪುಂಡರನ್ನು ಪ್ರತಿಭಟಿಸಲು ಆಯುಧ ಸಜ್ಜಿತರಾಗಿಯೇ ನಿಂತಿದ್ದರೋ? ಒಳಗಿದ್ದ ಗಾಂಧಿಜೀ ಅವರಿಗೇನಾದರೂ ಬೋಧನೆ ಕೊಟ್ಟುದಿದೆಯೆ?

ತನ್ನ ಪಾಲಿಗೆ ಹಿಂದೂ ಮುಸಲ್ಮಾನರು ಸಮಾನನೆಷ್ಟುವ ಗಾಂಧಿಜೀಗೆ ಒಬ್ಬರ ಅತ್ಯಾಚಾರವನ್ನು ಅಳವಾಗಿ ಖಂಡಿಸುವ ಹಕ್ಕು ಕೂಡಾ ತನಗಿಲ್ಲವೆಂಬುದು ತಿಳಿದಿರುವಾಗ ಮತ್ತೊಬ್ಬರು ನಗುತ್ತಾ ಪ್ರಾಣಕೊಡಬೇಕೆಂದು ಕೇಳಿಕೊಳ್ಳುವ ಹಕ್ಕು ಬರುವದೆ? ಅಹಿಂಸಾತ್ಮಕ ಬಲಿದಾನದಿಂದಲೇ ಜನ್ಮ ಸಾರ್ಥಕವೆಂದು ಗಾಂಧಿಜೀಯ ಭಾವನೆಯಾದಾದರೆ ಇಂತಹ ಅಶ್ಯತ್ಯಮ ವಿಧಾನವನ್ನು ಹಿಂದುಗಳಿಗೆ ಮಾತ್ರ ಬೋಧಿಸುತ್ತಿರುವ ಅವರು ಹಿಂದೂ ಪಕ್ಷಪಾತಿಯಾಗುವದಿಲ್ಲವೆ?

ಯಾವ ಚಿಕಿತ್ಸೆಯೂ ನಡೆದೆಂಬುದು ಖಚಿತವಾದಾಗ ಕರುಳೊಂದನ್ನು ಇಂಜೆಕ್ಷನ್ ಕೊಟ್ಟು ಕೊಲ್ಲುವುದು ಗಾಂಧಿಜೀಯ ಅಹಿಂಸಯಲ್ಲೇ ಸೇರಿತ್ತು; ಯಾವ ವಿಧದಿಂದಲೂ ಮಾರ್ಪಡುವಂತಿಲ್ಲವೆಂದು ಸಂಪೂರ್ಣ ಸಿದ್ಧವಾಗಿರುವ ಪುಂಡರ ಸಂಹಾರವೇಕೆ ಅಹಿಂಸೆಯಾಗದ?

ಅಹಿಂಸಾ ಘೋರಣೆಯ ಕಾಂಗ್ರೆಸ್ ಸರಕಾರಗಳು ಹಿಂಸೆಯನ್ನಣಗಿಸಲು ಎಂದೆಂದಿಗೂ ಸೇನೆಯನ್ನು ಪಯೋಗಿಸಬಾರದೆಂದುಗಾಂಧಿಜೀ ಹೇಳಿವದಿಲ್ಲ,ಹಿಂದುಗಳು ಪುಂಡರಿದರಲ್ಲಿ ಹಾಗೆ ಮಾಡುವದು ಮಾತ್ರ ತಪ್ಪಾಗುವದೆ?

'ಸ್ತ್ರೀಯರು ತಮ್ಮ ಕೂದಲು ಕೊಂಕುವ ಮೊದಲೇ ವಿಷ ತಿಂದು ಸಾಯಬೇಕು' ಎಂದು ಗಾಂಧಿಜೀಯನ್ನುತ್ತಾರೆ, ಪ್ರತೀಕಾರ ಮಾಡಲು ಗಾಂಧಿಯಾಜ್ಞೆಯಿಲ್ಲದ ಆ ಸ್ತ್ರೀಯರ ಸಂಬಂಧಿಕ ಪುರುಷರು ಆ ಮೊದಲೇ ವಿಷತಿಂದು ಸತ್ತಿರಬೇಕೆ?

ಅತ್ಮಹತ್ಯೆಯು ಅಪರಾಧ ತಾನೇ? ಈ ರೀತಿ ಪುಂಡರಿದಿರು ಸ್ವೇಚ್ಛೆಯಿಂದ ಪ್ರಾಣಕೊಡುವದು ಆತ್ಮಹತ್ಯೆಯಲ್ಲದೆ ಬೇರಾವುದು? ಅನ್ಯಾಯೇ ಜೀವಗಳನ್ನು ಉಳಿಸುವದಕ್ಕಾಗಿಯೇ ಪರಿಶುದ್ಧ ಜೀವಗಳನ್ನು ಕಳಕೊಳ್ಳುವದಕ್ಕಿಂದ ದೊಡ್ಡ ಹಿಂಸೆ ಬೇರಾವುದು? ಅನ್ಯಾಯ, ಅಸತ್ಯಗಳನ್ನು ನಿವಾರಿಸಿ ನ್ಯಾಯ ಮತ್ತು ಸತ್ಯ ಸ್ಥಾಪಿಸುವದೇ ಅಹಿಂಸೆಯ ಗುರಿಯಾಗಿರುವಾಗ ಅನ್ಯಾಯಿಗಳನ್ನು ನಿರ್ಮೂಲಿಸಿ, ನ್ಯಾಯವಂತರನ್ನು ಉಳಿಸದೂ ಆ ವಿಧಾನದಲ್ಲಿ ಬರುವದಿಲ್ಲವೆ?

ಇಂದ್ರಭವನ ಕಾಫಿ ಹೊಟೆಲ್
ಬಲ್ಮಠ • • • • ಮಂಗಳೂರು.
ಹೊಸ ವ್ಯವಸ್ಥೆ–ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳ–ವಿದ್ಯುದ್ದೀಪ, ರೇಡಿಯೋಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.
ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ
ಬಿ. ಬಾಬು ಶೆಟ್ಟಿ
Indra Bhavan Coffee Hotel,
Balmatta Road, Mangalore.

ಪೂರ್ವ ಬಂಗಾಳದಲ್ಲಿ ಮುಸ್ಲಿಂ ಪುಂಡರ ಬರ್ಬರ ಅತ್ಯಾಚಾರ

ಈ ತಿಂಗಳ ತಾ. 10ರಿಂದ ಪೂರ್ವ ಬಂಗಾಳದ ನವಕಾಲಿ ಮತ್ತು ತಿಪ್ಪೇರಾ ಜಿಲ್ಲೆಗಳು ಮುಸ್ಲಿಂ ಪುಂಡ ನರಭಕ್ಷಕರಿಗಾಹುತಿಯಾಗಿವೆ. ಅವೆರಡು ಜಿಲ್ಲೆಗಳ ರಾಮಗಂಜ್, ಲಕ್ಷೀಪುರ, ಬೇಗಮ್ ಗಂಜ್, ಸೆನ್‌ಭಾಗ್, ಸೋನಾಮುರಿ, ಹಾಜಿಗಂಜ್, ಫಂಡ್ ಗಂಜ್, ಮೊದಲಾದ ಗ್ರಾಮಗುಂಪುಗುಂಪುಗಳನ್ನೇ ಮುಸಲ್ಮಾನ್ ಪುಂಡರು ಧ್ವಂಸಮಾಡಿ ಬಿಟ್ಟ ರೋಮಾಂಚಕರ ವಾರ್ತೆ ಬಂದಿದೆ; ಒರುತ್ತಿದೆ. ಹಳ್ಳಿಹಳ್ಳಿಗಳಿಗೆ ಬೆಂಕಿ ಕೊಟ್ಟು ಭಸ್ಮವಾಡಿ ಪೂರ್ತಿ ಮುಗಿಸಿಬಿಟ್ಟಿದ್ದಾರೆ. ಅವೆಲ್ಲಾ ಸ್ಮಶಾನವಾಗಿವೆ ಶ್ರವಣ ಮಾತ್ರದಿಂದ ಮೈಜುಮ್ಮಾಗುವ ಉರಿಯುವ ಬೆಂಕಿಗೆತ್ತಿ ಬಿಸುಟು ಹಲವರನ್ನು ಜೀವಂತ ಸುಟ್ಟ ನಿದರ್ಶನಗಳು ಲೆಕ್ಕವಿಲ್ಲದಷ್ಟಿವೆ ನಾಯಮದೆಬದವರಲ್ಲಿ ಯಾರನ್ನೂ ಬಿಡದೆ ಮುಸಲ್ಮಾನ್ ಮತಕ್ಕೆ ಬಲಾತ್ಕಾರದಿಂದ ಸೇರಿಸಿದ್ದಾರೆ, ಹೆಂಗಸರನ್ನೆತ್ತಿ ಕೊಂಡೊಯ್ದು ಪಾಶವಿಕ ರೀತಿಯಿಂದ ಮಾನಭಂಗಮಾಡಿ, ಹುಡುಗಿಯರನ್ನು ಮದುವೆ ಮಾಡಿಕೊಳ್ಳುವ, ಹಾಗೂ ವಿವಾಹಿತೆಯರನ್ನು ಪುನರ್ವಿವಾಹವಾಗುವ ಅತ್ಯಾಚಾರಗಳು ಆ ಮಹಿಳೆಯರ ಸಂಬಂಧಿಕರ ಕಣ್ಣೆದಿರಲ್ಲೇ ನಡೆದಿವೆ. ಎನ್ನುವಾಗ, ಆ ದೃಶ್ಯಗಳ ಊಹಾನೋಟ ನೇ ಕಣ್ಣು ಕತ್ತಲೆ ಬರಿಸುವಂತಿದೆ.

ಈ ಭಾಗಗಳಲ್ಲಿ ಹಿಂದುಗಳಿರುವದು ಮುಸಲ್ಮಾನ ಸಂಖ್ಯೆಯ ಸೇಕಡಾ 15ರಷ್ಟು ಮಾತ್ರ. ಕಲ್ಕತ್ತಾ ಗಲಭೆಯಾದಂದಿನಿಂದ ಈ ಅತ್ಯಾ[illegible] ಸುಸಂಘಟನೆಯಿಂದ ನಡೆದಿತ್ತು. ಓರ್ವ ಮಾಜೀ ಎಂ. ಎಲ್. ಎ.ಯು ಈ ಭೈರವ ಕೃತ್ಯದ ನುಂದಾಳತ್ವ ವಹಿಸಿದ್ದ; ಹಳ್ಳಿಯಲ್ಲೆಲ್ಲಾ ಮುಸಲ್ಮಾನ್ ಪುಂಡರ ಜಾಹೀರು ಪ್ರಚಾರ ಸಂಘಟನೆ ನಡೆದಿತ್ತು. ಈ ಕುರಿತು ಕಾಂಗ್ರೆಸ್ ಪ್ರಮುಖರೂ ಹಿಂದೂ ಸಭಾ ನಾಯಕರೂ ಮೊದಲೇ ಆಗಾಗ ಬಂಗಾಳ ಗವರ್ನರರಿಗೂ ಸರಕಾರಕ್ಕೂ ವಿಜ್ಞಾಪಿಸಿಕೊಂಡಿದ್ದರು. ಆದರೆ ಯಾರೂ ಯಾವ ಕಾರ್ಯಾಚರಣೆಯನ್ನೂ ಕೈಗೊಂಡಿದ್ದಿಲ್ಲ. ನವಕಾಲಿ, ತಿಪ್ಪೇರಾ ಅತ್ಯಾಚಾರ 10ನೇ ತಾರೀಕಿನಲ್ಲಾರಂಭವಾಗಿದ್ದರೂ ತಾ. 14ರ ವರೆಗೆ ಕಲ್ಕತ್ತಾ ಸರಕಾರವು ಅದರ ಸುದ್ದಿಯನ್ನೇ ಪಡೆದಿರಲಿಲ್ಲ

ಲಾತಿ, ಕತ್ತಿ, ಭರ್ಚಿ, ಕೋವಿಗಳಿಂದ ಸಜ್ಜಿತರಾದ 20000ಕೂ ಮಿಕ್ಕಿದ ಪುಂಡರು ಹಳ್ಳಿಹಳ್ಳಿಗಳಿಗೆ ನುಗ್ಗಿದರು; ಹೊರಗಿನಿಂದ ಯಾವ ಸಹಾಯಪ್ರಚಾರದಂತೆ ಪ್ರವೇಶದ್ವಾರಗಳಲ್ಲಿ ಸಶಸ್ತ್ರ ಸಂಗಡಗಳನ್ನು ಕಾವಲಿಗಿಟ್ಟಿದ್ದರು; ಆವೆಲ್ಲಾ ಹಳ್ಳೀ ಪ್ರದೇಶಗಳಲ್ಲಿದ್ದು ಒಳಗಿದ್ದವರು ಒಬ್ಬೊಬ್ಬನೇ ಓಟ್ಟಾಗುವದ ಸಾಧ್ಯವಿಸ್ತು; ಒಂದೊಂದು ಮನೆಯನ್ನೇ ನೂರಾರು, ಸಾವಿರಾರು ನುಂದಿ ಮುತ್ತುವಾಗ ಹಿಂದುಗಳು ಪ್ರತಿಭಟಿಸುವದೂ ಅಸಾಧ್ಯವಿತ್ತು. ಮಾನುಷತ್ವದ ಅಣುಮಾತ್ರವಿದ್ದವನು ಕೇವಲ ಸ್ಮರಣೆ ಮಾತ್ರದಿಂದ ಹೃದಯ ಕರಗಬೇಕಾದಂತಹ ಅಮಾನುಷ ಅತ್ಯಾಚಾರಗಳನ್ನು -ಕಾಡುಮೃಗಗಳು ಕೂಡಾ ಮಾಡದಂತಹ ಭೀಕರದುಷ್ಕೃತ್ಯಗಳನ್ನು -ನುನನೇಚ್ಛೆ ಮಾಡುತ್ತಾ ಹೋದರು. 10000ಕ್ಕೂ ಮಿಕ್ಕೆ ಮಡಿವಿದ್ದಾರಂತೆ. ಬಲಾತ್ಕಾರದಿಂದ ಮತಾಂತರಿಸಲ್ಪಟ್ಟವರು, ಮದುವೆ ಮಾಡಲ್ಪಟ್ಟವರು, ಕೊಡಿಸಲ್ಪಟ್ಟವರು, ಎತ್ತಿಕೊಂಡೊಯ್ಯಲ್ಪಟ್ಟವರು50ಸಾವಿರಕ್ಕೂ ಮಿಕ್ಕೆ ಬಹುಪಂತೆ. 5000ಕ್ಕೂ ಮಿಕ್ಕಿ ಮನೆಗಳು ಸುಡಲ್ಪಟ್ಟಿವೆ ಹಿಂದೂ ಪೂಜಾ ಸ್ಥಳಗಳೆಲ್ಲೊಂದನ್ನು ಬಿಡದೆ ನಾಶಮಾಡಿಟ್ಟಿದ್ದಾರೆ. ಸಿಕ್ಕಿಸಿಕ್ಕಿದ ಗೋವುಗಳನ್ನೆಲ್ಲಾ ಸ್ವತಃ ತಿವಿದುಹಾಕಿದುದಲ್ಲದೆ ಹಿಂದುಗಳ ಕೈಯಿಂದಲೇ ಜುಲುಮೆಯಿಂದ ಕೊಲ್ಲಿಸಿದುದಿದೆ. ಒಟ್ಟು ಒಂದಲ್ಲೊಂದು ವಿಧದಿಂದ ಹಾನಿಗೊಂಡವರ ಸಂಖ್ಯೆ 150000ಕ್ಕೂ ಮಿಕ್ಕಿದೆ. ಈ ರೌರವ ಅತ್ಯಾಚಾರದಿದಿರಲ್ಲಿ ಆಗೋಸ್ತಿನಲ್ಲಿ ನಡೆದ ಕಲ್ಕತ್ತಾದ ಗಲಭೆ ಹರ್ವತದಿದಿರ ಗುಪ್ಪೆಯಂತಾಗಿದೆ. ಕ್ರೂರತೆಯ ಮಟ್ಟಿಗೆ ಇದನ್ನು ಸಂಗಟ್ಟುವಂತಹದು ಹಿಂದುಸ್ಥಾನದ ಚರಿತ್ರೆಯಲ್ಲೇ ನಡೆದಿಲ್ಲ-ಸಂಶಂಡದಲ್ಲೆಲ್ಲಿಯಾದರೂ ನಡೆಯುವದಸಾಧ್ಯವೆನ್ನಬಹುದು.

ಗಲಭೆಯ ಕ್ಷೇತ್ರದ ದೊಡ್ಡ ಜಮೀನ್ದಾರನೊಬ್ಬನ ಮನೆಯನ್ನು ಜೀವಂತ ಯಜಮಾನನ ಸಮೇತ ಸುಟ್ಟಿದ್ದಾರೆ. ಭಸ್ಮವಾಗದುಳಿದಿರುವ ಒಂದೇ ಒಂದು ಒಳ್ಳೇ ಹಿಂದೂ ಗೃಹವನ್ನು ಕಾಣುವೆವೆಂದರೆ ಈಗ ಅಲ್ಲಿಲ್ಲ. ಕೆಲವರು 25 ಯಾ 50ರ ಗುಂಪಾಗಿ ಪುಂಡರೊಡನೆ ಹೋರಾಡಿ ಧೀರ ಮರಣ ಹೊಂದಿದ್ದರು. ಈ ನರಭಕ್ಷಕ ಸೀಡಿತ ಸ್ಥಳದಿಂದ ಸಿಲ್ಹೆಟ್ ಜಿಲ್ಲೆ, ಕಲ್ಕತ್ತಾ ಮತ್ತಿತರ ಸರಹದ್ದು ಪಟ್ಟಣಗಳಿಗೆ ಓಡಿ ಬಂದವರ ಸಂಖ್ಯೆ 2 ಲಕ್ಷಕ್ಕೇರಿದೆ. ಅವರು ಹೇಳುತ್ತಿರುವ ದುರಂತ ಕಥೆಗಳು ರೋಮಾಂಚಕಾರಿಯವೆ; ರಕ್ತ ಕುದಿಸುತ್ತಿವೆ

ನವಂಖಾಲಿಯ 22 ಲಕ್ಷ ಜನರಲ್ಲಿ 18 ಲಕ್ಷ ಮುಸಲ್ಮಾನರು; ಉಳಿದ 4 ಲಕ್ಷ ಹಿಂದುಗಳ ವೈಕಿ ಅಧಿಕ ಸಂಖ್ಯಾಕರು ಅಸ್ಪರ್ಶ ವರ್ಗಕ್ಕೆ ಸೇರಿದವರಿದ್ದು ಈ ಅತ್ಯಾಚಾರಕ್ಕೆ ಜನರೇ ಹೆಚ್ಚಾಗಿ ಬಲಿಯಾದರೆಂದು ತಿಳಿದು ಬರುತ್ತದೆ. ಲೀಗ್ ನಾಮಕರಣ ಪಡೆದಿರುವ ಹರಿಜನ ಪ್ರೀ ಮಂಡಲರನ್ನೀ ಕುರಿತು ಒತ್ತಾಯಪಡಲಾಗುತ್ತಿದೆ.

ಕಾಂಗ್ರೆಸ್ ಮತ್ತು ಹಿಂದೂ ಮಹಾಸಭೆಯವರು ಪೀಡಿತರ ರಕ್ಷಣೆಗಾಗಿ ಅಲ್ಲಲ್ಲಿ ಸಹಾಯ ಭವನಗಳನ್ನೇರ್ಪಡಿಸಿದ್ದಾರೆ. ರಕ್ಷಣಾ ಶಾಂತಿ ದಳಗಳು ಆ ರುದ್ರಭೂಮಿಗೆ ಹೋಗಿ ಪ್ರಾಣದಾಸೆ ಬಿಟ್ಟು ಕೆಲಸ ಮಾಡುತ್ತಿವೆ. ಕೆಲವರಿಗೆ ಪೋಲಿಸ್ ರಕ್ಷಣೆ ದೊರೆಯದೆ ಹಿಂದಿರುಗಬೇಕಾಯಿತು.

ಬಂಗಾಳ ಸಹಿದರ ಸರಕಾರವು ನಾಮ ಮಾತ್ರ ಎಚ್ಚತ್ತಿಂತಿದೆ; ಆಗುವದೆಲ್ಲಾ ಬಹ್ವಂಶ ಆದ ಮೇಲೆ ಅಲ್ಲಿಗೆ ಪೋಲೀಸ್ ಮತ್ತು ಸೇನೆ ಹೋದ ವಾರ್ತೆ ಬಂದಿದೆ. ಒಂದು ಲಕ್ಷಕರ ಪತ್ರಗಳು ಮಿ. ಸುಹ್ರವರ್ದಿಗಳ ಹೆಸರಿನಿಂದ ಅತ್ಯಾಚಾರದ ಕ್ಷೇತ್ರಗಳಲ್ಲಿ ವಿಮಾನ ಮೂಲಕ ಎಸೆಯಲ್ಪಟ್ಟಿವೆ.

ವೈಸರಾಯಿ, ಗವರ್ನರರನ್ನು ಜನಪ್ರಮುಖರು ಮೇಲಿಂದ ಮೇಲೆ ಒತ್ತಾಯಿಸಿದ ಮೇಲೆ ತಾ. 19ರಲ್ಲಿ ಬಂಗಾಳಾ ಗವರ್ನರರು ಪ್ರಧಾನ ಮಂತ್ರಿ ಸುಹ್ರವರ್ದಿಯೊಂದಿಗೆ ವಿಮಾನದಲ್ಲಿ ಪೀಡಾ ಸ್ಥಳಗಳಿಗೆ ಹಾರಿ ನೋಡಿ ಬಂದರೆಂದು ತಿಳಿದು ಬರುತ್ತದೆ.

ನಿಯೋಜಿತ ರಾಷ್ಟ್ರಪತಿ ಆಚಾರ್ಯ ಕೃಪಲಾನಿಯವರು ತನ್ನ ಪತ್ನಿ ಸುಚೇತಾ ಕೃಪಲಾನಿ, ಶ್ರೀ. ಶರಶ್ಚಂದ್ರ ಬೋಸ್, ಅಜಾದ್ ಹಿಂದ್ ದಳದ ಎ. ಸಿ. ಚಟರ್ಜಿ, ಕೇಂದ್ರ ಎಂ. ಎಲ್. ಎ, ಕುಮಾರ್ ದೇವೇಂದ್ರ ಲಾಲ್ ಜಾನ್ ಮೊದಲಾದವರೊಂದಿಗೆ ವಿಮಾನದಲ್ಲಿ ಹಾರಿ ಆ ರುದ್ರ ಭೂಮಿಯನ್ನು ಸಂದರ್ಶಿಸಿ ಸುರಳಿದ್ದಾರೆ. ಕೃಪಾಲನಿ ಮತ್ತೊಮ್ಮೆ ಅಲ್ಲಿಗೆ ಭೇಟ್ಟಿಕೊಡಲಿದ್ದಾರೆ.

ಪೂರ್ವ ಬಂಗಾಳದ ದುರಂತದಿಂದ ಇಡೀ ರಷ್ಟದಲ್ಲಿ ಹಾಹಾಕಾರವೆದ್ದಿದೆ. ಬೋಂಬಾಯಿ, ಕರಾಚಿ ಮೊದಲಾದ ಕಡೆಗಳಲ್ಲಿ ಹಿಂದುಗಳು ಹರತಾಳ ನಡೆಸಿದ್ದಾರೆ. ಬೊಂಬಾಯಿ ಮೊದಲಾದ ಕಡೆಗಳಿಂದ ನವಾಖಾಲಿಗೆ ಧಾವಿಸಲು ಹಲವರು ಅತುರರಾಗುತ್ತಿದ್ದರೆಂದೂ ಆಳ್ವಿಯ ಪ್ರತಿಧ್ವನಿಯಿಂದಾಗಿ ಬೊಂಬಾಯಿ ಗಲಭೆ ತುಸು ಹೆಚ್ಚಿತೆಂದೂ ವಾರ್ತೆ ಬಂದಿದೆ.

ಬಂಗಾಳದಲ್ಲಿ ಈಗಿನ ಗವರ್ನರ್ ಮತ್ತು ಲೀಗಿನ ಸುಹ್ರವರ್ದಿ ಸರಕಾರವಿರುವವರೆಗೆ ಶಾಳುವದಸಾಧ್ಯವೆಂಬುದು ಈಗ ಮತ್ತೊಮ್ಮೆ ಖಚಿತವಾಯಿತು. ಅವರ ರದ್ದತಿಯ ಬೇಡಿಕೆಗಳು ಸರ್ವ ಕಡೆಗಳಿಂದಲೂ ಹೋಗುತ್ತಿವೆ.

ಫಿಲ್ಲಿಮುಲ್ಲಿ ತಾತ್ಕಾಲಿಕ ರಾಷ್ಟ್ರೀಯ ಸರಕಾರದ ಸದಸ್ಯರು 'ಇದಕ್ಕೇನುಪರಿಹಾರ' ಎಂಬ ಯೋಚನೆಯಲ್ಲಿ ಬಿದ್ದಿದ್ದಾರೆ. ಗೃಹ ಮಂತ್ರಿ ಸರ್ದಾರ್ ಪಟೇಲರೂ ಇತರ ಮಂತ್ರಿಗಳೂ ಗಾಂಧಿಜೀಯೊಡನೆ ಪರ್ಯಾಲೋಚಿಸಿದ್ದಾರೆ. ಕಾಂಗ್ರೆಸ್ ಧುರೀಣರು ಈ ದುರುಂತದ ಪ್ರೇಕ್ಷಕರಾಗಿ ಇರಲೆಂದಿಗೂ ಒಪ್ಪಲಾರರು. ಆದರೆ ಸ್ವಸ್ತುತ ರಾಜ್ಯಶಾಸನ ಪ್ರಕಾರ ಬಂಗಾಳ ಸರಕಾರದ ತುತ್ತತುದಿಯ ಅಧಿಕಾರಿಯೆಂದರೆ ಬಂಗಾಳ ಗವರ್ನರರು. ಇಡೀ ಭಾರತದ ರಕ್ಷಣಾ ಜವಾಬ್ದಾರಿಯ ವಿಶೇಷಾಧಿಕಾರ ವಿರುವದು ವೈಸರಾಯರಿಗೆ ಹೊರತು ಕೇಂದ್ರ ಸರಕಾರಕ್ಕೆಲ್ಲಿ ಘಟನೆ ಹಾಗಿದ್ದರೂ ವೈಸರಾಯರು ನೆಹರೂ ಮಂಡಲದೊಡನೆ ಮಾತಾಡಿಕೊಂಡಿರುವ ತಹಾನುಸಾರ ಗೃಹಮಂತ್ರಿ ಸರ್ದಾರ್ ಪಟೇಲರ ಆಧಿಪತ್ಯದ ಮಂತ್ರಿಮಂಡಲದ ತೀರ್ಮಾನದಂತೆ ವರ್ತಿಸಬೇಕಾಗುತ್ತದೆ. ಕೇಂದ್ರಮಂಡಲವು ಪೂರ್ವ ಬಂಗಾಳ ಆತ್ಯಾಚಾರದ ಕುರಿತು ವೈಸರಾಯರ ಮೇಲೆ ಒತ್ತಡ ಹಾಕುವದೆಂದೂ, ಲೋಡ್ ವೇವಲರು ಬೆದಾಸೀನ್ಯ ಮಹಿಸಿದರೆ ಲಲ್ಲಿ ಬಿಕ್ಕಟ್ಟುಂಟಾಗಬಹುದೆಂದೂ ನಂಬಲಾಗಿದೆ.

ಮದರಾಸು ಸ್ಕೂಲ್ ಬುಕ್ ಮತ್ತು ಲಿಟರೇಚರ್ ಸೊಸೈಟಿಯವರಿಂದ ಬಹು ಮಾನಿತವಾದ ಉಪಯುಕ್ತ ಗ್ರಂಥ

ಪ್ರಸವ ವಿಜ್ಞಾನ

ಬರೆದವರು

ಡಾ|| ದೊಡ್ಡೇರಿ ವೆಂಕಟಗಿರಿರಾವ್

೨೦೦ಕ್ಕೂ ಮಿಕ್ಕಿ ಪುಟಗಳು ೨೦೦ಕ್ಕೂ ಮಿಕ್ಕಿ ಚಿತ್ರಗಳು

ಸುಂದರವಾದ ಮೂರು ಬಣ್ಣದ ಚಿತ್ರಗಳನ್ನೊಳಗೊಂಡ

ಪಿ. ಪಿ. ಕಳಿಸುವುದಿಲ್ಲ. ರೂ ೨ ಕಳಿಸಿ ಮನಿಯಾರ್ಡರ್ ಮಾಡಿಸಿದರೆ ರಿಜಿಸ್ಟರ್ ಮೂಲಕ ಕಳಿಸಲಾಗುವುದು. ಪುಸ್ತಕ ವ್ಯಾಪಾರಿಗಳಿಗೆ ರಿಯಾಯತಿಯುಂಟು

ಮೂರಾಟಗಾರರು

ಮಾಡರ್ನ್ ಔಷಧಾಲಯ

ದೊಡ್ಡ ಬಳ್ಳಾಪುರ (ಬೆಂಗಳೂರು)

ಶುಭಾಶಯಗಳು

ಸುಖ ಸಂತೋಷಗಳಿಂದ ಕೂಡಿದ

ದೀಪಾವಳಿ

ಯ ಸುಸಂದರ್ಭದಲ್ಲಿ ನಮ್ಮ

ಹಾರ್ದಿಕ ಶುಭಾಶಯಗಳು.

ಕೇರಳಾ ಸೋಪ್ ಇನ್‌ಸ್ಟಿಟ್ಯೂಟ್, ಕಲ್ಲಿಕೋಟೆ

Kerala Soap Institute, Calicut.

ಚಂದಾದಾರರಲ್ಲಿ

ಕಳೆದ ಬಾರಿ ಪ್ರತಿಚಂದಾದಾರರಿಗೂ ಹೊಸ ಚಂದಾನಂಬ್ಯಕೊಡಲಾಗಿದೆ. ಇನ್ನು ಮುಂದೆ ನನ್ನೊಡನೆ ಪತ್ರವ್ಯವಹಾರಮಾಡುವಾಗ ಈ ಹೊಸ ನಂಬ್ರವನ್ನೇ ಸೂಚಿಸಬೇಕಾಗಿಯೂ ಹೊಸತಾಗಿ ವಿಳಾಸ ಸ್ಪಿಂಟುಮಾಡುವಾಗ ಏನಾದರೂ ವ್ಯತ್ಯಾಸವಾಗಿದ್ದರೆ ಅದನ್ನು ತಿಳಿಸಬೇಕಾಗಿಯೂ ಈ ಮೂಲಕ ಕೇಳಿಕೊಳ್ಳುತ್ತಾಗುತ್ತದೆ

—ಮೆನೇಜರ್.

ದೀಪಾವಳಿಯ ಈ ಶುಭ ಸಮಯದಲ್ಲಿ--

ಹಳೆಯ ಸವಿನೆನಪುಗಳನ್ನು ನೆನಪಿಗೆ ತಂದು
ಹೊಸ ದಯಾಪೂರ್ಣ ಸದ್ಭಾವನೆಗಳಿಂದ
ತನ್ನ ಮುಂದಿನ ಶುಭವನ್ನು ಕೋರುವನಿವು—

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್
ಸ್ಥಾಪನೆ: 1906. ಲಿಮಿಟೆಡ್.

The Canara Banking Corporation Limited.
UDIPI.

ನವಯುಗ

ಉಡುಪಿ, ಗುರುವಾರ, ತಿಳಿ-೧೦-'೪೬

ಬಂಗಾಳದ ಪಾಠ

ಬಂಗಾಳದ ಪೂರ್ವ ಭಾಗದಲ್ಲಿರುವ ನವಾಕಾಳಿ ಮತ್ತು ತಿಪ್ಪೇರಾ ಜಿಲ್ಲೆಗಳಲ್ಲಿ ಮುಸ್ಲೀಂ ಪುಂಡರು ಹಿಂದೂ ಅಲ್ಪ ಸಂಖ್ಯಾಕರನ್ನು ಮರ್ದನಮಾಡಿದ ರೀತಿಯ ಸ್ಮರಣೆಗೂ ಆತ್ಮಸಂಯಮನ ಬೇಕು! ಜಾತ್ಯಂಧರ ಇದು ವರೆಗಿನ ಅತ್ಯಾಚಾರಗಳಿಗೆ ಪ್ರತ್ಯಪ್ಪೆ ಆಹುತಿಯಾಗುವದರಲ್ಲಿಂತಹ ಯಾತನೆಯಿರಬಹುದೋ ಅಂತಹ ವೇದನೆಯೇ ಪೂರ್ವ ಬಂಗಾಳದ ಅಮಾನುಷ ಕೃತ್ಯಗಳನ್ನು ನೂರಾರು ಮೈಲು ದೂರದಿಂದ ಕೇಳುವಾಗ ಆಗುತ್ತಿದೆ! ನಮ್ಮ ಪುರಾಣಗಳು ರಾಕ್ಷಸರ ಕೃತ್ಯಗಳ ವರ್ಣನೆಗಳಿಂದ ತುಂಬಿವೆ; ಚರಿತ್ರೆಗಳಲ್ಲಿ ಅತ್ಯಾಚಾರಗಳೋ ಸಾಮೂಹಿಕ ಬಲಿದಾನಗಳೋ ಬೇಕಾದಷ್ಟು ಕಾಣಸಿಗುತ್ತಿವೆ. ನಮ್ಮ ರಾಜಕೀಯ ಇತಿಹಾಸದಲ್ಲೂ ಸಿಪಾಯಿ ದಂಗೆ, ಮಲಬಾರು ದಂಗೆ, ಪಂಜಾಬ್ ಅತ್ಯಾಚಾರ, ಆಷ್ಟಿಚಿಮೂರು ಪ್ರಕರಣದಂಥವುಗಳಿವೆ. ಆದರೆ ಕ್ರೂರತೆಯ ಮಟ್ಟಿಗೆ ಇವುಗಳಲ್ಲಾವುದೇ ಅದರೂ ನವಾಕಾಳಿ ಅತ್ಯಾಚಾರವನ್ನು ಸರಿಗಟ್ಟಬಲ್ಲವೇ ಎಂಬ ಕುರಿತು ಅನುಮಾನವಿದೆ. ಇದು ಕೇವಲ ದುಃಖ ಸೂಚಿಸುವ ವಿಷಯವಷ್ಟೇ ಅಲ್ಲ—ಕೊರಗಿ ಕ್ವಥಿಸುವಂತೆ ಮಾಡುವ ಸಂಗತಿ. ಹಿಂದೂಬಾಂಧವರ ಮೇಲೆ ಮುಸ್ಲೀಂ ಪುಂಡರು ಇಂತಹ ಅತ್ಯಾಚಾರ ಮಾಡಿದರಲ್ಲಾ, ಎಂಬ ದಕ್ಕಾಗಿ ಈ ಸಂಕಟವೇನೂ ಅಲ್ಲ. ಪೂರ್ವ ಬಂಗಾಳದ ಅತ್ಯಾಚಾರಿಗಳನ್ನು 'ಮುಸಲ್ಮಾನ'ರೆಂದು ಮಿ. ಅಬ್ದುಲ್ ಕ್ವಯಾಮ್ ಅಥವಾ ಅಬ್ದುಲ್ ರಾಬಾ ನಿಸ್ತಾರರೇ ಆದರೂ ಅಭಿಮಾನದಿಂದ ಕರೆಯಬಲ್ಲರೆ? 'ಅವರು ನಮ್ಮವರು' ಎಂದು ಮುಸ್ಲಿಂ ಲೀಗ್ ಒಪ್ಪಿಕೊಳ್ಳುತ್ತದಾದರೆ ಬಂಗಾಳೀ ಬಂಧುಗಳು ಅನುಭವಿಸಿದ ಘೋರ ನರಕಸಾರ್ಥಕವಾಯಿತೆಂದೇ ನಾವನ್ನುತ್ತೇವೆ. ಯಾಕಂದರೆ ಲೀಗಿನವರು ನರಭಕ್ಷಕ ವ್ಯಾಘ್ರಗಳೆಂಬುದಕ್ಕೆ ಸಂಬಂಧಪಟ್ಟವರು ಸಮ್ಮತಿದೊರೆತಂತಾಗಿ, ಮುಂದೆ ಆವರೊಡನಿಟ್ಟುಕೊಳ್ಳಬೇಕಾಗಿರುವ ಸಂಬಂಧವೆಂತಹದಿಂಬೇಕೆಂಬುದು ಸರ್ವರಿಗೂ ಸ್ಪಷ್ಟವಾನಂತಾಗಿ ರಾಷ್ಟ್ರದ ಕಲ್ಯಾಣ ಸಾಧನೆಗನುಕೂಲವಾಗುವದು; ಬಂಗಾಳೀ ಬಲಿದಾನ ಸಾರ್ಥಕವಾಗುವದು.

ಆದರೆ ನಾವುಮಾತ್ರಕ್ಕಾಗಿಯಾದರೂ-ತಮ್ಮ ಮೋರೆಯುಳಿಸಿಕೊಳ್ಳುವದಕ್ಕಾಗಿಯಾದರೂ- ಲೀಗಿನವರೂ ಈ ಅತ್ಯಾಚಾರವನ್ನು ಖಂಡಿಸುತಿದ್ದಾರೆ. ಅತ್ಯಾಚಾರಿಗಳು ಜನ್ಮತಃ ಮುಸಲ್ಮಾನರು; ಆದರೆ ಅವರ ಕೃತ್ಯ ಮನುಷ್ಯರನ್ನಿಸುವಂತಹದು ಹೇಗೂ ಅಲ್ಲ- ವನ್ಯಜಂತುಗಳ ಮತ ಸಂಗ್ರಹಿಸುವ ಅನುಕೂಲತೆಯಿರುತಿದ್ದರೆ ಇವರನ್ನು ತಮ್ಮ ವರ್ಗಕ್ಕೆ ಸೇರಿಸಿಕೊಳ್ಳಲು ಅವುಗಳ ಬಹುಮತ ಕೂಡ ದೊರೆಯಲಾರದು! ಮನುಷ್ಯರಾಗಿ ಹುಟ್ಟಿದವರು ಇಂತಹ ದರ್ಜೆಗಿಳಿಯಲು ಸಾಧ್ಯವೇ, ಎಂಬುದೊಂದಕ್ಕಾಗಿಯೇ ಇಷ್ಟು ಸಂತಾಪ ಹೊರತು ಬೇರಾವುದಕ್ಕೂ ಅಲ್ಲ.

ಆದ್ದರಿಂದ ಆ ನರ ಮೃಗಗಳ ವರ್ತನೆಯ ವಿಮರ್ಶೆ ಅನಗತ್ಯ; ನಿಷೇಧ ಸೂಚನೆಯ ಮುಖತಿನೊಳಗೆ ಇಂತಹ ಪ್ರಚಂಡ ಪ್ರಾಕಾಮ್ಯಗಳು ತಮ್ಮವರೆಂದು ಅಭಿಮಾನದಿಂದರಳಿದ ಮುಖಮಂಡ್ರೆಯಲ್ಲಿರುವ ಮುಸ್ಲಿಂ ಲೀಗ್ ಮುಖಂಡರ ಪ್ರಸ್ತಾಪವೂ ನಿರರ್ಥಕ; ಈ ಕುರಿತು ಸಕಾಲದಲ್ಲಿ ಬಂದಿದ್ದ ಎಚ್ಚರಿಕೆಯನ್ನೂ ಕಲ್ಕತ್ತಾ ಗಲಭೆಯ ಆಚ್ಚಳಿಯದ ಪಾಠವನ್ನೂ ತನ್ನ ಧ್ಯೇಯಸಾಧನೆಗಾಗಿಯೇ ಎಂಬಂತೆ ಮರೆತು ಬಿಟ್ಟು, ಈ ಹತ್ಯಾಕಾಂಡದ ಪ್ರೇಕ್ಷಕನಾಗಿ ಉಳಿದ ಸುಹ್ರವರ್ದಿ ಸರಕಾರವನ್ನಾಗಲೀ, ಆ ಸರಕಾರದ ನೇತೃತ್ವದ ಮಂತ್ರಿಯ ಅಮಲಿನಿಂದ ಮಂಕಾಗಿರುವ ಒಂಗಾಳದ ಗವರ್ನರರನ್ನಾಗಲೀ ಇನ್ನು ವಿಚಾರಿಸಿ ನಿಲ್ಲುವುದೂ ವ್ಯರ್ಥ. ಈಗ ಜನತೆ ದಬ್ಬಿಸಿ ಕೇಳುತ್ತಿರುವದು ಬೇರಾರನ್ನೂ ಅಲ್ಲ — ಕೇಂದ್ರ ಸರಕಾರದಲ್ಲಿರುವ ಜನ ಪ್ರಮುಖರನ್ನೇ. ಬಂಗಾಳದ ಪ್ರಾಂತಿಕ ಒಳಾಡಳಿತೆಗೂ ಕೇಂದ್ರ ಸರಕಾರಕ್ಕೂ ನೇರವಾದ ಸಂಬಂಧವಿಲ್ಲದುದನ್ನಾಗಲೀ, ಸದ್ಯದ ರಾಜ್ಯ ಘಟನೆಯನ್ನಯ ಇಂತಹ ಸಂದರ್ಭಗಳಲ್ಲಿ ಕೈ ಹಾಕುವ ವಿಶೇಷಾಧಿಕಾರವಿರುವುದು ವೈಸರಾಯರಿಗೆ ನಾತ್ರವೆಂಬುದನ್ನಾಗಲೀ ತಿಳಿಯದ ಜನರು ಬಂಗಾಳದ ನಿರಂತರಕ್ಕಾಗಿ ಕೇಂದ್ರ ಸರಕಾರವನ್ನು ದೂರಹತ್ತಿದ್ದಾರೆ. ದೂರುವುದು ತಪ್ಪಲ್ಲ. ನಿಯಮ ಬದ್ಧವಾಗಿ ಹೇಗಿದ್ದರೂ ಎಲ್ಲವನ್ನೂ ಕೇಂದ್ರ ಮಂಡಲದ ಅಧಿಕಾರಕ್ಕೆ ಬಿಟ್ಟು ತಾನು ಕೇವಲ ಕಾವಲುಗಾರನಾಗಿ ನಿಲ್ಲುವೆನೆಂದು ಲೋರ್ಡ್ ವೇವೆಲರ ಆಶ್ವಾಸನೆಯಿದೆ ಎಂದು ನಾವೆಲ್ಲಾ ಕೇಳಿದ್ದೇವೆ. ಹಾಗಿದ್ದರೆ ಬಂಗಾಳದ ತಪ್ಪನ್ನು ಕೇಂದ್ರದಲ್ಲಿರುವ ರಾಷ್ಟ್ರ ಪ್ರಮುಖರೇಕೆ ತಿದ್ದ ಬಾರದು? ಅಥವಾ ವೈಸರಾಯರಿಂದ ತಿದ್ದಿಸಬಾರದು? ಅದು ಅಸಾಧ್ಯವಾದರೆ ಅವರೇಕೆ ರಾಜೀನಾಮೆ ಕೊಡಬಾರದು? ಇವೆರಡರಲ್ಲೊಂದನ್ನು ಸಾಧಿಸಲು ಢಿಲ್ಲಿಯ ಪ್ರಮುಖರಿಗೆ ನೆಡು ಬಿಗಿದಂತಿದೆ. ಯಾವ ವಿಧದಿಂದಲೇ ಆದರೂ ಅಖಿಲಹಿಂದುಸ್ಥಾನವು ನವಾಖಾಲಿಯಲ್ಲಪೆಂಬ ಅನುಭವವನ್ನು ಪುಂಡರ ಪಕ್ಷಕ್ಕೆ ಕೂಡಲೇ ದೊರಕಿಸಿಕೊಡುವದು ಅಗತ್ಯ.

ಮಂಗಳೂರಿನಲ್ಲಿ ಕೆಪ್ಟನ್ ಲಕ್ಷ್ಮಿ

ಮಂಗಳೂರಿನ ವಿದ್ಯಾರ್ಥಿ ಸಂಘದವರು ತಾ. 21ರಲ್ಲಿ 'ಆಜಾದ್ ಹಿಂದ್ ಸರಕಾರ'ದ 4ನೇ ವಾರ್ಷಿಕೋತ್ಸವವನ್ನು ಜರಗಿಸಿದರು. ನೇತಾಜಿಯ ಮುಖ್ಯಾನುಯಾಯಿಯೂ, ಆಜಾದ್ ಹಿಂದ್ ಮಹಿಳಾದಳದ ನಾಯಕಿಯೂ ಆಗಿದ್ದ ಕ್ಯಾಪ್ಟನ್ ಲಕ್ಷ್ಮಿಯವರು ಆಗಮಿಸಿ ಉಜ್ವಲ ಭಾಷಣವಿತ್ತರು. ಕ್ಯಾ. ಲಕ್ಷ್ಮಿ, ಲೆಫ್ಟನೆಂಟ್ ಅಚ್ಯುತ ಮತ್ತಿತರ ಆಜಾದ್ ಹಿಂದ್ ಯೋಧರೊಡನೆ ಆಗಮಿಸಿದಾಗ ಮಂಗಳೂರಿನ ರೈಲ್ವೇ ನಿಲ್ದಾಣದಲ್ಲಿ ಮಹಿಳೆಯರೂ ನಾಗರಿಕರೂ ಸಂಭ್ರಮದ ಸ್ವಾಗತವಿತ್ತರು ಸಂಘ, ಸಂಸ್ಥೆಗಳಿಂದ ಹಾರತುರಾಯಿಗಳರ್ಪಿಸಲ್ಪಟ್ಟವು. ವೈಭವದ ಪುರ ಮೆರವಣಿಗೆಯಾಗಿ ಮೈದಾನಿನ ಪ್ರಚಂಡ ಸಭೆಯಲ್ಲಿ ಕ್ಯಾ. ಲಕ್ಷ್ಮಿಯವರ ಭಾಷಣವಾಯಿತು. ಡಾ। ನಾಗಪ್ಪ ಅಳ್ವರು ಅಧ್ಯಕ್ಷತೆ ವಹಿಸಿದ್ದರು.

ಕ್ಯಾಪ್ಟನ್ ಲಕ್ಷ್ಮಿಯ ಭಾಷಣ

ಆರಂಭದಲ್ಲಿ ಶ್ರೀ ಭಾಸ್ಕರ ರೈಗಳ ಸ್ವಾಗತ ಭಾಷಣವಾದ ಮೇಲೆ ಕ್ಯಾಪ್ಟನ್ ಲಕ್ಷ್ಮಿ 'ಜೈಹಿಂದ್' ಘೋಷಣೆಯೊಡನೆ ಆರಂಭಿಸಿ, ನೇತಾಜಿಯ ಪ್ರಭಾವ, ನಿಸ್ವಾರ್ಥ ರಾಷ್ಟ್ರಪ್ರೇಮ, ಅವರ ಸರಕಾರ ಸ್ಥಾಪನೆಯ ಆಂದಿನ ದೃಶ್ಯಗಳನ್ನೆಲ್ಲಾ ವರ್ಣಿಸಿದರು. ಆರೋಪಗಳಿಗೆ ಸಮರ್ಪಕ ಉತ್ತರವಿತ್ತರು. 'ನೇತಾಜೀ ಸ್ವಾತಂತ್ರ್ಯಕ್ಕಾಗಿ ನೆತ್ತರು ಬೇಡುತ್ತಾನೆ' ಎಂದು ಮುಂದೆ ಬಂದಿದ್ದ ಮಜೂರು ಯೋಧರ ಕಥೆಗಳನ್ನು ವರ್ಣಿಸಿ, ಆಜಾದ್ ಹಿಂದ್‌ನಲ್ಲಿದ್ದ ಜಾತೀಯ ಐಕ್ಯತೆಯು ಇಂದು ಭಾರತದಲ್ಲಿ ನೆಲೆಗೊಳ್ಳುವಂತೆ ಪ್ರಯತ್ನಿಸಬೇಕೆಂದು ವಿಜ್ಞಾಪಿಸಿಕೊಂಡರು. ಮಂಗಳೂರಿನವರಾಗಿದ್ದು, ಆಜಾದ್ ಹಿಂದ್ ಸರಕಾರದ ಸಾರಿಗೆ ಮಂತ್ರಿಗಳಾಗಿ ಪ್ರಾಣಾರ್ಪಣೆ ಮಾಡಿದ್ದ ಶ್ರೀ ಎ.ಎಲ್ಲಪ್ಪನವರ ಪುಣ್ಯಸ್ಮರಣೆಮಾಡಿದರು. ಆವರ ಇಂಗ್ಲಿಷ್ ಭಾಷಣದ ಸಾರವನ್ನು ಶ್ರೀ ಎನ್.ಎಸ್.ಕಲ್ಲೆಯವರು ಕೊನೆಗೆ ವಿವರಿಸಿ ಹೇಳಿದರು. ಆಜಾದ್ ಹಿಂದ್ ಯೋಧರಿಗೆ ಸಹಾಯ ಯಾಚಿಸಿದಾಗ ಸಭಿಕ ಸ್ತ್ರೀಪುರುಷರು ಬಳೆ, ಒಂಟಿ, ಹಾರ, ಪೆನ್, ನೇತಾಜಿ ಚಿತ್ರ, ಉಂಗುರ ಇತ್ಯಾದಿ ಒಡವೆಗಳನ್ನರ್ಪಿಸಿದರು. ಆವುಗಳಲ್ಲಾ ಅಧಿಕ ಬೆಲೆಗೆ ಹರಾಜಾದುವು. ಕೊನೆಯಲ್ಲಿ ಧ್ವಜವಂದನೆ, ಆಜಾದ್ ಹಿಂದ್ ಗೀತಾದಿಗಳು ನಡೆದುವು.

ಉಡುಪಿ.

ಮಳ್ಳಕೊಟ್-ಇವರ ಮೂಸಿಕ ಮಾಸಭೆಯು ಇಂದೇ ತಾ. 20ನೇ ಆಪರಾಹ್ನ ಮೋದರ್ನ್ ಹಾ. ಎ. ಶಾಲೆಯಲ್ಲಿ ಶ್ರೀ. ಬಿ. ಅಂತಯ್ಯ ಸೆಟ್ಟರ ಅಧ್ಯಕ್ಷತೆಯಲ್ಲೂ, ಮಾಸಿಕ ಪಾರ್ಥಿವ ಸಭೆಯು ಕುಮಾರಿ ಬಿ. ಸುಂದರೀ ಬಾಯಿಯವರ ಅಧ್ಯಕ್ಷತೆಯಲ್ಲೂ ಜರಗಿ ಬಹುಮಾನ ವಿತರಣ, ಭಾಷಣಾದಿಗಳು ನಡೆದುವು.

ಕೋಜಿನೀಯ ನಿಧನ-ಇದೇ ತಾ. 20ನೇ ಆಪರಾಹ್ನ ಶ್ರೀಕೃಷ್ಣ ದೇವಾಲಯದಿಸಿರು ಕೈಮುಗಿಯಲು ಕನಕನ ಕಂಡೀ ಬಳಿಗೆ ಬಂದಿದ್ದ ಸುಮಾರು 16 ವರುಷದ ಹುಡುಗನು ಆಲ್ಲಿಯೇ ಜೀರಿಕೊಂಡು ಬಿದ್ದು ಕೂಡಲೇ ಮರಣಹೊಂದಿದ್ದಾನೆ. ನೆಲಪಡಿ ಹಾಕಿದ್ದ ಸಿಮೆಂಟ್ಕಲ್ಲೇ ತಂತಿಯಲ್ಲಾಗಿದ್ದ ಪ್ರಮಾದವೇ ಈ ಕೋಜಿನೀಯ ಮರಣಕ್ಕೆ ಕಾರಣವೆಂದು ನಂಬಲಾಗಿದೆ. ಹುಡುಗನು ಇಲ್ಲಿಯ ನೇಕಾರರ ಒಂದು ಬಡ ಕುಟುಂಬದವನು. ಮೃತನ ಮೇಲೆ ಬಿದ್ದು ಸಂಬಂಧಿಕರು ಗೋಳಾಡುತ್ತಿದ್ದ ದೃಶ್ಯ ಹೃದ್ರಾವಕವಿತ್ತು. ಕುಟುಂಬ ಪೋಷಕನೆಯ ಒಂದು ಜೀವವು ಎಳೇ ಪ್ರಾಯದಲ್ಲೇ ಇಂತಹ ಪ್ರಮಾದಕ್ಕೆ ಬಲಿಯಾದಾಗ, ಆದರ ಹೊಣಗಾರರಿಂದ ಸಂಬಂಧಿಕರಿಗೆ ಪರಿಹಾರ ದೊರೆಯುವ ಮಾರ್ಗವೇ ಯಾರೂ ತಪ್ಪಿಸಲಾಗದಂತೆ ಸರಕಾರವಾದರೂ ಆ ಹೊಸ ತೊರುವ ವ್ಯವಸ್ಥೆಯಿರುವದೆನ್ನತಾನೆ?



Approved firm by the Govt. of Mysore
Certified, by the Agent of the Govt. of Ceylone Indian.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ
ತಾರೀಕು 23—10—1946ರಿಂದ
ದೀಪಾವಳಿಯ ಕೃದೀಪ! ಹಬ್ಬದ ಹುಮ್ಮನಸ್ಸು!
ಪತಿಭಕ್ತಿಯ ಅನುಯಾಯಿಯಾಗಿ ದೇವಾನುದೇವತೆಗಳ
ಅಸೂಯೆಗೂ ಕಾರಣಭೂತಳಾದ ಪರಮಸಾಧ್ವಿ.
ಸನ್‌ರೈಸ್ ಚಿತ್ರದವರು.
ಮಹಾಸತಿ ಅನುಸೂಯ
ದುರ್ಗಾಜೋಟಿ, ಶೋಭನ ಸಮರ್ಥ, ಸಾಹುಮೋಡಕ್.
ನುಂದಿನ ಬದಲಾವಣೆ—
ಚಂದ್ರಗುಪ್ತ.

ನೆಹರು-ಕೃಪಲಾನಿಯರ ಗಡಿನಾಡು—ನವಾ ಖಾಲೀ ಸಂಚಾರಗಳ ಕಟು ಅನುಭವ!

ನಿಯೋಜಿತ ರಾಷ್ಟ್ರಪತಿ ಆಚಾರ್ಯ ಕೃಪಲಾನಿಯವರು ಶರಶ್ಚಂದ್ರ ಬೋಸ್ ಮತ್ತು ಹಂಗಡಿಗರೊಂದಿಗೆ ಪೂರ್ವ ಬಂಗಾಳದ ಪುಂಡರ ಹಾವಳಿ ಪೀಡಿತ ಸ್ಥಳಗಳನ್ನು ವಿಮಾನ ಮೂಲಕ ಇದೇ ತಾ 20 ರಲ್ಲಿ ಕಂಡುಬಂದು 'ಪುಂಡರನ್ನು ದಿರಿಸಲು ಜನರು ಸಂಘಟನೆ ಮಾಡಿಕೊಂಡು ತಯಾರಾಗಲಿ' ಎಂದು ವಿಜ್ಞಾಪಿಸಿಕೊಂಡಿದ್ದಾರೆ. ಪ್ರಧಮತಃ ಬಂಗಾಳ ಗವರ್ನರರ ನ್ನೂ ಪ್ರಧಾನಿ ಸುಹ್ರವರ್ದಿಯನ್ನೂ ಕಾಣಬೇಕೆಂದು ಅವರಿಬ್ಬರೂ ತಂಗಿದ್ದ ಕೊಮಿಲ್ಲಾಕ್ಕೆ ಕೃಪಾಲನಿಗಳ ವಿಮಾನವು ದಂಗೆ ಪೀಡಿತ ಸ್ಥಳಗಳ ಮೇಲೆ ಅತೀ ತಗ್ಗಿನಲ್ಲಿ ಹಾರಾಡಿ ಎಲ್ಲವನ್ನೂ ನೋಡಿಕೊಂಡೇ ಹೋಗಿತ್ತು. ಕೊಮಿಲ್ಲಾಕ್ಕೋಡಿ ಬಂದಿದ್ದ ದಂಗೆ ಪೀಡಿತರು ತಮ್ಮ ಹೈದ್ರಾವಕ ಅತ್ಯಚರಿತೆಯನ್ನು ಕೃಪಾಲನಿಯರಿಗೆ ವರ್ಣಿಸಿದ್ದರು.10ದಿನಗಳ ನಂತರವೂ ಸಾಲು ಸಾಲು ಮನೆಗಳು ಉರಿಯುತ್ತಿರುವದನ್ನು— ಮಿಲಿಟರಿ ಹೋಗಿದ್ದರೂ ಸ್ಥಳೀಯ ಅಧಿಕಾರಿಗಳು ಅವುಗಳ ಉಪಯೋಗವಾಗದಂತೆ ಮಾಡಿರುವುದನ್ನು—ದಂಗೆಗಾರರ ದಸ್ತಗಿರಿಯೇನೂ ಆಗದಿರುವುದನ್ನು ಕೃಪಲಾನಿಗಳು ಗವರ್ನರರಿಗೆತ್ತಿ. ಹೇಳಿಕರಿನ ಕಾರ್ಯ ಕೈಕೊಳ್ಳದಿದ್ದರೆ ಈ ಬೆಂಕಿ ಬೇರೆ ಕಡೆಯೂ ಹಬ್ಬಲಿದೆ ಎಂಬುವನ್ನು ಮನಗಾಣಿಸಿದರು. ಗವರ್ನರರು ಎಲ್ಲಕ್ಕೂ ಒಪ್ಪಿ, ತಾನು ಬಂಡಾಯವನ್ನು ನಿರ್ಮೂಲಿಸುವ ದೃಢ ನಿಶ್ಚಯವಾಡಿದ್ದೇನೆಂದೂ ವಿಶೇಷ ಸೇನೆ ಕರೆದಿದ್ದೇನೆಂದೂ ಆಶ್ವಾಸನೆಯಿತ್ತರು. ನವಖಾಲಿಯು ಮಟ್ಟಿಗೆ ಪರಿಸ್ಥಿತಿ ಹತೋಟಿಗೆ ಬಂದಿದೆಯೆಂದೇ ಸುಹ್ರವರ್ದಿಗಳತ್ತ ಆಶ್ವಾಸನೆ! ಕೊಮಿಲ್ಲಾದಿಂದ ಕಾತೆಗೆ ಮರಳುವಾಗ ಸುಹ್ರವರ್ದಿಗಳೂ ಕೃಪಲಾನಿ — — ವಿಮಾನದಲ್ಲೇ ಬಂದಿದ್ದರು. ನವಾಖಾಲಿ ದೊರ್ಘವಾಗಿ ಸಾಧ್ಯವಿದ್ದಷ್ಟು ತಗ್ಗಿನಲ್ಲಿ ವಿಮಾನ ನನ್ನೊಯ್ದು ಅಲ್ಲಿಯೂ ಸುಮಾರು 10 ಹಳ್ಳಿಗಳಲ್ಲಿ ಉರಿಯುತ್ತಿದ್ದ ಮನೆಗಳನ್ನು ಸುಹ್ರವರ್ದಿಗಳಿಗೆ ತೋರಿಸಲಾಯಿತು. ಕೆಲವು ಅಂದೇ ಮುಂಜಾನೆ ಬೆಂಕಿ ಬಿದ್ದವುಗಳು. ಲೀಗ್ ಪ್ರಧಾನಿ ಅವುಗಳ ಫೋಟೊ ತೆಗೆದಿದ್ದಾರಂತೆ. ಆಚಾರ್ಯರು ತಾ. 21 ರಲ್ಲಿ ಸುತ್ತೊನ್ಮೆ ವಿಮಾನದಲ್ಲಿ ಹೋಗಿ ಸರ್ವಪನ್ನೂ ನೋಡಿ ಬಂದಿದ್ದಾರೆ. ನವಾಖಾಲಿ, ತಿಪ್ಪೇರಾ ಜಿಲ್ಲೆಗಳ ಕೆಲವು ಭಾಗಗಳ ವಿಹಂಗಮ ನೋಟ ಮಾತ್ರದಿಂದ ಹೃದಯ ಕರಗಿದ ಆಚಾರ್ಯ ಕೃಪಲಾನಿಯವರ ಸ್ವಪ್ನೋಕ್ತಿಯಿದು:-

ಆಚಾರ್ಯರ ಸ್ಪಷ್ಟ ಬೋಧೆ

"ಸುಲಿಗೆ, ಕೊಲೆ, ಕೊಳ್ಳಿ, ಜುಲುಮೆಯ ಮತಾಂತರ, ವ್ಯಭಿಚಾರ ಮತ್ತು ಮದುವೆಗಳ ಕುರಿತು ಪತ್ರಿಕೆಗಳಲ್ಲಿ ಬಂದಿದ್ದ ವಾರ್ತೆಗಳು ಸತ್ಯನೆಂಬುದು ಅಲ್ಲಿಂದೋಡಿ ಬಂದವರು ವರ್ಣಿಸಿದ ಸಂಗತಿಗಳಿಂದ ಸ್ಪಷ್ಟವಾಯಿತು ದಂಗೆಗಾರ ದಳದ ನಾಯಕರಾಗಿ ಮಾಜೀ ಸೋಲ್ಜರರಿದ್ದರಂತೆ. ಅವರು ಸೇನಾ ಪದ್ಧತಿಯಂತೆ ಧಾಳೀ ಹಂಚಿಕೆ ನಡೆಸಿದ್ದರು. ಎಲ್ಲವನ್ನೂ ತಿಳಿದು ಬರಲು ಮುಂಜಾಣೆ ದಳ ಕಳುಹಿ, ಆ ಮೇಲೆ ಧಾಳಿ ನಡಿಸಿ, ಮುಂದೊತ್ತಿ, ಭಾಗ ತಮ್ಮ ಜನರನ್ನು ಸುಲಿಗೆಗೆ ನಿಲ್ಲಿಸಿ ನಡೆದಿದ್ದರು. ವಾರ್ತಾ ಸಂಬಂಧ ಮತ್ತು ಹಾರಿಗಳನ್ನು ಕಡಿದು ಹಾಕುವ ಸೇನಾಕ್ರಮವನ್ನೂ ಅವರಿಗೆ ಗೊತ್ತಿತ್ತು. ಗಲಭೆಯುರಿ ಹತ್ತಿದ ತಾ. 10ರ ಮೊದಲೇ ಮಾಜೀ ಎಂ. ಎಲ್. ಎ. ಒಬ್ಬರು ಮುಸಲ್ಮಾನರನ್ನು ಉದ್ರೇಕಗೊಳಿಸುತ್ತ ಜಾಹೀರು ಸಂಘಟನಾ ಪ್ರಚಾರನಡಿಸುತ್ತಿದ್ದರ; ಸರಕಾರಕ್ಕೆ ಈ ಮನುಷ್ಯನ ಕೃತ್ಯವಲ್ಲಾ ಮುಂದಾಗಿಗೊತ್ತಿತ್ತೆಂದು ನಮಗೆ ನಂಬಿಕೆಯಿದೆ ನಾವಿದನ್ನು ತಿಳಿಸಿದಾಗ 'ಅವನ ಮೇಲೆ ವಾರಂಟು ಹೊರಡಿಸಿದ್ದೇವೆ; ಆದರೆ ಆತ ಸಿಕ್ಕುವದಿಲ್ಲ' ಎಂದು ಅಧಿಕಾರಿಗಳ ಹೇಳಿಕೆ. ಆದರೆ ಆತ ಅನಿರ್ಬಂಧನಾಗಿ ಬೇರಾದತ್ತ ತಿರುಗುತ್ತಾ ಈಗಲೂ ತನ್ನ ಕಾರ್ಯ ಮಾಡುತಿದ್ದಾನೆಂದು ಜನರು ಹೇಳುತ್ತಾರೆ. ಪರಿಸ್ಥಿತಿ ಈಗಲೂ ಸುಧಾರಿಸಿಲ್ಲ; ಅತ್ಯವಶ್ಯಕವಾಗಿ ಬೆಳೆಯುತ್ತಲೇ ಇದೆ. ದಂಗೆ ಪೀಡಿತ ಇಡೀ ಕ್ಷೇತ್ರವೇ ಸರ್ವಜನಿಕರಿಂದಲೂ ಸರಕಾರದಿಂದಲೂ ಪೂರ್ಣಬೇಪರ್ವಾಡಿಸಲ್ಪಟ್ಟಿದೆ. ವ್ಯಾಪಾರವಂಭವಾಗಿ 10 ದಿನ ಕಳೆದರೂ ಅದು ನಿಲ್ಲುವ ಚಿಹ್ನೆ ಕಾಣುವದಿಲ್ಲ. ನಾವು ಮುಂಜಾನೆಯಲ್ಲಿ ಹಲವು ಗ್ರಾಮಗಳು ಉರಿಯುತ್ತಲೇ ಇರುವುದನ್ನು ಕಂಡೆವು. ದಂಗೇ ಬೆಂಕಿ ನೆರೆಕರೆಯ ಪ್ರದೇಶಗಳಿಗೆ ಹಬ್ಬಬಹುದೆಂಬ ಭೀತಿ ನನಗಿದೆ. ಸರಕಾರವೇನೇ ಮಾಡಲಿ, ಜನರು ತಾವಾಗಿ ಸಂಘಟಿಸಿಕೊಂಡು ಈ ಆಕ್ರಮಣಗಳನ್ನು ಪ್ರತಿಭಟಿಸಬೇಕಾದುದು. ಆಗತ್ಯ ಈ ಭೀಕರ ವಿದ್ಯಮಾನದಲ್ಲೂ ಶಾಂತರಾಗಿರಿ ಎಂದು ಜನರಿಗೆ ಉಪದೇಶಿಸುವದು ನಿರರ್ಥಕ. ಆದರೂ ಸದ್ಯಕ್ಕೆ ನನ್ನ ಬೋಧೆ ಅವೇ ಜನರು ಸಂಘಟಿತರಾಗಿ ಇವಿರಿಸಬೇಕು. ಏನೇ ಬಂದರೂ ವಹಿಳೆಯರ ಮಾನರಕ್ಷಿಸುವದು ತನ್ನ ಪವಿತ್ರ ಕರ್ತವ್ಯವೆಂದು ತಿಳಿದಿರಬೇಕು"—ಎಂದು ಕೃಪಲಾನಿ ಆಗ್ರಹದಿಂದ ಕೇಳಿಕೊಂಡಿದ್ದಾರೆ. ಅಲ್ಲಿಯ ಗಲಭೆಗಾರರು ಅಕ್ಕಪಕ್ಕದ ಕ್ಷೇತ್ರಗಳಿಗೆ ನುಗ್ಗ ಹತ್ತಿದ್ದಾರೆಂದು ಕೂಡ ನೆಯ ವಾರ್ತೆಗಳು ಬರುತ್ತಿವೆ ಇಸ್ಲಾಂ ತತ್ವವಿರುದ್ಧವಾದ ಈ ಪಾಶವಿಕ ಅತ್ಯಾಚಾರವನ್ನು ಖಂಡಿಸಿ "ಹಿಂದೂ ಸಹೋದರರ ರಕ್ಷಣೆಗಾಗಿ ಪ್ರಾರ್ಥನವನ್ನು ನೀಡಲಿಂ" ಎಂದು ಮೌಲಾನಾ ಅಜಾದರು ಮುಸ್ಲಿಮರನ್ನು ವಿನಂತಿಸಿಕೊಂಡಿದ್ದಾರೆ.

ನೆಹರೂ ವೀರಯಾತ್ರೆ

ಪಂಡಿತ ಜವಾಹರಲಾಲರು ಇದೇ ತಾ 16ರಲ್ಲಿ ಪೇಶಾವರಕ್ಕೆ ಮುಟ್ಟಿ ಅಲ್ಲಿಂದ ಖಾನ್ ಅಬ್ದುಲ್ ಗಫರ್‌ಖಾನ್, ಖಾನ್ ಸಾಹೇಬ್ ಮತ್ತಿತರರೊಂದಿಗೆ ವಜೀರಿಸ್ತಾನ, ಖೈಬರ್ ಕಣಿವೆ ಮತ್ತು ಗಡಿನಾಡಿನ ಇತರ ಅಪಾಯಕರ ಸ್ಥಳಗಳನ್ನೆಲ್ಲಾ ಸಂಚರಿಸಿ ಇದೇ ತಾ. 21ರಲ್ಲಿ ಕೇಗೂ ಥಿಲ್ಲಿಗೆ ಬಂದು ಮುಟ್ಟಿರುವುದನ್ನು ಒಂದು ದೊಡ್ಡ ವಿಜಯ ಯಾತ್ರೆಯೆನ್ನಬಹುದು.

ಪೇಶಾವರದ ವಿಮಾನ ನಿಲ್ದಾಣವಲ್ಲೇ ಐದಾರು ಸಾವಿರ ಮಂದಿ ಲೀಗ್ ಅನುಯಾಯಿ ಶಸ್ತ್ರಧಾರಿ ಸಿಂಹಗಳ ಭೀಕರ ನಿಷೇಧ ಪ್ರದರ್ಶನ—ಖಾನ್ ಸಾಹೇಬರ ಮುಖಕ್ಕೆ ಛಾಯೆ—ಖಾನ್ ಸಾಹೇಬರ ಮನೆಗೂ ಮತ್ತೆ ನೆಹರುಗಳಿದಿರು ಬಂಡಾಯ ಅಲ್ಲಿಂದ ವಿಮಾನ ಹತ್ತಿ ವಜೀರಿಸ್ತಾನಕ್ಕೆ ಹೋದಾಗ ವಿಮಾನಗಳ ಮೇಲೆ ಕೆಳಗಿನಿಂದ ಗುಂಡೆತ್ತೆ-ರಜ್ಜಾಕ್, ಮಿಂಚಾನ್ ಬಾಂಬೆಯಲಾದ ವಜೀರಿ ಸ್ತಾನ ಮೊರುಗಳಲ್ಲಿ ಸೇರಿದ ಜಗ್ಗಾಗಳಲ್ಲಿ ನೆಹರು ಗಳಿಗೆ ನಿಷೇಧ ಪ್ರದರ್ಶನ— ಪಕ್ಕದ ಕಾಡುಗುಡ್ಡಗಳಿಂದ ಗುಂಡೆತೆ- ಅಲ್ಲಿಂದ ಬರುವಾಗ ಕೈಬರ್ ಕಣಿವೆಯಲ್ಲಿ ನೆಹರೂ ಪಂಗಡಿಗರ ಕಾರನ್ನಡ್ಡಗಟ್ಟಿ ನಿಲ್ಲಿಸಿ ಕಲ್ಲಿನ ಸುರಿಮಳೆಯಾಗಿ ಗುಂಡುಹಾರಿಸಿ ಮುಂದೋಟ- ಪೇಶಾವರಕ್ಕೆ ಬಂದಲ್ಲಿ ತ್ರಿ ಖಾನ್ ಸಾಹೇಬರ ಮನೆಯಲ್ಲೂ ಎರಡು ಸ್ಫೋಟ- ಹೀಗೆ ಈ ಬಾರಿಯ ನೆಹರು ಮತ್ತು ಖಾನ್ ಸಹೋದರರ ಗಡಿನಾಡ ಪ್ರವಾಸವು ಹುಲಿ ಬಿರತೆಗಳಿದ್ದ ಪಟ್ಟಾರಣ್ಯದಲ್ಲಿ ನುಗ್ಗಿ ಸುರಕ್ಷಿತವಾಗಿ ಮರಳಿದ ವಿಜಯವೆನ್ನಬಹುದು. ಆ ಭಾಗದವರೆಲ್ಲ ಶುದ್ಧ ಕಾಡು ಮನುಷ್ಯರು. ಸಾಲದುದಕ್ಕೆ ಲೀಗ್ ಪ್ರಚಾರಿಂದ ಜಮಲಿಗೆ ಬಲಿಬಿದ್ದವರು. ಡಾ. ಖಾನ್ ಮತ್ತು ಅಬ್ದುಲ್‌ಗಫರ್‌ಖಾನರಿಬ್ಬರ ಮುಖಕ್ಕೂ ಛಾಯೆಗಳನಿಗೆ. ಅವರೊಂದಿಗಿನ್ನ ಪತ್ರಿಕಾ ಸ್ಫುತಿನಿಧಿಗಳೂ ಜಖಂಗೊಂಡಿದ್ದಾರೆ ನೆಹರುಗಳಿಗೂ ತುಸು ನೆಟ್ಟಾಗಿದೆ. ಪೇಶಾವರ್ದಲ್ಲಿ ಕಲವೆಡೆ ಸೌಂದವ ಸ್ವಾಗತಗಳೂ ದೊರೆತಿದ್ದುವು. ಹಿಂದೀ ಸರಕಾರದ ರಾಜಕೀಯ ಖಾತೆಯ ಒಳಸಂಚಿನಿಂದ ಲೀಗ್ ಪುಂಡರು ಇಷ್ಟು ಗೊಂದಲವೆಬ್ಬಿಸಿದರೆಂದು ತಿಳಿದು ಬರುತ್ತದೆ.

ಮಹಾತ್ಮಾ ಗಾಂಧಿಯವರು ಇದೇ ತಾ. 23ಕ್ಕೋ 24ಕ್ಕೋ ಬಂಗಾಳಕ್ಕೆ ನವಾಖಾಲಿಗೆ ಭೇಟಿ ಕೊಡುವರೆಂದು ನಿಶ್ಚಯವಾಗಿದೆ.

Notice

In the Court of the District Munsiff of Cannanore

Small Cause No. 117 of 1946.

S. R. Pandya, K. V. Baliga Company, Cannanore — Plaintiff.

S. Mohammad Meeran Sahib, Proprietor of S. Haji Sahib, S. Mohammad Meeran Sahib and Co., Siddapur — Defendent.

Substituted service has been ordered against the above defendent and the above suit stands adjourned to 7-11-1946 for hearing.

K. Bharatan, B.A.,B.L.
Vakil for Plaintiff

Cannanore, 16-10-'46

ದಿ ನ್ಯೂ ಗ್ರೇಟ್ ಇನ್ಶೂರೆನ್ಸ್

ಕೊ. ಒಫ್ ಇಂಡಿಯಾ ಲಿಮಿಟೆಡ್.

(ಇನ್‌ಕೊರ್ಪರೇಟೆಡ್ ಇನ್ ಬಿಟೀಷ್ ಇಂಡಿಯಾ ಬೆರ್ಮುಡರ ಮಿತ ಜವಾಬ್ದಾರಿಯ ಖಾಸಗಿ ಕಂಪನಿ.)

ಅಧಿಕೃತ ಭಂಡವಳ	ರೂ 2,50,00,000
ತೆತ್ತ ಮತ್ತು ಚಂದಾ ಕೊಡುವ ಭಂಡವಳ	ರೂ. 1,25,00,000
ವಸೂಲಾದ ಭಂಡವಳ	ರೂ. 32,50,000

ಡೈರೆಕ್ಟರ ಮಂಡಳಿಯ ಸದಸ್ಯರು

1. ತುಳಸಿದಾಸ್ ಕಿಲಾಚಂದ್, ಎಸ್ಕ್ವಾಯರ್. (ಚೆಯರ್‌ಮೆನ್)
2. ವಾಲ್‌ಚಂದ್ ಹಿರಾಚಂದ್, ಎಸ್ಕ್ವಾಯರ್.
3. ಧರ್ಮಸೇವಕ್ ಮಲ್ಹಾರಾವ್ ರಾಟೆನ್, ಎಸ್ಕ್ವಾಯರ್.
4. ಜಹಾಂಗೀರ್ ಪೆಸ್ಟೋಂಜಿ ಪಟೇಲ್, ಎಸ್ಕ್ವಾಯರ್, ಬಿ ಎ. (ಕ್ಯಾಂಟಬ್)
5. ರಾಜಸ್ವಯ ಸುಬಧಾಯಿ ವಸಂಜಿ ವೇಸಾವಿ
6. ಅಂಬಾಲಾಲ್ ಕಲಾಚಂದ್, ಎಸ್ಕ್ವಾಯರ್.

ಜನರಲ್ ಮೆನೇಜರ್.—ಎಂ. ಜಿ ನೋಡಿ, ಎಸ್ಕ್ವಾಯರ್.

ರಿಜಿಸ್ಟರ್ಡ್ ಆಫೀಸು:—ಬೇಂಕ್ ಬಿಲ್ಡಿಂಗ್, ಮಾಂಡವಿ, ಬರೋಡಾ.

ಬ್ರಿಟಿಷ್ ಇಂಡಿಯದ ಕೇಂದ್ರ ಕಾರ್ಯಾಲಯ:

45/47 ಅಪೊಲೋ ಸ್ಟ್ರೀಟ್, ಫೋರ್ಟ್, ಬೊಂಬಾಯಿ.

ಮದ್ರಾಸು ಸಂಸ್ಥಾನದ ಎಲ್ಲೆಡೆಗಳಲ್ಲೂ ಅನುಭವೀ ನಂಬಿತ ಏಜಂಟರು ಬೇಕಾಗಿದ್ದಾರೆ. ಉಮೇದ್ವಾರರು ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು.

ಮದ್ರಾಸ್ ಆಫೀಳು, 121-A ಅಮೀರ್ ಮಹಲ್ ಸ್ಟ್ರೀಟ್.

ಜೀವವಿಮಾ, ಬೆಂಕಿ, ಹಡಗು ಗಂಡಾಂತರಗಳ ಇನ್ಶೂರ್ ಸಹ ಸ್ವೀಕರಿಸಲಾಗುವುದು

The New Great Insurance Co. of India Ltd.

ಮಂಗಳೂರು

ಜಿಲ್ಲೆಯ ಆಹಾರ ಪರಿಸ್ಥಿತಿ-ಕಳೆದ ತಾ. 12ರಂದು ನಮ್ಮ ಜಿಲ್ಲಾ ಸಪ್ಲೈ ಆಫೀಸರರು ಸ್ಥಳೀಯ ಪತ್ರಿಕೋದ್ಯೋಗಿಗಳನ್ನು ಆಮಂತ್ರಿಸಿ, ಜಿಲ್ಲೆಯ ಆಹಾರ ಪರಿಸ್ಥಿತಿಯನ್ನು ವಿವರಿಸಿದರು. ತಾ. 5-10-46ರಂದು ಇದ್ದಂತೆ ಜಿಲ್ಲೆಯ ಆಹಾರ ಸಂಗ್ರಹವು ಈ ರೀತಿಯಾಗಿದೆ:-ಅಕ್ಕಿ 3941 ಟನ್ (ಒಂದು ಟನ್ = 26 ಮುಡಿ); ಗೋಧಿ 1436 ಟನ್; ಮೈದಾಹಿಟ್ಟು 239 ಟನ್; ಮೆಕ್ಕೆಜೋಳ 759 ಟನ್; ರಾಗಿ 143 ಟನ್. ಇನ್ನು ಈ ತಿಂಗಳ ಅಂತ್ಯದೊಳಗಾಗಿ 1146 ಟನ್ ಪಂಜಾಬ್ ಅಕ್ಕಿಯೂ, 1000 ಟನ್ ಬ್ರೇಜಿಲ್ ಅಕ್ಕಿಯೂ ಬರಲಿದೆ.

ಮೇಲಿನ ಲೆಕ್ಕದಲ್ಲಿ ತೋರುವಂತೆ, 795 ಟನ್ (ಸುಮಾರು 19750 ಮುಡಿ) ಜೋಳ ವೀಗ ನಮ್ಮ ಜಿಲ್ಲೆಯಲ್ಲಿದೆ. ನಮ್ಮ ಆಹಾರ ಪರಿಸ್ಥಿತಿಯು ಚಿಂತಾಜನಕವಾಗಿಬ್ಬಾಗ ಹೊರಗಿನಿಂದ ಬಂದ ಆಹಾರ ಪದಾರ್ಥವಿದು. ಇದರ ಉಪಯೋಗವು ನಮಗೆ ವಿನೂತನವಾಗಿರಬಹುದು. ಆದರೂ ಇದನ್ನು ಉಪೇಕ್ಷಿಸದೆ, ಉಪಯೋಗಿಸಲು ಯತ್ನಿಸಬೇಕು. ಸದ್ಯದಲ್ಲೇ ಸುಮಾರು 500 ಗೋಣಿ ಜೋಳವನ್ನು ಹಿಟ್ಟುಮಾಡಿ ಜನರಿಗೊದಗಿಸಲು ಸರಕಾರವು ಯೋಚಿಸಿದೆ.

ಜಿಲ್ಲಾ ಬೋರ್ಡಿನ ಸಭೆಯು ತಾ.14 ರಂದು ಸೇರಿದಾಗ, ಅಧ್ಯಕ್ಷ ಶ್ರೀ. ಆರೂರರು ಮಾತನಾಡುತ್ತ 'ಇದುವೆ ನನ್ನು ಕೊನೆಯ ಸಭೆಯಾಗಬಹುದು, ಮುಂದೆ ಬೋರ್ಡಿಗೆ ಹೊಸ ಚುನಾವಣೆ ನಡೆಯಲಿದೆ. ನಾನು ಅಧಿಕಾರದಲ್ಲಿದ್ದಾಗ ಸದಸ್ಯರೆಲ್ಲರೂ ನನಗೆ ಪೂರ್ತುಪೂರ್ವಕ ಸಹಕಾರ ಕೊಟ್ಟುದಕ್ಕೆ ವಂದಿಸುವೆನು' ಎಂದರು. ಡಾ. ಪಿ. ಜೆ. ಆಚಾರ್, ಶ್ರೀಗಳಾದ ಶಿವರಾಮಯ್ಯ, ಕೆಟ್ಟ ಮತ್ತು ಪುರುಷೋತ್ತಮ ಪೈ ಅವರು ಮಾತನಾಡುತ್ತ ಶ್ರೀ. ಆರೂರರ ಅಡಳಿತೆ ಕುರಿತು ಪ್ರಶಂಸಿಸಿದರು. ಶ್ರೀ. ಕೃಷ್ಣ ಶೆಟ್ಟರು ಮಾತನಾಡುತ್ತ 'ಶ್ರೀ. ಆರೂರರ ಅಡಳಿತೆಯನ್ನು ಇತರರಂತೆ ನಾನೇನೂ ಹೊಗಳಲಾರೆ' ಎಂದರು.

ಆ ಬಳಿಕ ಸಭಾಕಾರ್ಯವು ಆರಂಭವಾಯಿತು. ಬೋರ್ಡಿನ ಅಡಳಿತೆಯ ಕುರಿತು ಕೆಲವರು ಬರೆದ ಸದಭಿಪ್ರಾಯಗಳನ್ನು ರಿಕಾರ್ಡು ಮಾಡಲಾಯಿತು. ಜಿಲ್ಲಾ ಬೋರ್ಡಿನ ನೌಕರರ ರೆಲ್ಲರಿಗೂ ಇತ್ತೀಚೆಗೆ ಸರಕಾರವು ಪ್ರಕಟಿಸಿದ ಸ್ಕೇಲಿನಂತೆ ತುಟ್ಟಿಭತ್ತೆ ಕೊಡಲು ನಿರ್ಧರಿಸಿತು. ಈ ಬಗ್ಗೆ ಬೇಕಾಗುವ ಸುಮಾರು ರೂ.15 ಸಾವಿರವನ್ನು ಸದ್ಯ ಪ್ರಾರಂಭಿಕ ಉಳಿಕೆಯಿಂದ ತೆಗೆದುಕೊಂಡು ಮುತ್ತ ಆ ಹಣವನ್ನು ಸರಕಾರದಿಂದ ಕೇಳಬೇಕೆಂದೂ ತೀರ್ಮಾನಿಸಿತು. ಬೋರ್ಡಿನ ನೌಕರರಿಗೆ ಕೊಟ್ಟಂತೆ ಬೋರ್ಡ್ ಎಲಿಮೆಂಟರಿ ಶಾಲಾ ಉಪಾಧ್ಯಾಯರುಗಳಿಗೂ ತುಟ್ಟಿಭತ್ತೆ ಕೊಡುವುದು ಆಗಕ್ಕೆಂದೂ ತೀರ್ಮಾನಿಸಲಾಯಿತು.

ಜಿಲ್ಲಾ ಭೂಮಾಲಿಕರ-ಸಂಘದ ಸಭೆಯೊಂದು ಕಳೆದ ತಾ. 13ರಂದು ಸೇರಿ ಸಂಘದ ಮುಂದಿನ ವರ್ಷದ ಕಾರ್ಯಕಾರಿ ಸಮಿತಿಯನ್ನು ಅರಿಸಿತು. ಅದೇ ದಿನ ಸಂಜೆ ಶ್ರೀ. ಡಿ. ಮಂಜಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜಿಲ್ಲಾ ವರ್ಗದಾರರ ಸಭೆ ಸೇರಿ ಈ ಕೆಳಗಿನ ಕೆಲವು ನಿರ್ಣಯಗಳನ್ನು ಕೈಕೊಳ್ಳಲಾಯಿತು. ಒಕ್ಕಲು ಹಾಗೂ ಭೂಮಾಲಕರಿಗೆ ಸಂಬಂಧಿಸಿದ ಮಸೂದೆಯೊಂದನ್ನು ತರಲು ಮದ್ರಾಸ್ ಸರಕಾರವು ಯೋಚಿಸುತ್ತಿದೆಯಷ್ಟೆ. ಈ ಮಸೂದೆಯನ್ನು ತರುವ ಮೊದಲು ಎಲ್ಲ ವರ್ಗದವರ ಮನವಿಗಳನ್ನೂ ಕೇಳಿಕೊಳ್ಳಬೇಕೆ ಅವಸರ ಮಾಡಬಾರದು. ಆಸ್ತಿ ಹಿಡಿವಳಿ ಸುಧಾರಣಾ ವಿಚಾರದಲ್ಲಿ ಸರಕಾರದವರ ಅಭಿಪ್ರಾಯ ಸಂಗ್ರಹಣಕ್ಕಾಗಿ ಈಗ ಹೊರಡಿಸಿರುವ ಪ್ರಶ್ನಾವಳಿಯು ದೋಷಯುಕ್ತವಾಗಿದೆ. ಮತ್ತು ಏಕಪಕ್ಷ ಪ್ರತಿನಿಧಿತವಾಗಿವೆ ಮದ್ರಾಸ್ ಸರಕಾರದ ಬಟ್ಟೆಯಮಿಲ್ಲುಗಳ ಕುರಿತಾದ ಧೋರಣೆಯು ಅಪಾಯಕಾರಿಯಾಗಿದೆ. ರಿಕ್ವಿಸಿಶನ್ ಸಂಬಂಧವಾದ ತಕ್ಷೀದುಗಳಲ್ಲಿ ವಸೂಲಾದ ಸುಮಾರು ರೂ. 67,600ನ್ನು ಸಹಕಾರಿ ಸಂಘಗಳಿಗೆ ಕೊಟ್ಟುದನ್ನು ನಿಷೇಧಿಸುತ್ತದೆ. ಈ ಹಣವನ್ನು ಹಳ್ಳಿಗಳ ಕೃಷಿಯ ಉದ್ಧಾರಕ್ಕಾಗಿ ಉಪಯೋಗಿಸಬೇಕೆತ್ತು.

ವಿದ್ಯಾಮಂತ್ರಿಗಳಿಗೆ ಶಿಷ್ಟಮಂಡಲ-ದ. ಕ. ಜಿಲ್ಲಾ ಪಂಡಿತ ಸಂಘದ ಮಹಾಸಭೆಯು ತಾ. 20ರಲ್ಲು ಶ್ರೀ. ಸೇಡಿಯಾಪು ಕೃಷ್ಣ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ನವಂಬರ ತಿಂಗಳಲ್ಲಿ ವಿದ್ಯಾಮಂತ್ರಿಗಳು ಬಂದಾಗ, ಪೌರಸ್ತ್ಯ ಭಾಷೆಗಳನ್ನು ಕಲಿಸುವ ಪಂಡಿತರ ಸುಬದುಃಖಗಳು, ಶಿಕ್ಷಣದಲ್ಲಿ ದೇಶಭಾಷೆಗಳ ಸ್ಥಾನಮಾನಗಳು, ಪೌರಸ್ತ್ಯ ಭಾಷೆಗಳ ಅಭಿವೃದ್ಧಿಗಳ ಕುರಿತು ಮನವಿಯೊಂದನ್ನು ಒಪ್ಪಿಸಲು ಶಿಷ್ಟಮಂಡಲವೆ ರಚನೆಯಾಯಿತು.

ಕ್ಯಾಪ್ಟನ್ ಲಕ್ಷ್ಮಿಯವರು ತಾ. 21 ರಲ್ಲು ಸಂಜೆಯ ರೈಲ್ವೆ ಬಂಡಿಯಲ್ಲಿ ಮಂಗಳೂರಿಗೆ ಬಂದಿಳಿದಾಗ ರೈಲ್ವೆ ನಿಲ್ದಾಣದಲ್ಲಿ ಅವರಿಗೆ ಅಭೂತಪೂರ್ವ ಸ್ವಾಗತವೀಯಲಾಯಿತು. ಮೆರವಣಿಗೆಯಿಂದ ಶ್ರೀಮತಿಯವರು ಮೈದಾನಿಗೆ ಬಂದು ಭಾಷಣವಿತ್ತರು.

ಪುತ್ತೂರು

ಜಿಲ್ಲರೆ ಕಳವುಗಳು-ಆಲ್ಲಲ್ಲಿ ಬಾಳೆಗೊನೆ, ತೆಂಗಿನಕಾಯಿ, ಚಿಲ್ಲರೆ ಹಣ ಇವುಗಳ ಕಳವು ನಡೆಯುತ್ತಿದೆ ಎಂದೂ, ಈ ಬಗ್ಗೆ ಪೋಲೀಸರು ಉಸ್ತುವಾರಿ ನಡೆಸಿ ಹಲವರನ್ನು ಹಿಡಿದು ತಕ್ಕ ಶಿಕ್ಷೆ ಕೊಡಿಸುತ್ತಿರುವರಾಗಿಯೂ ತಿಳಿದುಬರುತ್ತದೆ.

ವರ್ಗಾವರ್ಗಿ-ಇಲ್ಲಿ ಡಿ. ಮು. ರಾಗಿದ್ದ ಮಿ. ನಾಜ್ಜೆರೆತ್ ಇವರು ಸರ್ಜ್ ಜಡ್ಜರಾಗಿ ಕಲ್ಲಿಕೋಟೆಗೂ, ಕಾಸರಗೋಡಿನಲ್ಲಿ ಎಡಿಶನಲ್ ಡಿ. ಮು. ರಾಗಿದ್ದ ಮಿ. ಕೊಲೋಸೋ ಅವರು ಇಲ್ಲಿಯ ಡಿ. ಮುನ್ಸೀಫರಾಗಿಯೂ ವರ್ಗಾಯಿಸಲ್ಪಟ್ಟಿರುತ್ತಾರೆ.

ರೇಡಿಯೋ-ಸ್ಥಳೀಯ ಪಂಚಾಯತೋ ದಿಗೆ ರೇಡಿಯೋ ಬಂದು ಬಂದಿದ್ದು ಕಳೆದ ತಾ. 7ಂದ ಸಾಯಿ 6 ಗಂಟೆಯಿಂದ ರಾತ್ರಿ 8 ಗಂಟೆ ವರೆಗೆ ಸಾರ್ವಜನಿಕರ ಉಪಯೋಗಕ್ಕೆ ಬಿಡಲಾಗುತ್ತಿದೆ.

ಶ್ರೀ. ಎ. ಬಿ. ಶೆಟ್ಟಿ, ಎಂ. ಎಲ್. ಎ.-ಶ್ರೀಯುತರು, ಡಾ. ಆಪಟ, ರಾವ್ ಬಹದೂರ್ ಕೆ ಟಿ ಆಳ್ವ, ಶ್ರೀ. ಪಿ ರಂಗನಾಥ ಪೂಜ ಇವರೊಡಗೊಂಡು ಇಲ್ಲಿಗೆ ತಾ. 19 ರಲ್ಲಿ ಬಂದಿದ್ದು ಮಂಗಳೂರಿನ ಬಂಟ ಸಮಾಜದ ಮಹಿಳಾ ವಿದ್ಯಾರ್ಥಿ ಭವನದ ಸಹಾಯಾರ್ಥವಾಗಿ ಹಣ ಸಂಗ್ರಹಿಸಿ ಹಿಂತೆರಳಿದರು.

ಸಾಲಿಗ್ರಾಮ-ತಾ. 14-10-46ರಲ್ಲಿ ಶ್ರೀ ವಾಣೀ ವಿಲಾಸಿನೀ ಸಂಸ್ಕೃತ ಪಾಠಶಾಲೆಯ ಹಳೆ ವಿದ್ಯಾರ್ಥಿಗಳ ಸಭೆಯು ಶ್ರೀ. ಕೆ. ಶ್ರೀನಿವಾಸ ಉಪಾಧ್ಯಾಯರ ಅಧ್ಯಕ್ಷತೆಯಲ್ಲಿ ಸೇರಿತು. ಹಳೆ ವಿದ್ಯಾರ್ಥಿಗಳಲ್ಲಿನ ಪರಸ್ಪರ ಸಾಮರ್ಥ್ಯಭಾವವು ಅಭಿವೃದ್ಧಿಗೊಳ್ಳುವ ಸಲುವಾಗಿ ಮತ್ತು ಮಾಲಿನ್ಯ ಹೊಂದಿದ ಸಂಸ್ಕೃತ ಭಾಷೆಯ ಪ್ರಾಜುರ್ಯಕ್ಕಾಗಿ ಹಲವರ ಅಪೇಕ್ಷೆಯಂತೆ 'ಪ್ರಾಕ್ತನ ವಿದ್ಯಾರ್ಥಿ ಸಂಘ'ವನ್ನು ಸ್ಥಾಪಿಸಲಾಯಿತು.

ತಾ. 17-10-46ರಲ್ಲಿ ಹಂದಟ್ಟು ಪಟೇಲ್ ರಾಮದೇವರು ಹಂದೇರ ಅಧ್ಯಕ್ಷತೆಯಲ್ಲಿ ಡಾ. ಯು. ಎನ್. ಕಲ್ಕೂರರವರ ಡಿಸ್ಪೆನ್ಸರಿಯು ತೆರೆಯಲ್ಪಟ್ಟಿತು. ನೆರೆದ ಸಭಿಕರಲ್ಲಿ ಕೆಲವರು ಔಷಧಾಲಯದ ಶ್ರೇಯೋಭಿವೃದ್ಧಿಯನ್ನು ಕೋರಿ ಮಾತನಾಡಿದರು ಅಧ್ಯಕ್ಷರ ಭಾಷಣಾನಂತರ ಲಘೂಪಹಾರದೊಂದಿಗೆ ಸಭೆಯು ಮುಕ್ತಾಯವಾಯಿತು.

ಶಂಕ್ರನಾರಾಯಣ-ತಾ. 20-10-46 ರಲ್ಲಿ ದಿವಂಗತ ಹಲ್ಲನಾಡು ಸೂರಪ್ಪಯ್ಯನವರ ಸ್ಮಾರಕ ಮಂದಿರದಲ್ಲಿ ಶ್ರೀಯುತ ಬೈಲೂರು ರಾಮರಾಯರು ತಯಾರಿಸಿ ಕೊಟ್ಟ ಕೀರ್ತಿಶೇಷರ ಭಾವಚಿತ್ರವನ್ನು ಶ್ರೀ ಲಕ್ಷ್ಮೀನಾರಾಯಣ ಕಾರಂತರ ಅಧ್ಯಕ್ಷತೆಯಲ್ಲಿ ಅವರ ದಿವ್ಯ ಹಸ್ತದಿಂದ ಅನಾವರಣಗೊಳಿಸಲಾಯಿತು.

ತಾ. 20-10-46ರಲ್ಲಿ ಪ್ರಸಿದ್ಧ ಆರ್ಥಧಾರಿಗಳ ಕೂಡುವಿಕೆಯಿಂದ ಯಕ್ಷಗಾನ ಕೂಟ ಪೊಂಪು ಜರಗಿತು.

ಕಟಪಾಡಿ— ಬ್ರಹ್ಮಶ್ರೀ ನಾರಾಯಣ ಗುರು ಸ್ವಾಮಿ ಸೇವಾಸಮಿತಿ, ಕಟಪಾಡಿ. ಪ. ಕ. Regd, ಇದರ ದೇವತಾನುಂದಿರದಲ್ಲಿ ವಾರ್ಷಿಕೋತ್ಸವವು 30-10-46ನೇ ಬುಧವಾರ ಆರಂಭಿಸಲ್ಪಟ್ಟು ತಾ 5 11 46ನೇ ಮಂಗಳವಾರ ಮಧ್ಯಾಹ್ನ 12ಗಂಟೆಯಂದೆ ಮರುದಿನ ಪೂರ್ವಾಹ್ನ 9 ಗಂಟೆಯ ವರೆಗೆ ಜರಗಿರಿರುವ ಸಪ್ತಜಾಪುರ ಶ್ರೀ. ಜೋಷಿ ಸಪ್ತಾಪ ಮಹೋತ್ಸವದೊಂದಿಗೆ ಸುಂಗಲವಾಗುವದು.

ಲೇಖಕರಲ್ಲಿ ವಿನ್ನಹ

'ನವಯುಗ'ದಲ್ಲಿ ಪ್ರಕಟಿಸುವುದಕ್ಕೋಸ್ಕರ ಕಳುಹಿಸತಕ್ಕ ಲೇಖನಗಳನ್ನು ಕಾಗದದ ಒಂದೇ ಪುಗ್ಗು ಲಲ್ಲಿ ಅಂದವಾಗಿ ಬರೆಯಬೇಕು. ಅಪ್ರಕಟಿತ ಲೇಖನಗಳನ್ನು ತಿರುಗಿ ಕಳುಹಿಸಲು ನಾವು ಒದ್ದರಲ್ಲವಾದ್ದರಿಂದ ಲೇಖನಗಳನ್ನು ಕಳುಹಿಸುವಾಗ ಆವರ ದ್ವಿಪ್ರತಿಯನ್ನು ತಮ್ಮಲ್ಲಿ ಇಟ್ಟುಕೊಳ್ಳುವುದು ಲೇಸು. ಲೇಖಕರು ಈ ಕುರಿತು ಗಮನಿಸಬೇಕಾಗಿ ವಿನ್ನಹ.

—ಸಂಪಾದಕರು.

ಬೇಕಾಗಿದ್ದಾರೆ

ಉಡುಪಿ ಸೈಂಟ್ ಮೇರಿ ಗರ್ಲ್ಸ್ ಎಲಿಮೆಂಟರಿ ಶಾಲೆಗೆ ಸೆಕೆಂಡರ್ ಗ್ರೇಡ್ ಟ್ರೈನ್ಡ್ ಉಪಾಧ್ಯಾಯಿನಿಯೊಬ್ಬರು ಬೇಕಾಗಿದ್ದಾರೆ ಮಾಸಿ ' ನ ತಿಂಗಳ ಸಂಬಳವು 35ರಿಂದ ಪ್ರಾರಂಭವಾಗುವುದು. ಹೆಚ್ಚಿನ ಮಾಹಿತಿಗೆ ಕೂಡಲೇ ನೆನ್ನೇಬರರಿಗೆ ಬರೆಯಿರಿ.

Manager
St. Marys' Girls Ele. School,
UDIPI.

ಕುಟುಂಬದೊಳಗಿನ ಚಿಲ್ಲರೆ ಬೇನೆ

ಬೀಮಿಕ್ಕಿಗಳನ್ನು ಹೊಗ್ಗಡಾದಿ ಮಧ್ಯಕ್ಕಾಗಿ ಇತ್ತಾ ಮತ್ತು ವೈದ್ಯರ ಕಡಿಗೆ ಪ್ರತಿ ನಾರಿ ಹೊಗುವುದು ಕ್ಯಾಪರುವಿದಲ್ಲಿ —ಮತ್ತು ಆಪ್ಯಿಂದು ಅವಕ್ಕಳೆಯೂ ಇರುವುದಿಲ್ಲ. ಕೊಲ್ಲೋಸ್ಟ್ರಾಲ್, ಸಾಂಕ್ರಾಮಿಕ, ಕಾಲ್ಪ, ಮೈಗ್ರೇನ್, ಕೆಲವೊಮ್ಮೆ ಸಣ್ಣಕ್ಕೆ ಕಾಲ ಬಂಬಾ ಇಲ್ಲಾ ಅಲ್ಲಾ ಅಂತಿಲ್ಲ ಬಿಟ್ಟರೆ ಬಿಡದೆ ಬೆನ್ನಿಗೆ ಬೀಳುವ ಬೇನೆಗಳು ಜಪೇರಿಯನ್ಸ್ ಜೀವನ ಮಿಕ್ಚ್ಚರ್ ಎನ್ನುವುದು ಸಾಮಾನ್ಯವಾಗಿ ಉಪಯೋಗಿಸುವ ಔಷಧಿಯಾಗಿದೆ. ಕಾಲಾ ಮತ್ತು ಅದಿಂಪಾಗಣಕ್ಕ ಶಾಖಕವಾದ ಕೊಂಬು ದಿವಸಗಳ ಬೆಳೆ ಬಾವೆಯಿಂದ ಒಂದು ಉಪಯೋಗವಾಗುವುದಿಲ್ಲ. ಡಾಕ್ಟರ್ಸ್‌ಗಳಾಗಿ ಜೀವನಾಗಿ ಉಪಯೋಗವಾಗುವುದಿಲ್ಲ ಇದರ ಅಂಶ ಬಾಟ್ಲಿಯನ್ನು ಸುಸಂಪನ್ನಗೊಳಿಸಿ ಪ್ರಯಾಣದಲ್ಲಿ ಹತ್ತಿರ ಇಟ್ಟುಕೊಳ್ಳುವುದು (ಗ್ಯಾಸ್ಕ್ಯ ಮುಜಾಗ್ರತೆಯ ಉಪಾಯವಾಗಿದೆ) ರೂಪಾಗಿ ಲಭ್ಯವಾಗಿದೆ ಕಮಿಸ್ಯೂರ್ಡ್‌ಗಳು (ಇವರ ಸ್ಯಾಂಪಲ್ ಸಾಕ್ಷಿಯು) ಪತ್ರಗಳಲ್ಲಿ ಬಂದಿರುವುದು ದೊರೆಯುತ್ತದೆ.

ಜಪೇರಿಯನ್ಸ್ ಮಿಕ್ಚ್ಚರ್ ಎಸ್ಟ್ಯಕಂ. ಪ್ರಿನ್ಸೆಸ್ ಸ್ಟ್ರೀಟ್, ಮುಂಬಾಯಿ ೨

Notice

In the Court of the District Munsiff of Mangalore.

O. S. No 200/1946

Between

S. Mabomed Bin Mahamood Plaintiff.

and

1. H. Mahabala Shetty,
2. H. Monappa Shetty. Defendents.

To

1st. Defendent H. Mahabala Shetty- son of Manjaya Shetty

2nd Defendent H. Monappa Shetty - son of Veeranna Shetty

Both the Defendents are Timber Merchants residing at Shankernarayana, Coodapoor Taluq.

Please take notice that the above suit is posted to6-11-1946 at 11 A. M. for hearing and you are hereby requested to appear either in person or through a Vakil on that date at 11 A M. before the said Court, failing which the suit will be heard exparte.

M. Madhava Rao,
Vakil for Plaintiff

Mangalore, 19-10-46

The Canara Industrial & Banking Syndicate Limited,

Coondapoor

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್
ಕುಂದಾಪುರ.

ನೋಟೀಸು

ಈ ಕೆಳಗೆ ಕಾಣಿಸಿದ ಅಸಾಮಿಯವರಿಗೆ ಕೊಟ್ಟ ರಿಜಿಸ್ಟ್ರಿ ನೋಟೀಸು ಅವರು ಮೃತರಾಗಿದ್ದಾರೆಂದು ನಾವು ನಮಗೆ ಬಂದಿರುವುದರಿಂದ ಯಾ ಅವರ ವಾರೀಸುದಾರರು ಬಂದು ಬಿಡಿಸಿ ತೆಗೆದುಕೊಂಡುಹೋಗದೆ ಹಾಗೆಯೇ ಇದ್ದುದರಿಂದ ಸದ್ರಿಯವರು ಈ ದಿಟ್ಟ ನಗಗಳನ್ನು ಇದೇ ಬರುವ ತಾ. 9-11-46ನೇ ಶನಿವಾರ ಆಸರಾಪ್ಪ ಘಂಟೆ ಒಂದಕ್ಕೆ ಅಥವಾ ಬ್ಯಾಂಕಿಗೆ ಯುಕ್ತ ತೋರುವ ಇತರ ದಿನಗಳಲ್ಲಿ ಪುನಃ ಅವರ ವಾರೀಸುದಾರರಿಗೆ ನೋಟೀಸು ಕೊಡದೆನೇ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲ್ಪಡುವವು; ತಿಳಿದಿರಲಿ!

ತಾರೀಕು ಮತ್ತು ಲೋನ್ ನಂಬರ್	ಸಾಲ ಪಡೆದವರ ಹೆಸರು ಮತ್ತು ವಿಳಾಸ	ಅಸಲು ರೂಪಾಯಿ
9-8-1945 207 45	ಕೆ. ಕೊರಗ ನಾಯ್ಕ, ಟಪ್ಪಾಲ ಗೋವಿಂದ ನಾಯ್ಕನ ಅಳಿಯ, ವ್ಯಾಪಾರಿ, ಮಾಸ್ತಿಕಟ್ಟೆ, ಕುಂದಾಪುರ.	50/-

ಕುಂದಾಪುರ,
ತಾ. 16-10-46

V C. Haradikar,
Agent at Coondapoor

ದಕ್ಷಿಣ ಕನ್ನಡ

ಇನ್ನಂಜೆ–ತಾ. 13-10-46ರಲ್ಲಿ ಶ್ರೀ ಎ ಡನೀರು ಮಾಧೀಶರಾದ ಶ್ರೀ ಶ್ರೀ ಈಶ್ವರಾನಂದ ಭಾರತಿ ತೀರ್ಥ ಶ್ರೀಪಾದಂಗಳು ಸ್ಥಳೀಯ ಶ್ರೀ ವಿಷ್ಣುಮೂರ್ತಿ ಹಯವದನ ಸ್ವಾಮಿ ಹೈಸ್ಕೂಲನ್ನು ಸಂದರ್ಶಿಸಿ, ಸಂತುಷ್ಟರಾಗಿ ಶಾಲಾ ಸಂಡಿಗೆ ರೂಪಾಯಿ ಒಂದು ಸಾವಿರ ಉದಾರದಾನ ಮಾಡಿದುದು ಮಾತ್ರವಲ್ಲದೆ ಕೆಲವು ಚಟುವಟಿಕೆಗಳಲ್ಲಿಭಾಗವಹಿಸಿ ವಿದ್ಯಾರ್ಥಿಗಳಿಗೆ ಬಹುಮಾನಾರ್ಥವಾಗಿ ರೂ. 25ನ್ನು ಸಹ ಕೊಟ್ಟು ಪ್ರೋತ್ಸಾಹಿಸಿದರು.

ಪಡುತೋನ್ಸೆ, ಕೆಮ್ಮಣ್ಣು–ಕೆಮ್ಮಣ್ಣು ಹಾಯರ್ ಎಲಿಮೆಂಟರಿ ಶಾಲೆಯ ಹಳೆ ವಿದ್ಯಾರ್ಥಿ ಸಂಘದವರು ಹೊಸತಾಗಿ ಕಟ್ಟಿಸಿದ ಕಟ್ಟಡದ ಉದ್ಘಾಟನೆಯನ್ನು ಶ್ರೀ। ಕೆ. ಸಂಜೀವ ಭಟ್, ಎಂ. ಎ. ಎಲ್. ಟಿ., ಇವರು ತಾ. 31-10-46ನೇ ಗುರುವಾರ ಸಾಯಂಕಾಲ ಗಂಟೆ 3ಕ್ಕೆ ಮಾಡುವರು. ಈ ಸಂದರ್ಭದಲ್ಲಿ ಇದೇ ಸಂಘದ ಶ್ರೀ. ಗಣಪಾ ನಾ ಸಾಮ್ಕ ಕೂಟದವರು 'ಜರಾಸಂಧ ಗರ್ವಭಂಗ' ಎಂಬ ನಾಟಕ ಅಭಿನಯಿಸಲಿರುವರು. ಸರ್ವರಿಗೂ ಸುಸ್ವಾಗತವಿದೆ ಎಂದು ಸೆಕ್ರೆಟರಿ ಪಡುಕುದ್ರು ರಾಮರಾಯರು ತಿಳಿಸ್ತಾತ್ತಾರೆ.

ಬೆಳ್ಳೆ–ಮತ್ತು ಕಟ್ಟಿಂಗೆರೆ ಗ್ರಾಮ ಸಮಿತಿಯ ಅಧ್ಯಕ್ಷ ಚುನಾವಣೆಯು ತಾ. 17-10-46ರಲ್ಲಿ ನಡೆಯಿತು. ಉಮೇದ್ವಾರಿಗಳಾದ ಶ್ರೀ. ಕೆ. ಗೋಪಾಲಕೃಷ್ಣ ಬಲ್ಲಾಳರಿಗೂ ಶ್ರೀ. ಬಿ. ಲಕ್ಷ್ಮೀನಾರಾಯಣ ರಾಯರಿಗೂ ಸರಿಸಮ ಮತಗಳು ಬಿದ್ದುವು. ಸೋಡ್ತಿ ತೆಗೆದಾಗ ಶ್ರೀ. ಬಲ್ಲಾಳರೇ ಆರಿಸಿಬಂದರು.

ಬ್ರಹ್ಮಾವರ–ತಾ. 11-10-46ರಲ್ಲಿ ಸ್ಥಳೀಯ ನಾಗರಿಕರು ಸಮೀಪದ ಡಿಸ್ಟಿಕ್ಟ್ ಬೋರ್ಡಿನಿಂದ ನಿವೃತ್ತರಾಗುವ ಶ್ರೀ. ಆರೂರು ಲಕ್ಷ್ಮೀನಾರಾಯಣ ರಾಯರನ್ನು ಟೀ ಪಾರ್ಟಿ ಕೊಟ್ಟು ಸತ್ಕರಿಸಿದರು. ಅದೇ ದಿನ ಸಂಜೆ ಸ್ಥಳೀಯ ಬೋರ್ಡು ಎಲಿಮೆಂಟರಿ ಶಾಲಾ ಹೆಡ್ಡರ ಕೂಟದ ಮಹಾಸಭೆಯು ಶ್ರೀ. ಎ. ಲಕ್ಷ್ಮೀನಾರಾಯಣರಾಯರ ಅಧ್ಯಕ್ಷತೆಯಲ್ಲಿ ನೆರವೇರಿಸಲ್ಪಟ್ಟಿತು

ಹೈವಳಿಕೆ–ತಾ. 15-10-46ರಲ್ಲಿ ಮಂಜೇಶ್ವರ ಪಿಕಪ್ ಸ್ಪೆಶಲ್ ರೆವೆನ್ಯೂ ಇನ್ಸ್‌ಪೆಕ್ಟರರಾದ ಶ್ರೀ। ಕೆ. ಕೃಷ್ಣ ಆಯರ್ ಇವರಿಗೆ ಇಲ್ಲಿಂದ ಕುಂಬಳೆಗೆ ವರ್ಗವಾದ ನಿಮಿತ್ತ ಸದ್ರಿಯವರನ್ನು ಬೀಳ್ಕೊಡುವ ಸಮಾರಂಭವು ಶ್ರೀ. ನುರಿಯ ಶಂಕರ ಭಟ್ಟರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು. ಪ್ರಮೀಳೆ ಶ್ರೀ. ಕೆ. ರಾಮಯ್ಯ ಬಲ್ಲಾಳರ ಮುಂದಾಳತನದಲ್ಲಿ ಏರ್ಪಡಿಸಲಾದ ಈ ಸಮಾರಂಭಕ್ಕೆ ಊರಪೂರ ಜನಪ್ರತಿನಿಧಿಗಳೇ ಬಂದಿದ್ದರು. ವರ್ಗವಾಗಿ ಹೋಗುವ ಶ್ರೀ. ಕೃಷ್ಣ ಅಯರರ ಗುಣಕಥನ, ಭಾಷಣಗಳಾದ ಮೇಲೆ ಅಧ್ಯಕ್ಷರ ಭಾಷಣ, ಧನ್ಯವಾದಗಳಾದವು. ಶ್ರೀ. ಯಂ. ವಿ ನಾರಾಯಣ ನಾಯರರ ಸರ್ಕಸ್ ಫೀಟ್ಸುಗಳ ಪ್ರದರ್ಶನ, ಲಘುಪಾಹಾರ ಇತ್ಯಾದಿಗಳಿಂದ ಸಭಾಂತ್ಯವಾಯಿತು.

ಮುಂಡ್ಕೂರು–ತಾ 19-10-46ರಲ್ಲಿ ಮುಂಡ್ಕೂರು ಬೋರ್ಡು ಹಯರ್ ಎಲಿಮೆಂಟರಿ ಶಾಲೆಯಲ್ಲಿ ಮಂಗಳೂರು ತಾಲೂಕು ಕವಿಗಳ ಮೀಟಿಂಗ್ ಶ್ರೀ. ಯಂ. ಲಕ್ಷ್ಮಣ ಕಾಮತ್‌ರವರ ಅಧ್ಯಕ್ಷತೆಯಲ್ಲಿ ಜರಗಿದ ಸಾಂದರ್ಭಿಕ ಮುಲ್ಲಕ್ಕಡ, ಇನ್ನೆ, ಉಳೆಪಾಡಿ, ಬಳಂಜೆ ಮತ್ತು ಏಳಿಂಜೆ ಗ್ರಾಮಸ್ಥರ ಸಭೆಯಲ್ಲಿ ಶ್ರೀ ಆತ್ತಾವರ ಬಾಲಕೃಷ್ಣ ಶೆಟ್ಟಿ ಯಂ. ಯಲ್. ಎ., ಇವರನ್ನು ಮುಲ್ಕಿ ಸಹಕಾರಿ, ನವ್ಯ ಗ್ರಾಮಸಿಗೆ ಪರವಾಗಿ ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರಿಕೆಗೆ ಉಮೇದ್ವಾರರಾಗಿ ನಿಲ್ಲಬೇಕೆಂದು ಕೇಳಿಕೊಳ್ಳಲಾಗಿದೆ.

ದ. ಕ. ಜಿಲ್ಲಾ ಹೋಲ್‌ಸೇಲ್ ಸ್ಪೋರ್ಟಿನ ಸ್ಪೆಶಲ್ ಸರ್ಕಿಲಾರು–ಭತ್ತ, ಅಕ್ಕಿ ಒಪ್ಪಿಸುವವರು ಗಮನಿಸಬೇಕು–ಆಕ್ಟೋಬರ್ ತಿಂಗಳಾಂತ್ಯದೊಳಗೆ ಹೊಸಕಾಗಲಿ, ಹಳತಾಗಲಿ ಭತ್ತ ಮತ್ತು ಅಕ್ಕಿಯನ್ನು ಸ್ಪೋರ್ಟಿನ ಡಿಪೊಗಳಿಗೆ ಒಪ್ಪಿಸುವವರಿಗೆ ಅಕ್ಕಿಗೆ ರೂಪಾಯಿ 3, ಭತ್ತಕ್ಕೆ ರೂಪಾಯಿ 2ರಂತೆ ಪ್ರತಿ ಮುಡಿಗೂ ಸ್ಪೆಶಲ್ ಬೋನಸ್ಸು ಜಿಲ್ಲಾದಿಕಾರಿ ಯಾದಾಸ್ತು ತೋರಿಸಿವಾಗ ಫಿರ್ಕಾ ಸಪ್ಲೈ ಆಫೀಸರರಿಂದ ಕೊಡಲಾಗುವುದೆಂದು ಸರಕಾರದ ಪ್ರಕಟಣೆಯಿದೆಯಷ್ಟೆ. ಈ ರಿಯಾಯಿತಿಗೋಸ್ಕರ ಪ್ರತಿಯೊಂದು ಡಿಪೊವಿಗೆ ಜಾಸ್ತಿ ಭತ್ತ, ಅಕ್ಕಿ ಬರಲಿರುವುದು ಸ್ವಾಭಾವಿಕವಿದೆ. ಪ್ರತಿಯೊಂದು ಡಿಪೊವಿಗೆ ಸಂಬಂಧಪಟ್ಟ ಗ್ರಾಮಗಳಲ್ಲಿಯ ಜಿಲಿವರಿಗಳನ್ನು ಪಡೆಯಲು ಬಂದೊಂದು ಗ್ರಾಮಕ್ಕೆ ಒಂದೊಂದು ದಿನ ಡಿಪೋ ಏಜಂಟರು ಹೋಗುವ ಕಾರ್ಯಕ್ರಮವಿದ್ದರೂ ಈ ತಿಂಗಳ ಕೊನೆಯ ವಾರದಲ್ಲಿ ಮಾತ್ರ ತಾ. 30 ಮತ್ತು 31ರಲ್ಲಿ ಎಲ್ಲಾ ಡಿಪೊ ಏಜಂಟರು ಡಿಪೋ ಆಫೀಸುಗಳಲ್ಲಿರಬೇಕು. ಈ ವಿಷಯವನ್ನು ಗ್ರಾಮ ಕವಿಟಿಯವರೂ ಪಟೇಲರೂ ತಮ್ಮ ಗ್ರಾಮಸ್ಥರಿಗೆ ತಿಳಿಸಬೇಕಾಗಿದೆ ಕೊನೆಯ ದಿನ ತಮ್ಮ ಗ್ರಾಮಕ್ಕೆ ಬಂದಾಗ ಜೊಲಿರಿ ಕೊಟ್ಟರೆ ಸಾಕೆಂದು ಕಾತುಕೊಳ್ಳುವವರು ನಿರಾಶರಾಗಿ ಬೋನಸ್ಸಿಗಾಗಿ ಡಿಪೊ ಆಫೀಸಿಗೇನೇ ಹೋಗಿ ಜಿಲಿವರಿ ಕೊಡಬೇಕಾಗುವುದು

ಮದರಾಸು ಕರ್ನಾಟಕ ಸೇವಾ ಸಂಘ–ದಲ್ಲಿ ಆಕ್ಟೋಬರ್ ತಿಂಗಳಾಂತ್ಯದಲ್ಲಿ ತಾ 12-10-46ರಲ್ಲಿ "ರಾನಾಡೆ ಹಾಲಿ" ನಲ್ಲಿ ಶ್ರೀ. ಮುಳಿಯ ತಿಮ್ಮಪ್ಪಯ್ಯನವರು ಪಾರ್ಟಿ ಸುಬ್ಬಕವಿಯ ವಿಷಯವಾಗಿ ಭಾಷಣಮಾಡಿದರು. ಶ್ರೀ. ಯು ಸೀತಾರಾಮಾಚಾರ್ಯರು ಅಧ್ಯಕ್ಷರಾಗಿದ್ದರು. ಶ್ರೀ. ಬಿ. ರಾಮಾಚಾರ್ಯರು ಮಂಗಲಹಾಡಿದರು. ಶ್ರೀ. ಸಿ ಕೆ. ತಿರುಮಲೇಶರು ಧನ್ಯವಾದಗಳನ್ನರ್ಪಿಸಿದರು.

ತಾ 11-10-46ರಂದು ಶ್ರೀ. ಮುಳಿಯ ತಿಮ್ಮಪ್ಪಯ್ಯನವರ "ರತ್ನಾಕರಕವಿವರ್ಣಯ" ವಿಷಯದಲ್ಲಿ ಭಾಷಣವಿತ್ತರು. ಶ್ರೀ. ಕೆ ಎ. ಸೋಮಣ್ಣನವರು ಅಧ್ಯಕ್ಷರಾಗಿದ್ದರು. ಶ್ರೀ. ಬಿ ರಾಮಾಚಾರ್ಯರು ಹೊಸಕವಿತೆಗಳನ್ನು ಹಾಡಿದರು ಶ್ರೀ ಕೈರಂಜಿಗೋವಿಂದ ಭಟ್ಟರು ಧನ್ಯವಾದಗಳನ್ನರ್ಪಿಸಿದರು

ಮದರಾಸು ರೇಡಿಯೊದಲ್ಲಿ–ಕನ್ನಡ ಕಾರ್ಯಕ್ರಮ:—ತಾ ೨೫ ಸಂಜೆ ೭ ಘಂಟೆಕ್ಕೆ "ಕಾಲಚಕ್ರ" ಎ. ಜನಾರ್ದನ್ ಅವರಿಂದ ಪಂಚ ಪರಿಚಯ. ನಾ, ೨೭ ಬೆಳಿಗ್ಗೆ ೮ ಘಂಗಂಟೆಗೆ "ಕಾವೇರಿ" ಬಂದು ವಸ್ತು ಚಿತ್ರ. ನಾ, ಕಸ್ತೂರಿಯವರಿಂದ ಸಂಗ್ರಹಿಸಲ್ಪಟ್ಟಿದ್ದು.

Notice

ಕುಂದಾಪುರ ತಾಲ್ಲು ನಂಬ್ರ 14ನೇ ನಾವುಂದ ಗ್ರಾಮದ ಕೂಹಿಡಿಯಲ್ಲಿರುವ ಮುಡೂರನ ಮನೆ ಕಾವೇರಿ ಹೆಂಗಸ್ಸು I ಮತ್ತು ಇವಳ ಮಗ ಸುಬ್ಬ 1 ಕೂಡಾ 2 ಜನರು ಈ ಮೂಲಕ ತಿಳಿಯಪಡಿಸುವದೇನೆಂದ್ರೆ

ನಮ್ಮ ಕುಟುಂಬದ ಆಸ್ತಿಗಳ ಬಾಬ್ತು ಇದೇ ಚಾಲ್ತಿ ವರುಷದಲ್ಲಿ ನಟ್ಟು ಬೆಳ್ಳಿದ ಪೈರಿನ ಮತ್ತು ಪಳ್ಳು ಹುಟ್ಟುವಳ್ಳಿ ಕುರಿತು ಆವಶ್ಯಕತೆ ವೃಧ ಪತ್ರಿಕೆ ಕೊಡಬೇಕೆಂತ ನಮ್ಮೂರಿನ ಬರಹಗಾರರು. ವಕೀಲಾ ಮಾಸ್ತರರಾದ ಕಿರುಮಂಜೇಶ್ವರ ಎಲಿಮೆಂಟರಿ ಶಾಲಾ ಮಾಸ್ತರ ಸುಬ್ರಾಯ ಶ್ಯಾನುಭಾಗರ ಹತ್ತರ ನಾವು ಸುಮಾರು 20 ದಿವ್ಸದ ಹಿಂತೆ ಹೇಳಿದ ಬಾಬಿನಲ್ಲಿ ಸದ್ರಿ ಸುಬ್ರಾಯ ಶ್ಯಾನುಭಾಗರು ಮತ್ತು ಅವರ ಕೇವಲ ಸ್ವೇಹಿತರು ಯಂಗೀಕರಾದ ಕಾಕಕೋಟ ದೇಸದ ಮನೆ ಸುಬ್ಬೆ ಸೆಟ್ಟಿರು ಕೂಡಾ ಬಂದು ಆ ಬಗ್ಗೆ ನಮ್ಮ ಕಾಸಾವನೆನೆ ಸಾಗುವಳ್ಳಿ ಹುಟ್ಟುವಳ್ಳಿ ಬಗ್ಯೂ ಪಕ್ಕು ಪಟ್ಟುವಳ್ಳಿ ಬಗ್ಯೂ ಕೂಡಾ 4 ಆರ್ಜಿಗಳು ಪಾಕಬೇಕೆಂತಲೂ ಆ ಕುರಿತು 4 ಕಾಲಿ ಕಾಗ್ದಗಳಿಗೆ ನಮ್ಮ ದಸ್ತತು ಅಗತ್ಯ ಯಿರುವದಾಗಿ ಹೇಳಿ, ಪ್ರತಿ ಕಾಗ್ದಗಳಿಗೆ ನಮ್ಮ 2 ಜನರ ಯೆಡ ಪೆಟ್ಟೆಟ್ಟುಗಳನ್ನು ಪ್ರತ್ಯಪ್ರತ್ಯೇಕ 4 ಕಾಲಿ ಕಾಗ್ದಗಳ ಮೇಲೆ ಕೊಂಡುಹೋಗಿರುತ್ತಾರೆ. ೧೪ 46 ದಿವಗಳ ಯಿತ್ತಲಾಗಿ ತಿಳಿಯುವಾಗ ನಮ್ಮ ಲೆಟ್ವೇಸ ಸಾಧಿಸುವ ಮೇಲೆ ಹೇಳಿದ ಸುಬ್ಬೆ ಸಟ್ಟರ ಪ್ರೇರೇಪಣೆಯಿಂದ ನಮ್ಮ ಆಸ್ತಿಯನ್ನು ಮೊಗಲಾದ್ದಿ ನಮಗೆ ಸಪ್ಪೆ ಕಪ್ಪ ಪಡಿಸುವ ಉದ್ದಿಶ್ಯ ಸುಬ್ರಾಯ ಮಾಸ್ತರು ನಮ್ಮಿಂದ ಪಡಕೊಂಡು ಹೋಪ ಯಿಡ ಪೆಟ್ಟೆಟ್ಟುಗಳು ಇರುವ ಕಾಲಿ ಕಾಗ್ದಗಳ ಮೇಲೆ ಸುಳ್ಳು ವ ಸ್ವಪ್ನಜಿ ರಿಕಾರ್ಡುಗಳನ್ನು ತಯಾರಿ ಸಮಗೆ ನಷ್ಟ ಕಷ್ಟಕ್ಕೆ ಗುರಿ ಪಡಿಸುವ ಯಿರಾಧೆಯಲ್ಲಿರುವದಾಗಿ ತಿಳಿದುಬರುತ್ತದೆ.

ಸದ್ರಿ ಮಾಸ್ತರು ಮತ್ತು ಸುಬ್ಬೆಯ್ಯ ಸೆಟ್ಟರು ಕೂಡಾ ನಮ್ಮಿಂದ ನೋಸದಿಂದ ವತ್ತಿಸಿಕೊಂತು ಹೋದ ಪೆಟ್ಟೆಟ್ಟುಗಳ ಆಧಾರದಿಂದ ಅವರಾಗಲೀ ಅವರ ಪೈಕಿಯವರಾಗಲೀ ಯೇನಾದ್ದು ಸೃಷ್ಟಜಿ ರಿಕಾರ್ಡುಗಳನ್ನು ತಯಾರ್ಸಿದ್ದಿದ್ದರೆ ಅಂಥಾ ರಿಕಾರ್ಡುಗಳು ನಮ್ಮ ಮೇಲೆ ಬಾಧಿಸತಕ್ಕದ್ದಲ್ಲ ವ ಜ್ಯಾರಿಗೆ ಬರುವಂತಾದ್ದು ಅಲ್ಲ. ಅಂಥಾ ಸೃಷ್ಟಿಜಿ ರಿಕಾರ್ಡುಗಳು ನಮ್ಮ ಮೇಲೆ ಯಾವ ಕಾಲದಲ್ಲಿಯೂ ಬದ್ಧವಾಗತಕ್ಕದ್ದಲ್ಲಯೆಂಬ ಸತ್ಯ ನಾವು ಈ ಮೂಲ್ಕ ಸರ್ವ ಜನರಿಗೂ ತಿಳಿಯಪಡಿಸಿರುತ್ತೇವೆ.

॥ ಈ ಯಡ ಹೆಬ್ಬೆಟ್ಟು ಗುರ್ತು ಕೊರತಿ ಹೆಂಗ್ಸಿನ ರುಜು.

॥ ಈ ಯಡ ಹೆಬ್ಬೆಟ್ಟಿನ ಗುರ್ತು ಸುಬ್ಬನ ರುಜು.

ಮೊಕ್ಕಾಂ, ನಾವುಂದ,
ತಾ. 15-10-1946

Notice

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.

O. S. 363/46.

ಏಬಿ, ಪಾಸುದೇನ ಕಲ್ಲೂರ,
ಪ್ರತಿವಾದಿ, ಆಂತಯ್ಯ ಹೆಗ್ಡೆ

ಉಡ್ಪಿ ತಾಲ್ಲು ಪನೆಹಳ್ಳಿ ಗ್ರಾಮದ ಕುರಾಡಿಯಲ್ಲಿರುವ ರುಕ್ಮಿಣಿ ಹೆಗ್ಗಡ್ತಿ ಮಗ ಆಂತಯ್ಯ ಹೆಗ್ಡೆಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ,

ಪ್ರತಿವಾದಿಯಿಂದ ವಾದಿಗೆ ಸ್ವಭಾನು ತಾರಣ, ಪಾರ್ಥಿವ ಸಂವತ್ಸರಗಳ ಚಾಲ್ತಿ ಬರತಕ್ಕ ಮೂಲಲೆಗೆ ಗೇಣ ವ ಬಡ್ತಿ ಕೂಡಾ ಬರಮಾಡಿಕೊಳ್ಳುವರೆ ಪಾಡಿಯಲ್ಲಿ ದಾಖಲ್ಲು ಮಾಡಿದ ಮೇಲಿನ ದಾವೆಯು ತಾ. 29-10-46ಕ್ಕೆ ಮೇಲಿನ ಕೋರ್ಟಿನಲ್ಲಿ ತನ್ನಿಗೆ ಇಟ್ಟಿರುತ್ತದೆ. ಆ ಕುರಿತು ಒಪಾದರು ಅಕ್ಟೋಬರಿಗಿದ್ದರೆ ಆ ತಾರೀಕಿಗೆ ಮೇಲಿನ ಕೋರ್ಟಿನಲ್ಲಿ ಮುಂದೆ ಹಾಜರ್ರಾಗಿ ಜ್ಯಾಬ್ತೀದು ಮಾಡಿಕೊಳ್ಳತಕ್ಕದ್ದು. ಎಂಬ ಸಂಗ್ತಿ ಈ ಮೂಲಕ ತಿಳಿಯಪಡ್ಸಿರುತ್ತಜೆ.

(Sd) N. S. Parameshwariah,
Advocate for Plaintiff
Kundapur, 13-10-46



ಕ್ಷಣಿಕ ಗುಣಕೊಡುವ ಔಷಧದ ಬೆನ್ನು ಹತ್ತಿ ಮರುಳಾಗಬೇಡಪ್ಪಾ.

ಪುರೋಹಿತ ಶ್ವಾಸಹಾರೀ ಔಷಧ ಮಾತ್ರ ಬೇರೆ ಅವು ದಮ್ಮನ್ನು ಬರೇ ದುಮುತಿ, ಇಡದೆ ಆದನ್ನು ಬೇರುಸಹಿತ ಕಿತ್ತು ಹಿಗೆಯುವುದು. ಈ ಔಷಧ ಸುರುವು ಮಾಡಿದಾಗಲೇ ಕೆಮ್ಮೂ ತೇಕೂ ನಿಲ್ಲುವವು; ಹೊಟ್ಟೆ ಹಸನಾಗುವದು; ಹಜನಕ್ರಿಯೆಯು ತಿದ್ದುವದು; ಭುಷ್ಟುಸಗಳು ಗಟ್ಟಿಯಾಗುವುವು. ಆ ಮೇಲೆ ದಮ್ಮಿರಲಿಕ್ಕೆ ಸ್ಥಳವೇ ಸಿಗುವಡಿಲ್ಲ.

ದಮ್ಮು, ತೇಕು, ದೆನ್ನು ನೋವು, ಗಂಟಲು ಉರಿಯುವಂಥ ಕೆಮ್ಮು ಮುಂತಾದ ವಿಕಾರಕ್ಕೆ ಪುರೋಹಿತ ಶ್ವಾಸಹಾರೀ ಸ್ಪೇನ (ಸೀರೀ ಪ್ಯಾಕಿಂಗ್) ತೆಗೆದುಕೊಳ್ಳಬೇಕು. ಆಳೀರ್ಣ ಮತ್ತು ಅಮ್ಲಪಿತ್ತದಿಂದ ಬಳಲುವ ದಮ್ಮಿನವರು ಶ್ವಾಸಹಾರೀ ಕಂಪೌಂಡ (ಕೆಂಪು ಪ್ಯಾಕಿಂಗ್) ತೆಗೆದುಕೊಳ್ಳಬೇಕು

೩ ಔನ್ಸ್, ೬ ಔನ್ಸ್, ೧೨ ಔನ್ಸ್ ಬಾಟ್ಲುಗಳಲ್ಲಿ ಕ್ರಮವಾಗಿ ರೂ.೨-೬-೦; ೫ ೧೦-೦ ಮತ್ತು ೧೦ ೨-೦

ಪುರೋಹಿತ ಫಾರ್ಮಸಿ, ಕೊಲ್ಹಾಪುರ

ಸ್ಟಾಕಿಸ್ಟರು ಪೊಪ್ಯುಲರ್ ಸ್ಟೋರ್ಸ್, ಮಂಗಳೂರು; ಟಿ.ಸಿ ನಟೆರಾಜನ್‌ಕೊಂಪೆನಿ ಸೂರು.

ಮುಂಬಯಿ ಸೋಲ ಏಜಂಟರು:–

ವನಮಾಲೀ ಭಿಕಾಜಿ ಮತ್ತು ಕಂಪನಿ,
ಪ್ರಿನ್ಸೆಸ್ ಸ್ಟ್ರೀಟ್,
ಮುಂಬಯಿ ೨.



ದೇಶಕಾಲಕ್ಕೊಪ್ಪುವ ನವೀನ ಪುಸ್ತಕ

ಸ್ವಾತಂತ್ರ್ಯವೀರ ಸಾವರಕರರು

ಹಿಂದೂ ಸಂಸ್ಕೃತಿ ಮತ್ತು ಹಿಂದೂರಾಷ್ಟ್ರಕ್ಕಾಗಿ ಸರ್ವ ತ್ಯಾಗ ಮಾಡಿದ ವೀರ ಸಾವರಕರರ ಉಜ್ವಲಜೀವನ ಚರಿತ್ರೆ

ಮೈಜುಮ್ಮೆನ್ನಿಸುವ ಹಲವು ಸನ್ನಿವೇಶಗಳು!

ವಿಚಾರ ಕ್ರಾಂತಿಯನ್ನುಂಟುಮಾಡುವ ಘಟನೆಗಳು!

ಪ್ರಸಿದ್ಧ ಹಿಂದೀ ಲೇಖಕ ಪಂಡಿತ ಚಂದ್ರಗುಪ್ತ ವೇದಾಲಂಕಾರ ಇವರ ಹಿಂದೀ ಗ್ರಂಥದ ಕನ್ನಡ ಅನುವಾದ.

ಕನ್ನಡಿಸಿದವರು- ಶ್ರೀಮತಿ ಇಂದಿರಾಬಾಯಿ,
ನ್ಯೆಸೂರು, ಸಂಸ್ಥಾನ.

ಬೆಲೆ ಬರೇ ರೂ. 1—4—0

ರೂ. 1—8 ಕಳಿಸಿದರೆ 1 ಪ್ರತಿಯನ್ನು ರಿಜಿಸ್ಟರ್ ಮಾಡಿ ಕಳಿಸಲಾಗುವುದು.

ಪ್ರತಿಗಳು ಸಿಗುವ ಸ್ಥಳಗಳು:—

1. ಸ್ಕೂಲ್ ಬುಕ್ ಕಂಪೆನಿ, ಮಂಗಳೂರು. 2. ಸತ್ಯಶೋಧನ ಪುಸ್ತಕ ಭಂಡಾರ, ಬೆಂಗಳೂರು. 3. ನವಭಾರತ ಪುಸ್ತಕ ಬಂಡಾರ, ಉಡುಪಿ 4. ಪಾಪಂಜೆ ಗುರುರಾವ್, ಉಡುಪಿ. 5 ನವಯುಗ ಆಫೀಸು, ಉಡುಪಿ.

ಕಡಂದಲೆ ಶಾಲಾ ವಿಸ್ತರಣದ ಬಗ್ಗೆ ಧನ ಸಹಾಯ ಮಾಡಿದ **ಈ** ಕೆಳಗಿನ ಮಹನೀಯರುಗಳಿಗೆ ವಿಸ್ತರಣ ಕಮಿಟಿಯ ಕಡೆಯಿಂದ ಅನೇಕ ದನ್ಯವಾದಗಳನ್ನು ಅರ್ಪಿಸುತ್ತೇನೆ.

S. No.	ಧನ ಸಹಾಯಮಾಡಿದವರ ಹೆಸರು.	ಸಹಾಯವಿತ್ತ ಮೊಬಲಗು. ರೂ.	ಆ.	ಪೈ.
1	ಉಳೆಪಾಡಿ ಹೊಸಮನೆ ವಾಸುದೇವ ಶೆಟ್ರು, ಪೂನಾ	555	5	5
2	ಉಳೆಪಾಡಿ ಮೋಹನ ಶೆಟ್ರು, ಪೂನಾ	511	0	0
3	ಕಡಂದಲೆ ಸುಳೆಮೊಗರು ಶ್ಯಾಮ ಶೆಟ್ರು, ಪೂನಾ	501	0	0
4	ಕಡಂದಲೆ ನಂದಲಾಡಿ ಭೋಜ ಶೆಟ್ರು, ಪೂನಾ	251	0	0
5	ಕಡಂದಲೆ ಉಳ್ಳನಡ್ಕ ವೋಮಯ ಶೆಟ್ರು C/o ಮುತ್ತಯ್ಯ ಶೆಟ್ರು (ವಾಗ್ದಾನ)	205	0	0
6	ಕಡಂದಲೆ ನಾಗಪ್ಪ ಶ್ಯಾನುಭಾಗರು C/o ದಾಮೋದರ ಶೆಣೈ	151	0	0
7	ಉಳೆಪಾಡಿ ಮಂಜುನಾಥ ಶೆಟ್ರು, ಕೋಲಾಪುರ	105	0	0
8	ಏಳಿಂಜೆ ಕುಬಾಳ ನರ್ಸು ಶೆಟ್ರು, ಗೋಲ್ಪೀಟ	105	0	0
9	ಕಡಂದಲೆ ಕೆಳಗಿನಮನೆ ಚಂದು ಶೆಟ್ರು C/o ದೂಮ ಶೆಟ್ರು	105	0	0
10	ಕಡಂದಲೆ ನಲ್ಲೆಗುತ್ತು ಸುಂದರ ಶೆಡ್ತಿಯರು C/o H. ದೇಜು ಶೆಟ್ರು (ವಾಗ್ದಾನ)	105	0	0
11	ಬೆಳ್ಮಣ್ಣು ಕೋಲಾಪುರ ಅಂತಯ ಶೆಟ್ರು	101	0	0
12	ಬೆಳ್ಮಣ್ಣು ಕೋಲಾಪುರ ಚಂದಯ ಶೆಟ್ರು	101	0	0
13	ಉಳೆಪಾಡಿ ವಾಮನ ಶೆಟ್ರು, ಕೋಲಾಪುರ	101	0	0
14	ಕಡಂದಲೆ ಪರಾರಿ ರಾಮಣ್ಣ ಶೆಟ್ರು, ಕೋಲಾಪುರ	101	0	0
15	ಉಡುಪಿ ಹಿರೇಬೆಟ್ಟು ನಂದ್ಯಪ್ಪ ಶೆಟ್ರು, ಪೂನಾ	101	0	0
16	ಕೆಲ್ಲಪತ್ತಿಗೆ ಆಚ್ಚಣ್ಣ ಶೆಟ್ರು, ಪೂನಾ	101	0	0
17	ಬಳಕುಂಜಗುತ್ತು ಗೋಪಾಲ ಶೆಟ್ರು	101	0	0
18	ಕಡಂದಲೆ ಸೊಳೆಮೊಗರು ಕೃಷ್ಣ ಶೆಟ್ರು	101	0	0
19	ಕುಡೆತ್ತೂರು ದೇವಸ ಪುಟ್ಟಣ್ಣ ಶೆಟ್ರು	101	0	0
20	ಅತ್ತೂರು ಮೂಡ್ರಗುತ್ತು ಸಂಜೀವ ಶೆಟ್ರು (ವಾಗ್ದಾನ)	101	0	0
21	ಶೇಟ್ ಗೋಪಾಲ್‌ವಾಸ ಪೂಂಜ, ಪೋರ್ಟು, ಬೊಂಬೈ	101	0	0
22	ಕಡಂದಲೆ ಬಲ್ಲಾಡಿ ಲಿಂಗಪ್ಪ ನ್ಯಾಕರು, ,, (ವಾಗ್ದಾನ)	101	0	0
23	ಕಡಂದಲೆ ಎಲ್ಲೂರುಗುತ್ತು ಕಾಳು ಶೆಟ್ರು ,, (ವಾಗ್ದಾನ)	55	0	0
24	ಕರ್ನಿರೆ ಪಡುಮನೆ ರಾಮಣ್ಣ ಶೆಟ್ರು ,,	51	0	0
25	ಕಡಂದಲೆ ಉಳ್ಳನಡ್ಕ ಸಂಜೀವ ಶೆಟ್ರು ,,	50	0	0
26	ಕಂರ್ಬಾಡಿಗುತ್ತು ಗೋಪಾಲಶೆಟ್ರು	51	0	0
27	ಪಿಲಾರು ಮಜಲಬೆಟ್ಟು ಬೀಡು ಡಾಬ ಶೆಟ್ರು ಮತ್ತು ಸಹೋದರ (ವಾಲ್ಗಾರು)	51	0	0
28	ಕಡಂದಲೆ ಬಲ್ಲಾಡಿ ನಿಂಬಯ ಶೇರಿಗಾರರು C/o ಆನಂದ ಶೇರಿಗಾರರು	51	0	0
29	ಕುಮುಟಾ ಕೃಷ್ಣಾಜಿ ಪಾಂಡುರಂಗ ಪೈ, ಪೂನಾ	25	0	0
30	ಮೂಲ್ಕಿ ಕಾರ್ನಾಡು ರಾಮದಾಸ ಶೆಟ್ರು, ಪೂನಾ	25	0	0
31	ನ್ಯೂ ರಾಜ ಭವನ, ಕೆ. ಯಸ್. ಶೆಟ್ರು. ಶಿವಾಜಿನಗರ	25	0	0
32	ಮೂಚ್ಲೂರು ಬಾಳಿಕೆ ಕೊರಗ ಶೆಟ್ರು, ಪೂನಾ	25	0	0
33	ಉಡುಪಿ ಹಿರೇಬೆಟ್ಟು ಬಾಲ್ಕಟ್ಟೆ ಸಂಜೀವ ಶೆಟ್ರು	25	5	3
34	ಶಿಬರೂರ ದೇಲಂತಬೆಟ್ಟು ಮಹಾಬಲ ಶೆಟ್ರು, ಮಲದ್	25	0	0
35	ಕಡಂದಲೆ ಉಳ್ಳನಡ್ಕ ಮಹಾಬಲ ಶೆಟ್ರು, (ವರ್ಲಿಕೋರ್ನರ್)	25	0	0
36	ಕಲ್ಲಮುಂಡ್ಕೂರು ಶಿಮುಂಜೆ ವರಾರಿ ಮುದ್ದಣ್ಣ ಶೆಟ್ರು	25	0	0
37	ಕಂದಾಡಿಗುತ್ತು ಶ್ಯಾಮ ಶೆಟ್ರು	25	0	0
38	ಬೋಳ ಮಲ್ಯಾಲ ರಾಜು ಶೆಟ್ರು, ಮಲದ್	25	0	0
39	ಎಕ್ಕಾರು ಬೆಳ್ಳೆಮಾರು ನಾರಾಯಣ ಶೆಟ್ರು, (ಬೊರ್ವಿಲೆ)	25	5	0
40	ಕರ್ನಿರೆ ಬೈಲುಮನೆ ಬೂಬ ಶೆಟ್ರು ,,	25	5	0
41	ನಿಟ್ಟೆಗುತ್ತು ಡಾಕ್ಟರ್ ವಿಶ್ವನಾಥ ಆಡ್ಯಂತಾಯರು	25	0	0
42	ನಿಡ್ಡೋಡಿ ಮೈಂದಡಿ ಕೃಷ್ಣ ಶೆಟ್ರು	25	0	0
43	ಹೆಜಮಾಡಿ ಬೀಳಿಂಜೆ ವಾಸು ಶೆಟ್ರು	25	4	0
44	ಮೂಡಬಿದ್ರೆ ಅನಂತ ವಿಟ್ಲಲ ವೃಭಗಳು	25	4	0
45	ಬೇಲಾಡಿ ಶಿವರಾವ್ ಕೃಷ್ಣ ಕಾಮತ್	25	0	0
46	ನಿಡ್ಡೋಡಿ ನಂದಬೆಟ್ಟು ಮುದ್ದು ಶೆಟ್ರು ಮತ್ತು ಭೋಜ ಶೆಟ್ರು	25	8	0
47	ಪಿ. ವಾಸು ಶೆಟ್ರು, ಇಂಡಿಯಾ ಯುನ್ಯಾಟೆಡ್ ಮಿಲ್ (ವಾಗ್ದಾನ)	25	0	0
48	ಬೆಳ್ಳೆ ಪಾಲೆಮಾರು ರಾಮಣ್ಣ ಶೆಟ್ರು (ವಾಗ್ದಾನ)	25	0	0
49	ನಿಡ್ಡೋಡಿ ನಾಯರ್‌ಕೋಡಿ ನಾರಾಯಣ ಶೆಟ್ರು ಕೇತುವಾಡಿ	25	0	0
50	ಕೆಮತೂರು ಪಡುಮನೆ ಸುಂದರ ಯನ್. ಶೆಟ್ರು (ವಾಗ್ದಾನ)	25	0	0
51	ಬೋಳ ಎಪೊಲಿನ್ ಫೆರ್ನಾಂಡೀಸ್ ,,	25	0	0
52	ಕಡಂದಲೆ ಉಳ್ಳನಡ್ಕ ಎಲ್ಲಪ್ಪ ಶೆಟ್ರು ,,	25	0	0
53	ನ್ಯೂ ಶಿರ್ಲದೇವಿ ಕಡಂದಲೆ ದೊಡ್ಡಣ್ಣ ಶೆಟ್ರು	21	4	0
54	ಕಡಂದಲೆ ದೇವಸ್ಥಾನದ ಬಳಿ ಶ್ರೀನಿವಾಸರಾಯರು (ವಾಗ್ದಾನ)	20	0	0
55	ಕಡಂದಲೆ ಕೆ. ಕೆ. ಶೆಟ್ರು, ಹಿಂದೂಸ್ಥಾನ ರೇಡಿಯೊ ,,	20	0	0
56	ಹೆಜಮಾಡಿ ಬಾಳಿಕೆ ರಾಮಣ್ಣ ಶೆಟ್ರು, ತಾರ್ದೆವು	15	4	0
57	ಏಳಿಂಜೆ ಮಂಜಬ್ಬಗುತ್ತು ಶೀನ ಶೆಟ್ರು ,,	15	4	0
58	ಕಡಂದಲೆ ರಾಜು ಶೆಟ್ರು, ಸಾಂತಕ್ರೂಜ್	15	0	0
59	ಕಲ್ಲಮುಂಡ್ಕೂರು ಶಿಮುಂಜೆಪರಾರಿ ನಾಮು ಸೆಟ್ರು	15	0	0
60	ಏಕಳಬಾವ ಶಿವರಾಮ ಹೆಗ್ಡೇರು C/o ಸದಾನಂದ ಹೆಗ್ಡೇರು	15	0	0
61	ಕುದ್ರಬೆಟ್ಟು ನೆಡಿಗುತ್ತು ಸೀತಾರಾಮ ಶೆಟ್ರು	15	0	0
62	ಹಳೆಯಂಗಡಿ ಕಂಡಿಗುತ್ತು ಎಲ್ಲಪ್ಪ ನವರು	15	4	0
63	ಕೂಡ್ರು ಪಡುಇಂದ್ರಾಡಿ ರಾಜು ಶೆಟ್ರು	15	4	0

S. No.	ಧನಸಹಾಯ ಮಾಡಿದವರ ಹೆಸರು.	ಸಹಾಯವಿತ್ತ ಮೊಬಲಗು. ರೂ.	ಆ.	ಪೈ.
64	ನಡ್ಸಾಲು ಮಜಲಗುತ್ತು ಆನಂದ ಶೆಟ್ರು	11	0	0
65	ಬೆಳ್ಳಾಯಿ ಹಡಿಂಜ ರಾಮಣ್ಣ ಶೆಟ್ರು	10	4	0
66	ಆವರಾರು ಬಾಬು ಮಡಿವಾಳರು, (ಮಲದ್)	10	4	0
67	ವಿಲ್ಲಾರ್ಲೆ ಪಿಲಾರು ಅಣ್ಣು ಶೆಟ್ರು	10	5	3
68	ತೋಕೂರು ಮಾಗಂತಡಿ ಟಿ ಅರ್. ಶೆಟ್ರು, (ಗಾಮದೇವ್)	10	0	0
69	ಹೆಜಮಾಡಿ ಪಡುಮನೆ ಸೇಸ ಸೆಟ್ರು	10	0	0
70	ಕಡಂದಲೆ ಪರಾರಿ ಕೃಷ್ಣ ಶೆಟ್ರು	10	0	0
71	ಕಡಂದಲೆ ಗೇಂದೊಟ್ಟು ದಾಸು ನಾಯ್ಕರು	10	0	0
72	ಕುದ್ರಬೆಟ್ಟು ನಡಿಗುತ್ತು ಬುಜಂಗ ಶೆಟ್ರು	10	0	0
73	ಕುತ್ಕೆತ್ತೂರು ನಡಿಗುತ್ತು ಕೃಷ್ಣ ಶೆಟ್ರು	10	0	0
74	ಕಾರ್ನಾಡು ಗುಂಡಲಗುತ್ತು ಶ್ಯಾಮಂರಾಯ ಶೆಟ್ರು	10	0	0
75	ಅತ್ತೂರು ಮೂಡ್ರಗುತ್ತು ಪೋಮಯ ಶೆಟ್ರು	10	0	0
76	ಪಡುಬಿದ್ರೆ ಗುಂಡ್ಲಾಡಿ ಪೂವ ಶೆಟ್ರು	10	0	0
77	ದಾದರ್ ಗೋಖಲೆರೋಡ್ ಯಮ್. ಯನ್. ರಾವ್	10	0	0
78	ಕಡಂದಲೆ ಕಟ್ಟದಡಿ ಗೋಪ ಶೆಟ್ರು	10	0	0
79	ಕಡಂದಲೆ ನಲ್ಲೆಗೆ ವಾಸು ಶೆಟ್ರು	10	0	0
80	ನಂದಳಿಕೆ ಕುಡುಂದೂರು ಬಾಬು ಶೆಟ್ರು	10	0	0
81	ಕಡಂದಲೆ ಪರಾರಿ ಮುತ್ತಯ ಶೆಟ್ರು	10	0	0
82	ಕಡಂದಲೆ ವರಾರಿ ತಿಮ್ಮಪ್ಪ ಶೆಟ್ರು	10	8	0
83	ಎಕ್ಕಾರು ಕೊಟ್ಟಾರಮನೆ ಚಂದು ಶೆಟ್ರು	10	0	0
84	ಪಾಲಡ್ಕ ಪೆಲಪಾಡಿ ಎಲ್ಲಪ್ಪ ನವರು	10	0	0
85	ಹೆಜಮಾಡಿ ಬಾಳಿಕೆ ಸಂಜೀವ ಶೆಟ್ರು	10	4	0
86	ದಾದರ್ ಶಿವಾಜಿಪಾರ್ಕ ಡಿ. ಜೆ. ಶೆಟ್ರು ಮತ್ತು ಡಿ.ಕೆ.ಶೆಟ್ರು	7	0	0
87	ಕುತ್ಯಾರು ಮದನ ಶೆಟ್ರು	5	0	0
88	ಬಿ. ಜಗನ್ನಾಥ ಹೆಗ್ಡೆ ಯವರು, (C. N. A. Office)	5	8	0
89	ಮಲದ್ ಕೆ. ವಿ. ಶೆಟ್ರು	5	4	0
90	ಬೊರಿವಿಲೆ ನಾರಾಯಣ ದಾಮಾಜಿರವರು	5	4	0
91	ಕುರ್ಕಾಲು ಪಾಲೆಮಾರು ಮುದ್ದಣ್ಣ ಶೆಟ್ರು	5	4	0
92	ಬೆಳ್ಳೆ ಕಡಂಬೈಲು ಕುಪ್ಪಣ್ಣ ನಾಯ್ಕರವರು	5	4	0
93	ಜಾರ್ಕಳೆ ಹುಲಿಬೆಟ್ಟು ಶಿವ ಹೆಗ್ಡೇರು	5	4	0
94	ಬೊರಿವಿಲೆ ನಾಂಜು ಶೇಟ್	5	0	0
95	ಪಡುಕೊಡಿಂಜೆ ಕೊಡಿಂಬೆಲೆ ನೀಲಯ ಪೂಜಾರಿಗಳು	5	0	0
96	ಬೆಳುವಾಯಿ ಅಡಂಜ ಚಂದಯ ಶೆಟ್ರು	5	0	0
97	ಕಡಂದಲೆ ವಾಸುದೇವ ದೇವಪ್ಪ ಶೆಣೈಯವರು	5	0	0
98	ನಿಂಜೂರು ಬಿದಿರಬೆಟ್ಟುಮನೆ ರಾಮಣ್ಣ ಶೆಟ್ರು	5	0	0
99	ಕಡಂದಲೆ ಮಂಜೊಟ್ಟೆ ಚಂದು ಪೂಜಾರಿಗಳು	5	0	0
100	ಕುಳ್ಳರ ಪರಾರಿ ಸಾಧು ಶೆಟ್ರು	5	0	0
101	ಸುಳೆಮೊಗರು ಭುಜಂಗ ಶೆಟ್ರು	5	0	0
102	ಮುರ್ತುಗುಡ್ಡೆ ದೇರಮ ಶೆಟ್ರು	5	0	0
103	ಹೊಸವಕ್ಲು ಕುಪ್ಪ ಮೂಲ್ಯರು	5	0	0
104	ಕಡಂದಲೆ ಕೋಟೆ ತಿಮ್ಮಪ್ಪ ನಾಯ್ಕರು	5	0	0
105	ಬಲ್ಲಾಡಿ ವಾಸು ನಾಯ್ಕರು	5	0	0
106	ಕಡಂದಲೆ ತಿಮ್ಮಪ್ಪ ಶೇರಿಗಾರರು	5	0	0
107	ಮೂಡುಕೂಟ್ರಾಡಿ ನಾರಾಯಣ ಶೆಟ್ರು	5	0	0
108	ಕಾಪು ಬಾಬು ಕರ್ಕೇರವರು	5	0	0
109	ಪಡುಬಿದ್ರೆ ಅಲಂಗಾರ್ ಹೂವಯ್ಯ ಶೆಟ್ರು	5	0	0
110	ಕಡಂದಲೆ ಬಾಬು ಮಡಿವಾಳರು	5	0	0
111	ಕೆರಮ ಜಾರ್ಗೆದಡಿ ಮೆಣ್ಯ ಶೆಟ್ರು	5	0	0
112	ಶ್ರೀಮತಿ ಮೂಲ್ಕಿ ಕೃಷ್ಣಿ ಕ್ರಿಶ್ಚಿಯನರು C/o ಬಾಬು ಶೆಟ್ರು	5	0	0
113	ಶಿವಾಜಿಪಾರ್ಕ ಕೆ. ವಿ. ಹೆಗ್ಡೆಯವರು	5	0	0
114	ಕಡಂದಲೆ ಮಂಜೊಟ್ಟೆ ಕುಂಞ ಪೂಜಾರಿಗಳು	5	0	0
115	ಕಡಂದಲೆ ತಿಮ್ಮಯ್ಯ ಯಾನೆ ಬಾಬುನವರು	5	0	0
116	ಕಡಂದಲೆ ನಾರಾಣ್ಣನವರು	5	0	0
117	ಗೋಖಲೆರೋಡ್ ದಾದರ್ ಪಿ. ಕೆ. ಹೆಗ್ಡೆ	2	0	0
	ಜುಮ್ಲಾ	**5282**	**13**	**11**
	ಈ ಪೈಕಿ ವಾಗ್ದಾನಸಿತ್ತ ರಕಮ್ಮ	732	0	0
	ಪರೂರಿಗೆ ಹೋದ ಪ್ರತಿನಿಧಿಗಳ ಖರ್ಚು (3 ಮಂದಿ)	278	10	6
	ಪ್ರಿಂಟು, ಟಪ್ಪಾಲು ದಗೈರೆ ಖರ್ಚು	40	0	0
	ಈಗ ಜಮಾ ಇರುವ ಹಣ	4232	3	5

ವಿ. ಸೂ.—ಶಿಬ್ಬರೂರ ವಿಸ್ತರಣದ ಪರವಾಗಿ ಪರೂರ್ಸಳಗಳಿಗೆ ಹೋದ ಪ್ರತಿನಿಧಿಗಳಿಗೆ ಧನ ಸಹಾಯವಸ್ಥಿತ್ತುದುದು ಮಾತ್ರವಲ್ಲದೆ ಹೆಚ್ಚಿನ ಪ್ರೋತ್ಸಾಹವನ್ನು ಕೊಟ್ಟ ಶ್ರೀಗಳಾದ ಮದ್ರಾಸಿನ ಕೃಷ್ಣ ಭವನದ ಕಡಂದಲೆ ಕೃಷ್ಣ ರಾಯರು, ಉಳೆಪಾಡಿ ಹೊಸ ಮನೆ ವಾಸುದೇವ ಶೆಟ್ರು, ಮಂಜುನಾಥ ಶೆಟ್ರು, ಮೂಲ್ಕಿ ಡೊಂಬ ಶೆಟ್ರು, ಬಾಬು ಶೆಟ್ರು, ಹೆಜಮಾಡಿ ಸಂಜೀವ ಶೆಟ್ರು, ದೇವಸ ಪುಟ್ಟಣ್ಣ ಶೆಟ್ರು, ಸುಳೆಮೊಗರು ಕೃಷ್ಣ ಶೆಟ್ರು ಮತ್ತು ಕಡಂದಲೆ ದೂಮಣ್ಣ ಶೆಟ್ರು.-ಇವರುಗಳಿಗೆ ಶಾಲಾ ವಿಸ್ತರಣದ ಸಮಿತಿಯ ಪರವಾಗಿ ಅನೇಕ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಕಡಂದಲೆಗುತ್ತು ಪಟೇಲ್ ದೇಜು ಶೆಟ್ರು

ಘಾತಿಕಾಲದಲ್ಲೂ ಪಂಥಬಿಡಲಿಲ್ಲಿ!

(೨ನೇ ಪುಟದಿಂದ)

ಮೈ ಕೇಳಿದಾಗ ಗಟ್ಟಿಸ್ವರದಿಂದ "ಜೋ ಕಿವ್‌ಪೋನ್ ರಿಬ್ಬಂಟ್ರಾಪ್" ಎಂದ. ಆ ಮೇಲೆ ಮುಂಗಡೆ ಅಮೇರಿಕನ್ ಅಧಿಕಾರಿ, ಎಡಬಲಗಳಲ್ಲಿ ಇಬ್ಬರು ಕಾವಲಯೋಧರೊಡನೆ ರಿಬ್ಬಂಟ್ರಾಪ ಸಾವಧಾನವಾಗಿ ಒಂದೊಂದೇ ಮೆಟ್ಟಿಲೇರ ಹೆತ್ತಿದ. ಅವನ ದೃಷ್ಟಿ ಎಡಕ್ಕೂ ಬೀಳುತ್ತಿರಲಿಲ್ಲ; ಬಲಕ್ಕೂ ಇಳ್ಳಿ; ನೇರಂಗಿ ಮುಂದೆ ನೋಡುತ್ತಿದ್ದ. ಕಡಿಗೆ ಬಂದ ಮೇಲೆ ಅಮೇರಿಕನ್ ಅಧಿಕಾರಿ ಕೇಳಿದ-"ನೀನು ಹೇಳುವ ಕೊನೆಯ ಮಾತೇನಾದರೂ ಇದೆಯೆ!" ರಿಬ್ಬಂಟ್ರಾಪ್ ಪ್ರಶ್ನಿಸಿದವನನ್ನೂ ನೋಡಲಿಲ್ಲ; ಪಕ್ಕದಲ್ಲಿದ್ದ ಪ್ರೊಟೆಸ್ಟಾಂಟ್ ಪಾದ್ರಿಯತ್ತಲೂ ದೃಷ್ಟಿ ಹಾಕಲಿಲ್ಲ. ನೆಟ್ಟ ದೃಷ್ಟಿಯಿಂದೊಮ್ಮೆ ಕಪ್ಪು ಮುಸುಕಿರುವ ಮೇಲ್ಮಾಡನ್ನೂ ಕೆಟಿಕೆಗಳನ್ನೂ ನೋಡಿ ಆ ಮೌನ ವಾತಾವರಣದ ಇಡೀ ಕಟ್ಟಡವೇ 'ಘೋಂ ಘೋಂ' ಎಂದು ಪ್ರತಿಧ್ವನಿಸುವಂತೆ ಗಟ್ಟಿಯಾಗಿ 'ದೇವರು ಜರ್ಮನಿಯನ್ನು ರಕ್ಷಿಸಲಿ' ಎಂದ! ತಕ್ಷಣ ಆ ಮೇರಿಕದ ಘಾತೀ ಕಾರ್ಯಕರ್ತನೊಬ್ಬನು ಕಪ್ಪು ಮುಸುಕೊಂದನ್ನು ಅವನ ಮುಖಕ್ಕೆ ಮುಚ್ಚಿದ. ನೇತಾಡುತ್ತಿದ್ದ ಉರುಳನ್ನು ಕಂಠಕ್ಕೆ ಸಿಕ್ಕಿಸಿದೆ. ಆಗ, ಆಗಲೇ ಒಂದು ವಿಲಕ್ಷಣ ಶಬ್ದ-ಅದು ಸಟಾರನೆ ಧಿಕ್ಕಿ ಹೊಡೆದಂತಹ ಸದ್ದೂ ಅಲ್ಲ; ದಬಕ್ಕನೆ ಹಾರಿದ ಶಬ್ದವೂ ಅಲ್ಲ-ಅಂತಹ ಒಂದು ಶಬ್ದದೊಡನೆ ಆಡಿಯ ಹಲಗೆ ಜಾರಿತು. ೧೫ ದಾರಗಳಿಂದ ಹೆಣೆದ ಆ ಘಾತೀ ಹಗ್ಗದ ಸದ್ದು-ಇಹದಿಂದ ಪರಕ್ಕೆ ತೂಗಾಡಿಸಿ ಬಿಟ್ಟ ಆ ಉಯ್ಯಾಲೆ ಹಗ್ಗದ ರವ—20 ಮಿನಿಟುಗಳಲ್ಲಿ ನಿಂತಾಗ ಇಡೀ ಭವನದಲ್ಲೊಮ್ಮೆ ಅಪೂರ್ವ ಮೌನ ವ್ಯಾಪಿಸಿಕೊಂಡಿತು. ಡಾಕ್ಟರು ಪರೀಕ್ಷೆಮಾಡಿ 'ಸತ್ತ' ಎಂದು ಸರ್ಟಿ[illegible] ಆ ಮೇಲೆ ತುಸು ಹೊತ್ತು, ತೆರೆದ ಆಡಿ ಬಾಗಿಲಿನೊಳಕ್ಕೂ ಮೇಲಕ್ಕೂ ಆ ಹಗ್ಗ ಹೋಗುವ ಶಬ್ದವು ಮನುಷ್ಯ ಜೀವನದ ಅರ್ಥ ಮರ್ಮನೆ ಮಾಡುತ್ತಿದ ಎಂಬಂತೆ ನಡೆದಿತ್ತು!

ಅಲ್ಲಿಂದ ಘಾತೀ ಕಾರ್ಯಾಧಿಕಾರಿಗಳೂ ಕೆಲಸಗಾರರೂ ಎರಡನೇ ಘಾತೀ ಕಂಭದತ್ತ ನಡೆದರು. ಮೊದಲಿನಂತೆಯೇ ಪ್ರಥಮತಃ ಮೆಟ್ಟಿಲೇರಿ ಬರುವ ಸದ್ದು. ಆ ಮೇಲೆ ಮೂರು ಬಾರಿ ಬಾಗಿಲು ತೆರೆದೊಡನೆ ಕೇಟೆಲನ ಪ್ರವೇಶ. ಆತ ಸೇನಾ ಪ್ರದರ್ಶನಕ್ಕೆ ಬಂದವನಂತೆ ಮಿಲಿಟರಿ ಪೋಷಾಕಿನಲ್ಲೇ ಇದ್ದ; ವಿದ್ಯುಚ್ಛಕ್ತಿಯ ಪ್ರಕಾಶದಲ್ಲಿ ಅವನ ಮುಖವು ಆಗ ತಾನೇ ಕ್ಷಾರಮಾಡಿ ತೊಳೆದುಕೊಂಡಂತೆ ಮಿನುಗುತಿತ್ತು. ಕೇವಲ ಅವನ ಮುಖವನ್ನೇ ಕಂಡರೆ, ಕಂಭದ ಬುಡಕ್ಕಾಗತ ಬಂದಾಗ ಸ್ವಸ್ತಿಕಾ ಧ್ವಜಾರೋಹಣಕ್ಕಾಗಿ ಧ್ವಜಸ್ತಂಭದಡಿಗೆ ಬಂದಂತಿತ್ತು! "ನನಗಿಂತ ಮೊದಲೇ 2,00,000 ಮಂದಿ ಬಲಿಯಾದ ಜರ್ಮನ್ ಜನರ ಮೇಲೆ ದೇವರು ದಯೆಯಿಡಲಿ. ನಾನೀಗ ನನ್ನ ಮಕ್ಕಳನ್ನು ಅನುಸರಿಸುವೆ" ಕೇಟೆಲನ ಅಂತಿಮೋದ್ಗಾರ. ಜೋಡ್ಲನೂ ಕೀಟೆಲನಂತೆಯೇ ಸೇನಾ ಪೋಷಾಕಿನಲ್ಲೇ ಇದ್ದ; ಈತನ ಕೊನೆಯ ಉದ್ಗಾರವೆಂದರೆ "ನನ್ನ ಜರ್ಮನಿಯೇ, ಇದೋ, ನಿನಗೆ ತಲೆಬಗ್ಗಿಸಿದೆ". ಸೈಚರ್ ಘಾತೀ ಬುಡದ ಮೆಟ್ಟಿಲು ಹತ್ತುತ್ತಿದ್ದಾಗ -'ಹೈಲ್ ಹಿಟ್ಲರ್'! ಎಂದು ಘೋಷಿಸಿದ್ದ. ಕಾಲಡಿ ತಪ್ಪುವ ಮೊದಲು ಮುಖಕ್ಕೆ ಕಪ್ಪು ಮುಸುಕು ಬಿದ್ದೊಡನೆ ಅದರೊಳಗಿಂದಲೇ "ಜಿಡಲೆ, ನನ್ನ ಪ್ರಿಯತಮೆ ಜತ್ತಿಯೇ!" ಎಂದು ಕೂಗಿಕೊಂಡ.

ಕಾಲ್ಟೆನ್‌ಬ್ರನ್ನೆರ್ ಘಾತೀಕಂಭದ ಸಮೀಪ ಬರುವ ವರೆಗೂ ನಿದ್ದೆಗಣ್ಣಲ್ಲೇ ಇದ್ದ ಹೊರತು ಎಳ್ಳಷ್ಟು ಚಿಂತೆ ತೋರಿಸಿರಲಿಲ್ಲ. 'ಕೊನೆಯ ಮಾತೇನಾದರೂ ಇದೆಯೆ?' ಎಂಬ ಪ್ರಶ್ನೆಗೆ ಅತ್ಯಂತ ಮೃದುವಾಗಿ 'ಹೌದಯ್ಯ' ಎನ್ನುತ್ತಾ 'ನಾನು ಸಂತೋಷಪೂರ್ವಕ ಜರ್ಮನಿಯ ಸೇವೆ ಮಾಡಿದೆ. ಜರ್ಮನಿಗೆ ಔಧಾನ್ಯವೊದಗಲಿ' ಎಂದು ಬಿಟ್ಟ. ಇಂದೇ ಒಂದು ಶಬ್ದ ವಾಡದೆ, ಯಾವ ಧಾರ್ಮಿಕ ವಿಧಿಯನ್ನೂ ನಡೆಸಲು ಬಿಡದೆ ನಿಶ್ಚಿಂತೆಯಿಂದ ಮಡಿದವ ನಾಸ್ತಿಕ ರೋಸೆನ್‌ಬರ್ಗ್. ಹಾನ್ಸ್ ಫ್ರೆಂಕ್ ನಗುತ್ತಲೇ ಒಳಗೆ ಬಂದಿದ್ದ; ಹೆಸರು ಹೇಳುವಾಗಲೂ ಘಾತೀ ಉರುಳಿನ ಬುಡದಲ್ಲಿ ನಿಂತಾಗ ಕೊಡಾ ಅವನ ಮುಖದಿಂದ ನಗೆ ಸೂಸುತ್ತಿತ್ತು. ಘಾತಿಯ ನಾನಿಧ್ಯದಲ್ಲಿ 'ದೇವರು ನನ್ನನ್ನು ಮಮತೆಯಿಂದ ಸ್ವಾಗತಿಸಲಿ'ಎಂದು ನಗು ಮೊಗದಿಂದಲೇ ಹೇಳಿದ್ದನಲ್ಲದೆ ಜೈಲಿನಲ್ಲಿ ತನ್ನನ್ನು ಉಪಚರಿಸಿದವರಿಗೆ ಧನ್ಯವಾದ ಕೊಟ್ಟೇ ಘಾತಿಗೇರಿದ. ಸ್ಕಿಕನ ಮರ್ಜಿಯೇ ಪ್ರತ್ಯೇಕ. ಅವ ಅಲ್ಲಿದ್ದವರನ್ನೆಲ್ಲಾ ಸಗರ್ವಪೂರ್ವಕ ತಿರಸ್ಕಾರದೃಷ್ಟಿಯಿಂದ ನೋಡುತ್ತಾ ಬರುತ್ತಿದ್ದ ಬಲವಾಗಿ ಉಗುಳಿದ್ದ. ಪಹರೆಗಾರರೊಡನೆ ಸಿಡಿಗುಟ್ಟುತ್ತಾ ಮೇಲೇರಿ ಸುತ್ತಲೂ ದರ್ಪ ದೃಷ್ಟಿ ಬೀರಿ ಆಕಾಶಕ್ಕೆ ನೋಡಿ 'ನನ್ನ ಪವಿತ್ರ ಜರ್ಮನಿ ಚಿರಂಜೀವಿಯಾಗಲಿ' ಎಂದು ಕೊನೆಯ ಘರ್ಜನೆ ಕೊಟ್ಟೊಡನೆ ಅವನ ಮುಖಕ್ಕೆ ಕರಿಪರದೆಬಿತ್ತು. ಸೈಚರನೊಡನೆ ಪಥ್ಯತಿಯಂತೆ ಹಸರು ಕೇಳಿದವಗೆ ಪ್ರಥಮ ಬಾರಿ 'ನನ್ನ ಹೆಸರು! ಅದು ನಿಮಗೆ ಗೊತ್ತಿದೆ" ಎಂದಿದ್ದ. ಆದರೆ ಎರಡನೇ ಬಾರಿಗೆ 'ಆಗಲಿ; ಜೂಲಿಯನ್ ಸೈಚರ್"ಎಂದ. ವಿಧಾಯ ವಂದನೆ ಸಲ್ಲಿಸಲು ಕೈಯೆತ್ತಬೇಕೆಂದು ಸೈಚರ್ ಪ್ರಯತ್ನಿಸಿದ; ಆದರೆ ಕೋಳವಿದ್ದುದರಿಂದ ಆಗಲಿಲ್ಲ. ಆವನ ಕೊನೆಯ ಉದ್ಗಾರವೆಂದರೆ 'ಇನ್ನು ದೇವರ ಕೆಲಸ. ಬೊಲ್ಶೆವಿಸ್ಟರು ನಿಮಗೆ ಗತಿ ಕಾಣಿಸಲಿದ್ದಾರೆ. ನಾನು ನನ್ನ ತಂದೆಯನ್ನು ಸೇರುತ್ತೇನೆ' ಎಂಬುದೇ. 'ದೇವರು ಜರ್ಮನಿಯನ್ನು ರಕ್ಷಿಸಿ ಮತ್ತೊಮ್ಮೆ ಅದನ್ನು ಮಹಾ ರಾಷ್ಟ್ರಮಾಡಲಿ. ದೇವರು ನನ್ನ ಕುಟುಂಬವನ್ನು ರಕ್ಷಿಸಲಿ"— ನಾವುಕೆಲನ ಕೊನೆಯ ಉದ್ಗಾರ. "ಈ ಘಾತಿಯೇ ಎರಡನೇ ಮಹಾಯುದ್ಧದ ಕೊನೆಯ ದುರಂತವಾಗಲೆಂದು ನನ್ನಾಶೆ. ನನಗೆ ಜರ್ಮನಿಯ ಮೇಲೆ ವಿಶ್ವಾಸವಿದೆ. ದ್ವಿತೀಯ ಜಾಗತಿಕ ಯುದ್ಧದ ವಾತಾವರಣ ಜನತೆಯ ನಡುವೆ ಒಪ್ಪಂದ ಮತ್ತು ಶಾಂತಿಯನ್ನು ನಿರ್ಮಿಸಲಿ" ಎಂದಿದ್ದ ಸೈಸ್ ಇಂಕ್ವಾರ್ಟ್.

ಹೀಗೆಯೇ ಹತ್ತು ಮಂದಿಯೂ ಸಮಾಪ್ತಿಗೊಂಡರು. ಘಾತಿಗೆ ಕೊಡುವವರಿಗೆ ಮಧ್ಯೆಮಧ್ಯೆ ಸಿಗರೇಟ್ ಸೇದುವ ನಿರಾಮಯವಿತ್ತು. ಎಲ್ಲಾ ಹೆಣಗಳನ್ನೂ ಗುಪ್ತ ಮಿಲಿಟರಿ ಗಾಡಿಯಲ್ಲಿ ತುಂಬಿಸಿ ಜರ್ಮನಿಯ ಬಂದರಪ್ರದೇಶಕ್ಕೊಯ್ಯಲಾಗಿದೆ. ಸ್ಥಳ, ವಿವರ ವಾರಿಗೂ ಗೊತ್ತಾಗದ ರೀತಿಯಲ್ಲಿ ಸಮುದ್ರದಡಿ ಹುಗಿಯುವ ವ್ಯವಸ್ಥೆ ಮಾಡಿದ್ದಾರೆಂದು ವಾರ್ತೆಯಿದೆ.

ಮುಂಜಾನೆಯ ವರೆಗೂ ನೂರೆಂಬರ್ಗ್ ರಸ್ತೆಯಲ್ಲಿ ಆ ದಿನ ಜನ ಸಂಚಾರ ವಿರಲಿಲ್ಲ. ಘಾತೀ ನಡೆದ ವರ್ತೆಯನ್ನು ಕಾಯುತ್ತಾ ಕೆಲವು ಅಧಿಕಾರಿಗಳು ಇಡೀ ರಾತ್ರೆ ಎಚ್ಚರವಿದ್ದರು. ಪ್ರಾತಃ 4-50ರ ಇಗರ್ಜಿ ಘಂಟೆ ಬಾರಿಸಲ್ಪಟ್ಟಾಗ ಇದು ಮರಣ ಘಂಟೆಯೆಂದೇ ಆವರ ಭಾವನೆ. ಎಲ್ಲವೂ ಘಂಟೆ 2-45ರೊಳಗೆ ಮುಗಿದು ಹೋದುದು ಯಾರಿಗೂ ಗೊತ್ತಿಲ್ಲ.

ಆದರೆ ಮುಗಿಯಿತು- ಜರ್ಮನಿ, ಆದರ ನಾಯಕರು, ಆದರ ಭವಿಷ್ಯ, ಮತ್ತು ಪರೋಟ್ಟಗೆ 'ಸೋತು ಸೆರೆಸಿಕ್ಕಿದವರನ್ನು ರಕ್ಷಿಸಬೇಕು' ಎಂಬ ವಾದ ಕೂಡಾ!

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ವಿದ್ಯಾರ್ಥಿಲೋಕಕ್ಕೆ ಸಂಬಂಧಿಸಿದ ಶಕ್ಯಾಶಕ್ಯಾರುಗಳೂ ಪ್ರಕಟವಾಗುತ್ತವೆ.

ವಾರ್ಷಿಕ ಚಂದಾ ರೂ. 2-0-0 ಮಾತ್ರ.

ಬೈಂಡು ಮಾಡಿದ ಪ್ರತಿಯೊಂದು ಸಂಪುಟಕ್ಕೆ ರೂ. 2½/-

ಹೆಚ್ಚಿನ ವಿಚಾರಕ್ಕೆ ಬರೆಯಿರಿ—
ಬಾಲಚಂದ್ರ ಆಫೀಸು, ಉಡುಪಿ

ಧಾತುಪುಷ್ಟಿ ಲೇಹ

ಇದುಬಲವರ್ಧನೆಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ ಧಾತುಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುತ್ತಿದ್ದು, ಮಲಬದ್ಧತೆ, ಒಳಜ್ವರ,ಇವು ಗಳಿಸ್ಥೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು. ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕಫ್ಯ, ಪಿತ್ತ, ಉಬ್ಬಸ, ಪ್ರಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಸುತ್ತು ಮುಸುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಮಹಾಮಧನಕಾಮೇಶ್ವರೀ ಲೇಹ

(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು.)

ನರಗಳ ಪುತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ನುಲಬದ್ಧತೆ, ಬೆನ್ನುನೋವು, ಬಾಯು ಉದ್ರೇಕ ಮೊದಲಾದುವೆಗಳನ್ನು ಶೀಘ್ರಗುಣವಾಡಿಸಿ, ರಕ್ತವ್ಯಾದ್ಧಿಯನ್ನು ಉಂಟುಮಾಡುವುದು.

ರಾತ್ಕು, 1ರ 10-0-0, ½ ರಾತ್ಲು 5-4-0, ¼ ರಾತ್ಲು 2-12-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು

ಎಲ್ಲಾ ನವೂನೆಯ ಔಷಧಿಗಳೂ ದೊರೆಯುತ್ತವೆ. ಕ್ಯಾಲೆಸಂಗ್ರಿ ಬರದಲ್ಲಿ ರೋಗಕ್ಕೆ ತಕ್ಕಹಾಗೆ ಔಷಧಿ ರವಾನಿಸಲಾಗುವುದು. (1) ಉಡುಪಿ ಏಜಂಟರು:—ನವಭಾರತ ಬುಕ್ ಡಿಪೊ, (2) ಬೊಂಬಾಯಿ ಏಜೆಂಟರು:- ಸುಪ್ರೀಮಲ್ ಸೇಲ್ಸ್‌ಗರ್ಲ್ಸ್, ಕೆಮಿಸ್ಟ್, 183, ಸುಪಾರಿಬಾಗ್ ರೋಡ್, ಡಿ. ಐ. ಪಿ ರೈಲ್ವೆ, ವರ್ಕ್ ಕೋಡ್ ಎಮರುಗನೆ, ಪರೇಲ್. (3) ಜನರಲ್ ಸೇಲ್ಸ್‌ಗರ್ಲ್ಸ್, ಕೆಮಿಸ್ಟ್, ಡಿ. ಐ. ಪಿ. ಮಾಟುಂಗಾ.

ಆರೋಗ್ಯ ಪಾಲನೆ—
ವರ್ಧನೆಯ ಕೈಗನ್ನಡಿ

ಅಂತರಂಗ
ಆಯುರ್ವೇದ ಸಂಚಿಕೆ

ಪ್ರತಿ ಮನೆಯಲ್ಲೂ ಇರಲೇ ಬೇಕಾದ ಪ್ರತಿಯೊಬ್ಬರೂ ಓದಲೇ ಬೇಕಾದ ಹೊಸವಾದಂಯ ವಿಶಿಷ್ಟ ಸಂಚಿಕೆ

ಬೆಲೆ ರೂ. 1-0-0. ಟ. ಖ. 0-4-0

—ಬರೆಯಿರಿ:—

1. ಅಂತರಂಗ ಆಫೀಸು, ಉಡುಪಿ.
2. ನವಭಾರತ ಬುಕ್ ಡಿಪೊ, ಉಡುಪಿ.
3. S. N. ನ್ಯೂಸ್ ಏಜನ್ಸಿ, ಉಡುಪಿ.

ಗೂರುಬ್ಬಸ ಅರ್ಥಾತ್ ಆಸ್ತಮ

ಈ ವ್ಯಾಧಿಗೆ ಜಗದ್ವಿಖ್ಯಾತವಾದ 'ಲಚ್ಚಿಬಳೂತಿ'ಯೇ ದಿವ್ಯೌಷಧ. ಒಂದೇ ಒಂದು ಡೋಸ್ಸಿ ಔಷಧಿಯನ್ನು ಹುಣ್ಣಿಮೆ ದಿನ (ಶನಿ 9-11-46) ಸೇವಿಸಿದರೆ ಎಂತಹ ಗೂರುಬ್ಬಸವೂ ನಿಂತು ಹೋಗುವುದು. ಪತ್ರವ್ಯವಹಾರ ಇಂಗ್ಲಿಷಿನಲ್ಲಿ.

Sri Janki Sewashram,
P. O. Chitrakot. U. P.

FOR LIFE ASSURANCE
CONSULT
The New Gaurdian of India Life Insrce Co, Ltd.,
(Chairman.- The Hon'ble Mr. M. CT. M Chidambaram Chettyar.)
A policy in this progressive Life Office is a good investment; its Agency is a valuable business connection.

LOCALOFFICES IN SOUTH KANARA
MANGALORE
&
KARKALA.

HEAD OFFICE
"United India Life Bldg"
Esplanade. Post Box No. 142,
MADRAS.

ಗೆನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿ ದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರು ವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಆರ್ಧತೊಲೆ ತುಪ್ಪ ದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿನಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸ ಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹೆಸರಕಾಳು, ಕುಂಬಳಕಾಯಿ, ಒಳ್ಳೆಣ್ಣ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೪ ಆಣೆ.

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗ ಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ಡಾವಣಗೇರಿ:ಡಾವಣಗೇರಿಪ್ರೇಸ್. ಪತ್ರವ್ಯವಹಾರ ಮಾಡತಕ್ಕ ವಿಳಾಸ.

ರೇವಣಸಿದ್ದಪ್ಪ ಹಾಲಪ್ಪ ಡಾವಣಗೇರಿ,
ಆಯುರ್ವೇದ ಔಷಧಾಲಯ, ಗದಗ.
Ayurveda Oushadalaya GADAG

ಬಾಣಂತಿಯರ ಸಲು ವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯ ನ್ನು ವಿಜ್ಞೈನಿ ತಯಾ ರಿಸಲ್ಪಟ್ಟ **ಅಮೋಘ ವಾವೆ ಮಧುರದ್ರವ ರಸಾಯನ.** ಅಲ್ಪ ಮೌ ಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸು ಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಜಿಸ್ಟರು ಮಾಡಲ್ಪಟ್ಟಿದೆ.)



೯ ಔನ್ಸಿನ ಬಾಟ್ಲಿಗಳು ಹೆಚ್ಚು ಕಡಿಮೆ ೪೦ದಿವಸಗಳಿಗೆ ಬರುವವು. ಅಂದರೆ ಕೇವಲ ೪ ರೂಪ್ಯಾಗಳು ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ವಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ.ವಿ.ಶಾಸ್ತ್ರಿ, ಆಯುರ್ವೇದ ಭೂಷಣ, ನಂ.೫ **ಕೊಡಿಯಾಲಬೈಲು, ದ.ಕ.**

ಸ್ಟಾಕಿಸ್ಟರು- ಡಾ| ಐ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಸ್ವರ್ಗಸ್ಥ ಡಾಕ್ಟರ್ ಎಂ. ಮಾಧವಾಚಾರ್ಯರಿಂದ
ರಚಿಸಲ್ಪಟ್ಟ ಎರಡು ಅತ್ಯುತ್ತಮ ನಾಟಕಗಳು.

ಸರಸ್ವತಿ ಬೆಲೆ **0-12-0**

ಅಲ್ಪ ಶಿಕ್ಷಣದಿಂದುಂಟಾಗುವ ಅನರ್ಥ ಪರಂಪರೆಗಳನ್ನು ಪ್ರತ್ಯಕ್ಷವಾಗಿ ಹೃದಯದ್ರಾವಕವಾದ ರೀತಿಯಲ್ಲಿ ಕಾಣಿಸುವ ಸಾಮಾಜಿಕ ನಾಟಕ.

ಮೀರಾಬಾಯಿ ಬೆಲೆ **0-10-0**

ಶ್ರೀಕೃಷ್ಣ ಪರಮಾತ್ಮನ ಆರಾಧನೆಗೆ ಸಂಸಾರಿಗಳಾಗಿರುವವರಿಗೂ ಅವ ಕಾಶವಿದೆ. ಕಪಟ, ವಿಶ್ವಾಸಘಾತಕತನ, ಅವಿಚಾರ, ಪ್ರಮಾದ ಇವು ಗಳಿಂದುಂಟಾದ ದುಃಖವನ್ನು ದೂರೀಕರಿಸಲು ಭಗವದ್ಭಕ್ತಿಯೊಂದೇ ಉತ್ತಮ ಸಾಧನವೆಂಬುದನ್ನು ಸಾರುವ ಭಕ್ತಿಪ್ರಾಧಾನ್ಯ ನಾಟಕ.

ಎರಡೂ ಪ್ರತಿ ಬೇಕಾದವರು ರೂ. 1-8-0 ಕಳಿಸಬೇಕು.

ನವಭಾರತ ಪುಸ್ತಕ ಭಂಡಾರ, ಉಡುಪಿ. ಕರಿಯರ ಪ್ರಪಂಚ, ಉಡುಪಿ

'ಇಂಗ್ಲಿಷ್ ಬರುವುದಿಲ್ಲವಲ್ಲಾ' ಎಂದು ಚಿಂತಿಸುವಿರೇಕೆ?
ಸುಲಭದಲ್ಲಿ ಇಂಗ್ಲಿಷ್ ಕಲಿಯಲು ಅನುಕೂಲವಾದ ಪುಸ್ತಕ ಇಲ್ಲಿದೆ–

ಸುಲಭದಲ್ಲಿ ಇಂಗ್ಲಿಷ್

ಶ್ರೀ. ಕೊರಡ್ಕಲರ ಇಂಗ್ಲಿಷ್ ಸ್ವಯಂಬೋಧಿನಿ

ENGLISH MADE EASY

ಈ ಪುಸ್ತಕದಿಂದ ನೂರಾರು ಜನರು ತಾವಾಗಿ ಸುಲಭದಲ್ಲಿ ಇಂಗ್ಲಿಷ್ ಕಲಿತುಕೊಂಡಿದ್ದಾರೆ.
ನೀನೇಕೆ ಕಾಲಹರಣ ಮಾಡಬೇಕು? ಇಂದೇ ಒಂದು ಪ್ರತಿಯನ್ನು ಕೊಂಡುಕೊಳ್ಳಿರಿ.

ಬೆಲೆ ಬರೇ ರೂ. 1-8-0 ಟಪ್ಪಾಲು ಖರ್ಚು 0-4-0 ಪ್ರತ್ಯೇಕ

ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

EDITED, PRINTED & PUBLISHED BY K. H. SHETTY AT THE NAVAYUGA PRESS UDIPI, S. INDIA.

Regd. No. M. 3618. Estd. 1921 ಸ್ಥಾಪನೆ. ಬೆಲೆ: 0—1—6.

ನವಯುಗ

ಚಂದಾ ವಿವರ.
(ಮುಂಗಡ)

ವರ್ಷಕ್ಕೆ ರೂ 1—8—0
6 ತಿಂಗಳಿಗೆ ರೂ. 2—8—0
6 ತಿಂಗಳಿಗಿಂತ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ.
ಮೂದರಿ ಸಂಚಿಕೆಗೆ ಬರೆಯಿರಿ.
ಮೆನೇಜರ್,
ನವಯುಗ. ಉಡುಪಿ, ದ. ಕ.



ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ.

ವರ್ಷ ೨೬ ವಾರ ೯ | FOUNDER SRI. A. B. SHETTY, M.L.A | Vol 26 No 9
ಉಡುಪಿ • 31—10—1946 • ಮಂಗಳೂರು.

ಅಮೃತಾಂಜನ.
ತಲೆನೋವು, ತಿರುಗು, ವೇದನೆ, ಉಳುಕು ಕೀಲ್ತಿಗೆ, ಗುದ್ದು, ಹಲ್ಲು ವೇದನೆಗಳಿಗೂ ಎದೆನೋವು, ಭಾಯಗಳು ಬಾಹು ಕೊಳ್ಳುವಿಕು, ಜೇಳು ವಿಷ ಮುಂತಾದ ಬೇನೆ ಸಕ್ಷಪಾತ್ರ ಮೊದಿನೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧ
REGD. ತಕ್ಷಣ ಹುಳುಕಡ್ಡಿ ಮದ್ದು ಸಹ ನಮ್ಮಲ್ಲಿ ಸಿಕ್ಕುತ್ತದೆ.
ಅಮೃತಾಂಜನ ಲಿಮಿಟೆಡ್.
ಮದರಾಸು.
ಕೊಂಬಾಯಿ ಮತ್ತು ಕಲ್ಕತ್ತ.

The best preventive in epidemics of CHOLERA
"BHUVANENDRA"
CHANDRAMAS
Also a sovereign remedy for diarrhoea, Stomachache, Vomiting and Nausea.
BHUVANENDRA PRODUCTS LTD., Katapadi.

'ಭುವನೇಂದ್ರ'
ಚಂದ್ರಮಸ್ ಸಾಂಕ್ರಾಮಿಕ ಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೂ ಜಾಗರೂಕತೆಯಿಂದ ಉಪಯೋಗಿಸಬೇಕಾದ ಅತ್ಯುತ್ತಮ ಔಷಧಿ
ದೊಡ್ಡವರಿಗೆ 40ರಿಂದ 80 ಹನಿಯಷ್ಟು, ಸಣ್ಣ ಮಕ್ಕಳಿಗೆ 10ರಿಂದ 20 ಹನಿಯಷ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸಲ ಯುಕ್ತ ಕಂಡಂತೆ ಕೊಡುವುದು
ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ
ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ ಕ
ಉಡುಪಿ ಸ್ಟಾಕಿಸ್ಟರು —ಡಾ॥ ನಾಯಕ್ಸ್ ಕೆನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಶ್ರೀ ಆರ್. ಎಸ್. ಶೆಣೈ, ರಥಬೀದಿ, ಡಾ॥ ಪಿ. ಜಿ. ಅತ್ತಾರ್ಸ್ ಫಾರ್ಮಸಿ, ಡಾ॥ ಕೆ. ಕೆ. ಪಡಿಯಾಯ್, L I M, ಡಾ॥ ವೆಂಕಟರಾವ್, ಕೊರಡ್ಡಲು, ನವಭಾರತ ಬುಕ್ ಡಿಪೊ

Life is full of Opportunities.

Life is full of events and opportunities created by God for man and by man for himself and his fellowmen. Normal life presupposes a prosperous family, a happy home, good education, congenial vocation, good relations, friends, a cultured society and also a few ups and downs to spice them all with. Have you made sure that your family too can reasonably aspire to lead such a life even in your absence?

The Canara Mutual Assurance Co., Ltd.,
HEAD OFFICE UDIPI, (S. India.)
Chief Agents for the Bombay and Madras Presidencies including States and the States of Mysore and Hyderabad
The Commercial Corporation of India, Ltd,
UDIPI (S. India)

THE
Bombay Life Assurance Company Ltd.
(ESTD·1908)
A PREMIER INSURANCE COMPANY.
New Business in 1945 - - 2,77,23,100.
KOCHIKAR BROTHERS, LTD.
(ESTD 1910)
Chief Agents for South India including
Travancore, Cochin and Mysore State
New Business in 1945 in our area — Over 5 Millions
OUR Expert advice gained by 35 years Experience is at your door FREE
Drop a card to any of our Offices at —
MADRAS * BANGALORE * MADURA * CALICUT
TRIVENDRUM * UDIPI * AND BOMBAY.

ಉಡುಪಿ ಬೋರ್ಡಿಂಗ್
ಎಂಡ್
ಲೋಜಿಂಗ್ ಮಧುರಾ.

ತಾ 8—8—1945ರಲ್ಲಿ ಜರಗಿದ ಆರನೆ ಹುಟ್ಟುಹಬ್ಬದ ಸಮಾರಂಭದ ಸಂತೋಷ ಕಾಲದಲ್ಲಿ ನಮಗೆ ಸಕಲ ವಿಧದಿಂದಲೂ ಬೆಂಬಲವಿತ್ತು ಪ್ರೋತ್ಸಾಹಿಸಿದ ಮಾಹನೀಯರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಇದಕ್ಕಿಂತಲೂ ದ್ವಿಗುಣಿತವಾಗಿ ನಮ್ಮ ಸೇವೆಯನ್ನು ಹೊಸ ವರುಷದಲ್ಲಿ ಸಲ್ಲಿಸಲು ಮಹಾಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನೀಯುವರೆಂದು ನಿರೀಕ್ಷೆ.

ಎಲ್. ನರಸಿಂಗ ರಾವ್,
ಪ್ರೊಪ್ರೈಟರ್.

—ಮಕ್ಕಳನ್ನು ಹಡೆಯುವುದು ಸಾಕು—
ಆಕಸ್ಮಿಕ ಸ್ತ್ರೀಯರಿಗೆ ಬರ್ಥ್ ಕಂಟ್ರೋಲ್ ರೋಗಗ್ರಸ್ತ ಹೆಣ್ಣುಮಕ್ಕಳಿಗೆ
ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟುಗುತ್ತಾರೆ ಆಲ್ಲದೆ ಸ್ತ್ರೀಯರ ಬಿಳಿಕೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ. ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.
ಸೂಚನೆ.—ಹರಿವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ಅಣೆ
ಮಾಲಕರು:—ಹಾಲಪ್ಪಾ ಭಕೇರಪ್ಪಾ ಡಾನಣಗೇರಿ
ಆಯುರ್ವೇದ ಔಷಧಾಲಯ. ಗದಗ-ಸಿಟಿ.
ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪುರ—ಡಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪುರ. ಚಿಕ್ಕೋಡಿಯಲ್ಲಿ—ಹುಂಬರವಾಡಿ ಸ್ಟೋರ್ಸ್. ಡಾನಣಗೇರಿ —ಡಾನಣಗೇರಿ ಪ್ರಸ್ಸ್. ಆರ್. ಎಸ್. ಕಮಲದಾನ, ಕೆಮಿಸ್ಟ, ಹಾವೇರಿ, ಬ್ಯಾಡ್ಗಿ
Ayurveda Oushadalaya, GADAG CITY.

For prompt and efficient Banking Service
Bank with
THE VIJAYA BANK LIMITED.
Head Office:—MANGALORE.
Branches Byndoor, Coondapoor, Brahmavar, Udipi, Kaup, Karkal, City-Mangalore, Kasaragod, Kanhangad, Puttur, Mercara & Bombay.

ಪಂಡಿತ ನೆಹರುಗಳ ವೀರಯಾತ್ರೆ

ಪಂಡಿತ ಜವಾಹರಲಾಲ ನೆಹರುಗಳು ಒಕ್ಟೋಬರ ತಾ. 16 ರಿಂದ 22ರ ವರೆಗಿನ ಒಂದು ವಾರವನ್ನು ಕಳೆದುಳಿದುದು ನಿಜಕ್ಕೂ ಆಶ್ಚರ್ಯಾನಂದದ ಸಂಗತಿ; ಹುಲಿಚರ್ತೆಗಳಿದ್ದ ದಟ್ಟಾರಣ್ಯದೊಳಕ್ಕೆ ನುಗ್ಗಿ ಹೊರಬಂದವನ ಹೆಗ್ಗಳಿಕೆ ಪಂಡಿತ ಜೀಯಂತಹ ಸಾಹಸಿಗೆ ಸಲಬೇಕು; ಆ ಮಲುಮತ್ತ ಕಾಡು ಮನುಷ್ಯರಿಗೂ ಹೆಸ್ತ ಲಾಭವಕೊಟ್ಟು ಸುರಕ್ಷಿತವಾಗಿ ಮರಳಿದ ಕೀರ್ತಿಯನ್ನು ಪಂಡಿತಜೀಯಂತಹ ಸರಳ ಹೃದಯಿಗೆ ವಿಾಸಲಿಡಬೇಕು; ನರಭಕ್ಷಕರ ನರ್ತನಕೂಟದೊಳಗೆ ನಗುತ್ತಾ ನುಗ್ಗಿ ನಗುತ್ತಾ ಹೊರಟು ಬಂದ ಯಶಸ್ಸು ಪಂಡಿತಜೀಯಂತಹ ಕಲ್ಯಾಣದಾಯಕನಿಗೆ ದಕ್ಕಬೇಕು! ಇನ್ನು ಬಾದಶಹಾಖಾನ್ (ಖಾನ್ ಅಬ್ದುಲ್ ಗಫರ್‌ಖಾನ್) ಮತ್ತು ಅವರ ಸಹೋದರ ಡಾಕ್ಟರ್ ಖಾನ್‌ಸಾಹೇಬರಿಗೋ! ಮೈತ್ರಿಯ ಮಾದರೀ ಮೇಲ್ಪಂಕ್ತಿಯನ್ನು ಬರೆದ ಹಲಗೆಯನ್ನು ಇಡೀ ಜಗತ್ತಿನ ದೃಷ್ಟಿಗೆ ಬೀಳುವಷ್ಟು ಎತ್ತರಕ್ಕೇರಿಸಿ ನಿಲ್ಲಿಸಿದ ಎರಡು ಮಹಾಗೂಟಗಳೇ ಅವರು—ಖಾನ್ ಸಹೋದರರು! ತಮ್ಮ ಆಸ್ತ ಅತಿಥಿಯ ಬೆವರು ಸುರಿಯಬಿಡುವ ಬದಲಿಗೆ ತಮ್ಮ ನೆತ್ತರುಸುರಿಸುವೆನೆಂದು, ಅವರ ಕೂದಲು ತುಂಡಾಗುವ ಬದಲಿಗೆ ತಮ್ಮಮೂಳೆ ಮುರಿಯಲೆಂದು, ವಜ್ರಕವಚವಾಗಿ ನಿಂತು ಪಂಡಿತರನ್ನು ಮೆರವಣಿಗೆ ಮಾಡಿಸಿ ತಂದವರೇ ಅವರು—ಖಾನ್ ಬಂಧುಗಳು! ಆ ಎಲ್ಲ ಭಾರಕವು ಈ ತ್ರಿಮೂರ್ತಿಗಳಿಗಾಗಿ ಹೆಮ್ಮೆ ಪಡಬೇಕು. ಜತೆಯಲ್ಲಿ,ಮೃತ್ಯುವಿನ ದವಡೆಯೊಳಗೆ ನುಗ್ಗುವ ಸಾಹಸ ಸ್ವತಃ ಅವರದೇ ಆಗಿದ್ದರೂ ಸುರಕ್ಷಿತವಾಗಿ ಆ ಮೂವರನ್ನೂ ಅಲ್ಲಿಂದ ಎಳೆತಂದ ಪ್ರಕೃತಿ ಮಾಟಕ್ಕೆ ಧನ್ಯವಾದ ಸಲಬೇಕು! ಭಾರತೀಯರು ತಮ್ಮ ಆದೃಷ್ಟವನ್ನು ತಾವೇ ಕೊಂಡಾಡಬೇಕು.

ಪಂಡಿತ ನೆಹರುಗಳು ಖಾನ್ ಅಬ್ದುಲ್ ಗಫರ್‌ಖಾನ್, ಡಾ। ಖಾನ್ ಸಾಹೇಬ್ ಮತ್ತಿತರ ಪರಿವಾರದೊಂದಿಗೆ ಗಡಿನಾಡಿನ ಗುಡ್ಡಗಾಡುಗಳಲ್ಲಿ ಸಂಚರಿಸಿ ಸುರಕ್ಷಿತವಾಗಿ ಮರಳಿ ಬಂದರು. ಈಟಿಯ ತಿವಿತ, ಗುಂಡಿನ ಸೊಡೆತ, ಕಲ್ಲುಗಳ ಎಸೆತಗಳ ನಡುವಿನಿಂದಲೇ ನುಗ್ಗಿ ನುಸುಳಿ ತಪ್ಪಿಸಿಕೊಳ್ಳಲಾಗುವಷ್ಟನ್ನು ತಪ್ಪಿಸಿಕೊಂಡು ತಾಗಿದಷ್ಟನ್ನು ತಡೆದುಕೊಂಡು–ಆದರೆ ನಿಶ್ಚಿತ ಕಾರ್ಯಕ್ರಮದಲ್ಲಿ ಯಾವುದನ್ನೂ ಮನ್ನಾ ಪಡಿಸದೆ–ಮರಳಿ ಬಂದರು. ಹಿಂದಿರುಗಿದಾಗ ಅವರಲ್ಲಾರೂ ಹೊಸಬ್ಯಾಗ ಇದ್ದಂತಿರಲಿಲ್ಲ ನೆಹರುಗಳ ಮುಖಕ್ಕೆ ಘಾಯವಾಗಿತ್ತು;ಖಾನ್ ಅಬ್ದುಲ್ ಗಫರ್ ಖಾನರು ಆಸ್ಪತ್ರೆಯನ್ನೇ ಸೇರಬೇಕಾಯಿತು; ಖಾನ್ ಸಾಹೇಬರಿಗೆ ಜಖಮಾಗಿತ್ತು. ನೆಹರೂ ಸರವಾರಕ್ಕೂ ಪತ್ರಿಕಾ ಪ್ರತಿನಿಧಿಗಳಿಗೂ ಘಾಯಗಳಾಗಿದ್ದುವ್ವು;ಆದರೆ ತತ್ವ ರಿಣಾಮವಾಗಿ ಆ ವೀರಾತ್ಮಗಳಲ್ಲಿ ಕೆಂಡವಾಗಿದ್ದ ಸ್ಫೂರ್ತಿ ಪ್ರಜ್ವಲಿಸಿ ಉರಿದಿತ್ತು!

ಆ ಗುಡ್ಡಗಾಡು ಪ್ರದೇಶ

ಭಾರತದ ವಾಯುವ್ಯ ಗಡಿನಾಡು ಪ್ರಾಂತ್ಯದ, ಆಫ್ಘಾನಿಸ್ಥಾನಕ್ಕೆ ಒತ್ತಾಗಿರುವ ಸುಮಾರು ಅರವತ್ತಿಯಮೈಲಿ ಸ್ಥಳವು ಸಂಪೂರ್ಣ ಗುಡ್ಡಗಾಡು ಪ್ರದೇಶ. ಅದೇ ವಜೀರಿಸ್ಥಾನ. ಡಾ। ಖಾನ್ ಸಾಹೇಬರ ಕಾಂಗ್ರೆಸ್ ಸರಕಾರದ ಆಳ್ವಿಕೆಗೆ ಈ ಭಾಗ ಸೇರುವದಿಲ್ಲ. ಅಲ್ಲಿರುವವರು ಶುದ್ಧ ಕಾಡು ಜನರು; ಕಾಡು ಮೃಗಗಳಂಥವರೇ. ಹೊರಗಿನ ಪ್ರಪಂಚಕ್ಕೂ ಅವರಿಗೂ ಸಂಬಂಧ ಅತ್ಯಲ್ಪ; ವಿದ್ಯೆ, ಸಂಸ್ಕಾರ ಮತ್ತು ಪ್ರಾಪಂಚಿಕ ವ್ಯವಹಾರಾನುಭವವೇನೂ ಇಲ್ಲದವರಿಗೆ ಸಹಜವಾದ ಕರೋರತೆ ಮತ್ತು ಮೌಢ್ಯತೆಗಳು ಈ ಜನರಲ್ಲಿ ಪರಮಾವಧಿಗೆ ಮುಟ್ಟಿದ್ದುವ್ವು. ಬ್ರಿಟಿಷರ ಬದ್ಧದ್ವೇಷಿಯಾಗಿದ್ದು–ಸಿಕ್ಕಿದರೆ ಇಂದಾದರೂ ತಲೆ ಕೆರಬೇಕಾಗಿರುವ–ಇಫಿ ಫಕೀರನಿರುವದು ಈ ಗುಡ್ಡಗಾಡು ಪ್ರದೇಶದಲ್ಲವಿತು ಕೊಂದೇ. ಅದು ತಮ್ಮ ಭಾಗವೆಂದು ಬ್ರಿಟಿಷರ ಹಿಂದುಸ್ಥಾನ ಸರಕಾರ ಹೇಳುತ್ತದಾದರೂ ಅಲ್ಲಿ ಅನಂ ವ್ಯವಸ್ಥಿತ ರಾಜ್ಯಭಾರವಿಲ್ಲ ಅಲ್ಲಿಯ ಕೆಲವು ಸಂಗಡ ನಾಯಕರಿಗೆ–ಮಾಲಿಕ್ ಮತ್ತು ಮುಲ್ಲಾಗಳಿಗೆ–ದುಡ್ಡು ಕೊಟ್ಟು ಬ್ರಿಟಿಷರು ತಮ್ಮಾಟವಾಡುತ್ತಾ ಬಂದಿದ್ದಾರೆ. ಹಿಂದೀ ಸರಕಾರದ ರಾಜಕೀಯ ಖಾತೆಯ ಅಧಿಕಾರ ಕ್ಷೇತ್ರಕ್ಕದನ್ನು ಬಿಡಲಾಗಿದೆ. ಅಲ್ಲೊಬ್ಬ ಬ್ರಿಟಿಷ್ ಪೊಲಿಟಿಕಲ್ ಏಜಂಟನನ್ನೂ ಕೆಲವು ಸೇನೆಗಳನ್ನೂ ಇಟ್ಟಿದ್ದಾರೆ. ಆದರೆ ಬ್ರಿಟಿಷ್ ಅಧಿಕಾರಿಗಳಾಗಲೀ, ಶ್ರೀಮಂತ ಹಿಂದುಗಳಾಗಲೀ ಆ ಭಾಗಕ್ಕೆ ಸವಿಾಪದಲ್ಲಿ ಹೋದಾಗಲೆಲ್ಲಾ ಈ ಗುಡ್ಡಗಾಡು ಜನರಿತ್ತಿ ಕೊಂಡು ಹೋಗುತ್ತಿದ್ದರು; ಹಾಗೆ ಕಾಣೆಯಾದವರ ಪತ್ತೆಯೇ ಆಗುತ್ತಿದ್ದಿಲ್ಲ. ಬ್ರಿಟಿಷ್ ವಿಮಾನಗಳು ಅಲ್ಲಿ ಸಿಕ್ಕಾಬಟ್ಟೆ ಬೊಂಬು ಜೆಲ್ಲಿ ಪ್ರತೀಕಾರ ಮಾಡುತ್ತಿದ್ದವು; ಅಲ್ಲಿ ಇದು ವರೆಗೆ ಹಾಕಿದ ಬೋಂಬಿನ ವೆಚ್ಚ ಆಪ್ಪಿಸ್ಟಲ್ಲ; ಆದರೆ ಅದರಿಂದ ಗುಡ್ಡಗಾಡು ಜನರಿಗೆ ಆದ ಹಾನಿಯೆಷ್ಟು ಎಂಬ ಲೆಕ್ಕ ಸಿಕ್ಕಿಲ್ಲ. ಇತ್ತೀಚೆಗೆ ಒಬ್ಬ ಬ್ರಿಟಿಷ್ ಸೇನಾಧಿಕಾರಿಯನ್ನು ಅಲ್ಲಿಯವರಿತ್ತಿ ಕೊಂಡೊಯ್ದಿದ್ದರು. ಕೊನೆಗೊಂದು ದಿನ ಅತನ ಹೆಣ ಒಂದೆಡೆ ದೊರೆತಿತ್ತು. ಇದಕ್ಕೆ ಪ್ರತೀಕಾರವಾಗಿ ಆ ಭಾಗಗಳ ಮೇಲೆಲ್ಲಾ ಎಂದಿನಂತೆ ಬಲವಾದ ವಿಮಾನ ಘಾಳಿನಡೆದಿತ್ತು; ಕಾಂಗ್ರೆಸ್ ನಾಯಕರು ಕೇಂದ್ರ ರಾಷ್ಟ್ರೀಯ ಸರಕಾರ ಸ್ಥಾಪಿಸಿದೊಡನೆಯೇ ಕಾಮನ್‌ವೆಲ್ತ್ ಸಂಬಂಧ ಶಾಖೆಯ ಮಂತ್ರಿ ನೆಹರುಗಳು ಆ ಬೊಂಬು ಧಾಳಿಯನ್ನು ನಿಲ್ಲಿಸಿಬಿಟ್ಟರು. ಗಡಿನಾಡಿನ ಗಾಂಧಿ ಅಬ್ದುಲ್‌ಗಫರ ಖಾನರನ್ನು ಆ ಭಾಗಕ್ಕೆ ಪ್ರವೇಶಿಸಲು ಹಿಂದೀ ಸರಕಾರದ ರಾಜಕೀಯ ಖಾತೆ ಮೊನ್ನೆಯ ವರೆಗೂ ಒಪ್ಪಿಗೆ ಕೊಟ್ಟಿರಲಿಲ್ಲ. ಆದರೆ ಮುಸ್ಲಿಂ ಲೀಗಿನ ಪ್ರಚಾರಕರಿಗೆ ಅಲ್ಲಿಗೆ ಹೋಗಿ ಮನಸೇಚ್ಛೆ ಅಪಪ್ರಚಾರ ಮಾಡುವ ಅನುಕೂಲತೆಯಿತ್ತು. ಈ ಕಲುಷಿತ ಕ್ಷೇತ್ರವನ್ನು ಶುದ್ಧೀಕರಿಸಬೇಕೆಂಬ ಆತುರ ಖಾನ್ ಅಬ್ದುಲ್ ಗಫರ್‌ಖಾನರಲ್ಲಿ ಮೊದಲಿನಿಂದಲೂ ಇತ್ತು; ರಾಷ್ಟ್ರೀಯ ಸರಕಾರವಾದ ಈ ಸಂದರ್ಭವನ್ನು ಕಳಕೊಳ್ಳದೆ ಖಾನ್ ಗಫರ್ ಖಾನರು ನೆಹರುಗಳನ್ನಲ್ಲಿಗೆ ಆಮಂತ್ರಿಸಿದ್ದರ; ಪಂಡಿತಜೀ ಸಂತೋಷದಿಂದೊಪ್ಪಿಕೊಂಡಾಗ ಗುಡ್ಡಗಾಡುಗಳ ಗುಟ್ಟು ಗೊತ್ತಿದ್ದ ಗಡಿನಾಡಿನ ಗವರ್ನರರು ಥಿಲ್ಲಿಗಾಗಮಿಸಿ ನೆಹರುಗಳು ಆ ಭಾಗಗಳಲ್ಲಿ ಸಂಚರಿಸುವದಪಾಯಕರ ಎಂದು ತಿಳಿಸಿದ್ದರು. ಹೋಗಬಾರದೆಂದು ವೈಸರಾಯರೂ ತಡೆದಿದ್ದರು. ಆದರೆ ಕರ್ತವ್ಯ ಪರಾಙ್ಮುಖರಾಗಲು ನೆಹರುಗಳೊಪ್ಪಲಿಲ್ಲ; ಖಾನ್ ಸಹೋದರರೂ ಕೇಳಲಿಲ್ಲ. ಪಂಡಿತಜೀ ಇದೇ ತಾ. 16 ಕ್ಕೆ ನವಥಿಲ್ಲಿಯಿಂದ ಪೇಶಾವರಕ್ಕೆ ವಿಮಾನ ಮೂಲಕ ಹೊರಟೇ ಬಿಟ್ಟರು. ಅಲ್ಲಿ ಮುಸ್ಲಿಂ ಲೀಗಿನವರು ಕುದಿಸಬೇಕಾದಷ್ಟು ಕುದಿಸಿ ತಯಾರುಮಾಡಿಟ್ಟಿದ್ದರು.!

ಪೇಶಾವರದಿಂದ ನವ್ಯೀರಿ ಸ್ಥಾವಕ್ಕೆ

ಪಂಡಿತಜೀ ಪೇಶಾವರದ ವಿಮಾನ ನಿಲ್ದಾಣದಲ್ಲಿಳಿಯುವಾಗ ಸುಮಾರು 5000 ಲೀಗ್ ಸ್ವಯಂ ಸೇವಕರು, ಕರಿಧ್ವಜ ಮತ್ತು 'ನೆಹರೂ ಹಿಂದೆ ಹೋಗು' ಬೊಬ್ಬೆಯೊಂದಿಗೆ ಅಕ್ರಮಿಸಿ ನಿಂತು ತಯಾರಿದ್ದರು. ಕೆಲವರ ಕೈಯಲ್ಲಿ ಎಳಡಿ ಉದ್ದದ ಈಟಿ, ಭರ್ಜಿ ಲಾಟಿ, ಕೋವಿಗಳು ಕೂಡಾ ಇದ್ದುವ್ವು. ದಾ। ಖಾನ್ ಸಾಹೇಬರು ಈ ಕ್ಯೋಥಾನೇಶಗಳ ಸಾಲಿನ ಮಧ್ಯೆ ಕಾರು ನಿಂದಿಳಿಯಬೇಕಾಗಿ ಬಂದಾಗ ಒಂದು ದೊಡ್ಡ ಭರ್ಜಿಯು ಖಾನ್ ಸಾಹೇಬರ ಪಕ್ಕದಲ್ಲಿ ನಿಂತಿದ್ದ ಪೋಲಿಸ್ ಅಧಿಕಾರಿಯ ಯುನಿಫೋರ್ಮನ್ನು ಸೀಳಿಕೊಂಡು ಖಾನ್ ಸಾಹೇಬರ ಎದೆಯತ್ತ ನುಗ್ಗಿ ಬಂತು. ಪೋಲೀಸ್ ಅಧಿಕಾರಿ ಪಿಸ್ತೂಲು ತೋರಿಸಿದೊಡನೆ ಪ್ರದರ್ಶಕರು ಹಿಂದೆ ಜಾರಿದರು. ಮಂತ್ರಿಗಳ ಕಾರುಗಳಿಗೆ ಉಗುಳಿ, ಬೈದು ಭಂಗಿಸಿ, ಹುಚ್ಚಾಬಟ್ಟೆ ವರ್ತಿಸಿದ್ದವ್ವಲ್ಲದೆ ದಾ। ಖಾನ್ ಸಾಹೇಬರ ಮುಖಕ್ಕೆನೇ ಲೀಗಿನ ಒಬ್ಬ ಒಂದೇಟು ಎರಿಸಿದ್ದ. "ಜೇರಿಯಾರೇ ಆದರೂ ಗುಂಡು ಹಾರಿಸುವ ಆಜ್ಞೆ ಕೊಡುತ್ತಿದ್ದರು. ಆದರೆ ಈ ಮಂಕರನ್ನು ಆಡಿಸುವನರು ಬೇರೆ ಎಂದು ತಿಳಿದಿರುವ ನಾನದನ್ನು ಮಾಡುವದಿಲ್ಲ" ಎಂದು ಖಾನ್ ಸಾಹೇಬರು ಮಾತು. ನೆಹರುಗಳು ವಿಮಾನ ಸಿಲ್ಯಾಣದ ಹಿಂಬಾಗಿಲಿನಿಂದ ಖಾನ್ ಸಾಹೇಬರ ಮನೆ ಮುಟ್ಟಿದಾಗ, ಪ್ರದರ್ಶಕ ಪುಂಡರ ಸಂಖ್ಯೆ ಪ್ರವಾಹವು ನೆರೆ ಬಂದಂತೆ ಹೆಚ್ಚಿ, ಕಾವಲಿಗಿಟ್ಟಿದ್ದ ಪೋಲಿಸ್ ಮತ್ತು ಮಿಲಿಟರಿ ಸಾಲೊಂದನ್ನು ಭೇದಿಸಿಕೊಂಡು ಖಾನ್ ಸಾಹೇಬರ ಮನೇ ವರಾಂಡೆಯೊಳಗೇನೇ ನುಗ್ಗಿಹೋಯಿತು. ಆದರೆ ಅಲ್ಲಿ ಪೋಲಿಸರು ಅಡ್ಡಗಟ್ಟಿ ತಿರುಗಿಸಿ ಬಿಟ್ಟೊಡನೆ ಇರುವೇ ಸಾಲಿನಂತೆ ಹೊರಟುಬಂತು.

ದಿ ಮೂಲ್ಕಿ ಬೇಂಕ್,
ಲಿಮಿಟೆಡ್.

ಗ್ರಾಮಸ್ಥರ ನಡುವೆ ಸಾಂಪತವಾಗಿ 15 ವರ್ಷಗಳಿಂದ ಡಿವೆಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಹಿತೋಪಜನವನ್ನು ಸಾಧಿಸುತ್ತಿರುವುದು.

The Moolky Bank Ltd.,
Moolky, S. K.

Greetings

This season of Deepavali
I greet you heartily,
And wish all through
New Year there be
Joy, Happiness, Prosperity.

Rao Bahadur B. S. SAWKAR, B. A. L.L. B.,
Chairman Board of Directors,
UNITED KARNATAK INSURANCE Co., Ltd.
DHARWAR.

ವಿವಿಧ ಪಾತ್ರೆಗಳು

ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳಿ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾನ್ಯ ಗಳೂ ರಮಂ ಆಗಿಯೂ ಚಿಲ್ಲರೆಯಾಗಿಯೂ ಮಾರಿಯುತ್ತವೆ.

ಕಲ್ಯಾಣ ವ್ಯಾಸಾಚಾರ್ಯ,
ಕಳಕಳಿ, ಉಡುಪಿ.

ನೆಹರುಗಳ ನೆತ್ತರು ಸುರಿಯಿತು!

ರಾತ್ರಿ ಅಲ್ಲಿಯೇ ತಮ್ಮ ಮರುದಿನ ಮುಂಜಾನೆ ಖಾನ್ ಸಹೋದರರೊಡನೆ ವಿಮಾನದಿಂದ ವಜೀರಿಸ್ತಾನದ ಮಿರಾನ್ ಶಾದ ಲ್ಲಿಳಿದರು. ಅಲ್ಲಿಯ ಬ್ರಿಟಿಷ್ ಅಧಿಕಾರಿಗಳಿಂದ ಸ್ವಾಗತ ಪಡೆದು ಮುಸ್ಲಿಂ ಮಾಲಿಕರ 'ಜಿರ್ಗಾ'ದಲ್ಲಿ ಶಾಂತಿ ಸಂದೇಶವಿತ್ತರು 'ನಾನು ಪ್ರೇಮ ಸ್ಥಾಪನೆಗೆ ಬಂದವ; ಅಧಿಕಾರ ಸ್ಥಾಪನೆಗಲ್ಲ' ಎಂದು ನೆಹರುಗಳು ಹೇಳಿದರ 'ನಿಮ್ಮ ಯಾವ ಸಂಬಂಧವೂ ನಮಗೆ ಬೇಡ' ಎನ್ನುತ್ತಾ ಆ ಗಡ್ಡಾಸಾಹೇಬರೆದ್ದು ಹೋಗಿದ್ದರು. ಅಲ್ಲಿಂದ ವಿಮಾನಮೂಲಕ ರಾಜ್ಮಾಕೆಗೆ ಹಾರಿದರು. ಇವರ ವಿಮಾನಕ್ಕೆಂದು ಗುಡ್ಡಗಾಡಿನವರು ಕೆಳಗಿನಿಂದ ಹಾರಿಸಿದ ಗುಂಡು ಮುಸ್ಲಿಂ ಲೀಗಿನ ಮುಖ ಪತ್ರಿಕೆ 'ಡಾನ್'ನ ಬಾತ್ಮೀದಾರಸಿದ್ದ ವಿಮಾನಕ್ಕೆ ಹೊಡೆಯಿತು. ಅಪಾಯವಾಗಿಲ್ಲ. ರಾಜ್ಮಾಕೆಗೆ ಇವರು ಬರುವ ಹೊತ್ತು ನೋಡಿಯೇ, ಸುಮಾರು 20 ಮೈಲು ದೂರದ 10 ಸಾವಿರ ಅಡಿ ಎತ್ತರದ ಗುಡ್ಡದಲ್ಲಿ ಥರೆ ಹೊಡೆದು ನಿಂತಿದ್ದ ಓರ್ವ ಕಾಡು ಜನರ ಸೇನಾನಿ-ಇಪ್ಪಕೀರನ ಕೆಡೆಯವ-ಅಲ್ಲಿಂದ ರಾಜ್ಮಾಕಿನ ಮೇಲೆ ಗುಂಡಿನ ಮಳೆಗರೆಯುತ್ತಲೇ ಇದ್ದ, ಆ ಗುಂಡುಗಳಾದರೋ ಆತ ಕದ್ದು ಕೊಂಡೊಯ್ದಿದ್ದ 20 ಇಂಚಿನ ಗನ್ನಿನಿಂದ ಹೊರಟವುಗಳು. ಸುಮಾರು 2ಘಂಟೆ ಇದೇ ಅವಸ್ಥೆ! ಬ್ರಿಟಿಷ್ ಗನ್ನುಗಳು ಸ್ಪತಿಯಾಗಿ ಗುಂಡು ಹಾರಿಸಹತ್ಯಿದ ಮೇಲೆಯೇ ಹೊಡೆತ ನಿಂತಿತು. ಅಲ್ಲಿಯೂ ಗುಡ್ಡಗಾಡು ಪ್ರಮುಖರ ಎರಡು 'ಜಿರ್ಗಾ' (ಆವರ ಕೂಟ)ಗಳಲ್ಲಿ ನೆಹರೂ ಮತ್ತು ಖಾನ್ ಸಹೋದರರ ಭಾಷಣಗಳಾದುವು "ನಾವು ಸ್ವತಂತ್ರರು; ನಮಗಾರ ಸಂಬಂಧವೂ ಬೇಡ. ಬೇಕಾದಾಗ ಮಿ. ಜಿನ್ನರನ್ನು ಕೇಳುತ್ತೇವೆ ಹೊರತು ನಿಮ್ಮನ್ನಲ್ಲ" ಎಂದೇ ಮೂರ್ಖ ಗಡ್ಡ ಹೊರಬು ಆಂಗುಲ ಪ್ರಮಾಣದ ತಲೆಯೂ ಇಲ್ಲದ ಮುಲ್ಲಾಗಳಮಾತು! 'ನೀವು ಸ್ವತಂತ್ರರೇ? ಬ್ರಿಟಿಷರಿಂದ ಹಣ ಪಡೆದು ಅವರಂತೆ ತಲೆಯಾಡಿಸುವ ನೀವು ಸ್ವಾತಂತ್ರ್ಯದ ಮಾತಾಡುವಾಗ ತಮಾಷೆಯಾಗುತ್ತಿದೆ' ಎಂದು ಹಂಗಿಸಿ ಬುದ್ಧಿ ಹೇಳದೆ ಅಲ್ಲಿಯಾದರೂ ನೆಹರುಗಳು ಸುಮ್ಮನಾಗಲಿಲ್ಲ ಒಮ್ಮೆ ಖಾನ್ ಸಾಹೇಬರಿಗೆ ಅವಾಚ್ಯ ಮಾತುಗಳನ್ನು ಆ ಕಾಡು ಜನರಂದಾಗ "ಜೋಕ' ನನಗೆ ಬೇಕಾದ್ದು ಹೇಳಿ, ಆದರೆ ನನ್ನ ಮಿತ್ರರಿಗೇನಾದರೂ ಅಡಿದರೆ ಕೇಳಲಾರ" ಎಂದು ನೆಹರು ಹೆದರಿಸಿದ್ದರು ಮುಲ್ಲಾಗಳು ಸಾಲು ಕಟ್ಟಿ ಜಿಂದು ಕುಳಿತುಕೊಳ್ಳುವದು- ಬಾಯಿಪಾರ ಕಲಿತುದನ್ನಾಡುವದು- ಕೊನೆಗೆ ನಿಷೇಧ ಸೂಚನೆಯಂದು ಎದ್ದ ಕೆಂಗುವದು- ಎಲ್ಲಾ ಜಾಗಗಳಲ್ಲೂ ನಡೆಯುವದೇ. ಅಲ್ಲಿ 2000 ಹಿಂದೀ ಸೋಲ್ಜರಿಂಗೆ ದೇಶಭಕ್ತಿಯ ವೀರ ಸಂದೇಶವನ್ನು ನೆಹರು ಕೊಟ್ಟಿದ್ದರು ಸುಮಾರು 50 ಮಂದಿ ಯಥಾರ್ಥವಾದಿ ಕಾಡು ಪ್ರಮುಖರು ಅತಿ ಪ್ರಯಾಸದಿಂದ ನೆಹರುಗಳನ್ನು ಸಂದರ್ಶಿಸಿ ವಿಶೇಷತೆ ಪ್ರದರ್ಶಿಸಿದ್ದರು. ಆವತ್ತಿದ್ದ ಇಪ್ಪಿ ಫಕೀರನ ಕಡೆಗೆ ನೆಹರು ಕಡೆಯ ದೂತನೊಬ್ಬನನ್ನು ಕಳುಹಲಾಗಿತ್ತು; ಆತ ಮಗಲಬರಲೇಇಲ್ಲ ನೆಹರುಗಳ ರಾಮ್‌ಝಾಕ್ ಪ್ರಯಾಣದಲ್ಲಿ ವಿನೋದಕ್ಕೂ ಕೊರತೆಯಿರಲಿಲ್ಲ. ಮಿರಾನ್‌ಶಾದಿಂದ ಪಂಡಿತನೆಹರುಗಳ ವಿಮಾನ ಆಕಾಶಕ್ಕೇರಿದ ಮೇಲೆ ಇತ್ತೀಜೆಗೆ ಬೋಂಬು ಧಾಳಿ ನಡೆದಸ್ಥಳ ನೋಡಬೇಕು ಎಂದು ನೆಹರುಗಳು ಸಾರಥಿಗಂದರು. ಆ ಸ್ಥಳದ ಮೇಲೆ ಸುತ್ತಾಡಿಬರುವಾಗ 15ಮಿನಿಟು ತಡವಾಯಿತು. ಹೀಗಾಗಿ ಹಿಂದಿನಿಂದ ಹೊರಟಿದ್ದ ಪಂಜಾಬಿನ ಪತ್ರಿಕಾ ಪ್ರತಿನಿಧಿಯೊಬ್ಬನ ವಿಮಾನ ಮುಂದಾಗಿ ರಾಮ್‌ಝಾಕ್ ನಿಲ್ದಾಣದಲ್ಲಿಳಿಯಿತು. ಆ ಪತ್ರಿಕಾವಾಲ ನಖಶಿಖಾಂತ ಖಿದ್ದರ್ ಥರಿಸಿದ್ದ. ಇವನನ್ನೇ ನೆಹರುವೆಂದು ಭಾವಿಸಿ, ಅಲ್ಲಿದ್ದ ಬ್ರಿಗೇಡಿಯರ್ 'ಎಟ್ಟಿನ್ಸನ್' ಆಗಿನಿಂತು, 'ಸುರಕ್ಷಿತಾಗಮನವೇ, ಸರ್?' ಎಂದು ಪ್ರಶ್ನಿಸಿ ಮರ್ಯಾದ ಸಲ್ಲಿಸಿ ಕರದೊಯ್ಯಲು ಸ್ವಾರಂಭ! ಗೊಂದಲಕ್ಕೀಡಾಗದ ಪತ್ರಿಕಾವಾಲ ತಾನಾರೆಂಬುದನ್ನು ಕೂಡಲೇ ತಿಳಿಸಿ ನಗೆಯನ್ನೆಬ್ಬಿಸಿದ ದಕ್ಷಿಣ ವಜೀರಿಸ್ತಾನದ ರಾಜಧಾನಿ 'ವಾನಾ'ದಲ್ಲಿಯೂ ಸೈನಿಕರಿಗೆ ನೆಹರು ಸಂದೇಶವಿತ್ತರು. ರಾಷ್ಟ್ರೀಯ ಸರಕಾರದ ನಾಯಕನ ವೀರ ಭಾಷಣಾಂತ್ಯದಲ್ಲಿ ಸೋಲ್ಜರರು 'ಜೈ ಹಿಂದ್' ಘೋಷವನ್ನೆಬ್ಬಿಸಿದಾಗ ನೆಹರೂಗೂ ಪ್ರತಿಯಾಗಿ 'ಜೈ ಹಿಂದ್' ಕೊಟ್ಟರು ವಾನಾದ ಡೇರೆಯ ಮೇಲೆ ಲೀಗ್ ಪುಂಡರಿಂದ ನಡೆದ ಪಾಷಾಣ ವರ್ಷದಿಂದಾಗಿ ಅಲ್ಲಿಯ ಜಿರ್ಗಾಕಾರ್ಯಕ್ರಮವನ್ನು ರದ್ದು ಪಡಿಸಬೇಕಾಯಿತು.

ಕೆಲನಿಡೆಯ ಅಪೂರ್ವ ಸ್ವಾಗತ

ಆ ಗುಡ್ಡಗಾಡು ಪ್ರದೇಶಗಳಲ್ಲಿ ನೆಹರು ತನ್ನ ಆಕಾಶ ಪ್ರಯಾಣದಲ್ಲಿ ಹೆಚ್ಚಾಗಿ ಇಬ್ಬರೇ ಕುಳಿತುಕೊಳ್ಳುವ ಸಣ್ಣ ವಿಮಾನದಲ್ಲೇ ಹಾರಾಡಿದ್ದರು ಮೈಗಾನಲಿಗೆ ಬೇರೆರಡು ವಿಮಾನಗಳಿರುತಿದ್ದುವು. ಹೆಚ್ಚಿನ ಕಡೆಗಳಲ್ಲಿ ವಿಂಗ್ ಕಮಾಂಡರ್ ಮೆಹರ್ ಸಿಂಗರು ಅವರ ಸಾರಥಿಯಾಗಿದ್ದರು. ಖಾನ್ ಸಹೋದರರೂ ಇತರ ಪರಿವಾರವೂ ಅವರನ್ನು ಅನುಸರಿಸಿ ಬರುತಿತ್ತು. ಭೂ ಸಂಚಾರದಲ್ಲಿ ನೆಹರು ಮತ್ತು ಖಾನ್ ಸಹೋದರರು ಒಂದೇ ಕಾರಿನಲ್ಲಿರುತಿದ್ದರು ಆ ಕಾರಿನ ಮೈಗಾವಲಿಗೆ ಸಶಸ್ತ್ರ ಮಿಲಿಟರಿ ಕಾರು ಲೋರಿಗಳಿದ್ದರೂ ನೆಹರುಗಳು ಆ ರಕ್ಷಣೆಯನ್ನಾಧರಿಸಿರದೆ ಆಗಾಗ ಮುಂಧಾವಿಸುವದಿತ್ತು ಹೋದಲ್ಲೆಲ್ಲ ಬಲ್ಲ ಕಲ್ಲು ಕೋವಿಗಳ ಸ್ವಾಗತವಿದ್ದುದನ್ನೂ, ಅವು ನಿಷ್ಫಲವಾದಂತೆ ವಿರೋಧಿಗಳು ಹೆಚ್ಚೆಚ್ಚಾಗಿ ಸಜ್ಜುಗುತ್ತಿದ್ದುದನ್ನೂ ಕಂಡ ಹಿತಚಿಂತಕರು ನೆಹರು ಪ್ರಯಾಣವನ್ನು ಮಧ್ಯದಲ್ಲೇ ನಿಲ್ಲಿಸಬೇಕೆಂದು ಒತ್ತಾಯ ಹಾಕಿದ್ದುಂಟು ಆದರೆ ತಪ್ಪ ಪೂರ್ವ ನಿಶ್ಚಿತ ಕಾರ್ಯಕ್ರಮದಲ್ಲಿ ಯಾವುದನ್ನೂ ಬಿಡದೆ ಮುಗಿಸಿಯೇ ಮರಳುವೆನೆಂದು ಪಂಡಿತಜೀ ಹಠ ಹಿಡಿದಿದ್ದರು. ದಿನದ ಕಾರ್ಯಕ್ರಮ ಮುಗಿದೊಡನೆ ರಾತ್ರಿ ವೇಶಾವರಕ್ಕೆ ಮರಳಿ ಮರುದಿನ ಪುನಃ ಹೊರಡುವ ಕ್ರಮವಿತ್ತು ಬಾದರಹಾ ಖಾನರ ವರ್ಚಸ್ಸಿದ್ದ ಕಡೆಗಳಲ್ಲೆಲ್ಲಾ ನೆಹರುಗಳಿಗೆ ಅಪೂರ್ವ ಸ್ವಾಗತ ದೊರೆತಿತ್ತು. ವಾನಾದ ಆಸ್ಪತ್ರೆಯಲ್ಲಿ ಮಲಗಿದ್ದ ರೋಗಿಯೊಬ್ಬನು ಅತಿ ಪ್ರಯಾಸದಿಂದೆದ್ದು ನೆಹರೂ ಕಂಠಕ್ಕೆ ತಾನು ಸಂಪಾದಿಸಿಟ್ಟಿದ್ದ ಹೂಮಾಲೆ ಹಾಕಿ 'ಇನ್ನು ಸತ್ತರೂ ಸ್ವರ್ಗ'ವೆಂದುಕೊಂಡಿದ್ದ ಟೇಂಕ್ ಎಂಬಲ್ಲಿ ತಿರುಗುತ್ತಿದ್ದಾಗಲೂ ನೆಹರು ಮತ್ತವರ ಗುಂಪಿನ ಮೇಲೆ ಕಲ್ಲಿನ ಮಳೆಸುರಿದಿತ್ತು. ಗುಂಪಿನಲ್ಲಿದ್ದ ಗಡಿನಾಡ ಎಸೆಂಬ್ಲಿ ಸದಸ್ಯ ಶ್ರೀ ಕೇವಲರಾಮರ ಸನೇತ 16 ಮಂದಿ ಜಖಂಗೊಂಡು ಮೂವರನ್ನು ಆಸ್ಪತ್ರೆಯಲ್ಲಿ ಹಾಕಬೇಕಾಯಿತು ಆದರೆ ಅಲ್ಲಿಯ ಕಂಪಂಗಿಯವರು ಅಭೂತ ಪೂರ್ವ ಸ್ವಾಗತವಿತ್ತಿದ್ದರು. ಅಲ್ಲಿಂದ ಜಾಂದೋಲಾದ ವರೆಗಿನ ಕಾಡು ಪದದಲ್ಲೆಲ್ಲಾ ಸ್ವಾಗತ ಕಮಾನುಗಳು ಕಟ್ಟಲ್ಪಟ್ಟಿದ್ದುವು ಸ್ವಾಗತ ಬೇಂಡು. ಸಂಭ್ರಮದ ಸಿಡಿಮದ್ದುಗಳಿದ್ದುವು ಜಾಂಡೋಲವ ಖಾನ್ ಸಾಹೇಬರು 7 ಮೈಲು ಮುಂದೆ ಬಂದು ಅಲ್ಲಿಯವರ ಸಂಪ್ರದಾಯ ಪ್ರಕಾರ ಮೂರು ಬಿಳಿಬಟಗರುಗಳನ್ನು ನೆಹರುಗಳಿಗೆ ಕಾಣಿಕೆ ಕೊಟ್ಟು ಸ್ವಾಗತಿಸಿದ, ಪಂಡಿತಜೀ ಬಿಗರುಗಳನ್ನು ಮುಟ್ಟಿ ಸ್ವೀಕರಿಸಿ ಆಡ್ಡಾಡಲು ಬಿಟ್ಟುಬಿಟ್ಟರು. ಅಲ್ಲಿ ಭಾರತ ರಾಷ್ಟ್ರೀಯ ತ್ರಿವರ್ಣಗಳಿಗೆ ರಾಜಯೋಗ್ಯ ಸ್ವಾಗತ ದೊರೆಯಿತು. ಎಸ್ಸಾರಿಗೂ ಪ್ರೇಮ ಸಂದೇಶಕೊಟ್ಟು ವೀರ ಸ್ಫೂರ್ತಿ ನಿರ್ಮಿಸಿ, ನೆಹರುಗಳು ತನ್ನ ಭೇಟಿ ಚಿರಸ್ಮರಣೀಯವಾಗುವಂತೆ ಮಾಡಿದರು ರಾತ್ರಿ ಗಡಿನಾಡಿನವರ ಅತ್ಯಂತ ರುಚಿಕರವಾದ ಪಿಲ್ಲಾವ್, ಮಟನ್ ಮತ್ತು ಅಪೂರ್ವ ಫಲಗಳಿಂದ ಕೂಡಿದ್ದ ಸ್ಥಂಭ್ರಮದ ಔತಣ ಸತ್ಕಾರವು ಅತಿಥಿಗಳಿಗಾಯಿತು.

ಕೈಬರ್ ಕಣಿವೆಯಲ್ಲಿ

ಪಯೋರಿಸ್ತಾನಕ್ಕೆ ಬಂದಲ್ಲಿ ಮಿಕ್ಕವರಂತೆ ನೆಹರುಗಳನ್ನೂ ಎತ್ತಿಕೊಂಡೊಯ್ದು ಬಿಡುವೆಂಬ ಹೆಂಚಿಕೆಯನ್ನು ಗುಡ್ಡಗಾಡು ಜನರು ನಡೆಸಿದ್ದರು ಆದರೆ ಈ ಕಡೆಯವರ ಮುಂಜಾಗ್ರತೆಯಿಂದದು ಫಲಿಸಲಿಲ್ಲ. ಫಲಿಸುತಿದ್ದರೆ ಭಾರತದ ಸಿಂಹ ಜೋನಿನೊಳಗಾಗತಿತ್ತು! ದಕ್ಷಿಣ ವಜೀರಿಸ್ತಾನದ ಸಂಚಾರ ಮುಗಿಸಿಕೊಂಡು ಪೇಶಾವರಕ್ಕೆ ಬರುವಾಗ ಪಂಡಿತಜೀ ಮತ್ತವರ ಪಂಗಡದ ಕದೆಗೆ ಲೋಕ ಪ್ರಸಿದ್ಧ ಖೈಬರ್ ಕಣಿವೆಯಲ್ಲಿ ಬಾ. 20ನೇ ದಿನ ಮೃತ್ಯು ಹೊಂಚುತಿತ್ತು. 'ರೈಟರ್' ವಿಶೇಷ ಬಾತ್ಮೀದಾರನಾಗಿ ನೆಹರು ಪಂಗಡದೊಂದಿಗೆ ಸಂಚರಿಸಿದ್ದ ಡಂಕಾನ್ ಹೂಪರನು ಆ ದೃಶ್ಯವನ್ನು ಹೀಗೆ ವರ್ಣಿಸಿದ್ದಾನೆ "ಆ ಘಟನೆ ಮಿಂಚು ವೇಗದಿಂದ ನಡೆದು ಹೋಯಿತು. ಲೇಂಡಿಕೋಟನಿನಿಂದ ನೆಹರುಗಳು ಜೊಂಟೊಡನೆ ಕಣಿವೇ ಕಾವಲುಗಾರರಿಗೆ ರಕ್ಷಣಾ ಸಿದ್ಧತೆಯ ಸೂಚನೆ ಕೊಡಲು 8 ಗುಂಡುಗಳನ್ನು ಹಾರಿಸಿದ್ದರು ನಾವು— ಸ್ವದೇಶೀ ಮತ್ತು ವಿದೇಶಿ ಪತ್ರಿಕಾದಾರರೂ ಇತರ ನೆಹರು ಪಂಗಡ ಪೂ-ಮುಂದಾಗಿ ಹೊರಟವು. ನೆಹರು ಮತ್ತು ಖಾನ್ ಸಹೋದರರು ಹಿಂದಿನ ಕಾರಿನಲ್ಲಿ ಬರುತಿದ್ದರು. ಈ ದಳದ ಮುಂಭಾಗದಲ್ಲಿದ್ದ ನನ್ನ ಕಾರಿನ ಹಾದಿ ಸುಮಾರು 3000ದಿಂದ 600 ವರೆಗಿದ್ದ ಕರೋರ ಕಾಡು ಜನರಿಂದ ಅಡ್ಡಗಟ್ಟಲ್ಪಟ್ಟುದನ್ನು ಕಂಡೆ. ಕಲವರ ಕೈಯಲ್ಲಿ ಕರಿಧ್ವಜ, ಇನ್ನು ಕೆಲವರ ಕೈಯಲ್ಲಿ ಆಯುಧಗಳಿದ್ದುವು. ಎಲ್ಲರೂ ಅತ್ಯಂತ ಕ್ರೋಧಾವೇಶದಿಂದ 'ನೆಹರು ಹಿಂದೆ ಹೋಗು' ಎಂದು ಬೊಬ್ಬಿಡುತ್ತಿದ್ದರು. ನನ್ನ ಡ್ರೈವರು ಹೆದರಿ ಕಾರನ್ನು ಹಿಂದಿರುಗಿಸಹತ್ಯಿದ, ಆದರೆ ನಮ್ಮ ರಕ್ಷಣಾ ಸೈನಿಕರಿದ್ದ ಲೋರಿ ಅದಕ್ಕಡ್ಡ ಬಂದಿತು. ಆ ಕರೋರ ಕಾಡುಜನರ ಓರ್ವ ಮುಂದಾಳು ನನ್ನ ಕಾರಿನೊಳಗೆ ತಲೆಹಾಕಿ ಕೆಂಗಣ್ಣಿನಿಂದ ಹಿಂದೆಮುಂದೆ ನೋಡಿದ. "ನೆಹರು ಎಲ್ಲಿದ್ದಾನೆ?" ಎಂದ. ನಾನು ಮತ್ತು ಮತ್ತೊಬ್ಬ ಅವರನ್ನು ಸಮಜಾಯಿಸಬೇಕಾದು ಕಾರಿನಿಂದಿಳಿದೆವು. ತೂಡಲೇ ಎಲ್ಲಾ ಕಡೆಗಳಿಂದಲೂ ಕಲ್ಲುಗಳ ಸುರಿಮಳೆಗೆ ಪ್ರಾರಂಭ; ದೊಡ್ಡದೊಡ್ಡ ಬಂಡೆಗಳೇ ಹಾರಿಬರುತಿದ್ದುವು ನಾನು ದಿಕ್ಕುತೋಚದೆ, ಸಮೀಪದ ಒಂದು ಕಾರಿಗೆ ನುಗ್ಗಿಬಿಟ್ಟೆ, ಆಗ ನನಗದು ನೆಹರು ಕಾರೆಂದು ತಿಳಿದಿರಲಿಲ್ಲ. ಒಂದು ದೊಡ್ಡ ಕಲ್ಲು ಕಿಟಕಿಯನ್ನೊಡೆದುಕೊಂಡು ನನ್ನ ತಲೆ ಬಿಮಿಗೆ ಬಡಿಯಿತು; ಗ್ಲಾಸು ತುಂಡುಗಳು ಸಿಡಿದುಬಂದು ಬೀಳುತ್ತಿದ್ದುವು ನನ್ನ ಮನೆ ಗಂಟಿಗ ಘಾಯವಾಯಿತು. ನಾನು ತಿರುಗಿ ನೋಡುವಾಗ ಹಿಂಗಡೆಯ ಸೀಟಿನಲ್ಲಿ ನೆಹರು, ಗಫರ್ ಖಾನ್, ಖಾನ್ ಸಾಹೇಬರನ್ನು ಕಂಡೆ. "ಒಳಗೆ ಬನ್ನಿ, ಗಾಬರಿಬೇಡ ಏನೂ ಆಗುವಂತಿಲ್ಲ" ಎಂದು ನನ್ನನ್ನು ನೆಹರು ಮಂಚಿನ್ನಿತ ವದನದಿಂದ ಆಮಂತ್ರಿಸಿದ್ದರು. ಅಕ್ಷಿಣ

(ನಾನೇ ಪುಟ ನೋಡಿರಿ)

ಇಂದ್ರಭವನ ಕಾಫಿ ಹೊಟೆಲ್
ಬಲ್ಮಠ * * * * ಮಂಗಳೂರು.
ಹೊಸ ವ್ಯವಸ್ಥೆ—ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳು—ವಿದ್ಯುದ್ದೀಪ, ರೇಡಿಯೋಗಳ ಆಧುನಿಕ ಸಲಕರಣೆ. ಉತ್ತಮ ಉಪಚಾರ.
ಟೀಕಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.
ಬಿ. ಬಾಬು ಶೆಟ್ಟಿ
Indra Bhavan Coffee Hotel,
Balmatta Road, Mangalore.

ನಡುಗಾಲ ಸರಕಾರದ ಪುನರ್ರಚನೆ

ಇದೇ ತಾ. 25ರಲ್ಲಿ ಪುನರ್ನಿರ್ಮಿತ ನಡುಗಾಲ ಸರಕಾರದ ಸದಸ್ಯರೊಳಗೆ ಖಾತೆಗಳು ಹಂಚಲ್ಪಟ್ಟವು. ತಾ. 26ರಲ್ಲಿ ಹೊಸತಾಗಿ ಸೇರ್ಪಡೆಗೊಂಡ ಲೀಗ್ ಸದಸ್ಯರು ಪ್ರತಿಜ್ಞಾಬದ್ಧರಾದರು. ಅಗಲೇ ಮಂತ್ರಿಮಂಡಲದ ಪ್ರಥಮ ಸಭೆಯೊಂದು ನಡೆಯಿತು. ಅಲ್ಲಿಂದ ಸಮ್ಮಿಶ್ರ ನಡುಗಾಲ ಸರಕಾರದ ಕಾರ್ಯಾರಂಭ.

ಯಾರು ಏನು? ಯಾವುದು?

ಸದ್ಯದ ಕೇಂದ್ರ ಸರಕಾರದ ಅಧಿಕಾರ ವ್ಯವಸ್ಥೆ ಹೀಗಿದೆ:—

ಪಂಡಿತ ನೆಹರು—ವಿದೇಶ ಮತ್ತು ವ ಸಾಹತು ಸಂಬಂಧ ಖಾತೆ.

ಸರ್ದಾರ್ ವಲ್ಲಭಾಯಿ—ಗೃಹ ಮತ್ತು ಸುದ್ದಿ ಹಾಗೂ ಆಕಾಶವಾಣಿ ಖಾತೆ.

ಡಾ. ರಾಜೇಂದ್ರ ಪ್ರಸಾದ್—ಆಹಾರ ಮತ್ತು ವ್ಯವಸಾಯ ಖಾತೆ.

ಸರ್ದಾರ್ ಬಲದೇವ್ ಸಿಂಗ್—ರಕ್ಷ ಣಾ ಖಾತೆ.

ಮಿ. ಆಸಫ್ ಅಲಿ—ವ್ಯಾಪಾರ ವಹ ವಾಟು ಮತ್ತು ರೈಲ್ವೇ ಖಾತೆ.

ಡಾ. ಜೋನ್ ಮಥಾಯಿ—ಕೈಗಾರಿ ಕೋದ್ಯಮ ಮತ್ತು ಸರಬರಾಯಿ ಖಾತೆ.

ಶ್ರೀ. ಸಿ. ರಾಜಗೋಪಾಲಾಚಾರಿ—ವಿ ದ್ಯೆ ಮತ್ತು ಕಲೆ.

ಶ್ರೀ. ಭಾಭಾ—ಕೆಲಸ, ಗಸ ಮತ್ತು ವಿದ್ಯುಚ್ಛಕ್ತಿ ಖಾತೆ.

ಮಿ. ಜಗಜ್ಜೀವನ ರಾಮ್—ಕೂಲಿ ಗಾರ ಖಾತೆ.

ಮಿ.ಲಿಯಾಖತ್ ಅಲಿಖಾನ್—ಹಣ ಕಾಸು ಖಾತೆ.

ಮಿ. ಐ. ಐ. ಚಂದ್ರಿಗಾರ್—ವ್ಯಾಪಾ ರ ಖಾತೆ

ಮಿ. ಅಬ್ದುರ್ ರಾಬ್ ನಿಸ್ತಾರ್—ವ್ಯವಹಾರ ಪಥಗಳು, ಟಪ್ಪಾಲು ಮತ್ತು ಆಕಾಶ ಖಾತೆ.

ಮಿ. ಜೋಗೇಂದ್ರನಾಥ ಮಂಡಲ್—ಕಾಯಿದೆ ಖಾತೆ.

ಮಿ. ಗಜ್ನಾಫರ್ ಅಲಿಖಾನ್—ಆರೋ ಗ್ಯ ಖಾತೆ.

ಲೀಗಿನ ವಿಧೇಯತೆ

ತಾವು ಕೇಂದ್ರ ಮಂಡಲದಲ್ಲಿ ಸಹಕಾ ರ ಸ್ಫೂರ್ತಿ ಮತ್ತು ಸೌಹಾರ್ದತೆಯಿಂದ ವರ್ತಿಸುವೆವೆಂದು ಲೀಗ್ ಪ್ರತಿನಿಧಿಗಳು ವೈಸರಾಯರ ಮೂಲಕ ಕಾಂಗ್ರೆಸಿಗೆ ಬಾ ಯ್ದೆರಿ ವಾಗ್ದಾನವಿತ್ತಿರುವರೆಂದು ತಿಳಿದು ಬರುತ್ತದೆ. ಅಂತೆಯೇ ಲೀಗು ಬ್ರಿಟಷ್ ಯೋಜನೆಗಳ ದೀರ್ಘಾವಧಿ ಸೂಚನೆಗ ಅರ್ಥಾತ್ ಘಟನಾ ಸಮಿತಿಯಲ್ಲಿ ಭಾಗ ವಹಿಸುವದಕ್ಕೆ ಒಪ್ಪಿಗೆಕೊಟ್ಟಿದೆ. ನೆಹರೂ ಮಂಡಲವು ಅದಿಯಿಂದ ಅನುಸರಿಸುತ್ತಾ ಬಂದಿದ್ದ ಮಿಶ್ರ ಜವಾಬ್ದಾರಿಯನ್ನೂ ಲೀಗ್ ಶರಪಾವಹಿಸಬೇಕಾಗಿಬಂದಿದೆ. ಪಂಡಿತ ನೆಹರುಗಳೇ ಮಂಡಲದ ಪ್ರಧಾನಿ.

ಕೇಂದ್ರ ಶಾಸನ ಸಭೆಗಳಲ್ಲಿ

ಪುನರ್ಘಟಿತ ಕೇಂದ್ರಮಂಡಲದ ಮಂ ತ್ರಿಗಳ ಮೇಲೆ ಕೂಡಲೇ ಇದ್ದಿರುವ ಹೊ ಣೆಯೆಂದರೆ ಕೇಂದ್ರ ಎಸೆಂಬ್ಲಿ ಮತ್ತು ಕೌ ನ್ಸಿಲ್ ಓಫ್ ಸ್ಟೇಟ್‌ಗಳ ಪ್ರಶ್ನೆಗಳನ್ನು ದಿ ರಿಸುವದು. ಕಾರ್ಯಭಾರ ಸಾಗಿಸುವದು.

ಕಾಂಗ್ರೆಸ್ ಬಿಟ್ಟ ಖಾತೆಗಳನ್ನು ಲೀಗ್ ಶಿರಸಾವಹಿಸಿತು.

ಎಸೆಂಬ್ಲಿ ಸಭೆಯು ಇದೇ ತಾ. 28ರಲ್ಲಾ ರಂಭವಾಗಿದೆ. 14 ಮಂತ್ರಿಗಳ ಪೈಕಿ ಪಂ ಡಿತ ನೆಹರುಗಳ ನಾಯಕತ್ವದಲ್ಲಿ9ಮಂದಿ ಎಸೆಂಬ್ಲಿಯಲ್ಲಿ ಮಂಡಿಸುವರು-ನೆಹರು, ಪ ಟೇಲ್, ಜೋನ್ ಮಥಾಯಿ, ರಾಜಗೋ ಪಾಲಾಚಾರಿ, ಆಸಫ್ ಅಲಿ, ಜಗಜ್ಜೀವನ ರಾಮ್, ಮಂಡಲ್, ಲಿಯಾಖತ್ ಅಲೀ ಖಾನ್, ಚಂದ್ರಿಗಾರ್. ಕೌನ್ಸಿಲ್ ಓಫ್ ಸ್ಟೇಟ್‌ನಲ್ಲಿ ಉಳಿದ ಐಮಂದಿ-ಅಬ್ದುಲ್ ರಾ ಬ್ ನಿಸ್ತಾರ್, ಭಾಭಾ, ರಾಜೇಂದ್ರ ಪ್ರ ಸಾದ್, ಗಜ್ನಾಫರ್ ಅಲಿ, ಸರ್ದಾರ್ ಬಲ ದೇವ್ ಸಿಂಗ್ ಮಂಡಿಸುವರು. ಇಲ್ಲಿಯ ನಾಯಕತ್ವ ಅಬ್ದುಲ್ ರಾಬ್ ನಿಸ್ತಾರ ರಿಗೆ. ಆದಿಯಲ್ಲಿದ್ದ ಸರ್. ಶಾಫತ್ ಅಹ ಮ್ಮದ್, ಸಯ್ಯದ್ ಅಲೀ ಝಹೀರ್ ಮತ್ತು ಶರಶ್ಚಂದ್ರ ಬೋಸರು ರಾಜಿಕೊಡ ಬೇಕಾಯಿತು. ರಾಜಾಜಿ, ಮಥಾಯಿ, ಭಾ ಭಾ-ಇವರ ಮೊದಲಿನ ಖಾತೆಗಳು ಕೈಬದ ಲಾದುವು.

ಮುಸ್ಲಿಂ ಲೀಗಿನ ಧೋರಣೆ

ನಡುಗಾಲ ಸರಕಾರದ ಪುನರ್ರಚನೆಗಾ ಗಿ-ಕಾಂಗ್ರೆಸ್ ಪ್ರಮುಖರು ತಮ್ಮ ಧೋ ರಣೆಯನ್ನು ಒಂದಂಗುಲದಷ್ಟೂ ಮುದು ಡಿಸಿಕೊಳ್ಳಲೊಪ್ಪಲಿಲ್ಲ. ನವಾಖಾಲಿ ಅತ್ಯಾಚಾರಕ್ಕಾಗಿ ಲೀಗ್ ಪ್ರಮುಖರು ಆಂತರಿಕ ಹೆಗ್ಗಳಿಕೆ ಪಡಬೇಕು ಹೊರತು ನಡುಗಾಲ ಸರಕಾರ ಸೇರಿದುದರಲ್ಲಿ ಅಂತ ಹ ಹೆಮ್ಮೆಗವಕಾಶವಿಲ್ಲ ಸರ್ವ ವಿಧ ದಿಂದಲೂ ಸೋತು ಬಗ್ಗಿಕೊಂಡೇ ಲೀ ಗ್ ಒಳಗೆ ಬರಬೇಕಾಯಿತು. ಲೀಗ್ ಸದಸ್ಯರ ಕೈಸೇರಿದ ಅರ್ಥಖಾತೆ ಮ ತ್ತು ವ್ಯಾಪಾರ ಖಾತೆಯು ಪ್ರಾಮುಖ್ಯ ದ್ದಿವೆ; ಆದರೆ ಮಿಕ್ಕವಲಪಾಲಿಗವು ನಿರಪಾ ಯಕಾರಿಯವೆ; ಎಷ್ಟೇಆತುರವಿದ್ದರೂ ಈ ಖಾತೆಗಳನ್ನು ದುರುಪಯೋಗಿಸಿಕೊಂಡು ಲೀಗ್ ಧ್ಯೇಯವನ್ನು ಸಾಧಿಸಲು ಲಿಯಾ ಖತ್‌ಅಲಿಗಾಗಲೀ, ಚಂದ್ರಿಗಾರರಿಗಾಗಲೀ ಸಾಧ್ಯವಿಲ್ಲ. ಖಾತೆಗಳ ಹಂಚಿಕೆಯಲ್ಲಿ ಲೀಗಿಗೆ ಸಮಪಾಲು ದೊರೆಯಿತೆಂದು ಭಾ ವಿಸುವದುಕಷ್ಟ. ಇಲ್ಲಿ ಕಾಂಗ್ರೆಸು ಬಿಟ್ಟು ಕೊಡಲೊಪ್ಪಿದವ್ಯಸ್ಥೇ ಲೀಗ್ ಶಿರಸಾವ ಹಿಸಿಕೊಂಡಿತೆಂಬುದು ಸ್ಪಷ್ಟವಿದೆ. ಗೃಹ ಖಾತೆಯು ತಮಗೆ ದೊರೆಯಬೇಕೆಂದು ಲೀಗಿನ ಆತ್ಯಾಗ್ರಹವಿತ್ತು. ಅದನ್ನು ಬಿ ಟ್ಟುಕೊಡಲು ಸಾಧ್ಯನೇ ಇಲ್ಲವೆಂಬ ಕಾಂ ಗ್ರೆಸಿನ ನಿರಾಕರಣೆ 'ರಾಜೀ ಕೊಟ್ಟು ಹೊರಗೆ ಬರುವ ವರೆಗೂ ಸೈ' ಎಂಬಷ್ಟು ಕಠೋರೋಕ್ತವಿತ್ತು. ಮಂಡಲನಾಯಕನಾ ಗಿ ಖಾತೆಗಳನ್ನು ಹಂಚಿದ್ದ ನೆಹರುಗಳು ತಮ್ಮ ಒಪ್ಪಿಗೆ ವಿನಹಾ ವೈಸರಾಯರು ಅ ಧಿಕಾರ ಕಸಕೊಳ್ಳುವದನ್ನು ಸಹಿಸುವಂತಿ ರಲಿಲ್ಲ, ತನ್ನಾಟ ನಡೆಯಲಾರದೆಂದು ತಿಳಿ ದ ಲೀಗು ಕೂಡಲೇ ಸಿಕ್ಕಿದಷ್ಟರಿಂದ ತೃ ಪ್ತಿಪಡಲೊಪ್ಪಿಕೊಂಡಿತು! ಲೀಗ್ ಮಂ ತ್ರಿಗಳ ಪ್ರತಿಜ್ಞಾವಿಧಿ ನಡೆವಲ್ಲಿಗೆ ಹೋ ಗುತಿದ್ದ ಕಾಂಗ್ರೆಸ್ ಮಂತ್ರಿಗಳ ಕಾವಿನ ರಾಸ್ಯಧ್ವಜಗಳನ್ನು ಕೆತ್ತು, ಅವರ ಸೀಟು ಗಳಿಗೆ ಸಿಗರೇಟು ಬೆಂಕಿಯೆನೆದು ಲೀಗ್ ಪ್ರಾಣಿಗಳು ತಮ್ಮ ದುಃಸ್ವಭಾವವನ್ನು ಅಲ್ಲಿಯೂ ಪ್ರದರ್ಶಿಸಿದ್ದರು. ಲೀಗ್ ಮಂ ತ್ರಿಗಳಿಗೆ ಮುಸ್ಲೀಮರ, ಕಾಂಗ್ರೆಸ್ ಮಂ ತ್ರಿಗಳಿಗೆ ಮಿಕ್ಕವರ ಜಯಕಾರಗಳು ಮಾತ್ರ ದೊರೆತಿದ್ದುವು. ದಲಿತವರ್ಗದ ಲೀಗ್ ಪ್ರತಿನಿಧಿ ಶ್ರೀ. ಮಂಡಲರು ಢಿಲ್ಲಿಗೆ ಬಂದಿ ಲ್ಲ. ಅವರು ತಂತೀ ಮೂಲಕ ಪ್ರತಿಜ್ಞೆ ಸ್ವೀಕರಿಸಿದ್ದರು.

ಮಿ. ಲಿಯಾಖತ್ ಅಲೀ ಹೇಳಿಕೆ

ತಾವು ಅಧಿಕಾರ ಸ್ವೀಕರಿಸಿದ ದಿನವೇ ಲೀಗ್ ಮಂತ್ರಿ ಗುಂಪಿನ ನಾಯಕ ಮ ತ್ತು ಅರ್ಥಖಾತೆಯ ಸದಸ್ಯ ಮಿ. ಲಿಯಾ ಖತ್ ಅಲೀ ಖಾನರು ನಡುಗಾಲ ಸರಕಾ ರದಲ್ಲಿ ಲೀಗ್ ಧೋರಣೆ ಹೇಗಿರುವದೆಂಬು ದನ್ನು ಸ್ಪಷ್ಟಪಡಿಸಿದ್ದಾರೆ ಪರಿಸ್ಥಿತಿಯು ಸುತ್ತಿಗೇ ಹೊಡೆತದಿಂದ ಜಜ್ಜಿದ ಭಾಗ ವೊಂದಲ್ಲದೆ ಲೀಗ್‌ಧೋರಣೆಯ ಬೇರಾವ ಅಂಗವೂ ಮೃದುಗೊಂಡಿಲ್ಲವೆಂಬುದನ್ನು ಅದು ಕೈಗನ್ನಡಿಯಂತೆ ಪ್ರತಿಬಿಂಬಿಸಿದೆ: "ನಾವು ನಡುಗಾಲ ಸರಕಾರ ಪ್ರವೇಶಿಸು ವಾಗ ಯಾರಿಗೂ ಯಾವ ಆಶ್ವಾಸನೆಯ ನ್ನೂ ಕೊಟ್ಟಿಲ್ಲ. ನಮ್ಮದು ಜವಾಬ್ದಾರಿ ಯುಳ್ಳದ್ದಾ ಒಂದು ಸಂಸ್ಥೆ. ನಮ್ಮ ಕರ್ತ ವ್ಯವೇನೆಂಬುದು ನಮಗೆ ತಿಳಿದಿದೆ. ಅದ್ದ ರಿಂದ ಯಾರಿಗಾದರೂ ಏನಾದರೂ ಭರ ವಸೆ ಕೊಡುವ ಪ್ರಶ್ನೆಯೇ ಇಲ್ಲ. ನಾವು ಸರಕಾರದ ಇತರ ಸದಸ್ಯರೊಂದಿಗೆ ಸಾ ಹಾರ್ದ ಮತ್ತು ಸಹಕಾರ ಬುದ್ಧಿಯಿಂದ ವರ್ತಿಸುವ ಧೋರಣೆಯಿಟ್ಟುಕೊಂಡೇ ಒ ಳಗೆ ಬಂದಿದ್ದೇವೆ. ರಾಷ್ಟ್ರದ ಮಹಾಮಹಾ ಸಮಸ್ಯೆಗಳ ತೀರ್ಮಾನವಾಗಬೇಕಾದರೆ ಶಾಂತವಾದ ಹಾಗೂ ಹಿತಸಾಧಕ ವಾತಾ ವರಣವಿರಬೇಕಾದುದು ಅಗತ್ಯವಿರುವುದ ರಿಂದಲೇ ನಾವೀ ಧೋರಣೆಯೊಡನೆ ಪ್ರ ವೇಶಿಸಿದ್ದೇವೆ. ಈ ನಡುಗಾಲ ಸರಕಾರವು ಪ್ರಜಲಿತ ಶಾಸನ ಪದ್ಧತಿಯಂತೆ ವರ್ತಿ ಸಲು ಬದ್ಧವಿದೆ. ಅಂದಮೇಲೆ ಇದರೊಳಗೆ 'ಸಮ್ಮಿಶ್ರ ಜವಾಬ್ದಾರಿ' ಅಥವಾ 'ಜತೆ ಹೊಣೆಗಾರಿಕೆ' ಎಂಬುದಿಲ್ಲವೇ ಇಲ್ಲ. ಇಲ್ಲಿ ಎರಡು ಪ್ರಮುಖ ಪಕ್ಷಗಳ ಪ್ರತಿನಿಧಿಗಳೂ ಮೂವರು ಅಲ್ಪಸಂಖ್ಯಾಕರೂ ಸಮಾವೇ ಶ ಹೊಂದಿದ್ದಾರೆ. ನೆಹರುಗಳು ಕಾಂಗ್ರೆಸ್ ಗುಂಪಿನ ನಾಯಕನಾದರೆ ಲೀಗ್ ಗುಂಪಿ ಗೆ ಅದರ ನಾಯಕನೇ ಇದ್ದಾನೆ. ಮಂತ್ರಿ ಮಂಡಲದ ಉಪಾಧ್ಯಕ್ಷರು ನೆಹರುಗಳು; ಅವರಿಗೆ ಪ್ರಚಲಿತ ಶಾಸನದಲ್ಲಿ ಸ್ವಪ್ನ ನಿರೂಪಣೆ ಹೊಂದಿರುವಷ್ಟೇ ಕಾರ್ಯ ನಿರ್ವಹಣಾಧಿಕಾರವಿದೆ ಹೊರತು ವಿಶೇಷಾ ಧಿಕಾರವಾಗಲೀ ಪ್ರತ್ಯೇಕ ಹಕ್ಕುಬಾಧ್ಯ ತೆಗಳಾಗಲೀ ಇಲ್ಲ. ಸರಕಾರದ ಎಲ್ಲಾ ಸದಸ್ಯರೂ ಸರಸ್ಸರಿ ಅನುಯಾಯಿಗಳು ಮತ್ತು ಸಮಾನಾಂಶದ್ದಾರೆ" ಎಂದೇ ಲಿಯಾ ಖತರ ಸ್ಪಷ್ಟೀಕರಣ. ಸಹಕರಿಸಿ ವರ್ತಿಸು ವೆವೆಂದು ಹೇಳಿದ್ದರೂ ಲೀಗ್ ಸದಸ್ಯರು ಬರಹನಿತೆ ಯಾವುದಕ್ಕೂ ಕಟ್ಟುಬಿದ್ದಿಲ್ಲ ವೆಂಬುದನ್ನು ಇದರಿಂದ ಊಹಿಸಬಹುದು. "ಈ ಮೂಲಕ ಘಟನಾಸಮಿತಿಯಲ್ಲಿ ಭಾಗ ವಹಿಸುವದಕ್ಕೂ ಲೀಗ್ ಬದ್ಧವಾಗಿದೆಯಲ್ಲ ವೇ" ಎಂಬ ಪ್ರಶ್ನೆಗೆ ತಾತ್ಸೀಗ ಒರ್ವ

CANARA BANK LIMITED
ಕೆನರಾ ಬ್ಯಾಂಕ್ ಲಿಮಿಟೆಡ್
(ಸ್ಥಾಪನೆ 1906)
ಹೆಡ್ ಆಫೀಸು:— ಬಾವಟೆಗುಡ್ಡೆ, ಮಂಗಳೂರು.
ಜನರಲ್ ಮೆನೇಜರರ ಆಫೀಸು:—ಎಸ್ಪೊಲೊ ಸ್ಟ್ರೀಟ್, ಫೋರ್ಟ್, ಬೊಂಬ್ಬಾ.
ಶಾಖೆಗಳು:
ಬೊಂಬ್ಬಾ ಅಧಿಪತ್ಯ: ಬೆಳಗಾಂವ್, ಧಾರವಾಡ, ಹುಬ್ಬಳ್ಳಿ, ಹೋಲಾಪುರ, ಕಲ್ಯಾಣ
ಬೊಂಬ್ಬಾ ಶಹರಿಪಲ್ಲೆ: ಫೋರ್ಟ್, ಮಾಂಡ್ವಿ, ಗಿರಗಾಂವ್, ಕಾಲಬಾದೇವಿ
ಮೈಸೂರು ಸಂಸ್ಥಾನ: ಅರಸಿಕೆರೆ, ಬೆಂಗಳೂರು, ಚಿಕ್ಕಮಗಳೂರು
ಧಾರವಾಡ ಶಿವಮೊಗ್ಗಾ
ಕೊಚ್ಚಿ ಸಂಸ್ಥಾನ: ಕೊಚ್ಚಿ, ಎರ್ನಾಕುಲಮ್
ತಿರುವಾಂಕೂರು ಸಂಸ್ಥಾನ: ಅಲಪ್ಪಿ, ಕ್ವಿಲೋನ್
ಹೈದರಾಬಾದು ಸಂಸ್ಥಾನ: ಸಿಕಂದರಾಬಾದು
ಮದ್ರಾಸು ಅಧಿಪತ್ಯ: ಬಂಟ್ವಾಳ, ಕಲ್ಲಿಕೋಟೆ, ಕಣ್ಣಾನ್ನೂರು, ಕೊಯಮುತ್ತೂರು, ಕುಂದಾಪುರ, ಇರೋಡ್, ಗಂಗೊಳ್ಳಿ, ಕಾರ್ಕಳ, ಕಾಸರಗೋಡು, ಮದರಾಸು, ಮಧುರೆ, ಮಂಗಳೂರು ಬಂದರು, ಮಂಗಳೂರು ಸಿಟಿ, ಮೂಲ್ಕಿ, ಸಯ್ಯನ್ನೂರು, ಪುತ್ತೂರು, ಸೇಲಮ್, ಉಡುಪಿ
ಮೂಲಧನ ೩೮ ಲಕ್ಷ.] [ಕ್ಷೇಮನಿಧಿ ೧೦ ಲಕ್ಷ.

ನವಖಾಲಿಯಲ್ಲಿ ನಡದುದೇನು?

ಮಾನುಷತ್ವವಿದ್ದವರ ಕರುಳುಬೇಯಿಸುವ ಕೆಲವು ಘಟನೆಗಳು-

ಬಿಂಗಾಳದ ನವಾಖಾಲಿ ಮತ್ತು ತ್ರಿಪ್ಪೇರಾ ಜಿಲ್ಲೆಗಳಲ್ಲಿ ಮುಸ್ಲಿಂ ಬಹುಸಂಖ್ಯಾಕ ಪುಂಡರು ಹಿಂದೂ ಅಲ್ಪಸಂಖ್ಯಾಕ ನಿಸ್ಸಹಾಯಕರ ಮೇಲೆ ನಡಿಸಿದ ಪಾಶವಿಕ ಅತ್ಯಾಚಾರಗಳು ವರ್ಣನಾತೀತ. ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ಈ ಸಂಬಂಧದ ಒಕ್ಟೋಬರ 24ರ ತನ್ನ ಠರಾವಿನಲ್ಲಿ "ಅದರ ಕರಾಳತೆ ಮತ್ತು ವೇದನೆಯು ನಿರ್ಮಿಸಿರುವ ಭಾವನೆಯನ್ನು ಯಥಾಸ್ಥಿತಿ ಪ್ರದರ್ಶಿಸುವದು ಅಸಾಧ್ಯವಾಗಿದೆ" ಎಂದು ತಿಳಿಸಿದೆ. "ಆ ಪಾಶವಿಕ ಹಾಗೂ ಮಧ್ಯಕಾಲೀನ ಬರ್ಬರತ್ವದ ನೋಟವು ಪ್ರತಿಯೊಬ್ಬ ಯೋಗ್ಯ ಮನುಷ್ಯನಲ್ಲೂ ಲಜ್ಜೆ, ಜಿಗುಪ್ಸೆ ಮತ್ತು ಕ್ರೋಧವನ್ನು ನಿರ್ಮಿಸಲೇಬೇಕು. ಈ ಪಾಶವಿಕ ಅತ್ಯಾಚಾರದ ಸ್ಫೋಟವು ಮುಸ್ಲಿಂ ಲೀಗು ಕಳದ ಕೆಲವು ವರುಷಗಳಿಂದ ನಿರ್ಮಿಸುತ್ತಾ ಬಂದಿರುವ ದ್ವೇಷ ಮತ್ತು ಅಂತಃಕಲಹದ ಪ್ರೇರಣೆಗಳ ಹೊರತು ಕಳೆದಕೆಲವು ತಿಂಗಳುಗಳಿಂದ ದಿನಂಪ್ರತಿ ಮುಂದೊಡ್ಡುತ್ತಿರುವ ಹಿಂಸೆಯ ಬೆದರಿಕೆಗಳ ಪ್ರತ್ಯಕ್ಷ ಪರಿಣಾಮ. ಪ್ರಾಂತ್ಯದ ಜನತೆಯನ್ನೇ ನಿಪಾತಗೊಳಿಸುವಂತಹ ಪರಿಮಾಣದಲ್ಲಿ ಈ ಆಂತರಿಕ ಅತ್ಯಾಚಾರ ನಡೆಯುವಂತೆ ಮಾಡಿದ ಹೊರೆಯು ಪ್ರಾಂತಿಕ ಸರಕಾರದ ಮೇಲಿದೆ ಅದೇ ರೀತಿ ಇಂತಹ ಸಂದರ್ಭಗಳಲ್ಲಿ ತಮಗೆ ವಿಶೇಷಾಧಿಕಾರವಿದೆಯೆನ್ನುತ್ತಿರುವ ಗವರ್ನರ್ ಮತ್ತು ಗವರ್ನರ್-ಜನರಲರಿಗೆ ಸಹ ಬಂಗಾಳದ ಈ ಘಟನೆಗಳ ಹೊಣೆಯಲ್ಲಿ ಪಾಲಿದೆ". ಇದು ಕಾಂಗ್ರೆಸ್ ಕಮಿಟಿಯ ನಿರ್ಧಾರ. ನವಾಖಾಲಿ, ತಿಪ್ಪೇರಾಗಳಿಂದ ದಿನದಿನಕ್ಕೆ ಕ್ಷಣಕ್ಷಣಕ್ಕೆ ಇನ್ನೂ ಹೊರಬೀಳುತ್ತಿರುವ ಒಂದೊಂದೇ ಮಾರ್ಮೆಗಳು ನ್ಯಾಯವಾದಿಗಳನ್ನು, ಶಾಂತ ಸೌಹಾರ್ದ ಪ್ರೇಮಿಗಳನ್ನು, ಆಗಾಗ ಕೊಲ್ಲುತ್ತಿವೆ! ಇದು ಕೇವಲ ದಂಗೆಯಲ್ಲ-ಮಾನವ ಪ್ರಾಣ ಮತ್ತು ಮಾನಗಳನ್ನು ಮೃಗಕ್ಕಿಂತಲೂ ಕಡೆಯಾಗಿ ಹರಿದು ತಿಂದ [illegible] ಹಿಂದೂ ಮುಸ್ಲಿಂ ಜಾತೀಯ ವೈಷಮ್ಯವನ್ನೆಲ್ಲಾಗುವಂತಿಲ್ಲ-ಮನುಷ್ಯ ಜಾತಿ ಮಾತ್ರದಿಂದ ಮಾಡಲಾಗದಂಥಹ ಪಾಶವೀಕೃತ್ಯ! ಸತ್ಪ್ರವೃತ್ತಿ-ಮತಾಂತರ ಹೊಂದಿದವರೆಷ್ಟು--ಮಾನಹಾನಿಯಾದವರೆಷ್ಟು--ಸೊತ್ತು ನಷ್ಟವೆಷ್ಟು--ಎನಲ್ಲಾ ನಡೆಯಿತು-ಯಾವ ಲೆಕ್ಕವೂ (ಎಲ್ಲವೂ ಸಾವಿರಗಳ ಸಂಖ್ಯೆಯಲ್ಲಿವೆ,) ಸರಿಯಾಗಿ ದೊರೆಯುವಂತಿಲ್ಲ. ಯಾಕಂದರೆ ಮಾನ, ಪ್ರಾಣ, ಸೊತ್ತುಗಳಂತೆಯೇ ಇವುಗಳ ಸತ್ಯತೆಯನ್ನೂ ಅಡಗಿಸಲು ಪುಂಡರು ಶಕ್ತರಾಗಿದ್ದಾರೆ. ಅಲ್ಲಿ ಬಂಡಾಯಗಾರರ ರಾಜ್ಯವೇ ಸ್ಥಾಪನೆಯಾದಂತಿದೆ. ಬೆಳಕಿಗೆ ಬಂದ ಕೆಲವು ಹೃದ್ರಾವಕ ಸಂಗತಿಗಳನ್ನು ಹೆಕ್ಕಿ ಇಲ್ಲಿ ಕೊಡಲಾಗಿದೆ. ..

ಗಲಭೆಗಾರರ ಸಂಖ್ಯೆ ಸುಮಾರು 20,000ಕ್ಕೂ ಮಿಕ್ಕಿದ್ದಿತು. ರಾಮಗಂಜಿನ ಒಬ್ಬ ಜಮೀನ್ದಾರ್ ಸುರೇಂದ್ರ ಕುಮಾರ್ ಬೋಸರನ್ನು ಅವರ ಕುಟುಂಬ ಮತ್ತು ನೌಕರರು ಹಾಗೂ ಅಲ್ಲಿದ್ದ ಎಲ್ಲರ ಸಮೇತ ಚಿತ್ರಹಿಂಸೆ ಕೊಟ್ಟು, ವಧೆಮಾಡಿ ಇಡೀ ಕಚೇರಿಯನ್ನು ಸುಟ್ಟು ಎಲ್ಲಾ ಹೆಣಗಳನ್ನೂ ಆ ಬೆಂಕಿಯಲ್ಲಿ ಭಸ್ಮಮಾಡಿಬಿಟ್ಟರು..

ರಾಜೇಂದ್ರ ಲಾಲ ರೋಯ ಎಂಬ ನುಕ್ಕೊಬ್ಬ ದೊಡ್ಡ ಜಮೀನ್ದಾರರ (ಜಿಲ್ಲಾ ವಕೀಲೀ ಸಂಘದ ಅಧ್ಯಕ್ಷ ಮತ್ತು ಜಿಲ್ಲಾ ಹಿಂದೂ ಮಹಾಸಭಾಧ್ಯಕ್ಷ) ಮನೆಯಲ್ಲಿ ಕೆಂಗಲ್ಲಾದ ಊರ ಮಂದಿಯೂ ಆಶ್ರಯ ಪಡೆದಿದ್ದರು. ಎರಡು ದಿನಗಳಲ್ಲಿ ನುಗ್ಗಿಬಂದ ಪುಂಡರೊಡನೆ ಈ ಜಮೀನ್ದಾರರು ವೀರಾವೇಶದಿಂದ ಹೊಡದಾಡಿ ಮೂರು ಬಾರಿ ಹಿಂದಟ್ಟಿದ್ದರು ನಾಲ್ಕನೇ ಬಾರಿ ಪುಂಡರ ಮುಂದಾಳು ಮೌಜಿ ಎಂ. ಎಲ್. ಎ. ಒಬ್ಬನು ಇನ್ನೆಮ್ಮೆ ದೊಡ್ಡ ದಂಗಡ ಕೂಡಿಸೊಂಡು ತಾನೇ ಕೋವಿ ಹಿಡಿದು ನುಗ್ಗಿ ಬಂದ ಮನೇ ಪಕ್ಕದ ತೆಂಗಿನ ಮರವನ್ನು ಕಡಿದು ಉರುಳಿಸಿ ಅದರ ಮೇಲಿನಿಂದಲೂ ಪುಂಡರ ದಳವು ಮಾಡಿನಿಂದ ಒಳ ನುಗ್ಗಿತು. ಜಮೀನ್ದಾರ ಎನ ಸಮೇತ ಹೆಂಗಸರು ಮಕ್ಕಳೆನ್ನದೆ ಅಲ್ಲಿದ್ದವರನ್ನೆಲ್ಲಾ ತರತರದಿ ಹಾಕಿ ಇಡೀ ಮನೆಗೆ ಬೆಂಕಿ ಕೊಟ್ಟರು ಹಾಗೆಯೇ ಎಲ್ಲಾ ಹಿಂದೂ ಮನೆಗಳೂ ಹಿಂದುಗಳೂ ಆಹುತಿಯಾಗುತ್ತಾ ಹೋದರು.

ಕೆಲವು ಹೆಂಗಸರು ತಪ್ಪಿಸಿಕೊಂಡೋಡಿ ಹೊಳೆಕರೆಗಳಲ್ಲಿಯೇ ಒಂದೆರಡು ದಿನ ಮುಳುಗಿದ್ದು ಪುಂಡರು ಕಣ್ಮರೆಯಾದೊಡನೆ ತಲೆಯೆತ್ತಿ ಉಸಿರು ಬಿಟ್ಟು ಬದುಕಿದ್ದರು.

ರಾಯಿಪುರದಲ್ಲಿ 30 ವರುಷದ ತರುಣ ಕೋವಿಹಿಡಿದು ಪುಂಡರ ಮೇಲೆ ಗುಂಡು ಹಾರಿಸಿ ಹೋರಾಡಿದ. ಗುಂಡುಗಳು ಮುಗಿಯುತ್ತಾ ಬಂದೊಡನೆ ತನ್ನ ಮಾತೆಗೂ ಪತ್ನಿಗೂ ಗುಂಡು ಹೊಡೆದು ಕೊಂದು ಹಾಕಿ ಕೊನೆಯ ಗುಂಡನ್ನು ತನ್ನೆದೆಗಿಟ್ಟು ಕೊಂಡು ಸತ್ತ- ಪುಂಡರ ಕೈಗೆ ಸಿಕ್ಕಿ ಅಪವಿತ್ರವಾಗಬಾರದೆಂದು.

ಸೀಲ್ವಾ ಸ್ಟೇಶನ್ನಿನಲ್ಲಿ ಇಬ್ಬರು ಹುಡುಗಿಯರಿಬ್ಬರೊಡನೆ ಮುಸ್ಲಿಂ ಪುಂಡರು ಅವರನ್ನೊಯ್ಯಲು ಪ್ರಯತ್ನಿಸಿ ಎರಡು ಪಂಗಡಗಳೊಳಗೆ ಜಗಳವಾಗಿ[ಪೋಲೀಸರು ಗುಂಡು ಹಾರಿಸಿ ಹುಡುಗಿಯರನ್ನು ಸ್ಟೇಶನಿಗೊಯ್ದರು.

ಕೊಂದ ಹೆಣಗಳನ್ನು ಲೆಕ್ಕ ಸಿಕ್ಕದಂತೆ ಎಲ್ಲೆಲ್ಲಿಗೂ ಕೊಂಡೊಯ್ದು ಅಡಗಿಸಿದ್ದಾರೆ. ಹೆಳ್ಳಿ ಹೆಳ್ಳಿಗಳನ್ನೇ ತಂಡತಂಡಗಳನ್ನೇ ಮುಸ್ಲಿಂ ಮತಕ್ಕೆ ಜುಲುಮೆಯಿಂದ ಸೇರಿಸಿಬಿಟ್ಟಿದ್ದಾರೆ.

ಗಂಡೆಂದಿರ ಕಣ್ಣೆದಿರನಲ್ಲೇ ಹೆಂಗಸರನ್ನು ಪುನರ್ವಿವಾಹವಾದುದಿದೆ ಗೋವುಗಳನ್ನು ಹಿಂದುಗಳಿದಿರಿಗೆ ತಂದು ತರಿದು ಹಾಕಿದುದಿದೆ.

ನವಾಖಾಲಿಯ ಪ್ರಳಯದ ಮೇಳೆ ಪುಂಡರ ಕೈಯಲ್ಲಿ ಮಾನಕಳಕೊಳ್ಳಲು ಹೇಸಿ ಕೆಲವ ಸ್ತ್ರೀಯರು ಬೆಂಕಿಗೆ ಹಾರಿ ಎಷ್ಟೊ ಕಳಕೊಂಡಿದ್ದರು ಇನ್ನು ಹಲವರು ವಿಷ ತಂದು ಮತ್ತು ಕುತ್ತಿಗೆಗೆ ಹಗ್ಗ ಹಾಕಿ ಕೊಂಡು ಸತ್ತಿದ್ದರು.

ಅಲ್ಲಯ ನಿರ್ಗತಿಕರಿಗೆ ಸಹಾಯಮಾಡಲು ಹೋದವರನ್ನೂ ದಂಗೆಗಾರರು ಧಳಿಸಿದ್ದರು. ಮೂವರು ಪೋಲೀಸರ ಕಾವಲಿನಿಂದ ಹೊರಟಿದ್ದ ಹೆಂಗಸರ ಮಕ್ಕಳಿದ್ದ ಸುಮಾರು 150 ಮಂದಿಯ ಗುಂಪೊಂದರ ಮೇಲೆ ಬಿದ್ದು 14 ಮಂದಿಯನ್ನು ಅಲ್ಲಿಯೇ ಕೊಂದು ಮಿಕ್ಕ ಗುಂಪನ್ನು ಪ್ರತ್ಯೇಕಿಸಿ ಪೋಲೀಸರ ಸಮೇತ ಕೊಂಡೊಯ್ದು ಒಡಗಿಸಿಟ್ಟಿದ್ದಾರೆ.

ಅಲ್ಲಿಗೆ ಪತಿತಾಂತರಗೊಂಡ ಸಾವಿರಾರು ಮಂದಿ ಲುಂಗಿಯುಟ್ಟುಕೊಂಡು 'ಪಾಕಿಸ್ತಾನ್ ಝಿಂದಾಬಾದ್' ಭಾಷಿಸಿದ ಮುಸ್ಲಿಂ ಟೋಪಿಯಿಟ್ಟುಕೊಂಡಿದ್ದಾರೆ. ಹೆಂಗಸರು ಕಾಣಿಸಿಗುವದಿಲ್ಲ. ಮತಾಂತರಗೊಂಡವರು ಮುಸ್ಲಿಂ 'ಪರ್ಮಿಟ್' ಏನಹ ಒಂದೆಡೆಯಿಂದ ಇನ್ನೊಂದೆಡೆಗೆ ಹೋಗದಂತೆ ನಿರ್ಬಂಧವಿದೆ.

ಹಲವೆಡೆ ಕುಟುಂಬ ಕುಟುಂಬಗಳೇ ಕೊಲೆಗಾರರ ಕತ್ತಿಗಾಹುತಿಯಾಗಿವೆ.

ಪುಂಡರು ನೂರಾರು ಅಥವಾ ಸಾವಿರಾರು ಜನರ ಗುಂಪು ಗುಂಪುಗಳಾಗಿ ಒಳಗೆಡೆಯ ಹಳ್ಳಿಗಳಿಗೆ ನುಗ್ಗುವದು- ಪ್ರಥಮತಃ ಹಿಂದುಗಳಿರಿದ ಕಲ್ಲುತ್ತಿದ ನಿಶಸ್ತ್ರತೆ ಮುಸ್ಲಿಮರಿಗೆಂದು ಬಲತ್ಕಾರದಿಂದ ಹಣ ಕಸಕೊಳ್ಳುವದು- (ಹೀಗೆ ಒಬ್ಬೊಬ್ಬರಿಂದ 10 ಸಾವಿರಕ್ಕೂ ಮಿಕ್ಕಿ ಸುಲಿದುದುಂಟು) ದುಡ್ಡು ಬಂದೊಡನೆ ಅವರೇ ಅಥವಾ ಅವರ ಹಿಂಗಡೆಯಿಂದ ಬಂದ ಪುಂಡರು ಇದ್ದ ಸಾಮಾನುಗಳನ್ನೂ ಲೂಟಿ ಮಾಡಿ ಸಿಕ್ಕಿದವರನ್ನೆಲ್ಲಾ ಕೊಂದು ಅಥವಾ ಮತಾಂತರಿಸಿ, ಮನೆಗೆ ಬೆಂಕಿ ಹಚ್ಚುವದು. (ಈ ಭಾಗದ ಮನೆಗಳು ಹೆಚ್ಚಾಗಿ ಬಿದಿರಿನವು ಮತ್ತು 'ರಿಫಿಂಗ್' ಹೊದಿಕೆಯಿದ್ದವುಗಳು)- ಈ ಪ್ರಕಾರ ಅತ್ಯಾಚಾರ ನಡೆದಿತ್ತು.

ಹೊರಗಿನ ಕೆಲವು ಪತ್ರಿಣರೂ, ಮಾಜೀ ಸೊಲ್ಜರರೂ ಆಕ್ರಮಣದ ಸೇನಾನಿತ್ವ ವಹಿಸಿದ್ದರು ಓರ್ವ ಮಾಜಿ ಎಸೆಂಬ್ಲಿ ಸದಸ್ಯ ಮತ್ತು ಸ್ಥಳೀಯ ಮುಸ್ಲಿಂ ಮುಖಂಡರು ಇದರ ಧುರೀಣರಾಗಿದ್ದರು.

ಕೆಲ್ವಾರಾ ಎಂಬ ಹಳ್ಳಿಯ ರಾಜಾ ಹೆಡ್ಮಾಸ್ಟರನನ್ನು ಆವನ ವಿದ್ಯಾರ್ಥಿಗಳೇ ಪ್ರಾಣಾಪಾಯದ ಬೆದರಿಕೆಗೆ ಹಾಕಿ ಇಸ್ಲಾಮಿಗೆ ಸೇರಿಸಿಕೊಂಡರು.

ಈಗ ಆ ಭಾಗದ ಎಲ್ಲಾ ಮನೆಗಳ ಮೇಲೂ ಮುಸ್ಲಿಂ ಲೀಗ್ ಧ್ವಜಗಳು ಹಾರಾಡುತ್ತಿವೆ ಎಲ್ಲಾ ಪುರುಷರೂ ಲುಂಗಿ ಉಟ್ಟು, ಲೀಗ್ ಟೋಪಿ (ಅವು ಹೆಳೆಯನೇ) ಧರಿಸಿಕೊಂಡವರೇ ಸ್ತ್ರೀಯರೆಲ್ಲಾ ಘೋಷಾದೊಳಗಿದ್ದಾರೆ. ಆಲ್ಲಿ ಸಿಕ್ಕಿ ಬಿದ್ದಿದ್ದ ಓರ್ವ ಸೇನಾ ಕೆಪ್ಟನನ, ಸುಬೇದಾರ್ ಮೇಜರನೊಬ್ಬನ ಜೀವ ಉಳಿದುದು ಆಪಾರ್ಯ ಕೃಪಲಾನಿಯವರ ನೈಗಾವಲಿಗೆ ಹೋಗಿದ್ದ ಮಿಲಟರಿಯನಿಂದಲೇ ಓರ್ವ ಹಿಂದೂ ಹುಡುಗಿಯನ್ನು

(ಒನೇ ಪುಟ ನೋಡಿರಿ)

ಮಂತ್ರಿಯಾಗಿ ಮೊತಾ ಲೀಗ್ ನಾಯಕನಾಗಿ ಮಾತಾಡುತ್ತಿಲ್ಲವೆಂಬ ನೆವದೇಳಲಿಯಾಖತರು ತಪ್ಪಿಸಿಕೊಂಡಿದ್ದರು. ಆದರೆ ಘಟನಾಸಮಿತಿಯಲ್ಲಿ ಭಾಗವಹಿಸುವ ಸ್ವಷ್ಟ ಭರವಸೆಯನ್ನು ಲೀಗ್ ನಾಯಕರಿಂದ ವೈಸರಾಯರು ಪಡೆದು ನೆಹರುಗಳಿಗೆದನ್ನು ತಿಳಿಸಿದ್ದರಿಂದಲೇ ಈ ಪುನರ್ರಚನೆಗೆ ಕಾಂಗ್ರೆಸ್ ಒಪ್ಪಿತೆಂಬುದು ಸ್ಪಷ್ಟವಿದೆ. ಮುಂದೆ ಹೇಗೆ ಎಂಬ ಸರಿಕ್ಷೆ ಸದ್ಯವಲ್ಲೇ ಆಗಲಿದೆ. ಈಗಿಗ ಕಾಂಗ್ರೆಸ್ ಮಂತ್ರಿಗಳಿದಿರಲ್ಲಿ ಫಿಲ್ಲಿಯ ಮುಸ್ಲಿಂ ಪುಂಡರೂ ಸೌಮ್ಯ ವರ್ತನೆಯುಂದಿರುವ ಒಂದು ಬದಲಾವಣೆ ಕಂಡುಬರುತ್ತಿದೆ.

• ಮಗ್ಗದ ಸ್ಟೂಲಿಕರಿಗೆ ಸುಸಂದರ್ಭ •

ನಂಬ್ರ P II ಪರ್ಮಿಟುದಾರರಾದ ಮಗ್ಗದ ಸ್ಟೂಲಿಕರು ತಮ್ಮ ನೂಲಿಗೆ ಬೇಕಾಗುವ ರಂಗುಗಳಿಗೆ ಮಂಗಳೂರು ಇಲ್ಲವೆ ಕಣ್ಣಾನೂರು ರಂಗಿನ ವ್ಯಾಪಾರಸ್ಥರನ್ನು ಅವಲಂಬಿಸಬೇಕಾಗಿತ್ತು. ಈಗ ಅವರಿಗೆ ಬೇಕಾಗುವ ಎಲ್ಲಾ ತರದ ರಂಗುಗಳನ್ನು ಒದಗಿಸಲು ನಾವು ಲೈಸನ್ಸನ್ನು ಪಡೆದಿರುತ್ತೇವೆ.

ಪಿ. ಎ. ಪೈ ಬ್ರದರ್ಸ್, ಉಡುಪಿ.

ಕುಟುಂಬದೊಳಗಿನ ಚಿಲ್ಲರೆ ಬೇನೆ

ಬಿಪಿಬಳಕನ್ನು ಹೊಗಡಾಡಿ ಮಹಿಳಾಗಾಗಿ ಡಾಕ್ಟರ ಮತ್ತು ಸೈಕ್ಯಾರ ಆಚಿ ಪ್ರತಿ ಇಂದ ಹೊಗಡಾಮಯ ಚಿಕ್ಕವರಿಯುವುದಿಲ್ಲ — ಮತ್ತು ಆಸ್ಪೊಂದು ಅವಶ್ಯಕತೆಯೂ ಇರುವುದಿಲ್ಲ ಕೂಲ್ಡ್ರಿನೋಡಾ. ಮಾತ್ರ ಇದರಲ್ಲಿ ಕಂಡು ಬೈನಾಡಿದ್ದು ಹೆಚ್ಚುನೋಡಾ ಮಾಳ್ಳಿಗೆ ಕೊಡಾ ವಿಶೇಷ ಇಷ್ಟಾನಿ ಅತೀಗೆ ಚಿಟ್ಟಿಗೆ ಬಿಪಿಸಿಬಹುದೆಂದು ಜವೇರಿಯಲ್ ಜೀವನ ಮಿಕ್ಸ್ಚರ್ ಸಿದ್ಧಪಡಿಸಲಾಗಿ ನೂಡಾಬಹುದು. ಇದಾ ಮತ್ತು ಅಮೃತಾಂಜನ ಫಾರ್ಮಸಿಯವರ ಪೊಡಾ ಬಿಡಿಗಳ ಮೇಲೆ ಇದಾಬಹುದು ಇವರ ಉಳಿತಾಯವಾಗುತ್ತದೆ. ಕ್ಯಾಸ್ಟ್ಯಾಯಾಗಿ ಯಾವುದಾದರೂ ಒಂದು ಕಾಯಿಲೆಯಾಗಿರುವವರಿಂದ ಇದೇ ಉಯ ಬಾಟ್ಲಿಯನ್ನು ಮನೆಯಲ್ಲಿರುವ ಉಳಿದವರು ಪ್ರಯತ್ನಿಸಿದ್ದಲ್ಲಿ ಇಲ್ಲಕೊಟ್ಟಿಯ (ಇತ್ಯಾದಿ ಸುಮಾರು ಕ್ಷಿಯ ಉಪಯೋಗಾಗಿ) ಯೂಸಾಗಿಲ್ಲದ ಅಭ್ಯಾಸಗಳಿಗೆ ಕಮ್ಮಿಯಿಲ್ಲದೂ (ನಿಮಗೆ ಬ್ಯಾಚಾಗಿ ಗ್ಯಾಯಾಮ) ಪ್ರಯೋಗಿಸಿ ಕಾರ್ಯಾರಂಭಿಸಿ ದೋಷಮುಕ್ತರಾಗಿ.

ಏಮ್ ಎಚ್ ಜವೇರಿಯನ್ ಮಿಕ್ಸ್ಚರ್ ಬ್ರಿಸ್ಟನ್ ಸ್ಟೀಟ್, ಮುಂಬಾಯಿ

The Canara Banking Corporation Limited.

(Incorporated in British India, with limited Liability)

Estd 1906

Head Office: **UDIPI**, South Kanara.

Authorised Capital	...	Rs 25,00,000
Issued & Subscribed	...	,, 16,00,000
Paid up	... ...	,, 15,87,600
Reserves	... ...	,, 4,60,000
Total Resources Around		,, 2½ Crores.

Branches at- Bombay, Madras, Bangalore, Coimbatore, Salem Calicut, Hubli Mysore, Cochin, Mangalore, Madras etc, etc

Banking Business of Every Description Transacted.

ನವಯುಗ

ಉಡುಪಿ, ಗುರುವಾರ, ೩೧-೧೦-'೪೬

ನೌಕರರನ್ನು ತಿದ್ದಲಿ!

ಜನಹಿತ ಸಾಧನೆಯೊಂದನ್ನೇ ತಮ್ಮ ಘೋರಣೆಯಾಗಿಟ್ಟುಕೊಂಡು ದುಡಿಯುತ್ತಿರುವ ಕಾಂಗ್ರೆಸ್ ಸರಕಾರಗಳ ಸದುದ್ದೇಶದ ಕುರಿತು ಸಂದೇಹಪಡುವವರಿರಲಾರರು. ಇಂದಿನ ಕಾಂಗ್ರೆಸ್ ಮಂತ್ರಿಗಳೆಲ್ಲಾ ಹಿಂದಿನ ಜನಪ್ರಮುಖ ಚಳವಳಗಾರರೇ; ಸಂದರ್ಭಕ್ಕನುಸಾರವಾಗಿ ಜನತಾ ಸೇವೆ ಮಾಡುವ ಧ್ಯೇಯವುಳ್ಳವರು ಅಂದದನ್ನು ಹೋರಾಡಿ ಸಾಧಿಸಬೇಕಾಗಿದ್ದರೆ ಇಂದು ಅದನ್ನೇ ಅಧಿಕಾರ ಪೂರ್ವಕ ಸಾಧಿಸುತಿದ್ದಾರೆ ಸಂದರ್ಭ ಬಂದಾಗ ಯಾರೂ ಎಚ್ಚರಿಸದೆಬಿಟ್ಟರೂ ಕಾಂಗ್ರೆಸ್ ಮಂತ್ರಿಗಳನ್ನು ಅವರ ಮನಸ್ಸಾಕ್ಷಿಯೇ ಎಚ್ಚರಿಸದಿರದು. ಆದ್ದರಿಂದ ಕಾಂಗ್ರೆಸ್ ಸರಕಾರದ ಗುರಿ, ಘೋರಣೆ, ಉದ್ದೇಶಗಳ ಕುರಿತು ಪ್ರಶ್ನೆಯೇ ಇಲ್ಲ ಆದರೆ ಕಾರ್ಯತಃ ಹೇಗೆ? ಕೇವಲ ಸದ್ಭಾವದೊಂದರಿಂದಲೇ ಸತ್ಕಾರ್ಯವಾಗುವದಿಲ್ಲ ಆಗುವಂತಿದ್ದಿದ್ದರೆ, ಇಂದು ನವಖಾಲಿಯ ನಿರ್ಗತಿಕರ ನೋಲೆ ಇಡೀ ರಾಷ್ಟ್ರದಲ್ಲಿ ಹುಟ್ಟಿರುವ ಸಹಾನುಭೂತಿಯು ಅಂತಹ ಹಲವು ನವಾಖಾಲಿಗಳನ್ನು ಉದ್ಧರಿಸಿಬಿಡಲು ಸಾಕಾಗುತಿತ್ತು! ಉದ್ದೇಶದ ಬೆನ್ನು ಹಿಡಿಯಲಾರದೆ ಕಾರ್ಯಶಕ್ತಿ ಹಿಂದೆ ಬೀಳುವ ದೃಶ್ಯ ಎಲ್ಲೆಲ್ಲಿಯೂ ಕಾಣಿಸಿಗುತ್ತಿದೆ. ಕಾಂಗ್ರೆಸ್ ರಾಜ್ಯಭಾರವಾದರೂ ಇದಕ್ಕೆ ಅಪವಾದವಾಗಿಲ್ಲ ಹಳ್ಳಿಗರ ಹಿತಸಾಧನೋದ್ದೇಶದಿಂದ ಗ್ರಾಮಸಮಿತಿಗಳು ಚಿಮ್ಮಿ ಸಲ್ಪಟ್ಟುವು. ಇದುವರಗೆ ಅವುಗಳಿಂದಾಗಿರುವ ಮುಖ್ಯ ಕೆಲಸವೆಂದರೆ–ಕೆಲವು ನಿಧಿ ಕರ್ತನಗಳು ದೊರೆತಂತೆ–ತಹಶೀಲ್ದಾರರುಗಳಿಗೆ ಈ ಕಮಿಟೀಮೆಂಬರರ ಕೈಯ ಮೂಲಕಹಳ್ಳಿಗರೈತೀಊಟಪಕೈಯನ್ನೂ ಬಾಚಿಕೊಳ್ಳಲಾದುದೊಂದೇ! ಲಂಚಗೂಳಿತನ, ಕಳ್ಳ ಸಂತೆ ವ್ಯಾಪಾರಗಳ ನಿರ್ಮೂಲಕ್ಕಾಗಿ ಹೊಸ ವ್ಯವಸ್ಥೆಗಳಾದುವು; ಅವುಗಳಿಂದಾಗಿ ಈ ದುರ್ಬುದ್ಧಿನಿರ್ಮೂಲವಾದ ಅಥವಾ ಅದು ಪ್ರಭಾವಗುಂದಿದ ಚಿಹ್ನೆಯೇನೂ ಕಾಣುವದಿಲ್ಲ. ಬದಲಿಗೆ ತಮ್ಮ ಕೃತ್ಯಕ್ಕೆ ಅಪಾಯವೊದಗುವ ದಿಕ್ಕಾದುದು, ಎಂಬ ಗುಟ್ಟು ಲಂಚಕೋರರಿಗೂ, ಕಳ್ಳ ಸಂತೆಯವರಿಗೂ ದೊರೆತು, ತಮ್ಮ ಲಕ್ಷ್ಯವನ್ನು ಕೇಂದ್ರೀಕರಿಸುವ ಅನುಕೂಲತೆಯೊದಗಿದಂತಾಯಿತೇ ಎಂದು ನಮಗನುಮಾನವಿದೆ. ಇಂದ ಮೇಲೆ ಇಂತಹ ಸುಧಾರಣೆಗಳನ್ನು ಸರಕಾರವು ಕೈಕೊಳ್ಳಕೂಡದೆಂಬ ಅಭಿಪ್ರಾಯ ನಮ್ಮದಲ್ಲ. ಜನಹಿತಸಾಧನೆಗೆಂದು ತಾವು ಮುಂದೊಡ್ಡುವ ಯೋಜನೆಗಳು ನಿರರ್ಥಕವಾಗುತ್ತಿರುವ, ಅಥವಾ ನೀರೀಕ್ಷಿಸಿದಷ್ಟು ಫಲಕೊಡದಿರುವ ಅನುಭವವು ಇಪ್ಪರಲ್ಲೇ ಕಾಂಗ್ರೆಸ್ ಸರಕಾರಕ್ಕಿಗದಿರದು. ಇದರ ಗೂಢವೇನು ಎಂಬುದನ್ನು ಶೋಧಿಸಿ, ತಪ್ಪಿದ್ದಲ್ಲಿ ತಿದ್ದುವದು ಸರಕಾರದ ಪ್ರಥಮ ಕರ್ತವ್ಯ. ತಾವು ಹಾಕುವ ಕಾರ್ಯಕ್ರಮಗಳಿಗೂ ಜನತೆಗೂ ಮಧ್ಯೆ ಬೇಲಿಯಾಗಿ ತಮ್ಮ ನೌಕರರ ಹಳೇ ಮನೋವೃತ್ತಿ ನಿಂತಿದೆ ಎಂಬುದನ್ನು ಆಗ ಕಾಂಗ್ರೆಸ್‌ಮಂತ್ರಿಗಳಾಗಿದ್ದವರಲ್ಲಾರೂ ದೃಷ್ಟಾಂತಕ್ಕಾಗಿ ಪೋಲೀಸ್ ಮತ್ತು ರೆವಿನ್ಯೂ ಖಾತೆಗಳನ್ನು ಮುಂದಾಗಿ ತೆಗೆದುಕೊಳ್ಳಲಿ–ಗವರ್ನರರ ಸೆಲಹೆಗಾರರ ಸ್ಥಾನದಲ್ಲಿ ಜನಪ್ರಮುಖರು ಬಂದರೆಂಬುದಕ್ಕಾಗಿ ಈ ಖಾತೆಗಳ ನೌಕರರು ತಮ್ಮಜ್ಞೇಯ. ಕಾರ್ಯವಿಧಾನ, ಘೋರಣೆ ಅಥವಾ ಮನೋವೃತ್ತಿಯನ್ನು ಬದಲಾಯಿಸಿಕೂಂಡುದಿದೆಯೆ? ನಮ್ಮ ತಿಳುವಳಿಕೆಗೆ–ಜನರ ಅನುಭವಕ್ಕೆ–ಎನ್ನೂ ಬಂದಿಲ್ಲ. ಅವು ಯಂತ್ರಗಳಂತೆ ಅಂದೂ ಇಂದೂ ಏಕಪ್ರಕಾರ ಚಲಿಸುತ್ತಿವೆ. ಸಲಹೆಗಾರ ಸರಕಾವಿರಲಿ, ಕಾಂಗ್ರೆಸ್ ಸರಕಾರ ವಿರಲಿ–ಬಿಲ್ಲಿಂದ ಬರುವ ಆಜ್ಞೆಗಳೋ ಸೂಚನೆಗಳೋ ಈ ಯಂತ್ರಗಳೊಕ್ಕುವ ಬಣ್ಣ ಹೊಂದಿಯೇ ಸಾರ್ವಜನಿಕರನ್ನು ಸೇರುತ್ತಿವೆ. ಆದ್ದರಿಂದ ಕಾಂಗ್ರೆಸ್ ಸರಕಾರವು ಪ್ರಧಮತಃ ಅವುಗಳನ್ನು ಶುದ್ಧೀಕರಿಸಬೇಕು ತನ್ನ ನೌಕರರ ಹಳೇ ಮನೋವೃತ್ತಿಯನ್ನು–ಜನತೆಯ ಅಜ್ಞಾನ, ಅಸಹಾಯಕತೆಯನ್ನು ತಮ್ಮ ಅನುಕೂಲಕ್ಕಾಗಿ ಉಪಯೋಗಿಸಿಕೊಳ್ಳುವ ಬುದ್ಧಿಯನ್ನು--ತಿದ್ದಬೇಕು. ತಾವು ಶುದ್ಧರಸವನ್ನು ಈ ಕೊಳೆ ತುಂಬಿದ ಪಾತ್ರೆಗಳಲ್ಲಿ ತುಂಬಿಸಿ ಜನರಿಗೆ ಕೂಡಿಸುತ್ತಿದ್ದೇವೆಂಬುದನ್ನು ಅರಿತುಕೊಂಡು ಮುಂದಾಗಿ ಅವುಗಳನ್ನು ತೊಳೆದುಕೊಳ್ಳಬೇಕು. ತೋಡು ದುರಸ್ತಿಪಡಿಸಿಕೊಳ್ಳದ ನೀರು ಬಿಟ್ಟರೆ ಹೊಲಕ್ಕೆ ಮುಟ್ಟದು. ಇಂದು ಪಾಗಾಗಿದೆ. ಕಾಂಗ್ರೆಸ್ ಮಂತ್ರಿಗಳು ಮುಂದಾಗಿ ಈ ಶುದ್ಧೀಕರಣಕ್ಕೆಳಿಯುವದು ಅಗತ್ಯವೆಂಬುದು ಅನುಭವಸಿದ್ಧವಾಗಿದೆ ಮುಂದಿನ ಕೆಲವು ದಿನಗಳಲ್ಲಿ ನಾಲ್ವರು ಮಂತ್ರಿಗಳು ದಕ್ಷಿಣ ಕನ್ನಡವನ್ನು ಸಂಚರಿಸಲಿದ್ದಾರೆ. ಅವರೀ ಕುರಿತು ಸ್ವಾನುಭವ ಪಡೆಯಲು ಪ್ರಯತ್ನಿಸಲಾರರೇ?

ದಕ್ಷಿಣ ಕನ್ನಡ ಜಿಲ್ಲೆಯ ಉತ್ತರ ಭಾಗದ ತಾಲೂಕುಗಳಲ್ಲಿ ಕಂದಾಯ ಮಂತ್ರಿ, ಸಾರ್ವಜನಿಕ ಕೆಲಸ ಖಾತೆಯ ಮತ್ತು ಸ್ಥಳೀಯ ಸಂಸ್ಥೆಯ ಆಡಳಿತ ಮಂತ್ರಿಗಳ ಸಂಚಾರ ಕಾರ್ಯಕ್ರಮ.

ತಾ. 13-11-46ನೇ ಬುಧವಾರ–ಪೂರ್ವಾಹ್ನ ಮಂಗಳೂರಿನಿಂದ ಹೊರಟು, ಕರಾವಳಿ ಮಾರ್ಗವಾಗಿ ಮಧ್ಯಾಹ್ನ ಉಡುಪಿಗಾಗಮನ ಅಪರಾಹ್ನ ಅಲ್ಲಿಂದ ಮಲ್ಪೆಗೆ ಹೋಗಿ ಮಲ್ಪೆ ಬಂದರಿನ ಪರಿಶ್ಲೆ. ರಾತ್ರಿ ಉಡುಪಿಯಲ್ಲಿ ವಿಶ್ರಾಂತಿ.

ತಾ. 14-11-46ನೇ ಗುರುವಾರ–ಮಂಜಾನೆ ಉಡುಪಿಯಿಂದ ಹೊರಟು ಮಧ್ಯಾಹ್ನದಲ್ಲಿ ಕುಂದಾಪುರಕ್ಕಾಗಮನ. ಅಪರಾಹ್ನ ಕುಂದಾಪುರದಿಂದ ಹೊರಟು ಬೈಂದೂರನ್ನು ಸಂದರ್ಶಿಸಿ ಮರಳಿ ಕುಂದಾಪುರಕ್ಕೆ. ರಾತ್ರಿ ಕುಂದಾಪುರದಲ್ಲಿ ವಿಶ್ರಾಂತಿ.

ತಾ. 15-11-46ನೇ ಶುಕ್ರವಾರ–ಮುಂಜಾನೆ ಕುಂದಾಪುರದಿಂದ ಹೊರಟು ಸೋಮೇಶ್ವರ ಮಾರ್ಗವಾಗಿ ಮಧ್ಯಾಹ್ನ ಕಾರ್ಕಳಕ್ಕಾಗಮನ. ಅಪರಾಹ್ನ ಕಾರ್ಕಳದಿಂದ ಮಂಗಳೂರಿಗೆ ಪ್ರಯಾಣ.

ತಾ 16-11-46ನೇ ಶನಿವಾರ—ಇಡೀ ದಿನ ಮಂಗಳೂರಿನಲ್ಲಿ.

ತಾ 17-11-46ನೇ ಆದಿತ್ಯವಾರ–ಪೂರ್ವಾಹ್ನ 7-15ಕ್ಕೆ ಮಂಗಳೂರಿನಿಂದ ಮಂಗಳೂರು - ಕೊಚಿನ್ ಎಕ್ಸ್‌ಪ್ರೆಸ್ ಮೂಲಕ ಪ್ರಯಾಣ. ತಾ. 18ನೇ ಮುಂಜಾನೆ 7-35ಕ್ಕೆ ಮದ್ರಾಸಿಗೆ ಮರಳಿ ಮುಟ್ಟುವರು

(ಮನೇ ಪುಟದಿಂದ)

ಅಲ್ಲಿಯ ಡಯರೋಪಿಯನ್ ಮೆಜಿಸ್ಟ್ರೇಟ್ ಉಳಿಸಿದ್ದ.

ಮಹಿಳೆಯರ ಮಾಂಗಲ್ಯ ಸೂತ್ರ ಮತ್ತು ಬಳೆಗಳನ್ನೊಡೆದು, ಹಣೆಯ ಕುಂಕುಮವನ್ನುಜ್ಜಿ ತೆಗೆದು ಘೋರಘಟ್ಟ ಇಸ್ಲಾಂ ಪವಿತ್ರ ವಸ್ತ್ರವನ್ನು ಮುಟ್ಟಿಸಿ ಮತಾಂತರಿಸುತ್ತಿದ್ದರು. ಸುಲಭದಲ್ಲೊಪ್ಪದ ಮಹಿಳೆಯರನ್ನು ದೂಡಿ ಕೆಡಹಿ ಅವರ ಹಣೇ ಕುಂಕುಮವನ್ನು ಪುಂಡರು ತಮ್ಮ ಕಾಲ್ಬೆರಳುಗಳಿಂದ ಉಜ್ಜಿ ತೆಗೆಯುತ್ತಿದ್ದರು.

ಕೆಲವು ಹಿಂದೂ ಪಂಗಡಗಳು ಈಗಲೂ ಪುಂಡರ ಕೋಟಿಗೆಗಳಿಗೆ ಸಿಕ್ಕಿಬಿದ್ದಿವೆ ನೇನೆ ವಿನಹ ಅವರನ್ನು ಬಿಡಿಸಿ ತರಲು ಸಾಧ್ಯವಿಲ್ಲ ಅಭಾಗಗಳಿಂದ ಮೊದಲೇ ಹೊರಗೆಹೋಗಿದ್ದವರಿಗೆ ಒಳಗೆ ಹೋಗಲಾಗದೆ ತಮ್ಮವರೇನಾದರೂ ಬದೇ ಗೊತ್ತಿಲ್ಲ.

ಎರಡು ವಾರಗಳ ನಂತರವೂ ಅಲ್ಲಿಯ ಸಾಲು ಸಾಲು ಮನೆಗಳುರಿಯುತ್ತಿವೆ

ಆ ಭಾಗದಿಂದೋಡಿ ಬಂದು ಹೊರ ಪ್ರದೇಶಗಳಲ್ಲಿ ಆಶ್ರಯ ಪಡೆದಿರುವವರ ಸಂಖ್ಯೆ ಸುಮಾರು ೨೦ ಸಾವಿರವಿದೆ.

ಒಂದು ವಾರದ ವರೆಗೆ ಬಂಗಾಳಾ ಸರಕಾರ ಅಲ್ಲಿಯ ಪ್ರಸ್ಥಾಪಕ್ಕೇನೇ ಹೋಗಲಿಲ್ಲ. ಈಗ ಅತ್ಯಾಚಾರದ ಮುಂದಾಳು ಮಾಜಿ ಎಂ. ಎಲ್. ಎ. ಯನ್ನೂ ಇತರ ಒಬ್ಬಬ್ಬರು ಮುಖಂಡರನ್ನೂ ಹೊಸತಾಗಿ ಬಂದಿರುವ ನವಾಖಾಲಿ ಡಯರೋಪಿಯನ್ ಜಿಲ್ಲಾ ಮೆಜಿಸ್ಟ್ರೇಟರು ಸೈನಿಕರ ಸಹಾಯದಿಂದ ದಸ್ತಗಿರಿ ಮಾಡಿಸಿದ್ದಾರೆ. ನೆವ ಮಾತ್ರಕ್ಕಾಗಿ ಕೇವಲ 50ರಷ್ಟು ಪುಂಡರನ್ನು ದಸ್ತಗಿರಿಮಾಡಲಾಗಿದೆ.

ರಸ್ತೇ ಕಾವಲಿಗಾಗಿ ಪೋಲೀಸರನ್ನಿಟ್ಟಿದ್ದಾರೆ. ತಮ್ಮ ಪ್ರಾಣಾಪಾಯಕ್ಕೆಲ್ಲದೆ ಅನ್ಯಥಾ ಗುಂಡು ಹಾರಿಸುವ ಆಜ್ಞೆ ಅವರಿಗಿಲ್ಲ. ಅವರಾರ ಗೊಡವೆಗೂ ಹೋಗುವದಿಲ್ಲ. ನೆವಮಾತ್ರಕ್ಕೆಂಬಂತೆ ಸೈನಿಕರನ್ನೂ ಕೆಲಸಕ್ಕೆ ಕಳುಹಿಲಾಗಿದೆ.

ಬಂಗಾಳಾ ಸರಕಾರವೂ, ಲೀಗ್ ಸಮಿತಿಯೂ ಸತ್ಯವರೆ ಸಂಖ್ಯೆ ಮೂರಂಕೆಯ ಒಳಗಿದೆಯೆಂದೂ ಹಿಂದೂ ಪತ್ರಿಕೆಗಳೂ ಇತರರೂ ಅತಿಶಯೋಕ್ತಿಯ ಪ್ರಚಾರ ನಡಿಸುತಿದ್ದಾರೆಂದೂ ದೂರಿದ್ದಾರೆ. ಬಂಗಾಳಾ ಗವರ್ನರರೂ ಇದೇ ಅಭಿಪ್ರಾಯವನ್ನು ಲಂಡನ್ನಿಗೆ ವರದಿಮಾಡಿದ್ದಾರೆ. ಪೀಡಿತ ಸ್ಥಳಕ್ಕೆ ವಿಮಾನ ಮೂಲಕ ಆಹಾರಧಾನ್ಯವಿಳಿಸುತಿದ್ದಾರೆ.

ಮಿ. ಜಿನ್ನರು ಹಿಂದೂ ಮುಸಲ್ಮಾನರನ್ನು ಸಮಾನವಾಗಿ ನಿಂದಿಸಿ, ಹೆಚ್ಚಿನ ವಾರ್ತೆಗಳು ಅತಿಶಯೋಕ್ತಿಯವೆಂದು ತಿಳಿಸಿ ನವಾಖಾಲಿ ಅತ್ಯಾಚಾರವನ್ನು ಅರೆಮನಸ್ಸಿನಿಂದ ಖಂಡಿಸಿದ್ದಾರೆ.

ಆಚಾರ್ಯ ಕೃಪಲಾನಿಯವರು ಆಕಾಶಮಾರ್ಗವಾಗಿಯೂ ನೆಲದಲ್ಲಿಯೂ ಸಂಚರಿಸಿ, ರಕ್ಷಣಾ ವ್ಯವಸ್ಥೆಮರು ಮತಾಂತರಾದಿಗಳನ್ನು ನಡೆಸಿ ಮರಳಿದ್ದಾರೆ ಶ್ರೀಮತಿ ಕೃಪಲಾನಿ ಅಲ್ಲೇ ಉಳಿದಿದ್ದಾರೆ. ಶರಶ್ಚಂದ್ರ ಬೋಸ್, ಶ್ಯಾಮಪ್ರಸಾದ ಮುಖರ್ಜಿ, ಪಿ. ಸಿ. ಘೋಷ್ ಮೊದಲಾದ ಪ್ರಮುಖರೂ ಸಂಚರಿಸಿ ಮರಳಿದ್ದಾರೆ. ಆರ್ಯಸಮಿಲಯಗಳೂ, ಸ್ವಯಂಸೇವೆಕರೂ ಅಹರ್ನಿಶಿ ರಕ್ಷಣಾ ಕೆಲಸದಲ್ಲಿದ್ದಾರೆ.

ಗಾಂಧಿಜೀ ತಾ. 29ಕ್ಕೆ ಕಲ್ಕತ್ತೆಗೆ ಬಂದಿದ್ದಾರೆ. ಬಿಹಾರ ಬಂಗಾಳದ ಈ ಕತೆಗಳಲ್ಲಿ ತಿರುಗಲಿದ್ದಾರೆಂದು ತಿಳಿದು ಬರುತ್ತದೆ.

ಉಡುಪಿ

ಬೀಡಿ ಮಜೂರರ ಮುಷ್ಕರ—ಮಿಕ್ಕೆ ಕಡೆಗಳಂತೆ ಉಡುಪಿಯಲ್ಲಿಯೂ ತಾ. 21ರಿಂದ ಆರಂಭವಾಗಿದೆ ತಾ 26ರಲ್ಲಿ ಮಜೂರರ ಪ್ರಭಾತಫೇರಿ, ಪೇರವಣಿಗೆ ಮತ್ತು ಶ್ರೀ ಎಸ್ ಎನ್ ಹೊಳ್ಳರ ನೇತೃತ್ವದಲ್ಲಿ ರಥವೀಧಿಯಲ್ಲಿ ಸಾರ್ವಜನಿಕ ಸಭೆ ನಡೆಯಿತು. ತಾ 27ರಿಂದ ಸಾಲ್ಕು ಆಂಧಿಗಳಿದಿರು ಇಬ್ಬರಿಬ್ಬರು ಮಜೂರರು ಪಹರೆ ನಡಿಸುತ್ತಿದ್ದಾರೆ ಮುಷ್ಕರವೂ ಅಧಃ ಮಧ್ಯಪಾಗಿಡೆ ಮೂಲಕರ ವ್ಯಾಪಾರಗಳು ಸಹ ಮುಷ್ಕರದಿಂದ ಅಪಾರ್ಣತಯಿಂದಲೂ ಅನ್ಯ ವ್ಯವಸ್ಥೆಗಳಿಂದಲೂ ಯಥಾ ಪ್ರಕಾರ ಸಾಗುತ್ತಿವೆ ಇದೊಂದು ಕಾಲ್ಪತ ತಂಟೆಯೆಂಬ ಭಾವನೆ ಮೊಳತು ಸಾರ್ವಜನಿಕರು ಈ ಕುರಿತು ಔದಾಸೀನ್ಯವಹಿಸಿದ್ದಾರೆ ಸ್ಥಳೀಯ ಸ್ಥಿತಿಗಳಿಗೆ ಸಂಬಂಧಿಸಿದರೆ ಕೇಳಲ್ಪ, ಮುಂಗಳೂರಕ್ಕೊದಿಗೆ ಗಂಜಿಸೊಡನೆ ಗೋವಿಂದಾ" ಹಾಕುವ ಈ ಪ್ರವೃತ್ತಿಯಲ್ಲಿ ಯಾರಿಗೂ ಏನೆಂದೂ ಆಸಕ್ತಿಯಿದ್ದಂತೆ ತೋರುವದಿಲ್ಲ

ನೆಹರೂ ವೈಶಿಷ್ಟ್ಯದೊಡನೆ ಕೇಂದ್ರ ಎಸೆಂಬ್ಲಿಯ ಪ್ರಾರಂಭ

ತಾ. 28 ರಲ್ಲಾಯಿತು. ಕೇಂದ್ರ ಸರಕಾರದ 8 ಹೊಸ ಮಂತ್ರಿಗಳು ಇಡೀ ಸಭೆಯ ಉತ್ಸಾಹ ಧ್ವನಿಯ ನಡುವೆ ಪ್ರತಿಜ್ಞೆ ಸ್ವೀಕರಿಸಿದರು. ಪ್ರಥಮತಃ ಪ್ರತಿಜ್ಞಾ ವಾಚನಕ್ಕೆ ಬಂದ ಪಂಡಿತ ನೆಹರುಗಳು ಪ್ರತಿಜ್ಞಾ ಪತ್ರವನ್ನು ಓದುತ್ತಿದ್ದಾಗ 'ನಾನು–ಜವಾಹರಲಾಲ ನೆಹರು–ಎಸೆಂಬ್ಲಿಯ ಓರ್ವ ಸದಸ್ಯನಾಗಿ ನೇಮಕಗೊಂಡಿದ್ದು....." ಎಂದಿದ್ದ ಅದರ 'ನೇಮಕ' ಶಬ್ದ ತಪ್ಪೆಂದು ಭಾವಿಸಿ, ಅಲ್ಲಿಯೇ ತಡೆದು ಅಸಹನೆಯಿಂದ ಪತ್ರವನ್ನು ಬದಿಗಿಟ್ಟು ನೋಡಹತ್ತಿದರು. ಆದರೆ ಅವರು ಎಸೆಂಬ್ಲಿಗೆ ನೇಮಕಗೊಂಡವರು ಹೊರತು ಚುನಾಯಿಸಲ್ಪಟ್ಟವರಲ್ಲ, ಎಂಬುದನ್ನು ಕಾರ್ಯದರ್ಶಿ ಜ್ಞಾಪಕಕ್ಕೆ ತಂದ ಮೇಲೆ ಪತ್ರವನ್ನೋದಿ ಮುಗಿಸಿ ಅಧ್ಯಕ್ಷರಿಗೆ ಹಸ್ತಲಾಘವವಿತ್ತರು.

ನೆಹರುಗಳಿಂದ ಅಫ್ರಿಕದ ಕುರಿತು ಹೇಳಿಕೆ

ದಕ್ಷಿಣಾಫ್ರಿಕದಲ್ಲಿ ಹಿಂದೀಯರಿಗಾಗುತ್ತಿರುವ ಅನ್ಯಾಯವನ್ನು ಹಿಂದೀ ಸರಕಾರಕ್ಕೆ ಪ್ರತಿಬಂಧಿಸಲಾಗದುದಕ್ಕಾಗಿ ಸರ್ದಾರ್ ಬಲದೇವ ಸಿಂಗರು ನಿಲುವಳಿ ತರಾವಿನ ಸೂಚನೆ ಕೊಟ್ಟಿದ್ದರು. ವಿದೇಶ ಮಂತ್ರಿ ಪಂಡಿತ ನೆಹರುಗಳು ಈ ಕುರಿತು ಜಾಗರೂಕ ಸಂಘೆದಲ್ಲಿ ಹಿಂದೀ ಸರಕಾರದ ಪ್ರತಿನಿಧಿಗಳು ಮಾಡುತ್ತಿರುವ ಕಾರ್ಯಗಳನ್ನೂ ಪಡೆದಿರುವ ವಿಜಯವನ್ನೂ ಶ್ಲಾಘಿಸಿ "ಜಾಗತಿಕ ಸಂಘೆವು ನಮಗನುಕೂಲವಾದ ನಿರ್ಣಯಮಾಡುವದೆಂದು ಆತಿಸುತ್ತೇನೆ. ಮಾಡಲಿ, ಮಾಡದಿರಲಿ, ನಾವಂತೂ ಕೊನೆಯವರೆಗೂ ದಕ್ಷಿಣಾಫ್ರಿಕದ ನಮ್ಮ ರಾಷ್ಟ್ರೀಯರ ಬೆಂಬಲಕ್ಕಿರುವೆವು" ಎಂದು ನೆಹರುಗಳಂದಾಗ ಸಭೆ ಉತ್ಸಾಹಧ್ವನಿಯೆಬ್ಬಿಸಿತು. ನಿಲುವಳಿ ಸೂಚನೆ ರದ್ದಾಯಿತು.

ಜಾತಿದಂಗೆಗಳ ಕುರಿತು ಸರ್ದಾರರ ಹೇಳಿಕೆ.

ಕಲ್ಕುತ್ತಾ, ಅಹಮ್ಮದಾಬಾದ್, ಬೊಂಬಾಯಿ, ನಾಸಿಕ ಜಿಲ್ಲೆ, ಅಲ್ಲಹಾಬಾದ್ ಮತ್ತು ನವಾಖಾಲಿ ಜಾತೀಯ ಗಲಭೆಗಳ ಕುರಿತು ಕಾಂಗ್ರೆಸ್ ಹಾಗೂ ಮುಸ್ಲಿಂ ಲೀಗ್ ಸದಸ್ಯರ ಹೆಸರಿನಲ್ಲಿ ಹಲವು ನಿಲುವಳಿ ಸೂಚನೆಗಳು ಬಂದಿದ್ದುವು. ಗೃಹ ಮಂತ್ರಿ ಸರ್ದಾರ್‌ವಲ್ಲಾಭಾಯಿಗಳು ಬಂಗಾಳಂ ಮತ್ತಿತರಕಡೆಗಳ ಅತ್ಯಾಚಾರಗಳಿಂದ ತಮ್ಮೆಲ್ಲರ ಹೃದಯದಲ್ಲಾಗಿರುವ ಪರಿಣಾಮವನ್ನೊಪ್ಪಿಕೊಂಡು, ಹಾರ್ದಿಕಸಹಾನುಭೂತಿಸೂಚಿಸಿದರು. 'ನನ್ನ ಮುಂದಿರುವ ಕಠ್ಯಮತ್ಸ್ಯನಿಯಮಾನ್ವೇಷ್ಟ್ರತೆಗಳನ್ನು ನೀವು ಬಲ್ಲಿರಿ. ಘಟನಾನಿಯಮಗಳ ಪ್ರಶ್ನೆಗಳವೆ. ಆದ್ದರಿಂದ ಇಲ್ಲಿಯೇ ನಿರ್ಧಾರ ಮಾಡಲಾಗುವುದಿಲ್ಲ ಈಗ ಬೇಕಾದುದು ಚರ್ಚೆಯಲ್ಲ, ಕಾರ್ಯ. ದುರ್ಘಟನೆಗಳನ್ನಿಲ್ಲದಂತೆ ಕರಿಣ ಕಾರ್ಯ ಕೈಗೊಳ್ಳುವೆವು. ಸಾಧ್ಯವಿದ್ದುದನ್ನೆಲ್ಲಾ ಮಾಡುವೆವೆಂದು ಸರಕಾರದಪರವಾಗಿ ಆಶ್ವಾಸನೆಕೊಡುತ್ತೇನೆ" ಎಂದು ಸರ್ದಾರರಂದರು. 'ಸರ್ದಾರರು ಬಂಗಾಳವನ್ನು ಮಾತ್ರ ಸ್ಪರ್ಶಿಸಿದರೇಕೆ?" ಎಂದು ಲೀಗ್ ಸದಸ್ಯರೊಬ್ಬರಪ್ರಶ್ನಿಸಿದಾಗ ತಪ್ಪು ಮಾತು ಸರ್ವಕಡೆಗಳಿಗೂ ಲಗಾನೆಂದರು. ಸೂಚನೆಗಳು ನಿಯಮವಿರುದ್ಧವೆಂದು ರದ್ದಾದುವು. ಇಂದೂ ಮಂಗಳೂರು

ಶ್ರೀ ಆರೂರರ ಭಾವಚಿತ್ರ ಅನಾವರಣಕ್ಕೆ ವಿರೋಧ ಪ್ರದರ್ಶನ—

ತಾ. 27ರಲ್ಲಿ ಶ್ರೀ ಆರೂರು ಭಾವಚಿತ್ರ ಅನಾವರಣದ ಕಾರ್ಯಕ್ರಮವಿತ್ತು. ಯುವಜನ ಕಾಂಗ್ರೆಸಿನವರು ಜಿಲ್ಲಾ ಕಾಂಗ್ರೆಸಿನ ನಿರ್ಣಯವನ್ನು ಜಾರಿಗೆ ತರಲು ಕೆನರಾ ಹೈಸ್ಕೂಲಿನಿಂದ ನೆಹರುವಣಿಗೆ ಹೊರಟಿದ್ದರು. ಪ್ರದರ್ಶಕರು ರಸ್ತೆಯಲ್ಲಿ ವಿರೋಧ ಘೋಷಣೆಯೊಂದಿಗೆ ದಿಸ್ಕೌಂಟ್ ಬೋರ್ಡಾ ಆಫೀಸಿಗೆ 5 ಗಂಟೆಗೆ ಸರಿಯಾಗಿ ಮುಟ್ಟಿದರು. 7-8 ಕಾರುಗಳಲ್ಲಿ ಬಂದವರನ್ನು ಹಿಂದೆ ಕಳುಹಿಸಲಾಯಿತು. ಕೆಲಮಂದಿ ಒಳಗೆ ನುಗ್ಗಿದರು. ಎರಡು ಗೇಟಿನ ಬಳಿಯಲ್ಲಿ ಸಾವಿರಾರು ಜನರು ನಿಂತು ರಾಷ್ಟ್ರ ಮುಖಂಡರ ಜಯಘೋಷಮಾಡುತ್ತಿದ್ದರು. 9 ಗಂಟೆಯ ಸುಮಾರಿಗೆ ಸಮಾರಂಭದಲ್ಲಿ ಭಾಗವಹಿಸಿದ ವ್ಯಕ್ತಿಗಳು ಹಿಂತಿರುಗುವಾಗ ಜನರು ಶೇಮ್ ಶೇಮ್ ಎಂದು ಹೊಸ್ತಿಡುತ್ತಿದ್ದರು. 7 ಗಂಟೆಗೆ ಡಿ. ಬೋರ್ಡ್ ಕಂಪೌಂಡಿನಲ್ಲಿ ಒಂದು ಸಾರ್ವಜನಿಕ ಸಭೆ ಜರಗಿ ಶ್ರೀ ಕೆ. ಶೆಟ್ಟರು ಶ್ರೀ ಆರೂರವರ ಜೀವನ ಚರಿತ್ರೆಯನ್ನೂ ಅವರ ಲೆಲವು ಕೃತ್ಯಗಳನ್ನೂ ವಿವರಿಸಿದರು. ಎಂದೊಬ್ಬ ಸ್ವಯಂಸೇವಕರು ಬರೆಯುತ್ತಾರೆ–

ಹೀಗೆ ವಿರೋಧ ಪ್ರದರ್ಶನವಾಗುತ್ತಿದ್ದರೂ ಒಳಗಡೆಯಿಂದ ಶ್ರೀ ಆರೂರವರ ಭಾವಚಿತ್ರ ಅನಾವರಣವು ರಾ। ಬಾ। ಗಿರಿಯಪ್ಪನವರ ಅಧ್ಯಕ್ಷತೆಯಲ್ಲಿ ಶ್ರೀ ಆರೂರವರ ಸಮಕ್ಷಮ ನಡೆಯಿತು. ಈ ಚಿತ್ರವನ್ನು ಡಿ. ಕ. ಜಿಲ್ಲಾಬೋರ್ಡು ಎಲಿಮೆಂಟರಿ ಶಾಲಾ ಅಧ್ಯಾಪಕರು ಅನಾವರಣಕ್ಕಾಗಿ ಉಚಿತವಾಗಿ ಕೊಟ್ಟಿದ್ದರು. ಅನಾವರಣಕಾರ್ಯವನ್ನು ರಾ। ಸಾ। ಣ। ಆರ್. ರಂಗನಾಥ ಪ್ರಾಂಜರು ನೆರವೇರಿಸಿದರು. ಶ್ರೀ ಪಿ ಎಸ್. ರಾಘವೇಂದ್ರ ರಾಯರು ಅಧ್ಯಾಪಕ ವರ್ಗದ ಅಭಿನಂದನಾ ಪತ್ರಕ್ಕೆ ಉತ್ತರವಿತ್ತರು. ಶ್ರೀಗಳಾದ ಪಿ. ಭೋಜರಾಜ್, ಎಸ್. ಮಂಜುನಾಥ ರಾವ್ ಮೊದಲಾದವರು ಶ್ರೀ ಆರೂರರು ಎಲಿಮೆಂಟರಿ ಶಾಲೆಗಳ ಅಧ್ಯಾಪಕ ವರ್ಗಕ್ಕೆ ಮಾಡಿದ ಸಹಾಯಹಸ್ತದ ನಿಷಯಗಳನ್ನೆತ್ತಿ ನುತಿಸಿದರು. ಶ್ರೀ ಆರೂರರವರು ತನ್ನನ್ನು ಈ ರೀತಿ ಗೌರವಿಸಿದುದಕ್ಕಾಗಿ ಆಭಾರ ಸೂಚಿಸಿದರು.

ಕಂದಾಯ ಮಂತ್ರಿಗಳ ಜಿಲ್ಲಾ ಸಂಚಾರ—

ಮದ್ರಾಸು ಸರಕಾರದ ಕಂದಾಯ ಮಂತ್ರಿಗಳಾದ ಶ್ರೀ ಕೆ. ಆರ್. ಕಾರಂತರು ನವಂಬರ ತಾ. 10ರಿಂದ ಡಿ. ಕ. ಜಿಲ್ಲೆಯಲ್ಲಿ ಸಂಚರಿಸುವ ಒಂದು ವಾರದ ಕಾರ್ಯಕ್ರಮವನ್ನು ನಿರ್ಣಯಿಸಿರುವುದಾಗಿ ಗೊತ್ತಾಗಿದೆ. ಅವರೊಂದಿಗೆ ಸಾರ್ವಜನಿಕ ಕಾನುಗಾರಿ ಮತ್ತು ಸ್ವರೀಯ ಸಂಸ್ಥೆ ಮಂತ್ರಿಗಳಾದ ಶ್ರೀ ಭಕ್ತವತ್ಸಲಂ ಮತ್ತು ಮಿಃ ಥೇನಿಯಲ್ ಥೋಮಸ್ ಆವರೂ ಜತೆಯಲ್ಲಿ ಸಂಚರಿಸಲಿರುವರೆಂದೂ ತಿಳಿದು ಬಂದಿದೆ. ಬಂದಿದುಗಳು, ನೂರ್ಗ ಮತ್ತು ರೈಲ್ವೆ ಸೌಕರ್ಯ ಮತ್ತು ನೀರಾವರಿ ಅಭಿವೃದ್ಧಿ ಮುಂತಾದವುಗಳ ಪರಿಶೀಲನೆಗಾಗಿ ಈ ಸಂಚಾರವನ್ನು ಕೈಕೊಳ್ಳುವಲಾಗುವುದೆಂದು ಹೇಳಲಾಗಿದೆ.

ದ. ಕ. ಜಿಲ್ಲಾ ಬೋರ್ಡು ಚುನಾವಣೆ

ಬರುವ ಜಿಲ್ಲಾ ಬೋರ್ಡು ಚುನಾವಣೆಗೆ ದಕ್ಷಿಣ ಕನ್ನಡ ಜಿಲ್ಲಾ ಗ್ರಾಮೋದ್ಧಾರ ಸಂಘದ ಕಛೇರಿಯಿಂದ ಉಮೇದ್ವಾರರಾಗಿ ನಿಲ್ಲ ಬಯಸುವವರು ತಾ. 5-11-1946ರ ಒಳಗೆ ಕಲಪುವಂತೆ ಈ ಕೆಳಗೆ ಸಹಿ ಹಾಕಿದವರೀಗೆ ಬರೆದು ಅರ್ಜಿ ಮತ್ತು ಪ್ರತಿಜ್ಞಾಪತ್ರವ ಫೋರ್ಮನ್ನು ತರ್ಸಿಕೊಂಡು ಕಳುಹಿಸಿಕೊಡತಕ್ಕದ್ದು. ಅರ್ಜಿಯ ಸಂಗಡ ಸಮಿತಿಯ ನಿಯಮದಂತೆ ರೂಪ್ಯಾ 25-0-0ನ್ನು ಕೂಡ ಕಳುಹಿಸತಕ್ಕದ್ದು. ಆದರೆ ಹರಿಜನ ಉಮೇದ್ವಾರರು ರೂ. 5-0-0 ಮಾತ್ರ ಕಳುಹಿಸಿದರೆ ಸಾಕು. ಈ ಫೀಸಿನ ಪೈಕಿ ರೂಪಾಯಿ 1-0-0 ನ್ನು ಸಂಘದ ಸದಸ್ಯತನದ ಸಂತತಿಗೆ ಬರ್ಕೆ ಜಮೆ ಕಟ್ಟಿಕೊಳ್ಳೋಣವಾಗುವದು. ಉಮೇದ್ವಾರರ ಅರ್ಜಿಯು ಚುನಾವಣಾ ಸಮಿತಿಯಿಂದ ಸ್ವೀಕೃತವಾಗದೆ ಯಿದ್ದ ಪಕ್ಷದಲ್ಲಿ ರೂ. 15-0-0; ಹರಿಜನ ಉಮೇದ್ವಾರರೀಗೆ ರೂಪಾಯಿ 3-0-0 ವಾಪಾಸು ಕೊಡಲ್ಪಡುವದು.

ಎಂ. ಎಸ್. ಅಧಿಕಾರಿ,
ಕಾರ್ಯದರ್ಶಿ,
ದ. ಕ. ಜಿಲ್ಲಾ ಗ್ರಾಮೋದ್ಧಾರ ಸಂಘದ
ಜಿಲ್ಲಾಬೋರ್ಡು ಚುನಾವಣಾ ಸಮಿತಿ
ಕಾರ್ಕಳ.

NOTICE

ಮಂಗಳೂರು ಡಿ. ಮು. ಕೋರ್ಟಿನಲ್ಲಿ.

O. P. No. 67/1946

1 ತೋಮಸ್ ಪಿರೇರ, 2 ಜೋನ್ ಪಿರೇರ, 3 ಸಬಸ್ಟಿಯಾನ ಪಿರೇರ–ಅರ್ಜಿದಾರರು

ವಿರುದ್ಧ

ರಾಮಪ್ಪಯ್ಯ ಶ್ಯಾನುಭೋಗ ಕೂಡಾ ೨ ಪ್ರತಿವಾದಿಗಳಿಗೆ

2ನೇ ಪ್ರತಿವಾದಿಯ ಹಿರಿಯಜ್ಜ ಶ್ಯಾನುಭೋಗ, ಸುಬ್ರಾಯ ಶ್ಯಾನುಭೋಗರ ಮಗ, ಉಡ್ಡಿ ತಾಲೂಕು ಇನ್ನಂಜೆ ಗ್ರಾಮದಲ್ಲಿರುವವ ಇವರೊಳಗೆ

ತಾ. 9-2-1911ರಲ್ಲು ಬುದ್ಧಿ ಕೃಷ್ಣರಾಯ ವಗೈರೆರು ಶ್ರೀನಿವಾಸ ಶ್ಯಾನುಭೋಗ ಕೂಡಾ 2 ಜನರಿಗೆ ರೂ. 1200ಕ್ಕೆ ಬರಕೊಟ್ಟ ಆವಾರ ದಸ್ತಾವೇಜಿನ ಹಣವಗೈರೆ ರೂ. 1273-8-0 ಡಿಪೋಜಿಟು ಮಾಡಿ ಸದ್ರಿ ಆವಾರ ಪರಿಪಸ್ಸಿ ಆಸ್ತಿ ಸ್ವಾಧೀನತೆ ಬಗ್ಗೆ ಆರ್ಜಿದಾರರು ದಾಖಲು ಮಾಡಿದ ಸದ್ರಿ ಅರ್ಜಿಯು ತಾರೀಕು 4 11 1946ಕ್ಕೆ ಯೀ ಕೋರ್ಟು ಮುಂದೆ ತನ್ನಿಗೆ ಯಿಟ್ಟಿರುವುದರಿಂದ ನೀವು ಸದರಿ ತಾರೀಕಿನಲ್ಲಿ ಬೆಳಿಗ್ಗೆ ಸರಿಯಿ 11 ಕ್ಕೆ ಯೀ ಕೋರ್ಟು ಮುಂದೆ ಹಾಜರಾಗಿ ನಿಮ್ಮ ಆಕ್ಷೇಪಗಳನ್ನು ದಾಕ್ಲು ಮಾಡತಕ್ಕದ್ದು. ತಪ್ಪಿದರೆ ಸದರಿ ಅರ್ಜಿಯನ್ನು ನಿಮ್ಮ ಗೈರಹಾಜರಿಯಲ್ಲಿ ಎಕ್ಸಪಾರ್ಟಿಯಾಗಿ ತೀರ್ಮಾನಿಸಲಾದೀತು ಎಂತ ಈ ಮೂಲಕ ತಿಳಿಸೋಣವಾಗಿಯಿದೆ.

(By order of the Court)

Mangalore 20-10-1946 } P. Shrinivasa Rao Advocate for Petr.

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

O. P. No. 67/1946

1 B. ರಾಮಂಣ ಅಚಾರ್ಯ, 2 B. ಗೋಪಾಲ ಕೃಷ್ಣ ಆಚಾರ್ಯ, 3 B. ದಾಸಂಣ ಆಚಾರ್ಯ–ಯಿವರ ಜನರಲ್ ಪವರ್ ಒಲ್ ಎಟರ್ನಿ ಹೋಲ್ಡರ್ B. ಗೋಪಾಲ ಕೃಷ್ಣ ಆಚಾರ್ಯ ಅರ್ಜಿದಾರರು

ವಿರುದ್ಧ

A ಸುಬ್ರಾಯ ಹೊಳ್ಳ–ಯೆದ್ರಿ ಮೇಲ್ಕಂಡ ಅರ್ಜಿದಾರರು, ಪ್ರತಿವಾದಿಯಾದ ಬಿ. ಲಕ್ಷ್ಮೀನಾರಾಯಣ ಆಚಾರ್ಯ ಯಿವರಿಗೆ ಹೊರಗಿನಿಂದ ಬರತಕ್ಕ ಮೇಲ್ಕಂಡ ಅರ್ಜಿಯಲ್ಲಿ ವಿವರ್ಸುರುವ ಸಾಲಗಳನ್ನು ವ್ಸಲು ಮಾಡುವ ಬಗ್ಗೆ ತಮಗೆ ವಾರಿಸು ಸರ್ಟಿಫಿಕೇಟು ಕೊಡಬೇಕಾಗಿ ಮೇಲ್ಕಂಡ ಕೋರ್ಟಿನಲ್ಲಿ ದಾಕ್ಲು ಮಾಡಿದ ಅರ್ಜಿಯು ತಾ. 27-11-46 ರಲ್ಲು ತನ್ಮಿಗೆ ಯಿಟ್ಟಿರುವದರಿಂದ ಯಿ. ಕಾರ್ತು ಅಕ್ಷೇಪಣೆ ಉಳ್ಳವರು ಆವರವರ ಅಕ್ಷೇಪಣೆಗಳನ್ನು ಸದರಿ ತಾರೀಕಿನ ಬೆಳಿಗ್ಗೆ 11ಗಂಟೆಯ ಸಮಯಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಸ್ವತಹಾ ಅಥವಾ ವಕೀಲರ ಮುಖಾಂತರ ಹಾಜರು ಆಗಿ ಜ್ಞಾಪಿಸುಮಾಡಿಕೊಳ್ಳಬಹುದೆಂಬ ಸೂಚನೆಯನ್ನು ಈ ಮೂಲಕ ಸರ್ವ ಜನರಿಗೂ ತಿಳಿಯಪಡಿಸೋಣವಾಗುತ್ತದೆ.

Karkala. 20-10-46 } A. N. Achar, Pleader for Petitioners

ಗಂಡಾಂತರಗಳಿಗೆ ನಿವಾಸಲಾದ ಉತ್ತಮ ಪಾಕೆಟ್ ಚಿಕಿತ್ಸೆಗಾಗಿ

ಬಾಲಧರ

ವನ್ನೇ ಕೊಂಡುಕೊಳ್ಳುವುದು ಲೇಸು.

ಕಜ್ಜಿ, ನೋವು, ಕಡಿತ, ಗಾಯ, ಹೊಟ್ಟೆಯ ಜಾಡ್ಯ, ಕೊಳೆತಾ ಮತ್ತಿತರ ವೇಹಾಲಸ್ಯಗಳಿಗೆಲ್ಲಾ ರಾಮಬಾಣದಂತಿರುವ ಈ ಔಷಧಿಯು ಪಂಡಿತ ಲಾಕೂರಜತ್ತ ಶರ್ಮ ವೈದ್ಯರ ಪುತ್ರ ಆಧ್ಯಾತ್ಮವಿದ್ಯಾಪ್ರವೀಣ ಶಾಸ್ತ್ರಿಅಯು ರ್ವೇದಾಚಾರ್ಯ ಡಾ। ರ್ಬಲದೇವ ಶರ್ಮ, ಬಿ. ಎ., ಎಂ ಎಸ್. ಎಂ. ಎಸ್ (ಬರ್ಲಿನ್), ಎಂ. ಐ. ಪಿ. ಎ. (ನಿಯಾನಾ)ರಿಂದ ತಯಾರಿಸಲ್ಪಟ್ಟಿದ್ದು

ವಿ. ಸೂಚನೆ:— ಬಾಲಧರ ಔಷಧಿ ಸೇವೆಯೊಂದಿಗೆ ಬಾಲಧರ ಪಾರ್ಪೋಷ ನಂಬರುಗಳಿಗೆ ಶಾ. 1-3-1947ನೇ ದಿನಕ್ಕೆ ನೂರಾರು ರೂಪಾಯಿಗಳ ಬಹುಮಾನದ ನಂಬರುಗಳನ್ನು ಪ್ರಕಟಿಸಲಾಗುವುದು. ಸೀಸೆಯೊಂದಿಗೆ ಇರುವ ಪ್ಯಾಕ್ಟ್ ನಂಬರುಗಳನ್ನು ಜೋಪಾನವಾಗಿಟ್ಟುಕೊಳ್ಳಿರಿ.

ಜಿಲ್ಲೆಗಳಿಗೆ ಏಜಂಟರು ಬೇಕಾಗಿದ್ದಾರೆ.

ಬೊಂಬಾಯಿ, ಮದ್ರಾಸ್, ಹೈದರಾಬಾದಿನ ಸೋಲ್ ಏಜಂಟರು:—

ಫಜಲ್‌ಭಾಯಿ ಲಿಮಿಟೆಡ್

16, ನ್ಯೂ ಕ್ವೀನ್ಸ್ ರೋಡ್, ಬೊಂಬಾಯಿ.

ದೆಹಲಿಯ ಸ್ವಾಧಿಕಸ್ವರು:- ಚೆತಾರ್ ಭುಜ್ ಎಂಡ್ ಬ್ರದರ್ಸ್ ಚಾಂದಿನಿ ಚೌಕ.

ಬಾಲಧರ ಫಾರ್ಮಸಿ

53, ರೈಲ್ವೆ ರೋಡ್, ಲಾಹೋರು.

ದಕ್ಷಿಣ ಕನ್ನಡ

ಕುಂಬಳೆ—ತಮ್ಮ ಭೂಮಿಯಲ್ಲಿದ್ದ ನೀರಾವರಿಗಳು, ಆಡಿಕೆ ತೋಟಗಳು ಮತ್ತು ಇತರ ಹಿಡುವಳಿಗಳು ಮಿಲಿಟರಿಯವರ ಸ್ವಾಧೀನವಿದ್ದ ಸಮಯ ಆರೂಪಗೊಂಡಿದ್ದ ತ್ಯಾಗಿ ಸರಕಾರದಿಂದ ನಿರ್ಣಯಿಸಿದ ಪರಿಹಾರ ಧನವು ಅತೀ ಕಡಿಮೆಯೆಂದು ಪೆರಡಾಲ ಗ್ರಾಮದ ಭೂಮ್ಮಾಲಿಕರು ಕುಂಬಳೆಯ ಸ್ಪೆಷಲ್ ಡಿಪ್ಯುಟಿ ಕಲೆಕ್ಟರರ ಮುಂದೆ ಆಕ್ಷೇಪಣೆಯಿತ್ತಿರುವರು. ಆಡಿಕೆ ತೋಟಗಳು ಅರೂಪಗೊಂಡದ್ದರಿಂದ ಆವುಗಳಲ್ಲಿದ್ದ ಫಲಕೊಡದ ಸಜೀವ ಮರಗಳು ಮೊದಲಿನಂತೆ ಫಲಕೊಡುವ ತನಕ ಹುಟ್ಟುವಳಿ ನಷ್ಟದ ಬಗ್ಗೆ ಪರಿಹಾರ ಧನ ಕೊಡಬೇಕಾಗಿ ಆಕ್ಷೇಪಿಸಿತ್ತಿರುವರೆಂದು ಗೊತ್ತಾಗಿದೆ.

ಬೆಳ್ಳಾರೆ—ಇಲ್ಲಿನ ಆಸುಪಾಸು ಗ್ರಾಮಗಳಲ್ಲಿ ಸುಮಾರು ೬೫ ಮುಡಿ ಗದ್ದೆಗಳು ಏನೇಲು ಬೆಳೆಗೆ ಬಂಜರು ಬಿದ್ದಿವೆ. ಈ ವರ್ಷದ ಕಮ್ಮಿ ಬೇಸಾಯದಲ್ಲೂ ಅವುಗಳಿಂದ ಸಾಧಾರಣ ೬೦೦ ಮುಡಿ ಅಕ್ಕಿ ಸಿಗುತ್ತಿತ್ತು. ಇಲ್ಲಿನ ಆಹಾರ ಸಮಿತಿಯಾಗಲೀ, ಸಾರ್ವಜನಿಕ ಮುಂದಾಳುಗಳಾಗಲೀ, ಗ್ರಾಮಾಧಿಕಾರಿಗಳಾಗಲೀ, ಅವುಗಳ ಬೇಸಾಯದ ಕಡೆಗೆ ಆಸ್ಥೆವಹಿಸಿದಂತೆ ತೋರುವುದಿಲ್ಲ. ಆಹಾರದ ಕೊರತೆ ಎಲ್ಲೆಲ್ಲೂ ಭೀಕರವಾಗಿರುವಾಗ ಮೊದಲನೆ ಮತ್ತು ಎರಡನೇ ತರಗತಿಗೆ ಸೇರುವ ಈ ಗದ್ದೆಗಳಲ್ಲಿ ಬೇಸಾಯವಿಲ್ಲವೆಂದರೆ ತುಂಬಾ ಬೇಸರ. ಮ್ಯಾಲಿಕರಿಗೆ ಗದ್ದೆಗಳು ಬೇಸಾಯವಾಗಿಲ್ಲಪಾದರೂ ಪೆಟ್ಟಿನ ತೊಂದರೆಯಿರಲಾರದು. ಆದರೆ ಆ ಗದ್ದೆಗಳಿಂದ ಜೀವನ ನಡೆಸುತ್ತಿದ್ದ ಬಡ ಬೇಸಾಯಗಾರರಿಗೆ ಅದರಿಂದ ಬಹಳಾ ನಷ್ಟವಾಗುವದು. ಗುದ್ದೆಯ ಮೇಲೆ ಹುರುಳಿ ಬೆಳೆಯಿಸುವುದರಿಂದಯಾ ಪತ್ರಿಕೆಯಲ್ಲಿ "Grow more food" ಎಂದು ಜಾಹಿರಾತುಕೊಟ್ಟು ಹಣ ಖರ್ಚು ಮಾಡುವುದರ ಬದಲು ಬಂಜರು ಬಿದ್ದ ಇಂತ ಪ ಉತ್ತಮ ತರಗತಿಗಳ ಗದ್ದೆಗಳನ್ನು ಬೇಸಾಯ ಮಾಡಿಸಿದರೆ ಹೆಚ್ಚು ಪ್ರಯೋಜನವಾಗಬಹುದು ಏಗೆ ಕೃಷಿವಾಗಿ ಬಂಜರು ಬೀಳುತ್ತಿರುವುದರ ಸರಿಯಾದ ಕಾರಣವನ್ನು ತಿಳಿದು, ಬಂಜರು ಬಿದ್ದುವುಗಳನ್ನು ಸರಕಾರದೇ ಸ್ವಾಧೀನ ಪಡಿಸಿ, ಬೇಸಾಯ ಮಾಡುವ ರೈತನಿಗೆ ಬಿಟ್ಟುಕೊಟ್ಟಿದ್ದರೆ ಈ ಗದ್ದೆಗಳು ಇಂದು ಬಂಜರು ಬೀಳುತ್ತಿರಲಿಲ್ಲ. ತುಂಬಾ ಅಪಾರಾಭಾವವಿರುವ ಈ ಸಮಯದಲ್ಲಿ ಸುಗ್ಗಿಗಾವರೂ ಈ ಗದ್ದೆಗಳು ಬೇಸಾಯವಾಗುವಂತೆ ವ್ಯವಸ್ಥೆ ಮಾಡುವದು ಶ್ರೇಯಸ್ಕರವೆಂದು ಪಿ. ಎಸ್. ಜೆ ಬರೆಯುತ್ತಾರೆ.

ಕುಂಬಳೆ—ಕುಂಬಳೆಯಲ್ಲಿರುವ ಮಂಗಳೂರು ಬೀಡಿ ಕಂಪೆನಿಗಳ ಶಾಖೆಗಳಲ್ಲಿ ಮೊಳಿದೋರಿದ ಮುಷ್ಕರ ಜಾಡ್ಯವು ಈಗ ಪಾಸಿಯಾಗಿದೆ. ಬೀಡಿಮುಹೂರ್ತ ಹಿಂತಿರುಗಿ ಕೆಲಸಕ್ಕೆ ಸೇರಿರುವರು.

ಕಾಸರಗೋಡು—ತಾ. 24ರಲ್ಲಿ ಮುಳಿಯಾರಿನಲ್ಲಿ ಒಂದು ಲಾರಿಯು ಮುಗುಚಿ ಬಿದ್ದು ಅದರಲ್ಲಿದ್ದ ಮಹಮ್ಮದೀಯ ತರುಣ ನೊಬ್ಬನು ಅಲ್ಲಿಯೇ ಮೃತಪಟ್ಟನು. ಕಂಡಕ್ಟರ್ ಸುತ್ತು ಇನ್ನೊಬ್ಬ ಪ್ರಯಾಣಿಕನು ಗಾಯ ಗೊಂಡಿರುವರು. ಡ್ರೈವರ್ ಶ್ರೀ ಗೋಪಾಲ ಬಾಳಿಗರಿಗೆ ಆಪಾಯ ಸಂಭವಿಸಿಲ್ಲ. ವೃತನು ಚಂದ್ರಗಿರಿಯವನೆಂದು ಗೊತ್ತಾಗಿದೆ. ಕಾಸರಗೋಡು ಸರ್ಕಲ್ ಇನ್ಸ್‌ಪೆಕ್ಟರರಾದ ಜನಾಬ್ ಬಿ. ಮ್ಯೂದಿನ್‌ಸಾಹೇಬರು ಮುಂದಿನ ತನಿಖೆನಡೆಸುತ್ತಿರುವರು.

ಕಾರ್ಕಳ—ಬಂಗಾಳದ ನೌಖಾಲಿ, ತಿಪ್ಪೇರಾ ಕಲ್ಲತ್ತಾ ಮೊದಲಾದಕಡೆಗಳಲ್ಲಿ ಹಿಂದುಗಳ ಮೇಲೆ ಆಗುತ್ತಿರುವ ಮುಸುಲ್ಮಾನರ ಅತ್ಯಾಚಾರವನ್ನು ನಿಷೇಧಿಸುವದಕ್ಕೋಸ್ಕರ ತಾ. ೩೫ರಂದು ಇಲ್ಲಿಯ ಹಿಂದುಗಳ ಒಂದು ಸಾರ್ವಜನಿಕ ಸಭೆಯು ಶ್ರೀ ಪಕೀಲ ಇ ರಾಮಯ್ಯನವರಿಗಿಯವರ ಅಧ್ಯಕ್ಷತೆಯಲ್ಲಿ ಕೂಡಿ, ಶ್ರೀ ಕೇರವರಾಮಜಂಪ್ಪ ಶೆಟ್ಟಿಯವರು ಸಂದರ್ಭೋಚಿತ ಭಾಷಣವನ್ನು ಕೊಟ್ಟರು. ಅನಂತರ ಅತ್ಯಾಚಾರವನ್ನು ಖಂಡಿಸಿ ಬಂಗಾಳದ ಗವರ್ನರರನ್ನು ಹಿಂದಕ್ಕೆ ಕರೆಯಿಸಲಿಕ್ಕೂ ಅಲ್ಲಿಯ ಲೀಗ್ ಮಂತ್ರಿ ಮಂಡಲವನ್ನು ಸ್ಥಾನಭ್ರಷ್ಟಪಡಿಸಲಿಕ್ಕೂ ನೈಸರಾಯರನ್ನು ಕೇಳಿಕೊಳ್ಳವ ಮತ್ತು ಆ ತ್ಯಾಚಾರ ಪೀಡಿತರಿಗೆ ಧನಸಹಾಯ ಮಾಡುವಂತೆ ಹಿಂದೂ ಜನತೆಯನ್ನು ವಿನಂತಿಸುವ ಎರಡು ನಿರ್ಣಯಗಳು ಮಂಜೂರಾದವು.

ರಾಮಕುಂಜ—ಬೆಂಗಳೂರಲ್ಲಿ ಚಾತುರ್ಮಾಸ ದೀಕ್ಷೆಯನ್ನು ಕೈಗೊಂಡಿರುವ ಶ್ರೀ ಸುಬ್ರಹ್ಮಣ್ಯ ಮಠಾಧೀಶರಾದ ಶ್ರೀಮದ್ವಿಶ್ವಜ್ಞತೀರ್ಥ ಶ್ರೀ ಶ್ರೀಪಾದಂಗಳವರು ಇಲ್ಲಿಯ ಎಡ್ವಾನ್ಸ್‌ಡ್ ಸಂಸ್ಕೃತ ಪಾಠಶಾಲೆಯ ವಿದ್ಯಾರ್ಥಿಗಳಿಗೆ ಕಳಿಸಿದ ಪಾಠೋಪಕರಣಗಳನ್ನು ತಾ. ೧೯ರಲ್ಲಿ ಪ್ರಧಾನಾಧ್ಯಾಪಕರ ಅಧ್ಯಕ್ಷತೆಯಲ್ಲಿ ಸೇರಿದ ಸಭೆಯಲ್ಲಿ ಶ್ರೀಗಳವರ ಆಭಿಪ್ರಾಯಾನುಸಾರ ಹಂಚಲಾಯಿತು.

ಜಾನುವಾರು ಜಾತ್ರೆ

ದ. ಕ. ಜಿ. ಕಾರ್ಕಳ ತಾಲೂಕು ಸೋಮೇಶ್ವರದ ಬಳಿ ಸೀತಾನದಿ ಎಂಬಲ್ಲಿ

ಈ ಜಿಲ್ಲೆಯ ರೈತರ ಅನುಕೂಲದ ಬಗ್ಗೆ ಹೆಬ್ರಿ ಸೀತಾನದಿ ಮಂಗಳೂರು ರಸ್ತೆಯು ಆಗುಂಬೆ ರಸ್ತೆಗೆ ಕೂಡುವಲ್ಲಿ ಅಂದರೆ ಸೋಮೇಶ್ವರ ಫಾಟೆಯ ಬುಡದಿಂದ ಮೂರು ಮೈಲು ಕೆಳಗೆ ಸೀತಾನದಿ ಎಂಬಲ್ಲಿ ಜಾನುವಾರು ಜಾತ್ರೆಯು ವರ್ಷಂಪ್ರತಿ ಜರಗುವಂತೆ ತಾರೀಕು 5 12-46ರಿಂದ ತಾ. 16-12 46ರ ವರೆಗೆ ಜರಗುವದು.

ಜಾತ್ರೆಗೆ ಬರುವವರೆಲ್ಲರಿಗೂ ಯೋಗ್ಯ ಅನುಕೂಲತೆಗಳು ದೊರಕುವಂತೆ ಎಲ್ಲಾ ಏರ್ಪಾಡುಗಳನ್ನು ಕೈಪುವಂತೆ ಮಾಡಲಾಗುವುದು ಜಾತ್ರೆಯ ಸ್ಥಳವು ಸೀತಾನದಿ ಹೊಳೆಯಿಂದ 2 ಫರ್ಲಾಂಗುಗಳಷ್ಟು ಉತ್ತರ ದಿಕ್ಕಿನಲ್ಲಿದ್ದು ಹತ್ತಿರ ವಿರುವ ರಿಜರ್ವ ಕಾಡಿನಲ್ಲಿ ತುಂಬಾ ಹುಲ್ಲು ಗಾವಲು ಇದೆ. ಜಾತ್ರೆಗೆ ಬರುವ ಜಾನುವಾರುಗಳಲ್ಲಿ ಆತ್ಯಂತ ಉತ್ಕೃಷ್ಟವೆಂದು ನಿರ್ಣಯಿಸಲಾಗುವ ಜಾನುವಾರುಗಳ ಬಗ್ಗೆ ಇನಾಮುಗಳನ್ನು ಕೊಡುವ ಏರ್ಪಾಡುಮಾಡಲಾಗಿಯಿದೆ.

ಮೈಸೂರು ಪತ್ರಿಕೆ ಕನ್ನಡ ವ ಇತರ ಎಲ್ಲಾ ಪ್ರಾಂತ್ಯಕಳಿಂದಲೂ ಸರ್ವರೂ ಈ ಜಾತ್ರೆಗೆ ಬಂದು ಪ್ರೋತ್ಸಾಹಿಸಬೇಕಾಗಿ ನಮ್ಮ ಅಪೇಕ್ಷೆಯಾಗಿರುತ್ತದೆ.

ಸ್ಥಳೀಯ ಜಿಲ್ಲಾ ಮೆಜಸ್ಟ್ರೇಟರವರ ಪರ್ಮಿಟು ಮುಂಚಿತವಾಗಿ ಪಡೆದು ವ್ಯಾಪಾರ ಸ್ಥರು ಮೈಸೂರು ಸ್ಟೇಟಿನಿಂದ ಜಾನುವಾರುಗಳನ್ನು ಇಲ್ಲಿಗೆ ತರಬಹುದು ಎಂಬ ವಿಶೇಷ ಸೂಚನೆ ಎಲ್ಲರೂ ಜ್ಞಾಪಕವಿಡುವದು.

ಜಾತ್ರೆಯ ಸಮಯ ಈ ಕೆಳಗಣ ವಿನೋದಾವಳಿಗಳೂ ಭಾಷಣ ಪ್ರದರ್ಶನಗಳೂ ಇವೆ.

1. ಮಾಯಾಲಾಂದ್ರ ಪ್ರದರ್ಶನಗಳು-ಭಾಷಣಗಳು.

2. ವ್ಯವಸಾಯ ಇಲಾಖೆಯ ಆಫೀಸರರಿಂದ ನಮ್ಮ ಜಿಲ್ಲೆಯ ವ್ಯವಸಾಯ ಉತ್ಪತ್ತಿಯ ಉನ್ನತಿಯ ಬಗ್ಗೆ ಆಗತ್ಯವಿರುವ ಸಲಹೆಗಳನ್ನು ಸೂಚಿಸಿ ಭಾಷಣ ಮತ್ತು ಪ್ರದರ್ಶನಗಳು.

3. ಜಾನುವಾರು ಇಲಾಖೆಯನರಿಂದ ಜಾನುವಾರಗಳನ್ನು ಯೋಗ್ಯ ರೀತಿಯಲ್ಲಿ ಸಾಕಲು ಬೇಕಾಗುವ ಸಲಹೆಗಳನ್ನು ಸೂಚಿಸಿ ಭಾಷಣ ಮತ್ತು ಪ್ರದರ್ಶನಗಳು.

4. ವಿದ್ಯಾ ಇಲಾಖೆಯವರ ಭಾಷಣ ಮತ್ತು ಪ್ರದರ್ಶನ.

ರೆವಿನ್ಯು ಡಿವಿಜನಲ್ ಆಫೀಸರ್ ಕುಂದಾಪುರ

ಗಂಗೊಳ್ಳಿ—ಇದೇ ತಾ. 27 10-46 ರಲ್ಲಿ ಗಂಗೊಳ್ಳಿ ಕುಂದಾಪುರ ಸರ್ಕಲ್ ಕೊಂಗ್ರೆಸ್ ಕಮಿಟಿಯ ಮಹಾಸಭೆಯು ಗಂಗೊಳ್ಳಿ ಸರಸ್ವತಿ ವಿದ್ಯಾಲಯ ಹಾಯರ್ ಎಲಮೆಂಟರಿಶಾಲೆಯಲ್ಲಿ ಶ್ರೀ ಎಚ್. ಕೋಟಿಯಣ್ಣ ಶೆಟ್ಟಿ ಅಧ್ಯಕ್ಷತೆಯಲ್ಲಿ ಜರಗಿ ಈ ಕೆಳಗಿನ ಮೆಂಬರರು ಸರ್ವಾನುಮತದಿಂದ ೧೯೪೬ ಬಂದಿರುತ್ತಾರೆ.

ಡಾಕ್ಟರ್ ಎಸ್. ಯು. ನಾಯಕ್, (ಅಧ್ಯಕ್ಷ) ಶ್ರೀ ಬಿ. ಎಸ್. ಸೂರಪ್ಪ ಶೆಟ್ಟಿ (ಉಪಾಧ್ಯಕ್ಷ) ಶ್ರೀ. ನಗರ ಪೇಣಿ ಗೋಪಾಲ ನಾಯಕ್ (ಕಾರ್ಯದರ್ಶಿ) ಶ್ರೀ ಎಚ್. ಕೋಟಿಯಣ್ಣ ಶೆಟ್ಟಿ, ಗೌ(ಜತೆಕಾರ್ಯದರ್ಶಿ) ಶ್ರೀ ಕಟೀಲ ಜಾಬರಾಯ ಪೈ (ಕೋಶಾಧಿಕಾರಿ) ಶ್ರೀ ಎಚ್. ಭಾಸ್ಕರ್ ಕಾಮತ್ (ಸಲಹೆಗಾರ) ಶ್ರೀ ಕೆ. ಮಹಾಬಲ ಶೆಟ್ಟಿ (ಸಲಹೆಗಾರ)

ಮುಂದಿನ ಕಾರ್ಯಕ್ರಮಗಳನ್ನು ಕಾರ್ಯಕಾರೀ ಮಂಡಳಿಯು ಯೋಚಿಸಿ ಮಹಾಸಭೆಯ ಮುಂದೆ ಮಂಜೂರಾತಿಗೆ ಇಡಬೇಕೆಂತ ನಿರ್ಣಯಿಸಬಹುದಾಯಿತು. ಅಲ್ಲದೆ ಕಾಲ ವಿಳಂಬವಿಲ್ಲದೆ ಸರಿಯಾಗಿ ನಡೆಯುವಂತೆ ಈ ಕಮಿಟಿಯ ಆಫೀಸನ್ನು ಗಂಗೊಳ್ಳಿಗೆ ವರ್ಗಾಯಿಸಲು ನಿಶ್ಚಯಿಸಲಾಯಿತು. ಶ್ರೀ. ಎಚ್. ಕೋಟಿಯಣ್ಣ ಶೆಟ್ರು ಈಗ ರಚಿಸಿದ ಕಾರ್ಯಕಾರಿ ಮಂಡಳಿಗೆ ಶ್ರೇಯಸ್ಸನ್ನು ಬಯಸುವೆವು.

ತಿಮ್ಮಪಡಿ—ತಾ. 24ರ ಸಂಜೆಯ 9ನೇ ಘಟಿಕೆಯ ಕಲಸಿನಲ್ಲಿಯ ಕೊರತೆ ಹೆಂಗ್ಸು ಮತ್ತು ಸುಬ್ಬ ಇವರ ನೋಟೀಸಿನ ಸಾಲಿನಲ್ಲಿ ಮುದ್ರಿತವಾದ ಕೊರಾಡಿ ಹೆಂಗ್ಸು 1 ಎಂಬುದನ್ನು ಕೊರತಿ ಹೆಂಗ್ಸು 1 ಎಂಬುವಾಗಿ ತಿದ್ದಿ ಓದಬೇಕು.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ

ತಾರೀಕು 2—11—1946ರಿಂದ

ಮೆಹಬೂಬರ ಚಿತ್ರ

ನ ಜ್ರಾ

ಅಕೋರ್ ಕುಮಾರ್, ವೀನಾ, ಯಾಕುಬ್, ಸಿತಾರಾ.

ತಾ. 2—11—46 ಮತ್ತು 3—11—46

ಬೆಳಿಗ್ಗೆ 10 ಗಂಟೆಗೆ ಟೋಪ್ ಮೇನ್ (ಇಂಗ್ಲಿಷ್ ಚಿತ್ರ)

ದೇಶಕಾಲಕ್ಕೊಪ್ಪುವ ನವೀನ ಪುಸ್ತಕ

ಸ್ವಾತಂತ್ರ್ಯವೀರ ಸಾವರಕರರು

ಹಿಂದೂ ಸಂಸ್ಕೃತಿ ಮತ್ತು ಹಿಂದೂರಾಷ್ಟ್ರಕ್ಕಾಗಿ ಸರ್ವತ್ಯಾಗ ಮಾಡಿದ ವೀರ ಸಾವರಕರರ ಉಜ್ವಲಜೀವನ ಚರಿತ್ರೆ

ಮೈಜುಮ್ಮೆನ್ನಿಸುವ ಹಲವು ಸನ್ನಿವೇಶಗಳು!

ವಿಚಾರ ಕ್ರಾಂತಿಯನ್ನುಂಟುಮಾಡುವ ಘಟನೆಗಳು!

ಪ್ರಸಿದ್ಧ ಹಿಂದೀ ಲೇಖಕ ಪಂಡಿತ ಚಂದ್ರಗುಪ್ತ ವೇದಾಲಂಕಾರ ಇವರ ಹಿಂದೀ ಗ್ರಂಥದ ಕನ್ನಡ ಅನುವಾದ

ಕನ್ನಡಸಿದವರು-ಶ್ರೀಮತಿ ಇಂದಿರಾಬಾಯಿ,

ಮೈಸೂರು, ಸಂಸ್ಥಾನ.

ಬೆಲೆ ಬರೇ ರೂ. 1—4—0

ಬೂ. I—8—0 ಕಳಿಸಿದರೆ I ಪ್ರತಿಯನ್ನು ರಿಜಿಸ್ಟರ್ ಮಾಡಿ ಕಳಿಸಲಾಗುವುದು.

ಪ್ರತಿಗಳು ಸಿಗುವ ಸ್ಥಳಗಳು:—

1. ಸ್ಕೂಲ್ ಬುಕ್ ಕಂಪೆನಿ, ಮಂಗಳೂರು. 2. ಸತ್ಯಶೋಧನ ಪುಸ್ತಕ ಭಂಡಾರ, ಬೆಂಗಳೂರು. 3. ನವಭಾರತ ಪುಸ್ತಕ ಭಂಡಾರ, ಉಡುಪಿ. 4. ಪಾವಂಜೆ ಗುರುರಾವ್, ಉಡುಪಿ. 5. ನವಯುಗ ಆಫೀಸು, ಉಡುಪಿ.

NOTICE

ಉಡ್ಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

S. C. 303/1946

ಯಜ್. ಶ್ರೀನಿವಾಸ ರಾವ್-ನಾಗಪ್ಪ ನಾಯ್ಕರ ಆಳಿಯ, ಉಡ್ಪಿ ತಾಲ್ಲೂ ಹೆರೆಬೆಟ್ಟು ಗ್ರಾಮದ ಅಂಗಡಿಜೆಟ್ಟು -ವಾದಿ

ಮತ್ತು

ವಿರಲ ಶೆಟ್ಟಿ-ಪಡುಮನೆ ಅಬ್ಬಕ್ಕ ಶೆಡ್ತಿರ ಮಗ, ನಸುಮತಿ ಹಿಂದೂ ಹೋಟೇಲ್, ಬೀ ಬೀ. ಪಾದರ್, ಬೊಂಬ್ಬಾ ನಂಬ್ರ 14 ರಲ್ಲಿ ಹಾಲಿಯಿರುವವ -ಪ್ರತಿವಾದಿ

ಇವರೊಳಗೆ

ವಾದಿಗೆ ಪ್ರತಿವಾದಿಯು ತಾ. 8-7-1944 ರಲ್ಲು ಬರಕೊಟ್ಟ ಡಿ. ನೋಟಿನ ಅಸ್ಸಲಬ್ಜಿ ಅ ವೇಜಾಗುಳ ವಸೂಲಿ ಬಗ್ಗೆ ಮಾಡಿದ ಮೋಲ್ಕಂಡ ದಾವೆಯು ತಾ. 18-11-46ಕ್ಕೆ ತನ್ನಿಗೆಯಿಟ್ಟಿರುತ್ತದೆ. ಆ ಕುರಿತು ಪ್ರತಿವಾದಿಯ ಅಕ್ಷೇಪಿ ಏನಾದ್ರೂ ಯಿದ್ದಲ್ಲಿ ಕೋರ್ಟು ಮುಂದೆ ಸ್ವತಹಾ ಪ ವಕೀಲ್ ದ್ವಾರ ಹಾಜ್ರಾಗಿ ಜ್ಯಾಹೀರುಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ಪ್ರತಿವಾದಿಯು ಮೇಲೆ ಕೋರ್ಟಿಗೆ ಯುಕ್ತಕಂಡ ರೀತಿ ನ್ಯಾಜ್ಯ ತೀರ್ಮಾನವಾಗಲಾದೀತು ಎಂತ ಈ ನೋಟ್ಸು ತಿಳಿಸೋಹಾಗುತ್ತದೆ.

Narayana Shetty, ಪ್ರಿ.,
ವಾದಿ ಕರೆ ವಕ್ಕೀಲ್.

ಮೊಕ್ಕಾಂ: ಉಡುಪಿ,
ತಾರೀಕು 28-10-46.

ನೋಟೀಸು

ಕಾಸರಗೋಡು ಡಿ. ಮು. ಕೋರ್ಟಿನಲ್ಲಿ

ಕ್ರಮ ನಂಬ್ರ 469/1945

ಕಾಂಜಿ ಮೈವ ಜಾರಿ ತಿಕೋಲ್-ವಾದಿ

ಶೇತಮ್ಮ ಸಹಾ-ಪ್ರತಿವಾದಿರು

2ನೇ ಪ್ರತಿವಾದಿ ಕೃಷ್ಣ ಭಟ್ಟ-ಕಾನಕೆಜೆ ವಿಷ್ಣು ಭಟ್ಟರ ಮಗ, ಕಾಸರಗೋಡು ತಾಲೂಕು ಪುತ್ತಿಗೆ ಗ್ರಾಮವೆಲ್ಲಿರುವವ.

ವಾದಿಯು ದಾಕ್ಲು ಮಾಡಿದ ಮೇಲ್ಕಂಡ ನ್ಯಾಜ್ಯವು ತಾ. 19-11-1946ಕ್ಕೆ ಹಾಜರಾತಿ ಬಗ್ಗೆ ಇಟ್ಟಿರುವ ಸಂಗ್ತಿ ತಿಳಿಸಿಯದ್ದೆ.

ಕಾಸರಗೋಡು
28-10-46

P Ahmad,
Advocate for Plaintiff.

ಮಂಗಳೂರು

ಸ್ಥಳೀಯ ಗಣಪತಿ ಹೈಸ್ಕೂಲಿನ ಸಭಾ—ಭವನದಲ್ಲಿ ತಾ. ೧೪ರಂದು ಮಂಗಳೂರಿನ ವಿದ್ಯಾರ್ಥಿ ಸಂಘದ ಆಶ್ರಯದಲ್ಲಿ ಜರಗಿದ ಸಭೆಯಲ್ಲಿ ಇತ್ತೀಚೆಗೆ ಸಂಯುಕ್ತ ಅಮೇರಿಕದಿಂದ ಮರಳಿ ಬಂದಿರುವ ಡಾಕ್ಟರ್ ಜಿ. ಕುಡ್ವ, ಅವರು 'ಇಂದಿನ ಅಮೆರಿಕ' ಎಂಬುದರ ಕುರಿತು ಭಾಷಣಮಾಡಿದರು. ಶ್ರೀ ಎಸ್. ಮುಕುಂದ ರಾವ್ ಅವರು ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಕಲೆಕ್ಟರರ ಭೇಟಿ— ಶ್ರೀ ಎಂ. ಎಸ್. ಭಟ್ ಮತ್ತು ಶ್ರೀ ಜಿ. ಕೆ. ಗೋವಿಂದ ಭಟ್ಟರು ತಾ ೨೫ರಂದು ಹೊಸ ಜಿಲ್ಲಾ ಕಲೆಕ್ಟರ್ ಬಹು ಸಾಹೇಬರನ್ನು ಭೇಟಿಮಾಡಿ ಆಡಿಕೆ ಬೇಸಾಯಕ್ಕೆ ಬೇಕಾದ ಆಕ್ಕಿ ಭತ್ತ ಸನ್ನು ರೈತರಿಗೆ ಬಿಡುವ ವಿಷಯದಲ್ಲಿ ಮಾತುಕತೆ ನಡೆಸಿದರು. ಮುದ್ರಾಸು ಸರಕಾರದ ಹುಕುಮಿನ ಮೇರೆಗೆ ಆಡಿಕೆ ಬೇಸಾಯಕ್ಕೆ ಬೇಕಾಗುವ ಆಕ್ಕಿಯ ಪ್ರಮಾಣವನ್ನು ನಿರ್ಧರಿಸಿ ಆ ಆದೇಶವನ್ನು ರೈತರಿಗೆ ಬಿಡುವುದು ಅತ್ಯಗತ್ಯವೆಂದೂ ಈ ಕೆಲಸವನ್ನು ಮಾಡಲು ಇದೇ ತಕ್ಕ ಸಂದರ್ಭವೆಂದೂ ಮಂತ್ರಿಯವರು ತಮ್ಮ ವಿಚಾರವನ್ನು ಸ್ಪಷ್ಟ ಪಡಿಸಿದರು. ಈ ಕುರಿತು ಕಲೆಕ್ಟರರು ಸಹಾನುಭೂತಿಯನ್ನು ತೋರಿಸಿ ಈ ವಿಚಾರಗಳನ್ನು ತಾನು ಏಮ ರ್ಿಸುವೆನೆಂದೂ ಯೋಗ್ಯ ರೀತಿಯ ವ್ಯವಸ್ಥೆ ನೂಡುವೆನೆಂದೂ ಭರವಸೆಯಿತ್ತಿರುವರು.

ಮುನ್ಸಿಪ್ಯ—ಸಾವಿರಕ್ಕೆ ನಾಲ್ಕಾಣೆ ಮುಜಾರಿ ಹೆಚ್ಚಿಸಬೇಕೆಂದೂ, ನೂರು ತಿಂಗಳ ಮೊನೇಸ್ಸು ಕೊಡಬಹುದೆಂದೂ ಕೇಳಿಕೆಗಳನ್ನು ಮುಂದಿರಿಸಿ, ಬೀಡಿ ಮುಜೂರರು ತಾ ೨೧ರಿಂದ ಮುಷ್ಕರ ಆರಂಭಿಸಿರುವರು. ಮುನ್ಸಿಂ ಬೀಡಿ ಮುಜೂರರು ಇದರಲ್ಲಿ ಸೇರಿಲ್ಲ; ಹಾಗೆಯೇ ಬೇರೆ ಕೆಲವು ಕೆಲಸಗಾರರೂಸೇರಿಲ್ಲ. ಕೆಲವು ಬೀಡಿ ಕಾರ್ಖಾನೆಗಳ ಮುಂದೆ ಪಿಕೆಟಿಂಗ್ ನಡೆಯುತ್ತಿದೆ. ಎರಡು ಮೂರು ಕಡೆಗಳಲ್ಲಿ, ಕೆಲಸಗಾರರು ಬೀಡಿ ಒಯ್ಯುತ್ತಿದ್ದಾಗ ಮುನ್ಸಿಪಲ್ ಕಾರ್ಮಿಕರಲ್ಲಿ ಕೆಲವರು ಆ ಬೀಡಿಯನ್ನು ಕಸಿದುಕೊಂಡರೆಂಬ ದೂರು ಇದೆ. ಮಾತುಕತೆಯಿನಲ್ಲೂ ಈ ಮುನ್ಸಿಪಲ್ ಕಾರ್ಮಿಕರು ಅದೇ ದಿನ ಆರಂಭಿಸಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆ ಮತ್ತು ಮಲಬಾರು ಜಿಲ್ಲೆಗಳ ಕೆಲಸಗಾರರೆಂದು ಹತ್ತು ಸಾವಿರಕ್ಕೂ ಹೆಚ್ಚು ಈ ಮುಷ್ಕರದಲ್ಲಿ ಭಾಗವಹಿಸಿರುವರೆಂದು ಅಂದಾಜು ಮಾಡಲಾಗಿದೆ. ಪೊನ್ನಾನಿಯ ಎಲ್ಲಾ ಮುನ್ಸಿಂ ಬೀಡಿ ಮುಜೂರರು ಮುಷ್ಕರದಲ್ಲಿ ಸೇರಿರುವರೆಂದು ಸುದ್ದಿ. ಈ ವರೆಗೆ ಪಿಕೆಟಿಂಗ್ ನಡೆಸಿದ ಸಂಬಂಧ, ಮಂಗಳೂರಲ್ಲಿ ಆರು ಮತ್ತು ಮಲಬಾರಿನಲ್ಲಿ ಮೂವತ್ತು ನೂರು ಬೀಡಿ ಮುಜೂರರು ಶಿಕ್ಷೆಗೊಳಗಾಗಿದ್ದಾರೆ.

ತೆರಿಗೆದಾರರ ಸಭೆ— ಮಂಗಳೂರು ಮುನಿಸಿಪಾಲಿಟಿಯ ತೆರಿಗೆದಾರರ ಸಂಘದ ಸಭೆಯು ತಾ. ೨೫ರಲ್ಲಿ, ಕೆನರಾ ಹೈಸ್ಕೂಲಿನ ಉರ್ದು ಶಾಲೆಯಲ್ಲಿ, ಶ್ರೀ ಅನ್ಯೊಬಲ್ ಡಿ'ಸಿಲ್ವಾ ಸಾ ಯವರ ಅಧ್ಯಕ್ಷತೆಯಲ್ಲಿ ಜರಗಿ ಶ್ರೀ ಆ. ಶ್ರೀನಿವಾಸ ಪೈಯವರು ಅಧ್ಯಕ್ಷ ರಾಗಿಯೂ, ಡಾ। ಬಿ. ಆರ್. ಭಾಸ್ಕರರವರು, ಮಿಸೆಸ್ ಆರ್. ಪೂಂಜರವರು ಉಪಾಧ್ಯಕ್ಷೆ ರಾಗಿಯೂ, ಶ್ರೀ। ಶಿವಜಾಗಲು ಕಾರ್ಯ ಅ ಧ್ಯ (ಆನರರಿ ಸೆಕ್ರಿಟೇರ್ಸ್) ಮತ್ತು ಶ್ರೀ। ಕೆ ದೇವಪ್ಪ ಶೆಟ್ಟಿ, ಬಿ.ಎ,ಬಿ ಎಲ್ ಇವರು ಜತೆಕಾರ್ಯದರ್ಶಿಗಳಾಗಿಯೂ ಇರುವ ಒಂದು ಕಾರ್ಯಕಾರಿ ಸಮಿತಿ ರಚಿಸಲ್ಪಟ್ಟಿತು. ಸಂಬಂಧನೆಗಳು ಮಂಜೂರಾದುವು.

ಸ್ವಾಮಿಜಿಯವರ ಭಾಷಣ— ಇದೇ ತಾ ೨೬ ಮತ್ತು ೨೭ನೇ ದಿನ, ಕೆನರಾ ಹೈಸ್ಕೂಲ್ ಭವನದಲ್ಲಿ ಸಾಯಂಕಾಲ ಗಂಟೆ ೫ರಿಂದ ೬-೩೦ರ ತನಕ, ಉಡುಪಿ ಭಂಡಾರಕೆರೆ ಸ್ವಾಮಿಜಿ ಶ್ರೀಜಗದಂಗಳವರು ಮತ್ತು ಪೇಜಾವರ ಮಠದ ಶ್ರೀ ಪಾದಂಗಳವರು 'ಗೀತೋಪನಿಷದ್ಗಳ ಸಾರ ಸಂಗ್ರಹ' ಎಂಬ ವಿಷಯದ ಮೇಲೆ, ಶ್ರೀ ವಿ ನೇಕಾನಂಪ ಸಭೆಯ ಆಶ್ರಯದಲ್ಲಿ ಭಾಷಣ ಮಾಡಿದರು.

ಬಲಿದಾನ ದಿನಾಚರಣೆ—ತಾ. ೨೫ ರಲ್ಲಿ, ಮಂಗಳೂರು ಆರ್ಯ ಸಮಾಜದವರು, ಋಷಿ ದಯಾನಂದ ಸರಸ್ವತಿಯವರ ಬಲಿದಾನ ದಿನವನ್ನು ಆಚರಿಸಿದರು. ಜಿಲ್ಲಾಯ ಪ್ರೈಜರಿ ಡಿಪ್ಯುಟಿ ಕಲೆಕ್ಟರರಾಜ ಶ್ರೀ। ಎಸ್. ವಿ ರಾಜಾರಾವ್, ಬಿ.ಎ,ಎಲ್ ಎಲ್.ಬಿ., ಇವರ ಅಧ್ಯಕ್ಷತೆ ವಹಿಸಿದ್ದರು. ಶ್ರೀ. ಬ್ರ। ಶ್ರೀ। ನಿಡ್ಡೋಡಿ ಆನಂದ ಉಪಾಧ್ಯಾಯ, ಶ್ರೀ। ಪಿ. ಮೋಪಣಪ್ಪ ತಿಂಗಳಾಯ ಮೊದಲಾದವರ ಭಾಷಣಗಳಾದುವು.

ವಿದ್ಯಾಮಂತ್ರಿಗಳ ಆಗಮನ

ತಾ. ೧೧ರಂದು ಗಣಪತಿ ಹೈಸ್ಕೂಲಿನಲ್ಲಿ ಪರಿಷತ್ತು—ಮದರಾಸು ಸರಕಾರದ ವಿದ್ಯಾಮಂತ್ರಿಗಳಾದ ಮಾನ್ಯ ಅಪಿನಾಶಲಿಂಗಂ ಚೆಟ್ಟಿಯಾರರು ಇನ್ನೇ ತಿಂಗಳ ೧೧ನೇ ತಾರೀಕಿಗೆ ಸಂಜೆ ೬ ಗಂಟೆಕ್ಕೆ ಮಂಗಳೂರಿಗೆ ಬಂದು ತಲಪುವರು.

೧೦-೧೧-೪೬ನೇ ಶಕ್ರವಾರ—ಬೆಳಿಗ್ಗೆ ೬-೩೦ ರಿಂದ ೯-೩೦ ಭೇಟಿಗಳು. ೯-೩೦ - ೧೦ ೧೫ ಸ್ಕೌಂಟ್ ಆಫೀಸ್ ಕಾಲೇಜಿಗೆ ಸಂದರ್ಶನೆ. ೧೦-೧೫ - ೧೧ ಸ್ಕೌಂಟ್ ಎಲೋಸಿಯಸ್ ಕಾಲೇಜಿಗೆ. ೧೧ ೧೫ ಕ್ಕೆ ಬೆಳೆಂಟ್ ರಾಷ್ಟ್ರೀಯ ಬಾಲಾ ಪಾಠಶಾಲೆಗೆ ಸಂದರ್ಶನ. ಆಪರಾಹ್ನ ೨ರಿಂದ ೫ ೩೦ರವರೆಗೆ ಗಣಪತಿ ಸ್ಕೈಸ್ಕೂಲಿನ ವಿದ್ಯಾಪರಿಷತ್ತಿನಲ್ಲಿ ಭಾಗವಹಿಸುವರು ೬ ೬ ೩೦ ಡಿ. ಸಿ. ಎ ರಾಲೆಗೆ ಸಂದರ್ಶನ.

೨-೧೧-೪೬ನೇ ರವಿವಾರ—ಬೆಳಿಗ್ಗೆ ೬ರಿಂದ ೯ರ ವರೆಗೆ ಭೇಟಿಗಳು. ಬೆಳಿಗ್ಗೆ ೯ ೩೦ಕ್ಕೆ ಸಂಜೆ ೬೫ ವರೆಗೆ ಉಡುಪಿ, ಕಾರ್ಕಳಕ್ಕೆ ಪ್ರಯಾಣ. ಸಂಜೆ ಮಂಗಳೂರಿಗೆ ಮರಳುವರು. ಮರುದಿನ ಬೆಳಿಗ್ಗೆ ೭-೧೫ರ ರೈಲಿಗೆ ಹಿಂತೆರಳುವರು.

ಬಹುಮಾನ ವಿತರಣಾ ಸಮಾರಂಭ

ಮಂಗಳೂರಿನ ಸೈಂಟ್ ಎಲೋಸಿಯಸ್ ಕಾಲೇಜಿನ ಬಹುಮಾನ ವಿತರಣ ಸಮಾರಂಭವು ಮದರಾಸು ಸರಕಾರದ ಉಪಸಂಪತ್ತಿಗಾಳಾದ ಶ್ರೀಮಾನ್ ಎಲ್. ಸಿ. ಪಾಯಿಸ್‌ರವರ ಅಧ್ಯಕ್ಷತೆಯಲ್ಲಿ ಇದೇ ತಾ. ೨೪ರಂದು ಜರಗಿತು. ಕಾಲೇಜಿನ ರೆಕ್ಟರರಾದ ರೆ. ಫಾ। ಜಿ. ಎ. ಪಿ ಕೊಯಿಲೋರವರು ವರದಿ ಓದಿದರು. ಶ್ರೀಮತಿ ಪಾಯಿಸ್‌ರವರು ಬಹುಮಾನಗಳನ್ನು ಹಂಚಿದ ಮೇಲೆ ಅಧ್ಯಕ್ಷರು ತಮ್ಮ ಭಾಷಣದಲ್ಲಿ ಇಂದಿನ ರೆಕ್ಟರರು ಕಾಲೇಜಿನ ಕಟ್ಟಡಗಳನ್ನು ಹೆಚ್ಚಿಸುವುದರಲ್ಲಿ ತೋರಿಸಿದ ಆಸಕ್ತಿಯನ್ನು, ಕಾಲೇಜು ಸಲ್ಲಿಸುವ ಸೇವೆಯನ್ನೂ ಕೊಂಡಾಡಿದರು. ಆ ಮೇಲೆ ವಿವಿಧ ವಿನೋದಾವಳಿಗಳೊಡನೆ ಸಮಾರಂಭವು ಕೊನೆಗೊಂದಿತು.

ಬೀಡಿ ಕಾರ್ಖಾನೆಯ ೬ ಜನರಿಗೆ ಶಿಕ್ಷೆ—ಮಂಗಳೂರು ಸ್ಪೇಷಲ್ ಸಬ್ ಮೆಜಿಸ್ಟ್ರೇಟ್ ಶ್ರೀ। ಕೆ. ಲಿಂಗಪ್ಪಯ್ಯ ಅವರು ಗಣೇಶ ಬೀಡಿ ಫ್ಯಾಕ್ಟರಿಯ ಕೆಲಸಗಾರರಾದ ಭವಾನಿ ಶಂಕರ, ಶೀನ, ಕೆ ಆನಂದ, ಎಂ. ಆನಂದ ಸಂಜೀವ ನಾಯ್ಕ, ರಾಮಣ್ಣ ಸಪ್ಪ ಎಂಬ ೬ ಜನರ ಮೇಲೆ ಹೂಡಲಾಗಿದ್ದ ಮೊಕದ್ದಮೆಯ ವಿಚಾರಣೆಯನ್ನುಕಳೆದ ತಾ ೨೦ರಲ್ಲಿ ನಡೆಸಿ, ಪ್ರತಿಯೊಬ್ಬರಿಗೆ ೨೦ ಪಿ. ಸಿ. ಸೆಕ್ಷನ್ ೧೮೫ರಲ್ಲನ್ವಯ (ರಾಸನವಿಲೋಧವಾದ ಕೂಟ)ಕ್ಕಿಂತಿಗಳ ಸಜೆಯನ್ನೂ ೨೦ ಪಿ. ಸಿ. ಸೆಕ್ಷನ್ ೨೬೦ರ ಪೋರೆಗೆ (ಅನ್ಯಾಯವಾದ ನಿರ್ಬಂಧ) ೩ ತಿಂಗಳ ಕಠಿನ ಸಜೆಯನ್ನೂ ಏಕಕಾಲಿಕ ಸಜೆಯನ್ನಾಗಿ ವಿಧಿಸಿದರು.

ಕೃತಕ ಲಾಟರಿ ಟಿಕೇಟು ಮಾರಿದ ಆರೋಪದ ಮೊಕದ್ದಮೆ—ನಮ್ಮ ಮಂಗಳೂರು ಸಬ್ ಡಿವಿಜನಲ್ ಮೆಜಿಸ್ಟ್ರೇಟರಾದ ಶ್ರೀ. ಎಸ್ ಜಾಲಾಜಿರಾವ್ ಇವರ ಕೋರ್ಟಿನಲ್ಲಿ 'ಟೋಗಸ್ ಲಾಟರಿ ಟಿಕೇಟು' ಗಳನ್ನು ಮಾರಿದೆರೆಂಬ ಆರೋಪದ ಹೆಲವಾರು ಮೊಕದ್ದಮೆಗಳು ಬೇಗನೆ ತನಿಕೆಗೆ ಬರಲಿವೆ. ಇವು ಮೋಸಕ್ಕೆ ಸಂಬಂಧಿಸಿದ ಪ್ರಕರಣದ ಮೇರೆಗೆ ನಡೆಸಲ್ಪಟ್ಟಿವೆ ಇವುಗಳಲ್ಲಿ ೨ ಮೊಕದ್ದಮೆಗಳು ಇದೇ ನವೆಂಬರ ತಾ. ೪ಕ್ಕೆ ಇವೆ. ಇಂಥ ಮೋಸ ಕೃತ್ಯಕ್ಕೆ ಸಂಬಂಧಿಸಿದ ಮೊಕದ್ದಮೆಗಳನ್ನು ಕಂಡು ಹಿಡಿಯಲು ಸ್ಪೆಶಲ್ ಆಗಿ ನೇಮಿಸಿದ ಪೋಲಿಸ್ ಸಿಬಂದಿಯವರು ಇವೆಲ್ಲ ಮೊಕದ್ದಮೆಗಳನ್ನು ಕಂಡು ಹಿಡಿದಿದ್ದಾರೆ.

ಜಿಲ್ಲಾ ಬೋರ್ಡಿನ ಸಭೆ— ಜಿಲ್ಲಾ ಬೋರ್ಡಿನ ಮಿಟಿಂಗ್ ಆದ ಕಾರ್ಯಾಲಯದಲ್ಲಿ ಇಂದೇ ತಾ ೨೬ನೇ ಸೋಮವಾರ ಬೆಳಿಗ್ಗೆ ಗಂಟೆ ೧೦ಕ್ಕೆ ಜರಗಿತ್ತು ಮೂಡಬಿದಿರೆ ವೈಯ ಒಂದು ಮುನ್ಸಿಪ್ ಸೀಟನ್ನು ಕಾಂಗ್ರೆಸ್ ಗೋಡೆಗೆ ವರ್ಗಾಯಿಸುವ ಕುರಿತು ಆಲೋಚಿಸಿ ನಿರ್ಧರಿಸುವುದೇ ಆದಿನ ಮುಖ್ಯ ಕಾರ್ಯಕ್ರಮಗಳಲ್ಲಿ ಒಂದಾಗಿತ್ತು. ಚರ್ಚೆ ನಡೆದು ವರ್ಗಾಯಿಸಕೂಡದೆಂದು ನಿರ್ಣಯಿಸಲಾಯಿತು.

ಕ್ಷಣಿಕ ಗುಣಕೊಡುವ ಔಷಧದ ಬೆನ್ನು ಹತ್ತಿ ಮರುಳಾಗಬೇಡಪ್ಪಾ.

ಪುರೋಹಿತ ಶ್ವಾಸಹಾರೀ ಔಷಧ ಮಾತ್ರ ಒಂದೇ ಬಾರಿಗೆ ಶಾಶ್ವತ ಗುಣವುಕಿ, ಇದರಿಂದ ಆದನ್ನು ಬೇರುಸಹಿತ ಕತ್ತು ಹಾಗೆಯು ಪುದು. ಈ ಔಷಧ ಸುರುವು ಮಾಡಿದಾಗಲೇ ಕೆಮ್ಮೂ ತೇಕೂ ನಿಲ್ಲುವವು, ಹೊಟ್ಟೆ ಹಸಾಗುವದು; ಹಜನಕ್ರಿಯೆಯು ತಿದ್ದುವದು; ಪುಷ್ಟಿಸಗಳು ಗಟ್ಟಿಯಾಗುವುವು. ಆ ಮೇಲೆ ದಮ್ಮಿಗಾರಿಲಿಕ್ಕೆ ಸ್ಥಳವೇ ಸಿಗುವದಿಲ್ಲ

ದಮ್ಮು, ತೇಕು, ಬೆನ್ನು ನೋವು, ಗಂಟಲ ಉರಿಯುವಂಥ ಕೆಮ್ಮು ಮುಂತಾದ ವಿಕಾರಕ್ಕೆ ಪುರೋಹಿತಶ್ವಾಸಹಾರೀ ಪ್ಲಸ್ (ನೀಲೀ ಪ್ಯಾಕಿಂಗ್) ತೆಗೆದುಕೊಳ್ಳಬೇಕು. ಅಜೀರ್ಣ ನುತ್ತು ಆಮ್ಲಪಿತ್ತದಿಂದ ಬಳಲುವ ದಮ್ಮಿನವರು ಶ್ವಾಸಹಾರೀ ಕಂಪೌಂಡ (ಕೆಂಪು ಪ್ಯಾಕಿಂಗ್) ತೆಗೆದುಕೊಳ್ಳಬೇಕು.

೩ ಔನ್ಸ್ ೬ ಔನ್ಸ್ ೧೨ ಔನ್ಸ್ ಬಾಟ್ಲಿಗೆ ಕ್ರಮವಾಗಿ ರೂ.೨.೬.೦; ೫.೦೨ ೦ ಮತ್ತು ೧೦ ೦.೦

ಪುರೋಹಿತ ಫಾರ್ಮಸಿ, ಕೊಲ್ಹಾಪುರ

ಸ್ಟಾಕಿಸ್ಟರು ಪೊಪ್ಯುಲರ್ ಸ್ಟೋರ್ಸ್, ಮಂಗಳೂರು; ಟಿ.ಸಿ.ನಟರಾಜನ್ & ಕೋ.,ಮೈಸೂರು.

ಮುಂಬಯಿ ಸೋಲ್ ಏಜೆಂಟರು.

ವನಮಾಲೀ ಭಿಕಾಜಿ ಮತ್ತು ಕಂಪನಿ,
ಪ್ರಿನ್ಸೆಸ್ ಸ್ಟ್ರೀಟ್,
ಮುಂಬಯಿ ೨.



ದಿ ನ್ಯೂ ಗ್ರೇಟ್ ಇನ್ಶೂರೆನ್ಸ್
ಕೊ. ಒಫ್ ಇಂಡಿಯಾ ಲಿಮಿಟೆಡ್.

(ಇನ್‌ಕೊರ್‌ಪರೇಟೆಡ್ ಇನ್ ಬರೋಡಾ. ಸೆಂಬರರ ಮಿತ ಜವಾಬ್ದಾರಿಯ ಬಾಧ್ಯತೆ.)

ಅಧಿಕೃತ ಭಂಡವಳ	ರೂ. 2,50,00,000
ಪೆತ್ತ ಮತ್ತು ಚಂದಾ ಕೊಡುವ ಭಂಡವಳ	ರೂ. 1,25,00,000
ವಸೂಲಾದ ಭಂಡವಳ	ರೂ. 32,50,000

ಡ್ಯಾರೆಕ್ಟರ ಮಂಡಳಿಯ ಸದಸ್ಯರು

1. ತುಳಸಿದಾಸ್ ಕಲ್ಯಾಣ್‌ಜಿ, ಎಸ್ಕ್ವಾಯರ್ (ಚೆಯರ್‌ಮೆನ್)
2 ವಾಲ್‌ಜಂದ್ ಹಿರಾಚಂದ್, ಎಸ್ಕ್ವಾಯರ್.
3. ಧರ್ಮಸೇಮ್ ಮಂರ್‌ರಾಜ್ ಶಾಟನ್, ಎಸ್ಕ್ವಾಯರ್.
4. ಜಹಾಂಗಿರ್ ಪಿಸ್ಟೋಂಜಿ ಪಟೇಲ್, ಎಸ್ಕ್ವಾಯರ್, ಬಿ.ಎ. (ಕ್ಯಾಂಟಬ್)
5 ರಾಜಪ್ರಮ ಮನುಬಾಯಿ ವಸಂಜ ನೇಸಾಯಿ.
6. ಅಂಬಲಾಲ್ ಕಲಾಚಂದ್, ಎಸ್ಕ್ವಾಯರ್.

ಜನರಲ್ ಮೆನೇಜರ್:—ಎಂ. ಜೆ. ನೋಡಿ, ಎಸ್ಕ್ವಾಯರ್.

ರಿಜಸ್ಟರ್ಡ್ ಆಫೀಸು:—ಬೇಂಕ್ ಬಿಲ್ಡಿಂಗ್, ಮಾಂಡವಿ, ಬರೋಡಾ.

ಬ್ರಿಟಿಷ್ ಇಂಡಿಯದ ಕೇಂದ್ರ ಕಾರ್ಯಾಲಯ:

45/47 ಅಪೊಲೋ ಸ್ಟ್ರೀಟ್, ಫೋರ್ಟ್, ಬೊಂಬಾಯಿ.

ಮದ್ರಾಸು ಸಂಸ್ಥಾನದ ಎಲ್ಲೆಡೆಗಳಲ್ಲಿ ಅನುಭವೀ ನುರಿತ ಏಜಂಟರು ಬೇಕಾಗಿದ್ದಾರೆ. ಉಮೇದ್ವಾರರು ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು.

ಮದ್ರಾಸ್ ಆಫೀಸು, 121-A ಆರ್ಮೇನಿಯನ್ ಸ್ಟ್ರೀಟ್.

ಜೀವವಿಮಾ, ಬೆಂಕಿ, ಹಡಗು ಗಂಡಾಂತರಗಳ ಇನ್ಶೂರ್ ಸಹ ಸ್ವೀಕರಿಸಲಾಗುವುದು

The New Great Insurance Co. of India Ltd.

Approved firm by the Govt. of Mysor
Certified by the Agent of the Govt of
Cylone India

ದಕ್ಷಿಣ ಕನ್ನಡದ ವಹಿವಾಟು ಪಥಗಳ ಸುಧಾರಣೆ ಮತ್ತು ಸಣ್ಣ ಪುಟ್ಟ ನೀರಾವರಿ ಹಂಬಿಕೆಗಳು.

ಶ್ರೀ. ಎ. ಬಿ ಶಟ್ಟಿ, ಎಂ. ಎಲ್. ಎ., ಇವರಿಂದ.

ಸಾರ್ವಜನಿಕ ಖಾತೆಯ ಮಂತ್ರಿ ಮಾನ್ಯ ಶ್ರೀ. ಎಮ್. ಭಕ್ತವತ್ಸಲ ಮತ್ತು ಕಂದಾಯ ಮಂತ್ರಿ ಮಾನ್ಯ ಶ್ರೀ. ಕೆ. ಆರ್. ಕಾರಂತರೂ ನವೆಂಬರ್ ತಾ. 10ರಲ್ಲಿ ಮಂಗಳೂರಿಗಾಗಮಿಸಿ ನಾಲ್ಕು ದಿನಗಳ ವರೆಗೆ ಜಿಲ್ಲಾ ಸಂಚಾರ ಮಾಡುವರೆಂಬ ನಿರೀಕ್ಷೆಯಿದೆ. ವಹಿವಾಟು ಪಥಗಳ ಮಟ್ಟಿಗೆ ದಕ್ಷಿಣ ಕನ್ನಡವು ಇದುವರೆಗೂ ತೀರಾ ಕಡೆಗಣಿಸಲ್ಪಟ್ಟಿದೆ. ದಕ್ಷಿಣ ಕನ್ನಡ ಮತ್ತು ಮಲಬಾರುಗಳ ಸರಹದ್ದು ಲೈನಿನಲ್ಲಿ, ಕೆಲವು ಮೈಲುಗಳವರೆಗೂ ಮಲಬಾರಿನಿಂದ ದಕ್ಷಿಣ ಕನ್ನಡದೊಳಕ್ಕೆ ಜೋಡಣೆಯಾಗುವ ರಸ್ತೆಯೊಂದಿಲ್ಲ. ಮಂಗಳೂರಿನಿಂದ ಬೈಂದೂರು ವರೆಗಿನ ಕರಾವಳಿ ರಸ್ತೆಯಲ್ಲಿರುವ ಕಡವುಗಳಿಗೆ ಸೇತುವೆಗಳಾಗಿಲ್ಲ. ಬೇರೆ ರಸ್ತೆಗಳಲ್ಲಿ ಸಹ ನೂರಾರು ಸಂಕ ಮತ್ತು ಸೇತುವೆಗಳನ್ನು ಕಟ್ಟಲು ಉಳಿದಿದೆ; ಅಂತೆಯೇ ಈಗ ಇರುವ ಸಂಕಗಳನ್ನೂ ಸೇತುವೆಗಳನ್ನೂ ಬಲಪಡಿಸುವ ಹಾಗೂ ಪುನರ್ನಿರ್ಮಿಸುವ ಕೆಲಸಗಳಾಗಬೇಕಾಗಿದೆ. ಮಲಬಾರು ಮತ್ತು ದಕ್ಷಿಣ ಕನ್ನಡಗಳ ಮಾರ್ಗವಾಗಿ ಕೇಪ್ ಕೋಮರಿನ್‌ನಿಂದ ಬೊಂಬಾಯಿಯ ವರೆಗೆ ಒಂದು ರಾಷ್ಟ್ರೀಯ ರಾಜರಸ್ತೆಯನ್ನು ತೆರೆಯಲು ಸಾಧ್ಯ. ವರುಷದ ಎಲ್ಲಾ ಕಾಲದಲ್ಲೂ ಹಡಗಗಳೂ ದೊಡ್ಡ ಬೋಟುಗಳೂ ಒಳಗೆ ಬರಲಾಗುವಂತೆ ಮಂಗಳೂರು ಮತ್ತು ಮಲ್ಪೆ ಬಂದರುಗಳನ್ನು ಸುಧಾರಿಸಬೇಕಾಗಿದೆ. ಮೈಸೂರು ಮತ್ತು ಬೊಂಬಾಯಿ ಕರ್ನಾಟಕದೊಂದಿಗೆ ಈ ಜಿಲ್ಲೆಯ ಜೋಡಣೆಯಾಗುವಂತೆ ಮಂಗಳೂರಿನಿಂದ ರೈಲ್ವೇ ಲೈನನ್ನು ವಿಸ್ತರಿಸಬೇಕಾಗಿದೆ.

ನಮ್ಮ ಜಿಲ್ಲೆಯಲ್ಲಿ ಯಾವುದೇ ವಿಧದ ನೀರಾವರೀ ಕಾರ್ಯವೆಂಬುದಿಲ್ಲ. ತಮಿಳು ಮತ್ತು ಆಂಧ್ರ ಕ್ಷೇತ್ರಗಳಲ್ಲಿ ದೊಡ್ಡ ದೊಡ್ಡ ನೀರಾವರೀ ಯೋಜನೆಗಳಿಗಾಗಿ ಸರಕಾರವು ಕೋಟಿಗಟ್ಟಲೆ ರೂಪಾಯಿಗಳನ್ನು ವ್ಯಯಿಸುತ್ತಿದೆ. ನಮ್ಮಲ್ಲಿ ಬೀಳುತ್ತಿರುವ ಹೇರಳ ಮಳೆಯ ನೀರೆಲ್ಲಾ ಸಮುದ್ರಕ್ಕೆ ಹೋಗಿ ಸೇರಿ ವ್ಯರ್ಥವಾಗುತ್ತಿದೆ. ಹೊಳೆಗಳಿಗೆ ಹಲವು ಕಡೆಗಳಲ್ಲಿ ಆಣೆಕಟ್ಟುಗಳನ್ನು ಕಟ್ಟಿ, ಈಗ ನಿರರ್ಥಕವಾಗುತ್ತಿರುವ ನೀರು ಆಹಾರ ಧಾನ್ಯೋತ್ಪತ್ತಿಯನ್ನು ಹೆಚ್ಚಿಸುವದಕ್ಕಾಗಿ ವಿನಿಯೋಗವಾಗುವಂತೆ ಮಾಡಬಹುದು. ಸದ್ಯ ಹಾಳು ಬಿದ್ದಿರುವ ದೊಡ್ಡದೊಡ್ಡ ಕೆರೆಗಳು ಹಲವಿವೆ. ನಿದರ್ಶನಕ್ಕಾಗಿ ಬ್ರಹ್ಮಾವರದ ಸಮೀಪದಲ್ಲಿರುವ ಜಾಂತಾರ್ ಮದಗವನ್ನು ನೋಡಬಹುದು. ಅಂಧವುಗಳ ಕೆಸರನ್ನು ತೆಗೆಯಿಸಿ ದುರಸ್ತಿಮಾಡಿಸಿ, ಆಕ್ಯಪಕ್ಕದ ಕ್ಷೇತ್ರಗಳಿಗೆ ಇನ್ನಷ್ಟು ನೀರಿನ ಅನುಕೂಲತೆಯೊದಗಿಸಲು ಸಾಧ್ಯವಿದೆ.

ಸಾರ್ವಜನಿಕ ಖಾತೆಯ ಮಂತ್ರಿಗಳು ಇಲ್ಲಿಗಾಗಮಿಸುವಾಗ ನಮ್ಮಲ್ಲಿಯ ರಸ್ತೆಗಳ ರಿಪೇರಿ, ಸೇತುವೆಗಳ ತಯಾರಿ, ಬಂದರುಗಳ ಸುಧಾರಣೆ ಮತ್ತು ಸಣ್ಣ ನೀರಾವರೀ ವ್ಯವಸ್ಥೆಗಳ ಮೂಲಕ ಜಿಲ್ಲೆಯ ಅಭಿವೃದ್ಧಿಯನ್ನು ಸಾಧಿಸುವ ಆವಶ್ಯಕತೆಯನ್ನು ಮಂತ್ರಿಗಳಿಗೆ ಸರಿಯಾಗಿ ಮನಗಾಣಿಸಲು ಇಲ್ಲಿಯ ಸಂಘಟಿತ ಸಂಸ್ಥೆಗಳು ಮುಂದೆ ಬರಬೇಕು. ಕಳೆದ ವಾರ ಎಜ್. ಇ. ಗವರ್ನರರು ಮಂಗಳೂರಿಗೆ ಬಂದಿದ್ದಾಗ, ನಮ್ಮ ಜಿಲ್ಲೆಯ ಅಭಿವೃದ್ಧಿಯ ಕುರಿತು ಅವರಿಗೆ ಅಭಿರುಚಿ ಹುಟ್ಟುವಂತೆಯೂ, ಇಲ್ಲಿಯ ವಹಿವಾಟು ಪಥಗಳನ್ನು ವಿಸ್ತರಿಸುವ, ಅಂತೆಯೇ ನಮ್ಮ ಮತ್ತು ಮೈಸೂರು ಹಾಗೂ ಬೊಂಬಾಯಿ ವ್ಯಾಂತ್ಯಗಳೊಳಗೆ ಪಥ ಜೋಡಣೆಯಾಗುವಂತೆ ಮಾಡುವ ಕೆಲಸ ದಲ್ಲಿ ಹಿಂದೀ ಸರಕಾರ ಮತ್ತು ಮೈಸೂರು ಸರಕಾರಗಳು ತಮ್ಮ ಪಾಲಿನ ಕರ್ತವ್ಯ ನಿರ್ವಹಿಸುವಂತೆ ಮಾಡುವಂತೆಯೂ ಗವರ್ನರರಿಗೆ ಒತ್ತಿ ಸೂಚಿಸಲಾಗಿದೆ. ಮಾನ್ಯ ಶ್ರೀ ಕೆ.ಆರ್ ಕಾರಂತರೂ ನಮ್ಮ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾದ ಶ್ರೀ. ಯು. ಶ್ರೀನಿವಾಸ ಮಲ್ಯರೂ ಸಂಬಂಧಪಟ್ಟ ಅಧಿಕಾರಿಗಳ ಮುಂದೆ ಈ ವಿಷಯವನ್ನು ಇಡಬೇಕಾದುದು ಅಗತ್ಯ.

ದಕ್ಷಿಣ ಕನ್ನಡ

ಬ್ರಹ್ಮಾವರ-ತಾ. 20-10-46ರಲ್ಲಿ ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟ್ ಶ್ರೀ ಎ. ಲಕ್ಷ್ಮೀನಾರಾಯಣ ರಾವ್ ಬಿ. ಎ ಬಿ. ಎಲ್. ಎಜ್ಯೊಕೇಟ್ ಇವರಿಗೆ, ಬ್ರಹ್ಮಾವರ ಕೇಂದ್ರದವರು ಶ್ರೀ ಇರ್ಮಾಡಿ ನಾರಾಯಣ ಸೆಟ್ಟಿ ಮತ್ತು ಸಹೋದರರ ಮುಂದಾಳುತನದಿಂದ ಬ್ರಹ್ಮಾವರ ಬಂಗ್ಲೆಯಲ್ಲಿ ಬಹು ವಿಜೃಂಭಣೆಯಿಂದ ಒಂದು ಸತ್ಕಾರ ಕೂಟವನ್ನು ಜರಗಿಸಿದರು. ಸದ್ರಿ ಕೂಟದ ಅಧ್ಯಕ್ಷ ಸ್ಥಾನವನ್ನು ಬ್ರಹ್ಮಾವರ ಸಬ್ ರಿಜಿಸ್ಟ್ರಾರರು ಅಲಂಕರಿಸಿದ್ದರು. ವಕೀಲ್ ಶ್ರೀ. ಆನಂದ ಸೆಟ್ಟಿ ಸ್ವಾಗತ ಭಾಷಣವನ್ನು ಮಾಡಿದರು. ಶ್ರೀ ಮಾಧವರಾಯರು, ಫಾದರ್ ಕೋಶಿ, ಡಾಕ್ಟರ್ ನಾರಾಯಣ ಶೆಣೈ ಮತ್ತೆರರು ಆತಿಥಿಗಳ ಗುಣಕಥನವನ್ನಾಡಿದರು. ನಂತರ ಎ. ಲಕ್ಷ್ಮೀನಾರಾಯಣರಾಯರು ತನ್ನ ಪದವಿಯ ಕಾಲದಲ್ಲಿ ತಾನು ಮಾಡಿದ ನಿಸ್ವಾರ್ಥ ಸೇವೆ ಮುಂತಾದುವನ್ನು ವಿವರಿಸಿದರು. ಫೋಟೊ ತೆಗೆದ ಬಳಿಕ ಗಾಯನ, ತಾಂಬೂಲಾದಿ ಉಪಚಾರಗಳಿಂದ ಅಧ್ಯಕ್ಷರ ಭಾಷಣ, ಧನ್ಯವಾದಗಳೊಂದಿಗೆ ಸಭಾ ವಿಸರ್ಜನೆ ಆಯಿತು

ಹಿರಿಯಡ್ಕ-ಆರ್ಯ ಸಮಾಜ ಮಂದಿರದಲ್ಲಿ ತಾ. 24-10-46ರಲ್ಲಿ ಮಹರ್ಷಿ ದಯಾನಂದ ಸರಸ್ವತಿಯವರ ನಿರ್ಯಾಣೋತ್ಸವವು ಆಚರಿಸಲ್ಪಟ್ಟಿತು. ಕ್ರಮದಂತೆ ವೈದಿಕ ಯಜ್ಞಾನಂತರ ಶ್ರೀ.ಕೇಶವ ರಾಮಚಂದ್ರ ಪೈಯವರು ದಯಾನಂದರ ವ್ಯಕ್ತಿತ್ವ ಮತ್ತು ಮಹತ್ವದ ಕುರಿತು ಪ್ರೊಫೆಸರ್ ಎನ್. ಜಿ. ರಾಯರು "ದಯಾನಂದರ ಜೀವನ ಮತ್ತು ಮಾನವ ಕರ್ತವ್ಯ" ದ ಕುರಿತು ಶ್ರೀ. ಬಿ. ಲಕ್ಷ್ಮೀನಾರಾಯಣ ನೆಲ್ಲಿಯವರು "ದೀಪಾವಳಿಯ ಮಹತ್ವ ಮತ್ತು ದಯಾನಂದರ ಅವತಾರ" ಎಂಬ ಕುರಿತು ಶ್ರೀ. ಕೆ. ರಾಮಕೃಷ್ಣ ಸೆಟ್ಟಿ B. A. L. T. ಯವರು ಮೇಲ್ಕೋಕ್ತ ವಿಷಯಗಳನ್ನು ಸಮರ್ಥಿಸಿ ಭಾಷಣಮಾಡುತ್ತಾ ಮಂತ್ರಗಳನ್ನು ಸಾರ್ಥವಾಗಿ ಹೇಳಬೇಕೆಂಬ ದಯಾನಂದರು ಹೊಸ ಮತವನ್ನು ಸ್ಥಾಪಿಸದೆ ಸತ್ಯ ಸನಾತನ ವೈದಿಕ ಧರ್ಮದ ಪುನರುದ್ಧಾರವನ್ನೇ ಮಾಡಿದರೆಂದೂ ಸವಿವರವಾಗಿ ವಿವರಿಸಿ ಬೋಧಪರ ಭಾಷಣಮಾಡಿದರು. ಬಳಿಕ ಶ್ರೀ. H. K. ಅನಂತಯ್ಯನವರು ಧನ್ಯವಾದವನ್ನಿತ್ತ ಬಳಿಕ ಶಾಂತಿ ಮಂತ್ರದೊಂದಿಗೆ ಸಭೆಯು ಜರಿದಿತು.

ಪುತ್ತೂರಿಗೆ ಗವರ್ನರರು ಬರುವ

ಸಮಾರಂಭಕ್ಕಾಗಿ ನಗರದಿಂದ ಮತ್ತು ತಾಲೂಕಿನ ಅನೇಕ ಗ್ರಾಮಗಳಿಂದಲೂ ವಸೂಲಿಗಾರರು ನಂತಿಗೆಯಾಗಿ ಸುಮಾರು 1700 ಕ್ಕೆ ಏರಿಕ್ಕೆ ವಸೂಲು ಮಾಡಿದ್ದಾರಾಗಿ ವದಂತಿ ಇದೆ. ಅದ್ದರಿಂದ 5 ರೂ ಯಾ ಹೆಚ್ಚು ಕೊಟ್ಟವರ ಮತ್ತು ವಿಶೇಷವಾಗಿ ಇತರ ವಸ್ತುಗಳನ್ನು ಒಪ್ಪಿಸಿದವರ ಹೆಸರುಗಳನ್ನೂ ಪೂರ್ಣ ಆಯ ವ್ಯಯದ ಲೆಕ್ಕ ಪತ್ರವನ್ನೂ ಸಮಾಜನರಿಗೆ ಸಂಬಂಧಪಟ್ಟವರು ತಿಳಿಸಿದರೆ ಅಪಪ್ರಚಾರವು ಸಲ್ಲಬಹುದಾಗಿದೆ. ಪುತ್ತೂರು ತಾಲೂಕಿನ ನಿಕರ ಜಾಹಿರು ದಬ್ಬಾಳಿಕೆಯ ವಿಚಾರವಾಗಿ ಪುತ್ತೂರಿಗೆ ಬರಲಿರುವ ಸಾಮ್ರಾಜ್ಯ ಕಂಪಾಯ ಸುಂತ್ರಿಗಳಲ್ಲಿ ತಾಲೂಕಿನ ನೊಂದವರ ವಿಶ್ವಾಸುಂದಲವು ನಿವೇದಿಸಲಿರುವದಾಗಿಯೂ ತಿಳಿಯುತ್ತದೆ.

ಮದರಾಸು ಸ್ಕೂಲ್ ಬುಕ್ ಮತ್ತು ಲಿಟರೇಚರ್ ಸೊಸೈಟಿಯವರಿಂದ ಬಹು ಮಾನಿತವಾದ ಉಪಯುಕ್ತ ಗ್ರಂಥ

ಪ್ರಸವ ವಿಜ್ಞಾನ

ಬರೆದವರು

ಡಾ|| ದೊಡ್ಡೇರಿ ವೆಂಕಟಗಿರಿರಾವ್.

ಸುಮಾರು ಮೂರು ನೆತ್ತು ಚಿತ್ರಗಳಿವೆ.

ಐ. ಏ. ಕಳಿಸುವುದಿಲ್ಲ. ರೂ ೩-೪-೦ನ್ನು ಪೂರ್ತಿಯಾರ್ಡರ್ ಮಾಡಿದರೆ ರಿಜಿಸ್ಟರ್ ಮೂಲಕ ಕಳಿಸಲಾಗುವುದು. ಪುಸ್ತಕ ವ್ಯಾಪಾರಿಗಳಿಗೆ ರಿಯಾಯತಿಯುಂಟು ಮಾರಾಟಗಾರರು

ಮಾಡರ್ನ್ ಔಷಧಾಲಯ

ಜೊಡ್ಡ ಬಳ್ಳಾಪುರ (ಬೆಂಗಳೂರು)

ಧಾತುಪುಷ್ಟಿ ಲೇಹ

ಇದುಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ ಧಾತುಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ,ಇವು ಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು. ಆದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಏಕ್ಕ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಮಹಾಮದನಕಾಮೇಶ್ವರೀ ಲೇಹ

(ಬಂಗಾರ, ಪುಸುಗು, ಕಸ್ತೂರಿ ಮಿಶ್ರಿತವಾದದ್ದು.)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು.

ರಾತ್ಲು 1ರ 10-0-0, ½ ರಾತ್ಲು 5-4-0, ¼ ರಾತ್ಲು 2-12-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ. ಕ್ಯಾಲೆಂಡಿಗ್ರಿ ಬರೆದಲ್ಲಿ ರೋಗಕ್ಕೆ ತಕ್ಕಹಾದ ಔಷಧಿ ರವಾನಿಸಲಾಗುವುದು.

(1) ಉಡುಪಿ ವಿಜಯರು:— ನವಭಾರತ ಬುಕ್ ಡಿಪೊ, (2) ಬೊಂಬಾಯಿ ನಿಜಿಲರು:- ಪೊಪ್ಯುಲರ್ ಸ್ಟೋರ್ಸ್, ಕೆಮಿಸ್ಟ್183, ಸುಕಾರಿಬಜಾರ್ ರೋಡ್, ಡಿ. ಐ. ಏ. ರೈಲ್ವೆ ವರ್ಕ್‌ಶೋಪ್ ಎದುರುಗಡೆ, ಪರೇಲ್. (3) ಜನರಲ್ ಸ್ಟೋರ್ಸ್, ಕೆಮಿಸ್ಟ್, ಜಿ. ಐ. ಪಿ. ಮಾಟುಂಗಾ.

Notice

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.

O. S. 245/42 R. E P. 422/1946

ಅರ್ಜಿದಾರಳು-ನಾಗಮ್ಮ.

ಎದ್ರಿ -ಪಣಿಯಪ್ಪ ಭಟ್ಟ.

ಸದ್ರಿ ವ್ಯವಹರಣೆಯಲ್ಲಿ ಕುಂದಾಪುರ ತಾಲ್ಲೂ ಹಳ್ಳಾಡಿ ಹರ್ಕಾಡಿ ಗ್ರಾಮದಲ್ಲಿರುವ ಶ್ರೀನಿವಾಸ ಭಟ್ಟರ ಮಗ ಪಣಿಯಪ್ಪ ಭಟ್ಟರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ

ಎದ್ರಿಯಿಂದ ಅರ್ಜಿದಾರಳಿಗೆ ಕಳೆದ ಚಿತ್ರ ಭಾನು, ಸ್ಥಳಾನು, ತಾರೀಖು, ಪಾರ್ಥಿವ ಸಂವತ್ಸರಗಳ ಬಾಬ್ತು ಬರತಕ್ಕ ಅರನಾರ್ತ ನ ಬಡ್ಡಿ ಕೂಡಾ ಬರಮಾಡಿಕೊಳ್ಳುವರೆ ಅರ್ಜಿದಾರಳು ವಾಜ್ಜುಮಾಡಿದ ಮೇಲಿನ ಅಮಲ್ಜಾರಿ ಅರ್ಜಿಯು ತಾ. 7-11-46ಕ್ಕೆ ಮೇಲಿನ ಕೋರ್ಟಿನಲ್ಲಿ ತನ್ನಿಗೆ ಇಟ್ಟಿರುತ್ತದೆ. ಆ ಕುರಿತು ಏನಾದರೂ ಆಕ್ಷೇಪಣೆಗಳಿದ್ದಲ್ಲಿ ಆ ತಾರೀಕಿಗೆ ಮೇಲಿನ ಕೋರ್ಟು ನುಂದೆ ಹಾಜ್ರಾಗಿ ಜ್ಯಾಬೀರುಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ಈ ಮೂಲಕ ತಿಳಿಯಪಡ್ಸಿರುತ್ತದೆ.

Sd/ N. S. Parameshwariah.
Advocate. for Plff.

Date 17-10-46, Kundapur

ವರ್ಗ - ಉಳ್ಳಿಗ

ಮೊದಲಾದ ಪುಸ್ತಕ,
ಇತರ ಲೆಕ್ಕ ಪುಸ್ತಕಗಳು
ತರಹವಾರು ಸೈಜಿನಲ್ಲಿ
ದೊರೆಯುತ್ತವೆ.

ನವಯುಗ ಪ್ರೆಸ್, ಉಡುಪಿ.

'ದ್ವೇಷಬೀಜ ಬಿತ್ತುವವರು ದ್ವೇಷಫಲ ತಿನ್ನುವರು'

(೨ನೇ ಪುಟದಿಂದ)

ಅಪಾಯದಿಂದಲೂ, ಗುಂಡೆಸೆವಾಜ್ಞೆಯಿಲ್ಲದ್ದರಿಂದಲೂ ದಂಗು ಬಡೆದಂತಿದ್ದ ಸೇಲ್ಜರರಿಗೆ ಕಟ್ಟಕಡೆಗೆ 'ಹಾರಿರಿ' ಎಂಬಾಜ್ಞೆ ದೊರೆಯಿತು. ಐದು ಮಿನಿಟು ಖಾಡಾ ಖಾಡಿ ಯುದ್ಧವೇ ನಡೆದ ಮೇಲೆ ಕಾಡು ಮಂದಿ ಓಡಿಹೋದರು. ಈ ಗುಂಡು ಕಲ್ಲುಗಳ ಹಾರಾಟದ ವೇಳೆಯಲ್ಲೂ ನೆಹರುಗಳು ಎಡಬಲ ನೋಡದೆ ಪ್ರಫುಲ್ಲವದನರಾಗಿ ಆನ್ಯಮನಸ್ಕರಂತೆ ಶಾಂತತೆಯಲ್ಲಿದ್ದರು ಖಾನ್ ಅಬ್ದುಲ್ ಗಫರ್ ಖಾನರ ಕಣ್ಣುಗಳು ಹೋರಾಟದ ಕಡೆ ಕಾರುತ್ತಿದ್ದರೂ ಮುಖದಲ್ಲಿ ನಗೆ ಸೂಸುತಿತ್ತು. 'ಏನಿಲ್ಲ! ಕೇವಲ ತಮಾಷೆ' ಎಂದು ಆ ಕಾಲದಲ್ಲೂ ಆವರ ಅಂಬೋಣ ಒಂಟು ಕಾಡು ಮನುಷ್ಯರು ಮತ್ತು ಪಕ್ಕದೇ ಸೇಲ್ಜರರೊಳಗಿನ– ಅವರ ದೊಡ್ಡ ದೊಡ್ಡ ಒಂಡೆಗಳು ಮತ್ತು ಇವರ ಗುಂಡುಗಳೊಗಿನ–ಐದು ಮಿನಿಟಿನ ಖ ಡಾಖಾಡಿ ಹೋರಾಟದ ನಂತರ ನಮ್ಮಕಾರು ಛರಕ್ಕೆಂದು ಮುಂದೆ ಸಾಗಿತು. ನನ್ನ ಮೈಯೂ ಕಾರೂ ಒದೆದ ಗ್ಲಾಸಿನ ಚೂರುಗಳಿಂದ ತುಂಬಿದ್ದವು. ಆ ಕೆಲವೇ ಮಿನಿಟುಗಳೊಳಗೆ ನನ್ನ ಮೆದುಳು ಕೆಮರಾದಲ್ಲಿ ಮೂಡಿದ್ದ ಕೆಲವುದೃಶ್ಯಗಳು ಸಾಯುವವರೆಗೂ ಮಾಸುವಂತಿಲ್ಲ. ಪಂಡಿತ ನೆಹರುಗಳ ಕಾರಿಗೆ ಸೆಯಲು ದೊಡ್ಡ ಬಂಡೆಯೊಂದನ್ನೆತ್ತಿದ (ನೆಹರು ಬಿಸಿತಲೆಗೊಜ್ಜಾಗುತಿತ್ತು!) ಒಬ್ಬ ಕಾಡು ಮನುಷ್ಯನೊಡನೆ ನಮ್ಮ ಪಂಗಡಿಗನೊಬ್ಬನು ಉರುಡಾಡುತಿದ್ದ ಆ ನೋಟ ನನ್ನ ಕಣ್ಣಮುಂದಿದೆ ಆವರಿಬ್ಬರೂ ಕಾಡು ಹಾದಿಯ ಅಂಚಿನಲ್ಲೇ ಅತ್ಯುದ್ರೇಕದಿಂದ ಉರುಡಾಡಿದ್ದರು. ಕೊನೆಗಾ ಕಾಡುಮನುಷ್ಯ ತನ್ನ ಕಾಲುಗಳನ್ನು ಕುಂಟುತ್ತಾ 50 ಅಡಿ ಆಳದ ಕಣಿವೆಗಿಳಿದು ಹೋದ. ಅಂತೆಯೇ ಆ ಪುಂಡರ ಪಂಗಡದ ಎಲ್ಲರೂ ಮೊದಲ್ ಕಲ್ಲುಗಳನ್ನೆತ್ತಿ ಹಿಡಕೊಂಡೇ ನಿಂತಿದ್ದ ಆ ದೃಶ್ಯವೂ ನನ್ನ ಕಣ್ಣಾಮುಂದಿದೆ. ಪುಂಡರ ನಿಂಚು ಧಾಳಿಯಿಂದಾಗಿ ಒಮ್ಮೆ ದಿಗಿಲು ಬಿದ್ದಿದ್ದ ಸೇನಾ ಪಹರೆಗಾರರು ಗುಂಡೆಸೆವ ಆಜ್ಞೆ ಬಾರದ್ದರಿಂದ ಪ್ರಥಮತಃ ಗಲಿಬಿಲಿಗೊಂಡಿದ್ದ ಆ ಮುಖಮುದ್ರೆಗಳೂ ನನ್ನ ಜ್ಞಾಪಕದಲ್ಲಿವೆ. ಆತಂಕ ಕಳೆದು ಕಾರನ್ನು ಮುಂದೆ ಬಿಡುವಾಗ ನನ್ನ ಡ್ರೈವರನ ಮುಖವರಳಿದ ದೃಶ್ಯವನ್ನೂ ಮರೆಯಲಾರೆ ಇವೆಲ್ಲಾ ಅಡಿಮೇಲುಗಳ ಸನ್ನಿವೇಶದಲ್ಲೂ ನೆಹರುಗಳು ಏಕಪ್ರಕಾರ ಶಾಂತ ಗಂಭೀರತೆಯಲ್ಲಿದ್ದರು".

ಮಲಕಂಡಿ ಅಪಘಾತ

ಕೈಬರ್ ಕಣಿವೆಯನ್ನು ಹಾದು ಪೇಶಾವರಕ್ಕೆ ಬಂದು ರಾತ್ರಿ ಡಾ! ಖಾನ್‌ಸಾಹೇಬರಲ್ಲಿ ಎಲ್ಲರೂ ತಂಗಿದರು. ಮಧ್ಯರಾತ್ರಿಯಲ್ಲಿ ಖಾನ್ ಸಾಹೇಬರ ಮನೆಯ ಮುಂಚಾವಡಿಯಲ್ಲಿ ಎರಡು ಸ್ಫೋಟಗಳಾಗಿದ್ದುವು. ನೋಡುವಾಗ ಸಿಡಿದ ಕೃಳದಲ್ಲಿ ಅಳವಾದ ಕುಳಿಬಿದ್ದಿತ್ತು. ಯಾರಿಗೂ ಆ ಪಾಯವಾಗಿಲ್ಲ. ಮರುದಿನ ಮುಂಜಾನೆ ನೆಹರು ವ್ಯಯಾಣ ಯಥಾಪ್ರಕಾರ ಸಾಗಿತು. ಮಲಕಂಡಿಗೆ ಭೇಟಿಕೊಟ್ಟಾಗ ಅಲ್ಲಿ ಕೆಂಪಂಗಿಯವರ ಅಭೂತಪೂರ್ವ ಸ್ವಾಗತ ದೊರೆಯಿತು; ನೆಹರುಗಳು ಪ್ರೇಮ ಸಂದೇಶವಿತ್ತರು. ಅಲ್ಲಿಂದ ಪುನಃ ಪೇಶಾವರಕ್ಕೆ ನಹರುಗಳ ಕಾರು ಹಿಂದಿರುಗಿ ಬರುತಿತ್ತು. ಕಾರಿನಲ್ಲಿ ನೆಹರು, ಗಫರ್ ಖಾನ್, ಖಾನ್ ಸಾಹೇಬ್ ಮತ್ತು ನೆಹರುಗಳ ಕಾರ್ಯದರ್ಶಿ ಎಮ್ ಒ. ಮಥಾಯಿ ಕುಳಿತಿದ್ದರು. ನೋರ್ವನ್ ಕ್ಲಿಫರು ಹಾದಿಯಲ್ಲಿ ತಾನೂ ಹಕ್ಕುತ್ತೇನೆಂದಾಗ ಮಥಾಯಿ ಆವರನ್ನೂ ಹತ್ತಿಸಿಕೊಂಡರು. ಇನ್ನಷ್ಟು ಮುಂದೆ ಬಂದಾಗ ಪೊಲಿಟಿಕಲ್ ಏಜೆಂಟನ ನೈಗಾವಲಿನ ಅಧಿಕಾರಿಯೊಬ್ಬ ಓಡೋಡಿ ಬಂದು ತಾನೂ ಬರುತ್ತೇನೆ ಎಂದ. ಮಥಾಯಿ ದಾಕ್ಷಿಣ್ಯಕ್ಕೆ ಕಟ್ಟು ಬಿದ್ದು ಆ ಕಾರಿನಿಂದಿಳಿದು ಆವನನ್ನು ಹತ್ತಿಸಿ ತಾನು ಬಂದಿನ ಕಾರಿನಲ್ಲಿ ಕುಳಿತರು. ಅಲ್ಲಿಂದ ಹುಸು ಮುಂದೆ ಹೋಗುವದೇ ಕಡ—ಸುಮಾರು 200 ಕರೋರ ಮನುಷ್ಯರು ಹಾದಿಯಡ್ಡಗಟ್ಟಿ ನಿಂತು ವಿಕ ಪ್ರಕಾರ ಕಲ್ಲುಗಳನ್ನು ಹೊಡೆಯ ಹತ್ತಿದರು. ಆಗ ಈ ಕಾರುಗಳನ್ನು ರಕ್ಷಿಸುವ ಸೇನಾತೋರಿ ಬಂದಿರಲಿಲ್ಲ. ಮೂರು ಮಿನಿಟುಗಳ ವರೆಗೆ ಕಲ್ಲುಗಳು– ದೊಡ್ಡ ದೊಡ್ಡ ಬಂಡಗಳೇ– ಪ್ರತಿರೋಧವಿಲ್ಲದೆ 200 ಕೈಗಳಿಂದ ಬಂದು ಬೀಳುತ್ತಿದ್ದುವು ಇಲ್ಲಿ ಖಾನ್ ಅಬ್ದುಲ್ ಗಫರ್ ಖಾನರು ತನ್ನ ಸ್ಥೂಲಕಾಯವನ್ನೇ ಗುರಾಣಿಮಾಡಿ ಪಂಡಿತಜೀಯ ದೇಹವನ್ನು ಮುಚ್ಚಿಟ್ಟು ಹೆಚ್ಚಿನ ಹೊಡೆತಗಳಿಗೆ ತಾನೇ ದೇಹವೊಡ್ಡಿದರು; ಅವರ ಮೈಯಿಂದ ರಕ್ತ ಸುರಿಯುತಿತ್ತು. ಆದರೂ ನೆಹರುಗಳ ಗಡ್ಡ ಮತ್ತು ಕೆವಿ ಹಿಂದು ಹೋಯಿತಲ್ಲದೆ ತೋಳಿಗೂ ಒಂದು ಕಲ್ಲು ಬಂದು ಬಿತ್ತು. ತಲೆಗೂ ತುಸು ಘಾಯವಾಗಿದೆ. ಡಾ! ಖಾನ್ ಸಾಹೇಬರ ತಲೆ [illegible] ಆಗುವ ವರೆಗೂ ಕೈಯಲ್ಲಿ ಸಿಸ್ತಾಲಿದ್ದ ಪೊಲಿಟಿಕಲ್ ಏಜಂಟನ ಆ ಕಾವಲುಗಾರ ಏನೂ ಗಾಬರಿಯಿಲ್ಲದೆ ಸ್ವಸ್ಥವಾಗಿ ಕುಳಿತಿದ್ದ. ಇದನ್ನು ಕಂಡು ಖಾನ್ ಸಾಹೇಬರ ಸಿಟ್ಟು ಕದಡಿದಂತಾಯಿತು. ಅವರು ಆ ಧೂರ್ತನ ಕೈಯಿಂದ ಸರಕ್ಕನೆ ಪಿಸ್ತೂಲನ್ನೆಳಕೊಂಡು ಆ 'ಶಿವರಾತ್ರಿ ಪೋಳ'ರ ಗುಂಪಿನ ಕಡೆಗೆ ತೋರಿಸಿದೊಡನೆ ಎಲ್ಲರೂ ಓಡಿ ಹೋದರು

ಆ ದಿನವಿಡೀ ಖಾನ್ ಅಬ್ದುಲ್ ಗಫರ್ ಖಾನರ ಮೂಗಿನಿಂದ ರಕ್ತ ಸುರಿಯುತಿತ್ತು. ಅವರನ್ನು ಅಂದೇ ಆಸ್ಪತ್ರೆಗೆ ಸೇರಿಸಿ 'ಎಕ್ಸ್‌ರೇ' ಪರೀಕ್ಷೆ ನಡೆಸಿದಾಗ ಆವರ ಎಡಗೈಯ ಎರಡು ಬೆರಳುಗಳು ಮುರಿದು ಹೋಗಿರುವುದೂ ಮೂಗು, ತಲೆ ಬುರುಡೆ ಮತ್ತು ಹೆಗಲ ಮೂಳೆಗಳು ಜಜ್ಜಿ ಹೋಗಿರುವುದೂ ಕಂಡು ಬಂದಿದೆ. ಈಗ ಆವರು ಗುಣ ಹೊಂದುತಿದ್ದಾರೆ.

ನೆಹರು ಪ್ರಯಾಣದಲ್ಲಿ ಒಟ್ಟಿಗೆ 12 ಕಾರುಗಳು ಕಲ್ಲು ಹೊಡೆತದಿಂದ ಹಾಳಾಗಿವೆ. ಪಂಡಿತಜೀ ಕುಳಿತಿದ್ದ ಮೂರು ಕಾರುಗಳ ಸನೀಶ ಕೆಲವು ಪೂರ್ಣ ನಜ್ಜುಗುಜ್ಜಾದುವು ಆವರೊಂದಿಗೆ ಸಂಚರಿಸಿದ್ದ ಆನುಯಾಯಿಗಳು, ಪತ್ರಿಕಾ ಪ್ರತಿನಿಧಿಗಳು ಮತ್ತಿತರರು, ಎಲ್ಲರೂ ಸಣ್ಣ ದೊಡ್ಡ ಘಾಯಗೊಂಡಿದ್ದಾರೆ

ನೆಹರುಗಳ ವೀರವಾಣಿ

ಕೊನೆಯದಾಗಿ ತಾ.21ನೇ ಆವರಾಹ್ನ ಕೆಂಪಂಗಿ ತರಬೇತಿನಿಲಯವಿರುವ ನಾರ್ದರ್ಯಾಬಿನಲ್ಲಿ ಕೆಂಪಂಗಿಯವರಿತ್ತ ಸಂಘ ಮದಸ್ವಾಗತ ಪಾರಾಗೂ ಮಾನಪತ್ರವನ್ನು ಸ್ವೀಕರಿಸುತ್ತಾ ಪಂಡಿತ ನೆಹರುಗಳಾಡಿದ ವೀರವಾಣಿಗಳು ಆ ಗುಡ್ಡನಾಡಿನ ಗುಹೆಗಳೆಲ್ಲೂ ಪ್ರತಿಧ್ವನಿಸದಿರಲಾರವು: "ನಾನು ಗುಡ್ಡಗಾಡು ಸಂಚಾರಮಾಡಿಬಂದೆ, ನಾನಲ್ಲಿಗೆ ಇನ್ನೂ ಹೋಗಲಿದ್ದೇನೆ ಪ್ರಪಂಚದ ಅಗ್ರಗಣ್ಯ ಸಾಮ್ರಾಜ್ಯದೊಡನೆ ನಿಶ್ಯಂಕೆಯಿಂದ ಹೋರಾಡಿದವರು ನಾವು. ನಮ್ಮನ್ನು ಹುದಿ ತಪ್ಪುವಂತೆ ಮಾಡಲು ಗುಂಡಾಗಳಿಂದ, ಪೋಕರಿಗಳಿಂದ, ಕಲ್ಲೆಸೆಯುವವರಿಂದ ಸಾಧ್ಯವಿಲ್ಲ ಆ ಗುಡ್ಡಗಾಡು ಪ್ರದೇಶದಲ್ಲಿ ನಮ್ಮ ಮತ್ತು ನಮ್ಮ ನಾಯಕ ಅಬ್ದುಲ್ ಗಫರ್ ಖಾನರ ರಕ್ತದ ಕೆಲವು ಹನಿಗಳುದುರಿದುವು. ಹೀಗಾದುದು ನಮ್ಮೆಲ್ಲರಿಗೂ—ಪರಾಣರಿಗೂ ಭಾರತಕ್ಕೂ-ಹಿತಕರ. ಯಾಕಂದರೆ ನಮ್ಮೊಳಗಿನ ಸುಸಂಬಂಧದ ಬೀಜವನ್ನು ಆವು ಮೊಳೆಯಿಸಲಿವೆ. ನನಗಾಕಾಡು ಮನುಷ್ಯರ ಮೇಲೆ ದ್ವೇಷವಿಲ್ಲ. ಆವರು ಸರಳ ಬುದ್ಧಿಯ ಸಾದಾ ಮನುಷ್ಯರೆಂಬುದು ನನಗೆ ಗೊತ್ತಿದೆ; ಬೇರೆಯವರು ಅವರನ್ನು ಉದ್ರೇಕಿಸಿ ಬಿಟ್ಟಿದ್ದರು. ಕೆಂಪಂಗಿಯವರಾದ ನಿಮಗವರನ್ನು ಸಂಘಿಸಲು ಸಾಧ್ಯವಿಲ್ಲದಿದ್ದಾಗ ಇತರರು ಅಲ್ಲಿ ಧಾವಿಸಿ ಗಾಳಿಯೂದಿದ್ದರು. 'ನೆಹರು ನಿಮ್ಮ ಸ್ವಾತಂತ್ರ್ಯಾಪಹಾರಕ್ಕೆ ಬರುತಿದ್ದಾನೆ. ನೆಹರು ನಿಮ್ಮ ತಲೆಯ ಮೇಲೆ ಹಿಂದೂ ರಾಜ್ಯವನ್ನು ಹೇರಲು ಬರುತಿದ್ದಾನೆ. ನೆಹರು ಕಲ್ಕತ್ತಾ ಮತ್ತಿತ್ತರ ಕಡೆಗಳಲ್ಲಿ ಮುಸ್ಲಿಮರನ್ನು ಸಂಹಾರ ಮಾಡಿದವ' ಎಂದೆಲ್ಲಾ ಆವರ ಕಿವಿಯೂದಲಾಗಿತ್ತು. ವಯೀರಿ ಸ್ಥಾನದ ಮೇಲೆ ಬೋಂಬು ಹಾಕುವ ಆಜ್ಞೆಕೊಟ್ಟದ್ದು ಕಾಂಗ್ರೆಸ್ಸು ಎಂದವರಿಗೆ ತಿಳಿಸಲಾಗಿತ್ತು. ಸತ್ಯ ಸ್ಥಿತಿಯೆಂದರೆ ಕೆಲವು ತಿಂಗಳಿಂದ ನಶೆಯುತ್ತಿದ್ದ ಬೋಂಬು ಧಾಳಿಯನ್ನು ಆಧಿಕಾರಕ್ಕೆ ಬಂದೊಡನೆ ನಿಲ್ಲಿಸಿದ್ದೇ ನಾವು. ಇಂತಹ ಹೇಳಿಕೆ ಕೇಳಿ ಆಜನರ ಬುದ್ಧಿವಿಕಲ್ಪವಾಗಿದ್ದುದು ಸ್ವಾಭಾವಿಕ. ಗುಡ್ಡಗಾಡಿನ ಜನ ಧೀರರು; ಧೀರರ ಮೇಲೆ ಆತಿ ಹೆಚ್ಚಿನ ಗೌರವವಿರುವವನು ನಾನು (ಸಭೆಯಲ್ಲಿ 'ನೆಹರು ಝಿಂದಾಬಾದ್' 'ಎಡ್ಮಿರೇ ಆಫ್ರಿನ್' ಜಯಘೋಷ) ಆ ಜಾಗಗಳಿಗೆ ಸಂಚಾರಕ್ಕೆ ಹೋಗದಂತ ನನಗೆ ಹಲವರು ಉಪದೇಶಿಸಿದ್ದರು. ಆದರೆ ಈ ಪ್ರಪಂಚದಲ್ಲಿರುವ ಎನ್ನನ್ನೇ ಕೊಟ್ಟರೂ ಕಳೆದ ಐದು ದಿನಗಳಲ್ಲಿ ನನಗೆ ದೊರೆತ ಆನುಭವವನ್ನು ಕಳಕೊಳ್ಳಲು ನಾನು ತಯಾರಿರಲಿಲ್ಲ. ಕೆಲವು ಪಕ್ಷ ಮತ್ತು ಸಂಸ್ಥೆಗಳು ದ್ವೇಷಾಸೂಯೆ ಹಾಗೂ ಅಂತರಿಕ ಕಲಹಗಳ ಅಸ್ತಿವಾರದ ಮೇಲೆ ತಮ್ಮ ಭವಿಷ್ಯವನ್ನು ಕಟ್ಟಬೇಕೆಂದು ಹೊಂಟಿವೆ. ನಾವು ಬ್ರಿಟಿಷ್ ಸಾಮ್ರಾಜ್ಯಶಾಹಿಯನ್ನು ಹೋರಾಡಿದಾಗ ಛಿನತೆಯಿಂದಲೇ ಕಾದಾಡಿದ್ದೆವು. 1930ರಲ್ಲಿ ಇಲ್ಲಿಯೂ ವೇಶದ ಬೇರೆ ಕಡೆಗಳಲ್ಲಿಯೂ ನಮ್ಮ ರಕ್ತ ಸುರಿದಿತ್ತು. ಆದರೆ ಯಾರೊಬ್ಬರ ಮೇಲೂ ದ್ವೇಷದ ಬೀಜವನ್ನು ನಾವೆಂದೂ ಬಿತ್ತಿದುದಿಲ್ಲ. ಯಾವ ಕಾಲದಲ್ಲಾದರೂ ಬ್ರಿಟಿಷನೊಬ್ಬನು ವಿಕಾಕಿಯಾಗಿ ನಿರ್ಭೀತಿಯಿಂದ ರಸ್ತೆತಿರುಗಾಡಿ ಬರಬಹುದಿತ್ತು. ಕಾರಣ ನಾವು ಬ್ರಿಟಿಷ್ ಜನರನ್ನು ದ್ವೇಷಿಸಲು ಕಲಿಸಲಿಲ್ಲ. ಆದರೀ ದಿನ ಕೆಲವರು ದಂಗೆ, ಕೊಲೆ, ಪೋಕರಿತನದ ಹಾದಿ ಹಿಡಿದಿವ್ವಾರೆ. ಅಂಧಾ ಬ್ರಿಟಿಷ್ ಸಾಮ್ರಾಜ್ಯಕ್ಕೆ ಹೆದರದ ನಾವು ಈ ಪುಂಡಾಟಿಕೆಗಳಿಗೆ ಸೊಪ್ಪುಹಾಕುವಂತಿಲ್ಲ. ದೊಡ್ಡ ಪ್ರಶ್ನೆಗಳ ತೀರ್ಮಾವು ಛನ ಹೃದಯದವರಿಂದಲೇ ಆಗಬೇಕು. ಹೊಂತು ಅಲ್ಪ ಬುದ್ಧಿಯವರಿಂದಲ್ಲ. ನಾನು ಎಚ್ಚರಿಕೆ ಕೊಡುತ್ತೇನೆ—ದ್ವೇಷವು ದ್ವೇಷವನ್ನೇ ಪಡೆಯುವದು. ಇಂದು ದ್ವೇಷದ ಬೀಜ ಬಿತ್ತುತ್ತಿರುವವರು ಆ ಫಲವನ್ನೇ ಉಣ್ಣುವರು. ಯುದ್ಧ ಹಾದಿಯತ್ತ ಕೈತೋರಿಸುವವರು ಯುದ್ಧವನ್ನೆಸಂಪಾದಿಸುವರು."

ನೆಹರು ತಾ 23ರಲ್ಲಿ ವಿಮಾನ ಮೂಲಕ ದಿಲ್ಲಿಗಾಗಮಿಸಿ ಕೂಡಲೇ ಯಥಾಪ್ರಕಾರ ಸರಕಾರೀ ಕಾರ್ಯಾಸಕ್ತರಾಗಿದ್ದಾರೆ.

Deepavali Greetings.

On this festive occasion,

KOCHIKAR BROTHERS LTD.,

CHIEF AGENTS FOR SOUTH INDIA
SPECIAL AGENTS FOR ROMBAY CITY

THE BOMBAY LIFE ASSURANCE CO., LTD.,

convey to all their

Policy Holders, Agents,
Medical Examiners & Well wishers

All happiness and prosperity for the
NEW YEAR.

CHAMPAE'S
Snow & Lastrex
(Sole Distributers for India.)
Prop: K. C. NAYAK,
Santhekatte, UDIPI. S. K.

FOR LIFE ASSURANCE
CONSULT
The New Gaurdian of India Life Insrce Co, Ltd,
(Chairman - The Hon'ble Mr. M. CT M Chidambaram Chettyar.)
A policy in this progressive Life Office is a good investment; its Agency is a valuable business connection.
LOCAL OFFICES IN SOUTH KANARA
MANGALORE
&
KARKALA.
HEAD OFFICE
"United India Life Bldg"
Esplanade, Post Box No 142.
MADRAS.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟೆ ಬದ್ದಿದ್ದರೆ, ಉಷ್ಣದಿಂದ ಜೀರು ಇಳಿದಿದ್ದರೆ, ಉಡುಡುಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಅಕ್ಕಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ಡಾವಣಗೇರಿ:ಡಾವಣಗೇರಿಪೈನ್ಸ್. ಪತ್ರವ್ಯವಹಾರ ಮಾಡಬೇಕಲ್ಲ ವಾಲರವರ ವಿಳಾಸ.

ರೇವಣಸಿದ್ದಪ್ಪ ಹಾಲಪ್ಪ ಡಾವಣಗೇರಿ,
ಆಯುರ್ವೇದ ಔಷಧಾಲಯ, ಗದಗ.
Ayurveda Oushadalaya GADAG

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ **ಅಮೋಘವಾದ ಮಧುರದ್ರವ ರಸಾಯನ.** ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ



(ಇದು ರಿಜಿಸ್ಟರು ಮಾಡಲ್ಪಟ್ಟಿದೆ.)

೮ ಔನ್ಸಿನ ಬಾಟ್ಲಿಗಳು ಹೆಚ್ಚು ಕಡಿಮೆ ೪೦ದಿವಸಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯಿಗಳು ಒಂದು ಬಾಣಂತಿಯನಕ್ಕೆ ಸಾಕಾಗುವವು ವಿಶೇಷ ವಿವರಕ್ಕೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ.ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.೨ **ಕೊಡಿಯಾಲಬೈಲು, ದ.ಕ.**

ಸ್ವಾಕಿಸ್ವರು- ಡಾ| ಐ ಕೆ ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಸ್ವರ್ಗಸ್ಥ ಡಾಕ್ಟರ್ ಎಂ. ಮಾಧವಾಚಾರ್ಯರಿಂದ ರಚಿಸಲ್ಪಟ್ಟ ಎರಡು ಅತ್ಯುತ್ತಮ ನಾಟಕಗಳು.

ಸರಸ್ವತಿ ಬೆಲೆ **0-12-0**

ಅಲ್ಪ ಶಿಕ್ಷಣದಿಂದುಂಟಾಗುವ ಅನರ್ಥ ಪರಂಪರೆಗಳನ್ನು ಪ್ರತ್ಯಕ್ಷವಾಗಿ ಹೃದಯದ್ರಾವಕವಾದ ರೀತಿಯಲ್ಲಿ ಕಾಣಿಸುವ ಸಾಮಾಜಿಕ ನಾಟಕ.

ಮೀರಾಬಾಯಿ ಬೆಲೆ **0-10-0**

ಶ್ರೀಕೃಷ್ಣ ಪರಮಾತ್ಮನ ಆರಾಧನೆಗೆ ಸಂಸಾರಿಗಳಾಗಿರುವವರಿಗೂ ಅವಕಾಶವಿದೆ ಕವಟ, ಪಾಖಂಡತಾತಕತನ, ಅವಿಚಾರ, ಪ್ರಮಾದ ಇವುಗಳಿಂದುಂಟಾದ ದಾಸಿವನ್ನು ಮೂರೀಕರಿಸಲು ಬಗನದ್ಭಕ್ತಿಯೊಂದೇ ಉತ್ತಮ ಸಾಧನವೆಂಬುದನ್ನು ಸಾರಿವ ಭಕ್ತಿಪ್ರಾಧಾನ್ಯ ನಾಟಕ

ಎರಡೂ ಪ್ರತಿ ಬೇಕಾದವರು ರೂ 1-8-0 ಕಳಿಸಬೇಕು

ನವಭಾರತ ಪುಸ್ತಕ ಭಂಡಾರ, ಉಡುಪಿ | ಕಿರಿಯರ ಪ್ರಪಂಚ, ಉಡುಪಿ

'ಇಂಗ್ಲಿಷ್ ಬರುವುದಿಲ್ಲವಲ್ಲಾ' ಎಂದು ಚಿಂತಿಸುವಿರೇಕೆ?
ಸುಲಭದಲ್ಲಿ ಇಂಗ್ಲಿಷ್ ಕಲಿಯಲು ಅನುಕೂಲವಾದ ಪುಸ್ತಕ ಇಲ್ಲಿದೆ-

ಶ್ರೀ. ಕೊರಡ್ಕಲರ ಇಂಗ್ಲಿಷ್ ಸ್ವಯಂಬೋಧಿನಿ

ENGLISH MADE EASY

ಈ ಪುಸ್ತಕದಿಂದ ನೂರಾರು ಜನರು ತಾವಾಗಿ ಸುಲಭದಲ್ಲಿ ಇಂಗ್ಲಿಷ್ ಕಲಿತುಕೊಂಡಿದ್ದಾರೆ.
ನೀವೇಕೆ ಕಾಲಹರಣ ಮಾಡಬೇಕು? ಇಂದೇ ಒಂದು ಪ್ರತಿಯನ್ನು ಕೊಂಡುಕೊಳ್ಳಿರಿ.
ಬೆಲೆ ಬರೇ ರೂ. 1-8-0 ಟಪ್ಪಾಲು ಖರ್ಚು 0-4-0 ಪ್ರತ್ಯೇಕ

ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

EDITED, PRINTED & PUBLISHED BY K. H. SHETTY AT THE NAVAYUGA PRESS UDIPI, S. INDIA.

Regd. No. M. 3618. Estd. 1921 ಸ್ಥಾಪನೆ. ಬೆಲೆ: 0—1—6.

ನವಯುಗ

ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ 1—8—0
6 ತಿಂಗಳಿಗೆ ರೂ. 2—8—0
6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ
ಮಾದರಿ ಸಂಚಿಕೆಗೆ ಬರೆಯಿರಿ.
ಮೆನೇಜರ್,
ನವಯುಗ, ಉಡುಪಿ, ದ. ಕ.

NAVAYUGA

ನವಯುಗ

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ.

ವರ್ಷ ೨೬ ವಾರ ೧೦ | FOUNDER. SRI. A. B. SHETTY, M.L.A. | Vol. 26 No. 10

ಉಡುಪಿ • 7—11—1946 • ಮಂಗಳೂರು.

ಅಮೃತಾಂಜನ. ತಲೆನೋವು, ತಿರಿ, ಜ್ವರ, ಚೇಳು ಕಡ್ತಿಗೆ, ಭುಜ, ಹಲ್ಲು ನೋವುಗಳಿಗೂ ಎದೆನೋವು, ಶ್ವಾಯಗಳು ಬಾತು ಕೊಳ್ಳುವಿಕು, ಬೇಳು ಬಿಷ ಮುಂತಾದ ಬೆನೆ ಬಣ್ಣಾಶ ಮೊದಿನ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧ

REGD. ಅಮೃತಾಂಜನ ಲಿಮಿಟೆಡ್.
ಮದರಾಸು.
ಕೊಚ್ಚಾಯಿ ಮತ್ತು ಕಲ್ಕತ್ತ.

The best preventive in epidemics of CHOLERA
"BRUVANENDRA"
CHANDRAMAS
Also a sovereign remedy for diarrhoea, Stomachache, Vomiting and Nausea.
BHUVANENDRA PRODUCTS LTD., Katapadi.

'ಭುವನೇಂದ್ರ'
ಚಂದ್ರಮಸ್ ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ.
ದೊಡ್ಡವರಿಗೆ 4ರಿಂದ 8ಬೊಟ್ಟು, ಸಣ್ಣಮಕ್ಕಳಿಗೆ 1ರಿಂದ 2ಬೊಟ್ಟು ಲವಂಗ ಯಾ ಏಮದ ಕಷಾಯದಲ್ಲಿ ಏನಕ್ಕೆ 2 ಯಾ 3 ಸರ್ತಿ ಯುಕ್ತ ಕಂದಂತೆ ಕೊಡುವುದು.
ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.
ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್, ಕಟಪಾಡಿ, ದ. ಕ
ಉಡುಪಿ ಸ್ವಾಕಿಸ್ಟರು:— ಡಾ। ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಡಾ। ಆರ್। ಎಸ್। ಕಜೆ, ರಥಬೀದಿ; ಡಾ। ಪಿ. ಜಿ. ಆಚಾರ್ಸ್ ಫಾರ್ಮಸಿ; ಡಾ। ಕೆ. ಶೇಷ ಗಿರಿ ಪೈ, L.I.M.; ಡಾ। ನೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೊ

Life is full of Opportunities.

Life is full of events and opportunities created by God for man and by man for himself and his fellowmen. Normal life presupposes a prosperous family, a happy home, good education, congenial vocation, good relations, friends, a cultured society and also a few ups and downs to spice them all with. Have you made sure that your family too can reasonably aspire to lead such a life even in your absence?

The Canara Mutual Assurance Co., Ltd.,
HEAD OFFICE UDIPI. (S. India.)
Chief Agents for the Bombay and Madras Presidencies including States and the States of Mysore and Hyderabad.
The Commercial Corporation of India, Ltd.,
UDIPI. (S. India.)

Deepavali Greetings.

On this festive occasion,
KOCHIKAR BROTHERS LTD.,
CHIEF AGENTS FOR SOUTH INDIA
SPECIAL AGENTS FOR BOMBAY CITY
THE BOMBAY LIFE ASSURANCE CO., LTD.,
convey to all their
Policy Holders, Agents,
Medical Examiners & Well wishers.
All happiness and prosperity for the
NEW YEAR.

ಉಡುಪಿ ಬೋರ್ಡಿಂಗ್
ಎಂಡ್
ಲೋಜಿಂಗ್ ಮಧುರಾ.

ಕಾ. 8—8—1945ರಲ್ಲಿ ಜರಗಿದ ಆರನೆ ಹುಟ್ಟುಹಬ್ಬದ ಸಮಾರಂಭದ ಸಂತೋಷ ಕಾಲದಲ್ಲಿ ನಮಗೆ ಸಕಲ ವಿಧದಿಂದಲೂ ಬೆಂಬಲವಿತ್ತು ಪ್ರೋತ್ಸಾಹಿಸಿದ ಮಾಡನೀಯರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇವೆ. ಇದಕ್ಕಿಂತಲೂ ದ್ವಿಗುಣಿತವಾಗಿ ನಮ್ಮ ಸೇವೆಯನ್ನು ಹೊಸವರುಷದಲ್ಲಿ ಸಲ್ಲಿಸಲು ಮಹಾಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನೀಯುವರೆಂದು ನಿರೀಕ್ಷೆ

ಎಲ್. ನರಸಿಂಗ ರಾವ್,
ಪ್ರೊಪ್ರೈಟರ್.

—ಮಕ್ಕಳನ್ನು ಹಡೆಯುವುದು ಸಾಕು—
ಆತಕ್ಕ ಸ್ತ್ರೀಯರಿಗೆ ಬರ್ಥ್ ಕಂಟ್ರೋಲ್ ತೋಗಗೃಹಸ್ಥ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಕೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.
ಕಿಮ್ಮತ್ತು:—ಪರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ಬೀಳುವದಿಲ್ಲ.
ಮಾಲಕರು:—ಹಾಲಪ್ಪಾ ಭಕೀರಪ್ಪಾ ಡಾವಣಗೇರಿ
ಆಯುರ್ವೇದ ಔಷಧಾಲಯ. ಗದಗ-ಸಿಟಿ.
ಏಜಂಟರು:—ಹುಬ್ಬಳಿ ಫಾರ್ಮಸಿ,—ಹುಬ್ಬಳಿ, ಗದಗ, ಡಾಗಲಕೋಟೆ ಧಾರವಾಡ, ವಿಜಾಪುರ—ಶಾನಭೋಗ ಸಿದ್ಧಲಿಂಗಶೆಟ್ಟ ಧಾರವಾಡಕರ, ವಿಜಾಪುರ. ಚಿಕ್ಕೋಡಿಯಲ್ಲಿ:—ಕಾಲಬರವಾಡಿ ಸ್ಟೋರ್ಸ್ ಶಾವಜಗೇರಿ:—ಶಾವಜಗೇರಿ ಪ್ರೆಸ್ಸ್. ಆರ್. ಎಲ್. ಶತಲಾದಾಸ, ಕೆಮಿಸ್ಟ್, ಹಾವೇರಿ, ಬ್ಯಾಡಗಿ
Ayurveda Oushadalaya, GADAG CITY.

ಭದ್ರತೆ ಮತ್ತು ಸೇವೆ

ಇದೇ ಬೇಂಕಿನ ಸಕಲಹದಿ ಮತ್ತು ಮುಖ್ಯ ಗುರಿ.

ನಮ್ಮ ಸೇವೆಯನ್ನು ಪ್ರಾರಂಭಿಸಿ ಇಂದಿಗೆ ಹದಿನೈದು ವರ್ಷಗಳು ಸಂದುವು. ಮುಂದಿನ ವರ್ಷಗಳಲ್ಲಿ ನವೀನ ಹುರುಪಿನಿಂದ ವ್ಯವಹಾರಗಳನ್ನು ನಡಿಸಿ ಹೆಚ್ಚಿಸಬೇಕೆಂದು ಸಂಕಲ್ಪಿಸಿದ್ದೇವೆ. ಈ ನಮ್ಮ ಧ್ಯೇಯಸಾಧನೆಗೆ ನಿಮ್ಮೆಲ್ಲರ ಸಹಕಾರವನ್ನು ಹಿಂದಿಗಿಂತಲೂ ಹೆಚ್ಚಾಗಿ ನೀಡುವಿರೆಂದು ನಂಬುತ್ತೇವೆ. ನೇಸಗಾತಿಗೆ ಉತ್ತರದ ಬಡ್ಡಿ ಕೊಡಲ್ಪಡುವುದಲ್ಲದೆ ಸಾಲಗಳನ್ನು ಕಡಿಮೆ ಬಡ್ಡಿಯಿಂದಲೂ ಬೇಂಕಿನ ಇತರ ಸಕಲ ಸಲಕರಣೆಗಳನ್ನು ಜನರಿಗೆ ಒದಗಿಸಿಕೊಡುವುದೇ ನಮ್ಮ ಕಾರ್ಯಕ್ರಮ.

ದಿ ವಿಜಯಾ ಬೇಂಕ್, ಲಿಮಿಟೆಡ್
ಹೆಡ್ ಆಫೀಸು: ಮಂಗಳೂರು
ಶಾಖೆಗಳು: ಬೈಂದೂರು, ಕುಂದಾಪುರ, ಬ್ರಹ್ಮಾವರ, ಉಪ್ಪಿ, ಕಾಪು, ಕಾರ್ಕಳ, ಸಿಟಿ—ಮಂಗಳೂರು, ಕಾಸರಗೋಡು,

ಗಿರಾಕಿ ಮಾತ್ರ ಗಿರ್ಕಿ

ಲೇಖಕರು:– ಶ್ರೀ. ಶಿವರಾಮ ಕಾರಂತರು.

"ಜಿಸ್‌ಕಾ ಗಲಾ ಉಸ್‌ಕಾ ಅಲ್ಲಾ—" ಎಂದು ಹೇಳುವ ಹಾಗೆ ಯಾರು "ಸಂಪಿನ ಬೆದರಿಕೆ ಹೂಡುವರೋ ಅವರ ಬೇಡಿಕೆಗಳನ್ನು ಸರ್ಕಾರ ಸಲ್ಲಿಸುವುದಾದರೆ ನ್ಯಾಯ ಸಂದಂತಾಯಿತೇ ಎಂದು ಶ್ರೀ. ಕಾರಂತರು ಈ ವಿಚಾರಪೂರಿತ ಲೇಖನದಲ್ಲಿ ಪ್ರಶ್ನೆ ಹಾಕಿದ್ದಾರೆ.

ಅಲ್ಲದೆ ಬಂಡವಳುಗಾರ, ಶ್ರಮಜೀವಿಗಳ ಹೋರಾಟ ಒಂದು ಕಡೆಯಾದರೆ ಗಿರಾಕಿಯ ಪಾಡೇನು?....ಎಂಬುದನ್ನೂ ವಿಶದೀಕರಿಸಿದ್ದಾರೆ.

ಭಾರತ ಖಂಡಕ್ಕೇನೆ ಇಂದು 'ಸಂಪು' ಗಳ ಸುಗ್ಗಿ ಸೊಂಪಾಗಿ ಬಂದಂತೆ ಕಾಣುತ್ತಿದೆ. ಮಹಾಯುದ್ಧದ ಉರಿಯನ್ನು ಅನುಭವಿಸಿ ಕಂಗಾಲಾದ ಜನ-ಎಂದು ಮಾಲುಗಳ ಬೆಲೆ ಇಳಿದೀತು, ಎಂದು ಪ್ರಯಾಣ ಸುಖಕರವಾದೀತು ಎಂದು ಕಾದಿದ್ದರೆ-ತದ್ವಿಪರೀತ ಒಂದೊದಗಿದೆ. ಜೀವನಕ್ಕೆ-ಶಾಂತಿಯ ಮೊದಲನೆಯ ದಿನವೇ ಈ ಪ್ಲವದ ಯುಗಾದಿಯೆಂಬಂತಾಗಿದೆ. ಉಡಲು ಅರಿವೆ ಸಾಲದು, ಇರಲು ಮನೆ ಕಾಣದು, ಉಣಲು ಕಾಳು ಸಿಗದು. ಇವುಗಳ ಬರಗಾಲ ಕಾಣಿಸುತ್ತಿರುವಾಗ ಅವನ ಪಾಲಿನ ಸಮಾಧಾನವೆಂದರೆ—ಸಂಪುಗಳಾದರೂ ಧಾರಾಳವಾಗಿ ಆಗುತ್ತವೆಯೆಂದು.

ಯಾವಾಗ ಜಾತಿಯ ಸಂಪುಗಳು ಜೇಕು—? ಸಂಪು ಬರಿಯ ಗಿರಣಿ ಕೂಲಿಗಳಿಗೆ ಮಾತ್ರವೇ ಹೋದುದಲ್ಲವೆಂದು ಸಿದ್ಧಾಂತಪಡಿಸಲು ಎಲ್ಲರೂ ಹೊರಟಿದ್ದಾರೆ. ರೈಲಿನವರು, ಅಂಚೆಯವರು, ಉಪಾಧ್ಯಾಯರು, ವಿದ್ಯಾರ್ಥಿಗಳು, ಹೊಟೇಲು ಕೆಲಸಗಾರರು (ತಿಂಡಿಬಾಕರಲ್ಲ) ಜಾಡಮಾಲಿಗಳು—ಮೇಲಿಂದ ಮೇಲೆ ಮುಷ್ಕರ ಹೂಡುತ್ತಿದ್ದಾರೆ. ಎಲ್ಲವೂ ಸಕಾರಣಗಳಾದ ಮುಷ್ಕರಗಳೇನೆ. ಆಂದು ೧೯೪೦ರಲ್ಲಿ ನಾಡಿನ ಬಿಡುಗಡೆಗಾಗಿ ಎದೆಗುಂದಿದವರು ಇಂದು ಉಬ್ಬಿದ ಎದೆಯಿಂದ ವ್ಯಕ್ತಿಸ್ವಾತಂತ್ರ್ಯಕ್ಕಾಗಿ ಕಾದಾಡುತ್ತಿದ್ದಾರೆ. ಮೊದಲು ಸಹಜವಾದ ಆರ್ಥಿಕ ಸ್ಥಿತಿಯನ್ನು ಕುಲುಕಿ, ಅನಂತರ ಅದೇ ಸಮಾಜಕರ ಸಹಾನುಭೂತಿಯನ್ನು ಪಡೆಯುವ ಕೆಲಸವೂ ನಡೆದಿದೆ. ದಾರಿಯಲ್ಲಿ ಬಿದ್ದ ಪ್ರವಾಸಿ ಮನಿಯಾರ್ಡರನ್ನು ಕಾದು ನಿರಾಶೆಗೊಂಡ ಬಡವ-ಎಲ್ಲರೂ ಸಹಾನುಭೂತಿ ತೋರಿಸುತ್ತಿದ್ದಾರೆ. ಜಾಡಮಾಲಿಗಳು ಒಂದು ವಾರ ಮುಷ್ಕರ ಹಿಡಿದರೆ, ಕಕ್ಕಸು ಬಳಸುವವರು ಬೇಗ ಈ ಪರಿಸ್ಥಿತಿ ಕೊನೆಗೊಳ್ಳಲಿ—ಎಂದು ಸಹಾನುಭೂತಿ ತೋರಿಸದೆ ಇದ್ದಾರೆಯೇ?

ಈ ಲೇಖನ ಪರಿಶೀಲಿಸುತ್ತಲೆ, ಈತ ಬಂಡವಳುಗಾರರ ವಕೀಲ, ಮಬದೂರರ ದ್ವೇಷಿ ಎನ್ನಲೂಬಹುದು. ನನಗೆ ಅನ್ನಿಸುವುದಿಷ್ಟೆ-ಯಾವ ಪಂಗಡಕ್ಕೂ ನನ್ನನ್ನು ಸೇರಿಸಿ ಬಿಡಿ—ಅದರೆ ನಾನೊಬ್ಬ 'ಗಿರಾಕಿ' (consumer) ಎಂಬ ಪಂಗಡದವನೆಂದು ಮರೆಯಬಾರದು

ಈ ತನಕ ಪರಂಪರೆಯ ಬೆಂಬಲದಿಂದ ಬಂಡವಾಳಗಾರರು ಪೆಡಂಭೂತರಾಗಿ ಬೆಳೆಯುತ್ತ ಬಂದರು, ಉದ್ಯೋಗ, ಉದ್ಯಮಗಳ ನಿರ್ಮಾಣಕರ್ತರು ತಾವು—ತಮ್ಮ ಕೊಬ್ಬನ್ನು ಬೆಳೆಯಿಸಿಕೊಳ್ಳಲು ಪ್ರಯತ್ನಿಸಿದರು. ಎಲ್ಲ ದೇಶದ ಬಂಡವಾಳಗಾರರೂ ವಯ್ಯಕ್ತಿಕ ಸ್ವಾತಂತ್ರ್ಯಕ್ಕೆ ಪರಮಾವಧಿಯ ಪೋಷಣೆಯನ್ನು ಕೋರುತ್ತಿದ್ದಾರೆ. ಪರಂಪರೆಯ ಬಲ ಅವರಿಗೇನೆ ಹಿತವಾಗಿ ಬಂದಿದ ಸಿನ್ನೆಯ ತನಕ ಅವರೇ ಶಕ್ತರು ಎಂಬುದರಿಂದ ಅವರ ಬಲವು ಮೆರೆದಾಡಿತು. ಅತಿಯಾದ ಸ್ವಾರ್ಥದಿಂದ ಅವರು ದುಡಿಮೆಗಾರರನ್ನು ಕಂಡು ದರಿಂದ, ಉದ್ಯೋಗ ಶರೀರದಲ್ಲಿ ಅದರ ಪ್ರತಿ ವಿಷ (anti-toxin) ಉತ್ಪನ್ನವಾಯಿತು. ಅದೇನೆ ಕಾರ್ಮಿಕರ ಯುಗ. ವಿಷದಿಂದ ಶರೀರ ಕೆಟ್ಟುಂತೆ ಪ್ರತಿ ವಿಷದಿಂದಲೂ ಅದು ನಾಶವಾದೀತು ಎಂಬುದನ್ನು ಮಾತ್ರ ನಾವು ಮರೆಯಬಾರದು. ಪ್ರವಹನವನ್ನು ನಾವು ಬರಿಯ ಎರಡು ಬಣವಾಗಿ ವಿಭಾಗಿಸಿ ತಿಳಿಯುವುದರಿಂದ ಈ ಪಲ್ಲಟ ಕಲ್ಪನೆ ಉಂಟಾಗುತ್ತದೆ ಬಂಡವಳುಗಾರರ ಸ್ಥಾನ, ಬಲಗಳನ್ನು ಇಂದು ಮಜೂರರು ಕುಗ್ಗಿಸಿ, ತಾವು ಆ ಸ್ಥಾನವನ್ನು ಅವರಿಸುವುದೂ, ಅವರಿಸುವ ಹಂಬಲ ಮಾಡುವುದೂ-ಸಮಾಜ ಶರೀರ ಬಂಡವಾಳಗಾರರ ಬದಲು ಮಜೂರರಿಗೆ ಮಾರಿ ಹೋಗಿದೆ ಎಂದು ತೋರಿಸುವ ಸಿದ್ಧಾಂತವಾಗಿದೆ.

ಉದ್ಯಮ, ಉದ್ಯೋಗ, ಸೇವೆಗಳಿರುವುದೆಲ್ಲ "ಸಮಾಜದ ಸಲುವಾಗಿ. ಮೂಲು ಉತ್ಪನ್ನವಾಗುವುದು ರೈಲು ಓಡುವುದು-ಜನರ ಸಲುವಾಗಿ. ಅವರು ಬಂಡವಾಳಗಾರರಿಗೆ ಲಾಭ ಕೊಡುವವರಾದರೂ ಈ ಲಾಭಕ್ಕಾಗಿಯೇ ಬದುಕಿ ಉಳಿಯಬೇಕಾದವರಲ್ಲ. ಅದರಂತೆ—ಶ್ರಮಗಾರನು, ತಾನು ಉಳಿಯಬೇಕಾದುದರ ಜತೆಗೆ ತನ್ನ ಮತ್ತು ಬಂಡವಳುಗಾರನ ಅಸ್ತಿತ್ವಕ್ಕೆ ಕಾರಣವಾದ ಸಮಾಜ ಬದುಕಿ ಉಳಿಯಬೇಕು. ಗಿರಾಕಿ ಸಾಯಬಾರದು-ಎಂದು ತಿಳಿಯಬೇಡವೇ?

ಹಿಂದೆಯೂ, ಈಗಲೂ, ಬಂಡವಳುಗಾರ ಮತ್ತು ಸಾಮ್ರಾಜ್ಯವಾದಿಗಳ ದೃಷ್ಟಿಯಲ್ಲಿ-ತಾವೊಬ್ಬರೇ ಸಂಪತ್ತಿನ ಉತ್ಪಾದಕರೆಂಬ ತಿಳಿವಿದೆ. ಹಾಗುದರಿಂದ ಸಂಪತ್ತಿನ ವಿತರಣೆಯೂ ಅವರ ಅಧೀನವಾಗಿದೆ. ಮಾಲಿಗೆ ಅವರಿಸಿದ ಬೆಲೆ, ಕೂಲಿಗೆ ಅವರು ಕೊಟ್ಟ ವೇತನ-ರೂಢಿಯಾಗಿತ್ತು. ಅದರಂತೆ ಸಾಮ್ರಾಜ್ಯವಾದಿಗಳು-ಹಿಂದುಳಿದ ದೇಶಗಳನ್ನು ಅವರ ಉದ್ಧಾರದ ಸಲುವಾಗಿ ಆಳುವ ಸೋಗಿನಿಂದ, ತಮ್ಮ ಲಾಭಕ್ಕಾಗಿಸುತ್ತಿದ್ದರು. ಗಿರಾಕಿಯ ಉತ್ಪನ್ನ ಬೆಳೆಯದೆ ಉತ್ಪನ್ನ ಕಾರನ ಲಾಭ ಬೆಳೆಯದು ಎಂಬುದು ತತ್ವವಾದರೂ-ಮಾನವ ಸ್ವಾರ್ಥಿ. ಅವನು ತನ್ನ ಸ್ವಾರ್ಥಕ್ಕಾಗಿ ಗುಂಪಿನ ಒಟ್ಟು ಹಿತ ಮರೆಯುತ್ತಾನೆ. ನಿಡುಗಾಲದ ಲಾಭಕಾಣುವ ಬದಲು, ಒಂದೇ ಬಾರಿಗೆ ಕೆಚ್ಚಲು ಕತ್ತರಿಸುವ ಗೌಳಿಗನಾಗುತ್ತಾನೆ.

ಕಾರ್ಲ್ ಮಾರ್ಕ್ಸ್‌ನಿಂಥವರ ಪ್ರೇರಣೆಯಿಂದ, ಲೆನಿನ್‌ನಂಥ ರಾಜಕಾರಣ ಪಟುಗಳು ಉದಯಿಸಿದರು ಸೋವಿಯೆಟ್ ರಷ್ಯ ಜನ್ಮವೆತ್ತಿತ್ತು. ದುಡಿಮೆಗಾರನೇ ಸಂಪತ್ತಿನ ತಂದೆ ರಾಷ್ಟ್ರಕ್ಕೆ ಅವನೇ ಒಡೆಯ—ಎಂಬ ತತ್ವವನ್ನು ಆಚರಣೆಗೆ ತಂದಿತು. ಈ ಪಂಥದವರ ಮುಖ್ಯ ವಿರೋಧಿ ಬಂಡವಳುಗಾರಿಕೆ ಕಾರ್ಯದಲ್ಲಿ ಬಂಡವಳುಗಾರಿಕೆಯ ಜತೆಗೆ—ವ್ಯಕ್ತಿಸ್ವಾತಂತ್ರ್ಯವೂ ಬಲಿಯಾಗಿದೆ ಹೇಗೂ ಇರಲಿ—ಅದರ ನೇರವಾದ ಫಲವೆಂದರೆ ಇಂದು ದೇಶವಿದೇಶಗಳಲ್ಲಿ ಕಾಣಿಸುತ್ತಿರುವ-ಕಾರ್ಮಿಕರ ವ್ಯವಸ್ಥಿತ ಸಂಸ್ಥೆಗಳು. (Trade Unions).

ತಂತಮ್ಮ ಉದ್ಯೋಗದ (Trade) ಕೆಲಸಗಾರರ ಹಿತವೇ ಅವರ ಗುರಿ. ಜಿವುಗಳ ಶಕ್ತಿಯ ಪ್ರತಿಫಲವೇ ಇಂದು ನಮ್ಮನಾಡಿನಲ್ಲಿಯೂ ಇತರ ದೇಶಗಳಲ್ಲೂ ಕಾಣಿಸುತ್ತಿರುವ 'ಸಂಪು'ಗಳ ಮಹಾಪೂರಕ್ಕೆ ಮುಖ್ಯ ಕಾರಣ.

ಕಾರ್ಮಿಕರ ಸಂಸ್ಥೆಗಳು ಶ್ರಮಗಾರರ ಹಿತವೊಂದನ್ನು ಗುರಿಯಾಗಿರಿಸಿಕೊಂಡವರು. ಆದೂ 'ತಮ್ಮ ಬಳಗ'ದ ಕಡಿಮೆ ಶ್ರಮದ ಕಾಲಕ ಅಧಿಕ ವೇತನಕ್ಕಾಗಿ ಅವರು ಹೊಡೆದಾಡುತ್ತಿದ್ದಾರೆ. ಪ್ರಪಂಚದ ಯಾವತ್ತೂ ಮಾನವನ, ಏಕೈ ಪ್ರತಿಯೊಂದು ಜೀವಿಯಹಂಬಲವೂ ಆಷ್ಟೇನೆ, ಆದಷ್ಟು ಕಡಿಮೆ ಶ್ರಮದಿಂದ ಅದಷ್ಟು ಅಧಿಕ ಸುಖ ಸಂಪಾದಿಸುವುದು.

ಕಾರ್ಮಿಕರ ಗುಂಪಿನವರ ವಿರೋಧ ಬಂಡವಳುಗಾರರ ಮೇಲೆ ಮಾತ್ರವಂತೆ. ಬಂಡವಳುಗಾರ ವ್ಯಕ್ತಿಯಾಗಿರುವಲ್ಲಿ ಖಾಸಗಿ ಸಂಸ್ಥೆಯಾಗಿರುವಲ್ಲಿ-ಈ ಮಾತು ಒಂದ ರೀತಿ. ಆ ಸ್ಥಾನ ಸಮಾಜ. ಇಲ್ಲವೆ ರಾಜ್ಯ(State) ಆದರೂ ಅವರ ವಿರೋಧದ ರೀತಿ ಒಂದೇ ತೆರನಾಗಿದೆ. ರೈಲು, ಅಂಚೆ ಮುಷ್ಕರಗಳು—ಖಾಸಗಿ ಬಂಡವಳುಗಾರರ ಮೇಲಿನ ಮುಷ್ಕರವಲ್ಲವೆಂಬುದನ್ನು ನಾವು ತಿಳಿದಿರಬೇಕಾದ ವಿಷಯ ಉದ್ಯೋಗದ ಸ್ವಾಮ್ಯ ಸರಕಾರದ, ರಾಜ್ಯದ ಇಲ್ಲಾ ಸಮಾಜದ ಕೈಯಲ್ಲಿರುವಾಗಲೂ, ಕಾರ್ಮಿಕ ಪಂಗಡದ ಯುದ್ಧ ನೀತಿ ಒಂದೇ ಬಗೆಯಾಗಿದೆ. ಅವರ 'ಸಂಪು' ಏತಕ್ಕೆ ಎಂದರೆ, ತಮ್ಮ ಜೀವನದ ಮಟ್ಟವನ್ನು ಏರಿಸುವ ಸಲುವಾಗಿ-ಎಂಬುದು ಎಲ್ಲರಿಗೂ ಸಮ್ಮತವಾದ ಸಂಗತಿಯೇ. ಆದರೆ ಕಾರ್ಮಿಕರು ಮರೆಯುತ್ತಿರುವ ಒಂದು ವಿಷಯ, ಈ ಕೆಲಸ ಸಾಧ್ಯವಾಗಲು ಒಂದು ಮಿತಿಯಿದೆ, ಆ ಮಿತಿಯು ರಾಜ್ಯವನ್ನೇ ಆಧರಿಸುತ್ತಿರುವ—ಗಿರಾಕಿ ತೆರಿಗೆದಾರ ಕಂದಾಯಗಾರನ ಜೀವನದ ಮಟ್ಟವನ್ನು ಹೊಂದಿದೆಯೆಂದು. ಇದು ನಿಜವಾದರೆ-ಬಂಡವಳುಗಾರ, ಶ್ರಮಗಾರರಿಪ್ಪೆ ಸಂಪತ್ತಿನ ವಿತರಣೆ ಪಾಲುಗಾರರಲ್ಲ. ಗಿರಾಕಿಗಳಿಂದ ತುಂಬಿದ ಸಮಾಜವೂ ಪಾಲುಗಾರ ಎಂಬುದನ್ನು ಎಣಿಸಬೇಕು.

ಬಂಡವಳುಗಾರರು—ತಮ್ಮದೇ ಬೇರೆ ಜಾತಿಯನ್ನು ಕಲ್ಪಿಸಿಕೊಂಡುದರಿಂದ ಸಮಾಜದ ಹೊಣೆ ಮರೆತರು. ಕಾರ್ಮಿಕರು ತಂತಮ್ಮ ಕೋಮು ರಚಿಸಿಕೊಂಡುದರಿಂದ, ದೊಡ್ಡ ಕಲ್ಪನೆ ಮಾಡಲಾರದೆ ಅದೇ ಬಗೆಯ ಹಾದಿಗೆ ಇಳಿಯುತ್ತಿದ್ದಾರೆ.

ಕಾಲೇಜಿನಲ್ಲಿ ಪಾಠ ಹೇಳುವ ಪ್ರೊಫೆ

Approved firm by the Govt.of Mysore
Certified by the Agent of the Govt. of

Greetings

This season of Deepavali
I greet you heartily,
And wish all through
New Year there be
Joy, Happiness, Prosperity.

Rao Bahadur B. S. SAWKAR, B. A. L.L. B.,
Chairman Board of Directors,
UNITED KARNATAK INSURANCE Co., Ltd.
DHARWAR.

ಮದರಾಸು ಸ್ಕೂಲ್ ಬುಕ್ ಮತ್ತು ಲಿಟರೇಚರ್ ಸೊಸೈಟಿಯವರಿಂದ ಬಹು ನೂತನವಾದ ಉಪಯುಕ್ತ ಗ್ರಂಥ

ಪ್ರಸವ ವಿಜ್ಞಾನ

ಬರೆದವರು
ಡಾ|| ದೊಡ್ಡೇರಿ ವೆಂಕಟಗಿರಿರಾವ್.
ಸುಮಾರು ಮೂನತ್ತು ಚಿತ್ರಗಳಿವೆ.
ವಿ. ಪಿ. ತಳಿಸುವುದಿಲ್ಲ. ರೂ ೨-೪-೦ನ್ನು ಮನಿಯಾರ್ಡರ್ ಮಾಡಿದರೆ ರಿಜಿಸ್ಟರ್ ನೂಲಕ ಕಳಿಸಲಾಗುವುದು. ಪುಸ್ತಕ ವ್ಯಾಪಾರಿಗಳಿಗೆ ರಿಯಾಯತಿಯುಂಟು
ಮಾರಾಟಗಾರರು

ಮಾಡರ್ನ್ ಔಷಧಾಲಯ
ದೊಡ್ಡ ಬಳ್ಳಾಪುರ (ಬೆಂಗಳೂರು)

ಸರ್ ೫೦-೬೦ರ ವೇತನದಲ್ಲಿ ನರಳುತ್ತಿದ್ದಾನೆ. ಹೆಳ್ಳಿ ಶಾಲಾ ಮಾಸ್ತರ ೧೦-೧೫ ರಲ್ಲಿ ಅಳುತ್ತಿದ್ದಾನೆ. ಉಗ್ರಾಣಿ, ಗುಮಾಸ್ತ, ಇನ್ನಿತರ ನೂರಾರು ಬಗೆಯ ರಾಜ್ಯ ಸೇವಕರು(Servants of the state) ತುಂಬ ಕಂಗಾಲಾಗಿ ನರಳುತ್ತಿದ್ದಾರೆ ಅವರಗತಿ. ಅವರ ಕಣ್ಮುಂದೆಯೇ ಅಂಚೆ ಕುವರ ಹೆಟ ಸಾಧಿಸಿತು. ಬಟವಾಡೆ ಪೇದೆ ಬಿ ಎ. ಯವರ ಮಟ್ಟಕ್ಕೆ ಏರಿದ. ಆ ಕೆಲಸ ಸಾಧಿಸಿದ ಬಗೆಯಾವುದು? ಟ್ರೇಡ್ ಯೂನಿಯನಿಸಂ--ಇದರಿಂದ ಯಾವತ್ತು ಶ್ರಮಗಾರರ ಸಲುವಾಗಿ ಹೋರಾಡಿದುದರಿಂದಲ್ಲ; ತನ್ನ ಗುಂಪಿಗಾಗಿ ಜಾತಿಗಾಗಿ (Commune) ಹೋರಾಡಿ ಹಟ ಹಿಡಿದುದರಿಂದ. ರಾಜ್ಯಕ್ಕೆ ಸಂಪಿನ ಬೆದರಿಕೆ ತೋರಿಸಿ, ತೊಡಕು ಉಂಟುಮಾಡಿದುದರಿಂದ. ಈ ಶಕ್ತಿ ಯಾರೆಲ್ಲರಿಗೆ ಉಂಟು? ಎಲ್ಲ ಬಗೆ ಕಾರ್ಮಿಕರ ಗುಂಪಿಗೆ ಬರಲಾರದು ರೈಲು, ಸೇನೆ, ಪೋಲೀಸ್, ಅಂಚೆ ಯಂತೆ---ಮರ್ಮಸ್ಥಾನ (Strategic position)ದಲ್ಲಿರುವವರಿಗೆ ಮಾತ್ರ ಅದರ ಲಾಭ ಪಡೆಯುವುದು ಸಮನಲ್ಲನೆಂದು ಜವಾಹರಲಾಲರು ಹೇಳಿದ ಮಾತು ಅನ್ವತವಲ್ಲ. ಅಂಚೆಯವರನ್ನು ಎದುರಿಸುವ ಎದೆಗಾರ ಸರಕಾರವಿಲ್ಲಿಲ್ಲ; ಆದರಿಂದ ಮೊದಲು ಕಾಡಿದವನಿಗೆ ಅನುಗ್ರಹ ನೀಡಿತು-ಅದೇ ಒಳತೆಯಲ್ಲಿ ರಾಜ್ಯದ ಯಾವತ್ತು ನೌಕರರನ್ನು ನಡೆಯಿಸಿಕೊಡುವ ಶಕ್ತಿ ಅದಕ್ಕೆಯೇ? ಅಲ್ಲಿಯ ನರಿಗೆ ಇದ್ದುದನ್ನು ಸಮನಾಗಿ ಹಂಚುವ ನ್ಯಾಯತೀರ್ಪಿತೆಯಾದರೂ ಇದೆಯೇ? ಹಿಂದೆ ಬಂಡವಾಳಗಾರರು ಒಲಿಪ್ಪರಾದಾಗ ಅವರ ಸ್ವಾರ್ಥ ಸಾಧಿಸಿತು. ಇಂದು ಶ್ರಮಗಾರರ ಒಂದು ಜಾತಿ, ತಮ್ಮ ಅನಿವಾರ್ಯತೆಯ ಬಲದಿಂದ ತನ್ನ ಕೆಲಸ ಸಾಧಿಸಿತು. ಆ ಅನಿವಾರ್ಯತೆಯ ಶಕ್ತಿ ಕಡಮೆಯಾದವರು ಉಸಾಧ್ಯಾಯರು, ಉಗ್ರಾಣಿಗಳು ಮತ್ತಿತರರು ಇನ್ನೂ ಕೊಳೆಯುತ್ತಲೇ ಇದ್ದಾರೆ ಎಲ್ಲಿದ್ದ ಹೋದರೆ-ಪೇರಕ್ಕೆ ಅಂಚೆಯವರ ಹತ್ತುಮಡಿ ಹಾನಿಯಾಗಬಹುದು ಆದರೆ ಅಂಚೆ, ಸೇನೆ, ರೈಲಿನವರು ಮಾಡಿದ ಒಲ್ಲ 'ಬ್ಲಿಟ್ಸ್' ಹಾವಳಿ ಸಾಧ್ಯವಿಲ್ಲ.

ಈಗ ಒರಿಯ 'ಸಂಪಿನ' ವಿಚಾರವನ್ನೇ ಮಾಡುವ. ಅದು ನ್ಯಾಯವೆದ್ದೇ, ಅನ್ಯಾಯವೆದ್ದೇ-ಎಂದರೆ ಎರಡೂ ಅಹುದು ಅನ್ನುವವನಾನು. ಜೀವನದ ಮಟ್ಟ ಏರಬೇಕು. ಶ್ರಮಗಾರರ ಜೀವನ ಸುಖಕರವಾಗಬೇಕು ಎಂಬುದು ನ್ಯಾಯವೇ. ಆದರೆ ಶರೀರದ ಯಾವುದೊಂದು ಅಂಗವೂ, ಹಕ್ಷಪಾತದ ರಕ್ಷಣೆ ಬೇಡುವುದು ತಪ್ಪು, ಎಡಗಣ್ಣು ಬಲಗಣ್ಣಿಗಿಂತ ಕಡಮೆಯಲ್ಲ, ಕಾಲು ಕೈಗಿಂತ ಕಡಮೆಯಲ್ಲ, ಸಮಾಜಕ್ಕೆ ಸಲಿಸುವ ಸೇವೆಯ ಆಂಶದಲ್ಲಿ ಅಂಚೆ ನೌಕರರ ವರ್ಗಕ್ಕೆ ಮಾತ್ರ--ಮನೆಭತ್ತೆ, ತುಟ್ಟಿಭತ್ತೆ, ಯುದ್ಧಭತ್ತೆ, ಸಂಭಾವಿತ ತನಕ್ಕೂಭತ್ತೆ (Good conduct allowance) ಉಳಿದವರಿಗೆ-ಕೊಟ್ಟಾಗ ಕೊಟ್ಟಷ್ಟು ಲಕ್ಕೆ! ಉಳಿದ ಯಾವತ್ತು ಸೇವಕರನ್ನೇ ಮರೆತು ಆಧವ ಹಿಂದೆ ತಳ್ಳಿ, ಬೆದರಿಸಿದವರಿಗೆ ಅನುಕೂಲತೆ ಮಾಡಿಕೊಟ್ಟ ಸರಕಾರ ದುರ್ಬಲ, ಆದರ ನಡತೆ ಅಯೋಗ್ಯ. ಹಾಗಿಹುವಲ್ಲಿ-ಬೆದರಿಸುವವರು ಎಂಥವರು, ಕಪ್ಪಿತಸ್ಥರೇ? ಒಂಮ ರೀತಿಯಿಂದ ಇವರೂ ಅಪರಾಧಿಗಳೇ. ಕೊಡುವ ಧನಿಯು ರಾಷ್ಟ್ರ ಅರ್ಥಾತ್ ಸಮಾಜವೆಂದು ತಿಳಿಯುವಲ್ಲಿ, ಆದರ ಶಕ್ತಿಯನ್ನು ಬೇಡುವುದಾಗಲಿ, ಬೆದರಿಸುವುದಾಗಲಿ ತಪ್ಪೆದಾರಿ ಎಂದು ಒಟ್ಟು ಸಮಾಜದ ಹಿತದ ದೃಷ್ಟಿಯಲ್ಲಿ ಇಂಥೆಲ್ಲ ಸಮಸ್ಯೆಗಳಿಗೂ ಬಂಡವಳಿಗಾರ, ಶ್ರಮಗಾರ ಎಂಬ ಎರಡೇ ಮುಖಗಳು ಎಂದು ತಿಳಿಯುತ್ತಿರುವುದ ಸಂಕುಚಿತ ದೃಷ್ಟಿ. ಹಿಂದೀಯನ ವಾರ್ಷಿಕ ವರಮಾನ ರೂ. ೫೦ ಆಥವಾ ಇಂದು ೧೦೦ ಎಂದು ಎಣಿಸಿದರೂ ಅವನನ್ನೇ ಆಧರಿಸಿರುವ ಸಮಾಜದ ಸ್ವಾಮಿತ್ವ ಎಷ್ಟು ವೇತನ ವಿತರಣೆ ಮಾಡಲು ಶಕ್ಯ ಎಂಬ ಬಗೆಯನ್ನು ಸರಕಾರ, ಶ್ರಮಗಾರರು ಸೇರಿ ಯೋಚಿಸಬೇಕು, ಪ್ರಜೆಯ ವರಮಾನದ ಮಿತಿ—ತೆರಿಗೆ (Taxes)ಯ ಮಿತಿ; ಆದರ ಮಿತಿ ವೇತನದ ಮಿತಿ-ಎಂಬುದನ್ನು ಮರೆಯಬಾರದು.

ಯಾವ ಬಗೆಯ ಸಂಪತ್ತೇ ಆಗಲಿ, ಸೇವೆಯೇ ಆಗಲಿ ಆದು ಬಂಡವಳಿಗಾರ, ಶ್ರಮಜೀವಿಗಳ ನಿರಂಕುಶ ಸೊತ್ತುಗಳಲ್ಲಿ ಒಟ್ಟು ಸಮಾಜಕ್ಕಾಗಿ ಅವು ನಿರ್ಮಾಣವಾಗುತ್ತಿರುವಲ್ಲಿ ಗಿರಾಕಿಯಾದ ಸಮಾಜ ಅಷ್ಟೇ ಹಕ್ಕುದಾರಿಕೆಯುಳ್ಳದು. ಅಲ್ಲದೆ--ಆಗಾಗ ಉದ್ಯಮದಲ್ಲಿ ನಡೆಯುತ್ತಿರುವ ವೈಜ್ಞಾನಿಕ ಪ್ರಗತಿ, ಶೋಧನೆ, ವ್ಯವಸ್ಥೆ-ಇವೆಲ್ಲ ಕೆಲವೊಂದು ವಿದುಳುಗಳ ಫಲ. ಉಗಿಯ ಶೋಧೆ--ಹತ್ತು ವಿದುಳಿನ ಕೆಲಸ! ಸಾವಿರಾರ ಶ್ರಮತಗ್ಗಿಸಿದುದೂ ಅದೇನೆ ಅದರ ಲಾಭ ಬರಿಯ ಬಂಡವಳುಗಾರರಿಗೇ? ಒರಿಯ ಕೆಲಸಗಾರರಿಗೋ ಸಿಗಬೇಕೆಂದರೆ ಹೇಗೆ? ಕೃತಕರಬ್ಬರಿನ ಪ್ರಗತಿಯನ್ನು ನೈಜರಬ್ಬರಿನ ಬಂಡುವಳಗಾರರು ತಡೆಯಲೆತ್ನಿಸಿದರು. ಅವರ ಲಾಭಕ್ಕೆ ತಡೆಯಾದೀತೆಂದು ಹಲವು ಸಮಾಜ ಹಿತಕಾರಿಗಳಾದ ಸಂಶೋಧನೆಗಳು ಅಡಗಿ ಕುಳಿತಿವೆ. ಅದೇ ಬಗೆಯ ಸ್ವಾರ್ಥವನ್ನು ಶ್ರಮಜೀವಿಗಳು ಪ್ರತೀಕರಿಸಲಾರರೆಂಬ ಭದ್ರತೆ ಉಂಟೇನು? ಕಾಲ ಉಳಿಸುವ, ಶ್ರಮ ಉಳಿಸುವ (Time saving) ಸಲಕರಣೆಗಳನ್ನು ಬಳಸಿದಾಗಲೆಲ್ಲ-ಶ್ರಮಗಾರರು ಅದು ತಮ್ಮ ವೈರಿಯೆಂದು ತಿಳಿಯುತ್ತಲೇ ಇರುತ್ತಾರೆ. ಕಾರಣ ಅವರು ಬರಿಯ ತಮ್ಮ ಜಾತೀಯ ಹಿತಮಾತ್ರ ನೋಡುತಿದ್ದಾರೆ.

ನಿನ್ನೆಯ ಒಂದು ಸಂಗತಿಯನ್ನೆ ಇಲ್ಲಿ ಉದಹರಿಸಿದರೂ ತಪ್ಪಿಲ್ಲ ಮದ್ರಾಸಿನ ಜಾಡಮಾಲಿಗಳ ಮುಷ್ಕರ ನಿತಾರ. ಒತ್ತಟ್ಟು ಅವರ ಬಡ ಜೀವನಕ್ಕಾಗಿ ಸಹಾನುಭೂತಿ ತೋರಬೇಕಾದುದು ನಮ್ಮ ಕರ್ತವ್ಯ. ಆದರೆ ಜಾಡಮಾಲಿಗಳು, ನಿರ್ದುಷ್ಟರೆಂದು ತಿಳಿಯುವ ಕಾರಣವಿಲ್ಲ. ಮದ್ರಾಸು ಕಾರ್ಪರೇಶನಿನಲ್ಲಿ ಕೆಲಸ ಮಾಡುತ್ತಿದ್ದವರ ಸಂಖ್ಯೆ 3500. ಅವರು ಸಂಪು ಹೂಡಿದಾಗ-ಅವರ ಯಾವತ್ತು ಕೆಲಸಗಳನ್ನು ಬರಿಯ 1500 ಜನ ನಿರ್ವಹಿಸುವುದು ಸಾಧ್ಯವಾಯಿತು. ಇದರಿಂದ ಊಹಿಸಬಹುದಾದ ಒಂದು ಸಂಗತಿಯೆಂದರೆ ಗುಂಪಿನ ಬಲುಪಿದ್ದಲ್ಲಿ ಜನರು ತಮ್ಮ ಪಾಲಿನ ಕಳ್ಳತನ, ನಡತೆಗಳನ್ನು ಮುಚ್ಚಿ ಇರಿಸುವುದು ಸಾಧ್ಯ. ಇದೇ ರೀತಿಯಲ್ಲಿ ಬಿಂಗ್ಹಾಮ್ ಕರ್ನಾಟಕ ಮಿಲ್ಲು ಸಂಪಿನ ಒಂದು ಸಂಗತಿಯನ್ನು ಹೇಳಬಹುದು. ಅವರು ಸಂಪು ಹೂಡಿದ ಒಂದು ಕಾರಣ. ಉತ್ತರ ದೇಶದ ಕೆಲವು ಪಹರಿಗಳನ್ನು ನಿಯವಿಸಿದುದಕ್ಕಾಗಿ! ಪಹರಿಗಳೂ ಮದ್ರಾಸಿನವರೇ ಆಗಬೇಕೆಂದು ಕಂಪೆನಿಯವರು ಹೊಸ ಪಹರಿಗಳನ್ನು ನಿಯಮಿಸಿದ ಕಾರಣವೆಂದರೆ ಗಿರಣಿಯಿಂದ ನಿತ್ಯ ಕದ್ದು ಹೋಗುತ್ತಿರುವ ಮಾಲುಗಳನ್ನು ಸ್ಥಳವಂದಿಗರು ಕಣ್ಮುಂದೆ ನೋಡುತ್ತಿದ್ದುದರಿಂದ ಮುಖ್ಯವಾಗಿ ತಿಳಿಯಬಹುದಾದ ಸಂಗತಿಯೆಂದರೆ - ಬಂಡವಳಗಾರರು ತೋರಿಸುವ ಸ್ವಾರ್ಥದ ಗಾಳಿಯಿಂದ- ಮಜ್ದೂರರು ನಿರ್ದಿಪ್ಪರು. ಅವರು ಸದಾ ಹತ್ಯಕ್ಕಾಗಿ ಹೋರಾಡುವರೆಂದು ತಿಳಿಯಬೇಕಿಲ್ಲ. ಟ್ರೇಡ್ ಯೂನಿಯನ್ ಬಲವಾಗಿದ್ದರೆ, ಆದೇ ಬಲವನ್ನು ಉಪಯೋಗಿಸಿ ಸಮಾಜವನ್ನು ಸ್ವಾಮಿಯನ್ನು ಯಶಸ್ವಿಯಾಗಿ ನೋಸ ಗೊಳಿಸುವುದಕ್ಕೆ ಬರುತ್ತದೆ.

ಇದಕ್ಕು ಮುಖ್ಯವಾದ ವಿಷಯ— ಈ ಆರ್ಥಿಕ ಪ್ರಶ್ನೆಯಲ್ಲಿ ಸ್ವಾಮಿ, ಶ್ರಮಗಾರರ ಸಂಗ್ರಾಮದಲ್ಲಿ ಇವರಿಬ್ಬರಿಗೂ ತೃತೀಯವಾದ ಗಿರಾಕಿಯೂ ಇದ್ದಾನೆ. ಅದು ಮರೆಯಬಾರದ ಸಂಗತಿ. ಉದ್ಯೋಗದ ಲಾಭ. ಬರಿಯ ಧನಿಗೆ ಮಾತ್ರ ಹೋಗಿ ಅಲ್ಲಿಪೋ, ಹಾಗೆಯೇನೆ ಅದು ಮಜ್ದೂರರಿಗೂ ಮಾತ್ರವಲ್ಲ. ಉದ್ಯೋಗ ನಾಲ್ಕುದಿನ ನಡೆಯಬೇಕಾದಲ್ಲಿ- ಈ ಸೇನೆ, ಉತ್ಪನ್ನಗಳನ್ನು ಕೊಳ್ಳುವ ಗಿರಾಕಿಗೂ ಹಕ್ಕು ಉಂಟು ಎಂಬುದನ್ನು ಮರೆಯಬಾರದು ಆವನಿಲ್ಲದೆ ಬಂಡವಾಳಗಾರನಾಗಲಿ, ಶ್ರಮಕಾರನಾಗಲಿ ಬದುಕಲಾರ. ಅವನನ್ನು ಸುಲಿಯುವ ಬಂಡವಳು ಹೇಗೆ ತಪ್ಪಿತಸ್ಥನೋ, ಅವನನ್ನು ಅಲ್ಲಗಳೆದು ತನ್ನ ಬಲವನ್ನು ನಡೆಯಿಸುವ ಶ್ರಮಜೀವಿಯೂ ಉಳಿಯಲಾರನು.

ಬಂಡವಾಳಗಾರನ ಸ್ಥಾನವನ್ನು ರಾಜ್ಯ ವಹಿಸುವಾಗಲಂತು- ಕೇವಲ ತಮ್ಮ ಹಕ್ಕನ್ನು ಮಾತ್ರ ತಿಶ್ಚಿತೀಡುವ ಶ್ರಮಗಾರರ ಜಾತಿಗೆ ಮಾನ ದೊರೆಯದು. ಇತ್ತ ಸ್ವಾಮ್ಯವು ಖಾಸಗಿ ವ್ಯಕ್ತಿಗಳ ಕೈಯಲ್ಲಿದ್ದರೂ ಹೇಗೆನೆನೆ ಲಾಭ ಮಿಗಿಸಲು- ವೇತನ ಕಡಿಮೆಮಾಡುವುದು ತಪ್ಪು- ಅದನ್ನೇರಿಸಲು ಮಿತಿಯಿಲ್ಲದ ಲಾಭ ಹೇರಿಸುವುದೂ ತಪ್ಪು. ಇವುಗಳ ವಿರಕ್ತಿಯಿಂದ 'ಮಾಲಿನ ಬೆಲೆ ಮಿತಿಮೀರಿದಲ್ಲಿ- ಗಿರಾಕಿಗಳ ಸುಲಿಗೆಯಾಗುತ್ತದೆ. ಅವನ ಕೊಳ್ಳುವ ಶಕ್ತಿ ಬಡವಾದರೆ, ಅವನನ್ನು ಹೊಂದಿರುವ ಉದ್ಯೋಗ ದೀರ್ಘಕಾಲ ನಡೆಯಲಾರದು. ಶ್ರಮಗಾರ ತನ್ನ ಜಾತಿಗಾಗಿ ಕೂಗಾಡುವಾಗ ಈ ವಿಷಯವನ್ನು ಮರೆತೇಬಿಡುತ್ತಾನೆ. ಅಂತೆಯವನಿಗೆ ಕಾಣಿಸುವುದು ಬರಿಯ ಅವನ ಕುಟುಂಬ ಮಾತ್ರ ತೆರಿಗೆ ತೆರುವವನೂ ಅದನ್ನು ವಿತರಣೆ ಮಾಡುವ ಸರಕಾರವೂ ಅವನ ವೈರಿಗಳೆನಿಸಿಬಿಡುತ್ತಾರೆ.

ಸಮಾಜದ ಸಂಪತ್ತು ಆದಷ್ಟು ಸಮನಾಗಿ ವಿತರಣೆಯಾಗಬೇಕೆಂಬುದು ನಿರ್ವಿವಾದ, ಆದರೆ ಶಕ್ತಿಯ ತೂಕದಿಂದ ಈ ಕೆಲಸ ಮಾಡಲು ಬರುವುದಿಲ್ಲೆಂದು ಇಂದು ರಷ್ಯಾ ದೇಶವೇ ತೋರಿಸಿಕೊಟ್ಟಿದೆ ಬಂಡವಳುಗಾರ ದೇಶಗಳಲ್ಲಿನ ನಿರಿವಂತರನ್ನು ನಿರಿಸುವ ಶ್ರೀಮಂತರು ಅಲ್ಲಿ ತಲೆದೋರುವುದು ಸಾಧ್ಯವಾಗಿದೆ. ಆದರೂ ರಾಷ್ಟ್ರದ ಜನಸಾಮಾನ್ಯರಿಗೆ- ನ್ಯಾಯವಾದ ಬದುಕಿನ ಉತ್ಪನ್ನವನ್ನು ದೊರಕಿಸಿ ಕೊಡಲು ಶ್ರಮಿಸಬೇಕು. ಈಗಿರುವ ವರ ಮಾನವನ್ನು ಹಂಚುವಾಗಿಲೂ ಸರಿಯೇ, ನಾಳೆ ವರಮಾನ ಹೆಚ್ಚಿದ ಮೇಲಂತೂ ಸರಿಯೇ...ಅಂದಿನ ಒಟ್ಟು ವರಮಾನದ ಮೇಲೆ ಹೊಂದಿಬೇಕಾಗಿದೆ ಈ ವಿತರಣೆ. ಈ ಸಂಪತ್ತು ಸೇವೆಯ ರೂಪದಲ್ಲಿರಲಿ, ವಸ್ತುಗಳ ಉತ್ಪನ್ನದ ರೂಪದಲ್ಲಿರಲಿ— ಅದನ್ನು ಕೊಳ್ಳುವ ಗಿರಾಕಿಯ, ಅರ್ಥಾತ್ ಸಾಮಾನ್ಯ ಪ್ರಜೆಯ ಪಾಮಾಭವವನ್ನು ಆದರಿಸಿಲ್ಲವೇ? ಇಂದಿನ ಯಾವತ್ತು 'ಸಂಪಿನ' ತೀರ್ಮಾನಗಳಲ್ಲಿ ಇವನು ಬಾಯಿಯಿಲ್ಲದ ಮೂಕನಾಗಿಯೇ ಉಳಿದಿರುವನಲ್ಲ.

(ಗಂನೇ ಪುಟ ನೋಡಿ)

CANARA BANK LIMITED
ಕೆನರಾ ಬ್ಯಾಂಕ್ ಲಿಮಿಟೆಡ್
(ಸ್ಥಾಪನೆ 1906)

ಹೆಡ್ ಆಫೀಸು:- ಬಾವಟೆಗುಡ್ಡೆ, ಮಂಗಳೂರು.
ಜನರಲ್ ಮೆನೇಜರರ ಆಫೀಸು:—ಎಸ್ಪೊಲೊ ಸ್ಟ್ರೀಟ್, ಫೋರ್ಟ್, ಬೊಂಬಾಯಿ.

ಶಾಖೆಗಳು :

ಬೊಂಬಾಯಿ ಆಧಿಪತ್ಯ
ಬೆಳಗಾಂವ್
ಧಾರವಾಡ
ಹುಬ್ಬಳ್ಳಿ
ಶೋಲಾಪುರ
ಕಲ್ಯಾಣ

ಬೊಂಬಾಯಿ ನಗರಿಪಲ್ಲಿ
ಫೋರ್ಟ್
ಮಾಂಡ್ವಿ
ಗಿರಗಾಂವ್
ಕಾಲಬಾದೇವಿ

ಮೈಸೂರು ಸಂಸ್ಥಾನ
ಅರಸೀಕೆರೆ
ಬೆಂಗಳೂರು
ಚಿಕ್ಕಮಗಳೂರು

ಧಾರವಾಡ
ಶಿವಮೊಗ್ಗಾ

ಕೊಚ್ಚಿ ಸಂಸ್ಥಾನ
ಕೊಚ್ಚಿ
ಎರ್ನಾಕುಲಮ್

ತಿರುವಾಂಕೂರು ಸಂಸ್ಥಾನ
ಆಲಪ್ಪಿ
ಕ್ವಿಲೋನ್

ಹೈದರಾಬಾದು ಸಂಸ್ಥಾನ
ಸಿಕಂದರಾಬಾದು

ಮದ್ರಾಸು ಆಧಿಪತ್ಯ
ಬಂಟ್ವಾಳ
ಕಲ್ಲಕೋಟೆ
ಕಣ್ಣಾನ್ನೂರು

ಕೊಯಮುತ್ತೂರು
ಕುಂಬಾಪುರ
ಇರೋಡ್
ಗಂಗೊಳ್ಳಿ
ಕಾರ್ಕಳ
ಕಾಸರಗೋಡು
ಮದರಾಸು
ಮಧುರೆ
ಮಂಗಳೂರು ಬಂದರು
ಮಂಗಳೂರು ಸಿಟಿ
ಮೂಲ್ಕಿ
ಪಯ್ಯನ್ನೂರು
ಪುತ್ತೂರು
ಸೇಲಮ್
ಉಡುಪಿ

ಮೂಲಧನ ೨೮ ಲಕ್ಷ] [ಕ್ಷೇಮನಿಧಿ ೧೦ ಲಕ್ಷ

ದಕ್ಷಿಣಾಫ್ರಿಕದ ಹಿಂದೀಯರಿಗೆ ತಾಗಿರುವ ಶನಿಪೀಡೆ!

ಶ್ರೀಮತಿ ವಿಜಯಲಕ್ಷ್ಮಿ ಪಂಡಿತ್.

ಗಾಂಧೀಜಿಯನ್ನು 'ಮಹಾತ್ಮ' ಹುದ್ದೆಗೂ, ದಿವಂಗತ ಸಿ. ಎಫ್. ಎಂಡ್ರೂಸರನ್ನು 'ದೀನಬಂಧು' ಪದವಿಗೂ ಪರಲೋಕ ವಾಸಿ ಶ್ರೀನಿವಾಸ ಶಾಸ್ತ್ರಿಗಳನ್ನು 'ಮಾನ್ಯ'ತೆಗೂ ಏರಿಸಿದುದೆಂದರೆ ದಕ್ಷಿಣಾಫ್ರಿಕದ ಹಿಂದೀ ಜೋಡಾಟಿರಂಗನೇ ಅಲ್ಲಿಯ ಶ್ವೇತ ಜನಾಂಗವು ಭಾರತೀಯ ಕರಿ ಜನಾಂಗವನ್ನು ಅದಿಯಿಂದಲೂ ಅಸ್ಪರ್ಶವಾಗಿ ಇಟ್ಟಿದ. ಅದರ ನಿವಾರಣೆಗಾಗಿ ಕಳದ ೫೦ ವರ್ಷಗಳಂದ ಒಂದಲ್ಲೊಂದು ವಿಧದ ಜಿಗಳವು ನಾಗುತ್ತಲೇ ಇದೆ. ದಕ್ಷಿಣಾಫ್ರಿಕ ಸರಕಾರವು 'ಘೆಟ್ಟೋ ಕಾನೂನು' ತಂದ ಮೇಲಂತೂ ಅಲ್ಲಿ ಪ್ರತ್ಯಕ್ಷ ಕೊಂಚಾಟ-ವರ್ಣದ್ವೇಷದ ಕಾದಂಟ-ಆರಂಭಗಂಡು ಈಗ ಇದು ಇಡೀ ಜಗತ್ತಿನ ಲಕ್ಷ್ಯವನ್ನೆಳೆದಿದೆ.

ಈ ಮೊದಲೇ ಭಾರತ ಸರಕಾರವು ದಕ್ಷಿಣಾಫ್ರಿಕದ ಮೇಲೆ ಪ್ರತೀಕಾರಾತ್ಮಕ ಆರ್ಥಿಕ ಒಹಿಷ್ಕಾರ ಘೋಷಿಸಿತ್ತು. ನಿವೇಧಾರ್ಥವಾಗಿ ತನ್ನ ರಾಯಭಾರಿಯನ್ನೂ ಅಲ್ಲಿಂದ ಹಿಂದೆ ಕರೆಯಿಸಿತ್ತು. ಅಲ್ಲಿಯ 3000 ಚೀನೀಯರಿಗೂ ಹಿಂದೀಯರ ಗತಿಯೇ ಒದಗಿರುವದರಿಂದ ಚೀನೀ ಸರಕಾರವೂ ನಿಷೇಧ ಸೂಚಿಸಿದ್ದಿತು. ಹಿಂದೀ ಸರಕಾರದ ತನ್ನ ಸಂಬಂಧಕ್ಕೆ ಧಾನಿ ಒಂದೀಪೆಂಬ ಹೆದರಿಕೆಯಿಂದ ಅಮೇರಿಕವು ಕೂಡಾ ಭಾರತದಿಂದ ತರಿಸಿಕೊಂಡಿದ್ದನ್ನು ದಕ್ಷಿಣಾಫ್ರಿಕಕ್ಕೆ ಈ ತಿಂಗಳಿಂದ ಕಳುಹಿಸಲಾರೆನೆಂದು ನಿಶ್ಚಯಿಸಿರುವದು ಗಣನೀಯವಿದೆ.

ಕಳದ ಐದು ತಿಂಗಳುಗಳಿಂದ ದಕ್ಷಿಣಾಫ್ರಿಕದ ಹಿಂದೀಯರು 'ಘೆಟ್ಟೋ ಶಾಸನ'ವನ್ನು ಮುರಿಯಲು ಸಾದಾ ವಿರೋಧದ ಸತ್ಯಾಗ್ರಹ ನಡಿಸುತಿದ್ದಾರೆ. ಒಬ್ಬ ಯುರೋಪಿಯಾನನ ಸಮೇತ ಕಳದ ತಿಂಗಳವರೆಗೆ ೪೦೦ ಮಂದಿ ಶಿಕ್ಷೆಗೊಳಗಾಗಿ ಹಲವರು ಕೊಡೆತ ಮತ್ತಿತರ ಸಂಕಷ್ಟಗಳಿಗೆ ಗುರಿಯಾಗಿದ್ದಾರೆ. ಶಿಕ್ಷೆಯನುಭವಿಸಿದವರಲ್ಲಿ ಪ್ರಸಿದ್ಧ ಹಿಂದೀ ಸಾಹುಕಾರರು, ವಕೀಲರು, ಸಾರ್ವಜನಿಕ ಕೆಲಸಗಾರರಿದ್ದಾರೆ

ಜಾಗತಿಕ ಸಂಘದಲ್ಲಿ ಹಿಂದುಸ್ಥಾನದ ಪ್ರತಿನಿಧ್ಯದ ನಾಯಕತ್ವ ಸರ್. ರಾಮಸ್ವಾಮಿ ಮುದಲಿಯಾರಿಗಿದ್ದಾಗ, ಅವರು ಈ ದೂರನ್ನು ಜಾಗತಿಕ ಸಂಘಕ್ಕೆ ಮುಟ್ಟಿಸಿದ್ದರು. ಕೇಂದ್ರದಲ್ಲಿ ರಾಷ್ಟ್ರೀಯ ಸರಕಾರ ಬಂದೊಡನೆ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರ ನಾಯಕತ್ವದ ಹೊಸ ಪ್ರತಿನಿಧಿ ಮಂಡಲವು ನ್ಯೂಯೋರ್ಕಿನಲ್ಲಿ ಕೂರುವ ಜಾಗತಿಕ ಸಂಘದ ಸಭೆಗೆ ಹೋಗಿದೆ.

ಜಾಗತಿಕ ಸಂಘದ ಚುಕ್ಕಾಣಿ ಸಮಿತಿಯಲ್ಲೇ, ಈ ಭಾರತ ಸೂಚನೆ ಚರ್ಚೆಗೆ ಬರಕೂಡದೆಂದು ದಕ್ಷಿಣಾಫ್ರಿಕ ಸರಕಾರದ ನಾಯಕ ಜನರಲ್ ಸ್ಮಟ್ಸರು ವಿರೋಧಿಸಿದ್ದರು. ಆದರೆ ಶ್ರೀಮತಿ ವಿಜಯಲಕ್ಷ್ಮಿಯವರ ಅಮೋಘ ತರ್ಕ ಮತ್ತು ಕಾನೂನು ಸಲಹೆಗಾರ ಸರ್. ಜಾಗ್ಲಾರ ಅನುಸಮಚಾತುರ್ಯದಿಂದ ಸ್ಮಟ್ಸರ ವಾದ ಟೊಳ್ಳಾಯಿತು. ರಶ್ಯಾ, ಚೀನಾ ಮೊದಲಾದ ಪ್ರತಿನಿಧಿಗಳ ಬೆಂಬಲದಿಂದ ಹಿಂದೀ ಸೂಚನೆಯು ಬಹುಮತದಿಂದ ಮನ್ನಿಸಲ್ಪಟ್ಟತು. ವಿಜಯಲಕ್ಷ್ಮಿ ಜಾಗತಿಕ ಸಂಘದ ಮಹಾ ಸಭೆಯಲ್ಲತ್ಯ ಸ್ವಾತಂತ್ರ್ಯ ಸ್ಫೂರ್ತಿಯ ಭಾಷಣ ರಶ್ಯದ ವಿದೇಶ ಮಂತ್ರಿ ಮೊಲಟೆವರೇ ಆದಿಯಾಗಿ ಹೆಚ್ಚಿನವರಿಂದ ಶ್ಲಾಘನೆ ಸಹಕಾರಗಳನ್ನು ಸಂಪಾದಿಸಿದೆ. ಗಾಂಧೀ ನೆಹರುಗಳೂ ಹಿಂದೀ ಪ್ರತಿನಿಧಿಗಳನ್ನು ಕೊಂಡಾಡಿದ್ದಾರೆ. ಬ್ರಿಟಿಷ್ ಪ್ರತಿನಿಧಿಗಳ ಒತ್ತಾಯದಿಂದಲೂ ತನ್ನ ಪಕ್ಷದ ದೌರ್ಬಲ್ಯದಿಂದಲೂ ದ. ಆಫ್ರಿಕದ ಹಿಂದೀ ಪ್ರಶ್ನೆಯನ್ನು ಬಹಿರಂಗವಾಗಿ ಚರ್ಚಿಸಲು ಜನರಲ್ ಸ್ಮಟ್ಸರು ಹಿಂದೆಗೆದು ಕಮಿಟಿಯಲ್ಲೇ ಅದರ ತೀರ್ಮಾನವಾಗುವದನ್ನೇಕ್ಷಿಸಿದ್ದಾರೆ. ಜಾಗತಿಕ ಸಂಘದ 34 ಸದಸ್ಯರು ಹಿಂದೀಯರಿಗೆ ಬೆಂಬಲವಾಗುವ ಆಶ್ವಾಸನೆಯನ್ನು ಸಭೆಯ ಮೊದಲೇ ಕೊಟ್ಟಿದ್ದರು.

ದ. ಆಫ್ರಿಕದ ಸ್ಥಿತಿಗತಿ

ಈಗ ದಕ್ಷಿಣಾಫ್ರಿಕ ಯೂನಿಯನಿನ ಒಂದು ಪ್ರಾಂತ್ಯವಾಗಿರುವ ನಾಟಾಲಿನ ಯುರೋಪಿಯನರು ಸುಮಾರು 90 ನರು ಷಗಳ ಮೊದಲು ತಮ್ಮ ಸಕ್ಕರೇ ಕಾರ್ಖಾನೆಗಳ ಕೆಲಸಕ್ಕಾಗಿ ಹಿಂದುಸ್ಥಾನದಿಂದ ಬೇಡಿ, ಪುಸಲಾಯಿಸಿ ಕೂಲಿಗಳನ್ನೊಯ್ದಿದ್ದರು. ಆದರೆ ಇಲ್ಲಿಯ ಬ್ರಾಹ್ಮಣ ಪುರೋಹಿತನೊಡನೆ ಕೊರಗನು ಹೇಗಿರಬೇಕೋ ಹಾಗೆಯೇ ಅಲ್ಲಿಯ ಬಿಳಿಯವರೊಡನೆ ಈ ಕಪ್ಪು ಕೂಲಿಗಳ ಸಂಬಂಧವಿತ್ತು. ಅಲ್ಲಿ ಹಿಂದೀಯರ ಸಂಖ್ಯೆ ಬೆಳೆಯುತ್ತಾ ಹೋಗಿ ಈಗ ದಕ್ಷಿಣಾಫ್ರಿಕದ ಎಲ್ಲಾ ಪ್ರಾಂತ್ಯಗಳಲ್ಲಿ ಒಟ್ಟಿಗೆ 280,119 ಹಿಂದೀಯರಿದ್ದಾರೆಂದು ತಿಳಿದು ಬರುತ್ತದೆ. ಆ ಪೈಕಿ 228119 ಮಂದಿ ನಾಟಾಲ್ ಪ್ರಾಂತ್ಯವೊಂದಲ್ಲೇ ಇದ್ದಾರೆ. 52000 ಮಂದಿ ಇತರ ಪ್ರಾಂತ್ಯಗಳಲ್ಲಿ ಹರಡಿದ್ದಾರೆ. ವ್ಯಾಪಾರ,ಆಸ್ತಿ ತೋಟ ಮತ್ತು ಇತರ ಉದ್ಯಮಗಳಿಂದ ಹಿಂದೀಯರು ಸ್ವತಂತ್ರರಾಗಿ ಹತ್ತಿದಾಗ ಬಿಳಿಯರು ಅವರ ಸಂಪರ್ಕ ವಿಟ್ಟುಕೊಳ್ಳಲು ಹೇಸುವದು. ಹೆಚ್ಚಾದು ದಪ್ಪೇ ಅಲ್ಲ-ಈ ಕತಿಜನರನ್ನು ಅಸ್ಪರ್ಶರ ಕೊಲನಿಯಂತೆ ದೂರದಲ್ಲಿಡಬೇಕೆಂದೂ, ಅವರು ಕೂಲಿ ಕೆಲಸಗಳಿಗಾಗಿ ತಮ್ಮೊಡನೆ ಬೇಡಿಯೇಜೀವಿಸುವಂತೆಮಾಡಬೇಕೆಂದೂ ಕಾನೂನುಗಳನ್ನೇ ಮಾಡುತ್ತಾ ಬಂದರು. ಸುಮಾರು 5000 ಹಿಂದೀಯರು ವ್ಯಾಪಾರ ಮೊದಲಾದ ಕ್ಷೇತ್ರಗಳಲ್ಲಿ ಯುರೋಪಿಯನರೊಡನೆ ಸರಿ ಮಿಗಿಲನ್ನಿಸುವಂತೆ ಸ್ಪರ್ಧಿಸಹತ್ತಿದ್ದರಿಂದ ಬಿಳಿಯರ ಹೊಟ್ಟೆಯುರಿ ಅಸಹನೀಯವಾಯಿತು. ನಾಟಾಲಿನ ರಾಜಧಾನಿ ದರ್ಬಾನಿನೊಳಗೆ ಮೊದ ಮೊದಲು ಅಕ್ಕಪಕ್ಕದ ನಿಶ್ಚಾರ ಸ್ಥಳದಲ್ಲಿ ಮಾತ್ರವೇ ಹಿಂದೀಯರಿಗೆ ಕಾಲೂರಲು ಸಾಧ್ಯವಾಗಿತ್ತು. ಸುಮಾರು 8274 ಎಕ್ರೆ ವಿಸ್ತೀರ್ಣ (ಸುಮಾರು 37 ಮಿಲಿಯ ಪೌಂಡು ಬೆಲೆ)ವಿರುವ ದರ್ಬಾನ್ ನಗರದಲ್ಲಿ 340 ಎಕ್ರೆಗಳು (ಸುಮಾರು 4 ಮಿಲಿಯ ಪೌಂಡಿನವು) ಮಾತ್ರ ಹಿಂದೀಯರಿಗಿದ್ದುವು. ಹಿಂದೀಯರು ನಿಂತ ಆಸುಪಾಸಿನ ಸ್ಥಳದ ಬೆಲೆ ತಗ್ಗುತ್ತದೆಂದು ಬಿಳಿಯರ ಆರೋಪ; ಆದರೆ ಹಿಂದೀಯರಿಗೆ ಬೆಲೆ ಬಾಳದ ಸ್ಥಳ ಮಾತ್ರ ದೊರೆಯುತ್ತದೆಂಬುದೇ ಇದರ ಮೂಲ ಗುಟ್ಟು. ಈ ಹೀನಸ್ಥಿತಿಯನ್ನು ಸಹಿಸದೆ ಕೆಲವು ಹಿಂದೀಯರು ಯುರೋಪಿಯನ್ ವಲಯದ ಮಧ್ಯ ಸ್ಥಳಗಳನ್ನೂ ಪಡಕೊಂಡು ವಾಸಿಸಹತ್ತಿದರು. ಇದನ್ನು 'ಒಳಬದಿ ಆಕ್ರಮಣ' ಎಂದು ಕರೆದು ಬಿಳಿಯರು ತಮ್ಮ ಸರಕಾರದಿಂದ ಹಿಂದೀ ಪ್ರತಿಬಂಧಕ ಉಗ್ರ ಶಾಸನಗಳನ್ನು ಮಾಡಿಸಿದರು. 1943ರಲ್ಲಿ ದರ್ಬಾನ್ ನಗರದ ಮಟ್ಟಿಗೆ ಹಿಂದೀಯರ ಸ್ಥಳಪಡಕೊಳ್ಳೋಣವನ್ನು ಪ್ರತಿಬಂಧಿಸುವ 'ಸೆಗ್ರಿಗೇಶನ್ ಕಾನೂನು' ಬಂತು. ಇಂದು 'ಘೆಟ್ಟೋ ಕಾನೂನು' ಎಂಬ ಹೆಸರಿನಿಂದ ಸರ್ವ ಹಿಂದೀಯರ ಎದೆಗೆ ಶೂಲವಾಗಿರುವ ಶಾಸನವೆಂದರೆ ಆ ಸೆಗ್ರಿಗೇಶನ್ ಕಾನೂನನ್ನು ಇಡೀ ನಾಟಾಲ್ ಪ್ರಾಂತ್ಯಕ್ಕೇನೇ ವಿಸ್ತರಿಸಿದ 1946ರ ಶಾಸನ. ಅದರ ಕಲಮುಗಳ ಸಾರಾಂಶ ವಿದು: (1) ಆಸ್ಯಾ ವಂಶಸ್ಥರಾರೂ ಹೆಚ್ಚಾಗಿ ಯುರೋಪಿಯನರಿರುವ ನಾಟಾಲ್ ಪ್ರಾಂತ್ಯದ ಯಾವ ಕಡೆಯ ಆಸ್ತಿಯನ್ನು ಕೊಂಡುಕೊಳ್ಳುವದು ಅಥವಾ ವಾಸಿಸುವದು ನಿಷೇಧಾರ್ಹವಿದೆ. (ಇದು ಕಾನೂನು ಜ್ಯಾರಿಗೆ ಬರುವ ಮೊದಲಿದ್ದವರಿಗೂ ಲಾಗುವಾಗುವದು. ಈ ನಿಷೇಧವು ಓರಾಂಜೇ ಫ್ರೀ ಸ್ಟೇಟ್ ಪ್ರಾಂತ್ಯದಲ್ಲಿ 1891ರಿಂದಿದೆ. ಟ್ರಾನ್ಸ್‌ವಾಲ್ ಪ್ರಾಂತ್ಯದಲ್ಲಿ ದೀರ್ಘಕಾಲದಿಂದಿದೆ). (2) ದಕ್ಷಿಣಾಫ್ರಿಕದ ಪಾರ್ಲಿಮೆಂಟಿಗೆ ಮೂವರನ್ನೂ, ನಟೇಟ್ ಗೊಬ್ಬ, ನೇಟಾಲ್ ಪ್ರಾಂತಿಕ ಕೌನ್ಸಿಲಿಗಿಬ್ಬರನ್ನೂ ಹಿಂದೀಯರಾರಿಸಬಹುದು. ಆ ಪೈಕಿಯೂ ಪ್ರಾಂತಿಕ ಕೌನ್ಸಿಲ್ ಸದಸ್ಯರಿಬ್ಬರನ್ನು ಬಿಟ್ಟು ಮಿಕ್ಕ ಸ್ಥಾನಗಳಿಗೆ ಹಿಂದೀಯರು ಯುರೋಪಿಯನರನ್ನೇ ಆರಿಸಬೇಕು. ಹಿಂದೀಯರು ಮತದಾರರಾಗಬೇಕಾದರೆ ವಿದ್ಯೆ ಮತ್ತು ಆರ್ಥಿಕ ಸ್ಥಿತಿ ಹೀಗೆಯೇ ಇರಬೇಕೆಂಬ ಕೆಲವು ಏಯಮಗಳು ಹೇರಲ್ಪಟ್ಟಿವೆ. ಇಂತಹ ನಿಷೇಧಗಳಿಗೆ ಬಿಳಿಯರು ಕೊಡುತ್ತಿರುವ ಕಾರಣಗಳೆಂದರೆ: -ಹಿಂದೀಯರು ಕೊಳಕಾಗಿದ್ದಾರೆ; ದುರ್ವಾಸನೆ ಬರುತ್ತಾರೆ; ಅವರು ತೀರಾ ಅಜ್ಞಾನಿಗಳು, ಅವರ ಸಂತಾನವು ಕುಂದಿಲಿ ಸಂಸಾರಂತೆ ಬೆಳೆಯುತ್ತಿದೆ; ಅವರು ನೇಕಡಾ 80ಕ್ಕಿಂತ ದಕ್ಷಿಣಾಫ್ರಿಕದಲ್ಲಿಯೇ ಹುಟ್ಟಿದವರಾದರೂ ಎಲ್ಲರೂ ಹಿಂದುಸ್ಥಾನದ ಕಡೆಗೇನೇ ನೋಡುತ್ತಾರೆ. ಇವು ದುರ್ಬದ್ಧಿಯ ಆರೋಪಗಳೆಂಬುದು ಸ್ಪಷ್ಟ. ಹಿಂದೀಯರ ಕೊಳಕು ಜೀವನವನ್ನೂ ಅಜ್ಞಾನವನ್ನೂ ನಿರ್ಮಿಸಿದವರು ಅಲ್ಲಿಯ ಬಿಳಿ ಜನರೇ; ದಕ್ಷಿಣಾಫ್ರಿಕದ ಹಿಂದೀಯರ ಸರಾಸರಿ ಉತ್ಪನ್ನ ದಿನಕ್ಕೆ 2 ಶಿಲ್ಲಿಂಗ್ ಇದ್ದರೆ ಬಿಳಿ ಜನರು 7 ಶಿಲ್ಲಿಂಗಿನಿಂದ 6 ಡೋಲರ್ ಸಂಪಾದಿಸುತ್ತಾರೆ. ಶಿಕ್ಷಣದ ಅನುಕೂಲತೆಗಳನ್ನೇನೂ ಏರ್ಪಡಿಸಿಲ್ಲ. ಬಡತನಕ್ಕೆ ಸಹಜವಾದ ಅಮಿತ ಸಂತತಿ ಅವರಲ್ಲಿದ್ದರೂ ಅದೇ ಪರಿಮಾಣದಲ್ಲಿ ಅಕಾಲ ಮರಣಗಳೂ ಆಗುತ್ತಿವೆ. ಹುಟ್ಟಿದ ಮೂವರಲ್ಲೊಬ್ಬನಂತೆ 15 ವರುಷದೊಳಗೆ ಸಾಯುತ್ತಿದ್ದಾನೆ.ಬಿಳಿ ಜನರ ಸರಕಾರದ ಇಂತಹ ಪಾಶವಿಕ ಪರ್ಣದ್ವೇಷದ ದಬ್ಬಾಳಿಕೆಗೊಳಗಾಗಿರುವ ಹಿಂದೀಯರು ಭಾರತವನ್ನು ಸ್ಮರಿಸುವುದು-ಅದರ ಸಹಾಯ ಕೋರುವುದು-ತಪ್ಪೆ?

ಇಂದ್ರಭವನ ಕಾಫಿ ಹೊಟೆಲ್

ಬಲ್ಮಠ * * * * ಮಂಗಳೂರು.

ಹೊಸ ವ್ಯವಸ್ಥೆ-ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳು-ವಿದ್ಯುದ್ದೀಪ, ಲೇಡಿಯೊಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.

ಟೀಪಾರ್ಟಿ ಮುಂತಾದವುಗಳಿಗೆ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

ಬಿ. ಬಾಬು ಶೆಟ್ಟಿ

Indra Bhavan Coffee Hotel,

Balmatta Road, Mangalore.

ವರ್ಗ - ಊಳಿಗ

ಇತರ ಲೆಕ್ಕ ಪುಸ್ತಕಗಳು ತರಹವಾರು ಸೈಜಿನಲ್ಲಿ ದೊರೆಯುತ್ತವೆ.

ನವಯುಗ ಪ್ರೆಸ್, ಉಡುಪಿ.

ಬಂಗಾಳದಲ್ಲಿ ಶಾಂತಿ ಸ್ಥಾಪನಾಯತ್ನ

ಗಾಂಧಿ, ನೆಹರು, ವಲ್ಲಭಾಯಿ, ಅಜಾದ್, ಬಲದೇವ ಸಿಂಘ್, ಲಿಯಾಖತ್, ನಿಸ್ತಾರ್, ವೈಸರಾಯರ ಆಗಮನ.

"ಎಲ್ಲವೂ ದೇವರ ಕೈಯಲ್ಲಿದೆ. ಮನುಷ್ಯನು ಆದರ ಒಂದು ಉಪಕರಣ ಮಾತ್ರ. ಜನತಾ ಚಾಕರಿಗಿಲ್ಲದೆ ಯಾರ ಮೇಲೂ ಆರೋಪ ಹೇರಲು ಹೊರಟಿಲ್ಲ" ಎನ್ನುತ್ತಾ ಗಾಂಧಿಜೀ ಕಳವ ತಾ. 2ಗರಷ್ಟಿ ಥಿಲ್ಲಿಯಿಂದ ಹೊರಟು 29ರಲ್ಲಿ ಕಲ್ಕತ್ತೆಗೆ ಮುಟ್ಟಿದ್ದಾರೆ. ಹಾದಿಯಲ್ಲಿ ಅಭೂತ ಪೂರ್ವ ಸ್ವಾಗತ ದೊರೆತಿತ್ತು. ಕಲ್ಕತ್ತಾ ಪಕ್ಕದ ನೋದೇಪುರ ಖಾದೀ ಆಶ್ರಮದಲ್ಲುಳಿಕೊಂಡಿದ್ದಾರೆ. ಬಂಗಾಳದ ಪ್ರಧಾನ ಮಂತ್ರಿ ಮಿ. ಸುಹ್ರವರ್ದಿಗಳು ಆಶ್ರಮಕ್ಕೆ ಬಂದು ಗಾಂಧಿಜೀಯ ಭೇಟಿ ಪಡೆದರು. ಒಂದೇ ದಿನ ಕಲ್ಕತ್ತದಲ್ಲುಳಿದು ನವಾಖಾಲಿಗೆ ಹೊರಡುವ ಮೂಲ ಯೋಜನೆ ಮಹಾತ್ಮರದಿತ್ತು. ಆದರೆ ಸುಹ್ರವರ್ದಿ ಭೇಟಿಯಿಂದಾಗಿ ಅದು ಎರಡು ಬಾರಿ ಹಿಂದೆ ಬಿತ್ತು. ಮಹಾತ್ಮರು ಬಂಗಾಳ ಗವರ್ನರರೊಡನೆಯೂ ಮಾತುಕತೆ ನಡೆಸಿದ್ದಾರೆ. ಪೂರ್ವ ಬಂಗಾಳ ಮತ್ತು ಕಲ್ಕತ್ತೆಗಳ ವಿದ್ಯಮಾನವೇ ಚರ್ಚೆಯ ವಿಷಯವೆಂದು ಹೇರೆ ಹೇಳಬೇಕಾಗಿಲ್ಲ. ಬಂಗಾಳದಲ್ಲಿ ಶಾಂತಿ ಸ್ಥಾಪನೆಯಾಗದೆ ತಾನಲ್ಲಂದ ಮರಳಲಾರೆನೆಂದು ಗಾಂಧಿಜೀ ನಿಶ್ಚಯಿಸಿದ್ದಾರೆಂಬುದನ್ನು ಮಹಾತ್ಮರಿದ್ದಲ್ಲಿಗೆ ಮೂರು ಬಾರಿ ಹೋಗಿ ಗಾಢ ಪರ್ಯಾಲೋಚನೆ ನಡೆಸಿ ಬಂದ ಸುಹ್ರವರ್ದಿಗಳಂದಿದ್ದಾರೆ.

ನೆಹರು ಪಂಗಡ ಮತ್ತು ವೈಸರಾಯರ ಸಂದರ್ಶನ

ಭಾರತ ಸರಕಾರದ ಅಗ್ರ ಪಂಗ್ತಿಯೇ ಬಂಗಾಳದ ಮೇಲೀಗ ಜಾರಿದೆಯೆನ್ನಬಹುದು. ಎಲ್ಲಾ ಲಕ್ಷ್ಯವೂ ಅಲ್ಲಿ ಕೇಂದ್ರೀಕರಿಸಲ್ಪಟ್ಟಿದೆ. ವೈಸರಾಯರು ತಾ. 31 ರಲ್ಲಿ ವಿಮಾನ ಹತ್ತಿ ಕಲ್ಕತ್ತೆಗೆ ಬಂದರು. ತಾ. 1 ಮತ್ತು 2ರಲ್ಲಿ ಗವರ್ನರರನ್ನು ಕೂಡಿಕೊಂಡು ವಿಮಾನ ಮೂಲಕ ಪೂರ್ವ ಬಂಗಾಳದ ಗಲಭೆ ಪ್ರೇತ್ರಗಳನ್ನು ಸಂದರ್ಶಿಸಿ ಬಂದರು. ನಡುಗಾಲ ಸರಕಾರದ ನಾಲ್ವರು ಮಂತ್ರಿಗಳು–ಪಂಡಿತ ನೆಹರು, ಸರ್ದಾರ್ ಪಟೇಲ್, ಲಿಯಾಖತ್ ಅಲೀ ಖಾನ್, ಅಬ್ದುಲ್‌ರಬ್ ನಿಸ್ತಾರ್ -ತಾ. 2ರಲ್ಲಿ ನಿಮಾನ ಮೂಲಕ ಕಲ್ಕತ್ತೆಗೆ ಬಂದಿಳಿದಿದ್ದಾರೆ. ಇದೇ ವಿಮಾನದಲ್ಲಿ ಮೌಲಾನಾ ಅಜಾದರೂ ಬಂದಿದ್ದರು. ತಾ. 2ರಲ್ಲಿ ಕಲ್ಕತ್ತದ ಸರಕಾರೀ ಭವನದಲ್ಲಿ ವೈಸರಾಯ ಮತ್ತು ನಾಲ್ವರು ಕೇಂದ್ರ ಮಂತ್ರಿಗಳ ಸಭೆ ಅರ್ಧ ಘಂಟೆ ನಡೆಯಿತು. ವೈಸರಾಯರು ತಾ. 3ರಲ್ಲಿ ವಿಮಾನ ಹತ್ತಿ ನಾಟ್ನದಲ್ಲೂ ಸ್ವಲ್ಪ ಹೊತ್ತು ನಿಂತು ಥಿಲ್ಲಿಗೆ ಮರಳಿದ್ದಾರೆ. ತಾ. 3ರಲ್ಲು ರಕ್ಷಣಾ ಮಂತ್ರಿ ಸರ್ದಾರ್ ಬಲದೇವ ಸಿಂಘರೂ ಕಲ್ಕತ್ತೆಗಾಗಮಿಸಿದ್ದಾರೆ.

ನೆಹರುಗಳ ನಿವೇದನೆ

"ನನ್ನ ಮನಸ್ಸಿಗಿಷ್ಟೂ ನಾಟಿದ ಒಂದು ವಿಷಯದ ಕುರಿತು ನಾನು ಕಳದ ಕೆಲವು ದಿನಗಳಿಂದ ಮಹಿಸಿದ್ದಂತಹ ಮೌನವನ್ನು ಹಿಂದಂದಿಗೂ ವಹಿಸಿದ್ದಿಲ್ಲ. ನನ್ನೀ ಮೌನಕ್ಕೆ ಯಾರಾದರೂ ಆಪಾರ್ಥ ಕಟ್ಟುತ್ತಾರಾದರೆ ಅವರು ನನ್ನನ್ನರಿತಿಲ್ಲ. ಭಾರತದ ಇತರ ಕಡೆಗಳ, ಅಗರಲ್ಲೂ ವಿಶೇಷತಃ ಪೂರ್ವ ಬಂಗಾಳದ ಘಟನೆಗಳಿಷ್ಟು ಕಠಾಳವಿವೆ ಎಂದರೆ, ಅವು ಸತ್ವವನ್ನೂ ಎಬ್ಬಿಸಲು ನಾಕಾಗಬಲ್ಲವು. ನಾನೇನೂ ಸತ್ತಿಲ್ಲ; ಜೀವದಲ್ಲಿದ್ದೇನೆ"–ವಿಮಾನದಿಂದ ಕಲ್ಕತ್ತದಲ್ಲಿ ಕಾಲಿಟ್ಟೊಡನೆ ನೆಹರುಗಳಾಡಿದ ಮಾತುಗಳಿವು. ಪಂಡಿತ ನೆಹರುಗಳಿಗೆ ಕಲ್ಕತ್ತದ ಜನರು ಐತ್ಯುತ್ಸಾಹದ ಸ್ವಾಗತವಿತ್ತಿದ್ದರು. ನಾಲ್ವರು ಮಂತ್ರಿಗಳೂ ಅಲ್ಲಿ ಸ್ವಪಕ್ಷೀಯ ಪ್ರಮುಖರೊಡನೆ ಪರ್ಯಾಲೋಚನೆ ನಡಿಸಿದ್ದಾರೆ. ಬಂಗಾಳದ ಸಂಚಾರಕ್ಕಾಮಂತ್ರಿಸಿದೊಡನೆಯೇ ಲಿಯಾಖತ್ ಅಲೀಖಾನರು ನಿಸ್ತಾರರೊಂದಿಗೆ ನೆಹರುಗಳ ಜತೆಗೂಡಿದರೆಂದು ತಿಳಿದು ಬರುತ್ತದೆ ಸ್ಥಿತಿಗತಿಗಳ ಸ್ವತ್ಯಪ್ಪ ಪರಾಮರ್ಶೆಯೇ ತಮ್ಮ ಭೇಟಿಯ ಉದ್ದೇಶವೆಂದು ಮಂತ್ರಿಗಳಂದಿದ್ದಾರೆ.

ಮಂತ್ರಿಗಳ ಶಾಂತಿ ವಿನಂತಿ

ಚತುರ್ಮಂತ್ರಿಗಳು–ನೆಹರು, ಲಿಯಾಖತ್, ವಲ್ಲಭಾಯಿ, ನಿಸ್ತಾರರು ಕಲ್ಕತ್ತದಿಂದ ಒಟ್ಟಾಗಿ ಒಂದು ವಿನಂತಿ ಹೊರಡಿಸಿ, ಎಲ್ಲರೂ ಹಿಂಸಾತ್ಮಕ ವಿಧಾನಗಳನ್ನು ಬದಿಗಿಟ್ಟು ಶಾಂತ ಕ್ರಮಕ್ಕೆ ಬರಬೇಕೆಂದು ಆಗ್ರಹ ಪೂರ್ವಕ ಕೇಳಿಕೊಂಡಿದ್ದಾರೆ. "ಕಲ್ಕತ್ತಾ ಮತ್ತು ಬಂಗಾಳದ ಕರೆ ನಮಗೆ ದೀರ್ಘಕಾಲದಿಂದ ಕೇಳ ಬರುತಿತ್ತು. ಈ ಮಹಾ ನಗರ ಮತ್ತು ಜಾರತದ ಈ ಪ್ರಧಾನ ಪ್ರಾಂತ್ಯದ ದುಃಖದಾಯೀ ಘಟನೆಗಳೇ ನಮ್ಮ ಹೃದಯ ಮತ್ತು ತಲೆಯಲ್ಲಿ ತುಂಬಿ ಹೋಗಿವೆ. ದಮನಗೊಂಡ ನಿರಪರಾಧೀ ಜನರಿಗೂ, ಈ ಮಹಾಪತ್ತಿನ ಹಾಗೂ ಅತ್ಯಾವಶ್ಯಕತೆಯ ಸಮಯದಲ್ಲಿ ಸಹಾಯ ಸಲ್ಲಿಸಿದ ಧೀರರಿಗೂ ಕೃತಜ್ಞತೆ ಸಮರ್ಪಿಸೋಣವೆಂದೇ ನಾವೀಗ ಬಂದಿದ್ದೇವೆ ಭಿನ್ನಾಭಿಪ್ರಾಯದ ಯಾವ ವಿಷಯಗಳನ್ನೂ ನಾವಿಲ್ಲಿ ಪ್ರಸ್ತಾಪಿಸುವದಿಲ್ಲ. ಕಲ್ಕತ್ತಾ, ಬಂಗಾಳ ಮಾತ್ರವಲ್ಲ, ಅಖಿಲ ಭಾರತದ ಸರ್ವರೊಡನೆಯೂ ಈಗ ನಮ್ಮ ಆಗ್ರಹದ ವಿನಂತಿಯಿಷ್ಟೆ: ಭಾರತೀಯ ಮಾನುಷತ್ವವನ್ನೇ ಕೆಳಮಟ್ಟಕ್ಕಿಳಿಸುವ ಹಾಗೂ ಪರಕೀಯರಿದಿರಲ್ಲಿ ನಾವು ತಲೆ ತಗ್ಗಿಸುವಂತೆ ಮಾಡುವ ಎಷ್ಟೆಷ್ಟೋ ಸಂಗತಿಗಳು ಇದು ವರೆಗೆ ನಡೆದು ಹೋದುವು. ನಮ್ಮೊಳಗಿನ ಭಿನ್ನಾಭಿಪ್ರಾಯಗಳೆಷ್ಟೇ ಇರಲಿ–ನಮ್ಮ ಜನತೆಯನ್ನು ಕೆಳ ದರ್ಜೆಗಿಳಿಸುವ ಹಾಗೂ ವ್ಯಾಪ್ತೇಸ್ಪದಶರನ್ನಾಗಿ ಮಾಡುವ ಯಾವ ಕೃತ್ಯವನ್ನೇ ಆದರೂ ನಮ್ಮಲ್ಲನ್ಯಾರೂ ಸಹಿಸುವಂತಿಲ್ಲ. ಈ ಅಧಮ ವರ್ತನೆಯಿಂದ ಸಮಸ್ಯೆ ಪರಿಹಾರವಾಗದು; ಆದರ ಅಸ್ತಿವಾರದ ಮೇಲೆ ನಾವು ಸ್ವಾತಂತ್ರ್ಯ ಮಂದಿರವನ್ನೇರಿಸಲಾರೆವು. ತನ್ನ ನೆರೆಯವ ಮತ್ತು ಸಹ ಜೀವಿಯ ಮೇಲೆ ನಡೆಸಿದ ಹಿಂಸೆಯು ಸ್ವತಹಿಂಸೆಯನ್ನು ಮತ್ತು ವಿಶೇಷ ಹಿಂಸೆಯನ್ನೇ ನಿರ್ಮಿಸುತ್ತದೆ; ಹಾಗೆಯೇ ಸಾಮಾಜಿಕ ಮತ್ತು ನಾಗರಿಕ ಜೀವನವನ್ನು ಕಡಿಪಡಿಸುತ್ತದೆ. ಅದು ಮಾನವ ಕುಲದ ಮರ್ಯಾದೆಯನ್ನೇ ಕೆಡಿಸುತ್ತದೆ. ಆದ್ದರಿಂದ ಈ ಹಿಂಸೆಯನ್ನು ಬಿಟ್ಟುಕೊಟ್ಟು ಶಾಂತ ವಿಧಾನಕ್ಕೇನೇ ಮರಳಬೇಕೆಂದು ನಾವು ಆತ್ಯಾಗ್ರಹದಿಂದ ವಿಜ್ಞಾಪಿಸಿಕೊಳ್ಳುತ್ತೇನೆ."

ಶಾಂತಿ ಸ್ಥಾಪನಾಯತ್ನ

ಕಲ್ಕತ್ತೆಗೆ ಮುಟ್ಟಿದ ಮರುದಿನವೇ ನವಾಖಾಲಿಗೆ ಹೊರಡುವ ಕಾರ್ಯಕ್ರಮ ವಿಟ್ಟುಕೊಂಡಿದ್ದ ಗಾಂಧಿಜೀ ಒಂದುವಾರ ಅನಿವಾರ್ಯವಾಗಿ ಕಲ್ಕತ್ತದಲ್ಲಿ ನಿಲ್ಲಬೇಕಾಯಿತು. ಇದೇ ತಾ. 6ಕ್ಕೆ ಹೊರಡುವದೆಂದು ಈಗ ನಿರ್ಧರಿಸಲ್ಪಟ್ಟಿದೆ. ಪ್ರಧಾನಿ ಸುಹ್ರವರ್ದಿ, ಶಾಮ್‌ಸುದ್ದೀನ್ ಅಹಮ್ಮದ್ ದೊಡನೆಯೂ ಈ ಕಡೆಯ ಶರಚ್ಚಂದ್ರ ಬೋಸ್, ಶ್ಯಾಮ ಪ್ರಸಾದ ಮುಖರ್ಜಿ, ಜೆ. ಡಿ. ಬಿರ್ಲಾ, ಡಿ. ಪಿ. ಕೈತಾನ್ ಮೊದಲಾದವರೊಡನೆಯೂ ಸಂಭಾಷಿಸಿದ ಪರಿಣಾಮವಾಗಿ ಗಾಂಧಿಜೀ ಶಾಂತಿಯತ್ನ ವಾರವಾಗಿ ಕೆಲವು ಸೂಚನೆಗಳನ್ನು ಸುಹ್ರವರ್ದಿಗಳಿಗಿತ್ತಿರುವರೆಂದು ತಿಳಿದು ಬರುತ್ತದೆ. ಕಾಂಗ್ರೆಸ್ ಮತ್ತು ಲೀಗ್ ಪಕ್ಷಗಳೆರಡು ಪ್ರತಿನಿಧಿಗಳುಳ್ಳ ಒಂದು ಶಾಂತಿ ಕಮಿಟಿಯನ್ನು ಪ್ರಧಾನಿ ಸುಹ್ರವರ್ದಿಗಳ ಅಧ್ಯಕ್ಷತೆಯಲ್ಲಿ ರಚಿಸಬೇಕು. ಕಾನೂನು ಮತ್ತು ವ್ಯವಸ್ಥೆಗಳ ಮಟ್ಟಿಗೆ ಆ ಕಮಿಟಿ ನಿರ್ಣಯಗಳನ್ನಂಗೀಕರಿಸಿಕೊಳ್ಳಲು ಸರಕಾರವು ಬದ್ಧವಿರಬೇಕು–ಎಂದು ಗಾಂಧಿಜೀ ಸೂಚಿಸಿದರಂತೆ ಸುಹ್ರವರ್ದಿ ಸರಕಾರದ ಘೋರಣೆಯ ನಿಷ್ಠೆಧ್ಯರ್ಥವಾಗಿ ಶರಚ್ಚಂದ್ರರ ನೇತೃತ್ವದಲ್ಲಿ ಕಲ್ಕತ್ತರ ಎಲ್ಲಾ ವ್ಯಾಪಾರೋದ್ಯಮಗಳೂ ಇದೇ ತಾ. 1ರಿಂದ 10 ದಿನಗಳ ಪೂರ್ಣ ಹರತಾಳವಾಚರಿಸುವ ನಿರ್ಧಾರವನ್ನು ಪ್ರಧಾನಮತಃ ಮಾಡಿದ್ದವು. ಗಾಂಧಿಜೀಯ ಸಲಹೆಯಂತೆ ಅದನ್ನು ತಾ. 1ಕ್ಕಾರಂಭಿಸುವದೆಂದು ಮುಂದುವರಿಸಲಾಯಿತು. ನೆಹರು, ಪಟೇಲರ ಒತ್ತಾಯದಿಂದ ಸದ್ಯಕ್ಕೆ ಇಹರ ತಾಳವನ್ನು ರದ್ದು ಪಡಿಸಲಾಗಿದೆ. ತಾ. 2ರ ಪ್ರಾರ್ಥನಾ ಸಭೆಯಲ್ಲಿ ಗಾಂಧಿಜೀ ಹೀಗಂದರು:—"ರಕ್ಷಣೆಗಾಗಿ ವೈಸರಾಯ, ಗವರ್ನರ್, ಪೋಲೀಸ್ ಅಥವಾ ಸೇನೆಯ ಕಡೆಗೆ ನೋಡಬೇಡಿ. ನಿಮಗೆ ಶಾಶ್ವತ ಶಾಂತಿ ಬೇಕೋ–ಅದು ಪ್ರಧಮತಃ ಜನತೆಯಿಂದ ಲೇಬರಬೇಕು. ಸ್ವತಃ ನಿಮ್ಮ ಬಲಶಾಲಿ ಹೃದಯದಿಂದಲ್ಲದೆ, ಬೇರಾರಿಂದಲೂ ನಿಮ್ಮ ರಕ್ಷಣೆಯಾಗದೆಂದು ನಾನು ಮಾಡಿನ ತುದಿಯಲ್ಲಿ ನಿಂತು ಕೂಗುತ್ತಾ ಬಂದಿದ್ದೇನೆ. ನಿಮ್ಮಲ್ಲಿ ಪ್ರತೀಕಾರೇಚ್ಛೆಯಿರಬಾರದು. ಅದಿದ್ದಲ್ಲಿ ನಿಮಗೆ ಸ್ವಾತಂತ್ರ್ಯ ದೊರೆಯದು. ಯಾರಾದರೂ ನನ್ನನ್ನು ಕೊಂದರೆಂದು ಭಾವಿಸೋಣ. ಆದಕ್ಕೆ ಪ್ರತಿಯಾಗಿ ನೀವು ಬೇರೆಯಾರನ್ನಾದರೂ ಕೊಲ್ಲುವುದರಿಂದ ನಿಮಗೇನೂ ದೊರೆಯುವಂತಿಲ್ಲ. ಇನ್ನು, ನೀವು ಯೋಚಿಸಿ ನೋಡಿದರೆ ಗಾಂಧಿಯನ್ನು ಗಾಂಧಿಯೇ ಹೊರತು ಬೇರಾರು ತಾನೇ ಕೊಲ್ಲಲ್ಲರು? ಆತ್ಮವನ್ನು ನಾಶಮಾಡಲು ಯಾರಿಂದಲೂ ಸಾಧ್ಯವಿಲ್ಲ. ಆದ್ದರಿಂದ ಪ್ರತೀಕಾರೋದ್ವೇಗವನ್ನು ನಮ್ಮ ಹೃದಯಗಳಿಂದ ಬೇರು ಸಮೇತ ಕಿತ್ತೊಗೆಯೋಣ" ಗಾಂಧೀ ನೆಹರು ಭೇಟಿನಡೆಯಿತು. ಕೇಂದ್ರ ಮಂತ್ರಿಗಳು ಬಿಹಾರಿನ ಗಲಭೆಯ ಸಂಬಂಧ ಪಾಟ್ನಕ್ಕೂ ಭೇಡಿಕೊಟ್ಟಿದ್ದಾರೆ.



ಕ್ಷಣಿಕ ಗುಣಕೊಡುವ ಔಷಧದ ಬೆನ್ನು ಹತ್ತಿ ಮರುಳಾಗಬೇಡಪ್ಪಾ.

ಪುರೋಹಿತ ಶ್ವಾಸಹಾರೀ ಔಷಧ ಮಾತ್ರ ಬೇರೆ ಅಮೆ ಪಮ್ಮನ್ನು ಬರೇ ದುಮುಕಿ. ಇದರ ಆದನ್ನು ಬೇರುಸಹಿತ ಕಿತ್ತು ಹಿಗೆಯುವುದು. ಈ ಔಷಧ ಸುರುವು ಮಾಡಿದಾಗಲೇ ಕೆಮ್ಮೂ ತೇಕೂ ನಿಲ್ಲುವವು; ಹೊಟ್ಟೆ ವಸನಾನುವದು; ಪಚನಕ್ರಿಯೆಯು ತಿದ್ದುವದು; ಪುಷ್ಟುಸಗಳು ಗಟ್ಟಿಯಾಗುವುವು. ಆ ಮೇಲೆ ದಮ್ಮಿರಲಿಕ್ಕೆ ಸ್ಥಳವೇ ಸಿಗುವದಿಲ್ಲ.

ಪಮ್ಮು, ತೇಕು, ಬೆನ್ನು ನೋವು, ಗಂಟಲು ಉರಿಯುವಂಥ ಕೆಮ್ಮು ಮುಂತಾದ ವಿಕಾರಕ್ಕೆ ಪುರೋಹಿತಶ್ವಾಸಹಾರೀ ಸ್ಪೆಷಲ್ (ಸೀರೀ ಪ್ಯಾಕಿಂಗ್) ತೆಗೆದುಕೊಳ್ಳಬೇಕು. ಅತೀರ್ಣ ಮುಕ್ತು ಅಮ್ಲಪಿತ್ತದಿಂದ ಬಳಲುವ ಪಮ್ಮುನವರು ಶ್ವಾಸಹಾರೀ ಕಂಪೌಂಡ್ (ಶಿಂಪಣ ಪ್ಯಾಕಿಂಗ್) ತೆಗೆದುಕೊಳ್ಳಬೇಕು.

೧ ಟಿನ್ನಕ್ಕೆ ೩ ಟಿನ್ನಿಗೆ ೧೦ ಟಿನ್ನಿಗೆ ಚಾಟ್ಟಿಗೆ ಕ್ರಮವಾಗಿ ರೂ. ೧-೪; ೩-೧೨-೦ ಮತ್ತು ೧೦-೦-೦

ಪುರೋಹಿತ ಫಾರ್ಮಸಿ, ಕೊಲ್ಹಾಪುರ

ಸ್ಯಾಕಿನ್ಸರು ಪೊಪ್ಯುಲರ್ ಸ್ಟೋರ್ಸ್, ಮಾಗ ಊರು, ಟಿ.ಸಿ.ನರಸಿರಾಜನ್ & ಕೋ., ಮೈಸೂರು.

ಮುಂಬಯಿ ಸೋಲ ವಿಜಂಟರು:—

ವನಮಾಲೀ ಭಿಕಾ ಮತ್ತು ಕಂಪನಿ,

ಪ್ರಿನ್ಸೆಸ್ ಸ್ಟ್ರೀಟ್, ಮುಂಬಯಿ ೨.



• ಮಗ್ಗದ ವ್ಯಾಲಿಕರಿಗೆ ಸುಸಂದರ್ಭ •

ನಂಬ್ರ P II ಪರ್ಮಿಟುದಾರರಾದ ಮಗ್ಗದ ವ್ಯಾಲಿಕರು ತಮ್ಮ ನೂಲಿಗೆ ಬೇಕಾಗುವ ರಂಗುಗಳಿಗೆ ಸುಂಗಳೂರು ಇಲ್ಲವೆ ಕಣ್ಣಾನೂರು ರಂಗಿನ ವ್ಯಾಪಾರಸ್ಥರನ್ನು ಅವಲಂಬಿಸಬೇಕಾಗಿತ್ತು. ಈಗ ಅವರಿಗೆ ಬೇಕಾಗುವ ಎಲ್ಲಾ ತರದ ರಂಗುಗಳನ್ನು ಒದಗಿಸಲು ನಾವು ಲೈಸನ್ಸನ್ನು ಪಡೆದಿರುತ್ತೇವೆ.

ಪಿ. ಎ. ಪೈ ಬ್ರದರ್ಸ್, ಉಡುಪಿ.

The Canara Banking Corporation Limited.

((Incorporated in British India, with limited Liability.)

Estd: 1906.

Head Office: **UDIPI**, South Kanara.

Authorised Capital	...	Rs. 25,00,000
Issued & Subscribed	...	,, 16,00,000
Paid up	... ...	,, 15,87,600
Reserves	... ...	,, 4,60,000
Total Resources Around		,, 25 Crores.

Branches at– Bombay, Madras, Bangalore, Coimbatore, Salem, Calicut, Hubli, Mysore, Cochin, Mangalore, Madras etc., etc.

Banking Business of Every Description Transacted.

ನವಯುಗ

ಉಡುಪಿ, ಗುರುವಾರ, ೭-೧೧-'೪೬

ಎರಡು ವಿಧದ ಕಂಟಕ

ಜಾತಿ ಭೇದ ಮತ್ತು ಸ್ಥಿತಿ ವ್ಯತ್ಯಾಸಗಳಿರುವದು ಹಿಂದುಸ್ಥಾನದಲ್ಲಿ ಮಾತ್ರವಲ್ಲ ಮಾನುಷತ್ವದ ಗಡಿಮೀರದಿದ್ದಲ್ಲಿ ಇವೆ ರಡಕ್ಕೂ ಕ್ಷಮೆಯಿದೆ. ಆದರೆ ಇಂದು ನಮ್ಮಲ್ಲಿಯ ಎರಡು ಪಕ್ಷಗಳು ಇನೆರಡರಲ್ಲೊಂದೊಂದನ್ನಾ ಧರಿಸಿ ಎಲ್ಲೆ ಮೀರಿ ಮುಂದೊತ್ತಿ ಪಶು ದರ್ಜೆಗಿಳಿದಿವೆ--ಜಾತಿ ಭೇದವನ್ನಾ ಧರಿಸಿ ಮುಸ್ಲಿಂ ಲೀಗ್, ಸ್ಥಿತಿ ತಾರತಮ್ಯವನ್ನಾ ಧರಿಸಿ ಕಮ್ಯೂನಿಸ್ಟ್ ಪಕ್ಷ. ಮಿಕ್ಕವರ ಸೌಜನ್ಯಕ್ಕೆ ಇವುಗಳ ಕೃತ್ಯ ದಿಂದೇನೂ ಭಂಗಬಂದಿಲ್ಲವಾದರೆ, ಈ ಎರಡು ದುಶ್ಯಕ್ಲಿಗಳನ್ನು ಬೆಳೆಯಲು ಬಿಟ್ಟ ದೋಷತಾಗಿಯಾದರೂ ಸದ್ಯಸ್ಥಿತಿಯಲ್ಲಿ ಅದೂ ಕಲುಷಿತವಾಗಿದೆ. ಹೀಗಾಗಿ ಭಾರತದ ರಾಜಕೀಯದಲ್ಲಿಗ ಕಲಂಕರಹಿತ ಭಾಗವೆಂದನ್ನು ಕಾಣುವೆವೆಂದರೆ ಸಿಗುವದಿಲ್ಲ.

ಮೊದಲಾಗಿ ಲೀಗ್ ಘೋರಣೆಯ ವಿಚಾರ. ಇದೀಗ ನಿತ್ಯದ ಮಾತು; ಅಡಿದ ಪ್ಪೂ ಅಸಹ್ಯ! ಮುಸ್ಲಿಂ ಪುಂಡರ ಪೂರ್ವ ಬಂಗಾಳದ ಪಾಶವಿಕ ಕೃತ್ಯಗಳನ್ನು ತಾವು ಕಂಠೋಕ್ತವಾಗಿ ಖಂಡಿಸಿದ್ದೇವೆಂದು ಲೀಗ್ ಪ್ರಮುಖರಿಗ ಹೇಳುತ್ತಿದ್ದಾರೆ. ಅವರು ಅಷ್ಟನ್ನೂ ಮಾಡಿಲ್ಲವೆಂದು ಯಾರ ದೂರೂ ಇಲ್ಲ. ರಾಜಕೀಯಾಟಗಳ ಗುಟ್ಟರಿತವರಿಗೆ ಲೀಗ್ ಮುಖಂಡರಿಂದಾ ಖಂಡನೆ ಬಾರದಿರುತ್ತಿದ್ದರೇನೇ ಸಂತೋಷವಾಗುತ್ತಿತ್ತು. ಕಠಿಣ ಮಾತಾಡಿದವ ಕ್ಷಮೆ ಯಾಚಿಸಿದರೆ ಸಾಕು; ಆದರೆ ಕಂಠ ಕತ್ತರಿಸಿದ ಅಪರಾಧಕ್ಕೂನ್ನಮಾಯಾಚನೆಯೆಂದು ಪರಿಹಾರವಾಗದು. ನವಾಖಾಲೀ ಮುಸ್ಲಿಮರಿಂದ ತಮ್ಮ ಹೆಗ್ಗಳಿಕೆ ಕುಸಿಯತು-ಮಾನುಷತ್ವ ಮಣ್ಣುಪಾಲಾಯತು-ಎಂಬ ಸಂತಾಪ ನಿಜಕ್ಕೂ ಮುಸ್ಲಿಂ ಪ್ರಮುಖರಿಗಿದೆಯೆ? ಅದನ್ನು ಪ್ರದರ್ಶಿಸುವ ಮತ್ತಾಮೂಲಕ ಶಾಂತಿ ಸ್ಥಾಪನೆಗೆ ಮುಂದಾಗುವ (ಗೊಂದಲ ವ್ಯಾಪನೆಗೆ ಮುಂದಾದಂತೆಯೇ!) ಹಾದಿ ಲೀಗಿನ ಕಣ್ಣ ಮುಂದಿದೆ. ನವಾಖಾಲಿ ಪುಂಡರು ಅಲ್ಲಿ ದ್ದಾರೆ. ಸ್ಥಳೀಯರೆಲ್ಲಾ ಬ್ಯವಸನ್ನೂ ಬಿಡದೆ-ನಿಸ್ಸಹಾಯಕರ ಮಾನಪ್ರಾಣ ಅಪಹಾರಗಳ ಜತೆಗೆ ತಮ್ಮ ಸವಾಜವನ್ನೇ ಮಾನವ ದರ್ಜೆಯಿಂದ ಕೆಳದೂಡಿದ ಮಹಾಪರಾಧವನ್ನೂ ಹೊರಿಸಿ-ತಮ್ಮ ಬಂಗಾಳೀ ಸರಕಾರದಿಂದ ಕಠಿಣ ಶಿಕ್ಷೆ ಕೊಡಿಸಲಿ; ನವ್ಯ ಭವಿಷ್ಯ ಮತ್ತು ಮುಂದೆ ಜೀಗಾಗಲಾರದೆಂಬ ಹೊಣೆಯನ್ನು ತಾವು ಹೊರಲಿ. ಪೆಟ್ಟಿಗಿಂತ ನೋವು ಮುಖ್ಯ. ನವಾಖಾಲಿ ಅತ್ಯಾಚಾರದ ನೋವಿನಲ್ಲಿ ಮುಸ್ಲಿಂ ಪ್ರಮುಖರು ಪಾಲುಗಾರರಾದರೆಂಬುದು ಕಾರ್ಯತಃ ಕಂಡು ಬಂದಿಲ್ಲಿ, ಈಗ ತುಕ್ಕು ಹಿಡಿದಿರುವ ಹಿಂದುಗಳ ಬಂಧುಭಾವ ಜ್ವಲಿಸುವಂತಹದೇ. ಮುಸ್ಲಿಮರಿಗೊಂದು ನವಾಖಾಲಿಯಿದ್ದರೆ, ಅಂತಹ ಹತ್ತು ನವ ನವಾಖಾಲಿಗಳ ಅನುಕೂಲತೆಯಿರುವ ಹಿಂದುಗಳು ಈ ಸಂದರ್ಭದಲ್ಲೂ ಹೇಗಿದ್ದಾರೆ ಎಂಬುದನ್ನು ನೋಡುವಾಗ ಹಿಂದುಗಳಲ್ಲಿ ಮೂಡಿರುವ ಸದ್ಯದ ದ್ವೇಷ ವೆಂಬುದು ಅವರ ಬಂಧುತ್ವ ಭಾವನೆಗೆ ತಾಗಿದ ತುಕ್ಕು ಮಾತ್ರವೆಂಬುದು ನೇದ್ಯ ವಾಗದಿರದು. ಆದರೂ ಮುಸ್ಲಿಂ ಪ್ರಮುಖರು ಇಂತಹ ಪರಿಹಾರಕ್ಕೂತ್ಯಾರಿಲ್ಲ– ಶಾಂತಿಸ್ಥಾಪನೆ ಹೇಗೆ ಸಾಧ್ಯ?

ಎರಡನೆಯದಾಗಿ ಕಮ್ಯೂನಿಸ್ಟರ ಗೊಂದಲಗಳ ವಿಚಾರ. ಮೊದಲನೆಯುದರಲ್ಲಿ ಮದೋನ್ಮತ್ತತೆಯಿದ್ದರೆ ಇಲ್ಲಿ ಮಡಿಲುತನವೇ ಇದೆ. ಇತ್ತೀಚೆಗೆ ದಕ್ಷಿಣ ಹಿಂದುಸ್ಥಾನವೇ ಅವರ ಕಾರ್ಯರಂಗವಾಗಿದೆ. ಹುಲಿಯೇ ಬಂದು ಬಿಟ್ಟರೆ ಹುಚ್ಚು ನಾಯಿ ಪಕ್ಕಕ್ಕೋಡುವಂತೆ ಉತ್ತರ ಹಿಂದುಸ್ಥಾನದ ಜಾತೀಯ ಗೊಂದಲ ಕಮ್ಯೂನಿಸ್ಟ್ ಹಾವಳಿಯನ್ನು ಈ ಕಡೆಗೋಡಿಸಿರಬೇಕು. ಡ. ಭಾ. ರೈಲ್ವೇ ಮುಷ್ಕರವಾಯಿತು; ತಿರುವಾಂಕೂರು ಗಲಭೆಗಳಾದುವು; ಕೇರಳ ಕರ್ನಾಟಕ ಬೀಡಿ ಮುಷ್ಕರವಾಗುತ್ತಿದೆ ಇನೆಲ್ಲಾ ಗೊಂದಲಗಳನ್ನು ಒಂದಿಷ್ಟು ಆಳವಾಗಿ ವಿಚಾರಿಸಿದರೆ 'ಆ ದಾಟವು ಗೊಂದಲಕ್ಕಾಗಿ; ಗೊಂದಲವು ಧುರೀಣರಿಗಾಗಿ' ಎಂಬ ತೀರ್ಮಾನಕ್ಕೆ ಒರುತ್ತೀವೆ. ಭಂಡವಾಳಶಾಹಿಯ ಜೀಯಾ ಧೋಣಿಯಾಗಲೀ, ತಿರುವಾಂಕೂರಿನ ನಿರಂಕುಶ ಪ್ರಭುತ್ವವಾಗಲೀ ಮಾನ್ಯವೆಂಬ ಅಭಿಪ್ರಾಯವಲ್ಲ. ಕಮ್ಯೂನಿಸ್ಟರ ಕಾರ್ಯವೇ ಆ ದುಶ್ಯಕ್ಲಿಗಳ ಮಾನ್ಯತೆಯನ್ನು ಹೆಚ್ಚಿಸಿದೆ. ಅವುಗಳನ್ನು ಶೋಷಿಸಿ, ಕುಗ್ಗಿಸುವ ಬದಲಿಗೆ, ಕೆಲಸಗಾರರನ್ನು ಜನಸಾಮಾನ್ಯರನ್ನು ಉಪಯೋಗಿಸಿಕೊಟ್ಟು ಪೋಷಿಸಿ ಬೆಳೆಸಿದೆ. ಸ್ವತ್ಯಕ್ಷೆ ಕಣ್ಣ ಮುಂದೆ ಕಾಣುವದಕ್ಕೂ ನಿದರ್ಶನ ಕೊಡಬೇಕೆಂದಿಲ್ಲ. ಇದು ಕೇವಲ ಗೊಂದಲ ನಿರ್ಮಾಣ ಮಾತ್ರವಲ್ಲ; ಮಜೂರ ದ್ರೋಹವಲ್ಲವೆ?

ಜಾತಿ ಮತ್ತು ಸ್ಥಿತಿ ವ್ಯತ್ಯಾಸಗಳ ಹೆಸರಿನಿಂದ ಶಾಂತಿ ಸವಾನತೆಗೆ ಭಂಗ,

ಗಾಂಧಿಜೀ ಮರಣಾವಧಿ ಉಪವಾಸ ಹಿಡಿಯುವರೆ?

ಕೇಂದ್ರ ಎಸೆಂಬ್ಲಿ—ಕಾರ್ಯಕಲಾಪಗಳು ಇದು ವರೆಗೆ ಕಾಂಗ್ರೆಸ್ ಮತ್ತು ಲೀಗ್ ನಡುಗಾಲ ಮಂತ್ರಿಗಳೊಳಗೆ ಐಕ್ಯತೆ ಹೆಚ್ಚಿಸುತ್ತಾ ನಡೆದಿವೆ. ಅಂತರಾಷ್ಟ್ರೀಯ ಬ್ಯಾಂಕಿನ ಮತ್ತು ಅಂತರಾಷ್ಟ್ರೀಯ ನಿಧಿಯ ಸದಸ್ಯತನವನ್ನು ಊರ್ಜಿತದಲ್ಲಿಡುವ ಸೂಚನೆ ತಂದು ಅರ್ಥ ಮಂತ್ರಿ ಲಿಯಾಖತ್ ಅಲೀಖಾನರು, ಭಾರತದ ಸ್ಟರ್ಲಿಂಗ್ ಸಾಲವನ್ನು ಸುರಳಿ ಪಡೆಯುವ ಕುರಿತು ಕೊಟ್ಟ ಸ್ವಷ್ಟಾಸ್ವಷ್ಟ ಸನೆಯು ಸರ್ವರ ಮೆಚ್ಚುಗೆ ಪಡೆದು ಮಂಜೂರಾಯಿತು. ಮಜೂರ ಮಾಲಕ ವಿವಾದ ಸಂಬಂಧದಲ್ಲಿ ಕೂಲಿಗಾರ ಮಂತ್ರಿ ಶ್ರೀ. ಜಗಜ್ಜೀವನ ರಾಮರು ತಂದಿದ್ದ ಮಸೂದೆಯೂ ಅದೇ ರೀತಿ ಮಾನ್ಯವಾಯಿತು. ಹಲವು ಪ್ರಾಮುಖ್ಯ ವಿಷಯಗಳು ಪ್ರಶ್ನೋತ್ತರ ರೂಪದಿಂದ ಸ್ಪಷ್ಟೀಕರಣ ಹೊಂದಿದುವು. ರಕ್ಷಣಾ ಖಾತೆಯೊಳಗದೆಯಲ್ಲಿ ಇದು ವರೆಗೂ ಬ್ರಿಟಿಷ್ ವರ್ಚಸ್ಸಿದೆ ಎಂಬ ನಿರಾಶೆಯೊಂದರ ಹೊರತು ಮಿಕ್ಕೆಲ್ಲಾ ವಿಷಯಗಳಲ್ಲೂ ನಡುಗಾಲ ರಾಷ್ಟ್ರೀಯ ಸರಕಾರದ ಕೈವಾಡಗಳಿಂದ ಸ್ಥಿತಿ ಸುಧಾರಿಸಿರುವದು ಸ್ಪಷ್ಟವಾಗಿದೆ.

ಮಹಾತ್ಮಾ ಗಾಂಧಿಯವರು—ಬಿಹಾರಿನ ಜಾತೀಯ ಗಲಭೆ ೨೪ ಘಂಟೆಗಳೊಳಗೆ ನಿಲ್ಲದಿದ್ದರೆ ತಾನು ಮರಣ ಪರಿಯಂತರ ಉಪವಾಸ ಮಾಡುವನೆಂದು ಇದೇ ತಾ. ೦ರಲ್ಲಿ ಘೋಷಿಸಿದ್ದಾರೆಂದು ತಿಳಿದುಬರುತ್ತದೆ.

ನವಾಖಾಲಿಯ ಪ್ರತಿಧ್ವನಿಯಾಗಿ ಬಿಹಾರಿನಲ್ಲಿ ನಿರೀಕ್ಷಿತ ರೀತಿಯ ಗಲಭೆಗಳು ನಡೆಯುತ್ತಿವೆಯೆಂದು ಲೀಗ್ ಪತ್ರಿಕೆಗಳು ಬೊಬ್ಬಿಡುತ್ತಿವೆ. ಅಂತೆಯೇ ಕಲ್ಕತ್ತಿದ ಸುತ್ತಲಿನ ಪ್ರದೇಶದಲ್ಲೆಲ್ಲಾ ಗೊಂದಲ ಹರಡಿದೆ. ಢಾಕಾ ಮತ್ತು ಮೈವೆನ್‌ಸಿಂಗ್ ಜಿಲ್ಲೆಗಳಲ್ಲಿ ಜಾತೀಯ ಗಲಭೆಯ ದಾವಾಗ್ನಿಯೇ ಹಬ್ಬಿದಂತಿದೆ. ಪೂರ್ವ ಬಂಗಾಳ ಸಂಚರಿಸಿ ಬಂದ ವೈಸರಾಯರೂ ಆಲ್ಲಿಯ ದುರ್ಘಟನೆಗಳು, ಹಲವು ಕೆಲಸಿಗಳ ಕೃತ್ಯ ಹೊರತು ಮುಸ್ಲಿಂ ಜಾತಿಯೇ ಹಿಂದುಗಳ ಮೇಲೆ ದಂಗೆಯೆದ್ದಿಲ್ಲ ಎಂಬ ಬಂಗಾಳ ಸರಕಾರದ ವಾದವನ್ನೇ ಸಮರ್ಥಿಸಿದ್ದಾರಂತೆ. ನೆಹರು, ಪಟೇಲ್, ಆಜಾದ್ ಮೊದಲಾದವರು ಗಾಂಧಿಜಿಯವರೊಡನೆ ಸಂಭಾಷಿಸಿ ಸ್ವಸ್ಥಾನಗಳಿಗೆ ಮರಳಿದ್ದಾರೆ. ಬೊಂಬಾಯಿ ಗಲಭೆಯೂ ಏರಿಕೆಯಲ್ಲಿದ್ದು ಪಂಜಾಬನಲ್ಲಿ ಹೊಸತಾಗಿ ಗೊಂದಲವೆದ್ದ ವರ್ತಮಾನವಿದೆ.

ಬಿಹಾರಿನಲ್ಲಿ ಗೊಂದಲ— ಬಿಹಾರಿನ ಸರಣ್, ಪಾಟ್ನಾ ಮತ್ತು ಭಾಗಲ್ಪುರ ಜಿಲ್ಲೆಗಳ ಕೆಲವು ಹಳ್ಳೀ ಭಾಗಗಳಲ್ಲಿ ವಿಶೇಷ ರೀತಿಯ ಜಾತೀಯ ಗೊಂದಲವೆದ್ದಿದೆ. ಸುಮಾರು 400 ಮನೆಗಳಿಗೆ ಬೆಂಕಿ ಕೊಡಲಾಗಿದೆ. ಆದರೆ ಜೀವಂತ ದಹನವಾಗಿಲ್ಲ. ಸುಮಾರು 3000 ಮಂದಿ ಪಾಟ್ನಕ್ಕೋಡಿ ಬಂದು ಆಶ್ರಯ ಪಡೆದಿದ್ದಾರೆಂದು ತಿಳಿದು ಬರುತ್ತದೆ. ಬಿಹಾರಿನ ಉರ್ದೂಸಚಿವ ಶ್ರೀ. ಅನುಗ್ರಹ ನಾರಾಯಣ ಸಿಂಹರು ಪೀಡಿತ ಸ್ಥಳಗಳನ್ನು ಸಂದರ್ಶಿಸಿ ಬಂದು ಇದು ನವಾಖಾಲಿಯ ಪ್ರತಿಧ್ವನಿಯೆಂದಿದ್ದಾರೆ. ವೈಸರಾಯರು ಕಲ್ಕತ್ತೆದಿಂದ ದಿಲ್ಲಿಗೆ ಮರಳುವಾಗ ಬಿಹಾರಿನ ಪ್ರಧಾನಿ ಶ್ರೀ. ಕೃಷ್ಣ ಸಿಂಹರೊಡನೆ ಸಂಭಾಷಿಸಿದ್ದಾರೆ. ನಡುಗಾಲ ಸರಕಾರದ ನಾಲ್ವರು ಮಂತ್ರಿಗಳೂ ಪಾಟ್ನಾ ದಲ್ಲಿಳಿದು

ಜಿಲ್ಲಾ ಬೋರ್ಡು ಮತ್ತು ನಗರಸಭಾ ಚುನಾವಣೆಗಳು ಪುಕೃತ ರದ್ದಾದುವು

ಸದ್ಯದಲ್ಲೇ ನಡೆಯುವವೆಂದು ದಿನ ನಿಶ್ಚಯವಾಗಿದ್ದ ಇಡೀ ಮದ್ರಾಸ್ ಪ್ರಾಂತ್ಯದ ಜಿಲ್ಲಾ ಬೋರ್ಡು ಮತ್ತು ಮುನಿಸಿಪಾಲಿಟಿ ಸಾರ್ವತ್ರಿಕ ಚುನಾವಣೆಗಳನ್ನು ಅನಿಶ್ಚಿತಾವಧಿಯ ವರೆಗೆ ಮುಂದುವರಿಸಬೇಕೆಂದು ಇದೇ ತಾ. 4 ರಲ್ಲಿ ಮದ್ರಾಸ್ ಸರಕಾರವು ನಿರ್ಧರಿಸಿದೆ. ಪ್ರಾಂತ್ಯದಲ್ಲಿ ಶಾಂತ ವಾತಾವರಣವಿರುವಂತೆ ನೋಡುವದು ಅಗತ್ಯವಾದ್ದರಿಂದ ಸರಕಾರವು ಹೀಗೆ ನಿರ್ಧರಿಸಬೇಕಾಯಿತೆಂದು ಕಾರಣಕೊಡಲಾಗಿದೆ.

ಶ್ರೀ. ಕೃಷ್ಣ ಸಿಂಹರೊಡನೆ ಮಾತಾಡಿ, ನೆಹರು ಮತ್ತು ನಿಷ್ಕಾರರು ಪೀಡಿತ ಸ್ಥಳ ಸಂದರ್ಶನೆಗಾಗಿ ಹೋಗಿದ್ದಾರೆ. ಪಾಟ್ನದಲ್ಲೊಂಡೆ ನೆಹರು ಮತ್ತಿತರರು ಹೋದಾಗ ಕೆಲವರು "ನೀವು ಇಲ್ಲಿಗೇಕೆ ಬಂದಿರೀ ಹಳ್ಳಿಗಳಿಗೆ ಹೋಗಿ ಅಲ್ಲಿ ನಡೆಯುತ್ತಿರುವದನ್ನೇಕೆ ನೋಡುವುದಿಲ್ಲ?" ಎಂದು ಕೂಗಿ ಕೊಂಡರು.

ಬಂಗಾಳದಲ್ಲಿ ಶಾಂತಿಪ್ರಯತ್ನ– ಫಲಿಸುವಂತೆ ಕಾಣುವದಿಲ್ಲ. ಕಾಂಗ್ರೆಸ್-ಲೀಗ್ ಅಧಿಕೃತ ರಾಜ್ಯ ಸಮಿತಿಯೊಂದನ್ನು ಸ್ಥಾಪಿಸುವ ಗಾಂಧೀ ಸೂಚನೆಗೆ ಸುಹ್ರವರ್ದಿಗಳೊಪ್ಪದೆ, ಈ ಕಡೆಗೊಪ್ಪಿಗೆಯಿರದ ಪ್ರತಿಸೂಚನೆಗಳನ್ನಿತ್ತಿದ್ದಾರೆ. ಬಂಗಾಳದಲ್ಲಿ ಸಮ್ಮಿಶ್ರ ಮಂತ್ರಿಮಂಡಲವಾಗಬೇಕೆಂಬ ಸೂಚನೆಗೂ ಎಲ್ಲಾ ಪ್ರಾಂತ್ಯಗಳಲ್ಲೂ ಹಾಗಾಗಬೇಕೆಂಬ ಕಾರಣ ಕೊಟ್ಟು ಸುಹ್ರವರ್ದಿಗಳು ನಿರಾಕರಿಸಿದ್ದಾರೆ.

ಮದ್ರಾಸ್ ಮಂತ್ರಿಮಂಡಲವು-ಜಮಿನ್ದಾರೀ ಕ್ಷೇತ್ರಗಳ ಮಟ್ಟಿಗೆ 1802ರ ಸೆಟ್ಲಮೆಂಟಿನ ಮೊದಲು ವರ್ಷದಲ್ಲಿದ್ದ ಕಂದಾಯದಷ್ಟೇ ಗೇಣಿ ನಿಶ್ಚಯಿಸಬೇಕೆಂದು ನಿರ್ಧರಿಸಿದೆ. ಆ ಸಂಬಂಧದ ಮಸೂದೆ ಎಸೆಂಬ್ಲಿಯ ಮುಂದೆ ಬರಲಿದೆ. ರೈತ್ವಾರೀ ಕ್ಷೇತ್ರಗಳ ಆಸ್ತಿಯ ಅನುಭೋಗ ಮತ್ತು ಗೇಣಿ ಕ್ರಮಗಳಿಗೆ ಸಂಬಂಧಪಟ್ಟ ಪ್ರಶ್ನಾವಳಿಯು ಸರ್ವತ್ರ ಕಳುಹಿಲ್ಪಟ್ಟು ವರ್ಯಾಲೋಚನೆಯಲ್ಲಿದೆ. ನೂಲುವ ಮತ್ತು ನೇಯುವ ಗಿರಣಿಗಳ ಮೇ

(೭ನೇ ಪುಟ ನೋಡಿರಿ)

ಮಾನುಷ್ಯತ್ವಕ್ಕೆ ಧಕ್ಕೆಯಾಗುತ್ತಿರುವ ಇವೆರಡು ಪಕ್ಷಗಳ ಪೂರ್ಣ ಪರಾಭವ ವಿನಹಾ ಮಿಕ್ಕೆಲ್ಲರೊಟ್ಟಾಗಿ ಆ ವಿಜಯವನ್ನು ಸಾಧಿಸಿದರೆ ವಿನಹಾ ರಾಷ್ಟ್ರಕ್ಕೆ ಶಾಂತಿಯಿಲ್ಲ; ಸೌಖ್ಯವಿಲ್ಲ; ಘನತೆಯಿಲ್ಲ.

ಉಡುಪಿ

ಹಾದಿ ಧರಿಸುವುದು ಏಕೆ?-ಎಂಬ ವಿಷಯದಲ್ಲಿ ಮಕ್ಕಳ ಕೂಟದ ವಾರ್ಷಿಕ ಸಭೆಯಲ್ಲಿ ತಾ. 18-11-46ಕ್ಕೆ ಚರ್ಚೆ ಜರಿಯಲಿರುವುದೆಂದು ಸಂಬಂಧಪಟ್ಟವರು ತಿಳಿಸುತ್ತಾರೆ.

ಬೀಡಿ ಮಜೂರರಿಗೆ ಶಿಕ್ಷಣ-ಬೀಡಿ ಕೆಲಸಗಾರರ ಮುಷ್ಕರ ಮತ್ತು ಪಹರೇ ಸಂಬಂಧವಾಗಿ ಕೆಲವು ಆಕ್ಷೇಪಣೆಗಳೂ ನಡೆದುದರಿಂದ ಕೆಲಸಗಾರರ ದೆಸ್ತಗಿರಿಯಾಗಬಹುದಿತ್ತು. ತಾ. 5ರ ವರೆಗೆ ತಿಳಿಮಬಂದಂತೆ ಒಟ್ಟಿಗೆ ಸುಮಾರು 10 ಮಂದಿಯ ಕೈದಾಗಿ, 7 ಮಂದಿಗೆ ರೂ 20 ಜುಲ್ಮಾನೆ, ತಪ್ಪಿದರೆ ಒಂದು ತಿಂಗಳ ಕಠಿಣ ಸಜೆ ವಿಧಿಸಲ್ಪಟ್ಟಿದೆ. ಅಷ್ಟಕ್ಕೆ ನಾಲ್ವರು ಜುಲ್ಮಾನೆ ತೆತ್ತು ಬಂದರೆಂದೂ, ಸುಮಾರು ಮಾತ್ರ ಈ ವರೆಗೆ ಒಳಗಿದ್ದಾರೆಂದೂ ತಿಳಿದುಬರುತ್ತದೆ. ಉಗ್ರ ಧೋರಣೆಗೆ ದುರ್ಬಲ ಮುಷ್ಕರವನ್ನು ಎಗ್ಗಿಕರಿಸಿ ಸಿಕ್ಕಿ ಬಿದ್ದಂತಿರುವ ಕೆಲಸಗಾರರ ಸ್ಥಿತಿಯನ್ನು ಕಂಡು ಸ್ಥಾಲಕರು ತಮ್ಮ ಸರ್ಕಾರಬಂತೆಂದು ಉಗ್ರಧೋರಣೆ ವಹಿಸಿದಂತಿದೆ.

ಉಡುಪಿಯ ರೈತರ ಸಂಘ-ಪ್ರ ಸಭೆಯೊಂದು ತಾ. 3ನೇ ಆಪರಾಪ್ನ ಕಡಿಯಾಳಿ ಶಾಲೆಯಲ್ಲಿ ಜರಗಿತು. ಇದೇ ತಾ. 13ಕ್ಕೆ ಉಡುಪಿಗಾಗಮಿಸಲಿರುವ ಮೂವರು ಮಂತ್ರಿಗಳಿಗೆ ಮಾನಪತ್ರವೊಪ್ಪಿಸುವ ವ್ಯವಸ್ಥೆ, ಸಂಘದ ಘೋರಣೆಯನ್ನು ತಿದ್ದಿಕೊಳ್ಳುವ ಆವಶ್ಯಕತೆ ಮೊದಲಾದುವುಗಳ ಕುರಿತು ನಿರ್ಣಯ, ಭಾಷಣಗಳಾದುವು.

ಹೇಟೆ ಬದಿಯಲ್ಲಿ ಹಗಲಿನಲ್ಲೇ ಹುಲಿಬೇಟೆ-ಇದೇ ತಾ 1ರಲ್ಲಿ ಉಡುಪಿ ನಗರದ ಪಶ್ಚಿಮಗಡೆಯ ಬಯಲುಪ್ರದೇಶದಲ್ಲಿ ಸೂರ್ಯಾಸ್ತ ಚಿಟ್ಟೇ ಹುಲಿಯೊಂದು ಕಾಣಿಸಿಕೊಂಡಿತ್ತು. ಆಕಸ್ಮಾತ್ತಾಗಿ ಒಬ್ಬಬ್ಬರ ಮೇಲೆ ನೆಗೆದು ಘಾಯಗೊಳಿಸಿ ಪಾರ್ಕಹಬ್ಬಿ, ಜನರಲ್ಲಿ ಅಲ್ಲಿಂದ ಕೋವೀಧಾರಿಗಳೂ ನೆರೆಯಬಂದಾಗ ಯಲಿ ಇಕ್ಕಟ್ಟಿನಲ್ಲಿ ತನ್ನುತೋಡೊಂದರಲ್ಲಿ ಆನಿತುಕೊಂಡು ಗಪ್ಪಲು ಮತ್ತುಗುಂಡಿನ ರಬ್ಬಡಿಂದ ಗಲಿಬಿಲಿಗೊಂಡಾಗಲಲ್ಲಾ ಹೊರ ನೆಗೆದು ಕೆಲವರನ್ನು ಜುಂಗೂಳಿಸಿತು. ಅದು ಐಳೆಂಟು ಮಂದಿಗೆ ಪರಚಿತೆಂಬ ತಿಳಿದುಬಂದಿದೆ. ಕೊನೆಗದನ್ನು ಸಂಜೀಜೊತ್ತಿಗೆ ಗುಂಡೆಸೆದು ಕೊಲ್ಲಲು ಸಾಧ್ಯವಾಯಿತು ಈ ಬೃಹತ್ಕಾಯವನ್ನು ನೋಡಲು ಸಾವಿರಾರು ಮಂದಿ ನೆರೆದಿದ್ದರು.

ವರ್ಗಾವರ್ಗಿ-ಪುತ್ತೂರಲ್ಲಿ ತಹಶೀಲ್ದಾರರಾಗಿದ್ದ ಶ್ರೀ ಬಿ ನಾರಾಯಣ ಹೆಗ್ಡೆಯವರು ಉಡುಪಿಯ ತಹಶೀಲ್ದಾರರಾಗಿ ನೇಮಕಹೊಂದಿ ಚಾರ್ಜು ವಹಿಸಿರುತ್ತಾರೆ.

ಶ್ರೀಕೃಷ್ಣ ಮಠದಲ್ಲಿ-ಕಾರ್ತಿಕ ಮಾಸದ ಲಕ್ಷದೀಪೋತ್ಸವವು ತಾ. 6ರಲ್ಲಿ ಅರಂಭವಾಗಿಯಿದೆ. ತಾ. 9ರ ತನಕ ನಡೆಯಲಿರುವುದು.

ದೀಪಾವಳಿ ಹಬ್ಬದ ಸವಿನೆನಪು-ಉಡುಪಿಯ ಸಾಮಾಜಿಕಾರಾದ ಶ್ರೀ ರಾಮು ಪ್ಪ ತಿಮ್ಮಪ್ಪನವರು ದೀಪಾವಳಿ ಹಬ್ಬದ ದಿನ ಅಲೆಪ್ಪೂರು ಲೇಬರ್ ಬಾಲಾ ಮಕ್ಕಳಿಗೆ ಊಟವಿತ್ತು ವಸ್ತ್ರದಾನ ಮಾಡಿದರು.

ದ. ಕ ಜಿಲ್ಲೆಯಲ್ಲಿ ವಿದ್ಯಾಮಂತ್ರಿಗಳು

ಮಂಗಳೂರಲ್ಲಿ—ಮದ್ರಾಸು ಸರಕಾರದ ವಿದ್ಯಾಮಂತ್ರಿಗಳಾದ ಶ್ರೀ ಅಸಿನಾಶಲಿಂಗಂ ಚೆಟ್ಟಿಯಾರರು ಕಳೆದ ತಾ. ೫ನೇರಲ್ಲಿ ಸಂಜೆಯ ಮೈಲ್‌ಗಾಡಿಯಲ್ಲಿ ಮಂಗಳೂರಿಗೆ ತಲ್ಪಿವಾಗ ರೈಲ್ವೆ ನಿಲ್ದಾಣದಲ್ಲಿ ಸಂಭ್ರಮದ ಸ್ವಾಗತ [illegible] ಲವರಿಗೆ ಭೇಟಿಯಿತ್ತು ಸೈಂಟ್ ಅಗ್ನೇಸ್ ಕಾಲೇಜು, ಎಲೋಸಿಯಸ್ ಕಾಲೇಜು, ಪ್ರೌಢ ಶಾಲೆಗಳಿಗೆ ಸಂದರ್ಶನವಿತ್ತು ಮಧ್ಯಾಹ್ನ ೨ ಗಂಟೆಗೆ ಜಲ್ಲಾ ಟೀಚರ್ಸ್ ಗಿಲ್ಡಿನ ನೇತೃತ್ವದಲ್ಲಿ ಗಣಪತಿ ಹೈಸ್ಕೂಲಲ್ಲಿ ಜರಗಿದ ವಿದ್ಯಾಪರಿಷತ್ತಿನಲ್ಲಿ ಭಾಗವಹಿಸಿದ್ದರು. ಶ್ರೀ ಗಳಾದ ಎ. ಬಿ. ಶೆಟ್ಟಿ, ಡಾ। ಯು. ಪಿ. ಉಪಲ್ಕ, ಕೆ. ಈಶ್ವರ ಜೋದಲಾದವರು ಈ ಪರಿಷತ್ತಿನ ಸದಸ್ಯರಾಗಿದ್ದರು. ಗಿಲ್ಡಿನ ಉಪಾಧ್ಯಕ್ಷೆಯಾದ ಶ್ರೀ ಎಸ್. ಎಸ್. ವಿಕಾಜಿರಾಯರು ಶಿಕ್ಷಣ ಸುಧಾರಣೆಯಲ್ಲಿ ಗಿಲ್ಡಿನ ಅಭಿಪ್ರಾಯವನ್ನು ಕ್ರೋಢೀಕರಿಸಿ ಪೇಳಿದರು. ತದನಂತರ ಸರಕಾರದ ಪ್ರಶ್ನಾವಳಿಗಳ ಮೇಲೆ ಚರ್ಚೆಗಳಾದುವು. ಶ್ರೀ ಕೆ.ಬಿ. ಜನರಾಜ ಹೆಗ್ಡೆ ಮೊದಲಾದವರು ಶಿಕ್ಷಣ ಸಾಧ್ಯಕ ಕನ್ನಡವಾಗಬೇಕೆಂದು ಪಾದಿಸಿದರು. ಕೊಂಕಣಿ ಪುನೆಮಾತಿನವರು ಹಿಂದಿಯನ್ನು ಸಾಧ್ಯಕ ಮಾಡಲು ಅನುಮತಿ ಸಿಗಬೇಕೆಂದು ಸೂಚಿಸಿದರು. ಮಂತ್ರಿಗಳು ಶಿಕ್ಷಣಕ್ಕೆ ಸಂಬಂಧಪಟ್ಟ ಹಲವಾರು ವಿಷಯಗಳನ್ನು ವಿವರಿಸಿದರು. ದಕ್ಷಿಣ ಕನ್ನಡ ಜಿಲ್ಲಾ ಪಂಡಿತ ಸಂಘ, ಪುತ್ತೂರು ತಾಲೂಕು ಅಧ್ಯಾಪಕ ಸಂಘ, ಜಿಲ್ಲಾ ಬೋರ್ಡು ಎಲಿಮೆಂಟರಿ ಶಾಲಾ ಅಧ್ಯಾಪಕ ಸಂಘ ಮೊದಲಾದ ಸಂಸ್ಥೆಗಳ ಶಿಷ್ಟಮಂಡಲದವರು ಭಿನ್ನವತ್ತಳಿಗಳನ್ನು ಮಂತ್ರಿಗಳಿಗೆ ಅರ್ಪಿಸಿದರು. ಮಂತ್ರಿಗಳು ನಿದಾರ್ಿ ಕಾಂಗ್ರೆಸ್ಸಿನ ನೇತೃತ್ವದಲ್ಲಿ ಸೇರಿದ ವಿದ್ಯಾರ್ಥಿಗಳ ಸಭೆಯಲ್ಲಿ ಭಾಷಣವೀಯುತ್ತಾ ಸ್ವರಾಜ್ಯವೆಂದರೇನೆಂಬುದನ್ನು ವಿವರಿಸಿದರು. ಡಿ. ಸಿ ಮಿರನ್ ಕಾಲೆಯನ್ನು ಸಂದರ್ಶಿಸಿ ಜಿಲ್ಲಾ ಹರಿಜನ ಲೇಬರ್ ಲೀಗಿನ ವಿನಂತಿಯನ್ನು ಸ್ವೀಕರಿಸಿದರು

ಉಡುಪಿಯಲ್ಲಿ—ರಾತ್ರಿ ವಿದ್ಯಾಮಂತ್ರಿಗಳು ಉಡುಪಿಗೆ ಆಗಮಿಸಿದರು. ನಿಜೊ ಬಂಗ್ಲೆಯಲ್ಲಿ ರಾ। ನಾಥ ವೈಗಳು ಏರ್ಪಡಿಸಿದ ಭೋಜನ ತೀರಿಸಿ ನಂಧ್ಯಾಸ್ಸ ೨ ಗಂಟೆಗೆ ಎಳೆದಿಮಿ ಬಿಳಿ ಜನರಲ್ ಎಜ್ಯುಕೇಶನ್ ಕಛೇರಿಯಿಂದ ಜರಗಿದ ವಿದ್ಯಾಧಿಮಾನಿಗಳ ಸಭೆಯಲ್ಲಿ ಭಾಗ ವಹಿಸಿದರು. ಡಾ। ನಾಥ ವೈಗಳವರು ಮಂತ್ರಿಗಳನ್ನು ಸ್ವಾಗತೀಕರಿಸಿ ಎಳೆಡಮಿಯ ಇತಿಹಾಸವನ್ನು ಚಿತ್ರಿಸಿ ಹುಸ್ತೇಸ್ ಕಮಿಟಿಯ ಮುಖ್ಯಾಂಶಗಳನ್ನು ವಿವರಿಸಿದರು. ಮಂತ್ರಿಗಳು ದಿನಗಿತ್ತ ಸ್ವಾಗತಕ್ಕೆ ಆಭಾರ ಸೂಚಿಸಿದ ನಂತರ ಸ್ಪಿಂಟು ಮಾಡಿದ ಪ್ರತಿಗಳನ್ನು ಮುಂಚಿತವಾಗಿಯೇ ತನಗೂ ಸಭಿಕರಿಗೂ ಕೊಡುವ ವ್ಯವಸ್ಥೆ ಮಾಡಿದ್ದಕ್ಕೆ ವಿಷಯಗಳನ್ನು ಗ್ರಹಣ ಮಾಡಿ ಚರ್ಚಿಸಬಹುದಾಗಿತ್ತು ಎಂದರು. ಮುದಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳ ಕುರಿತು ಮಾತನಾಡುತ್ತಾ ಅಂತಹ ಸಂಸ್ಥೆಗಳ ಸ್ಥಾಪನೆಗೆ ಸರಕಾರದ ಪ್ರೋತ್ಸಾಹ ಸಿಗಲಾರದು, ಸಾವಿರಾರು ರೂಪಾಯಿಗಳನ್ನು ಖರ್ಚುಮಾಡಲು ಸರಕಾರವುತಯಾರಿಲ್ಲ. ಎಳೆವಮಿಯನರು ಅಲ್ಪ ಖರ್ಚಿನಿಂದ ಉಡುಪಿಯಲ್ಲೂ ಸೆರಕಲೆಯ ಗ್ರಾಮಗಳಲ್ಲಿಯೂ ತಮ್ಮ ಯೋಜನೆಯನ್ನು ಕೆಲವೊಂದು ಪ್ರಾಥಮಿಕ ಶಾಲೆಗಳಲ್ಲಿ ಮೂಡುವುದು ಎಳ್ಳಿಕೆಂದು ನಾನು ಸೂಚಿಸಿದರಲಾರದು ಶಾಲೆಗೆ ಳಿಗೆ ಬೇಕಾದಮವು ಕಟ್ಟಡವೊಂದೇ ಅಲ್ಲ.ಅದಕ್ಕಿಂತಲೂ ಪ್ರಾಮುಖ್ಯವಾದುದು ಆದರ್ಶ ವಿದ್ಯಾದಾನವೆಂದು ಕೊನೆಯದಾಗಿ ಸೂಚಿಸಿದರು.

ಮಂತ್ರಿಗಳು ಬೋರ್ಡು ಹೈಸ್ಕೂಲ್, ಕ್ರಿಶ್ಚಿಯನ್ ಹೈಸ್ಕೂಲ್, ಹೆಮ್ಮಕ್ಕಳ ಟ್ರೈನಿಂಗ್ ಶಾಲೆ, ಶ್ರೀ ಕೃಷ್ಣ ವೇದಸ್ಥಾನವನ್ನು ಸಂದರ್ಶಿಸಿ ಅದೇ ದಿನ ಸಂಜೆ ಮಂಕರೆಳಿದರು.

ಕಾರ್ಕಳದಲ್ಲಿ—ವಿದ್ಯಾ ಮಂತ್ರಿಗಳು ಯಸ್. ಬಿ ಯಸ್ ಕಾಲೇಜಿನಲ್ಲಿ ರಾತ್ರಿ ಸೇವಾದಳವರ ಸ್ವಾಗತವನ್ನು ಪಡೆದರು. ಶ್ರೀ ಕೆ. ಪಿ. ಕೇಶವಗಿರಿ ಪ್ರಭುಗಳವರ ಉಪಚಾರವನ್ನು ಸ್ವೀಕರಿಸಿದ ಬಳಿಕ್ಕಲ್ಲಿ ಕೂಡಿದ ಬಾಲ ಬಾಲಕಿಯರನ್ನುದ್ದೇಶಿಸಿ ಕೆಲವು ಮಾತುಗಳನ್ನಾಡಿದರು. ಎಸ್ ಬಿ ಎಸ್ ಕಾಲೇಜಿನ ಹಾಗೂ ಎಸ್.ವಿ.ಬಿ. ಗರ್ಲ್ಸ್ ಹೈಸ್ಕೂಲಿನ ಹರವಾಗಿ ಮನವಿಗಳನ್ನು ಸ್ವೀಕರಿಸಿದರು. ವಿದ್ಯಾಸುದಿರಗಳು ಸರಕಾರದ ಸಹಾಯವನ್ನೇ ಹೊಂದಿಕೊಂಡಿರುವಬಕ್ಕಿಂತ ಸಾರ್ವಜನಿಕ ಬೆಂಬಲವನ್ನು ಪಡೆಯಲು ಅನುಕೂಲವಾಗುವಂತಹ ಆದರ್ಶ ಸಂಸ್ಥೆಗಳಾಗಿರುವದು ಎಷ್ಟೋ ಮೇಲೆಂದು ಹೇಳಿದರು.

ತಿದ್ದುಪಡಿ— ಕಳೆದ ಸಂಚಿಕೆಯಲ್ಲಿ 8ನೇ ಪುಟದಲ್ಲಿ ಪ್ರಕಟವಾದ ಉಡ್ಪಿ ಡಿಸ್ಟ್ರಿಕ್ಟ್ ಮುನ್ಸಿಫ್‌ಕೋರ್ಟಿನ S.C. 303/1946ನೇ ನೋಟೀಸಿನಲ್ಲಿ ಪ್ರತಿವಾದಿ ವಿರಲ ಶೆಟ್ಟಿ, ಸಡುಮನೆ ಅಬ್ಬಕ್ಕ ಶೆಡ್ತಿರ ಮಗ ಎಂದು ತಪ್ಪಾಗಿ ಬಿದ್ದಿದೆ ಅಬ್ಬಕ್ಕ ಶೆಡ್ತಿ ಎಂಬುದು ಅಮ್ಮಕ್ಕ ಶೆಡ್ತಿ ಎಂದಾಗಬೇಕು.

-ಸಂ. ನ.

ಮಂಗಳೂರು

ಜಿಲ್ಲಾ ವರ್ಗದಾರರ ಸಂಘದ ನಾಯಕ ಮಂಡಳಿಯು ಸಭೆಯು—ಶ್ರೀ ಎ. ಬಿ. ಶೆಟ್ಟಿ, ಎಮ್. ಎಲ್. ಎ ಅವರ ಅಧ್ಯಕ್ಷತೆಯಲ್ಲಿ ಕಳೆದ ತಾ. ೫ರಲ್ಲಿ ಜರಗಿ ಇದೇ ತಾ ೧೨ರಲ್ಲಿ ಚೆಲ್ಲಿಯನ್ನು ಸಂದರ್ಶಿಸಲಿರುವ ಮದ್ರಾಸು ಸರಕಾರದ ಮಂತ್ರಿಗಳಿಗೆ ಸಾರ್ವಜನಿಕ ಸಭೆಯಲ್ಲಿ ಒಂದು ಮನವಿಯನ್ನು ಅರ್ಪಿಸಬೇಕೆಂಬ ನಿರ್ಣಯವಾಯಿತು. ಧನವೂ ಒಕ್ಕಲಿಗೂ ಇರತಕ್ಕ ಸಂಬಂಧದ ಕುರಿತು ನ್ಯಾಯವಿಧಾಯಕ ಸಭೆಯ ಮುಂದೆ ಬರತಕ್ಕ ಮಸೂದೆ, ಇಲೆಕ್ಟ್ರಿಸ್ಟಿ, ಸರಕಾರದ ಟೆಕ್ನಿಕ್ಸ್‌ಲ್ ಘೋರಣೆ, ಅನುಮತ ರವ್ಯಗಳಿಗೆ ರನ್ತೆಗಳ ಸ್ಕರ್ಯ ಇತ್ಯಾದಿ ವಿಷಯಗಳು ಮನವಿಯಲ್ಲಿ ಸೂಚಿಸಲಾಗುವುದು. ಅಡಿಕೆ ವ್ಯವಸಾಯಗಳ ಸಂಘ, ಗ್ರಾಮೋದ್ಧಾರ ಸಂಘ ಮೊದಲಾದ ಸಾರ್ವ ಸಂಸ್ಥೆಗಳು ಮನವಿಯನ್ನು ತಯಾರಿಸುವಲ್ಲಿ ಭಾಗ ವಹಿಸಬಹುದು. ಮನವಿಯನ್ನು ತಯಾರಿಸುವರೆ ಶ್ರೀಗಳಾದ ಎ. ಬಿ. ಶೆಟ್ಟಿ, ಕೆ. ಬಿ. ಜನರಾಜ ಹೆಗ್ಡೆ, ಜಿ. ಕೆ. ಭಟ್ಟರಿರುವ ಕಮಿಟಿಯು ನೇಮಕವಾಯಿತು.

(೬ನೇ ಪುಟದಿಂದ)

ಲೆ ಹಾಕಲಿರುವ ನಿರ್ಬಂಧದ ಚರ್ಚೆಯು ಎಸೆಂಬ್ಲಿಯ ಮುಂದೆ ಬರಲಿದೆ. ಈ ಗಿರಣಿಗಳ ಅಧಿಕಾರವನ್ನು ಕೇಂದ್ರ ಸರಕಾರವೇ ವಹಿಸಬೇಕೆಂದು ಶಿಫಾರಸು ಮಾಡುವ ಸೂಚನೆಯನ್ನು ಮದ್ರಾಸಿನ ಸರ್.ಎಸ್. ಗೋಪಾಲ ಸ್ವಾಮಿ ಅಯ್ಯಂಗಾರರು ಕೌನ್ಸಿಲ್ ಆಫ್ ಸ್ಟೇಟಿನಲ್ಲಿ ತರಲಿದ್ದಾರೆ.

ಅಂತರಾಷ್ಟ್ರೀಯ — ರಂಗದಲ್ಲಿ ಸ್ಯಾಯೋಕ್ತನಲ್ಲಿಗ ನಡೆದಿರುವ ಜಾಗತಿಕ ಸಂಘದ ಆಧಿವೇಶನವೇ ಮುಖ್ಯವಾದುದು. ಲಿಲ್ಲಿ ರಕ್ಯಾ-ಆಮೇರಿಕಾ ವಾಗ್ವಾದಗಳು ನಡೆದಿವೆ.

AMBOL OINTMENT (Regd.)

This is a sovereign remeay for itches, boils, scabies cuts burns, pimples and all other skin ailments.

AZAD TOOTH POWDER

A powder that cures tooth ache, bleeding gum trouble and stops foul smell etc.

AGENTS WANTED.

PRODUCTS OF

THE AMBOL OINTMENT MFG. CO..

MADURA.

ಶ್ರೀ ರಾಮಕೃಷ್ಣ ಥಿಯೇಟರ್ಸ್ ಲಿಮಿಟೆಡ್, ಉಡ್ಪಿ

ತಾರೀಕು 7—11—1946ರಿಂದ

ಕನ್ನಡವಲ್ಲಿ ಉತ್ಕೃಷ್ಟವೆನಿಸಿದ ಗುಬ್ಬಿಯವರ

ಹೇಮರೆಡ್ಡಿ ಮಲ್ಲಮ್ಮ

ಜಯಮ್ಮ, ವೀರಣ್ಣ, ಹೊನ್ನಪ್ಪ ಭಾಗವತರ್,
ಮಲ್ಲಪ್ಪ, ನಾಗಮ್ಮ

ದಕ್ಷಿಣ ಕನ್ನಡ

ಮಂಗಳೂರು.

ಹೊಸ ಮುಸ್ಲಿಂ ಪತ್ರಿಕೆ— ಕಳೆದ ತಾ. 27ರಲ್ಲಿ ಜುಮ್ಮಾ ನುಸೀದಿ ಹಾಲಿನಲ್ಲಿ ಮಂಗಳೂರು ಮುನಿಸಿಪಾಲಿಟಿಯ ಚೆಯರ್‌ಮ್ಯಾನ್‌ರಾದ ಜನಾಬ್ ಎಚ್. ಹುಸೇನ ಫುತ್ತೂರ್ ಸಾಹೇಬ್ ಆವರ ಅಧ್ಯಕ್ಷತೆಯಲ್ಲಿ ಮುಸ್ಲಿಮರ ಸಾರ್ವಜನಿಕ ಸಭೆಯೊಂದು ಜರಗಿ- ಮುಸ್ಲಿಮರ ಉನ್ನತಿಗಾಗಿ, ಮುಸ್ಲಿಮರ ಅಭಿಪ್ರಾಯಗಳೇ ನೆಂದು ಮುಸ್ಲಿಮರಲ್ಲದವರಿಗೆ ತಿಳಿಯಪಡಿಸಲಿಕ್ಕಾಗಿ, ಎಲ್ಲರಲ್ಲಿಯೂ ಇರಬೇಕಾದ ಏಕ್ಯ ಸಾಧನೆಗಾಗಿ 'ಉದಯವಾಣಿ' ಎಂಬ ವಾರ್ತಾ ಪತ್ರಿಕೆಯನ್ನು ಹೊರಡಿಸಲು ನಿರ್ಧರಿಸಿತು.

ಆಹಾರ ಸಾಧನಗಳ ಸರಬರಾಯಿ—ಮಂಗಳೂರಿಗೆ ಬೇಗನೆ ಪಾರ್ಲಿ ಹಿಟ್ಟು ಬಂದಿದ್ದು (ಸುಮಾರು 725 ಗೋಣಿ-ಗೋದಿಯಲ್ಲಿ ಸುಮಾರು 72 ಪೌಂಡು) ರೇಶನ್ ಅಂಗಡಿಯಲ್ಲಿ ಸಾರ್ವಜನಿಕರಿಗೆ ಪೌಂಡಿಗೆ ರೂ. 0 4-3 ಪೈಗಳಂತೆಯೂ ಯೋಟಲಿನ ನವರಿಗೆ ಅದು ರಾತ್ರಿ ೧೯ಕ್ಕೆ ರೂ. 1 2-0 ರಂತೆಯೂ ಪೂರಾಟಕ್ಕೆ ದೊರೆಯುವ ಹಾಗೆ ವ್ಯವಸ್ಥೆಯಾಗಿದೆ. ಬ್ರೆಜಿಲ್ ಅಕ್ಕಿ ಸುಮಾರು 700 ಟನ್ ಆಗಲೇ ಇಲ್ಲಿಗೆ ತಲುಪಿದೆ. ಸುಮಾರು 5 ಟನ್ "ಬಿಸ್ಕೆಟ್"ಗಳೂ ಬೇಗನೆ ಇಲ್ಲಿಗೆ ಬರಲಿದೆ. 'ನೆಲ್'ದಲೆ ಚಾಕಲೇಟ್" ಆಗಲೇ ರೇಶನ್ ಅಂಗಡಿಗಳಲ್ಲಿ ಪಿಕೆಟಿಗೆ ೬ ೨ 6ರಂತೆ ಮೂರಾಟಕ್ಕೆ ದೊರೆಯುತ್ತಿದೆ.

ಮುನ್ಸಿಪಲ್ ಮೀಟಿಂಗ್—ತಾ ೨೮ರಲ್ಲಿ ಚೆಯರ್‌ಮ್ಯಾನ್ ಜನಾಬ್ ಹುಸೇನ ಫುತ್ತೂರ್ ಸಾಹೇಬರ ಅಧ್ಯಕ್ಷತೆಯಲ್ಲಿ ಜರುಗಿ ಇಲ್ಲಿಗೆ ಇದೇ ತಾ. ೧೭ರ ಸುಮಾರಿಗೆ ಬರಲಿರುವ ಸ್ಥಳೀಯ ಸಂಸ್ಥೆಗಳ ಮಂತ್ರಿ ಮಿ. ವಾನಿಯಲ್ ಧೋಮನವರಿಗೊಂದು ಮೆಮೊರೆಂಡಮನ್ನು ತಯಾರಿಸಿ ಸಮರ್ಪಿಸಲು ರಾವ್‌ಸಾಹೇಬ ಪಿ. ಆರ್. ಆರ್. ಪೂಂಜ, ಶ್ರೀ ರಂಕರ ಅಳ್ವ, ಶ್ರೀ ಬಿ. ಜಿ. ದಾಸ್, ಮಿ. ಹಾನ್ ಗೊನ್ಸಾಲ್ವೀಸ್ ಮೊದಲಾದವರುಳ್ಳ ಒಂದು ಸಮಿತಿಯನ್ನು ನೇಮಿಸಿತು.

ಬೀಡಿ ಕಾರ್ಖಾನೆಯ ೦೭ ಮಂದಿಗೆ ದಂಡನೆ—ಕಳೆದ ತಾ. ೨೭ರಲ್ಲಿ ಕಂಡಕ ಪಳ್ಳಿಯ ಗಣೇಶಬೀಡಿಶಾಪೆಯಾರಜರಸ್ತೆಯ ಬಳಿಯಲ್ಲಿ ಸಾರ್ವಜನಿಕ ಸಂಚಾರಕ್ಕೆ ಅಡ್ಡಿಯನ್ನು ಉಂಟುಮಾಡಿದರೆಂದು ಇ. ಪಿ. ಕೋವಿನ ೨೮೨ನೇ ಪ್ರಕರಣದ ಮೇರೆಗಿನ ಆರೋಪವನ್ನು ಮಂಗಳೂರು ಸ್ಪೆ: ಸ: ಮೆ ಜಸ್ಟ್ರೇಟ್‌ರಾದ ಶ್ರೀ ಕೆ. ಲಿಂಗಪ್ಪಯ್ಯನವರು ತಾ. ೨೮ರಂದು ವಿಚಾರಣೆ ನಡೆಸಿ ಬೀಡಿ ಕೆಲಸಗಾರರಾದ ಎ. ಪೂವಪ್ಪ, ಎಂ ಮಂಜು, ರಾಘವ ಮೊದಲಾದ ೧೭ ಮಂದಿಯಲ್ಲಿ ಪ್ರತಿಯೊಬ್ಬರಿಗೂ ರೂ. ೧೬೦ ಜುಲ್ಮಾನೆ ಎಂದು ನಿಧಿಸಿದುದರಲ್ಲಿ (೨೧ ವರ್ಷಕ್ಕೆ ಮೇಲ್ಪಟ್ಟು) ೯ ಮಂದಿ ಜುಲ್ಮಾನೆ ತೆರದೆ ಜೈಲಿಗೆ ಸೋಗಿರುವರು.

ಕುಂದಾಪುರ—ಕುಂದಾಪುರ ತಾಲೂಕಿನ ಪಂಡ್ಲೆ ಫಿಕ್ಕದ ತಾಲೂಕ್ ಫುಡ್ ಕಮಿಟಿಯ ನೆಂಬರಿಕೆಯ ಒಂದು ಸ್ಥಾನದ ಚುನಾವಣೆಯು ತಾ. 30-10-46ರಲ್ಲಿ ನಡೆದು ಶ್ರೀ ಕೆಂಚನೂರು ವೆಂಕಪ್ಪ ಶೆಟ್ಟರು ಬಹುಮತದಿಂದ ಪುನಃ ಚುನಾಯಿಸಲ್ಪಟ್ಟರು ತ್ತಾರೆ.

ಪಡುಬಿದ್ರೆ—ನಾಸ್ಟ್ರೀಯ ಸೇವಾದಲ ಒವರು ಕಳೆದ ತಾ. 27ರಲ್ಲಿ ಬೆಳಿಗ್ಗೆ ಸೈಕಲ ಮೆರವಣಿಗೆಯಿಂದ ಕಟಪಾಡಿಗೆ ಹೋದರು. ಅಲ್ಲಿ ಡಾ। ರಾಘವೇಂದ್ರ ನಾಯ್ಕರ ಅಧ್ಯಕ್ಷತೆಯಲ್ಲಿ ಸಭೆಜರಗಿ, ಶ್ರೀಗಳಾದ ಕೆ. ವಿ. ಕಾಮತ್, ಕೆ. ಕರಿಯಣ್ಣ ಶೆಟ್ಟಿ, ರಾಘವ ಜತ್ತನ್ನ ಇವರ ಭಾಷಣಗಳಾದುವು. ತ್ಯಾಗನಿಧಿಗೆ ರೂ. 31-4-0 ಸಂಗ್ರಹವಾಯಿತು.

ಕಡೆಕಾರು—ಮಹಾಗಣಪತಿ ಬಾಲಿಕಾ ಪಾಠಶಾಲೆಯ ಕಾರ್ಯಕಾರಿ ಮಂಡಳಿಯ ಸಭೆಯು ತಾ. 29-10-46ರಲ್ಲಿ ಡಾ. ಮಾಧವ ಪೈಗಳ ಅಧ್ಯಕ್ಷತೆಯಲ್ಲಿ ಜರಗಿ ಮೊದಲೇ ಸ್ಥಾಪನೆಯಾಗಿದ್ದ 'ಗ್ರಾಮಾಭಿವೃದ್ಧಿ' ಸಂಘವನ್ನು ಬಲಪಡಿಸಿ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕೆಂದಾಯಿತು ಆ ಬಗ್ಗೆ ಒಂದು ರಚನಾ ಸಮಿತಿಯನ್ನು ವಿವ್ಯಾಪ್ರಚಾರ್ಯನಿರು ಮ್ಯೋಗ ನಿವಾರಣೆ, ಆರೋಗ್ಯಪಾಲನೆ, ಹಳ್ಳಿಯ ಶುಚೀಕರಣ, ಆಹಾರ ಮತ್ತು ಬಣ್ಣ ಪುರ್ಯೆಕೆ, ಹೆರಿಗೆ ಮತ್ತು ಶಿಶು ಸಂರಕ್ಷಣೆ. ಆಕಳು ಸಂಪತ್ತು, ಕೋಳಿ ಸಾಕುವಿಕೆ, ಜೇನು ನೋಣ ವ್ಯವಸಾಯ, ಗ್ರಾಮ ಕೈಗಾರಿಕೆ ಮೊದಲಾದವುಗಳಿಗಾಗಿ ಪ್ರತ್ಯೇಪ್ರತ್ಯೇಕ ಉಪ ಸಮಿತಿಗಳನ್ನು ರಚಿಸಲಾಯಿತು. ಈ ಯೋಜನೆಗಳೆಲ್ಲ ಕಾರ್ಯರೂಪಕ್ಕೆ ಬಂದರೆ ಇದು ಮಾದರಿ ಗ್ರಾಮವಾಗುವದರಲ್ಲಿ ಸಂಶಯ ವಿಲ್ಲ.

ಪಡುತೊಪ್ಪೆ–ಕೆಮ್ಮಣ್ಣು— ಇಲ್ಲಿಯ ಹಾಯರ್ ಎಲಿಮೆಂಟರಿ ಶಾಲೆಯ ಹಳೆಯ ವಿದ್ಯಾರ್ಥಿ ಸಂಘದವರು ಕಟ್ಟಿಸಿದ ನೂತನ ಶಾಲಾಭವನದ ಪ್ರವೇಶೋತ್ಸವ ಜಿಲ್ಲೆ ಟಿ ಇನ್ಸ್‌ಪೆಕ್ಟರ್ ಶ್ರೀ ಕೆ. ಸಂಜೀವ ಭಟ್, ಎಂ. ಎ., ಎಲ್. ಟಿ.ಇವರನ್ನು ಬ್ಯಾಂಡ್ ವಾಲಗದಿಂದ ಸ್ವಾಗತೀಕರಿಸಿ ಇವರಿಂದ ಉದ್ಘಾಟನಾ ಸಮಾರಂಭವು ನೆರವೇರಿತು. ಸಂಘದ ಕಾರ್ಯದರ್ಶಿ ಶ್ರೀ. ಪಿ. ರಾಮರಾಯರು ಸಂಘದ ಹಾಗೂ ಕಟ್ಟಿಡ ನಿರ್ಮಾಣದ ವರದಿಯನ್ನು ಸಭಿಕರ ಮುಂದಿರಿಸಿದ ತರುವಾಯ ಶ್ರೀ ಟಿ. ಶೀನಪ್ಪ ಪೆಗ್ಗಡೆ, ಬಿ. ಜಿ. ಎಲ್, ಎಲ್. ಟಿ, ಇವರಿಂದ ಸ್ವಸ್ತಿವಾಚನ ಸಂಘದ ಹಾಗೂ ಊರ ಮಹನೀಯರಿಂದ ವಿದ್ಯಾರ್ಥಿಗಳಿಗೆ ಕೊಡಲ್ಪಟ್ಟ ಪುಸ್ತಕಾದಿ ಸಂಭಾವನೆಗಳ ವಿತರಣೆ, ಸಂಘದ 'ಗಜಾನನ ನಾಟ್ಯಕೂಟ'ದವರಿಂದ 'ಜರಾಸಂಧ ಗರ್ವ ಭಂಗ' ಎಂಬ ನಾಟಕಾಭಿನಯ ಇತ್ಯಾದಿ ಕಾರ್ಯಕಲಾಪಗಳು ಜರಗಿದುವು. ನಾಟಕದಲ್ಲಿ ಜರಾಸಂಧ ಪಾತ್ರ ವಹಿಸಿದ್ದ ಶ್ರೀ ಬಿ. ನಾರಾಯಣರಾಯರಿಗೆ ಎಚ್. ಎಚ್. ಹಯಮಾನರಿಂದ ಪ್ರಥಮಬಹುಮಾನವಾಗಿ ಒಂದು ಪದಕ ನಾರದ ಪಾತ್ರ ವಹಿಸಿದ ಶ್ರೀ. ಎ. ಬಾಬುರಾಯರಿಗೆ ಹಳೆಯ ವಿದ್ಯಾರ್ಥಿಯೊಬ್ಬರಿಂದ ದ್ವಿತೀಯ ಬಹುಮಾನವೂ ಕೊಡಲ್ಪಟ್ಟು ಸಭಿಕರ ಪರವಾಗಿ ಶ್ರೀ ಟಿ. ಎಲ್. ಉಡುಪರ ಭಾಷಣ ಮತ್ತು ಸಂಘದ ಕಡೆಯಿಂದ ಧನ್ಯವಾದಾರ್ಪಣದೊಡನೆ ಸಮಾರಂಭವು ಮುಕ್ತಾಯವಾಯಿತು.

ಸಾಸ್ತಾನ—ಇಲ್ಲಿಯ ಮಿತ್ರವೃಂದ ಸಂಘದ ಕಡೆಯಿಂದ ತಾ. 1-11-46ರಲ್ಲು ಶ್ರೀ ಪಿ. ಲಕ್ಷ್ಮೀನಾರಾಯಣ ಮಂಜರವರು, ಮಿತ್ರವೃಂದ, ವೆಂಬ ಉಚಿತ ವಾಚನಾಲಯ ವಸ್ತು ತೆರೆದರು.

ಸುಬ್ರಹ್ಮಣ್ಯ— ದ. ಕ. ಜಿಲ್ಲಾ ಪುತ್ತೂರು ತಾಲ್ಲೂಕು ಮಹತೋಭಾರ ಕಾಳ್ಕೇ ಶ್ರೀ ಸುಬ್ರಹ್ಮಣ್ಯ ಕ್ಷೇತ್ರದಲ್ಲಿ ಪೂರ್ವಶಿಸ್ಟ ಸಂಪ್ರದಾಯ ಪ್ರಕಾರ ಮಹೋತ್ಸವ ಜರಗುವವು

ಪಿಲಾರು, ಸಾಂತೂರು–ಗ್ರಾಮಗಳ ಗ್ರಾಮ ಸಮಿತಿಯ ಮೆಂಬರರ ಸಭೆಯೊಂದು ತಾ. 21-16-46ರಲ್ಲಿ ಮುದರಂಗಡಿ ಜರ್ಜ್ ಶಾಲೆಯಲ್ಲಿ ಜರಗಿ ಶ್ರೀ. ಯಂ. ಜಿ. ನಜರೇತರು ಅಧ್ಯಕ್ಷರಾಗಿ ಬಹುಮತದಿಂದ ಆರಿಸಲ್ಪಟ್ಟರು.

ನಮಗೆ ಬಂದ ಬಾತ್ಮಿಗಳು— ದ. ಕ. ಜಿಲ್ಲಾ ಬೋರ್ಡು ಮತ್ತು ಮಂಗಳೂರು ಮುನ್ಸಿಪಾಲಿಟಿಯ ಪರಿಹಿನರ ಕಾದಿಟ್ಟ ಸ್ಥಾನಕ್ಕೆ ಶ್ರೀ ಕೆ. ಈಶ್ವರನವರು ನಿಲ್ಲಬೇಕೆಂದು ಹಲವು ಪರಿಹಿನ ಸಹಿಯುಕ್ತ ಬಾತ್ಮಿಯೊಂದು ನಮ್ಮೆಡೆಗೆ ಬಂದಿದೆ.

ಮಿಜಾರು ಎಡಪದವು ಬೋರ್ಡುಶಾಲೆಯು ಹಿ. ಮಾ। ಎ. ಕೊರಗ ಶೆಟ್ಟರ ನಡತೆಯಿಂದಾಗಿ ಅತ್ತೀಚೆಗೆ ಅವನತಿ ಹೊಂದುತ್ತಿದೆ ಎಂದು ಒಬ್ಬ ಗ್ರಾಮಸ್ಥರಿಂದಲೂ ಬಹಳ ಹೀನಾಸ್ಥಿಯಲ್ಲಿದ್ದ ಇದೇ ಶಾಲೆಯು ಶ್ರೀ ಕೊರಗ ಶೆಟ್ರು ಹಿ. ಮಾ।ರಾಗಿ ಬಂದ ಮೇಲೆ ಒಳ್ಳೇ ಸ್ಥಿತಿಗೆ ಬಂದಿರುವುದೆಂದೂ ಆದರೆ ಇತ್ತೀಚೆಗೆ ಊರಿನವರ ಜಗಳದಿಂದಾಗಿ, ಹಿ. ಮಾ।ರು ತಮ್ಮ ಪಾರ್ಟಿಗೆ ಬರಲಿಲ್ಲವಾಗಿ ಕೆಲವು ಸ್ಥಾರ್ಥಿಗಳು ಹೂಡಿರುವ ಕುತಂತ್ರದಿಂದಾಗಿ, ವಿಕೆಟಿಂಗ್‌ನಿಂದಾಗಿ ಮಕ್ಕಳ ಸಂಖ್ಯೆಯು ಕಡಿಮೆಯಾಗಿರುವುದೆಂದೂ, ಅವರ ಜಗಳದಿಂದ ಮಕ್ಕಳ ವಿದ್ಯೆಗೆ ತೊಡಕಾಗಿರುವುದೆಂದೂ ಇನ್ನೊಬ್ಬ ಗ್ರಾಮಸ್ಥರಿಂದಲೂ ಬೇರೆ ಬೇರೆ ಬಾತ್ಮಿಗಳು ಬಂದಿವೆ.

ನಿಖಿಲ ಕರ್ನಾಟಕ ಆಯುರ್ವೇದ ಸಮ್ಮೇಲನ—ಗಣಪತಿ ನಿ. ಕ। ಆ. ಸಮ್ಮೇಲನವು ಇದೇ ಪೆಬ್ರವರಿ ಕೊನೆಯ ವಾರದಲ್ಲಿ ಗವಿಗದಲ್ಲಿ ಜರಗಲಿದ್ದು ಅದಕ್ಕಾಗಿ ಧಾ। ಬಾ। ಶಾಂತಪ್ಪಣ್ಣಾ ಯಳಮಲಿಯವರ ಅಧ್ಯಕ್ಷತೆಯಲ್ಲಿ ಸ್ವಾಪನೆಯಾದ ಸ್ವಾಗತ ಸಮಿತಿಯು ಸಕಲ ಸಿದ್ಧತೆಗಳನ್ನು ಮಾಡುತ್ತಿದೆ. ಕರ್ನಾಟಕದ ಎಲ್ಲ ವೈದ್ಯರೂ ವೈದ್ಯಾಭಿಮಾನಿಗಳೂ ಸಹಕರಿಸಬೇಕಾಗಿ ವಿನಂತಿಸಲಾಗಿದೆ.

ಮದ್ರಾಸ್

ಕರ್ನಾಟಕ ಸೇವಾ ಸಂಘದ— ಆಶ್ರಯದಲ್ಲಿ 27-10-46ರಲ್ಲಿ ಮ್ಯೂಸಿಯಂ ಥಿಯೇಟರಿನಲ್ಲಿ ಸಂಗೀತ ವಿದ್ವಾನ್ ಶ್ರೀ ಎ ಚ್. ನಾರಾಯಣರಾಯರ ಹಿಂದುಸ್ಥಾನೀ, ಕರ್ನಾಟಕ ಸಂಗೀತ ಕಛೇರಿಯು ನಡೆಯಿತು. ಶ್ರೀ ರಾಮಚಂದ್ರ ಗುದಿಹಾಳ ಇವರು ಸುಶ್ರಾವ್ಯವಾಗಿ ಸಿತಾರ ಬಾರಿಸಿದರು. ಶ್ರೀ ನಾಟ್ಯಾಚಾರ್ಯ ಕುಲಕರ್ಣ ಶ್ರೀನಿವಾಸರು ಅಧ್ಯಕ್ಷತೆ ವಹಿಸಿದ್ದರು.

ಬರುವ ನವೆಂಬರ್ ತಿಂಗಳು 9ನೇ ತಾರೀಕಿಗೆ ಮೈಸೂರು ಬಿಳಕು ಪತ್ರಿಕೆ ಸಂಪಾದಕರಾದ ಶ್ರೀಮತಿ ಎಂ. ಆರ್. ಲಕ್ಷ್ಮಮ್ಮನವರು 'ಕನ್ನಡ ಕೆಲಸ' ಎಂಬ ವಿಷಯದ ಕುರಿತು ಭಾಷಣಮಾಡಲಿರುವರು. ಮತ್ತು ಇತರ ವಿನೋದಾವಳಿಗಳು ನಡೆಯಲಿರುವವು.

ಮದರಾಸು ಕ್ರಿಶ್ಚನ್ ಕಾಲೇಜಿನವರೆ—'ಪೀಬರ ಕನ್ನಡ ಕೂಟ'ವು ದಿನಾಂಕ ೩೦ರಲ್ಲು ಶ್ರೀ ಜೇ. ರಾ. ಬಾಗಲೋ ದಿ Dip French Dip German ಇವರ ಅಧ್ಯಕ್ಷತೆಯಲ್ಲಿ ದೀಪಾವಳಿ ದಿನಾಚರಣೆಯನ್ನು ಜರಗಿಸಿತು

ಶ್ರೀ ವಿದ್ವಾನ್ ಈ. ಪಿ. ಹರಿಪಾಸಭಟ್ಟರು 'ಕನ್ನಡ ಸಾಹಿತ್ಯದಲ್ಲಿ ಹೊಸ ಸರಸ' ಎಂಬ ವಿಷಯ ಪುರಾಣ ಕಾವ್ಯಗಳ ವಾಚನ ಸಹಿತ ಭಾಷಣ ಮಾಡಿದ ಬಳಿಕ ತರುಣ ಸಾಹಿತಿಗಳಾದ ಸೇವನದಿರಾಜ ಮುಲ್ಲರು, 'ಕಾರಂತರ ಮೂರು ಚಿತ್ರಗಳು' ಎಂಬ ಕುರಿತು ವಿದ್ವಾತ್ಮಕ ಉಪನ್ಯಾಸವಿತ್ತರು. ಅಧ್ಯಕ್ಷ ಭಾಗಲೋದಿಯವರು 'ಪ್ರಗತಿಪೀಲರ ವಿಕಲಾಟವನ್ನು ಬಣ್ಣಿಸುತ್ತಾ ನಾಯೀ ಜರ್ಮನಿ ಮತ್ತು ಸ್ಪಾನಿನ ಆಧುನಿಕ ಆಭೋಗತಿಯನ್ನು ಪುನಮುಚ್ಚುನಂತೆ ನಿರೂಪಿಸಿದರು. ಕೊನೆಗೆ ಕಾರ್ಯದರ್ಶಿ GDT. ಮೋ. ರಾ. ಪಡ್ಡುಪ್ಪು/ಅವರ ವಂದನಾರ್ಪಣೆ, ಗುರುನಾಥ ರಾಯ ಬೈಂದೂರು ಮತ್ತು ವಿ. ಶ್ರೇಷ್ಠಾನಂದ ಇವರ ಸುಶ್ರಾವ್ಯ ಸಂಗೀತ ನರ್ತನಗಳೊಡನೆ ಸಭೆ ವೈಭವಪೂರ್ವಕವಾಗಿ ಮುಕ್ತಾಯವಾಯಿತು.

ಮದ್ರಾಸ್ ರೇಡಿಯೋದಲ್ಲಿ ಕನ್ನಡ ಭಾಷಣಗಳು—ತಾ. 1 11-46ರಲ್ಲಿ ಲೋಕಸೇವೆಯಲ್ಲಿ ವಿಜ್ಞಾನ ಮತ್ತು ಆಹಾರ ವಿಜ್ಞಾನದ ಕುರಿತು ಶ್ರೀ ಸುಬ್ಬಾ ಜೋಯಿಸ್ ಆವರಿಂದ ಭಾಷಣವಿತ್ತಿಯಿತು. 8 11-46ರ ಸಾಯಂಕಾಲ 7-45 ಗಂಟೆಗೆ 'ಕನ್ನಡಿಗನ ನಾಡು' ಮತ್ತು 'ಚಿರಿತ್ರಕಾರರ ದೃಷ್ಟಿಯಿಂದ' —ಶ್ರೀಮತಿ M. R. ಲಕ್ಷ್ಮಮ್ಮನವರಿಂದ ಭಾಷಣ.

16-11-46 ಸಾಯಂಕಾಲ 7 45 ಗಂಟೆಗೆ 'ಸಾಹಿತ್ಯ ವಿಮರ್ಶ' ಶ್ರೀ ಪಡುಕೋಣೆ ರಮಾನಂದರಿಂದ ನಡೆಯಲಿರುವವು.

ಮದ್ರಾಸ್ ಮೆಡಿಕಲ್ ಕಾಲ್ಸಿಲು ಚುನಾವಣೆ—ಇತ್ತೀಚೆಗೆ ಜರಗಿದ ಈ ಚುನಾವಣೆಯಲ್ಲಿ ಉಡುಪಿ ತಾಲೂಕಿನ, ಈಗ ಚೆಟ್ಟಿನಾಡಿನಲ್ಲಿ ವೈದ್ಯಕೀಯ ವೃತ್ತಿ ನಡಿಸುತ್ತಿರುವ ಡಾ। ಟಿ. ಎನ್। ಶೆಟ್ಟಿ, ಎಮ್ಎ। ಬಿ। ಇವರು ಸ್ಥಾನಕ್ಕೆ ಅರಿಸಿ ಬರಲಿರುವರೆಂಬ ತಿಳಿಸಲು ಸಂತೋಷವಾಗುತ್ತದೆ. ಬಿಳು ಸ್ಥಾನಗಳಿಗೆ 23 ಮಂದಿ ಉಮೇದ್ವಾರರಿದ್ದರೂ ಶ್ರೀ। ಶೆಟ್ಟಿಯವರಿಗೆ ದ್ವಿತೀಯಸ್ಥಾನ ದೊರೆತಿದೆ. ಕ। ಜಿಲ್ಲೆಗೇ ಗೌರವಾಸ್ಪದ.

ಬೊಂಬಾಯಿ— ಬಾಯಿಕೆಳಾದೆ ರಜತಾಚಲ ಹಿಂದೂ ಹೋಟಿಲಿನವರು ತಾ. 2-10-46ರಿಂದ ಹರಿಜನರಿಗೂ ಹೋಟೆಲಿನ ಒಳಗೆ ಪ್ರವೇಶ ಕೊಡುತ್ತಾ ಇರುವರೆಂದೂ ಇದೇ ಮಾದರಿಯನ್ನು ಇತರ ಹೋಟೆಲು ಮ್ಹಾಲಕರು ಅನುಸರಿಸುವುದು ಯೋಗ್ಯವೆಂದೂ, ಮನೆಯವರಾದ ಶ್ರೀ ಜಗನ್ನಾಥ ಶೆಟ್ಟಿ ಬರೆಯುತ್ತಾರೆ.

The Canara Industrial & Banking Syndicate Limited,
Car Street, UDIPI.
ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್
ರಥಬೀದಿ, ಉಡುಪಿ.

ನೋಟೀಸು

ಈ ಕೆಳಗೆ ಹೆಸರು ಕಾಣಿಸಿರುವವರು ಸದರಿ ಬೇಂಕಿನಿಂದ ವಿನ್ಯಾಧಿರಣದ ಈಡಿನ ಮೇಲೆ ಪಡೆದ ಸಾಲದ ಮೊಬಲಗನ್ನಾಗಲೀ ಆಪರ ಬಡ್ಡಿಯನ್ನಾಗಲೀ ಪಾಯಿದೆಗೆ ಕೊಡದೆ ಇರುವುದರಿಂದಲೂ ಸದರಿಯವರು ವ್ಯತಿಪಟ್ಟಿರುವರೆಂದು ತಿಳಿದು ಬಂದಿರುವುದರಿಂದಲೂ ಕೂಡಾ ಪಾ। ತಿ ಮಾಡದಿದ್ದುದರಿಂದ ಬೇಂಕಿಗೆ ಬರತಕ್ಕ ಅಸ್ಸಾಬಡ್ಡಿ ವಜಬುಗಳನ್ನು ಮತ್ತು ಖರ್ಚು ವೆಚ್ಚೆಯನ್ನು ಇವೇ ನವೆಂಬರ ತಿಂಗಳ ತಾ. 23ನೇ ಗುರುವಾರದೊಳಗೆ, ಬೇಂಕಿಗೆ, ಖ್ಯತರ ನಾರೀಸುವಾರರು ಪಾವತಿಸಿದಾದಿ ಈಡಿಟ್ಟ ಆಭರಣವನ್ನು ಬಿಡಿಸಿಕೊಂಡು ಹೋಗುವದೆ ತಪ್ಪಿದಲ್ಲಿ ಸದರೀ ಆಭರಣಗಳನ್ನು ಇವೇ ನವೆಂಬರ ತಿಂಗಳ ತಾ. 30ನೇ ಗುರುವಾರ ದಿನ ಅಪರಾಹ್ನ ಘಂಟೆ 3ಕ್ಕೆ ಸರಿಯಾಗಿ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾದೀತು. ಆಗತ್ಯಪಟ್ಟಲ್ಲಿ ಏಲಮಿನ ತಾರೀಕನ್ನು ಮುಂದರಿಸುವ ಹಕ್ಕು ಬೇಂಕಿಗೆ ಇದೆ. ತಿಳಿದಿರುವುದು.

ಲೋನಿನ ನಂಬ್ರ	ಹೆಸರು ಮತ್ತು ವಿಳಾಸ	ಬೇಂಕಿಗೆ ಬರತಕ್ಕ ಮೊಬಲಗು
92/46	ಕೆ. ನಾಗಪ್ಪ ಉಪಾಧ್ಯ, ಗಣಪಯ್ಯ ಉಪಾಧ್ಯರ ಮಗ, ಕಾರ್ಕಳ, ಪೋಸ್ಟ್ ಸಾಲಿಗ್ರಾಮ, ಉಡುಪಿ.	ಆಸ್ಸು ರೂಪ್ಯಾ 40/- ಮತ್ತು ಆದರ ಮೇಲಣ ತಾ. 24 7 46ರಿಂದ ಸೇರಿದಾ 7ರ ಸಲೆಯಲ್ಲಿ ಪ ಸೂಲು ಪರಿಗಿನ ಬಡ್ಡಿ ಮತ್ತು ಖರ್ಚು.

ಬೇಂಕಿನ ಆಫೀಸು ರಥಬೀದಿ, ಉಡುಪಿ. ತಾ. 30-10-46.

K. Ranganna Bhat,
Agent.

ಸಂಘಟನೆಯಾಗದಿದ್ದರೆ ಸರ್ವನಾಶ ಖಂಡಿತ.

"ಸಂಘಟನೆ ಬೇಕಾದುದು ಸಂರಕ್ಷಣೆಗಾಗಿ; ವಿರಾಟಕೆಗಲ್ಲ ..... ಪರಿಸ್ಥಿತಿ ಕೈಮೀರುವ ಮೊದಲೇ ಎಚ್ಚರಾಗಲಿ."

ಲೇಖಕರು:– ಡಾ. ನಾ. ಸು ಹರ್ಡೀಕರ.

ಕೆಲಕತ್ತೆಯಲ್ಲಿ ಪ್ರಾರಂಭವಾದ ಮಾನವ ಕುಲೆಯ ಬೇಗೆಯು ಇಂದು ದೇಶದ ನಾನಾ ಭಾಗಗಳಲ್ಲಿ ಹಬ್ಬುತ್ತ ಸಾಗಿದೆ. ಇದರ ಪರಿಣಾಮದಿಂದ ಸಹಸ್ರಾವಧಿ ಜನರು ತಮ್ಮ ಪ್ರಾಣಕ್ಕೆ ಕುತ್ತವಾದರು. ಕೋಟ್ಯಾವಧಿ ರೂಪಾಯಿಗಳ ಆಸ್ತಿಪಾಸ್ತಿಗಳ ನಾಶವಾಯಿತು. ಮನೆ, ಮಠ, ಮಸೀದಿಗಳು ನೆಲಸಮವಾದುವು. ಅಹರ್ನಿಶಿ ಸುಟ್ಟು ಭಸ್ಮವಾದುವು. ಈ ತರಹದ ಅಮಾನುಷ ಕೃತಿಗಳು ಇನ್ನೂ ಇಂದಿಗೂ ಅವ್ಯಾಹತವಾಗಿ ನಡೆಯುತ್ತಿದೆ.

ಒಂದು ಸ್ಥಾನದಲ್ಲಿ ಆಜ್ಞಾ ಜನಸಂಖ್ಯೆಯೇ ಹೆಚ್ಚು. ಜನತೆಯ ಈ ಆಜ್ಞಾನದ ಲಾಭವನ್ನು ಆಲ್ಪಸ್ಥಿಯ ಧೂರ್ತರು ತಗೆದುಕೊಂಡು ಒಂದು ಜಾತೀಯ ವಿರುದ್ಧ ಸುಳ್ಳೊಂದು ಸೂಟ್ಯೊಂದು ಹೇಳಿ, ಅಪಪ್ರಚಾರಮಾಡಿ ಇನ್ನೊಂದು ಜಾತಿಯವರನ್ನು ಬಡಿದೆಬ್ಬಿಸಿ ಅವರಿಂದ ಹೊಡಿಬಡಿಯಲಿಕ್ಕಾಗಿ ಬಡಿಪಾಡಲಿಕ್ಕೂ ಹಚ್ಚುತ್ತಿರುವರು. ಇಂಥ ಕೃತಿಗಳಿಗೆ ಬೆಂಬಲಕೊಟ್ಟು ತಮ್ಮ ಆತಂಕ ಉದ್ವೇಗವನ್ನು ಸಾಧಿಸುತ್ತಿರುವ ಪತ್ರಿಕೆಗಳೂ ಅಲ್ಲಲ್ಲಿ ಹುಟ್ಟಿವೆ, ಇಂಥ ಅಪಪ್ರಚಾರದಿಂದ ಉದ್ರೇಕಗೊಂಡ ಅಜ್ಞರು ಒಬ್ಬರನ್ನೊಬ್ಬರು ಇರಿಯುವುದಕ್ಕೂ ಬಡಿಯುವುದಕ್ಕೂ ಅರಂಭಿಸಿದ ನಂತರ ಆಸ್ತಿ ಪಾಸ್ತಿಗಳ ಲೂಟಿ ಮಾಡಿ ಬಟಾಬಯಲುಮಾಡುತ್ತಿರುವವರೆಲ್ಲಿಯ ತಮ್ಮ ಜನರಿಗೆ ಆ ಲೂಟಿಯ ಕೆಲವು ಪಾಲನ್ನು ಕೊಟ್ಟು ಆ ಪರಿಸ್ಥಿತಿಯನ್ನು ಇನ್ನೂ ಹೆಚ್ಚಿಗೆ ಬಡಿದಾಡಸಬ್ಬಿ ಬಳಿದುಡನ್ನು ತಾವು ಜೋಚಿಕೊಂಡು ಹೋಗುತ್ತಿರುವುದು ಈಗ ಅಲ್ಲಲ್ಲಿ ನಡೆಯುತ್ತಿರುವ ಘಟನೆ. ಇದೆಲ್ಲವೂ ನಡಿಯುತ್ತಿರುವದು ಜಾತೀಯ, ಧರ್ಮದ ಮತ್ತು ದೇವರ ಹೆಸರಿನಲ್ಲಿ!

ಇಂಥ ಆರಾಂತ ಪರಿಸ್ಥಿತಿಯುಂಟಾವಾಗ ಚಿತ್ತಸ್ವಾಸ್ಥ್ಯವು ಸಸ್ಪವಾಗುವದು; ಸಾರಾಸಾರ ವಿಚಾರ ಬುದ್ಧಿಯು ಇಲ್ಲದಂತಾಗುವದು, ಪ್ರಸಂಗಾವಧಾನವು ಮಾಯವಾಗುವದು ನುತ್ತು ಮನುಷ್ಯನು ಕ್ರೋಧಾಂಧನಾಗಿ ಅರಿವುಗೆಟ್ಟು ಅತ್ಯಾಚಾರವನ್ನಾರಂಭಿಸುವನು. ಇದರಿಂದ ಗಲಭೆಗಾರರಿಗೆ ಪ್ರತೀಕಾರವಿಲ್ಲದಂತಾಗಿ ಅವರ ತಮ್ಮ ಆಸ್ತಿ, ವಿತ್ತ, ಪ್ರಾಣ ವಿನಾಶಕ ಚಟುವಟಿಕೆಗಳನ್ನು ಅನಿರ್ಬಂಧವಾಗಿ ಸಾಗಿಸುವರು. ಅದರ ಪರಿಣಾಮವಾಗಿ ಸಮಾಜಕ್ಕೆ ಎಣೆಕೆಇಲ್ಲದಷ್ಟು ಹಾನಿಯಾಗುವದು.

ಇಂದಿನ ವರೆಗೆ ದೇಶದ ನಾನಾ ಭಾಗಗಳಲ್ಲಿ ನಡೆದ ಘಟನೆಗಳತ್ತ ನೋಡಿದರೆ ನಾವು ಕೇವಲ ಪೋಲೀಸರನ್ನಾಗಲೀ ಅಥವಾ ಸೈನಿಕರನ್ನಾಗಲೀ ನಂಬಿಕೊಂಡು ಕುಳಿತರೆ ಸಾಲದೆಂಬುದು. ಅದಕ್ಕೆ ಜನತೆಯೂ ಸಂಘಟಿತವಾಗಬೇಕು. ಸಂಘಟನೆಯು ಮನಸಾ ಮಾಡಿದಂಕ್ಷಣದೇ ಉಂಟಾಗಲಾರದು. ಅದಕ್ಕೆ ಪೂರ್ವ ಸಿದ್ಧತೆಬೇಕು. ಮಾನಸಿಕ ಸಿದ್ಧತೆಯೂ ಬೇಕು. ಪರಿಸ್ಥಿತಿಯು ಹೇಳಿ ಕೇಳಿ ಬರುವದಿಲ್ಲ. ಕೇಡಿಗಳು ದಿನವನ್ನು ನೊತ್ತು ಪಡಿಸಿ ಗಲಭೆಯನ್ನಾರಂಭಿಸುವದಿಲ್ಲ ಗಲಭೆಯು ಒಮ್ಮೆ ಪ್ರಾರಂಭವಾದರೆ ಆನಂತರ ಉದ್ಭವಿತವಾಗುವ ಪರಿಸ್ಥಿತಿಯಲ್ಲಿ ಸಂಘಟನೆ ಮಾಡುವದೇತಾ ತೀರ ಅಸಾಧ್ಯ ನುವು. ಆದುದರಿಂದ ಶಾಂತ ವಾತಾವರಣದಲ್ಲಿ ಶಾಂತತೆಯನ್ನು ಕಾಯುವದಕ್ಕೂ ಆರಾಂತ ವಾತಾವರಣದಲ್ಲಿ ಶಾಂತತೆಯನ್ನು ಪ್ರಸ್ಥಾಪಿಸುವದಕ್ಕೂ ಪ್ರತಿಯೊಂದು ಹಳ್ಳಿ ಪಟ್ಟಣದಲ್ಲಿ ಒಂದೊಂದು ತುಡವು ನಿರ್ಮಾಣವಾಗುವದು ಅತ್ಯವಶ್ಯವಿದೆ. ಇಷ್ಟೇ ಅಲ್ಲದೆ ಪ್ರತಿಯೊಬ್ಬರು ಬರಬಹುದಾದ ಪರಿಸ್ಥಿತಿಯನ್ನು ಪರಿಣಾಮಕಾರಿಯಾಗುವಂತೆ ಎದುರುಸುಸ ಸಿದ್ಧತೆಮಾಡಿಕೊಳ್ಳುವದೂ ಅಷ್ಟೇ ಆಗತ್ಯದ ವಿಷಯವಾಗಿದೆ. ಪುಂಡರ ಪುಂಡಾಟಿಕೆಯು ನಾವು ದುರ್ಬಲರಿದ್ದರೆ ಮಾತ್ರ ಜಾಗುತ್ತದೆ ನಾವು ಬಲಹೀನರಿದುವೆಂದು ಗೊತ್ತಾದರೆ ಮಾತ್ರ ಪುಂಡರು ಏರಿಬರುವರು. ನಾವು ಸುಸಂಘಟಿತರಿದ್ದರೆ ನಮ್ಮ ಮೇಲೇರಿ ಬರುವ ಮುನ್ನ ಪ್ರತಿಪಕ್ಷಿಯು ಅನೇಕ ಸಾರೆ ವಿಚಾರ ಮಾಡಬೇಕಾಗುವದು. ಸ್ವಸಂರಕ್ಷಣೆಯು ಆವಶ್ಯಕವಿದ್ದರೂ ಸ್ವಸಂರಕ್ಷಣೆಯ ಸಂಗಡ ಆರ್ತರ ಸಂರಕ್ಷಣೆಯೂ ಅಷ್ಟೇ ಮಹತ್ವದ್ದಿದೆ. ಯಾಕೆಂದರೆ ನಾವು ಬೇರೆ ಬೇರೆಯಾಗಿದ್ದರೆ ಗಲಭೆಗಾರರಿಗೆ ನಮ್ಮನ್ನು ಕೆಣಕಲು ಒಳ್ಳೇ ಅನುಕೂಲವಾಗುವದು. ಆದರೆ ಆ ದೇ ನಾವು ಒಂದುಗೂಡಿ ಸುಸಂಘಟಿತ ಸಂಸ್ಥೆಯ ಶಕ್ತಿ ಇದೆಯೆಂದು ಅವರಿಗೆ ತಿಳಿದರೆ ನಮ್ಮನ್ನು ಯಾರೂ ಎಂದಿಗೂ ಕೆಣಕಲಾರರು.

ತಮ್ಮ ಉದ್ವೇಶ ಸಾಧನೆಗಾಗಿ ಈಗ ದೇಶದಲ್ಲಿ ಅನೇಕರು ಅನೇಕ ತರಹದ ಪ್ರಚಾರ ನಡೆಸಿ ಅಜ್ಞ ಜನರನ್ನು ಹುರಿದುಂಬಿಸಿ ಅವರಿಂದ ಆನಿಷ್ಟಿತ ಕೃತಿಗಳನ್ನು ನೂಡಿಸುತ್ತಿರುವದಕ್ಕೆ ನೌಖಾಲಿ, ತಿಪ್ಪೇರಾ, ದಾಕಾ, ಮುಂಬಯಿ ಮೊದಲಾದ ಸ್ಥಳಗಳಲ್ಲಿಯ ಘಟನೆಗಳು ಪ್ರತ್ಯಕ್ಷ ಸಾಕ್ಷಿಗಳಾಗಿವೆ.

ಆ ಭಾಗಗಳಲ್ಲಿ ಅಬಲೆಯರ ಮಾನಭಂಗ, ತರುಣಿಯರ ಆಪಹಾರ, ಬಾಲಕರ ಸಂಹಾರ ಮತ್ತು ಅಬಾಲ ವೃದ್ಧರ ಕೊಲೆ, ಆಸ್ತಿಪಾಸ್ತಿಗಳ ಸುಲಿಗೆ, ಇವೆಲ್ಲವೂ ಜಾತಿಯ ಹೆಸರಿನಲ್ಲಿ ನಡೆಯುತ್ತಿವೆ. ಬೆಳಗಾಂವಿ, ವಿಜಾಪುರ, ಧಾರವಾಡ ಜಿಲ್ಲೆಗಳ ಕೆಲವು ಭಾಗಗಳಲ್ಲಿ ನಡೆಯುತ್ತಿರುವ ಸುಲಿಗೆಯ ಮತ್ತು ದರೋಡೆಯ ಹಾವಳಿಯು ಕಾಂಗ್ರೆಸ್ ಮತ್ತು ಗಾಂಧೀಜಿ ಜಯಜಯಜಾರದಲ್ಲಿ ನಡೆಯುತ್ತಿದೆ. ಹುಬ್ಬಳ್ಳಿಯಲ್ಲಿಯ ಳಿ ಜನ ಪ್ರಮುಖ ಹಿಂದೂ ನಾಗರಿಕರಿಗೆ ಒಂದು ಅನಾಮಧೇಯ ಪತ್ರವು ಬಂದಿದೆ. ಆ ಜನರಿಗೆ ಹಣ ವನ್ನು ಕೊಡದಿದ್ದರೆ ಈ ೪೦ ಜನರನ್ನೂ ಗುಂಡಿಕ್ಕಿ ಕೊಲ್ಲಲಾಗುವದೆಂದು ಆದರಲ್ಲಿ ಬರೆಯಲಾಗಿತ್ತು. ಬರೆದವರು ಸಿಂದುತ್ವದ ರಕ್ಷಕರಂತೆ! ಹಣ ಕೊಡದಿದ್ದರೆ ಗುಂಡಿಕ್ಕಿಸಿಕೊಳ್ಳುವವರೂ ಒಂದುಗಳೇ! ಇದರಿಂದನು ಸ್ಪನಿತವಾಗುವದು! ಜುಂಗೂ ಕೊಲೆಪಾತಕೆಗಳಿಗೂ ಹತ್ಯಾಕಾರಿಗಳಿಗೂ ಗಲಭೆಗಾರರಿಗೂ ಜಾತಿಭೇದವಿಲ್ಲ ಅವರಿಗೆ ಬೇಕಾದುದು ಹುಡಾಟಿಕೆ, ಗಲಭೆ, ಸುಲಿಗೆ, ಕೊಲೆ ಇತ್ಯಾದಿ. ಇಂದು ಅಲ್ಲಿ ಆದದ್ದು ನಾಳೆ ಇಲ್ಲಿಯೂ ಆಗುವದಿಲ್ಲವೆಂದು ಹೇಳುವವರಿದ್ದಾರೆ?

ಇವೆಲ್ಲ ಘಟನಾವಳಿಗಳ ಕಾರಣವನ್ನು ಹುಡುಕುವದಕ್ಕಿಂತ ಈ ಘಟನಾವಳಿಗಳ ಕಾಲದ ಪರಿಸ್ಥಿತಿಯನ್ನು ಕಡೆಗೆಡಿದು ನೋಡಿ ನಾವು ಸಾರ ಕಲಿಯಬೇಕಾಗಿದೆ. ಗರ್ವರ್, ಸುಂಪ್ರಿಮಂಡಳ, ಪೋಲೀಸ ಪಡೆ, ಸೈನ್ಯ ಎಲ್ಲವೂ ಇದ್ದರೂ ನೌಖಾಲಿ, ಢಾಕಾದಲ್ಲಿ ಇಂದಿಗೂ ಅನ್ಯಾಹತವಾಗಿ ಹತ್ಯಾಕಾಂಡವು ನಡೆದಿಸೆ ಸಮಗ್ರ ಬಂಗಾಲವೇ ಭಯಗ್ರಸ್ತವಾಗಿದೆ. ಇದಕ್ಕೆ ಕಾರಣವೆಂದರೆ ಕೊಲೆಪಾತಕೆಗಳಾದ ಕೇಡಿಗಳನ್ನು ಎದುರಿಸಲು ಸುಸಂಘಟಿತ ಸಂಸ್ಥೆಯು ಅಲ್ಲಿ ಇಲ್ಲದ್ದು. ಇದನ್ನರಿತೇ ಶ್ರೀ ವರಿಷ್ಟಂಬ್ರ ಜೋಸರ್ ಈ ತರಹದ ಸಂಘಟನೆಗಾಗಿ ಇಂದು ಎಲ್ಲರನ್ನೂ ಬಿಟ್ಟು ಆದ ಕ್ಕಾಗಿ ಬೊಂಕಕಟ್ಟಿದ್ದಾರೆ.

"ಬಂಗಾಲದಲ್ಲಿ ಆ ತರಹದ ಘಟನೆಗಳಾದವೆಂದು ಅವರು ಸಂಘಟಿತರಾಗಲು, ನಮಗೇಕೆ" ಎಂದು ಕೇಳುವದು ಮೂರ್ಖತನದ ಮಾತು. ಇಂದು ಬಂಗಾಲದಲ್ಲಿ ಆದದ್ದು ನಾವು ಎಚ್ಚರದಿಂದ ನಡೆಯದಿದ್ದರ ನಾಳೆ ಇದ್ದಿಯೂ ಆಗಲಾರದೆಂದು ಹೇಳುವರಾರು? ಮೇಲಾಗಿ ನಾವು ಸಂಘಟನೆ ಮಾಡಿಕೊಳ್ಳುವದು ನಮ್ಮ ಆತ್ಮರಕ್ಷಣೆಗಾಗಿ, ನಮ್ಮ ಕುಟುಂಬ, ಆಸ್ತಿಪಾಸ್ತಿಗಳ ರಕ್ಷಣೆಗಾಗಿ ನಮಗೆ ಏರಾಟಿಕೆ ಬೇಕಿಲ್ಲ. ಯಾರ ಮೇಲೂ ನಾವು ಏರಿ ಹೋಗಬೇಕಾಗಿಲ್ಲ. ನೌಖಾಲಿಯಲ್ಲಿ ಹುಂತೆ ಯಾರ ಮೇಲೂ ಏರಿಹೋಗಿ ಕೊಲೆ, ಸುಲಿಗೆ, ಧರ್ಮಾಂತರಗಳನ್ನು ಮಾಡುವದು ನಮ್ಮ ನುನದಲ್ಲಿ ಇಲ್ಲ. ಕೇವಲ ನಮ್ಮ, ನಮ್ಮ ಕುಟುಂಬದ, ನಮ್ಮ ಓಣ ಕೇರಿಯ, ನಮ್ಮ ನಗರದ ರಕ್ಷಣೆಗಾಗಿ ನಾವು ಸುಸಂಘಟಿತರಾಗಬೇಕಾಗಿದೆ ಪ್ರಸಂಗ ಬಂದಲ್ಲಿ ನಮ್ಮ ಪ್ರಾಣವನ್ನೂ ಕೊಟ್ಟು ನೆಮ್ಮದಿಯನ್ನುಂಟು ಮಾಡುವದು ನಮ್ಮ ಕರ್ತವ್ಯವಾಗಿದೆ. ಆದುದರಿಂದ ಕರ್ನಾಟಕದ ಎಲ್ಲ ತರುಣರೂ, ಯಾವದೇ ಒಳಜಾತಿ, ಸಕ್ಷಪಂಗಡಗಳನ್ನೂ ರಾಜಕೀಯ ಭಿನ್ನಾಭಿಪ್ರಾಯಗಳನ್ನೂ ಮುಂದೆ ತರದೆ ಕೂಡಲೇ ಸುಸಂಘಟಿತರಾಗುವದು ಶ್ರೇಯಸ್ಕರ. ಪಕ್ಷಪಂಗಡಗಳ ಪೈಸಾನಲ್ಲಿ ತತ್ವದ ಮರೆಯಲ್ಲಿ, ರಾಷ್ಟ್ರೀಯತೆಯ ಹೋಗಿನಲ್ಲಿ, ವರ್ಗಕಲಹ, ಜಾತಿ ವೈಷಮ್ಯ, ಪಕ್ಷಿ ದ್ವೇಷದ ವಿಷಾಣುಗಳನ್ನು ಹರಡುತ್ತಿರುವ ನಮ್ಮಲ್ಲಿಯ ಹಲಕೆಲವು ವ್ಯಕ್ತಿಗಳು ಈ ಜ್ವರದು ಸುತ್ತಲೂ ನೋಡಿ ವಿನಾಶಕ್ಕೆ ಮೂಲವಾದ ತಮ್ಮ ಚಟುವಟಿಕೆಗಳನ್ನು ಕೂಡಲೆ ನಿಲ್ಲಿಸುವದೂ ಒಂದು ಬಗೆಯ ಸೇವೆಯಾಗಿದೆ. ಒಂದೊಮ್ಮೆ ಆ ವ್ಯಕ್ತಿಗಳು ಹಾಗೆ ನುನ್ಮನಾಗದಿದ್ದರೆ ಆಜ್ಞ ಜನತೆಯಲ್ಲಿ ಅಸಹ್ಯ ಚಾರವಾಗಿ ಅವರಿಂದ ಹೆಚ್ಚಿನ ಒಡಕು ದ್ವೇಷಾಸೂಯೆಗಳು ಬೆಳೆಯದಂತೆ ನೋಡಿಕೊಳ್ಳುವದಕ್ಕಾಗಿ ಸಮಾಜ ಸ್ವಾಸ್ಥ್ಯ ಕಾಯಬೇಕೆನ್ನುವ ವಿಚಾರವಂತ ಜನತೆಯು ಈಗಲಾದರೂ ಮುಂದೆ ಬರಲಿ. ಇಲ್ಲದೆ ಹೋದರೆ ಬೆಂಕಿ ಹತ್ತಿದ ನಂತರ ಬಾವಿ ತೋಡ ಹೊರಟಂತಾದೀತು. ಜಾಗ್ರತ!

ANNOUNCEMENT
THE VIJAYA BANK LTD.

To the Share Holders

(Consent of the Central Government has been obtained to this issue under defence of India Rule 94-A It must be distinctly understood that in giving this consent the Government of India do not take any responsibility for the financial soundness of any scheme or for the correctness of any of the statements made or opinions expressed therein)

It has been resolved to issue 4000 new shares of the Bank of the nominal value of Rs. 50/- per share at a premium of Rs. 5/- per share and admission fee of Re. 1/- per share. A - of Rs. 16/- per share (Rs 10/- towards share capital deposit, Rs. 5/- towards premium and Re 1/- towards admisssion fee) is payable on application and Rs. 15/- on allotment. The issue is confined in the first instance to the existing share-sholders who hold 3 shares or more in the proportion of one share to every three shares held by them. If acceptance to this offer is not received by the Head office or any of its branches, along with the necessary amount on or before 25-11-46, it will be deemed to have been declined.

The terms of issue and other particulars along with the application form have been separately despatched to the shareholders who hold 3 or more shares

Applications for additional shares from the shareholders and applications for shares from other persons belonging to the Bunt alias Nadava Community may be made along with the necessary amount on or before 25-11-46. But such applications will be considered only subject to shares shall be at the discretion of the Directors.

The subcription to the shares may be closed at any time earlier than 25-11-46 as soon as it is estimated that the Capital offered is taken up, except to the existing shareholdere who hold 3 or more shares to the extent of shares they are entitled

Head office, Mangalore. 3-1-1946.

P. Mahabala Shetty, SECRETARY.

ದಿ ಮೂಲ್ಕಿ ಬ್ಯಾಂಕ್, ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿವೃಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬ್ಯಾಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,
Moolky, S. K.

ಮಂಗಳೂರು

ಸೈಂಟ್ ಎಲೋಶಿಯಸ್ ಕಾಲೇಜಿನ ದಿನಾಚರಣೆಯು—ಇತ್ತೀಚೆಗೆ ಸಾಲಿಸಿಟರ್ ಸೆಕ್ರೆಟರಿ ಮಿ. ಎಲ್. ಸಿ. ಪ್ಯಾಸ್ ಅವರ ಅಧ್ಯಕ್ಷತೆಯಲ್ಲಿ ಜರಗಿತು. ರೆಕ್ಟರ್ ಮತ್ತು ಪ್ರಿನ್ಸಿಪಾಲರಾದ ರೆ. ಫಾ। ಜೆ.ಎ. ಪಿ. ಕೊಯಿಟೋ, ಎಸ್. ಜೆ. ಅವರು ವರದಿಯೊದುತ್ತಾ ಕಾಲೇಜಿನ ಹೊಸ ಕಟ್ಟಡಕ್ಕೆ 5 ಲಕ್ಷ ಖರ್ಚಾಗುವುದೆಂದೂ, ವಿದ್ಯಾರ್ಥಿಗಳ ಒಟ್ಟು ಸಂಖ್ಯೆ 2368ರಲ್ಲಿ ಕಾಲೇಜ್ ವಿದ್ಯಾರ್ಥಿಗಳು 881 ಮಂದಿ ಇರುವರೆಂದೂ ತಿಳಿಸಿದರು. ಶ್ರೀಮತಿ ಪಾಯಸರು ಬಹುಮಾನ ವಿತರಣ ಮಾಡಿದ ಮೇಲೆ ಅಧ್ಯಕ್ಷರು ಕಾಲೇಜಿನ ಚಟುವಟಿಕಗಳನ್ನು ಪ್ರಶಂಸಿಸಿ ಈ ಸಂಸ್ಥೆಗೆ ಸರಕಾರದಿಂದ ಉದಾರವಾದ ಗ್ರಾಂಟು ದೊರೆಯಬೇಕೆಂದರು.

ಡಿ. ಸಿ. ಎಮ್. ಶಾಲೆ ಮುಚ್ಚಿ ಬಾರದು—ನುಂಗಳೂರು ಲೇಬರ್ ಲೀಗಿನ ಆಶ್ರಯದಲ್ಲಿ ತಾ. 20ರಲ್ಲಿ ಹರಿಜನ ಸಭೆಯೊಂದು ರಘುನಾಥಯ್ಯ ಸ್ಮಾರಕ ಭವನದಲ್ಲಿ ಜರಗಿತು. ಡಾ। ಎಫ್. ಎಚ್. ಒಜೆಯರ್ ಅಧ್ಯಕ್ಷತೆ ವಹಿಸಿದ್ದರು. ಸರ್ವೆಂಟ್ಸ್ ಬಿಫ್ ಇಂಡಿಯಾ ಸೊಸ್ಯಾಟಿಯವರು ಡಿ ಸಿ. ಎಮ್. ಶಾಲೆಯನ್ನು ಮುಚ್ಚುವುದಾಗಿ ಮಾಡಿದ ನಿರ್ಣಯವನ್ನು ಶ್ರೀ ಕೆ. ಈಶ್ವರ, ಎಮ್. ಎಲ್. ಎ. ಅವರು ಖಂಡಿಸಿ ಮಾತನಾಡಿದರು. ಶಾಲೆಯನ್ನು ಮುಚ್ಚುವುದರ ಬದಲಾಗಿ ಹರಿಜನ ವಿದ್ಯಾರ್ಥಿಗಳಿಗೆ ಬಿಟ್ಟು ಕೊಡುವುದು ಯುಕ್ತವೆಂದು ಸೂಚಿಸಿದರು.

ಜಿಲ್ಲಾ ಬೋರ್ಡ ಚುನಾವಣಾ ಘೋಷಣೆ

ರಚನಾತ್ಮಕ ಕಾರ್ಯಕ್ರಮಗಳನ್ನು ಕೈಕೊಂಡು ಜಿಲ್ಲೆಯ ಗ್ರಾಮಗಳಲ್ಲಿ ಜೀವನಮಟ್ಟವನ್ನು ಏರಿಸಿಕೊಡುವ ಮುಖ್ಯ ಉದ್ದೇಶದಿಂದ ತಾ. 6-10-46ರಲ್ಲಿ ಜಿಲ್ಲೆಯ ಕೇಂದ್ರ ಸ್ಥಳವಾದ ಮತ್ತು ಪಳ್ಳಿಗಳ ಮಧ್ಯೆ ಇರುವ ಕಾರ್ಕಳದಲ್ಲಿ ಶ್ರೀಯುತ ಕೆ. ಬಿ. ಜಿನರಾಜ ಹೆಗ್ಡೆರ ಅಧ್ಯಕ್ಷತೆಯಲ್ಲಿ ಜಿಲ್ಲೆಯ ಎಲ್ಲಾ ಕಡೆಯಿಂದಲೂ ಬಂದಿದ್ದ ಸಾರ್ವಜನಿಕ ಕೆಲಸಗಳಲ್ಲಿ ನುರಿತ ಹಲವು ಮಹನೀಯರ ಸಮ್ಮುಖದಲ್ಲಿ ಪಿ. ಕೆ. ಜಿಲ್ಲಾ ಗ್ರಾಮೋದ್ಧಾರ ಸಂಘವೆಂಬ ಸಂಸ್ಥೆಯು ಸ್ಥಾಪಿಸಲ್ಪಟ್ಟಿದೆ. ಈ ಉದ್ದೇಶವನ್ನು ಕಾರ್ಯರೂಪಕ್ಕೆ ತರಲು ಹಲವು ವಿಧಾನಗಳಲ್ಲಿ ಒಂದು ವಿಧಾನವೆಂದರೆ ಪಟ್ಟಣಗಳಿಗೆ ಮುನಿಸಿಪಾಲಿಟಿಗಳು ಪಂಚಾಯತುಗಳು ಇರುವಂತೆ ಗ್ರಾಮೋದ್ಧಾರಕ್ಕೆ ಡಿಸ್ಟ್ರಿಕ್ಟ್ ಬೋರ್ಡ ಇರುವ ಕಾರಣ ಆ ಸಂಸ್ಥೆಯ ಮೂಲಕ ಗ್ರಾಮೋದ್ಧಾರ ಕಾರ್ಯಗಳನ್ನು ಮುಂತುವರ್ಜಿಯಿಂದ ವಹಿಸಿಕೊಳ್ಳುವುದು. ಆ ಬಗ್ಗೆ ಜಿಲ್ಲಾ ಬೋರ್ಡಿನ ಈಗಿನ ಉತ್ಪತ್ತಿಯನ್ನು ಅಭಿವೃದ್ಧಿ ಪಡಿಸಲು ಉಪಾಯಗಳನ್ನು ಕಂಡುಹಿಡಿದು ಆ ಹಣವು ಜಿಲ್ಲೆಯ ಹಳ್ಳಿಗಳ ಉದ್ಧಾರಕ್ಕಾಗಿ ಉಪಯೋಗಿಸಲ್ಪಡುವಂತೆ ಸೂಚಿಸಲಾಯಿತು. ಹಾಗೆ ಮಾಡಬೇಕಾದರೆ ಜಿಲ್ಲಾ ಬೋರ್ಡಿಗೆ ಉಮೇದ್ವಾರರಾಗಿ ಹೋಗುವ ಸದಸ್ಯರು ಸಾಂಘಿಕ ರೀತಿಯಿಂದ ಆರಿಸಲ್ಪಟ್ಟು ಕೆಲಸಮಾಡುವವರಾಗಬೇಕು ಈ ಉದ್ದೇಶದಿಂದ ಬರುವ ಜಿಲ್ಲಾ ಬೋರ್ಡು ಚುನಾವಣೆಗೆ ಸಂಘಪಕಡೆಯಿಂದ ನಿರ್ಣಾಪ್ಟಿಗ್ಯಿ ಮತ್ತು ಕಾರ್ಯದಕ್ಷತೆಯುಳ್ಳ ಉಮೇದ್ವಾರರನ್ನು ಏಲ್ಲಿಸಬೇಕೆಂದು ನಿರ್ಣಯಿಸೋಣಾಗಿಯಿದೆ. ಇದುವರೆಗೆ ನಮ್ಮ ಜಿಲ್ಲೆಯಲ್ಲಿ ಸಾಂಘಿಕ ರೀತಿಯಿಂದ ಬೋರ್ಡು ನುಮಾಂತರ ಹಳ್ಳಿಗಳ ಪ್ರಯೋಜನದ ಬಗ್ಗೆ ಹೆಚ್ಚಿನ ಕೆಲಸ ಆಪತೆ ಕಂಡುಬರುವುದಿಲ್ಲ. ಈ ಕೊರತೆಯನ್ನು ನಿವಾರಿಸಿ ಜಿಲ್ಲಾ ಬೋರ್ಡಿನ ಉತ್ಪತ್ತಿಯನ್ನು ಜಾಸ್ತಿಪಡಿಸಲು ಹಲವು ವಿಧಾನಗಳನ್ನು ಕಂಡುಹಿಡಿದು ಹಳ್ಳಿಗಳ ಸೌಕರ್ಯಕ್ಕೆ ಅತೀ ಅಗತ್ಯವಾದ ಈ ಕೆಳಗಿನ ಮುಖ್ಯ ಕಾರ್ಯಕ್ರಮಗಳನ್ನು ಜಾರಿಗೆ ತರಲು ಈ ಸಂಘದ ಕಡೆಯಿಂದ ಜಿಲ್ಲಾ ಬೋರ್ಡಿಗೆ ಆರಿಸಿಬರುವ ಸದಸ್ಯರು ಪ್ರಯತ್ನಮಾಡುವರು.

೧ ಹಳ್ಳಿಗಳಲ್ಲಿ ಹೊಸ ಆಸ್ಪತ್ರೆಗಳನ್ನು ತೆರೆಯುವದು ಮತ್ತು ಸೂಲಗಿತ್ತಿಯರ ಏರ್ಪಾಡು ಮಾಡುವದು. ೨ ಹೊಸ ರಸ್ತೆಗಳನ್ನೂ ಸೇತುವೆಗಳನ್ನೂ ತೆರೆಯುವದು. ೩ ಪ್ರತಿ ಗ್ರಾಮದಲ್ಲಿಯೂ ಶಾಲೆಗೆ ಹೋಗುವ ಪ್ರಾಯದ ಮಕ್ಕಳಿಗೆ ಖಡ್ಡಾಯವಾಗಿ ಪ್ರಾಥಮಿಕ ಶಿಕ್ಷಣವನ್ನು ಕೊಡುವ ಏರ್ಪಾಡು ಮಾಡುವದು

ಅದುವರಿಂದ ಬರುವ ಜಿಲ್ಲಾ ಬೋರ್ಡು ಚುನಾವಣೆಯಲ್ಲಿ ಮತದಾರರೆಲ್ಲರೂ ಈ ಸಂಘದ ಕಡೆಯಿಂದ ನಿಲ್ಲಿಸಲ್ಪಡುವ ಉಮೇದ್ವಾರರಿಗೇನೇ ತಮ್ಮ ಪವಿತ್ರವಾದ ಮತಗಳನ್ನು ಕೊಟ್ಟು ಅವರು ಪ್ರಜಂತ ಬಹುಮತದಿಂದ ವಿಜಯಿಗಳಾಗುವಂತೆ ಮಾಡಿ ಅವರ ಮುಖಾಂತರ ಹಳ್ಳಿಗಳಿಗೆ ಬೇಕಾದ ಸೌಕರ್ಯಗಳನ್ನು ಹೊಂದುವರು ಎಂದು ಆಶಿಸೋಣಾಗುತ್ತದೆ.

ಕಾರ್ಕಳ 26 10-46 } ಎಂ ಎಸ್ ಅಧಿಕಾರಿ, ಕಾರ್ಯದರ್ಶಿ.

ವಿನಂತಿ

ದಕ್ಷಿಣ ಕನ್ನಡ ಜಿಲ್ಲಾ ಬೋರ್ಡಿನ ಹಿರಿಯಡ್ಕ-ಉದ್ಯಾವರ ಸೆಂಟರಿನ ಮತದಾರರಲ್ಲಿ ಹಿರಿಯಡ್ಕ ಶ್ರೀ ವೀರಭದ್ರ ದೇವಸ್ಥಾನದ ಆಡಳ್ತೆಯ ಮೊಕ್ತೇಸರ ಎ ಎಮ್. ನಾಗಣ್ಣ ಹೆಗ್ಡೆಯು ಮಾಡುವ ವಿನಂತಿ.

ಪ್ರಿಯ ಮಹಾಶಯರೇ, ಕಳೆದ ಸಲ ನಡೆದ ಜಿಲ್ಲಾ ಬೋರ್ಡಿನ ಉಪಚುನಾವಣೆಯಲ್ಲಿ ನೀವೆಲ್ಲರೂ ನಿಮ್ಮ ಬಹುಮತ ಬಲದಿಂದ ನನ್ನನ್ನು ನೆಂಬರನಾಗಿ ಆರಿಸಿದ್ದಕ್ಕಾಗಿ ಸದ್ರಿ ಬೋರ್ಡಿನಲ್ಲಿ ನಾನು ಮಾಡಿದ ಜನತಾಸೇವೆಯ ಕೆಲಸಂಗಡವನ್ನು ಈ ಕೆಳಗೆ ಸಂಕ್ಷೇಪವಾಗಿ ವಿವರಿಸಿ ತನ್ಮೂಲಕ ನನ್ನ ಕೃತಜ್ಞತೆಯನ್ನು ನಿಮ್ಮೆಲ್ಲರಿಗೂ ಅರ್ಪಿಸಬೇಕಾಗಿ ಅಪೇಕ್ಷಿಸುತ್ತೇನೆ.

೧. ಉಡುಪಿ ಬೋರ್ಡು ಹೈಸ್ಕೂಲನ್ನು ಉಳಿಸುವಲ್ಲಿ ಮಾಡಿದ ಪ್ರಯತ್ನ. ೨. ರಸ್ತೆಯ ಮಾರ್ಜಾನಿನಲ್ಲಿ ಹಾಕುವ ಹಣಗಾಮಿ ಜಪ್ತರಗಳಿಗೆ ಹೊರಿಸುತ್ತಿದ್ದ ತೆರಿಗೆಯ ಅತೀ ಕಡಿಮೆ ದರಕ್ಕೆ ಇಳಿಸಿದ ವಿಷಯ. ೩. ಪಿರಿಯಡ್ಡ ಬೋರ್ಡು ಹಾಯರ್ ಎಲಿಮೆಂಟರಿ ಶಾಲೆಯ ನೂತನ ಕಟ್ಟಡದ ಏರ್ಪಾಡನ್ನು ಆಲ್ಲದೆ ಆದರ ಅನ್ನಾವಾಸ್ಥೆಯಲ್ಲಿ ಮಾಡಿದ ಕೆಲಸ. ೪. ಉದ್ಯಾವರ ಪಿಂದುಸ್ಥಾನಿ ಶಾಲೆಯು ಹೀನಾವಸ್ಥೆಯಿಂದ ಏಳಿದುಯೋಗುವ ಕಾಲಕ್ಕೆ ಪ್ರಯತ್ನಪೂರ್ವಕ ಅದನ್ನು ಉಳಿಸಿ ಆಪನ್ನು ಉನ್ನತ ಸ್ಥಿತಿಗೆ ತರುವಲ್ಲಿ ಕೈಕೊಂಡ ಕೆಲಸ. ೫. ಉದ್ಯಾವರ ಸೆಂಟರಿನ ಡಿ ಬೋರ್ಡಿನ ಸ್ವಾಧೀನ ಇರುವ ಏಳರಸ್ತೆ, ರಸ್ತೆಗಳನ್ನು ಉನ್ನತಾವಸ್ಥೆಗೆ ತಂದಿದುದು.

ಇವೇ ಮೊದಲಾದ ಕೆಲವು ಸೇವೆಗಳನ್ನು ನಲ್ಲಿಸಿ ನಿಮ್ಮೆಲ್ಲರ ಅನುಗ್ರಹಕ್ಕೆ ಪಾತ್ರನಾಪೆ ವಿಷಯ ಈ ಸೂಚಕ ನಿಮ್ಮೆಲ್ಲರ ಅವಗಾಹನೆಗೆ ತರಲು ತುಂಬಾ ಸಂತೋಷ ಪಡುತ್ತೇನೆ

ಇದೇ ಬರುವ ದರಂಬ್ಲು ೧೬ನೇ ತಾರೀಕಿಗೆ ನಡೆಯಲಿರುವ ಸದ್ರಿ ಡಿ. ಬೋರ್ಡು ಚುನಾವಣೆಗೆ **ನಿಮ್ಮೆಲ್ಲಿಯ ಹಲವರ ಅಪೇಕ್ಷೆ ಮೇರೆಗೆ** ನಾನೂ ಒಬ್ಬ ಉಮೇದ್ವಾರನಾಗಿ ನಿಂತಿರುತ್ತೇನೆ. ತತ್ಪೂರ್ವಾರ್ಥ ನೀವು ಗಳೆಲ್ಲರೂ ನಿಮ್ಮೆಲ್ಲರ ಮತಗಳನ್ನು ನನಗೇನೇ ಕೊಟ್ಟು ಪುನಃ ಸದ್ರಿ ಬೋರ್ಡಿಗೆ ಮೆಂಬರನಾಗಿ ಬಂದು ಇನ್ನೂ ಹೆಚ್ಚಿನ ಜನತಾಸೇವೆಗಾಗಿ ಸಂದರ್ಭಿಯನ್ನು ಒದಗಿಸಿ ಕೊಡಬೇಕಾಗಿ ವಿನಯಪೂರ್ವಕವಾಗಿ ಕೋರಿಕೊಳ್ಳುತ್ತೇನೆ.

ಇಂತೀ,

A. M. NAGANNA HEGDE

ಬಳ್ಳಾರಿಯಲ್ಲಿ ಪಂಡಿತ ತಾರಾನಾಥರ ಪುಣ್ಯತಿಥಿ ಆಚರಣೆ—ತಾ. 31-10-46ರಲ್ಲಿ ಲಗಡಿ ಮಠದಿಪ್ಪನವರ ಕಲ್ಯಾಣ ಮಂದಿರದಲ್ಲಿ ಪಂಡಿತ ತಾರಾನಾಥರ ಪುಣ್ಯತಿಥಿಯನ್ನು ಪುರಜನರು ವಿಜೃಂಭಣೆಯಿಂದ ಆಚರಿಸಿದರು. ಎಡ್ವಕೇಟ್ ಶ್ರೀ ಡಿ. ವೇಣುಗೋಪಾಲಾಚಾರ್ಯರು ಅಧ್ಯಕ್ಷತೆ ವಹಿಸಿದ್ದರು. ಸುಬ್ಬಿ ಉಪಸ್ಯಾಸಕರಾದ ಡಾ॥ ಎಸ್. ಆರ್. ಭಟ್ರು ವೈದ್ಯರುಗಳು ಇವರು, ದಿವಂಗತರ ಪ್ರತಿಭೆ, ಕಲಾಕೌಶಲ್ಯ, ಕ್ರಾಂತಿಯುತ ಜೀವನ, ಸಾದರಿಯ ಸುಮತೆ, ಬಹುಭಾಷಾ ಪರಿಚಯ ಮತ್ತು ಫ್ರಾಡಿನೆ, ಪಲಿತೋದ್ಯಾರಿಕೆಯ ಆಕುಟಿಲ ಧೋರಣೆ, ಜನತೆಗೆ ಕೊಟ್ಟುಹೋದ ಆದರ್ಶ ಜೀವನ ಪಂಥ ಇನ್ನುಗಳ ಕುರಿತು ಭಾಪೋದ್ರೇಕದಿಂದ ನುಡಿದರು, ಶ್ರೀ. ಯಂ. ಜಿ. ವೆಂಕಟೇಶಯ M. R. ಇವರು ಉದಾತ್ತ ಲೇಖಕನ ಗುಣದ ಕುರಿತೂ, ಜೋಳದ ರಾಶಿ ದೊಡ್ಡಣ್ಣ ಗೌಡರು, ತಾನು ಕಂಡ ಜೀವನಪಥದ ಮೇಲಾಪಿ ತಾರಾನಾಥರ ಕುರಿತೂ, ಶ್ರೀ ವೇಲಣ ಸಿದ್ದಯ್ಯನವರು ಮರೆಯಲಾರದ ವ್ಯಕ್ತಿತ್ವದ ಕುರಿತೂ, ಶ್ರೀ ಎಂಜೀನಯ್ಯನವರು ಕೀರ್ತಿಜೀವಿಗಳಾಗಿರುವರೆಂದೂ, ಶ್ರೀ ಟಿ. ಬಿ. ಕೇರವರಾಯರು, ತಾರಾನಾಥರ ಹರಿಜನೋದ್ಧಾರ ಮತ್ತು ಆಯುರ್ವೇದೋದ್ಧಾರ ಕಾರ್ಯಗಳ ಕುರಿತೂ ನುಡಾಡಿದ ಮೇಲೆ ಅಧ್ಯಕ್ಷರು, ಉಸಸಂಹಾರ ಭಾಷಣದಲ್ಲಿ, ದಿವಂಗತರು, ಆದರ್ಶ ಲೌಕಿಕ ಹಾಗೂ ಆಧ್ಯಾತ್ಮಿಕ ಪುರುಷರಿದ್ದು ಅವರ ಸೇವೆ ಮತ್ತು ಋಣ ಬಳ್ಳಾರಿಯಾನೆ ಕರ್ನಾಟಕದ ಜನತೆಗೆ ಬಹಳವೆಂದು ಉದ್ಗರಿಸಿದರು. ಕೊನೆಗೆ ಶ್ರೀ ಬಿ. ಕೆ. ಮಾಳಸಾರು, ತಾರಾನಾಥಜೀಯವರ ನೋಲಿನ ಅಭಿಮಾನದ ನೆನೆದ ಸಭಿಕರಿಗೆ ವಂದನೆ ಸೂಚಿಸಿ, ಪಂಡಿತಜೀಯವರ ಅಂತರಂಗದಲ್ಲಿ ಮೊಳಗುತ್ತಿದ್ದ ಕೆಲವು ಉತ್ಕಟಿಗಳ ಹೃದಯಂಗಮ ಚಿತ್ರನನ್ನು ಸಭಿಕರ ಮುಂದಿಟ್ಟು ಈ ಆದರ್ಶಜೀವಿಯ ಪುಣ್ಯಸ್ಮರಣೆಯನ್ನು ಪ್ರತಿವರ್ಷ ಮಾಡಬೇಕೆಂದು ಕೇಳಿಕೊಂಡ ಮೇಲೆ ಸಭೆ ನುಂಕ್ತಾಯನಾಯಿತ್ತು.

ವಿವಿಧ ಪಾತ್ರೆಗಳು

ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ನೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾನ್ಯಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ಮಾರೆಯುತ್ತವೆ.

ಕಲ್ಯಾಂಶೆ ವ್ಯಾಸಾಚಾರ್ಯರ,
ರಥಬೀದಿ, ಉಡುಪಿ.

ದಿ ನ್ಯೂ ಗ್ರೇಟ್ ಇನ್ಶೂರೆನ್ಸ್

ಕೊ. ಒಫ್ ಇಂಡಿಯಾ ಲಿಮಿಟೆಡ್.

(ಇನ್‌ಕೊರ್ಪರೇಟೆಡ್ ಇನ್ ಬರೋದಾ. ಮೆಂಬರರ ಮಿತ ಜವಾಬ್ದಾರಿಯ ಖಾತ್ಯರೆ.)

ಅಧಿಕೃತ ಭಂಡವಳ	ರೂ. 2,50,00,000
ತೆತ್ತ ಮತ್ತು ಚಂದಾ ಕೊಡುವ ಭಂಡವಳ	ರೂ. 1,25,00,000
ವಸೂಲಾಪ ಭಂಡನಳ	ರೂ. 32,50,000

ಡೈರೆಕ್ಟರ ಮಂಡಳಿಯ ಸದಸ್ಯರು

1. ಶುಳಸಿದಾಸ್ ಕಿಲಾಚಂದ್, ಎಸ್ಕ್ವೈಯರ್. (ಜೆಯರ್‌ಮೆನ್)
2. ಜಾಲ್‌ಚಂದ್ ಹಿರಾಚಂದ್, ಎಸ್ಕ್ವೈಯರ್.
3. ಧರ್ಮಸೇವ್ ಮಲ್‌ರಾಜ್ ಕಾಟಿವ್, ಎಸ್ಕ್ವೈಯರ್.
4. ಜಹಾಂಗಿರ್ ಪೆಸ್ಕೋಂಜಿ ಪಟೇಲ್, ಎಸ್ಕ್ವೈಯರ್, ಬಿ.ಎ. (ಕ್ಯಾಂಟಬ್)
5. ರಾಜಪ್ಪಯ ಮನಭಾಯಿ ವಸಂಜ ದೇಸಾಯಿ.
6. ಅಂಬಲಾಲ್ ಕಿಲಾಚಂದ್, ಎಸ್ಕ್ವೈಯರ್.

ಜನರಲ್ ಮೆನೇಜರ್:—ಎಂ. ಜಿ. ಮೋಡಿ, ಎಸ್ಕ್ವೈಯರ್.

ರಿಜಿಸ್ಟರ್ಡ್ ಆಫೀಸು:—ಬೇಂಗ್ ಬಿಲ್ಡಿಂಗ್, ಮಾಂಡವಿ, ಬರೋದಾ.

ಬ್ರಿಟಿಷ್ ಇಂಡಿಯದ ಕೇಂದ್ರ ಕಾರ್ಯಾಲಯ:

45/47 ಅಪೊಲೋ ಸ್ಟ್ರೀಟ್, ಫೋರ್ಟ್, ಬೊಂಬಾಯಿ.

ಮದ್ರಾಸು ಸಂಸ್ಥಾನದ ಎಲ್ಲೆಡೆಗಳಲ್ಲೂ ಅನುಭವೀ ನುರಿತ ಏಜಂಟರು ಬೇಕಾಗಿದ್ದಾರೆ. ಉಮೇದ್ವಾರರು ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು.

ಮದ್ರಾಸ್ ಆಫೀಸು, 121-A ಆರ್ಮೇನಿಯನ್ ಸ್ಟ್ರೀಟ್.

ಜೀವವಿಮಾ, ಬೆಂಕಿ, ಹಡಗು ಗಂಡಾಂತರಗಳ ಇನ್ಶೂರ್ ಸಹ ಸ್ವೀಕರಿಸಲಾಗುವುದು

The New Great Insurance Co. of India Ltd.

NOTICE

ಉಡುಪಿ ಮೂಡಸಿಂಡಿಂಬೂರು ಗ್ರಾಮದ ಬನ್ನಂಜೆಯಲ್ಲಿಯಲ್ಲಿರುವ ಸರ್ವೆ ಮರಕಾಲ್ತಿ ಆಳಿಯ ಸ್ವತಿವಾದಿ ದೇಜು ಮರಕಾಲಗೆ ಈ ಮೂಲಕ ತಿಳಿಸುವದೇನೆಂದರೆ — ಸದ್ರಿ ನಾದಿಯು ನಿನ್ನು ಹೇಳಿ ಈ ಕೋರ್ಟಿನಲ್ಲಿ ರೂಪ್ಯಾ 13-5 9ಕ್ಕೆ ಒಂದು ಪ್ರಾಮ್ಯಿಸರಿ ನೋಟಿಗೆ ಮಾಡಿದ್ದಾರೆ. ಆದು ಇದೇ ನವೆಂಬರ ತಾ. 25ಕ್ಕೆ ಅಜ್ಜೀರ ತನ್ನಿಗೆ ಇಟ್ಟಿರುವದರಿಂದ ಆ ಕುರಿತು ನಿನ್ನು ಆಕ್ಷೇಪವೇನಾದರೂ ಇದ್ದರೆ ಆದು ಹಗಲು 12 ಗಂಟೆಗೆ ನೀನ್ನ ಖುದ್ದಾಗಿ ಹಾಜರಾಗಿ ಜಾಹೀರಮಾಡಿಕೊಳ್ಳಕಡ್ದು. ತಪ್ಪಿದರೆ ಸದರೀ ದಿವಸ ವ್ಯಾಜ್ಯನ್ನು ನಿನ್ನ ಗೈರಿ ಹಾಜರಿಯಲ್ಲಿ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದು ತಾ. 28-10-46

P. N. Prabhu,
President.

CHAMPAE'S

Snow & Lastrex

(Sole Distributers for Tnava.)

Prop: K. G. NAYAK,
Santhekatte, UDIPI, S. K.

(೩ನೇ ಪುಟದಿಂದ)

ರಾಜ್ಯವು ಸ್ವಾಮಿತ್ವ ವಹಿಸಿರುವ ಉದ್ಯೋಗಗಳನ್ನು ಕುರಿತು ಗಮನಿಸುವ ಸರ್ಕಾರಕ್ಕೆ– ಪೋಲೀಸರು ಅಂಚೆಯವರು, ರೈಲಿನವರು, ಉಪಾಧ್ಯಾಯರು, ಉಗ್ರಾಣಿಗಳು– ಯಾರೇ ಇರಲಿ ಸೇವೆ, ಸಲ್ಲಿಸುವ ದೃಷ್ಟಿಯಿಂದ ಸಮಾನರಲ್ಲವೇನು? ಸರಕಾರದ ವರಮಾನ ತೆರಿಗೆ, ಕಂದಾಯ ಮೊದಲಾದವನ್ನು ಹೊಂದಿವೆ. ಆ ವರಮಾನ ಸ್ರಜೆಯ ಹುಟ್ಟುವಳಿಯ ಮೇಲೆ ತೊಂಎದೆ. ಸರಕಾರವೊಂದು– ತನ್ನ ನೌಕರರ ಕ್ಷೇಮಕ್ಕಾಗಿ ತೆರಿಗೆಯಾರ್ದನ್ನು ಹಿಂಡಿ ಹೀರಿದರೆ ನ್ಯಾಯವಾದೀತೆ? ಅಧಿಕಾರಿ, ಚಾಕರ, ಸೇವಕರ ಗುಂಪಿಗಳು ಸರಕಾರವನ್ನು ಬೆದರಿಸಿ ತಮ್ಮೊಬ್ಬರ ವರಮಾನ ಹೆಚ್ಚಿಸಿಕೊಂಡಷ್ಟೇ ನ್ಯಾಯ ಅದು ಇವರು ಶ್ರಮಿಸುವ ಹೀರಲ್ಪಡುವ ರೈತ ಒಂದು ದಿನ ಕುಸಿದರೆ– ಎಲ್ಲರೂ ಕುಸಿಯಬೇಕಾಗುತ್ತದೆ. ಆದ್ದರಿಂದ– ಸ್ರಜೆಯ ಶಕ್ತಿಯನ್ನು ಮೀರಿದ ತೆರಿಗೆಯನ್ನು ಸರಕಾರ ಸಡೆಯುವ ಯಾವ ಸಂದರ್ಭ ಬಂದರೂ ಪ್ರಜೆಯ ಕಲ್ಯಾಣವಾಗಲಾರದು.

ಇತ್ತ ಇನ್ನೊಂದು ಶ್ರಮಗಾರರ ತರ್ಕ ಸರಣಿಯನ್ನು ಪರಿಶೀಲಿಸುವುದವಶ್ಯ. ಅಂಚೆಯವರ ಮಾಸ್ಯರದಲ್ಲೂ, ರೈಲ್ವೆಯವರ ಬೇಡಿಕೆಯಲ್ಲೂ ಒಂದು ಬೇಡಿಕೆಯು ಕೇಳಲಂತು ನಮ್ಮಿಂದ ಸರಕಾರಕ್ಕೆ ಇಂತಿಷ್ಟು ಕೋಟೆ ಆದಾಯವಿದೆ – ಎಂಬ ಅಧಿಕಾರವಾಣಿಯದು ತೀಗಾ ಲಜ್ಜಾಸ್ಪದ ತರ್ಕ ಸರಣಿಯದು. ಈ ದೃಷ್ಟಿಯಿಂದ ನೋಡಿದಲ್ಲಿ– ರಿವಿನ್ಯೂಖಾತೆಯವರು ಇನ್ಕಂಟ್ಯಾಕ್ಸ್ ಆಫೀಸಿನವರು, ಸುಂಕದವರು– ತಮ್ಮಿಂದ ಬರುವ ವರಮಾನದ ಮುಖ್ಯಾಲು ಮೂರು ವಿಸ ಹವಿಸ್ಸನ್ನು ಕೇಳುವ ಹಕ್ಕು ಸ್ಥಾಪನೆಯಾದೀತು. ವಿನ್ಯಾಇಲಾಖೆಯವರು, ಆರೋಗ್ಯ ಖಾತೆಯವರು, ಪೋಲೀಸು ಜನ– ಮೊದಲಾದವರು ಸರಕಾರಕ್ಕೇನೆ ಹಣ ತುಂಬಿಸಿ ಕೊಡಬೇಕಾದ ತರ್ಕ ಸರಣಿಯದು ಅಂಥ ತಮ್ಮ ಸರಣಿಗೆ ಬೆದರಿಕೆಯ ಬೆಂಬಲ ತೋರಿಸಿ ಅಂಚೆಯವರ ಕೆಲಸ ಸಾಗಿದಂತೆ ಕಾಣುತ್ತದೆ. ಉಳಿದ ಇಲಾಖೆಯವರನ್ನು ಇನ್ನು ಯಾರೂ ಕೇಳದಂತಾಗಿದೆ ಒಂದು ತಾಯಿ ಹತ್ತು ಮಂದಿಗಳಲ್ಲಿ, ಬಲವಾದ ಮರಿ ಉಳಿದುವನ್ನು ಹಿಂದೆ ತಳ್ಳಿ ತಾನೊಬ್ಬನೇ ಹಾಲುಂಡಂತೆ ಆದು. ಹಾಗೆ ಉಣ್ಣಲು ಬಿಡುವ ತಾಯಿಯೆಂಥವಳು? ದೇಶದ ಆರೋಗ್ಯ ಕಾಯುವ ವೈದ್ಯರ, ವಿದ್ಯೆಕೂಡುವ ಶಿಕ್ಷಕರ, ಕಂದಾಯ ವಸೂಲುಮಾಡುವ ಗ್ರಾಮ ಉದ್ಯೋಗಿಗಳ ಸೇವೆ-ತೂಕದಲ್ಲಾಗಲಿ, ಶ್ರಮದಲ್ಲಾಗಲಿ ಉಳಿದವರ ಸೇವೆಗಿಂತ ಯಾವ ರೀತಿಯಿಂದ ಕಡಮೆ.

ದೇಶದ ಈ ಸಂಪಿನ ಸ್ರಶ್ನೆಯನ್ನು ಸರಕಾರ ಬಿಡಿಸಲು ಬಯಸುವಲ್ಲಿ. ಸರಕಾರ ಇಲಾಪ ಇಲಾಖೆಗಳೊಳಗಿನ ಭೇದಭಾವವನ್ನು ಬದಿಗಿಡಿಸಬೇಕು. ಸಂಪಿನ, ಆರ್ಥಿಕ ಸ್ರಶ್ನೆಗಳಲ್ಲಿ– ಬಂಡವಳುಗಾರ, ಶ್ರಮಜೀವಿ, ಗಿರಾಕಿ– ಮೂವರಿಗೂ ಅವರ ಯೋಗ್ಯತೆಯ ಸ್ಥಾನವನ್ನು ಕಲ್ಪಿಸಬೇಕ ಕೇಂದ್ರ ಸರಕಾರದ ಔಂಸಪುತ್ರರು ಕೆಲವರು, ಪ್ರಾಂತ ಸರಕಾರದ ದತ್ತಪುತ್ರರು ಕೆಲವರು ಸ್ಥಾನಿಕ ಮಲತಾಯಿಯ ಮಕ್ಕಳು ಕೆಲವರು ಎಂಬ ಅಂತರ ತೋರಬಾರದು. ಇದು ಒಟ್ಟಿನ ಸ್ರಶ್ನೆ ಖಾಸಗಿ ಸಂಸ್ಥೆಗಳ ಶ್ರಮಗಾರರಿಗೂ ಅದೇ ಮಾನ ದೊರೆಯಬೇಕು. ಅದಾಯ ಅಧಿಕವಿರುವ ಸಂಸ್ಥೆಗಳು ಖಾಸಗಿಯವು ಇರಲಿ, ಸರಕಾರದವು ಇರಲಿ– ರಾಷ್ಟ್ರದ ಸಂಪತ್ತಿಗೆ ಸರಿ ವಿತರಣೆಗೊಳ್ಳಬೇಕು.

ಯಾವುದೇ ಶ್ರಮಗಾರ ಸಂಸ್ಥ ಇನ್ನು ಮುಂದೆ ತಾನು ಬಂಡವಳುಗಾರನಿಂದ ಸಡಿಲಾಗುತ್ತಿರುವ, ಆಸನದಲ್ಲಿ ಭದ್ರವಾಗಿ ನೆಲೆ ನಿಂತೇನು ಎಂಬುವ ಸ್ಥಿತಿಯನ್ನು ಬರಗೊಡಿಸಬಾರದು

ಮೇಲೆ ವೇತನ ನಿರ್ಣಯ—ಜೀವನದ ಮಟ್ಟದ ಅಂಕೆ, ಸಂಚಿಕೆಗಳನ್ನು ಹೊಂದಿರಬೇಕು ಅವನ್ನು ಹತೋಟಿಗೆ ತರದೇನೆ -ಬರಿಯ ಭತ್ತೆಗಳನ್ನು ಹೆಚ್ಚಿಸಿ ಈ ಸ್ರಶ್ನೆಯನ್ನು ಬಗೆಹರಿಸಲು ಬರುತ್ತದೆಯೆಂಬ ಭ್ರಮೆ ಸಾಧ್ಯದಲ್ಲ ಇತ್ತ ವೇತನದ ಸ್ರಶ್ನೆಯಾಗಲಿ, ಲಾಭ ಉಳಿತಾಯಗಳ ಸ್ರಶ್ನೆಯಾಗಲಿ- ಪ್ರಜೆಯ ಜೀವನದ ಮಟ್ಟವನ್ನು ಮರೆತು ಮಾಡುವ ತೀರ್ಮಾನಗಳಾಗಕೂಡದು. ಮಜೂರಿ ನಿರ್ಣಯದ ಕೊನೆಯ ತೀರ್ಮಾನದಲ್ಲಿ ಆತನ ಧ್ವನಿಗೆ ಅವಕಾಶವಿರಲೇ ಬೇಕಾಗುತ್ತದೆ

ಇವತ್ತಿನ ಬಂಡವಾಳಗಾರರ ಶ್ರಮಗಾರರ ಸಂಗ್ರಾಮದಲ್ಲಿ ಈ ದೃಷ್ಟಿ ಉಂಟಾಗಿಲ್ಲ. ಆದಕ್ಕೆ ಕಾರಣವೂ ಇದೆ.

ತಮ್ಮ ಶಕ್ತಿಯನ್ನು ಬೆಳೆಯಿಸಿಕೊಳ್ಳುವ ಒಂದೇ ಹೇತು— ಶ್ರಮಗಾರರ ಕಲ್ಪನೆ ಜನ ತಮ್ಮ ಹಕ್ಕಿಗಾಗಿ (Rights) ಹೋರಾಡುವಂತೆ ಜವಾಬುದಾರಿ (Responsibilities)ಗಾಗಿ ಹೋರಾಡಿಯಾರೆ? ಆಲ್ಲದೆ ಸಮಾಜದ ಹಿತವನ್ನು ತಮ್ಮ ಹಿತಕ್ಕಾಗಿ ತಳ್ಳುವ ವಂಚಿಕರು ಇರುತ್ತಾರೆ. ಬರಿಯ ಬಂಡವಾಳಗಾರರೇ ಆ ಕೆಲಸ ಮಾಡಬೇಕಾಗಿಲ್ಲ ಅಜ್ಞಾನಿಗಳಿರುವಲ್ಲಿ, ಮೂಢ ಸಂಬಕೆಯಿರುವಲ್ಲಿ- ಅದನ್ನು ಸ್ವಲಾಭಕ್ಕಾಗಿ ಬಳಸಿಕೊಳ್ಳುವ ಧೂರ್ತರು ಬಂನೇ ಬರುತ್ತಾರೆ. ತಮ್ಮ ಮುಂದುಳು ತನ ರಾಜಕೀಯದಲ್ಲಿ ಬಲವಾಗುವ ಬಗ್ಗೆ ಕೂಲಿಕಾರರನ್ನು ಸಮಾಜ ಹಿತಕ್ಕೆ ವಿರೋಧಿಗಳನ್ನಾಗಿ ಮಾತಾಡುವರೂ ಇದ್ದಾರೆ ಅಂತಹ ಹಂಗಡ, ಜನಗಳಿಗೆ ನಮ್ಮ ದೇಶ ಹಿಂದುಳಿದಿಲ್ಲ.

ಹಣ ಸುಲಿದರೇನೇ ಸುಲಿಗೆ(Exploitation)ಮನಸ್ಸು ಸುಲಿದರೆ ಸುಲಿಗೆಯಲ್ಲವೇ? ರಾಜಕೀಯದಲ್ಲಿ—ಈ ಎರಡನೆಯ ಬಗೆಯ ಸುಲಿಗೆಯು ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿದೆ.

ಬೀಡಿ ಮಜೂರರ ಮುಷ್ಕರ–ಬೀಡಿ ಕೆಲಸಗಾರರ ಮುಷ್ಕರವು ನಡೆಯುತ್ತಾ ಇದೆ ನಿತ್ಯವೂ ಮುಷ್ಕರಿಗರ ಪೆರಪಣೆಗೆಗಳೂ, ಕೆಲವು ಬೀಡಿ ಕಾರ್ಖಾನೆಗಳೆದುರು ಪಿಕೆಟಿಂಗೂ ನಡೆಯುತ್ತಿದೆ ಮುಸ್ಲಿಂ ಬೀಡಿ ಮಜೂರರು ಈ ಮುಷ್ಕರದಲ್ಲಿ ಇನ್ನೂ ಸೇರಿಲ್ಲ. ಕೆಲವು ಕಡೆಗಳಲ್ಲಿ ಹಿಂಪೊ ಕೆಲಸಗಾರರೂ ಮುಷ್ಕರದಲ್ಲಿ ಸೇರದೆ ಕೆಲಸಕ್ಕೆ ಹೋಗುತ್ತಿರುವರು.

ನಿಧನ–(೧) ಮಂಗಳೂರಿನಲ್ಲಿ ಹಲವು ವರ್ಷಗಳ ಹಿಂದೆ ಶಾಲಾರಾಗಿದ್ದು, ಆನಂತರ ಮುನ್ಸೀಫರಾಗಿಯೂ ಸಬ್ ಜಡ್ಜರಾಗಿಯೂ ನಿವೃತ್ತಿಹೊಂದಿದ ಶ್ರೀ। ಉಳ್ಳಾಲ ವಾಮನ ನಾಯ್ಕರು, ಇದೇ ತಾ. ೧೦ರಲ್ಲಿ ನಿಧನ ಹೊಂದಿದರೆಂದು ತಿಳಿಸಲು ವಿಷಾದಿಸುವೆವು

(೨) 'ಕಂಟ್ರಾಕ್ಟರ್' ಶ್ರೀ। ಶ್ರೀನಿವಾಸ ಕೇಟ್ ರವರು ಕೆಲಕಾಲದಿಂದ ಅಸ್ವಸ್ಥರಾಗಿದ್ದವರು, ದೈವಾಧೀನರೆಂದು ತಿಳಿಸಲು ವಿಷಾದಿಸುವೆವು

ಅನಾವರಣ–ಸುಪ್ರಸಿದ್ಧ ನಕ್ಷೇಲರಾದ ಶ್ರೀ। ಜಿ. ಪೆಂಕಟ್ಯಾಪಾ ಬಾಳಿಗರವರ ತೈಲ ಚಿತ್ರವನ್ನು ಮಂಗಳೂರು ಬಾರ್ ಎಸೋಸಿಯೇಶನಲ್ಲಿ ಅನಾವರಣ ಮಾಡುವ ಸಮಾರಂಭವು, ಮಂಗಳೂರಿಗೆ ಆಗಮಿಸಿದ ಜಸ್ಟಿಸ್ ಎನ್, ಚಂದ್ರಶೇಖರಯ್ಯನವರ ಅಧ್ಯಕ್ಷತಾ, ತಾ ೧೯ನೇ ಶನಿವಾರ ಸಾಯಂಕಾಲ ಜರಗಿತು. ಈ ತೈಲ ಚಿತ್ರವನ್ನು, ಕೆನರಾ ಹೈಸ್ಕೂಲಿನ ಅಧ್ಯಾಪಕರಾಗಿರುವ ಶ್ರೀ। ಭುಜಂಗರಾವ್ (ದಿವಂಗತ ಶ್ರೀ। ಪಾವಂಜೆ ಗೋಪಾಳ ಕೃಷ್ಣಯ್ಯನವರ ಪುತ್ರ) ಇವರು ಚಿತ್ರಿಸಿದುದಾಗಿದೆ.

ಬೆಂಕಿಪೆಟ್ಟಿಗೆಯ ಕಾಮ– ನಗರದಲ್ಲಿ (ಹಾಗೆಯೆ ಜಿಲ್ಲೆಯ ಇತರ ಕಡೆಗಳಲ್ಲಿ) ಬೆಂಕಿಪೆಟ್ಟಿಗೆ ಸರಿಯಾಗಿ ದೊರೆಯದೆ ಒಂದು ತಿಂಗಳಾಯಿತು 'ಎಮ್ಮೋ' ಬೆಂಕಿಪೆಟ್ಟಿಗೆಯ ಮಂಗಳೂರು ಪ್ರತಿನಿಧಿಗಳು ಸರಿಯಾಗಿ ಹಂಚುತ್ತಿಲ್ಲವೆ? ನಗರಕ್ಕೆ ಬಂದ ಬೆಂಕಿಪೆಟ್ಟಿಗೆಗಳು ಬಂದ ದಿನವೇ ಕಾಣೆಯಾಗುತ್ತಿವೆಯೋ? ಅಧಿಕಾರಿಗಳು ಈ ಕಡೆ ಸ್ವಲ್ಪ ಗಮನಕೊಡಬೇಕೆಂದು ನಾಗರಿಕರ ಇಚ್ಛೆ.

ದಿ ಮೂಲ್ಕಿ ಬೇಂಕ್, ಲಿಮಿಟೆಡ್.

ಗ್ರಾಮಪ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ತಿಪ್ಪೆಜಡುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ಮಹಾವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,
Moolky, S. K.

ಕ್ಷಣಿಕ ಗುಣಕೊಡುವ ಔಷಧದ ಬೆನ್ನು ಹತ್ತಿ ಮರುಳಾಗಬೇಡಪ್ಪಾ

ಪುರೋಹಿತ ಶ್ವಾಸಹಾರೀ ಔಷಧ ಮಾತ್ರೆ ಬೀರೆ ಅದು ದಮ್ಮನ್ನ ಬರೇ ಮುಮುಕಿ ಇಡದೆ ಅದನ್ನು ಬೇರುಸಹಿತ ಕಿತ್ತು ಹಿಗೆಯುವುದು. ಈ ಔಷಧ ಸುರುವು ಮಾಡಿದಾಗಲೆ ಕೆಮ್ಮೂ ತೇಕೂ ನಿಲ್ಲುವುದು; ಹೊಟ್ಟೆ ಹಸಾಗುವದು; ಪಚನಕ್ರಿಯೆಯು ತಿದ್ದುವದು ಪುಷ್ಪಸಗಳು ಗಟ್ಟಿಯಾಗುವುವು ಆ ಮೇಲೆ ದಮ್ಮಿರಲಿಕ್ಕೆ ಸ್ಥಳವೇ ಸಿಗುವದಿಲ್ಲ

ದಮ್ಮು, ತೇಕು, ಬೆನ್ನು ನೋವು, ಗಂಟಲು ಉರಿಯುವಂಥ ಕೆಮ್ಮು ಮುಂತಾದ ವಿಕಾರಕ್ಕೆ ಪುರೋಹಿತಶ್ವಾಸಹಾರೀ ಪ್ಲೇನ (ನೀಲಿ ಪ್ಯಾಕಿಂಗ) ತೆಗೆದುಕೊಳ್ಳಬೇಕು ಆಹೇಣ ಮತ್ತು ಆಮ್ಲ ಪಿತ್ತದಿಂದ ಬಳಲುವ ದಮ್ಮಿಗರು ಶ್ವಾಸಹಾರೀ ಕಂಪೌಂಡ (ಕೆಂಪ ಪ್ಯಾಕಿಂಗ) ತೆಗೆದುಕೊಳ್ಳಬೇಕು

೩ ಔನ್ಸ್, ೬ ಔನ್ಸ್, ೧೫ ಔನ್ಸ್ ಬಾಟ್ಲಿಗೆ ಕ್ರಮವಾಗಿ ರೂ.೧.೬ ೦; ೫ ೧೦ ೦ ಮತ್ತು ೧೦-೦.

ಪುರೋಹಿತ ಫಾರ್ಮಸಿ, ಕೊಲ್ಹಾಪುರ

ಸ್ವಾತಿಸ್ವರು-ಪೂರ್ಣಲರ್ ಸ್ಟೋರ್ಸ್, ಮಂಗಳೂರು, ಟಿ ನಟರಾಜನ್‌ಕೊಯಮತ್ತೂರು

ಮುಂಬಯಿ ಸೋಲ ವಿಜಂಟರುಃ–

ವನಮಾಲೀ ಭಿಕಾಜಿ ಮತ್ತು ಕಂಪನಿ,
ಪ್ರಿನ್ಸೆಸ್ ಸ್ಟ್ರೀಟ್,
ಮುಂಬಯಿ ೩.



ಇನಾಂ! ಇಲ್ಲಿ ನೋಡಿ! ಇನಾಂ!!!

ಗೋಲ್ಡನ್ ಭಂಗಾರದ ಆಭರಣಗಳು



ಈ ಭಂಗಾರದ ಆಭರಣಗಳನ್ನು ನೋಡುವವರು ಅಸಲ್ ಚಿನ್ನದ ನಗಗಳೆಂದು ಹೇಳುವರು ಸ್ತ್ರೀಯರು ನೋಡಿದರೆ ಬಹಳ ಸಂತೋಷಪಡುವರು ಈಗಿನ ಕಾಲದಲ್ಲಿ ಶ್ರೀಮಂತರೂ ಬಡವರಾಗಿ ಉಪಯೋಗಿಸುತ್ತಿರುವರು. ಪ್ರತಿದಿನ ಉಪಯೋಗಿಸಿದರೂ ಅಸಲ್ ಚಿನ್ನದ ನಗಗಳ ಹಾಗೆ ಪ್ರಕಾರವಾಗಿರುವುದು ಈ ರೀತಿ ಪೆಟ್ಟಿಗೆಯಲ್ಲಿರುವ ೧೧ ಜತೆ ಭಂಗಾರದ ನ್ಯೂ ಮಾಡಲ್ ಬಳೆಗಳು, ೧ ಜತೆ ಸಿನಿಮಾ ಸ್ಟಾರ್ ಲೋಲಕ್, ೧ ನೆಕ್‌ಲಾಸ್ ಎಂಬ ಬೈನ್ಸ್, ೧ ಇಂಗ್ಲಿಷ್ ಮಾಡಲ್ ರೇಡಿಯೋ ಕಟ್ ರಿಂಗುಗಳು, ಈ ಒಭರಣಗಳು ಆಡಾಗಿರುವ ಒಂದು ಸೆಟ್ ವೆಲ್‌ವೆಟ್ ಪೆಟ್ಟಿಗೆ ಸಂತ ಕ್ರಯ ರೂ.೬ ೦ ಮಾತ್ರ' ಒಂದು ಯು ಯಸ್ ಎ ಮಾಡಲ್ ಕಾಲರ್‌ಪಿನ್ ಬಹುಮಾನವಾಗಿ (Free) ಕಳುಹಿಸುತ್ತೇವೆ

The Amazon Traders Co
22, Sambier st,
Sowcarpet, G. T. Madras

ದಿ ಅಮೇಜಾನ್ ಟ್ರೇಡಿಂಗ್ ಕಂ
22, ಸಾಂಬಯರ್ ಬೀದಿ,
ಜಿ. ಟಿ. ಮದ್ರಾಸ್.

• ಮಗ್ಗದ ಸ್ಟಾಲಿಕರಿಗೆ ಸುಸಂದರ್ಭ •

ನಂಬ್ರ P II ಪರ್ಮಿಟುದಾರರಿಂದ ಮಗ್ಗದ ಸ್ಟಾಲಿಕರು ತಮ್ಮ ನೂಲಿಗೆ ಬೇಕಾಗುವ ರಂಗುಗಳಿಗೆ ಮಂಗಳೂರು ಇಲ್ಲವೆ ಶಾನಾಡುರು ರಂಗಿನ ವ್ಯಾಪಾರಸ್ಥರನ್ನು ಅವಲಂಬಿಸಬೇಕಾಗಿತ್ತು ಈಗ ಅವರಿಗೆ ಬೇಕಾಗುವ ಎಲ್ಲಾ ತರದ ರಂಗುಗಳನ್ನು ಒದಗಿಸಲು ನಾವು ಲೈಸನ್ಸನ್ನು ಪಡೆದಿದ್ದೇವೆ.

ಪಿ. ಎ. ಪೈ ಬ್ರದರ್ಸ್, ಉಡುಪಿ.

Publication

ಉಡುಪಿ ಡಿ ಮು ಕೋರ್ಟಿನಲ್ಲಿ.

O S. No. 342 1946

ಶ್ರೀನಿವಾಸ ಸೋಮಯಾಜಿ— ವಾದಿ

ಮತ್ತು

ಪಿಯಾದ ಪತ್ರಿಪ್ಪ—ಪಂಚಲು ಶತ್ರಾಪೊರ ಮಗ— ರಾರ್ಕಳ ತಾಲೂಕು ನೀರೆಬೈಲೂರು ಗ್ರಾಮ— ಪ್ರತಿವಾದಿ—

ಇವರೊಳಗೆ—

ಪ್ರತಿವಾದಿ ಮೇಯಾದ ಪತ್ರಾಪೊರಿಗೆ ಯಾಮಿಲಿಕ ತಿಳಿಯುವಪ್ಪುವದೇನೆಂದರೆ—

ಪ್ರತಿವಾದಿಯು ಪಾದಿಯ ಪತ್ರ ನಪ್ಪಿಪ ಮೊದಲ ಲೇವಾದೇ ೧ ಬಟ್ಟು ಒಟ್ಟು ಅಸಲು ಬಟ್ಟು ಬಾಕಿ೦ಪ್ಯಾ ೩೫೦ 3 0ನೇ ವಾದಿಯು ದಾಕ್ಷಾ ಮಾಡಿದ ಯೂ ಪಾಪೆಯಂತಾ 29-11 1945ನೇ ತಾನ್ನಿಗೆ ಬಿಟ್ಟಿರುವ ದ್ರಿಂದ-ಆ ಕಾರಿನ ಅಕ್ಷೇಪಣಿಯಿಪ್ರೆ ಪ್ರತಿವಾದಿಯು ಸ್ವತಹಾ ಯಾ-ಪ್ಲೀಡರ ಮುಕಾಂತ್ರ ಆ ದಿವ್ಸ 11 ಗಂಟೆಗೆ ಕೋರ್ಟಿಗೆ ಹಾಜರಾಗಿ-ಚಾಜರೀದು ಮಾಡಿಕೊಳ್ಳತ್ತಪ್ಪು. ತಪ್ಪಿದರೆ ಯಕ್ಪಪಾಟ್-ಯಿಂದ ಏಕಪಕ್ಷೀಯ ಶುಡಿಲಾದೀತು ಯಂಬುದಾಗಿ ಕೋರ್ಟಿಗೆ ಹುಕುಂ ಪ್ರಕಾರ-ಯಾ ಮೂಲಕ ಪ್ರಕಟಿಸಲಾಗಿ ಯಿದೆ.

Narashima Vittal Komath
Advocate for Plff.

ಉಡು. 12—11—46.

ದಕ್ಷಿಣ ಕನ್ನಡ

ಪಡುಬಿದ್ರೆ:— ತಾ. 7-11-46ನೇ ಮುಂಜಾನೆ 10 ಗಂಟೆಗೆ ಶ್ರೀಮತಿ ಕಪಲಾ ದೇವಿಯವರು ಶ್ರೀಮತಿ ಉಮಾಬಾಯಿ ಕುಂದಾಪುರ ಇವರು ಶ್ರೀ ದೇಶಭಕ್ತ ಕಟಪಾಡಿ ಲಕ್ಷ್ಮೀನಾರಾಯಣಯ್ಯನವರೊಂದಿಗೆ ಪಡುಬಿದ್ರೆಗೆ ಆಗಮಿಸಿದ್ದಲ್ಲಿ ರಾ. ಸೇ. ದಲದವರು ಕ್ರಮದಂತೆ ಗಾರ್ಡ್ ಆಫ್ ಹಿನರ್ ಕೊಟ್ಟು ಸತ್ಕರಿಸಿ, ಊರ ಮಹಾಜನರು ಸಸ್ವಾಗತದಿಂದ ಸಭೆ ಜರುಗಿಸಿ ಶ್ರೀ ಲಕ್ಷ್ಮೀನಾರಾಯಣ ಸ್ವಾಕರ ಅಧ್ಯಕ್ಷತೆಯಲ್ಲಿ ಬಂದ ಆತಿಥಿಗಳನ್ನು ಶ್ರೀ. ಕೆ ಕರಿಯಣ್ಣ ಶೆಟ್ಟರು ಪರಿಚಯ ಮಾಡಿದ ಬಳಿಕ ಶ್ರೀ. ಕಮಲಾದೇವಿಯವರು ಕಾಂಗ್ರೆಸಿನ ಆಜ್ಞೆಯಂತೆ ಈಗಿನ ಗೊಂದಲಮಯ ವಾತಾವರಣದಲ್ಲಿ ಜನತೆಯು ಹೇಗೆ ವರ್ತಿಸಬೇಕೆಂಬ ಬಗ್ಗೆ ಮತ್ತು ಶ್ರೀ ಉನಾಬಾಯಿಯವರು ಮುಂದೆ ಪ್ರಚಾರಕ್ಕೆ ಬರಲಿರುವ ನೂಲ ಶಿಕ್ಷಣಕ್ರಮಾನುಸಾರವಾಗಿ ಜನಾಂಗವು ಮುಂದೆ ಬರುವಂತೆಯೂ ಪ್ರಪಯಂಗವಾಗಿ ಸ್ಫೂರ್ತಿದಾಯಕವಾದ ಭಾಷಣಗಳನ್ನಿತ್ತು ಆ ಸೋಲೆ ಕಟಿಪಾಡಿಗೆ ತೆರಳಿದರು.

ತಾ. 9-11 46ನೇ ಮುಂಜಾನೆ ಶ್ರೀ ಗಂಗು ವ್ಯಾಸಾಚಾರ್ಯರು ಪಡುಬಿದ್ರೆ ರಾ. ಸೇ. ದಲದ ತ್ಯಾಗನಿಧಿಗೆ ರೂ. 10ನ್ನು ಕಾಣಿಕೆಯಾಗಿ ಅರ್ಪಿಸಿದಲ್ಲವ, ಇಂದಿನ ರಾಷ್ಟ್ರೀಯ ಧ್ವಜಾರೋಹಣವನ್ನು ಸದ್ರಿಯವರ ಅಪ್ಪಣತ ಹಸ್ತದಿಂದ ಜರುಗಿಸಲಾಯಿತ್ತು.

ಕಾರ್ಕಳ:— ಸ್ಥಳೀಯ ಪಂಚಾಯತ ಕೋರ್ಟಿನಲ್ಲಿ ಶ್ರೀ ನಿ. ವಿ. ಶೆಣೈಯವರ ಅಧ್ಯಕ್ಷತೆಯಲ್ಲಿ, ಡಿಸ್ಟ್ರಿಬಿ ತಹಸೀಲ್ದಾರ ವಿ. ಎ. ಎಸ್. ಡಿ ಸೋಜರವರ ಭಾಷಣ, ಪೊಪ್ಪಿಗಳ ವಿತ್ರಯ, ಸಭಿಕರ ಭಾಷಣ, ಧನ್ಯವಾದ ಸಮರ್ಪಣೆಯೊಂದಿಗೆ ಪೊಪ್ಪಿ ವಿತಾಕರಣವು ಜರುಗಿತು.

ಸ್ಥಳೀಯ ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ವರ್ಷಂಪ್ರತಿ ಜರುಗುವಂತೆ ಈ ವರ್ಷವೂ ಲಕ್ಷದೀಪೋತ್ಸವವು ತಾ. 13 11 46 ರಲ್ಲಿ ಜರಗಿತು.

ಮೂಲ್ಕಿ:— ನೂಲಿಲ್ಲಿ ಸೀಮೆಯ ಮಾಮೂಲು ಜರಗುವ ಆಡಳಿತ ಕಂಬಳವು ಡಿಸೆಂಬರ ತಾ. 27ನೇ ಶುಕ್ರವಾರ ಜರಗುವುದಾಗಿ ನಿರ್ಣಯಿಸಿರುತ್ತದೆ.

ಕುಂದಾಪುರ:— ಸ್ಥಳೀಯ ವಿದ್ಯಾರ್ಥಿ ಸಂಘದ ಈ ವರ್ಷದ ಕಾರ್ಯನಿರ್ವಾಹಕ ಸಮಿತಿಗೆ ಶ್ರೀ. ಎಮ್. ಮುತ್ತಯ್ಯ ಹೆಗ್ಡೆ, ವಿ. ಎ. ಎಲ್. ಎಲ್. ಬಿ. ಇವರು ಅಧ್ಯಕ್ಷರಾಗಿಯೂ, ಶ್ರೀ ವಿ. ವಿ. ಕಾರಂತರು ಕೋಶಾಧಿಕಾರಿಗಳಾಗಿಯೂ ಕೆ.ಎಸ್. ಉಪಾಧ್ಯಾಯರು ಉಪಾಧ್ಯಕ್ಷರಾಗಿಯೂ ಶ್ರೀ ಜಗನ್ನಾಥ ಸೂಡ್ಲಕಟ್ಟೆಯವರು ಪ್ರಧಾನ ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟಿದ್ದಾರೆ.



ಕುಟುಂಬದೊಳಗಿನ ಬಿಲ್ಲರೆ ಬೇನೆ

ಬೇನೆಗಳನ್ನು ಹೋಗಲಾಡಿಸುವದಕ್ಕಾಗಿ ಡಾಕ್ಟರ ಮತ್ತು ವೈದ್ಯರ ಕಡೆಗೆ ಪ್ರತಿ ಸಾರಿ ಹೋಗುವದು ಕಷ್ಟಸಾಧ್ಯವಿರುತ್ತದೆ — ಮತ್ತು ಅಷ್ಟೇಕು ಅವಶ್ಯಕತೆಯೂ ಇರುವುದಿಲ್ಲ. ಕೆಮ್ಮು, ನೆಗಡಿ, ಅಜೀರ್ಣ, ಕೆಲಸ, ಸುಸ್ತು, ಕಫ, ಮೈಕೈನೋವು, ತಲೆನೋವು, ಜ್ವರ, ಸಿಡುಬು, ಕಜ್ಜಿ, ಸೊಳೆ ಮತ್ತು ಇನ್ನಾವುದೇ ಅಕ್ಷೇ ಚಿಕಿತ್ಸೆಯಾಗಿರಲಿ ಜವೇರಿಯನ್ ಜೀವನ ಮಿಕ್ಸ್‌ಚರ್ ಸೇವಿಸಲು ಪ್ರಾರಂಭಿಸಿದರೆ ಕೂಡಲೆ ಗುಣವಾಗುವುದು. ಕಾಲಾ ಮತ್ತು ಅಮಾವಸ್ಯೆಗಳ ಶಾಖವಿಲ್ಲದ ಸಮಯದಲ್ಲಿ ಸೇವಿಸಿದರೆ ಹೆಚ್ಚು ಉಪಯೋಗವಾಗುತ್ತದೆ. ಡಾಕ್ಟರುಗಳಿಗೆ ಹಣವಾಗಿಯೂ ಇದರ ಉಪಯೋಗವಾಗುವದಿಲ್ಲ. ಇದರ ಉಪಯೋಗದಿಂದ ಇದರ ಉಪಯೋಗವು ಮಕ್ಕಳಿಂದ ಮತ್ತು ಸ್ತ್ರೀಯರಿಗೆ ಪಥ್ಯವಾಗಿದೆ. ಕಾಲ್ಚಳಕ್ಕೆಯನ್ನು (ಕೈಕಾಲ್ಸ್ ಮುಂತಾಗಿರುವ ಉಪಾಯವಾಗಿದೆ) ಡೊಡ್ಡಾಕ್ಕರ ಲಕ್ಷಣವಾಗಿ ಕಮಲ್ಕರ್ಷಣೆಯೂ (ಕಿವಿಯ ವ್ಯಾಧಿಗಳನ್ನೂ) ಕಣ್ಣುಗಳಿಗೆ ಉಪಯೋಗವಾಗುವುದು. ಬೆಲೆ ಬಾಟಲಿಗೆ ರೂ. ೨-೮-೦

ಏಷ್ಯಾ ಮೆಡಿಸಿನ್ ಜವೇರಿಯನ್ ಮೆಡಿಸಿನ್ ಕಂಪನಿ
ಪ್ರೈವೇಟ್ ಲಿಮಿಟೆಡ್ ಬೊಂಬಾಯಿ ೨

ತಾ. 9-11-46ರಲ್ಲು ತಾಲೂಕಿನ ಕೃಷಿಕರ ಸಂಘದ ನೇತೃತ್ವದಲ್ಲಿ ಕೃಷಿಕರ ಸಭೆ ಯೊಂದು ನಂಜೇಣು ಮೈದಾನದಲ್ಲಿ ಜರಗಿತು. ತಾಲೂಕಿನ ಸಾವಿರಾರು ಕೃಷಿಕರನ್ನೊಳಗೊಂಡ ಸಾರ್ವಜನಿಕ ಮೆರವಣಿಗೆಯೂ ಇತ್ತು. ಕೃಷಿಕರ ಈಗಿನ ಕುಂದುಕೊರತೆಗಳನ್ನು ತಾ. 14-11-46ಕ್ಕೆ ಕುಂದಾಪುರಕ್ಕೆ ಬರುವ ಮಾನ್ಯ ದೆವಿನ್ಸ್ ಮಂತ್ರಿಗಳಿಗೆ ನಿವೇದಿಸಿಕೊಳ್ಳಬೇಕೆಂದಾಯಿತು.

ಕಟಪಾಡಿ:— ಬ್ರಹ್ಮಶ್ರೀ ನಾರಾಯಣ ಗುರುಸ್ವಾಮಿ ಸೇವಾ ಸಮಿತಿ, ದೇವಸ್ಥಾನದಲ್ಲಿ ಪದಿಮೂರನೇ ವಾರ್ಷಿಕೋತ್ಸವವು ತಾ. 5-11-46ರ ಪರೆಗೆ ಜರಗಿಸಲ್ಪಟ್ಟು ಶ್ರೀ ದೇವೀ ಸಪ್ತಾಹ ಮಹೋತ್ಸವದೊಂದಿಗೆ ಮಂಗಲವಾಯಿತು; ಫಲ, ಪುಷ್ಪ, ಪೂಜಾದಿ ಸೇವೆಗಳು ಅನೇಕ ಸಪ್ಪಕ್ಕರಿಂದ ಅರ್ಪಿಸಲಾಗಿದೆ.

ದ. ಕ. ಜಿಲ್ಲಾ ಗ್ರಾಮೋದ್ಧಾರ ಸಂಘ, ಕಾರ್ಕಳ:— ಈ ಸಂಘದ ಸಮಿತಿಯ ಸಭೆಯು ತಾ. 27-10-46ರಲ್ಲಿ ಮುಂಗೂರು ಎಸ್. ಆರ್. ಎಸ್. ಹೋಮಿನ ಹಾಲಿನಲ್ಲಿ ಕೆ. ಬಿ. ಜನರಾಜ ಹೆಗ್ಡೆರ ಅಧ್ಯಕ್ಷತೆಯಲ್ಲಿ ಜರಗಿತು. ಸಮಿತಿಯ ಸಭೆಯ ಸ್ನೇಹಿತರು ಈ ಕೆಳಗಿನ ಮಹನೀಯರು ಸಮಿತಿಯಲ್ಲಿ ಕೆಲಸ ಮಾಡಲಿಕ್ಕೆ ಒಪ್ಪಿರುವರೆಂದು ಹೇಳಿದರು. ಶ್ರೀಗಳಾದಃ- ಕೆ. ಸದಾನಂದ ಹೆಗ್ಡೆ, ಕೆ. ಬಿ. ಜನರಾಜ ಹೆಗ್ಡೆ, ಕೆ. ಮಹಾಬಲ ಹೆಗ್ಡೆ, ಎಮ್. ಸುಬ್ಬರಾವ್ ಅಧಿಕಾರಿ, ಸಿ. ವಿ. ಉಪಾಧ್ಯಾಯ, ಎ. ಪಿ. ಸೆಟ್ಟಿ, ಎಸ್. ಎಲ್. ಎ, ಕೆ. ಪಿ. ಸುಕುಂದ ಪ್ರಭು, ಕೆ. ಈಶ್ವರ, ಎಮ್. ಎಲ್. ಎ, ಎಮ್. ನುಂಜುನಾಥ ಹೆಬ್ಬಾರ, ಎಚ್. ಉಮೇಶರಾವ್, ಡಾಕ್ಟರ್ ಎಫ್. ಎಜ್. ಬಡಿಯರ್, ಕೆ. ಶ್ರೀನಿವಾಸ ಶೆಣೈ, ಎಮ್. ಜಾರಪ್ಪ, ಡಾಕ್ಟರ್ ಸಿ. ರಾಮಕಾಮತ್, ಎಚ್. ಕೆ. ತಿಂಗಳಾಯ(Co-opted)

ಸಂಘಕ್ಕೆ ಈ ಕೆಳಗಿನ ಅಧಿಕಾರಿ ವರ್ಗದವರೂ ಸದಸ್ಯರೂ ಕೂಡಿರುವ ಕಾರ್ಯನಿರ್ವಾಹಕ ಮಂಡಳಿಯನ್ನು ಆರಿಸಲಾಯಿತು. ಶ್ರೀಗಳಾದ ಕೆ. ಬಿ. ಜನರಾಜ ಹೆಗ್ಡೆ, ಅಧ್ಯಕ್ಷರು, ಕೆ. ಮಹಾಬಲ ಹೆಗ್ಡೆ, ಉಪಾಧ್ಯಕ್ಷರು; ಪಿ. ವಿ. ಉಪಾಧ್ಯಾಯ, ಕೋಶಾಧಿಕ್ಷರು; ಎಮ್. ಸುಬ್ಬರಾವ್ ಅಧಿಕಾರಿ, ಕೆ. ಪಿ. ಸುಕುಂದ ಪ್ರಭು, ಜತೆಕಾರ್ಯದರ್ಶಿಗಳು; ಎ. ಪಿ. ಶೆಟ್ಟಿ, ಎಮ್. ಎಲ್. ಎ., ಎಚ್. ತಿಂಗಳಾಯ, ಸದಸ್ಯರು.

ಸಂಘದ ಕಡೆಯಿಂದ ಪ್ರಕೃತ ಪ್ರಾಯಸ್ಥರಿಗೆ ವಿದ್ಯೆ ಕಲಿಸುವುದು, ಸಮೀತ ಪ್ರಾಥಮಿಕ ಶಿಕ್ಷಣ ಚಳವಳಿ, ಮದ್ಯಪಾನ ನಿಷೇಧ, ಗ್ರಾಮಗಳಲ್ಲಿ ಕೈಗಾರಿಕೆ, ಗ್ರಾಮಗಳಲ್ಲಿ ರಸ್ತೆಗಳು ಮೊದಲಾದ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕೆಂದಾಯಿತು.

ಬೈಂದೂರು— ತಾ. ೨೦ರಲ್ಲಿ ಎಡತ್ತರೆ ವಿಲೇಜ ಕಮಿಟಿ ಪ್ರೆಸಿಡೆಂಟರಾದ ಶ್ರೀ ಪಣ್ಣಾ ರಾಮರಾಯರ ಅಧ್ಯಕ್ಷತೆಯಲ್ಲಿ, ಬೈಂದೂರು ಗಿರಣಿ ವಸ್ತ್ರ ವ್ಯಾಪಾರಿಗಳ ಸಭೆ ಜರಗಿತು ಇದುವರೆಗೆ ಕೊಟ್ಟಿಂತೆ ನವಂಬರ್ ಆಖೈರಿಯ ವರೆಗೆ ಗಿರಣಿ ಬಟ್ಟೆಗಳನ್ನು ಹೊಂಚಿಸಬೇಕು; ಈಗ ಕೋಟಿಗಾ ಪ್ರಕಾರ ಬರುವ ಬಟ್ಟೆಯ ಪ್ರಮಾಣ ಸಾಲದು; ಎಲ್ಲ ನಮೂನೆಯ ಬಟ್ಟೆ- ನುಸ್ಮಿವಾಗಿ ಹೆಂಗುಸರಿಗೆ ಒಪ್ಪುವ ಸೀರೆಗಳನ್ನು ಒದಗಿಸಬೇಕು--ಇತ್ಯಾದಿ ನಿರ್ಣಯಗಳಾಯಿತು.

ದ ಕ. ಸಂಸ್ಕೃತ ಮಹಾ ಸಭೆಯ ತೃತೀಯ ವಾರ್ಷಿಕಾಧಿವೇಶನ— ಪೆರ್ದಾಲ ಸಂಸ್ಕೃತ ಕಾಲೇಜಿನಲ್ಲಿ ತಾ. ೨೦ನೇ ರವಿವಾರ ಪೂರ್ವಾಹ್ನ ಉದುಪಿ ಕಾಲೇಜಿನ ಪಂಡಿತರಾದ ಶ್ರೀ ಅಲಪೂರು ಸೀತಾರಾಮಾಚಾರ್ಯರ ಅಧ್ಯಕ್ಷತೆಯಲ್ಲಿ ಸಂಸ್ಕೃತ ದಾರಿದ್ರ್ಯಾಪಕ ಸಂಘದ ಮಹಾ ಸಭೆ ನಡೆಯಿತು. ಶ್ರೀಯುತರುಗಳಾದ ಡಿ. ನಾರಾಯಣ ಶಾಸ್ತ್ರಿಗಳು, ಕೆ ಶಾಮ ಭಟ್ಟರು ಮೊದಲಾದವರು ಸಂಘದ ಆಂತರಿಕ ಪಾಹ್ಯ ಚಟುವಟಕೆಗಳ ಕುರಿತಾಗಿ ಮಾತನಾಡಿದರು ಅಧ್ಯಕ್ಷ ಭಾಷಣಾನಂತರ ಸರಕಾರದ ಹಿರಿಯಂಟಲ್ ನಿವ್ಯಾಭ್ಯಾಸದ ಪ್ರಶ್ನಾವಳಿಗೆ ಉಪಸಮಿತಿಯವರು ಉತ್ತರಿಸಿದ ಉತ್ತರವನ್ನು ವಿಮರ್ಶಿಸಿ ಸಮರ್ಥಿಸಲಾಯಿತು. ಮಾನ್ಯ ವಿದ್ಯಾಸುಸರಕಾರದವರೊಡನೆ ಹಿರಿಯಂಟ್ ಟೈಟಲ್ಸ್ ಗಳಿಗೆ ಇತರ ಡಿಗ್ರಿಗಳಿರುವ ನಾಗರಿಕ ಸ್ಥಾನಮಾನಗಳನ್ನು ಕೊಡಿಸಬೇಕೆಂದು ಕೇಳಿಕೊಳ್ಳುವ, ವ್ಯಾಕರಣಭದ ಈ ಎರಡು ವರ್ಷಗಳಲ್ಲಿ ಕೆಲಸ ಮಾಡಿದ ಸಂಘದ ಕಾರ್ಯ ಸಮಿತಿಯವರನ್ನು ಅಭಿನಂದಿಸುವ ನಿರ್ಣಯಗಳು ಸ್ವೀಕೃತವಾದವು ಮುಂದಿನ ವರ್ಷಗಳಿಗೆ ಕಾರ್ಯಸಮಿತಿಯ ಚುನಾವಣೆ ನಡೆದು ಧನ್ಯವಾದದೊಡನೆ ಸಭೆ ಮುಕ್ತಾಯವಾಯಿತು.

Notice (ನೋಟಿಸು)

THE DANGAL NAYAK BANK LIMITED

KATAPADI S K.

ದಿ ಸಾಂಗಾಳಿ ನಾಯಕ್ ಬ್ಯಾಂಕ್ ಲಿಮಿಟೆಡ್, ಕಟಪಾಡಿ, ದ. ಕ.

ಈ ಕೆಳಗೆ ಹೆಸರು ಕಾಣಿಸಿದ ಅಸಾಮಿಗಳಿಗೆ ಕೊಟ್ಟ ರಿಜಿಸ್ಟ್ರೀ ನೋಟಿಸುಗಳಲ್ಲಿ ನೈಕೆ ಒಂದನೆಯವರು ಮತ್ತು ನಾಲ್ಕನೆಯವರು ಮೃತಪಟ್ಟಿರುವರಾಗಿ ನೋಟಿಸುಗಳು ನಮಗೆ ಹಿಂದೆ ಬಂದಿರುವುದರಿಂದಲೂ, ಎರಡನೆಯವರಿಗೆ ಮತ್ತು ಮೂರನೆಯವರಿಗೆ ನೋಟಿಸು ಜ್ಯಾರಿಯಾದರೂ ಈ ತನಕ ಬಡ್ಡಿ ಕೊಡದೆ ಇದ್ದುದರಿಂದಲೂ, ಸದ್ರಿ ಅಸಾಮಿಗಳು ಈ ಬ್ಯಾಂಕಿನಿಂದ ಪಡೆದ ಲೋನುಗಳಲ್ಲಿ ಈಡಿರುವ ಚಿನ್ನಾಭರಣಗಳನ್ನು ಇದೇ ತಿಂಗಳ ತಾರೀಕು 22ನೇ ಶುಕ್ರವಾರ ದಿವಸ ಬೆಳಿಗ್ಗೆ ಸ್ಥಾಂಟ 9 30ಕ್ಕೆ ಆಥವಾ ಬೇಂಕಿನೆಯುಕ್ತ ತೋರುವ ಇತರ ದಿವಸಗಳಲ್ಲಿ ಪುನಃ ನೋಟಿಸು ಕೊಡದೇ ಬಹಿರಂಗವಾಗಿ ಸಲಂ ಮಾಡಲ್ಪಡುವುದು. ತಿಳಿದಿರಲಿ.

ಲೋನ್ ಸಂಖ್ಯೆ	ಹೆಸರು ಮತ್ತು ನಿವಾಸ	ಅಸಲು
124/44	ಅಬ್ದುಲ್ ಖಾದರ್ ಸಾಹೇಬ್, ಬುಜಾರ್ ಸಾಹೇಬರ ಮಗ, ಮಣಿಪುರ ಗ್ರಾಮ, ಉಡುಪಿ, ದ. ಕ.	25—0—0
230/44	ನಾರಾಯಣ ಶೆಟ್ಟಿ, ಸೂರು ಶೆಟ್ಟಿ ಮಗ, ಮೂಡಬೆಟ್ಟು, ಕಟಪಾಡಿ, ದ. ಕ.	15—0—0
489/44	ದೋಜಾ ಪೂಜಾರಿ, ಸುಬ್ಬ ಪೂಜಾರಿಯ ಅಳಿಯ ಯೇಣಗುಡ್ಡೆ, ಕಟಪಾಡಿ, ದ. ಕ.	7—0—0
26/44	ತುಂಬೆ ಪೂಚಾರ್ತಿ, ಬೊಗ್ಗಿ ಪೂಜಾರ್ತಿಯ ಮಗಳು ಪೊಸವಾ, ಕಟಪಾಡಿ, ದ. ಕ.	10—0—0

Office of the Bank
Katapadi, S. K.
11th November, 1946

H. Gopalkrishna Shenoy
Ag. Agent

NOTICE

ಉಡ್ಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ—

O. P. 48/1946

ಮಹಾಬಲ- ಗಣಪಯ್ಯ ಸೆಟ್ಟಿಗಾರರ ಮ್ಯಾನೇರ ಮಗ-ಕ್ಷೇಮಚಿಂತಕಳು, ತಾಮು.. ತುಂಗಮ್ಮ ಸೆಟ್ಟಿಗಾರಿಳು-ಗಣಪಯ್ಯ ಸೆಟ್ಟಿಗಾರರ ವಿಧನೆ-ಉಡ್ಪಿ ತಾಲೂಕು ಕಡೆಕಾರು ಗ್ರಾಮದ ಕಿನ್ನಿಮೂಲ್ಕಿಯಲ್ಲಿರುವವರು--

—ಅರ್ಜಿದಾರರ.

ಈ ನೂಲಕ ಸಮಸ್ತ ಜನರಿಗೆ ತಿಳಿಯಪಡಿಸುವುದೇನಂದ್ರೆ:

ಉಡ್ಪಿ ತಾಲೂಕು ಕಡೆಕಾರು ಗ್ರಾಮದ ಕಿನ್ನಿ ಮೂಲ್ಕಿಯಲ್ಲಿ ತಾ. 12 4 44ರಲ್ಲಿ ನ್ಯುತಪಟ್ಟ ಮಂಜಯ್ಯ ಸಟ್ಟಿಗಾರ್ರ ಮಗ ಗಣಪಯ್ಯ ಸೆಟ್ಟಿಗಾರ್ರ ಜಾಬ್ತು ಈ ಕೆಳಗೆ ಕಾಣಿಸಿದ ಪಣಗಳನ್ನು ವಸೂಲು ಮಾಡುವ ರಿತ್ಸ್ನ ಹೆಸರಿನಲ್ಲಿ ಒಂದು ವಾರೀಸು ಸರ್ಟಿಫಿಕೇಟು ಕೊಡಿಸಬೇಕಾಗಿ ನಗ್ರೆರ ಅಜೀವಾರನ ಕಡೆಯಿಂದ ಮಾಡಿಕೊಂಡ ಮೇಲ್ಕಂಡ ಅರ್ಜಿಯು ತಾರೀಕು 20-11 46ಕ್ಕೆ ಇಡೋ ರಾಗಿಯದೆ. ಆಕ್ಷೇಪಪುಳ್ಳವರು ಸದ್ರಿ ದಿವಸ ಸದ್ರಿ ಕೋರ್ಟು ಮುಂದೆ ಹಾಜರಾಗಿ ಸ್ಯಾ ಹೀರುಮಾಡಿಕೊಳ್ಳಬಹುದು

ವಸೂಲಾಗತಕ್ಕ ಪಣಗಳ ವಿವರ

1. ಕಾರ್ಕಳ ತಾಲೂಕು ಸಾಣೂರು ಗ್ರಾಮದಲ್ಲಿರುವ ಚಿನ್ನ ಸೆಟ್ಟಿಗಾರರ ಮಗ ತೊಂಬ ಸೆಟ್ಟಿಗಾರರಿಂದ ಜವುಳಿ ಲೇವಾದೇವಿ ಜಾಬ್ತು mutual and current account ಪ್ರಕಾರ ಬರತಕ್ಕ ಅಸಲು ರೂಪ್ಯಾ 53 1-0 ಮತ್ತು ಇದರ ಮೇಲಣ ಸಾ. ಶೇ. 6½ರ ಸಲೆಯಲ್ಲಾಗುವ ಬಡ್ಡಿ.

2. ಕಾರ್ಕಳ ತಾಲೂಕು ಪ್ರಾಂತ್ಯ ಗ್ರಾಮದ ಮೂಡಬಿದ್ರಿಯಲ್ಲಿರುವ ೪ ಮಿತ್ತ ಬೈಲು ಮುಂಡಳೀಕ ನ್ಯಾಕ್ಕಿಂದ ಜವುಳಿ ಲೇವಾದೇವಿ ಜಾಬ್ತು mutual and current account ಪ್ರಕಾರ ಬರತಕ್ಕ ಅಸಲು ರೂ 366-3-3 ಮತ್ತು ಇದರ ಮೇಲಣ ಸಾ-ಶೇ. 6½ರ ಸಲೆಯಲ್ಲಾಗುವ ಬಡ್ಡಿ.

3. ಮೂಡಬಿದ್ರಿ ಟೌನ್‌ನಲ್ಲಿ ಜವುಳಿ ವ್ಯಾಪಾರಸ್ಥರು M S ತಿಮ್ಮಪ್ಪ ಎಂಡ್ ಸನ್ಸ್ ಇವರಿಂದ ಜವುಳಿ ಲೇವಾದೇವಿ ಜಾಬ್ತು mutual and current account ಪ್ರಕಾರ ಬರತಕ್ಕ ಅಸಲು ರೂಪ್ಯಾ 281-8-9 ಮತ್ತು ಇದರ ಮೇಲಣ ಸಾ ಶೇ-6½ರ ಸಲೆಯಲ್ಲಾಗುವ ಬಡ್ಡಿ

4. ಕಾರ್ಕಳ ತಾಲೂಕು ಮೂಡಬಿದ್ರಿ ಟೌನ್‌ನಲ್ಲಿರುವ ಜವುಳಿ ವ್ಯಾಪಾರಸ್ಥರು ಜೋಕಿಮ್ ಕಿಟ್ಟಿಂಣಯ್ಯನವರ ಮಗ B ರಾಮರಾಯರಿಂದ ಜವುಳಿ ಲೇವಾದೇವಿ ಜಾಬ್ತು mutual and current account ಪ್ರಕಾರ ಬರತಕ್ಕ ಅಸಲು ರೂ-481 13 9 ಮತ್ತು ಇದರ ಮೇಲಣ ಸಾ. ಶೇ 6½ರ ಸಲೆಯಲ್ಲಾಗುವ ಬಡ್ಡಿ.

5. ಕಾರ್ಕಳ ತಾಲೂಕು ಮೂಡಬಿದ್ರಿ ಟೌನ್‌ನಲ್ಲಿರುವ ಜವಳಿ ವ್ಯಾಪಾರಸ್ಥರು ನೋಬರ್ಟ್ ನೋಜರ ಮಗ J-J ಡಿಸೋಜರಿಂದ ಜವುಳಿ ಲೇವಾದೇವಿ ಜಾಬ್ತು mutual and current account ಪ್ರಕಾರ ಬರತಕ್ಕ ಅಸಲು ರೂಪ್ಯಾ 314-9 0 ನು ತ್ತು ಇದರ ಮೇಲಣ ಸಾ. ಶೇ 6½ರ ಸಲೆಯಲ್ಲಾಗುವ ಬಡ್ಡಿ.

6. ಕಾರ್ಕಳ ತಾಲೂಕು ಮೂಡಬಿದ್ರಿ ಟೌನ್‌ನಲ್ಲಿರುವ ಜವುಳಿ ವ್ಯಾಪಾರಸ್ಥರು ನೋಬರ್ಟ್ ಡಿ ಸೋಜರ ಮಗ L-D'Souza ಮತ್ತು ಇವರ ತಂಬೆ ನೋಬರ್ಟ್ ನೋಜರಿಂದ ಸಹಾ ಜವುಳಿ ಲೇವಾದೇವಿ ಜಾಬ್ತು mutual and current account ಪ್ರಕಾರ ಬರತಕ್ಕ ಅಸಲು ರೂ-100-0-0 ನುತ್ತು ಇವರ ಮೇಲಣ ಸಾ-ಶೇ-6½ರ ಸಲೆಯಲ್ಲಾಗುವ ಬಡ್ಡಿ ಸಹಾ.

ಈ ಮೇರೆಗೆ ಆಗಿರುತ್ತದೆ.

K. Ramakrishna Rao,
Vakil for Petitioner.

ಉಡ್ಪಿ, ತಾ. 12-11-46.

ಸ್ವೀಕಾರ-ವಿಮರ್ಶೆ

೩೪. ಮೈಗಜಲ–ಲೇಖಕರು ಶ್ರೀ. ಟಿ. ಆರ್. ಭಾಗವತ್, ಎಂ. ಎ., ಪ್ರಕಾಶಕರು–ದಿ ಕೆನರಾ ಬುಕ್ಸ್ ಎಂಡ್ ನ್ಯೂಸ್ ಏಜೆನ್ಸಿ, ಲಾಲ್‌ಬಾಗ್, ಮುಂಬಯಿ ೧೨. ಕ್ರೌನ್ ಆಕಾರದ ಪುಟಗಳು ೬೬. ಬೆಲೆ ೧೨ ಆಣೆ.

ಇದರಲ್ಲಿ ಕನ್ನಡ ಪುಸ್ತಕ ಪ್ರಪಂಚಕ್ಕೆ ಹೊಸಬರಾದ ಶ್ರೀ. ಭಾಗವತರ ಏಳು ಕತೆಗಳು ಸಂಗ್ರಹವಾಗಿವೆ. ಮೊದಲನೆಯ "ನೃಗಜಲ" ಮತ್ತು ಕೊನೆಯ "ಸೂರ್ಯಗ್ರಹಣ" ಇವು ಸಾಧಾರಣ ಉತ್ತಮವಾದ ಸಣ್ಣ ಕತೆಗಳೆನ್ನಬಹುದು. "ಸಮಾಧಿಸ್ಥಂಜಾವಂಬುವಿನ ಐತಿಹಾಸಿಕ ಹಿನ್ನೆಲೆಯುಳ್ಳ ಸ್ಫಟಿಕೆ. "ನಂಬುಜುಂದ" ಮತ್ತು "ಪುಟ್ಟು" ಇವು ಕತೆಗಳೆನ್ನುವುದಕ್ಕಿಂತಲೂ ತುಸು ಆಸಕ್ತಿಯಿಂದ ಬರೆದ ವ್ಯಕ್ತಿಚಿತ್ರಗಳೆಂದರೆ ವಾಸಿ. "ಬಲಿದಾನ" ಮತ್ತು "ಬೂದಿಗಳವು" ಇವು ಜಾನ್ಯವಿಕ ಸಮ ಚಿತ್ರಗಳು. ಒಟ್ಟಿನಲ್ಲಿ ಸಂಗ್ರಹವು ತೀರ ಸಾಮಾನ್ಯ ತರಗತಿಯದೆಂಬುದಾಗಿ ತೋರಿಬಂದರೂ, ಲೇಖಕರಲ್ಲಿ ಕಥನಕಲೆಯ ಕೌಶಲವು ಜೀವರೂಪದಲ್ಲಿದೆಯೆಂಬುದನ್ನು ಖಂಡಿತವಾಗಿ ಹೇಳಬಹುದು. ಮುಂದೆ ಇದಕ್ಕಿಂತಲೂ ಉತ್ತಮವಾದ ಕತೆಗಳನ್ನು ಅವರಿಂದ ನಿರೀಕ್ಷಿಸಬಹುದಾಗಿದೆ.

೩೫. ಪಲಾಯನ:– ಕವನ ಸಂಗ್ರಹ. ಕವಿಗಳು–ಶ್ರೀ. ನಿ. ಜ ಭಟ್ಟ; ಪ್ರಕಾರಕರು ಶ್ರೀ. ಮ. ಗ. ಕೆಟ್ಟಿ, ಬಂಕಿಕೊಡ್ಲ. ಫೂಲ್‌ಸ್ಕೆಪ್ ೧/೮ ಆಕಾರದ ಪುಟಗಳು ೧೦೦. ಬೆಲೆ ರೂ. ೧—೪—೦.

ಈ ಕಿರಿಯ ಕವನ ಸಂಗ್ರಹದಲ್ಲಿ ಶ್ರೀ. ವಿ. ಜಿ. ಭಟ್ಟರು ಎಂದೋ ಬರೆದಿದ್ದು "ಕತ್ತಲೆಯಲ್ಲಿ ಬಿದ್ದಿದ್ದ" ಹಲವು ಜಿಕ್ಕಪುಟ್ಟ ಕವಿತೆಗಳು ಪ್ರಕಟವಾಗಿವೆ. ಪ್ರತಿಯೊಂದು ಕವನವೂ ಸಣ್ಣ ತೀರ ಚುಟುಕಾಗಿದ್ದು "ಕವನವನಿತೆ" ಎಂಬಂತಿದ್ದರೂ ಅಲ್ಲಲ್ಲಿ ಸುಂದರ ಭಾವಗಳು ಹೊರವಾಗಿವೆ. ಅವುಗಳಲ್ಲಿ ಅನೇಕ ಮುಮ್ಮುಕ್ತಿ ಶೃಂಗಾರ, ಇನ್ನೂ ಹಾಸ್ಯರಸ ಪ್ರಧಾನವಾಗಿವೆಯಾದುದರಿಂದ ತಮಗಿರುವ ಸೆಚ್ಚುಗೆಗೆ ಪಾತ್ರವಾಗಬಲ್ಲವು. ಕವಿಗಳು ಉಪಯೋಗಿಸಿದ ಛಂದಸ್ಸು ಮಾತ್ರ ಅವರದೇ ಎಂಬಂತಿದೆ. ಪುಸ್ತಕದ ಕ್ರಯ ಸ್ವಲ್ಪ ಜಾಸ್ತಿಯಾಯಿತೆಂದೇ ನನ್ನ ಅಭಿಪ್ರಾಯ.

೩೬. ಎಚ್ಚತ್ತ ಅಗ್ನೇಯ ಏಶಿಯ:–ಲೇಖಕರು–ಶ್ರೀ. ಎಂ. ಹರಿದಾಸ, ವಿಶಾಖಪಟ್ಟಣ; ಪ್ರಕಾಶಕರು: ಕಾಮತ್ ಬ್ರದರ್ಸ್, ಕುಮಟಾ. ಪ್ರಕಾರ: ಸಾಹಿತ್ಯ ಭಂಡಾರ, ಹುಬ್ಬಳ್ಳಿ. ಪುಟಗಳು ೧೨೮, ಬೆಲೆ ರೂ. ೨—೪—೦.

ಜಪಾನ್ ಆಕ್ರಮಣಕ್ಕೊಳಗಾದಂದಿನಿಂದಲೇ ಇಂಡೋಚೀನ, ಸಯಾಂ, ಮಲಯಾ, ಇಂಡೋನೇಶಿಯ, ಬರ್ಮಾ ಮುಂತಾದ ಅಗ್ನೇಯ ಏಶಿಯದ ದೇಶಗಳ ಸ್ಥಿತಿಗತಿಗಳ ಕಡೆಗೆ ಪ್ರಪಂಚದ ದೃಷ್ಟಿ ಹರಿಯಿತೆನ್ನಬೇಕು. ಕತ್ತಲೆಯಲ್ಲಿದ್ದ ಈ ದೇಶಗಳ ರಾಜಕೀಯ, ಆರ್ಥಿಕ, ಸಾಮಾಜಿಕ ನುತ್ತು ಏತಿಹಾಸಿಕ ಸ್ಥಿತಿಯ ಅಲ್ಪಸ್ವಲ್ಪ ಪರಿಚಯವಾದರೂ ಜಗತ್ತಿಗೆ ಆದುದು ಜಪಾನ್ ಆಕ್ರಮಣದ ಅನಂತರವೇ ಆಗಿದೆ. ಈಗಾಗಲೇ "ದ್ವಿತೀಯ ಮಹಾಯುದ್ಧ" "ಉಕ್ಕಿನ ಮನುಷ್ಯ" ಮುಂತಾದ ಉತ್ತಮ ರಾಜಕೀಯ ಗ್ರಂಥಗಳನ್ನು ಬರೆದು ಪರಿಚಿತರಾಗಿರುವ ಶ್ರೀ. ಎಂ. ಹರಿದಾಸರು, ನೇಲೆ ಹೇಳಿದ ದೇಶಗಳ ಸೂಕ್ಷ್ಮ ಪರಿಚಯವನ್ನು ತಾವು ಮಾಡಿಕೊಂಡು ಈ ಪುಸ್ತಕರೂಪದಲ್ಲಿ ಆವನ್ನು ಪ್ರಕಟಿಸಿ, ಕನ್ನಡ ಜನತೆಗೆ ತುಂಬ ಉಪಕಾರ ಮಾಡಿದ್ದಾರೆ. ಕನ್ನಡದಲ್ಲಿ ರಾಜಕೀಯ ವಿಷಯಗಳಿಗೆ ಸಂಬಂಧಿಸಿದಂತಹ ಪಲುತ್ತ ಸಮಗ್ರಂಥಗಳು ತೀರವಿರಳ ಆಗ್ನೇಯ ಏಶಿಯದ ದೇಶಗಳ ಚರಿತ್ರೆ, ರಾಜಕೀಯ ಜೀವನ, ಯುದ್ಧಕಾಲದಲ್ಲಿ ಅವು ಹೊಂದಿದ ಜಾಗೃತಿ ಮೊದಲಾದ ಸಂಗತಿಗಳ ಸ್ಪೆಲ್ಲ ಸವಿಸ್ತರವಾಗಿ ವಿವರಿಸುವ ಈ ಗ್ರಂಥವು ನಿಜಕ್ಕೂ ಸಂಗ್ರಹಯೋಗ್ಯವಾಗಿದೆ.

ವಿಕಟ ವಿನೋದಿನಿ:–ವಿಶೇಷ ಸಂಚಿಕೆ. ಕ್ರೌನ್ ೧/೪ ಆಕಾರದ ಪುಟಗಳು ೧೦೦. ವಿಕಟ ವಿನೋದಿನಿ ಆಫೀಸು, ಅರಳೇಪೇಟೆ, ಬೆಂಗಳೂರು.

ಕನ್ನಡದಲ್ಲಿ, ನಗೆ ಸಾಹಿತ್ಯದ ಪ್ರಚಾರದ ಮಟ್ಟಿಗೆ ಅತಿ ಹಳೆಯದಾದ ಪತ್ರಿಕೆ ವಿಕಟ ವಿನೋದಿನಿ. ಅದು ತನ್ನ ಛಿದಿನೆಯ ಜನ್ಮದಿನದ ಸಂದರ್ಭದಲ್ಲಿ ಈ ಸಂಚಿಕೆಯನ್ನು ಹೊರಡಿಸಿದೆ. ಇದರಲ್ಲಿ, ಅನೇಕ ಹಾಸ್ಯಭರಿತ ಕತೆ, ಲೇಖನ ಚಿತ್ರ ಇತ್ಯಾದಿಗಳಿವೆ. ಬರೆ ಹಗಾರರಲ್ಲಿ ಹೆಸರಾಂತವರು ಕಾಣಿಸುವುದಿಲ್ಲ. ಪತ್ರಿಕೆಯು ಏರ್ಪಡಿಸಿದ ಕಥಾ ಸ್ಪರ್ಧೆಗೆ ಬಂದ ಕತೆಗಳಲ್ಲಿ ಬಲವನ್ನು ಆಯ್ದು ಪ್ರಕಟಿಸಿರುವಂತೆ ತೋರುವುದು. ವಿಕಟ ವಿನೋದಿನಿಯರು ಸ್ವಲ್ಪ ಸಂಪ್ರದಾಯಸ್ಥರು" ಎಂಬುದಾಗಿ ಸಂಪಾದಕರೇ ನುಡಿದಿದ್ದಾರೆ. ಈ ಸಂಚಿಕೆಯೂ ಆದಕ್ಕೊಂದು ಉದಾಹರಣೆಯೆಂದರೆ ತಪ್ಪಾಗದು. ವಿಕಟವಿನೋದಿನಿಯರ ಛಿನೆಯ ಜನ್ಮದಿನೋತ್ಸವದ ಸಮಯದಲ್ಲಿ ಅವರನ್ನು ಅಭಿನಂದಿಸಿ, ಮುಂದಿನ ಶುಭವನ್ನು ಹಾರೈಸುತ್ತೇನೆ.

—ಕೆ ವಿ. ಎಸ್.

ನೋಟೀಸ್

ಕಾಸರಗೋಡು

ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟ್‌ನಲ್ಲಿ

ಪುತ್ತೂರು ಡಿ. ಮು. ಕೋರ್ಟ್
O. S No. 45/35
ಕಾ. ಡಿ. ಮು. ಕೋರ್ಟ್
R. E. P. No. 476/46
R. E. A. No. 860/46

ಪದ್ಮಾವತಿ ಅಮ್ಮಾ – – ಅರ್ಜಿದಾರಳು
vs
ಪ್ರತಿವಾದಿ–ತಂಬಾನ್ ನ್ಯಾರ್ ಪೈತಿ ಪಾರಿಸ್ತಾರರು ನಾರಂತಟ್ಟಿ ಕೋಮಪ್ಪ ಸಂಜ್ಯಾರ್ ಸಹಾ – – – – ೮೫ ಪಾಂಡೆಂಟ್ರು

ಸದ್ರಿ ಆರ್ಜಿದಾರಳ ಕಡೆಯಿಂದ ನೋಟೀಸ್.

ಸದ್ರಿ ವ್ಯವಹರಣೆಯ 5ನೇ ರೈಪಾಂಡೆಂಟ ನಾರಾಂತಟ್ಟಿ ರಾಘವನ್ ನಂಬ್ಯಾರ್, 7ನೇ ರೈಪಾಂಡೆಂಟಳು ನಾರಾಂತಟ್ಟಿ ಉತ್ತೇಮ, 9ನೇ ರೈಪಾಂಡೆಂಟ ನಾರಂತಟ್ಟಿ ಚಾತ್ತು ನಂಬ್ಯಾರ್, 14ನೇ ರೈಪಾಂಡೆಂಟ ನಾರಂತಟ್ಟಿ ಕುಂಞಾ ಕಾಣನ್ ನ್ಯಾರ್, 16ನೇ ರೈಪಾಂಡೆಂಟ ನಾರಂತಟ್ಟಿ ಕಂಞಾಂಬು ನ್ಯಾರ್ ಮತ್ತು 19ನೇ ರೈಪಾಂಡೆಂಟಳು ನಾರಂತಟ್ಟಿ ಲಕ್ಷ್ಮಿ ತಂಮ್ಮ ಕೂಡಾ 6 ಜನರಿಗೆ ತಿಳುವಳಿಕೆ ಬರ್ಕೆ:–

ಮೇಲ್ಕಂಡ ವ್ಯವಹರಣೆಯಲ್ಲಿ 4 ನುತ್ತು 16ನೇ ರೈಪಾಂಡೆಂಟರ ಹಕ್ಕಿನ ಬಾಬ್ತು ಸ್ಥಿರಾಸ್ತಿಗಳು ಜಪ್ತು ಬಗ್ಗೆ ಅಪೇಕ್ಷಿಸಿ ಸದ್ರಿ ಆರ್ಜಿದಾರಳು ದಾಕ್ಲು ಸೂಡಿದ ಮೇಲ್ಕಂಡ ಅಮ್ಮಜಾರಿಯು ತಾ. 20-11-46ಕ್ಕೆ XXI ನೇ ರೂಲು ಪ್ರಕಾರದ ನೋಟೀಸ್ ತಮ್ಮ ಬಗ್ಗೆ ಇಟ್ಟಿರುವದ್ರಿಂದ ಆಕ್ಷೇಪಿಸುವವರು ಸದ್ರಿ ವ್ಯಾದೇಗೆ ಕೋರ್ಟ ಮುಂದೆ ಹಾಜರಾಗುವರೇ ತಪ್ಪಿದ್ರೆ ಎಕ್ಸ್‌ಪಾರ್ಟಿಯಂದ ವಿಧಿಸಲಾದೀತೆಂಬ ಸಂಗ್ತಿ ಈ ಮೂಲಕ ತಿಳಿಸೋಣಾಗುತ್ತದೆ.

K. P. Madhava Rao,

ANNOUNCEMENT
THE VIJAYA BANK LTD.

To the Share Holders

(Consent of the Central Government has been obtained to this issue under defence of India Rule 94-A. It must be distinctly understood that in giving this consent the Government of India do not take any responsibility for the financial soundness of any scheme or for the correctness of any of the statements made or opinions expressed therein.)

It has been resolved to issue 4000 new shares of the Bank of the nominal value of Rs. 50/- per share at a premium of Rs. 5/- per share and admission fee of Re. 1/- per share. A sum of Rs 16/- per share (Rs. 10/- towards share capital deposit, Rs. 5/- towards premium and Re. 1/- towards admisssion fee) is payable on application and Rs. 15/- on allotment. The issue is confined in the first instance to the existing share-sholders who hold 3 shares or more in the proportion of one share to every three shares held by them. If acceptance to this offer is not received by the Head office or any of its branches, along with the necessary amount on or before 25-11-46, it will be deemed to have been declined.

The terms of issue and other particulars along with the application form have been separately despatched to the shareholders who hold 3 or more shares.

Applications for additional shares from the shareholders and applications for shares from other persons belonging to the Bunt alias Nadava Community may be made along with the necessary amount on or before 25-11-46. But such applications will be considered only subject to shares being available and the allotment of such shares shall be at the discretion of the Directors.

The subcription to the shares may be closed at any time earlier than 25-11-46 as soon as it is estimated that the Capital offered is taken up, except to the existing shareholdere who hold 3 or more shares to the extent of shares they are entitled.

Head office, Mangalore.

B. Mahabala Shetty,
SECRETARY.

NOTICE

ಕಾಸರಗೋಡು

ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟ್‌ನಲ್ಲಿ

ಕ್ರೌನ ನಂಬ್ರ 193/1946

ಸಾಯಕೃಷ್ಣ ಭಟ್ಟ ಸಹಾ . . . . ವಾದೀರು
ಶಂಕ್ರನಾರಾಯಣ

ನ್ಯಾಕಾನಸಹಾ . . . ಪ್ರತಿನಾದೀರ

ಇವರೊಳಗೆ

1. 8ನೇ ಪ್ರತಿವಾದಿ, ವೆಂಕಟ್ರಮಣ ನ್ಯಾಕಾ ಸುಬ್ರಾಯ ನ್ಯಾಕರ ಮಗ, ವರ್ಗದಾರ.

2. 9ನೇ ಪ್ರತಿವಾದಿ, ಸುಬ್ರಾಯ ನ್ಯಾಕಾ ವಾಸುದೇವ ನ್ಯಾಕರ ಮಗ, ವರ್ಗದಾರ.

ಕಾಟಿಕುಕ್ಕೆ ಮೊಗರು ಶ್ರೀ ದುರ್ಗಾ ಪರಮೇಶ್ವರಿ ದೇವರ ಛಂಡಾರದ ಟ್ರಸ್ಟಿಗಳು.

1ನೇಯನವರು ಪುತ್ತೂರು ತಾಲ್ಲೂ ಮೂಡೂರು ಗ್ರಾಮದ ಕರುಪಟ್ಟೆ ಎಂಬಲ್ಲಿಯೂ 2ನೇಯವರು ನೆಟ್ಟಣಿಗೆ ಗ್ರಾಮದ ಪುಳಿಮಾರಡ್ಕ ಎಂಬಲ್ಲಿಯೂ ಇರುವವರು.

ಇವರೀಗೆ—

ವಾದೀಯರ ಮಾಮೂಲುಖರೀದ ಕೈತಡೆಯಂತೆ ಪ್ರತಿವಾದೀರಗೆ ಶಾಶ್ವತವಾದ ಯಿಂಜಂಕ್ಷನ್ ಕೊಡಿಸಬೇಕೆಂತ ಪಗ್ಗೆರೆ ಅಪೇಕ್ಷಿಸಿ ವಾದೀರು ಪ್ರತಿವಾದೀರ ಮೇಲೆ ವಾಕ್ಲು ನೂಡಿದ ಮೇಲ್ಕಂಡ ವ್ಯಾಜ್ಯವು ತಾ. 23-11-1946ಕ್ಕೆ ಮೇಲಣ 8 ಮತ್ತು 9ನೇ ಪ್ರತಿವಾದೀರ ಹಾಜರಾತಿ ಬಗ್ಗೆ ಇಡಲ್ಪಟ್ಟಿದೆ ಎಂಬ ಸಂಗ್ತಿ ಈ ಮೂಲಕ ತಿಳಿಸೋಣಾಗುತ್ತದೆ.

B. S. Kakkilaya,
Advocate for Plaintiffs.
ಕಾಸರಗೋಡು, ತಾ. 6-11-46.

NOTICE

ಕುಂದಾಪುರ

ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟ್‌ನಲ್ಲಿ

S. C. 513/1946

ವಾದಿ. A. ಬಚ್ಚು ಮರಕಾಲ.

ಪ್ರತಿವಾದಿ. 1. ಅಲ್ಲಿ ಸಾಹೇಬ.
2. ಮಹಮ್ಮದ್ ಸಾಹೇಬ

ಸದ್ರಿ ಪಾನೆಯಲ್ಲಿ ಉಡ್ಪಿ ತಾಲ್ಲೂ ಪಡುತೋನ್ಸೆ ಗ್ರಾಮದಲ್ಲಿರುವ ಪೈಕಾಡಿ ಪಸನ್ ಸಾಹೇಬರ ಮಗ 1ನೇ ಪ್ರತಿವಾದಿ ಅಲ್ಲಿ ಸಾಹೇಬರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:–

ಪ್ರತಿವಾದಿರು ವಾದಿಗೆ ತಾ. 8-7-1945 ರಲ್ಲು ರೂ. 100ಕ್ಕೆ ಬರಕೊಟ್ಟ ಇಮೊಂಡು ನೋಟಿನ ಅಸ್ಲು ಬಡ್ಡಿ ಪಣಗಳನ್ನು ಬರ ಮಾಡಿಕೊಳ್ಳುವರೆ ವಾದಿಯು ದಾಖ್ಲು ಮಾಡಿದ ಮೇಲಿನ ವಾವೆಯು ತಾ. 28-11-46ಕ್ಕೆ ಮೇಲಿನ ಕೋರ್ಟಿನಲ್ಲಿ ತಸ್ಸಿಗೆ ಇಟ್ಟಿರುತ್ತದೆ. ಆ ಕುರಿತು ಏನಾದರೂ ಆಕ್ಷೇಪಣೆಗಳಿದ್ದರೆ ಆ ತಾರೀಕಿಗೆ ಮೇಲಿನ ಕೋರ್ಟು ಮುಂದೆ ಪಗಲು II ಗಂಟೆಗೆ ಹಾಜ್ರಾಗಿ ಜ್ಞಾಪೀರುಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ಈ ಮೂಲಕ ತಿಳಿಯಪಡ್ಸಿರುತ್ತದೆ.

M. Anthoya Shetty.
Advocate for Plaintiff.
Kundapur, 9-11-46.

ನವಯುಗದಲ್ಲೀ
ನಿಮ್ಮ ಜಾಹೀರಾತುಗಳನ್ನು
ಕೊಟ್ಟು ಪ್ರೋತ್ಸಾಹಿಸಿರಿ.

(ಏನೇ ಪುಟದಿಂದ).

ಗೊಂಡುದಿಲ್ಲವೆ? ಯಾವ ರಾಷ್ಟ್ರ, ವರ್ಗ, ವರ್ಣ, ಜಾತಿಯವರೇ ಆದರೂ ನನ್ನವರೇ ಎಂಬ ಪಾರವನ್ನು ನಾನು ನನ್ನ 17ನೇ ಮಯಸ್ಸಿನಿಂದಲೇ ಕಲಿಯುತ್ತಾ ಬಂದಿದ್ದೇನೆ. ಸರಕಾರಕ್ಕೆ ಮನಸಿದ್ದರೆ ಬಂಗಾಳದ ದುರ್ಘಟನೆಗಳನ್ನು ನಿಲ್ಲಿಸಲು ಸಾಧ್ಯವಿತ್ತು. ಹಿಂದೂ ಮುಸಲ್ಮಾನರು ಬಂಧುಗಳೆಂಬುದನ್ನು ಅಲ್ಲಿಯವರಿಗೆ ಕಲಿಸಲು ಪೊರಟಿದ್ದೇನೆ."

(ಕಲ್ಕತ್ತೆಕ್ಕೆ ಹೊರಡುವ ಮೊದಲ ದಿನ ತಾ. 27 10-46ರ ಪ್ರಾರ್ಥನಾಸಭೆಯಲ್ಲಿ.)

ಬಿಹಾರಿನ ಅತ್ಯಾಚಾರಕ್ಕಾಗಿ

"ಬಿಹಾರಿಗೆ—ಬಿಹಾರಿನ ಕುರಿತು ನನ್ನಲ್ಲಿದ್ದ ಕನಸು ಸುಳ್ಳಾಗಿದೆ. 'ಬಂಗಾಳದ ಮುಸ್ಲಿಂ ಲೀಗ್ ಸರಕಾರದ ಕೃತ್ಯಗಳಿಂತ ಬಿಹಾರಿನ ಕೃತ್ಯವೇನೂ ಕಳಕಳೆಯದಲ್ಲ, ಇದು ಅದರ ಪರಿಣಾಮ' ಎಂಬ ಪ್ರತಿವಾದವೇನೋ ಸುಲಭ ಒಂದು ಪಕ್ಷದ ದುಷ್ಕೃತ್ಯವನ್ನೇ ಅದರ ವಿರುದ್ಧ ಪಕ್ಷವೂ ಕೈಕೊಳ್ಳಬೇಕೆಂಬುದು ನ್ಯಾಯವಲ್ಲ; ಅದರಲ್ಲೂ ದೀರ್ಘಾವಧಿಯ ಹಾಗೂ ವಿಸ್ತೃತ ಕೀರ್ತಿ ಹೊಂದಿರುವ ಪಕ್ಷಕ್ಕದು ಎಸ್ತಕ್ಕೂ ಹೇಳಿಸಿದ್ದಲ್ಲ ಕಾಂಗ್ರೆಸಿಗರು ಮುಸ್ಲಿಂ ಲೀಗಿನ ಮೇಲೆ ಹೊರಿಸುತ್ತಿರುವ ಜಾತೀಯತೆಯ ಆರೋಪಕ್ಕೆ ಇಂತಹ ಪ್ರತಿ ಜಾತೀಯತೆಯೇ ಉತ್ತರವೇನೋ! ಬಿಹಾರಿನಲ್ಲಿ ಸೇಕಡಾ 14ರಷ್ಟು ಇರುವ ಮುಸಲ್ಮಾನರನ್ನು ಬರ್ಬರತೆಯಿಂದ ನಿರ್ನಾಮ ಮಾಡಲು ನೋಡುವದು ರಾಷ್ಟ್ರೀಯತೆಯೇನು? ಓರ್ವ ಬ್ರಿಜ್ ಕಿಶೋರ್ ಪ್ರಸಾದ್ ಮತ್ತು ಓರ್ವ ರಾಜೇಂದ್ರರಿಗಾಗಿ ಬಿಹಾರಿಗೆ ಹೆಗ್ಗಳಿಕೆಯಿಲ್ಲವೆ? ಬಿಹಾರಿನ ದುರ್ವಾರ್ತೆನೆ ಮುಂದೊಡ್ಡಿದರೆ ಭಾರತದ ಎಲ್ಲಾ ಹಿಂದುಗಳನ್ನೂ ಲೋಕವೇ ಖಂಡಿಸುವಂತಾಗುವದೆಂದು ನಾನೆಂದು ತ್ತೇನೆ. 'ಕಾಂಗ್ರೆಸ್ ಎನ್ನೇ ಬಡಾಯಿ ಹಾಗಿಗಾಗಲೂ ಅದು ಹಿಂದೂ ಸಂಸ್ಥೆಯೆಂ ಓ ಕ್ಯಯದೀ ಅಝಾದ್ ಜನ್ಮದ ಚು ಬ್ಬ ಮಾತನ್ನು ಬಿಹಾರೀ ಹಿಂದುಗಳ ದುಸರ್ತನೆಯು ಸಮರ್ಥಿಸುವದು. ತಮ್ಮಲ್ಲಿಯ ಅಲ್ಪ ಸಂಖ್ಯಾಕ ಮುಸಲ್ಮಾನರಿಗೆ ರಕ್ಷಣೆಯಿತ್ತು ಸಮಾನತೆಯಿಂದ ಕಾಣುವ ನೈತಿಕ ಜವಾಬ್ದಾರಿ ಬಿಹಾರಿ ಹಿಂದುಗಳ ಮೇಲಿದೆ. ಕಾಂಗ್ರೆಸಿನ ಘನತೆಯನ್ನು ನೈಜವಾಗಿಸಲು ಮಹತ್ಮನ್ನು ಮಾಡಿರುವ ಬಿಹಾರೀ ಆದರ ಸಮಾಧಿ ಕುಳಿಯಗೆಯಲು ಮುಂದಾಗದಿರಲಿ. ನನ್ನ ಆಸಿಂಸೆಯ ಕುರಿತು ನಾನೇನೂ ಲಜ್ಜಿಸುವದಿಲ್ಲ. ಆದರೂ ನಾನು ನಿಮಗೀಗ ಹೇಳುತ್ತಿರುವುದು ಆದನ್ನಲ್ಲ. ನೀವು ಮಾಡಿರುವಿರೆಂದು ಸುದ್ದಿಯಿರುವ ಕೃತ್ಯಗಳು ಧೀರತ್ವವಾಗಲಾರವು. ಕೆಲವು ನೂರು ಮಂದಿಯನ್ನು ಸಾವಿರಾರು ಮಂದಿ ಕೂಡಿ ಕೊಲ್ಲುವದರಲ್ಲಿ ಯಾವ ಶೂರತ್ವವೂ ಇರಲಾರದು. ಆದು ಹೇಡಿತನಕ್ಕಿಂತಲೂ ಕಳತೆ. ರಾಷ್ಟ್ರೀಯತೆ ಅಥವಾ ಯಾವುದೇ ಧರ್ಮಿಕತೆಗೆ ಅಯೋಗ್ಯವಾಗಿರುವ ವಿಷಯವದು ನೀವು ಪೆಟ್ಟಿಗೆ ಪೆಟ್ಟನ್ನಷ್ಟೇ ಮರಳಿಸಿದ್ದರಿ ನಿಮ್ಮ ಕಡೆಗೆ ಬೆಟ್ಟೆತ್ತಿ ತೋರಿಸುವ ಎದೆಗಾರಿಕೆ ಯಾರಿಗೂ ಇರುತ್ತಿದ್ದಿಲ್ಲ. ಆದರೆ ನಿಮ್ಮ ಕೃತ್ಯದಿಂದ ನೀವು ಹೀನರಾದುದಷ್ಟೇ ಅಲ್ಲ—ಭಾರತವನ್ನೇ ಅಧೋಗತಿಗೆಳೆದಿರುವಿರಿ. ಜವಾಹರಲಾಲಜೀ, ನಿಸ್ಸಾರ್ ಸಾಹೇಬ್ ಮತ್ತು ಡಾಕ್ಟರ್ ರಾಜೇಂದ್ರ ಪ್ರಸಾದರಿಗೆ "ನಿಮ್ಮ ಸೇನೆ ಮತ್ತು ಸ್ವತಃ ನೀವು ಇಲ್ಲಿಂದ ಹೋಗಿಬಿಡಿ; ಭಾರತ ಸಂಬಂಧದ ಕಾರ್ಯನಿರತರಾಗಿರಿ" ಎಂದು ನೀವೀಗ ಹೇಳಬೇಕು. ಅಮಾನುಷತವನ್ನು ಬದಿಗಿಟ್ಟು, ಮುಸ್ಲಿಮರನ್ನು ನಿಮ್ಮ ಸಹೋದರ ಸಹೋದರಿಯರಂತೆ ನೋಡುವಿರೆಂಬ ಆಶ್ವಾಸನೆಯನ್ನು ನೀವು ಕೊಟ್ಟಲ್ಲಿ ಮಾತ್ರ ಆವರು ಹಾಗೆ ಮಾಡಬಲ್ಲರು. ನಿಮ್ಮ ಮಂತ್ರಿಗಳಿಂದ ಸಹಾಯಕೋನಿ, ಆ ಮನೆಗಳನ್ನು ನೀವೇ ಕಟ್ಟಿಸಿಕೊಟ್ಟು ಪಲಾಯನಪರಿಸಿದ ಪ್ರತಿಯೊಬ್ಬ ಮುಸ್ಲಿಮನೂ ತನ್ನ ಸ್ವಂತ ಮನೆಗೆ ಮರಳಿ ಬರುವಂತೆ ಮಾಡದೆ ನೀವು ವಿಶ್ರಾಂತಿಪಡೆಯಬಾರದು. ನಿಮ್ಮ ಮಂತ್ರಿಗಳ ಕುರಿತು ವಿಮರ್ಶಕರು ನನ್ನೊಡನೇನು ಹೇಳಿದ್ದಾರೆಂಬುದನ್ನು ನೀವರಿತಿಲ್ಲ. ನಿಮ್ಮಗಳ ಒಂದು ಭಾಗವೆಂದೇ ನನ್ನನ್ನು ನಾನೆಣಿಸಿದ್ದೇನೆ. ಆದ್ದರಿಂದ ಬಿಹಾರಿ ಹಿಂದುಗಳು ಈಗ ಮಾಡಿದುದು ಸರಿಯಲ್ಲವೆನ್ನುವ ನನಗೆ ಆದಕ್ಕಾಗಿ ಒಂದು ರೀತಿಯ ತಪಸ್ಸನ್ನು ಮಾಡದೆ ಶಾಂತಿ ಸಿಗದು. ಮುಮ್ಮುತಃ ಆರೋಗ್ಯ ದೃಷ್ಟಿಯಿಂದ, ನಾನು ಕಲ್ಕತ್ತೆಗೆ ಬಂದಾರಭ್ಯ ತೀರಾ ಕನಿಷ್ಠಾಂಶ ಆಹಾರವನ್ನು ಸ್ವೀಕರಿಸುತ್ತಿದ್ದೇನೆ. ಬಿಹಾರ ದುರಂತವನ್ನು ಕೇಳಿದ ಮೇಲೆ ಈಗ ಆಹಾರ ಪರಿಮಾಣವೇ ದೇಹದಂಡನೆಯಾಗಿ ಮುಂದುವರಿಯುತ್ತಿದೆ. ತಪ್ಪಿತಸ್ಥ ಜಿಹಾರಿಗಳು ಈ ಹೇಳಿಯನ್ನು ಹರಿದುಕೊಳ್ಳದಿದ್ದರೆ ಆ ಕನಿಷ್ಠ ಆಹಾರವನ್ನೂ ಬಿಟ್ಟು ಸಾಯುವ ವರೆಗೆ ಉಪವಾಸ ಕೈಕೊಳ್ಳುವೆ. ಇದು ನನ್ನ ಪವಿತ್ರ ಕರ್ತವ್ಯವಾಗಿ ಕೈಕೊಳ್ಳಲ್ಪಡುವ ಶುದ್ಧ ತಪಸ್ಸು—ಮಾತ್ರ; ಬಿಹಾರಿ ನನ್ನೀ ಕೃತ್ಯಕ್ಕೆ ಅಪಾರ್ಥಕಟ್ಟುವ ಅಪಾಯವಿಲ್ಲ. ಸಹಾಯ ಅಥವಾ ಸಹಾನುಭೂತಿ ಪ್ರದರ್ಶಿಸಲು ಯಾವ ಸ್ನೇಹಿತನೂ ನನ್ನಲ್ಲಿಗೆ ಬರಬೇಕೆಂದಿಲ್ಲ ನಾನಿಲ್ಲಿ ಪ್ರೇಮಮಯೀ ಸ್ನೇಹಿತರಿಂದ ಆವೃತನಾಗಿದ್ದೇನೆ. ನನ್ನನ್ನು ಯಾರಾದರೂ ಅನುಕರಿಸುವದು ಶುದ್ಧ ತಪ್ಪು ಮತ್ತು ಅಸಂಗತ. ಸಹಾನೂಭೂತಿಯ ಅಥವಾ ಸಹಾನುವರ್ತಿ ಉಪವಾಸ ಕೈಕೊಳ್ಳುವದು ಅಪೇಕ್ಷಣೀಯವಲ್ಲ; ಅವುಗಳಿಂದ ಹಾನಿಯಿದೆ. ನನ್ನೀ ತಪಸ್ಸು ಸಂಬಂಧಪಟ್ಟ ಪರಮನಸ್ಸಾಕ್ಷಿಯನ್ನೆಚ್ಚರಿಸುವಂತಹದು. ಯಾರೂ ನನಗಾಗಿ ಅಕುರಪಡಬೇಕೆಂದಿಲ್ಲ. ಎಲ್ಲರಂತೆ ನಾನೂ ದೇವರ ಕೈಯಲ್ಲಿದ್ದೇನೆ. ಅವನ ಇಚ್ಛೆಗೆ ವಿರೋಧವಾಗಿ ನನಗೇನೂ ಆಗಲಾರದು ನಿಮ್ಮ ಸೇವಕ,

—ಎಂ ಕೆ. ಗಾಂಧಿ.

(ತಾ. 6 11 46ರಲ್ಲಿ ಕಲ್ಕತ್ತದಿಂದ)

ಫ್ಯಯದೀ ಅಝಾದ್ ಜಿನ್ನಾ ಬಂಗಾಳದ ಅತ್ಯಾಚಾರಕ್ಕಾಗಿ

"ಪತ್ರಿಕೆಗಳಲ್ಲಿ ಪ್ರಕಾಶಗೊಂಡಿದ್ದ, ಕೋರ ಪ್ರತಿಕಾರೋತ್ತೇಜಕವಾದ ಚಿತ್ರಶಯೋಕ್ತಿಯ ವಾರ್ತೆಗಳೆಲ್ಲಾ ನಿರಾಧಾರವಾದುವೆಂಬುದನ್ನು ತಿಳಿದು ನನಗೆ ಸಮಾಧಾನವಾಗಿದೆ. ಆದರೂ ಪ್ರಾಣ ಸೊತ್ತುಗಳಿಗಾದ ಹಾನಿಯನ್ನೂ ಆ ಪಾಶನಿಕ ಕೃಮವನ್ನೂ ನಾನು ಖಂಡಿಸುತ್ತೇನೆ. ಹಿಂದೂ ಮತ್ತು ಮುಸ್ಲಿಂ ರಾಷ್ಟ್ರಗಳ ಪರಿಶುದ್ಧ ನಾಗರಿಕತೆ ಮತ್ತು ಮಹಾ ಪಾಖಲೆಗಳ ಹೆಸರನ್ನೇ ಕೆಡಿಸುವ ಈ ಹೇಯ ಗಲಭೆಗಳನ್ನು ನಿಲ್ಲಿಸಿರೆಂದು ನಾನು ಹಿಂದೂ, ಮುಸ್ಲಿಮ್, ಮತ್ತಿತರ ಎಲ್ಲಾ ಜಾತಿಯವರಲ್ಲೂ ಆಗ್ರಹ ಪೂರ್ವಕ ಕೇಳಿಕೊಳ್ಳುತ್ತೇನೆ".

(ತಾ. 24—10—1946ರಲ್ಲಿ ಢಿಲ್ಲಿಯಲ್ಲಿದ್ದು ಕೊಂಡು).

ಬಿಹಾರಿನ ಅತ್ಯಾಚಾರಕ್ಕಾಗಿ

"ಬಿಹಾರಿನಲ್ಲಿ ಭಯಂಕರ ಕೃತ್ಯಗಳಾಗುತ್ತಿವೆ. ಏಕುನಿತು ಈಗ ನಾನೇನನ್ನೂ ಹೇಳುವದಿಲ್ಲ. ಯಾಕಂದರೆ ಅದೊಂದು ಸೂಕ್ಷ್ಮ ವಿದ್ಯಮಾನ ಜನ್ಮತ. ಮತ್ತು ನನಗೆ ದೊರತ ತರಬೇತಿಯಿಂದ ನಾನೋರ್ವ ಧಂಡಾರಕ್ತದ ತರ್ಕರಾಸ್ತ್ರಿ. ಪ್ರಯೋಜನವುಂಟೆಂದು ಕಂಡು ಬಂದ ಮಾರ್ಗದಲ್ಲೇ ನಾನು ಬಿಹಾರಿಗೆ ಹಾರಲಿದ್ದೇನೆ. ಬಿಹಾರಿನ ಘಟನೆಗಾಗಿಯೇ ಬಾಘಾಪಾಟನ ಪ್ರಯಾಣವನ್ನು ರದ್ದು ಪಡಿಸಿ ಕಾದುನಿಂತಿದ್ದೇನೆ. ಹಿಂದುಸ್ಥಾನ ತುಂಬಾ ನಡೆಯುತ್ತಿರುವ ಘಟನೆಗಳು ರಾತ್ರಿ ಹಗಲು ನನ್ನ ತಲೆಯಲ್ಲಿ ಸುತ್ತುತ್ತಿವೆ. ನನಗೆ ಬರುವ ಪ್ರತಿಯೊಂದು ಪತ್ರದ ಪ್ರತಿಯೊಂದಕ್ಷರವನ್ನೂ ನಾನು ಓದುತ್ತೇನೆ. ಓದುವುದರಲ್ಲಿ, ಆಲಿಸುವುದರಲ್ಲಿ ಮತ್ತು ಅಭ್ಯಾಸಿಸುವುದರಲ್ಲೇ ನನ್ನ ಹೆಚ್ಚಿನ ಸಮಯ ಕಳೆಯುತ್ತಿದೆ. ಮುಸಲ್ಮಾನರು ಶೂರರೆಂಬುದನ್ನು ನಾನು ಬಲ್ಲೆ. ನಾನು ಎಲ್ಲಿ ಹೋದರೂ "ಕ್ಯಯದೀ ಅಝಾಮರೇ, ನಾವು ನಿಮ್ಮ ಧಾಳಯಾಜ್ಞೆ ಕಾಯುತ್ತಿದ್ದೇವೆ" ಎಂಬ ದೂತು ಕೇಳುತ್ತಿದ್ದೇನೆ. ನೀವು ತಯಾರಾದಿರೆಂದು ಮನವರಿಕೆಯಾಗದೆ ಕ್ಯಯದೀ ಅಝಾದ್ ಆ ಆಜ್ಞೆ ಕೊಡುವಂತಿಲ್ಲ. ಹಾಗೆ ಕೊಟ್ಟು ಬಿಟ್ಟರೆ ಅತನೊಬ್ಬ ಸೇನಾನಿದುಗಾಗುವ ಬದಲಿಗೆ ಓರ್ವ ಕ್ರಿಮಿನಲ್ ಆದಾನು ಆದ್ದರಿಂದ ನಾನನ್ನುತ್ತೇನೆ—ನಿಮ್ಮ ಮನೆಯನ್ನು ಸರಿಪಡಿಸಿಕೊಳ್ಳಿ; ತಯಾರಾಗಿ ನಿಲ್ಲಿ. ಈಗ ಸಮಯ ಕಳೆದಿದೆ; ಆದರೆ ಪೂರ್ತಿ ಕಳೆದು ಹೋಗಿಲ್ಲ."

(ತಾ. 5-11-46ರಲ್ಲಿ ನವಢಿಲ್ಲಿಯ ಲಕ್ಕರ್ ಪ್ರಾರ್ಥನಾ ಸಭೆಯಲ್ಲಿ.)

ಇವೆರಡು ಚಿತ್ರಗಳು ಒಬ್ಬೊಬ್ಬರಿಗೆ ಕಣ್ಣಾ ಮುಂದೆ ಬರುವಾಗ ತನ್ನಂತೆ ಒಂದು ಪ್ರಶ್ನೆ ಹೊಳೆಯುವುದಿಲ್ಲವೇ—ಗಾಂಧೀ, ನೆಹರುಗಳು ಹಿಂದೂ ಪ್ರಾಂತರ ನಡುವೆ ತಮ್ಮ ವ್ಯಾಪಾರವನ್ನೇ ಮುಂದೊಡ್ಡಿ ಧಾಮುಕ್ ದಂತೆ ಜಿನ್ನಾ, ಲಿಯಾಖತರು ಮುಸ್ಲಿಂ ಪ್ರಾಂತರ ನಡುವೆ ನುಗ್ಗುತ್ತಿದ್ದರೆ ಈ ಮಾರಾಮಾರಿಯಾಗುತ್ತಿತ್ತೆ? ಇನ್ನಾದರೂ ಸಾಗೆ ಮಾಡುತ್ತಿರಾದರೆ ಸಾಂತಿಯಾಗದೆ?

ಧಾತುಪುಷ್ಟಿ ಲೇಹ

ಇದುಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ ಧಾತುಮೂಸ ಹೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಬಳ್ಳಾರಿ, ಇವು ಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಆದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮಾನಸಿಕ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಮಹಾಮದನಕಾಮೇಶ್ವರೀ ಲೇಹ

(ಬಂಗಾರ, ಪುಸುಗು, ಕಸ್ತೂರಿ ಮಿಶ್ರಿತವಾದದ್ದು.)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆಶೂಲೆ, ಮೂಲಬದ್ಧತೆ, ಬೆನ್ನುನೋವು, ಇವುಗಳ ಮೂಲಕಾರಣಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು.

ರಾತ್ರಿ 1ರ 10-0-0, ½ ರಾತ್ರಿ 5-4-0, ¼ ರಾತ್ರಿ 2-12-0.

ಎಲ್ಲಾ ಸಮಯದ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು

ಎಲ್ಲಾ ಸಮಯದಲ್ಲಿಯೂ ಔಷಧಗಳೂ ದೊರೆಯುತ್ತವೆ. ಕ್ಯಾಶ್ ಸಂಸ್ಥೆ, ಬರದಲ್ಲಿ ರೋಗಕ್ಕೆ ತಕ್ಕಹಾದ ಔಷಧಿ ರವಾನಿಸಲಾಗುವುದು.

(1) ಉಡುಪಿ ಏಜಂಟರು:—ನವಭಾರತ ಬುಕ್ ಡಿಪೊ, (2) ಬೊಂಬಾಯಿ ಏಜೆಂಟರು:- ಪೊಪ್ಯುಲರ್ ಸ್ಟೋರ್ಸ್, ಕೆಮಿಸ್ಟ್183, ಸುವಾರಬಾಗ್ ರೋಡ್, ಇ. ಇ ಪಿ ರೈಲ್ವೆ ವರ್ಕ್ ಶೋಪ್ ಎದುರುಗಡೆ, ಪರೇಲ್. (3) ಜಬರ್ ಸ್ಟೋರ್ಸ್, ಕೆಮಿಸ್ಟ್, ಇ ಇ ಪಿ ಎಕ್ಸ್‌ಟೆಂಷನ್

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸಕ್ಯುಲಾರುಗಳೂ ಪ್ರೈಕಟವಾಗುತ್ತವೆ.

ವಾರ್ಷಿಕ ಚಂದಾ ರೂ. 2-0-0 ಮಾತ್ರ.

ಪೌಂಡು ಮಾಡಿದ ಪ್ರತಿಯೊಂದು ಸಂಪುಟಕ್ಕೆ ರೂ. 2½/-

ಚಂದಾ ವಿಚಾರಕ್ಕೆ ಬರೆಯಿರಿ—

ಬಾಲಚಂದ್ರ ಆಫೀಸು, ಉಡುಪಿ

ವರ್ಗ - ಲೂಳಿಗ

ಇತರ ಲೆಕ್ಕ ಪುಸ್ತಕಗಳು ತರಹವಾರು ಸೈಜಿನಲ್ಲಿ ದೊರೆಯುತ್ತವೆ.

FOR LIFE ASSURANCE
CONSULT
The New Gaurdian of India Life Insrce Co, Ltd,
(Chairman The Hon'ble Mr. M. Cl. M Chidambaram Chettiyar.)
A policy in this progressive Life Office is a good investment; its Agency is a valuable business connection
LOCAL OFFICES IN SOUTH KANARA
MANGALORE & KARKALA.
HEAD OFFICE
"United India Life Bldg"
Esplanade Post Box No 142, MADRAS.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಕೀರೆದ ತೊಗಲು ಒಂದಕ್ಕೆ ಸುತ್ತಿದಿದರೆ, ಶರೀರದ ಸುತ್ತು ಘಾಸುವಾಗಿದ್ದರೆ,... ಚಟ್ಟೆ ಬಿದ್ದಿದ್ದರೆ, ಉನ್ಣದಿಂದ ಚೇರು ಇಳಿದಿದ್ದರೆ, ಉಡುಗು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿ ದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರು ವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪ ದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸ ಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು

ಡಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೪ ಆಣೆ.

ವಿಜಿಂಟರು:— ಗದಗ: ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗ ಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ಡಾವಣಗೇರಿ:ಡಾವಣಗೇರಿವೈಸ್. ಪತ್ರವ್ಯವಹಾರ ಮಾಡತಕ್ಕ ವಿಳಾಸ.

ರೇವಣಸಿದ್ದಪ್ಪ ಹಾಲಪ್ಪ ಡಾವಣಗೇರಿ,
ಆಯುರ್ವೇದ ಔಷಧಾಲಯ, ಗದಗ.
Ayurveda Oushadalaya GADAG



ನವಜೀವಾತು ಎಂಬ ಸೂತಿಕಾ ರಸಾಯನ

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಶ್ಚಿತಿಯನ್ನು ನಿರ್ಧೈಸಿ ತಯ್ಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ್ಯ ರಸಾಯನ. ಅಲ್ಪಮೊತ್ತದಿಂದ್ದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು. (ಇದು ರಿಜಿಸ್ತರು ಮಾಡಲ್ಪಟ್ಟಿದೆ.)

೪ ದಿನ್ನಿನವರೆಗೂ ಹೆಚ್ಚು ಕಡಿಮೆ ಆಕಸ್ಮಿಕಗಳಿಗೆ ಬರುವದಿಲ್ಲ, ಆದರೆ ಕೇವಲ ೪ ರೂಪಾಯಿಗಳ ಒಂದು ಬಾಟಲಿಯನ್ನಕ್ಕೆ ಸಂಕಾಗುವದು ವಿಶೇಷ ವಿವರಿಸಿ ಬರೆಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.೫ **ಕೊಡಿಯಾಲಬೈಲು, ದ.ಕ.**

ಸ್ವಾಕಿಸ್ಪರು- ಡಾ| ಐ. ಕೆ ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಸ್ವರ್ಗಸ್ಥ ಡಾಕ್ಟರ್ ಎಂ. ಮಾಧವಾಚಾರ್ಯರಿಂದ ರಚಿಸಲ್ಪಟ್ಟ ಎರಡು ಅತ್ಯುತ್ತಮ ನಾಟಕಗಳು.

ಸರಸ್ವತಿ ಬೆಲೆ 0-12-0

ಅಲ್ಪ ವಿಕ್ಷಣದಿಂದುಂಟಾಗುವ ಅನರ್ಥ ಪರಂಪರೆಗಳನ್ನು ಪ್ರತ್ಯಕ್ಷವಾಗಿ ಹೃದಯದ್ರಾವಕವಾದ ರೀತಿಯಲ್ಲಿ ಕಾಣಿಸುವ ಸಾಮಾಜಿಕ ನಾಟಕ.

ಮೀರಾಬಾಯಿ ಬೆಲೆ 0-10-0

ಶ್ರೀಕೃಷ್ಣ ಪರಮಾತ್ಮನ ಆರಾಧನೆಗೆ ಸಂಸಾರಿಗಳಾಗಿರುವವರಿಗೂ ಅವ ಕಾಶವಿದೆ. ಕಪಟ, ನಿಶ್ವಾಸಘಾತಕತನ, ಅವಿಚಾರ, ಪ್ರಮಾದ ಇವು ಗಳಿಂದುಂಟಾದ ದುಃಖವನ್ನು ದೂರೀಕರಿಸಲು ಭಗವದ್ಭಕ್ತಿಯೊಂದೇ ಉತ್ತಮ ಸಾಧನವೆಂಬುದನ್ನು ಸಾರುವ ಭಕ್ತಿವ್ಯಾಧಾನ್ಯ ನಾಟಕ.

ಎರಡೂ ಪ್ರತಿ ಬೇಕಾದವರು ರೂ 1-8-0 ಕಳಿಸಬೇಕು

ನವಭಾರತ ಪುಸ್ತಕಭಂಡಾರ, ಉಡುಪಿ — ಕಿರಿಯರ ಪ್ರಪಂಚ, ಉಡುಪಿ

'ಇಂಗ್ಲಿಷ್ ಬರುವುದಿಲ್ಲವಲ್ಲಾ' ಎಂದು ಚಿಂತಿಸುವಿರೇಕೆ?

ಸುಲಭದಲ್ಲಿ ಇಂಗ್ಲಿಷ್ ಕಲಿಯಲು ಅನುಕೂಲವಾದ ಪುಸ್ತಕ ಇಲ್ಲಿದೆ—

ಸುಲಭದಲ್ಲಿ ಇಂಗ್ಲಿಷ್

ಶ್ರೀ. ಕೊರಟ್ಟಕ್ಕೆಲರ ಇಂಗ್ಲಿಷ್ ಸ್ವಯಂಬೋಧಿನಿ

ENGLISH MADE EASY

ಈ ಪುಸ್ತಕದಿಂದ ನೂರಾರು ಜನರು ತಾವಾಗಿ ಸುಲಭದಲ್ಲಿ ಇಂಗ್ಲಿಷ್ ಕಲಿತುಕೊಂಡಿದ್ದಾರೆ.

ನೀವೇಕೆ ಕಾಲಹರಣ ಮಾಡಬೇಕು? ಇಂದೇ ಒಂದು ಪ್ರತಿಯನ್ನು ಕೊಂಡುಕೊಳ್ಳಿರಿ.

ಬೆಲೆ ಬರೇ ರೂ. 1-8-0 ಟಪ್ಪಲು ಖರ್ಚು 0-4-0 ಪ್ರತ್ಯೇ

ಪ್ರತಿಗಳಿಗೆ ಬರೆಯಿರಿ— ನವಭಾರತ ಪುಸ್ತಕ ಭಂಡಾರ, ಉಡುಪಿ, ದ.ಕ.

Regd. No. M. 3618 Estd. 1921 ಸ್ಥಾಪನೆ. ಬೆಲೆ: 0 -1- 6.

ನವಯುಗ

ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 4—8—0
6 ತಿಂಗಳಿಗೆ ರೂ. 2—8—0
6 ತಿಂಗಳಿಗಿಂತ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ.
ಮಾದರಿ ಸಂಚಿಕೆಗೆ ಬರೆಯಿರಿ.
ಮೆನೇಜರ್,
ನವಯುಗ, ಉಡುಪಿ, ದ. ಕ.

NAVAYUGA

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ.

ವರ್ಷ ೨೬ ವಾರ ೦೨ | FOUNDER: SRI. A. B. SHETTY, M.L.A. | Vol. 26 No. 12

ಉಡುಪಿ • 21—11—1946 • ಮಂಗಳೂರು.

ಅಮೃತಾಂಜನ ತಕ್ಷಣದ ತಲೆನೋವನ್ನು, ತಿರಿ, ವೇದನೆ, ಉಬ್ಬಸ, ಶ್ವಾಸಕೋಶ, ಭುಜ ಹುಣ್ಣು ವೇದನೆಗಳಿಗೂ ಎದೆನೋವು, ಫಾಯಗಳು ಬಾಹು ತೊಳ್ಳಾವು, ಚೇಳು ವಿಷ ಮತ್ತಾದ ಬೇರೆ ಎಲ್ಲಾ ಬಾಹ್ಯ ಪೀಡೆಗಳನ್ನು ಪರಿಹರಿಸಿ ಎಲ್ಲಾ ರೋಗಗಳಿಗೂ ಸಿದ್ಧ.

ಅಮೃತಾಂಜನ ಲಿಮಿಟೆಡ್.
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

The best preventive in epidemics of CHOLERA

"BHUVANENDRA"
CHANDRAMAS

Also a sovereign remedy for diarrhoea, Stomachache, Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ'
ಚಂದ್ರಮಸ್ ಸಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೂ ಇರತಕ್ಕ ಅತ್ಯುತ್ತಮ ಔಷಧಿ.

ದೊಡ್ಡವರಿಗೆ 4ರಿಂದ 8ಚೊಟ್ಟು, ಸಣ್ಣ ಮಕ್ಕಳಿಗೆ 1ರಿಂದ 2ಚೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ

ಉಡುಪಿ ಸ್ಪೆಷಲಿಸ್ಟರು:—ಡಾ। ನಾಯಕ್ಸ್ ಕ್ಲಿನಿಕ್ಸ್ ಲಿಂಗ್ ರೂಮ್ಸ್ ಎಂಡ್ ಫಾರ್ಮೆಸಿ; ಶ್ರೀ। ಆರ್. ಎಸ್. ಶೆಣೈ, ರಥಬೀದಿ; ಡಾ। ಪಿ. ಜಿ. ಆಚಾರ್ಯ ಫಾರ್ಮೆಸಿ; ಡಾ। ಕೆ. ರಾಘವೇಂದ್ರ ರಾವ್ L. I. M.; ಡಾ। ವೆಂಕಟರಾವ್, ಕೊರಡ್ಡಲ್; ನವಭಾರತ ಬುಕ್ ಡಿಪೊ

Life is full of Opportunities.

Life is full of events and opportunities created by God for man and by man for himself and his fellowmen Normal life presupposes a prosperous family, a happy home, good education congenial vocation, good relations, friends, a cultured society and also a few ups nd downs to spice them all with. Have you made sure that your family too can reasonably aspire to lead such a life even in your absence?

The Canara Mutual Assurance Co., Ltd.,
HEAD OFFICE **UDIPI.** (S. India)
Chief Agents for the Bombay and Madras Presidencies including States and the States of Mysore and Hydrabad
The Commercial Corporation of India, Ltd.,
UDIPI. (S. India.)

THE
Bombay Lief Assurance Company Ltd.
(ESTD·1908)
A PREMIER INSURANCE COMPANY.
New Business in 1945 - - 2,77,23,100.
KOCHIKAR BROTHERS, LTD.
(ESTD 1910)
Chief Agents for South India including
Travancore, Cochin & Mysore State.
New Business in 1945 in our area:- **Over 5 Millions.**
OUR Expert advice gained by 35 years Experience is at your door FREE.
Drop a card to any of our Offices at —
MADRAS * BANGALORE * MADURA * CALICUT
TRIVENDRUM * UDIPI * AND BOMBAY.

ಉಡುಪಿ ಬೋರ್ಡಿಂಗ್ ಎಂಡ್ ಲೋಜಿಂಗ್ ಮಧುರಾ.

ತಾ 8—8—1945ರಲ್ಲಿ ಜರಗಿದ ಆರನೆ ಹುಟ್ಟುಹಬ್ಬದ ಸಮಾರಂಭದ ಸಂತೋಷ ಕಾಲದಲ್ಲಿ ನಮಗೆ ಸಕಲ ವಿಧ ದಿಂದಲೂ ಬೆಂಬಲವಿತ್ತು ಪ್ರೋತ್ಸಾಹಿಸಿದ ಮಹನೀಯರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇವೆ ಇದಕ್ಕಿಂತಲೂ ದ್ವಿಗುಣಿತವಾಗಿ ನಮ್ಮ ಸೇವೆಯನ್ನು ಹೊಸ ವರುಷದಲ್ಲಿ ಸಲ್ಲಿಸಲು ಮುದಾ ಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನಿತ್ತೀಯುವರೆಂದು ನಿರೀಕ್ಷೆ

ಎಲ್. ನರಸಿಂಗ ರಾವ್,
ಪ್ರೊಪ್ರೈಟರ್.

—ಮಕ್ಕಳನ್ನು ಹಡೆಯುವುದು ಸಾಕು—
ಒಕ್ಕ ಸ್ತ್ರೀಯರಿಗೆ **ಬರ್ಥ್ ಕಂಟ್ರೋಲ್** ರೋಗಗ್ರಹಸ್ತ ಕೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಆಲ್ಲದೆ ಸ್ತ್ರೀಯರ ಬಿಳಿಕೆರಗು, ಪ್ರದರದೋಗ, ಹೊಲಿರುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತೆಕ್ಕೊಳ್ಳ ಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಲ್ಲಿ ಸೇವಿಸಬೇಕು.

ಕಿಮ್ಮತ್ತು:—ಹರಪೀಪಲ್ಲಿ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯ 5—0—0. ಪೋಸ್ಟ ಚಾರ್ಜು ನಿರಣಿ.

ಮೂಲಕರು:—ಹಾಲಪ್ಪ ಫಕೀರಪ್ಪ ಡಾವಣಗೇರಿ
ಆಯುರ್ವೇದ ಔಷಧಾಲಯ. ಗದಗ-ಸಿಟಿ.

ವಿಜಾಪುರ:—ಹುಬ್ಳೀ ಫಾರ್ಮಸಿ,—ಹುಬ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪುರ—ಡಾನಪ್ಪ ಸಿದ್ಧಲಿಂಗಪ್ಪ ಧಾರವಾಡಿಕರ, ವಿಜಾಪುರ. ಚಿಕ್ಕೋಡಿಯಲ್ಲಿ:—ಹುಂಬರವಾಡಿ ಸೆಟ್ಟರ್ಸ ಬೆಳಗಾವಿ:—ಡಾವಣಗೇರಿ ಪ್ರೆಸ್ಸ್, ಆರ್. ಎಸ್. ಕವಲಜಾನ, ಕೆಮಿಸ್ಟ್, ಹಾನೇರ್, ಬ್ಯಾಡಗಿ

Ayurveda Oushadalaya, GADAG CITY.

ಭದ್ರತೆ ಮತ್ತು ಸೇವೆ

ಇದೇ ಬೇಂಕಿನ ತಳಹದಿ ಮತ್ತು ನಮ್ಮ ಮುಖ್ಯ ಗುರಿ

ನಿಮ್ಮ ಸೇವೆಯನ್ನು ಪ್ರಾರಂಭಿಸಿ ಇಂದಿಗೆ ಹದಿನೈದು ವರ್ಷಗಳು ಸಂದುವು. ಮುಂದಿನ ವರ್ಷಗಳಲ್ಲಿ ನವೀನ ಹುರುಪಿನಿಂದ ಸ್ವಸಹಾಕಾರಗಳನ್ನು ನಡಿಸಿ ಹೆಚ್ಚಿಸಬೇಕೆಂದು ಸಂಕಲ್ಪಿಸಿದ್ದೇವೆ. ಈ ನಮ್ಮ ಧ್ಯೇಯಸಾಧನೆಗೆ ನಿಮ್ಮೆಲ್ಲರ ಸಹಕಾರವನ್ನು ಹಿಂದಿಗಿಂತಲೂ ಹೆಚ್ಚಾಗಿ ನೀಡುವಿರೆಂದು ಸಂಬುತ್ತೇವೆ. ವರವರಾಗಿ ಉತ್ತಮ ದರವೆ ಬಡ್ಡಿ ಕೊಡಲ್ಪಡುವುದಲ್ಲದೆ ಸಾಲಗಳನ್ನು ಕಡಿಮೆ ಬಡ್ಡಿಯಿಂದಲೂ ಬೇಂಕಿನ ಇತರ ಸಕಲ ಸಲಕರಣೆಗಳನ್ನೂ ಜನರಿಗೆ ಒದಗಿಸಿಕೊಡುವುದೇ ನಮ್ಮ ಕಾರ್ಯಕ್ರಮ.

ದಿ ವಿಜಯಾ ಬೇಂಕ್, ಲಿಮಿಟೆಡ್.
ಹೆಡ್ ಆಫೀಸು: ಮಂಗಳೂರು

ಶಾಖೆಗಳು: ಬೈಂದೂರು, ಕುಂದಾಪುರ, ಬ್ರಹ್ಮಾವರ, ಉಡುಪಿ, ಕಾಪು, ಕಾರ್ಕಳ, ಸಿಟಿ-ಮಂಗಳೂರು, ಕಾಸರಗೋಡು, ಕಾಲ್ಯಾಂಗಾಡು, ಪುತ್ತೂರು, ಮಡಿಕೇರಿ ಮತ್ತು ಮುಂಬಯಿ.

ಪಂಡಿತ ಮದನಮೋಹನ ಮಾಲವೀಯಜೀ

ಜನನ:—
25—12—1861.

ಜೀವನ:—
ದೇಶ, ಧರ್ಮೋದ್ಧಾರ.

ಮರಣ:—
12—11—1946.

ಪಂಡಿತ ಮದನಮೋಹನ ಮಾಲವೀಯಜೀ ತಾ. 12-11-46ನೇ ಮಂಗಳವಾರ ಬೆಳಗ್ಗೆ ಸರಿಯಾಗಿ ೪ ಗಂಟೆ 4-10ಕ್ಕೆ ತನ್ನ ಕೊನೆಯ ಉಸಿರನ್ನೆಳೆದರು; ಕಾಶಿಯ ತನ್ನ ಮನೆಯಲ್ಲೇ ಇಹಯಾತ್ರೆ ನುಗಿಸಿಕೊಂಡರು

ಸಾಯುವಾಗ ಅವರ ವಯಸ್ಸು 75. ಇನ್ನೊಂದು ನಲ್ವತ್ತು ನೂರೇದಿನ ಬದುಕಿದ್ದರೆ 76ರ ಗಡಿಮುಟ್ಟುತ್ತಿದ್ದರು.

ಮಾಲವೀಯಜೀಯಂತಹ ಮನುಷ್ಯ ಮತ್ತೊಬ್ಬನಿರಲಿಲ್ಲ. ಕಾಂಗ್ರೆಸಿಗರು ಅವರನ್ನು ತಮ್ಮ ಸ್ವಮುಖಿನೆನ್ನುತಿದ್ದರು. ಹಿಂದೂ ಮಹಾಸಭೆಯವರು ತಮ್ಮವನೆಂದು ಘೋಷಿಸುತಿದ್ದರು; ಸಂಸ್ಕಾರಾಯ-ವಾದೀ ಸನಾತನಿಗಳು ಅವರು ತಮ್ಮವನೆಂದೇ ಬೆರಳಿಡಿಯುತಿದ್ದರು.. ಸಾರ್ವಜನಿಕಾಲದ ಸಂಸ್ಥದಾಯ ವಾದದ ಆ ಕೊನೆಯಿಂದ ಹಿಡಿದು, ಕಾಂಗ್ರೆಸಿನ ಸ್ವಾತಂತ್ರ್ಯ ಸಮರವಾದದ ವರೆಗಿನ ಈ ತುದಿಯವರೆಗೂ ಮಾಲವೀಯಜೀಯ ಕ್ಷೇತ್ರ ಹಬ್ಬಿತ್ತು;ಆ ವಿಶಾಲವಾದ ಹಾಗೂ ಏಯ ತಗ್ಗುಗಳ-ದರ್ಜೆ ದಂಡೆಭೇದಗಳ-ಕ್ಷೇತ್ರದಲ್ಲಿ ಮದನಮೋಹನಜೀಗೆ ಸಮಾನಸ್ಥಾನವಿತ್ತು. ಸರ್ವಂತರ್ಯಾಮಿಯಾಗುವ ಯೋಗ್ಯತೆಯಿತ್ತು. ಇಂತಹ ಸ್ಥಾನ ಬೇರಾರಿಗೂ ಇಲ್ಲ.

ಶುದ್ಧ ಸನಾತನೀ ವಿಧಿನಿಯಮಗಳನ್ನು ಅಸಹ್ಯವಾಗದ ರೀತಿ ಆಧುನಿಕತೆಯಲ್ಲಿ ಒಡೆದು ತೋರುವಂತೆ ಮಾಡಬಲ್ಲವರಿದ್ದುದು ಮಾಲವೀಯಜೀ ಒಬ್ಬರೇ. ಗಾಂಧೀಜೀಯ ಕೈಯಲ್ಲೂ ಅವು ತಮ್ಮ ಮೂಲರೂಪ ಕಳಕೊಂಡಿವೆ. ಆದರೆ ಮಾಲವೀಯರವುಗಳನ್ನು ಜಚ್ಚಳಿಯದ ರೂಪದಲ್ಲೇ ನವಯುಗಕ್ಕೆ ತಂದಿದ್ದರು; ಅವುಗಳ ಮೇಲಾಗಲೀ ತನ್ನ ಮೇಲಾಗಲೀ ಜಿಗುಪ್ಸೆಮಾಡದ ರೀತಿಯಲ್ಲೇ ಪ್ರದರ್ಶಿಸಿದ್ದರು. ಅವರ ಮನೋವೈಶಾಲ್ಯ ಮತ್ತು ಯೋಗ್ಯತೆ ಹಾಗಿತ್ತು.

ಅದರ ಇಪ್ಪತ್ತಲ್ಲ! ಇದೂಂದು ಪೀಠಸದೃಶವಾಯಿತು. ಇದಕ್ಕಿಂತ ಎತ್ತರಕ್ಕೇರಿದವರು—ಅಲ್ಲಿಗಿಂತ ಮುಂದ ಹೋಗುವವರು-ಕೆಲವರಿರಬಹುದು; ಆದರೆ ಅಲ್ಲೇ ಮಂಡಿಸಲಾಗುವವರು ಇನ್ನಾರೂ ಇಲ್ಲ.

ಜೀವನ ಚರಿತ್ರೆ—

1861ನೇ ದಶಂಬರ್ 25ರಲ್ಲಿ ಮಾಲವೀಯರ ಜನ್ಮ ಅಲ್ಲಹಾಬಾದಿನಲ್ಲಾಗಿತ್ತು. ಅವರದು ವ್ಯಾಪಾರಿನ ಕಾಲದಿಂದಲೂ ವಿದ್ವಾಂಸರಿಗೆ ಜನ್ಮವೀಯುವುದರಲ್ಲಿ ಹೆಸರಾದ ಬ್ರಾಹ್ಮಣ ಕುಟುಂಬ; ಶಿವಾರಾಧಕರವರು. ಇವರ ಮೂಲ ಹಿರಿಯರು ವಿದ್ಯಾಸಮಯಕ ಪ್ರಮುಖ ವಾಸಪತ್ರಿಕ ಮಾಲ್ವಾದಿಂದ ಬಂದವರಂತೆ; ಬಂದು ಅಲಹಾಬಾದ್ ಮತ್ತು ಕಾಶಿಯಲ್ಲಿ ತಳವೂರಿದ್ದರು. ಮದನಮೋಹನರ ಆಜ್ಜ ಪ್ರೇಮ ಧರ್ ಮಾಲವೀಯರು ಪ್ರಸಿದ್ಧ ಸಂಸ್ಕೃತ ಪಂಡಿತನಾಗಿದ್ದರು. ಇದು ಆ ಕುಟುಂಬಕ್ಕೆ ವಂಶವಾರಂಪರ್ಯವಾಗಿ ಬಂದಿದ್ದ ವಿದ್ಯೆ; ಅಭ್ಯಾಸ. ಮದನಮೋಹನರ ತಂದೆ ಬ್ರಜ್‌ನಾಥ ಮಾಲವೀಯರೂ ಆದರಲ್ಲೇ ವಿದ್ವಾಂಸರು. ಮೊನ್ನೆ ಮುಕ್ತಾಯಗೊಂಡ ಈ ಜೀವನಕ್ಕೂ ಬಾಲ್ಯದಲ್ಲಿ ಸಂಸ್ಕೃತ ಮತ್ತು ಹಿಂದೀ ಅಭ್ಯಾಸವು ಖಾಸಗಿಯಾಗಿಯೂ ಸ್ಥಳೀಯ ಪಾಠ ಶಾಲೆಯಲ್ಲೂ ದೊರೆತಿತ್ತು. ಮೆಟ್ರಿಕ್ಯುಲೇಶನ್ ಪಾಸಾದ ಮೇಲೆ ಮದನಮೋಹನರು ಮುಯಿರ್ ಸೆಂಟ್ರಲ್ ಕಾಲೇಜಿನಲ್ಲಿ ಕಲಿತು 1884ರಲ್ಲಿ ಬಿ. ಎ. ಡಿಗ್ರಿ ಪಡೆದರು. ವ.ದುವೆ 1881ರಲ್ಲೇ ಆಗಿತ್ತು. ಮಿಕ್ಕ ಸಂಪ್ರದಾಯ-ಗಳಂತೆ ಸಮ್ಮುಖಿಯ 'ಗ್ರಂಥಮನೇಟ್' ಹನೆಹರಿಹ'ವನ್ನು ಬಡದೆ ಮಾಲವೀಯರಾಗಿ ಉದ್ಯೋಗಾನ್ವೇಷಣೆಗೆ ತೊಡಗಿದರು. ಒಂದು ಶಾಲೆಯಲ್ಲಿ ಇಂಗ್ಲಿಷ್ ಮಾಸ್ಟರರ ಕೆಲಸ ದೊರೆಯಿತು ಎಂಬು ವರುಷ ವಿದ್ಯಾರ್ಥಿಯಾಗಿದ್ದರು. 'ಸರ' ಬಿರುದುಧಾರಿಗಳಾಗಿದ್ದರು. ಅದರಿ ಅಗಲೂ ಅವರ ವೈಶಿಷ್ಟ್ಯವು ಶಾಲಾ ಗೋಡೆಗಳ ಗೂಡಿನ ಹಕ್ಕಿಯಂತಿರಲಿಲ್ಲ; ಗ್ಲಾಸಿನೊಳಗಿನ ದೀಪದಂತಿತ್ತು; ಪ್ರಕಾಶ ಹೊರಗೆ ಬೆಲ್ಲುತ್ತಿತ್ತು. ಓಧದ ಪ್ರಸಿದ್ಧ ತಾಲೂಕುದಾರ ರಾಜಾರಾಮ್ ಪಾಲ್ ಸಿಂಗ್ 'ಹಿಂದುಸ್ಥಾನಿ' ಎಂಬ ಹಿಂದೀ ದಿನಪತ್ರಿಕೆಯೊಂದನ್ನು ಸ್ಥಾಪಿಸಿದ್ದ; ಅದರ ಸಂಪಾದಕತ್ವ ವಹಿಸಲು ಮದನಮೋಹನ ಮಾಲವೀಯರಿಗೆ ಕರೆ ಬಂತು. ತನ್ನ 25ನೇ ವಯಸ್ಸಿನಲ್ಲಿ ಮಾಲವೀಯರು ಸಂಪಾದಕರಾದರು. ಮಾಲವೀಯರ ಸಂಪಾದಕತ್ವದಲ್ಲಿ ಆ ಪತ್ರಿಕೆಯ ಅಭಿಪ್ರಾಯಗಳ ತೂಕ ಹೆಚ್ಚಿತು; ಅದು ಅಲ್ಪಾವಧಿಯಲ್ಲೇ ಜನಪ್ರಿಯವಾಗಿ ಹೋಯಿತು. ಅದೇ ಅವರ ಸಾರ್ವಜನಿಕ ಜೀವನದ ಮೂಲ.

ಸಾರ್ವಜನಿಕ ರಂಗದಲ್ಲಿ

ಆದರೆ ಈ ಕಾಮಧೇನುವಿಗೆ ಲೇಖನಿಯೇ ನಿರಂತರ ಗೂಟವಾಗಿರಲಿಲ್ಲ. ಮಿತ್ರರ ಒತ್ತಾಯಕ್ಕೊಳಗಾಗಿ ಅವರು ಅಲ್ಲಹಾಬಾದ್ ಯುನಿವರ್ಸಿಟಿಯಲ್ಲಿ ಕಾನೂನು ಕಲಿತು ವಕೀಲೀ ಪರೀಕ್ಷೆ ಕೊಟ್ಟರು. ಅಲ್ಲಹಾಬಾದ್ ಹೈಕೋರ್ಟಿನ ವಕೀಲರಾದರು. ಅಲ್ಲದ್ದಷ್ಟು ಹೊತ್ತುವಾದಿ—ಪ್ರತಿವಾದಿ, ಮುದ್ದಾ-ಮುದ್ದೆಯಲೆ, ಅರ್ಜಿದಾರ--ಇದಿರು ಮಾದಿಗಳಲ್ಲಿ ಯಾರಿಂದಲೂ ಬಿಡಿಗಾಸೆ, ಸ್ಪರ್ಧಿಸಿ ಪಡೆವ ವಕೀಲರಾಗಿದ್ದರು. 1888ರಲ್ಲಿ ಹಿಂದುಗಳನ್ನು ರಾಜಕೀಯ ಹಾಗೂ ಸಾಮಾಜಿಕವಾಗಿ ಸಂಘಟಿಸುವ ಉದ್ದೇಶದಿಂದ 'ಹಿಂದೂ ಸಮಾಜ' ಪೆಂಬ ಸಂಘವನ್ನು ಅಲಹಾಬಾದಿನಲ್ಲೇ ಪ್ರತಿಷ್ಠಾಪಿಸಿದರು. ಕಾರ್ಯ ಮತ್ತು ಕಾಂತಿ ದಿನ ದಿನಕ್ಕೆ ಹೆಚ್ಚುತ್ತಾ ಹೋಯಿತು; ಅಲ್ಲಹಾಬಾದ್ ಲೋಕಲ್ ಮುನ್ಸಿಪಲ್ ಬೋರ್ಡಿನ ಸದಸ್ಯ ಹಾಗೂ ಉಪಾಧ್ಯಕ್ಷರಾದರು. ನಾಗರಿಕ ಸೌಕರ್ಯಗಳನ್ನು ಸಾಧಿಸಿಕೊಟ್ಟು ಸ್ಥಳೀಯ ಗೌರವದ ಮುಖ್ಯ ಕೇಂದ್ರವಾದರು. 1902ರಲ್ಲಿ ಸಂಯುಕ್ತ ಪ್ರಾಂತ್ಯದ ಲೆಜಿಸ್ಲೇಟಿವ್ ಕೌನ್ಸಿಲ್ ಸದಸ್ಯರೂ ಆದರು. ಆಗ ಬಂದ ದೋಷಪೂರ್ಣ ಭೂಮಸೂತೆಯೊಂದನ್ನು ಅವರು ವಿರೋಧಿಸಿದ ರೀತಿಯ ಮೇಲಿಂದ ಆ ವ್ಯಾಪ್ತಿಯವರಿಗೇಲ್ಲಾ ಮಾಲವೀಯರೊಂದು 'ರಕ್ಷಣೆ' ಯೆಂಬಂತೆ ತೋರಿತು. ಎರಡನೇ ಬಾರಿ ಆರಿಸಿ ಬಂದಾಗ ಹೆಚ್ಚಾಗಿ ಯುರೋಪಿಯನ್ ಸದಸ್ಯರಿಂದಲೇ ತುಂಬಿದ್ದ ಆ ಕೌನ್ಸಿಲನ್ನೇ ಪುನರ್ನಿರ್ಮಿಸುವ -ಅಕಾಲಕ್ಕೆ ಉಗ್ರವನ್ನಿಸುವ-ವಾದ ಹೂಡಿ ಜನತೆಯ ಹೃದಯದೊಂದು ಸ್ಥಾನಕ್ಕೇನೇ ಬಂದರು.

ರಾಷ್ಟ್ರಪತಿಯಾಗಿ

ಭಾರತದ ಸ್ವಾತಂತ್ರ್ಯ ಸಮರವು ಆದಿಯಿಂದಿದು ವರೆಗೂ ಮೆಟ್ಟಲು ಪ್ರಕಾರ ಏರಿ ಬಂದಿತ್ತಷ್ಟೆ? ಅಲ್ಲಿಂದಿಲ್ಲಿ ವರೆಗೂ ಆ ದರ ಬೆನ್ನು ಹಿಡಿದು ಏರಿ ಬಂದವರು ಆ ಪರೂಪ; ಆದರೆ ಮಾಲವೀಯರನ್ನದು ಯಾವ ಮೆಟ್ಟಿಲಿನಲ್ಲೂ ಹಿಂದೆ ಬಿಟ್ಟು ಬಂದದ್ದಿಲ್ಲ. 1886ರಿಂದ ಪ್ರತಿಯೊಂದು ಕಾಂಗ್ರೆಸ್ ಮಹಾಧಿವೇಶನದಲ್ಲೂ ಅವರು ಹಾಜರಿದ್ದರು. ಪ್ರತಿಯೊಂದು ಸಲವೂ ದೇಶ ಪ್ರಾಮುಖ್ಯ ವಿಷಯಗಳ ಮೇಲೆ ಮಾಲವೀಯರ ಉಪನ್ಯಾಸ - ವಿಷಯ ವಿವೇಚನೆ ಮತ್ತು ಭಾವಗರ್ಭಿತವಿದ್ದು ವ್ಯಾವಹಾರಿಕ ಹಾದಿ ತೋರಿಸುವ ದೀವಿಗೆಯಂತಹ ಅದರ ಉಪಕಾರ-ನಡೆದಿತ್ತು. ಅವರ ಆತ್ಮಬಲ-ನೈತಿಕ ಧೈರ್ಯ- ಪರಿಸ್ಥಿತಿಯ ಮೇಲಿನ ಪ್ರಭುತ್ವ- ಅಲೋಚನಾ ಶಕ್ತಿ ಅಗಾಧವಿದ್ದುದಂದ ಮಾತು ಬಿದ್ದಲ್ಲಿ ಮೊಹರು ಬೀಳದ ಹೊಗುತ್ತಿರಲಿಲ್ಲ; ನಿಟ್ಟಕಾರ್ಯ ಫಲಿಸದ ಒಣಗುತ್ತಿರಲಿಲ್ಲ. 1908ರ ಕೇಂದ್ರ ಶಾಸನೋಧೀ ಕಮಿಶನಿನ ಮುಂದೆ, ಸಂಯುಕ್ತ ಕೇಂದ್ರಾಧಿಕಾರವನ್ನು ಸಮರ್ಥಿಸಿ ಅವರಿತ್ತಿದ್ದ ಪಾಗ್ಯೂಲವು ಇಂದಿಗೂ ಉಲ್ಲೇಖಿಸಬಹುದಾದ ದಾಖಲೆಯಾಗಿದೆ. ಅದೇ ವರುಷ ಮಿಂಟೋ -ಮೋರ್ಲೆ ಸುಧಾರಣೆ ಒಂದಾಗಿ 'ಕಾಂಗ್ರೆಸ್ ಚಳವಳಿದ ದ್ವಿತೀಯ ಮಹಾ ವಿಜಯ"ವೆನ್ನುತ್ತಾ ಅದಂ ಸ್ವಾಗತಕ್ಕೆ ಮುಂದಾದ ಮಂದಗಾಮಿ ಪ್ರಮುಖರಲ್ಲಿ ಮಾಲವೀಯರು ಮುಖ್ಯಸ್ಥ. 1909ರ ಲಾಹೋರ್ ಕಾಂಗ್ರೆಸ್ ಅಧಿವೇಶನದ ಅಧ್ಯ

(೧೦ನೇ ಪುಟ ನೋಡಿರಿ(

ಬಾಲಚಂದ್ರ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕುಲಾರುಗಳೂ ಪ್ರಕಟವಾಗುತ್ತವೆ.

ವಾರ್ಷಿಕ ಚಂದಾ
ರೂ. 2-0-0 ಮಾತ್ರ.

ಚೈಂಡು ಮಾಡಿದ ಪ್ರತಿಯೊಂದು ಸಂಪುಟಕ್ಕೆ ರೂ. 2/-

ಹೆಚ್ಚಿನ ವಿಚಾರಕ್ಕೆ ಬರೆಯಿರಿ—

CANARA BANK LIMITED
ಕೆನರಾ ಬ್ಯಾಂಕ್ ಲಿಮಿಟೆಡ್

(ಸ್ಥಾಪನೆ 1906)

ಹೆಡ್ ಆಫೀಸು:- ಬಾವಟೆಗುಡ್ಡೆ, ಮಂಗಳೂರು.
ಜನರಲ್ ಪೆನೇಜರ ಆಫೀಸು:-ಎಸ್ಪೊಲೊ ಸ್ಟ್ರೀಟ್, ಪೋರ್ಟ್, ಬೊಂಬಾಯಿ.

ಶಾಖೆಗಳು:

ಬೊಂಬಾಯಿ ಅಧಿಪತ್ಯ
ಬೆಳಗಾಂವ್
ಧಾರವಾಡ
ಹುಬ್ಬಳ್ಳಿ
ಕೋಲಾಪುರ
ಕಲ್ಯಾಣ

ಬೆಂಬಾಯಿ ಶಹರಿನಲ್ಲಿ
ಫೋರ್ಟ್
ಮಾಂಡ್ವಿ
ಗಿರ್ಗಾಂವ್
ಲಾಲಾದೇವಿ

ಮೈಸೂರು ಸಂಸ್ಥಾನ
ಅದಿಸಕೆರೆ
ಬೆಂಗಳೂರು
ಚಿಕ್ಕಮಗಳೂರು
ಧಾರವಾಡ
ಶಿವಮೊಗ್ಗಾ

ಕೊಚ್ಚಿ ಸಂಸ್ಥಾನ
ಕೊಚ್ಚಿ
ಎರ್ನಾಕುಲಮ್

ತಿರುವಾಂಕೂರು ಸಂಸ್ಥಾನ
ಆಲಪ್ಪಿ
ಕ್ವಿಲೋನ್

ಹೈದರಾಬಾದು ಸಂಸ್ಥಾನ
ಸಿಕಂದರಾಬಾದು

ಮದ್ರಾಸು ಅಧಿಪತ್ಯ
ಬಂಟ್ವಾಳ
ಕಲ್ಲಿಕ್ಕೋಟೆ
ಕಣ್ಣಾನ್ನೂರು
ಕೊಯಮುತ್ತೂರು
ಕುಂದಾಪುರ
ಇರೋಡ್
ಗಂಗೊಳ್ಳಿ
ಕಾರ್ಕಳ
ಕಾಸರಗೋಡು
ಮದರಾಸು
ಮಧುರೆ
ಮಂಗಳೂರು ಬಂದರು
ಮಂಗಳೂರು ಸಿಟಿ
ಮೂಲ್ಕಿ
ಪಯ್ಯನ್ನೂರು
ಪುತ್ತೂರು
ಉಡುಪಿ

ಮೂಲಧನ ೨೫ ಲಕ್ಷ.] [ಕ್ಷೇಮನಿಧಿ ೧೦ ಲಕ್ಷ.

ಗೂರುಬ್ಬಸ ಅರ್ಥಾತ್ ಆಸ್ತಮ

ಈ ವ್ಯಾಧಿಗೆ ಜಗದ್ವಿಖ್ಯಾತನಾದ 'ಲಜ್ಜಣಭೂತಿ'ಯೇ ದಿವ್ಯೌಷಧ. ಒಂದೇ ಒಂದು ಡೋಸ್ಸಾ ಔಷಧಿಯನ್ನು ಹುಣ್ಣಿಮೆ ದಿನ (ತಾ. 8-12-46) ಸೇವಿಸಿದರೆ ಎಂತಹ ಗೂರುಬ್ಬಸವೂ ನಿಂತು ಹೋಗುವುದು ಪತ್ರವ್ಯವಹಾರ ಇಂಗ್ಲಿಷಿನಲ್ಲಿ.

Sri Janki Sewashram,
P. O. Chitrakot. U. P.

ಕಾಂಗ್ರೆಸ್ ಅಧ್ಯಕ್ಷರ ಜತೆಯಲ್ಲಿ ಕಸಾಯಿಗಳ ರಾಜ್ಯದಲ್ಲಿದ್ದಾಗ—

ಲೇ— ಶ್ರೀ. ಪುರುಷೋತ್ತಮದಾಸ ಠಂಡನ್.

ನವಾಖಾಲೀ ಮತ್ತಿತರ ಕಡೆಗಳಲ್ಲಿ ಕೊಲೆಗಾರ ಪುಂಡಾಡಿಗಳು ನಡೆಸಿದ್ದ ರಾಕ್ಷಸೀ ಅತ್ಯಾಚಾರಗಳನ್ನು ಸರಿಯಾದ ಶಬ್ದಗಳಿಂದ ವರ್ಣಿಸಬಲ್ಲ ಶಕ್ತಿಯಾಗಲೀ ಯೋಗ್ಯತೆಯಾಗಲೀ ನನ್ನಲ್ಲಿಲ್ಲ. ವೃತ್ಯ ಜೀವತೆಯು ಅಲ್ಲಿ ನಡೆಸಿದ್ದ ಪ್ರಳಯನೃತ್ಯದ ಶಬ್ದಚಿತ್ರ ಕೊಡಬೇಕಾದರೆ ಯಾವುದಾದರೊಂದು ಪಿಶಾಚಿಯು ಹೊಸ ಶಬ್ದಕೋಶವೊಂದನ್ನೇ ನಿರ್ಮಿಸಬೇಕಾದೀತು. ಆದರೂ, ನಿರಪರಾಧಿ ಹಾಗೂ ನಿರ್ಗತಿಕ ಜನರ ಮನೆ ಗುಡಿಸಲುಗಳಿಗೆ ಹಿಡಿದಿದ್ದ ಆ ಜ್ವಾಲೆಯ ಕಷ್ಟಯಾತನೆಗಳನ್ನನುಭವಿಸಿದ್ದವರನ್ನೂ, ಆ ದುರಂತದ ಪ್ರತ್ಯಕ್ಷದರ್ಶಿಗಳಾಗಿದ್ದವರನ್ನೂ ಸ್ವತಃ ಕಂಡು ಬಂದಿರುವ ನಾನು ಪೂರ್ವ ಬಂಗಾಳದ ಘಟನೆಗಳ ಪರಿಚಯಮಾಡಿಕೊಡುವ ಪ್ರಯತ್ನವನ್ನಷ್ಟೇ ಇಲ್ಲಿ ಮಾಡುತ್ತಿದ್ದೇನೆ.

ಆ ಸಂದರ್ಭ

ಆ ಹಾಳು ಬಿದ್ದ ಪ್ರೇತ್ರಗಳಲ್ಲಿ-ಪಿಲಾಡೀ ತಂಡಗಳು ಜನರ ಪ್ರಾಣ, ಸೊತ್ತುಗಳೊಂದಿಗೆ ಪ್ರಳಯ ನಾಟ್ಯವಾಡಿದ್ದ ಭಾಗಗಳಲ್ಲಿ-ಸಂಚರಿಸಲು ಹೊರಟಿದ್ದ ಕಾಂಗ್ರೆಸ್ ಅಧ್ಯಕ್ಷೆ ಆಚಾರ್ಯ ಕೃಪಲಾನಿ, ಶ್ರೀಮತಿ ಸುಚೇತಾ ಕೃಪಾಲನಿ ಮತ್ತು ಶ್ರೀ. ಶರತ್ಚಂದ್ರ ಬೋಸರೊಂದಿಗಿರುವ ಸುಯೋಗ ನನಗೊದಗಿದ್ದಿತು. ಒಕ್ಟೋಬರ್ ತಾ. 18ರಲ್ಲಿ ನಾವು ಅಲ್ಲಹಾಬಾದಿನಿಂದ ಕಲ್ಕತ್ತೆಗೆ ಹಾರುವಾಗ ಹವಾಮಾನವು ಅಷ್ಟೊಂದು ಅನುಕೂಲವಾಗಿರಲಿಲ್ಲ. ಆದರೂ, ಕಪ್ಪು ಮೋಡಗಳೊಳಗಿಂದ, ಪ್ರತಿಕೂಲ ಹವೆಯೊಳಗಿಂದ, ಹಾದಿ ಭೇದಿಸಿಕೊಂಡು ಜಯಶೀಲವಾಗಿ ಮುಂದೊತ್ತಲು ವಿಮಾನ ಸಾರಥಿಗಳು ಶಕ್ತರಾದರು; ಅಪರಾಹ್ನ ನಾವು ಕಲ್ಕತ್ತೆಗೆ ಮುಟ್ಟಿದೆವು. ಮಳೆ ತೊಟ್ಟು ಕ್ಯುತಿತ್ತು. ಸುಂದರ ಹೂಮಾಲೆ ಮತ್ತು ಪುಷ್ಪಗಳೊಂದಿಗೆ ತಮ್ಮ ಹೊಸಾಧ್ಯಕ್ಷನ ಸ್ವಾಗತಕ್ಕಾಗಿ ಅಲ್ಲಿ ಕೂಡಿ ಬಂದಿದ್ದ ಗುಂಡಸರು, ಹೆಂಗಸರು ಮತ್ತು ಮಕ್ಕಳ ಗುಂಪು ಅಕರ್ಷಣೀಯವಿತ್ತು. ಆದರೆ ಈ ಎಲ್ಲಾ ಸ್ವಾಗತದ ಪೂರ್ಣ ಸ್ವಾಗತದ ಹಿಂಗಡೆ ದುಃಖಾಶ್ರು ಬಂದುಗಳಿದ್ದುವು. ತಾವೀಗ ಸ್ವಾಗತಿಸುತ್ತಿರುವುದು, ಬಂಗಾಳವನ್ನು ಅನರಿಸಿಕೊಂಡ ಭೀಷಣ ದುರಂತವನ್ನು ನೋಡಲು ಬಂದಿರುವ ಅಧ್ಯಕ್ಷರನ್ನೇ ಎಂಬ ಅರಿವು ಆ ಜನರಿಗಿದ್ದಿತು. ಕುದಿತ ಮತ್ತು ಕರೋರತೆಯ ವಾತಾವರಣ ಅಲ್ಲಿತ್ತು. ಕೆಲವೇ ನಿಮಿಷಗಳಲ್ಲಿ ನಮ್ಮ ನಮ್ಮ ಸ್ಥಳಗಳಿಗಾಗಿ ನಾವಾ ನಿಲ್ದಾಣದಿಂದ ಹೊರಟೆವು.

ಬೋಸರ ಮನೆಯಲ್ಲಿ

ಅಧ್ಯಕ್ಷರು ಶ್ರೀ ಶರತ್ಚಂದ್ರ ಬೋಸರ ಮನೆಗೆ ಮುಟ್ಟಿದುದೇ ತಡ-ಜನ ಸಮೂಹವನ್ನು ಮುತ್ತಿಗೆಹಾಕಿ ತಂತಮ್ಮ ಭೀಕರ ದುರಂತ ಕಥೆಗಳ ಪ್ರವಾಹದಿಂದ ಅಧ್ಯಕ್ಷರನ್ನು ತೇಲಿಸಿಬಿಟ್ಟತು. ಅವರು ಎಲ್ಲವನ್ನೂ ತಾಳ್ಮೆಯಿಂದ ಕೇಳಿಕೊಂಡು ಹೇಳಿದರು-"ಮಿತ್ರರೇ. ಎಲ್ಲವನ್ನೂ ಕೇಳುವದಕ್ಕೂ ಸ್ವತಃ ನೋಡುವದಕ್ಕೂ ನಾನೀಗ ಬಂದಿದ್ದೇನೆ. ವಿಶ್ವಾಸವಿರಲಿ; ನಿಮ್ಮ ಆ ನಿರ್ಗತಿಕ ಜವಾಬ್ದಾರಿಯಿಂದಲೇ ಹಾರುತ್ತಿದ್ದೇವೆ" ಎಂಬ ಕಠಾರಿಗೆ ನಿಲ್ದಾಣ ಬಿಡುವ ಮೊದಲೇ ವಿಮಾನ ಸಾರಥಿಗಳಿಂದ ಸಹಿ ಹಡೆದಿದ್ದರು. ಆಕಾಶದಲ್ಲಿದ್ದಾಗ ಪೆಟ್ರೋಲಿನ ಟೋಪಿಯು ಅಕಸ್ಮಾತ್ ತೆರೆಯುವ್ಟು ವಿಮಾನದಿಂದದು ಮೇಲಕ್ಕೆ ಸಿಡಿಯ ಪತ್ತಿತು. ಅಲ್ಪಾವಧಿಯಲ್ಲೇ ಅದು ನಮ್ಮಲ್ಲೊಬ್ಬನ ದೃಷ್ಟಿಗೆ ಬಿದ್ದುದರಿಂದ 'ಪೆಟ್ರೋಲು ಟಿಂಕಿನಿಂದ ಹಾರುತ್ತಿದೆ'ಎಂದು ಆವ ಕೂಗಿಕೊಂಡ. ಕೂಡಲೇ ಸಾರಥಿಗಳ ಗಮನವೂ ಅತ್ತ ಹೋಗಿ, ಆವರು ವಿಮಾನವನ್ನು ಪುನಃ ನಿಲ್ದಾಣಕ್ಕೆ ತಿರುಗಿಸಿ ಎಲ್ಲವನ್ನೂ ಸರಿಗೊಳಿಸಿದರು. ಆ ಒಡಕು ಸಕಾಲದಲ್ಲಿ ಕಾಣಿಸದೆ ಹೋಗುತ್ತಿದ್ದರೆ ವಿಮಾನಕ್ಕೆ ಬೆಂಕಿ ಹಿಡಿದು ನಾವೆಲ್ಲಾ ಸಜೀವದಹನವಾಗಬೇಕಿತ್ತು. ಒಂದು ಘಂಟೆಯ ನಂತರ ನಾವು ಪುನಃ ಕೊಮಿಲ್ಲಾಕ್ಕೆ ಹಾರಿದೆವು ಹಲವು ಮನೆಗಳನ್ನು ದಹಿಸಿಕೊಂಡು ಆಕಾಶಕ್ಕೇರಿ ಬರುತ್ತಿದ್ದ ಕೆಂಪು ಜ್ವಾಲೆಗಳೂ, ಆಲ್ಲಲ್ಲಿ ಆತ್ತಿಂದಿತ್ತ ಓಡುತ್ತಿದ್ದ ಕೆಲಪರೂ ಗಗನ ಪಥದಲ್ಲಿ ನಮ್ಮ ಕಣ್ಣಿಗೆ ಬೀಳುತಿದ್ದರು. ನಮ್ಮ ಹೃದಯಕ್ಕೆ ಮಹಾಘಾತವಾಯಿತು; ಹೊಗೆ ತುಂಬಿದ್ದ ಆ ಹಳ್ಳಿಯಲ್ಲಿಳಿಯಬೇಕೆಂದು ಬಗೆದೆವು. ಆದರೆ ಕೆಳಗಿಳಿಯುವದು ಎಷ್ಟಕ್ಕೂ ಅಸಾಧ್ಯವೆಂದು ಸಾರಥಿಗಳಂದರು.

ಕೊಮಿಲ್ಲಾದಲ್ಲಿ

ಅಪರಾಹ್ನ ನಾವು ಕೊಮಿಲ್ಲಕ್ಕೆ ಮುಟ್ಟಿದೆವು. ನಿಲ್ದಾಣದಲ್ಲಿ ಕೆಲವು ಜನರು ನೆರೆದಿದ್ದು, ಕಾಂಗ್ರೆಸ್ ತಮಗಾಗಿ ಏನು ಮಾಡಲಿಚ್ಛಿಸಿದೆ, ಎಂದು ನಮ್ಮನ್ನು ವಿಚಾರಿಸಿದರು. ನಿಸ್ಸಹಾಯಕತೆ, ಸ್ಮಾಣಸಂಕಟ ಮತ್ತು ನಿರಾಶೆ ಆವರ ಮುಖಗಳಲ್ಲಿ ಒಡೆದು ಕಾಣುತಿತ್ತು. ಕಮಗೇನೂ ಆಗಲಾರದೆಂಬ ಅಭಯದಾನವು ಆವರಿಗೆ ಬೇಕಾಗಿತ್ತು. ಆವರೆಲ್ಲೊಬ್ಬ ಹೇಳಿದ: "ನಾಳೆ ಬೆಳಿಗ್ಗೆ ಯೇಳುವಾಗ ಜೀವದಲ್ಲಿರಬಲ್ಲೆವೆಂಬ ಧೈರ್ಯ ನಮ್ಮಲ್ಲಾರಿಗೂ ಇಲ್ಲ. ನೀವು ನಮ್ಮನ್ನು ಉಳಿಸಲಾರಿರಾ? ದಯವಿಟ್ಟು ಅನಾಥ ಶಿಬಿರಗಳಿಗೊಮ್ಮೆ ಬನ್ನಿ. ಜನರಿಗೇನೆಲ್ಲಾ ಆಯಿತೆಂಬುದನ್ನು ಒಮ್ಮೆ ಕೇಳಿರಿ" ಕೊಮಿಲ್ಲಾ ನಿಲ್ದಾಣದಿಂದ ನಾವು ನೇರಾಗಿ ಅನಾಥ ಶಿಬಿರಗಳಿಗೆ ಹೋದೆವು. ಅಲ್ಲಿ ಗಂಡಸರು-ಹೆಂಗಸರು-ಮಕ್ಕಳೆಂದು ಸುಮಾರು ಮೂರು ಸಾವಿರವಿದ್ದರು. ನಾವವರಲ್ಲಿ ಹಲವರೊಡನೆ ಮುಖತಃ ಮಾತಾಡಿ ಹೃದ್ರಾವಕ ಕಥೆಗಳನ್ನು ಕೇಳಿದೆವು. ನವಖಾಲಿಯಲ್ಲೊಬ್ಬ ಮನುಷ್ಯ ಜೀವವುಳಿಸಿಕೊಳ್ಳುವದಕ್ಕಾಗಿ ನೂರಾರೂಂದ ಕೈರಿ ಆದರ ಕೊಂಪೆಯನ್ನು ಅಪ್ಪಿಹಿಡಿದು ಅಂಟಿಕೊಂಡಿದ್ದನಂತೆ. ಸಮಯ ಸಂದಂತೆ ಹೆಸರು ಮತ್ತು ಆಯಾಸ ಹೆಚ್ಚಿತು; ತ್ರಾಣಗುಂದಿ ಅರಿಜೀವವಾದ ಆತ ಕಟ್ಟಕಡೆಗೆ ಕೈಜಾರಿ ನೆಲಕ್ಕೆ ಬಿದ್ದ; ತಮ್ಮ ಕೈಯಿಂದ ಒಡಿ ತಪ್ಪಿಸಿಕೊಂಡಿದ್ದ ಆತ ಕಳಗೆಬೀಳುತ್ತಿರುವುದನ್ನು ಕಂಡ ಕೊಲೆಗಡುಕರು ಹಸಿದ ಹುಲಿಗಳಂತೆ ಅಲ್ಲಿಗೆ ನೆಗೆದು ಬಂದರು. ಇವರು ಕೊಡಲಿಗಳಿಂದ ಅವನ ದೇಹವನ್ನು ಚೂರು ಚೂರು ಮಾಡುವಾ

ಮಾಡಲು ಸಾಧ್ಯವಿದೆಯೋ ಇದೆಲ್ಲವನ್ನೂ ಮಾಡಿರಿ" ಅಧ್ಯಕ್ಷರು ಮಾತು ಕೇಳಿ ಆ ಗುಂಪು ಚದರಿತು. ಆ ಮೇಲೆ ಅಧ್ಯಕ್ಷರು ಆವರ ಪತ್ನಿ, ಮತ್ತಿತರರು ಒಂದೆಡೆ ಕಲೆತು ಮರುದಿನದ ಕಾರ್ಯಕ್ರಮಗಳ ಕುರಿತು ಚರ್ಚಿಸಿದರು. ಡವ್ ಡವ್ ವಿಮಾನ ನಿಲ್ದಾಣದಿಂದ ನಾವು ಹೊರಟಾಗಲೇ ವೀಣಾದಾಸ್ ಎಂ. ಎಲ್. ಎ -ಆ ತೆಳ್ಳಗಿನ ಆಶ್ಚರ್ಯಕರ ಮಹಿಳೆ-ಕೆಲವು ವರುಷಗಳಹಿಂದೆ ಬಂಗಾಳದ ಗವರ್ನರರಿಗೆ ಗುಂಡೆಸೆದು ಇತ್ತೀಚೆಗೆ ಬಿಡುಗಡೆಗೊಂಡಿದ್ದ ಆ ಪ್ರಸಿದ್ಧ ಕ್ರಾಂತಿಕಾರಿಣಿ- ಕಾರು ಹತ್ತಿ ನಮ್ಮೊಂದಿಗೆ ಬಂದಿದ್ದರು. ನಮ್ಮ ಸಂಭಾಷಣೆಯ ನಡುವೆ ಆವರಂದರು: "ಸಕಾಲದಲ್ಲಿ ಚಿತ್ತೈಸಿದ ಕಾಂಗ್ರೆಸ್ ಅಧ್ಯಕ್ಷರಿಗೆ ಬಂಗಾಳವು ಋಣಿಯಾಗಿದೆ. ಪ್ರಮುಖರೆಲ್ಲಾ ಬಂಗಾಳಕ್ಕೆ ಬರಲಿ; ಈ ಪ್ರಾಂತ್ಯದ ನಾವು ಅನಾಧರೆಂಬ ಭಾವನೆ ಬಂಗಾಳಿಗಳಿಗೆ ಬಾರದಂತಾಗಲಿ. ಬಂಗಾಳವೀಗ ತನ್ನ ನಾಯಕರನ್ನು ಕರೆಯುತ್ತಿದೆ."

ಮೂಲೆ ಮೂಲೆಗಳಲ್ಲೂ ಮರಣ ಭಾಯೆ

ನಾವು ಕಲ್ಕತ್ತಾ ನಗರದೊಳಗೆ ಕಾಲಿಟ್ಟಾಗ ಅದು ನಿರ್ಜೀವ ಮತ್ತು ನಿರ್ಜನವಾಗಿದ್ದುದನ್ನು ಕಂಡೆವು. ಶಾಶ್ವತ ಆಘಾತದ ಕಲೆಗಳು ಅಲ್ಲಿದ್ದುವು. ಅನಿರ್ವಾಹ ಸಂದರ್ಭಗಳಲ್ಲಿ ವಿನಹಾ ಜನರು ತಮ್ಮ ಮನೆಯಿಂದ ಹೊರಗೆ ಕಾಲಿಡುತ್ತಿರಲಿಲ್ಲ. ರಸ್ತೆಗಳಲ್ಲಿ ನಡೆವವರು ಅಲ್ಲೀ, ಸಮೀಪದಲ್ಲೀ, ಸಾಲು ಸಾಲು ಹೊಂಚುಹಾಕ್ತಿದೆ ಎಂದೂಹಿಸಿಕೊಂಡೇ ನಡೆಯುತಿದ್ದರು. ಕಲ್ಕತ್ತಾ ನರಮೇಧದಲ್ಲಿ ಸಾವಿರಾರು ದೇಹಗಳು ಬಲಿಯಾಗಿದ್ದುವು; ಆದರದು ಮನುಷ್ಯನ ಆತ್ಮಕ್ಕೆ ಮಾಡಿದ ಜಖಂ ಎಲ್ಲಕ್ಕಿಂತ ಕಳತೆಯದು. ಬಂಗಾಳದ ಎಲ್ಲಾ ದುರಂತಗಳ ಪೈಕಿ ಈ ಆಘಾತವು ಅತಿ ಹೆಚ್ಚಿನದು. ಜನರು ಸಾವಿನಂಜಿಕೆಯಿಂದ ಜೀವನವನ್ನು ಕೈಯಲ್ಲಿ ಹಿಡಿದು ಕೊಂಡೇ ಬಾಳುತಿದ್ದಾರೆ. ನಿಶ್ಚಿಂತೆಯಿಂದ ಶ್ವಾಸ ಬಿಡುವ ಸ್ವಾತಂತ್ರ್ಯ ಅವರಿಗಿಲ್ಲ. ಭದ್ರತೆಯ ಭಾವನೆಯೆಲ್ಲವನ್ನೂ ಅವರು ಕಳಕೊಂಡಿದ್ದಾರೆ. ಮೇಲಿಂದ ಮೇಲೆ ಅವರಿಗಾಗುತ್ತಿರುವದೆಂದರೆ ಸಾವಿನ ಸ್ಮರಣೆಯೊಂದೇ.

ಗವರ್ನರ್, ಸುಹ್ರವರ್ದಿ ಭೇಟಿ

ಒಕ್ಟೋಬರ್ 19ರಲ್ಲಿ ವಿಮಾನ ನಿಲ್ದಾಣಕ್ಕೆ ಹೋಗಿ ಗವರ್ನರರನ್ನು ಸಂಧಿಸಲು ಫೋನಿಗೆ ಹಾತಬೇಕೆಂದು ಸಂಕಲ್ಪಿಸಿದೆವು; ಆದರೆ ಅಲ್ಲಿ ನಮ್ಮ ವಿರುದ್ಧ ಒಳಸಂಚು ನಡೆದಿರಬೇಕೆಂದು ತೋರುತ್ತದೆ. ಫೋನಿಯ ವಿಮಾನವಿಳಿವ ಸ್ಥಳವು ನೆರೆಯಿಂದಾವರಿಸಲ್ಪಟ್ಟರುವದರಿಂದ ಅಲ್ಲಿಗಿಳಿಯಲು ಯಾರಿಂದಲೂ ಸಾಧ್ಯವಿಲ್ಲವೆಂದು ನಮಗೆ ಹೇಳಲಾಯಿತು ಆದರೂ ನಮ್ಮ ಪ್ರಯತ್ನವನ್ನೊಮ್ಮೆ ಮಾಡಿ ಬಿಡೋಣವೆಂದು ನಾವು ತಯಾರಾದೆವು; ಆದರೆ ನಮಗೆ ಹಾಗೆ ಮಾಡದಂತೆ ಬಹುತೇಕವಾಗಿ ಬಹಿಷ್ಕಾರವೇ ಬಿತ್ತು. ಆ ಮೇಲೆ ಕೊಸಿಲ್ಲಾಕ್ಕೆ ಹಾರುವ ಹೊರತು ಬೇರೆ ಹಾದಿಯೇ ನಮಗಿರಲಿಲ್ಲ. ನಾವು ಹೊರಡುವ ಮೊದಲು ಪ್ರಯಾಣದಲ್ಲಿರುವ ಅಪಾಯ ಮತ್ತು ಅಹಿತಕರ ಮಾತುಕತೆಗಳು ನಮ್ಮ ಕಿವಿಗೆ ಬಿದ್ದಿದ್ದುವು; ಪೀಡಿತ ಸ್ಥಳಗಳಿಗೆ ಹೋಗದಂತೆ ಅಧ್ಯಕ್ಷರನ್ನು ಸಮಜಾಯಿಸಲು ಹಲವರು ಅಪ್ರತ್ಯಕ್ಷವಾಗಿ ಪ್ರಯತ್ನಿಸಿ ವಿಫಲರಾಗಿದ್ದರು. ನಾವು ಅಪಾಯದ ಕುರಿತು ಮಾತಾಡುತಿದ್ದೆವು; ಮತ್ತಾ ಅಪಾಯ ಬಂದೇ ಬಿಟ್ಟತು. 'ಸ್ವಕಿಕೂಲ ಹವೆಯಿರುವಾಗ ನಾವು ನಮ್ಮಗಳ ಪ್ರಾಣದ ಸ್ವಂ

Greetings

This season of Deepavali
I greet you heartily,
And wish all through
New Year there be
Joy, Happiness, Prosperity.

Rao Bahadur B. S. SAWKAR, B. A. L.L. B.,
Chairman Board of Directors,
UNITED KARNATAK INSURANCE Co., Ltd.
DHARWAR.

ಗ. ಆ ಕಡೆಶದ ನೋವನ್ನೆನು೦ಗಿಸಲು ಅ ಲ್ಲಿ ಜೀವವಿರಲಿಲ್ಲ–ಅದು ಬಿದ್ದಾಗಲೇ ಹಾರಿ ಹೋಗಿತ್ತು.

ಮತ್ತೊಂದು ಸಂಗತಿ

ಮೈ ಜುಮ್ಮಾಗುವ ಮತ್ತೊಂದು ಹೃದಯ ಭೇದಕ ಕಥೆಯೆಂದರೆ ಗರ್ಭಿಣೀ ಸ್ತ್ರೀಯೊಬ್ಬಳದು ಪೇಗೋ ತಪ್ಪಿಸಿಕೊಂಡು ಅವಳು ತನ್ನ ಮನೆಯಿಂದ ಹೊರ ಬಿದ್ದಿದ್ದಳು. ನರರಾಕ್ಷಸರು ತುಂಡುತುಂಡಾಗಿ ಕತ್ತರಿಸಿ ಹಾಕಿದ ತನ್ನ ಹಿರೀ ಮಗನ ಒಂದು ತೋಳು ಅವಳ ಕೈಯಲ್ಲೇ ಉಳಿದಿತ್ತು, ನಂಲ್ಕು ಹೆಜ್ಜೆ ಮುಂದಿಟ್ಟಾಗ ಪನೆ ತನ್ನ ಮಗನ ಕೊಲೆಯ ದೃಶ್ಯ ನೆನ ಪಾಯಿತು, ಅವನ ಆ ತೋಳು ಕಣ್ಣಿಗೆ ಬಡಿಯಿತು; ಆಕೆ ಧೊಪ್ಪನೆ ನೆಲಕ್ಕೆ ಬಿದ್ದು ಪ್ರಾಣ ಬಿಟ್ಟಳು. ಅಧ್ಯಪೆ ಕೃಪಾಲನಿ, ಅವರ ಸಹಧರ್ಮಿಣಿ, ಮತ್ತು ಶರಚ್ಚಂದ್ರ ಬೋಸರು ನಿರ್ಗತಿಕರ ಹಾಲಾಹವಾಲೆಗಳನ್ನೆಲ್ಲಾ ಕೇಳಿಕೊಂಡರು. ಈ ಭಯಪೀಡಿತ ಮಂದಿಗೆ, ಸ.ಜೇತಾದೇವಿ ಕಂಬನಿಯೊರಸುವ ಸಹೋದರಿಯಂತಿದ್ದರು. ಆಕೆ ಬಂಗಾಳದ ಪುತ್ರಿ. ಅವರಿಲ್ಲರ ಭಾವನೆಯನ್ನರಿತು ಅವರ ಸ್ವಂತ ಭಾಷೆಯಲ್ಲೇ ಮಾತಾಡಿ ಆಕೆ ಸಂತೈಸಿದ್ದರು. ಈ ಮಹಾ ಪರೀಕ್ಷೆಯ ಕಾಲದಲ್ಲಿ ವಿಶ್ವಾಸ ಕೆಡಬೇಡಿ, ಎದೆಗುಂದಬೇಡಿರಿಂಬ ಆಕೆಯ ಉಪದೇಶ ನಾಟಿತು. ನಾನಾ ರಾತ್ರಿ ಕೊಮಿಲ್ಲಾದಲ್ಲೇ ಇದ್ದು ಹಲವರನ್ನು ಸಂಧಿಸಿದವು, ಕೇವಲ ಪ್ರಾಣವೊಂದನ್ನುಳಿಸಿಕೊಳ್ಳುವದಕ್ಕಾಗಿ ನೂರಾರು ಜನರು ಕಾಡುಗಳ್ಳಪಾಲಿತ ಕೊಂಡಿದ್ದರು. ಈ ಸಾಮೂಹಿಕ ಸಂಹಾರದಲ್ಲಿ ವಿಶೇಷ ರೀತಿಯ ಹತ್ಯಾತಾಂಡವವೆಂದರೆ ಹೊಸ ಮಾದರಿಯ ಕೆಲವು ತೀಕ್ಷ್ಣಾಯುಧಗಳದ್ದೆಂದು ಒಬ್ಬ ಹೇಳಿದ. ಪೂರ್ವಬಂಗಾಳದ ಅಲ್ಪ ಸಂಖ್ಯಾಕರ ನಿರ್ಲೋಪ್ಪಟನೆ ಮಾಡುವದಕ್ಕಾಗಿ ವಿಲಕ್ಷಣ ಆಯುಧಗಳು ಉಪಯೋಗಿಸಲ್ಪಟ್ಟದ್ದುವೆ. ಅವನೆಂದ: "ಜನರು ಸಹಾಯ ತ್ಯಾಗಿ ಮೊರೆಯಿಟ್ಟಿದ್ದಾರು; ಆದರೆ ಅರಣ್ಯರೋದನವಾಯಿತು. ಸಹಾಯಕ್ಕಾಗುವಂತೆ ಅಧಿಕಾರಿಗಳಿಗೆ ಸಕಾಲದಲ್ಲಿ ಕರೆ ಹೋಗಿದ್ದರೂ ಅವರಂದೂ ಮುಖ ತೋರಿಸಲಿಲ್ಲ; ನಾವು ಸಹಾಯಕ್ಕಾಗಿ ಎಷ್ಟೇ ಕೂಗಿಕೊಂಡರೂ ಪೋಲೀಸರು ಬರಲಿಲ್ಲ, ಅವರ ಬದಲಿಗೆ ಆಕ್ರಮಣಗಾರರ ತಂಡಗಳು ಬಂದವು, ಬಂದು ಗಂಡಸರನ್ನು ಹೆಂಗಸರನ್ನು ಮಕ್ಕಳನ್ನು ಮನಸೋಚ್ಛೆ ಕರಿತರಿದು ಹಾಕಿದರು; ಅನ್ನಿ ತಮ್ಮಂದಿರಿರಲ್ಲೇ ಅಕ್ಕತಂಗಿಯರ ಮೇಲೆ ಜುಲುಮೆಯ ವ್ಯಭಿಚಾರ ನಡೆಸಿದರು; ಬತ್ತಲೆ ನಿಲ್ಲಿಸಿದರು, ಒಬ್ಬರ ಬಾಯಿಗೆ ಇನ್ನೊಬ್ಬರಿಂದ ಮೂತ್ರ ಬಿಡಿಸಿದರು; ಗಂಡಸರನ್ನು ನೆಲದಲ್ಲಿ ಅಂಗಾತ ಮಲಗಿಸಿ ಶಾಸ್ತ್ರೀಯರೀತ್ಯಾ ಚೂರಿ ಹಾಕುವರು-ತಮ್ಮ ಕೈಗಳನ್ನು ಆ ರಕ್ತದಲ್ಲಿ ಅದ್ದಿಕೊಂಡು, ಆ ಮೇಲೆ ಹೆಂಗಸರ ಮುಖಕ್ಯಾನೆತ್ತರನ್ನು ಬಳಿದು ಮತ್ತೊಮ್ಮೆ ಬಲಾತ್ಕಾರದಿಂದ ಸಂಭೋಗಿಸುವದು—ನಡೆಯಿತು"– ಹೀಗೆ ಹೇಳುವಾಗ ಆ ಮನುಷ್ಯನ ಉಸಿರು ಕಟ್ಟಿದಂತಾಗಿ ಆತ ಗಳಗಳನೇ ಅತ್ತು ಹೇಳಿದ: "ನನ್ನ .... ನೂ ಹಾಗೆ ಸತ್ತವರಲ್ಲೊಬ್ಬನಾಗಿದ್ದ" ಈ ಮನುಷ್ಯನ ಹತ್ತಿರದ ಸಂಬಂಧಿಕನೊಬ್ಬನು ಅತ್ಯಂತ ಕ್ರೂರ ರೀತಿಯಿಂದ ಕೊಲೆಯಾಗಿದ್ದ ಸಂಗತಿ ಕೊನೆಯಲ್ಲಿ ನನಗೆ ತಿಳಿದು ಬಂತು

ಸುಸಜ್ಜಿತ ಹತ್ಯಾಕಾರ್ಯ

ಇವೇನೂ ಅಕಸ್ಮಾತ್ ಸಂಭವಿಸಿದ್ದ ಕೊಲೆಗಳಲ್ಲ; ವ್ಯವಸ್ಥೆಯಿಂದ ಹಾಕಿದ್ದ ಹಂಡಿಕೆಗಳು. ಲೀಗ್ ಮತ್ತು ಪಾಕಿಸ್ತಾನದ ಹೆಸರು ಹೇಳಿ ನಿರಾರು ಜನರಸಭೆಗಳು ಕರೆಯಲ್ಪಡುತಿದ್ದುವು; ಶ್ರಮಬದ್ಧ ಭಾಷಣಗಳಾಗುತಿದ್ದುವು. ಅಲ್ಲಿಯೇ ಥಾಳೀಕಾರ್ಯಕ್ರಮಗಳು ಜಾಹೀರಾಗುತಿದ್ದುವು. ಸಭಾಂತ್ಯದಲ್ಲಿ ಈ ನರಭಕ್ಷಕ ಜನರು ಪಂಗಡವಾರಾಗಿ ಬೇರೆ ಬೇರೆ ದಿಕ್ಕುಗಳಿಗೆ ಧಾವಿಸಿ ಅತ್ಯಂತ ಕ್ರೂರ ರೀತಿಯಿಂದ ಕೊಲೆ, ಲೂಟಿ, ಮತ್ತು ಬಲಾತ್ಕಾರದ ಸಂಭೋಗಗಳ ಕಾರ್ಯಕ್ರಮಗಳನ್ನು ಜಾರಿಮಾಡುತಿದ್ದರು. ನವಾಖಾಲಿ ಮತ್ತಿತರ ಕಡೆಗಳಲ್ಲಿ ಹಲವು ದಿನಗಳ ವರೆಗೂ ಹತ್ಯೆ, ದರೋಡೆ, ಜುಲುಮೆಯ ಸಂಭೋಗ ಮತ್ತು ಮತಾಂತರಗಳೇ ದೈನಿಕ ವಿಧಿಗಳಾಗಿದ್ದುವು.

ಪೂರ್ವ ಬಂಗಾಳದಲ್ಲಿ ಭೀಕರತೆಯ ಮಿಂಚುವೇಗ—ಸಾಮೂಹಿಕ ಹತ್ಯಾಕಾರ್ಯ-ಆವರ್ಣನೀಯ ಹಿಂಸಾಕೃತ್ಯ ನಡೆಯುತ್ತಾ ಇದ್ದುವು, ಗವರ್ನರ್ ಮತ್ತು ಸುಹ್ರವರ್ದಿ ದಾರ್ಜಿಲಿಂಗಿನ ಹವೆ ಸೇದುತ್ತ ಒಬ್ಬರಿನ್ನೊಬ್ಬರ ಯೋಗ್ಯತೆ ಮತ್ತು ಶಕ್ತಿ ಸಾಮರ್ಥ್ಯಗಳ ಗುಣಗಾನ ಮಾಡುತ್ತಾ ವಿಲಾಸವನ್ನನುಭೋಗಿಸುತ್ತಾ ಇದ್ದರು. ಬಂಗಾಳದ ಜೈಪ್ರಾವಕ ಕರೆಗೆ 'ಕೆಪ್ಪ'ನಂತಿದ್ದ ಈ ಗವರ್ನರನನ್ನೊಮ್ಮೆ ಸಂಧಿಸಬೇಕೆಂಬ ನಮ್ಮ ಆತುರವುಅದಮ್ಯವಿತ್ತು. ಆದರೆ ಅವರ ಚಲನವಲನಗಳ ಕುರಿತು ಅಧಿಕಾರಿಗಳಿಲ್ಲರೂ ನಮ್ಮನ್ನು ವಂಚಿಸುತ್ತಾ ಬಂದುದರಿಂದ, ನಾವು ಹೊಂಚು ಹಾಕಿ ಬೇಟೆಯಾಡಬೇಕಾಯಿತು. ಕಟ್ಟಕಡೆಗೆ ಆಚಾರ್ಯ ಕೃಪಾಲನಿ ಮತ್ತು ಶರಚ್ಚಂದ್ರ ಬೋಸರು ಅವರನ್ನು ತಾ. 20ರಲ್ಲಿ ಚಿತ್ತರಂಜನ್‌ದಲ್ಲಿ ಸಂಧಿಸಿದರು; ದೀರ್ಘ ಸಂಭಾಷಣೆ ನಡೆಯಿತು. ಗವರ್ನರರು ಪ್ರತಿಯೊಂದಕ್ಕೂ 'ಓ ಕೆ' (ಹಾಂ, ಸರಿ) ಎನ್ನುತಿದ್ದರು. "ಎಲ್ಲವೂ ಸರಿ ಹೋಗಲಿದೆ" ಎಂದೇ ಅವರ ಘಂಟಾನಾದ ವರಸ್ಥಿತಿಯನ್ನು ಹತೋಟಿಗೆ ತರುವ ಯಥಾರ್ಥ ಪ್ರಯತ್ನವೇನನ್ನೂ ಮಾಡದೆ ಅವರೂ ಸುಹ್ರವರ್ದಿಯವರೂ ಆ ದುರಂತವನ್ನು ಕಡಿಮೆಮಾಡಿ ತೋರಿಸುವ ಒಂದೇ ಕೆಲಸದಲ್ಲಿ ನಿರತರಾಗಿದ್ದರು.

ಆ ಮನುಷ್ಯ–ಸುಹ್ರವರ್ದಿ

ಮಾಲವೀಯಜೀ ಗಾಂಧಿಜೀಯ ಅಸಹಕಾರ, ಕಾಯಿದೇ ಭಂಗಗಳ ಅನನ್ಯ ಭಕ್ತರಾಗಿರಲಿಲ್ಲ. ಗಾಂಧಿಜೀ ತನ್ನ ವಿನಯ ಶೀಲತೆಯಿಂದ ಮಾಲವೀಯರನ್ನು ಗುರುಸ್ಥಾನಕ್ಕೇರಿಸಿಟ್ಟು ನೋಡುವದಿತ್ತು. ಆದರೂ ಅವರ ರಾಷ್ಟ್ರಾಭಿಮಾನವು ಹಲವು ಬಾರಿ ಅವರನ್ನು ಗಾಂಧೀ ಪಥಕ್ಕೆಳೆಯದೆ ಬಿಟ್ಟರಲಿಲ್ಲ ಪ್ರಥಮ ಬಾರಿ ಮಹಾತ್ಮರೊಂದಿಗೇನೆ ಮಾಲವೀಯರ ದಸ್ಕಗಿರಿಯೂ ನಡೆದಿತ್ತು: ಶಿಕ್ಷೆಯನುಭವಿಸಿದ್ದರು. ಎರಡನೇ ಬಾರಿ ಜೈಲು ಸೇರಿದ್ದುದು ಉಪ್ಪಿನ ಸತ್ಯಾಗ್ರಹದ ಕಾಲ; 1932ನೇ ಇಸವಿಯಲ್ಲಿ. ಬೊಂಬಾಯಿಯಲ್ಲಿ ಕಾಸೂನು ಮುರಿದು ಪ್ರಜಾಡಳಿತ ಮೆರವಣಿಗೆ ಹೊರಟಾಗ ಅಧಿಕಾರಿಗಳು ಮಿಲಿಟರಿ ಮತ್ತು ಪೋಲೀಸ್ ಪಡೆಯೊಡಗಿಟ್ಟುಕೊಟ್ಟು ನಿಂತು, ಇಡೀ ಒಂದು ರಾತ್ರಿ ಮತ್ತು ಮುಂಜಾನೆ ಜನತೆಗೂ ಸರಕಾರಕ್ಕೂ ಅಲ್ಲಿಯೇ ದೃಷ್ಟಿ ಯುದ್ಧ ನಡೆದಿತ್ತು; ಆ ಮೆರವಣಿಗೆಯ ಮುಂಭಾಗದಲ್ಲಿ ಎಡಬಲಗಳಲ್ಲಿ [illegible] ವಲ್ಲಭಭಾಯಿ ಪಟೇಲರೊಂದಿಗೆ ಮಾಲವೀಯಜೀ ಇದ್ದರು. ಅಲ್ಲಿಯೇ ಈ ಮೂವರ ದಸ್ತಗಿರಿಯಾಗಿ ಶಿಕ್ಷೆಸಲ್ಪಟ್ಟಿದ್ದರು. ಮಾಲವೀಯರದು ಕಾಂಗ್ರೆಸಿನೊಳಗೆ ಮಂದಗಾಮಿಗಳ ಪಂಗ್ತಿ. ಗಾಂಧೀ, ನೆಹರು, ಆಜಾದ್, ಪಟೇಲರು ಕಾಂಗ್ರೆಸಿಗಂಟಿಕೊಂಡಂತೆ ಇವರು ಅದರಲ್ಲೇ ಐಕ್ಯಗೊಂಡುದಿಲ್ಲ. ಆದರೂ ಪ್ರಥಮ ಪಂಗ್ತಿಯಲ್ಲೇ ಇವರು ಗಣಿಸಲ್ಪಡುತಿದ್ದರು.

ಹಿಂದೂ ವಿಶ್ವವಿದ್ಯಾಲಯ ಮತ್ತು ಹಿಂದೂ ಮಹಾಸಭೆ

"ತಮ್ಮ ಅನುದಾಯೀ ಜನತೆಯ ಪ್ರಯೋಜನಾರ್ಥವಾಗಿ ಮಹತ್ತಾದ ಮತ್ತು ಫಲವಾದ ಸಂಗತಿಗಳನ್ನು ನಿರೂಪಿಸುವದಲು ಆ ಹಳೇ ಕೌನ್ಸಿಲಿನಲ್ಲಿ ಪಂಡಿತ ಜೀಯಂದ ಹೊರಟಿದ್ದ ಮೇಲಿನ ಉದ್ಗಾರಗಳು 'ಇಂದಿನ ಕಾಂಗ್ರೆಸ್ ಮಂತ್ರಿಯೊಬ್ಬನ ಮಾತಲ್ಲವೇ ಇದು' ಎನ್ನುವಷ್ಟು ಜೀವಂತವಿವೆ. 1919ರಲ್ಲಿ ರೌಲೆಟ್ ಆಕ್ಟಿನ ನಿಷೇಧಾರ್ಥವಾಗಿ ಮಿಕ್ಕ ರಾಷ್ಟ್ರ ಭಕ್ತರೊಂದಿಗೆ ಕೌನ್ಸಿಲಿಗೆ ಬಹಿಷ್ಕಾರ ಹಾಕಿ ಮಾಲವೀಯಜೀ ಹೊರ ಬಂದಿದ್ದರು. ಆ ಮೇಲಿನ ಕೇಂದ್ರ ಎಸೆಂಬ್ಲಿಯಲ್ಲಿ, ಕಾಂಗ್ರೆಸಿನೊಡನಿದ್ದ ಭಿನ್ನಾಭಿಪ್ರಾಯದ ದೆಸೆಯಿಂದ 'ರಾಷ್ಟ್ರೀಯ ಪಕ್ಷ' ರಚಿಸಿಕೊಂಡು ತಾನೇ ಅದರ ನಾಯಕನಾಗಿ ರಾಜಸನ ಸಭಾಕಂಗದಲ್ಲಿ ಸ್ವಾತಂತ್ರ್ಯ ಹೋರಾಟವನ್ನು ಸಾಗಿಸಿದ್ದರು. ಕೆಲವು ಸಂದರ್ಭಗಳಲ್ಲಿ ಇವರ ರಾಷ್ಟ್ರೀಯ ಟೊಬೈ ಜರ್ಮನ್ ಬೋಂಬಿಗಿಂತ ಬಲವಾಗಿ ಬ್ರಿಟಿಷ್ ಸಾಮ್ರಾಜ್ಯವನ್ನು ನಡುಗಿಸಿದ್ದಿತು.

ಸ್ವಾತಂತ್ರ್ಯ ಹೋರಾಟದಲ್ಲಿ

ಮಾಲವೀಯಜೀ ಗಾಂಧಿಜೀಯ ಅಸಹಕಾರ, ಕಾಯಿದೇ ಭಂಗಗಳ ಅನನ್ಯ ಭಕ್ತರಾಗಿರಲಿಲ್ಲ. ಗಾಂಧಿಜೀ ತನ್ನ ವಿನಯ ಶೀಲತೆಯಿಂದ ಮಾಲವೀಯರನ್ನು ಗುರುಸ್ಥಾನಕ್ಕೇರಿಸಿಟ್ಟು ನೋಡುವದಿತ್ತು. ಆದರೂ ಅವರ ರಾಷ್ಟ್ರಾಭಿಮಾನವು ಹಲವು ಬಾರಿ ಅವರನ್ನು ಗಾಂಧೀ ಪಥಕ್ಕೆಳೆಯದೆ ಬಿಟ್ಟರಲಿಲ್ಲ ಪ್ರಥಮ ಬಾರಿ ಮಹಾತ್ಮರೊಂದಿಗೇನೆ ಮಾಲವೀಯರ ದಸ್ಕಗಿರಿಯೂ ನಡೆದಿತ್ತು: ಶಿಕ್ಷೆಯನುಭವಿಸಿದ್ದರು. ಎರಡನೇ ಬಾರಿ ಜೈಲು ಸೇರಿದುದು ಉಪ್ಪಿನ ಸತ್ಯಾಗ್ರಹದ ಕಾಲ; 1932ನೇ ಇಸವಿಯಲ್ಲಿ. ಬೊಂಬಾಯಿಯಲ್ಲಿ ಕಾಸೂನು ಮುರಿದು ಪ್ರಜಾಡಳಿತ ಮೆರವಣಿಗೆ ಹೊರಟಾಗ ಅಧಿಕಾರಿಗಳು ಮಿಲಿಟರಿ ಮತ್ತು ಪೋಲೀಸ್ ಪಡೆಯೊಡಗಿಟ್ಟುಕೊಟ್ಟು ನಿಂತು, ಇಡೀ ಒಂದು ರಾತ್ರಿ ಮತ್ತು ಮುಂಜಾನೆ ಜನತೆಗೂ ಸರಕಾರಕ್ಕೂ ಅಲ್ಲಿಯೇ ದೃಷ್ಟಿ ಯುದ್ಧ ನಡೆದಿತ್ತು; ಆ ಮೆರವಣಿಗೆಯ ಮುಂಭಾಗದಲ್ಲಿ ಎಡಬಲಗಳಲ್ಲಿ [illegible] ವಲ್ಲಭಭಾಯಿ ಪಟೇಲರೊಂದಿಗೆ ಮಾಲವೀಯಜೀ ಇದ್ದರು. ಅಲ್ಲಿಯೇ ಈ ಮೂವರ ದಸ್ತಗಿರಿಯಾಗಿ ಶಿಕ್ಷೆಸಲ್ಪಟ್ಟಿದ್ದರು. ಮಾಲವೀಯರದು ಕಾಂಗ್ರೆಸಿನೊಳಗೆ ಮಂದಗಾಮಿಗಳ ಪಂಗ್ತಿ. ಗಾಂಧೀ, ನೆಹರು, ಆಜಾದ್, ಪಟೇಲರು ಕಾಂಗ್ರೆಸಿಗಂಟಿಕೊಂಡಂತೆ ಇವರು ಅದರಲ್ಲೇ ಐಕ್ಯಗೊಂಡುದಿಲ್ಲ. ಆದರೂ ಪ್ರಥಮ ಪಂಗ್ತಿಯಲ್ಲೇ ಇವರು ಗಣಿಸಲ್ಪಡುತಿದ್ದರು.

ಹಿಂದೂ ವಿಶ್ವವಿದ್ಯಾಲಯ ಮತ್ತು ಹಿಂದೂ ಮಹಾಸಭೆ

"ತಮ್ಮ ಅನುದಾಯೀ ಜನತೆಯ ಪ್ರಯೋಜನಾರ್ಥವಾಗಿ ಮಹತ್ತಾದ ಮತ್ತು ಫಲವಾದ ಸಂಗತಿಗಳನ್ನು ನಿರೂಪಿಸುವ ಯೋಗ್ಯತೆಯು ಸ್ವಲ್ಪ ಮಂದಿಗೆ ಮಾತ್ರ ವಿದೆ; ಆದರಲ್ಲೂ ಅಂತಹ ಸಂಗತಿಗಳನ್ನು ತನ್ನ ಸ್ವಪ್ರಯತ್ನದಿಂದ ರೂಪಿಸಿ ಕಣ್ಣಾರೆ ಕಾಣುವ ಭಾಗ್ಯವಿರುವವರು ಸ್ವಲ್ಪದರಲ್ಲೂ ಸ್ವಲ್ಪ. ಈ ವಿಶ್ವವಿದ್ಯಾಲಯದ ಪವಿತ್ರ ಸಂಸ್ಥಾನಾಚಾರ್ಯ ಪಂಡಿತ ಮಾಲವೀಯರು ಈ ಹಿರಿಯ ಪುಣ್ಯಸ್ಥಳ ಕಾಶಿಯಲ್ಲಿ ಸರಸ್ವತಿಯ ಹೊಸ ಮಂದಿರವೊಂದನ್ನು ಕಟ್ಟಿಸಿದುದಷ್ಟೇ ಅಲ್ಲ; ಅದು ಸರ್ವಾಂಗ ಸಂಪೂರ್ಣತೆಗೇರಿದುದನ್ನು ತನ್ನ ಜೀವನಾವಧಿಯಲ್ಲೇ ಕಾಣುವ ಭಾಗ್ಯವನ್ನೂ ಪಡೆದಿದ್ದಾರೆ" ಎಂದು ಬಿಕಾನೀರಿನ ಮಹಾ ರಾಜರಂತೆ ಪಂಡಿತ ಜೀಯ ಚಿರಸ್ಮಾರಕ-ಜೀವನ ಸಾರ್ಥಕತೆಯ ಮಹಾದ್ಯೋತಕವೆಂದರೆ ಕಾಶಿಯ ಹಿಂದು ವಿಶ್ವ ವಿದ್ಯಾಲಯ. ಇಲ್ಲಿ ಸರ್ವವಿಧದ ಕಲೆ ಮತ್ತು ವಿದ್ಯೆಗಳು ಪ್ರಾಚೀನ ಹಿಂದೂ ಶಾಸ್ತ್ರೀಯರೀತ್ಯಾದೊರೆಯುತ್ತಿವೆ. ಭಾರತದ ರಾಜ ಮಹಾ ರಾಜರು ಮಾಲವೀಯಜೀಯ ವಿನಂತಿಗೆ ದೈವಿಕ ಕರೆಯೆಂಬಂತೆ ಕಿವಿಗೊಟ್ಟು ಇದರ ರಚನೆ ಮತ್ತು ಅಭಿವೃದ್ಧಿಗೆ ನೆರವಾಗಿದ್ದಾರೆ, ಅಖಿಲ ಭಾರತ ಹಿಂದೂ ಮಹಾಸಭೆಯ ಸಂಸ್ಥಾಕರಲ್ಲಿ ಪಂಡಿತಜೀಯೊಬ್ಬರು. ಮಿಕ್ಕವರಿಗೆ ಗಾಂಧಿಜೀ ಹೇಗೆ 'ಮಹಾತ್ಮ'ರೋ ಮಹಾ ಸಭಾವಾದಿಗಳಿಗೆ ಮಾಲವೀಯಜೀ ಹಾಗೆಯೇ 'ಧರ್ಮಾತ್ಮ'ರು 1923, 1924, 1936—ಹೀಗೆ ಮೂರುಬಾರಿ ಅವರು ಮಹಾ ಸಭೆಯ ಅಧ್ಯಕ್ಷರೂ ಆಗಿದ್ದರು.

ಶುದ್ಧ ಸನಾತನಿ

ಅಸ್ಪರ್ಶರ ಶುದ್ಧೀಕರಣ, ಯಜ್ಞ ಮಹಾಯಾಗಾದಿಗಳ ಆಚರಣೆಯಲ್ಲಿ ಹಿಂದಿನ ಯುಗಳ ಮಹರ್ಷಿಗಳನ್ನು ಜ್ಞಾಪಕಕ್ಕೆ ತರುವವರಿಬ್ಬರುದೆಂದರೆ ಮಾಲವೀಯಜೀ ಒಬ್ಬರೇ. ಅವರಂತಹ ನಿಷ್ಠಾವಂತ ಸನಾತನಿ-ಪೂರ್ವ ಸಂಪ್ರದಾಯ ಪಾಲಕ -ಕರ್ಮಾನುಷ್ಠಾನಗಳಲ್ಲಿ ಅಂಧ ಶ್ರದ್ಧೆಯುಳ್ಳ ಜನ-ಇಡೀ ಭಾರದಲ್ಲಿರುವದಪರೂಪ. ರಾಜಕೀಯ ಮುಂದಾಳುಗಳಲ್ಲಂತೂ ಅಂತಹ ಇನ್ನೊಬ್ಬನಿಲ್ಲ. ದಿನದ ಹೆಚ್ಚಿನ ಘಂಟೆಗಳು ಇವರ ನಿತ್ಯಾಹ್ನಿಕಗಳಿಗೇನೇ ವ್ಯಯವಾಗುತಿದ್ದುವು. 1931ರಲ್ಲಿ ನೆರೆದ ಲಂಡನಿನ ಎರಡನೇ ದುಂಡು ಮೇಜಿಗೆ ಪ್ರತಿನಿಧಿಯಾಗಿ ಆರಿಸಲ್ಪಟ್ಟಾಗ ಸಂಪ್ರದಾಯಶರಣ ಪಂಡಿತಜೀ ಸಮುದ್ರ ದಾಟುವ ಪಾಪ ಮಾಡಲಾರರೆಂದು ಎಲ್ಲಾ ರಾಷ್ಟ್ರಿಗಳ ನಿರೀಕ್ಷೆಯಿತ್ತು. ಆದರೆ ಮಾಲವೀಯರು ತನ್ನ 71 ವಯಸ್ಸಿನಲ್ಲಿ ಆ ಪಾಪವಾಡಿ ಬಿಟ್ಟರು- ಲಂಡನಿಗೆ ಹೋಗಿ ಬಂದರು-ಆದರೆ ಲಂಡನಿನಲ್ಲಿ ಕುಡಿಯುವುದಕ್ಕಾಗಿ ಭಾಗೀರಥೀ ಜಲದ ಗುರಾಣಿಗಳನ್ನು ಸ್ವದಮಷ್ಟೇ ಹೆಡಗಿಗೆ ಹತ್ತಿಸಿ ಆ ಮೇಲೆ ತಾನು ಹತ್ತಿದ್ದರು! 1938ರ ಆದಿಭಾಗದಲ್ಲಿ ಪಂಡಿತಜೀ ಕಾಯಿಲೆ ಬಿದ್ದಾಗ ಶ್ರೀ. ಕಲ್ಪಾಚಾರ್ಯ ವಿಷ್ಣು ದಾಸಜೀಯೆಂಬ ತಜ್ಞರು ಆವರಿಗೆ 'ಕಾಯಕಲ್ಪ' ಚಿಕಿತ್ಸೆ ಮಾಡಿದರು. 45 ದಿನ ದಿನ ಮಣ್ಣಾಡಿಯಲ್ಲಿದ್ದು ಪಡೆವ ಮಹಾ ಚಿಕಿತ್ಸೆಯದು. ಆದರಿಂದ ಹೊರ ಬರುವಾಗ ಒಮ್ಮೆ ಮಣ್ಣಾಡಿಯಿಂದೆದ್ದ ಕಪ್ಪೆಯಂತೆ ಹೊಸ ಜವ್ವನ ಬಂದಹಾಗೆ ಕಾಣುತ್ತಿತ್ತು. ಆದರೆ ವಯಸ್ಸು ವಜಾ ಹೊಂದುವಂತಿದೆಯೆ? ಕೊನೆಗೆವರು ಮೂಲೆ ಹಿಡಿಯಬೇಕಾಯಿತು. ನವಾಖಾಲಿಯ ದುರಂತದ ವಾರ್ತೆ ಆ ಮುದಿ ಹೃದಯಕ್ಕೆ ಸಿಡಿಲಿನಂತೆ ಬಡಿಯಿತು. ಆದರಿಂದಾಗಿಯೋ, ಆಗಲೇ ತಲೆದೋರಿದ ಕಾಯಿಲೆಯಿಂದಾಗಿಯೋ, ಅಥವಾ ಅದೇ ಕಾಹಿಲೆಯಾಗಿಯೋ ಮೊನ್ನೆ ಕೊನೆಯ ಉಸಿರನ್ನು ಎಳೆದರು.

ಕೇವಲ ಹಿಂದುತ್ವಕ್ಕಾಗಿ ನುಸ್ಲಿಮರನ್ನು ದ್ವೇಷಿಸಲು ಕಲಿಸುವ ಅರೆ ಸತ್ಯ ಉಳ್ಳ ಭೂಮಿಗಳು ಪಂಡಿತಜೀಯ ಜೀವನದಿಂದ ಪಾಠ ಕಲಿಯಬೇಕು. ಅವರ ಹೃದಯದಲ್ಲಿ 'ಮುಸ್ಲಿಂ ದ್ವೇಷದ' ಕಣ ಕೂಡಾ ಇರಲಿಲ್ಲ. ಅಗ್ರಗಣ್ಯ ಹಿಂದು, ಇವರ ಮೇಲೆ ಮುಸಲ್ಮಾನರ ವಿಷಪೂರಿತ ವಾಗ್ಬಾಣಬಡಿದ ನಿದರ್ಶನವೂ ಇಲ್ಲ. ಸೊನ್ನೆ ಅವರ ಸ್ಮಶಾನಯಾತ್ರೆಗೆ ಇಡೀ ಕಾಶೀ ನಗರವೇ ಹೊರಟು ಬಂದಿತ್ತು; ಮುಸಲ್ಮಾನರೂ ಹರತಾಳವಾಚರಿಸಿದ್ದರು. ದುಃಖಸೂಚನಾ ಸಭೆಯಲ್ಲಿ ಬಂದ ರಾಶಿವಿನ ಲ್ಲಿದ್ದ ಮಾಲವೀಯರ ಕುಟುಂಬದೊಡನೆ ಸಹಸಂತಾಪ ಸೂಚಿಸುವ ವಾಕ್ಯವನ್ನು ಕಂಡು ಕಾಶೀ ಮುಸ್ಲಿಂ ಲೀಗಿನ ಅಧ್ಯಕ್ಷೆ ಮೌಲ್ವಿಜಿದ್ರಾಗದ್ದ ಕಂದರಿಂದ ಆಕ್ಷೇಪಣೆ ಸಿದರು. 'ಅದನ್ನೆಲ್ಲ ತೊಡೆದುಹಾಕಿ;ನಾವೆಲ್ಲರೂ ಪಂಡಿತ ಮಾಲವೀಯರ ಆ ದೊಡ್ಡ ಕುಟುಂಬಕ್ಕೆ ಸೇರಿದವರೆ" ಅಂತೆಯೇ ಆ ಭಾಗರದ್ದಾಯಿತು. ಪಂಡಿತಜೀ ವಿಯೋಗಕ್ಕಾಗಿ ರಾಷ್ಟ್ರದ ಆ ಮೂಲೆಯಿಂದೀ ಮೂಲೆಯ ವರೆಗೆ ಎಲ್ಲರೂ ದುಃಖಿಸುತಿದ್ದಾರೆ.

ಒಂದು ದೀಪ ನಂದಿತು!

ಶ್ರೀ. ಕಾರಂತರ
ಪುಸ್ತಕಗಳು

ಗೀತಾ ನಾಟಕಗಳು	2 4 0
ಮರಳಿ ಮಣ್ಣಿಗೆ	4 8 0
ಸಿರಿಗನ್ನಡ ಅರ್ಧಕೋಶ	4 0 0
ಸೂರ್ಯ ಚಂದ್ರ	0 1 0
ಮೈಲಿಕಲ್ಲಿನೊಡನೆ ಮಾತು	
ಕತೆಗಳು	1 4 0
ಹಳ್ಳಿಯ ಹತ್ತು ಸಮಸ್ತರು	1 1 0

ನವಭಾರತ ಪುಸ್ತಕ ಭಂಡಾರ,
ಉಡುಪಿ.

ದಿ ಮೂಲ್ಕಿ ಬೇಂಕ್,
ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೊಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,
Moolky, S. K.

● ಸುಗ್ಗವ ಸ್ಥಾಲಿಕರಿಗೆ ಸುಸಂದರ್ಭ ●

ನಂಬ್ರ P II ಪರ್ಮಿಟುದಾರರಾದ ಸುಗ್ಗದ ಮ್ಯಾಲಿಕರು ತಮ್ಮ ನೂಲಿಗೆ ಬೇಕಾಗುವ ರಂಗುಗಳಿಗೆ ಮಂಗಳೂರು ಇಲ್ಲವೆ ಕಣ್ಣಾನೂರು ರಂಗಿನ ವ್ಯಾಪಾರಸ್ಥರನ್ನು ಅವಲಂಬಿಸಬೇಕಾಗಿತ್ತು. ಈಗ ಅವರಿಗೆ ಬೇಕಾಗುವ ಎಲ್ಲಾ ತರದ ರಂಗುಗಳನ್ನು ನಾವು ಲೈಸೆನ್ಸನ್ನು ಪಡೆದಿರುತ್ತೇವೆ.

ಪಿ. ಎ. ಪೈ ಬ್ರದರ್ಸ್, ಉಡುಪಿ.

ವಿವಿಧ ಪಾತ್ರೆಗಳು

ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾನ್ಯಿಗಳೂ ರಿಯಾಯಿತಿ ದರದಲ್ಲಿ ಮಾರಲ್ಪಡುವವು.

ಕಲ್ಯಾಣ ವ್ಯಾಪಾರಾಯರ್,
ಕಳಸೂರಿ, ಉಡುಪಿ.

FOR LIFE ASSURANCE
CONSULT
The New Gaurdian of India Life Insrce Co, Ltd,
(Chairman - The Hon'ble Mr. M. CT. M Chidambaram Chettyar.)
A policy in this progressive Life Office is a good investment; its Agency is a valuable business connection.
LOCAL OFFICES IN SOUTH KANARA
MANGALORE
&
KARKALA.
HEAD OFFICE
"United India Life Bldg"
Esplanade Post Box No 142,
MADRAS.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ
೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹೆಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಒಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ನಾಯು ಸಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇದುವುದು. ಮೊದಲ ದಿವಸ ನೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ,ಕುಂಬಳಕಾಯಿ,ಒಳ್ಳಿಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ ಪೋಸ್ಟ ಚಾರ್ಜ ೬ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ಡಾವಣಗೇರಿ:ಡಾವಣಗೇರಿ ಪೈಸ್. ಪತ್ರವ್ಯವಹಾರ ಮಾಡತಕ್ಕ ವಿಳಾಸ

ರೇವಣಸಿದ್ದಪ್ಪ ಹುಲಪ್ಪ ಡಾವಣಗೇರಿ,
ಆಯುರ್ವೇದ ಔಷಧಾಲಯ, ಗದಗ.
Ayurveda Oushadalaya GADAG

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಧರಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಧಾರ್ಮಶಾಲಿಗಳಿಗೂ ಸುಲಭವಾಗಿರುವುದು.



ನವಜೀವಾತು ಎಂಬ ಸೂತಿಕಾ ರಸಾಯನ
(ಇದು ರಿಜಿಸ್ಟರು ಮಾಡಲ್ಪಟ್ಟಿದೆ.)

೪ ಔನ್ಸಿನ ಬಾಟ್ಲಿಗಳು ಹೆಚ್ಚು ಕಡಿಮೆ ಅದರಿವಸಗಳಿಗೆ ಬರುವವು. ಅಂದರೆ ಕೇವಲ ೪ ರೂಪ್ಯಾಗಳು ಒಂದು ಬಾಣಂತಿನಳ್ಳಿ ಸಾಕಾಗುವವು ವಿಶೇಷ ವಿಷಯ ಇಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಎಂ ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.೫ **ಕೊಡಿಯಾಲಬೈಲು, ದ.ಕ.**

ಸ್ವಾಕಿಸ್ವರು- ಡಾ| ಏ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಸ್ವರ್ಗಸ್ಥ ಡಾಕ್ಟರ್ ಎಂ. ಮಾಧವಾಚಾರ್ಯರಿಂದ ರಚಿಸಲ್ಪಟ್ಟ ಎರಡು ಅತ್ಯುತ್ತಮ ನಾಟಕಗಳು.

ಸರಸ್ವತಿ ಬೆಲೆ **0-12-0**

ಅಲ್ಪ ಶಿಕ್ಷಣದಿಂದುಂಟಾಗುವ ಅನರ್ಥ ಪರಂಪರೆಗಳನ್ನು ಪ್ರತ್ಯಕ್ಷವಾಗಿ ಹೃದಯದ್ರಾವಕವಾದ ರೀತಿಯಲ್ಲಿ ಕಾಣಿಸುವ ಸಾಮಾಜಿಕ ನಾಟಕ.

ಮೀರಾಬಾಯಿ ಬೆಲೆ **0-10-0**

ಶ್ರೀಕೃಷ್ಣ ಪರಮಾತ್ಮನ ಆರಾಧನೆಗೆ ಸಂಸಾರಿಗಳಾಗಿರುವವರಿಗೂ ಅವಕಾಶವಿದೆ ಕಪಟ, ವಿಶ್ವಾಸಘಾತಕತನ, ಅವಿಚಾರ, ಪ್ರಮಾದ ಇವುಗಳಿಂದುಂಟಾದ ದುಃಖವನ್ನು ದೂರೀಕರಿಸಲು ಭಗವದ್ಭಕ್ತಿಯೊಂದೇ ಉತ್ತಮ ಸಾಧನವೆಂಬುದನ್ನು ಸಾರುವ ಭಕ್ತಿಪ್ರಾಧಾನ್ಯ ನಾಟಕ.

ಎರಡೂ ಪ್ರತಿ ಜೊತೆಯಾದವರು ರೂ. 1-8-0 ಕಳಿಸಬೇಕು

ನವಭಾರತ ಪುಸ್ತಕ ಭಂಡಾರ, ಉಡುಪಿ — **ಕರಿಯರ ಪ್ರೈಪಂಚ,** ಉಡುಪಿ

'ಇಂಗ್ಲಿಷ್ ಬರುವುದಿಲ್ಲವಲ್ಲಾ' ಎಂದು ಚಿಂತಿಸುವಿರೇಕೆ?

ಸುಲಭದಲ್ಲಿ ಇಂಗ್ಲಿಷ್ ಕಲಿಯಲು ಅನುಕೂಲವಾದ ಪುಸ್ತಕ ಇಲ್ಲಿದೆ-

ಸುಲಭದಲ್ಲಿ ಇಂಗ್ಲಿಷ್

ಪ್ರೋ. ಕೊರಡ್ಕಲರ ಇಂಗ್ಲಿಷ್ ಸ್ವಯಂಬೋಧಿನಿ

ENGLISH MADE EASY

ಈ ಪುಸ್ತಕದಿಂದ ನೂರಾರು ಜನರು ತಾವಾಗಿ ಸುಲಭದಲ್ಲಿ ಇಂಗ್ಲಿಷ್ ಕಲಿತುಕೊಂಡಿದ್ದಾರೆ.

ನೀವೇಕೆ ಕಾಲಹರಣ ಮಾಡಬೇಕು? ಇಂದೇ ಒಂದು ಪ್ರತಿಯನ್ನು ಕೊಂಡುಕೊಳ್ಳಿರಿ.

ಬೆಲೆ ಬರೇ ರೂ. 1-8-0 ಪೋಸ್ಟಾಲು ಖರ್ಚು 0-4-0 ಪ್ರತ್ಯೇಕ

ಪ್ರತಿಗಳಿಗೆ ಬರೆಯಿರಿ—

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

EDITED, PRINTED & PUBLISHED BY K. H. SHETTY AT THE NAVAYUGA PRESS UDIPI. S. INDIA.

Regd. No. M. 3618. Estd. 1921 ಸ್ಥಾಪನೆ. ಬೆಲೆ: 0—1—6.

ನವಯುಗ

ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ 1—8—0
6 ತಿಂಗಳಿಗೆ ರೂ. 2—8—0
6 ತಿಂಗಳಿಗಿಂತ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ.
ಸೂಚನೆ ಸಂಬಂಧಕ್ಕೆ ಬರೆಯಿರಿ.
ಮೆನೇಜರ್,
ನವಯುಗ, ಉಡುಪಿ, ದ. ಕ.



ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ.

ವರ್ಷ 26 ವಾರ 04 | FOUNDER SRI. A. B. SHETTY, M.L.A. | Vol. 26 No. 13

ಉಡುಪಿ • 28—11—1946 • ಮಂಗಳೂರು.

ಅಮೃತಾಂಜನ.
ತಲೆನೋವು, ತಿರುಗು, ವಾಂತಿ, ಉರುಟು ಕೆಮ್ಮಿಗೆ, ಹುಡಿ, ಹಲ್ಲು ನೋವಿಗೂ ಎದೆನೋವು, ಹಾಯಗಳು ಬಾಮು ಕೊಳ್ಳುವುದು, ಚೇಳು, ವಿಷ ಮುಂತಾದ ಬೆನೆ ಕಚ್ಚಿದಾಗ ಮೊದಿಸಿ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧ.
REGD. ಕಥ,ಹುಳಿಕ್ಕಿ ಮತ್ತು ಸಕ ನಮ್ಮಲ್ಲಿ ಸಿಕ್ಕುತ್ತದೆ.
ಅಮೃತಾಂಜನ ಲಿಮಿಟೆಡ್.
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

THE
Bombay Lief Assurance Company Ltd.
(ESTD·1908)
A PREMIER INSURANCE COMPANY.
New Business in 1945 - - 2,77,23,100.
KOCHIKAR BROTHERS, LTD.
(ESTD. 1910)
Chief Agents for South India including
Travancore, Cochin and Mysore State.
New Business in 1945 in our area:- Over 5 Millions.
OUR Expert advice gained by 35 years Experience is at your door FREE
Drop a card to any of our Offices at —
MADRAS × BANGALORE × MADURA × CALICUT
TRIVENDRUM × UDIPI × AND BOMBAY.

Life is full of Opportunities.

Life is full of events and opportunities created by God for man and by man for himself and his fellowmen. Normal life presupposes a prosperous family, a happy home, good education, congenial vocation, good relations, friends, a cultured society and also a few ups and downs to spice them all with. Have you made sure that your family too can reasonably aspire to lead such a life even in your absence?

The Canara Mutual Assurance Co., Ltd.,
HEAD OFFICE UDIPI, (S. India.)
Chief Agents for the Bombay and Madras Presidencies including States and the States of Mysore and Hyderabad.
The Commercial Corporation of India, Ltd.,
UDIPI. (S. India.)

—ಮಕ್ಕಳನ್ನು ಹಡೆಯುವುದು ಸಾಕು—
ಅಕಕ್ಕ ಸ್ತ್ರೀಯರಿಗೆ ಬರ್ಥ್ ಕಂಟ್ರೋಲ್ ಪ್ರೌಢಗೃಹಸ್ಥ ಹೆಣ್ಣುಮಕ್ಕಳಿಗೆ
ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟುಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಕೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿ ಆಗುವುದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆ ೧ ಗುಳಿಗೆಯಂತೆ ಊಟ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.
ಬೆಲೆ:—ಹರವೀಪಲ್ಲಿ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ್ ಚಾರ್ಜು ೧ ಆಣೆ.
ಮಾಲಕರು:—ಹಾಲಪ್ಪಾ ಫಕೀರಪ್ಪಾ ಡಾನಣಗೇರಿ
ಆಯುರ್ವೇದ ಔಷಧಾಲಯ. ಗದಗ-ಸಿಟಿ-
ವಿಜಯದೆರ:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ್ ಬಾಲಕೋಟೆ ಧಾರವಾಡ, ವಿಜಾಪುರ—ಡಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪುರ. ಬೆಳ್ಳೂಡಿಯಲ್ಲಿ:—ಹುಂಬರವಾಡಿ ಸ್ಟೋರ್ಸ ಡಾನಣಗೇರಿ:—ಡಾನಣಗೇರಿ ಪ್ರಸ್ಸ್. ಆರ್. ಎಸ್. ಕವಲದಾಸ, ಕೆಮಿಸ್ಟ್, ಹಾವೇರಿ, ಬ್ಯಾಡಗಿ
Ayurveda Oushadalaya, GADAG CITY.

The best preventive in epidemics of CHOLERA
"BHUVANENDRA"
CHANDRAMAS
Also a sovereign remedy for diarrhoea. Stomachache, Vomiting and Nausea.
BHUVANENDRA PRODUCTS LTD., Kalapadi.

'ಭುವನೇಂದ್ರ'
ಚಂದ್ರಮಸ್ ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಆತ್ಯುತ್ತಮ ಔಷಧಿ.
ದೊಡ್ಡವರಿಗೆ 4ರಿಂದ 8 ಬೊಟ್ಟು, ಸಣ್ಣ ಮಕ್ಕಳಿಗೆ 10ರಿಂದ 2 ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.
ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.
ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ
ಉಡುಪಿ ಸ್ಥಾನಿಕರು:—ಡಾ। ನಾಯಕ್ಸ್ ಕಿಸ್ಟಲ್ಲಿಂಗ್ ಡ್ರಗ್ಸ್ ಎಂಡ್ ಫಾರ್ಮಸಿ; ಶ್ರೀ ಆರ್. ಎಸ್. ಶೆಟ್ಟಿ, ರಥಬೀದಿ; ಡಾ। ಪಿ. ಜಿ. ಆಚಾರ್ಯ ಫಾರ್ಮಸಿ; ಡಾ। ಕೆ. ಶೇಷಗಿರಿ ಪೈ, L.I.M.; ಡಾ। ಮೊಕಟಬಾಮ್, ಕೊರಡ್ಕಲ್; ನವಭಾರತ ಬುಕ್ ಡಿಪೊ

ಉಡುಪಿ ಬೋರ್ಡಿಂಗ್
ಎಂಡ್
ಲೋಜಿಂಗ್ ಮಧುರಾ.

ಕಾ. 8—8—1945ರಲ್ಲಿ ಜರಗಿದ ಆರನೆ ಹುಟ್ಟುಹಬ್ಬದ ಸಮಾರಂಭದ ಸಂತೋಷ ಕಾಲದಲ್ಲಿ ನನಗೆ ಸರ್ವ ರಿಂದಲೂ ಬೆಂಬಲವಿತ್ತು ಪ್ರೋತ್ಸಾಹಿಸಿದ ಮಹನೀಯರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಇದಕ್ಕಿಂತಲೂ ದ್ವಿಗುಣಿತವಾಗಿ ನನ್ನ ಸೇವೆಯನ್ನು ಹೊಸ ವರುಷದಲ್ಲಿ ಸಲ್ಲಿಸಲು ಮಹಾಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನೀಯುವರೆಂದು ನಂಬಿದ್ದೇನೆ.

ಎಲ್. ವಥಸಿಂಗ ರಾವ್,
ಪ್ರೊಪ್ರೈಟರ್.

ಭದ್ರತೆ ಮತ್ತು ಸೇವೆ
ಇದೇ ಬ್ಯಾಂಕಿನ ತಳಹದಿ ಮತ್ತು ನಮ್ಮ ಮುಖ್ಯ ಗುರಿ.
ನಿಮ್ಮ ಸೇವೆಯನ್ನು ವ್ಯಾಪಕವಿಸಿ ಇಂದಿಗೆ ಪದಿನೈದು ವರ್ಷಗಳು ಸಂದವು. ಮುಂದಿನ ವರ್ಷಗಳಲ್ಲಿ ನಿಮ್ಮಿನ ಹುರುಪಿನಿಂದ ವ್ಯವಹಾರಗಳನ್ನು ನಡಿಸಿ ಹೆಚ್ಚಿಸಬೇಕೆಂದು ಸಂಕಲ್ಪಿಸಿದ್ದೇವೆ. ಈ ನಮ್ಮ ಧ್ಯೇಯಸಾಧನೆಗೆ ನಿಮ್ಮೆಲ್ಲರ ಸಹಕಾರವನ್ನು ಒಂದಿಗಿದರಲೂ ಹೆಚ್ಚಾಗಿ ನೀಡುವಿರೆಂದು ನಂಬುತ್ತೇವೆ. ವೇಳಾವಕಾಶ ಉತ್ತಮ ದರವೆ ಒದ್ದಿ ಕೊಡಲ್ಪಡುವುದಲ್ಲದೆ ಸಾಲಗಳನ್ನು ಕಡಿಮೆ ಬಡ್ಡಿಯಿಂದಲೂ ಬೇಂಕಿನ ಇತರ ಸಕಲ ಸಲಕರಣೆಗಳನ್ನೂ ನಿಮಗಾಗಿ ಒದಗಿಸಿಕೊಡುವುದೇ ನಮ್ಮ ಕಾರ್ಯಕ್ರಮ.
ದಿ ವಿಜಯಾ ಬೇಂಕ್, ಲಿಮಿಟೆಡ್.
ಹೆಡ್ ಆಫೀಸು: ಮಂಗಳೂರು.
ಶಾಖೆಗಳು: ಬೈಂದೂರು, ಕುಂದಾಪುರ, ಬ್ರಹ್ಮಾವರ, ಉಡುಪಿ, ಕಾಪು, ಕಾರ್ಕಳ, ಸಿಟಿ-ಮಂಗಳೂರು, ಕಾವೂರ್ಗೋಡು, ಕಾಸರಗೋಡು, ಕಾಞಂಗಾಡು, ಪುತ್ತೂರು ಮತ್ತು ಮಡಿಕೇರಿ ಮತ್ತು ಮುಂಬಾಯಿ

ವ್ಯಕ್ತಿಪರಿಚಯ

ರಾಷ್ಟ್ರಪತಿ ಆಚಾರ್ಯ ಕ್ರಿಪಲಾನಿ

ಲೇ:— ಎಲ್. ಎನ್. ತಪಲ್ಯಾಲ್.



ಕಾಂಗ್ರೆಸಿನ ಅಧ್ಯಕ್ಷತನಕ್ಕೆ ಜೀವತ್ಯಾಮ್ ಭಗವಾನ್‌ದಾಸ್ ಕ್ರಿಪಲಾನಿಯವರು ಆರಿಸಲ್ಪಟ್ಟುದರಿಂದ ಹಿಂದೀ ಜನ ಸಾಮಾನ್ಯರ ನಾಯಕತ್ವವು, ಗಾಂಧಿಯುಗದಲ್ಲಿ ಪ್ರಸಿದ್ಧಿಗೆ ಬಂದ ಅಸಾಮಾನ್ಯ ವ್ಯಕ್ತಿಗಳಲ್ಲೊಬ್ಬನ ಭದ್ರ ಹಸ್ತವನ್ನು ಸೇರಿದಂತಾಯಿತು. ಕಾಂಗ್ರೆಸ್ ಚರಿತ್ರೆಯ ಸುಖದುಃಖ ಘಟನೆಗಳೆಲ್ಲವನ್ನೂ 1917ರಲ್ಲಿ ನಡೆದಿತ್ತ ಆಗ ಚಂಪಾರಣ್ಯಕ್ಕೆ ಭೇಟಿಕೊಟ್ಟಿದ್ದ ಮಹಾತ್ಮಾಗಾಂಧಿಯವರು, ಮುಝಫರ್‌ಪುರದ ಜೆ. ಬಿ. ಕಾಲೇಜಿನ ಪ್ರೊಫೆಸರ್ ಆಗಿದ್ದ ಆಚಾರ್ಯ ಕ್ರಿಪಲಾನಿಯವರನ್ನು ಭೇಟಿಯಾದರು.

ರಾಜಕೀಯಕ್ಕೆ ಕಾಲಿಟ್ಟುದು

ಅಂದಿನಿಂದ ಕರಾಳ ದಿನಗಳು; ಸಾಮ್ರಾಜ್ಯವಾದೀ ದಬ್ಬಾಳಿಕೆಯ ಕಾಲವದು. ಆಗ ಗಾಂಧಿಜೀಯನ್ನು ಬರಮಾಡಿಕೊಂಡು ಅಧಿಕಾರಿಗಳ ಕೋಪಕ್ಕೆ ಪಾತ್ರರಾಗಲು ಯಾರೂ ತಯಾರಿರಲಿಲ್ಲ. ಆದರೆ ದೂರದ ಸಿಂಧಿನಲ್ಲಿ ಇಬ್ಬರು ಪ್ರೊಫೆಸರರಿದ್ದರು- ಪ್ರೊಫೆಸರ್ ಕ್ರಿಪಲಾನಿ ಮತ್ತು ಪ್ರೊಫೆಸರ್ ಮಾಲ್ಕಾನಿ. ತಮ್ಮ ಕೃತ್ಯದ ಪರಿಣಾಮವೇನೆಂಬುದು ಸರಿಯಾಗಿ ಗೊತ್ತಿದ್ದರೂ ಅವರೀ 'ದಂಗೆಯೋರ'ನಿಗೆ ತಮ್ಮ ಮನೆಗಳಲ್ಲಿ ಆಶ್ರಯವಿತ್ತರು; ಮತ್ತು ದಂಡಕಟ್ಟಿಟ್ಟ ಪ್ರತಿಫಲವಾಗಿ ತಮ್ಮ ಉದ್ಯೋಗಗಳಿಂದ ಹೊರತಳ್ಳಲ್ಪಟ್ಟರು. ಹೀಗೆ "ಗಾಂಧಿದಕ್ಷಿಣೆ" ಸಲ್ಲಿಸಿದ ಕ್ರಿಪಲಾನಿ ಗಾಂಧಿಸಂದರ್ಶನಗಳಿಗಾದರು. ಅಂದೇ 'ಸತ್ಯ' ಮತ್ತು 'ಅಹಿಂಸೆ' ತತ್ವಗಳಿಗೆ ಓರ್ವ ಸಮರ್ಥ ತತ್ವವೇತ್ತ ದೊರೆತಂತಾಯಿತು. ಶತಮಾನದಿಂದ ಪರಕೀಯ ಅಳ್ವಿಕೆಯಲ್ಲಿದ್ದ ಭಿಂದೀ ಜನತೆಯ ಹೃದಯರೂ ದಲೂ ಸಾಮ್ರಾಜ್ಯಶಾಹಿಯ ಮೇಲೂ ತನ್ನ ಸ್ವಕೀಯ ದಾಂದ್ವಪನ್ನು ನಜಿಸಬಲ್ಲ ಮಾರ್ಗದರ್ಶಿಗಳಲ್ಲೊಬ್ಬನನ್ನ ಅಲ್ಲಿಗೂ ಧಿಜ ಕಂಡುಹಿಡಿದಂತಾಯಿತು.

ಅದರ್ಶವಿದ್ದರೂ

ಚಂಪಾರಣ್ಯದ ಈ ಘಟನೆಗೆ ವ್ಯಾಮುಖ್ಯತೆಯೇನೂ ಇದೆ. ಆದರೆ ಗಾಂಧೀ ಅನ್ಯಾಯವಿರುವಾಗುವ ಸಂದರ್ಭವೊದಗಿದಾಗ ಉತ್ಪನ್ನರಾದ ಕ್ರಿಪಲಾನಿ ಪ್ರೊಫೆಸರ್‌ನಾಗಿಯೇ ಇರುತ್ತಿದ್ದರೆಂದೂಹಿಸುವುದು ಕಷ್ಟ. ಅವರ ಒಳಹೊರಗಿನ ಚೇತನಮಯೀ ವ್ಯಕ್ತಿತ್ವಕ್ಕೆ ಕಾಲೇಜು ಉದ್ಯೋಗವೆಷ್ಟಕ್ಕೂ ಸಾಲದಿತ್ತೆಂಬಂತೆಯಲ್ಲ ಪ್ರಶ್ನಾರ್ಥಕ ಚಿಹ್ನೆಯನ್ನು ಸದಾಕಾಲ 'ಕ್ರಾಸ್'ನಂತೆ ತೊಟ್ಟುಕೊಳ್ಳುವವರ ವರ್ಗಕ್ಕೆ ಸೇರಿದ ಮನುಷ್ಯ ಕ್ರಿಪಲಾನಿ. ವಸ್ತುಸ್ಥಿತಿಗಳ ಕಡೆಗೆ ಸದಾಕಾಲ ಪ್ರಶ್ನಿಸುವ-ದಂಗೆಯೇಳುವ-ತೊಡೆತಟ್ಟಿ ನಿಲ್ಲುವ ಸ್ವಭಾವ ಇವರದು. ಅವರ ಶೋಧನಾತ್ಮಕ ಬುದ್ಧಿ ಆಚಾರ್ಯರನ್ನು ಧರ್ಮದತ್ತ ಕೊಂಡುಹೋಗಿತ್ತು. ಈ ಲೋಕವನ್ನೇ ತಿರಸ್ಕರಿಸಿ ಧಾರ್ಮಿಕ ಏಕಾಂತವಾಸ ಕೈಕೊಳ್ಳುವ ಯೋಚನೆಯನ್ನವರು ಮಾಡಿದ್ದರು. 'ಆದರೆ ಅವರ ವಿವೇಕದ ಸುಪ್ತಿಯಲ್ಲಿ-ಅವರೇ ಹೇಳುವಂತೆ ತನ್ನ ತಾನೇ ನೋಡಿ ನಗುವ ಬುದ್ಧಿ-ಯು ನ್ನುಳಿಸಿತು. ವಿರಾಮ ಹೊಂದುವದಕ್ಕಿಂತ ಕಾರ್ಯನಿರತನಾಗುವದಗತ್ಯವೆಂಬ ದನವು ನೆನಪಾಯಿತು. ಆ ವೇಳೆಗೆ ಗಾಂಧಿತ್ವದ ಕ್ರಮ ನಿಯಮವು ವಿತ್ತ ಅಭಿಪ್ರಾಯಗಳ ಆಳವನ್ನು ಕಂಡುಕೊಂಡಿದ್ದರು; ಅವುಗಳೊಡನೆ ತನ್ನಾತ್ಮವು ಸಂಪೂರ್ಣವಾಗಿ ತಾದಾತ್ಮ್ಯಹೊಂದುತ್ತಿದೆಂಬುದನ್ನು ಅರಿತುಕೊಂಡರು. ಅವರು ತನ್ನನ್ನು ತಾನರಿತರು.

ರಕ್ತವಂತಹುದು!

ಆದರೇನು? ಈ ಪ್ರೊಫೆಸರನ ನಿಶಿಷ್ಟ ವ್ಯಕ್ತಿತ್ವವನ್ನು ಪೂರ್ಣ ಮುಚ್ಚಿಬಿಡಲು ಗಾಂಧಿತ್ವಕ್ಕೂ ಆಗಿಲ್ಲ. ಗಾಂಧೀ ತತ್ವಗಳ ಅಂತರಾರ್ಥಗಳ ಉಜ್ವಲ ವರ್ಣನೆಯನ್ನು ಅವರು ಮಾಡುತ್ತಾರೆ; ನಿಷ್ಠೆಯಿಂದ ಅದನ್ನು ಅನುಕರಿಸುತ್ತಾರೆ. ಆದರೆ ಮಿಕ್ಕ ಹಲವರಂತೆ ಕ್ರಿಪಲಾನಿಗಳು ಗಾಂಧೀಶಾಹಿಯ ಅಂಧಾನುಯಾಯಿಯಲ್ಲ ಕ್ರಿಪಲಾನಿ ಬುದ್ಧಿಯು ಗಾಂಧಿತ್ವದ ಗಡಿ ಗೆರೆಗಳೊಳಗೇನೇ ಅಂಟಿಗಾಲಿಕ್ಕುವಂತಹದಲ್ಲ; ಅವ್ಯಕ್ತಿತ್ವ ಗುಣ ನಡತೆಗಳ ನಿರ್ಬಂಧಗಳಿಗೆ ಕಟ್ಟುಬೀಳಲೊಪ್ಪುವಂತದಲ್ಲ. ತುಂಟತನವಿದು ಕೊಟುಂಬಿಕ ಸೊತ್ತಾಗಿ ಆಚಾರ್ಯರನ್ನು ಸೇರಿದಂತಿದೆ ಏಳು ಮಂದಿ ಅಣ್ಣತಮ್ಮಂದಿರಲ್ಲಿ ಪೈಕಿ ಈಗ ಜೀವಿಸಿರುವವರು ಇವರೊಬ್ಬರೇ ಸತ್ತವರಲ್ಲಿ ಪ್ರತಿಯೊಬ್ಬನೂ ವಿಶೇಷ ರೀತಿಯ ಜೀವನ ನಾಟಕವಾಡಿದವರೇ. ಅವರಲ್ಲಿಬ್ಬರು ಕುಟುಂಬ ತ್ಯಾಗಮಾಡಿ ಮುಸಲ್ಮಾನ್ ಮತಕ್ಕೆ ಸೇರಿದ್ದರು. ಒಬ್ಬನು ಗುಪ್ತ ರಾಜಕೀಯ ಪಕ್ಷವನ್ನು ಸೇರಿಕೊಂಡು 'ಸಿಲ್ಕಿನ ಕರವಸ್ತ್ರದ ಕ್ರಾಂತಿ'ಯಲ್ಲಿ ಪ್ರಸಿದ್ಧಿಗೆ ಬಂದಿದ್ದ. ಅವನ ಕ್ರಾಂತಿಗೆ ಕಟ್ಟುಬಿದ್ದು ಭಾರತ ಬಿಟ್ಟೋಡಿ ಟರ್ಕಿಯಲ್ಲಿ ಸಕ್ರಿಯ ಕೆಲವು ವರ್ಷಗಳಾದವು. ಆಚಾರ್ಯರ ಮತ್ತೊಬ್ಬ ಸಹೋದರ ಸನ್ಯಾಸಿಯಾಗಿ ಹಿಮಾಲಯಕ್ಕೆ ಹೋಗಿ ವಾಸಿಸಿದ್ದ. ಈಗ ಇವರಿಗಿರುವ ಹತ್ತಿರದ ಏಕಮಾತ್ರ ರಕ್ತ ಸಂಬಂಧಿಯೆಂದರೆ ತಂಗಿ ಶ್ರೀಮತಿ ಕೆಕೆಭೆನ್ ಲಾಲ್ವಾನಿ. ಇವರು ಸಿಂಧಿನ ಪ್ರಸಿದ್ಧ ಕಾಂಗ್ರೆಸ್ ನಾಯಕಿ ಆಚಾರ್ಯರಿಗೆ ತನ್ನ ಏಕಮಾತ್ರ ಸಹೋದರಿಯ ಮೇಲೆ ವಿಶೇಷ ಮಮತೆ.

ತುಂಟ ಹುಡುಗ

ಶಾಲಾದಿನಗಳಲ್ಲಿ ಕ್ರಿಪಲಾನಿಯಂತಹ ತಂಟೆಬೋರ ಹುಡುಗ ಬೇರೊರಲ್ಲಿಲ್ಲವೆಂದು ಆಚಾರ್ಯರು ಆ ಕಾಲದ ಮಿತ್ರರನ್ನುತ್ತಾರೆ. ಅವರು ಹೊಸ ಹೊಸ ವಿನೋದಮಯೀ ಪುಂಡಾಟಿಕೆಗಳನ್ನು ಶೋಧಿಸಿ ಹುಡುಗರು ಮಾತ್ರವಲ್ಲ, ಅಧ್ಯಾಪಕರ ಮೇಲೂ ಪ್ರಯೋಗಿಸುವದಿತ್ತು. ತನ್ನ ಪ್ರಯೋಗಗಳಿಗೆ ಬೇಕಾಗುವ ಕಲ್ಲುಗಳನ್ನು ಬೇಬುಗಳಲ್ಲಿ ತುಂಬಿಸಿಕೊಂಡು ಅವರು ಸಾಯಂಕಾಲದ ತಿರುಗಾಟಕ್ಕೆ ಹೊರಡುತಿದ್ದರು. ಒಮ್ಮೆ ಅವರ ತಂಟೆಯೇ ಅವರಿಗೆ ತಗಾದೆಯೊಡ್ಡಿತು; ಕಾಲೇಜಿನಿಂದ ಹೊರದೂಡಲ್ಪಟ್ಟರು. ಇಂದಿಗೆ ಕೆಲವು ವರುಷಗಳ ಮೊದಲು ಆದೇ ಕಾಲೇಜಿನಲ್ಲಿ ಭಾಷಣಕಾರ್ಯಮಂತ್ರಿಸಲ್ಪಟ್ಟಿದ್ದಾಗ ತನಗೆ ಆಂದು ಈ ಕಾಲೇಜುಕೊಟ್ಟಿದ್ದ ಅರ್ಧಚಂದ್ರ ಪ್ರಯೋಗವನ್ನೆಲ್ಲಿ ಜ್ಞಾಪಕಕ್ಕೆ ತರಲು ಅವರು ಮರೆಯಲಿಲ್ಲ.

ಉಪಾಧ್ಯಾಯನಾಗಿದ್ದಾಗ—

ಸುಕ್ಕೂರಿನ ಶಾಲೆಯೊಂದರಲ್ಲಿ ಅವರು ಉಪಾಧ್ಯಾಯರಾಗಿದ್ದ ಕಾಲ; ಇನ್ಸ್ಪೆಕ್ಟರ್ ಲಂಗ್ಹಿಪರವ, ಅವನಿಗೂ ಇವರಿಗೂ ಒಮ್ಮೆ ಹಿಂದು ಜಟಾಪಟಿ ಬಿತ್ತು. ಪರೀಕ್ಷೆಯ ದಿನ ಆಚಾರ್ಯರ ವಿದ್ಯಾರ್ಥಿಗಳು ಈ 'ಸಾಹೇಬ'ನ ಸಮಕ್ಷಮದಲ್ಲಿ ಹೆದರಿ ಬೆಪ್ಪುಕಟ್ಟಿ ಅತನು ಕೇಳಿದ ಪ್ರಶ್ನೆಗಳಿಗೆ ಉತ್ತರವನ್ನೇ ಕೊಡಲಿಲ್ಲ. ಆಚಾರ್ಯರು ತನ್ನ ವಿದ್ಯಾರ್ಥಿಗಳಿಗೆ ಸಿಂಧಿ ಭಾಷೆಯಲ್ಲಿ ಗದರಿಸಿದರು: "ನೀವು ನಡುಗುವುದೇಕೆ? ಅವನೇನು ನಿಮ್ಮನ್ನು ಜಗಿದು ತಿನ್ನಲು ಬಂದ ಕಾಡು ಮೃಗವೆ? ಅವನೊಬ್ಬ ಇಂಗ್ಲಿಷರವನೆಂಬುದಕ್ಕಾಗಿ ನೀವೀ ರೀತಿ ಹೆದರಿ ಬೆಪ್ಪಾಗುವದು ನಾಚಿಕೆ" ಇನ್ಸ್ಪೆಕ್ಟರ್ ಇದನ್ನು ಕೇಳಿ 'ವಿದ್ಯಾರ್ಥಿಗಳಿಗೆ ಹೀಗೆ ಕೊಡುತ್ತೀಯಾ' ಎಂದು ಜಬ್ಬರಿಸಿದ. ಈ ಅರೋಪದಿಂದ ಆಚಾರ್ಯರು ಕೆರಳಿದರು. ತಾನು ಹೇಳಿದುದೇನೆಂಬುದನ್ನು ಅಕ್ಷರಶಃ ಭಾಷಾಂತರಿಸಿ ಆತನಿಗೆ ತಿಳಿಸಿದರು. ನುಂಗೋಸಿ ಇನ್ಸ್ಪೆಕ್ಟರನು ಈ ಕುರಿತು ಕರಿಣ ರಿಪೋರ್ಟು ಬರೆಬು, ಮತನ ಮೇಲೆ ಕಾರ್ಯಕ್ರಮ ಕೈಕೊಳ್ಳಬೇಕೆಂದು ಹೆಡ್ಮಾಸ್ಟರಿಗೆಂದರು. ಆಗ ಪ್ರಾಧ್ಯಾಪಕ ಹೇಳಿದ: "ಸರ್, ಇಂಥವನ ಮೇಲೆ ನಾವು ಕಾರ್ಯಕ್ರಮ ಕೈಕೊಳ್ಳುವಷ್ಟಾಧ್ಯ. ಅವನೆಂಥಾ ಮನುಷ್ಯನೆಂದು ನಿಮಗೆ ಗೊತ್ತಿಲ್ಲ"

ಸಮಿತಿ ಸಭೆಗಳಲ್ಲಿ

ಕಾಂಗ್ರೆಸ್ ಕಮಿಟಿ ಸಭೆಗಳಲ್ಲಿ ಕೂಡಾ ಇವರು ಸ್ಪಷ್ಟವಾಗಿ ನಿರ್ಭಯವಾಗಿ ತನಗೆ ತೋಚಿದುದನ್ನು ಹೇಳಿ ಬಿಡುತ್ತಿದ್ದರು. ಕಾಂಗ್ರೆಸ್ ಘೋರಣೆಯನ್ನು ಕಣ್ಣಾಮುಚ್ಚಿ ಶಿರಸಾವಹಿಸಿಕೊಳ್ಳುವ ಗುಲಾಮತ್ವಕ್ಕೆ ಅವರೆಂದೂ ಒಳಗಾದವರಲ್ಲ. ಭಿನ್ನಾಭಿಪ್ರಾಯಗಳೆದ್ದಾಗ ತನ್ನ ಅಭಿಪ್ರಾಯವನ್ನು ನಿಶ್ಶಂಕೆಯಿಂದ ಹೇಳಿಬಿಡುತ್ತಿದ್ದರು. ಇವರ ನಾಲಿಗೇ ಹರಿತವೂ ವಿಯದ್ಭಾಭಿಪ್ರಾಯವನ್ನು ಅಪಹಾಸ್ಯಕ್ಕೀಡುಮಾಡುವಂತಹ ವಾದಗತಿಯೂ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯಲ್ಲಿ ಹಲವು ಸೇ ಳೆ ಸಿಟ್ಟನ್ನೆಬ್ಬಿಸಿದ್ದುವು. ಆಚಾರ್ಯರು ಕಾಂಗ್ರೆಸಿನ ಪ್ರಧಾನ ಕಾರ್ಯದರ್ಶಿಯಾಗಿದ್ದ ಅವಧಿಯಲ್ಲಿ, ಘೋರಣೆಯ ಕುರಿತು ಭಿನ್ನಾಭಿಪ್ರಾಯ ಬಂದುದರಿಂದ ಮೂರು

CANARA BANK LIMITED
ಕೆನರಾ ಬ್ಯಾಂಕ್ ಲಿಮಿಟೆಡ್
(ಸ್ಥಾಪನೆ ೧೯೦೬)
ಹೆಡ್ ಆಫೀಸು:— ಬಾವಟೆಗುಡ್ಡೆ, ಮಂಗಳೂರು
ಜನರಲ್ ಮೆನೇಜರರ ಆಫೀಸು:—ಎಸ್ಪೊಲೊ ಸ್ಕ್ವೇರ್, ಫೋರ್ಟ್, ಬೊಂಬಾಯಿ.
ಶಾಖೆಗಳು:
ಬೊಂಬಾಯಿ ಅಧಿಪತ್ಯ
ಬೆಳಗಾಂವ್
ಧಾರವಾಡ
ಹುಬ್ಬಳ್ಳಿ
ಶೋಲಾಪುರ
ಕಲ್ಯಾಣ
ಬೊಂಬಾಯಿ ಶಹರಿನಲ್ಲಿ
ಫೋರ್ಟ್
ಮಾಂಡ್ವಿ
ಗಿರಗಾಂವ್
ಕಾಲಬಾದೇವಿ
ಮೈಸೂರು ಸಂಸ್ಥಾನ
ಅರಸೀಕೆರೆ
ಬೆಂಗಳೂರು
ಚಿಕ್ಕಮಗಳೂರು
ಧಾರವಾಡ
ಶಿವಮೊಗ್ಗಾ
ಕೊಚ್ಚಿ ಸಂಸ್ಥಾನ
ಕೊಚ್ಚಿ
ಎರ್ನಾಕುಲಮ್
ತಿರುವಾಂಕೂರು ಸಂಸ್ಥಾನ
ಅಲಪ್ಪಿ
ಕ್ವಿಲೋನ್
ಹೈದರಾಬಾದು ಸಂಸ್ಥಾನ
ಸಿಕಂದರಾಬಾದು
ಮದ್ರಾಸು ಅಧಿಪತ್ಯ
ಬಂಟ್ವಾಳ
ಕಲ್ಲಿಕೋಟೆ
ಕಣ್ಣಾನ್ನೂರು
ಕೊಯಮುತ್ತೂರು
ಕುಂದಾಪುರ
ಇರೋಡ್
ಗಂಗೊಳ್ಳಿ
ಕಾರ್ಕಳ
ಕಾಸರಗೋಡು
ಮದರಾಸು
ಮಧುರೆ
ಮಂಗಳೂರು ಬಂದರು
ಮಂಗಳೂರು ಸಿಟಿ
ಮೂಲ್ಕಿ
ಪಯ್ಯನ್ನೂರು
ಪುತ್ತೂರು
ಉಡುಪಿ
ಮೂಲಧನ ೨೫ ಲಕ್ಷ.] [ಕ್ಷೇಮನಿಧಿ ೧೧ ಲಕ್ಷ

★ ಲೀಗ್ ನಾಯಕನ ವಿಶ್ವಾಸದ್ರೋಹ! ★

ದಶಂಬರ್ ತಾ. ೯ಕ್ಕೆ ಘಟನಾ ಸಮಿತಿ ಪ್ರಾರಂಭ.

ನಡುಗಾಲ ಸರಕಾರದಲ್ಲಿ ಇನ್ನು ಕಾಂಗ್ರೆಸ್ಸೋ, ಲೀಗೋ?

ಭಾರತ ರಾಜಕೀಯಾಕಾಶದಲ್ಲೀಗ, ಧೂಮಕೇತುಗಳು ಮತ್ತು ಉಜ್ವಲತಾರೆಗಳು ಅಕಸ್ಮಾತ್ ಮೂಡಿ ಬಂದು ಹೊಸ ಹೊಸ ಬೆಳಕು ಬೀಳಹತ್ತಿದೆ. ಮುಖ್ಯವಾಗಿ ಮುಂದೆ ಬಂದಿರುವ ಘಟನೆಗಳವು:— (1) ಮುಸ್ಲಿಂ ಲೀಗಿನ ಕಂಠೋಕ್ತ ಆಕ್ಷೇಪವನ್ನು ಆಲಕ್ಷಿಸಿ ಘಟನಾ ಸಮಿತಿಯ ಸಭೆಯು ನಿಶ್ಚಿತ ದಿನ ದಶಂಬರ್ ತಾ. 9ಕ್ಕೆ ಆರಂಭವಾಗುವದು. (2) ವೈಸರಾಯರಿಗೆ ಈ ಮೊದಲು ತಾನು ಕೊಟ್ಟದ್ದ ಆಶ್ವಾಸನೆಯನ್ನು ಆಲಕ್ಷಿಸಿ ಮಿ. ಜಿನ್ನರು ಘಟನಾ ಸಮಿತಿಯ ಬಹಿಷ್ಕಾರಕ್ಕಾಜ್ಞೆಯಿತ್ತಂತೆ ಲೀಗ್ ಪ್ರತಿನಿಧಿಗಳದನ್ನು ಬಹಿಷ್ಕರಿಸುವರು (3) ಲೀಗ್ ಸದಸ್ಯರು ನಡುಗಾಲ ಸರಕಾರ ಪ್ರವೇಶಿಸದಂದಿನಿಂದ ಬ್ರಿಟಿಷ್ ಅಧಿಕಾರಿಗಳೊಂದಿಗೆ ಥಾವೈಕ್ಯ ಹೂಂದಿ, ಸರಕಾರೀ ಪಕ್ಷವಾಗಿ ನಿಂತು ತಮ್ಮ ಕಾರ್ಯಗಳನ್ನಾತಂಕಿಸುತ್ತಾ ಬಂದುದರಿಂದಲೂ, ವೈಸರಾಯರು ನಡುಗಾಲ ಸರಕಾರಾರಂಭದಲ್ಲಿ ಪ್ರದರ್ಶಿಸಿದ್ದ ಸದ್ಭಾವನೆಯನ್ನು ಬಿಟ್ಟು ಆಡಳಿತರಥದ ಒಂದೂಂದೇ ಕೇಲನ್ನು ಕ್ರಮಶಃ ಕೇಳುತ್ತಾ ಬಂದುದರಿಂದಲೂ ತಾವು ನಡುಗಾಲ ಸರಕಾರಕ್ಕೆ ರಾಜೀ ಕೊಡಲು ಎತ್ತಿದ್ದು ಬಾರಿ ಅಡಚಣೆಯಾಗಿದ್ದವೆಂಬ ಗುಟ್ಟನ್ನು ಪಂಡಿತ ನೆಹರು ಬಹಿರಂಗವಪಡಿಸಿದ್ದಾರು; ಈಗ ತಮ್ಮ ಸಹನೆ ಗಡಿಮುಟ್ಟದೆಯೆಂದೂ ಸಂಗತಿ ಹೀಗಿಯೇ ಮುಂದುವರಿದರೆ ದೂಡ್ಡ ಪರಿಮಾಣದ ಹೋರಾಟ ಅನಿವಾರ್ಯವಾಗಬಹುದೆಂದೂ ಸಾರಿದ್ದಾರೆ. (4) "ಡಿಸ್‌ಮಿಸ್ ಯಾನೆ ನಿಷ್ಫಲವೆಂದು ತೋರದೆ ನಾವು ನಡುಗಾಲ ಸರಕಾರ ಬಿಟ್ಟು ಬರುವಂತಿಲ್ಲ" ಎಂದು ಸರ್ದಾರ್ ಪಟೇಲರು ಸ್ಪಷ್ಟ ಪಡಿಸಿದ್ದಾರೆ. "ನಮ್ಮ ಮೂಲ ತತ್ವಗಳನ್ನತ್ತಿ ಹಿಡಿಯುವ ವಿನಹಾ ಆ ಮಟ್ಟಿಗನ್ನು ಸಂಧಾನವಿಲ್ಲನೇ ಇಲ್ಲವೆಂದು ಅಧ್ಯಕ್ಷ ಕೃಪಲಾನಿ ಸ್ಪಷ್ಟ ಪಡಿಸಿದ್ದಾರೆ. 'ಲೀಗ್ ಬರಲಿ, ಬಾರದಿರಲಿ, ಏನೇ ಬಂದರೂ ನೋಡಿಕೊಂಡು ಘಟನಾ ಸಮಿತಿಯ ಕಾರ್ಯಗಳನ್ನು ರಭಸದಿಂದ ಮುಂದೂತ್ತಿಯೇ ಸಿದ್ಧ' ಎಂದು ಕಾಂಗ್ರೆಸ್ ನಡುಬಿಗಿದಿದೆ. (5) 'ಡಿಸ್‌ಮಿಸ್ ವಿನಹಾ ನಾವು ನಡುಗಾಲ ಸರಕಾರ ಬಿಟ್ಟು ಬರುವಂತಿಲ್ಲ' ಎಂದು ಲೀಗ್ ಸದಸ್ಯರು ಹತ ಹಿಡಿದಿದ್ದಾರೆ. "ನಡುಗಾಲ ಸರಕಾರ ಮತ್ತು ಘಟನಾ ಸಮಿತಿಗಳು ಒಂದೇ ನಾಣ್ಯದ ಎರಡು ಬದಿಗಳೆಂದು ಕಂಠೋಕ್ತ ಹೇಳಿ, ಒಂದನ್ನೊಪ್ಪುವವರು ಇನ್ನೊಂದನ್ನೊಪ್ಪಲೇ ಬೇಕೆಂಬ ಶರ್ತ ಹಾಕಿ, ಮಿ. ಜಿನ್ನರು ಎರಡಕ್ಕೂ ಒಪ್ಪಿದ್ದಾರೆಂದು ತಮಗೆ ಬರಹ ನಿತಿ ಭರವಸೆಕೊಟ್ಟರುವ ವೈಸರಾಯರು, ಘಟನಾ ಸಮಿತಿಗೊಪ್ಪದ ಲೀಗ್ ಪ್ರತಿನಿಧಿಗಳನ್ನು ನಡುಗಾಲ ಸರಕಾರದಲ್ಲಿ ನಿಲ್ಲಲು ಹೇಗೆ ಬಿಡುವರು?" ಎಂದು ಕಾಂಗ್ರೆಸ್ ಪ್ರಶ್ನಿಸಿದೆ. ಈ ಪ್ರಶ್ನೆ ಲಂಡನಿಗೂ ಹೋಗಿದ

ಜಿನ್ನರ ಸ್ವವರ ವಂಚನೆ!

ಬ್ರಿಟಿಷ್ ಮಂತ್ರಿ ಸಮಿತಿಯ ಮೇ 16ರ ಹೇಳಿಕೆಯು (ನಡುಗಾಲ ಸರಕಾರ ಮತ್ತು ಘಟನಾ ಸಮಿತಿಯ ನಿರೂಪಣೆ) ಏಕರೂಪಿಯಿದ್ದು, ಸಂಪೂರ್ಣಾಂಗೀಕಾರವಾನೆ ಪೂರ್ಣ ತಿರಸ್ಕಾರ ಹೊಂದಬೇಕಲ್ಲದೆ ಅರ್ಧಮರ್ಧ ಯಾವುದೂ ಕೂಡದಂಬುದನ್ನು ಆನಿಯಿಂದಲೇ ಸ್ಪಷ್ಟ ಪಡಿಸಲಾಗಿತ್ತು. ನಡುಗಾಲ ಸರಕಾರ ಸ್ಥಾಪನೆಯ ಸಂಬಂಧದ ತನ್ನ ಹೇಳಿಕೆಗಳಲ್ಲಿ ವೈಸರಾಯರು ಪ್ರತಿಬಾರಿಯೂ ಈ ವಿಷಯವನ್ನು ಒತ್ತಿಹೇಳಿದ್ದರು. ಅಂತೆಯೇ ಪ್ರಥಮತಃ ಎರಡಕ್ಕೂ ಒಪ್ಪಿಗೆಕೊಟ್ಟಿದ್ದ ಮುಸ್ಲಿಂ ಲೀಗು ಕೌನ್ಸಿಲು, ಎರಡನೇ ಬಾರಿ ಜುಲಾಯಿ 29ರಲ್ಲಿ ಬೊಂಬಾಯಿಯಲ್ಲಿ ಸೇರಿದಾಗ ಎರಡನ್ನೂ ಬಹಿಷ್ಕರಿಸುವ ನಿರ್ಧಾರಮಾಡಿತ್ತು. ಈ ನಡುವೆ ಕಾಂಗ್ರೆಸು ಎರಡಕ್ಕೂ ಒಪ್ಪಿಕೊಂಡು ನಡುಗಾಲ ಸರಕಾರ ಸ್ಥಾಪಿಸಿ ಆರೇ ವಾರಗಳಲ್ಲಿ ಸಾಧಿಸಿದ ಮಹತ್ಕಾರ್ಯಗಳಿಂದ ದಿಗಿಲು ಬಿದ್ದ ಜಿನ್ನರು ಬೇರೆ ಹಾದಿಯಿಲ್ಲದೆ ಲೀಗನ್ನು ಅದರೊಳಗೆ ಹೊಗಿಸಲು ಮುಂದಾದರು. ಡಾಗುರ ಸಾರಿದಂತೆ 'ಪ್ರತ್ಯಕ್ಷ ಹೋರಾಟ'ಕ್ಕೆಳುವದಾಗಲೀ ನೆಹರು ಪರಕಾರವನ್ನಾತಂಕಿಸುವದಾಗಲೀ ಲೀಗಿನ ಪಾಲಿಗೆ ತಿರುಕನ ಸ್ವಪ್ನದಂತಾದುದರಿಂದಲೇ ಅವರೀ ವೈನ್ಯಾವಸ್ಥೆಗೆ ತಲೆಯೊಡ್ಡಬೇಕಾಯಿತು. ಆದರೂ ಕೃತಕ ಗಾಂಭೀರ್ಯ ಬಿಟ್ಟಿರಲಿಲ್ಲ. ಘಟನಾ ಸಮಿತಿಯಲ್ಲಿ ತನ್ನ ಧೋರಣೆಯೇನೆಂಬ ಕುರಿತು ಕಾಂಗ್ರೆಸ್ ಕೊಟ್ಟಿದ್ದ ಸ್ಪಷ್ಟೀಕರಣವನ್ನಾಧರಿಸಿ ಆ ಸಮಿತಿಯ ನಿಯಮನಿರ್ದೇಶಕ ಶ್ರೀ. ಬಿ ಎನ್. ರಾಯರೊಡನೆಯೂ ವೈಸರಾಯರೊಡನೆಯೂ ದಿನಗಟ್ಟಿಲೆ ಚರ್ಚಿಸಿದ್ದರು. ಕಾಂಗ್ರೆಸ್–ಲೀಗುಗಳೊಳಗೊಂದು ಒಪ್ಪಂದವಾಗುವ ಎಲ್ಲಾಪ್ರಯತ್ನಗಳೂ ಅಲ್ಲಿ ಮುರಿದುಬಿದ್ದಮೇಲೆ ವೈಸರಾಯರಿಗೇನೇ ತಾವು ಸಹಕಾರೋದ್ದೇಶದಿಂದ ನಡುಗಾಲ ಸರಕಾರ ಮತ್ತು ಘಟನಾಸಮಿತಿಗಳೊಳಗೆ ಪ್ರವೇಶಿಸುವೆವೆಂಬ ವಾಗ್ದಾನಕೊಟ್ಟು, ವೈಸರಾಯರ ಅಧಿಕಾರವನ್ನೇ ಆಧರಿಸಿ ನಡುಗಾಲ ಸರಕಾರ ಪ್ರವೇಶಿಸಿದ್ದರು.

ಸ್ಪಷ್ಟ ಭರವಸೆ

ತನ್ಮೊಡನೆ ಒಮ್ಮತಕ್ಕೆ ಬಾರದೆ, ವೈಸರಾಯರನ್ನಾಧರಿಸಿ ನಡುಗಾಲ ಸರಕಾರ ದೂಗಲೆ ಲೀಗ್ ನಗ್ಗುತ್ತಿರುವದನ್ನು ಕಂಡ ಕಾಂಗ್ರೆಸಿಗರು 'ಆದೇನು? ಮುಂದೆ ಹೇಗೆ?' ಎಂದು ವೈಸರಾಯರನ್ನು ಪ್ರಶ್ನಿಸಿ ಅವರಿಂದ ಸ್ಪಷ್ಟ ಭರವಸೆ ಪಡೆದೇ ಲೀಗನ್ನು ಒಳಗೆ ಬರಲು ಬಿಟ್ಟಿದ್ದರು. ಒಕ್ಟೋಬರ 14 ಮತ್ತು ಒಕ್ಟೋಬರ್ 23ರಲ್ಲಿ ಪಂಡಿತ ನೆಹರುಗಳು ವೈಸರಾಯರಿಗೆ ಬರೆದಿದ್ದ ಎರಡು ಪತ್ರಗಳೂ ಕೆಲವು ಸ್ಪಷ್ಟಾಶ್ವಾಸನೆಗಳನ್ನು ಜೂಜಿಸಿದ್ದವು. ಅವುಗಳಲ್ಲಿ 'ನಮಗಿದು ವರೆಗಾಗಿರುವ ಅನುಭವಗಳ ಮೇಲಿಂದ ಕಂಠೋಕ್ತ ಶರ್ತಗಳ ವಿನಹಾ ಬಾಯಿ ಆಶ್ವಾಸನೆಗಳನ್ನು ನಂಬಲು ಇನ್ನು ಸಾಧ್ಯವಿಲ್ಲ ನಾವು ಅರು ವಾರುಗಳಿಂದ ಸಂಯುಕ್ತ ಮಂತ್ರಿಮಂಡಲವಾಗಿ ಕೆಲಸ ಸಾಗಿಸಿದ್ದೇವೆ. ಇನ್ನು ಲೀಗ್ ಸದಸ್ಯರು ಬಂದು ಅದು ಭಿನ್ನಭಿನ್ನವಾಗುವಂತಿರಕೂಡದು. ನಡಗಾಲ ಸರಕಾರಕ್ಕೆ ಪ್ರವೇತಿಸಿದಂತೆಯೇ, ಲೀಗ್ ಕೌನ್ಸಿಲಿನ ಮೊದಲಿನ ನಿರ್ಧಾರವನ್ನು ಬದಲಾಯಿಸುವ ತಾರೀಕು ನಿಶ್ಚಯಿಸಿ, ಅದೊಂದನ್ನೇ ಬಾಕಿಬಿಟ್ಟು ಘಟನಾ ಸಮಿತಿಗೂ ಲೀಗು ಸೇರುತ್ತದೆಂಬ ಭರವಸೆ ದೊರೆಯಬೇಕು" ಎಂಬ ಶರ್ತಗಳಿದ್ದವು ಉತ್ತರವಾಗಿ ಒಕ್ಟೋಬರ 28ರಲ್ಲಿ ವೈಸರಾಯರು ನೆಹರುಗಳಿಗೆ ಬರೆದಿದ್ದ ಪತ್ರದಲ್ಲಿ ಹೀಗಿದೆ– "ನಾನು ಈ ದಿನ ಮಿ. ಜಿನ್ನರನ್ನು ಭೇಟಿಯಾದಾಗ, ಮುಸ್ಲಿಂ ಲೀಗು ನಡುಗಾಲ ಸರಕಾರ ಸೇರಲೇಕಾದರೆ, ಬ್ರಿಟಿಷ್ ಮಂತ್ರಿಸಮಿತಿಯು ಮೇ ತಾ.16ರ ಹೇಳಿಕೆ ಮತ್ತು ಮೇ 25ರ ಸ್ಪಷ್ಟೀಕರಣಗಳನ್ನು (ಘಟನಾ ಸಮಿತಿಯ ನಿರೂಪಣೆ) ಒಪ್ಪತಕ್ಕದ್ದೆಂಬ ಶರ್ತವಿದೆ ಎಂಬುದನ್ನೂ ಆದನ್ನಂಗೀಕರಿಸಿಕೊಳ್ಳುವಂತೆ ಆದಷ್ಟು ಬೇಗನೇ ಲೀಗ್ ಕೌನ್ಸಿಲಿನ ಸಭೆ ಕರೆಯತಕ್ಕದ್ದೆಂಬುದನ್ನೂ ಅವರಿಗೆ ಸ್ಪಷ್ಟ ಪಡಿಸಿದ್ದೇನೆ ನಾನು ನಿಮ್ಮೊಡನೆಂದಂತೆ ಮುಸ್ಲಿಂ ಲೀಗು ನಡುಗಾಲ ಸರಕಾರಕ್ಕೂ ಘಟನಾ ಸಮಿತಿಯೊಳಗೂ ಸಹಕಾರೋದ್ದೇಶದಿಂದಲೇ ಸ್ಪನೇತಿಸುವದೆಂದು ಮಿ ಜಿನ್ನರು ಆಶ್ವಾಸನೆಕೊಟ್ಟಿದ್ದಾರೆ."

ಇದೆಂತಹ ವಂಚನೆ!

ಹೀಗೆ ಮಾತು ಕೊಟ್ಟು, ಕೇವಲ ದ್ವೇಷೋನ್ಮತ್ತ ಪ್ರತೀಕಾರಕ್ಕಾಗಿ ತನ್ನವರಲ್ಲದ ಲೀ. ಮಂಡಲರನ್ನೂ ಸೇರಿಸಿಕೊಂಡು ಮಿ. ಜಿನ್ನರು 5 ಮಂದಿ ಲೀಗ್ ಪ್ರತಿನಿಧಿಗಳನ್ನು ನಡುಗಾಲ ಸರಕಾರಕ್ಕೆ ಕಳುಹಿದ್ದೇ ತಡ–'ನಮ್ಮದು ಪ್ರತ್ಯೇಕ ಪಕ್ಷ' ಎಂದವರ ನಾಯಕ ಮಿ. ಲಿಯಾಖತ್ ಅಲೀಖಾನರಂದು ಬಿಟ್ಟರು. "ಕಾಂಗ್ರೆಸ್ ಮತ್ತು ಸರಕಾರಗಳು ಒಳಸಂಚು ಮಾಡಿ ನಮಗೊಸ್ಸಿಗೆಯಿಲ್ಲದ ಈ ವಿಧಾನಗಳನ್ನು ನಮ್ಮ ಮೇಲೆ ಹೇರಿವೆ, ಕಾಂಗ್ರೆಸಿಗರಂದ ನಮಗನ್ಯಾಯವಾಗದಂತೆ ಕಾವಲಿಗಾಗಿ ನಾವೀ ಐವರು ಪಹರೇಗಾರರನ್ನು ಅಲ್ಲಿ ಇಟ್ಟಿದ್ದೇವೆ ಹೊಂತು ಬೇರೇನೂ ಅಲ್ಲ. ಅದು ವೈಸರಾಯರ ಕೌನ್ಸಿಲ್ ಹೊರತು ಮಂತ್ರಿ ಮಂಡಲವಲ್ಲ" ಎಂದು ಮಿ ಜಿನ್ನರಾಡಿದರು. ಕೇಂದ್ರ ಸರಕಾರದ ಲೀಗ್ ಸದಸ್ಯರ ಘನ್ನ ಮಾರ್ಗವಂತೂ ಕಾಂಗ್ರೆಸ್ ಸದಸ್ಯರಿಗ ತೀರಾ ಅಸಹ್ಯವಾಗಿತ್ತು; ನೆಹರು ಪಂಗಡಿಗರ ಸ್ವತಂತ್ರ ವರ್ತನೆಗಳಿಂದ ಹೆದರಿಹೋಗಿದ್ದ ವೈಸರಾ

KAILAS HILLS HERB *(Regd)*

Relieves Asthma completely by one dose to be taken on 8-12-'46 (Full Moon).

Note —Mr, Sambhu Dayal Naib Dewan and Judge, Makrai State writes that 18 out 20 Patients have been cured by this wonderfull herb

Apply in English—

Brahmachari C. Das,
Sri Sidh Brahmacharya Seva Ashram,
POST CHITRAKOT (Banda Dt, U P)

Greetings

This season of Deepavali
I greet you heartily,
And wish all through
New Year there be
Joy, Happiness, Prosperity.

Rao Bahadur B. S. SAWKAR, B A. L L B.
Chairman Board of Directors,

UNITED KARNATAK INSURANCE Co., Ltd.
DHARWAR.

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಪಿಲ್ಲೆ, ತಾಮ್ರ ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾನ್ಯಗಳೂ ರಮಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಕಿಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

ಯಿ ನೇವಲರು ಈ ಲೀಗ್ ಪಕ್ಷವನ್ನೇ ಸಮರ್ಥಿಸುತ್ತಿರುವಂತೆ ತೋರಿತು. ಒಟ್ಟಿನ ಮೇಲೆ ಬ್ರಿಟಿಷ್ ಸರಕಾರ ಮತ್ತು ಲೀಗ್ ಒಂದಾಗಿ ಕಾಂಗ್ರೆಸಿನ ಪ್ರಗತಿಪರ ರಾಷ್ಟ್ರೀಯ ಕಾರ್ಯಗಳನ್ನು ಅತಂಕಿಸುತ್ತಾ ಬಂದವು. ವಚನಭಂಗದಂತೆ ಪೂರ್ವ ನಿರ್ಧಾರದ ಬದಲಾಯಿಸಿ ಘಟನಾ ಸಮಿತಿಯಲ್ಲಿ ಭಾಗ ವಹಿಸುವ ಧೋರಣೆ ಕೈಕೊಳ್ಳಲು ಮಿ. ಜಿನ್ನರು ಲೀಗ್ ಕೌನ್ಸಿಲಿನ ಸಭೆ ಕರೆಯಲೇ ಇಲ್ಲ. ಕಟ್ಟಕಡೆಗೆ ಇದೇ ನವೆಂಬರ್ ೨೦ರಲ್ಲಿ "ನಿರ್ಧಾರ ಬದಲಾಯಿಸಲು ಕೂಡಲೇ ನಿಮ್ಮ ಕೌನ್ಸಿಲ್ ಸಭೆ ಕರೆಯಿರಿ"ಎಂದು ವೈಸರಾಯರು ಜಿನ್ನರಿಗೆ ಬರೆದಾಗ-ಥಿಲ್ಲಿಯಲ್ಲೇ ಇದ್ದ ಜಿನ್ನರು 12 ದಿನಗಳ ನಂತರ-ತಾ. 17ರಲ್ಲಿ ವೈಸರಾಯರಿಗುತ್ತರ ಬರೆದು ಘಟನಾ ಸಮಿತಿಯನ್ನು ಅನಿಶ್ಚಿತಾವಧಿಯ ವರೆಗೆ ಹಿಂದೆ ಹಾಕಬೇಕೆಂದು ಕೇಳಿಕೊಂಡಿದ್ದಾರೆ. ಈ ಅಸಂಬದ್ಧ ಕೇಳಿಕೆಗೆ ಮಿ. ಜಿನ್ನರಿತ್ತಿರುವ ಕಾರಣಗಳೆಂದರೆ "ಕಾಂಗ್ರೆಸ್ ಬ್ರಿಟಿಷ್ ಹೇಳಿಕೆಯನ್ನೊಪ್ಪಿಲ್ಲ, ಈಗ ಬಿಹಾರ್ ಮೊದಲಾದ ಕಡೆಗಳಲ್ಲಿ ಮುಸಲ್ಮಾನರ ಮೇಲೆ ಅತ್ಯಾಚಾರಗಳಾಗಿರುವದರಿಂದ ಸರಕಾರದ ಪೂರ್ಣ ಲಕ್ಷ್ಯವು ಆ ಕೆಲಸದಲ್ಲೇ ಬೀಳಬೇಕು."ಇದಕ್ಕುತ್ತರವಾಗಿ ದಶಂಬರ್ 9ರಲ್ಲಿ ಘಟನಾ ಸಮಿತಿ ಆರಂಭವಾಗುವದೆಂಬ ಪ್ರಕಟನೆ ಮತ್ತು ಸದಸ್ಯರಿಗಾಮಂತ್ರಣ ಪತ್ರಗಳೇ ಹೊರಟವು. ಜಿನ್ನಲ್ಲೇ 'ಜುಲಾಯಿ 29ರ ಲೀಗ್ ಕೌನ್ಸಿಲ್ ನಿರ್ಧಾರವೇ ನಿಂತಿರುವುದರಿಂದ ಲೀಗ್ ಪ್ರತಿನಿಧಿಗಳಾರೂ ಘಟನಾ ಸಮಿತಿಯಲ್ಲಿ ಭಾಗವಹಿಸಕೂಡದೆಂದು' ಜಿನ್ನರ ಆಜ್ಞೆ ಹೊರಟಿತು.

ವೈಸರಾಯಿಯೇನೆನ್ನುವರು?

ಲೀಗು ಕಾಂಗ್ರೆಸನ್ನು ನಂಬಿ ನಡುಗಾಲ ಸರಕಾರದೊಳಗೆ ಬಂದುದಲ್ಲ—ಕಾಂಗ್ರೆಸು ಲೀಗಿನ ವರ್ತನೆಯ ಮೇಲೆ ವಿಶ್ವಾಸವಿಟ್ಟು ಆದನ್ನು ಒಳಗೆ ಬರಲೊಪ್ಪಿದ್ದೂ ಅಲ್ಲ. ಘಟನಾ ಸಮಿತಿಗೂ ಬರುವೆನೆಂಬ ಭಾಷೆಯನ್ನು ಲೀಗಿನಿಂದ ಪಡೆದು ಕಾಂಗ್ರೆಸಿಗೊಪ್ಪಿಸಿ--ಬರಹನಿಶಿ ಒರೆದುಕೊಟ್ಟು-ಜಾಮೀನು ನಿಂತ ಜನ ಲೋರ್ಡ್ ವೇವೆಲ್! ಆವರೀಗ ಏನು ಮಾಡುವರು? ಲೀಗ್ ಕೌನ್ಸಿಲಿನ ಜುಲ್ಯಾ 25ರ ನಿರ್ಧಾರದಲ್ಲಿ ಘಟನಾ ಸಮಿತಿಗೆ ಬಹಿಷ್ಕಾರವಿದ್ದಂತೆಯೇ ನಡುಗಾಲ ಸರಕಾರಕ್ಕೂ ಬಹಿಷ್ಕಾರವಿದೆ. ಆದರೆ ಯಾರನ್ನೂ ಕೇಳದೆ, ಯಾವ ರಿಯಾಯತಿಯನ್ನೂ ಪಡೆಯದೆ ಅರೇ ವಾರಗಳೊಳಗೆ ಜಿನ್ನರು ನಡುಗಾಲ ಸರಕಾರಕ್ಕೋಡೋಡಿ ಬಂದಿದ್ದರು; ಅದೇ ರೀತಿ ಇಂದು 'ಘಟನಾ ಸಮಿತಿಗೆ ಬಹಿಷ್ಕಾರ'ವೆನ್ನುವ ಜಿನ್ನರು ನಾಳೆ ಅದರ ಸಭೆಗಳು ಸೇರಿ ಕೆಲಸ ನಡೆಯಹತ್ತಿದೊಡನೆ-ಅದಿರಲ್ಲೂ ಪ್ರಾಂತಿಕ ಸಂಗಡಗಳ ಅಂಕದ ಪರದೆಯೇಳುತ್ತದೆನ್ನುವಾಗ-ಅಲ್ಲಿಗೂ ಹೇಳದೆ ಕೇಳದೆ ಓಡಿ ಬರಬಹುದು. ಮಳ್ಳಳ ತಿಂಡೀಮುಷ್ಕರದಂತಹಈ ಬೂಟಂಟಿಕೆ ಹಾಗಿರಲಿ-ವೈಸರಾಯರು ಈಗ ಹೇಳುವದೇನು? 'ಘಟನಾ ಸಮಿತಿಗೆ ಬರುವದಾದರೆ ಮಾತ್ರ ನಡುಗಾಲ ಸರಕಾರಕ್ಕೂ ಬರಬಹುದು' ಎಂಬ ತನ್ನ ಶರ್ತವನ್ನು ಅವರೀಗ ಪಾಲಿಸುವರೆ? ನೆಹರುಗಳಿಗೆ ಅಂದು ಕೊಟ್ಟ ದ್ವಿವಾಗ್ದಾನವನ್ನು ಸಲ್ಲಿಸುವರೆ? ಲೀಗಿನ ಐವರು ಸದಸ್ಯರನ್ನು ಹೊರತಳ್ಳುವರೆ? ಅಥವಾ ಮಾತು ಮುರಿದು ಕೊಳ್ಳುವುದರಲ್ಲೂ ಮಿ. ಜಿನ್ನರನ್ನೇ ಹಿಂಬಾಲಿಸುವರೆ? ಅಂತೂ[ನಡುಗಾಲ ಸರಕಾರದಲ್ಲಿ 'ಒಂದೋ ಕಾಂಗ್ರೆಸ್ -ಇಲ್ಲವೇ ಲೀಗ್' ಮಾತ್ರ ನಿಲ್ಲುವ ವರಿಸ್ಥಿತಿಯೀಗ ಒದಗಿದೆ.

ದ. ಕ. ಜಿಲ್ಲೆಯ ಪ್ರಚಲಿತ ಭೂಗೇಣಿ-ಆಸ್ತಿಯ ಅನುಭೋಗ ಪದ್ಧತಿಗಳ ಕುರಿತು ಪ್ರಶ್ನಾವಳಿ.

ಭೂಗೇಣಿ ಹಾಗೂ ಭೂಮಿಯ ಹಕ್ಕು ಬಾಧ್ಯತೆಗಳ ಕುರಿತು ವಿಚಾರಣೆಮಾಡಲು ಸರಕಾರದಿಂದ ನೇಮಕಹೊಂದಿರುವ ಸ್ಪೆಶ್ಯಲ್ ಆಫೀಸರರು, ಒಕ್ಕಲುಗಳ ಸದ್ಯದ ಸ್ಥಿತಿಗತಿಗಳನ್ನು ತಿಳಿದುಕೊಳ್ಳಲು ಹೊರಡಿಸಿರುವ ಪ್ರಶ್ನಾವಳಿಕೆಯಿದು. ನ್ಯಾಯವಾದ ಗೇಣಿಯನ್ನು ನಿರ್ಧರಿಸುವ ಹಾಗೂ ಆಸ್ತಿಗಳ ಅನುಭೋಗದ ಮಟ್ಟಿಗೆ ಒಕ್ಕಲುಗಳಿಗೆ ಭದ್ರತೆಯೊದಗಿಸುವ ಶಾಸನವೊಂದನ್ನು ಮದ್ರಾಸ್ ಸರಕಾರವು ತರಲಿಕ್ಕಿದೆ. ಕೆಳಗಿನ ವಿಷಯಗಳ ಕುರಿತು ಸಂಗತಿಗಳನ್ನು ಸಂಗ್ರಹಿಸಿಕೊಳ್ಳುವ ಉದ್ದೇಶದಿಂದಲೇ ಈ ಪ್ರಶ್ನೆಗಳು ಹೊರಟಿವೆ:-

1. ವಿವಿಧ ತರಗತಿಗಳ ಭೂಮಿಗಳಿಗೆ ಈಗ ಕಟ್ಟಲ್ಪಟ್ಟಿರುವ ಗೇಣಿ.

2. ಭೂಮಿಯಲ್ಲಾಗುವ ಉತ್ಪನ್ನವು ಧನಿ ಮತ್ತು ಒಕ್ಕಲುಗಳೊಳಗೆ ಯಾವ ಪರಿಮಾಣಾಂಶದಲ್ಲಿ ಹಂಚಲ್ಪಡುತ್ತಿದೆ ಎಂಬುದರ ಪ್ರಮಾಣಾಂಶ ಅಂಶಗಳು.

(3) ಭೂಮಿಯು ಸಾಗುವಳ್ಳಿಯಲ್ಲಿ ಧನಿಯು ಎಷ್ಟರಮಟ್ಟಿಗೆ ಆಸಕ್ತಿ ವಹಿಸುತ್ತಾನೆ, ಮತ್ತು ವಕ್ಕಲುಗಳಿಗೆ ಅವನು ಕೊಡುವ ಸಹಾಯದ ಸ್ವರೂಪ, ವರ್ಗವಾರರ ಒಟ್ಟು ಸಂಖ್ಯೆಯಲ್ಲಿ ಸಂಬಂಧಪಟ್ಟ ಆಸ್ತೀ ವಲಯಗಳಿಂದ ಗೈರು ಹಾಜರಿರುವ ಭೂಮ್ಯಾಲಕರ ಸಂಖ್ಯಾಪರಿಮಾಣವೆಷ್ಟು?

(4) ಸದ್ಯದ ಒಕ್ಕಲುತನ ಪದ್ಧತಿಯಿಂದಾಗಿ ಬೇಸಾಯದ ಮೇಲಾಗಿರುವ ಪರಿಣಾಮಗಳೇನು?

(5) ಸದ್ಯದ ಗೇಣಿಗಳು ವ್ಯವಹಾರಕ್ಕೂ ನ್ಯಾಯಕ್ಕೂ ಅನುಗುಣವಾಗಿವೆಯೆ? ಇಲ್ಲವಾದರೆ ಪ್ರಚಲಿತ ಭೂಕಂದಾಯ ಪದ್ಧತಿ ಅಥವಾ ಭೂಮಿಯಲ್ಲಾಗುವ ಉತ್ಪತ್ತಿಯನ್ನಾಧರಿಸಿ 'ನ್ಯಾಯಬದ್ಧ ಗೇಣಿ'ಯನ್ನು ಹೇಗೆ ನಿರ್ಣಯಿಸಬಹುದು?

(6) ಬಾಕಿಯಾಗಿರುವ ಗೇಣಿಗಳ ಪ್ರಮಾಶಾಯಾಂಶವೆಷ್ಟು? ಗೇಣಿ ಬಾಕಿಯನ್ನು ಪಡೆಯಲು ವ್ಯಾಜ್ಯಗಳಾಗಿರುವವೆ?

(7) ಆಗಾಗ ಒಕ್ಕಲುಗಳ ಬದಲಾವಣೆಗಳಾಗಿವೆಯೆ? ಮತ್ತು ಅವರಿಂದಾಗಿ ಮಾಡಿದ್ದ ಕೃತ್ರಿ ಸುಧಾರಣೆಗಳಿಗೆ ಸರಿಯಾದ ಪರಿಹಾರ ಕೊಡಲಾಗಿದೆಯೆ?

(8) ಚಾಲಗೇಣಿ ಒಕ್ಕಲುಗಳಿಗೆ ಶಾಶ್ವತ ಒಕ್ಕಲು ಹಕ್ಕು ಕೊಡತಕ್ಕದ್ದೆ? ಬೇಗೆ ಮಾರ್ಪಡಿಸಿದುದಕ್ಕಾಗಿ ಭೂಮಾಲಿಕರಿಗೆಷ್ಟಾದರೂ ಪ್ರತಿಫಲಕೊಡಬೇಕೆ?

(9) ಸಾಗುವಳೀದಾರ ಒಕ್ಕಲುಗಳ ಸಾಮಾನ್ಯ ಆರ್ಥಿಕ ಸ್ಥಿತಿ ಮತ್ತು ಅವರ ಸಾಲ ಸೋಲಗಳ ಸ್ಥಿತಿಗತಿ.

(10) ತರಗತಿವಾರು ಭೂಮಿಗಳು--ಬಯಲು, ಬೆಟ್ಟು, ತೋಟಗಳ--ಬೇಸಾಯಕ್ಕೆ ಬೀಳುವ ವೆಚ್ಚಗಳೇನು?

(11) ಗೇಣಿಯು ಭೂಮಿಯನ್ನು ತುಂಡು ತುಂಡಾಗಿ ಅನುಭೋಗಿಸುವದಕ್ಕೆ ಪ್ರತಿಬಂಧ.

(12) ಆಸ್ತಿಗಳ ಮಾರಾಟ ಮೌಲ್ಯದ ಧಾರಣೆಗಳ ವಿವರ.

ಬೇಸಾಯಗಾರರಲ್ಲದವನಿಗೆ ಸಾಗುವಳ್ಳೀ ಭೂಮಿಗಳನ್ನು ಪರಾಧೀನಗೊಳಿಸದಂತಹ ನಿರ್ಬಂಧಗಳನ್ನು ತರುವ ಅವಶ್ಯಕತೆಯಿದೆಯೆ?

ಮೇಲಿನವು ವಿಷಯ ಸಂಗ್ರಹ ಮತ್ತು ಅಭಿಪ್ರಾಯ ಸಂಗ್ರಹಕ್ಕಾಗಿ ಸರಕಾರವು ಕಳುಹಿಸಿರುವ ಮುಖ್ಯ ಪ್ರಶ್ನೆಗಳ ಸಾರಾಂಶ.

—ಎ. ಬಿ. ಶೆಟ್ಟಿ.

AMBOL OINTMENT (Regd.)

This is a sovereign remedy for itches, boils, scabies, cuts, burns, pimples and all other skin ailments.

AZAD TOOTH POWDER

A powder that cures tooth ache, bleeding, gum trouble and stops foul smell etc.

AGENTS WANTED.

PRODUCTS OF.

THE AMBOL OINTMENT MFG. CO.,

MADURA.

ಸಾಹಿತ್ಯದ ಸುಗ್ಗಿ!

ಪ್ರತಿಯೊಬ್ಬರೂ ತಪ್ಪದೆ ಓದಬೇಕಾದ ಸರಸ-ಸುಮನೋಹರ ಪುಸ್ತಕಗಳು

ಸೋಡತಿ (ಶರಚ್ಚಾಂದ್ರಂಬರಿ)	೨ ೦ ೦	ಪ್ರತಿವಿಂಬ (ಕಥಾಸಂಗ್ರಹ)	೧ ೬ ೦
ವಿಜಯಾ ,,	೧ ೮ ೦	ಸುದರ್ಶನ (ಆನಂದಕಂದ)	೧ ೮ ೦
ಚೇತವಾಸ ,,	೧ ೮ ೦	ಪ್ರೇಮಪಥ (ಶರತ್)	೦ ೫ ೦
ಶ್ರೀಕಾಂತ (೮ ಭಾಗ ಪೂರ್ಣ)	೧೧ ೦ ೦	ರಾಜಯೋಗಿ ,,	೨ ೦ ೦
ರಾಜಲಕ್ಷ್ಮಿ (ಶರತ್)	೧ ೮ ೦	ನಮ್ಮ ಬಮಕು(ಆನಂದಕಂದ)	೦ ೧೪ ೦
ವೈಕುಂಠನ ಮೃತ್ಯುಪತ್ರ	೧ ೮ ೦	ಮನೆಯ ಸುಖಸಾಂತಿ	೦ ೧೨ ೦
ಅನ್ನಪೂರ್ಣಾಮಂದಿರ (ಕಾದಂಬರಿ)	೨ ೦ ೦	ಮಹಾಸತಿ (ಶರತ್)	೦ ೫ ೦
ಚಕಮಕಿ (ಬೇಂದ್ರೆ)	೨ ೦ ೦	ಸನ್ಯಾಸಿನಿ (ಪ. ಪಿ. ಜೋಶಿ)	೦ ೧೨ ೦
ಸಾವಿನ ಉಡಿಯಲ್ಲಿ (ಎನ್ನೆ)	೩ ೦ ೦	ತನ್ನುಡಿಯ ಹುಟ್ಟು (ಪಂ ಬಾ.)	೦ ೧೨ ೦
ಗಂಡುಹೆಣ್ಣಿನ ಸಮಸ್ಯೆ	೩ ೮ ೦	ಹೇಮಾಂಗಿನಿ (ಶರತ್)	೦ ೪ ೦
ರಸಾನಾಥ (ಪ್ರೇಮಚಂಪ)	೩ ೦ ೦		
ಘಾಟೀ ಮುದುಕ (ದೇವುಡು)	೧ ೮ ೦	ಸ್ವಾತಂತ್ರ್ಯ ಇತಿಹಾಸ	
ವಿನುಗಾಲೆ (ಪ್ರೊ. ಫಡಕೆ)	೩ ೮ ೦	ಆಜಾದೆ ಹಿಂದ್ (ಸಚಿತ್ರ)	೧ ೦ ೦
ಭೂಮಾತೆ ಮತ್ತು ಮಂದಿರ	೧ ೮ ೦	ನೇತಾಜಿ ,,	೧ ೪ ೦
ರೇಡಿಯೋ ನಾಟಿಕಗಳು(ಬಿ.ಚಿ.)	೧ ೪ ೦	ಸುಭಾಷ ಸೇನೋಲ್ಲಂಘನ	೧ ೮ ೦
ಧರ್ಮಸಂಕಟ (ಕಾದಂಬರಿ)	೨ ೦ ೦	ಕಾಮಶಾಸ್ತ್ರದ ಗ್ರಂಥಗಳು	
ಬೆಳವಲದ ಬಾಗ್ದಲಕ್ಷ್ಮಿ	೨ ೮ ೦	ಅನಂಗರಂಗ (೨ನೇ ಆ)	೧ ೮ ೦
ಸಮ್ರಾಟ್ ಹರ್ಷನರ್ಧನ	೨ ೦ ೦	ರತಿರಹಸ್ಯ (೩ನೇ ಆ)	೧ ೮ ೦
ಡಾಕ್ಟರ್ ಗಿರೀಶ (ಪತ್ತೇದಾರಿ)	೦ ೬ ೦	ಕಾಮಶಾಸ್ತ್ರ (ವಾತ್ಸ್ಯಾಯನ)	೧ ೮ ೦
ಉದಯ ಕಥಾವಳಿ (ಜೋಶಿ)	೦ ೮ ೦	ಕಾಮಕುಂಜ (೨ನೇ ಆ)	೧ ೮ ೦
		ವಿಕೃತಕಾಮ	೧ ೮ ೦

[ವಿ. ಪಿ. ವೆಚ್ಚ ಬೇರೆ]

ಈ ಪುಸ್ತಕಗಳಲ್ಲಿ-೧೦ ರೂಗಳಿಗಿಂತ ಹೆಚ್ಚಿಗೆ ಪುಸ್ತಕ ತರಿಸುವದಾದರೆ ಅಂಚೇ ವೆಚ್ಚ ಉಚಿತ. ೩೦ ರೂಗಳಿಗಿಂತ ಹೆಚ್ಚಿಗೆ ತರಿಸುವುದಾದರೆ ರೂ.ಕ್ಕೆ ಒಂದಾಣೆ ಕಮಿಶನ್ ಸಹ ಕೊಡಲಾಗುವದು. ಮುಂಗಡ ಹಣದೊಂದಿಗೆ ಆರ್ಡರ್ ಕಳಿಸಿರಿ.

ಸಮಾಜ ಪುಸ್ತಕಾಲಯ, ಭಾರನಾಡ

ಕುಟುಂಬದೊಳಗಿನ ಚಿಲ್ಲರೆ ಬೇನೆ

ಬೀಜಕಣಗಳನ್ನು ಹೊಗಲಾಡಿಸಲಾಗಿ ಡಾಕ್ಟರ ಮಿಸ್ಟರ ಕಡೆ ಪ್ರತಿ ಸಾರಿ ಹೋಗುವದು ಕಷ್ಟಸಾಧ್ಯವಿರುವಲ್ಲಿ—ಮತ್ತು ಎಷ್ಟೋಬಾರಿ ಅವಶ್ಯಕತೆಯೂ ಇರುತ್ತಿರುವಲ್ಲಿ ಹೊಟ್ಟೆನೋವು, ಭಾಂತಿ, ಅಜೀರ್ಣ, ಕಂತಿ, ಮೈನೋವು, ಕಜ್ಜು-ಕೆರೆತ, ಬಿಳ್ಳೆ ಸಾರಿ ವಿಕಾರ ಇತ್ಯಾದಿ ಅತಿಸಣ್ಣ ಸಣ್ಣ ಸಣ್ಣ ಚಿಲ್ಲರೆ ಬೇನೆಗಳನ್ನು ಜವೇರಿಯನ್ ಜೀವನ ಮಿಕ್ಶ್ಚರ್ ಎನ್ನುವಂಥಾದ ಸರ್ವಾಂಗಸುಂದರವಾದ ಔಷಧಿ ಮತ್ತು ಅವಾಂತರಗಳಿಲ್ಲದ ಶಾಖಾಹಾರವಾದ ಪೋಷಕ ಪೌಷ್ಟಿಕಗಳ ಮೇರೆ ಬಾಮಾಸರಳತೆ ಇದರ ಕಾರಿಯೋಗವಾಗುತ್ತಿದೆ. ಹಾಗೆಯೆ ಮಲಬದ್ಧತೆಗಳಿಗೆ ಇದರ ಕಾರಿಯೋಗವಾಗುವದರಿಂದ ಇದರ ಜೊತೆಗೆ ಬಾಸ್ಪಾಮಾನು ಮಕ್ಕಳಿಗಾಗಿ ಮತ್ತು ಸ್ತ್ರೀಯರಿಗಾಗಿ ಅತ್ಯಂತ ಉಪ್ಪುಕಿಲ್ಲದ (ಉಪ್ಪಿನ ಬದಲಾಗಿ ಮೋಸರಿನ ಉಪ್ಪಿನಂಶವು ಇರುವ) ಪೌಷ್ಟಿಕ ಆಹಾರಾಹಾರಿ ಮಾಡಿಕೊಳ್ಳುವ ಉಪ್ಪಿನಂಶವು (ಉಪ್ಪಿನ ಬದಲಾಗಿ ಮೋಸರಿನ ಉಪ್ಪಿನಂಶವು (ಜಿಪ್ಸಂ ಸ್ಯಾಲಿನ್ ಸಕ್ಕರೆಯು) ಹೆಚ್ಚಾಗಲಿ ಕಾಣುವುದಿಲ್ಲ.

ಜವೇರಿಯನ್ ಜೀವನ ಮಿಕ್ಶ್ಚರ್ ಅನ್ನಕಂ ಪ್ರಾಣಸ್ಯಾಪ್ತವ ಮೊದಲು

ವರ್ಗ - ಊಳಿಗ

ಇತರ ಲೆಕ್ಕ ಪುಸ್ತಕಗಳು

ತರಹವಾರು ಸೈಜಿನಲ್ಲಿ

ದೊರೆಯುತ್ತವೆ.

ನವಯುಗ ಪ್ರೆಸ್, ಉಡುಪಿ.

ಡಿಸ್‌ಮಿಸ್ ಆಗುವ, ಯಾ ನಿರರ್ಥಕವೆಂದು ತೋರುವ ತನಕ ನಡುಗಾಲ ಸರಕಾರ ಬಿಡುವಂತಿಲ್ಲ.

ಮೀರತ್ ಕಾಂಗ್ರೆಸ್

೫ನೇ ಮಹಾಧಿವೇಶನ

ಲೀಗ್ ಕಡೆಗೆ ನೋಡದೆ 'ಸಾರ್ವಭೌಮ ಸ್ವತಂತ್ರ ರಿಪಬ್ಲಿಕ್'ಗಾಗಿ ಘಟನಾಸಮಿತಿಯಲ್ಲಿ ಸಾಧಿಸಿಯೇ ಸಿದ್ಧ.

ರಾಷ್ಟ್ರಸಭೆಯ ಜಾಹೀರು ಅಧಿವೇಶನವು ಪೂರ್ತಿ 6 ವರ್ಷಗಳ ನಂತರ ಮೀರತಿನಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ನಡೆಯಿತು. ನವಂಬರ್ ತಾ. 21 ಮತ್ತು 22ರಲ್ಲಿ ಕಾಂಗ್ರೆಸ್ ಕಾರ್ಯಕಾರೀ ಮತ್ತು ವಿಷಯ ನಿಯಾಮಕ ಸಮಿತಿ ಸಭೆಗಳೂ 23 ಮತ್ತು 24ರಲ್ಲಿ ಕಾಂಗ್ರೆಸಿನ 54ನೇ ಜಾಹೀರು ಅಧಿವೇಶನವೂ ನಡೆದುವು. ಸಭಾಸ್ಥಳ ಪ್ಯಾರೇಲಾಲ್ ಶರ್ಮ ನಗರವು ನೂರಾರು ಮಂದಿಯ ಮೂರು ತಿಂಗಳ ಅವಿಶ್ರಾಂತ ಶ್ರಮದ ಫಲವಾಗಿ ಭವ್ಯರೂಪಗೊಂಡಿದ್ದು, ದೇಶಪ್ರೇಮೋತ್ಸೇಜಕ ಮತ್ತು ಸರ್ವ ಸಂಭ್ರಮಗಳಿಂದ ತುಂಬಿ ತುಳುಕಾಡುತಿದ್ದರೂ ಎಲ್ಲಾ ವಿಧದ ಪ್ರದರ್ಶನಗಳನ್ನೂ ಏರ್ಪಡಿಸಲಾಗಿತ್ತು; ಪ್ರೇಕ್ಷಕರ ಪ್ರವೇಶಕ್ಕೂ ನಿರ್ಬಂಧಗಳಿದ್ದುವು; ಇಡೀ ರಾಷ್ಟ್ರದಲ್ಲಿ ಹತ್ತಿಕ್ಕೊಂಡಿರುವ-ಪ್ರತ್ಯಕ್ಷ ಮೀರತನ್ನು ದಹಿಸಿದ್ದ-ಜಾತೀಯ ದ್ವೇಷಾಗ್ನಿಯನ್ನು ಗಮನಿಸಿ, ನೌಖಾಲಿಯಲ್ಲಿ ನೆರೆಬಿದ್ದಂತಿರುವ ಗಾಂಧಿಜೀಯ ಗೈರು ಹಾಜರಿಯನ್ನೂ ಲಕ್ಷ್ಯಿಸಿ, ಅತ್ಯಂತ ಸಾದಾ ರೀತಿಯಿಂದ, ಕೇವಲ ಔಪಚಾರಿಕವಾಗಿ ಈ ಬಾರಿಯ ಕಾಂಗ್ರೆಸ್ ಅಧಿವೇಶನ ನಡೆಯಿತು. ಆದರದರ ನಿರ್ಧಾರಗಳು ಮತ್ತು ಭಾಷಣಗಳು ಅಕ್ಷರಶಃ ಬೆಲೆಬಾಳುವಂಥವುಗಳಿದ್ದವು; ಅತ್ಯಂತ ಪರಿಣಾಮಕಾರಿಯಿದ್ದುವು.

ವಿಷಯ ನಿಯಾಮಕ ಸಮಿತಿ

ನವರಾಷ್ಟ್ರಪತಿಯು ಅಗಮಿಕ ಮೆರವಣಿಗೆಯಿರಲಿಲ್ಲ. ಪದ್ಧತಿಯಂತೆ ವಿಷಯ ನಿಯಾಮಕ ಸಮಿತಿಯಲ್ಲಿ ಅಧ್ಯಕ್ಷತನವನ್ನು ಪಂಡಿತ ನೆಹರುಗಳು ಆಚಾರ್ಯ ಕೃಪಲಾನಿಗೊಪ್ಪಿಸಿ ಕೊಟ್ಟಾಗ ಆಚಾರ್ಯರು ಅಧ್ಯಕ್ಷತನದ ಮುಮ್ಮಾತುಗಳಲ್ಲಿ ಒಕ್ಕಣಿನೇದನೆಮಾಡಿಕೊಂಡರು. ಆ ಮೇಲೆ ಕಾರ್ಯಕಾರೀ ಸಮಿತಿ ಮತ್ತು ಅ. ಭಾ. ಸಮಿತಿಗಳು ಆಗಾಗ ಮಾಡಿದ್ದ ನಿರ್ಧಾರಗಳನ್ನು (-ನಡುಗಾಲ ಸರಕಾರ ಪ್ರವೇಶ ಇತ್ಯಾದಿ-) ಸಿಂಧುಗೊಳಿಸುವ ನಿರ್ಣಯವನ್ನು ಸೌಲಾನಾ ಆಜಾದರು ತಂದು ಪಂಡಿತ ಪಂತರು ಅದನ್ನು ಅನುಮೋದಿಸಿದರು. ಸ್ವಿತ್ಸರ್ಧನ್, ಸಹಜಾನಂದ, ಅಶೋಕ ಮೆಹತಾ ಮೊದಲಾದ ಸಮತಾವಾದಿಗಳು ಅದಕ್ಕೆ ನಾಮ್ಯವಿರೋಧ ಪ್ರದರ್ಶಿಸಿದರೂ ಅದು ಪ್ರಚಂಡ ಬಹುಮತದಿಂದ ಮಂಜೂರಾಯಿತು. 'ಸ್ವತಂತ್ರ ರಿಪಬ್ಲಿಕ್ ಸರಕಾರ'ವೇ ತಮ್ಮ ಗುರಿಯೆಂದು ನಮೂದಿಸಿ, ಅದರ ಸಾಧನೆಗಾಗಿ ಘಟನಾ ಸಮಿತಿ ಪ್ರವೇಶಿಸುವ ಎರಡನೇ ರಜಾವನ್ನು ಪಂಡಿತ ನೆಹರುಗಳು ತಂದು ನಡುಗಾಲ ಸರಕಾರ ದಲ್ಲಿ ಲೀಗ್ ಸದಸ್ಯರಿಂದಾಗುತ್ತಿರುವ ಉಪಟಳ ಮತ್ತು ವೈಸರಾಯರು ಆಗಾಗ ಅಡ್ಡಗಾಲಿಡುತ್ತಿರುವ,ಸರಕಾರ ಮತ್ತು ಲೀಗ್ ಒಂದಾಗಿ ಲೀಗು 'ರಾಜಪಕ್ಷ'ವಾಗಿ ವರ್ತಿಸುತ್ತಿರುವ ಗುಟ್ಟನ್ನು ಬಿಚ್ಚಿರಂಗಪಡಿಸಿಬಿಟ್ಟರು. ಹೀಗೆಯೇ ಮುಂದುವರದರೆ ಪ್ರಚಂಡ ಜೋರಾಟವನಿವಾರ್ಯನೆಂದು ಎಚ್ಚರಿಸಿದರು. ಶ್ರೀ. ಶಂಕರರಾವ್ ದೇವ್‌ರ ಅನುಮೋದನೆ ಪಡೆದು, ತಿದ್ದುಪಡಿ ಸೂಚನೆಗಳೆಲ್ಲಾ ಹಿಂದೆಗೆದುಕೊಳ್ಳಲ್ಪಟ್ಟು ಅದು ಸರ್ವಾನುಮತಿಯಿಂದ ಮಂಜೂರಾಯಿತು. ಜಾತೀಯ ಗಲಭೆ ಸಂಬಂಧದ ನಿರ್ಧಾರವೂ ಜಾಹೀರು ಅಧಿವೇಶನದ ಮುಂದಿಡುವ ಇತರ ರಜಾವುಗಳೂ ವಿಷಯ ನಿಯಾಮಕ ಸಮಿತಿ ಸಭೆಗಳಲ್ಲಾದುವು.

ಜಾಹೀರು ಅಧಿವೇಶನ

ಕಾಂಗ್ರೆಸಿನ 54ನೇ ಮಹಾಧಿವೇಶನ ತಾ. ೨೫ನೇ ಅಪರಾಹ್ನ ಪ್ರಾರಂಭಿಸಿತು. ಪ್ರತಿನಿಧಿಗಳು ಮತ್ತು ಪ್ರೇಕ್ಷಕರೆಂದು ಸಭಾರಂಗದೊಳಗೆ 10000ಮಂದಿ ನೆರೆದಿದ್ದರು. ಅದಕ್ಕಿಂತ ಹಲವು ಪಾಲು ಅಧಿಕ ಮಂದ್ಯಿಜೊರಗೆ ಕಾದಿದ್ದರು. ವಿಸ್ತಾರವಾದ ನಗರ ಮತ್ತು ಆಸುಪಾಸು ಜನ ಸಂದಣಿಯಿಂದ ಧುಮುಧುಮಿಸುತ್ತಿತ್ತು. ಜೈಜಾಪ್ ಹಿಂದ್ ದಳ, ಕೆಂಪಂಗಿ ದಳ ಮತ್ತು ಇತರ ಸ್ವಯಂಸೇವಕರು ಸಭಾವ್ಯವಸ್ಥೆಗಿದ್ದರು. ದರ್ಶನಾಕಾಂಕ್ಷೆ ಜನಸಮುದ್ರವು ಪ್ರಕ್ಷುಬ್ಧ ಕೆರೆಗಳಂತೆ ಮೇಲ್ವಾಯ್ದು ಬರುತ್ತಿದ್ದಾಗ ಇತರ ಧುರೀಣರನ್ನು ಮುಂದಿಟ್ಟುಕೊಂಡು ಅಧ್ಯಕ್ಷೆ ಕೃಪಲಾನಿಗಳು ಸಂಭ್ರಮದ ಮೆರವಣಿಗೆಯೊಡನೆ ಸಭಾ ಪ್ರವೇಶಮಾಡಿದರು. ಆಗ್ರಪೀರಭಲ್ಲಿ ಮುಡಿಸಿದ್ದ ಧುರೀಣರ ನಡುವೆ ಗಾಂಧಿಜೀಯ ಗೈರುಹಾಜರಿಯೂ, ಆ ಸ್ಥಳಕ್ಕೆ ಸಮೀಪದ ದೃಶ್ಯವಾಗಿದ್ದ ಜಾತೀಯ ಗಲಭೆಯುರಿ ಹಬ್ಬಿ ಪಾಳುಬಿದ್ದ ಮನೆಗಳ ನೋಟವೂ ಸಭಾಹೃದಯದಲ್ಲಿ ಕರಿ ಛಾಯೆಯಂತೆ ಬಿದ್ದಿತ್ತು. ಪದ್ಧತಿಯ ಪೂರ್ವ ವಿಧಿಗಳೆಲ್ಲಾ ಮುಗಿದ ಮೇಲೆ ಚಾಂಧರಿ ರಘುವೀರ ನಾರಾಯಣ ಸಿಂಗರು ಸ್ವಾಗತ ಭಾಷಣವನ್ನಿತ್ತರು. 1857ರ ಸಿಪಾಯಿ ದಂಗೆಯ ಪ್ರಥಮ ಗುಂಡನ್ನು ಹಿಡಿಯಿಸಿದುದು ಮೀರತ್ ಎಂಬುದನ್ನೂ ಈಗ ಜಾತೀಯ ದಂಗೆಯ ಕಳಂಕವನ್ನದು ಹೊತ್ತಿದೆಯೆಂಬುದನ್ನೂ ನೆನಪು ಮಾಡಿದರು. "ನಮ್ಮ ನಾಯಕರೀ ಜಾತೀ ಜ್ವಾಲೆಯನ್ನು ನಂದಿಸಲು ಒದ್ದಾಡುತಿದ್ದಾರೆ. ಆದರದನ್ನು ಹೊತ್ತಿಸುವವರ ಕೆಲಸದಷ್ಟು ನಂದಿಸುವವರ ಕೆಲಸ ಸುಲಭವಲ್ಲ" ಎಂದರು.

ಅಧ್ಯಕ್ಷೆ ಭಾಷಣ

ರಾಷ್ಟ್ರಪತಿ ಆಚಾರ್ಯ ಕೃಪಲಾನಿಗಳ ಅಧ್ಯಕ್ಷ ಭಾಷಣವು ಬೋಧಪ್ರದ ವಿಚಾರ ವೈವಾಹಾರೋತ್ಪೇಜಕ, ಹಾಗೂ ಸುದೀರ್ಘವಿತ್ತು. ಹಿಂದಿನ ಅಧಿವೇಶನಾನಂತರದ ಆರು ವರುಷಗಳ ವಿದ್ಯಮಾನಗಳ ಕೆಲವನ್ನೂ ಅವರು ಪ್ರಸ್ತಾಪಿಸಿದ್ದರು. ಕಾಂಗ್ರೆಸ್ ಸರಕಾರಗಳು, ಕಾಂಗ್ರೆಸ್ ಘಟನೆ, ಆರ್ಥಿಕ ಸಮಾನತೆ, ಸಂಸ್ಥಾನಗಳ ಸಮಸ್ಯೆ, ಸಕ್ಷ ಭೇದಗಳು, ಬರ್ಮಾ ಸಿಲೋನುಗಳೊಡನೆ ಸಂಬಂಧ, ವಿದೇಶಗಳ ಸಂಬಂಧ ಇತ್ಯಾದಿ ಎಲ್ಲಾ ವಿಷಯಗಳಲ್ಲೂ ಕಾಂಗ್ರೆಸ್ ಧೋರಣೆಯೇನೆಂಬುದನ್ನವರು ಮಂದಟ್ಟು ಮಾಡಿದರು. "ಸ್ವತಂತ್ರ ಭಾರತವು ಸಾರ್ವಾಜ್ಞಾನಾದಿಯಾಗದು; ಪರಕೀಯರ ಸಾರ್ವಾಜ್ಯವಾದಕ್ಕೆಡೆ ಕೊಡದು. ಇತ್ತ ಚೀನಾದಿಂದ ಹಿಡಿದು ಅತ್ತ ಆಸ್ಟ್ರೇಲಿಯಾದ ವರೆಗಿನ ಸಮಸ್ತ ರಾಷ್ಟ್ರಗಳೊಡನೆಯೂ ಮೈತ್ರಿಯಿಂದಿರಲು ಆದು ಬಯಸುತ್ತದೆ. ಬದುಕುವದು ಮತ್ತು ಬದುಕಲು ಬಿಡುವದೇ ಅದರ ಧ್ಯೇಯ" ಎಂದರು. ದ್ವಿರಾಷ್ಟ್ರ ಯೋಜನೆಯು ಯೋಜನಾಬಾಹಿರವೆಂದು ಸ್ಪಷ್ಟಪಡಿಸಿ, ಒಂದು ಪಂಗಡದ ಜನರನ್ನು ಸಂತೈಸುವ ದಕ್ಕಾಗಿ ಬೇರೆಯರಿಗೆ ಹಾಸಿಯೊಡ್ಡುವ ಕೆಲಸವಿನ್ನೆಂದಿಗೂ ಆಗದೆಂದು ಖಂಡಿತ ವಾಣಿಯಲ್ಲಂದರು. ಅಲ್ಪ ಸಂಖ್ಯಾಕರಿಗೆ ತಕ್ಕ ಭದ್ರತೆ, ಧಾರ್ಮಿಕ ವಿಶ್ವಾಸಗಳಿಗೆ ಭರವಸೆ ಕೊಟ್ಟರು. ಅಧ್ಯಕ್ಷ ಭಾಷಣದಲ್ಲಿ ವ್ಯಕ್ತಿಯೋಗ್ಯತೆಗಳನ್ನು ಮನ್ನಿಸುವ ಆರ್ಥಿಕ ಸಮಾನತೆಯ ಕುರಿತು ಸೂಕ್ಷ್ಮ ವಿವೇಚನೆಯಿತ್ತು. ರಾಷ್ಟ್ರಪತಿ, ತನ್ನ ಭಾಷಣದಲ್ಲಿ ಮುಖ್ಯವಾಗಿ ಜಾತೀಯ ಕಲಹಗಳನ್ನು ಉದ್ದೇಶಿಸಿ 'ಸ್ವಾತಂತ್ರ್ಯ ಪಥದ ಅತಿ ದೊಡ್ಡ ಕಂಟಕವೆಂದರೆ ಇದೊಂದೇ' ಎಂಬುದನ್ನು ಒತ್ತಿ ಹೇಳಿ, ಐಕ್ಯಕ್ಕಾಗಿ ಆಗ್ರಹ ವಿನಂತಿ ಮಾಡಿಕೊಂಡರು. "ಅಹಿಂಸೆ, ಜನತಾಕ್ಷೇಮಕ್ಕೆ ಕಟ್ಟು ಬಿದ್ದೇ ನಮ್ಮ ಚಳವಳವು ಚಂರಿತ್ರಾರ್ಹ ವಿಕಾಸಗೊಂಡಿದೆ. ಅದು ಸ್ವಜಾಸತ್ತಾತ್ಮಕ ರೀತಿಯಿಂದ ಕಳಂಕರಹಿತನಾದ ಸಾಮಾಜಿಕ ಸುಸ್ಥಿತಿಯನ್ನು ನಿರ್ಮಿಸಲು ಬದ್ಧವಿದ್ದು ಅಂತರ್ರಾಷ್ಟ್ರೀಯ ಸಹಕಾರ ಮತ್ತು ಶಾಂತಿಯತ್ತ ತಿರುಗಿದೆ. ಗಾಂಧಿಜೀಯ ನಾಯಕತ್ವದಲ್ಲಿ ಕಾಂಗ್ರೆಸು ಈ ಗುರಿಗಳನ್ನು ಸೇರಲು ದುಡಿಯುತ್ತಾ ಬಂದಿದೆ. ಈಗ ಆದು ಈ ಧ್ಯೇಯಗಳನ್ನು ಇನ್ನಷ್ಟು ಸ್ಪಷ್ಟಪಡಿಸಿಕೊಳ್ಳಬೇಕು; ಆವುಗಳಿಗೆ ಅಸ್ತಿತ್ವವನ್ನು ತರಲು ಇನ್ನಷ್ಟು ಆಂತಃಕರಣ ಪೂರ್ವಕ ದುಡಿಯಬೇಕು. ಈ ಮಂಗಳ ಕ್ಕಾಗಿ ಆದೀಗ ದೊರಕಿಸಿಕೊಂಡಿರುವ ಹೂಸ ಶಕ್ತಿಯನ್ನೆಲ್ಲಾ ವಿನಿಯೋಗಿಸಬೇಕು" ಎಂದರು. ಕಟ್ಟಕಡೆಗೆ ಮಿ. ಜಿನ್ನರ ಘಟನಾ ಸಮಿತಿ ಬಹಿಷ್ಕಾರದ ಪ್ರಸ್ತಾಪವೆತ್ತುತ್ತಾ ವ್ಯಂಗ್ಯವಾಗಿ "ಇನ್ನು ಕ್ರಮಶಃ ಮಿ. ಜಿನ್ನರು ಘಟನಾ ಸಮಿತಿಗೆ ಹಾಜರಾದಾರೋ ಎಂಬ ವಿಷಯ ಮಿ. ಜಿನ್ನರಿಗೆ ಮತ್ತು ದೇವರಿಗೆ ಮಾತ್ರ ಗೊತ್ತು. ದೇವರಿಗಾದರೂ ಅದು ಗೊತ್ತೇ ಎಂಬ ಕುರಿತು ನನಗನುಮಾನವಿದೆ; ಸ್ವತಃ ಮಿ. ಜಿನ್ನರಿಗಾದರೂ ಅದು ಗೊತ್ತಿದೆಯೋ ಇಲ್ಲವೋ-ನನಗನುಮಾನವಿದೆ" ಎಂದು ಹೇಳಿ ಸಭೆಯಲ್ಲಿ ನಗೆಯನ್ನೆಬ್ಬಿಸಿದರು. ಒಟ್ಟಿನ ಮೇಲೆ ರಾಷ್ಟ್ರಕ್ಕೊಂದು ಹಾದಿ ತೋರಿಸುವ ಬೆಳಕು ಮತ್ತು ಆಟಕಾಯಿಸುವವರ ಮುಖ ಸುಡುವ ಬಿಸಿಯಲ್ಲಿ ದೀವಿಗೆಯಂತಿತ್ತು ರಾಷ್ಟ್ರಪತಿಯ ಭಾಷಣ. ಕಳೆದ ಆರೂವರೆ ವರುಷಗಳಲ್ಲಿ ವಿಯೋಗಗೊಂಡ ಪ್ರಮುಖರೆಲ್ಲರ ಕುರಿತು ದುಃಖಸೂಚಕ ರಜಾವಾಯಿತು.

ನೆಹರುಗಳ ಉಜ್ವಲ ಭಾಷಣ

ಕಳದ ೮೬ ವರುಷಗಳ ಘಟನೆಯ ಸ್ಮರಣೆ ಮತ್ತು ಅಂರಿಕೆಗೆ ಒಗ್ಗಟ್ಟಿಗಾಗಿ ವಿ

ನೆಂತಿ ಮಾಡುವ ಮೊದಲ ಮುಖ್ಯ ರಜಾವನ್ನು ಪಂಡಿತ ನೆಹರುಗಳು ತಂದರು. 'ಬರುಗಾಳಿ ವರುಷ'ವಾಗಿದ್ದ 1942ರ ಸ್ಮರಣೆ ಮಾಡುತ್ತಾ ಪಂಡಿತಜೀ ಕಂಠೋಕ್ತವಾಗಿ ನುಡಿದರು: "ಬ್ರಿಟಿಷ್ ಮತ್ತು ಹಿಂದೀ ಅಧಿಕಾರಿಗಳು ಆ ವರುಷ ಮಾಡಿದ್ದ ಕೃತ್ಯಗಳನ್ನು ನಾನೆಂದೂ ಮರೆಯಲಾರೆ. ಆವರ ಸ್ಥಿತಿಯ ಅರಿವು ನನಗಿದ್ದು ಜವರೊಡನೆ ಸಹಾನುಭೂತಿ ಸೂಚಿಸಲು ನಾನುತ ಯಾರಿದ್ದೇನೆ. ಆದರೆ ಜನರಮೇಲೆ ನಡೆದ ಅತ್ಯಾಚಾರಗಳಿಗೆ ಹೊಣೆಗಾರರಾಗಿದ್ದವರಿಗೆ ಶಿಕ್ಷೆ ಕಟ್ಟಿಟ್ಟದ್ದೇ. ಆವರನ್ನು ಶಿಕ್ಷಿಸುವ ನುಟ್ಟಿಗೆ ನಯಭಯವೆರಡನ್ನೂ ನಾವು ತೋರಿಸುವಂತಿಲ್ಲ." (ಉತ್ಸಾಹಧ್ವನಿ) ವ್ಯಾಂತಿಕ ಮಂತ್ರಗಳು ಈ ಕುರಿತು ಲಕ್ಷ್ಯ ಕೊಡಬೇಕು, ವೈಸರಾಯರೂ ಈ ಕಡೆಗೆ ಗಮನಿಸಬೇಕೆಂದು ಸೂಚಿಸಿ, "ಅಧಿಕಾರಿಗಳನ್ನು ದಯನಿಸಬಾರದೆಂದು ವೈಸರಾಯರೊಮ್ಮೆ ನನಗಂದಿದ್ದರು. ನನಗವರನ್ನು ದಬಾಯಿಸುವ ಬಯಕೆಯಿಲ್ಲವೆಂದು ನಾನು ಉತ್ತರ ಕೊಟ್ಟಿದ್ದೆ. ಆದರೆ 1942ರ ಅಪರಾಧೀ ಅಧಿಕಾರಿಗಳು ಹಿಂದೀಯರಿರಲಿ ಬ್ರಿಟಿಷರಿರಲಿ, ಆಂಧವರಿಗೆ ಮಾತ್ರ ರಿಯೂಯಿತಿಯಿಲ್ಲವೆಂದು ನಾನು ಸಾರಿ ಸಾರಿ ಹೇಳಿದ್ದೇನೆ." ಎಂದು ಹೇಳಿ "ಅಧೀಸರರನ್ನಾಧರಿಸಿ ನಾವಿರಬೇಕೆಂಬುದನ್ನು ಒಪ್ಪುತ್ತೇನೆ; ಆದರೆ ಅವರನ್ನು ಸರಿದಾರಿಗೆ ಹಚ್ಚುವ ಕೆಲಸ ನಮ್ಮದಿದೆ; ಅವರಲ್ಲಿ ಕ್ಷುದ್ರ ಬುದ್ಧಿ, ನೀತಿ ಬಾಹಿರತೆಯಿರದಂತೆ ಮಾಡಬೇಕಾಗಿದೆ. ಅಂತೆಯೇ ಅವರ ರಕ್ಷಣೆಯನ್ನೂ ನಾವು ಮಾಡಬೇಕು. ಒಳ್ಳೆಯವರು ಮತ್ತು ಬುದ್ಧಿವಂತರೂ ಅವರಲ್ಲಿದ್ದಾರೆ" ಎಂದರು. "ನೌಕರ ವರ್ಗದ ಮನೋವೃತ್ತಿ ಚೆನ್ನಾಗಿಲ್ಲ; ಅದು ಕಾಲಾನುಗುಣ ವಿಕಾಸಗೊಂಡಿಲ್ಲ. ಬ್ರಿಟಿಷ್ ಅಧಿಕಾರಿಗಳು, ಮುಸ್ಲಿಂ ಲೀಗಿನೊಂದಿಗೇನೇ ಸಹಾನುಭೂತಿ ಮತ್ತು ಸಹಯೋಗ ತೋರಿಸುತ್ತಿದ್ದಾರೆ. ಲೀಗ್ ಮತ್ತು ಬ್ರಿಟಿಷ್ ನೌಕರರಲ್ಲಿ ಸುಧ್ಯಯುಗದ ಮನೋವೃತ್ತಿಯೇ ಇವೆ" ಎನ್ನುತ್ತಾ ಕಳದ ಮೂರು ನಾಲ್ಕು ತಿಂಗಳುಗಳ ಸ್ವಾನುಭವನವನ್ನು ತಿಳಿಸಿ "ಆದರೆ ಅವರು ಮಾತ್ರ ನಮ್ಮ ವೈರಿಗಳಲ್ಲ. ನಮ್ಮ ತಿಬಿರದೊಳಗೇನೇ ವೈರಿಗಳು ತುಂಬಿದ್ದಾರೆ. ಭಾರತ ಸ್ವಾತಂತ್ರ್ಯದ ಕೊನೆಯ ಹೋರಾಟದಲ್ಲಿ, ನಾವು ಈ ಲಂಚಬೋರ ಲಾಭಬಡುಕ ವೈರಿಗಳ ಮೂಲೋತ್ಪಾಟನೆ ಮಾಡಬೇಕು" ಎಂದುಹೇಳಿ ಸಭೆಯಲ್ಲಿ ಉತ್ಸಾಹಧ್ವನಿಯೆಬ್ಬಿಸಿದರು. ಪಂಡಿತ ಪಂತರು ಸ್ವರ್ತಿದಾಯಕ ಭಾಷಣದಿಂದದನ್ನು ಅನುಮೋದಿಸಿದರು; ಠರಾವು ಸರ್ವಾನುಮತದಿಂದ ಮಂಜೂರಾಯಿತು.

ಸರ್ದಾರ್ ಪಟೇಲರ ಖಂಡ ತುಂಡವಾತು

ನಡುಗಾಲ ಸರಕಾರ ರಚನೆ ಮೊದಲಾದ ಕಮಿಟ ನಿರ್ಧಾರಗಳನ್ನು ಸಿಂಧುಗೊಳಿಸುವ ಎರಡನೇ ಮುಖ್ಯ ರಜಾವನ್ನು

(ಇನ್ನೂ ಹುಟ್ಟಿ ನೋಡಿರಿ)

The Canara Banking Corporation Limited.

(Incorporated in British India, with limited Liability)

Estd 1906

Head Office: **UDIPI**, South Kanara

Authorised Capital	...	Rs 25,00,000
Issued & Subscribed	...	,, 16,00,000
Paid up	...	,, 15,87,600
Reserves	...	,, 4,60,000
Total Resources Around		,, 2½ Crores.

Branches at– Bombay, Madras, Bangalore, Coimbatore, Salem, Calicut, Hubli, Mysore, Cochin, Mangalore, Madras etc, etc

Banking Business of Every Description Transacted.

ನವಯುಗ

ಉಡುಪಿ, ಗುರುವಾರ, ೨೮-೧೧-'೪೬

ಮೀರತ್ ಕಾಂಗ್ರೆಸ್

ಪದ್ಧತಿಯ ಪ್ರದರ್ಶನ ಸಮಾರಂಭಗಳನ್ನು ರದ್ದುಪಡಿಸಿಕೊಂಡು– ಘೋರಜೆ, ಭಾವನೆಗಳ ಪ್ರಚಂಡತೆಯನ್ನೇ ಪ್ರದರ್ಶಿಸಿ– ಮೀರತಿನಲ್ಲಿ ನೇರದ ಕಾಂಗ್ರೆಸಿನ ೫೪ನೇ ಅಧಿವೇಶನವು ಜಯಪ್ರದವಾಗಿದೆ' ಪರಿಣಾಮಕಾರಿಯಾಗಿದೆ. ರಾಷ್ಟ್ರದ ಭವಿಷ್ಯವು ಕಾಂಗ್ರೆಸಿನ ಕೈಯಲ್ಲಿ ಭದ್ರವಿದ, ಎಂಬ ವಿಶ್ವಾಸ ಹುಟ್ಟಿದ್ದು ಇದೇ ಮೊದಲಲ್ಲ. ಆದರೆ ಜಾತೀಯ ದಂಗೆಗಳಂತಹ ಹೊಸ ಸಮಸ್ಯೆಗಳೇಳುವಾಗ ಪರಿಸ್ಥಿತಿಗನುಗುಣವಾಗಿ ವರ್ತಿಸುವ-ಬಿರುಗಾಳಿಯೆದ್ದಾಗ ಚುಕ್ಕಾಣಿ ತಿರುಗಿಸುವ- ನೈಪುಣ್ಯದ ಅಭಾವ ಕಾಂಗ್ರೆಸ್ ಸೂತ್ರಧಾರಿಗಳಲ್ಲಿಲ್ಲವೇ, ಎಂಬ ಅನುಮಾನ ಈ ಬಾರಿ ಹೆಚ್ಚಲ್ಲುಂಟಾಗಿತ್ತು. ಮೀರತ್ ಕಾಂಗ್ರೆಸಿನಲ್ಲಾದ ಸ್ಪಷ್ಟೀಕರಣಗಳು ಆ ಸಂದೇಹವನ್ನು ಸಂಪೂರ್ಣವಾಗಿ ನಿವಾರಿಸಿದುವೆನ್ನಲು ಅನಂದಪಡುತ್ತೇವೆ ಕಾಲಾನುಗುಣವಾದ ದಕಲಿತನವು ಅಲ್ಲಿ ಇದ್ದೇ ಇದೆ ಎಂಬುದರಿಂದ ರಾಷ್ಟ್ರವಿಗೆ ನಿಶ್ಚಂಕಯಿಂದ ಕಾಂಗ್ರೆಸ್ ಹಾತಕ್ಕೊಟ್ಟು ಹಾದಿತುಳಿಯಬೇಕಾಗಿದೆ ಮೀರತ್ ಕಾಂಗ್ರೆಸ್'ನಿರ್ಧಾರಗಳಲ್ಲಾವುದೂ ಹೊಸತಲ್ಲ. ನಿರೀಕ್ಷಿಸದಿದ್ದುದು ಆದರಲ್ಲಾವುದೂ ಇಲ್ಲ. ನಡುಗಾಲ ಸರಕಾರ, ಘಟನಾಸಮಿತಿ ಪ್ರಸೇಶ, ಅಶ್ರಿತ ರಾಜ್ಯಗಳ ಸಂಬಂಧದ ಘೋರಣೆ-,ಜಾತೀಯ ಐಕ್ಯತೆ, ಇವೆಲ್ಲವುಗಳ ಸ್ಥಿಮಟ್ಟಿಗೂ ಕಾಂಗ್ರೆಸ್ ತನ್ನ ಪೂರ್ವವಿದಿತ ಮಾರ್ಗಗಳನ್ನೇ ಅಂಗೀಕರಿಸಿಕೊಂಡಿದೆ. ಸದ್ಯ ರಾಷ್ಟ್ರೀಯ ವಿಷತ್ಸಾಗರವು ಅಂತರಿಕ ಗೊಂದಲಗಳ ಕಾರಿತು ಅಲ್ಲಿ ಆದ ಭಾಷಣಗಳು ಮಾತ್ರ ವಿಶೇಷ ರೂಪದ್ದಿವೆ, ಸರ್ವ ಹೃದಯಗಳಲ್ಲೂ ಸದಾಕಾಲ ಪ್ರತಿಧ್ವನಿಸುವಂತಹವಿವೆ, ಎಲ್ಲಕ್ಕಿಂತ ಹೆಚ್ಚಾಗಿ ಕಾಂಗ್ರೆಸ್ ಅಧಿಮಾನಿಗಳ ಕಣ್ಮುಂಬೆ ಕತ್ತಲೆಯಂತೆ ಕವಿದಿದ್ದ ಶಂಕೆ, ಸಂದೇಹ, ಭಯಗಳನ್ನು ನಿವಾರಿಸುವಂತಹವಿವೆ. 'ಖಡ್ಗಕ್ಕೆ ದಿರಾಗಿ ಖಡ್ಗವೇ ಝಳಪಿಸಲಿಪ್ಪೆ ಸ್ವರಕ್ಷಣೆಗಾಗಿ ಮತ್ತು ನಿಸ್ಸಹಾಯಕರ ರಕ್ಷಣೆಗಾಗಿ ಹಿಂಸೆಯನ್ನು ಉಪಯೋಗಿಸಬಹುದು. ಹೇಡಿಯಾಗಿರುವದಕ್ಕಿಂತ ಹಿಂಸಾವಾದಿಯಾಗುವುದು ಮಾಸಿ ಎಂದು ಗಾಂಧಿಜೀಯೇ ಹೇಳಿದ್ದಾರೆ.' ಎಂಬ ಸರ್ದಾರ್ ಪಟೇಲರ ಸ್ಪಷ್ಟೀಕರಣವು ಹೆಲವರಿಗೊಗ್ಗದಿರಬಹುದು. ಕಾಂಗ್ರೆಸ್ ಮುಸ್ಲಿಮರ ಶಾಂತ ಹೃದಯದಲ್ಲೂ ಅದು ಸುಳಿಯಂತೆ ಸುತ್ತು ತ್ರಿರಬಹುದು, ಆದರೂ ಸರ್ದಾರರ ಖಂಡಿತ ವಾಣಿ ಕಾಲೋಚಿತವಿದೆ. ನಾಲ್ಕೈದು ತಿಂಗಳುಗಳ ಆಂತರಿಕ ಗೊಂದಲಗಳ ತುಲನಾತ್ಮಕ ವಿಮರ್ಶೆ ನಡಿಸುವ ವಿಚಾರಿಗಳು ಮನಸ್ಸಾಕ್ಷಿಗನುಸಾರವಾಗಿ ಮಾತಾಡುತ್ತಾರಾದರೆ ಮಿಕ್ಕೆಲ್ಲಾ ಶಾಂತಿಸಂದೇಶಗಳಿಗಿಂತ ಹೆಚ್ಚಿನ ಸತ್ಪರಿಣಾಮವು ಸರ್ದಾರರ ಈ ಸಿಂಹನಾದದಿಂದಾಗಲಿದೆ' ಎಂದೊಪ್ಪಬಹುದು. ಆದರಿದು ಅಪದ್ಧರ್ಮ ಮಾತ್ರವೆಂಬುದನ್ನೂ ಬಂಧುಬಾವದಿಂದ ಒಂದುಗೂಡಿ ಬಾಳುವ ಮನುಷ್ಯದರ್ಮವು ಮೊದಲನೆಯದು- ಸರ್ವಶಕ್ತಿಯಿಂದ ಉಳಿಸಿಕೊಳ್ಳುವಂತಹದು- ಸ್ವಾತಂತ್ರ್ಯಸಾಧನೆಗಸಿಪಾರ್ಯವಾದುದೆಂಬುದನ್ನೂ ಒಂದೂ ಮರೆಯಬಾರದು. ಹೀಗೆ ಪ್ರಥಮ ಮತ್ತು ದ್ವಿತೀಯಶ್ರೇಕರ್ತವ್ಯಗಳಾವುವೆಂಬುದನ್ನು ಮೀರತ್ ಕಾಂಗ್ರೆಸ್ ವಿಂಗಡಿಸಿ, ಸ್ಪಷ್ಟೀಕರಿಸಿ ತೋರಿಸಿದೆ. ಪ್ರತಿಯೊಬ್ಬ ಹಿಂದೀಯನೂ ಅದಂತೀತಿಯನ್ನು ಏರಿ ನಾವಹಿಸಿ ನಡೆಯಲು ಬದ್ಧನಿದ್ದಾನೆ.

ಕೈಲಾಸಂ ವಿಯೋಗ

ಶ್ರೀ ತ್ಯಾಗರಾಜ ಸರವಂತಿಯ ಕೈಲಾಸಂ ತನ್ನ ೬೧ನೇ ವಯಸ್ಸಿನಲ್ಲಿ ಆಯುಷ್ಯಾಂತ್ಯ ಪಡೆದರೆನ್ನಲು ವಿಷಾದಿಸುತ್ತೇವೆ ಆ ವಸಾನ ಇದೇ ತಾ ೩೦ನೇ ರಾತ್ರಿ ಬಂಗಳೂರಿನಲ್ಲಾಯಿತು. ಆವಸ್ಥೆರಿಯದ ಕನ್ನಡಿಗನಿಲ್ಲ. ಕನ್ನಡ ಸಾಹಿತ್ಯರಂಗದಲ್ಲಿ ಕೈಲಾಸಂ ಸ್ಥಾನವು ತುತ್ಪಪುದಿಯಲ್ಲಿತ್ತು, ಅದು ಪ್ರತ್ಯೇಕವಿದ್ದು ಅದ್ವಿತೀಯವಿತ್ತು. ಅವರ ಕೃತಿಗಳ ವಸ್ತು, ಮಾರ್ಗ, ಶೈಲಿ, ಯಾವುದೂ ಬೇರೆ ಕಡೆ ಕಾಣಿಸುವಂತಹವಲ್ಲ ಕೈಲಾಸಂ ವ್ಯಕ್ತಿತ್ವದಲ್ಲೂ ಅಂತಹ ವೈಶಿಷ್ಟ್ಯವಿತ್ತು. ಅವರು ನಾಟಕಕಾರರಿದ್ದರೆ, ಅಂತೆಯೇ ನಟರಾಗಿದ್ದರು. ಕನ್ನಡದ ಆಗ್ರಗಣ್ಯ ಸಾಹಿತಿಯಾಗಿದ್ದಂತೆ, ಪ್ರಸಿದ್ಧ ಇಂಗ್ಲಿಷ್ ಲೇಖಕರೂ ಆಗಿದ್ದರು. ಅವರ 'ಟೊಳ್ಳುಗಟ್ಟೆ', 'ಪೋಲಿಕಿಟ್ಟಿ', 'ಬಂಡ್ವಾಳಿಲ್ಲದ ಬಡಾಯಿ' ಮೊದಲಾದ ಕೆಲವು ಕನ್ನಡ ನಾಟಕಗಳಿಗೆ ಸರಿಗಟ್ಟುವಂತವೆವು ಬೇರಿಲ್ಲ ಕೈಲಾಸಂ ಕಳೆದ ವರುಷ ಮದ್ರಾಸಿನಲ್ಲಿ ನೆರೆದಿದ್ದ ಕನ್ನಡ ಸಾಹಿತ್ಯ ಸಮ್ಮೇಲನದ ಅಧ್ಯಕ್ಷರಾಗಿದ್ದೇರಿದ್ದರು. ಅವರ ನಿಯೋಗದಿಂದ ಕನ್ನಡ ಸಾಹಿತ್ಯ ದೇವಿಯ ಮುಕುಟದೊಂದು ಉಜ್ವಲರತ್ನ ಕಳಚಿ ಬಿದ್ದಂತಾಗಿದೆ. ಆದರೆ ಕೈಲಾಸಂ ಕಲೆ ಚಿರಜೀವಿಯಿದೆ.

[ಉಳಿದ ಪುಟದಿಂದ]

ಯಕೊಡಬೇಕೆಂದು ನಡುಗಾಲ ಸರಕಾರವನ್ನು ಬೇಡಲಂಯಿತು. ಬಂಗಾಳದ ಕೆಲವು ಘೋರಿಣರು ನನ್ನ ಬಳಿಗೆ ಬಂದು ನಾನು ಕೈಹಾಕಬೇಕೆಂದು ಕೇಳಿಕೊಂಡಿದ್ದರು. ಕೇಂದ್ರಕ್ಕಾ ಅಧಿಕಾರವಿಲ್ಲ, ಕೇಂದ್ರದ ನೈತಿಕ ಬೆಂಬಲ ನಿಮಗಿದೆ, ಎಂದು ನಾನವರಿಗೆ ತಿಳಿಸಿದ್ದೆ. ಬೆನ್ನಲ್ಲೇ, ಪೂರ್ವ ಬಂಗಾಲವು ಗಲಭೆಗು ರಂಗವಾಗುವದು ಖಂಡಿತವೆಂದೂ ಅದನ್ನಿದಿರಿಸಲು ನೀವು ತಯಾರಿರಬೇಕೆಂದೂ ನಾನಾಗಲೇ ಅವರಿಗೆ ಎಚ್ಚರಿಕೆಕೊಟ್ಟಿದ್ದೆ ನಿಮಗೆ ಸ್ವಾತಂತ್ರ್ಯ ಬೇಕೋ– ಸೇನೆ ಅಥವಾ ಪೋಲೀಸರ ಬಳಿಗೋಡದೆ ನಿಮ್ಮನ್ನೂ ನಿಮ್ಮ ನೆರೆಯವರನ್ನೂ, ನಿಸ್ಸಹಾಯಕರನ್ನೂ ರಕ್ಷಿಸಿಕೊಳ್ಳಲು ಸ್ವತಃ ನೀವೇ ತಯಾರಾಗಬೇಕು, ಎಂದು ನಾನವರಿಗೆ ಹೇಳಿದೆ 'ನಿಮ್ಮಿಂದ ಆಗುವದಿಲ್ಲವಾದ್ದರೆ ನೀವೇಕೆ ರಾಜೀನಾಮೆ ಕೊಡಬಾರದು?' ಎಂದು ನನ್ನನ್ನು ಪ್ರಶ್ನಿಸುವವರಿರಬಹುದು. ಬ್ರಿಟಿಷ್ ಸರಕಾರವು ಮುಸ್ಲಿಂ ಲೀಗಿನ ಪಕ್ಷ ವಹಿಸಿದೆ ಎಂಬುದನ್ನು ನೀನೆಲ್ಲಾ ತಿಳಿದಿರಬೇಕಾದುದು ಅಗತ್ಯ. ಅನತ್ಯಾಲದ ಸ್ನೇಹಿತರಾಗಿ ಮಾರ್ಪಟ್ಟಿದ್ದಾರೆ—ಈ ಬ್ರಿಟಿಷರು ಮತ್ತು ಲೀಗಿನವರು. ಇನ್ನು ದೀರ್ಘಾವಧಿ ಇಲ್ಲಿರಲು ತಮಗೆ ಸಾಧ್ಯವಿಲ್ಲವೆಂದು ತಿಳಿದಿರುವ ಬ್ರಿಟಿಷರು ತಮ್ಮ ನೈಜ ಹಿತರಾದ ಮುಸ್ಲಿಂಲೀಗಿನವರಿಗೆ ಕೊನೆಯ ಸಹಾಯ ಸಲ್ಲಿಸಲು ಹೂರೈಸುತಿದ್ದಾರೆ. ಈ ದುರ್ಮೈತ್ರಿಯದ ಪರಿಣಾಮಗಳನ್ನು ತಡೆಗಟ್ಟಬೇಕಾದರೆ ಸರಕಾರದೊಳಗಿದೆ ಕಾಂಗ್ರೆಸ್ ನಿಜ್ಜಿಬೇಕಾದುದು ಅಗತ್ಯ ಈ ಸರಕಾರದಿಂದ ಭೇದಿಸಿಕೊಂಡು ಹೊರಬರಲು ನಾವು ಯಾವ ಕ್ಷಣಕ್ಕಾದರೂ ತಯಾರಿದ್ದೇವೆ. ಆದರೆ ಎಲ್ಲೆಲ್ಲೂ ಬ್ರಿಟಿಷರ ವಂಶಕ್ಕೆ ಮಂಗಳಾರತಿಯಾಗುವ ಮಸಿಓಳೆಯದ ವಿನಹಾ ನಾವಲ್ಲಿಂದ ಹೊರಡುವಂತಿಲ್ಲ' (ಉತ್ಸಾಹಧ್ವನಿ)

'ನನ್ನ ಪ್ರಾಣಾವಧಿಯಾತನೆ'

ಕಲ್ಕತ್ತಾದ ನರಮೇಧದಲ್ಲಿ ತಮ್ಮ ಆಯವ್ಯಯ ಪಟ್ಟಿ ಅಡಿಮೇಲಾದುದನ್ನು ಕಂಡ ಮೇಲಾದರೂ ಗೊಂದಲ ನಿರ್ಮಾಪಕರು ಕಣ್ಣು ಗಾಗುವರೆಂಬ ತನ್ನ ನಿರೀಕ್ಷೆ ಹುಸಿಯಾದುದನ್ನೂ, ಪೂರ್ವ ಬಂಗಾಳದ ಅತ್ಯಾಚಾರಗಳನ್ನೂ ವಿವರಿಸಿ ಸರ್ದಾರರಂದರು: "ಬಂಗಾಳದ 30 ಲಕ್ಷ ಜನರು ಆಹಾರಾಭಾವದಿಂದ ಸತ್ತಾಗ ಕೂಡಾ ಈ ಬಲಾತ್ಕಾರದ ಮತಾಂತರಗಳಿಂದಾವ ಮನೋವೇದನೆ ನನಗಾಗಿರಲಿಲ್ಲ. ಜುಲುನೆಯ ಮತಾಂತರಕ್ಕಿಂತ ಮರಣವೇ ವಾಸಿ ಆದರೆ ಈ ಬಲಾತ್ಕಾರದ ಧರ್ಮಾಂತರಗಳ ವಿರುದ್ಧವಾಗಿ ಒಬ್ಬನೇ ಒಬ್ಬ ಮುಸ್ಲಿಂ ಪ್ರಮುಖನು ಮಾತಾಡ್ದುದುದಿದೆಯೇ?"— ಸರ್ದಾರರು ಈ ಮಾತನ್ನು ನಿಷೇಧಿಸಲು ಇಬ್ಬರು ಮೂವರು ಮುಸ್ಲಿಂ ಪ್ರತಿನಿಧಿಗಳೆದ್ದು ನಿಂತು 'ಮುಸ್ಲಿಂ ಪ್ರಮುಖರು ಜುಲುಮೆಯ ಧರ್ಮಾಂತರಗಳನ್ನು ಪ್ರತಿಭಟಿಸಿದ್ದಾರೆ' ಎಂದರು. ತನ್ನೆಲ್ಲಾ ಟೀಕೆಗಳೂ ಮುಸ್ಲಿಂ ಲೀಗ್ ನಾಯಕರ ಮೇಲೆಂದ ಸರ್ದಾರರಂಬಾಣ, ಲೀಗನ್ನೇ ಹೆಸರೆತ್ತಿ ಕೇಳಬೇಕಲ್ಲದೆ 'ಮುಸಲ್ಮಾನರು' ಎಂಬ ಸಾಮಾನ್ಯರನ್ನು ಉಪಯೋಗಿಸಬಾರದೆಂದು ನಿಷೇಧಿಸಿದರು. ಸರ್ದಾರರು ತನ್ನ ಭಾಷಣ ಮುಂದುವರಿಸುತ್ತಾ:–

ಹಿಟ್ಲರನ ಗತಿಯೊದಗೀತು

"ಬಿಹಾರಿನ ನಂತರ ಜನ ಒದಲಾವಣೆಯ ಸೂಚನೆಗಳು ಲೀಗಿನಿಂದ ಬರುತ್ತಿವೆ. ಹಾಗೆ ಮಾಡುವ ನಿಮಗೆ ಸ್ವಾಗತವಿದೆ. ಆದರೆ, ಅಂದು ಹಿಟ್ಲರನೂ ಪ್ರಯತ್ನಿಸಿ ನೋಡಿದ್ದ ಕೆಲಸವಿದು ಎಂಬುದು ನೆನಪಿರಲಿ. ನೀವೂ ಅದನ್ನು ಮಾಡುವಿರಾದರೆ ಹಿಟ್ಲರನನ್ನು ಆಹುತಿಗೊಂಡ ಅದೃಷ್ಟ ನಿಮ್ಮನ್ನೂ ಆಹುತಿ ಪಡೆಯಲಿದೆ ದೇವರಾಣೆಯಿಟ್ಟು ಪ್ರಾರ್ಥಿಸಿಕೊಳ್ಳುತ್ತೇನೆ– ಈ ಗೊಂದಲಗಳನ್ನು ನಿಲ್ಲಿಸಿ ಬಿಡಿರಿ, ನಿಮಗೇನೇ ಮಾಡಬೇಕಾಗಿದ್ದರೂ ಶಾಂತಿ ಮತ್ತು ಪ್ರೇಮ ಪೂರ್ವಕ ಮಾಡಿರಿ. ನೀವು ಗೆಲ್ಲಬಹುದು. ಆದರೆ ಖಡ್ಗವನ್ನು ಖಡ್ಗವೇ ಇದಿರಿಸಲಿದೆ (ಉತ್ಸಾಹ ಧ್ವನಿ) ಖಡ್ಗದಿಂದಾಗಲೀ ರಕ್ತಪಾತದಿಂದಾಗಲೀ ಪಾಕಿಸ್ತಾನವೆಂದಿಗೂ ದೊರೆಯದು. (ಉತ್ಸಾಹಧ್ವನಿ) ಈ ವಿಧಾನದಿಂದಲೇ ಪಾಕಿಸ್ತಾನ ಸಂಪಾದಿಸುವ ಇಚ್ಛೆ ನಿಮ್ಮದಾಗಿದ್ದರೆ, ಮತ್ತೆ ಹಿಂದುಸ್ಥಾನದಲ್ಲಿ ಶಾಂತಿಯಿರದು. ತನ್ನ ಜೊಂಬಾಯಿ ರಂಗವನ್ನು ರದ್ದುಪಡಿಸಿಕೊಳ್ಳುವೆನೆಂದೇ ಲೀಗಿನ ಮುಂದಿದೆ. ಅದಾಗದಿದ್ದರೆ ನಡುಗಾಲ ಸರಕಾರದಲ್ಲಿ ಲೀಗಿಗೆ ಸ್ಥಾನವಿಲ್ಲ". ಎನ್ನುತ್ತಾ ಸರಕಾರೀ ಅಧಿಕಾರಿಗಳು ವಿಶ್ವಾಸಪೂರ್ವಕ ಕರ್ತವ್ಯಪಾಲನೆ ಮಾಡದಿದ್ದರೆ ಅವರನ್ನು ಕೆತ್ತೊಗೆಯುವ ಹೊರತು ಬೇರೆ ಹಾದಿಯಿಲ್ಲವೆಂದು ಸರ್ದಾರರು ಎಚ್ಚರಿಕೆ ಕೊಟ್ಟರು. ಅಗತ್ಯ ಬಿದ್ದಲ್ಲಿ ಸ್ವರಕ್ಷಣೆಗಾಗಿ ಹಿಂಸಯನ್ನುಪಯೋಗಿಸಿ–ಆದರೆ ಆಸ್ಫೋರನ್ನು ಹಿಂಸಿಸಬೇಡಿರೆಂದು ಜನತೆಯನ್ನು ವಿನಂತಿಸಿಕೊಂಡ. ಪರೇಲರು ತನ್ನ ಉಜ್ವಲ ಭಾಷಣ ಮುಗಿಸಿದರು. ಕಾಂಗ್ರೆಸಿನ ಮುಖ್ಯ ಕಾರ್ಯದರ್ಶಿ ಶ್ರೀ ಕೇಸ್ಕರರು ಅನುಮೋದಿಸಿದರು.

ಇದಿರು ವಾದಿಗಳಿಗೆ ಸರ್ದಾರರ ಮಾರ್ಮಿಕ ಉತ್ತರ

ಪರೇಲರ ರಾವನ್ನು ವಿರೋಧಿಸಿದ ಶ್ರೀಮತಿ ಅರುಣಾ ಆಸಫ್ ಅಲಿಗಳ ಮಾತುಗಳಿಗೆ ಸಭೆಯು ಉತ್ಸಾಹಧ್ವನಿಗಳ ಸುಸ್ವಾಗತ ಕೂಟ್ಟತು. 'ಕಾಂಗ್ರೆಸು ತನ್ನ ಹರಂಪರಾಗತ ಕ್ರಾಂತಿ ಘೋರಣೆಯನ್ನು ಬಿಟ್ಟು ಈ ಸಮಜಾಯಿಸುವ ಮನೋವೃತ್ತಿ ವಹಿಸಿದುದು ತಪ್ಪು. ನಡುಗಾಲ ಸರಕಾರದಲ್ಲಿ ರಾಜರ ಪಕ್ಷವಾಗಿ ಲೀಗ್ ಇರುವದರಿಂದ ಅದರಲ್ಲಿ ರಾಷ್ಟ್ರೀಯತೆಯೆಲ್ಲ, ಅದೊಂದು ಸರಕಾರವೇ ಅಲ್ಲ, ಖಡ್ಗಕ್ಕೆ ಖಡ್ಗವೆಂಬ ಸರ್ದಾರರ ಮಾತು ಪರ್ಯಾಮಾನ್ಯ. ಆದರೆ ಈ ಖಡ್ಗಪ್ರಯೋಗ ಬ್ರಿಟಿಷರ ಮೇಲೆಯೇ ಆಗಬೇಕು" ಎಂದರು ಅರುಣಾ. ಗಡಿನಾಡಿನ ಹೆಕೀಮ್ ಅಬ್ದುಲ್ ಜಲಾಲ್ ನಾಡ್ವಿಯವರು ಸರ್ದಾರರ ರಾವನ್ನು ವಿರೋಧಿಸುತ್ತಾ ಸರ್ದಾರ್ ಸ್ಟೂರ್ತಿಯಭ್ಯಸ್ಥ ಕರಿಣವಾಗಿ ಖಂಡಿಸಿದರು. 'ರಾಷ್ಟ್ರದ ಜಂತೆಕಲಹವನ್ನು ಪ್ರೇರೇಪಿಸುವ ಸರ್ದಾರ್ ಸ್ಪೂರ್ತಿಯು ಜನ್ನರಂತಹದೇ. ಕಾಂಗ್ರೆಸಿಗರು ಅಹಿಂಸೆಗೆ ಕಟ್ಟುಬಿದ್ದಿದ್ದಾರೆ; ಬ್ರಿಟಿಷ್ ಶಕ್ತಿಗಳಿದಿರು ಅಹಿಂಸೆಯಿಂದಲೇ ಹೋರಾಡಿದ್ದಾರೆ; ಅಂದಮೇಲೆ ಅವರು ತಮ್ಮ ಸ್ವಂತ ಸಹೋದರರ ಮೇಲೆ ಕೈಯೆತ್ತುವುದಾದರೂ ಹೇಗೆ? (ಉತ್ಸಾಹಧ್ವನಿ) ಸರ್ದಾರರ ಭಾಷಣವು ಹಿಂಸೆಯನ್ನು ಭೂತದಿಸಿದೆ. ಕಾಂಗ್ರೆಸ್ ತನ್ನ ಅಹಿಂಸಾ ತತ್ವವನ್ನು ಬಿಟ್ಟುಕೊಡ

'ಲೀಗ್-ಹಿಂದೂ ದ್ವಿದಳ ಹಿಟ್ಲರ್‌ಶಾಹಿಯನ್ನು ಕಾಂಗ್ರೆಸ್ ಸದೆಬಡಿಯಬೇಕು' – ನೆಹರು.

ಲಿಚ್ಛಿಸುತ್ತದಾದರೆ ಹಾಗೆಂದು ಬಹಿರಂಗ ಘೋಷಣೆಯೇ ಆಗಲಿ" (ವಿಶೇಷ ಉತ್ಸಾಹಧ್ವನಿ) ಎಂದರು. ಮುಂದಿನ ಮಾತಿನಲ್ಲಿ ಒಂದೆರಡು ಭಾಷಣಗಳಾದಮೇಲೆ ಸರ್ದಾರರು ಉತ್ತರವೀಯುತ್ತಾ ಮಿಡ್ಲಪನ್ನು ಮಿಡ್ಲದಿಂದಲೇ ಇದಿರಿಸಬೇಕೆಂಬ ತನ್ನ ಮಾತನ್ನು ಪುನಃ ಒತ್ತಿಹೇಳಿ "ಹೇಡಿಯಾಗುವದಕ್ಕಿಂತ ಹಿಂಸೆ ಉಚಿತವೇಗಿ ಸುವದುತ್ತಮ ಎಂದು ಮಹಾತ್ಮಾಗಾಂಧಿಯೇ ಹೇಳಿದ್ದಾರೆ. ಅಹಿಂಸೆಯೆಂಬ ಆಯುಧದ ಪ್ರಯೋಗವು ಸಾಮಾನ್ಯ ಜನರ ಶಕ್ತಿಗೆ ಮಿಕ್ಕಿದ ವಿಷಯ. ಆದ್ದರಿಂದಲೇ ಸ್ವರಕ್ಷಣೆಗಾಗಿ, ಕೇವಲ ತನ್ನ ಮತ್ತು ನೆರೆಯವರ ರಕ್ಷಣೆಗಾಗಿ, ಹಿಂಸೆಯನ್ನು ಪಯೋಗಿಸತಕ್ಕದ್ದೆಂದು ಜನರನ್ನು ನಾನು ಒತ್ತಾಯಿಸುತ್ತೇನೆ. ಸಭ್ಯ ಕೇಂದ್ರದಲ್ಲೊಂದು ಸರಕಾರವಿಲ್ಲದ್ದರಿಂದಾಗಿಯೇ ನಾನೀ ಸಲಹೆಕೊಡಲು ಕಾರಣ. ಅಧಿಕಾರ ಬದಲಾವಣೆಯ ಕಾಲದಲ್ಲಿ ಇರುವ ಇಂದಿನ ಸರಕಾರಕ್ಕೆ ಸಪ್ಲವಾತ ಬಡಿದಿದೆ" (ನಗು) ಎಂದರು. ಅರುಣಾರ್ಜೋಧನೆಯು ಕ್ರಾಂತಿ ಸ್ಫೂರ್ತಿಯ ಕುರಿತು ಉತ್ತರ ಕೊಡುತ್ತಾ "ಕಲವರು ತಾವು ಕ್ರಾಂತಿ ನಿರ್ಮಿಸುವವರೆಂದು ತಮ್ಮಷ್ಟಕ್ಕೆ ಭಾವಿಸಿಕೊಂಡು ಆತ್ಮ ವಂಚನೆಮಾಡಿಕೊಳ್ಳುತಿದ್ದಾರೆ. ಇದು ನಾಯಿಯ ಒಂದು ಕಲ್ಪನಾ ಕಥೆಯಂತಿದೆ. ನಾಮಾನು ತುಂಬಿಕೊಂಡು ಹೋಗುತ್ತಿದ್ದ ಗಾಡಿಯೊಂದರ ಅಡಿಯಲ್ಲಿ ನಡೆಯುತ್ತಿರುವ ನಾಯಿಯೊಂದು ತಾನು ಚಲಿಸದಿದ್ದರೆ ಗಾಡಿ ನಿಂತು ಬಿಡುತ್ತದೆ ಎಂದು ಭಾವಿಸಿಕೊಂಡ ಗಾದೆಯಿದು (ದೊಡ್ಡ ನಗು) ಶ್ರಮಬದ್ಧ ಸಂಘಟನೆಯಿಂದ ಮಾತ್ರವೇ ಕ್ರಾಂತಿ ಸಾಧ್ಯವಿದೆ" ಎನ್ನುತ್ತಾ ನಡುಗಾಲ ಸರಕಾರವು ಬ್ರಿಟಿಷ್ ಸರಕಾರದೊಡನೆ ಸಹಕರಿಸುತ್ತಿದೆ ಎಂಬ ಆರೋಪವನ್ನು ಅಲ್ಲಗಳೆದು ಕೇಳಿದರು: "ಬ್ರಿಟಿಷರೀಗ ಇಲ್ಲಿಂದ ಗೆ- [illegible] ನಾವು ವರ ಗಂಟು ಮೂಟೆ ಕಟ್ಟಲು ನೆರವಂದರೆ ಸಹಕರಿಸಿದಂತಾಯಿತೆ?" (ನಗು) ಬಾಲ್ಯದಿಂದಲೂ ತನಗೆ ಸ್ಫೂರ್ತಿದಾನ ಮಾಡಿದ್ದ -ಅಖಿಲ ಭಾರತಕ್ಕೆ ಮೇಲ್ಪಂಕ್ತಿಯಾಗಿದ್ದ -ಬಂಗಾಳವು ತನ್ನೊಳಿನ ಪಕ್ಷಭೇದಗಳನ್ನು ಬದಿಗಿಡಬೇಕೆಂದು ಸರ್ದಾರರು ವಿನಂತಿಸಿಕೊಂಡರು. ಅವರ ಠರಾವು ಪಾಸಾಯಿತು. 'ಸ್ವತಂತ್ರ ಸಾರ್ವಭೌಮ ರಿಪಬ್ಲಿಕ್' ಗುರಿಯ ಠರಾವನ್ನು ಆಚಾರ್ಯ ನರೇಂದ್ರ ದೇವರು ತಂದು, ರಾವ್ ಸಾಹೇಬ್ ಪಟ್ವರ್ಧನರು ಅನುಮೋದಿಸಿ, ಸರ್ವಾನುಮತದಿಂದ ಮಂಜೂರಾಯಿತು.

ಎರಡನೇ ದಿನದ ಅಧಿವೇಶನ

ಶಾ. 24ರಲ್ಲಿ ಕಾಂಗ್ರೆಸ್ ಅಧಿವೇಶನ ಪುನರಾರಂಭವಾಗಿ ಸಂಸ್ಥಾನಗಳಲ್ಲೂ ಪ್ರಜಾಪ್ರಭುತ್ವವಿಂಬಗೆಂಬ ಅಭಿಪ್ರಾಯದ ಠರಾವನ್ನು ಅ. ಭಾ. ಸಂಸ್ಥಾಳಕ ಎಂಜಿನಿಯರ್ ಶ್ರೀ ಪಟ್ವಾಭಿಯವರು ತಂದರು. ಭಾರತದ 562 ಸಂಸ್ಥಾನಗಳನ್ನೂ -ಕನ್ಫೆಡರೇಶನ್' ಆಗಿ ಒಂದುಗೂಡಿಸುವ ಹಂಚಿಕೆಯನ್ನು ಅಖ್ರತ ರಾಜರು ನಡಿಸುತಿದ್ದಾರೆಂಬ ಬಗ್ಗೆ ಗುಪ್ತವಾಖಲೆಯೊಂದು ತನಗೆ ದೊರೆತಿದೆ ಎಂದು ತಿಳಿಸಿ ಇಂತಹ ಪ್ರಯತ್ನಗಳು ಪ್ರಜೆಗಳಿಗೆ ಹಿತಕಾರಿಯಲ್ಲ-ಪ್ರಜಾನುಮತಿಯೂ ಆಗಿಲ್ಲ ವೆಂದರು. ಜಮೀನ್ದಾರರಿಗೀಗ ಬುದ್ಧಿ ಬಂದಿರುವಂತೆ ಅಪ್ರಾಗತಿಕ ಆಶ್ರಿತರಾಜರೂ ಕಣ್ಣೆರೆಯಬೇಕೆಂದರು. ಬಲ್ವಂತರಾವ್ ಮೆಹತರ ಅನುಮೋದನೆ ದೊರೆಯಿತು. ಅಶೋಕ ಮೆಹತಾರ ತಿದ್ದುಪಡಿ ಸೂಚನೆಯೊಂದನ್ನು ಅಚ್ಚುತ ಪಟ್ವರ್ಧನರು ಅನುಮೋದಿಸಿದರು ಜ್ವಾಲಾ ಪ್ರಸಾದರ ನುತ್ತೊಂದು ತಿದ್ದುಪಡಿಯನ್ನು ಜೋಶಿ ಮಾಲರು ಅನುಮೋದಿಸಿದರು. ಪಂಡಿತ ನೆಹರುಗಳು ಆಕ್ಷೇಪಗಳಿಗುತ್ತರವಿತ್ತ ಮೇಲೆ ಉಪಸೂಚನೆಗಳು ಹಿಂದೆಗೆದುಕೊಳ್ಳಲ್ಪಟ್ಟು ಠರಾವು ಸರ್ವಾನುಮತದಿಂದ ಸ್ವೀಕಾರಗೊಂಡಿತು.

ಕಾಂಗ್ರೆಸ್ ಘೋಷಣೆ

ಬ್ರಿಟನ್ನಿನೊಡನೊಂದು ಮೈತ್ರೀಕರಾರು (ಸಮಾನತೆ ಮತ್ತು ಐಕ್ಯತೆಯವರ ಸ್ವತಂತ್ರ ಸಮ್ಮತಿಯಂತೆ) ಮಾಡಿಕೊಳ್ಳತಕ್ಕದ್ದೆಂಬುದು ಘಟನಾ ಸಮಿತಿ ನಿರ್ಣಯಕ್ಕೆರುವ ಒಂದು ಶರ್ತ. ಭಾರತದೊಳಗಿನ ರಾಜ್ಯಾಂಗರಚನೆಯು ಘಟನಾ ಸಮಿತಿಯಲ್ಲಿ ಯಾವ ರೀತಿ (ಸಮಿತೀ ಯೋಜನೆಯ ಸೂತ್ರಾನುಸಾರ) ತೀರ್ಮಾನಿಸಲ್ಪಡುವದೋ ಅದನ್ನು ಚಾಚೂ ತಪ್ಪದೆ ಅಂಗೀಕರಿಸಿಕೊಳ್ಳಲು ಬ್ರಿಟಿಷ್ ಸರಕಾರ ಬದ್ಧವಿದೆ.

ಘಟನಾ ಸಮಿತೀ ಸಂಬಂಧದಲ್ಲಿ ಬ್ರಿಟಿಷ್ ಯೋಜನೆ ಹಾಕಿರುವ ಚೌಕಟ್ಟಿನಂತೆ, ವಿದೇಶ ಸಂಬಂಧ, ರಕ್ಷಣೆ, ವಾರ್ತೆ ಸಂಚಾರ ವಹಿವಾಟುಗಳು ಮಟ್ಟಿಗೆ ಬಾತೆಗಳಿಗೆ ಬೇಕಾಗುವ ಹಣಕಾಸಿನ ಅಧಿಕಾರವು ಕೇಂದ್ರ ಸರಕಾರಕ್ಕಿರತಕ್ಕದ್ದು. ಉಳಿದ ಎಲ್ಲಾ ಅಧಿಕಾರಗಳೂ ಪ್ರಾಂತಿಕ ಸರಕಾರಗಳಿಗಿರತಕ್ಕದ್ದು.

ಇಡೀ ಭಾರತದ 11 ಪ್ರಾಂತ್ಯಗಳನ್ನು ಎ, ಬಿ, ಸಿ- ಎಂಬ ಮೂರು ಪಂಗಡಗಳಾಗಿ ವಿಂಗಡಿಸಲಾಗಿದೆ. ಮದ್ರಾಸ್, ಬೊಂಬಾಯಿ, ಬಿಹಾರ್, ಸಂಯುಕ್ತ ಪ್ರಾಂತ್ಯ, ಮಧ್ಯಪ್ರಾಂತ್ಯ, ಒರಿಸ್ಸಾ- ಈ ಆರು ಪ್ರಾಂತಗಳು 'ಎ' ಪಂಗಡಕ್ಕೂ, ಬಂಗಾಳ, ಅಸ್ಸಾಮ್- ಇವೆರಡು ಪ್ರಾಂತ್ಯಗಳು 'ಬಿ' ಪಂಗಡಕ್ಕೂ, ಸಿಂಧ್, ಪಂಜಾಬು, ಗಡಿನಾಡು- ಈ ಮೂರು ಪ್ರಾಂತ್ಯಗಳು 'ಸಿ' ಪಂಗಡಕ್ಕೂ ಸೇರುತ್ತವೆ.

ಈ ಪ್ರಾಂತಿಕ ಸಂಗಡಗಳಲ್ಲಿ ಸೇರುವ ಅಥವಾ ಸೇರದಿರುವ ಸ್ವಾತಂತ್ರ್ಯ ಪ್ರತಿಯೊಂದು ಪ್ರಾಂತ್ಯಕ್ಕಿದೆಯೊ ಇಲ್ಲವೋ, ಆದು ಕಡ್ಡಾಯವೋ ಐಚ್ಛಿಕವೋ ಎಂಬ ಕುರಿತೇ ಆದಿಯಿಂದೀ ವರೆಗೂ ಕಾಂಗ್ರೆಸಿಗೂ ಲೀಗಿಗೂ ಭಿನ್ನಾಭಿಪ್ರಾಯಗಳಿವೆ ಬ್ರಿಟಿಷ್ ಯೋಜನೆ ಮತ್ತು ಪೇಳಿಕೆಗಳ ಎರಡು ಅಭಿಪ್ರಾಯಗಳಿಗೂ ಅಸ್ಪದವಿತ್ತಿವೆ. ಆದ್ದರಿಂದ ಫೆಡರಲ್ ಕೋರ್ಟು ತೀರ್ಮಾನಿಸಬಹುದೆಂದು ಕಾಂಗ್ರೆಸ್ ಹೇಳಿದೆ; ಲೀಗ್ ಒಪ್ಪುವದಿಲ್ಲ. ಲಂಡನ್ನಿನಲ್ಲಿ ಮುಖ್ಯವಾಗಿ ನಡೆಯಲಿಕ್ಕಿರುವದು ಇದರ ಅರ್ಥವಿವರಣೆಯೇ.

ಘಟನಾಸಮಿತಿಯ ಸಭಾ ಕ್ರಮ ಹೀಗಿದೆ:-ಬ್ರಿಟಿಷ್ ಭಾರತದ ಒನಸಂಖ್ಯೆಯಾ ಮಿಲಿಯಕ್ಕೊಬ್ಬ ಪ್ರತಿನಿಧಿಯಂತೆ ಜಾತೀವಾರಿಗಿ ಪ್ರಾಂತಿಕ ಎನೆಂಬ್ಲಿಗಳಿಂದ ಈ ಮೊದಲೇ ಆರಿಸಲ್ಪಟ್ಟಿರುವ ಪ್ರತಿನಿಧಿಗಳು (ನವಢಿಲ್ಲಿಯ ಸಭಾಭವನದಲ್ಲಿ ಇದೇ ತಾ. 9-12-46ನೇ ಸೋಮವಾರ ಮಧ್ಯಾಹ್ನ 11 ಘಂಟೆಗೆ ಪ್ರಥಮ ಸಭೆ ಸೇರಿ ಸಭೆಗೊಬ್ಬ ಅಧ್ಯಕ್ಷನನ್ನು ಜನಾಯಿಸಿಕೊಳ್ಳಬೇಕು. ಆಂತೆಯೇ ಬೇರೆ ಕಾರ್ಯಕ್ರಮಾಧಿಕಾರಿಗಳ ಚುನಾವಣೆಗಳೂ ಇತರ ನಿಶ್ಚಯಗಳೂ ಆಗಬಹುದು. (ಅಧ್ಯಕ್ಷ ಚುನಾವಣೆ ನಡೆಯು

THE
Bombay Lief Assurance Company Ltd.
(ESTD 1908)
A PREMIER INSURANCE COMPANY
New Business in 1945 - - 2,77,23,100.
KOCHIKAR BROTHERS, LTD.
(ESTD. 1910)
Chief Agents for South India including
Travancore, Cochin and Mysore State
New Business in 1945 in our area:- Over 5 Millions.
OUR Expert advice gained by 35 years Experience is at your door FREE.
Drop a card to any of our Offices at —
MADRAS * BANGALORE * MADURA * CALICUT
TRIVENDRUM * UDIPI * AND BOMBAY.

ವ ತಾ. 9ರ ಸಭೆಯ ಅಧ್ಯಕ್ಷರಿಂಗಿ ಈಂದ್ರ ಎಸೆಂಬ್ಲಿಯ ಸರ್ವ ಪ್ರಥಮ ಏರಿಯ ಸದಸ್ಯರಾಗಿರುವ ಪಾರ್ಟ್ಟಾದ ಡಾ| ಸಚ್ಚಿದಾನಂದಸಿಂಹರನ್ನು ನೇಮಿಸಲಾಗಿದೆ.)

ಆ ಮೇಲೆ ಆಶ್ರಿತರಾಜರ ಪರವಾಗಿ ಅವರಿಂದಾರಿಸಲ್ಪಟ್ಟಿರುವ 'ಸಂಧಾನ ಸಮಿತಿ' ಯೊಂದಿಗೆ ವ್ಯವಹರಿಸಲು ಈ ಘಟನಾ ಸಮಿತಿ ಸಭೆಯು ತನ್ನ ಪರವಾಗಿ ಒಂದು ಸಮಿತಿಯನ್ನು ಆರಿಸಿಕೊಳ್ಳುವುದು. ಭಾವೀ ಭಾರತದ ಕೇಂದ್ರ ಸರಕಾರ ಮತ್ತು ಆಶ್ರಿತ ರಾಜ್ಯಗಳೊಳಗಿರಬೇಕಾದ ಸಂಬಂಧಗಳನ್ನು ಇವೆರಡು ಸಮಿತಿಗಳು ಒಟ್ಟಾಗಿ ಪರ್ಯಾಲೋಚಿಸಿ ನಿರ್ಧರಿಸಬೇಕು. ಹಾಗೆ ಸಂಬಂಧ ನಿರ್ಧಾರವಾದ ಮೇಲೆ ಬ್ರಿಟಿಷ್ ಭಾರತದ ಪ್ರಾಂತ್ಯಗಳಂತೆಯೇ ಆಶ್ರಿತ ರಾಜ್ಯಗಳಿಂದಲೂ ಆರಿಸಲ್ಪಟ್ಟ ಪ್ರತಿನಿಧಿಗಳು ಆ ಮೇಲಿನ ಘಟನಾ ಸಮಿತಿ ಸಭೆಗಳಲ್ಲಿ ಭಾಗವಹಿಸುವರು.

ಅಧ್ಯಕ್ಷ ಚುನಾವಣೆ, ಸಂಧಾನ ಸಮಿತಿ ಚುನಾವಣೆಗಳು ನಡೆದಂತೆಯೇ ಅಲ್ಪ ಸಂಖ್ಯಾಕರ ಹಿತಸಂರಕ್ಷಣೆ ನೋಡುವ ಒಂದು ಸಮಿತಿಯೂ ನೇಮಕಗೊಳ್ಳುವದು. ಆ ಮೇಲೆ ಎ ಬಿ ಸಿ ಪ್ರಾಂತಿಕ ಪಂಗಡಗಳು ಪ್ರತ್ಯಸ್ಪ್ರತ್ಯೇಕ ಸಭೆ ಸೇರಿ ತಂತಮ್ಮ ಪಂಗಡದ ರಾಜ್ಯ ಸೂತ್ರಗಳನ್ನು ತಯಾರಿಸುವವು

ಇತ್ತ ಪಂಗಡಗಳ ಒಳ ವ್ಯವಸ್ಥೆ, ಆತ್ತ ಆಶ್ರಿತ ರಾಜ್ಯಗಳು ಮತ್ತು ಕೇಂದ್ರಗಳೊಳಗಿನ ಸಂಬಂಧಗಳ ಮೂಲ ಸೂತ್ರಗಳ ನಿರ್ಧಾರವಾದ ಮೇಲೆ ಕೇಂದ್ರ–ಪ್ರಾಂತಿಕ ಪಂಗಡ, ಕೇಂದ್ರ–ಆಶ್ರಿತ ರಾಜ್ಯಗಳೊಳಗಿನ ಸಂಬಂಧಗಳ ಸೂಕ್ಷ್ಮ ಪರ್ಯಾಲೋಚನೆಗೂ, ಕೇಂದ್ರಾಡಳಿತೆಯ ಖಾತೆಗಳು ಮತ್ತು ಆಏಲ ಭಾರತೀಯ ಸ್ವರೂಪದ ಇತರ ವಿಷಯಗಳ ನಿರ್ಧಾರಕ್ಕೂ ಘಟನಾ ಸಮಿತಿಯ ಸಾಮಾನ್ಯ ಸಭೆಗಳು ಸೇರುತ್ತಾ ಹೋಗುವವು ಈ ಸಮಿತಿಯು ಸ್ವತಂತ್ರ ಸಾರ್ವಭೌಮಾಧಿಕಾರವುಳ್ಳದ್ದಿದ್ದು ಅದರ ನಿರ್ಧಾರಗಳು ಪ್ರಶ್ನಾತೀತವಿವೆ

ಕೊನೆಯ ಜಂಕದಲ್ಲಿ ಇಕ್ಕಡೆಯವರ ಸ್ವತಂತ್ರ ಸಮ್ಮತಿಗೊಂಪಟ್ಟು ಭಾರತ–ಬ್ರಿಟನ್ ಸ್ನೇಹ ಸಂಬಂಧ ಕರಾರೊಂದು ನಡೆಯಲಿಕ್ಕೆದೆ

ಆಗ ಸ್ವತಂತ್ರ ಭಾರತವು ರೂಪುಗೊಂಡಂತಾಗುವದು

The Canara Mutual Assurance Co , Ltd

ನೋಟೀಸು

ಶ್ರೀ ಯಸ್. ಜಿ. ನಿಂಗಪ್ಪನವರ ಮಗ ಶ್ರೀ ಜಿ ಎನ್. ಸಿದ್ದೋಜಿ ರಾವ್, ಕ್ಲೋತ್ ಮರ್ಚಂಟ್, ಕಲ್ಲುಸಂಕ, ಉಡುಪಿ, ಇವರ ಜೀವವಿಮಾ ಪಾಲಿಸಿ ನಂಬ್ರ 6328 ಕಳೆದು ಹೋದ ಬಗ್ಗೆ ನೋಟೀಸು ಕೊಡಲಾಗಿದ್ದು, ಈ ತಾರೀಕಿನಿಂದ ಒಂದು ತಿಂಗಳೊಳಗಾಗಿ ನಮ್ಮ ಶಡೆಗೆ ತಕರಾರು ಬಂದಿದ್ದಲ್ಲಿ ಡುಪ್ಲಿಕೇಟ್ ಪಾಲಿಸಿಯನ್ನು ಕೊಡಲಾಗುವುದು

T R A. Pai,
Managing Director.

Udipi, 30—11—1946

ನೆಹರು–ಆಟ್ಲಿ–ಜಿನ್ನಾ ತಂತೀ ಚರ್ಚೆ

ಈ ಪರಸ್ಪರ ಸಂಭಾವನೆಗಳೊಳಗೆ ಸೂಕ್ಷ್ಮ ತಾರತಮ್ಯವಿದೆ!

ನೆಹರು - ವೈಸರಾಯರಿಗೆ

ಪತ್ರ, ನವಂಬರ್ 26,

ಪ್ರಿಯ ಲೋರ್ಡ್ ವೇವೆಲ್,

ಬ್ರಿಟಿಷ್ ಸರಕಾರದ ಆಮಂತ್ರಣದ ಕುರಿತು ನೀವೀ ದಿನ ತಿಳಿಸಿದುದನ್ನು ನಾನು ನನ್ನ ಸಹೋದ್ಯೋಗಿಗಳೊಂದಿಗೆ ಚರ್ಚಿಸಿದೆ ನಾವದಕ್ಕಾಗಿ ಬ್ರಿಟಿಷ್ ಸರಕಾರಕ್ಕೆ ಕೃತಜ್ಞರಿದ್ದೇವೆ. ಆದರೀ ಸಂದರ್ಭದಲ್ಲಿ ನಾವು ಲಂಡನಿಗೆ ಹೋಗಲು ತಯಾರಿಲ್ಲ ಇಲ್ಲಿಯೇ ಇರುವ ಬ್ರಿಟಿಷ್ ಸರಕಾರದ ಪ್ರತಿನಿಧಿಗಳ ಸಂಭಾಷಣೆಗೆ ಯಾವಾಗಲೂ ಸಿದ್ಧರಿದ್ದೇವೆ ಬ್ರಿಟಿಷ್ ಮಂತ್ರಿ ಸಮಿತಿ ಇಲ್ಲಿಗೆ ಬಂದಂದಿನಿಂದ ಆಗಿರುವ ವಿವಿಧ ನಿರ್ಧಾರಗಳನ್ನೀಗ ಪುನರಾವಲೋಚಿಸಲು ಹೊರಟಂತೆ ಕಾಣುತ್ತದೆ. ದೀರ್ಘಾವಧಿ ಯೋಜನೆಗೂ ಸ್ಪಷ್ಟ ಒಪ್ಪಿಗೆ ಕೊಟ್ಟೇ ಮುಸ್ಲಿಂ ಲೀಗು ಇಂದಿನ ಸರಕಾರದಲ್ಲಿ ಸ್ಥಾನಗಳನ್ನು ಸಂಪಾದಿಸಿಕೊಂಡಿತು ಇಲ್ಲವಾದರೆ ಅವರು ನಡುಗಾಲ ಸರಕಾರ ಸೇರಲು ಎಷ್ಟಕ್ಕೂ ಸಾಧ್ಯವಿರಲಿಲ್ಲ ಈಗ ಘಟನಾ ಸಮಿತಿಯಲ್ಲಿ ತಾನು ಭಾಗ ವಹಿಸುವದಿಲ್ಲವೆಂದೂ ಲೀಗ್‌ಅಷ್ಟೇ ಸ್ಪಷ್ಟವಾಗಿ ಹೇಳಿದೆ, ಪೂರ್ವನಿಶ್ಚಯದಂತೆ ದಶಂಬರ್ 9ಕ್ಕೆ ಘಟನಾ ಸಮಿತಿ ಸೇರಲೇ ಬೇಕೆಂಬುದಕ್ಕೆ ನಾವು ವಿಶೇಷ ಮಹತ್ವ ಕೊಡುತ್ತೇನೆ ನಿಮಗಿನು ತಿಳಿದಿದೆ ಇಂತಹ ಸಂದರ್ಭದಲ್ಲಿ ಲಂಡನಿಗೆ ಬರಬೇಕೆಂಬ ಆಮಂತ್ರಣವು ಬ್ರಿಟಿಷ್ ಮಂತ್ರಿ ಸಮಿತಿಯ ಹೇಳಿಕೆ ಮತ್ತು ನಡುಗಾಲ ಸರಕಾರದ ಸ್ಥಾನತೆಯ ಮೂಲಕ ಬಹು ಶೀಕಷಾಗಿ ನಿರ್ಣಯಿಸಲ್ಪಟ್ಟಿರುವ ಎಲ್ಲಾ ಸಮಸ್ಯೆಯನ್ನೂ ಪುನರಾಲೋಚನೆಗೆತ್ತಿಕೊಳ್ಳಲಿಕ್ಕಾಗಿಯೇ ಎಂದು ನಮಗನ್ನಿಸುತ್ತದೆ ಈ ನಿರ್ಧಾರಗಳೆಲ್ಲಾ ಪುನರ್ವಿಮರ್ಶೆಗೆ ಬಿದ್ದುವೆಂದಾದರೆ ಜನತೆಯ ಹೃದಯಕ್ಕುದು ದೊಡ್ಡ ಆಘಾತವೂಡ್ಡುವದು ದು ನಮ್ಮ ಅಭಿಪ್ರಾಯ. ಆದ್ದರಿಂದ ತೀರ್ಮಾನಗೊಂಡಿರುವ ಸಮಸ್ಯೆಗಳ ಗೊಡವೆಗ ಇನ್ನೊಮ್ಮೆ ಹೋಗದೆ, ನಿಶ್ಚಿತ ದಿನದಲ್ಲಿ ಘಟನಾ ಸಮಿತಿ ಸೇರಲೇಬೇಕೆಂದು. ನಾವೆನ್ನುತ್ತೇವೆ ಈ ಸಭೆಯಾದರೂ ಸದಸ್ಯರ ಚುನಾವಣೆ ನಡೆದು ತಿಂಗಳುಗಳು ಕಳೆದ ಮೇಲೆಯೇ ಸೇರುತ್ತಿದೆ ಎಂಬುದು ನೆನಪಿರಲಿ. ಇನ್ನೂ ಅದನ್ನು ಹಿಂದೆ ಹಾಕಿದಲ್ಲಿ ಬಹುತೇಕವಾಗಿ ಆ ಯೋಜನೆಯನ್ನೇ ಮನ್ನಾಪಡಿಸಿಬಿಡಂತಾದೀತು ಸಾರ್ವತ್ರಿಕ ಶಂಕೆ ಸಂದೇಹಗಳೆದ್ದಾವು, ಇದು ಅನಪೇಕ್ಷಣೀಯ ಮಾತ್ರವಲ್ಲ, ಇಂತಹ ಸನ್ನಿವೇಶದಲ್ಲಿ ಪ್ರತ್ಯಕ್ಷ ಹಿಂಸಾತ್ಮಕ ಪ್ರಚಾರಗಳಿಗನುಕೂಲವೂ ದೊರೆಯಬಹುದು. ಆದ್ದರಿಂದ ಅಲ್ಪಾವಧಿಗಾದರೂ ರಾಷ್ಟ್ರ ಬಿಟ್ಟು ಹೊರಡಲು ನಮ್ಮಿಂದ ಸಾಧ್ಯವಿಲ್ಲ ಎರಡು ವಾರಗಳೊಳಗೆ ಸೇರಲಿರುವ ಘಟನಾ ಸಮಿತಿಗೆ ಸಿದ್ಧತೆ ಮಾಡುವ ಕೆಲಸವೂ ನಮಗಿದೆ ಏನಾದರೂ ಪಲವ್ಯಂಟಿಂದು ತೋರುತ್ತಿದ್ದರೆ ಇಜ್ಜೆಲ್ಲಾ ಇದ್ದರೂ ನಾವು ಹೊರಡುತಿದ್ದೆವು ಆದರೆ ನಮಗೀಗ ಮಂದಟಾಗ್ಗಿರುವ ದೆಂದರೆ— ಲೀಗಿನ ಒತ್ತಾಯಕ್ಕೊಳಗಾಗಿ ಬ್ರಿಟಿಷ್ ಸರಿ ತೀ ಯೋಜನೆಯು ರದ್ದಾಗಪಡಲಿಲ್ಲದೆ, ಆಥವಾ ಗಣ್ಯರೂಪಾಂತರ ಹೊಂದಲಿದೆ, ನಾವೂ ಅದರಲ್ಲಿ ಭಾಗಿಯಾಗಬೇಕಾಗುತ್ತದಂಬುದೊಂದೇ ಹಾಗೆ ಎಂಬುದಂದೆಂದರೆ ಲೀಗಿನ ಪಿಕಲಾಟಗಳಿಗೆ ಮತ್ತು ಹಿಂಸಾಪ್ರೇರಣೆಗೆ ಅವಕಾಶವೊದಗಿಸಿಕೊಡುವಹಂದೇ ಅರ್ಥ ಇದು ಮಹಾ ಅನರ್ಥಗಳನ್ನು ನಿರ್ಮಿಸಬಹುದು. ಆದ್ದರಿಂದ, ಈ ಮೊದಲೊಪ್ಪಲ್ಪಟ್ಟ ಯೋಜನೆಗಳು ಜಾರಿಯಲ್ಲಿ ಬರುವವೆಂಬುದೂ, ಘೋರಣೆಯು ಯಥಾಪ್ರಕಾರ ಮುಂದುವರಿಯುವದೆಂಬುದೂ ಪ್ರಥಮತಃ ಸ್ಪಷ್ಟವಾಗಿಕೊಳ್ಳಬೇಕು. ಈಗಲೇ ಸಾಕಷ್ಟು ಆಏಶ್ವಾಸ ಹಬ್ಬಿದೆ ಇನ್ನು ಅದಕ್ಕೆ ಹೊಸತಾಗಿ ಏನಾದರೂ ಸೇರಿಕೊಂಡಲ್ಲಿ ಇಡೀ ಯೋಜನೆಯೇ ನಿರ್ನಾಮವಾಗಿ ಹೋಗುವದು, ಮತ್ತದರ ಬದಲಿಗೆ ಇನ್ನೊಂದನ್ನು ತುರುಕಿಸುವೆವೆಂದರೂ ಆಗದು ಲಂಡನಿಗೆ ನಾವೊಂದು ಅವಸರದ ಭೇಟಿ ಕೊಡುವದರಿಂದ ನಿಜಕ್ಕೂ ಫಲ ಬರುವಂತಿಲ್ಲ, ಬದಲಿಗೆ ಸ್ಪತಿಕೂಲ ಪರಿಣಾಮವಾಗುವ ಸಂಭವವೆ ಹೆಚ್ಚಿಗೆ ಇದ್ದರಿಂದ ಸಾಮ್ರಾಟ ಸರಕಾರದ ಆಮಂತ್ರಣವನ್ನು ಅಂಗೀಕರಿಸಲಾಗುವದಿಲ್ಲವೆನ್ನಲು ವಿಷಾದಿಸುತ್ತೇವೆ. ನೀವೀ ಪತ್ರದ ಸಾರವನ್ನು ಸಾಮ್ರಾಟ ಸರಕಾರಕ್ಕೆ ರವಾನಿಸುವಿರೆಂದು ನಂಬುತ್ತೇನೆ.

ನಿಮ್ಮ ಯಧಾರ್ಥವಾದಿ.

ಜವಾಹರಲಾಲ ನೆಹರು.

ಭಾರತ ಕಾರ್ಯದರ್ಶಿ–ವೈಸರಾಯರಿಗೆ

ಕೇಬ್ಲ್, ನವಂಬರ್, 27

ಪ್ರಧಾನ ಮಂತ್ರಿಗಳ ಈ ಮಾತುಗಳನ್ನು ದಯವಿಟ್ಟು ಜವಾಹರಲಾಲರಿಗೆ ಮುಟ್ಟಿಸಿರಿ- "ನೀವು ಲಂಡನಿಗೆ ಬರಲೊಪ್ಪುವಿರೆಂದು ನಾನು ಬಹಳವಾಗಿ ಆತಿಸುತ್ತೇನೆ. ಯಾಕಂದರೆ ನನಗಾಗಲೀ, ಹಿಂದೀ ಪ್ರಶ್ನೆಯ ಸಂಬಂಧವಾಗಿ ಇದೇ ವರ್ಷ ಮೂರು ತಿಂಗಳು ಇಜ್ಜೆಲ್ಲಾ ಗೈರು ಹಾಜರಿದ್ದ ನನ್ನ ಆನುಯಾಯಿಗಳಿಗಾಗಲೀ ಸದ್ಯ ಭಾರತಕ್ಕೆ ಹೊರಡಲು ಸಾಧ್ಯವಿಲ್ಲ ಘಟನಾ ಸಮಿತಿಯು ಜಯತೀಲವಾಗಿ ದಶಂಬರ 9ರಲ್ಲಿ ಸಭೆ ಸೇರುವಂತೆ ಮಾಡಬೇಕಂಬುದೇ ನಮ್ಮ ಸಂಘಾಷಣೆಯ ಉದ್ದೇಶ ಘಟನಾ ಸಭೆ ಸೇರುವ ಆಥವಾ ಮಂತ್ರಿ ಸಮಿತಿ ಮುಂದಿಟ್ಟಿರುವ ಯೋಜನೆಗಳಲ್ಲಾವುದನ್ನೇ ಆದರೂಬಟ್ಟು ಬಿಡುವ ಇಚ್ಛನಮಗಿಲ್ಲ ಅದು ಸಂಪೂರ್ಣವಾಗಿ ಜ್ಯಾರಿಗೆ ಬರುವಂತೆ ನೋಡುವದೊಂದೇ ನಮ್ಮ ಬಯಕೆಯಲ್ಲದೆ, ಅದನ್ನು ಮನ್ನಾಪಡಿಸುವ ಆಥವಾ ಬದಲಾಯಿಸುವ ಉದ್ದೇಶದಿಂದ ನಿಮ್ಮನ್ನೂ ನಿಮ್ಮ ಆನುಯಾಯಿಗಳನ್ನೂ ಲಂಡನಿಗೆ ಕರೆದುದಲ್ಲ ಭಾರತದಲ್ಲಿನ್ನು ಅಸಂಗತ ಕೃತ್ಯಗಳೇನಾದರೂ ನಡೆಯುವ ಮೊದಲೇ, ಪರಿಸ್ಥಿತಿಯನ್ನು ನಾವೀ ಸಂದರ್ಭದಲ್ಲಿ ಒಟ್ಟಾಗಿ ಚರ್ಚಿಸುವ ಆತ್ಯಾವಶ್ಯಕತೆಯನ್ನು ನಿಮಗೆ ಒತ್ತಿ ಹೇಳಬೇಕೆಂದು ಮಂತ್ರಿ ಸಮಿತಿಯ ಮೂವರು ಸದಸ್ಯರು ಪ್ರತ್ಯಸ್ಪ್ರತ್ಯೇಕವಾಗಿಯೂ ಒಟ್ಟಾಗಿಯೂ ನನ್ನನ್ನು ಕೇಳಿಕೊಂಡಿದ್ದಾರೆ ಭಾರತೀಯರೊಡನೆ ನಾವೂ ಹೃತ್ಪೂರ್ವಕ ಸಹಭಾಗಿಗಳಾಗಿರುವ ಗುರಿಯಾದ ಭಾರತದ ಸ್ವತಂತ್ರ್ಯ ಗಡಿಯನ್ನು ಕ್ಷಿಪ್ರ ಹಾಗೂ ನಯವಾದ ರೀತಿಯಿಂದ ಸೇರಲಾಗುವ ಈ ವಿಧಾನಕ್ಕೆ ನೀವು ನಿಮ್ಮ ನೆರವೀಯುವಿರೆಂದು ನಾವು ನಂಬುತ್ತೇನೆ'

ವೈಸರಾಯಿ–ಭಾರತ ಕಕ್ಷಿಟರಿಗೆ

ಕೇಬ್ಲ್, ನವಂಬರ್ 28

ದಯವಿಟ್ಟು ಜವಾಹರಲಾಲ ನೆಹರು ಗಳ ಈ ಕೆಳಗಿನ ಮಾತುಗಳನ್ನು ಪ್ರಧಾನ ಮಂತ್ರಿಗಳಿಗೆ ಮುಟ್ಟಿಸಿರಿ -"ನಿಮ್ಮ ಸಂದೇಶಕ್ಕೆ ಕೃತಜ್ಞನಿದ್ದೇನೆ ದಶಂಬರ್ 9 ಮತ್ತು ಕ್ರಮಶಃ ಕೇರುವ ಘಟನಾ ಸಮಿತಿ ಸಭೆಯನ್ನು ಯಶಸ್ವಿಗೊಳಿಸುವ ನಿಮ್ಮಿ

ಉಡುಪಿ ಬೋರ್ಡಿಂಗ್

ಎಂಡ್

ಲೋಜಿಂಗ್ ಮಧುರಾ.

ತಾ 8—8—1945ರಲ್ಲಿ ಜರಗಿದ ಆರನೆ ಹುಟ್ಟುಹಬ್ಬದ ಸಮಾರಂಭದ ಸಂತೋಷ ಕಾಲದಲ್ಲಿ ನಮಗೆ ಸಕಲ ವಿಧದಿಂದಲೂ ಬೆಂಬಲವಿತ್ತು ಪ್ರೋತ್ಸಾಹಿಸಿದ ಮಾಹನೀಯರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇನೆ ಇದಕ್ಕಿಂತಲೂ ದ್ವಿಗುಣಿತವಾಗಿ ನನ್ನ ಸೇವೆಯನ್ನು ಹೊಸ ವರುಷದಲ್ಲಿ ಸಲ್ಲಿಸಲು ಮಹಾಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನೀಯುವರೆಂದು ನಿರೀಕ್ಷೆ

ಎಲ್. ನರಸಿಂಗ ರಾವ್,
ಪ್ರೊಪ್ರೈಟರ್.

ಚ್ಛೆಯನ್ನು ಶ್ಲಾಘಿಸುತ್ತೇನೆ. ನಿಶ್ಚಿತ ದಿನದಲ್ಲೇ ಸಭೆ ಸೇರಬೇಕು, ಆದರ ಕೆಲಸಗಳು ಪೂರ್ಣತೆಯ ಕಡೆಗೆ ಸಾಂಗವಾಗಿ ಸಾಗಬೇಕು ಎಂದು ನಾವೆಲ್ಲಾ ಆತುರದಿಂದಿದ್ದೇವೆ. ಮತ್ತೀ ಕಾರ್ಯಕ್ಕಾಗಿ ಇತರರೊಡನೆ ಸಹಕರಿಸಲು ನಾವು ಶಕ್ತಿ ಮೀರಿ ಪ್ರಯತ್ನಿಸುತ್ತೇವೆ. ನಾವು ಬಾರಿ ಬಾರಿಗೆ ಹೇಳಿರುವಂತೆ ಮಂತ್ರಿ ಸಮಿತಿ ಯೋಜನೆಗೆ ಸಂಪೂರ್ಣ ಒಪ್ಪಿಕೊಂಡಿದ್ದೇವೆ. ಕೆಲವು ವಿಭಾಗಗಳ ಕುರಿತು ನಮ್ಮ ಅಭಿಪ್ರಾಯಗಳನ್ನು ನಾವು ಮಂತ್ರಿ ಸಮಿತಿಗೆ ಸುಸ್ಪಷ್ಟಗೊಳಿಸಿದ್ದೇವೆ; ಮತ್ತದಕ್ಕನುಗುಣವಾಗಿಯೇ ಅಂದಿನಿಂದಿದು ವರೆಗೂ ವರ್ತಿಸಿದ್ದೇವೆ. ಮತ್ತು ವಿವಾದಾಂಶಗಳೆದ್ದರೆ ಫೆಡರಲ್ ಕೋರ್ಟಿನ ತೀರ್ಮಾನಕ್ಕೊಪ್ಪಿಸಬಹುದು–ನಾವಾ ಕೋರ್ಟು ತೀರ್ಮಾನವನ್ನು ತಿರಸ್ಕರಿಸಬಹುದು–ನಾವಾ ಕೋರ್ಟು ತೀರ್ಮಾನವನ್ನು ತಿರಸ್ಕರಿಸಲು ಬದ್ಧರಿದ್ದೇವೆ ಎಂದು ಕೂಡಾ ಹೇಳಿದ್ದೇವೆ. ಈಗ ನಡೆಯಲಿಕ್ಕೆರುವುದು ಈ ಭಿನ್ನಾರ್ಥಗಳ ಪರಿಶೀಲನೆಯೊಂದೇ ಎಂಬುದು ಪಾರ್ಲಿಮೆಂಟ್ ನಲ್ಲಾದ ಸರಕಾರೀ ಹೇಳಿಕೆಗಳಿಂದ ಹೊಳೆಯುತ್ತದೆ. ಈ ಸಂಬಂಧದಲ್ಲಿ ನಮ್ಮ ಅಭಿಪ್ರಾಯವು ಅತ್ಯಂತ ಸ್ಪಷ್ಟವಿದೆ; ಮತ್ತು ನಾವದಕ್ಕೇನೇ ಸಂಪೂರ್ಣವಾಗಿ ಕಟ್ಟುಬಿದ್ದಿದ್ದೇವೆ. ಅದನ್ನಿನ್ನು ಬದಲಾಯಿಸಲು ನಮ್ಮಿಂದ ಅಸಾಧ್ಯ, ಮತ್ತು ಹಾಗೆ ಮಾಡುವ ಅಧಿಕಾರ ಕೂಡಾ ನಮಗಿಲ್ಲ. ಆದ್ದರಿಂದ ಈಯೊಂದು ಉದ್ದೇಶಕ್ಕಾಗಿ ನಾವು ಲಂಡನಿಗೆ ಬರಬೇಕೆಂದಿಲ್ಲ. ಘಟನಾ ಸಮಿತಿಯ ಪ್ರಥಮ ಸಭೆಯು ಕಾರ್ಯಕ್ರಮಗಳ ನಿರ್ಧಾರ ಮತ್ತು ಕಮಿಟಿಗಳ ನೇಮಕಗಳನ್ನು ಮಾತ್ರ ಮಾಡಲಿದೆ. ಬೇರೆ ಬೇರೆ ನಿಧಾನಗಳ ಕುರಿತು ಭಿನ್ನಾರ್ಥಗಳ ಪ್ರಶ್ನೆಯು ಈ ಸಂದರ್ಭದಲ್ಲೇಳುವಂತಹದೇನೂ ಅಲ್ಲ. ಆದ್ದರಿಂದಈ ಅಧಿವೇಶನದ ಮಟ್ಟಿಗೆ ಎಲ್ಲರೂ ಸಹಭಾಗಿಗಳಾಗಲು ಸಾಧ್ಯವಿದೆ. ಮತ್ತು ಯಾವುದಾದರೊಂದು ವಿಷಯದಲ್ಲಿ ಒಮ್ಮತಕ್ಕೆ ಬಾರದ ಸಂದರ್ಭಗಳಲ್ಲಿ ಅಗನ್ನು ಫೆಡರಲ್ ಕೋರ್ಟಿಗೊಪ್ಪಿಸಿದರಾಯಿತು. ಆದ್ದರಿಂದ ಘಟನಾ ಸಮಿತಿಯ ಪ್ರಥಮ ಅಲ್ಪಾವಧಿಯ ಅಧಿವೇಶನ ಮುಗಿದ ನಂತರವೇ ಆಗತ್ಯ ಬಿದ್ದರೆ ಲಂಡನಿಗೆ ಹೋಗುವದು ನಮ್ಮೆಲ್ಲರ ಮಟ್ಟಿಗೂ ಸಾನುಕೂಲ ಮತ್ತು ಸಾವಕಾಶದ್ದಾಗುವದು. ಆಗ ಸಂಘಾವಣೆಗಳಿಗೂ ಸಾಕಷ್ಟು ಸಮಯ ಸಿಕ್ಕುವದು. ಸಂಗತಿ ಹೀಗಿರುವದರಿಂದಲೂ, ಸದ್ಯಸ್ಥಿತಿಯಲ್ಲಿ ನಮಗೆ ಭಾರತವನ್ನು ಬಿಡುವದಸಾಧ್ಯವಾಗಿರುವದರಿಂದಲೂ, ನಮ್ಮ ಲಂಡನಿನ ಭೇಟಿಯಿಂದ ಪ್ರಯೋಜನವಿಲ್ಲವೆಂದೇ ನಮಗನ್ನಿಸುತ್ತದೆ. ಹೀಗಿದ್ದರೂ ಕೂಡಾ--ಅಥವಾ ಬೇರೆ ವಿಷಯಗಳ ಪರ್ಯಾಲೋಚನೆಗಾಗಿ-ನಾವು ಬರಲೇಬೇಕೆಂದು ನಿಮ್ಮ ಇಚ್ಛೆಯಿದ್ದಲ್ಲಿ ನಾವು ಹಾಗೆ ಮಾಡಲು ತಯಾರಿದ್ದೇನೆ. ಆದರೆ ಘಟನಾ ಸಮಿತಿ ಸೇರುವ ದಶಂಬರ್ ತಾ. 9ಕ್ಕೆ ನಮಗೆ ಮರಳಿ ಬರಬೇಕಾಗಿದೆ'.

ಭಾರತಕಾರ್ಯದರ್ಶಿ—ವೈಸರಾಯಿಗೆ

ಕೇಬ್ಲ್, ನವಂಬರ್ 28.

ದಯವಿಟ್ಟು ಪ್ರಧಾನ ಮಂತ್ರಿಗಳ ಈ ಕೆಳಗಿನ ಉತ್ತರವನ್ನು ಪಂಡಿತ ನೆಹರುಗಳಿಗೆ ಮುಟ್ಟಿಸಿರಿ:— ''ನಿಮ್ಮ ಸಂದೇಶಕ್ಕಾಗಿ ಧನ್ಯವಾದ. ನೀವು ತಿಳಿಸಿರುವ ಕಾಂಗ್ರೆಸ್ ಅಭಿಮತಗಳನ್ನು ಗ್ರಹಿಸಿಕೊಂಡೆ. ಆದರೂ ಘಟನಾ ಸಮಿತಿ ಸೇರುವ ನೊದಲೇ ನೀವಿಲ್ಲಿಗೆ ಭೇಟಿ ಕೊಡುವದು ಅಮೂಲ್ಯವೆಂಬ ನಮ್ಮ ಅಭಿಲಾಷೆ ಈಗಲೂ ಹಿಂದಿನಂತೆಯೇ ಇದೆ. ಈ ಕುರಿತು ನಮ್ಮನ್ನು ಭೇಟಿಯಾಗಲು ಸಮ್ಮತಿಸಿದ್ದಕ್ಕಾಗಿ ನಿಮಗೆ ಬ್ಲಾಫನೆಯಿದೆ. ದಶಂಬರ್ 9ರೊಳಗೆ ನೀವಿಲ್ಲಿಂದ ಮರಳುವಂತಾಗುವ ವ್ಯವಸ್ಥೆ ಮಾಡಲಾಗುವದು.''

ಜಿನ್ನರಿಂದ ಆಟ್ಲಿಯವರಿಗೆ

ಪಂಡಿತ ನೆಹರುಗಳಿಗೆ ಬ್ರಿಟಿಷ್ ಪ್ರಧಾನಿ ಆಟ್ಲಿಗಳು ಕೊಟ್ಟ ಸಂದೇಶವು ಪತ್ರಿಕೆಗಳಲ್ಲಿ ಪ್ರಕಟವಾದ ಮೇಲೆ ಮಿ. ಜಿನ್ನರು ಆಟ್ಲಿಗಳಿಗೆ ಈ ಕೆಳಗಿನ ತಂತಿಬಿಟ್ಟರು:—

'ನೀವು ಪಂಡಿತ ನೆಹರುಗಳಿಗಿತ್ತ ಸಂದೇಶವನ್ನು, ಅವರು ನಿಮಗೆ ಕಳುಹಿಸಿದ್ದ ಸಂದೇಶಗಳನ್ನು ಪ್ರಕಟಪಡಿಸದೇನೇ ಇಂದು (ನವಂಬರ 29) ರಾತ್ರಿ 9 ಘಂಟೆಗೆ ನನಗೆ ಮುಟ್ಟಿಸಲಾಗಿದೆ. ಲಂಡನಿಗೆ ಹೋಗುವ ಆಮಂತ್ರಣವನ್ನು ನಾವು ಸ್ವೀಕರಿಸಿದ ನಂತರ ನಿರ್ಮಾಣಗೊಂಡ ಹೊಸ ಪರಿಸ್ಥಿತಿಯಿದು. ಇಷ್ಟರಲ್ಲೇ ನಡೆದಿರುವ ಸಂಗತಿಗಳು ಸಂಪೂರ್ಣ ಹೊಸತಾದ ಪರಿಸ್ಥಿತಿಯನ್ನೇ ನಿರ್ಮಿಸಿರುವದರಿಂದ, ನೀವು ಸೂಚಿಸಿರುವ ವಿಷಯಗಳಿಗೆ ಮಾತ್ರ ಹೊಂದಿಕೊಳ್ಳಲು ನಾವು ಒಪ್ಪಲಾರೆವು. ಇಡೀ ಪರಿಸ್ಥಿತಿಯನ್ನು ಚರ್ಚಿಸುವ ಅವಕಾಶ ನಮಗಿಲ್ಲದೆ ಹೋದರೆ ನಾನು ಲಂಡನಿಗೆ ಬರುವದರಿಂದ ಫಲವಿಲ್ಲ. ಪರಿಸ್ಥಿತಿಯನ್ನು ಸ್ಪಷ್ಟಪಡಿಸಿ ದಯವಿಟ್ಟು ಕೂಡಲೇ ತಂತಿಕೊಡಿ'

ತಾ. 30ರಲ್ಲಿ ಆಟ್ಲಿಯವರು ಜಿನ್ನರಿಗೆ ಕೊಟ್ಟ ತಂತೀ ಉತ್ತರ–

'ನೀವು ಲಂಡನಿಗೆ ಬರುವಿರೆಂದು ನಾನು ನಂಬುತ್ತೇನೆ. ನಾನು ನೆಹರುಗಳಿಗೆ ಬಿಟ್ಟ ತಂತಿಗಳಿಗೆ ನೀವು ಕಟ್ಟಿದ ಅಪಾರ್ಥಗಳೇ ನಿಮ್ಮ ನಿರಾಕರಣೆಗೆ ಆಧಾರವಾಗಿರಬೇಕು. ದೃಷ್ಟಿ ಪಥದಲ್ಲಿರುವ ಎಲ್ಲಾ ವಿಷಯಗಳನ್ನೂ ಸಂಪೂರ್ಣ ಪರ್ಯಾಲೋಚನೆ ನಡಿಸದಂತೆ ಆತಂಕಿಸುವಂತಹದಾವುದೂ ಅದರಲ್ಲಿಲ್ಲ".

ಮಿ ಜಿನ್ನರು ಆಮಂತ್ರಣ ಅಂಗೀಕರಿಸಿ ತಂತಿ ಬಿಟ್ಟರು: "ಈ ಮುಂಜಾನೆ ತಲಪಿದ ನಿಮ್ಮ ಸಂದೇಶಕ್ಕಾಗಿ ಧನ್ಯವಾದಗಳು ನಿಮ್ಮ ಸ್ಪಷ್ಟೀಕರಣ ಮತ್ತು ಭರವಸೆಗಳು ಬಂದುದರಿಂದ ನಾಳೆ ಲಂಡನಿಗೆ ಹೊರಡುವದೆಂದು ನಾನು ನಿರ್ಧರಿಸಿದ್ದೇನೆ"

ಸ್ಥಿತಿ-ಗತಿ

ಜಿನ್ನರ 'ಚೀಫ್ ಜಸ್ಟೀಸ್'

ನವೆಂಬರ್ ತಾ. 29ರಲ್ಲಿ ಪಾಟ್ನಾದಲ್ಲೊಂದು ತವಾಸೆ ನಡಿಯಿತು. ಸುಮಾರು 30 ವರುಷ ಪ್ರಾಯದ ಮುಸ್ಲಿಂ ಯುವಕನೊಬ್ಬನು ನೆಟ್ಟಿಗೆ ಹೈಕೋರ್ಟಿಗೆ ಬಂದು ಖಾಲಿಯಿದ್ದ ಚೀಫ್ ಜಸ್ಟೀಸರ ಪೀಠ ಹತ್ತಿ ಕುಳಿತುಕೊಂಡ. ಪೋಲೀಸರು ಬಂದು ಅವನನ್ನು ಕೈದುಮಾಡಿದರು. ವಿಚಾರಿಸುವಾಗ 'ಕ್ವಯದೀ ಆಝಮ್‌ರು ನನ್ನನ್ನು ಬಿಹಾರ್ ಚೀಫ್ ಜಸ್ಟೀಸ್ ಆಗಿ ನೇಮಿಸಿದ್ದಾರೆ. ಆದ್ದರಿಂದ ನಾನು ಆ ಕುರ್ಚಿಯನ್ನಾಕ್ರಮಿಸಲೇ ಬೇಕು' ಎಂದವನೆವಾಗ್ಮೂಲ. ಅವನ ತಲೆ ಕೆಟ್ಟಿರಬೇಕೆಂದು ನಂಬಲಾಗಿದೆ.ಈಗ ಪೋಲೀಸ್ ಲೋಕ್-ಅಪ್‌ನಲ್ಲಿದ್ದಾನೆ. ಪ್ರಶ್ನಿಸಿದರೆ ಉತ್ತರವನ್ನೇ ಕೊಡುವದಿಲ್ಲ. ಇನ್ನು ಪಾಕಿಸ್ತಾನೆ ಬಾದಶಹನು ಪಟ್ಟಾಭಿಷೇಕ ಮಾಡಿಸಿಕೊಂಡು ಜೈಲೊಳಗಾಗುವದು ಮಾತ್ರ ಬಾಕಿ!

ಗಾಂಧಿಜೀಯ ದೃಢ ನಿರ್ಧಾರ

ಪೂರ್ವ ಬಂಗಾಳದ ನೌಖಾಲಿ ಮೊದಲಾದ ಕಡೆಗಳಲ್ಲಿ ಸಂಚರಿಸುತ್ತಿರುವ ಗಾಂಧಿಜೀ ಹಿಂದೂ ಮುಸಲ್ಮಾನರೊಳಗೆ ಹೃದಯೈಕ್ಯತೆ ನಿರ್ಮಿಸದೆ ತಾನು ಅಲ್ಲಿಂದ ಮರಳುವಂತಿಲ್ಲವೆಂಬ ಶಪಥ ತೊಟ್ಟಿದ್ದಾರೆ. "ನನ್ನ ಜೀವಮಾನವನ್ನೆಲ್ಲಾ ಇಲ್ಲಿಯೇ ಕಳೆಯಬೇಕಾಗಿ ಬಂದರೂ ತಯಾರೇ" ಎಂದಿದ್ದಾರೆ ಅಲ್ಲಿಯ ದಂಗೆ ಪೀಡಿತ ಸ್ಥಳಗಳಲ್ಲಿ ಅವರು ಕಾಲ್ನಡಿಗೆಯಿಂದಲೇ ತಿರುಗುತಿದ್ದಾರೆ. ತನ್ನ ಉದ್ದ ಕೋಲನ್ನೂರಿಕೊಂಡು ಹೊಲ, ಗದ್ದೆ, ಓಣಿ, ಸಂಕ, ಸೇತುವೆಗಳನ್ನು ದಾಟುಹೋಗುತಿದ್ದಾರೆ. ಒಂದೆಡೆ ಕಾಲಿನೆಗೆ ಬದಿರ ಅಡ್ಡ ಸಂಕ ಹಾಕಿದ್ದರು. ಅದರ ಮಧ್ಯಕ್ಕೆ ಬಂದಲ್ಲಿ ಮುದುಕ ಗಾಂಧಿಜೀಯು ಕಾಲು ಗಡಗಡ ನಡುಗಹತ್ತಿತು ಆಧಾರವಾಗಿ ಇಟ್ಟಿದ್ದ ಬಿದಿರಿನಿಂದ ಕೈಜಾರಿಹೋಯಿತು. ಮುಂಗಡೆ ನಡೆದಿದ್ದ ಗಾಂಧಿಜೀಯ ಭಾಷಾಂತರಕಾರ ನಿರ್ಮಲ ಬೋಸರು ಕಳ್ಳನೆ ಹಿಡಿದು ಕೊಳ್ಳದಿರುತ್ತಿದ್ದರೆ ಗಾಂಧಿಜೀ ಕಾಲಿನೆಗೆ ಬಿದ್ದುಹೋಗುತ್ತಿದ್ದರು. ಆಗ ಗಾಂಧೀ ಪೀಡೆಯು ನಿವಾರಣೆಯೆಂದಿಗೆ, ಇದನ್ನೇ ನೆಪಮಾಡಿ ನಿರ್ಮಲ್‌ಬೋಸ್, ಕಲ್ಕುಷ್‌ಬೋಸ್, ಎಲ್ಲರನ್ನೂ ದಸ್ತಗಿರಿ ಮಾಡಿಸಿ ಎಲ್ಲಾ ಕಂಟಕಗಳನ್ನೂ ನಿವಾರಿಸಿಕೊಳ್ಳುವ ಸುಯೋಗ ಸುಕ್ಕುವರ್ದಿಗಳಿಗೊದಗುತ್ತಿತ್ತು.

ಜಿನ್ನರ ಜಾನುವಾರು ಜಾತ್ರೆ!

"ದೇಶ ತುಂಬ ನಡೆದಿರುವ ಭೀಕರ ಹತ್ಯಾಕಾಂಡಗಳನ್ನು ಗಮನಿಸಿ ಕೇಂದ್ರ ಮತ್ತು ಪ್ರಾಂತಿಕ ಸರಕಾರಿಗಳು ಜನಪಬಲಾವಣೆಯ ಕಾರ್ಯಗಳನ್ನು ಕೂಡಲೇ ಕೈಕೊಳ್ಳಬೇಕು. ಈ ಕುರಿತು ಪೂರ್ಣಾಧಿಕಾರವಿರುವ ಏಕಮಾತ್ರ ವ್ಯಕ್ತಿ ವೈಸರಾಯರು ಈ ವ್ಯವಸ್ಥೆ ಮಾಡಬೇಕು." ಎಂದು ಮಿ. ಜಿನ್ನರಂದಿದ್ದಾರೆ. ಇದು ಅಗದ ಮಾತೆಂದು ಅವರ ಹೊಸ ನಂಟ ಡಾ! ಅಂಬೇಡ್ಕರ್ ಆದಿಯಾಗಿ ಎಲ್ಲರೂ ಹೇಳುತ್ತಿದ್ದಾರೆ, ಹಾಗಾದರೆ ಹಿಂದುಸ್ಥಾನದಲ್ಲಿರುವವರನ್ನೆಲ್ಲಾ ಹಿಂದುಗಳನ್ನಾಗಿಯೂ ಪಾಕಿಸ್ತಾನದಲ್ಲಿರುವವರನ್ನೆಲ್ಲಾ ಮುಸ್ಲಿಮರನ್ನಾಗಿಯೂ ಖಡ್ಡಾಯವಾಗಿ ವಿಂಗಡಿಸಬೇಕು"!

ಹೇಷಾರವ!

"ಪಂಡಿತ ನೆಹರು ಭ್ರಮೆಗೊಂಡಿದ್ದಾರೆ; ಸ್ವಪ್ನಲೋಕದಲ್ಲಿದ್ದಾರೆ. ಈಗಿನದು 1919ನೇ ಶಾಸನದನ್ವಯ ರಚನೆಗೊಂಡಿರುವ ವೈಸರಾಯರ ಕೌನ್ಸಿಲು ಹೊರತು ನಡುಗಾಲ ಸರಕಾರವೇನೂ ಅಲ್ಲ. ನೆಹರು ಎಲ್ಲರಂತೆ ಆದರ ಒಬ್ಬ ಮೆಂಬರ ಹೊರತು ಉಪಾಧ್ಯಕ್ಷನೇನೂ ಅಲ್ಲ. ಕತ್ತೆಯನ್ನು ಆನೆಯೆಂದು ಕರೆಯಬಹುದು; ಆದರೆ ಕತ್ತೆ ಆನೆಯಾಗುವಂತಿಲ್ಲ" ಎನ್ನುತ್ತಾರೆ ಮಿ. ಜಿನ್ನಾ. ನಿಜಕ್ಕೂ! ಜಿನ್ನರನ್ನು ಯಾವ ಹೆಸರಿನಿಂದ ಬೇಕಾದರೂ ಕರೆಯಬಹುದು; ಆದರೆ ಅವರು ಜನ್ಮತೇ!



ಕುಟುಂಬದೊಳಗಿನ ಚಿಲ್ಲರೆ ಬೇನೆ

ಬೇಜವಾಬ್ದಾರಿ ಹಾಕಾ ಮತ್ತು ಸೈದ್ಧಂ ಕಡಗೆ ಸ್ವಲ್ಪ ಹಾಗೆ ಹೋಗುವುದು ಕಶ್ಯಪರುವನ್ನಿಲ್ಲ — ಮತ್ತು ಇನ್ನೊಂದು ಆವಶ್ಯಕತೆಯೂ ಇರುವೆನ್ನಿಲ್ಲ ಕೊಚ್ಚೆಸೊಪ್ಪು, ವಾಂತಿ, ಜಾಡಿಸಿ, ಕಂಬಿ, ಮೈಯೆಲ್ಲಾ, ಹಲ್ಲುಸೊಪ್ಪು ಸ್ಯಾಂಗ್ ಕಾಣಿ ವಿಸಾರ ಇತ್ಯಾದಿ ಅಸಹ್ಯ ಚಟಗಳ ಬೆಡವಿಲಿಕೆಗಳನ್ನು ಜವೇರಿಯನ್ ಜೀವನ ಮಿಕ್ಕರ್ಚರ್ ಎನ್ನಯಿಯಾಗಿ ಗುಂಡಿಹಾಕುತ್ತದೆ. ಕಾಲು ಮತ್ತು ಅಮೋಘಗಳನ್ನು ಪಾಚುಯಾಗಿ ಗೊಂಡ. ಮೂಗಿನ ಮೇಲೆ ಅಪಾಯದಂತೆ ಇರಲಿ ಉಲ್ಲಾಸಗಳನ್ನುತ್ತಿದೆ. ಶಾಶ್ವತಾಗಿ ಯಾವಾಗಲೂ ಇದು ಉಲ್ಲಾಸಗಳಾಗಿದ್ದಾಗಿದೆ ಇದು ಅದು ಬಚ್ಚಿಟ್ಟುವುದನ್ನು ಸುಮಧುರತೆಯೂ ನುತ್ತು ಪ್ರಪಾದಲ್ಲಿ ಕಟ್ಟಿರುವ ಆಟ್ಟಿಕಾಲ್ಯವು (ಅಲ್ಕೈನ್ಸ್ ಮಜಾಜಾಗ್ಯತೆಯ ಉಪಾಯವಾಗಿದೆ) ಡೂಜರ್ಸ್‌ಕ್ಕದ ಲಭ್ಯವಾಗಿದೆ. ಕಮರ್ಷ್ಯಲ್‌ಯೂ (ಜವೇರಿ ವ್ಯಾಪಾರ ಸಾಲಿಯಲ್ಲಿ) ಹಲ್ಲಸಲಿ ರಂಗಾಚಾರ್ಲ್ಲಿಯೂ ಪೋರ್ಮುಕ್ತರೆ

ವಿಷ ಮುಕ್ತವೇರಿಯನ್ ಮ್ಯಾಕ್ಸಂ
ಫೈನನ್ಸ್ ಸ್ಟ್ರೀಟ್, ಮುಂಬಾಯಿ ೩

AMBOL OINTMENT (Regd.)

This is a sovereign remedy for itches, boils, scabies, cuts, burns, pimples and all other skin ailments.

AZAD TOOTH POWDER

A powder that cures tooth ache, bleeding, gum trouble and stops foul smell etc.

AGENTS WANTED.

PRODUCTS OF

THE AMBOL OINTMENT MFG CO.,

MADURA.

● ಮಗ್ಗದ ಸ್ಥಾಲಿಕರಿಗೆ ಸುಸಂದರ್ಭ ●

ನಂಬ್ರ P II ಪರ್ಮಿಟುದಾರರಾದ ಮಗ್ಗದ ವ್ಯಾಲಿಕರು ತಮ್ಮ ಸೂಲಿಗೆ ಬೇಕಾಗುವ ರಂಗುಗಳಿಗೆ ಮಂಗಳೂರು ಇಲ್ಲವೆ ಕಣ್ಣಾನೂರು ರಂಗಿನ ವ್ಯಾಪಾರಸ್ಥರನ್ನು ಅವಲಂಬಿಸಬೇಕಾಗಿತ್ತು. ಈಗ ಅವರಿಗೆ ಬೇಕಾಗುವ ಎಲ್ಲಾ ತರದ ರಂಗುಗಳನ್ನು ಒದಗಿಸಲು ನಾವು ಲೈಸನ್ಸನ್ನು ಪಡೆದಿರುತ್ತೇವೆ.

ಪಿ. ಎ. ಪೈ ಬ್ರದರ್ಸ್, ಉಡುಪಿ.

The Canara Banking Corporation Limited.

(Incorporated in British India, with limited Liability)

Estd. 1906.

Head Office: **UDIPI**, South Kanara.

Authorised Capital	...	Rs 25,00,000
Issued & Subscribed	...	,, 16,00,000
Paid up	... ...	,, 15,87,600
Reserves	... ...	,, 4,60,000
Total Resources Around		,, 2½ Crores.

Branches at– Bombay, Madras, Bangalore, Coimbatore, Salem, Calicut, Hubli, Mysore, Cochin, Mangalore, Madras etc., etc

Banking Business of Every Description Transacted.

ಉಡುಪಿ, ಗುರುವಾರ, ೫–೧೨–'೪೬

ವರ್ಣದ್ವೇಷ

ದಕ್ಷಿಣಾಫ್ರಿಕದ ಬಿಳಿ ಜನರಿಂದ–ಗಾಂಧೀ ಮಿತ್ರನೆಂದು ಪ್ರಸಿದ್ಧಿ ಹೊಂದಿರುವ ಆ ಹಳೇ ಹೆದ್ದು ಜನರಲ್ ಸ್ಮಟ್ಸ್ ಸರ ಕಾರದಿಂದ-ಅಲ್ಲಿರುವ ಹಿಂದೀಯರಿಗೊದಗಿರುವ ಆಪತ್ತು, ಅಪಮಾನಗಳು ಲೋಕ ಪ್ರಸಿದ್ಧವಿವೆ. ಪಶ್ಚಿಮ ಘಾಟೀವಲಯಗಳ ಕಾಫಿ ತೋಟಗಳಿಗೆ ದಕ್ಷಿಣ ಕನ್ನಡಾ ಜಿಲ್ಲೆಯ ಕೂಲಿಗಳನ್ನೊಯ್ಯುತ್ತಿರುವಂತೆಯೇ ಆದಿಯಲ್ಲಿ ದಕ್ಷಿಣಾಫ್ರಿಕದ ತೋಟಗಳ ಕೆಲಸಕ್ಕಾಗಿ ಭಾರತೀಯ ಕೆಲಸಗಾರರನ್ನು ಪುಸಲಾಯಿಸಿಕೊಂಡೊಯ್ಯಲಾಗಿತ್ತು. ವರುಷಗಳು ಸಂದಂತೆ ಜಿಲ್ಲೆ ಹಿಂದೀಯರ ಸಂತಾನ, ಸಂಖ್ಯೆ ಹೆಚ್ಚಿತು; ಅವರು ಅಲ್ಲಿಯವರೇ ಆದರು. ಹಿಂದೀಯರ ವ್ಯಾಪಾರ್ಯ, ಸಂಪರ್ಕಗಳು ಅಲ್ಲಿಯ ಬಿಳಿ ಜನರಿಗಸಹ್ಯವಾಗುತ್ತಿತ್ತಾ ಹೋದುವು. ಈ ಕಪ್ಪು ಜನರನ್ನು ಕೊಳಕು ಪ್ರಾಣಿಗಳಂತೆ ದೂರದಲ್ಲಡಿವ ಹೊರತು ಸಮಾನತೆಯಿಂದ ಕಾಣುವ ಆಂರ ಆ ದ್ವೇಷದ್ವೇಷಕ್ಕದಲ್ಲಿರಲಿಲ್ಲ ದಕ್ಷಿಣಾಫ್ರಿಕದ ಹಿಂದೀಯರ ಜೀವನವೇ ಅಸಹನೀಯವಾಗುವ ಪರಿಸ್ಥಿತಿಯು ಬಿಳಿಯರ ಸಾಮೂಹಿಕ, ರಾಜಕೀಯ ನಿರ್ಬಂಧಗಳಿಂದಾಗಿ ನಿರ್ಮಾಣಗೊಂಡಿತು. ಕಳದ ಹತ್ತು ವರುಷಗಳಿಂದ ಅಲ್ಲಿರುವ ಹಿಂದೀಯರಿಗೆ ನಾಗರಿಕ ಹಕ್ಕುಬಾಧ್ಯತೆಗಳಾವ್ದೂ ಕೊಡಲ್ಪಟ್ಟಿಲ್ಲ; 1946ರಲ್ಲಿ ಮುಂದೆ ಬಂದ 'ಆಸ್ಯಾನರ ಆಸ್ತೀ ಅನುಭೋಗ ಮತ್ತು ಭಾರತೀಯ ಪ್ರಾತಿನಿಧ್ಯ ಕಾನೂನು' ದಕ್ಷಿಣಾಫ್ರಿಕದ ಹಿಂದೀಯರ ಸ್ಥಾನಮಾನಗಳನ್ನು ಪೂರ್ತಿಯಾಗಿ ಕಸಗೊಂಡಿತು. ಕರಿಜನರನ್ನು ಕಸದಂತೆ ಒಂದು ಮೂಲೆಗೆ ಸೇರಿಸಿಬಿಡುವ ಕಸಬರಿಕೆಯೇ ಆದಾಯಿತು. ಈಗ ನಡೆಯುತ್ತಿರುವ ಜಾಗತಿಕ ಸಂಘದ ಸಮಿತೀ ಸಭೆಗಳ ಮುಂದೆ ಹಿಂದೀ ಪ್ರತಿನಿಧಿಗಳಿಟ್ಟಿರುವ ದೂರು ಇದೇ. ಈ ಸಂಬಂಧವಾಗಿ ಅಲ್ಲಿ ನಡೆದಿರುವ ಚರ್ಚೆಗಳು ಲೋಕದ ಕಿವಿಯರಳಿಸಿವೆ. ಬೇರೇನೂ ಇಲ್ಲದೆ ಹೋದರೂ ಪ್ರಚಾರ ಮಾಧ್ಯಮವಿದೆ; ಅಂತೆಯೇ ಸರೀಕ್ಷೆಯೂ ಆಗಿದೆ. ಜಾಗತಿಕ ಸಾಫೆವೆಂಬುದು ಇದೀ ಲೋಕಕ್ಕೇನೇ ನ್ಯಾಯದಾನ ಮಾಡಲು ನಿರ್ಮಾಣಗೊಂಡಿರುವ ಸಂಯುಕ್ತ ಕೂಟ. ನಿರೀಕ್ಷಿಸಬೇಕಾದಷ್ಟು ನಯ ಫೋರಣೆ ಅಲ್ಲಿಲ್ಲವೆಂಬುದು ಮತ್ತೊಮ್ಮೆ ಖಚಿತವಾಗಿದೆ. ಅದರೂ ಹಿಂದೀ ಬೇಡಿಕೆಗೆ ಅರ್ಧಮರ್ಧ ವಿಜಯ ಅಲ್ಲಿ ದೊರೆಯಿತೆಂಬುದನ್ನು ಒಪ್ಪಬೇಕು; ಹಿಂದೀ ಪ್ರತಿನಿಧಿಗಳ ಒಪ್ಪಿಗೆ, ಜನರಲ್ ಸ್ಮಟ್ಸರ ವಿರೋಧವಿದ್ದ ಒಂದು ಸೂಚನೆ ಅಲ್ಲಿ ಮಂಜೂರಾಯಿತ.. ಸ್ಮಟ್ಸರಿಗೆ ಸೋಲಾಯಿತಾದ್ದರಿಂದ ಹಿಂದೀಯರಿಗೆ ವಿಜಯವಾಯಿತೆಂದೇ ಹೇಳಬೇಕು.

ಆ ಸೂಚನೆಯೀಗ ಮಂಜೂರಾತಿ ಹೊಂದಿದುದು ಜಾಗತಿಕ ಸಂಘದ 'ರಾಜಕೀಯ ಮತ್ತು ಕಾಯಿದೇ ಸಮಿತಿ'ಯಲ್ಲಿ ಮಾತ್ರ ಇನ್ನದು ಜಾಗತಿಕ ಸಂಘದ ಜಾಹೀರು ಮಹಾ ಸಭೆಯಲ್ಲಿ ಮಂಜೂರಾಗಬೇಕು; ಹಾಗಾಗಬೇಕಾದರೆ ಅಲ್ಲಿಯ ಮೂರರಲ್ಲಿ ಇಡಂಶದಷ್ಟು ಮತಗಳು ಆದಕ್ಕೆ ದೊರೆಯಬೇಕು. ಹೀಗೆ ಅದರ ಕೆಲಸವಿನ್ನೂ ಪೂರ್ಣವಾಗಿಲ್ಲ; ಅಂತೆಯೇ ಆ ಸೂಚನೆಯಾದರೂ ಸ್ಪಷ್ಟ ನಿರ್ದೇಶಮಾಡುವದಿಲ್ಲ. 'ದಕ್ಷಿಣಾಫ್ರಿಕ ಸರಕಾರವು ತನ್ನ ಫೋರಣೆಯನ್ನು ತಿದ್ದಿಕೊಳ್ಳ ಬೇಕೆಂದು 'ಈ ಜಾಗತಿಕ ಸಂಘವು ಸೂಚಿಸಬೇಕು' ಎಂಬ ಸ್ಪಷ್ಟಶಬ್ದವನ್ನು ಪ್ರಥವು ಈ ಹಿಂದೀ ಪ್ರತಿನಿಧಿಗಳು ತಂದಿದ್ದರು. ಆದಕ್ಕೆವಾತಾವರಣವು ಅನುಕೂಲವಿರಲಿಲ್ಲ ವೆಂದೂಹಿಸಬಹುದು. ಆದ್ದರಿಂದ 'ದಕ್ಷಿಣಾಫ್ರಿಕದ ಹಿಂದೀಯರನ್ನು ಒಪ್ಪಂದಗಳಿಗನುಸಾರವಾಗಿಯೂ,ಅದಕ್ಕೆಸಂಬಂಧಿಸಿದ ಜಾಗತಿಕ ಸಂಘದ ನಿಯಮಗಳಿಗನುಸಾರವಾಗಿಯೂ ನೋಡಬೇಕು. ಪರಿಸ್ಥಿತಿ ಸುಧಾರಣೆಗಾವ ವ್ಯವಸ್ಥೆಕೈಕೊಳ್ಳತಕ್ಕೆಂಬ ಕುರಿತು ದಕ್ಷಿಣಾಫ್ರಿಕ ಮತ್ತು ಹಿಂದೀ ಸರಕಾರಗಳು ಮುಂದಿನ ಜಾಗತಿಕ ಸಂಘದ ಮಹಾ ಸಭೆಗೆ ವರದಿಯೊಪ್ಪಿಸಬೇಕು' ಎಂಬ ಮೇಕ್ಸಿಕೋ ಮತ್ತು ಫ್ರೆಂಚ್ ಪ್ರತಿನಿಧಿಗಳ ಸೂಚನೆಯನ್ನೇ ಹಿಂದೀ ಪ್ರತಿನಿಧಿಗಳು-ಗೀಕರಿಸಿಕೊಂಡರು. ಈ ವಿಷಯವನ್ನು ಅಂತರ್ರಾಷ್ಟ್ರೀಯ ನ್ಯಾಯದು ಸ್ಥಾನಕ್ಕೊಪ್ಪಿಸಬೇಕೆಂಬ ವಾದವೊಡನೆ ಜನರಲ್ ಸ್ಮಟ್ಸರೊಡ್ಡಿದ ವಿರೋಧವು ಫಲಿಸದೆ ಸೂಚನೆ 24 ಅನುಕೂಲ, 19 ಪ್ರತಿಕೂಲ ಮತಗಳಿಂದ ಪಾಸಾಯಿತು. ಅಂತೂ ವಿವಾದವು ವಿಚಾರಣೆಗೆ ಬಿತ್ತು. ಹೊರತು ತೀರ್ಮಾನಗೊಂಡಿಲ್ಲ. ದಕ್ಷಿಣಾಫ್ರಿಕದ ಹಿಂದೀಯರ ಸಂಕಷ್ಟಗಳನ್ನು ದೂರಮಾಡುವ ಅಥವಾ ಆ ತೀರ್ಮಾನವಾಗುವ ವರೆಗಾದರೂ ಅಮಾನತಿಡುವ ವ್ಯವಸ್ಥೆಯೇನೂ ಆಗಿಲ್ಲ. ಆದರೂ ಶ್ರೀಮತಿ ವಿಜಯ ಲಕ್ಷ್ಮಿಯವರಂತೆ ದೂರನ್ನು ಕೇಳುವವರಿದ್ದಾರೆಂದಾಯಿತು.

ಆ ಸೂಚನೆಯೇ ಹೃದಯ ಪರೀಕ್ಷೆಯ

[ಜನೇ ಪುಟದಿಂದ]

ಖಡ್ಗಾಘಾತ

'ಖಡ್ಗವನ್ನು ಖಡ್ಗವೇ ಇದಿರಿಸುವದು"ಎಂಬ ಸರ್ದಾರರ ಮೀರತ್ ಭಾಷಣದ ಕುರಿತು ಜನ್ನರಂದರು- 'ಈ ಸರ್ದಾರನಿಗೆ ಖಡ್ಗವೆಲ್ಲಿಂದೆ? ಬ್ರಿಟಿಷ್ ಬೆಯನೆಟಿನ ರಕ್ಷಣೆಯಿಲ್ಲದಿರುತಿದ್ದರೆ ಕೇಂದ್ರದ ವೈಸರಾಯೀ ಕಾನ್ಸಿಲ್ ಸದಸ್ಯರೂ ಪ್ರಾಂತ್ಯಗಳ ಕಾಂಗ್ರೆಸ್ ಮಂತ್ರಿಗಳೂ ಅಧಿಕಾರ ಚಾಲುಮಾಡುವದೇ ಅಸಾಧ್ಯವಿತ್ತು." ಇದೂ ಸತ್ಯವಿರಬಹುದು. ಚೂರೀ ಪೆಟ್ಟಿಗೆಗಳ ಅಮದು ರಫ್ತುಗಳೆಲ್ಲಾ ತಮ್ಮವರಿಗಾದ್ದರಿಂದಲೇ ಕಾಂಗ್ರೆಸಿಗರಿಗಿರುವದು ಕೇವಲ ಬ್ರಿಟಿಷ್ ಬೆಯನೆಟ್ ಎಂಬ ಗುಟ್ಟು ಜನ್ನರಿಗೆ ಗೊತ್ತಿರಬೇಕು.

ಜನಬದಲಾವಣೆಯ ಜಂಭ

"ದಕ್ಷಿಣ ಭಾರತದ ಮುಸ್ಲಿಮರಿಲ್ಲಾ ಉತ್ತರ ಕಡೆಗೂ ಉತ್ತರ ಭಾರತದ್ದಹಿಂದು ಗಳೆಲ್ಲಾ ದಕ್ಷಿಣ ಕಡೆಗೂ ಪರಸ್ಪರ ಹೋಗಿ ನಿಲ್ಲಬಹುದೆಂಬ ಮಾತು ಅಪಹಾಸ್ಯಕರ. ನೂರು ಜನ್ನರು ಪ್ರಯತ್ನಿಸಿದ ಪಕ್ಷಕ್ಕೂ ಇಂತಹ ಬದಲಾವಣೆ ಅಸಾಧ್ಯ" ಎಂದು ಸರ್ದಾರರು ಉತ್ತರವಿತ್ತಿದ್ದಾರೆ. ನೂರೇ ಜನ್ನರಾದರೆ ಸಂ—ಇರುವ ಎಳೆಂಟು ಕೋಟಿಮುಸ್ಲಿಮರೂ ಜನ್ನರೇ ಆಗಿಬಿಟ್ಟರೆ ಪ್ರತಿಯೊಬ್ಬನಿಗೂ ಪಾಕಿಸ್ತಾನದಲ್ಲಿ ಭವ್ಯ ಬಂಗಲೆ ಕಟ್ಟಲು ಸಾಧ್ಯವಾಗಿ ಎಲ್ಲರೂ ಅಲ್ಲಿಗೆ ಹೋಗಿ ಅಲ್ಲಿರುವ ಹಿಂದುಗಳನ್ನು ದಕ್ಷಿಣಕ್ಕೆ ಓಡಿಸಲಾರರೆ?

ಲೀ–ಗ್ ಓಡೋಡಿ ಬರಲಿದೆ!

"ಮುಸ್ಲಿಂ ಲೀಗು ಘಟನಾ ಸಮಿತಿಗೆ ಬರುವದಿಲ್ಲವೆಂದು ನೀವೇಕೆ ಊಹಿಸಬೇಕು? ಅವರು ಬುದ್ಧಿವಂತರಿದ್ದಾರೆ; ಮತ್ತವರು ಒಳಬರುವರಂದು ನನಗಿ ಖಾತ್ರಿಯಿದೆ. ನಡುಗಾಲ ಸರಕಾರಕ್ಕೆ ಬರುವದಿಲ್ಲವೆಂದು ಒಮ್ಮೆ ಅಂದಿದ್ದ ಅವರು ಮತ್ತೆ ಬರಲಿಲ್ಲವೆ? ಯಾರು ಬರುವದಿಲ್ಲವೋ ಅವನನ್ನು ಬಿಟ್ಟು ಮುಂದೊತ್ತಲಾಗುವದು" ಎಂದು ಸರ್ದಾರ್ ಪರೀಲರಂದಿದ್ದಾರೆ. 'ಲೀಗ್ ಬಾರದಿದ್ದರೆ ಘಟನಾ ಸಮಿತಿ ಮುಕ್ತಾಯಗೊಳ್ಳುವದೋ?' ಎಂದು ಪ್ರಶ್ನಿಸಿದಾಗ ಸರ್ದಾರರು ತಮಾಷೆಯಾಡಿನಗೆಯೆಬ್ಬಿಸಿದರು: "ಹೌದು. ಘಟನಾ ಸಮಿತಿಯೊಂದು ಶಾಶ್ವತ ಸಭೆಯೇನೂ ಅಲ್ಲ ಅದರ ಕೆಲಸವೆಲ್ಲ ಮುಗಿದೊಡನೆಯೇ ಅದು ಮುಕ್ತಾಯಗೊಳ್ಳುವದು". ಜನ್ನರು ಎಡೆಬಿಡದೆ ಎಬ್ಬಿಸುತ್ತಿರುವ ಸಿಂಹನಾದಗಳು ಈ ಮುದಿ ಸರ್ದಾರನಿಗೆ ನರೀ ಕೂಗಿನಂತೆ ಕೇಳಿಸುತ್ತಿರುವದೊಂದು ವಿಶೇಷವೇ ಸರಿ!

ಭಾರತ– ದ. ಆಫ್ರಿಕ ಜಗಳ

ಜಾಗತಿಕ ಸಂಘದ ರಾಜಕೀಯ ಮತ್ತು ಕಾಯಿದೇ ಸಮಿತಿಯಲ್ಲಿ ದಕ್ಷಿಣಾಫ್ರಿಕದ ಹಿಂದೀಯರಿಗಾಗುತ್ತಿರುವ ಅನ್ಯಾಯಗಳ ಸಂಬಂಧದ ಒಂದು ನಿರ್ಣಯವು ಮಂಜೂರಾಗಿ ಹಿಂದೀ ಪ್ರತಿನಿಧಿಗಳು ಶ್ಲಾಘನೀಯ ವಿಜಯ ಪಡೆದರು. 'ಈ ಜಗಳದ ತೀರ್ಮಾನ ಹೊಂದುವದಕ್ಕಾಗಿ ಜಾಗತಿಕ ಸಂಘದ ಮಹಾಸಭೆಯ ಮುಂದಿನ ಅಧಿವೇಶನದಲ್ಲೇ ದ. ಆಫ್ರಿಕ ಮತ್ತು ಹಿಂದೀ ಸರಕಾರಗಳು ತಂತಮ್ಮ ವರದಿಗಳನ್ನೊಪ್ಪಿಸತಕ್ಕದ್ದು' ಎಂಬ ಸೂಚನೆಯನ್ನು ಫ್ರೆಂಚ್-ಮೇಕ್ಸಿಕೋ ರಾಷ್ಟ್ರಗಳ ಪ್ರತಿನಿಧಿಗಳು ತಂದರು. ಹಿಂದೀ ಪ್ರತಿನಿಧಿಗಳದನ್ನು ಅಂಗೀಕರಿಸಿದರು. ಅಂತರ್ರಾಷ್ಟ್ರೀಯ ಕೋರ್ಟಿನ ತೀರ್ಮಾನಕ್ಕೆ ಈ ವಿಷಯವನ್ನು ಬಿಡಬೇಕೆಂದು ದ. ಆಫ್ರಿಕದ ಜ. ಸ್ಮಟ್ಸರು ವಾದಿಸಿದರು. ಆದರೂ ಹಿಂದೀ ಸೂಚನೆಯು 24 ಅನುಕೂಲ 19 ಪ್ರತಿಕೂಲ ಮತಗಳಿಂದ ಮಂಜೂರಾಯ್ತು. ಹಿಂದೀ ಬೇಡಿಕೆಗೆ ಮೊದಲ ವಿಜಯ ದೊರೆಯಿತು. ಪಶ್ಚಿಮ ಮತ್ತು ದಕ್ಷಿಣಾಫ್ರಿಕಗಳನ್ನು ಒಂದುಗೂಡಿಸಬೇಕೆಂಬ ಸ್ಮಟ್ಸರ ಮತ್ತೊಂದು ಸೂಚನೆಯು ಬೇರೊಂದು ಕನಿಟೆಯಲ್ಲೂ ಬಿದ್ದುಹೋಯಿತು. ಹಿಂದೀ ಬೇಡಿಕೆಗೆ ಅನುಕೂಲ ಮತವಿತ್ತವರಲ್ಲಿ ರಶ್ಯಾ ಚೀನಾಗಳವೆ; ಪ್ರತಿಕೂಲ ಮತವಿತ್ತವರಲ್ಲಿ ಬ್ರಿಟನ್, ಅಮೆರಿಕಗಳು ಸೇರಿವೆ. ಏನೇ ಮಾಡಿದರೂ ಪೂರ್ವ – ಪಶ್ಚಿಮಗಳನ್ನೊಂದುಗೂಡಿಸುವದು ಅಸಾಧ್ಯ ತಾನೆ?

ಸ್ಮಟ್ಸ್ ಸಂಭಾವನೆ

ಸಮಿತಿಯಲ್ಲಿ ಹಿಂದೀ ಸೂಚನೆಗೆ ವಿರುದ್ಧ ಹೆಮ್ಮತದೊರೆತೊಡನೆ ಹಿಂದೀ ಪ್ರತಿನಿಧಿ ಮಂಡಲದ ನಾಯಕಿ ಶ್ರೀಮತಿ ವಿಜಯ ಲಕ್ಷ್ಮಿ ಪಂಡಿತರು ಧನ್ಯವಾದಗಳ ಸುರಿಮಳೆಯಿಂದ ತೊಯಿದು ಹೋದರು. ಪ್ರತಿನಿಧಿಗಳು ಶ್ಲಾಘನೆ ಸಲ್ಲಿಸಲು ಶ್ರೀಮತಿಯವರನ್ನು ಸುತ್ತುಗಟ್ಟಿದರು. ಆದರೆ ವಿಜಯ ಲಕ್ಷ್ಮಿಯವರು ಆ ಗುಂಪನ್ನು ಛೇದಿಸಿಕೊಂಡು ನೆಟ್ಟಗೆ ಜನರಲ್ ಸ್ಮಟ್ಸರದ್ದಲ್ಲಿ ನಗುಮೊಗದಿಂದ ನಡೆದರು. ಹಸ್ತಲಾಘವ ಕೊಟ್ಟು ಸ್ಮಟ್ಸ್ ಕೇಳಿದರು, "ಸರಿ. ನಿಮಗೀಗ ಸಮಾಧಾನವಾಯಿತು ತಾನೆ?" "ನನಗೆ ಸಮಾಧಾನವೂ ಇಲ್ಲ; ಅಸಮಾಧಾನವೂ ಇಲ್ಲ. ನನ್ನ ಜನತೆಯ ಪರವಾಗಿ ಮುಂದಿಟ್ಟು ಒಂದು ಸಂಗತಿಗೆ ಕಿವಿಕೊಡುತ್ತಾರೆಂಬಾಯಿತಷ್ಟೆ" ಎಂದರು ವಿಜಯಲಕ್ಷ್ಮಿ. "ನಿಮ್ಮ ಭಾಷಣವನ್ನು ನಾನು ಶ್ಲಾಘಿಸುತ್ತೇನೆ. ಅದು ಅತ್ಯತ್ತಮವಿತ್ತೆಂದು ನನ್ನ ಭಾವನೆ" ಯೆನ್ನುತ್ತಾ ಜ. ಸ್ಮಟ್ಸ್ ಗಂಭೀರವಾಗಿ ಹೇಳಿದರು "ಆದರೆ ನೀವು ದಕ್ಷಿಣಾಫ್ರಿಕದ ಯುದ್ಧಾನಂತರಾಧಿಗಳೆಂಬ ಪ್ರಸ್ತಾಪವೆತ್ತಬಾರದಿತ್ತು". ಅದನ್ನು ನಿರಾಕರಿಸುತ್ತಾ ಶ್ರೀಮತಿಯವರು "ನಾನು ಹಾಗಂದಿಲ್ಲ. ದಕ್ಷಿಣಾಫ್ರಿಕದ ಅನ್ಯಾಯ

ಹಿಂದೀ ಧುರೀಣರ ಲಂಡನ್ ಯಾತ್ರೆ

ಲಂಡನಿಗೆ ಬರಬೇಕೆಂಬ ಆಟ್ಲೀ ಆಮಂತ್ರಣವು ವೈಸರಾಯರ ಮುಖಾಂತರ ಜೊರೆಕೊಡನೆಯೇ ಮಿ. ಲಿಯಾಖತ್ ಅಲಿ ಕರಾಚಿಯಲ್ಲಿದ್ದ ಜಿನ್ನರ ಬಳಿಗೋಡಿ ಮಾತಾಡಿ ಬಂದು ಒಪ್ಪಿಗೆಕೊಟ್ಟಿದ್ದರು; ಪಂಡಿತ ನೆಹರುಗಳು ಥಿಲ್ಲಿಯಲ್ಲಿದ್ದ ಇತರ ಕಾಂಗ್ರೆಸ್ ಪ್ರಮುಖರೊಡನೆ ಚರ್ಚಿಸಿದ್ದರು. (ಈ ನಡುವೆ ನಡೆದಿದ್ದ ಲಂಡನ್-ಥಿಲ್ಲಿ ಕೇಬ್ಲ್ ವ್ಯವಹಾರಗಳು ಬೇರೆಡೆಯಲ್ಲಿನೆ) ಕೊನೆಗೆ ನಿರ್ಧರಿಸಲ್ಪಟ್ಟಂತೆ, ಲಂಡನಿಗೆ ಹಾರಲು ಎಲ್ಲರೂ ತಾ. 30ರಲ್ಲಿ ಕರಾಚಿಗೆ ಬಂದರು. (ಪ್ರಥಮತಃ ಹೊಂಟ ನೆಹರು ವಿಮಾನ ತುಸು ಹಾಳಾದುದೊಂದು ಅವಲಕ್ಷಣ.) ನೆಹರುಗಳ ಗೈರುಹಾಜರಿಯಲ್ಲಿ ಸರ್ದಾರ್ ಪರೇಲರು ನಡುಗಾಲ ಸರಕಾರದ ಉಪಾಧ್ಯಕ್ಷ ಸ್ಥಾನ ವಹಿಸಿದ್ದಾರೆ.

ಕರಾಚಿಯಿಂದ ಪ್ರಯಾಣ

ನವಂಬರ್ ತಾ.30ನೇ ಮಧ್ಯಾಹ್ನ ವೈಸರಾಯರು, ಲಿಯಾಖತ್ ಅಲೀ ಖಾನರೂಂದಿಗೆ ವಿಮಾನದಲ್ಲಿ ಕರಾಚಿಗೆ ಬಂದಿಳಿದರು; ಬೆನ್ನಲ್ಲೇ ಮತ್ತೊಂದು ವಿಮಾನದಲ್ಲಿ ನೆಹರು, ಬಲದೇವ ಸಿಂಘರೊಂದಿಗೆ ಆಗಮಿಸಿದರು. ಕರಾಚಿಯಲ್ಲಿ ಲಿಯಾಖತ್-ಜಿನ್ನರೊಳಗೂ ಅವರಿಬ್ಬರು ಮತ್ತು ವೈಸರಾಯಿಯೊಳಗೂ ಮಾತುಕತೆ ನಡೆಯಿತು. ದಶಂಬರ್ ತಾ. 1ನೇ ಮುಂಜಾನೆ 7-15 ಕ್ಕೆ ಕರಾಚಿಯ ವಿಮಾನ ನಿಲ್ದಾಣದಲ್ಲಿ ಎಲ್ಲರೂ ಸ್ಪೆಶ್ಯಲ್ ಯೋರ್ಕ್ ವಿಮಾನ ಹತ್ತಿದರು. ವೈಸರಾಯ ವೇವೆಲ್, ಮತ್ತವರ ಖಾಸಗೀ ಕಾರ್ಯದರ್ಶಿ ಮಿ. ಎವೆಲ್, ಸೇನಾ ಉಪಕಾರ್ಯದರ್ಶಿ ಮೇಜರ್ ಮೆಕೆನ್ಸ್ಟ್ರು, ವಿದೇಶ ಮಂತ್ರಿ ನೆಹರು, ಮತ್ತವರ ಖಾಸಗೀ ಕಾರ್ಯದರ್ಶಿ ಎಮ್. ಓ. ಮಥಾಯಿ, ಆಧಿಕಾರೀ ಕಾರ್ಯದರ್ಶಿ ಎಚ್. ಸಿ. ಸಾರಿಜ್; ಐ. ಸಿ. ಯಸ್, ರಕ್ಷಣಾ ಮಂತ್ರಿ ಸರ್ದಾರ್ ಬಲದೇವ ಸಿಂಘ್, ಮತ್ತವರ ಆಧಿಕಾರೀ ಕಾರ್ಯದರ್ಶಿ ತಾಲ್ವೋರ್ ಸಿಂಘ್ ಐ. ಸಿ. ಯಸ್., ಲೀಗ್ ನಾಯಕ ಮಿ. ಜಿನ್ನಾ, ಮತ್ತವರ ಕಾರ್ಯದರ್ಶಿ ಮಿ. ಖುರ್ಶಿದ್; ಆರ್ಥಿಕ ಮಂತ್ರಿ ಲಿಯಾಖತ್ ಅಲೀ ಖಾನ್, ಮತ್ತವರ ಆಧಿಕಾರೀ ಕಾರ್ಯದರ್ಶಿ ಮಮ್ತಾಜ್ ಹಸನ್-ಹೀಗೆ ಒಟ್ಟಿಗೆ ಹನ್ನೆರಡು ಮಂದಿಯನ್ನು ಹೊತ್ತುಕೊಂಡು ವಿಮಾನವು ಕರಾಚಿ ನಿಲ್ದಾಣದಿಂದೇರಿತು. ಹೊರಡುವ ಮೊದಲು ಪಂಡಿತ ನೆಹರು "ನಾವು ಐದಾರು ದಿನಗಳೊಳಗೆ ಮರಳಿಬರುತ್ತೇವೆ.9ನೇ ತಾರೀಕಿನೊಳಗಂತೂ ಖಂಡಿತ"ಎಂದರು. ನೂರಾರು ಲೀಗ್ ಸ್ವಯಂಸೇವಕರಿಂದ ವಂದನೆ ಪಡೆದು ಹೊರಟ ಮಿ. ಜಿನ್ನರು ಮಾತ್ರ ಬಾಯಿಬಿಡಲಿಲ್ಲ.

ಕೈಕೋದಲ್ಲೊಂದು ರಾತ್ರಿ

ತಾ. 1ನೇ ಅಪರಾಹ್ನ ಈಜಿಪ್ಟಿನ ಕೈರೋ ನಗರದ ಆಲ್ಮಾಝಾ ನಿಲ್ದಾಣದಲ್ಲಿ ಭಾರತದ ಮಕುಟಗಳನ್ನೇ ಹೊತ್ತಿದ್ದ ಈ ವಿಮಾನ ಇಳಿಯಿತು. ಅಲ್ಲಿ ಅತ್ಯಲ್ಪ ಸಂಖ್ಯೆಯಲ್ಲಿರುವ ಹಿಂದೀಯರು ನೆರೆದು ಬಂದಿದ್ದು ಅಧಿತಿಗಳನ್ನು ಹಾರತುರಾಯಿಗಳಿಂದ ಅಲಂಕರಿಸಿದರು, ಪಂಡಿತ ನೆಹರುಗಳು ಮಿ. ಜಿನ್ನರ ತೋಳನ್ನೆಳೆದು ಹಿಡಿದುಕೊಂಡು ಪತ್ರಿಕಾ 'ಕೆಮರಾ'ಗಳ ಇದಿರು ನಿಂತರು. ರಾತ್ರಿ ಎಲ್ಲರೂ 'ಶೆಫ್ಫಾರ್ಡ್ಸ್' ಹೊಟೆಲ್'ನಲ್ಲಿ ಊಟಕೊಂಡರು. "ಇಡೀ ಹಿಂದೀ ಪ್ರಶ್ನೆಯನ್ನು ಒಂದು ದುಂಡು ಮೇಜು ಸಮ್ಮೇಲನದಲ್ಲಿ ಪುನರಾಲೋಚಿಸುವ ಆಶ್ವಾಸನೆ ಆಟ್ಲೀಗಳಿಂದ ದೊರೆತುದರಿಂದಲೇ ನಾನು ಹೊರಟೆ. ನಾನು 9 ಕೋಟಿ ಮುಸಲ್ಮಾನರಿಗಾಗಿ ಕೊನೆ ತನಕ ಹೋರಾಡುವದೇ ಸರಿ. ಮುಸ್ಲಿಮರನ್ನು ಹಿಂದುಗಳ ಬಗಲೊಳಗಿಡುವ ಯಾವ ವ್ಯವಸ್ಥೆಗೂ ನಾನೊಪ್ಪಲಾರೆ. ಏನಂದರಿ? ನಾವೇನು ಬ್ರಿಟಿಷ್ ರಾಜ್ಯದಡಿಯ ಗುಲಾಮತ್ವದ ಬದಲಿಗೆ ಅಂತಹದೇ ಅದ ಹಿಂದೂ ಗುಲಾಮತ್ವಕ್ಕೆ ವರ್ಗ ಹೊಂದ ಬೇಕೆ? ಇಲ್ಲ ಎಂಬುದೇ ಇದಕ್ಕುತ್ತರ. ಭಾರತ ಸಮಸ್ಯೆಗಿರುವ ಏಕ ಮಾತ್ರ ಪರಿಹಾರವೆಂದರೆ ಪಾಕಿಸ್ತಾನ" ಎಂದು ಅಲ್ಲಿಯೂ ಜಿನ್ನರಂದರು. "ಭಾರತದಲ್ಲಿ ಹಿಂದೂ ಮುಸ್ಲಿಮರೊಳಗೆ ನಿಜವಾದ ಭೇದವೇನೂ ಇಲ್ಲ. ಅದು ಬಹುತೇಕವಾಗಿ ರಾಜಕೀಯ ಘರ್ಷಣೆಗಳ ಸಮಸ್ಯೆ" ಎಂದು ನೆಹರುಗಳಂದರು. "ರಾಜಕೀಯದಲ್ಲಿ ಶಕ್ತ್ಯಾನುಸಾರ ಪ್ರಯತ್ನಿಸುವದೊಂದೇ ಹೊರತು ಆಕೆ ಜಿಥವಾ ನಿರಾಶೆ ಕಟ್ಟಿಕೊಳ್ಳುವದೆಂಬುದೇ ಇಲ್ಲ" ಎಂದು ಮತ್ತೊಂದು ಪ್ರಶ್ನೆಗೆ ನೆಹರುಗಳುತ್ತರಿಸಿದರು.

ತಾ. 1ನೇ ರಾತ್ರಿ ಕೈರೋದಲ್ಲಿ ಕಳೆಯಿತು. ತಾ. 2ನೇ ಮುಂಜಾನೆ ಈ ವ್ಯಮುಖ ಪಂಗಡವನ್ನು ಹೊತ್ತ ವಿಮಾನ ಲಂಡನಿಗೆ ಹಾರಿತು ಹಾದಿಯಲ್ಲಿ ವಿಮಾನ ಕೈನೋ ತೊಂದರೆ ಬಂದುದರಿಂದ ಲಂಡನಿಗಿಳಿಯಲು 2 ಘಂಟೆ ತಡವಾಯಿತೆಂದು ತಿಳಿದುಬರುತ್ತದೆ. ತಾ. 2ನೇ ಅಪರಾಹ್ನ ಲಂಡನಿನಲ್ಲಿಳಿದು ಆಥ್ಯ ಬ್ರಿಟಿಷರಿಂದ ಸ್ವಾಗತಿಸಲ್ಪಟ್ಟರು.

ಲಂಡನ್ ಸಿದ್ಧತೆಗಳು

ಕಾಂಗ್ರೆಸ್ ಆಮಂತ್ರಣ ನಿರಾಕರಿಸಿತೆಂದಾಕೊಡನೆ ಲಂಡನಿನಲ್ಲೆದ್ದಿದ್ದ ನಿರಾಶೆಯ ಹೊಗೆಗೆ ಮಾಯವಾದಾಗ ಎಲ್ಲರಲ್ಲೂ ಆನಂದೋತ್ಸಾಹವೇರಿತ್ತು; ವಿಶೇಷತಃ ನೆಹರುಗಳ ಆಗಮನವು ಲಂಡನಿಗರನ್ನು ಹುರಿದುಂಬಿಸಿದೆ. ಪ್ರಧಾನಿ ಆಟ್ಲೀಗಳು ಭಾರತ ಕಾರ್ಯದರ್ಶಿ ಪೆಥಿಕ್ ಲಾರೆನ್ಸ್, ಸರ್. ಸ್ಟಾಫೋರ್ಡ್ ಕ್ರಿಪ್ಸ್, ಮಿ. ಅಲೆಕ್ಸಾಂಡರೊಡನೆ ಚರ್ಚಿಸಿ ಕಾರ್ಯಕ್ರಮ ನಿರ್ಧರಿಸಿದ್ದಾರೆ. ಮುಖ್ಯತಃ ಬ್ರಿಟಿಷ್ ಮಂತ್ರಿ ಸಮಿತಿಯ ಲಾರೆನ್ಸ್, ಕ್ರಿಪ್ಸ್, ಅಲೆಕ್ಸಾಂಡರೇ ವೇವೆಲ್, ಜಿನ್ನಾ, ನೆಹರು, ಲಿಯಾಖತ್, ಬಲದೇವ ಸಿಂಗರೊಡನೆ ಸಂಭಾಷಣೆಗೆ ಕುಳಿತುಕೊಳ್ಳುವರು. ಆಟ್ಲೀಗಳು ಅಗತ್ಯಬಿದ್ದಾಗಲೆಲ್ಲಾ ಭಾಗವಹಿಸುವರು. ಅವರು ಇದಕ್ಕಾಗಿ ತನ್ನ ಮಿಕ್ಕ ಕಾರ್ಯಕ್ರಮಗಳನ್ನು ಮುಂದಾಗಿ ಮುಗಿಸಿಕೊಂಡಿದ್ದಾರೆ. ಸಂದರ್ಭ ಬಂದಾಗ ಮಿಕ್ಕ ಬ್ರಿಟಿಷ್ ಮಂತ್ರಿಗಳೂ ಜತೆಗೂಡಬಹುದು. ಡೌನಿಂಗ್ ಸ್ಟ್ರೀಟಿನಲ್ಲಿರುವ ಪ್ರಧಾನ ಮಂತ್ರಿಗಳ ಆಫೀಸು ಕೋಣೆಯಲ್ಲೇ ಸಂಭಾಷಣೆ ನಡೆಯಲಿದೆ. ಮಂಗಳವಾರ ಅತಿಥಿಗಳಿಗೆ ಸರಕಾರೀ ಸತ್ಕಾರದ ಔತಣ ಕೂಟ ನಡೆಸಿ ಎಲ್ಲಾ ಬ್ರಿಟಿಷ್ ಮಂತ್ರಿಗಳನ್ನೂ ಸಂಧಿಸುವ ಸಂದರ್ಭ ಪೊದಗಿಸಲಾಗಿದೆ. ಅದೇ ದಿನ ಮುಂಜಾನೆ ಜಿನ್ನಾ, ಲಿಯಾಖತರು ಭಾರತ ಕಾರ್ಯದರ್ಶಿಯೊಡನೆಯೂ, ಮಧ್ಯಾಹ್ನ ಪ್ರಧಾನಿಯೊಡನೆಯೂ ಸಂಧಾಷಿಸುವ ಕಾರ್ಯಕ್ರಮವಿದೆ. ಬುಧವಾರ ಪಾರ್ಲಿಮೆಂಟ್ ಭವನದಲ್ಲಿ,ಹಿಂದೆ ಭಾರತಕ್ಕೆ ಬಂದಿದ್ದ ಪಾರ್ಲಿಮೆಂಟರೀ ಶಿಷ್ಟ ಮಂಡಲಿಯವರ ಸತ್ಕಾರಕೂಟವಿದೆ. ವೈಸರಾಯ್ ಮತ್ತು ಹಿಂದೀಸ್ಯಮುಖರು ತಾ. 4ಕ್ಕೆ ಚಕ್ರವರ್ತಿಗಳೊಡನೆ ಔತಣಕ್ಕೆ ಕೂಡಲು ಬಕ್ಹ್ಯಾಂಗಮ್ ಅರಮನೆಗಾಮಂತ್ರಿಸಲ್ಪಟ್ಟಿದ್ದಾರೆ. ಮೇಕ್ಸಿಕೋವಿಗೆ ಹೊಂಟಿದ್ದ ಶ್ರೀ..ಕೃಷ್ಣ ಮೆನನರು ನೆಹರೂ ಕರೆಯಂತೆ ಲಂಡನಿಗೆ ಬಂದಿದ್ದಾಗಿ. ಅಮೇರಿಕದ ಹಿಂದೀ ಸಂಘದಧ್ಯಕ್ಷ ಶ್ರೀ. ಜೆ. ಜೆ. ಸಿಂಗರೂ ಲಂಡನಿಗೆ ಹೊರಟಿದ್ದಾರೆ. ಅತಿಥಿ ಪ್ರಮುಖರನ್ನು ಶನಿವಾರನೇ ಲಂಡನಿನಿಂದ ಬೀಳ್ಕೊಳ್ಳುವ ವ್ಯವಸ್ಥೆ ನಡೆದಿದೆ, ಅಂತೂ ತಾ. 9ಕ್ಕೆ ಎಲ್ಲರೂ ಇಲ್ಲಿದ್ದಾರೆ, "ಆಕಾಶವೇ ಕಳಚಿ ಬಿದ್ದರೂ, ಭೂಮಿ ಇಬ್ಭಾಗವಾಗಿ ಹೋದರೂ ಘಟನಾ ಸಮಿತಿ ತಾ. 9ಕ್ಕೆ ಸೇರುವದೇ ಸರಿ. ಏನೇ ಬರಲಿ; ಲಂಡನಿಗೆ ಹೋದವರು ಒಲಿ, ಬಾರದಿರಲಿ-ಸಮಿತಿ ಸಭೆಯಂತೂ ಆ ದಿನ ಸ್ವಾರಂಭಿಸುವದು ಖಂಡಿತ" ಎಂದು ಸರ್ದಾರ್ ಪರೇಲ್ ಬೊಂಬಾಯಿಭಾಷಣದಲ್ಲಂದಿದ್ದಾರೆ.

ಗಳು ಯುದ್ಧಕ್ಕೆ ಹೇತುವಾಗ ಸಾಧಗಳಿಗೆ ಸರಿಸಮಾನವಿವೆ ಎಂದು ಮಾತ್ರ ಹೇಳಿದ್ದೆ" ಎಂದುತ್ತರಿಸಿದಾಗ "ದೇವರು ಮೆಸ್ಸಿಸಲ್" ಎನ್ನುತ್ತಾ ಸ್ಮಟ್ಸ್ ವಿದಾಯವಿತ್ತರು—"ಮಗಳೇ, ನೀನೂ ನಾನೂ ಜಗತ್ತಿನಲ್ಲಿ ಕರಿಣ ಹೊರಾಟ ಕೊಡಲಿಕ್ಕಿದೆ". ಆದರೆ ಸ್ಮಟ್ಸ್ ಈಗ ಹಣ್ಣು ಮುದುಕನಾಗಿರುವದರಿಂದ ಅದು ಕರಿಣ ಹೋರಾಟ ಮಾತ್ರವಲ್ಲ; ಕಡಿಮೆ ಕಾಲದ-ಕಡೇಕಾಲದ-ಹೋರಾಟವೂ ಆಗಲಿದೆ!

ಶಸ್ತ್ರ ಬಿಡುವವರ ಅಸ್ತ್ರ!

ಜಾಗತಿಕ ಸಂಘಾದ ಸಮಿತೀ ಸಭೆಯಲ್ಲಿ ರಾಷ್ಟ್ರಗಳ ನಿಶ್ಶಸ್ತ್ರೀಕರಣದ ಸೂಚನೆಯನ್ನು ರಷ್ಯದ ವಿದೇಶಮಂತ್ರಿ ಮೊಲಟವರು ತಂದಿದ್ದಾರೆ. ಈ ಆಧಿಕಾರವು ಸಂಘದ ಭದ್ರತಾ ಕೌನ್ಸಿಲಿಗಿರಬೇಕೆಂದು ಆ ಸೂಚನೆಯಲ್ಲಿದೆ. ತೀಕ್ಷ್ಣವಾದ ಚರ್ಚೆ ನಡೆಯುತ್ತಿದೆ. ಬ್ರಿಟಿನಿನ ಪ್ರತಿನಿಧಿ ಸರ್ ಹಾಲ್ಟ್ಸ್ ಗ್ರಂಥ್ಯದ ಈ ಶಸ್ತ್ರತ್ಯಾಗ ಸೂಚನೆಯು 'ಹಂಬಗ್' ಎಂದು ಖಂಡತುಂಡ ಹೇಳಿಬಿಟ್ಟಿದ್ದಾರೆ. ಸಂಪ್ತರ ಬೈಗಳ ಶಾಸ್ತ್ರತ್ಯಾಗನೇ ಅಸಾಧ್ಯವಿರುವಾಗ ಇವರಿಲ್ಲಾ ಶಸ್ತ್ರತ್ಯಾಗ ಮಾಡುವದು ನಿಜವೇ!

ಶುದ್ಧ ವನಸ್ಪತಿಯಿಂದ ತಯಾರಿ! ವಿಷರಹಿತ!
(1946ರಲ್ಲಿ ಮಂಗಳಾಲದಲ್ಲಿ ಜರಗಿದ 34ನೇ ಅಲ್ ಇಂಡಿಯಾ ಆಯುರ್ವೇದಿಕ್ ಕೋಂಗ್ರೆಸ್ ಪ್ರದರ್ಶನದಲ್ಲಿ ಪದಕ ಮತ್ತು ಶಿಫಾರಸು ಪಡೆಯಲ್ಪಟ್ಟಿದೆ) 20 ವರ್ಷಗಳ ಅನುಭವದ ಪ್ರತಿಯೊಂದು ಪ್ರಯೋಗದಲ್ಲಿಯೂ ಅತ್ಯಂತ ಗುಣಕಾರಿಯೆಂದು ಸಿದ್ಧವಾದ
ದಂತಾಮೃತ ಮಾತ್ರೆ ಎಲ್ಲಾ ತರದ ಹಲ್ಲು ನೋವಿಗೂ ದಿವ್ಯೌಷಧ
ಅನಂತರ ಯಾವ ಹಾನಿಯೂ ಇಲ್ಲದೆ ಖಾತ್ರಿ ಗುಣಪಡಿಸುತ್ತದೆ.
ದಂತಾಮೃತ ಡಿಪೊ, ಉಡುಪಿ, ದ ಕ.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ
5ನೇ ವಾರ ಯಶಸ್ವೀ 5ನೇ ವಾರ
ಗುಬ್ಬಿ ವೀರಣ್ಣನವರ ಅತ್ಯುಜ್ವಲ
ಕನ್ನಡ ಚಿತ್ರರತ್ನ
ಹೇಮರೆಡ್ಡಿ ಮಲ್ಲಮ್ಮ
ಜಯಮ್ಮ, ಹೊನ್ನಪ್ಪ ಭಾಗವತರ್, ವೀರಣ್ಣ ಜಿ.ಎಚ್ ರಾಜಮ್ಮ.
ಬರುವ ಚಿತ್ರ—ಆದಾಬ್ ಆರ್ಜೂ
ನಳಿನಿ ಜಯವಂತ್, ಕೆರನ್ ದಿವಾನ್

ಉಡುಪಿ

ಮಿಲ್‌ಬಟ್ಟೆ ವಿತರಣೆಯ ಅವ್ಯವಸ್ಥೆ-ಮಿಲ್‌ಬಟ್ಟೆಯನ್ನು ಸಾಹುಕಾರರು ವಿತರಣೆ ಮಾಡುವ ರೀತಿನೀತಿಯ ಕುರಿತು ಹಲವು ದೂರುಗಳು ಕೇಳಿಬರುತ್ತಿವೆ. ಸಾಹುಕಾರರು ತಮ್ಮ ಧೋರಣೆಯನ್ನು ತುಸು ಬದಲಾಯಿಸುವುದು ಹಿತಕರ.

ಭೂಮ್ಯಾಧಿಕರ ಸಭೆಯೊಂದು ಮೊದಲೇ ಪ್ರಕಟಿಸಿದಂತೆ ತಾ. 3ನೇ ಸಂಜೆ ನವಯುಗ ಪ್ರೆಸ್ಸಿನ ಮಾಳಿಗೆಯಲ್ಲಿ ಜರಗಿತು. ಶ್ರೀಗಳಾವ ಎ. ಪಿ. ಕಟ್ಟಿ, ಎಂ. ಎಲ್. ಎ., ಕೆ. ಟಿ. ಅಳ್ವ, ಎ. ಆರ್. ಪೂಂಜ ಮುಂತಾದವರು ಬಂದಿದ್ದರು. ಸಭೆಯಲ್ಲಿ ಭೂಮಿಯ ಅನುಭವಕ್ಕೆ ಸಂಬಂಧಿಸಿದ ಭೂ-ವಕ್ಕಲುಗಳೊಳಗಿನ ತರ್ಕಗಳ ಕುರಿತಾದ ಪ್ರಶ್ನಾವಳಿಗಳ ಕುರಿತು ಚರ್ಚಿಸಲಾಯಿತು. ಡಾ. ಪಿ. ಜೆ. ಆಚಾರ್, ಶ್ರೀಗಳಾವ ಪಿ. ಎಸ್. ಕಟ್ಟಿ, ಪಿ. ಗೋಪಾಲ ನಾಯಕ್, ಕೆ.ಜೆ. ಬಲ್ಲಾಳ್ ಮೊದಲಾದವರು ಚರ್ಚೆಯಲ್ಲಿ ವಿಶೇಷವಾಗಿ ಭಾಗವಹಿಸಿದ್ದರು.

ಯಾವಾಗಲೂ
ಪ್ರೇಮಾ ಸುಗಂಧ
ಅಡಿಕೆ ಪುಡಿ
(Prema Scented Supari)
ಯನ್ನೇ ಉಪಯೋಗಿಸಿರಿ.
ಕೇವ್ರನೇ ಮಾರ್ಕೆಟಿಗೆ ಬರಲಿವೆ.
ವಿ. ಆರ್. ಕಿದಿಯೂರು, ಉಡುಪಿ

ಉಡುಪಿ

ಹರಿಕಥಾ ಕಾಲಕ್ಷೇಪ–ತಾ ೨೯-೧೧-೧೯೪೬ರಲ್ಲಿ ಶ್ರೀ ಮಜನಂತೇಶ್ವರ ದೇವಾಲಯದಲ್ಲಿ ಮಂಜೇಶ್ವರದ ಶ್ರೀ.ಯುಂ. ಕೆ. ಹರಿದಾಸರು "ಕನಕವಾಸ" ಎಂಬ ಕುರಿತು ಹರಿಕಥೆ ಮಾಡಿದರು.

ರಾಷ್ಟ್ರಸೇವಾದಳ–ಪ್ರಾಥಮಿಕ ಶಾಲೆಗಳು ಉಡುಪಿಯಲ್ಲಿ ಇತ್ತೀಚೆಗೆ ತೆರಯಲ್ಪಟ್ಟರೂ ಜಾತಿಮತಭೇದವಿಲ್ಲದೆ ಯುವಕರು ಉತ್ಸಾಹದಿಂದ ಸೇರಹತ್ತಿದ್ದಾರೆ. ಒಂದು ಮಹಿಳಾ ಶಾಖೆಯೂ ಸ್ಥಾಪನೆಗೊಂಡಿದೆ. ರಾಷ್ಟ್ರದ ಸಧ್ಯದ ವಾತಾವರಣದಲ್ಲಿ ಆತ್ಮಗತ್ಯವಾಗಿರುವ ಶಾಂತಿ ಸೌಹಾರ್ದ ಸ್ಥಾಪನೆಯ ಉಚ್ಚ ಧ್ಯೇಯಸಾಧನೆಯಲು ಜಾತಿ, ವರ್ಗ, ವರ್ಣ ಭೇದಗಳನ್ನು ಮರೆತು ರಾಷ್ಟ್ರಸೇವಾದಳಕ್ಕೆ ಸರ್ವರೂ ಬೆಂಬಲ ಕೊಡಬೇಕೆಂದು ಕೋರಲಾಗಿದೆ.

ನೊಹರಂ–ಆತ್ಯಂತ ಶಾಂತಿಪರಿತಿಯಿಂದ ಜರಗುತ್ತಿದೆ. ವಾಡಿಕೆಯಲ್ಲಿದ್ದ ವೇಷ ಪ್ರದರ್ಶನಗಳಾವುವೂ ಈ ವರುಷ ಇಲ್ಲದೆ ಮಸೀದಿಯಿರಿ ಸಭಾಗಂಗದಲ್ಲಿ ಪ್ರತಿದಿನ ರಾಂತ ಸಭೆ ನೆರೆದುಮುಸ್ಲಿಂ ರಾಷ್ಟ್ರತಜ್ಞರಿಂದ ಪ್ರವಚನಗಳಾಗುತ್ತಿವೆ. ಈ ಸಭೆಗಳಿಗೆ ಹಿಂದುಗಳೂ ಹಾಜರಾಗುತ್ತಿದ್ದಾರೆ. ಒಂದೆರಡು ಮೆರವಣಿಗೆಗಳಲ್ಲದೆ ಬೇರೆ ಪ್ರದರ್ಶನಗಳಾವುವೂ ಇಲ್ಲ. ಶಾಂತಿ ಮತ್ತು ಜಾತೀಯ ಐಕ್ಯತೆಯನುಬ್ಬಿಗೆ ಉದುಸಿಯ ಮೊಹರಂ ವಿಶೇಷ ಕಡೆಗಳಿಗೊಂದು ಮಾದರಿಯೆನ್ನಬಹುದು

ಬೇನಾಯ ಖಾತೆಯ ಕಟಪಾಡಿ ವಿಭಾಗ. ನೌಕರರು ಹಿಂದೀ ಗೊಬ್ಬರವನ್ನು ಬೇನಾಯಗಾರರಲ್ಲದ ವ್ಯಾಪಾರಿಗಳಿಗೆ ಅಧಿಕ ಬೆಲೆಗೆ ಮಾರಿದರೆಂದು ಶ್ರೀ. ಕೆ. ಗಣಪಯ್ಯ ಸೆಟ್ಟಿರಿಂದ ಬಂದ ನರದಿ ಪ್ರಕಾರ ತಾಲೂಕು ಆಹಾರ ಸಮಿತಿಯವರು ಕಾರ್ಯಕ್ಕೆಗೊಂಡು, ಸಂಬಂಧಪಟ್ಟ ಅಧಿಕಾರಿಗಳಿಂದ ಸದ್ರಿ ಖಾತೆಯ ನಾಲ್ಕರು ನೌಕರರು ಸಸ್ಪೆಂಡ್ ಮಾಡಲ್ಪಟ್ಟಿದ್ದಾರೆಂಬೂ ವಿಚಾರಣೆ ನಡೆಯುತ್ತಿದೆಯೆಂಬೂ ತಿಳಿದುಬರುತ್ತದೆ.

ಜಿಲ್ಲಾ ಆಹಾರ ಸಮಿತಿಗೆ ಉಡುಪಿ ತಾಲೂಕು ಸಮಿತಿಯಿಂದ ಹಿಂದೊಮ್ಮೆ ಆರಿಸಲ್ಪಟ್ಟು ಚುನಾವಣೆ ರದ್ದಾಗಿದ್ದ ಶ್ರೀ.ಎಸ್. ಎಸ್. ಕೊಳ್ಳಿಬೈಲ್, ವಕೀಲ್ ಕುಂದಾಪುರ ಇವರನ್ನು ತಾ. 3-12-46ರಲ್ಲಿ ಜರಗಿದ ತಾಲೂಕು ಕಮಿಟಿ ಸಭೆಯಲ್ಲಿ ಶ್ರೀ. ಎ. ಕೃಷ್ಣಯ್ಯ ಹೆಗ್ಡೆಯರು ಸೂಚಿಸಿ ಶ್ರೀ. ಕೆ. ಗಣಪಯ್ಯ ಸೆಟ್ಟರು ಅನುಮೋದಿಸಿದಂತೆ ಸರ್ವಾನುಮತದಿಂದ ಆರಿಸಲ್ಪಟ್ಟರು.

ಕಟಪಾಡಿ–ಕೋಟೆ ಗ್ರಾಮದ ಪಶೇಲರಾಗಿದ್ದು ಜನಪ್ರೀತರೂ ಮಾನ್ಯರೂ ಆಗಿದ್ದ ಆಂಜಾಡಿಬೀಡು ಶ್ರೀ. ಕೆ. ನಾಗಯ್ಯ ಸೆಟ್ಟರು ಇದೇ ತಾ.3-12-46ರಲ್ಲಿ ತನ್ನ 60ನೇ ವಯಸ್ಸಿನಲ್ಲಿ ದಿವಂಗತರಾದರೆನ್ನಲು ವಿಷಾದಿಸುತ್ತೇವೆ. ಶ್ರೀಯುತರು ಪ್ರಸಿದ್ಧ ಮನೆತನದವರಿದ್ದು ಮಾತು ಕೃತಿಗಳಲ್ಲಿ ಸಮರ್ಥರು, ಹಾಗೂ ಶಾಂತಸ್ವಭಾವದವರಿದ್ದರು; ಜನಬಳಕೆ, ಪರೋಪಕಾರ ಬುದ್ಧಿಯವರಿದ್ದರು

ಪಡುತೋನ್ಸೆ–ಕೆಮ್ಮಣ್ಣು ಹಾಯರ್ ಎಲಿಮೆಂಟರಿ ಶಾಲಾ ಹಳೆ ವಿದ್ಯಾರ್ಥಿ ಸಂಘದ ಕಾರ್ಯಕಾರಿ ಮಂಡಳಿಯು ಇತ್ತೀಚೆಗಿನ ಧೋರಣೆಯಿಂದ ಇನ್ನು ಮುಂದೆ ಅದರಲ್ಲಿ ರಲಿಕ್ಕೆ ಇಷ್ಟವಿಲ್ಲದ ಕಾರಣ ತನ್ನ ಉಪಾಧ್ಯಕ್ಷ, ಜತೆಕಾರ್ಯದರ್ಶಿ ಮತ್ತು ಸದಸ್ಯತನಕ್ಕೆ ಕೂಡಾ ರಾಜಿನಾಮೆಕೊಟ್ಟಿರುವದಾಗಿಯೂ ಇನ್ನು ಮುಂದೆ ಆ ಸಂಘದಲ್ಲಿ ತನಗೆ ಯಾವ ಸಂಬಂಧವೂ ಇರುವದಿಲ್ಲವಾಗಿಯೂ ಈ ವರೆಗೆ ತನಗೆ ಪ್ರೋತ್ಸಾಹವನ್ನು ಕೊಟ್ಟು ಸಹಕರಿಸಿದ ಸಮಸ್ತರಿಗೆ ಈ ಮೂಲಕ ಧನ್ಯವಾದವನ್ನು ಅರ್ಪಿಸಿರುವದಾಗಿಯೂ ಪಡುಕುದ್ರು ರಾಮರಾಯರು ತಿಳಿಸಿರುತ್ತಾರೆ.

ಎಡ್ತಾಡಿ–ಜೋ. ಎ. ಶಾಲಾ ಬಲ್ಲವಳಿಮಾಜದ ಮಕ್ಕಳಿಗೆ ಕಟ್ಟಾಡಿ ಬ್ರಹ್ಮಶ್ರೀ ನಾರಾಯಣ ಗುರು ಸೇವಾಸಮಿತಿಯವರಿಂದ ರೂ. 15 ಸಹಾಯಧನವನ್ನಾಗಿ ಕೊಡಲ್ಪಟ್ಟಿದು ಸ್ತುತ್ಯವಾಗಿದೆ ಎಂದು ಸದ್ರಿ ಶಾಲಾ ಮುಖ್ಯೋಪಧ್ಯಾಯರು ತಿಳಿಸುತ್ತಾರೆ

ಪುತ್ತೂರು-ನಾರಾಯಣ ಮಂಗಲ, ಪೆರಡಾಲ ವನ್ಯೆರೆ ಸಂಸ್ಕೃತ ಶಾಲಾ-ಕಾಲೇಜುಗಳ ಇನ್ಸ್‌ಪೆಕ್ಟರ್ ತೀರಿಸಿ, ತಾ. 27ರಂದು ಇಲ್ಲಿಗೆ ದಯಮಾಡಿದ್ದ ಸಂ। ಶಾಲಾ ಸುಪರಿಂಟೆಂಡೆಂಟ್ ಶ್ರೀ. T. S. ಬಾಲಸುಬ್ರಹ್ಮಣ್ಯ ಅಯ್ಯರ್, M. A., L. T. ಯವರು ಕಳೆದ ತಾ 28, 29 ಮತ್ತು 30ರಲ್ಲು ರಾಮಕುಂಜ, ಪುಣಿಮುಂಡ ಮತ್ತು ಕಮ್ಮಜೆ ಸಂ। ಶಾಲೆಗಳ ಇನ್ಸ್‌ಪೆಕ್ಷನ್ ಮುಗಿಸಿ ನಮ್ಮ ಜಿಲ್ಲೆಯ ಇತರ ಸಂ। ವಿದ್ಯಾಲಯಗಳ ಇನ್ಸ್‌ಪೆಕ್ಷನ್‌ಗೆ ಹೋಗುವರೆ ತಾತ್ಕಾರಂಪು ಮಂಗಳೂರಿಗೆ ತೆರಳಿರುತ್ತಾರೆ.

Notice

ಉಡುಪಿ ಡಿ. ಮು. ಕೋರ್ಟ್‌ನಲ್ಲಿ

S. C. No. 417/1946

ರಾಘವೇಂದ್ರ ಭಟ್ಟ-ವಾದಿ

ಮತ್ತು

ಶ್ರೀನಿವಾಸ ಉಪಾಧ್ಯಾಯ-ಮುಮ್ಮುಸ್ಸಾಣ ಉಪಾಧ್ಯಾಯರ ಮಗ, ಕಾರ್ಕಳ ತಾಲೂಕು ಪೆರ್ವಾಜೆ ಗ್ರಾಮ ಪ್ರತಿವಾದಿ ಯಿನರೆಂಗಳಿಗೆ

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಸುವದೇನೆಂದರೆ

ವಾದಿಯು ಪ್ರತಿವಾದಿಗೆ ತಾ 23 9 1943 ರಲ್ಲು ರೂ. ನಿಶಿ ರೂಪ್ಯಾ 300ಕ್ಕೆ ಬರೆಕೊಟ್ಟ ಕ್ರಯ ದಸ್ತಾವೇಜಿನ ಪ್ರತಿಫಲದಲ್ಲಿ ಬಾಕಿಯಿರಿಗೊಡಿಸಿದ ಅಸಲು ರೂಪ್ಯಾ 100/ ಪ ಪಕ್ಕ ಮೇಲಣ ಬಡ್ಡಿ ಮತ್ತು ರೂ ನೋಟಿಸು ಖರ್ಚು ಕೂಡಾ ಆ್ಯಪಜೆಗೆ ಪ್ರತಿವಾದಿಯು ಮೇಲೆ ವಾದಿಯು ಮಾಡಿರುವ ಮೇಲ್ಕಂಡ ದಾವೆಯನ್ನು ತಾ 23-12-46ಕ್ಕೆ ಯಿಟ್ಟಿಂತ್ತದೆ. ಆ ಕ್ಷೇಪಮಿದ್ದಲ್ಲಿ ಸದ್ರಿ ತಾ. 23-12-46ನೇ ದಿವಸ ಬೆಳಗ್ಗೆ 10 ಘಂಟೆಗೆ ಈ ಕೋರ್ಟು ಮುಂದೆ ಹಾಜ್ರಾಗಿ ಜ್ಯಾಹೀರಿಯಮಾಡಿಕೊಳ್ಳತಕ್ಕದ್ದು. ತಪ್ಪಿದರೆ ಏಕ್ಪಾರ್ಟಿ ಮಾಡಿ ಸದ್ರಿ ಬ್ಯಾಕ್ಷೆಯನ್ನು ತೀರ್ಮಾನಿಸಲ್ಪಡುವುದು.

ಹೊಕ್ಕಾಂ ಉಡುಪಿ, ತಾ. 30 11 46. | ಪ್ರ. V. Achar, Vakil for Plaintiff

---

Notice

ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟ್‌ನಲ್ಲಿ

O. S. No. 370/46

ರಾಘವೇಂದ್ರ ಭಟ್ಟ-ವಾದಿ

ಮತ್ತು

ಶ್ರೀನಿವಾಸ ಉಪಾಧ್ಯಾಯ -ಮುಮ್ಮುಸ್ಸಾಣ ಉಪಾಧ್ಯಾಯರ ಮಗ, ಕಾರ್ಕಳ ತಾಲೂಕು ಪೆರ್ವಾಜೆ ಗ್ರಾಮ ಪ್ರತಿವಾದಿ ಯಿನರೆಂಗಳಿಗೆ

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಸುವದೇನೆಂದರೆ

ವಾದಿಯು ಪ್ರತಿವಾದಿಗೆ ತಾ 23 9 1943 ರಲ್ಲು ರೂ. ನಿಶಿ ರೂಪ್ಯಾ 300ಕ್ಕೆ ಬರೆಕೊಟ್ಟ ಕ್ರಯ ದಸ್ತಾವೇಜಿನ ಪ್ರತಿಫಲದಲ್ಲಿ ಬಾಕಿಯಿರಿಗೊಡಿಸಿದ ಅಸಲು ರೂಪ್ಯಾ 100/ ಪ ಪಕ್ಕ ಮೇಲಣ ಬಡ್ಡಿ ಮತ್ತು ರೂ ನೋಟಿಸು ಖರ್ಚು ಕೂಡಾ ಆ್ಯಪಜೆಗೆ ಪ್ರತಿವಾದಿಯು ಮೇಲೆ ವಾದಿಯು ಮಾಡಿರುವ ಮೇಲ್ಕಂಡ ದಾವೆಯನ್ನು ತಾ 23-12-46ಕ್ಕೆ ಯಿಟ್ಟಿಂತ್ತದೆ. ಆ ಕ್ಷೇಪಮಿದ್ದಲ್ಲಿ ಸದ್ರಿ ತಾ. 23-12-46ನೇ ದಿವಸ ಬೆಳಗ್ಗೆ 10 ಘಂಟೆಗೆ ಈ ಕೋರ್ಟು ಮುಂದೆ ಹಾಜ್ರಾಗಿ ಜ್ಯಾಹೀರಿಯಮಾಡಿಕೊಳ್ಳತಕ್ಕದ್ದು. ತಪ್ಪಿದರೆ ಏಕ್ಪಾರ್ಟಿ ಮಾಡಿ ಸದ್ರಿ ಬ್ಯಾಕ್ಷೆಯನ್ನು ತೀರ್ಮಾನಿಸಲ್ಪಡುವುದು.

ಹೊಕ್ಕಾಂ ಉಡುಪಿ, ತಾ. 30 11 46. | ಪ್ರ. V. Achar, Vakil for Plaintiff

---

ಕಿರಿಯರ ಪ್ರಪಂಚದ ಪ್ರಕಟಣೆಗಳು

ಸ್ವತಂತ್ರ ಜೀವನೋಪಾಯ	(ಕೆ. ಹೊನ್ನಯ್ಯ ಶೆಟ್ಟಿ)	0	3	0
ಸಂಶಯ ಪಿಶಾಚಿ	(ಕೆ. ಕೆ ಶೆಟ್ಟಿ)	0	8	0
ನಾಡ ಕತೆಗಳು	(ಸಂಕಲನ)	0	3	0
ಕುಶಲವ	(ಕೆ. ಕೆ. ಶೆಟ್ಟಿ)	0	5	0
ಕಾವ್ಯ ಸಾಮ್ರಾಜ್ಯ	(ಕವಿತಾ ಸಂಗ್ರಹ)	1	0	0
ಮುಂದಿನ ದೇವರು	(ಕೆ. ಕೆ. ಶೆಟ್ಟಿ)	0	3	0
ವ್ಯಭಿಚಾರಿಣಿ ಯಾರು	(,,)	1	0	0
ಹೆಂಡ್ತಿ ಗಂಡನಾದರೆ	(,,)	0	4	0
ಪುರುಷ ನಧು	(,,)	0	4	0
ಸನ್ಯಾಸಿಯ ಸೋಗಿನಲ್ಲಿ	(,,)	0	8	0
ನಂದಾ ದೀಪ	(ಕೊರಡ್ಕಲ್ ಶ್ರೀನಿವಾಸ ರಾವ್)	0	10	0
ದೇಶಭಕ್ತ	(ಕೆ. ಕೆ. ಶೆಟ್ಟಿ)	1	4	0
ಪ್ರೇಮ ವಿಜಯ	(,,)	1	0	0
ರಂಗಭೂಮಿ	(ಎಸ್. ವೆಂಕಟರಾಜ)	0	8	0
ಸೇವಾಪಥ	(ಎಸ್. ಎಲ್ ಸುಬ್ರಹ್ಮಣ್ಯಂ)	0	8	0
ನಾರೀ ಹೃದಯ	(,,)	0	14	0
ಭಾರತೀಯ ಕತೆಗಳು	(ಕೊರಡ್ಕಲ್ ಶ್ರೀನಿವಾಸ ರಾವ್)	0	14	0
ಪ್ರಕಾಶ	(ಸರಸ್ವತಿ ಬಾಯಿ ರಾಜವಾಡೆ)	2	4	0
ಮೂರು ಪ್ರಹಸನಗಳು	(ಕೊರಡ್ಕಲ್ ಶ್ರೀನಿವಾಸರಾವ್)	0	14	0
ನಗೆ ನೋಟಗಳು	(ಕೆ. ವಿಟ್ಠಲ ಶೆಣೈ, ಬಿ. ಎ. ಎಲ್.ಟಿ.)	0	14	0
ಅನ್ನದೇವರು ಮತ್ತು ಇತರ ಕತೆಗಳು	(ಕಯ್ಯಾರ ಕಿಂಞಣ್ಣ ರೈ)	1	0	0
ಭಾರತದಲ್ಲಿ ಜಾತಿಭೇದ	(ಎಸ್. ಎಲ್. ಸುಬ್ರಹ್ಮಣ್ಯಂ)	1	0	0
ವಿಷ್ಣು ವಿನ ದಶಾವತಾರಗಳು ಅರ್ಥಾತ್ ದಶಾವತಾರಗಳು	(ಎಂ ಪಿ. ಹೆಗ್ಡೆ)	0	12	0
ಆಕಾಶಗಂಗೆ	(ಎಸ್ ವೆಂಕಟರಾಜ)	1	12	0
ಸ್ವಾತಂತ್ರ್ಯವೀರ ಸಾವರಕರರು	(ಇಂದಿರಾಬಾಯಿ)	1	4	0
ಜೀವನ ಸಂಗ್ರಾಮ	(ಪಿ. ಶೀನ ಶೆಟ್ಟಿ)	1	8	0

ಪುಸ್ತಕಗಳು ಸಿಕ್ಕುವ ಸ್ಥಳ—

ನವಭಾರತ ಪುಸ್ತಕ ಭಂಡಾರ, ಉಡುಪಿ.

ಇಂದಿಗೆ ತಕ್ಕ ನಾಟಕ

ದೇಶಭಕ್ತ

ಶ್ರೀ. ಕೆ. ಕೆ. ಶೆಟ್ಟರು ಸುಲಭವಾದ ಶೈಲಿಯಲ್ಲಿ ಎಲ್ಲರಿಗೂ ಮಂದಟ್ಟಾಗುವಂತೆ ಬರೆದ ಬೋಧಪ್ರದ ಸಾಮಾಜಿಕ ನಾಟಕ.

ದೇಶಭಕ್ತನು ಹೇಗಿರಬೇಕು? ಆವನ ಧ್ಯೇಯ ಧೋರಣೆ ಹೇಗೆ ಆದರ್ಶವಾಗಿರಬೇಕು? ಜನತಾ ಜನಾರ್ದನನ ಸೇವೆ ಎಂದರೇನು? ಎಂಬಿತ್ಯಾದಿಗಳನ್ನು ಅತಿ ಕೌಶಲ್ಯದಿಂದ ಚಿತ್ರಿಸಿ, ಸಂಸ್ಥಾನವಲ್ಲಿ ನರೇಂದ್ರರು ಮಾಡುತ್ತಿರುವ ದಬ್ಬಾಳಿಕೆಯ ಭೀಕರ ಚಿತ್ರವನ್ನು ನುಂಡಿಟ್ಟು ಪ್ರಜಾಸ್ವಾತಂತ್ರ್ಯವು ಹೇಗೆ ಸಾಧ್ಯವೆಂಬುದನ್ನು ವಿವರಿಸುವ ರಾಜಕೀಯ-ಸಾಮಾಜಿಕ ನಾಟಕ.

ಬೆಲೆ ರೂ. 1—1—0

ನವಭಾರತ ಬುಕ್ ಡಿಪೊ,
ಉಡುಪಿ.

1 ರೂಪಾಯಿಗೆ 10 ಪುಸ್ತಕಗಳು

(1) ನಾಡಕತೆಗಳು 0 3 0; (2) ಬಾಲವಾಙ್ಮಯ 0-3 0; (3) ಚಲಚ್ಚಿತ್ರ ಪದ್ಯಾವಳಿ 0 3 0, (4) ವೀರ ಭೂಮಿ 0-2 0; (5) ರಂಭಾಕ ವಧೆ 0 2-0 (6) ಸ್ವತಂತ್ರ ಜೀವನೋಪಾಯ 0 3 0; (7) ಮುದುಕನ ಹೆಂಡ್ತಿ ಥಕ ಧೈ ರಾಧೆ 0 2 0 (8) ಬಂಗಾರ್ದಂಗಿದ ಕತೆ 0-1 0; (9) ಏಕಾಂತ ರಾಮಾಯಣ 0-1-0, (10) ಭಾರತ ಗೀತಾಂಜಲಿ 0-2-0; ಒಂಸಂ ರೂಪಾಯಿ ಮಾಣಿಯಾರ್ಡರು ಮಾಡಿದವರಿಗೆ ಯಾ ಒಂದು ರೂಪಾಯಿಯ ಸ್ಟಾಂಪು ಯಾ ಒಂದು ಮನಿಯಿರಾಯ ಪೋಸ್ಟಲ್ ಆರ್ಡರ್ ಕಳಿಸಿದವರಿಗೆ ಮೇಲಿನ 10 ಪುಸ್ತಕಗಳನ್ನು ಬುಕ್ ಪೋಸ್ಟಾನಾಡಿ ಕಳಿಸಲಾಗುವುದು.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಶ್ರೀ. ಕಾರಂತರ ಪುಸ್ತಕಗಳು

ಗೀತಾ ನಾಟಕಗಳು	2 4 0
ಮರಳಿ ಮಣ್ಣಿಗೆ	4 8 0
ಸಿರಿಗನ್ನಡ ಅರ್ಧಕೋಶ	4 0 0
ಸೂರ್ಯ ಚಂದ್ರ	0 4 0
ಪೈಲಿಕಲ್ಲಿನೊಡನೆ ಮಾತು	
ಕತೆಗಳು	1 4 0
ಹಳ್ಳಿಯ ಹತ್ತು ಸಮಸ್ತರು	1 4 0

ನವಭಾರತ ಪುಸ್ತಕ ಭಂಡಾರ, ಉಡುಪಿ.



Approved firm by the Govt.of Mysore
Certified by the Agent of the Govt. of Cylone & Indian.

ಮಂಗಳೂರು

ಮಂಗಳೂರಲ್ಲಿ ಮಾನ್ಯ ವಿ. ವಿ. ಗಿರಿಗಳು—ಮಧ್ಯಾಸು ಸರಕಾರದ ಕೈಗಾರಿಕೆ ಮತ್ತು ಸಾಜೂರ ಮಂತ್ರಿಗಳಾದ ಮಾನ್ಯ ವಿ. ವಿ. ಗಿರಿ. ಅವರು ತಾ. ೩೫ರಂದು ಮಂಗಳೂರಿಗೆ ಬಂದಿದ್ದು ತಾ. ೨೦ರಂದು ಮುಂಜಾನೆಯ ಮೈಲಿಗೆ ಒಂತೆರಳಿದರು.

ಸೆಂಟ್ರಲ್ ಕೊ.ಓಪರೇಟಿವ್ ಬ್ಯಾಂಕಿನ ಹೊಸ ಕಟ್ಟಡದ ಶಂಕುಸ್ಥಾಪನೆಯು ತಾ.೨೦ ರಂದು ಪೂರ್ವಾಹ್ನ ೯ ಗಂಟೆಗೆ ಮಾನ್ಯ ಮಂತ್ರಿಗಳ ಹಸ್ತದಿಂದ ನೆರವೇರಿತು. ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳು ಮಾತನಾಡುತ್ತ ಸಹಕಾರಿ ಸಂಸ್ಥೆಯ ಅಭಿವೃದ್ಧಿಗೆ ಸಕಲ ಸಹಾಯಸಹಕಾರವನ್ನೂ ಕೊಡಲು ಮಧ್ಯಾಸು ಸರಕಾರವು ಸಿದ್ಧವಿದೆ ಎಂದೂ, ಪ್ರಕೃತದ ನೇಶನ್ ಪದ್ಧತಿಯು ಕೊನೆಗೊಂಡೂ ಈ ಸಂಸ್ಥೆಯು ಮಾಡತಕ್ಕ ಇನ್ನೂ ಹಲವು ಕಾರ್ಯಗಳಿವೆ ಎಂದೂ ಹೇಳಿ, ಶ್ರೀ. ಎಂ. ಶಿವರಾಯರ ಕಾರ್ಯದಕ್ಷತೆಯನ್ನು ಪ್ರಶಂಸಿಸಿದರು. ಆರಂಭದಲ್ಲಿ ಶ್ರೀ. ಎಸ್ ನರ್ಸಪ್ಪಯ್ಯನವರು ಮಂತ್ರಿಗಳಿಗೆ ಸ್ವಾಗತವಿತ್ತು ಶಂಕುಸ್ಥಾಪನೆಯನ್ನು ಜರಗಿಸುವಂತೆ ವಿನಂತಿಸಿಕೊಳ್ಳುತ್ತ, ನಮ್ಮ ಜಿಲ್ಲೆಯಲ್ಲಿ ಸಹಕಾರಿ ಸಂಸ್ಥೆಯು ನಡೆಸುತ್ತಿರುವ ಕಾರ್ಯಕಲಾಪಗಳನ್ನು ವಿವರಿಸಿದರು.

ಸಂಜೆ ೬ ಗಂಟೆಗೆ ಮಾನ್ಯ ಮಂತ್ರಿಗಳ ಹಸ್ತದಿಂದ ಕರ್ನಾಟಕ ಪೊಲಿಟೆಕ್ನಿಕ್ ಎಂಬ ಕೈಗಾರಿಕೆಯ ತರಬೇತಿ ಶಾಲೆಯ ಶಂಕುಸ್ಥಾಪನೋತ್ಸವವು ಕದ್ರಿ ಗುಡ್ಡೆಯ ಮೇಲೆ. ಈ ಶಾಲೆಯು ಕಟ್ಟಡದ ರಚನೆಗಾಗಿ ನಿಯೋಜಿಸಲಾಗಿದ್ದ ಸ್ಥಳದಲ್ಲಿ ನಡೆಯಿತು. ಆರಂಭದಲ್ಲಿ ಮಾನ್ಯ ಮಂತ್ರಿಗಳನ್ನೂ ಇಂಡಸ್ಟ್ರೀಸ್ ಇಲಾಖೆಯ ಡೈರೆಕ್ಟರರಾದ ಮಿ. ಬರ್ಲೀ ಮತ್ತು ಡಿ. ಡೈರೆಕ್ಟರರಾದ ಶ್ರೀ ಆಡ್ಯಂತಾಯರನ್ನೂ ಸ್ಥಳೀಯ ಟ್ರೇಡ್ ಸ್ಕೂಲಿನ ಸುಪರಿಂಟೆಂಡೆಂಟರು ಸ್ವಾಗತಿಸಿ ಹಾರಗಳನ್ನರ್ಪಿಸಿದ ಬಳಿಕ ಗ್ರೂಪ್‌ಫೋಟು ತೆಗೆಯಲಾಯಿತು. ಅನಂತರ ಜಿಲ್ಲಾ ಕಲೆಕ್ಟರರಾದ ಬೆಟ್ಸ್ ಸಾಹೇಬರು ಮಂತ್ರಿಗಳಿಗೆ ಸ್ವಾಗತಸೂಚಿಸಿದರು. ಈ ಶಾಲೆಯ ಕುರಿತಾಗಿ ನಾಲ್ಕು ಮಾತುಗಳನ್ನಾಡಬೇಕೆಂದು ಮಿ. ಬರ್ಲೀಲಿಯವರೊಡನೆ ವಿನಂತಿಸಿಕೊಂಡರು. ಮಿ. ಬರ್ಲೀಲಿಯವರೊಡನೆ ವಿನಂತಿಸಿಕೊಂಡರು. ಮಿ. ಬರ್ಲೀಲಿಯವರು ಮಾತನಾಡುತ್ತಾ, ಎಸ್. ಎಸ್ ಎಲ್. ಸಿ. ಪಾಸಾದ ವಿದ್ಯಾರ್ಥಿಗಳಿಗೆ ಕೈಗಾರಿಕೆಯ ತರಬೇತಿ ಕೊಡುವುದೇ ಈ ಶಾಲೆಯ ಉದ್ದೇಶ್ಯ ಆರ್ಡ್ಯಾ. ಇಲೆಕ್ಟ್ರಿಸಿಟಿ, ಮೆಕೆನಿಕಲ್ ಇಂಜಿನಿಯರಿಂಗ್ ತರಬೇತಿಯನ್ನೂ, ಸಾಸ್ತ್ರೀಯ ರೀತಿಯ ವಿಮಾನುಗಾರಿಕೆಯನ್ನೂ ಈ ಶಾಲೆಯಲ್ಲಿ ಕಲಿಸಲಾಗುವುದು. ಮಾನುಗಾರಿಕೆಗೆ ಇಲ್ಲಿ ತುಂಬಾ ಅನುಕೂಲವಿರುವುದರಿಂದ ಈ ವ್ಯವಸಾಯವನ್ನು ಸಾಸ್ತ್ರೀಯ ರೀತಿಯಿಂದ ಅಭಿವೃದ್ಧಿಗೊಳಿಸುವ ಯೋಜನೆ ಇದೆ. ಇದಕ್ಕೆ ಬೇಕಾದ ಪ್ರೆಸ್ ಮತ್ತು ಪ್ರೀಸಿಂಗ್ ಫೇಕ್ಟರಿಗಳನ್ನೂ ತೆರೆಯಲಾಗುವುದು. ಶಾಲೆಯಲ್ಲಿ ಮೂರು ವರ್ಷಗಳ ಕಾಲ ತರಬೇತಿ ಕೊಟ್ಟು ಆ ಬಳಿಕ ಕಾರ್ಯಾನೆಗಳಿಗೆ ಇವರನ್ನು ಕಳುಹಿಸಿ ಸ್ವಾನುಭವ ತರಬೇತಿ ಕೊಡಲಾಗುವುದು. ಶಾಲೆಯ ಸ್ಥಾಪನೆಗೆ ೧೪ ಲಕ್ಷ ರೂ.ಗಳ ವೆಚ್ಚ ತಗಲಬಹುದು. ಜಿಲ್ಲೆಯ ಉದಾರವ್ಯಕ್ತಿಗಳ ಸಹಾಯ ನೀರೀಕ್ಷಿಸಲಾಗಿದೆ.

ಮಾನ್ಯ ಗಿರಿಯವರು ಮಾತನಾಡುತ್ತ ಹೀಗೆಂದರು: "ನಮ್ಮ ಪ್ರಾಂತದ ಕಡೆಗಳಲ್ಲಿ ಈ ರೀತಿಯ ಶಾಲೆಗಳನ್ನು ತೆರೆಯಲು ಸರಕಾರವು ಸಂಕಲ್ಪಿಸಿದೆ. ಈ ಶಾಲೆಗಳಿಗೆ ಉಜ್ವಲವಾದ ಭವಿತವ್ಯವಿದೆ. ಇದೇ ರೀತಿಯ ಇನ್ನೂ ಹಲವಾರು ಜನೋಪಯೋಗಿ ಉದ್ಯಮಗಳನ್ನು ಕೈಕೊಳ್ಳಲು ಮಧ್ಯಾಸು ಸರಕಾರವು ಸಂಕಲ್ಪಿಸಿದೆ. ಪ್ರಾಂತದ ತಳಜಿಲ್ಲೆಗಳಿಂದ ತಜ್ಞ ಕಾರ್ಖಾನೆಗಳನ್ನಾರಿಸಿ ಅಲ್ಲಿಗೆ ಸರ್ವವಿಧದ ಲ್ಲೂ ಸ್ವಾವಲಂಬಿ ಕಾರ್ಖಗಳಾಗುವಂತೆ ಮಾಡುವ ಯೋಜನೆಯೊಂದನ್ನು ಕೈಕೊಂಡಿದೆ. ಹಾಗೆಯೇ ೫೫ ವಿಧದ ಗುಡಿ ಕೈಗಾರಿಕೆಗಳೂ ಪ್ರೋತ್ಸಾಹಕೊಡುವ ಯೋಜನೆಯೊಂದಿದೆ. ನಮ್ಮ ಕೃಷಿ ಮತ್ತಿತರ ಕಾಮಗಾರಿಗಳಿಗೂ ಬೇಕಾಗುವ ವಿದ್ಯುತ್ತನ್ನು ಅಪಷ್ಪು ಚೀಗನೆ ಒದಗಿಸಿಕೊಡಲಾಗುವುದೆಂದು ಭರವಸೆಕೊಡಬಲ್ಲೆ" ಎಂದರು, ರಾ. ಸಾ. ಪೂಜಾರಿ ಉಪಕಾರ ಸ್ಮರಣಪೂರ್ವಕ ಸಮಾರಂಭ ಕೊನೆಗೊಂಡಿತು.

ತಾ. ೨೭ರಂದು ಸಂಜೆ ಡಾ. ಯು. ಪಿ. ಮುಲ್ಕರ ಅಧ್ಯಕ್ಷತೆಯಲ್ಲಿ ಮೈದಾನದಲ್ಲಿ ಸೇರಿದ ಸಭೆಯಲ್ಲಿ ಮಾನ್ಯ ಮಂತ್ರಿಗಳು ಹೀಗೆಂದರು: "ಕೇಂದ್ರದಲ್ಲಿ ಮತ್ತು ಪ್ರಾಂತಗಳಲ್ಲಿ ಜನತಾ ಸರಕಾರವು ಸ್ಥಾಪಿತವಾದ ಮಾತ್ರದಿಂದ ಸ್ವರಾಜ್ಯ ದೊರೆಯಿತೆಂದು ಭಾವಿಸುವುದು ಕೇವಲ ಭ್ರಮೆ. ಮೂರನೆಯ ಪಕ್ಷವೊಂದು ಇನ್ನೂ ಸ್ಥಿರವಾಗಿದೆ. ದೇಶವು ಪೂರ್ಣ ಸ್ವತಂತ್ರವಾದಾಗ ದೇಶದ ಪ್ರತಿಯೊಬ್ಬನ ರಕ್ಷಣೆಯನ್ನೂ ಸರಕಾರ ವಹಿಸಬೇಕು. ಮಾತೆಯ ಗರ್ಭದಲ್ಲಿ ಉತ್ಪತ್ತಿಯಾದಂದಿನಿಂದ, ಗೋರಿಯನ್ನು ಸೇರುವ ವರೆಗಿನ ಪ್ರತಿಯೊಂದು ವ್ಯಕ್ತಿಯ ರಕ್ಷಣೆಯು ಸರಕಾರದ ಹೊಣೆಯಾಗಿರಬೇಕು. ಸಕಲರಿಗೂ ಊಣಲು ಬೇಕಾದಷ್ಟು ಅನ್ನ, ಇರಲು ನಾನೆ, ಹೊದೆಯಲು ಬಟ್ಟೆ ಇವನ್ನು ಮಾತ್ರ ಒದಗಿಸಿಕೊಡುವುದಲ್ಲದೆ, ಧರ್ಮಾರ್ಥದ ವಿದ್ಯೆ, ಆ ಬಳಿಕ ಉದ್ಯೋಗವನ್ನು ಕಲ್ಪಿಸಿಕೊಡುವುದು, ಪ್ರಾಯ ಮೀರಿದ ಬಳಿಕದ ರಕ್ಷಣೆ, ಆರೋಗ್ಯ ರಕ್ಷಣೆಗೆ ಬೇಕಾದ ಸಹಾಯ ಇವನ್ನೊದಗಿಸುವುದು ಕಾಂಗ್ರೆಸ್ ಕನಸು ಕಾಣುತ್ತಿರುವ ಸ್ವತಂತ್ರಭಾರತ ಸರಕಾರದ ಹೊಣೆ. ನನ್ನುದೇ ಆದ ಸಮಾಜವಾದವನ್ನು ನಾವು ಸ್ಥಾಪಿಸಬೇಕು. ಮೇಲುಕೀಳೆಂಬ ಭಾವನೆ ಹೋಗಬೇಕು. ಈ ಅಂತರಗಳನ್ನು ಕಲ್ಪಿಸಿಕೊಂಡವರು ನಾವೆ. ನನ್ನು ರಾಷ್ಟ್ರದಲ್ಲಿ ಸ್ಥಾಪಿಸಬೇಕಾಗಿರುವ ಸಮಾಜವಾದಕ್ಕೆ, ಸತ್ತುಹೋದ ಪಿಟ್ಲರ್ ಮುಸಲಿನಿಗಳ ಆದರ್ಶವನ್ನೋ ಅಧವಾ ಸ್ಟಾಲಿನನ ಆದರ್ಶವನ್ನೋ ನಾವು ಅನುಸರಿಸಬೇಕಾಗಿಲ್ಲ. ನಮ್ಮ ಮುಖಂಡರಾದ ಗಾಂಧಿಜಿ, ನೆಹರು ಮೊದಲಾದವರೆ, ನಮ್ಮ ಸಮಾಜ ಸುಧಾರಣೆ ಬೇಗಾಗಬೇಕೆಂಬುದನ್ನು ನಿರೂಪಿಸಿದ್ದಾರೆ" ಎಂದರು. ಆ ಬಳಿಕ ಮಧ್ಯಾಸಿನ ಕಾಂಗ್ರೆಸ್ ಸರಕಾರವು ಬರುವ ಜನವರಿ ತಿಂಗಳ ನ್ಯಾಯ ಸಭಾಧಿನೇತನದಲ್ಲಿ ಜಾರಿಗೆ ತರಲಿರುವ ಮಜೂರರ ಹಿತಸಂಬಂಧವಾದ ಮಸೂದೆಗಳ ಕುರಿತು ಪ್ರಸ್ತಾವಿಸಿದರು. "ಹಿಂದೂ, ಮುಸ್ಲಿಂ, ಕ್ರೈಸ್ತ, ಪಾರ್ಸಿ, ಸಿಖ್ಖರೆಂಬ ನಾವು ಈ ದೇಶದ ನಿವಾಸಿಗಳೆಂಬುದನ್ನು ನೋಡಲು ತಿಳಿಯಬೇಕು. ಒಕ್ಕಟ್ಟಾಗಬೇಕು, ಸಂಘಟಿತರಾಗಬೇಕು" ಎನ್ನುತ್ತ ಭಾಷಣವನ್ನು ಕೊನೆಗೊಳಿಸಿದರು.

ನಗರದಲ್ಲಿ ನಿಳಿಲನೆಯ್ಯುಪ್ರಕರಣ ವನ್ನು ಜಾರಿಮಾಡಿ ಸಫೈಮರಪಡೆಗೆಳ ಮೇಲೆ ನಿರ್ಬಂಧಾಜ್ಞೆಗಳು ಹೊರಡಿಸಲಾಗಿದೆ. ಮುಷ್ಕರಗಾರರ ಗಲಭೆಯೇ ಇದಕ್ಕೆ ಕಾರಣವೆಂದು ತಿಳಿಯಬರುತ್ತದೆ

ಸಾಹಿತ್ಯದ ಸುಗ್ಗಿ!

ಪ್ರತಿಯೊಬ್ಬರೂ ತಪ್ಪದೆ ಓದಬೇಕಾದ ಸರಸ-ಸುಮನೋಹರ ಪುಸ್ತಕಗಳು

ಮೋಡತಿ (ಶರತ್ಕಾದಂಬರಿ)	೨ ೦ ೦	ಪ್ರತಿಬಿಂಬ (ಕಥಾಸಂಗ್ರಹ)	೧ ೬ ೦
ವಿಜಯಾ ,,	೧ ೪ ೦	ಸುದರ್ಶನ (ಆನಂದಕಂದ)	೧ ೪ ೦
ದೇವದಾಸ ,,	೧ ೪ ೦	ಪ್ರೇಮಪಥ (ಶರತ್)	೦ ೫ ೦
ಶ್ರೀಕಾಂತ (೪ ಭಾಗ ಪೂರ್ಣ)	೧೧ ೦ ೦	ರಾಜಯೋಗಿ ,,	೨ ೦ ೦
ರಾಜಲಕ್ಷ್ಮಿ (ಶರತ್)	೧ ೪ ೦	ನಮ್ಮ ಬದುಕು(ಆನಂದಕಂದ)	೦ ೧೪ ೦
ವೈಕುಂಠನ ಮೃತ್ಯುಪತ್ರ	೧ ೪ ೦	ಮನೆಯ ಸುಖಸಾಂತಿ	೦ ೧೫ ೦
ಅನ್ನಪೂರ್ಣಾ ಮಂದಿರ (ಕಾದಂಬರಿ)	೨ ೦ ೦	ನುಹಾಸತಿ (ಶರತ್)	೦ ೫ ೦
ಚಕಾವುಕಿ (ಬೇಧ್ರೆ)	೨ ೦ ೦	ಸನ್ಯಾಸಿನಿ (ಪ. ಪಿ ಜೋಶಿ)	೦ ೧೮ ೦
ಸಾವಿನ ಉಡಿಯಲ್ಲಿ (ಎನ್ಕೆ)	೪ ೦ ೦	ಕನ್ನಡಿಯ ಹುಟ್ಟು (ಶಂ ಬಾ.)	೧ ೭ ೦
ಗಂಡುಹೆಣ್ಣಿನ ಸಮಸ್ಯೆ	೩ ೪ ೦	ಹೇಮಾಂಗಿನಿ (ಶರತ್)	೦ ೪ ೦
ರಮಾನಾಥ (ಪ್ರೇಮಚಂದ)	೪ ೦ ೦	ಸ್ವತಂತ್ರ ಇತಿಹಾಸ	
ಘಾಟೀ ಮುದುಕ (ದೇವುಡು)	೧ ೪ ೦	ಅಜಾದ ಹಿಂದ್ (ಸಚಿತ್ರ)	೧ ೮ ೦
ಬಿರುಗಾಳಿ (ಪ್ರೊ. ಪಡಕೆ)	೩ ೪ ೦	ನೇತಾಜ ,,	೧ ೪ ೦
ಭೂಮಾತೆ ಮತ್ತು ಮಂದಿರ	೧ ೪ ೦	ಸುಭಾಸ ಸೇನೋಜ್ಜೀವನ	೧ ೪ ೦
ರೇಡಿಯೋ ನಾಟಕಗಳು(ಬಿ.ಚಿ)	೧ ೪ ೦	ಕಾಮಶಾಸ್ತ್ರದ ಗ್ರಂಥಗಳು	
ಧರ್ಮಸಂಕಟ (ಕಾದಂಬರಿ)	೨ ೦ ೦	ಆನಂಗರಂಗ (೨ನೇ ಆ)	೧ ೪ ೦
ಬೆಳವಲದ ಬಾಗ್ಮಲಕ್ಷ್ಮಿ	೨ ೪ ೦	ರತಿರಹಸ್ಯ (೩ನೇ ಆ)	೧ ೪ ೦
[illegible]	೨ ೦ ೦	ಕಾಮಶಾಸ್ತ್ರ (ಸಾತ್ಸ್ಯಾಯನ)	೧ ೪ ೦
ಡಾಕ್ಟರ್ ಗುರೂರ (ಪತ್ತೇದಾರಿ)	೦ ೬ ೦	ಕಾನಾಂಕುಜ (೨ನೇ ಆ)	೧ ೪ ೦
ಉರ್ದೂ ಕಥಾವಳಿ (ಜೋಶಿ)	೦ ೪ ೦	ವಿಕೃತಕಾಮ	೧ ೪ ೦

[ಪಿ. ಸಿ. ಪೆಜ್ಜ ಬೇರೆ]

ಈ ಪುಸ್ತಕಗಳಲ್ಲಿ ೧೦ ರೂಗಳಿಗಿಂತ ಹೆಚ್ಚಿಗೆ ಪುಸ್ತಕ ತರಿಸುವವರಾದರೆ ಅಂಚೇ ಪೆಜ್ಜ ಉಚಿತ. ೨೦ ರೂಗಳಿಗಿಂತ ಹೆಚ್ಚಿಗೆ ತರಿಸುವುದಾದರೆ ರೂ.೬ಕ್ಕೆ ಒಂದಾಣೆ ಕಮಿಶನ್ ಸಹ ಕೊಡಲಾಗುವುದು. ಮುಂಗಡ ಹಣದೊಂದಿಗೆ ಆರ್ಡರ್ ಕಳಿಸಿರಿ.

ಸಮಾಜ ಪುಸ್ತಕಾಲಯ, ಧಾರವಾಡ

—ಮಕ್ಕಳನ್ನು ಹಡೆಯುವುದು ಸಾಕು—

ಒತ್ತಕ ಸ್ತ್ರೀಯರಿಗೆ **ಬರ್ಥ ಕಂಟ್ರೋಲ್** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಕೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪತ್ಯ:—[illegible] ಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ ೨—೦—೦. ಪೋಷ್ಟ ಚಾರ್ಜು ಬೇರೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ಡಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಫಾರ್ಮಸಿ—ಹುಬ್ಬಳ್ಳಿ, ಗದಗ್ ಬಾಲಕೋಟೆ ಧಾರವಾಡ, ನಿಡಗುಂದಿ—ದಾನಪ್ಪ ಸದ್ದಲಿಂಗಪ್ಪ ಧಾರವಾಡಕರ, ವಿಜಾಪುರ, ಚಿಕ್ಕೋಡಿಯಲ್ಲಿ:—ಹುಂಬರವಾಡಿ ಸ್ಟೋರ್ಸ್. ಹಾವೇರಿಗೆ:—ಹಾವೇರಿಗೆ ಪ್ರೆಸ್ಸು. ಅರ್. ಎಲ್. ಕವಲಪಾಟಿ, ಕೆಮಿಸ್ಟ, ಹಾವೇರಿ, ಜಿ. ಧಾ.

NOTICE.

ಕುಂದಾಪುರದ ಮಮ. ಕೋರ್ಟಿನಲ್ಲಿ

O. S. 331/1946.

ವಾದಿರು. ಶಿದ್ದಮ್ಮ ಸೆಟ್ತಿ. ಕೂಡಾ.

ಪ್ರತಿವಾದಿರು. ತೇಜಪ್ಪ ಶೆಟ್ಟಿ ಕೂಡಾ.

39ನೇ ಪ್ರತಿವಾದಿಯು.

ಅಂತಪ್ಪಮ್ಮ ಸೆಟ್ತಿ. ಮುತ್ತಕ್ಕ ಸೆಟ್ತಿ ಮಗಳು. ಕುಂಬಾಪುರ ತಾಲ್ಲೂಕು ನೊಳಹಳ್ಳಿ ಗ್ರಾಮದಲ್ಲಿರುವವಳು.

ಸದ್ರಿ ಪ್ರತಿವಾದಿಗೆ ತಿಳಿಯಪಡಿಸುವುದೇನೆಂದ್ರೆ.

ವಾದಿರು ತಮಗೆ ಪ್ಲೆಂಟಿನಲ್ಲಿ ಕಾಣಿಸಿದ ಆಸ್ತಿಗಳ ಹುಟ್ಟುವಳ್ಳಿಯಿಂದ ಬರತಕ್ಕ ಅಪರಾರ್ಕ್ಕೆ ಮೇಲಿನ ದಾವೆಯನ್ನು ಮಾಡಿರುತ್ತಾರೆ. ಆ ಕುರಿತು ನಿನ್ನುದ್ದೇಶವಾದರೂ ಅಕ್ಷೇಪಣೆಯಿದ್ದರೆ ತಾ. 13-12-46ನೇ ದಿವಸ ಸದ್ರಿ ಕೋರ್ಟು ಮುಂದೆ ಹಗಲು 11 ಘಂಟೆಗೆ ಹಾಜರಾಗಿ ಜಾಬೀರುಮಾಡಿಕೊಳ್ಳತಕ್ಕದ್ದು, ತಪ್ಪಿದರೆ ನಿಮ್ಮನ್ನು ಯೆಕ್ಸ್‌ಪಾರ್ಟಿಮಾಡಲಾದೀತೆಂತ ಕೋರ್ಟು ಹ್ಕುಂ ಪ್ರಕಾರ ನಮಗೆ ತಿಳಿಸಿರುತ್ತದೆ.

Y Tejappa Shetty,
Advocate for Plaintiffs.

Coondapoor, 28-11-1946.



ಕ್ಷಣಿಕ ಗುಣಕೊಡುವ ಔಷಧದ ಬೆನ್ನು ಹತ್ತಿ ಮರುಳಾಗಬೇಡಪ್ಪಾ.

ಪುರೋಹಿತ ಶ್ವಾಸಹಾರೀ ಔಷಧ ಮಾತ್ರ ಬೇರೆ ಅದು ದಮ್ಮನ್ನು ಬರೇ ದಮುಕಿ, ಇಡಡೆ ಆದಿನ್ನು ಬೇರುಸಹಿತ ಕಿತ್ತು ಹಿಗೆಯುವುದು ಈ ಔಷಧ ಸುರುವು ಮಾಡಿದಾಗಲೇ ಕೆಮ್ಮೂ ವೇಕೂ ಇಲ್ಲುವವು; ಹೊಟ್ಟೆ ಎಳಾಗುವದು; ಪಚನಕ್ರಿಯೆಯು ತಿದ್ದುವದು ಪುಷ್ಪುಸಗಳು ಗಟ್ಟಿಯಾಗುವುವು. ಆ ಮೇಲೆ ದಮ್ಮಿರಲಿಕ್ಕೆ ಸ್ಥಳವೇ ಇಗುವದಿಲ್ಲ.

ದಮ್ಮು, ತೇಕು, ಬೆನ್ನು ನೋವು, ಗಂಟಲು ಉರಿಯುವಂಥ ಕೆಮ್ಮು ಮುಂತಾದ ವಿಕಾರಕ್ಕೆ ಪುರೋಹಿತಶ್ವಾಸಹಾರೀ ಪ್ಲೇನ್ (ನೀಲೀ ಪ್ಯಾಕಿಂಗ್) ತೆಗೆದುತೊಳ್ಳಬೇಕು. ಅಜೀರ್ಣ ಮತ್ತು ಅಮ್ಲಪಿತ್ತದಿಂದ ಬಳಲುವ ದಮ್ಮಿನ ವರು ಶ್ವಾಸಹಾರೀ ಕಂಪೌಂಡ (ಕೆಂಪು ಪ್ಯಾಕಿಂಗ್) ತೆಗೆದುಕೊಳ್ಳಬೇಕು.

೩ ಔನ್ಸ್ ೬ ಔನ್ಸ್ ೧೬ ಔನ್ಸ್ ಬಾಟ್ಲುಗಳಿಗೆ ಕ್ರಮವಾಗಿ ರೂ.೩-೩-೦; ೫.೦-೨-೦ ಮತ್ತು ೧೦-೦-೦

ಪುರೋಹಿತ ಫಾರ್ಮಸಿ, ಕೊಲ್ಲಾಪುರ

ಸ್ಟಾಕಿಸ್ಟರು: ಪೊಪ್ಯುಲರ್ ಸ್ಟೋರ್ಸ್, ಮಂಗಳೂರು; ಟಿ.ಸಿ.ನಟರಾಜನ್ & ಕೊ., ಮೈಸೂರು.

ಮುಂಬಯಿ ಸೋಲ ಏಜಂಟರು:—

ವನಮಾಲೀ ಭಿಕಾಜಿ ಮತ್ತು ಕಂಪನಿ,
ಪ್ರಿನ್ಸೆಸ್ ಸ್ಟ್ರೀಟ್,
ಮುಂಬಯಿ ೨.



ದಕ್ಷಿಣ ಕನ್ನಡ

ಪುತ್ತೂರು—ಇಲ್ಲಿಯ ಕಟ್ಟೇರಿ ನ್ಯಾಯಾಧೀಶ ಶ್ರೀ ಬಿ. ಜನಾರ್ದನ ಪಾಳಿಗರು ತಾ. 28ರಲ್ಲಿ ರವಿನ್ಯೂ ಸಬ್ ಡಿವಿಜನಲ್ ಆಫೀಸರರ ಕೋರ್ಟಿನ ಪರಿಸರದಲ್ಲಿ ಹೃದಯಸ್ಥಂಭನದಿಂದ ಆಕಸ್ಮಾತ್ ಮರಣಹೊಂದಿದರು. ಈ ಮೊದಲು ಅವರ ಅಂಗಡಿಯಿಂದ ಆಧಿಕ ಕೂಡ ಹಾಕಿದ್ದ ಕಂಟ್ರೋಲು ಸಾಮಾನ್ಯಿಗೆ ಕೆದ್ದು ಅವನ್ನು ಪೋಲೀಸರು ಜಪ್ತಿಮಾಡಿ ಆ ಬಗ್ಗೆ ಮೊಕದ್ದಮೆಯೂ ಹೂಡಿದ್ದು, ಆ ದಿನ ತನ್ನಿಗೆ ಇದ್ದು, ಮೊಕದ್ದಮೆಯು ಮೃತರಿಗೆ ಗುಣವಾಗಿ ತೀರ್ಪುಕೊಡಲ್ಪಟ್ಟಿತೆಂದು ತಿಳಿದು ಬರುತ್ತಿದೆ.

ತಾ. 24ರಂದು **ಇಲ್ಲಿ** ರಾಷ್ಟ್ರ ಸೇವಾದಳದ ಉದ್ಘಟನಾ ಸಮಾರಂಭವು ಸಾರ್ವಜನಿಕ ಸಭೆ ಮೂಲಕ ಜರಗಿತು. ಶ್ರೀ ಎಂ. ಸದಾಶಿವ ರಾಯರು ಅಧ್ಯಕ್ಷತೆ ವಹಿಸಿದ್ದರು. ರಾಷ್ಟ್ರ ಸೇವಾದಳದ ಅವಶ್ಯಕತೆ, ಅದರಿಂದಾಗುವ ಪ್ರಯೋಜನ ಇವೇ ಮೊದಲಾದ ವಿಚಾರಗಳನ್ನೆತ್ತಿ ಶ್ರೀ. ಹಿರಿಯಣ್ಣ ನಾರಾಯಣರಾಯರೂ, ಶ್ರೀ ಕೆ. ಕೆ. ಶೆಟ್ಟಿ ಅವರೂ ಸುರಸ ಭಾಷಣಮಾಡಿದರು. ಸಭಾಧ್ಯಕ್ಷರೂ ಸಮಯೋಚಿತ ಭಾಷಣಮಾಡಿ ರಾಷ್ಟ್ರಸೇವಾದಳ ನೃ ಜಾತೀಯತೆಯ ಸಂಕುಚಿತ ದೃಷ್ಟಿ ಇಡದೆ ಇಡೀ ರಾಷ್ಟ್ರದ ಸೇವೆಗಾಗಿ ಮುಡಿಯಬೇಕೆಂದೂ, ಆ ಬಗ್ಗೆ ಪುತ್ತೂರು ತನ್ನ ಪಾಲಿನ ಕರ್ತವ್ಯಮಾಡಲಿದೆ ಎಂಬ ಭರವಸೆ ತನಗೆ ಇದೆ ಎಂದೂ ಭಾಷಣಕೊಟ್ಟರು. ಶ್ರೀ ಎಂ. ಬಿ ನರ್ಸಪ್ಪ ಅವರ ಉಪಕಾರ ಸ್ಮರಣಾ ಭಾಷಣದೊಡನೆ ಸಭಾಂತ್ಯವಾಯಿತು.

ಇಲ್ಲಿಯ ಪಂಜಾಯತ್ ಬೋರ್ಡಿನವರು ಸೂಚನೆಯಂತೆ ಹೊಟೇಲು ಮಾಲಕರೂ, ಅಂಗಡಿಯವರೂ ಸಾವಧ ಒಂದೊಂದು ದಿವಸದ ವಶಿ ಕ್ರಮವನ್ನು ಕಳೆದ ಪಾರದಿಂದ ಅಚರಿಸುತ್ತಿದ್ದಾರೆ

ಬೈಲೂರು— ತಾ. 24-11-46ರಲ್ಲಿ ಇಲ್ಲಿಯ ಮೈದಾನದಲ್ಲಿ ಶ್ರೀಅನಂತಪ್ಪ ಕಿಣಿಯವರ ಅಧ್ಯಕ್ಷತೆಯಲ್ಲಿ ಜರಗಿದ ಸಾರ್ವಜನಿಕ ಸಭೆಯಲ್ಲಿ ಶ್ರೀ ಕೇತವ ಕಿಣಿಯವರು ಮೊದಲು ಪಂಡಿತ ಮಾಲವೀಯರ ಜೀವನ ಚರಿತೆಯನ್ನು ಸಂಕ್ಷೇಪ ರೀತಿಯಲ್ಲಿ ನಿವರಿಸಿ ಅವರ ನಿಧನದ ಕುರಿತು ಸಂತಾಪ ಸೂಚಿಸಿದ ತರುವಾಯ ಶ್ರೀ ಕೆ. ಸದಾನಂದ ಹೆಗ್ಡೆ ಎಜ್ಯೂಕೇಟರ್ ಇವರು ರಾ. ಸೇ. ದಳದ ಆವಶ್ಯಕತೆ, ಸ್ವರೂಪದ ರಾಜಕೀಯ ಪರಿಸ್ಥಿತಿಯ ವಿಚಾರ ಮತ್ತು ಕಾನೂನಿನ ಕೆಲವು ವಿಷಯಗಳನ್ನು ಆರ್ಥಗರ್ಭಿತವಾದ ರೀತಿಯಲ್ಲಿ ವಿವರಿಸಿದರು. ನಂತರ ಅಧ್ಯಕ್ಷರ ಭಾಷಣ, ಧನ್ಯವಾದದೊಂದಿಗೆ ಸಭೆಕೊನೆಗೊಂಡಿತು.

ಬೆಳ್ತಂಗಡಿ—ಕುಂದಾಪುರ ತಾಲ್ಲೂ ಮೂಡು ಪ್ರಾಂತ್ಯದ ಮಲನಾಡು ಗ್ರಾಮಗಳ ಕೇಂದ್ರವಾದ ಬೆಳ್ತಂಗಡಿಯಲ್ಲಿ ಒಂದು ಬ್ರೆಂಚ್ ಪೋಸ್ಟ್ ಆಫೀಸನ್ನು ಸಂಬಂಧಪಟ್ಟ ಅಧಿಕಾರಿಗಳು ಸಮೀಪದಲ್ಲಿ ತೆರೆಯಬೆ ,ಜೋದರೆ ಮಲೆನಾಡು ಗ್ರಾಮಸ್ಥರು ಟಪ್ಪಾಲು ಬಗ್ಗೆ ತುಂಬಾ ಕಷ್ಟ ಪಡಬೇಕಾಗುವುದು ಎಂತ ಬಾತ್ಮಿ.

ನೋಟೀಸು—ಕಾರ್ಕಳ ತಾಲೂಕಿನ ಶ್ಲಿ ಯಾವ ಯಾವ ಗ್ರಾಮಗಳಲ್ಲಿ ಏನೇನು ಸಾರ್ವಜನಿಕ ಉಪಯೋಗದ ನೀರಾವರಿ ಕೆರೆಗಳು ಕಟ್ಟಗಳು ಮಗ್ಗೆರೆಗಳು ದುರಸ್ತಿ ಆಗ ಬೇಕ್ಕದ್ದು ಇರುತ್ತದೆಂಬುದನ್ನು ಅವುಗಳು ಇರುವ ಸರ್ವೆ ಸಬ್ ಡಿವಿಜನ್ ಮಗ್ಗೆರೆ ವಿವರ ವಿಸ್ತೀರ್ಣ ನೀರಾವರಿ ಹೊಂದುವ ಹೊಲಗಳ ವಿಸ್ತೀರ್ಣ ಮಗ್ಗೆರೆ ಎಲ್ಲಾ ಸಂಗತ್ಯನುಸಾರ ಗಳನ್ನು ಒಳಗೊಂಡ ವಿವರ್ಟನ್ನು ಆಗತ್ಯ ವುಳ್ಳ ನಕ್ಷೆಸಮೇತ ಈ ಕೆಳಗಿನ ವಿಳಾಸಕ್ಕೆ ಸಂಬಂಧಪಟ್ಟವರು ಕೂಡಲೇ ಕಳುಹಿಸತಕ್ಕದ್ದು.

ಕೆ. ಮಹಾಬಲ ಹೆಗ್ಡೆ,
ಸೆಕ್ರೆಟರಿ,
ಕಾರ್ಕಳ ತಾಲ್ಲೂ ಭೂಮ್ಯಾಲಿಕರ ಸಂಘ.

ಧರ್ಮಸ್ಥಳದಲ್ಲಿ ಸರ್ವ ಧರ್ಮ ಸಮ್ಮೇಳನ—ತಾ. ೧೯೦೨೮ ತಾ. ೩೦ರ ವರೆಯಂತೆ ಧರ್ಮಸ್ಥಳದಲ್ಲಿ ಲಕ್ಷದೀಪೋತ್ಸವವು ಜರಗಿದಾಗ ಧಾರ್ಮಿಕ ಉಪದೇಶ ಸರ್ವಮತ ಸಾಮರಸ್ಯ, ಶಾಂತಿಸ್ಥಾಪನೆಯ ಸಂದೇಶಗಳನ್ನು ಸಾರಲು ಏರ್ಪಡಿಸಲಾಗಿರುವ ಸರ್ವಧರ್ಮ ಸಮ್ಮೇಳನವೂ ಮೈಸೂರಿನಿಂದ ಆಹ್ವಾನಿತರಾಗಿದ್ದ ಒಂಬತ್ತು ಗಂಟೆಯಲ್ಲಿ ಲೈಬ್ರೆರಿಯ ಕ್ಯೂರೇಟರವರಾದ, ಶ್ರೀ ಎಲ್. ಆರ್. ರಂಗಸ್ವಾಮಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಪ್ರಥಮ ದಿನದಲ್ಲಿ ಜಗತ್ತಿನ ಯುದ್ಧ ಚಿತ್ತವೃತ್ತಿಯ ಜನರಿಗೆ ನಿಮ್ಮನಿಮ್ಮ ಮತಧರ್ಮಗಳ ತತ್ವಾನುಸಾರ ನೀವು ಕೊಡುವ ಶಾಂತಿಸಂದೇಶವು ಯಾವುದು?' ಎಂಬ ವಿಷಯ ಮೈಸೂರಿನ ಅಸ್ಥಾನ ಪುರಾ ವಿದ್ವಾನ್ ಪಂಡಿತರತ್ನ ಎ. ಶಾಂತಿರಾಜ ಶಾಸ್ತ್ರಿಗಳು ಬೆಂಗಳೂರಿನಿಂದ ದಯಮಾಡಿಸಿದ್ದ, ಶ್ರೀ ಕೆ. ಎಸ್. ಥರಣೇಂದ್ರಯ್ಯ ಮತ್ತು ಆ ಸ್ಥಾನ ವಿದ್ವಾನ್ ಕೆ.ನಂಜುಂಡಾರಾಧ್ಯರೂ, ವಿದ್ವಾನ್ ವಿಶಿಷ್ಟಾದ್ವೈತಾಚಾರ್ಯರೂ, ಶ್ರೀ. ಪಟ್ಟಾಭಿ ಜೋಯಿಸ, ಶ್ರೀ. ಮಾಧವಾಚಾರ್ಯರೂ, ಮೌಲ್ವಿ ಬಾಷಿಂ ಸಾಹೇಬರೂ ಮತ್ತು ಮೈಸೂರಿನ ಶ್ರೀ. ಜಿ. ಸ್ವಾಮಿದಾಸರೂ ಉಪನ್ಯಾಸ ಮಾಡಿದರು

ಎರಡನೆಯ ದಿನ ಆತ್ಮಸಂಶೋಧನ ಮತ್ತು ಕನ್ನಡ ಸಾಹಿತ್ಯದ ಮಾಧುರ್ಯ ಎಂಬ ಎರಡು ವಿಷಯಗಳು ನಿಧಾಯಕವಾಗಿದ್ದವು. ಬೆಂಗಳೂರಿನ ಶ್ರೀ. ಕೆ. ಎಸ್. ಥರಣೇಂದ್ರಯ್ಯ ಮತ್ತು ವಿದ್ವಾನ್ ನಂಜುಂಡಾರಾಧ್ಯರೂ, ನಾರಾಯಣ ಕಿಲ್ಲೆಯವರೂ ಸಾಹಿತ್ಯ ಮಾಧುರ್ಯದ ಮಧುಪಾನ ಮಾಡಿಸಿ, ಆತ್ಮ ಶೋಧನದ ವಿಷಯ ಪಂಡಿತರತ್ನಂ ಎ. ಶಾಂತಿರಾಜ ಶಾಸ್ತ್ರಿಗಳೂ, ವಿದ್ವಾನ್ ಪಂಡಿತ ವೀರ ರಾಘವಾಚಾರ್ಯರೂ ಭಾಷಣವನ್ನು ಮಾಡಿ, ಮಿ. ಎ. ಜೆ ಖಲೀಲ್ ಇವರು ಅಂಗ್ಲಭಾಷೆಯಲ್ಲಿ ಹಿಂಸುಗಳನ್ನೂ ಮುಸಲ್ಮಾನರನ್ನೂ ರಾಜಕೀಯ ಕಾರಣಪಟುಗಳು ಒಂದುಮಾಡಲಾರರೆಂಬೂ ಧರ್ಮಗ್ರಂಥಗಳ ಶಾಂತಿಮಾರ್ಗಗಳಂತೆ ನಡೆಯುವವರಂತಲೇ ಹಿಂಸಾನುಸಲ್ಮಾನರ ಸಖ್ಯ ಬೆಳೆಯುವುದೆಂದರು

ಉದ್ಯೋಗ—ತಾ ೧-೧೨-೪೬ರಲ್ಲಿ ಉಡುಪಿ ಫಿಶರ್ಸ್ ರವಿನ್ಯೂ ಇನ್ಸ್‌ಪೆಕ್ಟರ್ ಶ್ರೀ ಸುಬ್ರಾಯ ಮೈಯ್ಯರಿಗೆ ಶಿರಾ ಹಿರಿಯೂರು ಹೈಸ್ಕೂಲಿನ ಹೆಡ್ಮಾಸ್ಟರ್ ಶ್ರೀ. ಶಿವರಾವ್ ಪಿ. ಎ.,ಬಿ. ಟಿ. ಇವರ ಅಧ್ಯಕ್ಷತೆಯಲ್ಲಿ ಊರ ಮುಖ್ಯಸ್ಥರು ಒಂದು ವಿದಾಯಕ ಸಮಾರಂಭವನ್ನೇರ್ಪಡಿಸಿದರು ರವಿನ್ಯೂ ಇನ್ಸ್‌ಪೆಕ್ಟರರ ಗುಣಕಥನ, ಧನ್ಯವಾದಗೈದ ಬಳಿಕ ಸಭೆಯು ಲಘು ಉಪಹಾರದೊಂದಿಗೆ ಮುಕ್ತಾಯವಾಯಿತು

ಧಾತುಪುಷ್ಟಿ ಲೇಹ

ಇದುಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ ಧಾತುಮೂತ್ರದೌಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಜ್ಜುವುದು, ಮಲಬದ್ಧತೆ, ಒಳಜ್ವರ,ಇವು ಗಳನ್ನೆಲ್ಲ ಹೋಗಲಾಡಿಸಿ ಹೆಸಿವನ್ನೂ, ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ಸೌಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಶ್ವಿಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಸ್ರವಸಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿ ಯೊಗಿ, ಬಾಣಂತಿಯರು ಪುಷ್ಟಿಹೊಂದುವಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಜೈವನಪಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಸುವು, ಶೀತ, ಉಬ್ಬಸ, ಕ್ಷಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಮಹಾಮದನಕಾಮೇಶ್ವರೀ ಲೇಹ
(ಬಂಗಾರ, ಪುಸುಗು, ಕಸ್ತೂರಿ ಮಿಶ್ರಿತವಾದದ್ದು.)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಪೆನ್ನುನೋವು, ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು.

ರಾತ್ಲು 1ರ 10-0-0, ½ ರಾತ್ಲು 5-1-0, ¼ ರಾತ್ಲು 2-12-0.

ಎಲ್ಲಾ ಸಮಸ್ತ ಔಷಧಿಗಳು ದೊರೆಯುತ್ತವೆ.

— ಎಂ ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಸಿಸಿಯನ್ಸ್, ರಕ್ತದೀಪಿ ನಂಬ್ರ, 10 ಮಂಗಳೂರು.

ಎಲ್ಲಾ ಸಮಸ್ತ ಔಷಧಗಳೂ ದೊರೆಯುತ್ತವೆ. ಇಲ್ಲಿ ಸಿಗುವ ಕೆಲವು ಔಷಧಿ ರಕ್ತಾಸವಾಸವಾದುವು. (1) ಉಡುಪಿ ಎಂಂದೆರು:—ನವಭಾರತ ಬುಕ್ ಡಿಪೋ (2) ಬೆಂಬಾಯಿ ವಿಳಾಸದವರು:- ಪೊಪ್ಯುಲರ್ ಸ್ಟೋರ್ಸ್, ಕೆಮಿಸ್ಟ್183, ಸುಬಾರಿಬಜಾರ್ ಲೇಡ್, ಡಿ. ಪಿ. ಲೈಲ್, ವರ್ಲ್ ಕೆಸ್ಟರ್ ಎದುರುಗಡೆ, ಪರೇಲ್. (3) ಜನರಲ್ ಸ್ಟೋರ್ಸ್, ಕೆಮಿಸ್ಟ್, ಜೆ. ಡಿ. ಪಿ. ಮಾಟುಂಗಾ.

ನೋಟಿಸು.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. S. 333/1945 R. I. A. 1372/1946.

ವಾದಿ— ರಾಮಕೃಷ್ಣ ಅಡಿಗ.

ಪ್ರತಿವಾದಿರು— ನೀರಾರಾನು ಅಡಿಗ ಕೂಡಾ.

2 ಮಂಜುನಾಥ ಅಡಿಗ. 3. ಶಂಕ್ರನಾರಾಯಣ ಅಡಿಗ. 4. ಆನಂದ್ಯಾಮ ಅಡಿಗ. 5. ಪ್ಯಾಮು ಅಡಿಗ. 6. ಮಹಾಬಲೇಶ್ವರ ಅಡಿಗ. 7. ವಾಸುದೇವ ಅಡಿಗ. ಕೃಷ್ಣ ಅಡಿಗರ ಸಂಗಡಿರ್ರು 2ನೇ ಯನವರು ಗೋಕರ್ಣವಲ್ಲಿಯೂ 3, 4ನೇಯವರು ಉಡುಪಿ ತಾಲೂಕು ಹಳ್ಳಿಯ ಗ್ರಾಮದಲ್ಲಿಯೂ 5, 6, 7ನೇ ಯವರೂ ಹಸಿಹಳ್ಳಿ ಗ್ರಾಮದ ಭೂಡಿ ಮನೆಯಲ್ಲಿಯೂ ಇರುತ್ತಾರೆ.

ನಮ್ಮ ಪ್ರತಿವಾದಿಗಳಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಸದ್ರಿ O. S. 333 1945ನೇ ದಾವೆಯಲ್ಲಿ ಅದ ಪ್ರತಿವಾದಿ ಸದ್ರಿ ನಿಮ್ಮ ಸ್ವಕಾರ ಅಸ್ತಿಯಿಂದ ಮಾಡಿ ಸ್ಥಾನರ್ಥ ನಿಮ್ಮ ಕೊಡಿಸಬೇಕಾಗಿ ಪಾದಿಯು ಸದ್ರಿ ಆರ್ಜಿ ಕೊಟ್ಟಿರುವಪ್ರಯುಕ್ತ ಆ ಕುರಿತು ನಿಮ್ಮವೇನಾದ್ರು ಆಕ್ಷೇಪ ಇದ್ದಲ್ಲಿ ತಾ. 19-12-1946ನೇ ದಿನ ಹಗಲು 11 ಗಂಟೆಗೆ ಈ ಕೋರ್ಟು ಮುಂದೆ ಹಾಜರಾಗಿ ಜ್ಯಾಬ್ದೀಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಯೇಕ ಪಕ್ಷವಾಗಿ ತೀರ್ಮಾನಿಸಲಾದೀತು ಎಂಬ ಸಂಗ್ತಿ ಈ ಮೂಲಕ ತಿಳಿಸೋಣಾಗುತ್ತದೆ.

K. Raghunath Shenai,
Pleader for Plaintiff.
Coondapoor, 27-11-1946.

ನೋಟಿಸು.

ಕುಂದಾಪುರ ಡಿ.ಮು. ಕೋರ್ಟಿನಲ್ಲಿ

O. S. 432/1946.

ವಾದಿರು. ರುಕ್ಮಮ್ಮ ಸೆಟ್ಟಿ ಕೂಡಾ.

ಪ್ರತಿವಾದಿರು, ನಾಗಮ್ಮ ಸೆಟ್ಟಿ ಕೂಡಾ. 4. ಮಂಜಮ್ಮ ಸೆಟ್ಟಿ. ನಾಗಮ್ಮ ಸೆಟ್ಟಿ ಮಗಳು.

10. ಮೋನಪ್ಪ ಸೆಟ್ಟಿ. 11. ಕೂರಗಮ್ಮ ಸೆಟ್ಟಿ. ಸಂಕಮ್ಮ ಸೆಟ್ಟಿ ಮಕ್ಕಳು. 13. ಅಚ್ಚಕ್ಕ ಸೆಟ್ಟಿ-ನಾಗಮ್ಮ ಸೆಟ್ಟಿ ಮಗಳು. 16. ಸದಿಯಮ್ಮ ಸೆಟ್ಟಿ. 15ನೇ ಪ್ರತಿವಾದಿ ಚಂದಮ್ಮ ಸೆಟ್ಟಿ ಮಗಳು. 4ನೇ ಯವಳು ಕುಂದಾಪುರ ತಾಲೂಕು ಗುಲ್ವಾಡಿ ಗ್ರಾಮ ದಲ್ಲಿಯೂ ಮಿಕ್ಕವರು ಕುಂದಾಪುರ ತಾಲೂಕು ಕೆಂಜನೂರು ಗ್ರಾಮದಲ್ಲಿಯೂ ಇರುತ್ತಾರೆ.

ಸದ್ರಿ ಪ್ರತಿವಾದಿರೀಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ ವಾದಿರೀಗೆ ಪ್ರತಿವಾದಿರ ಕುಟುಂಬದಿಂದ ಕೆಂಜನೂರು ಗ್ರಾಮದ ಸ. ನಂ. 16/1, 2ನೇ ಸ್ಥಳಗಳ ಬಾಬ್ತು ವರ್ಷ 1ರ ಆಕ್ಕಿ ಮಾನಿಗ 10½ ನಗ್ದು ರೂ. 6 9-0 ಯೀರಿಂದ ತೀರ್ಪೆ 7-1-0ರಂತೆ ಬಹಾ ಕಳದ ತಾರೀಖ ಮತ್ತು ಪಾರ್ಥಿನ ಸಂಗಡಿರಗಳ ನೇಣಿ ಬರಮಾಡಿಕೊಳ್ಳುವರೆಗಾದಿರು ಸದ್ರಿ ಜಾವಾ ಮಾಡಿರುವುದರಿಂದ ಆ ಕುರಿತು ನಿಮ್ಮವೇನಾಪ್ಪು ಆಕ್ಷೇಪ ಇದ್ದಲ್ಲಿ ತಾ. 17-12-1946ನೇ ದಿವ್ಸ ಯಗಲು 11 ಗಂಟೆಗೆ ಈ ಕೋರ್ಟು ಮುಂದೆ ಹಾಜರಾಗಿ ಜಾಬೀದ್ದಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಯೇಕ ಪಕ್ಷವಾಗಿ ತೀರ್ಮಾನಿಸಲಾದೀತು. ಎಂಬ ಸಂಗ್ತಿ ಕೋರ್ಟು ಯ್ತಂ ಪ್ರಕಾರ ಈ ಮೂಲಕ ತಿಳಿಸೋಣಾಗುತ್ತದೆ.

K. Raghunath Shenai,
Pleader for Plaintiff.
Coondapoor, 27-11-1946.

NOTICE

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

I. A. 1711/1946 in
O. S. 347/1942.

ರಾಮ ಭಟ್ಟ ಸಹಾ —ಆರ್ಜಿದಾರ್ರು.
ಮತ್ತು
ವೆಂಕಟ್ರಮಣ ಭಟ್ಟ ಸಹಾ-ಪ್ರತಿವಾದಿರು.
ಇವರೊಳಗೆ

ಮೇಲ್ಕಂಡ ಹಿರಿಯ ವ್ಯಾಜ್ಯದಲ್ಲಿ ಕೊಟ್ಟ ಫೈನಲ್ ಡಿಕ್ರಿ ವ್ಯವಹರಣೆಯಲ್ಲಿ 8, 9ನೇ ಪ್ರತಿವಾದಿರಿಗೆ ಸಬ್‌ಸ್ಟಿಟ್ಯೂಟೆಸರ್ವಿಸ ನ್ಯೂಬಾಂತ್ರ ತಿಳಿಸಿ ಜ್ಯಾರಿ ಆಗ ಬೇಕಾಗಿ ಹೈರಂ ಆಗಿ ಸದ್ರಿ ನೋಟೀಸು ಬಗ್ಗೆ ಸದ್ರಿ ಆರ್ಜಿಯು ತಾರೀಕು 18-12-46ಕ್ಕೆ ಇಟ್ಟಿರುತ್ತದೆಂದು ಸಂಗ್ತಿ ಈ ಮೂಲಕ ತಿಳಿಸೋಣಾಗುತ್ತದೆ.

K. Sankar Rama Shetty
Vakil for Pets
Kasaragod. 18-11-46

ವಿದ್ಯಾವಿಷಯಕ ಸ್ವಮುಖ ಮಾಸಪತ್ರಿಕೆ

ಬಾಲಚಂದ್ರ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸಕ್ಕುಲಾದುಗಳೂ ಪ್ರಕಟವಾಗುತ್ತವೆ.

ವಾರ್ಷಿಕ ಚಂದಾ
ರೂ. 2-0-0 ಮಾತ್ರ.

ಪೈಂಡು ಮಾಡಿದ ಪ್ರತಿಯೊಂದು ಸಂಪುಟಕ್ಕೆ ರೂ. 2½/-

ಹೆಚ್ಚಿನ ವಿವಾರಕ್ಕೆ ಬರೆಯಿರಿ—

ಬಾಲಚಂದ್ರ ಆಫೀಸು, ಉಡುಪಿ

(೨ನೇ ಪುಟದಿಂದ)

ಪೂರ್ಣಾಧಿಕಾರವಿಲ್ಲದ ನಡುಗಾಲ ಸರಕಾರದಲ್ಲಿಟ್ಟು ಕೊಂಡದ್ದು, ಯುದ್ಧಕಾಲದಲ್ಲಿ ಸೋಲ್ಜರನನ್ನು ಗುಮಾಸ್ತಿಕೆಗೆ ನೇಮಿಸಿಕೊಂಡಂತಾಗಿದೆ. ಕನ್ನ ಸ್ಥಾನಕ್ಕೆ ಪಟ್ಟುಭಿಯನ್ನಾಗಲೀ, ಸರೋಜಿನಿಯನ್ನಾಗಲೀ ಕರೆಯಿರಿ; ತಾನು ಜನರ ನಡುವೆ ಧುಮುಕುತ್ತೇನೆ, ಎಂದು ಪರ್ದಾರರಂತೆಯೇ ಇವರೂ ನಡೆಬಿಗಿದಂತಿದೆ ಆದರೆ ರಂಜೇಂದ್ರರನ್ನು ಜಲ್ಲಿಂದ ಕದಲಲು ಬಿಡುವವರಿಲ್ಲ, ಕಾಂ. ಕಾ. ಸಮಿತಿಯಲ್ಲಿ ಇವರೀಶಲ ನಿಲ್ಲುವದಿಲ್ಲವೆಂದರೂ ನಿಲ್ಲಿಸಿದ್ದಾರೆ. ಒದ್ದಾಟದಲ್ಲಿದೆ ಈ ತ್ಯಾಗ ಜೀವ



ಜೈ ಪ್ರಕಾಶ್ ನಾರಾಯಣ್

ಇಂದಿನ ನಡುಗಾಲ ಸರಕಾರವಾಗಲೀ ನಾಳೆಯ ಘಟನಾಸಮಿತಿಯಾಗಲೀ ಸ್ವಾತಂತ್ರ್ಯ ತರುವಂತಿಲ್ಲವೆಂಬ ದೃಢಾಭಿಪ್ರಾಯ ಹೊಟ್ಟೆಶೂಲೆಯಂತೆ ಬಾಧಿಸುತ್ತಿದೆ. ಆದರೆ ಮುಸ್ಲಿಂ ಲೀಗಿನ ಪುಂಡಾಟಕೆಯಿದಿರಲ್ಲಿ ಕಾಂಗ್ರಸನ್ನು ಸಮರ್ಥಿಸಬೇಕೆಂಬ ಆತುರ ಅಂಟಿಕೊಂಡಿದೆ ರಕ್ತ ನೋಡಿ ಹೆದರಿಲ್ಲ--ಆದರೆ ರಕ್ತದ ಬಣ್ಣ ನೋಡಿ ಕಂಗಾಲಾಗಿದ್ದಾರೆ. ಕೃಪಲಾನಿ ಅಧ್ಯಕ್ಷತೆಯ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯಲ್ಲಿಲಿಲು ನಿಜಕ್ಕೂ ಆನಂದವಿಲ್ಲ--[illegible] ಬ್ರಿಟಿಷ್ ಲೀಗ್ ಮೈತ್ರಿಯಿದಿರು ಕಾಂಗ್ರಸಿನ ಘೋರಣೆಯನ್ನು ಮನೆದು ತಿವಿಯುವುದಕ್ಕಾಗಿ ಅಲ್ಲಿರಲೇ ನೇಕಾಗಿಬಂದಿದೆ ಯುವಕರ ರಕ್ತದ ಬಿಸಿಯೆಬ್ಬಿಸಿ ವಿದೇಶೀ ಧಂಡಾ ಪ್ರಕೃತಿಯವರಿಗೆ ಇಲ್ಲಿದು ಮಾತಾವರಣವೊಗ್ಗದಂತೆ ಮಾಡಿ ಓಡಿಸಬೇಕೆಂದಿದ್ದರು, ಆದರೆ ಈಗ ಎದ್ದಲಾರಿ ನಿಂತ ನೆಲವನ್ನೇ ಸುಡಹತ್ತಿದೆ, ಜೈ ಪ್ರಕಾಶ್ ಕಾಲಡಿಯನ್ನೊಮ್ಮೆ ಕಣ್ಣುಂದಿಡುವ ರಣವನ್ನೊಮ್ಮೆ ನೋಡುತಿದ್ದಾರೆ, ಅದೋ ಇದೋ ಎಂಬ ಕತ್ತರಿಯಲ್ಲಿದ್ದಾರೆ

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ

ಕಲ್ಕಂಜೆ ವ್ಯಾಸರಾಯರ್,
ರತ್ನಾವತಿ, ಉಡುಪಿ.

ಶ್ರೀ ಶರಚ್ಚಂದ್ರ ಬೋಸ್

ತಾನು ಒಂದೆಡೆ ನಲ್ಲಭಾಯಿ, ಇನ್ನೊಂದೆಡೆ ಶ್ಯಾಮಪ್ರಸಾದ ಮುಖರ್ಜಿಯೊಂದಿಗೆ ಕೂಡುವ ನವಸೂತನ ಸಂಬಂಧ-ಆಗ್ನೇಯ ಮತ್ತು ನೈಋತ್ಯ ದಿಕ್ಕುಗಳ ನ್ನೊಂದು ಸಾಲಿಗೆ ತಂದ ದಕ್ಷಿಣ ನಿಸೆಯೇ ತಾನಾದ ಹೊಸಾನುಭವ- ಇವರಿಗಾಗಿದೆ ಆದರೆ ಮೊದಲಿನ ಒಂಗಾಳವನ್ನಿನ್ನು ಕಾಣಬಲ್ಲೆನೇ, ಎಂದು ತಪಿಸುತಿದ್ದಾರೆ. ಅತ್ತ ನಡುಗಾಲ ಸರಕಾರದ ಸ್ಥಾನದಲ್ಲೂ ನಿಲ್ಲಲಿಲ್ಲ. ಇತ್ತ ಬಂಗಾಳವನ್ನು ಮೊದಲಿನ ಸ್ಥಾನಕ್ಕೆತ್ತುವದೂ ಆಗಲ್ಲ ನಿಜಕ್ಕೂ ಕತ್ತಲೆಯಲ್ಲಿದ್ದಾರೆ.

ಮೌಲಾನಾ ಅಬುಲ್ ಕಲಮ್ ಆಜಾದ್

ಕಾಂಗ್ರೆಸಿನ ಸದ್ಯವ ಬಾವನಾ ಪ್ರವಾಹವು ತನ್ನ ಕಾಲಡಿ ತಪ್ಪಿಸುತ್ತಿದೆಯೋ ಎಂದು ಭೀತಿಗೊಂಡು ಗಡ್ಡ ಸವರುತ್ತಿರುವಂತಿದೆ ಅತ್ತ ಲೀಗ್ ಅಂಧಾನುಯಾಯಿ ಮುಸ್ಲಿಂ ಜನತೆ ತನ್ನನ್ನು "ಸರ್ವದ್ರೋಹಿ" ಸಮಾಜದ್ರೋಹಿ' 'ಅಸಭ್ಯಂತ ಕಾಸರೆ ನನ್ನುತ್ತಿದೆ, ಇತ್ತ ಕಟ್ಟುಗ್ರ ಹಿಂದುಗಳು 'ಕಾಂಗ್ರೆಸಿನೊಳಗಿನ ಮುಸ್ಲಿಂ ಸಿ[illegible]ಸ್ಥಾಂ ತಾಮ್ರಕ್ಕೆ ಬಳೆದ ರಾಷ್ಟ್ರಿಯತೆಯ ಚಿನ್ನದೊಪ್ಪ'ಎಳ್ಳುತಿದ್ದಾರೆ. ತನ್ನವರೇ ಆದ ಕಾಂಗ್ರೆಸಿಗರಿಗೆ ತನ್ನ ಮೇಲಿದ್ದ ಅನನ್ಯ ಗೌರವದೂಡನೆ ಈಗೀಗ ಅನುಮಾನದಂತ ಬೆರೆತಂತಿದ ನಿಜಕ್ಕೂ ಕರುಣಾಜನಕ ಶ್ರೀಕಂಠಸ್ವಾನ ಮೌಲಾನರದು. ಬಹಾರ್ ಕಾಂಗ್ರೆಸಿಗರಿಗೆ ಶ್ಲಾಘನೆಯ ವಸ್ತ್ರದಲ್ಲಿ ಆರೋಪದ ಮುದ್ದೆ ಸುತ್ತಿ ಸಲ್ಲಿಸಿದ್ದಾರೆ; ನೌಕಾಲಿ ಕಾಂಗ್ರೆಸಿಗರನ್ನು



ಹಂಗಿಸಿ, ಯಾರೂ ಹೇಳದ ದೂರೊಂದನ್ನು ಹೇರಿನ್ದಾರೆ ವಲ್ಲಭಾಯಿಗಳ ಮೀರತ್ ಭಾಷಣವು ಅವರ ಹೃದಯಕ್ಕೂ ಕತ್ತರಿಯಾಯಿತು ಇಬ್ಬಾಗಿಸಿಬಿಟ್ಟಿತು ಮೌಲಾನರಿಂದು ವರೆಗೆ ಎರಡು ತುಂಡನ್ನೂ ಒಟ್ಟಾಗಿ ಒತ್ತಿ ಹಿಡಿದುಕೊಂಡಿದ್ದಾರೆ. ವಲ್ಲಭಾಯಿಗಳನ್ನ ದೂರಲಿಕ್ಕಾಗದುದಕ್ಕಾಗಿ 'ಮಹಾತ್ಮರು ಕಾಂಗ್ರೆಸಿಗೆ ಬಾರದ್ದರಿಂದೆ ಹೀಗಾಯಿತು" ಎಂದು ಗಾಂಧಿಜಿಯನ್ನು ಶ್ಲಾಘಿಸಿದ್ದಾರೆ ನಿಜಕ್ಕೂ ಅವರದೀಗ ಮುಸ್ಲಿಂ ಮತ್ತು ಕಾಂಗ್ರೆಸ್‌ಗಳ ನಡುವಿನ ತ್ರಿಶಂಕುಸ್ಥಾನ ಅತಂತ್ರೀ ಪದದಲ್ಲಿ ಇವರ ಜತೆಗಿರುವದು ಕೆಲವೇ ಮಂದಿ ರಾಷ್ಟ್ರೀಯ ಮುಸ್ಲಿಮರು ಮಾತ್ರ



ಮಿ ಜಿನ್ನ

ಮೊದಲನೆಯದಾಗಿ ತಾನು ಮುಂದೆ ಹೋದಷ್ಟು ಸಲವೂ ಇದಿರ್ಗೊಳ್ಳಲು ಅರ್ಧ ಹಾದಿ ವರೆಗೆ ಕಾಂಗ್ರೆಸ್ ಬಂದೇ ತೀರುವದೆಂಬ ವಿಶ್ವಾಸವಿತ್ತು-ಆದು ಸುಳ್ಳಾಯಿತು. ಎರಡನೆಯದಾಗಿ ತನ್ನ ಪ್ರತ್ಯಕ್ಷ ಹೋರಾಟದ ಬೆದರಿಕೆಯಿಂದದು ಕೈಕಾಲು ಬಿಡುವದೆಂಬ ಭಾವನೆಯಿತ್ತು—ಆದು ಮಾತ್ರವಲ್ಲ, ಪ್ರತ್ಯಕ್ಷ ಹೋರಾಟವೇ ಸುಳ್ಳಾಯಿತು. ಮೂರನೆಯದಾಗಿ ತಾನು ಮೊಹಮ್ಮದೆತ್ತದೆ ಪ್ರೇರೇಪಿಸಿ ಬಿಟ್ಟ ಪಶುಶಕ್ತಿ ಗೆಲ್ಲುವದೆಂಬ ಭರವಸೆಯಿತ್ತು-ಅದೂ ಸುಳ್ಳಾಯಿತು ನಾಲ್ಕನೆಯದಾಗಿ ವೈಸರಾಯರು ಹಾಗೂ ಬ್ರಿಟಿಷರು ಕೈಬಿಡಲಾರರೆಂಬ ಧೈರ್ಯವೊಂದು ಉಳಿದಿದೆ--ಆದು ಸುಳ್ಳಾಗಲೂ ಹೋದರೂ ಕಾಂಗ್ರೆಸಿಗರಿಂದದು ನಿರರ್ಥಕವಾಗಲಾರದೆಂಬ ಭರವಸೆಯಿಲ್ಲ. ರಾಷ್ಟ್ರದ ಕತ್ತರಿಯೇ ಕವಲೊಳಗಾಗಿದೆ!

ವೈಸರಾಯ್ ವೇವೆಲ್

'ತ್ರಿಶಂಕುವಿನಂತಾಗಿದ್ದಾರೆ' ಎನ್ನುವದಕ್ಕಿಂತ ಈ ಶಾಲದ ತ್ರಿಶಂಕು ಎನ್ನುವದೇ ವಾಸಿ ಕಾಂಗ್ರೆಸ್-ಲೀಗ್ ಮಂತ್ರಿಗಳ ನಡುವೆ ಸಿಕ್ಕಿ ಬಿದ್ದಿರುವದೊಂದು. ಜಿನ್ನರ ಆರ್ಥಸನೆ-ಕಾಂಗ್ರೆಸಿನ ಪ್ರಶ್ನೆಯ ನಡುವೆ ಒದ್ದಾಡುತ್ತಿರುವದಿನ್ನೊಂದು; ಇಲ್ಲಿಯ ಸಿವಿಲ್ ಸರ್ವಿಸ್ ಅಧಿಕಾರಿಗಳು-ಅಲ್ಲಿಯ ಆಟ್ಲೀ ಮಂಡಲಗಳ ನಡುವೆ ಎಳೆದಾಡುತ್ತಿರುವದು ಮತ್ತೊಂದು, ತನ್ನ ಕುರುಡು ಯೋಧ ಮನೋವೃತ್ತಿ-ಹಿಂದೀ ರಾಜಕಾರಣದ ಜಿಡುಪು, ಇವುಗಳೊಳಗೆ ಕೈಬಾಯಿ ಕಟ್ಟಿದಂತಾಗಿರುವುದು ಬೇರೊಂದು, ಪಾಪ! ಸಾವಿರ ಕೈಗಳಿಂದ ಮೈ ತಡವಿದರೂ ಸಾಕಾಗದಂತಹ ದುಸ್ಥಿತಿ. ಈ ಬೇಗೆಯಿಂದ ಪಾರಾಗಲು, ನೆಹರು, ಜಿನ್ನಾ, ಲಿಯಾಖತ್, ಬಲದೇವ ಸಿಂಘರನ್ನು ಕಟ್ಟಿಕೊಂಡು ಲಂಡನಿಗೆ ಹಾರಿದ್ದಾರೆ.

ಈ ಹಾರಾಟದ ಪರಿಣಾಮವೇನೆಂದು ನೋಡಬೇಕು-ಹಿಂದೋ ಕತ್ತರಿಗಳೆಲ್ಲಾ ತಿರುತ್ತವೆ, ಇಲ್ಲವೇ ಎಲ್ಲವೂ ಎರಡೆರಡು ಕಡಿಯಾಗುತ್ತವೆ!

ಅಂತರಂಗವು ಮನಸೆಳೆವ—
ಬಹಿರಂಗವು ಕಣ್ಣೆಳೆವ—
ಅಂತರಂಗ ಪತ್ರಿಕೆಯಿಂದ ಆಯ್ದು
ಪ್ರಕಟಿಸಿದ 2 ಕಥಾಸಂಗ್ರಹಗಳು

೧
ಅಂತರಂಗದ ಕಥೆಗಳು
ಶ್ರೀಗಳಾದ ಪಿ ವೆಂಕಟರಮಣಾಚಾರ್ಯ, ಎಸ್ ಮಂಜೇಶ್ವರಾಜ, ಎಂ ಪಿ ಪೆಸ್ತೆ, ದೇವದಾಸ, ಕೆ. ಹೈದರ್, ಬಿ ಎಸ್ ಆರ್ಯ ಮೊದಲಾದವರ ೧೫ ಉತ್ತಮ ಕತೆಗಳ ಸಂಗ್ರಹ
ಬೆಲೆ 0-12-0 ಪೋ. ಖರ್ಚು 0-2-0.

೨
ಪ್ರೇಮ-ಪ್ರವಾಹ
ಶ್ರೀಗಳಾದ ಎಂ ವಿ ಹೆಗ್ಗೆ, ಎಸ್.ಎಲ್. ಸುಬ್ರಹ್ಮಣ್ಯಂ, ಶ್ರೀಮತಿ ಸರಸ್ವತಿ ಬಾಯಿ ರಾಜವಾಡೆ ಮೊದಲಾದವರು ಬರೆದ ೫ ಕತೆಗಳ—ಪ್ರಣಯ ಪ್ರಲಯದ ಕತೆಗಳ ಸಂಗ್ರಹ
ಬೆಲೆ 0-8-0 ಟಪಾ ಖರ್ಚು 0-2-0.

ಎರಡೂ ಪುಸ್ತಕಗಳನ್ನು ಒಮ್ಮೆ ತರಿಸಿಕೊಳ್ಳುವವರಿಗೆ ಟಪ್ಪಾಲು ಖರ್ಚು ಮುಕ್ತವು.

ಪ್ರತಿಗಳಿಗೆ ಬರೆಯಿರಿ—
(1) ಅಂತರಂಗ ಆಫೀಸು, ಉಡುಪಿ
(2) ನವಭಾರತ ಬುಕ್ ಡಿಪೊ, ಉಡುಪಿ.
(3) ಯು ಆರ್ ಪೈ ಎಂಡ್ ಸನ್ಸ್, ಮಂಗಳೂರು.

ಇಂದ್ರಭವನ ಕಾಫಿ ಹೊಟೆಲ್
ಬಲ್ಮಠ * * * * ಮಂಗಳೂರು.

ಹೊಸ ವ್ಯವಸ್ಥೆ—ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳ—ವಿದ್ಯುದ್ದೀಪ, ವೇದಿಯೊಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.

ಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

ಬಿ. ಬಾಬು ಶೆಟ್ಟಿ

Indra Bhavan Coffee Hotel,
Balmatta Road, Mangalore.

FOR LIFE ASSURANCE
CONSULT
The New Gaurdian of India Life Insrce Co , Ltd.,
(Chairman.- The Hon'ble Mr. M. CT. M. Chidambaram Chettyar.)
A policy in this progressive Life Office is a good investment; its Agency is a valuable business connection.

LOCAL OFFICES IN SOUTH KANARA
MANGALORE
&
KARKALA.

HEAD OFFICE
"United India Life Bldg"
Esplanade, Post Box No. 142,
MADRAS.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಳಾಯವಾಗಿದ್ದರೆ,.... ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೀರು ಇಳಿದಿದ್ದರೆ, ಉಡುಜು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕಂಪು ಸೆರಗು ಹೋಗುತ್ತಿದ್ದರೆ, ಹೊಲಿ ಕುಟು ಗರ್ಮಿಯಿಂದ ಗರ್ಭಕೋಶ ನಾತಹೊಂದಿದ್ದರೆ, ಸರಿಯಾಗಿ ಭೇದಿಯಾಗದಿ ದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರು ವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪ ದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸ ಜೇಕು. ಈ ಔಷಧವನ್ನು ಜೀಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಪಾರ, ಕುಂಬಳಕಾಯಿ, ಒಳ್ಳಿಣ್ಣೆ ಬಿಡಬೇಕು.

ಬಾಟ್ಲಿ ೦ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗ ಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ಡಾವಣಗೇರಿ:ಡಾವಣಗೇರಿ ಪೇಪರ್ಸ್. ಪತ್ರವ್ಯವಹಾರ ಮಾಡಬೇಕಾದ ವಿಳಾಸ.

ರೇವಣಸಿದ್ದಪ್ಪ ಹಾಲಪ್ಪ ಡಾವಣಗೇರಿ,
ಆಯುರ್ವೇದ ಔಷಧಾಲಯ, ಗದಗ.
Ayurveda Oushadalaya GADAG

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ **ಅನೋಘ ವಾದ ಮಧುರದ್ರವ ರಸಾಯನ.** ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಜಿಸ್ಟರು ಮಾಡಲ್ಪಟ್ಟಿದೆ.)

೮ ಔನ್ಸಿನ ೨ಬಾಟ್ಲಿಗಳು ಹೆಚ್ಚು ಕಡಿಮೆ ಅವಶ್ಯವಸ್ತುಗಳಿಗೆ ಬರುವವು. ಅಂಥರೆ ಕೇವಲ ೪ ರೂಪಾಯಿಗಳು ಒಂದು ಬಾಣಂತಿತನಕ್ಕೆ ಸಾಕಾಗುವವು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ.ವಿ.ಶಾಸ್ತ್ರಿ, ಆಯುರ್ವೇದ ಭೂಷಣ, ನಂ.೬ **ಕೊಡಿಯಾಲಬೈಲು, ದ.ಕ.**

ಸ್ಥಾಪಿಸಿದವರು- ಡಾ| ಐ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಸ್ವರ್ಗಸ್ಥ ಡಾಕ್ಟರ್ ಎಂ. ಮಾಧವಾಚಾರ್ಯರಿಂದ ರಚಿಸಲ್ಪಟ್ಟ ಎರಡು ಅತ್ಯುತ್ತಮ ನಾಟಕಗಳು.

ಸರಸ್ವತಿ ಬೆಲೆ **೦-12-೦**

ಅಲ್ಪ ವಿಕ್ಷಣದಿಂದುಂಟಾಗುವ ಅನರ್ಥ ಪರಂಪರೆಗಳನ್ನು ಪ್ರತ್ಯಕ್ಷವಾಗಿ ಹೃದಯದ್ರಾವಕವಾದ ರೀತಿಯಲ್ಲಿ ಕಾಣಿಸುವ ಸಾಮಾಜಿಕ ನಾಟಕ.

ಮೀರಾಬಾಯಿ ಬೆಲೆ **೦-10-೦**

ಶ್ರೀಕೃಷ್ಣ ಪರಮಾತ್ಮನ ಆರಾಧನೆಗೆ ಸಂಸಾರಿಗಳಾಗಿರುವವರಿಗೂ ಅವ ಕಾಶವಿದೆ. ಕಪಟ, ವಿಶ್ವಾಸಘಾತಕತನ, ಅವಿಚಾರ, ಪ್ರಮಾದ ಇವು ಗಳಿಂದುಂಟಾದ ದುಃಖವನ್ನು ದೂರೀಕರಿಸಲು ಭಗವದ್ಭಕ್ತಿಯೊಂದೇ ಉತ್ತಮ ಸಾಧನವೆಂಬುದನ್ನು ಸಾರುವ ಭಕ್ತಿವ್ರಾಧಾನ್ಯ ನಾಟಕ.

ಎರಡೂ ಪ್ರತಿ ಬೇಕಾದವರು ರೂ. 1-8-0 ಕಳಿಸಬೇಕು.

ನವಭಾರತ ಪುಸ್ತಕಭಂಡಾರ, ಉಡುಪಿ — ಕರಿಯರ ಪ್ರಪಂಚ, ಉಡುಪಿ.

'ಇಂಗ್ಲಿಷ್ ಬರುವುದಿಲ್ಲವಲ್ಲಾ' ಎಂದು ಚಿಂತಿಸುವಿರೇಕೆ?
ಸುಲಭದಲ್ಲಿ ಇಂಗ್ಲಿಷ್ ಕಲಿಯಲು ಅನುಕೂಲವಾದ ಪುಸ್ತಕ ಇಲ್ಲಿದೆ–



ಶ್ರೀ. ಕೊರಡ್ಕಲರ ಇಂಗ್ಲಿಷ್ ಸ್ವಯಂಬೋಧಿನಿ

ENGLISH MADE EASY

ಈ ಪುಸ್ತಕದಿಂದ ನೂರಾರು ಜನರು ತಾವಾಗಿ ಸುಲಭದಲ್ಲಿ ಇಂಗ್ಲಿಷ್ ಕಲಿತುಕೊಂಡಿದ್ದಾರೆ.

ನೀನೇಕೆ ಕಾಲಹರಣ ಮಾಡಬೇಕು? ಇಂದೇ ಒಂದು ಪ್ರತಿಯನ್ನು ಕೊಂಡುಕೊಳ್ಳಿರಿ.

ಬೆಲೆ ಬರೇ ರೂ. 1–8–0 ಟಪ್ಪಾಲು ಖರ್ಚು 0–4–0 ಪ್ರತ್ಯೇಕ

ಪ್ರತಿಗಳಿಗೆ ಬರೆಯಿರಿ—

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

EDITED, PRINTED & PUBLISHED BY K. H. SHETTY AT THE NAVAYUGA PRESS UDUPI, S. INDIA.

Regd. No. M. 3618. Estd. 1921 ಸ್ಥಾಪನೆ. ಬೆಲೆ: 0--1--6.

ನವಯುಗ

ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 4—8—0
6 ತಿಂಗಳಿಗೆ ರೂ. 2—8—0
6 ತಿಂಗಳಿಗಿಂತ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ.
ಮೂಪರಿ ಸಂಚಿಕೆಗೆ ಬರೆಯಿರಿ.
ಮೆನೇಜರ್,
ನವಯುಗ, ಉಡುಪಿ, ದ. ಕ.

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ.

ವರ್ಷ ೨೬ ವಾರ ೧೫ | FOUNDER SRI. A. B. SHETTY, M.L.A. | Vol. 26 No. 15

ಉಡುಪಿ • 12—12—1946 • ಮಂಗಳೂರು.

ಅಮೃತಾಂಜನ.
ತಲೆನೋವು, ತಿರಿ, ವೇದನೆ, ಉಲುಕು ಕ.ತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಧ್ವಾಯಗಳು ಚಾಮು ಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ ಪಕ್ಕದಾಕ್ಷ ಮೊಡಿಸಿ ಮೊದಲಾದ ಎಲ್ಲಾ ರೋಗಗಳಿಗೂ ಸದ್ಯ, ಹುಳುಳಿಕ್ಕಿ ಮತ್ತು ಸಹ ನಮ್ಮಲ್ಲಿ ಸಿಕ್ಕುತ್ತದೆ.
REGD.
ಅಮೃತಾಂಜನ ಲಿಮಿಟೆಡ್.
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

THE
Bombay Lief Assurance Company Ltd.
(ESTD·1908)
A PREMIER INSURANCE COMPANY.
New Business in 1945 - - 2,77,23,100.
KOCHIKAR BROTHERS, LTD.
(ESTD. 1910)
Chief Agents for South India including
Travancore, Cochin and Mysore State.
New Business in 1945 in our area:- **Over 5 Millions.**
OUR Expert advice gained by 35 years Experience is at your door FREE
Drop a card to any of our Offices at —
MADRAS * BANGALORE * MADURA * CALICUT
TRIVENDRUM * UDIPI * AND BOMBAY.

Life is full of Opportunities.

Life is full of events and opportunities created by God for man and by man for himself and his fellowmen. Normal life presupposes a prosperous family, a happy home, good education, congenial vocation, good relations, friends, a cultured society and also a few ups and downs to spice them all with. Have you made sure that your family too can reasonably aspire to lead such a life even in your absence?

The Canara Mutual Assurance Co.,Ltd.,
HEAD OFFICE **UDIPI,** (S. India.)
Chief Agents for the Bombay and Madras Presidencies including States and the States of Mysore and Hyderabad
The Commercial Corporation of India, Ltd,
UDIPI. (S. India.)

—ಮಕ್ಕಳನ್ನು ಹಡೆಯುವುದು ಸಾಕು—
ಒಕ್ಕ ಸ್ತ್ರೀಯರಿಗೆ **ಬರ್ಥ ಕಂಟ್ರೋಲ್** ತೋಗಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿತೆರಗು, ಪ್ರದರಣೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಕ್ಕೆ.—ಪರವೀಪಲ್ಲಿ ಬಿಡಬೇಕು. ೭ ದಿವಸ ಸಂಪೂರ್ಣ ಔಷಧ ಕೆಮ್ಮತ್ತು ರೂಪಾಯಿ ೨—೦—೦. ಪೋಸ್ಟ ಚಾರ್ಜು ಬೇರೆ.

ಮಾಲಕರು:— ಹಾಲಪ್ಪಾ ಫಕೀರಪ್ಪಾ ಡಾವಣಗೇರಿ
ಆಯುರ್ವೇದ ಔಷಧಾಲಯ. ಗದಗ-ಸಿಟಿ.
ಏಜಂಟರು:—ಹುಬ್ಬಳಿ ಫಾರ್ಮಸಿ,—ಹುಬ್ಬಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ—ಧಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ್, ವಿಜಾಪೂರ, ಬೆಳ್ಳಿಕ್ಕೇರಿಯಲ್ಲಿ—ಹುಂಬರವಾಡಿ ಸ್ವೋರ್ಸ ಡಾವಣಗೇರಿ:—ಡಾವಣಗೇರಿ ಪ್ರೆಸ್ಸ್, ೨೮. ಎಲ್. ಕವಲಪಾಸಿ, ಕೆಮಿಸ್ಟ್, ಹಾನೇರ, ಬ್ಯಾಡಗಿ
Ayurveda Oushadalaya, GADAG CITY.

The best preventive in epidemics of CHOLERA
"BHUVANENDRA"
CHANDRAMAS
Also a sovereign remedy for diarrhoea, Stomachache, Vomiting and Nausea.
BHUVANENDRA PRODUCTS LTD., Katapadi.

'ಭುವನೇಂದ್ರ'
ಚಂದ್ರಮಸ್ ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೂ ಮನೆಯಲ್ಲಿರತಕ್ಕ ಅತ್ಯುತ್ತಮ ಔಷಧಿ.

ದೊಡ್ಡವರಿಗೆ 4ರಿಂದ 8ಹೊಟ್ಟು, ಸಣ್ಣ ಮಕ್ಕಳಿಗೆ 1ರಿಂದ 2ಹೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ

ಉಡುಪಿ ಸ್ಥಾನಿಕರು:—ಡಾ। ನಾರಾಯಣ್ ಕಿನ್ಲಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಡಾ। ಆರ್. ಎಸ್. ಶೆಣೈ, ರಥಬೀದಿ; ಡಾ। ಪಿ. ಜಿ. ಆಚಾರ್ಯ ಫಾರ್ಮಸಿ; ಡಾ। ಕೆ. ವೇಪ ಗಿರಿ ನೈ, L.I.M.; ಡಾ। ಮೊಕಟಿಂಗಾಯ್, ಕೊರಡ್ಕಲ್; ನವಭಾರತ ಬುಕ್ ಡಿಪೊ

ಉಡುಪಿ ಬೋರ್ಡಿಂಗ್
ಎಂಡ್
ಲೋಜಿಂಗ್ ಮಧುರಾ.

ತಾ. 8—8—1945ರಲ್ಲಿ ಜರಗಿದ ಆರನೆ ಹುಟ್ಟುಹಬ್ಬದ ಸಮಾರಂಭದ ಸಂತೋಷ ಕಾಲದಲ್ಲಿ ನಮಗೆ ಸಕಲ ವಿಧದಿಂದಲೂ ಬೆಂಬಲವಿತ್ತು ಪ್ರೋತ್ಸಾಹಿಸಿದ ನಮ್ಮ ಗ್ರಾಹಕರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇವೆ. ಇದಕ್ಕೆಂತಲೂ ದ್ವಿಗುಣಿತವಾಗಿ ನಮ್ಮ ಸೇವೆಯನ್ನು ಹೊಸ ವರುಷದಲ್ಲಿ ಸಲ್ಲಿಸಲು ಮಹಾಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನೀಯುವರೆಂದು ವಿನಂತಿಸುತ್ತೇವೆ.

ಎಲ್. ನರಸಿಂಗ ರಾವ್,
ಪ್ರೊಪ್ರೈಟರ್.

ಭದ್ರತೆ ಮತ್ತು ಸೇವೆ

ಇದೇ ಬ್ಯಾಂಕಿನ ತಳಹದಿ ಮತ್ತು ನಮ್ಮ ಮುಖ್ಯ ಗುರಿ.

ನಿಮ್ಮ ಸೇವೆಯನ್ನು ಪ್ರಾರಂಭಿಸಿ ಇಂದಿಗೆ ಪದಿನೈದು ವರ್ಷಗಳು ಸಂದುವು. ಸುಂದಿನ ವರ್ಷಗಳಲ್ಲಿ ನವೀನ ಹಾದುಸಿನಿಂದ ನೃವ ಹಾರಗಳನ್ನು ನಡಿಸಿ ಹೆಚ್ಚಿಸಬೇಕೆಂದು ಸಂಕಲ್ಪಿಸಿದ್ದೇವೆ. ಈ ನಮ್ಮ ಧ್ಯೇಯಸಾಧನೆಗೆ ನಿಮ್ಮೆಲ್ಲರ ಸಹಕಾರವನ್ನು ಹಿಂದಿಗಿಂತಲೂ ಹೆಚ್ಚಾಗಿ ನೀಡುವಿರೆಂದು ನಂಬುತ್ತೇವೆ. ವೇಪಕಾತಿಗೆ ಉತ್ತಮ ದರದ ಒಡ್ಡಿ ಕೊಡಲ್ಪಡುವುದಲ್ಲದೆ ಸಾಲಗಳನ್ನು ಕಡಿಮೆ ಬಡ್ಡಿಯಿಂದಲೂ ಬೇಂಕಿನ ಇತರ ಸಕಲ ಸಂಕೆರೆಗಳನ್ನೂ ನಿಮಗೆ ಒದಗಿಸಿಕೊಡುವುದೇ ನಮ್ಮ ಕಾರ್ಯಕ್ರಮ.

ದಿ ವಿಜಯಾ ಬೇಂಕ್, ಲಿಮಿಟೆಡ್.
ಹೆಡ್ ಆಫೀಸು: ಮಂಗಳೂರು.

ಶಾಖೆಗಳು: ಬೈಂದೂರು, ಕುಂದಾಪುರ, ಬ್ರಹ್ಮಾವರ, ಉಡುಪಿ, ಕಾಪು, ಕಾರ್ಕಳ, ಸಿಟಿ-ಮಂಗಳೂರು, ಶಾಸರಗೋಡು, ಕಾಯಂಗಾಡು, ಪುತ್ತೂರು, ಮಡಿಕೇರಿ ಮತ್ತು ಮುಂಬಾಯಿ.

❖ ಕಂಬಳ ❖

ಲೇ:—ಶ್ರೀ. ಕೆ. ವಿ. ಶೆಟ್ಟಿ, ಮಂಗಳೂರು

ಕನ್ನಡ ಜಿಲ್ಲೆಯ ಹಳೆಪದ್ಧತಿಯ ಬಂಟರು-ಬೈದರುಗಳಿಗೆ ಮಹತ್ವದ ಜಾತ್ರೆಯೇ ಕಂಬಳ. (ಕೋಣಗಳನ್ನು ಓಡಿಸುವಂತದ್ದು). ಈಗೀಗ ಕಂಬಳವನ್ನು ಹೆಚ್ಚಾಗಿ ಆಧುನಿಕ ತರುಣರೂ ಮೆಚ್ಚುತ್ತಾರೆ. ಕೊಬ್ಬಿದ ಕೋಣಗಳನ್ನು ತನ್ನ ಶಕ್ತಿಸಾಮರ್ಥ್ಯದಿಂದ ಹದಮಾಡಿ, ಅದನ್ನು ಸರಿದಾರಿಗೆ ತಂದು, ಗದ್ದೆಯ (ಕಂಬಳದ) ತುದಿಯಲ್ಲಿ ನಿಲ್ಲಿಸಿಬಿಡುವುದು-ಅದರ ಹಿಂದೆ ಕೋಣಗಳನ್ನು ಅನುಸರಿಸಿ ಓಡಿಬರುವುದು—ಇವೆಲ್ಲ ಯುವಕರಿಗೆ ಮೆಚ್ಚುಗೆಯೇ ಹೊರತು ಅಂಜುಬುರುಕುತನವಲ್ಲ.

ಕಾಸರಗೋಡಿನಲ್ಲಿ ರಾಮಯ್ಯ ಗೌಡರೆಂದರೆ ಹೆಸರಾಂತವರು. ಉದ್ದಾಳು. ಮುಖದ ಮೇಲೆ ಶೋಭಿಸುವ ಹುರಿಮಾಡಿದ ಗಲ್ಲುಮಾನೆ. ಸಾಧಾರಣದ ಡೊಳ್ಳುಹೊಟ್ಟೆ. ಕುಶಾಲುಬಾಯಿ. ಸಿತ್ರಾರ್ಜಿತವಾಗಿ ಸಿಕ್ಕೆದಂಧಾ ತನ್ನ ಆಸ್ತಿಯಲ್ಲಿ ನಿರಂಕುಶ ಪ್ರಭುತ್ವ ವಹಿಸಿದ್ದರು. ತನ್ನ ಆಪ್ತಮಂತ್ರಿಗಳಾಗಿದ್ದ ಕೊಪ್ಪ, ತಿಮ್ಮ ಸೆಟ್ಟು, ಸೇರಿಗಾರರು, ಅಂತಪ್ಪ ಪೂಜಾರಿ ಮೊದಲಾದ ಪೂಳಯನಾಯಕರು ಈ ಮೊದಲೇ ಕಂಬಳದ ವಿಷಯದಲ್ಲಿ ಗೌಡರಿಗೆ "ಕಾಸರಗೋಡಿನಲ್ಲಿ ದೊಡ್ಡ ಬೊಂದು ಕಂಬಳವನ್ನು ಮಾಡಿಸಬೇಕು ಗೌಡರೇ. ಅಂತಹ ಕಂಬಳ ಇದುವರೆಗೆ ಕನ್ನಡನಾಡಲ್ಲಿ ಜರಗಲಿಲ್ಲವೆಂದಾಗಬೇಕು. ಎಲ್ಲಾ ಕಡೆಗಳಿಗೂ ಓಲೆ ಬರಿಸಿ, ಓಟದ ಕೋಣಗಳನ್ನು ತರಿಸಿ, ಸ್ಪರ್ಧೆಯ ಕಂಬಳವನ್ನು ಏರ್ಪಡಿಸಿ, ದಶದಿಕ್ಕುಗಳಿಗೂ ನಿಮ್ಮ ಕೀರ್ತಿಯನ್ನು ಹರಡಬೇಕು." ಎಂಬುದಾಗಿ ತಿಂಗಳುಗಟ್ಟಲೆ ಹೇಳುತ್ತಿದ್ದರು. ಗೌಡರ ಆಪ್ತ ಪ್ರಮುಖರೆಲ್ಲಾ—ನಾರಾಯಣನು ನರನಿಗೆ ಭಗವದ್ಗೀತೆಯನ್ನು ಬೋಧಿಸಿದ ಹಾಗೆ ಬೋಧಿಸಿ ಬೋಧಿಸಿ ಗೌಡರನ್ನು ಹುರಿದುಂಬಿಸಿದ್ದರು.

ಗೌಡರಿಗೆ ಕಂಬಳದ ವಿಷಯವೇ ತಲೆಯಲ್ಲಿ ತಿರುಗಹತ್ತಿತು. ಈ ವರ್ಷವೇ ಕಂಬಳವನ್ನು ಜರಗಿಸಿ, ಕಾಸರಗೋಡಿನಲ್ಲಿ ಒಬ್ಬ ಒಂಟಿಸಿದ್ದಾನೆ ಎಂದು ಕನ್ನಡ ಜಿಲ್ಲೆಗೆ ತೋರ್ಪಡಿಸುವುದಲ್ಲದೆ, ಕನ್ನಡೇತರ ಆದ್ಯ ಓಟದ ಕೋಣಗಳಿಗೆ ಸ್ಪರ್ಧೆಯ ಕಂಬಳದಲ್ಲಿ ಸೆಡಲು ದೊರಕಿಸದಿದ್ದರೆ ಇದು ಮೀಸೆ ಆಲ್ಲೆಂದು ಮನಸ್ಸಿಸಲ್ಲಿಯೇ ಮೆಚ್ಚುತ್ತ ನಶ್ಯವನ್ನು ಕೈಯಲ್ಲಿ ಹಾಕಿ, ಎರಡು ಮೂಗಿನ ಸುರಂಗಗಳಿಗೂ ಒತ್ತಿದರು.

ರಾಮಯ್ಯ ಗೌಡರೆ ಅಪ್ಪಣೆ ಪ್ರಕಾರ ಕೊಪ್ಪ ತಿಮ್ಮ ಶೆಟ್ಟು 'ಕೊಳೆಂಜೆ' ಗದ್ದೆಗಳನ್ನು ಕಡಿದು ದೊಡ್ಡ ಕಂಬಳಗದ್ದೆ ಸಿದ್ಧ ಮಾಡಿದರು. ಅಂತಪ್ಪ ಪೂಜಾರಿಯರು ದೊಡ್ಡದಾದ ಚಪ್ಪರವನ್ನು ಮೈಸೂರಿನ ಮಯ ವಿಶ್ವಕರ್ಮ ಆಚಾರಿಗಳಿಂದ ಮಂಜಟೆ ಗದ್ದೆಯಲ್ಲಿ ಸಿದ್ಧಪಡಿಸಿದರು. ಸೇರಿಗಾರರು ಕಂಬಳದ ಪ್ರಚಾರ ಕಾರ್ಯದರ್ಶಿ ಸ್ಥಾನವನ್ನು ರಾಮಯ್ಯ ಗೌಡರಿಂದ ಬಲತ್ಕಾರದಿಂದ ಪಡೆದು, ಆಮಂತ್ರಣ ಪತ್ರಿಕೆಯ ಪ್ರಚಾರದಲ್ಲಿದ್ದರು.

೦೦ ೦೦ ೦೦

ಕಾಸರಗೋಡು, ಪೆಲತ್ತಡಿ.
3-12-45.

ಮಾನ್ಯರೇ,

ಕಾಸರಗೋಡು ಗುತ್ತಿಗೆಯ ಮೂಡ್ಲಾಗೆ ಪೆಲತ್ತಡಿಯಲ್ಲಿ ಹೊಸತಾಗಿ ರಚಿಸಿದ ಸ್ಪರ್ಧೆಯ ದೇವರ ಕಂಬಳವು ತಾ. 31-12-45ನೇ ಆದಿತ್ಯವಾರ ಸಾಯಂಕಾಲ ಗಂಟೆ ೪ಕ್ಕೆ (ಹಳೆ ಗಂಟೆ) ಜರಗುವುದಾಗಿ ಊರು ಕೂಡಿನಿಶ್ಚಯಿಸಿದ್ದೇವೆ. ಆ ಪ್ರಯುಕ್ತ ತಾವು ತಮ್ಮ ಓಟದ ಕೋಣಗಳಿಂದಲೂ, ಕೋಣಗಳನ್ನು ತಿರುಗಿಸುವ ಜಗಜಟ್ಟಿ ಕಾಲಾಳುಗಳಿಂದಲೂ, ಮೆರವಣಿಗೆ ರೂಪದಲ್ಲಿ ದಿಬ್ಬಣ ಸಮೇತ ಬರಬೇಕಾಗಿ ಕೋರುವ,

ತಮ್ಮವನೇ ಆದ,
ರಾಮಯ್ಯ ಗೌಡ.

ಪಿ. ಸೂ;—ರೇಶನ್ ಕಾಲವಾದ್ದರಿಂದ ತಮ್ಮ ತಮ್ಮ ಊಟಗಳಿಗೆ ತಮ್ಮ ತಮ್ಮ ಕಾರ್ಡಿನ ಅಕ್ಕಿಯನ್ನು ತರಬೇಕಾಗಿ ವಿನಂತಿ.

ಆಡಿವಾರುಗುತ್ತು ದೇಜು ಚಾಟರು ಆಮಂತ್ರಣ ಪತ್ರಿಕೆಯನ್ನು ಮೂರು ಸಾರಿ ಓದಿದರು. ಹಿಗ್ಗಿದರು! ಸಂತೋಷವು ಹೊಟ್ಟೆಯಲ್ಲಿ ಹಿಡಿಯಲಾರದೆ ಹೊರ ಬಂತು! ವೀಳ್ಯದೆಲೆಯನ್ನು ಬಾಯಿಯಲ್ಲಿ ಹಾಕಿ ಮೆಲುಕಾಡುತ್ತಾ, ನೀರಾನೆಯಂತೆ ಕೆಳ ತುಟಿಯನ್ನು ಮೇಲ್ಮೊಗವಾಗಿ ಮಡಚಿ, ಜೊಲ್ಲು ತುಂಬಿದ ಬಾಯಿಯಲ್ಲಿ ತನ್ನ ಹೆಂಡತಿಯನ್ನು ದ್ದೇಶಿಸಿ "ಹೌದೇ, ಒಂದು ಹೊಸ ಕಂಬಳ ಬಂತಲ್ಲೇ" ಎಂದು ಹೊಸ ಆಳಿಯ ಬಂದನೆಂಬಷ್ಟು ವೈಯ್ಯಾರದಿಂದ ಹೇಳಿದರು.

ಕಂಬಳವು ಸಮೀಪಿಸಿದ್ದರಿಂದ ಅಡಿಮಾರುಗುತ್ತು ದೇಜು ಚಾಟರು ತನ್ನ ಓಟದ ಕೋಣಗಳಿಗೆ ದಿನಕ್ಕೆ ಏಳೇಳು ಸೇರು ಹುರುಳಿ ಇಡುವ ಏರ್ಪಾಡು ಮಾಡಿದ್ದರು. ರಾಮಯ್ಯ ಗೌಡರ ಹಾಗೆಯೇ ದೇಜು ಚಾಟರು ತನ್ನ ಕೀರ್ತಿಯ ಕಾರ್ಯಗಳಿಗೆ ಬೇಕಾದಷ್ಟು ಹಣ ಸುರಿಸುತಿದ್ದರು.

ಕಂಬಳದ ದಿನ ಹತ್ತೂರವರಿಪುದರಿಂದ ಚಾಟರು ಕೋಣಗಳನ್ನು ಓಡಿಯುವ ನೆರೆಹೊರೆಯ ಯುವ ಜನರಿಗೆ, ನಾಳೆ ಬೆಳಿಗ್ಗೆ ಕೋಣಗಳನ್ನು ಬಿಡುವುದಾಗಿ ತಿಳಿಸಿದರು.

ಸೂರ್ಯನು ಇನ್ನೂ ಮೂಡಿಲ್ಲ. ನಾಲ್ಕು ಗಂಟೆಯಾಗಿರಬಹುದು. ಬೆಳ್ಳಂಗಳು ಪಚ್ಚೆ ಪೈರಿನ ಮೇಲೆ ಹರಡಿ ರಮಣೀಯವಾಗಿತ್ತು. ಮಂದಮಾರುತನು ನಿಶ್ಚಬ್ದ ಜಗತ್ತಿನ ಮೇಲೆ ನಿಧಾನವಾಗಿ ಜೀಕುತಿದ್ದನು. ಚಾಟರ ಮನೆಯಲ್ಲಿ ಜನರು ಸೇರಿದ್ದರು. ಚಾಟರು ಕೋಣಗಳನ್ನು ಅಂಗಳಕ್ಕೆ ತರಲು ಅಪ್ಪಣೆಕೊಟ್ಟರು. ಕೋಣಗಳನ್ನು ಸಾಕುವವನಾದ ಬೈರನು 'ಮೋಡೆ'ಯನ್ನೂ, ಚಾಟರ ಆಳಿಯನಾದ ನೇಮನು 'ಕೊಕ್ಕೆ'ಯನ್ನೂ ತಂದು ಅಂಗಳದಲ್ಲಿ ನಿಲ್ಲಿಸಿದರು. ಕೊಂಬಿನವನು ಕೊಂಬು ಊದಿದನು.

ಚಾಟರು ಯಥಾಪ್ರಕಾರವಾಗಿ ಹತ್ತು ಜನರಿಂದೊಡಗೂಡಿ 'ಜುಮಾವದಿ' ಭೂತಕ್ಕೆ ಹರಕೆ ಹೇಳಿ, ಕೋಣಗಳನ್ನು ಭೂತಕ್ಕೆ ನಮಸ್ಕಾರ ಮಾಡಿಸಿ,ಮುತ್ತಕ್ಕೆಯಿಂದ ಮಂಗಳಾರತಿಯನ್ನು ಬೆಳಗಿಸಿ, ಶುಭ ಮುಹೂರ್ತದಲ್ಲಿ ಹೊರಡಲಿಕ್ಕೆ ಕಟ್ಟಪ್ಪಣೆ ಮಾಡಿದರು.

ಕಂಬಳದಂದು ಪೆಲತ್ತಡಿಯಲ್ಲಿ ದೂರ ದೂರ ಊರುಗಳಿಂದ ಜನರು ಬಂದ್ದು ನೆರೆದಿದ್ದಾರೆ. ಕೊಂಬು, ದೋಳು, ವಾಲಗಗಳು ಅಲ್ಲಲ್ಲಿ ಮೊಳಗುತ್ತಿವೆ. ಕಂಬಳ ಗದ್ದೆಯಲ್ಲಿ ಮೂರು ಕಡೆಗಳಲ್ಲಿ ನಿಶಾನಿ ನಿಲ್ಲಿಸಿದ್ದಾರೆ. ಜನರು ಮಂಜಟೆ ಗದ್ದೆಯಲ್ಲಿ ನಿಲ್ಲಲಿಕ್ಕೆ ಸಾಧ್ಯವಿಲ್ಲದೆ, ಕಂಬಳಗದ್ದೆಯಲ್ಲಿ ಸಾಲುಗಟ್ಟಿ ನಿಂತಿದ್ದಾರೆ. ಅಂತಪ್ಪ ಪೂಜಾರಿಯವರು ಡ್ರಿಲ್ ಮಾಸ್ಟ್ರ ಕಾರ್ಯವನ್ನು ವಹಿಸಿ ಅಂಕುಡೊಂಕು ನಿಂತ ಜನರ ಸಾಲನ್ನು ಸರಿಪಡಿಸುತಿದ್ದರು. ಸೇರಿಗಾರರು ಅತಿಥಿಗಳಾಗಿ ಬಂದ ದೂರ ಊರಿನ ಬಂಟರು-ಬೈದರುಗಳನ್ನು ಮಂಜಟೆ ಗದ್ದೆಯಲ್ಲಿ ಹಾಕಿದ ಚಪ್ಪರದಲ್ಲಿ ಉಪಚರಿಸುತಿದ್ದರು.

ರಾಮಯ್ಯ ಗೌಡರು ಮುಹೂರ್ತವು ಸಮೀಪಿಸಿರುವುದರಿಂದ, "ಕೋಣಗಳನ್ನು ಗದ್ದೆಗೆ ಇಳಿಸಬಹುದು" ಎಂದು ಪಂಚೆಯ ತುದಿಯನ್ನು ಕೈಯಲ್ಲಿ ಹಿಡಿದುಕೊಂಡು ಈ ತಲೆಯಿಂದ ಆ ತಲೆಯ ವರೆಗೆ ಹೇಳುತ್ತಾ ಜೋರಿದರು.

ಯಥಾಪ್ರಕಾರವಾಗಿ ರಾಮಯ್ಯ ಗೌಡರ ಕೋಣಗಳು ಪ್ರಥಮದ್ದಾಗಿ ಗದ್ದೆಗೆ ಇಳಿಯುವಾಗ ಗರ್ನಲ್, ಕೊಂಬು, ಬ್ಯಾಡ್ ಮೊದಲಾದುವುಗಳು ಒಮ್ಮೆಲೇ ಬಾರಿಸಿದುವು. ಅದರ ಹಿಂದೆ 'ತುದಿಯಾಳು ಬೇಲ'ನವರ ಕೋಣಗಳು ಇಳಿದುವು. ಆ ಮೇಲೆ ಎರಡು ಮೂರು ಗುತ್ತು ಬರ್ಕೆಗಳ

[೧೧ನೇ ಪುಟ ನೋಡಿರಿ]

ಕುಟುಂಬದೊಳಗಿನ ಬಿಲ್ಲರೆ ಬೇನೆ

ಜೀವಿಗಳಿಗೆಲ್ಲ ಹೊಗಲಾಡಿಸಲಾರದ ಸಂಕಟಗಳಲ್ಲಿ ಹಸಿವು ಮತ್ತು ನೈಸರ್ಗಿಕ ಕರೆಗೆ ಪ್ರತಿ ಸಲ ಹೋಗುವುದು ಕಷ್ಟಸಾಧ್ಯವಾಗಿರುವಿಕೆ—ಮತ್ತು ಇವೆರಡಂದು ಅನಿವಾರ್ಯತೆಯೂ ಇರುವಂಥಾ ಕೊಟ್ಟಿಗೆಯಾಗಲಿ, ಪಾಠಶಾಲೆ ಕಾಯಿ, ಮೈದಾನ, ಕಲ್ಲು-ಸೆಗಣಿ ಮುಳ್ಳಕ ಕಾಡು ಇತ್ಯಾದಿ ಅಡೆಗೆ ಜಾಗಗಳಿಲ್ಲದೆಡೆಗಳಲ್ಲಿ ಜವೇರಿಯನ್ ಜೇನಿನ ಮಿಕ್ಶ್ಚರ್ ಸಣ್ಣಪೊಟ್ಟಣವಾಗಿ ಸಾಗಾಡಲ್ಪಡುತ್ತಿರುವ ಕಾಲಾ ಮತ್ತು ಅವಶ್ಯಕತೆಗಳ ರಾಷ್ಟ್ರವಾದ ಹೊಂಗು ಮಾತ್ರಗಳ ಮೇರೆ ಕಾಯಿದೆಯಿಂದ ಇದರ ಕಾಯಿದೇಸಾಮಾನ್ಯತೆಯ ಕಾರ್ಯರೂಪವಾಗಿ ಜೀವಾಣುಗಳಾಗಿ ಸಾಯಿಸಲಾಗಿರುವ ಅಂಶ ಮಾತ್ರವನ್ನು ಬಿಡಿಸಿಟ್ಟಿರುವ ಮತ್ತು ಗ್ರಹಣಶಕ್ತಿ ಕಳೆದುಕೊಳ್ಳುತ್ತಿರುವ ಸ್ಥಿತಿಯನ್ನು (ಉತ್ಕೃಷ್ಟ ಮೆಡಿಸಿನ್ಸ್‌ಗಳಿಂದ ಅಭಿವೃದ್ಧಿಯಾಗಿದೆ) ಪೂರೈಸಿ ಈ ಲಕ್ಷಣಗಳಿಗೆ ಮಿಶ್ರಲೇಹವು (ನಿಘರ ವ್ಯಾಪಾರ ಸಾಧ್ಯವು) ಲಭ್ಯವಿರುವ ಅಂಗಡಿಗಳಲ್ಲಿ ದೊರೆಯುತ್ತದೆ.

ಎಮ್.ಮು.ಜವೇರಿಯನ್ ಮತ್ತು ಕಂ
ಪ್ರಿನ್ಸ್ ಸ್ಟ್ರೀಟ್, ಮುಂಬಾಯಿ ೫೫

CANARA BANK LIMITED
ಕೆನರಾ ಬ್ಯಾಂಕ್ ಲಿಮಿಟೆಡ್

(ಸ್ಥಾಪನೆ ೧೯೦೬)

ಹೆಡ್ ಆಫೀಸು:— ಬಾವುಟೆಗುಡ್ಡೆ, ಮಂಗಳೂರು.
ಜನರಲ್ ಮೆನೇಜರರ ಆಫೀಸು:—ಏಸ್ಪೊಲೊ ಸ್ಟ್ರೀಟ್, ಫೋರ್ಟ್, ಬೊಂಬಾಯಿ.

ಶಾಖೆಗಳು:

ಬೊಂಬಾಯಿ ಆಧಿಪತ್ಯ
ಬೆಳಗಾಂವ್
ಧಾರವಾಡ.
ಹುಬ್ಬಳ್ಳಿ
ಕೋಲಾಪುರ
ಕಲ್ಯಾಣ

ಬೊಂಬಾಯಿ ರಹದಾರಿವಲ್ಲಿ
ಪೋರ್ಟ್
ನವಾಂಡ್ರಿ
ಗದಗಾಂವ್
ರಾಲಬಾದೇವಿ

ಮೈಸೂರು ಸಂಸ್ಥಾನ
ಅರಸಿಕೆರೆ
ಬೆಂಗಳೂರು
ಚಿಕ್ಕಮಗಳೂರು
ಧಾರವಾಡ
ಶಿವಮೊಗ್ಗಾ

ಕೊಚ್ಚಿ ಸಂಸ್ಥಾನ
ಕೊಚ್ಚಿ
ಎರ್ನಾಕುಲಮ್

ತಿರುವಾಂಕೂರು ಸಂಸ್ಥಾನ
ಅಲಪ್ಪಿ
ಕ್ವಿಲೋನ್

ಹೈದರಾಬಾದು ಸಂಸ್ಥಾನ
ಸಿಕಂದರಾಬಾದು

ಮದ್ರಾಸು ಆಧಿಪತ್ಯ
ಬಂಟ್ವಾಳ
ಕಲ್ಲಿಕೋಟೆ
ಕಣ್ಣಾನ್ನೂರು
ಕೊಯಮುತ್ತೂರು
ಕುಂದಾಪುರ
ಇರೋಡ್
ಗಂಗೊಳ್ಳಿ
ಕಾರ್ಕಳ
ಕಾಸರಗೋಡು
ಮದರಾಸು
ಮಧುರೆ
ಮಂಗಳೂರು ಬಂದರು
ಮಂಗಳೂರು ಸಿಟಿ
ಮೂಲ್ಕಿ
ಪಯ್ಯನ್ನೂರು
ಪುತ್ತೂರು
ಉಡುಪಿ

ಮೂಲಧನ ೨೮ ಲಕ್ಷ.] [ಕ್ಷೇಮನಿಧಿ ೧೧ ಲಕ್ಷ.

ಇಂದಿಗೆ ತಕ್ಕ ನಾಟಕ

ದೇಶಭಕ್ತ

ಶ್ರೀ. ಕೆ. ಕೆ. ಶೆಟ್ಟರು ಸುಲಭವಾದ ಶೈಲಿಯಲ್ಲಿ ಎಲ್ಲರಿಗೂ ಮಂದಬ್ಯಾಗು ನಂತೆ ಬರೆದ ಬೋಧಪ್ರದ ಸಾಮಾಜಿಕ ನಾಟಕ.

ದೇಶಭಕ್ತನು ಹೇಗಿರಬೇಕು? ಅವನ ಸ್ನೇಯ ಘೋರಣೆ ಹೇಗೆ ಅರ್ಥವಾಗಿರಬೇಕು? ಜನತಾ ಜನಾರ್ದನನ ಸೇವೆ ಎಂದರೇನು? ಎಂಬಿತ್ಯಾದಿಗಳನ್ನು ಅತಿ ಕೌಶಲ್ಯದಿಂದ ಚಿತ್ರಿಸಿ, ಸಂಸ್ಥಾನವೆಲ್ಲಿ ನರೇಂದ್ರರು ಮಾಡುತ್ತಿರುವ ದೆಬ್ಬಾಳಿಕೆಯ ಭೀಕರ ಚಿತ್ರವನ್ನು ಮುಂದಿಟ್ಟು ಪ್ರಜಾಸ್ವಾತಂತ್ರ್ಯವು ಹೇಗೆ ಸಾಧ್ಯವೆಂಬುದನ್ನು ವಿವರಿಸುವ ರಾಜಕೀಯ-ಸಾಮಾಜಿಕ ನಾಟಕ.

ಬೆಲೆ ರೂ. ೧—೧—೦

ನವಭಾರತ ಬುಕ್ ಡಿಪೊ,
ಉಡುಪಿ.

ಲೀಗ್-ಮಹಾಸಭಾ ತಕರಾರುಗಳ ತಕ್ಕಡಿ

(ತೂಕತಪ್ಪದವನಿಂದ)

ತನ್ನ ಕುಜೀವ್ಟೆಗಳಿಗೊಂದು ಸ್ಥಾನ ಸಂಪಾದಿಸಿಕೊಳ್ಳುವದಕ್ಕಾಗಿ ಮಿ. ಜಿನ್ನ ರು "ಕಾಂಗ್ರೆಸ್ ಮತ್ತು ಹಿಂದೂ ಮಹಾ ಸಭೆಯೆಂದರೆ ಒಂದೇ ನಾಣ್ಯದ ಎರಡು ಬದಿಗಳು" ಎಂದು ಹೇಳುತ್ತಾ ಬಂದಿದ್ದಾ ರೆ. "ಪ್ರಾಥ ಕಾಂಗ್ರೆಸ್ ಮೌನವಾಗಿಯೇ ಮುಸ್ಲಿಮರಿಗೆ ಅನ್ಯಾಯಗಳನ್ನು ಮಾಡಿ ತೋರಿಸುತ್ತಿರುವಾಗ ಮಕ್ಕಳಾಟದ ಮ ಹಾಸಭೆ ಅದನ್ನು ಆಡಿ ತೋರಿಸುತ್ತಿದೆ. ಈಯೊಂದು ವ್ಯತ್ಯಾಸವನ್ನು ಬಿಟ್ಟರೆ ಎ ರಡೂ ಒಂದೇ" ಎಂದು ಲೀಗಿನವರ ಆರೋಪ.

"ಕಾಂಗ್ರೆಸ್ ಹಿಂದೂ ಧರ್ಮದ್ರೋಹಿ. ಅದು ಸಾಕಣೆಯ ತಂದೆಯಾಗಿ ಮುಸ್ಲಿಂ ಲೀಗನ್ನು ಬೆಳೆಸದಿದ್ದರೆ ಲೀಗು ಹೀಗೆ ಬೆಳೆ ಯಲು ಸಾಧ್ಯವೇ ಇರಲಿಲ್ಲ. ಕಾಂಗ್ರೆಸು ತನ್ನ ಕೃತಕ ಬಂಧು ಭಾವ, ಸೌಜನ್ಯಗ ಳಿಂದಾಗಿ ಮುಸ್ಲಿಂ ಲೀಗಿನ ಹೇಯ ಬಯ ಕೆಗಳನ್ನು ನೆರವೇರಿಸುತ್ತಾ ಬಂದಿದೆ. ಇ ನ್ನು ಮುಂದಾದರೂ 'ಇಲ್ಲ; ಇಲ್ಲ' ಎನ್ನು ತ್ತಾ ಲೀಗಿಗೆ ಒಂದೊಂದನ್ನೇ ಬಿಟ್ಟು ಕೊ ಡಲಿಕ್ಕಿದೆ" ಎಂದು ಹಿಂದೂ ಮಹಾ ಸಭೆ ಆರೋಪಿಸುತ್ತಾ ಬಂದಿದೆ. "ಸದ್ಯದ ಕೊ ಲೆ, ದರೋಡೆ, ಅತ್ಯಾಚಾರಗಳೆಂದರೆ ಹಿಂ ದೂ ಮಹಾ ಸಭೆಯನ್ನು ಕಡೆಗಣಿಸಿದ್ದ ಕ್ಕಾಗಿ ಕಾಂಗ್ರೆಸ್ ಪಡೆದ ಪ್ರತಿಫಲ-ಧರ್ಮದ್ರೋಹಿಗಳಾಗಿ ಕಾಂಗ್ರೆಸನ್ನು ಸಮ ರ್ಥಿಸಿದ ಹಿಂದುಗಳಿಗೆ ದೊರೆತ ನ್ಯಾಯ ಶಿಕ್ಷೆ" ಎಂದು ಹೆಗ್ಗಳಿಕೆಯಿಂದ ಮಹಾ ಸ ಭೆಯ ಕೆಲವರು ಅಣಕಿಸುತ್ತಲೂ ಇದ್ದಾರೆ.

ಸದ್ಯದ ಆತ್ಯುಗ್ರ ಜಾತೀಯ ಘರ್ಷಣೆ ಗಳ ಮೊದಲೇ ಮುಸಲ್ಮಾನರಲ್ಲಿ ಅತ್ಯಧಿಕ ಬಹು ಸಂಖ್ಯಾಕರಿಗೆ ಲೀಗಿನ ವಾದವೇ ಸರಿಯೆಂದು ಮಂದಟ್ಟಾಗಿತ್ತು; ಈಗಂಗ ಹಿಂದುಗಳಲ್ಲಿ ಅಧಿಕ ಸಂಖ್ಯಾಕರಿಗೆ ಮಹಾ ಸಭೆಯು ಹೇಳುವದರಲ್ಲಿ ನ್ಯಾಯವಿದೆ ಎಂದು ತೋರಹತ್ತಿದೆ.

ಇಲ್ಲಿದೆ ಅಜ್ಞಾನ, ಅಪಾಯ, ಎರಡೂ! ಆದ್ದರಿಂದ ಕಾಲದೋಷದಿಂದೇರಿರುವ ತಾ ತ್ಕಾಲಿಕ ನೆರೆಯಲ್ಲಿ ತೇಲಿ ಹೋಗದೆ ಪ್ರತಿ ಯೊಬ್ಬರೂ ಈ ಕೆಳಗಿನ ಮೂಲ ವ್ಯತ್ಯಾಸ ಗಳನ್ನು ಅಗತ್ಯವಾಗಿ ನೆನಪಿನಲ್ಲಿಡಬೇಕು.-

ಮುಸ್ಲಿಂ ಲೀಗ್ ತಿಳಿದಿರಲಿ!

ಸಾಮಾನ್ಯ ಮುಸಲ್ಮಾನರಲ್ಲಿರುವ ವಿ ಶೇಷ ಜಾತ್ಯಂಧತೆಯನ್ನು ಗಣಿಸಿ, ಆ ಭಾ ವನೆಯನ್ನು ಗೋಯಬೇಕೆಂಬ ಉಚ್ಚ ಬಯಕೆ ಯಿಂದ ಕಾಂಗ್ರೆಸ್ ಪ್ರತ್ಯೇಕ ಮತದಾನ ಪದ್ಧತಿಗೆ ಈ ಮೊದಲು ಒಪ್ಪಿಗೆ ಕೊಟ್ಟಿ ದ್ದಿತು. ಇಲ್ಲವಾದರೆ ಪ್ರಜಾಪ್ರಭುತ್ವಕ್ಕೆ ವಿ ರೋಧವಾದ, ಬೇರಾವ ರಾಷ್ಟ್ರದಲ್ಲೂ ತ ರದ ಈ ಅರಾಷ್ಟ್ರೀಯ ಪದ್ಧತಿಯನ್ನೆದು ಒಪ್ಪಿಕೊಳ್ಳುತಿತ್ತೆ? ಆದರೆ ಅಂದು ಕಾಂ ಗ್ರೆಸು ಪ್ರೀತಿಯಿಂದ ತಿನ್ನಲು ಕೊಟ್ಟ ದ್ದ ರೊಟ್ಟಿ ಇಂದು ಅದರ ಕೆನ್ನೆಗೇನೇ ಬಡಿ ಯುತ್ತಿದೆ. ಈ ಪ್ರತ್ಯೇಕ ಮತದಾನ ಪ ದ್ಧತಿಯಲ್ಲವಾಗಿದ್ದರೆ ಎಸೆಂಬ್ಲಿಗಳು ದಾ ಗೂ ಘಟನಾ ಸಮಿತಿಯ ಮುಸ್ಲಿಂ ಸ್ಥಾನ ಗಳನ್ನು ಲೀಗಿಗಾತ್ಮಮಿಸಿಕೊಳ್ಳಲಾಗು ತ್ತಿರಲಿಲ್ಲ. ಪಾಕಿಸ್ತಾನದ ಬೀಜ ಮೊಳೆ ಯಲು ಸಾಧ್ಯವೇ ಇರಲಿಲ್ಲ.

ಲೀಗ್ ಮನೋವೃತ್ತಿ ಮುಸ್ಲಿಮರಲ್ಲಿ ಬೆಳೆದಂತೆಯೇ ಮಹಾಸಭೆಯ ಮನೋ ವೃತ್ತಿ ಹಿಂದೂ ಸಾಮಾನ್ಯರಲ್ಲಿ ಬೆಳೆಯ ಲೆಂದು ಕಾಂಗ್ರೆಸ್ ಸಡಿಲು ಬಿಡುತ್ತಿದ್ದರೆ ಮುಸ್ಲಿಮರಲ್ಲಿ ಜಾತೀಯ ದುರಭಿಮಾನ ಮೂಡಿದ ಕಾಲದಲ್ಲೇ ಹಿಂದುಗಳಲ್ಲೂ ಅದು ಮೊಳೆತು ಇಸ್ಪರಿಟ್ಲೇ ಅವಮ್ಯ ರೀ ತಿಯಿಂದ ಹಬ್ಬುತಿತ್ತು; ಮುಸ್ಲಿಮರು ಈ ಗ ಮುಂದೊತ್ತಿ ಬಂದಿರುವ ವರೆಗೆ ಎಂದಿ ಗೂ ಬರಲಾಗುತ್ತಿರಲಿಲ್ಲ.

ಕಾಂಗ್ರೆಸ್ 'ನ್ಯಾಯವಾದಿ'ಯಾಗಿ ಸ್ಥಿ ರಚಿತ್ವದಿಂದ ನಿಂತುದರಿಂದಲೇ ಸ್ವಾಸ್ಥಿತ್ವ ವಿಲ್ಲದ ಲೀಗಿಗೆಅದರ 'ಸ್ಪರ್ಧಿವಾದಿ'ಯಾಗಿ ಉಳಿಯಲು ಸಾಧ್ಯವಾಯಿತು. ಕಾಂಗ್ರೆಸ ನ್ನು ಪ್ರತಿಯೊಂದು ವಿಧದಲ್ಲೂ ಅಣಕಿ ಸುವ ಹೊರತು ಮೂಲ ಧೋರಣೆಯೇ ಇದಕ್ಕೆಲ್ಲವಾಯಿತು.

ಲೀಗು ಮುಸಲ್ಮಾನರಿಗೆ 'ಸ್ವಸಮಾಜ' ದ ಪಾರಕೊಡುತ್ತಾ ಬರುವಾಗ ಕಾಂಗ್ರೆಸು ಹಿಂದುಗಳಿಗೆ ಪರಮತ ಸಹಿಷ್ಣುತೆಯ 'ಸ್ವ ರಾಷ್ಟ್ರ' ತರಬೇತಿ ಕೊಡುತ್ತಾ ಬಂತು. ಲೀ ಗಿನಲ್ಲಿರುವದು ಎಲ್ಲರೂ ಮುಸಲ್ಮಾನರೇ; ಕಾಂಗ್ರೆಸಿನಲ್ಲಿರುವದು ಅಧಿಕ ಸಂಖ್ಯೆಯಲ್ಲಿ ಹಿಂದುಗಳೇ.

ಕಾಂಗ್ರೆಸು, ಗಾಂಧಿ ವ್ಯೇರಣಿಗೊಳಗಾ ಗಿ ಹಿಂದುಗಳಿಗೆ ಎಡೆಬಿಡದೆ ಹಲವು ವರು ಷಗಳಿಂದ ಸತ್ಯ ಮತ್ತು ಅಹಿಂಸೆಯ ಪಾಠ ಕೊಡುತ್ತಾ ಬಂತು; ಲೀಗು ಆ ತತ್ವಗಳ ನ್ನು ಅಪಹಾಸ್ಯ ಮಾಡುವ ಮೂಲಕ ವಿ ರುದ್ಧ ಗುಣಗಳನ್ನೇ ಮುಸಲ್ಮಾನರಲ್ಲಿ ಪ್ರೇ ರಿಪಿಸುತ್ತಾ ಬಂತು. ಹೀಗಾಗಿ ಬಂದು ಕ ಡೆಯವರ ಅಸ್ತ್ರಗಳನ್ನು ಕಾಂಗ್ರೆಸು ಕಸ ಗೊಳ್ಳುತ್ತಿರುವಾಗಲೇ, ಇದಿರುಕಡೆಯವರ [illegible] ಲೀಗಿನಿಂದಾ ಯಿತು; ಅವರ ಹಿಂಸಾಶಕ್ತಿ ಸ್ವತಹಾ ನಾಶವಾಗುವ ಹೊತ್ತಿನಲ್ಲೇ ಇವರ ಪಶು ಶಕ್ತಿ ಇಮ್ಮಡಿಯಾಗುವ ಅನುಕೂಲತೆ ಯೊದಗಿತು.

ಆದರೆ ಶಾಂತಿ, ಸಹನೆಯ ಗಡಿ ಕಲ್ಲ ರೆಗೂ ಮುಂದೊತ್ತಿದ ಮೇಲೆ ಇನ್ನು ನಿ ರ್ವಾಹವಿಲ್ಲವೆಂದೇ ಕಾಂಗ್ರೆಸ್ ತಿರುಗಿನಿಂ ತಿದೆ. ಕಾಂಗ್ರೆಸ್ ಮುಸ್ಲಿಮರಿರು ಬಂಧು ಭಾವದಿಂದ ಬಗ್ಗಲು ತಯಾರಾಗಿತ್ತು-ನೆ ಲದವರೆಗೂ ಬಗ್ಗಿತು. ಇನ್ನೂ ತಗ್ಗುವದೆಂ ದರೆ ನೆಲದಡಿಗೆ-ಹುಗಿದುಹೋಗಲು ಅದು ತಯಾರಿಲ್ಲ! ಇದು ಮುಸ್ಲಿಂ ದ್ರೋಹವೆ?

ಮುಸ್ಲಿಮರು ಅಲ್ಪ ಸಂಖ್ಯಾಕರಾದುದ ರಿಂದ 'ಆತ್ಮರಕ್ಷಣೆ'ಯ ಪ್ರಯತ್ನದಲ್ಲಿದ್ದಾ ರೆಂದು ನೆನೆಸಿಯೇ ಇದುವರೆಗೂ ಕಾಂಗ್ರೆ ಸಿನ ರಿಯಾಯಿತಿ; ಈ ಔದಾರ್ಯವನ್ನೇ ದೌರ್ಬಲ್ಯವೆಂದು ಧಾವಿಸಿ ಲೀಗ್ 'ಅಶ್ರ ಮಣ'ಕ್ಕೇನೇ ಕೊಡಗಿದೆ ಎಂದೀಗ್ಗೆಖಂಡಿ ತವಾಗಿರುವದರಿಂದ ಇನ್ನದರ ನಿರ್ನಾಮ ವೊಂದೇ ಕಾಂಗ್ರೆಸಿನ ಮುಂದಿರುವ ಹಾದಿ. ಕಾಂಗ್ರೆಸಿನ ಅಗಿನ ಮತ್ತು ಈಗಿನ, ಎರಡು ಧೋರಣೆಗಳೂ ಮುಸ್ಲಿಮರ ಸಮೇತ ಸ ರ್ವರ ಹಿತಕ್ಕಾಗಿ.

ಮಹಾಸಭೆ ಮರೆಯದಿರಲಿ!

ಮುಸ್ಲಿಂ ಲೀಗ್ ಧೋರಣೆಯಲ್ಲಿ ಅ ನ್ಯಾಯಗಳಿದ್ದರೆ ಮಹಾ ಸಭೆಯ ಧೋರ ಣೆಯಲ್ಲಿ ಅಲ್ಪ ಬುದ್ಧಿಯಿದೆ. ಲೀಗ್ ಜಾ ತೀಯ ಪಕ್ಷಪಾತಿಯಾಗಿದ್ದಂತೆಯೇ ಕಾಂ ಗ್ರೆಸೂ ಇಂಬೇಕೆತ್ತೆನ್ನುವ ವಾದವು, ಬೇ ಡುವವನೊಡನೆ ಬೇಡ ಬೇಕೆನ್ನುವ ಅಗ್ರ ಹಕ್ಕೆ ಸಮಾನ. ಮುಸ್ಲಿಮರು ಅಲ್ಪ ಸಂ ಖ್ಯಾಕರಾದ್ದರಿಂದ ಬೇಡಿಕೆ (ಈಗಿನಂತೆ ಹದಗೆಟ್ಟಲ್ಲ) ಮುಂದಿಡುವ ಹಕ್ಕು ಲೀಗಿ ಗಿದೆ. ಆದರೆ ಅದನ್ನೇ ಅಣಕಿಸುವ ಹಕ್ಕು ಬಹು ಸಂಖ್ಯಾಕರಿಗಿಲ್ಲ. ಕಾಂಗ್ರೆಸನ್ನು ಲೀ ಗ ಅಣಕಿಸುವಂತೆ ಲೀಗನ್ನು ಹಿಂದೂ ಸಭೆ ಅಣಕಿಸುವದು ಹಲವು.

ಹಿಂದುಗಳಲ್ಲಿ ಕೇಕಡಾ 99 ಮಂದಿ ಕಾಂಗ್ರೆಸಿನಲ್ಲಿದ್ದಾರೆ. ಕಾಂಗ್ರೆಸು ಬಹುಮತ ತಿದ ನಿರ್ಣಯದಂತೆ ಬಾಳುವ ಪ್ರಜಾಪ್ರಭು ತ್ವ ರೂಪಿಸಿದೆಸ್ಥ. ಹೀಗಿರುವಾಗ 'ಕಾಂಗ್ರೆ ಸ್ ಹಿಂದೂ ಧರ್ಮದ್ರೋಹಮಾಡುತ್ತಿದೆ' ಎಂದಾರೋಪಿಸುವವರು ತಾವಾವ ಹಿಂ ದುಗಳ ಪ್ರತಿನಿಧಿಗಳು, ಎಂಬ ಆತ್ಮಶೋ ಧನೆ ಮಾಡಿಕೊಳ್ಳುವದಗತ್ಯ. ದೇಹದೊ ಳಗೇನೇ ಹುಟ್ಟಿದ ಕುರು ದೇಹಾಂಗವಾಗ ದು-ಬಹು ಸಂಖ್ಯಾಕ ಹಿಂದುಗಳಿಗೆ ಬೇಡ ವೆನ್ನಿಸಿದುದು 'ಹಿಂದೂ' ಆಗದು. ಲೀಗ ನ್ನು ಕಂಡಂತೆ, ಮಹಾ ಸಭೆಯನ್ನೂ ಕಾಂಗ್ರೆಸ್ ಕಾಣದಿರಲು ಇದೇ ಕಾರಣ.

ಕಾಂಗ್ರೆಸು ಇಂದು ಮುಸ್ಲಿಂ ಲೀಗನ್ನು ಇದಿರಿಸಿರುವುದಕ್ಕು ಹಿಂದೂ ಮಹಾ ಸಭೆ ಮುಸ್ಲಿಮರನ್ನು ವಿರೋಧಿಸುತ್ತಾ ಬಂದಿ ರುವದಕ್ಕೂ ಆಜಗಜಾಂತರವಿದೆ. ಮಹಾ ಸಭೆಯ ವಿರೋಧದ ಮೂಲ ಇವರು ಮು ಸಲ್ಮಾನರಾಗಿ ಹುಟ್ಟದುದರಲ್ಲೇ ಹುದುಗಿದೆ -ಕಾಂಗ್ರೆಸಿನ ವಿರೋಧವು ಅವರು ಅನ್ಯಾ ಯವಾಗಿ ಮುಸ್ಲರ ಹೂಡಿರುವುದರ ಮೇ ಲಿದೆ. ಕೆಲವು ರಾಜಕೀಯ ನ್ಯಾಯಗಳ ನ್ನೊಪ್ಪಿಕೊಂಡರೆ ಕಾಂಗ್ರೆಸ್ ನಾಳೆ ಮು ಸ್ಲಿಮರನ್ನಪ್ಪಿಕೊಳ್ಳುವದು-ಆದರೆ ಹಿಂದೂ ಮಹಾ ಸಭೆ ಮುಸ್ಲಿಮರನ್ನಾಲಿಂಗಿಸಿಕೊ ಳ್ಳುವ ಸಂಧರ್ಭವೆಂದಿಗೂ ಬರಲಾರದು.

ಗುಟ್ಟೆಂದರೆ ಮಹಾಸಭೆಯ ವಾದಸರ ಣಿ ಮುಸ್ಲಿಂ ಲೀಗಿನದೇ. 'ಹಿಂದೂ ಮತ್ತು ಮುಸಲ್ಮಾನರು ಭಿನ್ನ ಜನಾಂಗದವರು, ಭಿನ್ನ ಸಂಸ್ಕೃತಿಯವರು, ಆದ್ದರಿಂದ ಅವ ರು ಪರಸ್ಪರ ಕೂಡಿ ಬಾಳುವುದು ಅಸಾಧ್ಯ' ಎಂದು ಲೀಗ್ ಹೇಳುತ್ತಿರುವಂತೆಯೇ ಮ ಹಾಸಭೆಯೂ ಹೇಳುತ್ತಿದೆ.

ಆದರೆ 'ಮೇಲಿನ ಕಾರಣಗಳಿಂದಾಗಿ ನ ಮಗೆ ಪಾಕಿಸ್ತಾನ ಕೊಟ್ಟು ನಮ್ಮಿಬ್ಬರ ನ್ನೂ ಹೃತ್ಯೇಕಿಸಬೇಕು' ಎಂದು ಲೀಗ್ ಕೇಳಿದರೆ 'ಅದು ಮಾತ್ರ ಎಷ್ಟಕ್ಕೂ ಸಾಧ್ಯ ವಿಲ್ಲ' ಎಂದು ಮಹಾಸಭೆ ಹೇಳುತ್ತಿದೆ. 'ಐಕ್ಯದಿಂದ ಒಟ್ಟಿಗಿರಲು ಎಷ್ಟಕ್ಕೂ ಸಾ ಧ್ಯವಿರದ ಪ್ರತ್ಯೇಕ ಜನಾಂಗಗಳು' ಎಂ ಬುದನ್ನೊಪ್ಪಿದ ಮೇಲೆ 'ಹಾಗಾದ ಮೇ ಲೆ ಪ್ರತ್ಯೇಕ ರಾಷ್ಟ್ರಗಳೇ ಆಗಬೇಕು' ಎಂ ಬುದನ್ನೂ ನ್ಯಾಯಸ್ಪರಾ ತಾನೊಪ್ಪಬೇ ಕಾಗುತ್ತದೆಂಬುದು ಮಹಾಸಭೆಯ ತಲೆ ಯೊಳಗೆ ಸುಳಿದಿಲ್ಲ. ದ್ವಿರಾಷ್ಟ್ರ ತತ್ವವನ್ನು ಅಪ್ಯ ಕಾರಣಗಳಿಂದಾಪ್ತೈಸಿರುವ ಮಹಾ ಸಭೆಯ ವಾದಗಳು ನ್ಯಾಯವಾದಿಗಳಿಗೆ ಸಮ್ಮತವಾಗುವಂತಹವಲ್ಲ.

ತಮ್ಮ ವಾದವನ್ನು ಕೇಳಿಕೊಂಡು ಮೊ ದಲಿನಿಂದಲೂ ಕಾಂಗ್ರೆಸ್ ಆ ಹಾದಿಯನ್ನು ಸುಕರಿಸುತ್ತಿದ್ದರೆ ಇಂದಿನ ಪರಿಸ್ಥಿತಿಯೊದ ಗುತ್ತಿದ್ದಿಲ್ಲ, ಎಂಬ ಮಹಾಸಭಾ ವಾದ ನಿ ಜಕ್ಕೂ ಸರಿ; ಯಾಕಂದರೆ ಇಪ್ಪರೊಳಗೇ ದೊಡ್ಡ ಆಂತರ್ಯಾದ್ಧವಾಗಿ ಭಾರತವು ರಕ್ತ ಸಮುದ್ರವಾಗಿ ಮಾರ್ಪಟ್ಟು ರಾಷ್ಟ್ರ ವೆಂದೋ ಇಚ್ಛಾಗವಾಗಿ ಹೋಗುತ್ತಿತ್ತು.

ಕಾಂಗ್ರೆಸು ಮಾನವ-ಪತ್ವವನ್ನು ಕಲಿಸು ವಾಗ ಜಿತೆಯಲ್ಲೇ ಮಾನುಷತ್ವಕ್ಕೆ ಧಕ್ಕೆ ಬೀಳುವದನ್ನೂ ಪ್ರತಿಭಟಿಸಲಿಕ್ಕೂ ಕಲಿಸಿ ರುವದರಿಂದ ಲೀಗಿನ ದೌರ್ಜನ್ಯಕ್ಕೆ ಸಿಕ್ಕ ಲಾಟ, ಪುಂಡಾಟಗಳ ಗಡಿಮುಟ್ಟವಾಗಿ, ಅಲ್ಲಿಯೇ ನಡೆಬಿಡಿಯುವ ಶಕ್ತಿ ಕಾಂಗ್ರೆಸಿ ಗರಲ್ಲಿದೆ. ದೇಶವ ಭವಿಷ್ಯ ಕಾಂಗ್ರೆಸಿನ ಕೈಯಲ್ಲಿ ಭದ್ರವಾಗಿದೆ; ಬದಲಿಗೆ ಮಹಾ ಸಭೆಯ ಹಾದಿಯನ್ನು ಅನುಕರಿಸುತ್ತಿದ್ದರೆ ಅಲ್ಪ ವಿಷಯಗಳಿಗಾಗಿ ಕಚ್ಚಾಡಿಕೊಂಡು

Greetings

This season of Deepavali
I greet you heartily,
And wish all through
New Year there be
Joy, Happiness, Prosperity.

Rao Bahadur B. S. SAWKAR, B A. L L B,
Chairman Board of Directors,
UNITED KARNATAK INSURANCE Co., Ltd.
DAHRWAR.

ಆಲ್ಪಶೃಷ್ಟಿ ಮತ್ತು ಶಾಶ್ವತ ಆನಾಹುತಗಳು ಇಷ್ಟರಲ್ಲೇ ಸ್ಥಾಪನೆಯಾಗಿ ಹೋಗುತಿದ್ದುವು.

ಲೀಗಿನ 'ಇನ್ಸ್ಲಾಂ'–ಮಹಾ ಸಭೆಯ 'ಹಿಂದುತ್ವ'ಗಳ ನಡುವೆ ಕಾಂಗ್ರೆಸ್ 'ಮಾನುಷತ್ವ'ವನ್ನೆತ್ತಿಹಿಡಿದು ನಿಂತುದರಿಂದ ಬಾರಕವಿಂದು ಲೋಕದಿದಿರು ಬೆಟ್ಟ ತೋರಿಸಿ ನಿಂತಿದೆ. ಇಲ್ಲವಾದರೆ ದೊಗ್ಗಲೂರಿ ನೆಲಕ್ಕೆ ಹಣೆಮುಟ್ಟಿಸುವ-ಅಧವಾ ಜೌಕ ಹಾಕಿ ಕುಳಿತು ತುಳಸೀ ಮಣಿಸರ ತಿರುಗಿಸುವ ಅವಸ್ಥೆ ಆದಕ್ಕೊದಗುತಿತ್ತು.

ಇಂದಿನ ಜಾತೀ ಜಗಳದ ಸುಸಂದರ್ಭವಾದರೂ ಮಹಾಸಭೆಯನ್ನು ಕ್ರಾಂಗೆಸಿನ ಸ್ಥಾನತ್ಯೇರಿಸಬಹುದಂದು ಭಾವಿಸುವದು ತಿಂಗಳ ಸ್ವಪ್ನವೇ ಸರಿ. ಕಾಂಗ್ರೆಸಿನಲ್ಲಿರುವ, ಕಾಲಾನುಗುಣವಾಗಿ ವರ್ತಿಸುವ ಯೋಗ್ಯತೆ ಅಧವಾ ಯೋಧಗುಣವಾವುದೂ ಮಹಾಸಭೆಯಲ್ಲಿಲ್ಲ.

ಒಂದೊಮ್ಮೆಗೆ ಮುಸ್ಲಿಂ ಜಾತ್ಯಂಧರನ್ನು ಹೋರಾಡಿ ಗೆಲ್ಲಲು ಹಿಂದೂ ಜಾತ್ಯಂಧರೇ ಬೇಕೆಂದಾಗಿ ಅಂಥಾ ಕಾಲೋಚಿತ ನಾಯಕತ್ವವು ಮಹಾಸಭೆಗೆ ದೊರೆತರೂ, ಈ ಜಗಳ ಹೇಗೆ ಶಾಶ್ವತವಲ್ಲವೋ ಆ ನಾಯಕತ್ವವೂ ಅಂತೆಯೇ ಅಶಾಶ್ವತವಾಗುವದು. ಜಾಗತಿಕ ಯುದ್ಧದ ವೇಳೆಯಿಸವೆಲ್ಲ್ ಚರ್ಚಿಲ್ಲರಿಗಿಂತ ಹೆಚ್ಚಿನ ಪ್ರಮುಖ್ಯತೆ, ಜನರಲ್ ಈಸೆನೋವರರಿಗೆ ದೊರೆತಿತ್ತು—ಯುದ್ಧದೊಂದಿಗೆ ಅದೂ ಕಳೆದುಹೋಗಿ ಈಗ ನಿಶ್ಯಸ್ತ್ರೀಕರಣ, ಸೈನ್ಯ ವಿಸರ್ಜನೆಯ ಮಾತು ಕೇಳಿ ಬರುತ್ತಿರುವಂತೆ ಮಹಾಸಭೆಯು ನಾಯಕತ್ವವೂ ಗೊಂದಲ ಮುಗಿದ ಮರುದಿನವೇ ಬರ್ಖಾಸ್ತಾಗಬಹುದು,

ಸದ್ಯವು ಲೀಗ್ ಪೊಡಾಟಿಕೆಯೆಂಬುದು ಮಾನುಷತ್ವದ ಮೇಲಿನ ಧಾಳಿಯಾದ್ದರಿಂದ 'ಹಿಂದೂತ್ವ'ವೊಂದನ್ನೇ ಅರಿತಿರುವ ಮಹಾಸಭೆಗೆ ಎಟಕದ ವಿಷಯವಿದು; ಕಾಂಗ್ರೆಸಿಗಿದು ಅಂಗೈನೆಲ್ಲಿ

ಅವನೊಬ್ಬನಿರುವುದು ಹೌದಾಗಿದ್ದರೆ ಆ ಕಾಲಯಮನೇ ಎದ್ದು ಬಂದು ತನ್ನೆರಡು ಕೈಗಳಿಂದ ಆ ಕಡೆಯ ಲೀಗ್, ಈ ಕಡೆಯ ಮಹಾ ಸಭೆಯನ್ನಪ್ಪಳಿಸಿ ಬಿಟ್ಟರೆ ಭಾರತದಲ್ಲಿ ಪ್ರಳಯವಾಗದು. ಬದಲಿಗೆ ಇಕ್ಕಡೆಗಳಿಂದ ಸೌಖ್ಯಮತ್ತು ಶಾಂತಿ ಎದ್ದು ಬರಬಹುದು.

ಹಿಂದೀ ಧುರೀಣರು ಲಂಡನಿನಲ್ಲಿದ್ದಾಗ—

ವೈಸರಾಯಿ ವೇವೆಲ್, ಪಂಡಿತ ನೆಹರು, ಬಲದೇವ ಸಿಂಘ್, ಜಿನ್ನಾ, ಲಿಯಾಖತ್ ಆಲೀಖಾನ್, ಮತ್ತಿವರ ಕಾರ್ಯದರ್ಶಿಗಳು ತಾ. 1ರಲ್ಲಿ ಕರಾಚಿಯಿಂದ ಸ್ಪೆಶ್ಯಲ್ ವಿಮಾನ ಹತ್ತಿ ಲಂಡನಿಗೆ ಹೊರಟು, ಆ ರಾತ್ರಿ ಕೈರೋದಲ್ಲಿದ್ದು ಮರುದಿನ ಮುಂಜಾನೆ ಅಲ್ಲಿಂದ ಹೊರಟು ಮಾಲ್ಟಾದಲ್ಲಿ ಇಳಿದು ಅಂದೇ ರಾತ್ರಿ ಲಂಡನಿಗೆ ಮುಟ್ಟಬೇಕಾಗಿತ್ತು, ಆದರೆ ವಿಮಾನದ ಯಂತ್ರದೋಷದಿಂದಾಗಿ ಮಾಲ್ಟಾದಲ್ಲಿಯೇ ಅರ್ಧದಿನ ವ್ಯರ್ಥವಾಯಿತು; ಕೊನೆಗೆ ತಾ. 2ನೇ ಅವರಾಹ್ನ 2-10ಕ್ಕೆ ಸರಿಯಾಗಿ ಧುರೀಣರಿದ್ದ ಆಕಾಶಯಾನ ಲಂಡನ್ ನಿಲ್ದಾಣದಲ್ಲಿ ತಳಪೂರಿತು,

ಲಂಡನಿನ ಸ್ವಾಗತ

ಲಂಡನ್ ನಿಲ್ದಾಣವು ಕಾಂಗ್ರೆಸ್ ಮತ್ತು ಲೀಗ್ ಧ್ವಜಗಳಿಂದ ರಾರಾಜಿಸುತಿತ್ತು. ಮುಂಜಾನೆಯಲ್ಲೇ ಅಲ್ಲಿದ್ದ ಜಂದೂ, ಮುಸ್ಲಿಂ, ಸಿಖ್ಖರೂ ಬ್ರಿಟಿಷರೂ ನೆರೆದು ಬಂದಿದ್ದರು. ಭಾರತ ಕಾರ್ಯದರ್ಶಿ ಪೆಥಿಕ್ ಲಾರೆನ್ಸ್‌ರೂ, ಉಪಕಾರ್ಯದರ್ಶಿ ಆರ್ಡರ್ ಹೆಂಡರ್ಸನರೂ ನಿಲ್ದಾಣದಲ್ಲಿ ತಯಾರಾದ್ದು ವಿಮಾನ ಭೂಮಿಗೆ ಮುಟ್ಟುದೊಡನೆ ಆತಿಥಿ ಧುರೀಣರನ್ನು ಸ್ವಾಗತಿಸಿದರು. "ಇಂಗ್ಲಾಂಡನ್ನು ಸಂದರ್ಶಿಸುವ ಸುಯೋಗ ದೊರೆತುದಕ್ಕಾಗಿ ಸಂತೋಷಿಸುತ್ತೇನೆ" ಎನ್ನುತ್ತಾ ನೆಹರುಗಳು ವಿಮಾನದಿಂದಿಳಿದರು. "ನಮ್ಮ ಪ್ರಯಾಣ ಸುಖಕರವಾಗಿತ್ತು" ಎಂದು ಜಿನ್ನಾರಂದರು. "ನನಗೆ ಫಲಾಹಾರವೇ ಆಗಿಲ್ಲ" ಎಂದು ದಣಿದಿದ್ದ ವೇವೆಲರಂದರು. ಪೋಲಿಸರು ಅಧಿಕ ಸಂಖ್ಯೆಯಲ್ಲಿ ನೆರೆದಿದ್ದರಲ್ಲದೆ ಅತಿ ಮುಂಜಾನೆಯಲ್ಲಿ ಇಡೀ ನಿಲ್ದಾಣವನ್ನು ಕೂಲಂಕುಷ ಶೋಧಿಸಿ, ಒಳಗೆ ಬರುವವರನ್ನು ಸಮಿತಿಪಾಂತ ಜಡ್ತಿಮಾಡಿ ಬಿಟ್ಟಿದ್ದರು; ಸಶಸ್ತ್ರ ಪೋಲೀಸರ ಮೋಟಾರು ಕಾರು ನಿಂತಿತ್ತು. ಶ್ರೀಮತಿ ಹಾಂಡೂ, ಆ ಬ್ಯಾಸ್ ಅಲಿ, ಸಾಮುವೇಲ್ ರಂಗನಾಥನ್, ಕರ್ನಲ್ ಫ್ರೇಸರ್, ಕೃಷ್ಣಮೆನನ್, ಆರ್. ಕೆ. ನೆಹರು, ಮೊದಲಾದ ಪ್ರಮುಖರೂ ಅಲ್ಲಿ ಕಾದು ನಿಂತಿದ್ದು ಸ್ವಾಗತವಿತ್ತರು. ಪೃಥಮತಃ ಲಂಡನಿನಚಿರಪರಿಚಿತ ಲೋರ್ಡ್ ವೇವೆಲ್ ವದನವು ವಿಮಾನದಿಂದ ಹೊರಗೆ ಕಾಣಿಸಿಕೊಂಡಾಗ ಅವರ ಮಗಳು ಗಾಢ ಚುಂಬನದೊಡನೆ ತಂದೆಯನ್ನು ಸ್ವಾಗತಿಸಿದಳು. ಬೆನ್ನಲ್ಲಿ ಅನುಕ್ರಮವಾಗಿ ನೆಹರುಗಳ ನಗುಮೊಗ, ಬಲದೇವ ಸಿಂಘರ ಕಪ್ಪುಗಡ್ಡದ ಗಂಭೀರಮುಖ,ಮಿನಿಟು ತಡವಾಗಿ ಜಿನ್ನರ ಆಜಬದನ, ಲಿಯಾಖತರ ಸಿರಿತನ ಸೂಸುವ ಸುಂದರ ಮೊಗ ಕಾಣಿಸಿಕೊಂಡಿತು. ಜವ ನುಗ್ಗಾಟನನ್ನು ಹತೋಟಿಗೆ ತರಲು ಪೋಲೀಸರು ತುಸು ಪ್ರಯಾಸಗೊಂಡರು. ಸುಮಾರು ನೂರು ಪತ್ರಿಕಾ ಕೆಮರಗಳೂ, ಫಿಲ್ಮ್ ಕೆಮರಾಗಳೂ ಭಾವಚಿತ್ರವೆತ್ತಿದುವು. ಶ್ರೀಮತಿ ಹಾಂಡೂ ನೆಹರುಗಳಿಗೆ ಹೂಮಾಲೆ ಹಾಕಿದರು. ಆಲ್ಲಿ 'ಪಾಕಿಸ್ತಾನ್ ಅಧವಾ ನಮ್ಮ ನಿರ್ನಾಮ' 'ಪಾಕಿಸ್ತಾನ್ ಚಿರಾಯುವಾಗಲಿ' ಎಂದು ಮುಂತಾಗಿ ಬರೆದಿದ್ದ ಜೋಡ್ಗುಗಳು, ಮತ್ತು ಲೀಗ್ ಧ್ವಜಗಳ ಸನ್ನೇತ ಪುಷ್ಪಹಾರಗಳೊಂದಿಗೆ ಕಾದಿದ್ದ ಲೀಗ್ ಅನ್ಯಾಯಿಗಳು ಜಿನ್ನಾ ಲಿಯಾಖತರನ್ನು ಸ್ವಾಗತಿಸಿ 'ಪಾಕಿಸ್ತಾನ್ ಝಿಂದಾಬಾದ್' ಘೋಷಣೆಗಳನ್ನೆಬ್ಬಿಸಿದರು. ಲೀಗ್ ಧುರೀಣರಿಬ್ಬರನ್ನು ಪಂಗಡದಿಂದ ಪೃತ್ಯೇಕಿಸಿ ಸಂಭಾವನೆಕೊಟ್ಟರು. ಆ ಮೇಲೆ ಜನರ ಜಿಜ್ಞಾಪನ್ನು ಬಿಡಿಸಿ ನಾಯಕರು ಕಾರು ಹತ್ತುವಂತೆ ಹಾದಿ ಮಾಡಿಕೊಡಲು ಪೊಲೀಸರಿಗೆ ವಿಶೇಷ ಕಷ್ಟವಾಯಿತು. ಧುರೀಣರೆಲ್ಲಾ ಕಾರು ಹತ್ತಿ ತಂತಮ್ಮ ಪೂರ್ವವ್ಯವಸ್ಥಿತ ಹೊಟೆಲುಗಳಿಗೆ ಸಾಗಿದರು. "ನಾನು ಕಾರ್ಯಕ್ಕೆ ತೊಡಗಿದ್ದೇನಷ್ಟೆ; ಈಗ ಏನನ್ನೂ ಹೇಳಲಾರೆ" ಎಂದಿದ್ದರು ಜಿನ್ನಾ. "ನಾನು ಬೇರೇನೆನ್ನಲಿ? ಬರಬೇಕೆಂದರು, ಬಂದೆ" ಎಂದು ನೆಹರುಗಳಂದರು.

ಅವಿಶ್ರಾಂತ ಸಂಭಾಷಣೆ–ಸತ್ಕಾರ

ಹಿಂದಿನ ರಾತ್ರಿಯ ನಿದ್ದರಹಿತ ಆಕಾಶ ಪ್ರಯಾಣದ ಆಯಾಸವನ್ನು ಕಡೆಗಣಿಸಿ ವೈಸರಾಯಿ ಮತ್ತು ಹಿಂದೀ ನಾಯಕರು ಕೂಡಲೇ ಲಂಡನ್ ಮಾತುಕತೆಗಳಲ್ಲಿ ಪ್ರವೃತ್ತರಾದರು. ವಿಮಾನದಿಂದಿಳಿದ ಲೋರ್ಡ್ ವೇವೆಲರು ನೆಟ್ಟಗೆ ಡೌನಿಂಗ್ ಸ್ಟ್ರೀಟ್ ನಂ. 10 ಸರಕಾರೀ ಭವನಕ್ಕೆ ಧಾವಿಸಿ, ಆಟ್ಲಿ, ಲಾರೆನ್ಸ್, ಕ್ರಿಪ್ಸ್, ಅಲೆಕ್ಸಾಂಡರರಿದ್ದ ಬ್ರಿಟಿಷ್ ಮಂತ್ರಿ ಸಮಿತಿಗೆ ಹಿಂದೀ ಸ್ಥಿತಿಗತಿಗಳ ವರದಿಯೊಪ್ಪಿಸಿದರು. ಅದನ್ನನುಸರಿಸಿ ಎಡೆಬಿಡದೆ ಪೃತ್ಯಪ್ರತ್ಯೇಕ ಸಂಭಾಷಣೆಗಳು ನಡೆದುವು. ಲೋರ್ಡ್ ವೇವೆಲ್ ಮಾತಾಡಿ ಹೊರಟೊಡನೆಯೇ ಆಟ್ಲೀ–ನೆಹರು ಸಂಭಾಷಣೆ ನಡೆಯಿತು. ಅದರ ಬೆನ್ನಲ್ಲೇ ಆಟ್ಲೀ–ಬಲದೇವ ಸಿಂಘ್ ಮಾತುಕತೆಯಾಯಿತು. ಒಂದೆಡೆ ಈ ಮಾತುಕತೆಗಳಾಗುವ ಹೊತ್ತಿನಲ್ಲೇ ಇನ್ನೊಂದೆಡೆ ವೆಥಿಕ್ ಲಾರೆನ್ಸ್, ಜಿನ್ನಾ, ಲಿಯಾಖತ್‌ರೊಡನೆ ಸಂಭಾಷಿಸಿದ್ದರು. ಆ ರಾತ್ರಿ ಮಿ. ಎ. ವಿ. ಅಲೆಕ್ಸಾಂಡರರು ಜಿನ್ನಾ, ಲಿಯಾಖತರಿಗೆ ಸರಕಾರೀ ಔತಣ ಸತ್ಕಾರವಿತ್ತರು; ಇದೇ ಹೊತ್ತಿನಲ್ಲಿ ಭಾರತಕ್ಕೆ ನೊದಲೊಮ್ಮೆ ಬಂದಿದ್ದ ಪಾರ್ಲಿಮೆಂಟರಿ ನಿಷ್ಟ ಮಂಡಲದವರು ನೆಹರು, ಬಲದೇವ ಸಿಂಘರನ್ನು ಕಾಮನ್ಸ್ ಭವನದಲ್ಲಿ ಸತ್ಕರಿಸುತಿದ್ದರು. ತಾ.4ರಲ್ಲಿ ತತ್ಪ್ರತಿರೂಪೀ ಕಾರ್ಯಕ್ರಮ ನಡೆಯಿತು. ಮುಂಜಾನೆ ಜಿನ್ನಾ, ಲಿಯಾಖತರು ಪ್ರಧಾನಿ ಆಟ್ಲಿಯೊಡನೆ ಸಂಭಾಷಿಸಿದರು; ಅದೇ ಹೊತ್ತಿನಲ್ಲಿ ನೆಹರು, ಬಲದೇವ ಸಿಂಗರು ಭಾರತ ಕಾರ್ಯದರ್ಶಿ ಪೆಥಿಕ್ ಲಾರೆನ್ಸರೊಡನೆ ಸಂಭಾಷಿಸಿದ್ದರು. ಅಂದು ಸರ್. ಕ್ರಿಪ್ಸರು ನೆಹರು ಬಲದೇವ ಸಿಂಗರಿಗೆ ಸರಕಾರೀ ಔತಣ ಸತ್ಕಾರವಿಯ್ಯುವಾಗ, ಪಾರ್ಲಿಮೆಂಟರಿ ನಿಷ್ಟ ಮಂಡಲದವರು ಜಿನ್ನಾ, ಲಿಯಾಖತರನ್ನು ಕಾಮನ್ಸ್ ಭವನದಲ್ಲಿ ಸತ್ಕರಿಸಿದ್ದರು. ಕಾಂಗ್ರೆಸ್ ಮತ್ತು ಲೀಗ್ ನಾಯಕರು ಪೃತ್ಯಪ್ರತ್ಯೇಕವಾಗಿ ಬ್ರಿಟಿಷ್ ಮಂತ್ರಿ ಸಮಿತಿ ಸದಸ್ಯರಾದ ಕ್ರಿಪ್ಸ್, ಲಾರೆನ್ಸ್, ಅಲೆಕ್ಸಾಂಡರರೊಡನೆ ಕೂಟ ಚರ್ಚೆಗಳನ್ನೂ ನಡೆಸಿದರು. ಆಟ್ಲಿ, ವೇವೆಲ್ ಮತ್ತು ಮೇಲಿನ ಮೂವರು ಬ್ರಿಟಿಷ್ ಮಂತ್ರಿಗಳ ಒಟ್ಟು ಚರ್ಚಾಕೂಟವು ಪೃತ್ಯೇಕವಾಗಿ ನಡೆದು ಸಂಗತಿಯ ಪರ್ಯಾಲೋಚನೆಯಾಯಿತು. ಒಕ್ಕಿಂಗ್ಹಾಮ್ ಅರಮನೆಯಲ್ಲಿ ಹಿಂದೀ ಅತಿಥಿಗಳು ಚಕ್ರವರ್ತಿಗಳೊಂದಿಗೆ ಔತಣಕ್ಕೆ ಕೂತುಕೊಳ್ಳುವ ಕಾರ್ಯಕ್ರಮ ಬುಧವಾರಕ್ಕಿದ್ದರೂ ಅಂದು ಮೊಹರಂ ದುಃಖದಿನವಾದ್ದರಿಂದ ಆ ಸತ್ಕಾರ ಗುರುವಾರ ನಡೆಯಿತು. ಇತರ ಪಾಸಗೇ ಸತ್ಕಾರ ಕೂಟಗಳೂ ಇಕ್ಕಡೆಯವರನ್ನೂ ಕಾದಿದ್ದುವು; ಬನ್ನವತ್ತಳಿಗಳು, ಆಗ್ರಹದ ವಿಜ್ಞಾಪನಾ ಸತ್ರಗಳು, ಕಾಂಗ್ರೆಸ್, ಲೀಗ್ ಮತ್ತು ಸಿಖ್ ನಾಯಕರಿಗೆ ಬಂದಿದ್ದುವು. ನೆಹರು, ಬಲದೇವ ಸಿಂಗರು ಜೋಸೆಫ್ಸ್ಟೈರ್ ಹೋಟೆಲಿನಲ್ಲೂ, ಜಿನ್ನಾ, ಲಿಯಾಖತರು ಕ್ಲೇರಿಡ್ಜೆಸ್ ಹೋಟೆಲಿನಲ್ಲೂ ಉಳಕೊಂಡಿದ್ದರು.

ಎಲ್ಲವೂ ದ್ವಿವಳ!

ಲಂಡನ್ ಮಾತುಕತೆಗಳ ಒಂದು ವಿಶೇಷ ವೈಶಿಷ್ಟ್ಯ ವೆಂದರೆ ಕರಾಚಿಯಿಂದ ಹೊರಟ ವಿಮಾನದಲ್ಲಿ ಅನಿವಾರ್ಯವಾಗಿ ಒಟ್ಟಿಗಿದ್ದುದೊಂದನ್ನು ಬಿಟ್ಟರೆ, ಆ ಮೇಲಿ

ದೇಶಕಾಲಕ್ಕೊಪ್ಪುವ ನವೀನ ಪುಸ್ತಕ

ಸಾತಂತ್ರ್ಯವೀರ ಸಾವರಕರರು

ಹಿಂದೂ ಸಂಸ್ಕೃತಿ ಮತ್ತು ಹಿಂದೂರಾಷ್ಟ್ರಕ್ಕಾಗಿ ಸರ್ವತ್ಯಾಗ ಮಾಡಿದ ವೀರ ಸಾವರಕರರ ಉಜ್ವಲಜೀವನ ಚರಿತ್ರೆ

ಮೈಜುಮ್ಮೆನ್ನಿಸುವ ಹಲವು ಸನ್ನಿವೇಶಗಳು!

ವಿಚಾರ ಕ್ರಾಂತಿಯನ್ನುಂಟುಮಾಡುವ ಘಟನೆಗಳು!

ಪ್ರಸಿದ್ಧ ಹಿಂದೀ ಲೇಖಕ ಪಂಡಿತ ಚಂದ್ರಗುಪ್ತ ವೇದಾಲಂಕಾರ ಇವರ ಹಿಂದೀ ಗ್ರಂಥದ ಕನ್ನಡ ಅನುವಾದ.

ಕನ್ನಡಿಸಿದವರು-ಶ್ರೀಮತಿ ಇಂದಿರಾಬಾಯಿ, ಮೈಸೂರು, ಸಂಸ್ಥಾನ.

ಬೆಲೆ ಬರೀ ರೂ. 1—4—0

ರೂ. 1—8—0 ಕಳಿಸಿದರೆ 1 ಪ್ರತಿಯನ್ನು ರಿಜಿಸ್ಟರ್ ಮಾಡಿ ಕಳಿಸಲಾಗುವುದು.

ಪ್ರತಿಗಳು ಸಿಗುವ ಸ್ಥಳಗಳು:—

1. ಸ್ಕೂಲ್ ಬುಕ್ ಕಂಪೆನಿ, ಮಂಗಳೂರು. 2. ಸತ್ಯಶೋಧಕ ಪುಸ್ತಕ ಭಂಡಾರ, ಬೆಂಗಳೂರು. 3. ನವಭಾರತ ಪುಸ್ತಕ ಭಂಡಾರ, ಉಡುಪಿ. 4. ಪಾವಂಜೆ ಗುರುರಾವ್, ಉಡುಪಿ. 5. ನವಯುಗ ಆಫೀಸು, ಉಡುಪಿ.

1 ರೂಪಾಯಿಗೆ 10 ಪುಸ್ತಕಗಳು

(1) ನಾಡಕತೆಗಳು 0 3 0, (2) ಬಾಲ ಜಾಣ್ಮೆಯ 0 3 0; (3 ಚಲಚ್ಚಿತ್ರ ಸದ್ಯಾನ 0 3 0; (4) ವೀರ ಭೂಮಿ 0 2 0; (5) ಶಂಭುಕ ಸಥೆ 0-2-0 (6) ಸ್ವತಂತ್ರ ಜೀವನೋಪಾಯ 0-3-0, (7) ಮುದುಕನ ಹೆಂಡ್ತಿ ಥಕ ಥೈರಾಥೆ 0 2-0 (8) ಬಂಗಾರ್ದಂಗಿಡ ಕತೆ 0-1 0; (9) ವಿಕಾಂತ ರಾಮಾಯಣ 0-1-0; (10)ಚಲಚ್ಚಿತ್ರ ಪದ್ಯಾವಳಿ ಭಾಗ II 0-4-0; ಒಂಭತ್ತು ರೂಪಾಯಿ ಮನಿಯಾರ್ಡರು ಮಾಡಿದವರಿಗೆ ಯಾವುದಾದರೂ ಒಂದು ಪುಸ್ತಕವನ್ನು ವಿ.ಪಿ. ಮೂಲಕ ಕಳಿಸಲಾಗುವುದು.

ನವಭಾರತ ಪುಸ್ತಕ ಭಂಡಾರ, ಉಡುಪಿ.

ನೆಹರು ಬಲದೇವ ಸಿಂಘ್ಯರು ಮಾತುಕೊಟ್ಟಂತೆ ಮರಳಿಬಂದರು!

ನ ರಾಜೀತಂತ್ರ ಮತ್ತೊಂದು ದುಂಡು ಮೇಜು ವಿನಹ್ಯಾಲಂಡಸಿಗೆ ಕಾಲೂರಿದಾರಭ್ಯ ನೆಹರು, ಬಲದೇವ ಸಿಂಗ್ ಮತ್ತು ಜಿನ್ನಾ ಲಿಯಾಖತರು ಒಟ್ಟಿಗಿದ್ದ ಸಂದರ್ಭಗಳ ರಲಿಲ್ಲ. ವಿಮಾನ ಮತ್ತು ನಿಲ್ದಾಣಗಳಲ್ಲಿ ವೇವೆಲ್ ಸಮೇತ ಭಾರತೀಯ ಭಿನ್ನ ಪಕ್ಷಗಳ ಪ್ರಮುಖರಿಗೆ ಪೂರ್ತಿ ಎರಡುದಿನ ಒಟ್ಟಿಗಿರುವ ಅಪೂರ್ವ ಸಂದರ್ಭವೊದಗಿದ್ದರೂ ಅಲ್ಲಿರಾಜಕೀಯದ ಸೊಲ್ಲೇ ಎತ್ತಲ್ಪಡಲಿಲ್ಲವೆಂದು ತಿಳಿದುಬಂದಿದೆ. ಲಂಡನ್ನಿನಲ್ಲಿ ವೈಸರಾಯೀ ನೇವೆಲರ ಖಾಸಗೀ ನಿವಾಸ ಸ್ಥಾನವನ್ನು ಅತ್ಯಂತ ಗುಪ್ತವಾಗಿ ಇಡಲಾಗಿತ್ತು. ಎಲ್ಲಾ ಅತಿಥಿಗಳಿಗೂ ಪ್ರತ್ಯೇಕವಾಹನ ವ್ಯವಸ್ಥೆಯಿದ್ದರೂ. ಮಿ. ಜಿನ್ನರಿಗೆ ವಿಶೇಷ ಪ್ರಾಣಭೀತಿಯಿದ್ದುದರಿಂದ ಅವರ ಸ್ವಂತ ಸಹರೆಯೂ ವಿಶೇಷವಾಗಿತ್ತಂತೆ. ಓರ್ವ ರಾಷ್ಟ್ರೀಯ ಮುಸಲ್ಮಾನನು ತಾನು ಲಿವರ್‌ಪೂಲ್ ಲೀಗ್ ಶಾಖೆಯ ಕಾರ್ಯದರ್ಶಿಯೆಂದು ಸುಳ್ಳು ಹೇಳಿಕೊಂಡು ಜಿನ್ನರ ಖಾಸಗೀ ಭೇಟಿಗೆ ಬಂದಿದ್ದನಂತೆ. ಆ ಮೇಲೆ ಎಲ್ಲಿಂದ ಯಾವ ಆಪಾಯ ಬರುವದೋ ಎಂದು ಜಿನ್ನರು ಹೆದರಿ ದೇಹರಕ್ಷಕರ ವಜ್ರಪಂಜರದೊಳಗೆ ಮೂಗಿನಿವರಿಂ ಹವೆ ಸೇದುವದರಲ್ಲೇ ತೃಪ್ತಿ ಪಡೆದಿದ್ದರು. ಅವರ ಭೇಟಿಗೆ ಹೋದ ಪತ್ರಿಕಾ ಪ್ರತಿನಿಧಿಗಳನ್ನು ಕೂಡಾ ಸೆಕ್ಯೂಟ್ಲಂಡ್ ಯಾರ್ಡಿನ ಗುಪ್ತ ಸಹರೆಗಾರ ಹೆದರಿಸಿ ಕಳುಹಿಸಿದ್ದ ಈ ನಡುವೆ ನವಾಖಾಲಿಗೆ ಗಾಂಧಿ ಭೇಟಿಗಾಗಿ ಸ್ಪೆಶ್ಯಲ್ ಬ್ರಿಟಿಷ್ ರಾಯಭಾರಿಯೊಬ್ಬನು ಒಂದಿದ್ದು ಗಾಂಧೀ ಅಭಿಪ್ರಾಯ ಹೊತ್ತುಕೊಂಡು ಲಂಡನಿಗೆ ಹಾರಿದ್ದನೆಂಬ ವಾರ್ತೆ ಹರಡಿದ್ದರೂ ಅದಕ್ಕೆ ಕಲ್ಪನೆಯ ಹೊರತು ಬೇರೆ ಆಧಾರ ಕಾಣುವದಿಲ್ಲ. ನೆಹರು ಮತು ವಲ್ಲಭಾಯಿಗಳ ನಡುವೆ ಟೆಲಿಫೋನ್ ಸಂಬಂಧವಿದ್ದು ದೊಂದು ನಿಜ. ಲಂಡನಿನ ತಂಪು ಹವಯ ಕೆಲಸವೇನೋ ಎಂಬಂತೆ ಅಲ್ಲಿಯ ಹೊಟೆಲಿನಲ್ಲಿದ್ದ ಮಿ ಜಿನ್ನರ ಬಾಯಿಯಿಂದ ತುಸು ಮಧುರವಾಣಿಗಳು ಸೂಸಿದ್ದುವು. "ಶಾಂತರಾಗಿರಿ, ನನ್ನ ಸಲಹೆಯಂತೆ ವರ್ತಿಸಿರಿ; ಎಲ್ಲಿ ಹಿಂದುಗಳು ಮತ್ತು ಇತರ ಸಾಮಾಜಿಕರು ಅಲ್ಪಸಂಖ್ಯಾಕರಾಗಿರುವರೋ ಆ ಪ್ರಾಂತ್ಯ ಮತ್ತು ಸ್ಥಳಗಳಲ್ಲೆಲ್ಲಾ ಅವರನ್ನು ರಕ್ಷಿಸಿರಿ, ಎಂಬುದೇ ಮುಸಲ್ಮಾನರಿಗೆ ನನ್ನ ಉಪದೇಶ" ಎಂದು ಜಿನ್ನರಂದರು. ಪಂಡಿತ ನೆಹರುಗಳು ಎಂದಿನಂತೆ ಹಿಂಸಾತ್ಮಕ ಕೃತ್ಯಗಳನ್ನು ಕಟುವಾಣಿಯಿಂದ ಖಂಡಿಸಿ "ಮೂರನೆಯವರ ಕೈವಾಡವಿಲ್ಲದೆ ನಮ್ಮೊಳಗಿನ ವಿವಾದಗಳನ್ನು ಭಾರತದಲ್ಲಿ ನಾವು ನಮ್ಮೊಳಗೆ ತೀರ್ಮಾನಿಸಿಕೊಳ್ಳುವಂತಾದಲ್ಲಿ ಮಾತ್ರ ಒಂದು ವ್ಯವಸ್ಥೆಯಾಗುವದು" ಅಂದಿದ್ದಾರೆ. ಲಂಡನಿನ ಸುಪ್ರಸಿದ್ಧ ಶಿಲ್ಪಿ ಎಪ್ಸ್ಟೀನರು, ಸಂದರ್ಭ ಸಾಧಿಸಿ ಪಂಡಿತ ನೆಹರುಗಳನ್ನು ಮೂರು ಬಾರಿ ಕುಳ್ಳಿರಿಸಿ ಅವರ ಮೇಲರ್ಧ ದೇಹದ ಶಿಲಾಪ್ರತಿಮೆ ನಿರ್ಮಿಸಿದ್ದಾರೆ. ಲಂಡನಿಗರ ಹಾರತುರಾಯಿ ಅಥವಾ ಕಲ್ಲು ಇಟ್ಟಿಗೆಗಳ ಸಂಭಾವನೆ ಪಡೆಯಲು ನೆಹರೂ ಬಿಂಬವೊಂದು ಅಲ್ಲಿ ಉಳಿಯಲಿದೆ!

ಬಹಿರಂಗ ಭಾಷಣ

ತಾ. 4ನೇ ರಾತ್ರಿ ಲಂಡನಿನ ಭಾರತ ಸಂಘದವರು ನೆಹರೂ ಬಲದೇವ ಸಿಂಘರ ಸಲಹೆ ಕೇಳಲು ಕಿಂಗ್ಸ್ಲೆ ಭವನದಲ್ಲಿ ಸೇರಿಸಿದ ಸಾರ್ವಜನಿಕ ಸಭೆಯು ಹೃದಯಸ್ಪರ್ಶಿಯಿದ್ದಿತು. ಕೂಲಿನಾರ ಎಂ. ಪಿ. ಗಳಾದ ಮಿ. ಸೋರೆನ್ಸೆನರು ಅಧ್ಯಕ್ಷತೆ ವಹಿಸಿದ್ದರು. ಲಂಡನಿನ ನೆಹರೂ ಮಿತ್ರರೆಲ್ಲಾ ತಾವು ಕಳಕೊಂಡಿದ್ದ ಅತಿ ಪ್ರೀತಿಯ ವಸ್ತುವನ್ನು ಎಂಟು ವರುಷಗಳ ನಂತರ ಪುನಃ ದೊರಕಿಸಿಕೊಂಡೆವೆಂಬಮ್ಮ ಆನಂದ ಭರಿತರಾಗಿದ್ದರು. ಸಭಾರಂಭದ ನೊದಲು ನೆಹರುಗಳು ಬಲದೇವ ಸಿಂಗರೊಂದಿಗೆ ಮೈತ್ರೀ ಸಂಭಾಷಣೆಗಾಗಿ ಪ್ರೇತ್ಯಕ ಮಿತ್ರರೊಡನೆ ಮಾತಾಡುತ್ತಾ ಬಂದಾಗ ಹಿಂದೂ, ಮುಸ್ಲಿಂ, ಸಿಖ್ಖರೆಂಬ ಭೇದವಿಲ್ಲದೆ ಅವರನ್ನಪ್ಪಿಕೊಂಡು ಆನಂದಭಾಷ್ಪಗಳನ್ನುದುರಿಸಿದವರು ಹಲವರು. ಕೆಲವೇ ಮಿನಿಟುದರೂ ತಮ್ಮ ವಿಶ್ವವಿದ್ಯಾಲಯಕ್ಕೆ ಭೇಟಿಕೊಡಬೇಕೆಂದು ಅಲ್ಲಿದ್ದ ಎಲ್ಲಾ ಯುನಿವರ್ಸಿಟಿ ವಿದ್ಯಾರ್ಥಿಗಳೂ ವಿಜ್ಞಾಪಿಸಿಕೊಂಡಿದ್ದರು. "ನಿಮಗೆ ಬಂದೋಬಸ್ತಿಲ್ಲದಿರುತ್ತಿದ್ದರೆ ನಿಮ್ಮನ್ನು ಗಂಟು ಮೂಟೆಕಟ್ಟಿ ಹೊತ್ತುಕೊಂಡೊಯ್ಯುತ್ತಿ[illegible]ನೆಯವರಂದರು. 'ನಮಗೆ ಅಖಂಡ ಹಿಂದುಸ್ಥಾನವೇಕು'. 'ಸಂಯುಕ್ತ ಭಾರತದ ಸಂಪೂರ್ಣ ಸ್ವಾತಂತ್ರ್ಯವೇಕು' ಎಂದು ಸಿಖ್ಖರು ಪ್ರಚಂಡ ಜಯ ಘೋಷವೆಬ್ಬಿಸಿದ್ದರು. ನೆಹರು, ಸಿಂಘರಿಗೆ ಬೇರೆ ಬೇರೆಯವರ ಹಾರತುರಾಯಿಗಳೂ, ನೆಹರುಗಳಿಗೊಂದು ಸೈಲಿಯೂ ಸಮರ್ಪಿಸಲ್ಪಟ್ಟುವು. ಪಂಡಿತ ನೆಹರುಗಳು ಭಾರತದ ಸ್ವಾತಂತ್ರ್ಯ ನಾಥನೆಯ ಕುರಿತಿತ್ತ ಉಜ್ವಲ ಹಾಗೂ ಭಾವಪ್ರಚೋದಿತ ಭಾಷಣವು ಸರ್ವರ ಮೆಚ್ಚುಗೆ ಪಡೆಯಿತು. ಹೊಟೆಲಿನಲ್ಲಿದ್ದಾಗ ಸಂದರ್ಶಕರ ಪೀಡೆಯಿಂದ ನೆಹರುಗಳಿಗೆ ರಾತ್ರಿ ಕೂಡಾ ವಿಶ್ರಾಂತಿಯುರಲಿಲ್ಲ. ಲಂಡನ್ ಮುಸ್ಲಿಮರು ಇದೇ ರೀತಿ ಜಿನ್ನರನ್ನೂ ಸುತ್ತುಗಟ್ಟಿದ್ದರು.

ಸಮ್ಮೇಲನ ಮತ್ತು ನಿರ್ಗಮನ

ಖಾಸಗೀ ಹಾಗೂ ಸ್ವತ್ಯ ಸ್ವತ್ಯೇಕ ಸಂಭಾಷಣಗಳೆಲ್ಲಾ ಮುಗಿದ ಮೇಲೆ ಎಲ್ಲಾ ಹಿಂದೀ ನಾಯಕರನ್ನೂ ಬ್ರಿಟಿಷ್ ಪ್ರತಿನಿಧಿಗಳನ್ನೂ ಒಂದು ದುಂಡು ಮೇಜು ಸಮ್ಮೇಲನದಲ್ಲಿ ಒಂದುಗೂಡಿಸುವ ಉತ್ಯಟೇಚ್ಛೆ ಪ್ರಧಾನಿ ಆಟ್ಲಿಯವರದಾಗಿತ್ತು. ಅದಂದು ಕೈಗೂಡುವದು ಅತಿ ಪ್ರಯಾಸವಾಯಿತು. ನೆಹರುಗಳು ತಾನು ಆದಿಯಲ್ಲೇ ಬರೆದು ತಿಳಿಸಿದ್ದಂತೆ ತಾ 9ರೊಳಗೆ ಢಿಲ್ಲಿಯಲ್ಲಿರಲು ತವಕ ಪಡುತ್ತಿದ್ದರು; ಕಾಂಗ್ರೆಸಿನ ಪಾಲಿಗೆ ಚರ್ಚಾಂಶವಾವುದೂ ಇಲ್ಲವೆಂಬುದರಿಂದಲೂ ಅವಸರದ ಸಮ್ಮೇಲನದ ನಾಟಕ ಬೇಡವೆಂದೂ ಅವರು ಹಿಂದೆಗೆದಿದ್ದರು. ಮಿ. ಜಿನ್ನರಪಾಲಿಗೆ ಹೊಸಪರಿಸ್ಥಿತಿಗನುಸಾರವಾಗಿ ಎಲ್ಲವನ್ನೂ ಆದಿಯಿಂದ ಪುನರಾಲೋಚಿಸುವದೇ ಬೇಕಾಗಿತ್ತು. ಅದು ಅಸಾಧ್ಯವೆಂಬುದನ್ನು ಪ್ರಥಮ ಸಂಭಾಷಣೆಯಲ್ಲೇ ಪ್ರಧಾನಿ ಆಟ್ಲಿ ಹೇಳಿದ್ದರಿಂದ, ಪ್ರಥಮ ಭೇಟಿ ಮುಗಿಸಿ ಬಂದಾಗ ನೆಹರುಗಳ ವದನವರಳಿತ್ತು, ಜಿನ್ನಾ ಲಿಯಾಖತರ ಮುಖಗಳು ಬಾಡಿದ್ದುವು. ಆದರೂ ತಾ 6ನೇ ರಾತ್ರಿ ಪ್ರಧಾನೀ ಭವನದಲ್ಲಿ ಸರ್ವರ ಹಾಜರಿಯ ದುಂಡುಮೇಜು ಸಮ್ಮೇಲನವೊಂದು ನಡೆಯಿತು. ಉತ್ತರ, ದಕ್ಷಿಣಾಭಿಮುಖವಾಗಿರುವ ಕಾಂಗ್ರೆಸ್-ಲೀಗ್ ಭಾವನಾ ಸ್ರವಾಹಗಳ ಸಂಗಮಕ್ಕಾಗಿ ಲಂಡನಿನಲ್ಲಿ ನಡೆದ ಕೊನೆಯ ಪ್ರಯತ್ನವಿದು. ಅದು ಕ್ಷೀಪ್ರವಕಾಶದಲ್ಲೇ ಅಪಜಯಗೊಂಡು ಚದರಿತು. ಅಮೇಲೆ ಪೂರ್ವ ನಿಶ್ಚಯದಂತೆ ತಾ. 7ನೇ ಅಪರಾಹ್ನ 1-57ಕ್ಕೆ ನೆಹರು ಮತ್ತು ಬಲದೇವ ಸಿಂಘರು ಲಂಡನ್ ನಿಲ್ದಾಣದಲ್ಲಿ ವಿಮಾನವೇರಿದರು. ವೈಸರಾಯರ ಕಾರ್ಯದರ್ಶಿ, ಮಂತ್ರಿ ಅಲೆಕ್ಸಾಂಡರ್, ಭಾರತದ ಉಪಕಾರ್ಯದರ್ಶಿ ಆರ್ಥರ್ ಹೆಂಡರ್ಸನ್, ಭಾರತದ ಹೈಕಮಿಶನರ್ ರಂಗನಾಥನ್ ಮತ್ತಿತರ ಹಲವು ಮಂದಿ ಹಿಂದೀ ಧುರೀಣಪ್ರೇಯರನ್ನು ಬೀಳ್ಕೊಳ್ಳಲು ನಿಲ್ದಾಣಕ್ಕೆ ಬಂದಿದ್ದರು. ಬೀಡಿಕೆ ಬಂದರೂ ವಿದಾಯ ಸಂದೇಶ ಕೊಡಲು ನೆಹರುಗಳು ನಿರಾಕರಿಸಿದರು. ನೂರಕ್ಕೂ ಮಿಕ್ಕಿದ ಪೋಲೀಸ್ ಮುಂಜಾಗ್ರತೆಯೆಲ್ಲಿ, ಚಲಚ್ಚಿತ್ರಗಳ ಮತ್ತು ಪತ್ರಿಕೆಗಳ ಕೆಮರಾಗಳು ಸ್ತುತಿಭಾಯೆಯೆತ್ತುತ್ತಿದ್ದಂತೆ ನೆಹರು, ಬಲದೇವ ಸಿಂಗರು ತಮ್ಮ ಕಾಯದರ್ಶಿಗಳೊಂದಿಗೆ ಲಂಕೇಸ್ಟರ್ ವಿಮಾನವೇರಿದರು. ಈ ಯಾನವು ಮಧ್ಯ ಎಲ್ಲಿಯೂ ನಿಲ್ಲದೆ, ಮೂಗನ್ನು ಕೆಳಗೆಮಾಡುವ ಹವ್ಯಾಸವನ್ನೇ ಬಿಟ್ಟು ನೇರಾಗಿ ಹಾರಿ ಬಂದು ಆದಿತ್ಯವಾರ ಅಪರಾಹ್ನ ಢಿಲ್ಲಿಯಲ್ಲಿಳಿಯಿತು. ಸಾಮಾನ್ಯ ಆಕಾಶ ವೇಗದ ಒಂದು ದಾಖಲೆಯನ್ನೇ ನಿರ್ಮಿಸಿ ನಿರೀಕ್ಷಿಗಿಂತ 2 ಘಂಟೆ ಮೊದಲೇ ಗುರಿ ಸೇರಿತು. ವೇವೆಲ್, ಜಿನ್ನಾ ಲಿಯಾಖತರು ಕೆಲವುದಿನ ಲಂಡನ್ ಬಿಡುವದಿಲ್ಲ

ವಿವಿಧ ಪಾತ್ರೆಗಳು



ಯಾತ್ರೆಯಲ್ಲೂ ವಿಧವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾನ್ಯಿಗಳೂ ರಿಯಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಕಂಜಿ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

ಶ್ರೀ. ಕಾರಂತರ
ಪುಸ್ತಕಗಳು

ಗೀತಾ ನಾಟಕಗಳು	2 4 0
ಮರಳಿ ಮಣ್ಣಿಗೆ	4 8 0
ಸಿರಿಗನ್ನಡ ಅರ್ಥಕೋಶ	4 0 0
ಸೂರ್ಯ ಚಂದ್ರ	0 4 0
ಮೈಲಿಕಲ್ಲಿನೊಡನೆ ಮಾತು	
ಕತೆಗಳು	1 4 0
ಹಳ್ಳಿಯ ಹತ್ತು ಸಮಸ್ಯರು	1 4 0

ನವಭಾರತ ಪುಸ್ತಕ ಭಂಡಾರ,
ಉಡುಪಿ.

ಶಾಲೋಪಯೋಗಿ ಸಾಹಿತ್ಯಗಳು

ಡ್ರಾಯಿಂಗ್ ಮತ್ತು ಮೇಪ್ ಡ್ರಾಯಿಂಗ್ ಪುಸ್ತಕಗಳು, ಟೀಚಿಂಗ್ ಪುಸ್ತಕಗಳು, ಹಾಜರಿ ರಿಜಿಸ್ಟ್ರಿಗಳು, ಮಂಥ್ಲಿ ರಿಟರ್ನ್ ಫಾರ್ಮುಗಳು, ಬ್ಲಾಕ್ ಬೋರ್ಡ್ ಶೀಟ್‌ಗಳು, ಮಗ್ಗಿ ಪುಸ್ತಕಗಳು ಚಿಲ್ಲರೆಯಾಗಿಯೂ ರಿಯಂ ಆಗಿಯೂ ದೊರೆಯುತ್ತವೆ ವಿದ್ಯಾರ್ಥಿಗಳಿಗೂ ಉಪಾಧ್ಯಾಯರಿಗೂ ಸುಸಂದರ್ಭ!

ನವಯುಗ ಪ್ರೆಸ್,
ಉಡುಪಿ.

ನವಯುಗವಲ್ಲೇ
ನಿಮ್ಮ ಜಾಹೀರಾತುಗಳನ್ನು
ಕೊಟ್ಟು ಪ್ರೋತ್ಸಾಹಿಸಿರಿ.

ESTD 1926
CROWN RUBBER STAMP CO.
MFRS OF
RUBBER STAMPS & ENGRAVERS
BALMATTA ROAD MANGALORE S.K.

Approved firm by the Govt.of Mysore
Certified by the Agent of the Govt. of Cylone & India.

AMBOL OINTMENT (Read)
This is a sovereign remedy for itches, boils scabied cuts, burns, pimples and all other skin ailments

AZAD TOOTH POWDER
A powder that cures tooth ache, bleeding, gum trouble and stops foul smell etc.

AGENTS WANTED.
PRODUCTS OF
THE AMBOL OINTMENT MFG. CO.
MADURA.

The Canara Banking Corporation Limited.

(Incorporated in British India, with limited Liability.)

Estd· 1906·

Head Office: **UDIPI,** South Kanara.

Authorised Capital	...	Rs. 25,00,000
Issued & Subscribed	...	,, 16,00,000
Paid up	...	,, 15,87,600
Reserves	...	,, 4,60,000
Total Resources Around		,, 2½ Crores.

Branches at- Bombay, Madras, Bangalore, Coimbatore, Salem, Calicut, Hubli, Mysore, Cochin, Mangalore, Madras etc., etc.

Banking Business of Every Description Transacted.

ನವಯುಗ

ಉಡುಪಿ, ಗುರುವಾರ, ೧೨-೧೨-'೬೯

ಸ್ವಪರ ವಂಚನೆ

'ಲೀಗ್ ರಾಜರ ಪಕ್ಷವಾಗಿ ನಿಂತು ಸ ಮ್ಮನ್ನು ಆಟಕಾಯಿಸುತ್ತಿದೆ' 'ಲೀಗಿಗೆ, ಬ್ರಿಟಿಷ್ ಸರಕಾರದ ಬೆಂಬಲವಿದೆಯೆಂಬು ದೂ ನಾವು ಈ ದ್ವಿಮುಖೀ ಕಂಟಕವನ್ನು ಇದಿರಿಸಬೇಕಾಗಿದೆಯೆಂಬುದೂ ನೆನಪಿರಲಿ' ಎಂದು ಮೀರತ್ ಕಾಂಗ್ರೆಸ್ ಅಧಿವೇಶನ ದಲ್ಲಿ ನೆಹರು, ಪರೇಲರಾಡಿದ್ದ ಎರಡು ವಾಕ್ಯಗಳು ವಾರ ಕಳೆಯುವಷ್ಟರಲ್ಲಿ ಲಂ ಡನ್ನಿನಿಂದಲೇ ಪ್ರತಿಧ್ವನಿಸಿವೆ. ಬ್ರಿಟಿಷ್ ಸ ರಕಾರವು ಇದೇ ತಾ. ೬ರಲ್ಲಿತ್ತ ಹೇಳಿಕೆ ಯು ಅನಿರೀಕ್ಷಿತವಲ್ಲ; ಕಾಂಗ್ರೆಸಿಗರನ್ನು ದು ದಂಗು ಬಡಿಸಿಲ್ಲ. ಬದಲಿಗೆ ಬ್ರಿಟಿಷರ ಬಣ್ಣವು ಈ ರೀತಿ ಸ್ಪಷ್ಟವಾಗಿ ಬಯಲಾ ದುದು ನಿಜಕ್ಕೂ ಹಿತಕರ. ಒಂದೇ ಮಾತಿ ನಲ್ಲಿ ಹೇಳುವದಾದರೆ ಈ ದಿನ (ನಾಳೆ ಮಿ. ಜಿನ್ನರಿಗೇನು ಬೇಕಾಗಬಹುದೆಂಬು ದನ್ನು ಹೇಳಲು ರಾಷ್ಟ್ರಪತಿ ಕೃಪಲಾನಿ ಯಂತಹ ದೇವರಿಗೂ ತಿಳಿದಿರದು; ಜಿನ್ನ ರಿಗೂ ಗೊತ್ತಿರದು!) ಮಿ. ಜಿನ್ನರಿಗೆ ಬೇ ಕಾದುದೆಲ್ಲಾ ಬ್ರಿಟಿಷ್ ಸರಕಾರದಿಂದ ದೊರೆತಿದೆ. ಪ್ರಾಂತಿಕ ಸಂಗಡಗಳಲ್ಲಿ ಪ್ರ ತಿಯೊಂದು ಪ್ರಾಂತ್ಯವೂ ಕಡ್ಡಾಯವಾಗಿ ಸೇರುವದು ಜಿನ್ನರಿಗೆ ಬೇಕಾಗಿತ್ತು--ಅ ದೀಗ ಬ್ರಿಟಿಷ್ ಸರಕಾರದಿಂದ ದೊರೆತಿದೆ; ತಮ್ಮ ಒಪ್ಪಿಗೆ ವಿನಹಾ ಯಾವ ರಾಜ್ಯ ಘಟನೆಯೂ ಜಾರಿಗೆ ಬರಕೂಡದೆಂಬು ದು ಜಿನ್ನರಿಗೆ ಬೇಕಾಗಿತ್ತು-- ಆ ಭರವಸೆ ಯೂ ಬ್ರಿಟಿಷ್ ಸರಕಾರದಿಂದ ದೊರೆತಿ ದೆ. ತನ್ನ ಹೇಯಮಹತ್ವಾಕಾಂಕ್ಷೆಯ ವೃ ಷ್ಟಿಯೊಂದನ್ನು ಭಾರತದಲ್ಲಿ ಜಾರಿಗೆ ಮಾಡದೆ ಬ್ರಿಟಿಷರಿಲ್ಲಿಂದ ಕಾಲ್ತೆಗೆಯುತ ಕೃದ್ದಲ್ಲನೆಂಬುದೇ ಮಿ. ಜಿನ್ನರ ಬಯಕೆ-- ಇದನ್ನೆಂತೂ ಕೃತಜ್ಞತಪೂರ್ವಕವಾಗಿ ಬ್ರಿಟಿಷರು ಈಡೇರಿಸಿ ಕೊಡುವದೇ ಸರಿ!

ಹೀಗೆ ಒಂದೆಡೆಯಲ್ಲಿ ಜಿನ್ನರಾ ಬೇಡು ತ್ತಾ ಹೋದಂತೆ ಬ್ರಿಟಿಷರವನ್ನು ನೀಡು ತ್ತಾ ಬರುವ ನಾಟಕ ನಡೆದೇ ಇರಬಹು ದು--ಆದರೆ ಇನ್ನೊಂದೆಡೆಯಲ್ಲಿ ಕಾಂಗ್ರೆ ಸ್ ತನ್ನ ಧೋರಣೆಗನುಸಾರವಾಗಿ ಸ್ವತಂ ತ್ರ ರಾಜ್ಯಾಂಗರಚನೆಯನ್ನು ಮಾಡುತ್ತಾ ಹೋಗುವದು; ಹೊರತು ಈ ನಾಟಕವನ್ನು ನೋಡುತ್ತಾ ನಿಲ್ಲದು!

ಆದ್ದರಿಂದ ಈಗ ಕೇಳಿ ಬರುತ್ತಿರುವ ಆಕ್ಷೇ-ಪಣಾತೆಗಳಿಗೆ ಅವಕಾಶವೇ ಇಲ್ಲ. ಸ ದ್ಯ ಎಲ್ಲರ ಮೇಲಿರುವದು ಕಾರ್ಯ ಭಾರ ವೊಂದೇ. ಭಾರತ ರಾಜಕೀಯಕಾಶದಲ್ಲಿ ಧೂಮಕೇತುವೊಂದು ಅಕಸ್ಮಾತ್ ಮೂಡಿ ತೆಂಬಂತೆ ದಿಗಿಲುಗೊಳ್ಳುವ ಹೊಸತನವಾ ವುದೂ ಅದರಲ್ಲಿಲ್ಲ. ಪ್ರಾಂತಿಕ ಸಂಗಡಗಳ ಕುರಿತು ಭಿನ್ನಾಭಿಪ್ರಾಯಗಳು ಆದಿಯಿಂ ದಲೂ ಇದ್ದುವು, ಈ ಮಟ್ಟಿಗೆ ಬ್ರಿಟಿಷ್ ಸರಕಾರದ ಅರ್ಥವೂ ಮುಸ್ಲಿಂ ಲೀಗಿನ ಅ ರ್ಥವೂ ಒಂದೇ ಎಂಬುದೂ ಖಚಿತವಾಗಿ ತ್ತು. ಲೀಗನ್ನೆತ್ತಿ ಹಿಡಿದು ತಮ್ಮ ಕಾರ್ಯ ಸಾಧಿಸಿಕೊಳ್ಳುವದೇ ಬ್ರಿಟಿಷ್ ಬಯಕೆ ಯೆಂಬುದಂತೂ ಮಕ್ಕಳಿಗೂ ಮಂದಟ್ಟಾ ಗಿರುವ ವಿಷಯ-ಅಂದ ಮೇಲೆ ಆ ಹುಟ್ಟು ಗುಣಕ್ಕನುಸಾರವಾಗಿ, 'ಜನತೆಯ ಯಾವು ದಾದರೊಂದು ಮುಖ್ಯ ಭಾಗವು ಒಪ್ಪದ ಯೋಜನೆಯೊಂದನ್ನು ಅಂಗೀಕರಿಸಲು ನಾವು ತಯಾರಿಲ್ಲ'ವೆಂಬ ಬ್ರಿಟಿಷ್ ಸರ ಕಾರದ ಬುದ್ಧಿವಂತಿಕೆಯೂ ಹೊಸತಲ್ಲ. ಆದರೂ ಈ ಸಂದರ್ಭದಲ್ಲಿ ಕೌತುಕ ಯಾ ನೆ ನಿರಾಶೆಗೊಂಡವರಿರಬಹುದು; ಇದಕ್ಕೆ ಭಾರತೀಯರ ಋಜು ಸ್ವಭಾವವೇ ಕಾರಣ. 'ಅಲ್ಪ ಸಂಖ್ಯಾಕರು ರಾಷ್ಟ್ರದ ಪ್ರಗತಿಗೆ ಆತಂಕವಾಗಲು ಬಿಡುವಂ ತಿಲ್ಲ' ಎಂಬ ಅಟ್ಲೀ ವಾಗ್ದಾನವನ್ನು ನಂಬಲಾಗಿತ್ತು; ವಚನ ಭಂಗಮಾಡಿ ರಾಜಕೀಯ ವಂಚಕನನ್ನಿಸಿದ ಜಿನ್ನರಿ ಗಾವ ಪ್ರಾಯ-ಶ್ಚಿತ್ತವಿದೆ ಎಂಬ ಪ್ರಶ್ನೆ ಯನ್ನುತ್ತರಿಸಲು ಬ್ರಿಟಿಷರು ಬದ್ಧರಿದ್ದಾ ರೆ ಎಂಬ ಭರವಸೆಯಿತ್ತು; ಬ್ರಿಟಿಷ್ ಸರಕಾರವು ಸ್ವಾರ್ಥಕ್ಕಿಂತ ಹೆಚ್ಚಾಗಿ ನ್ಯಾ ಯವನ್ನಾಧರಿಸುತ್ತದೆ ಎಂಬ ತಪ್ಪಭಿಪ್ರಾ ಯದಿಂದ ಹುಟ್ಟಿದ್ದ ಭರವಸೆಗಳಿವು. ಈ ಆಸೆಯೊಂದಿಗೆ ಬ್ರಿಟಿಷರ ಒಣ್ಣಾಟ ಬಯ ಲಿಗೆ ಬಿದ್ದಿದೆ; ಭರವಸೆ ಸುಳ್ಳಾದಂತೆ ಬ್ರಿ ಟಿಷ್ ನೀತಿಯೂ ಟೊಳ್ಳೆಂಬುದು ಮ ತ್ತೊಮ್ಮೆ ಖಚಿತವಾಗಿದೆ. ಆದ್ದರಿಂದ ಎ ಲ್ಲವೂ ಪೂರ್ವವಾಯಿತು ಎಂದು ಹಂಬಲಿ ಸುವ ಬದಲಿಗೆ, ಸಂಗತಿ ಸ್ಪಷ್ಟವಾಯಿತು, ಕಾರ್ಯರಂಗ ಶುದ್ಧವಾಯಿತು ಎಂದು ಹ ರ್ಷಿಸುವದೇ ವಾಸಿ.

ಜತೆಯಲ್ಲಿ ಲಂಡನ್ ನಾಟಕಕ್ಕಾಗಿ ವಿ ನೋದ ಪಡದಿಂಬಲಾಗುವದಿಲ್ಲ. ಮೊದಲೇ ಗೊತ್ತಿದ್ದುದನ್ನೇ ಗೊತ್ತುಪಡಿಸುವದಕ್ಕಾ ಗಿ--ಎಲ್ಲವನ್ನೂ ಮೊದಲಿದ್ದ ಸ್ಥಾನದಲ್ಲೇ ಇರಿಸಿದ್ದೇವೆಂದು ಹೇಳುವದಕ್ಕಾಗಿ ಲಂಡ-- ನಿಗೆ ಕರೆಯಿಸುವ ಪ್ರಯಾಸ,ವೆಚ್ಚಗಳನ್ನು ಬ್ರಿಟಿಷ್ ಸರಕಾರವೇಕೆ ವಹಿಸಿತೋ ಅರ್ಥ ವಾಗುವದಿಲ್ಲ. ಎರಡನೆಯದಾದ, ಮತ್ತು ವಿಶೇಷ ವಿನೋದಕರವಾದ ಸಂಗತಿಯೆಂ ದರೆ ಘಟನಾಸಮಿತಿ ; ಯೋಜನೆಯ ಕೆಲವು ಕಲಮುಗಳಿಗೆ ಕೊಟ್ಟ ಅರ್ಥ ವಿವ ರಣೆಯೇ ಅರ್ಥವಾಗದಿರುವುದು. ಎ. ಬಿ ಸಿ ಎಂಬ ಮೂರು ಪ್ರಾಂತಿಕ ಗುಂಪುಗಳ ಪೈಕಿ ಸಂಪೂರ್ಣ ಹಿಂದೂ ಬಹುಮತವು ಳ್ಳ 'ಎ' ಪಂಗಡದೊಳಕ್ಕೂಏನಾದರೊಂದು ನೆಪ್ಪೆಯಿನ್ನು ತುರುಕಿಸಲು ಇದುವರೆಗೆ ಜಿ ನ್ನೆರಿಂಪಾಗಿಲ್ಲ; ಆದ್ದರಿಂದದನ್ನು ಮುಸ್ಲಿಂ ಲೀಗಿನ ಅಸ್ಪರ್ಶ ಕೂಟವೆಂದು ಗಣಿಸಿ ಪ್ರತ್ಯೇಕಿಸೋಣ. ಉಳಿದ 'ಬಿ' ಪಂಗಡದ ಲ್ಲಿ ಸಿಂಧ್, ಪಂಜಾಬ್, ಗಡಿನಾಡು, ಬ ಲೂಚಿಸ್ಥಾನಗಳೂ 'ಸಿ' ಗುಂಪಿನಲ್ಲಿ ಬಂಗಾ ಳ ಅಸ್ಸಾಮುಗಳೂ ಸೇರುತ್ತವೆ. ಮೊದಲ ನೆಯದರ ಗಡಿನಾಡೂ, ಎರಡನೆಯದರ ಅ ಸ್ಸಾಮೂ ಆಯಾಯಾ ಗುಂಪಿನಲ್ಲಿ ಸೇರ ಲು ಸಂಪೂರ್ಣ ಅಸಮ್ಮತಿ ಸೂಚಿಸಿವೆ. ಆ ದರೂ ಲೀಗ್-ಬ್ರಿಟಿಷ್ ಅರ್ಧ ಅಥವಾ ಆ ಜ್ಞೆಯಂತೆ ಅವು ಆಯಾಯಾ ಪಂಗಡಗ ಳೊಳಗೆ ಸೇರಲೇ ಬೇಕು.ಅಸ್ಸಾಮ್ ಮತ್ತು ಬಂಗಾಳಗಳು ಯಾವ ವಿಧಾನದಲ್ಲಿಯೂ ಒಂದೇ ನೆಲೆಯಲ್ಲಿ ನಿಲ್ಲುತಕ್ಕ ಪ್ರಾಂತ್ಯಗಳ ಲ್ಲ. ಅಸ್ಸಾಮಿನಲ್ಲಿ ಸಂಪೂರ್ಣವಾಗಿ ಹಿಂದೂ ಬಹುಮತವಿದ್ದು ಆದು ಕಾಂಗ್ರೆಸ್ ಪ್ರಾಂ ತ್ಯವಾಗಿದೆ; ಬಂಗಾಳದಲ್ಲಿ ಮುಸ್ಲಿಂ ಬ ಹು ಸಂಖ್ಯೆಯಿದ್ದು ಆದು ಲೀಗ್ ಪ್ರಾಂ ತ್ಯವಾಗಿದೆ. ಇವೆರಡೂ 'ಸಿ' ಗುಂಪು ಎಂಬ ನೊಗಕ್ಕೆ ಬಿಗಿಯಲ್ಪಟ್ಟಾಗ ಎರಡುದಿಕ್ಕಿಗೆ ಳೆಯುತ್ತವೆ. ಆದರೆ ಆಗ ಅದು ಲೀಗ್ ಬ್ರಿ ಟಿಷ್ ಆಜ್ಞೆಯಂತೆ ಜತೆಕೋಣವಾ ಗುತ್ತದೆ 'ಸಿ' ಗುಂಪು ಆಗುತ್ತದೆ ಹೊ ರತು ಬಂಗಾಳ ಮತ್ತು ಅಸ್ಸಾಮ್ ಎಂಬ ಪ್ರತ್ಯೇಕ ಪ್ರಾಂತ್ಯಗಳಾಗಿ ಉಳಿ ಯುವದಿಲ್ಲ; ಈ ಕಹಿ-ಸಿಹಿ-ಬಿಸಿ-ಥಂಡಾ ಗಳು 'ಸಿ' ಗುಂಪೆಂಬ ಒಂದೇ ತುತ್ತಾ ಗುತ್ತವೆ. ಈ ಏಕ ರೂಪದಲ್ಲಿ ಬಂಗಾಳದ ಮುಸ್ಲಿಂ ಲೀಗಿನ-ಬಹುಮತವಾಗುತ್ತದೆ. ಆ ಬಹು ಮತಾನುಸಾರವಾಗಿಯೇ ಗುಂಪಿ ನೊಳಗಿನ ಪ್ರಾಂತ್ಯಗಳ ಪ್ರಾಂತಿಕ ರಾಜ್ಯ ಧಾರ ರಚನೆಯಾದಲ್ಲಿ ಬಂಗಾಳದ ಲೀಗ್ ಮುಸಲ್ಮಾನರ ಕೈಗೆ, ಅಸ್ಸಾಮಿನ ಕಾಂ ಗ್ರೆಸ್ ಹಿಂದುಗಳ ಆದೃಷ್ಟ ಗೆರೆಯೆಳೆಯು ವ ಅಧಿಕಾರ ಕೊಟ್ಟಂತಾಯಿತು. "ಸಮ್ಮ ತಿಯಿಲ್ಲದ ರಾಷ್ಟ್ರದ ಭಾಗಗಳ ಮೇಲೆ ಒಂದು ರಾಜ್ಯಾಂಗ ವಿಧಾನವನ್ನು ಒತ್ತಾ ಯದಿಂದ ಹೇರಲು ನಮ್ಮಿಂದಾಗದು" ಎಂದು ಲಂಡನ್ ಪ್ರಕಟಣೆಯ ಕೊನೆಯಲ್ಲಿ ರುವ ವಾಕ್ಯವೆ 'ರಾಷ್ಟ್ರದ ಒಂದು ಭಾಗ' ನೆಂಬ ಆ ಹೆಸರು ಬ್ರಿಟಿಷರು ಏನಿ. ಜಿನ್ನರಿ ಗತ್ತ ವರ್ಷಾಂತ್ಯದ ಬಿರುದಲ್ಲವಾಗಿದ್ದರೆ ಅಸ್ಸಾಮಿಗೂ ಲಗ್ನವಾಗಬೇಕಲ್ಲವೆ? ಆದ ಕ್ಕೂಪ್ಪಿಗೆಯಿಲ್ಲದ ರಾಜ್ಯಭಾರವೊಂದನ್ನು ಈ ರೀತಿ ಅದರ ಮೇಲೆ ಹೇಗಬಹುದು? ಇದೇ ಮಾತು 'ಬಿ' ಗುಂಪಿನ ಗಡಿನಾಡು ಪ್ರಾಂತ್ಯಕ್ಕೂ ಅನ್ವಯಿಸುತ್ತದೆ. ಅಲ್ಲಿಯ ಅಧಿಕ ಸಂಖ್ಯಾಕರು ಜಾತೀವಾರಿಗಿ ಮು ಸ್ಲಿಮರಾದರೂ ರಾಜಕೀಯತಃ ಕಾಂಗ್ರೆಸ ಗರಾದ್ದರಿಂದ 'ಬಿ' ಗುಂಪಿನೊಳಗೆ ಸೇರ ಲೊಪ್ಪುವದಿಲ್ಲ. ಇನ್ನಾಗುಂಪಿನ ದೊಡ್ಡ ಪ್ರಾಂತ್ಯವಾದ ಪಂಜಾಬಿನಲ್ಲಿರುವ 16 ಮಿಲಿಯ ಮುಸಲ್ಮಾನರಿಗೆ ಆ ಗುಂಪು ಬೇಕಾಗಿದ್ದರೆ 12 ಮಿಲಿಯಷ್ಟಿರುವ ಸಿಖ್ ಮತ್ತು ಹಿಂದುಗಳದಕ್ಕೆ ಬದ್ಧ ವಿರೋಧವಿದ್ದಾರೆ; ಬಲೂಚಿ ಸ್ಥಾನವೂ ಹಾಗೆಯೇ. ಅಂತೂ 'ಬಿ' ಗುಂಪಿನ ಸಿಂಧ ವ್ರಾಂತ್ಯ, ಮತ್ತು 'ಸಿ' ಗುಂಪಿನ ಬಂಗಾಳ (ಈ ಪ್ರಾಂತ್ಯದ ಸುಮಾರು ಅರ್ಧ ಭಾಗದಲ್ಲಿ ಹಿಂದೂ ಬಹುಸಂಖ್ಯೆ ಯಿದ್ದು ಆ ಭಾಗಕ್ಕೂ ಗುಂಪು ಬೇಕಾ ಗಿಲ್ಲ) ಇವೆರಡೇ ಪ್ರಾಂತ್ಯಗಳು ಅವೆರಡು ಗುಂಪುಗಳನ್ನೊಪ್ಪಿಕೊಂಡಂತೆ ಕಾಣು ತ್ತಿದೆ ಮಿಕ್ಕಿದ್ದಲ್ಲವೂ ಬ್ರಿಟಿಷ್ ಹೇಳಿಕೆಯ ಲ್ಲಿರುವ 'ಒತ್ತಾಯದಿಂದ ಹೇರಲಾಗದ ಒ ಪ್ಪದ ಭಾಗ'ಗಳೇ. ಅಂದ ಮೇಲೆ ತಾವು ಹೆಸರುಕೊಟ್ಟ ಪ್ರಾಂತ್ಯಗಳು ತಾವು ತೋ ರಿದ ಗುಂಪಿನೊಳಗೆ?ಸೇರಲೇ ಬೇಕೆನ್ನುವ ಬ್ರಿಟಿಷ್ ಅಧಿಕಾರಿಗಳು ಆತ್ಯಾಚಾರಿಗಳಲ್ಲ ವೆ? ಪಂಗಡಗಳ ಸಂಬಂಧವಾಗಿ ಈ ವಿ ಪರೀತಾರ್ಥ ಕಟ್ಟಿದ ಮೇಲಾದರೂ 'ಆ ಪ್ರಕಾರ ಹೊಂದುವ ಘಟನಾ ಸಮಿತಿಯ ಬಹುಮತದ ತೀರ್ಮಾನಗಳು ಜ್ಯಾರಿಗೆ ಬಂದೇ ತೀರಲು ಬದ್ಧವಿವೆ.' ಎಂಬೊಂ ದು ಭರವಸೆ ಬ್ರಿಟಿಷ್ ಹೇಳಿಕೆಯಲ್ಲಿರುತಿ ದ್ದರೆ ಆಗ ಅಲ್ಲೊಂದು ಬಣ್ಣ ಹೊಳೆಯು ತಿತ್ತು. ಬದಲಿಗೆ, ಅಷ್ಟು ಮಾಡಿದ ಮೇಲೂ ''ಒಲ್ಲದವಂದ್ದರೆ ಜ್ಯಾರಿ ಮಾಡು ವಂತಿಲ್ಲ" ಎಂದೇ ಹೇಳಿರುವದರಿಂದ ಎಲ್ಲಾ ಬಣ್ಣ ಮಸಿನುಗುಗಿದೆ: ಇವೆಲ್ಲವನ್ನೊಸ್ಕರಿಸಿ ಕೊಂಡರೆ 'ವಂಚಕರು'ಎಂದು ಮುಖತಿರಿ ಗಿಸಬೇಕಲ್ಲದೆ ಬ್ರಿಟಿಷರೊಡನೆ ವಾದಿಸಲಾ ಗುವದಿಲ್ಲ.

ಮಿ. ಆಸಫ್.ಅಲಿಗಳು—ಅಮೇರಿ ಕದ ಹಿಂದೀ ರಾಯಭಾರಿಯಾಗಿ ನೇಮಕ ಗೊಂಡಿದ್ದಾರೆ. ಕೇಂದ್ರ ಸರಕಾರದ ಅವರ ಸ್ಥಾನಕ್ಕೆ ಮಾ. ಆಜಾದ್, ಶರಚ್ಚಂದ್ರ ಬೋಸ್, ಮಿ. ಶಾಫತ್ ಅಹಮ್ಮದ್ ಖಾ ನರ ಪೈಕಿ ಒಬ್ಬರು ನೇಮಿಸಲ್ಪಡುವರು.

ಮಿ. ಶಫಾತ್ ಅಹಮ್ಮದ್ ಖಾನ ರಿಗೆ—ತಿವಿದ ಆರೋಪಿಗಳ ಬಿಡುಗಡೆ ಯಾಗಿತ್ತೆ. ಆರೋಪಿಗಳು ಲೀಗ್ ಕಾರ್ಯ ಕರ್ತರಾಗಿದ್ದುದೇ ಅವಂ ಮೇಲಿನ ಆಪಾ ದನೆಗೆ ಹೇತುವಾಗಿಗಬೇಕೆಂದು ನ್ಯಾಯಾ ಧೀಶರ ಅಭಿಪ್ರಾಯ.

ಜಾಗತಿಕ ಸಂಘದ ಮಜಾಂಸಭೆ--ಯಲ್ಲಿಯೂ ದಕ್ಷಿಣಾಫ್ರಿಕೆಯ ಹಿಂದೀಯರ ಸಂಕಷ್ಟ ಸಂಬಂಧದ ರಠಾವು ಮಂಜೂ ರಾಯಿತು.

ಉಡುಪಿ

ವಿವಾಹ—ಉಡುಪಿ ಜೋರ್ಡಾ ಹ್ಯಾ ಸ್ಕೂಲ್ ಮಾಸ್ತರರೂ ಲೇಖಕರೂ ಆದ ಶ್ರೀ ಕೆ. ವಿಠಲ ಶಣ್ಯೆ, ಬಿ. ಎ. ಎಲ್.ಟಿ. ಅವರು ಕಾರ್ಕಳ ಶ್ರೀ. ಕೆ. ನಾರಾಯಣ ಕಾಮತರ ಪುತ್ರಿ ಶ್ರೀಮತಿ ಸುಮಿತ್ರೆಯನ್ನು ಕಳದ ತಾ. 28ರಲ್ಲಿ ವಿವಾಹವಾಪರು. ನೂತನ ದಂಪತಿಗ ಳಿಗೆ ಶುಭಾರಯಗಳು.

ತೋಚಿನೀಯ ದಹನ—ಉಡುಪಿ ತಾಲೂಕಿನ ಮಾಡಾಂಬಯಲು ಎಂಬ ಗ್ರಾಮ ದ ಪಿಲ್ಲವ ಕೃತಿಕೊಲ್ಲರ ಮನೆಗೆ ಇದೇ ತಾ ೬ನೇ ರಾತ್ರಿ ಬೆಂಕಿ ಬಿದ್ದಿದು ಒಂದು ಜೊತೆ ಕೋಣ ಮತ್ತೊಂದು ಎಮ್ಮೆ ಸಜೀವ ದಹನ ವಾದ ಹೃದ್ರಾವಕ ವಾರ್ತೆ ಬಂದಿದೆ. ಮನೆ ಯಲ್ಲಿದ್ದ ಬತ್ತ ದವಸಾನ್ನು, ಮತ್ತಿತರ ಸಾಮಾನುಗಳ ಸಮೇತ ಇಡೀ ಮನೆಯೇ ಸುಟ್ಟು ಹೋಗಿತ್ತೆಂದೂ ಒಳಗೆ ನಿದ್ರೆಯಲ್ಲಿ ದ್ದವರನ್ನು ನೆರೆಮನೆಯವರು ಎಚ್ಚರಿಸಿದ ದೆಂದೂ ತಿಳಿದು ಬರುತ್ತದೆ.

ಘಟನಾ ಸಮಿತಿ ಸಭಾರಂಭ

ಸ್ವತಂತ್ರ ರಿಪಬ್ಲಿಕ್ ಕಾಂಗ್ರೆಸಿನ ಗುರಿ. ❋ ❋ ಸಭಾಧ್ಯಕ್ಷ ರಾಜೇಂದ್ರ ಪ್ರಸಾದ್.

ಪ್ರಥಮ ನೆಹರುಗಳು ಲಂಡನ್ನಿನಿಂದ ಹಾರಿದವರು ತಾ. 8ನೇ ಆಪರಾಹ್ನ 3 ಘಂಟೆಗೆ ಢಿಲ್ಲಿಗೆ ಬಂದು ಮುಟ್ಟಬೇಡನೆಯೇ ಕಾದು ಕುಳಿದಿದ್ದ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಸಭ ಸೇರಿದ್ದು ಲಂಡನ್ ಸಂಭಾಷಣೆಗಳು ಮತ್ತು ಬ್ರಿಟಿಷ್ ಹೇಳಿಕೆಯ ಕುರಿತು ನೆಹರುಗಳು ಸವಿವರ ಹೇಳಿಕೆಯಿತ್ತರೆಂದೂ ಗಾಢ ಪರ್ಯಾಲೋಚನೆ ನಡೆಯಿತೆಂದೂ ತಿಳಿದುಬರುತ್ತದೆ ಘಟನಾ ಸಮಿತಿಯ ಕಾರ್ಯಕ್ರಮಗಳೇ ಮೊದಲಾದ ಮಹತ್ವದ ವಿಷಯಗಳಿರುವದರಿಂದ ಕಾಂಗ್ರೆಸ್ ಕಾರ್ಯಕಾರೀ ಸಮಿತಿ ಕೃಮಶಃ ಸೇರುತ್ತಿದೆ. ಮಹಾತ್ಮಾ ಗಾಂಧಿಯವರ ಅಭಿಪ್ರಾಯಗಳು ಒಂದು ಪತ್ರ ಮೂಲಕ ರಾಷ್ಟ್ರಪತಿಗಳಿಗೆ ತಲಪಿವೆ

ಘಟನಾ ಸಮಿತಿ ಪ್ರಾರಂಭ

ಪೂರ್ವ ನಿರ್ಣಯದಂತೆ ತಾ.9-12-16 ನೇ ಸೋಮವಾರ ಪೂರ್ವಾಹ್ನ 11 ಘಂಟೆಗೆ ಸರಿಯಾಗಿ ಭಾರತದ ಭಾವೀ ರಾಜ್ಯಾಂಗ ರಚನಾ ಸಭೆಯ ಡಿಲ್ಲಿಯ ಸುಸಜ್ಜಿತ ಸಭಾ ಭವನದಲ್ಲಿ ಪ್ರಾರಂಭಿಸಿತು ಸುಮಾರು 70ಕ್ಕೆ ಮಿಕ್ಕಿದ ಲೀಗ್ ಸದಸ್ಯರು ಮಾತ್ರ ಗೈರುಹಾಜರಿದ್ದು ಉಳಿದ 200ಕ್ಕೂ ಮಿಕ್ಕಿದ ಸರ್ವ ಪ್ರತಿನಿಧಿಗಳೂ ಹಾಜರಿದ್ದರು. ನೆಹರು, ವಲ್ಲಭಾಯಿ, ಸರೋಜಿನಿ, ಆಸಫ್ ಅಲಿ, ಕೃಪಲಾನಿ, ಅಜಾದ್, ಶರಶ್ಚಂದ್ರ, ಗಫರ್‌ಖಾನ್ ಮೊದಲಾದ ಕಾಂಗ್ರೆಸ್ ಪ್ರಮುಖರು ಪ್ರಥಮ ಪಂಗ್ತಿಯಲ್ಲಿ ರಾಜಿಸುತ್ತಿದ್ದರು ಪ್ರಥಮ ಸಭೆಯ ನೇಮಿತಾಧ್ಯಕ್ಷ ಡಾ! ಸಚ್ಚಿದಾನಂದ ಸಿಂಹರ ಪರಿಚಯವನ್ನು ಆಚಾರ್ಯ ಕೃಪಲಾನಿಯವರು ಮಾಡಿಕೊಟ್ಟರಿಂದು ತಿಳಿದುಬರುತ್ತದೆ.

ಕಾರ್ಯಕ್ರಮಗಳು

ಪ್ರಥಮತಃ ಅಧ್ಯಕ್ಷರ ಮುನ್ನುಡಿ ಭಾಷಣವಾಯಿತು. 'ರಾಜ್ಯಾಂಗರಚನಾಸಭೆಯ ವಿಧಾನಗಳು ಬ್ರಿಟಿಷ್ ವಸಾಹತುಗಳಿಗೆ ಅಪರಿಚಿತವಾದುದು ಭಾರತದಲ್ಲಿ ಆದಿಯಿಂದಲೂ ಪ್ರಮುಖರು ಅಂತಹ ಸಭೆಯನ್ನು ಯಾಚಿಸುತ್ತಾ ಬಂದಿದ್ದರು 1920 ಸುಮಾರಿಗೆ ಗಾಂಧಿಜೀಯೇ ಈ ಪ್ರಸ್ತಾಪವೆತ್ತಿದರು ಇದು ಅಮೇರಿಕದ ರಾಜ್ಯಭಾರಪದ್ಧತಿ ನಿರ್ಮಾಣದ ವಿಧಾನ. ಇಲ್ಲಿಯ ವಿಶಿಷ್ಟ ಸ್ಥಿತಿಗತಿಗಳಿಗೆ ಸರಿಯಾಗುವಂತಹ ಬದಲಾವಣೆಗಳೊಂದಿಗೆ ನಾವು ಆ ಕ್ರಮವನ್ನು ಯಶಸ್ವಿಯಾಗಿ ಜಾರಿಗೆ ತರಬೇಕು. ಎಲ್ಲಕ್ಕಿಂತ ಹೆಚ್ಚಾಗಿ ಸಹನೆ, ಔದಾರ್ಯ, ಸಹಕಾರ ಬುದ್ಧಿಗಳನ್ನು ಪ್ರದರ್ಶಿಸಿ ಈ ಮಹತ್ಕಾರ್ಯಕ್ಕೆ ಹೆಜ್ಜೆಯಿಡದೂರದೃಷ್ಟಿಯಿಂದ ವರ್ತಿಸಬೇಕು" ಎಂಬುದೇ ಪೀಠಿಕಾಧ್ಯಕ್ಷರ ಭಾಷಣದ ಸಾರ. ಆ ಮೇಲೆ ಸದಸ್ಯರ ಪರಿಚಯ ಪತ್ರಗಳ ಹಾಜರಾತಿ ಮತ್ತು ರಿಜಿಸ್ಟ್ರಿ ಪುಸ್ತಕಕ್ಕೆ ಸಹಿ ನಡೆಯಿತು. ಸ್ವತಂತ್ರ ರಾಷ್ಟ್ರ ನಿರ್ಮಾಣಕ್ಕೆ ಸೇರಿರುವ ಸದಸ್ಯರು ರಾಜಭಕ್ತಿ ಪ್ರಮಾಣದಂತಹ ಸ್ವತಂತ್ರತೆಗೆ ಕೈಕೊಳ್ಳುವ ವಿಧಿಯಾವುದೂ ಸಹಜವಾಗಿ ಅಲ್ಲಿಲ್ಲ.

ಮುಂದೇನು?

ಮುಂದಿ ಅಧ್ಯಕ್ಷರು ಡಾಕ್ಟರೀ ಸಲಹೆಯಂತೆ ಅವರಾಹ್ನದ ಸಭೆಯಲ್ಲಿ ಭಾಗವಹಿಸದೆ ಮಿ ಫ್ರೇಂಕ್ ಆಂಥೋನಿಯವರಿಗಾ ಪೀಠವನ್ನು ಒಪ್ಪಿಸಿದ್ದರು. ಕೆಲವು ಕಮಿಟಿಗಳ ನೇಮಕ, ಅಧ್ಯಕ್ಷ ಚುನಾವಣೆಯ ದಿನ ನಿಶ್ಚಯಗಳೇ ಮೊದಲಾದ ಕಾರ್ಯಕ್ರಮಗಳು ಅಲ್ಲಿ ನಿರ್ಧರಿಸಲ್ಪಟ್ಟಿತೆಂದು ತಿಳಿಯ ಬರುತ್ತದೆ ಕಾಂಗ್ರೆಸ್ ಪಕ್ಷೀಯ ಸದಸ್ಯರು ಸಭೆ ಸೇರಿ ಬಾಬೂ ರಾಜೇಂದ್ರ ಪ್ರಸಾದರನ್ನು ಘಟನಾ ಸಮಿತಿಯ ಕಾಯಂ ಅಧ್ಯಕ್ಷಸ್ಥಾನಕ್ಕೆ ಉಮೇದ್ವಾರಿಯಾಗಿ ಸರ್ವಾನುಮತದಿಂದ ಆರಿಸಿದ್ದಾರೆ. ಘಟನಾ ಸಮಿತಿಯಲ್ಲಿ ಕಾಂಗ್ರೆಸಿಗೆ ಬಹುಮತವಿರುವದರಿಂದ ರಾಜೇಂದ್ರರ ಆಯ್ಕೆ ನಿಶ್ಚಯವೆಂದೇ ಹೇಳಬಹುದು. ಈ ಬಾರಿಯ ರಾಜ್ಯಾಂಗರಚನಾ ಸಬಾಧಿವೇಶನವು ದಶಂಬರ್ 23ರ ವರೆಗೆ ನಡೆದು, ಆ ಮೇಲೆ ಕೆಲವು ಅವಧೀತನಕ ಮುಂದಿದುವರಿಯುವ ಲಕ್ಷಣ ಕಾಣುತ್ತಿದೆ ಪ್ರಾಂತೀಯ ಪಂಗಡಗಳಂತಹ ಜಟಿಲಾಸ್ಪದ ಪ್ರಶ್ನೆಗಳು ಈ ಬಾರಿಯ ಅಧಿವೇಶನದ ಮುಂದೆ ಬರುವಂತಿಲ್ಲ.

ಕೆಲವು ನೇಮಕಗಳು

ಈ ಬಾರಿಯ ಅಧಿವೇಶನದಲ್ಲಿ ಅಧ್ಯಕ್ಷ ಚುನಾವಣೆ, ಕಾರ್ಯಕ್ರಮ ಪಟ್ಟಿಯ ಅಂಗೀಕಾರ, ಆಶ್ರಿತರಾಜರ ಸಂಧಾನ ಸಮಿತಿಯೊಡನೆ ವ್ಯವಹರಿಸಲು ಸಮಿತಿಯೊಂದರ ನೇಮಕ, ಮೂಲಭೂತ ಹಕ್ಕುಗಳ ಸಂಬಂಧದ ಸಲಹೆಗಾರ ಸಮಿತಿಯ ನಿರ್ಮಾಣವಾಗಲಿವೆ. ತಂತೆಯೇ ಅಲ್ಪ ಸಂಖ್ಯಾಕರ ಹಕ್ಕುಬಾಧ್ಯತೆ ರಕ್ಷಣಾ ಸಮಿತಿ, ಗುಡ್ಡಗಾಡು ಮತ್ತು ಹೊರವಲಯಗಳ ಸಂಬಂಧ ಪರ್ಯಾಲೋಚನಾ ಸಮಿತಿ, ಕೇಂದ್ರ ಸರಕಾರದ ಅಧಿಕಾರ ಖಾತೆಗಳ ಸ್ಪಷ್ಟೀಕರಣ ಸಮಿತಿ, ಮತ್ತಿತರ ಸಮಿತಿಗಳೂ ಅವುಗಳ ಅಧಿಕಾರೀ ವರ್ಗಗಳ ನೇಮಕವೂ ಈ ಬಾರಿಯ ಸಭೆಗಳಲ್ಲೇ ನಡೆಯಲಿದೆ ಕಾಂಗ್ರೆಸ್ ಪಕ್ಷೀಯ ಸದಸ್ಯರ ಸಭೆಯು ಆಚಾರ್ಯ ಕೃಪಲಾನಿಯವರ ಅಧ್ಯಕ್ಷತೆಯಲ್ಲಿ ಸೇರಿದಾಗ ಮೀರತ್ ಕಾಂಗ್ರೆಸ್ ನಿರ್ಧಾರದ ಸ್ವತಂತ್ರ ಸಾರ್ವಭೌಮಾಧಿಕಾರೀ ರಿಪಬ್ಲಿಕ್ ಸರಕಾರದ ಕೂಹನೆಯನ್ನು ಜ್ಯಾರಿಮಾಡಿಸುವ ಅವಶ್ಯಕತೆಯನ್ನು ರಾಷ್ಟ್ರಪತಿಗಳು ಒತ್ತಿಹೇಳಿದ್ದಾರೆ. "ಕೆಲಸ ತೀವ್ರಗತಿಯಿಂದ ಸಾಗಬೇಕು. ಘಟನಾ ಸಮಿತಿಯಲ್ಲಿ ನೀವು ಹೆಚ್ಚೆಚ್ಚು ಸಮಯ ತೆಗೆಯುತ್ತಾ ಹೋದರೆ ಅದರ ವರ್ಜ್ಯಸ್ಸು ಕಡಿಮೆಕಡಿಮೆಯಾಗುತ್ತಾ ಹೋಗುವದು ನೀವು ನಿಮ್ಮ ಕಾರ್ಯವನ್ನು ಕ್ಷಿಪ್ರದಲ್ಲಿ ಮುಗಿಸಲಾರದೆ ಹೋದರೆ ಮತ್ತೆಂದಿಗೂ ಮುಗಿಸದಂತಾಗುವದು" ಎಂದು ಕೃಪಲಾನಿಯಂದಿದ್ದಾರೆ ಸರ್ದಾರ್ ಪಟೇಲರ ಭವನದಲ್ಲಿ ಕಾಂಗ್ರೆಸ್ ಕಾರ್ಯಕಾರೀ ಸಮಿತಿ ನೆರೆದಿದೆ. ಅಸ್ಸಾಮಿನ ಪ್ರತಿನಿಧಿಗಳು ಬ್ರಿಟಿಷ್ ಹೇಳಿಕೆಯ ಪ್ರಾಂತೀಕ ಪಂಗಡಗಳ ಅರ್ಧದ ಕುರಿತು ತೀವ್ರ ನಿಷೇಧವೆಬ್ಬಿಸಿ, ರಾಷ್ಟ್ರಪತಿಯೆಡೆಗೆ ಶಿಷ್ಟಮಂಡಲಿಯೊಯ್ದು ದೂರಿಟ್ಟಿದ್ದಾರೆ ಆಚಾರ್ಯರು ಪರ್ಯಾಲೋಚಿಸುವ ಭರವಸೆ ಕೊಟ್ಟಿದ್ದಾರೆ. ಸಿಖ್ಖರು ಪ್ರಾಂತೀಕ ಪಂಗಡದಕುರಿತು ಉಗ್ರ ವಿರೋಧ ಪ್ರದರ್ಶನ ಎಂದೆಂದಿಗೂ ಒಪ್ಪಲಾರೆವೆಂದಿದ್ದಾರೆ "ನಮ್ಮ ಪ್ರಾಂತ್ಯವು ಗುಂಪಿನೊಳಗೆ ಸೇರಬೇಕೋ ಕೂಡದೋ ಎಂಬ ಸ್ವಾತಂತ್ರ್ಯವನ್ನು ಸಂಪೂರ್ಣವಾಗಿ ನಮಗೇನೇ ಕೊಡಬೇಕು ನಮ್ಮ ಇಚ್ಛೆಗೆ ವಿರೋಧವಾಗಿ ಯಾವ ಪ್ರಾಂತೀಕಗುಂಪಿಗೂ ನಮ್ಮನ್ನೆಳೆಯಬೇಡಿ ಬಡ,ದಳಿತ ಪ್ರಾಂತ್ಯ ಗಡಿನಾಡಿಗೆ ಕೇಂದ್ರದ ಬೆಂಬಲ ಬೇಕಾಗಿದೆ ಆದ್ದರಿಂದ ಪಂಗತ್ಯಲ್ಲಿ ಸೇರಲು ನಾವೊಪ್ಪುವಂತಿಲ್ಲ" ಎಂದು ಗಡಿನಾಡಿನ ಗಾಂಧಿ ಗಫರ್‌ಖಾನರಂದಿದ್ದಾರೆ, 'ಲಂಡನ್ ಮಾತು ಕತೆಗಳ ಪರಿಣಾಮ ಹೀಗಾಗುವದೆಂದು ಮೊದಲೇ ನನಗೆ ಗೊತ್ತಿತ್ತು ಸುಮ್ಮಲ್ಲಿ, ಅಥವಾ ಢಿಲ್ಲಿಯ ಲ್ಲಾಗದುದು ಲಂಡನ್ನಿನ ಲ್ಲಾಗುವದು ಹೇಗೆ?" ಎಂದವರು ಮಾತು, ತಿರುವಂಕೂರಿನ ದಿವಾನ್ ಸರ್. ಸಿ ಪಿ ರಾಮಸ್ವಾಮಿ ಆಯ್ಯರರು ಆಶ್ರಿತ ರಾಜ್ಯಗಳ ಪರವಾಗಿ ಘಟನಾ ಸಮಿತಿಯಲ್ಲಿ ಸ್ವೇಚ್ಛಾನುಸಾರ ಕೆಲಸವಾಡಲನುಕೂಲವಾಗುವಂತೆ ದಿವಾನ್ ಪದವಿ ತ್ಯಜಿಸಿದ್ದಾರೆ.

ದಿ ನ್ಯೂ ಗ್ರೇಟ್ ಇನ್ಶೂರೆನ್ಸ್

ಕೊ. ಒಫ್ ಇಂಡಿಯಾ ಲಿಮಿಟೆಡ್.

(ಇನ್‌ಕೊರ್ಪರೇಟೆಡ್ ಇನ್ ಬರೋಡಾ ಮೆಂಬರರ ನಿತ ಜವಾಬ್ದಾರಿಯ ಖಾಧ್ಯತೆ)

ಅಧಿಕೃತ ಭಂಡವಳ ರೂ 2,50,00,000
ತೆತ್ತ ಮತ್ತು ಚಂದಾ ಕೊಡುವ ಭಂಡವಳ } ರೂ 1,25,00,000
ವಸೂಲಾದ ಭಂಡನಳ ರೂ 32,50,000

ಡೈರೆಕ್ಟರ್ ಮಂಡಳಿಯ ಸದಸ್ಯರು

1. ತುಳಸೀದಾಸ್ ಕಿಲಾಚಂದ್, ಎಸ್ಕ್ವಾಯರ್ (ಜೆಯರ್‌ಮೆನ್)
2 ನಾಲ್‌ಚಂದ್ ಹಿರಾಚಂದ್, ಎಸ್ಕ್ವಾಯರ್.
3. ಗೋರ್ಮಸೇವ್ ಮಲ್‌ರಾಜ್ ಖಾಟೌ, ಎಸ್ಕ್ವಾಯರ್
4 ಜಹಾಂಗಿರ್ ಪೆಸ್ಟೋಂಜಿ ಪಟೇಲ್, ಎಸ್ಕ್ವಾಯರ್, ಬಿ ಎ (ಕ್ಯಾಂಟಬ್)
5 ರಾಜಸ್ರೀಯ ಪುನಭಾಯಿ ವಸಂಜಿ ದೇಸಾಯಿ
6 ಅಂಬಲಾಲ್ ಕಿಲಾಚಂದ್, ಎಸ್ಕ್ವಾಯರ್.

ಜನರಲ್ ಮೆನೇಜರ್.—ಎಂ. ಜಿ ಮೋಡಿ, ಎಸ್ಕ್ವಾಯರ್

ರಿಜಿಸ್ಟರ್ಡ್ ಆಫೀಸು.—ಬೇಂಕ್ ಬಿಲ್ಡಿಂಗ್, ಮಾಂಡವಿ, ಬರೋಡಾ.

ಬ್ರಿಟಿಷ್ ಇಂಡಿಯದ ಕೇಂದ್ರ ಕಾರ್ಯಾಲಯ.

45/47 ಅಪೊಲೋ ಸ್ಟೀಟ್, ಫೋರ್ಟ್, ಬೊಂಬಾಯಿ

ಮದ್ರಾಸು ಶಾಖೆಯನ್ನು ಅನುಭವೀ ನುರಿತ ಏಜಂಟರು ಬೇಕಾಗಿದ್ದಾರೆ. ಉಮೇದ್ವಾರರು ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು.

ಮದ್ರಾಸ್ ಆಫೀಸು, 121-A ಆರ್ಮೇನಿಯನ್ ಸ್ಟ್ರೀಟ್.

ಜೀವವಿಮಾ, ಬೆಂಕಿ, ಹಡಗು ಗಂಡಾಂತರಗಳ

ಇನ್ಶೂರ್ ಸಹ ಸ್ವೀಕರಿಸಲಾಗುವುದು

The New Great Insurance Co. of India Ltd.

ಮದ್ರಾಸಿನಲ್ಲಿ ನುಳೆಯ ಹಾವಳಿ.

ಮದ್ರಾಸ್ ಪ್ರಾಂತ್ಯದಲ್ಲಿ ಇದೆ ತಾ. 6-7ರಲ್ಲುದ ಅತಿ ವಿಶೇಷ ಮಳೆಯಿಂದಾಗಿ, ಹೊಳೆಗಳೆಲ್ಲೆಲ್ಲಾ ಅದ್ಭುತ ನೆರೆಯೇರಿ ಪ್ರಾಂತ್ಯದ ದಕ್ಷಿಣ ಭಾರತ ರೈಲ್ವೇ ಹಾದಿಗಳು ಎಲ್ಲೆಲ್ಲೂ ಕಡಿದು ಹೋಗಿವೆ, ರೈಲು ಚಲಾವಣೆಗಳು ಹಲವು ಕಡೆಗಳಲ್ಲಿ ನಿಂತು ಹೋಗಿವೆ ಮದ್ರಾಸ್ ನಗರದಲ್ಲಿ ಹಲವು ಮನೆಗಳು ಕುಸಿದು ಬಿದ್ದು 5000 ಕ್ಕೆ ಮಿಕ್ಕಿದವರ ಆಶ್ರಯ ತಪ್ಪಿದಯೆಂದೂ ಕೆಲವು ಪ್ರಾಣಹಾನಿಗಳೂ ಆಗಿವೆಯೆಂದೂ ತಿಳಿಯಬರುತ್ತದೆ ಜತೆಯಲ್ಲಿ ಬಿರುಗಾಳಿ ಆನಾಹುತವೂ ಇತ್ತು

ಮಹಾತ್ಮಾ ಗಾಂಧಿಯವರು--ರಾಷ್ಟ್ರದ ಈ ರಾಜಕೀಯ ಬಿಕ್ಕಟ್ಟಿನ, ಅತ್ಯಂತ ಸಮಸ್ಯಾತ್ಮಕ ಸಂದರ್ಭದಲ್ಲಾದರೂ ನವಾಖಾಲೀ ಬಿಟ್ಟು ಬರಲೊಪ್ಪುವದಿಲ್ಲ "ನಾನು ಧಗಧಗಿಸುವ ಅಗ್ನಿಯ ಮಧ್ಯದಲ್ಲಿದ್ದೇನೆ ಅದನ್ನು ನಂದಿಸದೆ ಇಲ್ಲಿಂದ ಹೊರಡಲು ತಯಾರಿಲ್ಲ. ಇಲ್ಲಿಯ ಗತಿ ವಿಹೀನರಿಗೆ ಜೀವನವು ಜೀನಿಸುವಂತೆ ಹೆಣವೆಂದಾಗಬೇಕು' ಎಂದು ಶ್ರೀರಾಮಪುರದಲ್ಲಿ ನುಡಿದಿದ್ದಾರೆ

ವಲ್ಲಭಾಯಿಗಳು—ಬೊಂಬಾಯಿಯಲ್ಲಿ ಕೆಲವು ದಿನವಿದ್ದು ಮುಸ್ಲಿಂ ಲೀಗಿನ ಅತಿರೇಕಗಳಗೆಲ್ಲಾ ಕಾರ ಸಲಹೆ ಬರೆಯಂತಹ ಮಾತುಗಳನ್ನಾಡಿ, 'ಸಂದರ್ಭ ಬಂದರೆ ಸಂಪೂರ್ಣ ಹಿಂಸೆಯನ್ನಾದರೂ ಉಪಯೋಗಿಸಿರಿ' ಎಂದು ಹುರಿದಂಬಿಸಿದ್ದಾರೆ

ಲೀಗಿನ ಬೆನ್ನುತಟ್ಟುತಿದ್ದ ಬ್ರಿಟಿಷರು, ಲೀಗ್ ಭೇರಿಯನ್ನೇ ಬಾರಿಸಿದರು!

'ಜಿನ್ನರ ಅರ್ಥವೇ ನಮ್ಮ ಅರ್ಥ; ಜಿನ್ನರ ಧಿಕ್ಕಾರವೇ ನಮ್ಮ ನಕಾರ'-ಬ್ರಿಟಿಷ್ ಹೇಳಿಕೆ.

ತ್ರಾ.6ನೇ ರಾತ್ರಿಯ ಲಂಡನ್ ದುಂಡು ಮೇಜು ಸಮ್ಮೇಲನವು ಕ್ಷಣಿಕ ಸ್ಪ ರ್ಶನದಂತೆ ಜರಗಿ ನಿರರ್ಥಕವಾದೊಡನೆಯೇ ಬ್ರಿಟಿಷ್ ಸರಕಾರವು ತನ್ನ ಘೋರ ಣೆಯ ಕುರಿತು ಒಂದು ಪ್ರಕಟಣೆ ಹೊರಡಿಸಿದೆ. ಇದರ ಸಾರವನ್ನು ಏಕವಾಕ್ಯದಲ್ಲಿ ನಿರೂಪಿಸುವದಾದರೆ-'ಬ್ರಿಟಿಷ್ ಸರಕಾರವು ವ್ಯಕ್ತವಾಗಿ ಮಿ. ಜಿನ್ನರ ಬೆಂಬಲಕ್ಕೆ ನಿಂತಿತ.' ಎನ್ನಬಹುದು. ಬ್ರಿಟಿಷ್ ಹೇಳಿಕೆಯಲ್ಲಿರುವ ಘಟನಾ ಸಮಿತಿಯ ಪ್ರಾಂತಿಕ ಪಂಗಡಗಳ ಸಂಬಂಧದ ಕಲ ಮುಗಳಿಗೆ ಜಿನ್ನರು ಕಟ್ಟಿದ ಅರ್ಥವೇ ಬ್ರಿ ಟಿಷರ ಅರ್ಥ; ಜಿನ್ನರು ನಿರಾಕರಿಸಿದರೆ ಘಟನಾ ಸಮಿತಿಯ ವ್ಯವಸ್ಥೆಗಳನ್ನು ಬ್ರಿಟಿಷ್ ಸರಕಾರವೂ ನಿರಾಕರಿಸುವುದು--ಎಂಬುದು ಈಗ ಸಂದೇಹಕ್ಕವಕಾಶವಿಲ್ಲದಂತೆ ಸ್ಪಷ್ಟವಾಗಿದೆ.

ಬ್ರಿಟಿಷ್ ಹೇಳಿಕೆ—

ತಾ. 6-12-46ನೇ ರಾತ್ರಿ ಲಂಡನಿನಿಂದ ಹೊರಬಿದ್ದ ಬ್ರಿಟಿಷ್ ಸರಕಾರದ ಹೇಳಿಕೆಯ ಸಾರಾಂಶ ಹೀಗಿದೆ:—

"ಪಂಡಿತ ನೆಹರು ಮತ್ತು ಬಲದೇವ ಸಿಂಘರು ನಾಳೆ ಮುಂಜಾನೆ ಭಾರತಕ್ಕೆ ಹಿಂದಿರುಗಲಿದ್ದಾರೆ. ಹೀಗಾಗಿ ಚಕ್ರವರ್ತಿ ಸರಕಾರವು ಪಂಡಿತ ಜವಾಹರಲಾಲ ನೆಹರು, ಮಿ. ಎಂ.ಎ.ಜಿನ್ನಾ, ಮಿ. ಲಿಯಾಖತ್ ಅಲೀಖಾನ್, ಸರ್ದಾರ್ ಬಲದೇವ ಸಿಂಘೊಡನೆ ನಡೆಸಿದ ಸಂಭಾಷಣೆಗಳು ಈ ದಿನ ಅಪರಾಹ್ನಕ್ಕೆ ಅಂತ್ಯಗೊಂಡವು. ಘಟನಾ ಸಮಿತಿಯಲ್ಲಿ ಎಲ್ಲಾ ಪಕ್ಷಗಳ ಸಹಭಾಗಿತ್ವ ಮತ್ತು ಸಹಕಾರ ದೊರೆಯುವಂತೆ ಪ್ರಯತ್ನಿಸುವದೇ ಈ ಮಾತುಕತೆಗಳ ಉದ್ದೇಶವಾಗಿತ್ತು. ಯಾವುದೇ ಕೊನೆಯ ನಿರ್ಧಾರ ಹೊಂದಬೇಕಾದರೆ ಭಾರತೀಯ ಪ್ರತಿನಿಧಿಗಳು ತಂತಮ್ಮ ಅನುಯಾಯಿಗಳೊಡನೆ ಸಂಭಾಷಿಸಿಕೊಳ್ಳಬೇಕಾದುದರಿಂದ ಯಾವುದಾದರೊಂದು ತುತ್ತತುದಿಯ ತೀರ್ಮಾನವನ್ನಿಲ್ಲಿ ನಿರೀಕ್ಷಿಸಲಾಗಿಲ್ಲ.

ಪ್ರಾಂತಿಕ ಪಂಗಡಗಳ ಅರ್ಥ

ಮುಖ್ಯತಃ ಎದ್ದಿದ್ದ ತೊಂದರೆಯೆಂದರೆ ಬ್ರಿಟಿಷ್ ಮಂತ್ರಿ ಸಮಿತಿಯ ಮೇ ತಾ. 16ನೇ ಹೇಳಿಕೆಯಲ್ಲಿರುವಂತೆ, ಪ್ರಾಂತಿಕ ಪಂಗಡಗಳಿಗೆ ಸಂಬಂಧಿಸಿರುವ ಪಾರಾ 19 (5) ಮತ್ತು (6)ರ ಅರ್ಥದ ಕುರಿತೇ. ಅವು ಮೂಲತಃ ಹೀಗಿವೆ—

'19 (5) ಪ್ರತಿಯೊಂದು ಪಂಗಡದೊಳಗೆ ಸೇರತಕ್ಕ ಪ್ರಾಂತ್ಯಗಳಿಗಾಗಿ ಪ್ರಾಂತಿಕ ರಾಜ್ಯ ಘಟನೆಗಳನ್ನು ಈ ಪ್ರಾಂತಿಕ ಪಂಗಡಗಳು ತಯಾರಿಸಲಿರುವವು. ಮತ್ತು ಆ ಪ್ರಾಂತ್ಯಗಳುಳ್ಳ ಇಡೀ ಪಂಗಡಕ್ಕೊಂದು ರಾಜ್ಯ ಘಟನೆ ಬೇಕೋ ಎಂಬುದನ್ನೂ ಈ ಪ್ರಾಂತಿಕ ಪಂಗಡಗಳೇ ನಿರ್ಧರಿಸುವವು; ಬೇಕೆಂದಾದರೆ ಆ ಪಂಗಡ ಸರಕಾರಕ್ಕೆ ಪ್ರಾಂತಿಕ ವಿಷಯಗಳಲ್ಲಿ ಯಾವುದನ್ನು ಮೀಸಲಿಡಬೇಕು ಎಂಬುದನ್ನೂ ಅವುಗಳೇ ನಿರ್ಧರಿಸುವವು. ಈ ಕೆಳಗಿನ ಉಪನಿಬಂಧನೆ (8)ಕ್ಕನುಸಾರವಿಸಿ ಪ್ರಾಂತಿಕ ಪಂಗಡಗಳಿಂದ ಹೊರಬೇಳುವ ಅಧಿಕಾರ ಪ್ರಾಂತ್ಯಗಳಿಗಿದೆ:—

ಹೊಸ ರಾಜ್ಯಾಂಗ ರಚನಾ ಒಪ್ಪಂದ ಗಳು ಜಾರಿಯಲ್ಲಿ ಬಂದೊಡನೆಯೇ, ತಾನು ಸೇರಿಸಲ್ಪಟ್ಟಿರುವ ಯಾವುದೇ ಪ್ರಾಂತಿಕ ಪಂಗಡದಿಂದ ಹೊರ ಸಿಡಿಯುವ ನಿರ್ಧಾರ ಮಾಡುವ ಹಕ್ಕು ಪ್ರತಿಯೊಂದು ಪ್ರಾಂತ್ಯಕ್ಕೂ ಇದೆ. ನವರಾಜ್ಯಾಂಗ ವಿಧಾನಗಳಿಗನುಸಾರವಾಗಿ ಪ್ರಥಮ ಸಾರ್ವತ್ರಿಕ ಚುನಾವಣೆ ನಡೆದು ಆ ಮೂಲಕ ಆರಿಸಲ್ಪಡುವ ಹೊಸ ಪ್ರಾಂತಿಕ ಎಸೆಂಬ್ಲಿಯೇ, ಆ ನಿರ್ಧಾರವನ್ನು ಮಾಡಬೇಕಾಗಿದೆ.

ಮೂಲ ಅಭಿಪ್ರಾಯದ ಪುನರುಲ್ಲೇಖ

ತದ್ವಿರುದ್ಧವಾದ ಒಪ್ಪಂದವಾವುದೂ ಇಲ್ಲದಿದ್ದಾಗ, ಆ ಪಂಗಡಗಳ ಪ್ರತಿನಿಧಿಗಳ ವೋಟಿನ ಬಹುಮತವನ್ನಾಧರಿಸಿಯೇ ತೀರ್ಮಾನಗಳಾಗತಕ್ಕದ್ದೆಂಬ ಅಭಿಪ್ರಾಯವನ್ನು ಬ್ರಿಟಿಷ್ ಮಂತ್ರಿ ಸಮಿತಿಯು ಸ್ಪಷ್ಟಪಡಿಸುತ್ತಾ ಬಂದಿದೆ. ಈ ಅಭಿಪ್ರಾಯವನ್ನು ಮುಸ್ಲಿಂ ಲೀಗ್ ಅಂಗೀಕರಿಸಿದೆ. ಆದರೆ ಕಾಂಗ್ರೆಸು ಪ್ರತ್ಯೇಕ ಅಭಿಪ್ರಾಯವೊಂದನ್ನು ಮುಂದಿಟ್ಟಿದೆ. ಬ್ರಿಟಿಷ್ ಹೇಳಿಕೆಯ ನಿಜವಾದ ಅರ್ಥವೆಂದರೆ-ಪಂಗಡದೊಳಗೆ ಸೇರಬೇಕೋ ಎಂಬುದನ್ನು ನಿರ್ಧರಿಸುವ, ಅಂತೆಯೇ ತನ್ನ ಸ್ವಂತ ರಾಜ್ಯ ಘಟನೆ ತಯಾರಿಸಿಕೊಳ್ಳುವ ಹಕ್ಕು ಪ್ರತಿಯೊಂದು ಪ್ರಾಂತ್ಯಕ್ಕಿದೆ ಎಂಬುದೇ--ಎಂದು ಕಾಂಗ್ರೆಸಿಗರನ್ನುತ್ತಾರೆ. ಚಕ್ರವರ್ತಿ ಸರಕಾರವು ಈ ಕುರಿತು ಕಾನೂನು ತಜ್ಞರ ಸಲಹೆ ಕೇಳಿದ್ದು, ಮೇ ತಾ. 16ರ ಹೇಳಿಕೆಗೆ ಬ್ರಿಟಿಷ್ ಮಂತ್ರಿ ಸಮಿತಿಯು ಯಾವಾಗಲೂ ನಮೂದಿಸುತ್ತಾ ಬಂದಿದ್ದ ತಮ್ಮ ಉದ್ದೇಶವಾವುದಿದೆಯೋ ಅದೇ ಅರ್ಥವೆಂದು ಆ ಮೂಲಕವೂ ಧೃಢೀಕರಿಸಿಲ್ಪಟ್ಟಿದೆ. ಹೀಗೆ ಅರ್ಥ ವಿವರಣೆಗೊಂಡ ಬ್ರಿಟಿಷ್ ಹೇಳಿಕೆಯ ಈ ಭಾಗವು, ಮೇ ತಾ 16ರ ಯೋಜನೆಯ ಮುಖ್ಯ ಭಾಗವೆಂದು ಗಣಿಸಲ್ಪಡತಕ್ಕ್ಕಹಂತೆ ದಿದ್ದ ಹಿಂದೀ ಜನತೆಯು ತಾವಾಗಿ ತಮ್ಮ ರಾಜ್ಯಘಟನೆಯನ್ನು ತಯಾರಿಸಿಕೊಳ್ಳುವ ಅವಕಾಶವು ಈ ಮೂಲಕ ದೊರೆತು ಅಂತಹ ಘಟನೆಯನ್ನು ಫಾರ್ಲಿಮೆಂಟಿನ ಮುಂದಿಡಲು ಚಕ್ರವರ್ತಿ ಸರಕಾರವು ತಯಾರಿರಬೇಕಾಗಿದೆ. ಆದ್ದರಿಂದ ಘಟನಾ ಸಮಿತಿಯಲ್ಲಿ ಸರ್ವ ಪಕ್ಷಗಳ ಅಂಗೀಕಾರವನ್ನು ಅದು ಪಡೆಯಬೇಕು.

ಫೆಡರಲ್ ಕೋರ್ಟಿಗೆ ದಾಖಲು

ಮೇ. 16ರ ಹೇಳಿಕೆಯ ಇತರ ಅರ್ಥಗಳ ಪ್ರಶ್ನೆಗಳೂ ಹುಟ್ಟಬಹುದೆಂಬುದಂತೂ ಸ್ಪಷ್ಟ. ಘಟನಾ ಸಮಿತಿಯಲ್ಲಿ ಭಾಗವಹಿಸಲು ಮುಸ್ಲಿಂ ಲೀಗು ಕೌನ್ಸಿಲು ಒಪ್ಪುವಂತಾಗಬೇಕಾದರೆ- ಕಾಂಗ್ರೆಸಿನಂತೆಯೇ ಅವರೂ ಒಪ್ಪಿಗೆ ಕೊಡಲಿರುವರು-ಎಲ್ಲಾ ಘನ್ನಾರ್ಥಗಳ ಕುರಿತು ಉಭಯ ಪಕ್ಷಗಳವರೂ ಫೆಡರಲ್ ಕೋರ್ಟಿಗೆ ವಾದಗಳನ್ನೊಪ್ಪಿಸಿ, ಆದರ ತೀರ್ಮಾನವನ್ನೊಪ್ಪಿಕೊಂಡು, ಆ ಮೂಲಕ ಸಂಯುಕ್ತ ಘಟನಾಸಮಿತಿಯ ಹಾಗೂ ಪ್ರಾಂತಿಕ ಪಂಗಡಗಳ ಕಾರ್ಯಗಳು ಬ್ರಿಟಿಷ್ ಮಂತ್ರಿ ಸಮಿತಿಯೋಜನೆಗನುಸಾರವಾಗಿಯೇ ಮುಂದೊತ್ತುವಂತಾಗಬೇಕು.

ಸದ್ಯದ ಜಗಳಕ್ಕೆ ಸಂಬಂಧಿಸಿದ ವಿಷಯದ ಕುರಿತು, ಮುಸ್ಲಿಂ ಲೀಗು ತನ್ನ ಘೋರಣೆಯನ್ನು ಪುನರಾಲೋಚಿಸಲು ಹಾದಿ ಮಾಡಿಕೊಡುವಂತೆ, ಮಂತ್ರಿ ಸಮಿತಿಯ ಅಭಿಪ್ರಾಯವನ್ನೇ ಒಪ್ಪಿಕೊಳ್ಳಬೇಕೆಂದು ಚಕ್ರವರ್ತಿ ಸರಕಾರವು ಕಾಂಗ್ರೆಸನ್ನು ಒತ್ತಾಯಿಸುತ್ತದೆ. ಬ್ರಿಟಿಷ್ ಮಂತ್ರಿ ಸಮಿತಿಯ ಅಭಿಪ್ರಾಯವಿದೆಂದು ಈ ರೀತಿ ಸುದ್ಧಪಡಿಸಿದರೂ ಕೂಡಾ, ಈ ಮೂಲಭೂತ ಪ್ರಶ್ನೆಯು ಫೆಡರಲ್ ಕೋರ್ಟಿಗೆ ಹೋಗತಕ್ಕದ್ದೆಂದು ಘಟನಾ ಸಮಿತಿ ನಿರ್ಧರಿಸುತ್ತದಾದರೆ ಆ ದಾಖಲಾತಿ ಅತಿ ಬೇಗನೇ ಆಗಬೇಕು. ಅಂತಹ ಸಂದರ್ಭದಲ್ಲಿ ಫೆಡರಲ್ ಕೋರ್ಟಿನ ತೀರ್ಮಾನವು ಹೊರಬೀಳುವ ತನಕ ಘಟನಾ ಸಮಿತಿಯ ಪ್ರಾಂತಿಕ ಪಂಗಡಗಳ ಸಭೆಗಳನ್ನು ಹಿಂದೆ ಹಾಕುವದು ವ್ಯವಹಾರ್ಯವಿದೆ

ಪರಸ್ಪರ ಸಮ್ಮತಿಯ ನಿರ್ಧಾರಗಳ ಆಧಾರದಿಂದಲ್ಲದೆ ಘಟನಾ ಸಮಿತಿಯು ಜಯಶೀಲವಾಗುವ ಸಂಭವನೆಂದಿಗೂ ಇಲ್ಲ. ಭಾರತೀಯ ಜನತೆಯ ದೊಡ್ಡದೊಂದು ಭಾಗದ ಪ್ರತಿನಿಧಿಗಳಿಲ್ಲದೆಯೇ ಘಟನಾ ಸಮಿತಿಯು ಒಂದು ರಾಜ್ಯಾಂಗರಚನೆಯನ್ನು ತಯಾರಿಸಿದಲ್ಲಿ, ಅಂತಹ ರಾಜ್ಯಾಂಗ ವಿಧಾನವನ್ನು ಸಮ್ಮತಿಯಿಲ್ಲದ ದೇಶದ ಭಾಗಗಳ ಮೇಲೆ ಒತ್ತಾಯದಿಂದ ಹೇರಲು ಬ್ರಿಟಿಷ್ ಸರಕಾರವೆಷ್ಟಕ್ಕೂ---ತಾವೂ ಅಂತಹದನ್ನಿಚ್ಚಿಸುವದಿಲ್ಲವೆಂದು ಕಾಂಗ್ರೆಸ್ಸು ಹೇಳಿರುವಂತೆ--ಇಚ್ಛಿಸುವಂತಿಲ್ಲ".

ಬ್ರಿಟಿಷ್ ಹೇಳಿಕೆಯ ದುಷ್ಪರಿಣಾಮ

ಮೇಲಣ್ಣೆಯ ಲಂಡನ್ ಹೇಳಿಕೆಯಿಂದಾಗಿ ಮಿ.ಜಿನ್ನರು ನಿಜಕ್ಕೂ ವಿಜಯಗೊಂಡಿದ್ದಾರೆ. ಎಲ್ಲಾ ಹಾದಿ ಕಡಿದು ಹೋಗಿ ಕಣಿವೆಗೆ ಬೀಳುತ್ತಿದ್ದ ಜಿನ್ನರ ದುರ್ಬುದ್ಧಿಗೆ ಬ್ರಿಟಿಷ್ ಸರಕಾರ ಮತ್ತೊಮ್ಮೆ ಕೈಕೊಟ್ಟು ನ್ಯಾಯಸಗೊಂಡ ತನ್ನ ಬಂಟನ ಬೆನ್ನು ಚಪ್ಪರಿಸಿ ಪುನಃ ಮಲ್ಲಯುದ್ಧಕ್ಕೆ ಹುರಿದುಂಬಿಸಿಬಿಟ್ಟ ಜಗಜ್ಜಟ್ಟೇ ವೇಷಕನ ಹೆಗ್ಗಳಿಕೆಗೆ ಆಟ್ಲೀಸರಕಾರ ಪಾತ್ರವಾಗಿದೆ. 'ಅಲ್ಪ ಸಂಖ್ಯಾಕರು ದೇಶದ ಪ್ರಗತಿಗೆ ಅತಂಕವಾಗಲಾಸ್ಪದ ಕೊಡಲಾರೆವು' ಎಂದಿದ್ದ ಪ್ರಧಾನಿ ಆಟ್ಲಿಗಳ ವಾಗ್ದಾನವಿಂದು ಅವರ ಸ್ವಹಸ್ತದಿಂದ ಕೊಲೆಮಾಡಲ್ಪಟ್ಟುದರಿಂದ ಆದು ಇನ್ನಾದರೂ ಪ್ರೇತ ಪೀಡೆ ಕೊಡದೆ ಬಿಡುವಂತಿಲ್ಲ. ಬ್ರಿಟಿಷ್ ಹೇಳಿಕೆಯಿಂದ ಲೀಗಿನವರು ಆನಂದಗೊಂಡಿದ್ದಾರೆ; ಕಾಂಗ್ರೆಸಿನವರು ನಿರಾಶೆಗೀಡಾಗಿದ್ದಾಮೆ. 'ಫೆಡರಲ್ ಕೋರ್ಟಿನ ತೀರ್ಮಾನದಂತೆ ವರ್ತಿಸಲು ನಾವು ಬದ್ಧರಲ್ಲ' ಎಂದು ಲೀಗಿನವರು ಇಷ್ಟರಲ್ಲೇ ಹೇಳ ಹತ್ತಿದ್ದಾರೆ. ಲೀಗು ಹೀಗೆ ನ್ಯಾಯೋಲ್ಲಂಘನೆ ಮಾಡಿ ಘಟನಾ ಸಮಿತಿಯನ್ನು ಬಸ್ಮೀಯರಿಸಿದರೂ, ಆ ಕಾರಣದಿಂದಾಗಿಯೇ ಬ್ರಿಟಿಷ್ ಸರಕಾರವು ಸಂಪೂರ್ತೀ ತೀರ್ಮಾನವನ್ನು ಅಂಗೀಕರಿಸುವಂತಿಲ್ಲ. ಮಿ. ಜಿನ್ನರು ಮನಸೇಚ್ಛೆವರ್ತಿಸಿದರೂ ಅದು ಮಾನ್ಯವೆಂಬುದೇ ಬ್ರಿಟಿಷರ ಅರ್ಥ. ಆದರೆ ಕಾಂಗ್ರೆಸ್ ಇದಾವುದನ್ನೂ ಗಣಿಸದೆ, ಘಟನಾ ಸಮಿತಿಯನ್ನು ತನ್ನ ಘೋರಣೆಗನುಸಾರವಾಗಿ ಸಾಗಿಸುತ್ತಾ ಹೋಗುವದು. ಮೀರತ್ ಕಾಂಗ್ರೆಸ್ ನಿರ್ಣಯದ ಸ್ವತಂತ್ರ ಸಾರ್ವಭೌಮ ರಿಪಬ್ಲಿಕ್ ಸರಕಾರವನ್ನೇ ಅಲ್ಲಿ ರೂಪಿಸುವದು. ಬ್ರಿಟಿಷರ ಮಾನ್ಯತೆಯೇ ಅದಕ್ಕೆ ಬೇಕಾಗಿಲ್ಲ; ಅದು ಸ್ವತಯಾರಿಗೊಂಡಂತೆಯೇ ಸ್ವತಃ ಸ್ಥಾಪನೆಗೊಳ್ಳುವದು; ಅಂತಹ ಸಂದರ್ಭದಲ್ಲಿ ಮಹಾ ಘರ್ಷಣೆಯೊದಗುವದು ಖಂಡಿತ. ಹಾಗಾಗದ ನಿರ್ವಾಹವಿಲ್ಲ.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ

ತಾರೀಕು 11—12—46ರಿಂದ

—ಜ್ಯೂಪಿಟರ್ ಚಿತ್ರ—

ನವೀನ್ ಯಾಗ್ನಿಕ್, ಉರ್ಮಿಳಾ, ವತ್ಸಲಾ ಕುನ್ಮೇಕಾರ್ ಮೊದಲಾದವರು ನಟಿಸಿರುವ

ಕಿಸ್ಮತ್-ಮಾಲಾ

ಬರುವುದು:...

ಕನಿತಾ, ಸ್ಟೇಶನ್ ಮಾಸ್ಟರ್, ರತನ್ ಇತ್ಯಾದಿ

ವಿಶೇಷ ಪ್ರಚಾರದಲ್ಲಿರುವ ಕೆಲವು ಆಯುರ್ವೇದೀಯ

ಔಷಧಗಳು

— ದೊರೆಯುತ್ತವೆ —

ನವಭಾರತ ಪುಸ್ತಕ ಭಂಡಾರ,

: ಉಡುಪಿ :

ದಕ್ಷಿಣ ಕನ್ನಡ

ಕಾರ್ಕಳ– ಜನಪ್ರಿಯ ಡಿಪ್ಯೂಟಿ ತಹಸಿಲ್ದಾರ ಮಿ. ಎ ಎಸ್. ಡಿಸೋಜರವರಿಗೆ ಕುಂದಾಪುರಕ್ಕೆ ಸೈಪರಿಂಟೆಂಡೆಂಟ್ ಆಗಿ ನಿರ್ಗಮವಾದ ಸಂತೋಷ ಸಮಾರಂಭದ ಸಲುವಾಗಿ S. K. C. C. W. S. ಪುಡ್ ಇನ್ಸ್‌ಪೆಕ್ಟರ ಬಿ. ನಿಕೇರಪ್ಪರವರು ಎಟ್ ಹೋಮ್ ಸತ್ಕಾರಕೂಟ ಏರ್ಪಡಿಸಿದ್ದು, ಜನಾಬ ಎಚ್. ಎಸ್. ಮುಸ್ತೇನ. ಬಿ. ಎ, ಜಿ. ಎಲ್. ಎಮ್. ಎಲ್. ಎ, ರವರ ಅಧ್ಯಕ್ಷತೆಯಲ್ಲಿ, S. ರಾಮಕೃಷ್ಣ ಆಚಾರ್, ಅಜ್ಜುತ ಪೈ, ರೆವಾ ಕುಲಾಸೊ ಮೊದಲಾದವರ ಭಾಷಣಗಳ ಪಾರ್ಟಿ ಸತ್ಕಾರದೊಂದಿಗೆ ಸಭಾಂತ್ಯವಾಯಿತು. ಅಧ್ಯಕ್ಷರು A. S. D'Souzaರವರ ಗುಣಕಥನ ಮಾಡಿ, ಪ್ರಮೋಶನ್ನಿನ ಭಾಗ್ಯವನ್ನು ಕೋರಿದರು.

ಮಂಗಳೂರು.

ಪ್ರಾಣ ರಕ್ಷಣೆ–ಬೋಳಾರ ಮಂಗಳಾದೇವಿ ದೇವಾಲಯದ ಬಳಿ, ಕಲದಿನಗಳ ಹಿಂದೆ ಒಬ್ಬನು ಬಾವಿಗೆ ಜಿಗಿಯಲು ಅತ್ಯಹತ್ನೆಗೈಯಿದನು. ಫಾಯರ್ ಸರ್ವೀಸ್ ದಳದವರಿಗೆ ಇದು ತಿಳಿದುಬಂದು ಅವರು ಅತ್ಯಕ್ಷರದಲ್ಲಿ ಧಾವಿಸಿ, ಅವನನ್ನು ಬಾವಿಯಿಂದೆತ್ತಿ ಪ್ರಾಣ ರಕ್ಷಿಸಿದರೆಂದು ತಿಳಿದುಬಂದಿದೆ.

ಮಳೆ–ಪ್ರತೀ ದಿನವೆಂಬಂತೆ ಸಂಜೆಯ ನಂತರ ಆಕಾಶದಲ್ಲಿ ಮೋಡಗಳು ಕವಿದು ವೃಷ್ಟಿಯಾಗುತ್ತಿದೆ. ಸಾಧಾರಣ ಜೂನ್ ತಿಂಗಳಲ್ಲಿ ಒದುವ ಮಳೆಯ ರೀತಿಯು ಚಿಹ್ನೆಗಳು.



ಕ್ಷಣಿಕ ಗುಣಕೊಡುವ ಔಷಧದ ಬೆನ್ನು ಹತ್ತಿ ಮರುಳಾಗಬೇಡಪ್ಪಾ.

ಪುರೋಹಿತ ಶ್ವಾಸಹಾರೀ ಔಷದ ಮಾತ್ರೆ ಬೇಕೆ ಅದು ದಮ್ಮನ್ನು ಬಾ ಮುಕ್ಕಿ, ಇದಕ್ಕೆ ಅನ್ನವನ್ನು ಬೇರುಸಹಿತ ಕತ್ತು ಹಿಗುವುದು. ಈ ಔಷಧ ಸುರುವು ಮಾಡಿದಾಗಲೇ ಕೆಮ್ಮೂ ತೇಕೂ ನಿಲ್ಲುವುದು; ಹೊಟ್ಟೆ ಹಸನಾಗುವುದು; ಪಚನಕ್ರಿಯೆಯು ತಿದ್ದುವುದು, ಸ್ನಾಯುಗಳು ಗಟ್ಟಿಯಾಗುವುವು. ಆ ಮೇಲೆ ದಮ್ಮಿರಲಿಕ್ಕೆ ಸ್ಥಳವೇ ಸಿಗುವದಿಲ್ಲ.

ದಮ್ಮು, ತೇಕು, ಬೆನ್ನು ನೋವು, ಗಂಟಲ ಉರಿಯುವಂಥ ಕೆಮ್ಮು ಮುಂತಾದ ವಿಕಾರಕ್ಕೆ ಪುರೋಹಿತಶ್ವಾಸಹಾರೀ ಸ್ಪೀನ (ನೀಲೀ ಸ್ಟಾಕಿಂಗ್) ತೆಗೆದುಕೊಳ್ಳಬೇಕು. ಅಜೀರ್ಣ ಮತ್ತು ಅನ್ನಪಿತ್ತದಿಂದ ಬಳಲುವ ದಮ್ಮಿನವರು ಶ್ವಾಸಹಾರೀ ಕಂಪೌಂಡ (ಕೆಂಪು ಸ್ಟಾಕಿಂಗ್) ತೆಗೆದುಕೊಳ್ಳಬೇಕು.

೧ ಔನ್ಸ್ ೬ ಔನ್ಸ್ ೧೨ ಔನ್ಸ್ ಬಾಟ್ಲಿಗೆ ಕ್ರಮವಾಗಿ ರೂ.೧-೬-೦; ೩-೧೫-೦ ಮತ್ತು ೧೦-೦-೦

ಪುರೋಹಿತ ಫಾರ್ಮಸಿ, ಕೊಲ್ಹಾಪುರ

ಸ್ಟಾಕಿಸ್ಟರು-ಪೊಪ್ಯುಲರ್ ಸ್ಟೋರ್ಸ್, ಮಂಗಳೂರು; ಟಿ.ಸಿ.ನಟರಾಜನ್ & ಕೊ., ಮೈಸೂರು.

ಮುಂಬಯಿ ಸೋಲ ಏಜಂಟರು:–

ವನಮಾಲೀ ಭೈರವ ಮತ್ತು ಕಂಪನಿ,
ಪ್ರಿನ್ಸೆಸ್ ಸ್ಟ್ರೀಟ್,
ಮುಂಬಯಿ ೨.



ಇತ್ತೀಚಿನ ವರ್ಷಗಳಲ್ಲಿ ಇಂಥ ಮೊತ್ತ ನ ದಾಖಲೆ ಎನ್ನಬಹುದು

ಬೆಲೆ ನಿಯಂತ್ರಣ–ಈ ಕೆಳಗಿನ ಸಾಮಗ್ರಿಗಳ ಬೆಲೆಯನ್ನು ಸುದ್ರಾಸು ಸರಕಾರವು ನಿಯಂತ್ರಿಸಿ ರಬಂ ಹಾಗು ಚಿಲ್ಲರೆ ಧಾರಣೆಪಾಸಿಯನ್ನು ನಿರ್ಧರಿಸಿದೆ. ಈ ಧಾರಣೆಗಳಿಗೆ ಸೇಲ್ಸ್ ಟೆಕ್ಸ್ ಸೇರಿರುವುದಿಲ್ಲ.

ಕಬ್ಬಿನ ಬೆಲ್ಲ ರಬಂ ಧಾರಣೆ–ಇಂಪೀರಿಯಲ್ ಮಣ ೧ರ ೧ನೇ ತರಗತಿ ರೂ. ೧೪-೮-೦; ೨ನೇ ತರಗತಿ ರೂ. ೧೩-೮-೦; ರಬಂ ವ್ಯಾಪಾರ ಧಾರಣೆ–ಇಂಪೀರಿಯಲ್ ಮಣ ೧ರ ಊಟು ರೂ. ೪೮-೦-೦; ೨ನೇ ತರಗತಿ ಇಂಪೀರಿಯಲ್ ಮಣ ೧ರ ರೂ. ೪೬-೮-೦; ಚಿಲ್ಲರೆ ವ್ಯಾಪಾರ ಧಾರಣೆ ೧ ಪೌಂಡ್ ನೆಲಕಡಲೆ ಎಣ್ಣೆ ರೂ. ೧-೨-೦, ೨½ ಪೌಂಡ್ ನೆಲಕಡಲೆ ಎಣ್ಣೆ ಇಂಪೀರಿಯಲ್ ಮಣ ೧ರ ರೂ. ೪೧-೮-೦.

ಈ ನಿಯಂತ್ರಣ ದಶಂಬರ್ ತಾ. ೧೦ರಂದು ಜಾರಿಗೆ ಬರಲಿದೆ.

ಸಂತಾಪಸೂಚಕ ಸಭೆ– ಮಂಗಳೂರು ಕನ್ನಡ ಸಾಹಿತ್ಯಪ್ರಾಂತ ಸಮಿತಿಯ ಅಧ್ರ್ಯದಲ್ಲಿ ಲೈಬ್ರರಿಯನ್ ನಿಧನದ ಬಗ್ಗೆ ಸಂತಾಪಸೂಚಕ ಸಭೆಯು ತಾ. ೫ನೇ ಗುರುವಾರ ಸಂಜೆ ೬ ಗಂಟೆಗೆ ಸರಿಯಾಗಿ ಮಂಗಳೂರಿನ ಧಿಯಾಸಾಫಿಕಲ್ ಲಾಜಿನಲ್ಲಿ ಸೇರಿತು.

ಬಂಟರ ಯಾನೆ ನಾಡವರ ಸಂಘದ–ಶ್ರೀ ರಾಮಕೃಷ್ಣ ವಿದ್ಯಾರ್ಥಿನಿ ಭವನದ ಕಟ್ಟೋಣಿಯ ಸಹಾಯಾರ್ಥವಾಗಿ ಇದೇ ತಾ. 30ರಂದು 5ರ ತನಕ ವಸೂಲಾದ ಹಣದ ವಿವರ.

ಶ್ರೀಗಳಾದ ಕಡಂದಲೆಗುತ್ತು ಜೀಜು ಸಟ್ಟಿ ರೂ 1000, ಕುಬಣೂರು ಶಂಕರ ಸೆಟ್ಟಿ ರೂ 500; ಶ್ರೀಮತಿ ಹಿರೆಬೆಟ್ಟು ಶೇಷಮ್ಮ ಹೆಗ್ಗಡ್ತಿ ರೂ 500, ಹಿರೆಬೆಟ್ಟು ವೀರಮ್ಮ ಹೆಗ್ಗಡ್ತಿ ರೂ 500, ಶ್ರೀ ಕಾಪು ಮುದ್ದಣ್ಣ ಸೆಟ್ಟಿ ರೂಪ್ಯಾ 200, (ಒಂದು ಸಾವಿರ ನಾನ್ನೂರು); ಶ್ರೀಮತಿ ಕುಡೆತ್ತೂರು ಕೋಟಿ ಸೆಟ್ಟಿ, ರೂ 100, (ನೂರ್ನಾಲ್ವತ್ತು ಐದುನೂರು) ಕುಡೆತ್ತೂರು ಮಹಾಬಲ ಸೆಟ್ಟಿ ರೂ 50, (ನೂರ್ನಾಲ್ವತ್ತು ಐದು ನೂರು) ಶ್ರೀಮತಿ ದೆಪ್ಪು ಣಿ ದಾಸು ಸೆಟ್ಟಿ ರೂ 25, (ನೂರ್ನಾಲ್ವತ್ತು ಐದು ನೂರು), ಉಡುಪಿ, ಹಿರಿಯಡ್ಕ, ಮೂಲ್ಕಿ, ಕಾರ್ಕಳ ಮೊದಲಾದ ಸ್ಥಳಗಳಲ್ಲಿ ಚಿಮಿಯಾದ ನಿನಸು ರೂ 2210. ಜುಮ್ಲಾ ವಸೂಲಿ ರೂಪ್ಯಾ 5085.

ಮೇಲ್ಕಂಡ ಸ್ಥಳಗಳಲ್ಲಿ ಹಣ ವಸೂಲಿ ಬಗ್ಗೆ ಶ್ರೀಗಳಾದ ಕೆ ಎಜ್. ಸೆಟ್ಟಿ, ಬಾಳ್ಕುಟ್ಟಿ ಬೀಡು ಕೃಷ್ಣಯ್ಯ ಹೆಗ್ಡೆ, ಬಿ. ಸಚ್ಚಿದಾನಂದ ಹೆಗ್ಡೆ, ಹಿರೆಬೆಟ್ಟು ಸಪಾಶಿವ ಹೆಗ್ಡೆ, ಹಿರಿಯಣ್ಣ ಹೆಗ್ಡೆ, ಅತ್ತಾಡಿ ವೆಂಕಪ್ಪ ಸೆಟ್ಟಿ, ಸುಂಟಿಟ್ಟು ನಾಗಣ್ಣ ಹೆಗ್ಡೆ ಮತ್ತು ಜಾಕ್ಟರ್ ಎಮ್. ಆರ್. ಸೆಟ್ಟರು ಕಟ್ಟಡ ಸಮಿತಿಯೊಡನೆ ಸಹಕರಿಸಿದ್ದಾರೆ ಎಂದು ಶ್ರೀ ಎ. ಬಿ. ಸೆಟ್ಟರು ತಿಳಿಸುತ್ತಾರೆ ಈ ಮೊದಲು ಸುಮಾರು ರೂಪ್ಯಾ 50,000 ದಷ್ಟು ಜಮೆಯಾಗಿರುವುದು ಕಟ್ಟಡಕ್ಕೆ ಸುಮಾರು ಐದು ಲಕ್ಷ ರೂಪ್ಯಾ ಬೇಕಾಗಿರುವುದರಿಂದ ಸ್ವಜಾತಿ ಬಂಧುಗಳು ಉದಾರ ಸಹಾಯವನ್ನು ಮಾಡುವರೆಂದು ನಿರೀಕ್ಷಿಸಲಾಗಿದೆ.

ವಿದ್ಯಾರ್ಥಿನಿ ಭವನದ ಶಂಕುಸ್ಥಾಪನೆಯು

ಇದೇ ತಾ 18ನೆ ಬುಧವಾರ ಸಂಜೆ ೪ ವ್ಯಾಸು ಸರಕಾರದ ಆರೋಗ್ಯ ಖಾತೆಯ ಮಂತ್ರಿ ಶ್ರೀಮತಿ ರುಕ್ಮಿಣಿ ಲಕ್ಷ್ಮಿಪತಿ ಅವರಿಂದ ನೆರವೇರಿಸಲ್ಪಡುವುದು

ಕೊಕ್ಕಡ–ಕೆಲವು ದಿವಸಗಳ ಹಿಂದೆ ಇಲ್ಲಿಗೆ ಸಮೀಪದಲ್ಲಿಯ ಕಳಿಂದೂರು ಅಯ್ಯಪ್ಪ ಎಂಬವನನ್ನು ಹೆಬ್ಬುಲಿಯು ಹಿಡಿದಿತ್ತು. ಆತನನ್ನು ಆಸ್ಪತ್ರೆಗೆ ಚಿಕಿತ್ಸೆಯ ಬಗ್ಗೆ ಕೊಂಡೊಯ್ದರೂ, ವಿಶೇಷ ಭಯಂ ಆಗಿದ್ದುದರಿಂದ ಆತನು ಆಸ್ಪತ್ರೆಯಲ್ಲಿ ಮೃತಪಟ್ಟನು. ಇವನ ತನಕ 5 ಜನರ ಪ್ರಾಣವು ಹುಲಿಗೆ ಕುತ್ತಾಗಿದೆ.

ಉಡುಪಿ

ಭಾಷಣ–ಕರ್ನಾಟಕ ಸಂಘದ ಆಶ್ರಯದಲ್ಲಿ ಇದೇ ತಾ. 5ರಲ್ಲಿ ಸರಜಿ ಕೇರ್ತನಾಚಾರ್ಯ ಶೀ. ಬೀಲೂರು ಕೇಶವದಾಸರು ಹರಿದಾಸ ಸಾಹಿತ್ಯದ ವಿಷಯವನ್ನೆತ್ತಿ ಮುನಿಸಿಪಲ್ ಮೈನ್ ಶಾಲೆಯಲ್ಲಿ ಮನನೀಯ ಭಾಷಣವಿತ್ತರು. ಕುಷ್ಟ ಕನ್ನಡ ಸಾಹಿತ್ಯದ ಬೆಳವಣಿಗೆ ಹೇಗೆ ಆಗಬೇಕೆಂಬುದನು, ವಿವರಿಸಿದರು. ಈಗಿನ ಹೊಸಗನ್ನಡ, ನಡುಗನ್ನಡ ಬರೆಹಗಾರರು ಸರಸ್ವತಿ ದೇವಿಯ ಸೇವೆಯನ್ನು ಮಾಡುವ ರೀತಿನೀತಿಗಳನ್ನು ಸ್ಪಷ್ಟಪಡಿಸಿ ವಿಧಾಯಕ ಟೀಕೆಗಳನ್ನು ಮಾಡಿದರು.

ಬೇಸಾಯಗಾರರೂ ಮಳೆಯೂ–ಈ ವಾರದಲ್ಲಿ ಮಳೆ ಬರುತ್ತಲೇ ಇದೆ. ತಾ. 15ರೊಳಗಾಗಿ ಅಕ್ಕಿಯನ್ನು ತಯಾರಿಸಿ ಸ್ನೋದುಗಳಿಗೆ ಒಪ್ಪಿಸಬೇಕೆಂದು ಬೇಸಾಯಗಾರರಿಗೆ ಆಜ್ಞೆಯಾಗಿರುವುದು. ಎಷ್ಟೋ ಮಂದಿ ಭತ್ತವನ್ನು ಬೇಯಿಸಿ ಅಂಗಳದಲ್ಲಿ ಒಣಗಲಿಕ್ಕೆಂದು ಹಾಕಿಸುದು ಮಳೆಯ ಹೊಡೆತಕ್ಕೆ ಸಿಕ್ಕುತ್ತಿರುವುದು. ಬೇಸಾಯಗಾರರು ಕಂಗೆಟ್ಟಿದ್ದಾರೆ.

ಗೀತಾಜಯಂತಿ ದಿನ ೧೮೪೫ರಲ್ಲಿ ಕೃಷ್ಣಾವತಾರದಲ್ಲಿ ಅದಮಾರು ಮಠೀಯ ಪೂ. ಶ್ರೀ. ವಿಬುಧೇಂದ ತೀರ್ಥ ಶ್ರೀಪಾದಂಗಳವರ ಅಧ್ಯಕ್ಷತೆಯಲ್ಲಿ ಗೀತಾ ಜಯಂತಿಯು ಜರಗಿತು. ಶ್ರೀಗಳಾದ ಕೆ. ಸುಬ್ರಾಯ ಪುರಾಣಿಕರು, ಬಿ. ಶ್ರೀನಿವಾಸ ಭಟ್ಟರು, ಎ. ಸಾರಾಯಣ ಆಚಾರ್ಯರು, ಕೆ ಪದ್ಮನಾಭ ಉಡುಪರು ಮೊದಲಾದವರು ಗೀತೆಯ ಯುಕ್ತಿಯು ಉಪನ್ಯಾಸಮಾಡಿದ ಬಳಿಕ ಅಧ್ಯಕ್ಷರ ಭಾಷಣವಾಗಿ ಧನ್ಯವಾದದೊಂದಿಗೆ ಕಾರ್ಯಕ್ರಮವು ಮುಕ್ತಾಯವಾಯಿತು.

ಪ್ರಕಟಣೆ

ಪಡುಬಿದ್ರಿ ಕಂಬಳ.

ಪುರಾತನ ಕಾಲದಿಂದ ಜರಗುತ್ತಲಿದ್ದ, ಉಡುಪಿ ತಾಲೂಕು ಪಡುಬಿದ್ರಿ ಕಂಬಳವನ್ನು ಈ ವರುಷ ತಾ. 21-12-46ನೇ ಶನಿವಾರ ಜರಗಿಸಬೇಕಾಗಿಯು ಸದ್ರಿ ಕಂಬಳವು ಗತಕಾಲದ ವೈಭವ ಸ್ಥಿತಿಯಲ್ಲಿ ಜರಗುವ ಬಗ್ಗೆ ಹಲಿಗೆಯಲ್ಲಿಯೂ, ಹಗ್ಗವಲ್ಲಿಯೂ ಪ್ರಥಮ ತರಗತಿಯ ಓಟದಿಂದ ಜಯಶೀಲ ವಾಸ 2 ಜತೆ ಓಟದ ಕೋಣಗಳಿಗೆ ಪ್ರಥಮ ಬಹುಮಾನವಾಗಿ, ಒಂದೊಂದು ಚಿನ್ನದ ಪದಕವನ್ನು ಕೂಡಾ ಕೊಡುವುದಾಗಿಯೂ, ಆ ಸಂಬಂಧ ಮಹನೀಯರು ತಂತಮ್ಮಷ್ಟಿಟದ ಕೋಣಗಳ ಸಮೇತ ಚಿತ್ತೈಸಿ, ಸಾಹ್ಯಕಾರ್ಯವನ್ನು ಪೂರೈಸಿಕೊಡಬೇಕಾಗಿಯೂ, ಶ್ರೀ ಜೋಳ ಸುಂದಯ್ಯ ಶೆಟ್ರಿ ನಿಸ್ತಂತಿಸುತ್ತಾರೆ

ದಿ ಮೂಲ್ಕಿ ಬೇಂಕ್, ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿವೆಡೆಂಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಜನರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,
Moolky, S. K.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕುಲಾರುಗಳೂ ಪ್ರಕಟವಾಗುತ್ತವೆ.

ವಾರ್ಷಿಕ ಚಂದಾ
ರೂ. 2-0-0 ಮಾತ್ರ.

ಬೈಂಡು ಮಾಡಿದ ಪ್ರತಿಯೊಂದು ಸಂಪುಟಕ್ಕೆ ರೂ. 2½/-

ಹೆಚ್ಚಿನ ವಿಚಾರಕ್ಕೆ ಬರೆಯಿರಿ–
ಬಾಲಚಂದ್ರ ಆಫೀಸು, ಉಡುಪಿ

• ಮಗ್ಗದ ಮ್ಯಾಲಿಕರಿಗೆ ಸುಸಂದರ್ಭ •

ನಂಬ್ರ P II ಪರ್ಮಿಟುದಾರರಾದ ಮಗ್ಗದ ಮ್ಯಾಲಿಕರು ತಮ್ಮ ನೂಲಿಗೆ ಬೇಕಾಗುವ ರಂಗುಗಳಿಗೆ ಮಂಗಳೂರು ಇಲ್ಲವೆ ಕಣ್ಣಾನೂರು ರಂಗಿನ ವ್ಯಾಪಾರಸ್ಥರನ್ನು ಅವಲಂಬಿಸಬೇಕಾಗಿತ್ತು. ಈಗ ಅವರಿಗೆ ಬೇಕಾಗುವ ಎಲ್ಲಾ ತರದ ರಂಗುಗಳನ್ನು ನಾವು ಲೈಸನ್ಸನ್ನು ಪಡೆದಿರುತ್ತೇವೆ.

ಪಿ. ಎ. ಪೈ ಬ್ರದರ್ಸ್, ಉಡುಪಿ.

ನವೋಲ್ಲಾಸಗೊಳಿಸುವ ನವೀನ ನಗೆ ಪತ್ರಿಕೆ

ಅಂತರಂಗ

ಮಾಸಪತ್ರಿಕೆಯಂತೆ ಸಂಗ್ರಹಿಸಿಡಲು ಯೋಗ್ಯವಾದ
ಹೊಸ ಮಾದರಿಯ ಸಚಿತ್ರ ವಾರಪತ್ರಿಕೆ.

ವಿಚಾರವ ಕಿಡಿಗೆಳಿಗಾಗಿ—ವಿನೋದ ಹರಟೆಗೆಳಿಗಾಗಿ—
ಮನಮೋಹಕ ಕತೆಗೆಳಿಗಾಗಿ—ಚುಟುಕು ಸುದ್ದಿಗೆಳಿಗಾಗಿ—
ಅಂತರಂಗವು ಅಖಿಲ ಕರ್ನಾಟಕದಲ್ಲಿ ಹೆಸರಾಗಿದೆ.

ವಾರ ಭವಿಷ್ಯವೂ ಬಿಡದೆ ಪ್ರಕಟವಾಗುತ್ತಿದೆ.

ವಾರ್ಷಿಕ ಚಂದಾ (ಮುಂಗಡ) ಅಂಚೆ ವೆಚ್ಚ ಸೇರಿ 4-8-0
ಬಿಡಿ ಸಂಚಿಕೆ 0-1-6

ಜಾಹೀರಾತು ದರಗಳಿಗೂ ಮಾದರಿ ಸಂಚಿಕೆಗಳಿಗೂ ಬರೆಯಿರಿ—
ಮೆನೇಜರ್, ಅಂತರಂಗ, ಉಡುಪಿ

ಮಂಗಳೂರು.

ಜಿಲ್ಲಾ ಆಹಾರ ಸಮಿತಿಯ ಸಭೆಯು—

ನಿನ್ನೆ ತಾ. ೫ರಂದು ಜಿಲ್ಲಾ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಜರಗಿತು. ಕಲೆಕ್ಟರರು ಪ್ರಕೃತದ ಜಿಲ್ಲೆಯ ಸ್ಟಾಕ್ ಪರಿಸ್ಥಿತಿಯನ್ನು ನಿವರಿಸಿ, ರೆವಿನ್ಯೂ ಬೋರ್ಡಿನ ಅಪ್ಪಣೆಯಂತೆ ೨ ಸಾವಿರ ಟನ್ (ಸುಮಾರು ೫೦ ಸಾವಿರ ಮುಡಿ) ಅಕ್ಕಿ ಮುಲಬಾರಿಗೆ ಕಳುಹಬೇಕಾಗಿದೆ ಎಂದರು. ನೂಲು ಮತ್ತು ಬಟ್ಟೆಯ ಪರಿಸ್ಥಿತಿಯ ಕುರಿತು ವಿಚಾರ ನಡೆಸಲು ಜಿಲ್ಲಾ ಟೆಕ್ಸ್‌ಟೈಯಿಲ್ ಉಪಸಮಿತಿಯೊಂದರ ನೇಮಕವಾಯಿತು.

ಜೋಳದ ಕುರಿತು ಪ್ರಸ್ತಾಪ ಬಂದಾಗ, ಅದನ್ನು ಒಟ್ಟಿನ ರೂಪದಲ್ಲಿ ಒದಗಿಸಿದರೆ ಮಾತ್ರ ಉಪಯೋಗಿಸಲು ಅನುಕೂಲವಾಗುವುದೆಂದು ಸಮಿತಿಯು ಅಭಿಪ್ರಾಯಪಟ್ಟಿತು. ನಗರದ ಬ್ರೆಡ್ಡಿನ ರಂಗಡಿಗಳಿಗೆ ಈಗಾಗಲೇ ಜೋಳದ ಒಟ್ಟನ್ನು ಒದಗಿಸಲಾಗುತ್ತಿದೆ—ಎಂದರು. ಸಮಿತಿಯ ಕಾರ್ಯದರ್ಶಿಗಳು. ಜೋಳದ ಹೊಟ್ಟನ್ನು ಪಾರಿಸಿ, ಅ ಬಳಿಕವೇ ಅದನ್ನು ಒಟ್ಟುಮಾಡಿ ಒದಗಿಸಿದರೆ, ಅದು ಹೆಚ್ಚು ಪ್ರಮಾಣದಲ್ಲಿ ಖರ್ಚಾಗಬಹುದೆಂದು ಶ್ರೀಮತಿ ನೋರಿ ಬ್ರಿಟೊ ಅವರು ಸೂಚಿಸಿದರು. ಹಾಗೆ ನಾಡಿದರೆ ಊಕದಲ್ಲಿ ಸೇ. ೫೦ರಷ್ಟು ನಷ್ಟ ಸಾಗಿ ಒಟ್ಟಿನ ಬೆಲೆಯನ್ನು ಏರಿಸಬೇಕಾಗುತ್ತದೆ ಎಂದು ಶ್ರೀ. ಎ. ಶಿವರಾಯರು ಸೂಚಿಸಿದರು. ಆದರೂ, ಹೊಟ್ಟು ತೆಗೆದೇ ಒಟ್ಟು ನೂಡತಕ್ಕದ್ದೆಂದು ಸಮಿತಿಯ ಅಭಿಪ್ರಾಯಪಟ್ಟಿತು. ಜೋಳದ ತಿಂಡಿಯ ಪ್ರಚಾರದ ಬಗ್ಗೆ ಮಹಿಳೆಯರನ್ನು ಉಪಯುಕ್ತವೆಂದು ಕಂಡರೆ ನೇಮಿಸಬಹುದೆಂದಾಯಿತು.

ಪ್ರಕಟನೆ.

ಉಡ್ಪಿ ತಾಲೂಕು ಕಾಪು ಫಿರ್ಕಾ ಗ್ರಾಮ ಕಮಿಟಿ ಪ್ರೆಸಿಡೆಂಟರುಗಳ ಅವಗಾಹನೆ ಬಗ್ಗೆ—

ತಾಲೂಕು ಕಮಿಟಿಯ ನಿರ್ಣಯದಂತೆ ನೀರಿಗೆ, ಪ್ರತಿಯೊಂದು ರೆವಿನ್ಯೂ ಫಿರ್ಕಾಕ್ಕೆ ನೊರೆಯಲಿಕ್ಕರುವ, ಚಮಚಣೆ ಎಣ್ಣೆ ಸಕ್ಕರೆ, ಸರಕಾರಿಗೊಬ್ಬರ, ಬೀಜಾಯದ ಉಪಕರಣ ಮತ್ತು ಗಿರಣಿ ವಸ್ತ್ರ ಮೈರೆ ರೇಶನಿಂಗ್ ಸಾಮಾನ್ಯಗಳನ್ನು ಜನತೆಗೆ ನ್ಯಾಯವಾದ ವ್ಯವಸ್ಥಿತ ರೀತಿಯಿಂದ ಪಂಚುವ ಏರ್ಪಾಡನ್ನು ನಿರ್ವಹಿಸಲಿಕ್ಕೂ, ಅಭಿಪ್ರಾಯ ಸಂಗ್ರಹಿಸಲಿಕ್ಕೂ, ಕಾಪು ಫಿರ್ಕಾ ಗ್ರಾಮ ಕಮಿಟಿ ಪ್ರೆಸಿಡೆಂಟರುಗಳ ಸಭೆಯೊಂದನ್ನು ತಾ. 15-12-46ನೇ ಆದಿತ್ಯವಾರ ಅಪರಾಹ್ನ ೪ ಘಂಟೆ 2ಕ್ಕೆ ಕಾಪು ಪಟ್ಟಾಯ್ತು ಕೋರ್ಟು ಆಫೀಸಿನಲ್ಲಿ ಜರಗಿಸಬೇಕಾಗಿ ನಿರ್ಧರಿಸಿದ್ದೇನೆ ಆದ್ದರಿಂದ ಸದ್ರಿ ಸಭೆಗೆ ಕಾಪು ಫಿರ್ಕಾದ ಎಲ್ಲಾ ಗ್ರಾಮ ಕಮಿಟಿ ಪ್ರೆಸಿಡೆಂಟರುಗಳು ದಯಮಾಡಿ ತಪ್ಪದೆ ಹಾಜರಾಗಬೇಕಾಗಿಯೂ, ಬಳಿಕ ತಾವು ತಾವು ತಮ್ಮ ಕಮಿಟಿಗೆ ಸಂಬಂಧಪಟ್ಟ ಪ್ರತಿಯೊಂದು ಗ್ರಾಮದ—(1) ಮನೆಗಳ ಸಂಖ್ಯೆ. (2) ಪಾನೇರುವಾಗಿ ಜನ ಸಂಖ್ಯೆ. (3) ಚಾಲ್ತಿ ಬೊರೆಯುವ ಚಿನುಮಣೆ ಎಣ್ಣೆ (4) ಒಟ್ಟಾಣಿಗೆ ಅಗತ್ಯವುಳ್ಳ ಚಿಮುಣಿಎಣ್ಣೆ, (5) ಚಾಲ್ತಿ ನೊರೆಯುವ ಸಕ್ಕರೆ. (6) ಬಟ್ಟಾಡೆಗೆ ಅಗತ್ಯವುಳ್ಳ ಸಕ್ಕರೆ. (7) ಚಾಲ್ತಿ ಪಡಿಹೋಗಿದ ವಿಧಾನ (8) ಸದ್ಯಕ್ಕೆ ಅಗತ್ಯವುಳ್ಳ ಸರಕಾರಿ ಗೊಬ್ಬರ. (9) ಇತರ ಅಗತ್ಯವುಳ್ಳ ರೇಷನ್ ಪದಾರ್ಥಗಳು. ಇವುಗಳನ್ನು ಸೂಚಿಸುವ ಒಂದು ಸ್ಟೇಟ್‌ಮೆಂಟನ್ನು ತಯಾರಿಸಿತರಬೇಕಾಗಿಯೂ, ಮಾತ್ರವಲ್ಲದೆ ಗ್ರಾಮ ಕಮಿಟಿಗಳ ಪರವಾಗಿ ಇತರ ಯಾವ ವಿಷಯಗಳನ್ನು, ತಾಲೂಕು ಸಮಿತಿಯ ಮುಂದಿಡಬೇಕೆಂಬ ಸೂಚನೆಗಳನ್ನು ಸಹ ಸದ್ರಿ ಸಭೆಯಲ್ಲಿ ನಿರ್ಣಯಿಸಬೇಕಾಗಿಯೂ, ಅಪೇಕ್ಷಿಸುತ್ತೇನೆ.

ಕಾರುಕಾಲು ಗಣಪಯ್ಯ ಶೆಟ್ಟಿ.
ಮೆಂಬರ್, (ಕಾಪು ಫಿರ್ಕಾ)
ಉಡ್ಪಿ ತಾಲೂಕು ಫುಡ್ ಕಮಿಟಿ.
ಕಾರುಕಾಲು, 7-12-46.

೧೯೪೫-೪೬ರಲ್ಲಿ ಜಿಲ್ಲೆಯಲ್ಲಿ ೮೧,೦೦೦ ಟನ್ ಆಹಾರಧಾನ್ಯವನ್ನು ಸಂಗ್ರಹಿಸಲಾಗಿತ್ತು. ೧೯೪೬-೪೭ರಲ್ಲಿ, ೬೦,೪೦೦ ಟನ್ ಸಂಗ್ರಹಿಸಬಹುದೆಂದು ಅಂದಾಜು ಹಾಕಲಾಗಿದೆ. ಈ ಸಮಿತಿಯ ತಾಲೂಕುವಾರು ಪ್ರಮಾಣ ಹೀಗಿದೆ—ಮಂಗಳೂರು ೧೫,೬೦೦ ಟನ್; ಕಾಸರಗೋಡು ೧೫,೪೦೦ ಟನ್; ಪುತ್ತೂರು ೧೬,೪೦೦ ಟನ್; ಉಡುಪಿ ೧೦,೬೦೦ ಟನ್; ಕುಂದಾಪುರ ೯,೧೦೦ ಟನ್; ಕಾರ್ಕಳ ೧೦,೬೦೦ ಟನ್; ಇದು ಅಕ್ಕಿಯ ಮಿತಿಯಾಯಿತು. ಹೀಗೆಯೆ ಒಟ್ಟು ೫೦೦ ಟನ್ ರಾಗಿಯನ್ನೂ ಸಂಗ್ರಹಿಸಬಹುದೆಂದು ಅಂದಾಜು ಮಾಡಲಾಗಿದೆ. ರೆವಿನ್ಯೂ ಬೋರ್ಡು ನಿರ್ಧರಿಸಿದ ಈ ಮಿತಿ ಅತ್ಯಧಿಕವಾಗಿದೆ, ಇಷ್ಟನ್ನು ಸಂಗ್ರಹಿಸಲು ಸಾಧ್ಯವಿಲ್ಲವೆಂದೂ ಈ ಮಿತಿಯನ್ನು ೬೦,೦೦೦ಕ್ಕೆ ಇಳಿಸಬೇಕೆಂದೂ ಸಮಿತಿಯು ಅಭಿಪ್ರಾಯಪಟ್ಟಿತು. ಹಸುಗೆಯ ಅಕ್ಕಿಯ ಮಿತಿಯನ್ನು ಹೆಚ್ಚಿಸಬೇಕೆಂಬ ಶ್ರೀ. ಸುಬ್ಬಣ್ಣ ಶೆಟ್ಟರ ಸೂಚನೆಯೊಂದು, ಇದು ನನ್ಮಂಜಿಂದು ಜಿಲ್ಲೆಗೆ ಸಂಬಂಧಪಟ್ಟುದಲ್ಲ—ಇದೀ ಪ್ರಾಂತಕ್ಕೆ ಸಂಬಂಧಪಟ್ಟುದಾದುದರಿಂದ ಅವನ್ನಿಲ್ಲಿ ಚರ್ಚಿಸುವ ಅಗತ್ಯವಿಲ್ಲವೆಂದಾಯಿತು.

ಭತ್ತನನ್ನು ಕೈಯಿಂದಲೇ ಕುಟ್ಟಿ ಅಕ್ಕಿ ಮಾಡುವುದಿನ್ನು ಪ್ರೋತ್ಸಾಹಿಸಬೇಕಲ್ಲದೆ, ನಮ್ಮ ಸ್ಪೋರ್ಸಿನವರು ಈಗ ತೋರಿಸುತ್ತಿರುವಂತೆ, ಮಿಲ್ಲುಗಳಿಗೆ ಹೆಚ್ಚಿನ ರಿಯಾಯಿತಿ ಕೊಡಬಾರದು—ಎಂದು ಶ್ರೀ. ಸುಬ್ಬಣ್ಣ ಶೆಟ್ಟರು ಸೂಚಿಸಿದರು.

ಸ್ಪೋರ್ಸಿಗೆ ಅಕ್ಕಿಯೊಪ್ಪಿಸಿಸೊಡನೆಯೆ ರೈತರಿಗೆ ನಗದಿಯಾಗಿ ಹಣಕೊಡಬೇಕು; ಚಿಕ್ಕಿನ ರೂಪದಲ್ಲಿ ಕೊಟ್ಟರೆ, ಅದನ್ನು ಪಟಾಯಿಸಲು ಕಸ್ಟಮಾಗುವುದು—ಎಂದು ಶ್ರೀ. ರಾವು ಮೋಹನ ರೈಯವರು ಸೂಚಿಸಲು, ಸರಕಾರ ಸಂಘದ ಅಧ್ಯಕ್ಷರಾದ ಶ್ರೀ. ಎಂ. ಶಿವರಾಯರು ಹೀಗೆಂದರು: "ಅಕ್ಕಿ ಬತ್ತಗಳ ಸಂಗ್ರಹಣಕ್ಕಾಗಿ ವಿಜಯಂಟರುಗಳು ಸ್ವತಃ ಪಳ್ಳಿಗಳಿಗೆ ಹೋಗುವಾಗ ಅವರ ವರ ಹೇರಳ ನಗದಿ ಹಣ ಕೊಡುವುದು ಸುರಕ್ಷಿತವಾಗಲಾರದು. ಆದುದರಿಂದ ಚಿಕ್ಕುಗಳ ಮೂಲಕವೇ ಕೊಡಬೇಕಾಗಿದೆ—ಅವುಗಳನ್ನು ಯಾವ ಕಮಿಶನೂ ಇಲ್ಲದೆ ಪಟಾಯಿಸುವ ವ್ಯವಸ್ಥೆ ಮಾಡಲಾಗುವುದು" ಎಂದರು.

ಬೋನಸ್ಸಿನ—ಕುರಿತಾಗಿ ಎದ್ದ ಅಸ್ಪಷ್ಟತೆಯ ವಿಚಾರವಾಗಿ ಶ್ರೀ. ರಾಘವನ್ ನಂಬಿಯಾರರು ಪ್ರಸ್ತಾಪಿಸಲು ಅಧ್ಯಕ್ಷರಾದ ಕಲೆಕ್ಟರರು ಹೀಗೆಂದರು—"ಯಾವ ರೈತನು ಅಕ್ಕಿ ಭತ್ತವನ್ನು ಸ್ಪೋರಿಗೆ ತಂದೊಪ್ಪಿಸುವನೊ ಅವನೇ ಬೋನಸ್ಸಿಗೆ ಹಕ್ಕುಳ್ಳವನು. ಬೋನಸ್ಸಿನ ಪಾಲಿನ ವಿಚಾರದಲ್ಲಿ ಒಕ್ಕಲು—ಧನಿಗಳೇ ಪರಸ್ಪರ ತೀರ್ಮಾನಿಸಿಕೊಳ್ಳತಕ್ಕದ್ದಲ್ಲದೆ ಸರಕಾರವು ಈ ಪ್ರಶ್ನೆಯಲ್ಲಿ ಕೈಹಾಕುವುದಿಲ್ಲ—ಎಂದರು.

ಒಂದೂಕಾಲು ಪಾವು ಅಕ್ಕಿ—ಇದೇ ತಾ. ೧೫ರಿಂದ ಹಸುಗೆಯ ಅಕ್ಕಿಯ ನಿತಿಯಲ್ಲಿ ಕಾಲು ಪಾವಿನಷ್ಟು ಹೆಚ್ಚಿಸಲಾಗಿದೆ. ಎಂದರೆ, ಪ್ರತಿಯೊಬ್ಬ ಪ್ರಾಯಸ್ಥನಿಗೆ ದಿನಕ್ಕೆ ೧ ಪಾವು ಅಕ್ಕಿ ಮತ್ತು ಕಾಲು ಪಾವು ಗೋಧಿ ಅಥವಾ ಜೋಳ ಸಿಗುವುದು. ಐದು ವಾರ ಗೋಧಿ ಕೊಟ್ಟರೆ ಮತ್ತೊಂದು ವಾರ ಜೋಳದ ಹಿಟ್ಟನ್ನು ಕಡ್ಡಾಯವಾಗಿ ಕೊಡಲಾಗುವುದು.

ದ. ಕ. ಜಿಲ್ಲಾ ಬಂಟರ ಯಾನೆ ನಾಡವರ ಸಂಘ, ಮಂಗಳೂರು—ಇದರ ವಾರ್ಷಿಕ ಮಹಾಸಭೆಯು ಇದೇ ದಶಂಬರ ತಾ. ೩೦ನೇ ಸೋಮವಾರ ಬೆಳಿಗ್ಗೆ ಘಂಟೆ 6 30ಕ್ಕೆ ಕಾಸರಗೋಡು ಮಿರ್ಲನ್ ಸಿನೆಮಾದಲ್ಲಿ ಜರಗುವುದು. ಎಲ್ಲಾ ಮೆಂಬರರು ಜಯವಿಟ್ಟು ಸಭೆಗೆ ಬರಬೇಕಾಗಿ ವಿನಂತಿಸಲಾಗಿದೆ.

ಹಿಂದೀ ಪರೀಕ್ಷೆಗಳಲ್ಲಿ ಫಾರಸಿಲಿಪಿಯ ಜ್ಞಾನ—ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ಪರೀಕ್ಷಾಸಮಿತಿಯ ನಿರ್ಣಯದ ಮೇರೆಗೆ ಫೆಬ್ರವರಿ 1947ರಿಂದ ವ್ಯಾಪಕ ಮಿಕ್ಕ ಮಧ್ಯಮಾ ಮತ್ತು ರಾಷ್ಟ್ರ ಭಾಷಾ ಪರೀಕ್ಷೆಗಳಲ್ಲಿ ಫಾರಸೀಲಿಪಿಯ ಜ್ಞಾನವು ಕಡ್ಡಾಯಮಾಡಲ್ಪಟ್ಟಿದೆ ಆ ಮೇರೆಗೆ 1947ನೇ ಫೆಬ್ರವರಿ ತಿಂಗಳ ಪ್ರಾಥಮಿಕ ಮಧ್ಯಮಾ ಮತ್ತು ರಾಷ್ಟ್ರ ಭಾಷೆ ಪರೀಕ್ಷೆಗಳ ಬಗ್ಗೆ 'ಅಸಾನ್ ಹುದೂಫ್'ನ ಪರಿವರ್ಧಿತ ಸಂಸ್ಕರಣವು ಪಠ್ಯ ಪುಸ್ತಕವಾಗಿ ಇದಲಾಗಿದ್ದು ಮೊದಲಿನ 5 ಪಾಠಗಳು ಮಾತ್ರ ಪಠ್ಯ ವಿಷಯವಲ್ಲಿ ಸೇರಿಸಲಿಯಂದು ಪ್ರಾದೇಶಿಕ ಬಂಧೀ ಪ್ರಚಾರ ಸಮಿತಿಯ ಸಂಚಾಲಕ ರಾಮಕೃಷ್ಣ ನಾನವರು ತಿಳಿಸುತ್ತಾರೆ.

ಕ್ರಿಸ್‌ಮಸ್ಸಿನಲ್ಲಿ—ದಶಂಬರ ತಾ. ೧೧ರಿಂದ ೨೫ರ ತನಕ ತಲಾ ದೊಡ್ಡವರಿಗೆ ೨ ಗಜದಂತೆಯೂ ಮಕ್ಕಳಿಗೆ ೧ ಕಜದಂತೆಯೂ ಅಕ್ಕಿ ಕಾರ್ಡು ಅಥವಾ ಗುರುತಿನ ಚೀಟಿನ ಮೂಲಕ ಕ್ರೈಸ್ತರು ಮಾತ್ರ ಮಿಲ್ ಬಟ್ಟೆ ವಡೆಯಲು ಆರ್ಡರಿಂದು ಮದ್ರಾಸ್ ಸರಕಾರವು ವಿಧಿಸಿದೆ. ಈ ಮಿತಿಯಲ್ಲಿ ಇಷ್ಟರೊಳಗೇ ಒಮ್ಮೆ ಬಟ್ಟೆ ಪಡೆದ ಕ್ರೈಸ್ತರೂ ಪುನ ಪಡೆಯಲು ಆರ್ಹರಾಗಿರುತ್ತಾರೆ.

ಪಾಣಾಜೆ—ಪುತ್ತೂರು ತಾಲೂಕು ಪಾಣಾಜೆ ಗ್ರಾಮಪಲ್ಲಿ ತಾ 5-12-46ರಲ್ಲಿ ನೆರವಾಲು M. S. ಕಾಲೇಜಿನ ಪ್ರಿನ್ಸಿಪಾಲರಾದ ಕೆ. ಶ್ಯಾಂಭಟ್, M. A. ಯವರ ನೇತೃತ್ವದಲ್ಲಿ ಗೀತಾಜಯಂತಿಯು ಆಚರಿಸಲ್ಪಟ್ಟಿರುತ್ತದೆ. ಬೆಳಿಗ್ಗೆ ಘಂಟೆ 8-30ಕ್ಕೆ ಪೆರ್ಲದಲ್ಲಿ ಅಧ್ಯಕ್ಷರ ಸ್ವಾಗತ ಸಮಾರಂಭವಾಗಿ, ನೂರಂಬೈಲಿನಿಂದ ಅಭ್ಯಾಗತರ ನೆರವಣಿಗೆಯು ಭಜನೆಯೊಡನೆ 1-30ಕ್ಕೆ ಆರ್ಪಿಸಪವಿಗೆ ತಲಪಿತು. ಇದರಲ್ಲಿ ಪಜ್ರೆ ಕಾರಪಾಂಜಾ ಭಜನಾ ಮಂಡಲಿಯವರು ವಿಶೇಷ ಭಾಗವಹಿಸಿದ್ದರು. ಮಧ್ಯಾಹ್ನ ಘಂಟೆ 2ಕ್ಕೆ ಆರ್ಪಿಸಪವು ರಾಲಾಕಟ್ಟಪಡಲ್ಲಿ ಬೇರೆ ಬೇರೆ ಸ್ಥಾನಂತರಗಳಿಂದ ಬಂದಿದ್ದ ಗೀತಾ ಪ್ರೇಮಿಗಳ ಮಹಾಸಭೆ ನೇರಿತು. ಗತವರ್ಷದ ವರದಿಯನ್ನು ಕಾರ್ಯದರ್ಶಿಗಳು ಒದಿದರು. ಶ್ರೀಗಳಾದ ಯರ್ಮ್.ಶಂಕರ ನಾರಾಯಣ ಭಟ್. P ವೆಂಕಟ್ರಮಣ ಭಟ್. ಸ್ಥಾಪಕ. S. N. ಹೈಸ್ಕೂಲು. ಪೆರ್ಲಬಡೆಕ್ಕಲ-ಕೃಷ್ಣ ಭಟ್, ಡಾ ಜಿ. ಯಸ್. ಭಟ್. ವೈತೋಟ ಶಂಕರನಾರಾಯಣ ಭಟ್, S. ಸುಬ್ಬಣ್ಣ ಭಟ್, ನಸಿಷ್ಟಾಶ್ರಮ ಮೊದಲಾದವರು ಸ್ವಾರಸ್ಯವಾಗಿ ಮಾತಾಡಿದರು. ಅಧ್ಯಕ್ಷರು ಹಿಂದು ಧರ್ಮದ ವಿಶಾಲತೆ, ವೇದ ಕಾಲದಲ್ಲಿದ್ದ ಪ್ರಗತಿ ಮತ್ತು ಇಂತಾದ ಹಾನಿಕಾರಣಗಳ ಉದಾರ ತತ್ವ. ಆದರ ಸಾರವಾದ ಭಗವದ್ಗೀತೆಯ ವಿಶ್ವವ್ಯಾಪಕತೆ ಮೊದಲಾದವನ್ನು ವಿವರಿಸಿದರು

ಕಿರಿಯರ ಪ್ರಪಂಚದ ಪ್ರಕಟಣೆಗಳು

ಸ್ವತಂತ್ರ ಜೀವನೋಪಾಯ	(ಕೆ. ಹೊನ್ನಯ್ಯ ಶೆಟ್ಟಿ)	0	3	0
ಸಂರಯ ಪಿಶಾಚಿ	(ಕೆ. ಕೆ. ಶೆಟ್ಟ)	0	8	0
ನಾಡ ಕತೆಗಳು	(ಸಂಕಲನ)	0	3	0
ಕುಶಲವ	(ಕೆ. ಕೆ. ಶೆಟ್ಟಿ)	0	5	0
ಕಾವ್ಯ ಸಾಮ್ರಾಜ್ಯ	(ಕವಿತಾ ಸಂಗ್ರಹ)	1	0	0
ಮುಂದಿನ ದೇವರು	(ಕೆ. ಕೆ. ಶೆಟ್ಟಿ)	0	3	0
ವೈಭಿಚಾರಿಣಿ ಯಾರು	(,,)	1	0	0
ಹೆಂಡ್ತಿ ಗಂಡನಾದರೆ	(,,)	0	4	0
ಪುರುಷ ವಧು	(,,)	0	4	0
ಸನ್ಯಾಸಿಯ ಸೋಗಿನಲ್ಲಿ	(,,)	0	8	0
ನಂದಾ ದೀಪ	(ಕೊರಡ್ಕಲ್ ಶ್ರೀನಿವಾಸ ರಾವ್)	0	10	0
ದೇಶಭಕ್ತ	(ಕೆ. ಕೆ. ಶೆಟ್ಟಿ)	1	4	0
ಪ್ರೇಮ ವಿಜಯ	(,,)	1	0	0
ರಂಗಭೂಮಿ	(ಎಸ್. ವೆಂಕಟರಾಜ)	0	8	0
ಸೇವಾಪಥ	(ಎಸ್. ಎಲ್ ಸುಬ್ರಹ್ಮಣ್ಯಂ)	0	8	0
ನಾರೀ ಹೃದಯ	(,,)	0	14	0
ಭಾರತೀಯ ಕತೆಗಳು	(ಕೊರಡ್ಕಲ್ ಶ್ರೀನಿವಾಸ ರಾವ್)	0	14	0
ಪ್ರಕಾಶ	(ಸರಸ್ವತಿ ಬಾಯಿ ರಾಜವಾಡೆ)	2	4	0
ಮೂರು ಪ್ರಹಸನಗಳು	(ಕೊರಡ್ಕಲ್ ಶ್ರೀನಿವಾಸರಾವ್)	0	14	0
ನಗೆ ನೋಟಗಳು	(ಕೆ. ನಿಟ್ಟಿಲ ಶೆಣೈ, ಬಿ. ಎ. ಎಲ್.ಟಿ.)	0	14	0
ಅನ್ನದೇವರು ಮತ್ತು ಇತರ ಕತೆಗಳು	(ಕಯ್ಯಾರ ಕಿಂಞಣ್ಣ ರೈ)	1	0	0
ಭಾರತದಲ್ಲಿ ಜಾತಿಭೇದ	(ಎಸ್. ಎಲ್. ಸುಬ್ರಹ್ಮಣ್ಯಂ)	1	0	0
ವಿಷ್ಣುವಿನ ದಶಾವತಾರಗಳು	ದಶಾವತಾರಗಳು (ಎಂ. ವಿ. ಹೆಗ್ಡೆ)	0	12	0
ಆಕಾಶಗಂಗೆ	(ಎಸ್ ವೆಂಕಟರಾಜ)	1	12	0
ಸ್ವಾತಂತ್ರ್ಯವೀರ ಸಾವರಕರರು	(ಇಂದಿರಾಬಾಯಿ)	1	4	0
ಜೀವನ ಸಂಗ್ರಾಮ	(ಪಿ. ಶೀನ ಶೆಟ್ಟಿ)	1	8	0

ಪ್ರತಿಗಳು ಸಿಕ್ಕುವ ಸ್ಥಳ—
ನವಭಾರತ ಪುಸ್ತಕ ಭಂಡಾರ, ಉಡುಪಿ.

NOTICE.

ಉಡ್ಪಿ ಡಿ. ಮು. ಕೋರ್ಟಿನಲ್ಲಿ.

ಸ್ಮಾಲ್ ನಂಬ್ರ 360 46.

ಶ್ರೀ. ವೆಂಕಟ್ರಮಣ ದೇವರು, ಕಟ್ಟಾಜಿ ಮೊಕ್ತೇಸರರು ಕಟ್ಟಾಡಿ ರಾಘವೇಂದ್ರ ಕಾನುತ್ ಇವರ 3 ಜನರು —ವಾದಿರು

ಮತ್ತು

ಲಿಯೋ ಡಾಲ್ಫೀದಿ ಕೂಡ 8 ಜನರು —ಪ್ರತಿವಾದಿರು

6ನೇ ಪ್ರತಿವಾದಿ ವಿಂಗೇಲ ಡಾಲ್ಫೀದಿ ಡಾವಿಡ್ ಡಾಲ್ಫೀದಿರ ಮಗ.

ಇವರಿಗೆ

ಮೇಲ್ಕಂಡ ವಾದಿ ದೇವರ ಭಂಡಾರದ ಕ್ಕನ ಜಾಬ್ತು ಪಾವೆಯಲ್ಲಿ ವಿನರ್ಪಿದ ಸ್ಥಿರಾಸ್ತಿಗಳನ್ನು ನೀವು ಕೂಡ ಎಲ್ಲಾ ಪ್ರತಿವಾದಿಗಳು ಆಲುಳಿಪ್ಪು ಬಂಪಪದ್ರ ಜಾಬ್ತು ಕಳದಿ ತಾರೀಖಿನ ಖಾರ್ಜಿನ ಸಂಗತಿಗಳಿಗೆ ಅ್ಲಾಲು ಬದ್ರಿಯಿಂದ ಬರತಕ್ಕ ಮೂಲಗೇಣ ಬಾಕಿ ರೂ 108-6-7ನ್ನು ಕೇಳಿ ನಿಮ್ಮ ಕೂಡ ಎಲ್ಲಾ ಪ್ರತಿವಾದಿರ ಮೇಲೆ ಸದ್ರಿ ಮೊಕ್ತೇಸರರು ಮಾಡಿದ ದಾವೆಯು ಮೇಲ್ಕಂಡ ಕೋರ್ಟಿನಲ್ಲಿ ತಾ. 23-12 46ಕ್ಕೆ ತಪ್ಪಿಸಿಗೆ ಇಟ್ಟಿರುತ್ತಾರೆಂತ ಈ ಮೂಲಕ ತಿಳಿಸೋಣಾಗುತ್ತದೆ.

K. Vittal Nayak,
Vakil for Plaintiffs.
Udipi, 6-12-1946.

[೨ನೇ ಪುಟದಿಂದ]

ಕೋಣಗಳು ಗದ್ದೆಗೆ ಇಳಿದ ಮೇಲೆ ಅಡಿಮಾರುಗುತ್ತು ದೇಜು ಚೌಟರ 'ಮೋಡೆ ಕೊಕ್ಕೆ'ಗಳು ತಾಳಕ್ಕೆ ಸರಿಯಾಗಿ ಕಾಲಿಡುತ್ತ ಶಿಸ್ತಿಗೆ ವಿರೋಧ ಎಣಿಸದೆ ಮದುಮಗನಂದದಿ ಗದ್ದೆಗೆ ಇಳಿದುವು. 'ಮೋಡೆ-ಕೊಕ್ಕೆಗಳು" ಗದ್ದೆಗೆ ಇಳಿಯುವಾಗ ಕೊಂಬು ಊದಿತು. ಗರ್ನಲ್ ಸ್ಕೋಟನ ನಾಯಿತು. ಚೌಟರ ಕೋಣಗಳು ಗದ್ದೆಗೆ ಇಳಿದೊಡನೆ ನೆರದ ಜನರ ಕರತಾಡನ, ಶಿಳ್ಳು ಮೊದಲಾದುವುಗಳು ಚೌಟರ ಹುರುಪನ್ನು ಇಮ್ಮಡಿಮಾಡಿದುವು. ಮಂಜಟಿ ಗದ್ದೆಯಲ್ಲಿದ್ದ ನೂರೈವತ್ತು ಜತೆ ಕೋಣಗಳನ್ನು ಕಂಬಳಕ್ಕೆ ಇಳಿಸಿದ ನೇಲೆ ಒಂದೊಂದನ್ನೇ ಓಟಕ್ಕೆ ಬಿಡಲಾಯಿತು ರಾಮಯ್ಯ ಗೌಡರ ಕೋಣಗಳನ್ನು ತಿರುಗಿಸಿ ಬಿಡುವಾಗ ಹೆಚ್ಚು ಕಡಿಮೆಯಾದ್ದರಿಂದ ನೀರು ಹಲಗೆಯ ಮೇಲೆ ನಿಲ್ಲುವಂಥಾ ಮಹಾಪುರುಷನು ನಡುದಾರಿಯಲ್ಲಿಯೇ ಉರುಳಿಬಿದ್ದು ಕೆಸರಿನಲ್ಲಿ ಆಡಗಿಕೊಂಡನು. ಒಬ್ಬಿಬ್ಬರು ಆತನನ್ನು ಎತ್ತಿದರು ಹೀಗೆ ಯಾವ ಕೋಣಗಳ ನೀರೂ ಒಂದು ನಿಶಾನಿಗೂ ತಾಗಲಿಲ್ಲ. ಚೌಟರ ಕೋಣಗಳನ್ನು ಬಿಡುತ್ತಾರೆ ಎಂಬುದಾಗಿ ಗುಲ್ಲು ಹಬ್ಬಿತು. ಅಷ್ಟು ಜನರಿರುವ ಸಭೆಯಲ್ಲಿ ಕೂಡಲೇ ನಿಶಬ್ದ ವಾತಾವರಣವು ಗಂಭೀರವಾಯಿತು. ಚೌಟರ ಕೋಣಗಳನ್ನು ಗದ್ದೆಯ ಕೊನೆಯಲ್ಲಿ ನಿಲ್ಲಿಸಿ ತಿರುಗಿಸುವಾಗ ಚೌಟರು ಬಂದು 'ಎನ್ನ ಮರ್ಯಾದಿ ಒರಪು ಮೋಡೆ" ಎಂದು ಮೋಡೆಯ ಭುಜಕ್ಕೆ ತಟ್ಟುತ್ತಾ ಹೇಳಿ ದೂರ ನಿಂತರು. ಮೋಡೆಯು ಯಜಮಾನರು ತನ್ನನ್ನು ಹುರುಪುಗೊಳಿಸುತ್ತಾರೆಂದು ಹೆಮ್ಮೆಯಿಂದ ಮೇಲ್ವಡೆಯನ್ನು ನೇಲಕ್ಕೆತ್ತಿ ಚೌಟರಿಗೆ ಹಲ್ಲು ತೋರಿಸಿ ನೆಗಾಡಿತು. ಕೂಡಲೇ 'ಹಾಂ ಬುಡ್ಲೆ. ಬುಡ್ಲೆ; ಓಟೋ ಹೋಹೋ!" ಎಂದು ಚೌಟರ ಕೋಣಗಳನ್ನು ಓಡಿಸುವಂಥಾ ಕೃಷ್ಣ ಸೆಟ್ಟಿ ನೀರ ಹಲಿಗೆಯ ಮೇಲೆ ನಿಂತು, ಕೋಣಗಳನ್ನು ದೌಡಿಸುತ್ತಾ ಮೂರು ನಿಶಾನಿಗೂ ಅರ್ಧ ಕೋಲು ನೀರು ಹೆಚ್ಚಿಗೆ ಹಾರಿಸುತ್ತ ಬರುವಾಗ ಜನರ ಕರ ತಾಡನವು ಇಮ್ಮಡಿಯಾಯಿತು. ಮಂಜಟಿ ಗದ್ದೆಯಲ್ಲಿ ನಿಂತ ಬೈರನು ಹಿಗ್ಗಿ ಕೋಣಗಳನ್ನು 'ಬಲಾ ಬಲಾ" ಎಂದು ಕರೆಯುತಿದ್ದನು.

ಚೌಟರ ಕೋಣಗಳು ಪ್ರಥಮದಲ್ಲೇ ನಿಶಾನಿಗೆ ನೀರು ಹಾರಿಸಿದ್ದರಿಂದ ತಮ್ಮ ಕೋಣಗಳ ಮೇಲೆ ಜಿಗುಪ್ಸೆಮೂಡಿ, ಕೋಣಗಳಿಗೆ ಹೊಡಿಯಲಿಕ್ಕೆ ಶುರುಮಾಡಿದರು ಕೆಲವರು. ಕೆಲವು ಕೋಣಗಳ ಬೆನ್ನ ಮೇಲೆ ಹೊಡೆತದಿಂದ ರಕ್ತ ಇಳಿಯಿತು.

ತನ್ನ ಕೋಣಗಳು ಒಂದು ಬಾರಿಯಾದರೂ ನಿಶಾನಿಗೆ ನೀರು ಹಾಕಿಲ್ಲವೆಂಬ ಸಿಟ್ಟಿನಿಂದ ರಾಮಯ್ಯಗೌಡರು ಅಂತಪ್ಪ ಪೂಜಾರಿಗೆ ಹೇಳಿ ಕೋಣಗಳಿಗೆ ಹೊಡಿಸಿದರು! ಕೋಣಗಳ ಬೆನ್ನ ಮೇಲೆ ಥಾರಾಕಾರವಾಗಿ ರಕ್ತ ಇಳಿಯಿತು! ಬಾಯಲ್ಲಿ ನೊರೆಕಾರುತ್ತಾ ಯಾವ ನರಿಯುಕ್ತಿಯನ್ನು ಪ್ರಯೋಗಿಸಿದರೂ ನೀರಿನಲ್ಲಿ ಇಟ್ಟ ಗಿಣಹೋಮದಂತೆ ವ್ಯರ್ಥವಾಯಿತು.

ಸಂಜೆ ಆರು ಗಂಟೆಯ ವರೆಗೂ ಚೌಟರ ಕೋಣಗಳು ಹೊರತು ಬೇರೆ ಯಾವ ಕೋಣಗಳೂ ನಿಶಾನಿಗೆ ನೀರು ಹಾರಿಸದಿದ್ದುದರಿಂದ, ಚಪ್ಪರದಲ್ಲಿ ನೆರೆದಂಥಾ ಸೆಟ್ಟರು, ಪೂಂಜರು, ಹೆಗ್ಗಡೆಯವರು, ನಾಯ್ಕರು, ಅಡಪರು, ಬಂಡಾರಿಯರು, ಗೌಡರು, ಪೂಜಾರಿಯವರು ಮೊದಲಾದ ಪ್ರಮುಖರು 'ಚೌಟರ ಕೋಣಗಳಿಗೇನೇ ಬಂಗಾರದ ಪದಕವು ಸಲ್ಲತಕ್ಕದ್ದು" ಎಂದು ನಿರ್ಣಯಿಸಿದರು. ರಾಮಯ್ಯ ಗೌಡರು ಬಂಗಾರದ ಪದಕವನ್ನು ತಂದು ಆಡಿ ಮಾರುಗುತ್ತು 'ಮೋಡೆ-ಕೊಕ್ಕೆ'ಗಳಿಗೆ ಮನಸ್ಸಿಲ್ಲದ ಮನಸ್ಸಿನಿಂದ ಕಟ್ಟಿದರು. ಜನರ ಕೈಚಪ್ಪಾಳೆಯು ಜಯಕಾರದೊಂದಿಗೆ ಬೆರೆತು ಸಭಾಂತ್ಯವಾಯಿತು.

ಆಂತರಂಗವು ಮನಸೆಳೆವ—
ಬಹಿರಂಗವು ಕಣ್ಣೆಳೆವ—
ಅಂತರಂಗ ಪತ್ರಿಕೆಯಿಂದ ಆಯ್ದು ಪ್ರಕಟಿಸಿದ ೨ ಕಥಾಸಂಗ್ರಹಗಳು.

೧
ಅಂತರಂಗದ ಕಥೆಗಳು
ಶ್ರೀಗಳಾದ ಏ ವೆಂಕಟರಮಣಶಾಸ್ತ್ರಿ; ಎಸ್. ವೆಂಕಟರಾಜ, ಎಂ. ವಿ. ಹೆಗ್ಡೆ, ದೇವವಾಸ, ಕೆ. ಶೈಡ್ಸ್; ಬಿ. ಎಸ್. ಆರಾಧ್ಯ ಮೊದಲಾದವರ ೧೦ ಉತ್ತಮ ಕತೆಗಳ ಸಂಗ್ರಹ.
ಬೆಲೆ 0-12-0. ಟಿ. ಖರ್ಚು 0-2-0.

೨
ಪ್ರೇಮ-ಪ್ರವಾಹ
ಶ್ರೀಗಳಾದ ಎಂ. ವಿ. ಹೆಗ್ಡೆ, ಎಸ್.ಎಲ್. ಸುಬ್ರಹ್ಮಣ್ಯಂ; ಶ್ರೀಮತಿ ಸರಸ್ವತಿ ಬಾಯಿ ರಾಜವಾಡೆ ಮೊದಲಾದವರು ಬರೆದ ೫ ಕತೆಗಳು—ಪ್ರಣಯ ಪ್ರಲಯವು ಕತೆಗಳ ಸಂಗ್ರಹ.
ಬೆಲೆ 0-8-0. ಟಿ ಖರ್ಚು 0-2-0.
ಎರಡೂ ಪುಸ್ತಕಗಳನ್ನು ಒಮ್ಮೆ ತರಿಸಿಕೊಳ್ಳುವವರಿಗೆ ಟಪ್ಪಾಲು ಖರ್ಚು ಮುಫತ್ತು.
ಪ್ರತಿಗಳಿಗೆ ಬರೆಯಿರಿ—
(1) ಅಂತರಂಗ ಆಫೀಸು, ಉಡುಪಿ
(2) ನವಭಾರತ ಬುಕ್ ಡಿಪೊ, ಉಡುಪಿ
(3) ಯು. ಆರ್. ಕೆಫೆ ಎಂಡ್ ಸನ್ಸ್, ಮಂಗಳೂರು.

CHAMPAE'S
Snow & Lastrex
(Sole Distributers for Thana.)
Prop: K. G. NAYAK,
Santhekatte, UDIPI, S. K.

ಇಂದ್ರಭವನ ಕಾಫಿ ಹೊಟೆಲ್
ಬಲ್ಮಠ * * * * ಮಂಗಳೂರು.
ಹೊಸ ವ್ಯವಸ್ಥೆ—ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳು—ವಿದ್ಯುದ್ದೀಪ, ರೇಡಿಯೋಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.
ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.
ಬಿ. ಬಾಬು ಶೆಟ್ಟಿ
Indra Bhavan Coffee Hotel,
Balmatta Road, Mangalore.

ಧಾತುಪುಷ್ಟಿ ಲೇಹ
ಇದುಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ ಧಾತುಮೂತ್ರದೊದನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ,ಇವು ಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.
ಕಸ್ತೂರಿಮಿಶ್ರಣ ದಶಮೂಲ
ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ತಿಂಗಳಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.
ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)
ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಏದುಸಿರು, ಉಬ್ಬಸ, ಧ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಜಾಠರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತನ್ಯದ್ಧಿಯನ್ನು ಉಂಟುಮಾಡುವುದು.
ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.
ಮಹಾಮದನಕಾಮೇಶ್ವರೀ ಲೇಹ
(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು.)
ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ಸಾರಯು ಉಗುಪ್ರೆ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು.
ರಾತ್ಸು 1ರ 10-0-0, ½ ರಾತ್ಸು 5-1-0, ¼ ರಾತ್ಸು 2-12-0.
ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.
— ಎಂ. ಗಣಪಯ್ಯ ಎಂಡ್ ಸನ್ಸ್, —
ಆಯುರ್ವೇದಿಕ್ ಫಿಜಿಸಿಯನ್ಸ್-ರಥಬೀದಿ ನಂಬ್ರ, 10 ಮಂಗಳೂರು.
ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ. ಕ್ಷಾಲೆ ಸಂಗ್ರಿ ಬರವಲ್ಲಿ ರೋಗಕ್ಕೆ ತಕ್ಕ ಕಾಲ ಔಷಧಿ ರವಾನಿಸಲಿಕ್ಕಾಗುವುದು. (1) ಉಡುಪಿ ವಿಜಯರು — ನವಭಾರತ ಬುಕ್ ಡಿಪೊ, (2) ಬೊಂಬಾಯಿ ವಿಜಯರು- ಪೊಪ್ಯುಲರ್ ಸ್ಟೋರ್ಸ್, ಕೆಸಿಸ್ಟ್ರೀಟ್183, ಸುಪಾರಿವಾರ್ ರೋಡ್, ಜಿ. ವಿ. ಪಿ. ರೈಲ್ವೆ, ವರ್ಕ್ ಶೋಪ್ ಎದುರುಗಡೆ, ಪರೇಲ್ (3) ಜನರಲ್ ಸ್ಟೋರ್ಸ್, ಕೆಮಿಸ್ಟ್ಸ್, ಬಿ. ಇ. ಪಿ. ಮಾಟುಂಗಾ.

ಮಹಾತ್ಮಾಗಾಂಧಿಯವರು
"ನನಗೆ ಸಂದೇಹಗಳು ಬಲುವಾಗ, ನಿರಾಶೆಯು ನನ್ನ ಮುಂದೆ ನಿಂತಾಗ, ಮತ್ತು ಆಕಾಶ ಮಂಡಲದಲ್ಲಿ ಯಾವ ಜ್ಯೋತಿಯೂ ಗೋಚರಿಸದಿರುವಾಗ ನಾನು ಗೀತೆಯನ್ನು ಓದುತ್ತೇನೆ. ಆಗ ನನ್ನ ಮನಸ್ಸಿಗೆ ಶಾಂತಿಯನ್ನು ಕೊಡುವಂತಹ ಶ್ಲೋಕವು ಒಂದಿಲ್ಲದಿದ್ದರೆ ಮತ್ತೊಂದು ಸಿಕ್ಕುವುದು" ಎಂದು ಗೀತೆಯ ಕುರಿತು ಹೇಳಿದ್ದಾರೆ.
ಗೀತೆಯು ಕೈಗನ್ನಡಿ
ದಿವಂಗತ ಹೊಸಕೆರೆ ಚಿದಂಬರಯ್ಯನವರಿಂದ ರಚಿಸಲ್ಪಟ್ಟ
ಗೀತೆಯ ಸಮೂಲ ಭಾಷಾಂತರ.
ಪುಟಗಳು 400 ಕ್ಕೂ ಮಿಕ್ಕಿವೆ. ಬೆಲೆ 0-8-0 ಮಾತ್ರ
ಪ್ರತಿಗಳು ಎಲ್ಲ ಪ್ರಸಿದ್ಧ ಪುಸ್ತಕ ವ್ಯಾಪಾರಿಗಳಲ್ಲೂ ದೊರೆಯುತ್ತವೆ.
ಹಣ್ಣೀರಡಾಚೆ ಸ್ಥಾಪನ್ನು ನವಭಾರತ ಪುಸ್ತಕ ಭಂಡಾರ, ಉಡುಪಿ ಇಲ್ಲಿಗೆ ಕಳಿಸಿದರೆ ಒಂದು ಪ್ರತಿಯನ್ನು ರಿಜಿಸ್ಟ್ರಿಮಾಡಿ ಕಳಿಸುವರು.

FOR LIFE ASSURANCE
CONSULT
The New Gaurdian of India Life Insrce Co , Ltd ,
(Chairman - The Hon'ble Mr. M. C. M. Chidambaram Chettiar.)
A policy in this progressive Life Office is a good investment; its Agency is a valuable business connection.

LOCAL OFFICES IN SOUTH KANARA	HEAD OFFICE
MANGALORE	"United India Life Bldg"
&	Esplanade Post Box No 142,
KARKALA.	MADRAS.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ
೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ
ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,... ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ಸಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿ ಕುಟು ಗರ್ಬುಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳಣ್ಣೆ ಬಿಡಬೇಕು
ಬಾಟ್ಲಿ ೧ಕ್ಕೆ ಹರೂ. ಪೋಸ್ಟ ಚಾರ್ಜ ೪ ಆಣೆ.
ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ಡಾವಣಗೇರಿ:ಡಾವಣಗೇರಿ ಫಾರ್ಮಸ್ಸೆ. ಪತ್ರವ್ಯವಹಾರ ನಮ್ಮವರಕ್ಕೆ ಮಾಲಕರ ವಿಳಾಸ.
ರೇವಣಸಿದ್ದಪ್ಪ ಹಾಲಪ್ಪ ಡಾವಣಗೇರಿ,
ಆಯುರ್ವೇದ ಔಷಧಾಲಯ, ಗದಗ.
Ayurveda Oushadalaya GADAG



ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ಸಿಜ್ಜೈಸಿ ತಯಾರಿಸಲ್ಪಟ್ಟ ಅಪೂರ್ವವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.
ನವಜೀವಾತು ಎಂಬ ಸೂತಿಕಾ ರಸಾಯನ
(ಇದು ೧೫ಸ್ವರು ನಾಡಲ್ಪಟ್ಟದೆ.)
೪ ಟ್ಯೂನ್ ೨ಬಾಟ್ಲಿಗಳು ಹೆಚ್ಚು ಕಡಿಮೆ ೪೦ದಿವಸಗಳಿಗೆ ಬರುವವು. ಅಂದರೆ ಕೇವಲ ೪ ರೂಪ್ಯಾಗಳು ಒಂದು ಬಾಣಂತಿತನಕ್ಕೆ ಸಾಕಾಗುವವು ವಿಶೇಷ ವಾರ್ತೆ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.
ಎಂ ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.೬ **ಕೊಡಿಯಾಲಬೈಲು, ದ. ಕ.**
ಸ್ಟಾಕಿಸ್ಟರು- ಡಾ| ಏ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಸ್ವರ್ಗಸ್ಥ ಡಾಕ್ಟರ್ ಎಂ. ಮಾಧವಾಚಾರ್ಯರಿಂದ ರಚಿಸಲ್ಪಟ್ಟ ಎರಡು ಅತ್ಯುತ್ತಮ ನಾಟಕಗಳು.

ಸರಸ್ವತಿ ಬೆಲೆ **0-12-0**

ಅಲ್ಪ ವಿಕ್ಷಣವಿಮಂಟಾಗುವ ಅನರ್ಘ ಪರಂಪರೆಗಳನ್ನು ಪ್ರತ್ಯಕ್ಷವಾಗಿ ಹೃದಯದ್ರಾವಕವಾದ ರೀತಿಯಲ್ಲಿ ಕಾಣಿಸುವ ಸಾಮಾಜಿಕ ನಾಟಕ.

ಮೀರಾಬಾಯಿ ಬೆಲೆ **0-10-0**

ಶ್ರೀಕೃಷ್ಣ ಪರಮಾತ್ಮನ ಆರಾಧನೆಗೆ ಸಂಸಾರಿಗಳಾಗಿರುವವರಿಗೂ ಅವಕಾಶವಿದೆ ಕಪಟ, ವಿಶ್ವಾಸಘಾತಕತನ, ಅವಿಚಾರ, ಪ್ರಮಾದ ಇವುಗಳಿಂದುಂಟಾದ ವ. ಇವನ್ನು ಸೂರಿ(ಕರಿಸಲು ಭಗವದ್ಭಕ್ತಿಯೊಂದೇ ಉತ್ತಮ ಸಾಧನವೆಂಬುದನ್ನು ಸಾಮಾನ್ಯ ಭಕ್ತಿಪ್ರಾಧಾನ್ಯ ನಾಟಕ.

ಎರಡೂ ಪ್ರತಿ ಬೇಕಾದವರು ರೂ 1 ೫-0 ಕಳಿಸಬೇಕು

ನವಭಾರತ ಪುಸ್ತಕ ಭಂಡಾರ, ಉಡುಪಿ | ಕರಿಯರ ಪ್ರಪಂಚ, ಉಡುಪಿ.

'ಇಂಗ್ಲಿಷ್ ಬರುವುದಿಲ್ಲವಲ್ಲಾ' ಎಂದು ಚಿಂತಿಸುವಿರೇಕೆ?
ಸುಲಭದಲ್ಲಿ ಇಂಗ್ಲಿಷ್ ಕಲಿಯಲು ಅನುಕೂಲವಾದ ಪುಸ್ತಕ ಇಲ್ಲಿದೆ–



ಶ್ರೀ. ಕೊರಡ್ಕಲರ ಇಂಗ್ಲಿಷ್ ಸ್ವಯಂಬೋಧಿನಿ
ENGLISH MADE EASY
ಈ ಪುಸ್ತಕದಿಂದ ನೂರಾರು ಜನರು ತಾವಾಗಿ ಸುಲಭದಲ್ಲಿ ಇಂಗ್ಲಿಷ್ ಕಲಿತುಕೊಂಡಿದ್ದಾರೆ.
ನೀವೇಕೆ ಕಾಲಹರಣ ಮಾಡಬೇಕು? ಇಂದೇ ಒಂದು ಪ್ರತಿಯನ್ನು ಕೊಂಡುಕೊಳ್ಳಿರಿ.
ಬೆಲೆ ಬರೇ ರೂ. 1–8–0 ಪೋಸ್ಟಲು ಖರ್ಚು 0–4–0 ಪ್ರತ್ಯೇಕ
ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

EDITED, PRINTED & PUBLISHED BY K. H. SHETTY AT THE NAVAYUGA PRESS UDIPI. S. INDIA.

Regd. No. M. 3618. Estd. 1921 ಸ್ಥಾಪನೆ. ಬೆಲೆ: 0—1—6.

ನವಯುಗ

ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ 4—8—0
6 ತಿಂಗಳಿಗೆ ರೂ. 2—8—0
6 ತಿಂಗಳಿಗಿಂತ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ.
ಮಾದರಿ ಸಂಚಿಕೆಗೆ ಬರೆಯಿರಿ.
ಮೆನೇಜರ್,
ನವಯುಗ, ಉಡುಪಿ, ದ. ಕ.



ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ.

ವರ್ಷ 26 ವಾರ 01 | FOUNDER SRI. A. B. SHETTY, M.L.A. | Vol. 26 No. 16
ಉಡುಪಿ • 19—12—1946 • ಮಂಗಳೂರು.

ಅಮೃತಾಂಜನ.
ತಲೆನೋವು, ಶೀತ, ವೇದನೆ, ಉರುಕು ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಫಾಯಗಳು ಬಾಸು ಕೊಳ್ಳುವಿದು, ಚೇಳು ವಿಷ ಮುಂತಾದ ಬೇನೆ ಪಕ್ಷವಾತ ನೋವಿನು ನೋವಾಲು ಎಲ್ಲಾ ರೋಗಗಳಿಗೂ ಸಿದ್ಧ.
REGD.
ಹಚ್ಚಿ, ಹುಳುಳಿದ್ದಿ ಮತ್ತು ಸಹ ನಮ್ಮಲ್ಲಿ ಸಿಕ್ಕುತ್ತದೆ.
ಅಮೃತಾಂಜನ ಲಿಮಿಟೆಡ್.
ಮದರಾಸು.
ಕೊಂಬಾಯಿ ಮತ್ತು ಕಲ್ಕತ್ತ.

Vijaya Construction & Commercial Corporation Ltd.
UDIPI, S K.

AUTHORISED CAPITAL Rs. 5,00,000
Divided into 5,000 Ordinary Shares of Rs. 100/ each

RADIO HOUSE, Jayant Buildings, Mangalore. | Vijaya Tile Works & Kallianpura Saw Mills, Kallianpura.

Engineers, Contractors, Radio Dealers, Tile Manufacturers, Radio Servicing, Timber Sawing etc. etc. etc

Sri Krishna Agencies Ltd, Managing Agents. — K. Sadananda Heade, M.A.B.L., Advocate, (Chairman.)

Life is full of Opportunities.

Life is full of events and opportunities created by God for man and by man for himself and his fellowmen. Normal life presupposes a prosperous family, a happy home, good education, congenial vocation, good relations, friends, a cultured society and also a few ups and downs to spice them all with. Have you made sure that your family too can reasonably aspire to lead such a life even in your absence?

The Canara Mutual Assurance Co., Ltd.,
HEAD OFFICE: **UDIPI,** (S. India.)
Chief Agents for the Bombay and Madras Presidencies including States and the States of Mysore and Hyderabad
The Commercial Corporation of India, Ltd,
UDIPI. (S, India.)

THE
Bombay Life Assurance Company Ltd.
(ESTD. 1908)
A PREMIER INSURANCE COMPANY.
New Business in 1945 - - 2,77,23,100.
KOCHIKAR BROTHERS, LTD.
(ESTD. 1910)
Chief Agents for South India including Travancore, Cochin and Mysore State.
New Business in 1945 in our area:— **Over 5 Millions**
OUR Expert advice gained by 35 years Experience is at your door FREE
Drop a card to any of our Offices at —
MADRAS * BANGALORE * MADURA * CALICUT
TRIVENDRUM * UDIPI * AND BOMBAY.

The best preventive in epidemics of CHOLERA
"BHUVANENDRA"
CHANDRAMAS
Also a sovereign remedy for diarrhoea, Stomachache, Vomiting and Nausea.
BHUVANENDRA PRODUCTS LTD., Kalapadi.

'ಭುವನೇಂದ್ರ'
ಚಂದ್ರಮಸ್
ಭಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೂ ಮನೆಯಲ್ಲಿರತಕ್ಕ ಅತ್ಯುತ್ತಮ ಔಷಧಿ.
ದೊಡ್ಡವರಿಗೆ 4ರಿಂದ 8 ಬೊಟ್ಟು, ಸಣ್ಣ ಮಕ್ಕಳಿಗೆ 1ರಿಂದ 2 ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.
ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ
ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಪಿಪಾಡಿ, ದ. ಕ
ಉಡುಪಿ ಸ್ಪೆಷಲಿಸ್ಟರು:—ಡಾ। ನಾಯಕ್ಸ್ ಕ್ಲಿನಿಕ್ಕಲ್ಲಿಂಗ್ ರೂಮ್ಸ್, ಎಂಡಿಎ ಫಾರ್ಮಸಿ; ಶ್ರೀ। ಆರ್। ಎಸ್। ಶೆಟ್ಟಿ, ರಥಬೀದಿ; ಡಾ। ಪಿ. ಜಿ. ಆಚಾರ್ಯ ಫಾರ್ಮಸಿ; ಡಾ। ಕೆ. ವೇಣುಗೋಪಾಲ್ L.I.M.; ಡಾ। ವೆಂಕಟರಾವ್, ಕೊರಡ್ಡಲ್; ನವಭಾರತ ಬುಕ್ ಡಿಪೋ

—ಮಕ್ಕಳನ್ನು ಹಡೆಯುವುದು ಸಾಕು—
ಅತಿಕ್ಕ ಸ್ತ್ರೀಯರಿಗೆ **ಬರ್ಥ ಕಂಟ್ರೋಲ್** ರೋಗಗ್ರಸ್ತ ಹೆಣ್ಣುಮಕ್ಕಳಿಗೆ
ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಜಲ್ಲದೆ ಸ್ತ್ರೀಯರ ಬಿಳಿಕರಗು, ಸ್ವದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.
ಕಿಮ್ಮತ್ತು:—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧಿಯ ಕಿಮ್ಮತ್ತು ರೂಪಾಯಿ ೨—೦—೦. ಪೋಷ್ಟ ಚಾರ್ಜು ೧ಆಣೆ.
ಮಾಲಕರು:—ಡಾಲಪ್ಪ ಭೀಕೇರಪ್ಪ ಡಾವಣಗೇರಿ
ಆಯುರ್ವೇದ ಔಷಧಾಲಯ, ಗದಗ-ಸಿಟಿ-
ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ್ ಬಾಗಲಕೋಟೆ ಧಾರವಾಡ, ವಿಜಾಪುರ—ಮಾನಸ್ಯ ಸಿದ್ಧರಂಗಪ್ಪ ಧಾರವಾಡಕರ, ನಿಜಾಪುರ. ಚಿಕ್ಕೋಡಿಯಲ್ಲಿ:—ಹುಂಬರವಾಡಿ ಸ್ಟೋರ್ಸ್ ಮಾಲಗೇರಿ:—ಮಾಲಗೇರಿ ಪ್ರಿಸ್ಸ್. ಆರ್. ಎಲ್. ಕೆವಲವಾಸಿ, ಕೆಮಿಸ್ಟ್, ಹಾವೇರಿ, ಬ್ಯಾಡಗಿ
Ayurveda Oushadalaya, GADAG CITY.

ಭದ್ರತೆ ಮತ್ತು ಸೇವೆ
ಇದೇ ಬೇಂಕಿನ ತಳಹದಿ ಮತ್ತು ನಮ್ಮ ಮುಖ್ಯ ಗುರಿ.
ನಮ್ಮ ಸೇವೆಯನ್ನು ಬ್ರಾರಂಭಿಸಿ ಇಂದಿಗೆ ಎರಡಿನ್ನೈದು ವರ್ಷಗಳು ಸಂದುವು. ಮುಂದಿನ ವರ್ಷಗಳಲ್ಲಿ ನವೀನ ಹಾದಿಸಿಸಿಂದ ಸೇವ ಹಾರಗಳನ್ನು ನಡಿಸಿ ಹೆಚ್ಚಿಸಬೇಕೆಂದು ಸಂಕಲ್ಪಿಸಿದ್ದೇವೆ. ಈ ನಮ್ಮ ಧ್ಯೇಯಸಾಧನೆಗೆ ನಿಮ್ಮೆಲ್ಲರ ಸಹಕಾರವನ್ನು ಹಿಂದಿಗಿಂತ ಲೂ ಹೆಚ್ಚಾಗಿ ನೀಡುವಿರೆಂದು ನಂಬುತ್ತೇವೆ. ರೇವಣ್ಣಾಗಿ ಉತ್ತಮ ದರವನ್ನು ಬಡ್ಡಿ ಕೊಡಲ್ಪಡುವುದಲ್ಲದೆ ಸಾಲಗಳನ್ನು ಕಡಿಮೆ ಬಡ್ಡಿಯಿಂದಲೂ ಬೇಕಾದ ಇತರ ಸಕಲ ಸಲಕರಣೆಗಳನ್ನೂ ಜನರಿಗೆ ಒದಗಿಸಿಕೊಡುವುದೇ ನಮ್ಮ ಕಾರ್ಯಕ್ರಮ.
ದಿ ವಿಜಯಾ ಬೇಂಕ್, ಲಿಮಿಟೆಡ್.
ಹೆಡ್ ಆಫೀಸು: ಮಂಗಳೂರು.
ಶಾಖೆಗಳು: ಬೈಂದೂರು, ಕುಂದಾಪುರ, ಬ್ರಹ್ಮಾವರ, ಉಡುಪಿ, ಕಾಪು, ಕಾರ್ಕಳ, ಸಿಟಿ-ಮಂಗಳೂರು, ಕಾಸರಗೋಡು, ಕಾಞಂಗಾಡು, ಪುತ್ತೂರು, ಮಡಿಕೇರಿ ಮತ್ತು ಮುಂಬೈ.

'ಗುಂಪಿನೊಡನೆ ಗೋವಿಂದಾ' ಹಾಕಿದರೆ—

ಭಾರತಾಂಬೆಯ ರುಂಡ-ಮುಂಡ-ಕೈಕಾಲು ಪ್ರತ್ಯೇಕ!

('ದುರ್ಬೀನುಧಾರಿ'ಯಿಂದ)

ಬ್ರಿಟಿಷ್ ಕೇಬಿನೆಟ್ಟಿನ ಕೆಲವು ಸದಸ್ಯರು ಭಾರತಕ್ಕೆ ಬಂದು ಇಲ್ಲಿಯ ಪ್ರಮುಖ ರಾಜಕೀಯ ಪಕ್ಷಗಳ ನಾಯಕರೊಡನೆ ಸಮಾಲೋಚನೆ ನಡೆಸಿ ಹೋದ ಮೇಲೆ ಭಾರತದ ಭವಿಷ್ಯತ್ತಿನ ಬಗ್ಗೆ ಒಂದು ಯೋಜನೆಯನ್ನು ಪ್ರಕಟಿಸಿದರು. ಅದರ ಪ್ರಕಾರ ಭಾರತದ ಭವಿಷ್ಯತ್ತಿನ ಸಂವಿಧಾನವನ್ನು ರಚಿಸಲು ಒಂದು ಸಂವಿಧಾನ ಸಭೆಯನ್ನು ಏರ್ಪಡಿಸಲಾಗಿದೆ. ಆ ಸಭೆಯಲ್ಲಿ ಭಾರತದ ಪ್ರಾಂತ್ಯಗಳ ಮತ್ತು ಸಂಸ್ಥಾನಗಳ ಪ್ರತಿನಿಧಿಗಳು ಇರುತ್ತಾರೆ. ಈ ಸಭೆಯ ಸದಸ್ಯರ ಸಂಖ್ಯೆ ಸುಮಾರು 389 ಇರುತ್ತದೆ. ಅವರಲ್ಲಿ ಸುಮಾರು 292 ಮಂದಿ ಪ್ರಾಂತ್ಯಗಳ ಪ್ರತಿನಿಧಿಗಳು, ಸುಮಾರು 93 ಮಂದಿ ಸಂಸ್ಥಾನಗಳ ಪ್ರತಿನಿಧಿಗಳು ಇರುತ್ತಾರೆ. ಈ ಸಂವಿಧಾನ ಸಭೆಯ ಸದಸ್ಯರನ್ನು ಆಯಾ ಪ್ರಾಂತ್ಯಗಳ ಶಾಸನ ಸಭೆಗಳ ಸದಸ್ಯರು ಆರಿಸಿ ಕಳುಹಿಸುತ್ತಾರೆ. ಸಂಸ್ಥಾನಗಳ ಪ್ರತಿನಿಧಿಗಳನ್ನು ಆಯಾ ಸಂಸ್ಥಾನಗಳ ಪ್ರಭುಗಳು ನೇಮಿಸುತ್ತಾರೆ. ಈ ಸಂವಿಧಾನ ಸಭೆಯ ಮೊದಲ ಅಧಿವೇಶನ ಡಿಸೆಂಬರ್ ೯ನೇ ತಾರೀಖು ದಿಲ್ಲಿಯಲ್ಲಿ ಸೇರಲಿದೆ.

ಈ ಸಂವಿಧಾನ ಸಭೆಯ ಸದಸ್ಯರು ಭಾರತದ ಭವಿಷ್ಯತ್ತಿನ ಸಂವಿಧಾನವನ್ನು ರಚಿಸಲು ಸೇರುವ ಮೊದಲೇ ಅದರ ಕೆಲಸ ಕಾರ್ಯಗಳ ಬಗ್ಗೆ ಕೆಲವು ಮೂಲ ಸೂತ್ರಗಳನ್ನು ಬ್ರಿಟಿಷ್ ಕೇಬಿನೆಟ್ಟಿನ ಸದಸ್ಯರು ಏರ್ಪಡಿಸಿದ್ದಾರೆ. ಅವುಗಳ ಪ್ರಕಾರ ಸಂವಿಧಾನ ಸಭೆಯ ಸದಸ್ಯರು ಮೊದಲು ಮೂರು ಗುಂಪುಗಳಾಗಿ ಸೇರಿ ಪ್ರತ್ಯೇಕವಾಗಿ ಚರ್ಚೆ ನಡೆಸಿ ಆಯಾ ಗುಂಪಿಗೆ ಸೇರಿದ ಪ್ರಾಂತ್ಯಗಳ ಸಂವಿಧಾನವನ್ನು ರಚಿಸಬೇಕು. ಆ ಮೂರು ಗುಂಪುಗಳಲ್ಲಿ ಒಂದು ಗುಂಪು ಹಿಂದೂ ಪ್ರಾಂತ್ಯಗಳದು, ಇನ್ನೊಂದು ಮುಸ್ಲಿಂ ಪ್ರಾಂತ್ಯಗಳದು, ಮತ್ತೊಂದು ಬಂಗಾಳ ಮತ್ತು ಅಸ್ಸಾಮ್ ಪ್ರಾಂತ್ಯಗಳದು. ಈ ಮೂರು ಗುಂಪುಗಳ ಸಂವಿಧಾನಗಳನ್ನು ರಚಿಸಿದ ಮೇಲೆ ಆ ಮೂರು ಗುಂಪುಗಳ ಪ್ರತಿನಿಧಿಗಳು ಒಟ್ಟಾಗಿ ಸೇರಿ ಕೇಂದ್ರ ಸರಕಾರದ ಸಂವಿಧಾನವನ್ನು ರಚಿಸಬೇಕು. ಕೇಂದ್ರ ಸರಕಾರದ ಸಂವಿಧಾನ ರಚನೆಯಲ್ಲಿ ಸಂಸ್ಥಾನಗಳ ಪ್ರತಿನಿಧಿಗಳು ಭಾಗವಹಿಸಬಹುದು. ಆದರೆ ಪ್ರಾಂತ್ಯಗಳ ಸಂವಿಧಾನ ರಚನೆಯಲ್ಲಿ ಸಂಸ್ಥಾನಗಳ ಪ್ರತಿನಿಧಿಗಳು ಭಾಗವಹಿಸುವಂತಿಲ್ಲ.

ಈ ಯೋಜನೆಯ ಪ್ರಕಾರ ಭಾರತದ ಪ್ರಾಂತ್ಯಗಳು ಮೂರು ಗುಂಪುಗಳಾಗಿ ಸೇರಿ ಮೂರು ಸಂವಿಧಾನಗಳನ್ನು ರಚಿಸಿದ ಮೇಲೆ ಆ ಮೂರು ಗುಂಪುಗಳ ಪ್ರತಿನಿಧಿಗಳು ಒಟ್ಟಾಗಿ ಸೇರಿ ಕೇಂದ್ರ ಸರಕಾರದ ಸಂವಿಧಾನವನ್ನು ರಚಿಸಬೇಕು. ಆ ಕೇಂದ್ರ ಸರಕಾರದ ಸಂವಿಧಾನ ರಚನೆಯಲ್ಲಿ ಸಂಸ್ಥಾನಗಳ ಪ್ರತಿನಿಧಿಗಳು ಭಾಗವಹಿಸಬಹುದು. ಆದರೆ ಪ್ರಾಂತ್ಯಗಳ ಸಂವಿಧಾನ ರಚನೆಯಲ್ಲಿ ಸಂಸ್ಥಾನಗಳ ಪ್ರತಿನಿಧಿಗಳು ಭಾಗವಹಿಸುವಂತಿಲ್ಲ.

ಬ್ರಿಟಿಷ್ ಕೇಬಿನೆಟ್ಟಿನ ಸದಸ್ಯರು ಏರ್ಪಡಿಸಿದ ಈ ಯೋಜನೆಯ ಪ್ರಕಾರ ಭಾರತದ ಪ್ರಾಂತ್ಯಗಳು ಮೂರು ಗುಂಪುಗಳಾಗಿ ಸೇರಿ ಮೂರು ಸಂವಿಧಾನಗಳನ್ನು ರಚಿಸಿದ ಮೇಲೆ ಆ ಮೂರು ಗುಂಪುಗಳ ಪ್ರತಿನಿಧಿಗಳು ಒಟ್ಟಾಗಿ ಸೇರಿ ಕೇಂದ್ರ ಸರಕಾರದ ಸಂವಿಧಾನವನ್ನು ರಚಿಸಬೇಕು. ಆ ಕೇಂದ್ರ ಸರಕಾರದ ಸಂವಿಧಾನ ರಚನೆಯಲ್ಲಿ ಸಂಸ್ಥಾನಗಳ ಪ್ರತಿನಿಧಿಗಳು ಭಾಗವಹಿಸಬಹುದು. ಆದರೆ ಪ್ರಾಂತ್ಯಗಳ ಸಂವಿಧಾನ ರಚನೆಯಲ್ಲಿ ಸಂಸ್ಥಾನಗಳ ಪ್ರತಿನಿಧಿಗಳು ಭಾಗವಹಿಸುವಂತಿಲ್ಲ.

ಬ್ರಿಟಿಷ್ ಕೇಬಿನೆಟ್ಟಿನ ಯೋಜನೆಯಂತೆ, ಪ್ರಾಂತಿಕ ಗುಂಪುಗಳಲ್ಲಿ ಸಂಬಂಧಪಟ್ಟ ಪ್ರತಿಯೊಂದು ಪ್ರಾಂತ್ಯವೂ ಪ್ರಥಮತಃ ಕಡ್ಡಾಯವಾಗಿ ಸೇರಲೇ ಬೇಕು; ಹಾಗೆ ಗುಂಪುವಾರಾಗಿ ಕುಳಿತಲ್ಲಿ ಪ್ರಾಂತ್ಯಗಳು ತಾವೊಂದು ಪ್ರಾಂತ್ಯದವರೆಂಬುದನ್ನು ಮರೆತು ಆ ಗುಂಪಿನವರೆಂದು ಭಾವಿಸಿ ಮತಕೊಡಬೇಕು. ಅಲ್ಲಿ ಪ್ರತಿಯೊಬ್ಬ ಸದಸ್ಯನ ಮತವನ್ನು ಗಣಿಸಲಾಗುತ್ತದಲ್ಲದೆ ಪ್ರತಿಯೊಂದು ಪ್ರಾಂತ್ಯದ ಮತ ಕೇಳುವದಿಲ್ಲ; ಈ ವಿಧಾನದಿಂದ ದೊರೆವ ಬಹುಮತಾನುಸಾರವಾಗಿಯೇ ಗುಂಪಿನ ಪ್ರತಿಯೊಂದು ಪ್ರಾಂತ್ಯದ ಪ್ರಾಂತಿಕ ರಾಜ್ಯ ಘಟನೆ ತಯಾರಿಸಲ್ಪಡುವದು. ಹಾಗೆ ರಚಿಸಲ್ಪಡುವ ಆ ಪ್ರಾಂತಿಕ ರಾಜ್ಯ ಶಾಸನಗಳನ್ನಯ ಕೊನೆಗೆ ಪ್ರಾಂತಿಕ ಎಸೆಂಬ್ಲಿ ಚುನಾವಣೆಗಳು ನಡೆಯುತ್ತವಷ್ಟೆ? ಆ ಚುನಾವಣೆಯಿಂದಾರಿಸಲ್ಪಡುವ ಯಾವುದಾದರೊಂದು ಪ್ರಾಂತ್ಯದ ಎಸೆಂಬ್ಲಿಯು ತಾನು ಸೇರಿರುವ ಗುಂಪಿನಿಂದ ಹೊರಗೆ ಹೋಗಬೇಕು ಎಂದು ನಿರ್ಧರಿಸಿದರೆ ಹಾಗೆ ಹೊರಗಾಗುವ ಹಕ್ಕು ಪ್ರಾಂತ್ಯಕ್ಕಿದೆ. ನೋಡಿದ ಮೇಲೆ ನೋಡಿದಾಗ ವಿಶೇಷ ಅಪಾಯವೇನೂ ಇದರಲ್ಲಿ ಕಾಣುವದಿಲ್ಲ; ಆದರೆ ಕಾರ್ಯರೂಪಕ್ಕೆ ಬರುತ್ತಾ ಹೋಗುವಾಗ ಎಂತಹ ಅನಾಹುತ ನಿರ್ಮಾಣವಾಗಲಿದೆ ಎಂಬುದನ್ನು ಈಗಲೇ ಊಹಿಸಬಹುದು—ಊಹಿಸೋಣ.

ಇಡೀ ಘಟನಾ ಸಮಿತಿ

ಘಟನಾ ಸಮಿತಿಯಲ್ಲಿ ಎಲ್ಲಾ ಬ್ರಿಟಿಷ್ ಭಾರತದ ಪ್ರಾಂತ್ಯಗಳ, ಮತ್ತು ಕೊನೆಯ ಸಭೆಗಳಿಗೆ ಹಾಜರಾಗಲಿರುವ ಆ ಶ್ರಿತ ರಾಜ್ಯಗಳ, ಪ್ರತಿನಿಧಿಗಳ ಒಟ್ಟು ಸಂಖ್ಯೆಯೆಂದರೆ 391. ಜನ ಸಂಖ್ಯೆಯ ಮಿಲಿಯ ಮಂದಿಗೊಬ್ಬನಂತೆ ಆರಿಸಲ್ಪಟ್ಟನಂದದು. ಈ ಲೆಕ್ಕ ಪ್ರಕಾರ ಭಾರತದಲ್ಲೀಗ 39 ಕೋಟಿ 10 ಲಕ್ಷ ಜನವಿದ್ದಾರೆಂದಾಯಿತು. ಪ್ರತಿನಿಧಿಗಳು ಪ್ರಾಮಿಸ್ಸರಿಲ್ಲರೆ ಮತದಾನದಿಂದಾರಿಸಲ್ಪಡುತ್ತಿದ್ದರೆ ಈ ರಾಜ್ಯಾಂಗ ರಚನಾ ಸಭೆ ನಿಜಕ್ಕೂ ಜನಪ್ರತಿನಿಧಿ ಸಂಸ್ಥೆಯಾಗುತ್ತಿತ್ತು; ಆ ಸುಯೋಗ ಭಾರತಕ್ಕೂದಗಿಲ್ಲ. ಬದಲಿಗೆ ಬ್ರಿಟಿಷ್ ಹಿಂದುಸ್ಥಾನದ ಈ ಪ್ರತಿನಿಧಿಗಳನ್ನು ಪ್ರಾಂತಿಕ ಎಸೆಂಬ್ಲಿಗಳೇ ಚುನಾಯಿಸಿವೆ. ಆಶ್ರಿತ ರಾಜ್ಯಗಳ ಪಾಲಿಗೆ ಆ ಭಾಗ್ಯ ಕೂಡಾ ಇಲ್ಲ. ಬಹುಶಃ ರಾಜರೇ ತಮ್ಮ ಸಂಸ್ಥಾನದ ಪ್ರತಿನಿಧಿಗಳನ್ನಾರಿಸುವಂತಾಗುವದು. ಅದು ಹಾಗಿರಲಿ. ಈ ಜುಮ್ಲಾ 391 ಪ್ರತಿನಿಧಿಗಳ ಪೈಕಿ 93 ಆಶ್ರಿತ ರಾಜ್ಯಗಳ ಪ್ರತಿನಿಧಿಗಳು. ಉಳಿದ 298 ಸ್ಥಾನಗಳಲ್ಲಿ ಸಾಮಾನ್ಯರ ಪಾಲಿಗೆ 216 ಸ್ಥಾನಗಳು ದೊರೆವೆ; ಈ ಸಾಮಾನ್ಯರಿಂದವರಲ್ಲಿ ಮುಸ್ಲಿಂ ಮತ್ತು ಸಿಖ್ಖರನ್ನು ಬಿಟ್ಟು ಉಳಿದ ಎಲ್ಲರೂ ಸೇರುತ್ತಾರೆ. ಅಂತೂ ಮುಖ್ಯ ಭಾಗ ಹಿಂದುಗಳೆನ್ನಿ. ಉಳಿದ 78 ಸ್ಥಾನಗಳು ಮುಸಲ್ಮಾನರಿಗೆ; 4 ಸ್ಥಾನಗಳು ಸಿಖ್ಖರಿಗೆ. ಜನಸಂಖ್ಯೆಯ ನ್ಯಾಧರಿಸಿಯೇ ಈ ಪ್ರಾತಿನಿಧ್ಯದ ಪರಿಮಾಣವಾದ್ದರಿಂದ ಇಲ್ಲಿ ಹೆಚ್ಚು-ಕಡಿಮೆಯಾಗಿತು ಎಂಬ ಪ್ರಶ್ನೆಗವಕಾಶವಿಲ್ಲ.

ಯಾರಿಗೆಷ್ಟು?

ಈಗ ಘಟನಾ ಸಮಿತಿಯಲ್ಲಿ ಯಾವ ಪಕ್ಷಗಳು ಎಷ್ಟೆಷ್ಟು ಸ್ಥಾನ ಸಂಪಾದಿಸಿವೆ, ಎಂಬ ದನ್ನು ನೋಡೋಣ. ಸಾಮಾನ್ಯರ 216 ಸ್ಥಾನಗಳ ಪೈಕೆ 207 ಸ್ಥಾನಗಳು ಕಾಂಗ್ರೆಸಿಗೇನೇ ದೊರೆತಿವೆ. ಉಳಿದ ೨ ಸ್ಥಾನಗಳಿಗೆ ಡಾ. ಅಂಬೇಡ್ಕರರೇ ಮೊದಲಾದ ಕಾಂಗ್ರೆಸೇತರರಾರಿಸಿ ಬಂದಿದ್ದಾರೆ. ಮುಸಲ್ಮಾನರ 78 ಸ್ಥಾನಗಳ ಪೈಕೆ 73 ಸ್ಥಾನಗಳು ಮುಸ್ಲಿಂ ಲೀಗಿಗೇನೇ ದೊರೆತಿವೆ. ಉಳಿದ 5 ಸ್ಥಾನಗಳಿಗೆ, ಅಜಾದ್, ಗಫರ್‌ಖಾನ್, ಕಿಡ್ವಾಯಿ-ಈ ಮೂವರು ಕಾಂಗ್ರೆಸಿಗರು, ಫಜಲುಲ್ ಹಕ್ (ಈಗ ಇವರೂ ಲೀಗ್ ಸೇರಿದ್ದಾರೆ) ಮತ್ತೋರ್ವ ಯೂನಿಯನಿಸ್ಟ್ ಪಕ್ಷದ ವರಾರಿಸಲ್ಪಟ್ಟಿದ್ದಾರೆ. ಸಿಖ್ಖರ 4 ಸ್ಥಾನಗಳೂ ಸಿಖ್ ಪಾಂಥಿಕ್ ಬೋರ್ಡಿಗೇನೇ ದೊರೆತಿವೆ. ಆಶ್ರಿತ ರಾಜ್ಯಗಳ ಪಾಲಿನ 93ಕ್ಕೆ ಯಾವ ಬಿಲ್ಲೆಯೂ ಬೇಡ. ಮಿಕ್ಕೆಲ್ಲರೂ ಒಂದು ಪಕ್ಷವೆಂದಿಟ್ಟುಕೊಂಡರೂ, ಕಾಂಗ್ರೆಸಿಗೆರಾಗಿ ಆರಿಸಲ್ಪಟ್ಟ ಸದಸ್ಯರೇ 210 ಮಂದಿ (207 ಸಾಮಾನ್ಯ, 3 ಮುಸ್ಲಿಂ) ಇದ್ದಾರೆ. 391ರ ಸಭೆಯಲ್ಲಿ ಇವರದೇ ಬಹುಮತ. ಇವರ ನಿರ್ಣಯಗಳಿಗೇನೇ ಮಂಜೂರಾತಿ—ಎಂಬುದು ಸ್ಪಷ್ಟ.

ಆದರೆ ನಾವಿಲ್ಲಿ ಬಿಡಿಸುತ್ತಿರುವ ಚಿತ್ರವು 'ಬ್ರಿಟಿಷ್ ಹೇಳಿಕೆ'ಯೆಂಬ ಹೆಲಗಿಯ ಮೇಲಿನದು. ಇಲ್ಲಿ ಈ 391 ಮಂದಿ ಸೇರುವ ಮೂಲ ಘಟನಾ ಸಮಿತಿಗಿರುವ ಅಧಿಕಾರ ಕಡಿಮೆ. ಕೇಂದ್ರ ಸರಕಾರ ಮತ್ತು ಆಶ್ರಿತ ರಾಜ್ಯಗಳೊಳಗೆ ಎಂತಹ ಸಂಬಂಧವಿರಬೇಕೆಂಬುದನ್ನು ನಿರ್ಧರಿಸುವದು—ಕೇಂದ್ರಕ್ಕೆ ಬಿಡಲ್ಪಟ್ಟಿರುವ ವಿದೇಶ ಸಂಬಂಧ, ದೇಶ ರಕ್ಷಣೆ, ಸಂಚಾರ ಸಂಬಂಧ ವಿಷಯಗಳು ಮತ್ತು ಈ ಖಾತೆಗಳಿಗೆ ಬೇಕಾಗುವ ಹಣಕಾಸಿನ ಅಧಿಕಾರ—ಹಾಗೂ ಅಖಿಲ ರಾಷ್ಟ್ರೀಯ ಸ್ವರೂಪದ ಸಣ್ಣಾಪುಟ್ಟ ಇತರ ವಿಷಯಗಳು—ಇಷ್ಟು ಮಾತ್ರ. ಇವಿಷ್ಟು ಸ್ವತಂತ್ರ ರಾಜ್ಯಭಾರವೊಂದಕ್ಕೆ ಇರುವ ಅಧಿಕಾರಗಳ 10ರಲ್ಲೊಂದೆಂಶವೆನ್ನಬಹುದು. ಉಳಿದ 9 ಅಂಶವು ಪ್ರಾಂತಿಕ ಸರಕಾರಗಳಿಗೆ ಸೇರುತ್ತದೆ.

ಈ ಪ್ರಾಂತಿಕಾಧಿಕಾರವನ್ನು ರೂಪಿಸುವ ಹಕ್ಕು ಆಯಾಯಾ ಪ್ರಾಂತ್ಯಗಳಿಗೇನೇ ಇರುತ್ತಿದ್ದಂ ಆತ್ಯಧಿಗೆಡೆಯಿಲ್ಲ; ಬ್ರಿಟಿಷ್ ಹೇಳಿಕೆಯನ್ವಯ ಆ ಪ್ರಾಂತಿಕ ನಿರ್ಧಾರದ ಹಕ್ಕು ಆಯಾಯಾ ಪ್ರಾಂತ್ಯಕ್ಕಿರದೆ, ಆ ಪ್ರಾಂತ್ಯವನ್ನು ಸೇರಿಸಿರುವ ಪ್ರಾಂತಿಕ ಗುಂಪಿಗೆ ಹೋಗಿದೆ. ಪ್ರಾಂತ್ಯಗಳ ಪ್ರಾಂತಿಕ ರಾಜ್ಯಾಂಗ ರಚನೆ ಮಾಡುವ ಅಧಿಕಾರವು ಪ್ರತ್ಯಪ್ರತ್ಯೇಕವಾಗಿ ಎ. ಬಿ. ಸಿ. ಎಂಬ ಮೂರು ಗುಂಪುಗಳ ಕೈಗೆ ಬಂದಿದೆ.

ಇದರಿಂದಾಗಿ ಮುಕ್ಕಾಲಂಶ ಪಾಕಿಸ್ತಾನ ದೊರಿತಂತಾಗುವದು. ಪ್ರಥಮತಃ ಹತ್ತಿರಲ್ಲೊಂಭತ್ತಂಶದಷ್ಟಿರುವ ಅಧಿಕಾರಗಳ ಮಟ್ಟಿಗೆ ಹಿಂದುಸ್ತಾನ್-ಪಾಕಿಸ್ತಾನ್ (ಆ ಪಾಕಿಸ್ತಾನ್ ಭಾಗಕ್ಕೆ ಅಸ್ಸಾಮಿನಂತಹ ಹಿಂದುಸ್ತಾನ್ ಭಾಗವನ್ನೂ ಸೇರಿಸಿ) ಎಂದು ವಿಂಗಡಿಸಿ, ಆಲ್ಲಿಯೇ ಆ ಪಾಕಿಸ್ತಾನವನ್ನೂ ವಿಂಗಡಿಸಿಟ್ಟಿದ್ದಾರೆ. ಇದೇ ಮೂರು ಗುಂಪು ಹೀಗೆ ಮೂರು ಗುಂಪುಗಳಾಗದ್ದರಿಂದ ಮುಕ್ಕಾಲಂಶ ಪಾಕಿಸ್ತಾನವಾದಂತಾಯಿತು. ಅದನ್ನೇ ಹಿಂದೂ ಗುಂಪು, ಮುಸ್ಲಿಂ ಗುಂಪು, ಎಂದು ಎರಡೇ ಪಾಲು ಮಾಡುತಿದ್ದರೆ ಆಗ 10ರ ಒಲ್ಲೊಂಭತ್ತಂಶ ಪಾಕಿಸ್ತಾನವಾದಂತಾಗುತಿತ್ತು.

ಹೀಗೆ ಮೂರು ಪಾಲಾಗುವದರಿಂದ ಏನಾಗುವದು ಗೊತ್ತೆ? ಇದು ವರೆಗೆ 'ಭಾರತಾಂಬೆ'ಯೆನ್ನುತ್ತಿದ್ದ ನಮ್ಮೀ ಮಾತೃ ಭೂಮಿಯನ್ನು ಇನ್ನು ಮುಂದೆ 'ಮೂರು ತುಂಡಾಂಬೆ' ಎಂದರಾಯಿತು. ದೊಡ್ಡ ಕಂಬಳ ಗದ್ದೆಯಾಗಿದ್ದ ಭಾರತದ ನಡುವೆ ಮೂರು ಕಟ್ಟ ಹುಡ ಹಾಕಿ ಪ್ರತ್ಯೇಕಿಸಿದಂತಾಯಿತು. ಕೇಂದ್ರವೆಂದರೆ ಆ ಮೂರು ಕಟ್ಟ ಹೊಣೆಗಳು ಒಂದೆಡೆ ಸೇರುವ ಒಂದು 'ಜಿಡ್ಡ' ಮಾತ್ರ. ಇದು ವರೆಗೆ ಒಂದೇ ಭವನವಾಗಿ 'ಜನತಾ ಮಂದಿರ' ವನ್ನಿಸಿದ್ದ ಕಟ್ಟಡಕ್ಕೆ ಮಧ್ಯ ಗೋಡೆಗಳನ್ನೆಬ್ಬಿಸಿ ಮೂರು ಕೋಣೆಗಳನ್ನಾಗಿ ವಿಂಗಡಿಸಿ ಬಾಡಿಗೆಗೆ ಕೊಟ್ಟಂತಾಯಿತು; ಕೇಂದ್ರವೆಂದರೆ ಮೂರು ಕೋಣೆಗಳಿಗೂ ಒಂದೇ ಆಗಿರುವ ಮಾಡು ಮಾತ್ರ. ಸರ್ವನಾಶ-ಮಹದಪಾಯ—ಒಗ್ಗಟ್ಟು, ರಾಷ್ಟ್ರೀಯತೆ, ಸಂಸ್ಕೃತಿಗಳ ಚಲ್ಲಾಪಿಲ್ಲಿ—ಎನ್ನುವದು ಈ ವ್ಯವಸ್ಥೆಗೇನೇ!

ಕೇಂದ್ರಕ್ಕೆ ಬಿಡಲ್ಪಟ್ಟ ಕೆಲವೇ ವಿಷಯಗಳ ಮಟ್ಟಿಗೆ ಎಲ್ಲರೂ ಒಟ್ಟಿಗೆ ಕುಳಿತುಕೊಳ್ಳುವ ಎಡೆಯೆದೆಗಳ ಮಹಾ ಸಭೆಗಳನ್ನು ಬಿಟ್ಟರೆ, ಉಳಿದ ಎಲ್ಲಾ ಅಧಿಕಾರಗಳ ರಾಜ್ಯಾಂಗ ವ್ಯವಸ್ಥೆಮಾಡುವ ಪ್ರಾಂತಿಕಾಧಿಕಾರವುಳ್ಳ ಗುಂಪುಗಳಲ್ಲಿ ಘಟನಾ ಸಮಿತಿಯ ಪ್ರತಿನಿಧಿಗಳು ಪ್ರತ್ಯೇಕ ಪ್ರತ್ಯೇಕವಾಗಿ ಕುಳಿತುಕೊಳ್ಳುವಾಗ ಹೇಗಾಗುತ್ತದೆ ಗೊತ್ತೆ? ಕಾಂಗ್ರೆಸಿನ ಬಹುಮತವೆಲ್ಲಾ 'ಎ' ಗುಂಪೊಂದರಲ್ಲೇ ಸೇರಿ ಹೋಗುತ್ತದೆ; ಉಳಿದ 'ಬಿ' ಮತ್ತು 'ಸಿ' ಗುಂಪುಗಳಲ್ಲಿ ಲೀಗಿನ ಬಹುಮತವೇ ಆಗುತ್ತದೆ. ಮೊದಲಿನ ಗುಂಪಿಗೆ ಸೇರಿದ ಪ್ರಾಂತ್ಯಗಳಲ್ಲಿ ಕಾಂಗ್ರೆಸ್ ಬಯಕೆಯ ರಾಜ್ಯಾಂಗ ರಚನೆಯಾಗಬಹುದು; ಹಾಗಾಗಬೇಕೆಂದೇ ಆ ಗುಂಪಿನ ಎಲ್ಲಾ ಪ್ರಾಂತ್ಯಗಳನ್ನು ತ್ರಿವೆ. ಆದರೆ ಎರಡನೆ ಗುಂಪುಗಳಲ್ಲಿ ಬಹುಮತವುಳ್ಳ ಲೀಗ್ ಪ್ರತಿನಿಧಿಗಳ ಬಯಕೆಯ ರಾಜ್ಯಭಾರವಾಗುವದು ಖೀಡ ವೆಂದು ಗಡಿನಾಡು ಪ್ರಾಂತ್ಯ ಹೇಳುತ್ತದೆ; ಪಂಜಾಬ್ ಪ್ರಾಂತ್ಯದ 12ಮಿಲಿಯ ಜನರು-ಅಥವಾ ಹಲವು ಜಿಲ್ಲೆಗಳನ್ನೊಳಗೊಂಡ ಪ್ರಾಮುಖ್ಯ ಭಾಗ-ಕೂಡಾ ಹೇಳುತ್ತವೆ.

(೧೫ನೇ ಪುಟ ನೋಡಿರಿ)

CANARA BANK LIMITED
ಕೆನರಾ ಬ್ಯಾಂಕ್ ಲಿಮಿಟೆಡ್
(ಸ್ಥಾಪನೆ 1906)
ಹೆಡ್ ಆಫೀಸು:— ಬಾವಟಿಗುಡ್ಡೆ, ಮಂಗಳೂರು.
ಜನರಲ್ ಮೆನೇಜರರ ಆಫೀಸು:—ಎಸ್ಪೊಲೊ ಸ್ಟ್ರೀಟ್, ಫೋರ್ಟ್, ಬೊಂಬಾಯಿ.
ಶಾಖೆಗಳು:
ಬೊಂಬಾಯಿ ಅಧಿಪತ್ಯ
ಬೆಳಗಾಂವ್
ಧಾರವಾಡ
ಹುಬ್ಬಳ್ಳಿ
ಶೋಲಾಪುರ
ಕಲ್ಯಾಣ
ಬೊಂಬಾಯಿ ಶಹರಿಪಲ್ಲಿ
ಫೋರ್ಟ್
ಮಾಂಡ್ವಿ
ಗಿರಗಾಂವ್
ಕಾಲಬಾದೇವಿ
ಮೈಸೂರು ಸಂಸ್ಥಾನ
ಅರಸಿಕೆರೆ
ಬೆಂಗಳೂರು
ಚಿಕ್ಕಮಗಳೂರು
ಧಾರವಾಡ
ಶಿವಮೊಗ್ಗಾ
ಕೊಚ್ಚಿ ಸಂಸ್ಥಾನ
ಕೊಚ್ಚಿ
ಎರ್ನಾಕುಲಮ್
ತಿರುವಾಂಕೂರು ಸಂಸ್ಥಾನ
ಆಲಪ್ಪಿ
ಕ್ವೆಲೋನ್
ಹೈದರಾಬಾದು ಸಂಸ್ಥಾನ
ಸಿಕಂದರಾಬಾದು
ಮದ್ರಾಸು ಅಧಿಪತ್ಯ
ಬಂಟ್ವಾಳ
ಕಲ್ಲಿಕೋಟೆ
ಕಣ್ಣಾನ್ನೂರು
ಕೊಯಮುತ್ತೂರು
ಕುಂದಾಪುರ
ಇರೋಡ್
ಗಂಗೊಳ್ಳಿ
ಕಾರ್ಕಳ
ಕಾಸರಗೋಡು
ಮದರಾಸು
ಮಧುರೆ
ಮಂಗಳೂರು ಬಂದರು
ಮಂಗಳೂರು ಸಿಟಿ
ಮೂಲ್ಕಿ
ಪಯ್ಯನ್ನೂರು
ಪುತ್ತೂರು
ಉಡುಪಿ
ಮೂಲಧನ ೨೮ ಲಕ್ಷ.] [ಕ್ಷೇಮನಿಧಿ ೧೧ ಲಕ್ಷ.

ಘಟನಾ ಸಮಿತಿ ಕಾರ್ಯಕಲಾಪಗಳು

'ಸಾರ್ವಭೌಮಾಧಿಕಾರೀ ಸ್ವತಂತ್ರ ರಿಪಬ್ಲಿಕ್ ಸರಕಾರ'ವೇ ಗುರಿ.

ಭಾರತದ ಚರಿತ್ರೆಯಲ್ಲಿ ಇದೀಗ ಮೊದಲ ಬಾರಿ, ಸ್ವತಂತ್ರ ಭಾರತದ ರಾಜ್ಯಾಂಗ ರಚನೆ ಮಾಡುವ ಘಟನಾ ಸಮಿತಿಯ ಸಭೆಯು-ಭೂತಕಾಲ, ವರ್ತಮಾನಕಾಲ, ಭವಿಷತ್ಕಾಲಗಳ ಶಂಕೆ ಸಂದೇಹಗಳಿಂದ ಕೂಡಿದ್ದರೂ-ನಿಶ್ಚಿತ ದಿನವಾದ ಇದೇ ದ ಶಂಬರ್ ತಾ. 9ನೇ ಪೂರ್ವಾಹ್ನ 11 ಘಂಟೆಗೆ ಸರಿಯಾಗಿ ನವಢಿಲ್ಲಿಯ ಸಮಿತಿ ಭವನದಲ್ಲಾರಂಭವಾಯಿತು. ಮೊದಲು ಕೌನ್ಸಿಲ್ ಚೇಂಬರಿನ ಲೈಬ್ರೆರಿಯಾಗಿದ್ದ ವಿಶಾಲ ಭವನವದು. ಸುಮಾರು 400 ಮಂದಿ ಸದಸ್ಯರಿ ಆಸನಗಳು, ಅಧ್ಯಕ್ಷ ಗಾದಿ, ಪ್ರೇಕ್ಷಕರ ಮತ್ತು ಪತ್ರಿಕಾಪ್ರತಿನಿಧಿಗಳ ಗೆಲರಿ, ಭಾಷಣ ವೇದಿಕೆ, ಸಭಾನಿರ್ಣಾಯಕರ ಸ್ಥಳ-ಇತ್ಯಾದಿ ವ್ಯವಸ್ಥೆಗಳಿಂದ ರಾಜ್ಯಾಂಗ ರಚನಾ ಸಭೆಯ ಘನತೆಗೆ ತಕ್ಕಂತೆ ಆದು ಭವ್ಯ ಸಭಾಭವನವಾಗಿ ಮಾರ್ಪಟ್ಟಿದ್ದಿತು. ಸಭಾ ರಂಗದಲ್ಲಿ ಪ್ರಾಂತ್ಯವಾರಾಗಿ ಆಸನಗಳನ್ನು ಪಂಗ್ತೀಕರಿಸಿದ್ದರು.

ಸಭಾಸಂಭ್ರಮ

ಕೊನೆಯ ಸಭೆಗಳಿಗೆ ಹಾಜರಾಗಬೇಕಾದ ಆತ್ರಿತ ರಾಜ್ಯಗಳ ಪ್ರತಿನಿಧಿಗಳನ್ನು ಬಿಟ್ಟು ಬ್ರಿಟಿಷ್ ಭಾರತದ ಸುಮಾರು 298 ಮಂದಿ ಕೂಡಿ ಬರಬೇಕಾಗಿತ್ತು, ಸದ್ಯ ತಮಗೆ ತಾವೇ ಬಹಿಷ್ಕಾರ ಹಾಕಿಕೊಂಡಿರುವ ಸುಮಾರು 94 ಮಂದಿ ಲೀಗ್ ಸದಸ್ಯರು ಹಾಜರಿರಲಿಲ್ಲ. ಉಳಿದವರಲ್ಲಿ 205 ಮಂದಿ ಪ್ರಥಮ ದಿನದ ಸಭೆಗೇನೇ ಹಾಜರಿದ್ದರು. ಸುಶೋಭಿತ ಅಧ್ಯಕ್ಷ ಪೀಠಾಭಿಮುಖವಾದ ಸಾಲಾಸನಗಳಲ್ಲಿ ಪ್ರಾಂತ್ಯಾನುಗುಣವಾದ ವಿವಿಧ ರೀತಿಯ ಪೋಷಾಕುಗಳಿಂದ ರಾಜಸುತ್ತಿದ್ದ ಆ ಸದಸ್ಯ ಮಂಡಲಿಯ ವೈಶ್ಯವು ಅತ್ಯಂತ ಪ್ರೇಕ್ಷಣೀಯವಿತ್ತು. ಒಂಭತ್ತು ಮಂದಿ ಮಹಿಳಾ ಸದಸ್ಯೆಯರಿದ್ದರು. ಪ್ರಥಮ ಪಂಗ್ತಿಯಲ್ಲಿ ನೆಹರು, ಪಟೇಲ್, ಕೃಪಲಾನಿ, ಪ್ರಸಾದ್, ಪಂತ್, ಸರೋಜಿನಿ, ಅಂಬೇಡ್ಕರ್, ಶರತ್ ಬೋಸ್, ರಾಜಾಜಿ ಮೊದಲಾದವರು ಮಂಡಿಸಿದ್ದರು. ಸ್ವಭಾವತಃ ರಾಷ್ಟ್ರಪತಿ ಕೃಪಲಾನಿಯವರು ನೇಮಿತಾಧ್ಯಕ್ಷ ಡಾ। ಸಚ್ಚಿದಾನಂದ ಸಿಂಹರ ಸರಿಚಯವಾಡಿಕೊಟ್ಟು ಅವರನ್ನು ಅಧ್ಯಕ್ಷಗಾದಿಗೆ ಕರೆಸಿಕೊಂಡು ಹೋದರು. ಪ್ರಚಂಡ ಕರಚಪ್ಪಾಳೆಯ ನಡುವೆ ಅಧ್ಯಕ್ಷ ಸ್ಥಾನವಹಿಸಿ ಸರ್ವ ಪ್ರಥಮ ಹಿರಿಯ ಸದಸ್ಯರಾದ ಡಾ। ಸಿಂಹರಿತ್ತ ಅಧ್ಯಕ್ಷ ಭಾಷಣವು ಅತ್ಯಂತ ಬೋಧಪ್ರದವಿತ್ತು; ಇಂತಹ ಸಭೆಗಳ ಮೂಲ ಮಾತೃನಾದ ಅಮೇರಿಕದ ಘಟನಾ ಸಮಿತಿ-ಭಾರತದಲ್ಲಿ ಗಾಂಧೀಜಿಯ ಪ್ರಥಮ ಪ್ರಸ್ತಾಪದಿಂದಾರಂಭಿಸಿ, ಆ ಕನಸು ನೆನಸಾಗುತ್ತಾ ಬಂದ ವಿಧಾನ-ಚಿರಂಜೀವಿ ರಂಜ್ಯಾಂಗ ವಿಧಾನ ಸ್ಥಾಪನೆಗೊಳ್ಳುವಂತೆ ಈ ಸಭೆಯು ತೋರಿಸಬೇಕಾದ ಸೌಹಾರ್ದ, ಸದ್ವಿನೋದ-ಇತ್ಯಾದಿಗಳನ್ನು ಮಂದಟ್ಟುಪಡಿಸುವಂತಿತ್ತು ಅಧ್ಯಕ್ಷ ಭಾಷಣ. ಅಮೇರಿಕ, ಚೀನಾ, ಮತ್ತು ಆಸ್ಟ್ರೇಲಿಯಾ ಸರಕಾರಗಳು ಕಳುಹಿಸಿದ್ದ ಶುಭ ಸಂದೇಶಗಳನ್ನು ಓದಲಾಯಿತು. ಆ ಮೇಲಿನ ಕಾರ್ಯಕ್ರಮವೆಂದರೆ ಸದಸ್ಯರು ತಮ್ಮ ಪರಿಚಯ ಕಾರ್ಡು ಪಾಜರು ಪಡಿಸಿ, ಸಭಾ ರಿಜಿಸ್ಟ್ರಿಗೆ ಸಹಿ ಹಾಕುವದು; ವ್ಯಕ್ತಮತಃ ಸಹಿಯೂರುವ ಗೌರವ ರಾಜಾಜಿಗೆ ದೊರೆಯಿತು. ಆಜಾದ್ ಮತ್ತು ಗಫರ್‌ಖಾನರು ಸಹಿ ಹಾಕುವಾಗ ಸಭೆ ವಿಶೇಷ ರೀತಿಯ ಕೈಚಪ್ಪಾಳೆ ಹಾಕಿತು. ಹೀಗೆ ಸಹಿ ಹಾಕಿದ ಮೇಲೆ ಅಧ್ಯಕ್ಷರಿಗೆ ಹಸ್ತಲಾಘವ ಕೊಡುವ ಸಭ್ಯ ವಿಧಾನವನ್ನನುಕರಿಸಿದರೆ ಪ್ರತಿಯೊಬ್ಬ ಸದಸ್ಯನಿಗಾಗಿ 1½ ಮಿನಿಟು ವ್ಯಯವಾಗುವದೆಂಬುದನ್ನು ಮುಂಚಿನ ದಿನ ಸ್ರಯೋಗಿಸಿ ಪರೀಕ್ಷಿಸಿದ್ದ ಅಧ್ಯಕ್ಷರು ಸಮಯದ ಉಳಿತಾಯಾರ್ಥವಾಗಿ ಆಪದ್ಧತಿಯನ್ನುರದ್ದುಪಡಿಸಿದ್ದರು. ಆದರೆ ಶ್ರೀಮತಿ ಸರೋಜಿನಿಯವರಿಗೆ ಮಾತ್ರ ವಿಶೇಷ ರಿಯಾಯತಿ ಮಾಡಿ ಕೃತಕ ಅಧಿಕಾರವಾಣಿಯಿಂದ, ಪೀಠಕ್ಕೇರಿ ತನಗೆ ಹಸ್ತಲಾಘವ ಕೊಟ್ಟು ಹೋಗಬೇಕೆಂದು ಅಧ್ಯಕ್ಷರಾಜ್ಞಾಪಿಸಿದರು. ಇದಕ್ಕೆ ಪ್ರತಿಯಾಗಿ ವಿನೋದಿನಿ ಸರೋಜಿನಿಯವರು ನಕಾರಾತ್ಮಕ ಸಂಜ್ಞೆಯ ಮೂಲಕ ಅಧ್ಯಕ್ಷರ ಆಜ್ಞೆಯನ್ನು ಧಿಕ್ಕರಿಸಿ ಕೆಳಗಿಳಿದಾಗ ಸಭೆ ನಗಗಡಲಲ್ಲಿ ತೇಲಿತು. ಒಬ್ಬಿಬ್ಬ ಗಡಿಬಿಡಿಯ ಸದಸ್ಯರು ತಮ್ಮ ಪರಿಚಯ ಕಾರ್ಡನ್ನು ಮೇಜಿನಲ್ಲೇ ಮರೆತು ಬಿಟ್ಟು, ಸ್ವಕಾರ್ಯಕ್ಕೆ ಹೋಗಿ ಅಲ್ಲಿಂದೋಡಿ ಬಂದ ದೃಶ್ಯವು ಸಭೆಯನುಭವಿಸಿದ ವಿವಿಧ ವಿನೋದಗಳಲ್ಲೊಂದು. ಭೇದರಹಿತ ಪ್ರಥಮ ಪೀಠಿಕೆ, ಸಮಾನ ವಿನೋದ ಸಂಭ್ರಮಗಳಿಂದಲೇ ಪ್ರಥಮ ದಿನದ ಅಧಿವೇಶನ ಮುಗಿಯಿತು.

ನಿಯಮ ತಯಾರೀ ಸಮಿತಿ

ತಾ. 10ರಲ್ಲಿ ಸಭೆಯ ಶಾಶ್ವತಾಧ್ಯಕ್ಷರ ಚುನಾವಣೆಯ ನಿಯಮಾವಳಿಗಳನ್ನು ನಿರೂಪಿಸುವ ಸೂಚನೆಯನ್ನು ಕೃಪಲಾನಿಗಳು ತಂದು ನೆಹರುಗಳು ಅನುಮೋದಿಸಿದರು ಒಂದೆರಡು ಬಾಯ್ದೆರೆ ತಿದ್ದುಪಡಿಗಳು ಬಂದಿದ್ದರೂ ಗೋಪಾಲ ಸ್ವಾಮಿ ಅಯ್ಯಂಗಾರ್, ರಾಜಾಜಿ ಮೊದಲಾದವರ ಭಾಷಣಗಳಾಗಿ ಸೂಚನೆ ಮಂಜೂರಾಯಿತು. ಆ ಮೇಲೆ ಘಟನಾ ಸಮಿತಿ ಸಭೆಯ ಕಾರ್ಯಕ್ರಮಗಳನ್ನು ರೂಪಿಸುವದಕ್ಕಾಗಿ ಸಮಿತಿಯೊಂದನ್ನು ನೇಮಿಸಬೇಕೆಂದು ಆಚಾರ್ಯ ಕೃಪಲಾನಿಗಳೇ ತಂದ ಎರಡನೇ ಠರಾವು ಸಭೆಯ ವಾದಶಕ್ತಿಯನ್ನು ಬಡಿದೆಬ್ಬಿಸಿತು; ವಿಷಯ ಸೂಕ್ಷ್ಮತೆಯಿದ್ದುದರಿಂದ ಅಗಿನ ಚರ್ಚೆಗೆ ವಿಧಾಯಕ ಶಿಕ್ಷಣದ ರೂಪ ಬಂದಿತ್ತು. ಆ ಸಮಿತಿಯು ಮೂಲ ಘಟನಾಸಮಿತಿಯ ಕಾರ್ಯ ಸೂಚಿಗಳನ್ನಷ್ಟೇ ಅಲ್ಲ, ಅದರ ವ್ಯಾಪ್ತಿಕ ವಿಭಾಗಗಳ ಮತ್ತಿತರ ಕಮಿಟಿಗಳ ಕಾರ್ಯಸೂಚಿಗಳನ್ನೂ ತಯಾರಿಸತಕ್ಕದ್ದು' ಎಂಬ ತಿದ್ದುಪಡಿಯನ್ನು ಬಂಗಾಳದ ಸುರೇಶ ಬೆನರ್ಜಿಗಳು ತಂದು ಶ್ಯಾಮ ಪ್ರಸಾದ ಮುಖರ್ಜಿಯವರು ಅನುಮೋದಿಸಿದರು. ಚರ್ಚೆಯ ನಡುವೆ ಪಂಡಿತ ನೆಹರುಗಳು ಮೂಲ ಸೂಚನೆಯನ್ನು ಸಮರ್ಥಿಸಿ ಮನನೀಯ ಭಾಷಣವಿತ್ತರು. 'ಘಟನಾ ಸಮಿತಿ' ಎಂದ ಮೇಲೆ ಅದರ ಉಪಾಂಗಗಳನ್ನು ಪ್ರತ್ಯೇಕವಾಗಿ ಉಲ್ಲೇಖಿಸುವ ಆಗತ್ಯವಿಲ್ಲವೆಂದೇ ನೆಹರು ಕೃಪಲಾನಿಗಳ ಮತ. ಸರ್ದಾರ್ ಹರ್ನಾಮ್ ಸಿಂಗ್, ಕೆ. ಎಮ್. ಮುನ್ಷಿ, ಡಿ ಎ. ಕೈತಾನ್, ಶರತ್ ಬೋಸ್, ಬಿ ಜಿ ಖೇರ್ ಮೊದಲಾದವರು ಬೆನರ್ಜಿಯವರ ತಿದ್ದುಪಡಿಯನ್ನೇ ಸಮರ್ಥಿಸಿದರು. ಅಲ್ಪ ಸಂಖ್ಯಾಕರಿಗೂ ಪ್ರಾತಿನಿಧ್ಯವಿರುವಂತೆ ಅಧ್ಯಕ್ಷರು ಮತ್ತು 15 ಮಂದಿ ಸದಸ್ಯರುಳ್ಳ ಈ ನಿಯಮ ತಯಾರೀ ಸಮಿತಿಗೆ 5 ಮಂದಿಯನ್ನು ತಾನಾಗಿ ನೇಮಿಸಿಕೊಳ್ಳುವ ಅಧಿಕಾರವಿರಬೇಕೆಂದು ಸರ್ದಾರ್ ಉಜ್ಜಲ ಸಿಂಗರ ಉಪಸೂಚನೆ ಬಂತು ಡಾ। ಜಯಕರರು ರಂಗವನ್ನು ಆಕ್ಷೇಪಿಸದಿದ್ದರೂ, ಈಗ ಗೈರು ಹಾಜರಿರುವ ಲೀಗ್ ಸದಸ್ಯರ ಹಕ್ಕನ್ನು ಮುಂದಾಗಿ ಕಸಗೊಳ್ಳುವ ಕೆಲಸವಾಗಬಾರದೆಂದೂ, ಅಂತಹ ಅಭಿಪ್ರಾಯ ಹುಟ್ಟದಂತೆ ನೋಡಬೇಕೆಂದೂ ಎಚ್ಚರಿಸಿದರು. ಆಂಗ್ಲೋ ಇಂಡಿಯನ್ ಪ್ರೇಟರ್ ಇವರ ಅಭಿಪ್ರಾಯವನ್ನು ಸಮರ್ಥಿಸಿದರು

ಮತ್ತೊಂದು ತಮಾಷೆ!

ಚರ್ಚೆಯ ನಡುವೆ ಸಂಯುಕ್ತ ಪ್ರಾಂತ್ಯದ ಶ್ರೀ ಥುಲೇಕರರು ಕೈಹಿಡಿದು ಕುಳ್ಳಿರಿಸುವ ವರೆಗೂ ಮುಸ್ಸುರ ಹೊಡಿ ಮತ್ತೊಂದು ವಿಶೇಷ ವಿನೋದ ನಿರ್ಮಿಸಿದರು. ನಿಯಮಾವಳಿ ಸಮಿತಿಯು ಹಿಂದು ಸ್ಥಾನಿ ಭಾಷೆಯನ್ನೇ ಅಂಗೀಕರಿಸಿಕೊಳ್ಳಬೇಕೆಂದು ಅವರು ಹಿಂದುಸ್ಥಾನೀಯಲ್ಲೇ ಭಾಷಣಕ್ಕಾರಂಭಿಸಿದಾಗ, ರಾಜಗೋಪಾಲಾಚಾರ್ಯರಂತಹ ಹಿಂದುಸ್ಥಾನಿ ಬಾರದ ಸದಸ್ಯರಿದ್ದಾರೆಂದು ಅಧ್ಯಕ್ಷರವರಿಗೆ ಸೂಚಿಸಬೇಕಾಯಿತು. 'ಹಿಂದುಸ್ಥಾನಿಯರಿಯದ ಮಿದ್ಯೆವಿಗಳಿಗೆ ಹಿಂದುಸ್ಥಾನದ ಸ್ವೇ ಸ್ಥಾನವಿಲ್ಲ; ಘಟನಾ ಸಮಿತಿಯ ಮಾತು ಬಿಡಿ' ಎನ್ನುತ್ತಾ ಥುಲೇಕರರು ಒಂದೇ ಸವನೆ ವಾದದೋಟಕ್ಕಾರಂಭಿಸಿದರು. ವಿಷಯ ಸಾಮ್ಯತೆಯಿಲ್ಲದೆ ವಾತಾಡುತ್ತೀರೆಂದು ಅಧ್ಯಕ್ಷ ಸಿಂಹರು ಒಂದಿ ಬಾರಿಗೆಚ್ಚರಿಸಿದರೂ, ಸದಸ್ಯನಾದ ತನಗೆ ವಾಕ್ಸ್ವಾತಂತ್ರ್ಯವುಂಟೆನ್ನುತ್ತಾ ಥುಲೇಕರ್ ಏಕದಂ ಮುಂದೊತ್ತುತ್ತಿದ್ದರು.

ಗೂರುಬ್ಬಸ ಅರ್ಥಾತ್ ಆಸ್ತಮ

ಈ ವ್ಯಾಧಿಗೆ ಜಗದ್ವಿಖ್ಯಾತವಾದ 'ಲಕ್ಷ್ಮಣಭೂತಿ'ಯೇ ದಿವ್ಯೌಷಧ ಒಂದೇ ಒಂದು ಡೋಸ್ಸಾ ಔಷಧಿಯನ್ನು ಹುಣ್ಣಿಮೆ ದಿನ (ತಾ. 7-1-1947) ಸೇವಿಸಿದರೆ ಎಂತಹ ಗೂರುಬ್ಬಸವೂ ನಿಂತು ಹೋಗುವುದು. ಪತ್ರವ್ಯವಹಾರ ಇಂಗ್ಲಿಷಿನಲ್ಲಿ.

Mahatma Sri Janki Sewashram,
P O. Chitrakot. U. P.

Greetings

This season of Deepavali
I greet you heartily,
And wish all through
New Year there be
Joy, Happiness, Prosperity.

Rao Bahadur B. S. SAWKAR, B A. L L B.
Chairman Board of Directors,
UNITED KARNATAK INSURANCE Co., Ltd.
DHARWAR.

ದಿ ಮೂಲ್ಕಿ ಬೇಂಕ್, ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ತಿರುಪೊಟಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಿಹವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,
Moolky, S. K

ಕೊನೆಗೆ ತುಸು ಗದಮ್ಮಿನಿಂದ "ಕುಳಿತು ಕೊಳ್ಳಿ" ಎಂದು ಅಧ್ಯಕ್ಷರಾಜ್ಞಾಪಿಸಿದರು. ಸಭಿಕರೂ ಕೂಗಿಕೊಂಡರು. ಆದರೂ ಫಲ ಬಾರದ್ದನ್ನು ಕಂಡು ಪಂಡಿತ ನೆಹರು ಮತ್ತು ದಿವಾನ್ ಚಮನ್‌ಲಾಲರು ಭಾಷಣ ಪೀಠಕ್ಕೆ ಹೋಗಿ ಧುಲೇಕರರನ್ನು ಹಿಡಿದೆಳೆತಂದು ಅವರ ಪೀಠದಲ್ಲಿ ಕುಳ್ಳಿರಿಸಿ, ಬಾಯಿ ಮುಚ್ಚಿಸಿದರು! ಸಭಾ ದಾಖಲೆಗಳಲ್ಲಿ 'ಅವನು' ಎಂದು ಮಾತ್ರವಿರುವಲ್ಲೆಲ್ಲಾ ಆದರೆ ಒತ್ತಿನಲ್ಲಿ 'ಅಥವಾ ಅವಳು" ಎಂಬುದನ್ನೂ ಸೇರಿಸಿ ಸ್ತ್ರೀಪದಸ್ಯರಿಗೆ ನ್ಯಾಯದಾನಮಾಡಬೇಕೆಂಬ ವ್ಯಂಗ್ಯ ಉಪಸೂಚನೆಯೊಂದು ಬಂದಿತ್ತು. "ಅವನು" ಎಂಬುದರೊಳಗೆ "ಅವಳು" ಸೇರಿ ಹೋಗುತ್ತಾಳೆ" ಎಂದು ಅಧ್ಯಕ್ಷರು ಆ ಕ್ಷಿಲಾಬ್ ಝಿಂದಾಬಾದ್"-"ಜೈಹಿಂದ್" ಘೋಷಗಳು ಮಾರ್ದನಿಗೊಟ್ಟವು. ಆ ಮೇಲೆ ಚುನಾಯಿತಾಧ್ಯಕ್ಷರ ಪ್ರಶಂಸಾತ್ಮಕ ಭಾಷಣಗಳಾದುವು.

'ಬುದ್ಧ ಸಮಾನರು'

ಸರ್. ಎಸ್. ರಾಧಾಕೃಷ್ಣನರು, ಅತ್ಯುಚ್ಚ ನಾಗರಿಕತೆ, ಅಸಾಮಾನ್ಯ ತಾರ್ಕಿಕ ವಿಶಾಲ ಧೋರಣೆ ಮತ್ತು ನಿಷ್ಪಕ್ಷಪಾತ ನ್ಯಾಯಬುದ್ಧಿಯಿರುವ ಡಾ। ಪ್ರಸಾದರು ಅಧ್ಯಕ್ಷರಾಗಿ ದೊರೆತುದು ಸಭೆಯ ಭಾಗ್ಯವೆನ್ನುತ್ತಾ ಮುಸ್ಲಿಂ ಲೀಗನ್ನೂ ಒಳಗೆ ಕರೆಯಿಸಿಕೊಳ್ಳಲು ಅವರು ಸಮರ್ಥರಾಗಿಲೆಂದಾಶಿಸಿದರು. ಬ್ರಿಟಿಷ್ ಆಗಮನಾನಂತರದ ಹಿಂದೀ ಚರಿತ್ರೆಯ ಜ್ಞಾಪಕ ಕೊಟ್ಟು ಬ್ರಿಟಿಷರಲ್ಲಿರುವದು ಅಮೂಲಾಗ್ರ ವ್ಯಾಪಾರೀ ಪ್ರಯೋಗ ಆಂತೋಷಿ, ಸರ್ದಾರ್ ಉಜ್ಜಲಸಿಂಗ್, ಸರ್. ಕಾಮೇಶ್ವರಸಿಂಗ್, ಡಾ। ಜೋಸೆಫ್ ಅಲ್ಬಾನ್ ಡಿಸೋಜ, ಮುನಿಸ್ವಾಮಿ ಪಿಳ್ಳೈ, ಸಿ. ಎಮ್. ಪುನಚ್, ಎಸ್. ವಿ. ರಾಮಮತ್, ಸೋಮನಾಥ ಲಾಹಿರಿ, ಜೈಪಾಲ್‌ಸಿಂಗ್ ಮೊದಲಾದವರು ವಿದ್ವತ್ತು, ಸಂಸ್ಕಾರ, ವಿಷಯಾಧಿಕಾರ ಶಾಂತ ವಿಶಾಲ ಧೋರಣೆ, ಮತ್ತು ನಿಷ್ಕಲ್ಮಷ ಗುಣಸಡತೆಗಳ ಡಾ। ಪ್ರಸಾದರಂತಹ ಯೋಗ್ಯ ಜನ ಈ ಪೀಠಕ್ಕೆ ಬೇರಿಲ್ಲವೆಂದು ಶ್ಲಾಘನೆ ಸಲ್ಲಿಸಿದರು.

ಗಡಿನಾಡು ಪ್ರಾಂತ್ಯವು ಕಾಂಗ್ರೆಸಿಗೆ ಬೆಂಬಲವಾಗಿರುವ ಕಾರಣಗಳನ್ನು ಖಾನ್ ಅಬ್ದುಲ್ ಗಫರ್‌ಖಾನರು ವಿವರಿಸಿ "ಭಾರತದ ಸ್ವಾತಂತ್ರ್ಯಸಾಧಿಸುವ ಮತ್ತು ಬಡ ಎಂದು ನಾನು ಆಗಲೇ ನನ್ನ 'ಹಿಂದು ಸ್ಥಾನ್ ರಿವ್ಯೂ' ಪತ್ರಿಕೆಯಲ್ಲಿ ಬರೆದಿದ್ದೆ. ನನ್ನೆ ಭವಿಷ್ಯ ಸುಳ್ಳಾಗಲಿಲ್ಲ. ಬಾಬು ರಾಜೇಂದ್ರರು ಹೈಕೋರ್ಟು ಜಡ್ಜರಾಗಲಿಲ್ಲವೆಂಬೊಂದು ಚಿಂತೆ ನನಗಿದೆ (ನಗು). ಆದರೆ ಘಟನಾ ಸಮಿತಿಯ ಅಧ್ಯಕ್ಷರಾದುದು ಅದಕ್ಕಿಂತ ಹೆಚ್ಚಿನ ಗೌರವ" ಎಂದರು. ರಾಜೇಂದ್ರ ಪ್ರಸಾದರು ಪ್ರಚಂಡ ಜಯಕಾರದ ನಡುವೆ ಅಧ್ಯಕ್ಷಪೀಠಾರೂಢರಾಗಿ ಮಾಡಿದ ಆಚಾರ್ಯ ಕೃಪಲಾನಿಗಳು ಎರಡು ದಿನಗಳ ಸಭಾಚಾಲನೆಯಲ್ಲಿ ಡಾ। ಸಿಂಹರು ತೋರಿಸಿದ ಮಾನವೀಯ ಹಾಗೂ ಮನೋಹರ ಗುಣಗಳನ್ನು ಶ್ಲಾಘಿಸಿ ಅಭಿನಂದಿಸಿದರು.

ಅಧ್ಯಕ್ಷ ಭಾಷಣ

'ಸ್ವಾತಂತ್ರ್ಯಕ್ಕಿದಿರೇ ಇಲ್ಲ—ಇದ್ದರೂ ಅದರ ಗಣ್ಯವಿಲ್ಲ'—ನೆಹರು.

ಧರ್ಷಚ್ಛೆ, ಕೊಟ್ಟಾಗ ಸಭೆಯಲ್ಲಿ ನಗೆಯೆದ್ದಿತು. ಬೆನರ್ಜಿಯವರ ಮತ್ತು ಉಜ್ಜಲಸಿಂಗರ ಉಪಸೂಚನೆಗಳ ಅಂಗೀಕಾರದೊಂದಿಗೆ ಕೃಪಲಾನಿ ಸೂಚನೆ ಮುಂದಾಯಿತು. ಡಾ। ಅಂಬೇಡ್ಕರೊಬ್ಬರೇ ಆ ಪಕ್ಷಕ್ಕೆ ವಿರುದ್ಧ ಮತ ಕೊಟ್ಟರು.

ಅಧ್ಯಕ್ಷ ಪೀಠಕ್ಕೆ ಪ್ರಸಾದ್

ಘಟನಾ ಸಮಿತಿಯ ಶಾಶ್ವತಾಧ್ಯಕ್ಷ ಸ್ಥಾನಕ್ಕೆ ಡಾ. ರಾಜೇಂದ್ರ ಪ್ರಸಾದರೂ ಬ್ಬರ ಹಸರಿನಲ್ಲೇ ಎಂಡು ನಾಮಪತ್ರಗಳು ದಾಖಲಾಗಿದ್ದು ಅದು ಆವಿರೋಧವಿರುವುದರಿಂದ ಪ್ರಸಾದರೇ ಕ್ರಮಬದ್ಧ ಅಧ್ಯಕ್ಷರೆಂದು ಮೂರನೇ ದಿನದ ಸಭಾರಂಭದಲ್ಲಿ ಡಾ। ಸಿಂಹರು ಜಾಹೀರು ಮಾಡಿದೊಡನೆ ಸಭೆಯಲ್ಲಿ ಪ್ರಚಂಡ ಉತ್ಸಾಹ ಧ್ವನಿಯೆದ್ದಿತು. "ತಾತ್ಕಾಲಿಕ ಅಧ್ಯಕ್ಷನಾದ ನನ್ನ ಈಗಿನ ಮೊದಲ ಕರ್ತವ್ಯವಾಗಿ, ಆಚಾರ್ಯ ಕೃಪಲಾನಿಯವರೂ ಮೌಲಾನಾ ಆಜಾದರೂ ಈ ಸಭೆಯ ಪರವಾಗಿ ಚುನಾಯಿತಾಧ್ಯಕ್ಷರನ್ನು ಆಸನಕ್ಕೆ ತಂದು ಕೂಡ್ರಿಸುವ ಅನುಗ್ರಹವನ್ನು ನಮಗಾಗಿ ಮಾಡಬೇಕೆಂದು ನಾನು ವರನ್ನು ವಿಜ್ಞಾಪಿಸಿಕೊಳ್ಳುತ್ತೇನೆ" ಎಂದು ಸಿಂಹರಂದಾಗ ಸಭೆಯಲ್ಲಿ ಉತ್ಸಾಹಧ್ವನಿ, ನಗೆಯ ಕೋಲಾಹಲಗಳ ಮಿಶ್ರ ತೆರೆಗಳೆದ್ದುವು. ಮೌಲಾನಾ ಆಜಾದರೆದ್ದು ಡಾ. ರಾಜೇಂದ್ರ ಪ್ರಸಾದರಿದ್ದಲ್ಲಿಗೆ ಬಂದುಅವರ ಬಲತೋಳನ್ನು ಹಿಡಿದುಕೊಂಡರು ಆಚಾರ್ಯ ಕೃಪಲಾನಿಗಳು ಎಡಬದಿಯಲ್ಲಿ ನಿಂದರು. ಮೂವರೂ ಅಧ್ಯಕ್ಷ ಗದ್ದುಗೆಯತ್ತ ನಡೆದು ತಾತ್ಕಾಲಿಕ ಅಧ್ಯಕ್ಷ ಪೀಠದ ಬದಿಯಾಸನದಲ್ಲಿ ಬಾಬು ರಾಜೇಂದ್ರ ಪ್ರಸಾದರು ಮಂಡಿಸಿದಾಗ ಇತೀ ಸಭೆಯ 'ಪಂ ಬುದ್ಧಿಯೆಂಬುದನ್ನೂ ಪರಿಸ್ಥಿತಿಯ ಒತ್ತಡದಿಂದಲ್ಲದೆ ಹೃದಯತಃ ಅವರೇನನ್ನೂ ಕೊಡಲಾರರೆಂಬುದನ್ನೂ ಚರ್ಚಿಸಿ, ಮಹಾತ್ಮಾಗಾಂಧಿ ಮತ್ತು ಹುತಾತ್ಮ ಕಾಂಗ್ರೆಸ್ ಧೀರರ ತ್ಯಾಗಗಳನ್ನು ಸ್ಮರಣ ಮಾಡಿ, 'ಶುಲಭದಲ್ಲಿ ಅಧಿಕಾರ ತ್ಯಾಗ ಮಾಡುವದು ಮಾನವ ಸ್ವಭಾವಕ್ಕೇನೇ ವಿರುದ್ಧವಾದುದೆಂಬುದು ಬ್ರಿಟಿಷರ ಇತ್ತೀಚಿಗಿನ ನೇಳಿಕೆಯಿಂದ ಮಂದಟ್ಟಾಗುತ್ತದೆ' ಎಂದರು. ಲೀಗ್ ಮತ್ತು ಅಪ್ರತಿ ರಾಜ್ಯಗಳಿಗೆ ಹಿತವಾದ ಹೇಳಿ 'ನಾವಿಂದು ಪ್ರತ್ಯೇಕಿಸಲ್ಪಟ್ಟಿದ್ದೇನೆ; ಒಬ್ಬರನ್ನೊಬ್ಬರು ಹುಡುಕಿ ಹಿಡಿಯೋಣ' ಎಂದು ಸಭೆಯ ಮೆಚ್ಚುಗೆ ಪಡೆದರು.

ಸರ್. ಎನ್. ಗೋಪಾಲ ಸ್ವಾಮಿ ಅಯ್ಯಂಗಾರರು, ಈ ಘಟನಾ ಸಮಿತಿಯು ಸರ್ವ ಸ್ವತಂತ್ರ ಸಭೆಯೆಂದೂ, ಅದರೊಳಗೆ ಕೈ ಹಾಕುವ ಆಧವಾ ಅದರ ಏರ್ಪಾನಗಳನ್ನು ಆಕ್ಷೇಪಿಸುವ ಅಧಿಕಾರವು ಹೊರಗಿನವರಿಗಿಲ್ಲವೇ ಇಲ್ಲವೆಂದೂ ಶಾಸನೆ ಮತ್ತು ಕಾರಣಗಳ ನಿದರ್ಶನ ಕೊಟ್ಟು ಅಧ್ಯಕ್ಷರು ಹೊರಂತಂಕಗಳಿಗೆಡೆ ಕೊಡಬಾರದೆಂದು ವಿಜ್ಞಾಪಿಸಿಕೊಂಡು ಮಾಡಿದ ಆಮೋಘ ಭಾಷಣವು ನಸುಕನ್ನಲ್ಲಿ ಹಾದಿ ತೋರಿಸುವ ದೀವಿಗೆಯಂತಿತ್ತು. 'ಈ ಅಧ್ಯಕ್ಷ ತನಕ್ಕೇರಿಸಿ ಡಾ। ರಾಜೇಂದ್ರರನ್ನು ಸಭೆ ಗೌರವಿಸಿದಂತಾಗಲಿಲ್ಲ; ಅದನ್ನಂಗೀಕರಿಸಿ ರಾಜೇಂದ್ರರು ಸಭೆಯನ್ನೇ ಗೌರವಿಸಿದಂತಾಯಿತು" ಎಂದು ಅಯ್ಯಂಗಾರರಂದಾಗ ಉತ್ಸಾಹವೆದ್ದಿತು.

ಜೀವಂತ ಅನುಯಾಯಿಯೊಬ್ಬನಿಗೆ ಇದು ವರಿಗಾರೂ ಸಲ್ಲಿಸಿರದಂತಹ ಶ್ಲಾಘನೆಯು ಕವಯಿತ್ರಿ ಸರೋಜಿನೀ ದೇವಿಯಿಂದ ರಾಜೇಂದ್ರ ಪ್ರಸಾದರಿಗೆ ದೊರೆಯಿತು. 'ಬಿಡುವಿನಲ್ಲಿ ಹುಟ್ಟಿದ ರಾಜೇಂದ್ರರು ಹಲವು ಗುಣಗಳ ಮಟ್ಟಿಗೆ ಬುದ್ಧನನ್ನೇ ಹೋಲುತ್ತಾರೆ". ಎನ್ನುತ್ತಾ ಲೀಗ್ ಸದಸ್ಯರ ಗೈರುಹಾಜರಿಯಿಂದ ತನ್ನೆದೆ ಕುಗ್ಗಿದುದನ್ನು ತಿಳಿಸಿ, ಅವರನ್ನು ಒಳಬರಿಸುವ ಸೌಹಾರ್ದ್ರತೆ ಮತ್ತು ಯೋಗ್ಯತೆ ರಾಜೇಂದ್ರರಲ್ಲಿದೆಯೆಂದರು. ಎಲ್ಲಾ ಅಲ್ಪ ಸಂಖ್ಯಾಕರಿಗೂ ಆಶ್ವಾಸನೆ ಕೊಟ್ಟು ಡಾ ಅಂಬೇಡ್ಕರರ ಕಡೆಗೆ ತಿರುಗಿ "ನೀವೂ ಎ ಸೆಂಬ್ಲಿ ಕಾರ್ಯಗಳಿಗೆ ಬೆಂಬಲಿಸಿದಾಗವಿರೆಂದು ಆಶಿಸುತ್ತೇನೆ." ಎಂದು ಸರೋಜಿನಿಯಂದಾಗ ಇಡೀ ಸಭೆಯೊಂದಿಗೆ ಅಂಬೇಡ್ಕರರೂ ಹೃತ್ಪೂರ್ವಕ ಚಪ್ಪಾಳೆ ಹೊಡೆದರು.

ಬಾಬು ರಾಜೇಂದ್ರರಿಗೆ ಪೀಠ ಬಿಟ್ಟು ಕೊಡಲೇಳುತ್ತಾ ಡಾ। ಸಿಂಹರು 4-4 ವರುಷಗಳಿಂದ ಪ್ರಸಾದರೊಡನೆ ತನಗಿರುವ ನಿಕಟ ಸಂಬಂಧಗಳನ್ನು ವರ್ಣಿಸಿ, '1902 ರ ಪೆಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ಡಾ। ಪ್ರಸಾದರು ಯುನಿವರ್ಸಿಟಿಯಲ್ಲೇ ಮೊದಲಿಗರಾಗಿ ಗೆದ್ದಾಗ, ಈ ಪ್ರಸಾದರು ಒಂದೋ ಕಾಂಗ್ರೆಸ್ ಅಧ್ಯಕ್ಷರಾಗಲಿದ್ದಾರೆ, ಇಲ್ಲವೇ ಹೈಕೋರ್ಟು ಜಡ್ಜರಾಗಲಿದ್ದಾರೆ ತನ್ನ ನಿವಾರಿಸುವ ಯೋಗ್ಯತೆಯುಳ್ಳಸಂಸ್ಥೆಯೆಂದರೆ ಆದೊಂದೇ" ಎಂದು ಸಭೆಯ ಜಯಧ್ವನಿಯ ನಡುವೆ ಘೋಷಿಸಿ ಅಧ್ಯಕ್ಷರನ್ನು ಹೃದಯತಃ ಅಭಿನಂದಿಸಿದರು.

ಡಾ। ರಾಜೇಂದ್ರ ಪ್ರಸಾದರು ಉತ್ತರಿಸುತ್ತಾ, ಈ ಘಟನಾ ಸಮಿತಿಯು ನಿಜವಾದ ಸ್ವತಂತ್ರ ಸರ್ವಾಧಿಕಾರೀ ರಾಜ್ಯಾಂಗವನ್ನು ರಚಿಸುವದರಲ್ಲಿರುವ ಅತಂಕಗಳನ್ನು ಒಪ್ಪಿ ಹೇಳಿ, ಈ ಕಂಟಕವು ಎಲ್ಲಾ ರಾಷ್ಟ್ರಗಳಿಗೂ ಇದ್ದದ್ದೇ" ಎಂದರು. "ಉದ್ದೇಶದ ಐಕ್ಯತೆ, ಮತ್ತು ಪರಸ್ಪರ ಅಭಿಪ್ರಾಯ ಗ್ರಹಣಾಕಾಂಕ್ಷೆಯಿದ್ದಲ್ಲಿ ಬೇರೆ ರಾಷ್ಟ್ರಗಳಂತೆ ನಾವೂ ಗೆಲ್ಲುವದು ಖಂಡಿತ. ನಮ್ಮ ಕಾರ್ಯಕ್ರಮಗಳ ಮಧ್ಯೆ ಈ ಸಭೆಗಿರುವ ಮಿತಿಗಳನ್ನು ಮರೆಯುವದು, ಧಿಕ್ಕರಿಸುವದು, ಅಥವಾ ಅಸಡ್ಡೆ ಮಾಡುವದು ಸಲ್ಲದೇನೋ ನಿಜ. ಹೀಗಿದ್ದರೂ ಈ ಎಸೆಂಬ್ಲಿಯು ಸ್ವಾಡಳಿತೆಯಳ್ಳದ್ದು; ಸ್ವಸಿದ್ಧಾರ ಹಕ್ಕಿನದು; ಕಾರ್ಯಕ್ರಮಗಳಲ್ಲಿ ಕೈಹಾಕುವ, ನಿರ್ಧಾರಗಳನ್ನು ಅಡಿಮೇಲು ಮಾತುವ, ಬದಲಾಯಿಸುವ ಅಥವಾ ತಿದ್ದುಪಡಿಸುವ ಅಧಿಕಾರವಾವುದೂ ಪರಕೀಯಾಧಿಕಾರಕ್ಕೆ ಇರದ ಸ್ವತಂತ್ರಸಂಸ್ಥೆಯಿದು ಎಂಬುದನ್ನು ನಾನು ಸ್ಪಷ್ಟವಾಗಿ ಬಲ್ಲೆ (ಉತ್ಸಾಹ ಧ್ವನಿ). ಈ ಸಭೆಯ ಹುಟ್ಟಿನೊಂದಿಗೆ ಸೆಂಬಿಕೊಂಡಿರುವ ಮಿತಿ, ಸಂಕೋಚಗಳನ್ನು ಝಾಡಿಸಿಕೊಳ್ಳುವ ಹಕ್ಕುನಿಜಕ್ಕೂ ಈ ಸಭೆಗಿದೆ" ಎಂದು ಸ್ಪಷ್ಟೀಕರಿಸಿದರು. ಲೀಗ್ ಸದಸ್ಯರ ಗೈರು ಹಾಜರಿಗಾಗಿ ವಿಷಾದಿಸಿದರು "ಲೋಕದ ಎಲ್ಲಾ ರಾಷ್ಟ್ರಗಳ ಅಸುಖವದಂತೆಯೂ, ನಮ್ಮ ಸ್ವಾನುಭವ, ಸಂಪ್ರದಾಯ ಮತ್ತು ನಮ್ಮಲ್ಲಿಯ ವಿಲಕ್ಷಣ ಪರಿಸ್ಥಿತಿಗನುಗುಣವಾಗಿಯೂ. ನ್ಯಾಯಬದ್ಧ ಎಲ್ಲಾ ಭರವಸೆಗಳು ಆವಶ್ಯಕತೆಯುಳ್ಳ ಎಲ್ಲರಿಗೂ ದೊರೆಯಲಿವೆ. ಯಾವದೇ ದಿಕ್ಕಿನಿಂದ ಯಾವುದೆಂದು

ವಿವಿಧ ಪಾತ್ರೆಗಳು

ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾನ್ಯರಿಗಳೂ ರಿಯಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯ,
ರಕ್ಷಬೀದಿ, ಉಡುಪಿ.

ಇಂದ್ರಭವನ ಕಾಫಿ ಹೊಟೆಲ್

ಬಲ್ಮಠ * * * * ಮಂಗಳೂರು.

ಹೊಸ ವ್ಯವಸ್ಥೆ-ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳು-ವಿದ್ಯುದ್ದೀಪ, ರೇಡಿಯೋಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.

ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

ಬಿ. ಬಾಬು ಶೆಟ್ಟಿ

Indra Bhavan Coffee Hotel,
Balmatta Road, Mangalore.



Approved firm by the Govt.of Mysore
Certified by the Agent of the Govt. of Cylone & Indian.

ದೂರೂ ಎಳುವಂತೆ ಎಂದಿಗೂ ಆಗದು. (ಉತ್ಸಾಹ ಧ್ವನಿ) ಈ ವಿಷ್ಯ ಗುರಿ ಸಾಧಿಸಲ್ಪಡುವದೆಂದು ಆಶಿಸುತ್ತೇನೆ. ಬಂಧನ ರಹಿತ ಸ್ವಾತಂತ್ರ್ಯಕ್ಕಿಂತ ಅಮೌಲ್ಯವಾದುದು ಬೇರೊಂದಿಲ್ಲವೆಂಬ ನಂಬಿಕೆಯಂತೆ, ಎಲ್ಲಕ್ಕಿಂತ ಮುಂದಾಗಿ ನಮಗೀಗ ಬೇಕಾಗಿರುವದು ಸ್ವಾತಂತ್ರ್ಯ. ಈ ಸಭೆಯ ಕಾರ್ಯಕ್ರಮದ ಫಲವಾಗಿ ಆ ಸ್ವಾತಂತ್ರ್ಯ ಮತ್ತದರ ಹೆಗ್ಗಳಿಕೆ ನಮ್ಮಿಬ್ಬಾಗಲಿ" ಎಂದು ಪೋಷಿಸಿ ಸಭೆಯಲ್ಲಿ ಅತ್ಯುತ್ಸಾಹ ಧ್ವನಿಯಬ್ಬಿಸಿದರು. ಕಾರ್ಯಕ್ರಮ ನಿರ್ಮಾಪಕ ಸಮಿತಿಗೆ ಜಗಜ್ಜೀವನರಾಮ್, ಶರಶ್ಚಂದ್ರ ಜೋಸ್, ಪ್ರೆಂಕ್ ಅಂತೋನಿ, ಸರ್. ಅಲ್ಲಾಡಿ, ಸರ್ ಫೇಕ್ ಚಂದ್, ಅಲ್ತಾನ್ ಡಿಸೋಜ, ಮಗಳಿಗೊಳಪಟ್ಟು ಯೋಚನೆ, ಸೂಚನೆ, ನಂಬಿಕೆ, ವಿಶ್ವಾಸ, ವಾಕ್, ಸಂಘ, ಕೃತ್ಯಗಳಲ್ಲಿ ಸ್ವಾತಂತ್ರ್ಯ—ಇವೆಲ್ಲವುಗಳ ಅಶ್ವಾಸನೆ ಮತ್ತುರಕ್ಷಣೆಯು ಭರವಸೆಯು ಸರ್ವ ಭಾರತೀಯರಿಗೂ ಸಮಾನವಾಗಿದೆ. ಅಲ್ಪ ಸಂಖ್ಯಾಕರಿಗೆ, ಹಿಂದುಳಿದವರಿಗೆ, ಗುಡ್ಡ ಗಾಡುಗಳವರಿಗೆ, ದಲಿತ ವರ್ಗ ಮತ್ತಿತರ ಹಿಂದುಳಿದ ವರ್ಗಗಳೆಲ್ಲರಿಗೆ ಸರಿಯಾದ ರಕ್ಷಣಾ ವ್ಯವಸ್ಥೆಯಿರಬೇಕು. ನಾಗರಿಕ ರಾಷ್ಟ್ರಗಳ ನ್ಯಾಯ ಮತ್ತು ಶಾಸನಾನುಸಾರವಾಗಿ ಭಾರತ ರಿಪಬ್ಲಿಕಿನ ಅಖಂಡತ್ವವನ್ನೂ ನೆಲ, ಜಲ, ಆಕಾಶಗಳ ಸಾರ್ವಭೌಮಾಧಿಕಾರವನ್ನೂ ಉಳಿಸಿಕೊಂಡು ಈ ಪುರಾತನ ರಾಷ್ಟ್ರವು ಲೋಕದಲ್ಲಿ ತನ್ನ ಹಕ್ಕಿನದಾದ ಗೌರವಾರ್ಹ ಸ್ಥಾನ

ನೆಹರುಗಳ ಅನೋಘ ಭಾಷಣ

ಭಾರತ ರಾಜ್ಯಾಂಗ ರಚನಾ ಸಭೆಯ ಸಂಚಮ ದಿನದಲ್ಲಿ-ತಾ 13ರಲ್ಲಿ-ರಿಸಬ್ಲಿಕ್ ಭಾರತದ ಸೂಚನೆತಂದು ಪಂಡಿತ ಜವಾಹರಲಾಲರಿತ್ತ ಭಾಷಣವು ಅವರ ಜೀವಮಾನದ ಅತ್ಯುಜ್ವಲ ಉಪನ್ಯಾಸಗಳಲ್ಲೊಂದಾಗಿತ್ತು. ಆದನ್ನಾಲಿಸುವದೇ ಒಂದು ಭಾಗ್ಯನೆಂಬಂತಹ ಚಿರಸ್ಮರಣೀಯ ಪವಿತ್ರ ವಾಣಿಯಾಗಿ—ಭಾರತದ ಎಸ ಪೂರಿತ ವಾತಾವರಣದಮೇಲೆ ಸುರಿದ ಅಮೃತ ವರ್ಷವಾಗಿ—ಭಾರತೀಯ ಸ್ವಾತಂತ್ರ್ಯ ಯುದ್ಧದ ಸೇನಾನಿಯಾಗಿದ್ದವನೇ ಹಕ್ಕು ಪ್ರಕಾರ ಬಿಡಿಸಿದ ಸ್ವತಂತ್ರ ಭಾರತದ ನಕಾಶೆಯೆಂಬಂತೆ-ಪಂಡಿತಜೀಯ ಭಾಷಣವು ಹೃದಯಸ್ಥಾಯಿಯಾಯಿ

ಭಾರತೀಯರ ಹೃದಯ ಮತ್ತು ನೆದುಳಿನಲ್ಲಿ ಈ ದಿನ ತುಂಬಿರುವ ಭಾವ ಸ್ಫೂರ್ತಿಯು ಈ ರಣಾವಿನ ಶಬ್ದಗಳಲ್ಲಿ ಸರಿಯಾಗಿ ಬಿಂಬಿಸಿದೆ ಎಂದು ನಾನು ಹೇಳಲಾರೆ ಆದ್ದರಿಂದ ಈ ಸೂಚನೆಯನ್ನು ಮಂಜೂರು ಮಾಡುವ ಸಮಯ ಬಂದಾಗ ಕೈಯೆತ್ತುವ ಕ್ರಮ ಜಾರಿಸುವ ಬದಲಿಗೆ, ಎಲ್ಲರೂ ಎದ್ದು ನಿಂತು ಈ ಪ್ರತಿಜ್ಞೆಯನ್ನಂಗೀಕರಿಸಬೇಕೆಂದು ನಾನು ವಿನಯಪೂರ್ವಕ ಕೇಳಿಕೊಳ್ಳುತ್ತೇ' -ಎಂದು ಪಂಡಿತಜೀ ರಣಾವಿನ ಮಹತ್ವವನ್ನು ಆಸ್ಥಿತ, ಅಚಲ ವಾಣಿಯಿಂದ ಮನಗಾಣಿಸುವಾಗ ಸ್ವಾತಂತ್ರ್ಯದೊಡನೆ ಮಿಲನಗೊಂಡ ಪ್ರವಿಕತೆ ಅವರಲ್ಲಿ ಕಾಣುತಿತ್ತು. ನೆಹರೂ ಭಾಷಣ ಹಿಂದೀ ಮತ್ತು ಇಂಗ್ಲಿಷಿನಲ್ಲಿ ಒಂದು ಘಂಟೆ ನಡೆಯಿತು.

'ಕಾಳಗದ ಕಣಕ್ಕೆ ಮತ್ತೊಮ್ಮೆ ಧುಮುಕಲಿಕ್ಕೂ ತಯಾರು!' - ನೆಹರು

ಸರ್ ಗೋಪಾಲ ಸ್ವಾಮಿ ಅಯ್ಯಂಗಾರ್, ಬಿ. ಪಿ ಥಂಡನ್, ಬಾರ್ಡೊಲಾಯಿ, ಪಟ್ಟಾಭಿ, ಹರ್ನಾಮ್ ಸಿಂಗ್. ಮೆಹರ್ ಚಂದ್ ಖನ್ನಾ, ಕೆ ಎಮ್. ಮುನ್ಷಿ, ಶ್ರೀಮತಿ ದುರ್ಗಾಬಾಯಿ, ರಾಫಿ ಅಹಮ್ಮದ್ ಕಿಡ್ವಾಯಿಗಳ ಅರಿಸುವಿಕೆ ಜಾಹೀರಾದ ಮೇಲೆ ಅಧ್ಯಕ್ಷರು ಸಭಿಕರಿಗೆಲ್ಲಾ ಹಸ್ತಲಾಘವ ಕೊಟ್ಟರು

'ರಿಪಬ್ಲಿಕ್' ಸರಕಾರ' ಗುರಿ

ತಾ 12ರ ಸಭೆಯಲ್ಲಿ ಘಟನಾ ಸಮಿತಿಯ ಜೀವಾಳದಂಶಹ ಪ್ರಾಮುಖ್ಯ ರಣಾವು ಮುಂದೆ ಒಂತು. ಸಮಿತಿ ಸಭೆಯು ಸರ್ವ ಕಾರ್ಯಕ್ರಮಗಳ ಹಾಗೂ ಭಾವೀ ಸ್ವತಂತ್ರ ಭಾರತದ ಆಸ್ತಿವಾರದಂತಿರುವ ಸೂಚನೆಯಿದು ಇದು ಕಾಂಗ್ರೆಸ್ ಸದಸ್ಯರ ಸಭೆಯಲ್ಲಿ ಚರ್ಚಿಸಲ್ಪಟ್ಟು ರೂಪುಗೊಂಡು, ಪಂಡಿತ ಜವಾಹರಲಾಲರ ಮೂಲಕ ಮುಂತರಲ್ಪಟ್ಟದ್ದಿತು 'ಭಾರತಕ್ಕೆ ಸ್ವತಂತ್ರ ಸಾರ್ವ ಬೌಮಾಧಿಕಾರೀ ರಿಪಬ್ಲಿಕ್ ಸಂಸ್ಥಾವನ್ನು ರೂಪಿಸುವದೇ ಈ ಘಟನಾ ಸಮಿತಿಯ ಉದ್ದೇಶ-ಎಂದು ರಣಾವಿನ ಸಾರ 'ಈಗ ಬ್ರಿಟಿಷ್ ಭಾರತವಾಗಿರುವ ಭಾಗಗಳು-ಅಶ್ರಿತ ರಾಜ್ಯಗಳೆಂಬ ಕ್ಷೇತ್ರಗಳು-ಬ್ರಿಟಿಷ್ ಭಾರತದ ಗಡಿಹೊರಗಿದ್ದು ಸಮ್ಮತಿಯಿರುವ ಇತರ ಭಾಗ ಮತ್ತು ಸಂಸ್ಥಾನಗಳು-ಇವೆಲ್ಲವುಗಳನ್ನೊಳಗೊಂಡ ಸ್ವತಂತ್ರ ಸಾರ್ವಭೌಮಾಧಿಕಾರೀ ಭಾರತವು ಅನೆನ್ನುವುಗಳ ಒಂದು ಸಮ್ಮಿಶ್ರ ಕೇಂದ್ರವಾಗಿರುವುದು. ಇವೆಲ್ಲಾ ಕ್ಷೇತ್ರಗಳೂ ತಮ್ಮ ಸದ್ಯದ ಆಧಾರ ಮುಂದೆ ಘಟನಾ ಸಮಿತಿ ನಿರ್ಣಯಿಸುವ ಗಡಿಗಳೊಳಗೆ, ಕೇಂದ್ರಾಧಿಕಾರಕ್ಕೆ ಮೀಸಲಿಟ್ಟ ಹಕ್ಕು ಬಾಧ್ಯತೆಗಳನ್ನು ಬಿಟ್ಟುಳಿವ ಶೇಷಾಧಿಕಾರ ಸಮೇತ ಎಲ್ಲಾ ಅಧಿಕಾರವನ್ನೂ ಶಾಸನ ಬದ್ಧವಾಗಿ ಹೊಂದಿ ಅನುಭೋಗಿಸುವವು. ಸ್ವತಂತ್ರ ಸಾರ್ವ ಭೌಮಾಧಿಕಾರೀ ಭಾರತದ ಪತ್ಯದಂ ಉಪಾಂಗಗಳ, ಹಾಗೂ ಸರಕಾರೀ ಅಂಗಗಳ ಎಲ್ಲಾ ಹಕ್ಕು ಮತ್ತು ಶಕ್ತಿಗಳೂ ಜನತೆಯಿಂದಲೇ ಬರಬೇಕಾಗಿದೆ. ನ್ಯಾಯ, ಸಾಮಾಜಿಕ, ಆರ್ಥಿಕ, ರಾಜಕೀಯಗಳಲ್ಲಿ ಸಮಾನತೆ, ಸ್ಥಾನ, ಸಂದರ್ಭ ಮತ್ತು ಕಾನೂನಿನಿಂದಿರು ಸಮಾನತೆ; ರಾಯಿನೆ ಮತ್ತು ಸಾರ್ವಜನಿಕ ನೀತಿ ನಿಯಸಂವಾದಿಸುವಂತಾಗಿ, ಆ ಮೂಲಕ ಲೋಕದ ಶಾಂತಿ ಮತ್ತು ಮಾನವ ವರ್ಗದ ಕಲ್ಯಾಣ ಸಾಧನೆಗಾಗಿ ತನ್ನ ಸಂಪೂರ್ಣ ಪಾಲನ್ನು ಸಂತೋಷ ಪೂರ್ವಕ ಸಲ್ಲಿಸುವಂತಾಗುವದು'-ಎಂಬುದೇ ಈ ರಣಾವಿನ ರೂಪ ತಾ. 12ರಲ್ಲಿ ಈ ರಣಾವಿನ ಪ್ರಾಮುಖ್ಯತೆಯನ್ನು ಗಮನಿಸಿ ತಮಗೆ ಆ ಲೋಚನೆಗೆ ಸಮಯಬೇಕೆಂದು ಹಲವು ಸದಸ್ಯರಪೇಕ್ಷಿಸಿದುದರಿಂದ ಅಧ್ಯಕ್ಷರು ಸಭೆಯನ್ನು ಮರುದಿನಕ್ಕೆ ಮುಂದರಿಸಿಟ್ಟರು ಈ ಸೂಚನೆಗೆ ಸುಮಾರು 10 ಉಪಸೂಚನೆಗಳು ಒಂದಿದ್ದುವು. ಆ ವೈಕಿಡಾ ಎಯಕರರು ತಂದಿರುವ 'ಪ್ರಾತಂತ್ರ ಸಾರ್ವಭೌಮಾಧಿಕಾರೀ ಪ್ರಜಾಪ್ರಭುತ್ವ ಸರಕಾರ ಸ್ಥಾಪನೆಯೇ ಈ ಎಸೆಂಬ್ಲಿಯ ಗುರಿ. ಇದನ್ನು ದೃಢೀಕರಿಸುತ್ತಾ ಮುಸ್ಲಿಂ ಲೀಗ್ ಮತ್ತು ಅಶ್ರಿತ ರಾಜ್ಯಗಳ ಪ್ರತಿನಿಧಿಗಳ, ಸಹಕಾರವೂ ದೊರೆಯಲಾಗುವಂತೆ ಈ ಸಂಬಂಧದ ಪರ್ಯಾಲೋಚನೆಯನ್ನು ಮುಂದರಿಸಿಡುತ್ತದೆ' ಎಂಬ ತಿದ್ದುಪಡಿ ಸೂಚನೆಯೇ ಮುಖ್ಯವಾದುದು ಮೂಲ ಸೂಚನೆಯನ್ನು ಕಟ್ಟುನಿಟ್ಟಾಗಿ ಗೊಳಿಸುವ ಕಮ್ಯೂನಿಸ್ಟ್ ಲಾಸುರಿಯವರ ಮತ್ತೊಂದು ಪ್ರತಿ ರಣಾವೂ ಬಂದಿದೆ. ಉಳಿದವುಗಳಲ್ಲಿ ಹೆಚ್ಚಿನವು ಕಾಂಗ್ರೆಸ್ ಸದಸ್ಯರಿಂದಲೇ ಮುಂದೆ ಬಂದುದರಿಂದ ಕಾಂಗ್ರೆಸ್ ಪಕ್ಷದ ಸಭೆಯ ನಿರ್ಣಾರವಂತೆ ಅವೆಲ್ಲವೂ ಹಿಂದೆಗೆಯಲ್ಪಡಲಿವೆ

ತು ಬ್ರಿಟಿಷ್ ಹೇಳಿಕೆಯ ದೆಸೆಯಿಂದಾಗಿ ಆರಂಭದಿಂದಲೂ ಅಪ್ಪೊಂದು ಉತ್ಸಾಹದಿಂದಿರದ ಸರ್ವ ಸಭಿಕರಲ್ಲೂ ನವಚೇತನವನ್ನು ನಿರ್ಮಿಸಿ, ಸ್ವಾತಂತ್ರ್ಯದ ರೂಪಸಿ ನಿರ್ಮಾಣಕ್ಕವಶ್ಯವುಳ್ಳ ಹುರುಪನ್ನಿತ್ತ 'ಟೋನಿಕ್' ಆಯಿತು ನೆಹರುಗಳ ವಾಗ್ಧಾರೆ ಮೊದಲಿನಿಂದಿದ್ದ ಅಮೇರಿಕದ ಪ್ರತಿನಿಧಿ, ಸರ್ ಸಿ ಪಿ ಮತ್ತಿತರ ವಿದೇಶಿ ತಜ್ಞರಂತೆ ಆದಿನ ಲೇಡಿ ಕ್ರಿಪ್ಸ್, ಮಿಜ್ ಇಸ್ಮಾಯಿಲ್, ಮತ್ತಿತರ ಗಣ್ಯ ದೇಶವಿದೇಶಗಳ ಪ್ರಮುಖರು ಪ್ರೇಕ್ಷಕರಾಗಿದ್ದರು. 'ನಾನೀ ರಣಾವನ್ನು ನಿಮ್ಮ ಮುಂದಿಡುತ್ತೇನೆ. ಇದು ಕೇವಲ ಒಂದು ರಣಾವಲ್ಲ. ಇದೊಂದು ಜಾಹೀರು ನಾಮೆ, ಇದೊಂದು ದೃಢ ನಿರ್ಧಾರ. ಇದೊಂದು ಪ್ರತಿಜ್ಞೆ, ಮತ್ತಿದು ಒಂದು ಕರಾರು ನಮ್ಮಲ್ಲರ ಪಾಲಿಗೂ ಇದು ಸರ್ವಸಮರ್ಪಣಯ ವಿಷಯವಾಗುವದೆಂದು ನಾನೀಶಿಸುತ್ತೇನೆ. ಇಲ್ಲಿಯ ಸಂಕುಚಿತ ಶಬ್ದ ಜಾಲಗಳಿಂದ ಇದರ ಯೋಗ್ಯತೆಯನ್ನಳೆಯ ದೆ, ಸೂಚನೆಯ ಆಂತರ್ಗತ ಸ್ಫೂರ್ತಿಯನ್ನು ನೋಡಿಕೊಳ್ಳಿರೆಂದು ವಿನಯ ಪೂರ್ವಕ ಕೇಳಿಕೊಳ್ಳುತ್ತೇನ ವಾತ್ಯಗಳಲ್ಲೊಂದು ಐಂದ್ರಜಾಲವಿರುವದೇನೋ ನಿಜ. ಆದರೆ ಕೆಲವೊಮ್ಮೆ ಮಾನವಸೃಷ್ಟಿ, ಅಥವಾ ರಾಷ್ಟ್ರೀಯ ಸ್ಫೂರ್ತಿಯ ಮಾಯಕಳ್ಳೆ ಸರಿಯಾಗಿ ಹೊಂದಿಕೊಳ್ಳಲು ವಾಗ್ವಾಲಕ್ಕೂ ಆಗುವದಿಲ್ಲ

ಅಧಿಕ ಪ್ರಸಂಗಿ ಬ್ರಿಟಿಷರಿಂದ ಅಡಚಣೆ!

ಈ ರಣಾವಿಂದರೆ ಪ್ರತಿಯೊಂದು ಇಚ್ಛೆಗೆಯನ್ನೂ ಲಕ್ಷ್ಯ ಪೂರ್ವಕ ಪರೀಕ್ಷಿಸಿ ಇಡಬೇಕಾದ ಸ್ವತಂತ್ರ ಭಾರತ ಕಟ್ಟಡದ ಮೂಲ ನಕಾಶೆಯೆಂಬುದನ್ನು ವ್ಯಾಖ್ಯೀಕರಿಸಿ, ಈ ಮೂಲ ಭೂತ ತತ್ವಗಳನ್ನು ಪ್ರತಿಭಟಿಸುವವರು ಭಾರತದಲ್ಲಿ ಇರಲಾರರು. ಇರಕೂಡದೆನ್ನುತ್ತಾ "ಯಾರಾದರೂ ಇದಕ್ಕೆದಿರಾಗಿ ಕೊಡೆತಟ್ಟುತ್ತಾರಾದರೆ ನಾವಾ ಯುದ್ಧಾಹ್ವಾನವನ್ನು ಸ್ವೀಕರಿಸುವದೇ ಸರಿ, ನಿಮ್ಮ ಸ್ವಾನದಲ್ಲಿ ಗಟ್ಟಿನಿಲ್ಲುವದೇ ಸರಿ' ಎಂದು ಜವಾಹರರಂದಾಗ ಸಭೆಯಲ್ಲಿ ಹುರುಪುಧ್ವನಿಯುದ್ರಿತ ತನ್ನ ಲಂಡನ್ ಪ್ರವಾಸದ ಅನುಭವಗಳನ್ನು ವಿವರಿಸುವಾಗ ಪಂಡಿತಜೀಯ ಸ್ವರಕ ತೋರವಾಯಿತು ಲಂಡನ್ನಿಗೆ ಹೋಗಲು ನಾನು ಹಿಂಜರಿದಿದ್ದೆ, ಕಾರಣವೇನೆಂಬುದು ನಿಮಗೆಲ್ಲಾ ಗೊತ್ತು, ಆದರೂ ಬ್ರಿಟಿಷ್ ಪ್ರಧಾನಿಯ ಮಾತಿಗೀ ವಿಜ್ಞಾಪನೆಗೆ ಮಾನ್ಯತೆಕೊಡಲು ಹೋಗಬೇಕೆಂಬ ಕಾರಣ ಹೋಪೆ ಎಲ್ಲೆಲ್ಲಿಯೂ ಆದರಾತಿಥ್ಯಪಡೆದೆ ಆದರೆ, ಇಡೀ ಲೋಕದ ಆದರಲ್ಲೂ ಗತಕಾಲದ ಸಂಬಂಧ ಮತ್ತು ಘರ್ಷಣೆಗಳ ದೆಸೆಯಿಂದಾಗಿ ವಿಶೇಷತಃ ಬ್ರಿಟನಿನ ಪ್ರೋತ್ಸಾಹ, ಮೈತ್ರಿ, ಸಹಕಾರಗಳ ಸಂದೇಶದ ವಿಶೇಷಾವಶ್ಯಕತೆಯಿದ್ದ ಭಾರತದ ಈ ಸಂಧಿ ಕಾಲದಲ್ಲಿ ಪ್ರೋತ್ಸಾಹದ ಅಣುಮಾತ್ರವೂ ಸಿಗದೆ ದೊಡ್ಡ ಪರಿಮಾಣದ ನಿರಾಶೆಯನ್ನೇ ಹೊತ್ತುಕೊಂಡು ಮರಳುವ ದುರ್ದೈವವು ನನಗೊದಗಿತು. ಪರವಾ ಇಲ್ಲ. ಇತ್ತೀಚಿನ ಬ್ರಿಟಿಷ್ ಹೇಳಿಕೆಯಿಂದಾಗಿ ಉದ್ಭವಿಸಿರುವ ಹೊಸ ಅವಕಾಶಗಳು ನನ್ನ ಹಾದಿಯನ್ನಡ್ಡಗಟ್ಟಲಾರವೆಂದೂ, ಇಲ್ಲಿರುವ ಮತ್ತಿಗೆ ಗೈರು ಹಾಜರಿಯಿನ ಸರ್ವರ ಸಹಕಾರ ಬಲದಿಂದ ನಾವೆವುಗಳನ್ನು ಗೆದ್ದು ಮುಂದೊತ್ತುವೆವೆಂದೂ ನನಗೆ ಭರವಸೆಯಿವೆ".

ನನಗೆ ಬಿದ್ದ ಜೆಟ್ಟು!

"ಆದರೂ ನನಗೆ ಬಿದ್ದ ಹೊಡೆತವದು ನಾವು ಕೂನೆಯ ಗೆಗೆತಲ್ಕೆಳುವೆವೆನ್ನುವಾಗಲೇ ನಮ್ಮ ಹಾದಿಯಲ್ಲಿ ಕಂಟಕಗಳನ್ನು ತೂರಿದ್ದರಿಂದ ನನ್ನ ಹೃದಯವನ್ನದು ಘಾಸಿಸಿದೆ. ಈ ಮೊದಲು ಸೂಚಿಸಲ್ಪಟ್ಟ

(ಅನೇ ಪುಟ ನೋಡಿರಿ)

ಉಡುಪಿ ಬೋರ್ಡಿಂಗ್
ಎಂಡ್
ಲೋಜಿಂಗ್ ಮಧುರಾ.

ತಾ 8—8—1945ರಲ್ಲಿ ಜರಗಿದ ಅರನೆ ಹುಟ್ಟುಹಬ್ಬದ ಸಮಾರಂಭದ ಸಂತೋಷ ಕಾಲದಲ್ಲಿ ನನಗೆ ಸಕಲ ವಿಧದಿಂದಲೂ ಬೆಂಬಲವಿತ್ತು ಪ್ರೋತ್ಸಾಹಿಸಿದ ಮಾಹನೀಯರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇವೆ ಇದಕ್ಕಿಂತಲೂ ದ್ವಿಗುಣಿತವಾಗಿ ನಮ್ಮ ಸೇವೆಯನ್ನು ಹೊಸ ವರುಷದಲ್ಲಿ ಸಲ್ಲಿಸಲು ಮಹಾಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನೀಯುವರೆಂದು ನಿರೀಕ್ಷೆ.

ಎಲ್. ನರಸಿಂಗ ರಾವ್,
ಪ್ರೊಪ್ರೈಟರ್.

The Canara Banking Corporation Limited.

(Incorporated in British India, with limited Liability)

Estd· 1906·

Head Office. **UDIPI**, South Kanara.

Authorised Capital	...	Rs 25,00,000
Issued & Subscribed	...	,, 16,00,000
Paid up	... ...	,, 15,87,600
Reserves	... ...	,, 6,00,000
Total Resources Around		,, 24 Crores.

Branches at– Bombay, Madras, Bangalore, Coimbatore, Salem, Calicut, Hubli, Mysore, Cochin, Mangalore, Madras etc·· etc·

Banking Business of Every Description Transacted.

ಉಡುಪಿ, ಗುರುವಾರ, ೧೯-೧೨-'೪೬

ಇದೀಗ ಸಂದರ್ಭ!

ಭಾರತೀಯರು ತಮ್ಮ ಸ್ವಾತಂತ್ರ್ಯ ಸಾಧನೆಗಾಗಿ ಮುತ್ತೊನ್ದೆ ಹೋರಾಡಬೇಕಾಗುವದೆಂಬುದೀಗ ದಿನ ಕಳೆದಂತೆ ಸ್ಪಷ್ಟವಾಗುತ್ತಾ ಹೋಗುತ್ತಿದೆ; ಆ 'ಹೋರಾಟ ಸಂಭವನೀಯ' ಎಂದಿದುವರೆಗೆ ಊಹೆಯ ಪಥದಲ್ಲಿತ್ತು; ಈಗ 'ಹೋರಾಟ ನಿಶ್ಚಯ'ವೆಂಬಂತೆ ಆದು ದೃಷ್ಟಿ ಪಥಕ್ಕೇ ನೇ ಬಂದಿದೆ. ಸರ್ವರೂ ಒಳಗಣ್ಣನ್ನು ತೆರೆಯ ಬೇಕಾದ ಕಾಲವಿದು. ಜಾಗ್ರತೆ, ಸಿದ್ಧತೆ ವಿನಹಾ ಯ-ದ್ಧ ವಿಜಯವಿಲ್ಲವೆಂಬುದನ್ನ ರಿತವರು ಸಕಾಲದಲ್ಲಿ ಎಚ್ಚರಗೊಳ್ಳುತ್ತಾರೆ-ಆ ಪೀಠಿಕೆಯ ಸಂಧಿಕಾಲ ಈಗಿನದೇ. ಹಿಂದೀ ಸ್ವಾತಂತ್ರ್ಯಕ್ಕಾಗಿ ರಾಷ್ಟ್ರ ಸಭೆಯು ಇದು ವರೆಗೆ ಹೂಡಿದ್ದ ಹಲವು ಹೋರಾಟಗಳ ಅನುಭವ ರಾಷ್ಟ್ರಕ್ಕಿದೆ. ಪೂರ್ವ ಸಿದ್ಧತೆ ಮತ್ತು ಸಾಕಷ್ಟು ಸಂಘಟನೆಯಿಲ್ಲದ ದೆಸೆಯಿಂದಾಗಿಯೇ ಅವು ಗುರಿ ಮುಟ್ಟಲಿಲ್ಲವೆಂಬುದನ್ನೊಪ್ಪಬೇಕು. ಗತಕಾಲದ ಆ ಕಹಿ ಅನುಭವಗಳಿಂದ ನಾವು ಪಾಠ ಕಲಿಯುತ್ತಿದ್ದರೆ, ಆ ಪರಾಭವಗಳನ್ನೇ ಪ್ರಾಥ ಶಿಕ್ಷಣವೆನ್ನಬಹುದಿತ್ತು. ಆದರೆ ಈ ಮಟ್ಟಿಗೆ ಭಾರತೀಯರು 'ದಡ್ಡ ಹುಡುಗರು' ಎಂದು ನಾಚಬೇಕಾಗಿದೆ. ನಮ್ಮ ಜನತೆಗೆ ರಣಕಹಳೆ ಕೇಳಿ ಬಂದಾಗ ಕಿವಿಯರಳಿಸಲು ಮಾತ್ರ ಗೊತ್ತಿಲ್ಲದೆ, ಆ ಸಂಭವವನ್ನು ಮುಂದಾಗಿ ಊಹಿಸಿಕೊಳ್ಳುವ ಶಕ್ತಿಯಿಲ್ಲ; ನಮ್ಮ ನಾಯಕರಿಗೂ ಹೀಗೆಯೇ–ಸಂದರ್ಭ ಬಂದೊಡನೆ ಸಡ್ಡು ಹೊಡೆಯುವ ಮೊದಲು ಎಲ್ಲರನ್ನೂ ಎಲ್ಲವನ್ನೂ ಸಜ್ಜುಗೊಳಿಸಬೇಕೆಂಬ ಕಡೆಗೆ ಕಣ್ಣಾಲದಲ್ಲಿ ಅವರ ಲಕ್ಷ್ಯ ಹೋಗುವದಿಲ್ಲ. ಪ್ರಕೃತ ಈ ದೋಷದ ನಿವಾರಣೆಯು ಎಲ್ಲಕ್ಕಿಂತ ಮೊದಲಾಗಬೇಕು. ಹಾಗೂ ಅವಸರದಿಂದಲೇ ಆಗಬೇಕು.

ಕಾಂಗ್ರೆಸಿನ ಇಚ್ಛೆ ಮತ್ತು ಹರಕ್ಕೆನು ಸಾರವಾಗಿ ಭಾರತದ ರಾಜ್ಯಾಂಗ ರಚನಾ ಸಭೆಯು ನಿಶ್ಚಿತ ದಿನದಲ್ಲಿ ಸೇರಿ, ಕಿರಿಚಾಟ, ಕೆರುಕುಳಗಳನ್ನು ಕಡೆಗಣಿಸಿ ರಾಜ್ಯಾಂಗ ನಿರ್ಮಾಣದಲ್ಲೇ ತನ್ನ ಲಕ್ಷ್ಯವನ್ನು ಹರಿಸಿ ಜಯಶೀಲವಾಗಿ, ಪರಿಣಾಮ ಕಾರಿಯಾಗಿ, ಮುಂದೊತ್ತುತ್ತಿರುವದು ಸ್ಪಷ್ಟ. ಮುಸ್ಲಿಂ ಲೀಗೊಂದನ್ನು ಬಿಟ್ಟು ಭಾರತದ ಇತರ ಎಲ್ಲಾ ಪಕ್ಷ ಸಂಗಡಗಳ ಪ್ರತಿನಿಧಿಗಳೂ ಆದರಲ್ಲಿ ಭಾಗ ವಹಿಸಿರುವದರಿಂದ ಬ್ರಿಟಿಷ್ ಸರಕಾರದ ಹೃದಯವು ಲೀಗೊಂದಕ್ಕಾಗಿ 'ಮಾರಿಹೋಗಿಲ್ಲ' ವಾದರೆ, ಈ ಸಭೆಯ ತೀರ್ಮಾನಗಳನ್ನು ಕಡೆಗಣಿಸುವ ಎದೆಗಾರಿಕೆ ಅದಕ್ಕೆ ಬರಲಾರದೆಂಬುದೂ ಖಂಡಿತವೇ. ಆದರೂ ಹೋರಾಟವನ್ನು ಅನಿವಾರ್ಯಗೊಳಿಸುವ ಕೆಲವು ಕಂಟಕಗಳಿವೆ ಎಂಬುದನ್ನು ಮರೆಯ ಬಾರದು. ಬ್ರಿಟಿಷರ ದಶಂಬರ ತಾ. 6ರ ಹೇಳಿಕೆ–ಪಾರ್ಲಿಮೆಂಟಿನಲ್ಲಿ ಪೆಥಿಕ್ ಲಾರೆನ್ಸ್, ಕ್ರಿಪ್ಸ್, ಅಲೆಕ್ಸಾಂಡರ್, ಚರ್ಚಿಲ್ಲರಿತ್ತ ಭಾಷಣ- ಜಿನ್ನರ ಸುದೃಢ ವಿರೋಧ ಇವೆಲ್ಲ ಮತ್ತು ಅನೇಕ ಅಂಡಿಸಿನಲ್ಲಿರುವ ಮಾತುಗಳ-'ಈ ದರಗುಗಳು ವಸ್ತುಸ್ಥಿತಿಯ ಸಂಗತಿಗೆ ಸಿಕ್ಕಿ ಸಸೆಯ ವಂದಳುಗಳಲ್ಲಿ, ನ್ಯಾಯದ ಒಪ್ಪವನ್ನಾದರೂ ಹೆಚ್ಚಲಾಗುವಂಥವುಗಳಲ್ಲ. ಸಂಧಾನ, ಸಮಜಾಯಿಸುವಿಕೆಗಳ ಅಬ್ಬಗಗೆ ಸಿಗುವದಂತೂ ಸಂಪೂರ್ಣ ಅಸಾಧ್ಯ. ಇದು ವರೆಗೆ ಕಾಂಗ್ರೆಸಿಗಿದಿರಾಗಿ ಲೀಗ್ ಮತ್ತು ಬ್ರಿಟಿಷ್ ಸರಕಾರವೆಂಬ ಎರಡು ಪಾಳಯಗಳಿದ್ದುವ್ವ; ಆವೆರಡನ್ನೂ ಕಾಂಗ್ರೆಸು ಎರಡು ಪ್ರತ್ಯೇಕ ರಂಗಗಳಲ್ಲಿ ಹೋರಾಡಬೇಕಾಗಿದ್ದಿತು ಈಗ ಅವೆರಡು ಒಂದುಗೂಡಿವೆ—ಬ್ರಿಟಿಷ್ ಲೀಗ್' ಸಮ್ಮಿಶ್ರ ವಿರೋಧೀ ಪಕ್ಷವಾಗಿ ಕಾಂಗ್ರೆಸನ್ನು ದಿಟ್ಟಿಸಿ ನಿಂತಿವೆ. ನವ ಮಾತ್ರಕ್ಕಾದರೂ ಮೂರನೆಯದಾಗಿದ್ದ ಬ್ರಿಟಿಷರೀಗ ಪ್ರತ್ಯಕ್ಷ ಇದಿರುವಾದಿಗಳಾಗಿ ಮುಂದೆ ಬಂದಿದ್ದಾರೆ ಘಟನಾಸಮಿತಿಯ ಕಾರ್ಯಗಳು ಮುಂದೆ ಮುಂದೆ ಸಾಗಿದಂತೆ ಈ ಸಮ್ಮಿಶ್ರ ವಿರೋಧೀ ಪಕ್ಷದೊಂದಿಗೆ ಢಿಕ್ಕಿ ಹೊಡೆಯುವ ಅಪಾಯ ನೆಲೆಗೆ ಬರಲಿರುವದು ಖಂಡಿತ. ಆ ಮಹಾ ಘರ್ಷಣೆಯಲ್ಲಿ ಘಟನಾ ಸಮಿತಿಯ ಅರ್ಧಾರ್ ಆದರ ಜೀವಾಳವಾಗಿರುವ ರಾಷ್ಟ್ರಸಭೆಯ ಬಲ ಹೆಚ್ಚಾದಲ್ಲಿ ವಿರೋಧೀ ಪಕ್ಷ ನುಚ್ಚುನೂರಿಯಾಗಿ ಸಮಿತೀ ನಿರ್ಧಾರಗಳು ಆಸ್ತಿತ್ವಕ್ಕೆ ಬರುವವು. ವಿರೋಧೀ ಬಲವೇ ಅಧಿಕ ವಾದಲ್ಲಿ ಘಟನಾ ತೀರ್ಮಾನಗಳೆಲ್ಲಾ ಸಿಡುಮೋಗುವವು; ಆ ಘರ್ಷಣೆಯು ನಡುಗಾಲ ಸರಕಾರ ಮತ್ತು ಪ್ರಾಂತಿಕ ಸರಕಾರಗಳನ್ನೂ ಅಲುಗಾಡಿಸಿಬಿಡಬಹುದು. ಆದ್ದರಿಂದ ಆ ಸಂದರ್ಭದ ಉಸಿರೋಗಕ್ಕೆ ಬೀಳುವಂತೆ ಕಾಂಗ್ರೆಸಿನ ಬೆಂಗೋಲಾಗಿ ರಾಷ್ಟ್ರದ ಸರ್ವಶಕ್ತಿಯನ್ನೂ ಈಗಲೇ ಬಡಿದೆಬ್ಬಿಸಿ ಸಜ್ಜುಗೊಳಿಸಬೇಕಾದುದು ಅತ್ಯಗತ್ಯ. ಅಧಿಕಾರಸ್ಥಾನದಲ್ಲಿರುವ- ಸರ್ವಜನಿಕ ರಂಗದಲ್ಲಿರುವ–ಸರ್ವ ಕಾಂಗ್ರೆಸ್ ಪ್ರಮುಖರು ಹಾಗೂ ಕಾರ್ಯಕರ್ತರು ತಂತಮ್ಮ ಕ್ಷೇತ್ರಗಳಲ್ಲಿ ಇದೇ ದೃಷ್ಟಿಯಿಂದ ದುಡಿಯಹೆತ್ತಿದರೆ, ಆ ಘರ್ಷಣೆ ಸಮಿಪಿಸುವ ಮೊದಲೇ ಜನತಾ ಶಕ್ತಿಯ ಸಂಗ್ರಹವಾಗಬಲ್ಲುದು; ಇಂತಹ ಪ್ರಚಂಡ ಶಕ್ತಿಗೆ ಢಿಕ್ಕಿ ಹೊಡೆಯುವದು ಲಾಭದಾಯಕವಲ್ಲವೆಂಬುದು ಮುಂದಬ್ಬಾಗಿ ಬ್ಯಾಪಾರೀ ಬುದ್ಧಿಯ ಬ್ರಿಟಿಷರು ತಿಕ್ಕಾಟಕ್ಕೇನೇ ಹಿಂದೆಗೆಯಲೂ ಬಹುದು.

ಬೆಲ್ಲದ ಬೆಲೆ ನಿಯಂತ್ರಣವೊ ? ಬೆಲ್ಲದ ಬೆಳೆಯೇ ನಿರ್ನಾಮವೊ ?

ಮದ್ರಾಸ್ ಸರಕಾರವು ಇದೀಗ ಹೊಸ ತಾಗಿ ಬೆಲ್ಲದ ಬೆಲೆಯನ್ನೂ ನಿಯಂತ್ರಿಸಿದೆ. ನಿಯಂತ್ರಣ ಬೇಡವೆನ್ನುವ ಕಾಲ ಇದಲ್ಲ; ಆದರ ನಿಯಂತ್ರಣದ ಹೆಸರಿನಿಂದ ನಿರ್ಮಾಣ ವನ್ನೇ ನಿರ್ಮೂಲಿಸುವ ಕೆಲಸವಾಗಿ, ರೈತ ವರ್ಗವ ಸುಲಿಗೆ ನಡೆದರೆ ಯಾವ ಸರಕಾರ ಕ್ಕೇನೇ ಆದರೂ ಆವರ ಹೊಟ್ಟೆಯುರಿಯ ರಾಪ ತಟ್ಟದಿರದು. ರೈತರ ಹಿತಸಾಧನೆಯನ್ನೇ ಸರ್ವ ಪ್ರಥಮವಾಗಿ ಗಣಿಸಿರುವ ಮದ್ರಾಸಿನ ಕಾಂಗ್ರೆಸ್ ಸರಕಾರಕ್ಕಂತೂ ಇಂತಹ ಪುರುಪ್ಪೇಶವೆಂದಿಗೂ ಇರುವಂತಿಲ್ಲ. ಹಾಗಾದರೆ ಬೆಲ್ಲಕ್ಕೆ ಇಂದು ನಿಶ್ಚಿಸಲ್ಪಟ್ಟಿರುವ ನಿರ್ಮಾಪಕ ರೈತರಿಗೆ ಹೆಚ್ಚಿನ ನಷ್ಟಕಾರಿಯಾದ ಧಾರಣೆಗೆ ಸಂಬಂಧಪಟ್ಟ ಅಧಿಕಾರಿಗಳಲ್ಲಿರುವ ಅಜ್ಞಾನವೇ ಕಾರಣವೆಂದೂಹಿಸಬಹುದು? ಹಾಗಿದ್ದಲ್ಲಿ ಈ ವಿಷಯವನ್ನೂ ಆಕಾಶದಿಂದ ಜಿಪ್ಪದ್ದಲ್ಲ, ರೈತೋದ್ಧಾರವೇ ತನ್ನ ಧ್ಯೇಯವೆಂದು ಘೋಷಿಸುತ್ತಿರುವ ಸರಕಾರಕ್ಕೆ, ತನ್ನ ಅಜ್ಞಾನವಶಾತ್ ಆದೇ ರೈತರಿಗೆ ಅನ್ಯಾಯವಾಗಿದೆ ಎಂಬುದು ಮುಂದಬ್ಬಾದಲ್ಲಿ ಆದು ತನ್ನ ತಪ್ಪನ್ನು ತಿದ್ದಿಕೊಳ್ಳಬಹುದು. ರೈತರ ಹಿತಸಾಧನೆಯ ಮಾತು ಹಾಗಿರಲಿ— ಒಂದು ಜನೋಪಯೋಗೀ ಸಾಮಾಗ್ರಿಯ ನಿರ್ಮಾಣಕ್ಕೇನೇ ತೊಂದರೆಯೊಗುವಂತೆ ನಿಯಂತ್ರಣ ಪಾಕುವ ಉದ್ದೇಶವು ಯಾವ ದೃಷ್ಟಿಯಿಂದಲೂ ಹಿತಕರವಲ್ಲವಷ್ಟೆ! ಬಾಳುವ ಆಶೆಯಿರುವ ರೈತರಾರೂ ಈಗಿನ ಕಂಟ್ರೋಲ್ ಬೆಲೆಗೆ ಮಾರುವದಕ್ಕಾಗಿ ಇನ್ನು ಬೆಲ್ಲದ ಕಬ್ಬು ನೆದಾಳರೆಂದು ಖಂಡಿತವಾಗಿ ಹೇಳಬಹುದು. ಎಂತೇಕೆ, ಎಂಬುದನ್ನು ಈ ಕಳಗಿನ ನ್ಯಾಯವಾದ ಆಯ ವ್ಯಯ ಪಟ್ಟಿಯೇ ಸ್ಪಷ್ಟಪಡಿಸುತ್ತದೆ

ಉತ್ಪನ್ನವೆಷ್ಟು?

ಮೂರು ಬೆಳೆಯಾಗುವ ಬಯಲು ಗದ್ದೆಯಲ್ಲಿ ಮಾತ್ರ ಕಬ್ಬನ್ನು ಬೆಳಸಲಿಕ್ಕಾಗುತ್ತಿದೆ. ಪ್ರಥಮ ಬೆಳೆ ಕಟಾವಾದೊಡನೆಯೇ ಕಬ್ಬಿನ ಜೀವಾಳಗಳನ್ನು ಪತ್ತಿದರೆ, ಕಬ್ಬನ್ನು ಬೆಲ್ಲಕ್ಕಾಗಿ ಕಡಿದು ಸರಿಪಡಿಸುವ ವರೆಗೆ 18 ತಿಂಗಳು ಹಿಡಿಯುತ್ತದೆ. ಅದರೆ ನಟ್ಟ ನರುಪದ ದ್ವಿತೀಯ ಮತ್ತು ತೃತೀಯ ಹಾಗೂ ಮರುವರುಷದ ಪ್ರಥಮ ಮತ್ತು ದ್ವಿತೀಯ ಘಾಸ್ಯ ಸಾಗುವಳಿಗಳಿಗೆ ನೂನ್ಯತೆಯಿಲ್ಲ. ಒಮ್ಮೆ ಕಬ್ಬು ಸಾಗುವಳಿ ಮಾಡಿದರೆ ಒಂದು ಬಯಲಲ್ಲಿಗದ್ದೆಯು 14ನೇ ವರುಷದ ನಿಕ ಮಾತ್ರ ಉತ್ಪತ್ತಿಯೇ ಆದಾಬುದನ್ನು ಸರಿಯಾಗಿ ನೆನಪಿನಲ್ಲಿಡಬೇಕು. ಆದರೂ ನಮ್ಮ ತುಲನೆಗನುಕೂಲವಾಗುವಂತೆ, ಒಂದು ಕಬ್ಬು ಸಾಗುವಳಿಗೆ ಒಂದೇ ವರುಷ ಹಿಡಿಯುತ್ತದೆ ಎಂದೇ ಕಟ್ಟಿಕೊಳ್ಳೋಣ. ಒಂದು ಕೊಯಿಲು (10 ಸೆಂಟ್ಸು) ಗದ್ದೆಯಲ್ಲಿ ನೆಟ್ಟ ಕಬ್ಬಿನಿಂದ ಸರ್ವಸಾಮಾನ್ಯವಾಗಿ ಒಂದು ಖಂಡಿ ಬೆಲ್ಲ ಉತ್ಪನ್ನವಾಗಬಹುದು. ಈಗಿನ ನಿಯಂತ್ರಿತ ಧಾರಣೆಯೆಂದರೆ ಉತ್ತ್ರತರಗತಿಯ ಜಿಲ್ಲ ಇಂಪೀರಿಯಲ್ ಮಣ ಒಂದಕ್ಕೆ 14-8-0, ದ್ವಿತೀಯ ತರಗತಿಗೆ 13-0-0. ರೈತರು ಸೂಕಾಬಿಕ್ಕೆ ತರುವ ಯಾವ ಬೆಲ್ಲವೂ ಪದಕೊಳ್ಳುವ ವ್ಯಾಪಾರಿಗಳ ದೃಷ್ಟಿಯಲ್ಲಿ ಪ್ರಥಮ ದರ್ಜೆಯದಾಗುವಂತಿಲ್ಲವೆಂಬುದು ನಿರ್ವಿವಾದ. ಆದ್ದರಿಂದ ಇಂಪೀರಿಯಲ್ ಮಣ (3ಸಾಮಾನ್ಯ ಮಣಗಳು)ಕ್ಕೆ 13 ರೂಪಾಯಿಯೆಂದು ಕಟ್ಟಿಕೊಂದಲ್ಲಿ ಸಾಮಾನ್ಯ ಮಣಕ್ಕೆ ರೂ. 4-5-4 ಬೆಲೆ ಸಿಗುತ್ತದೆ. 4½ ರೂಪಾಯಿ ಎಂದೇ ಲೆಕ್ಕ ಹಿಡಿಯೋಣ. 10ಸೆಂಟ್ಸು (ಒಂದು ಕೊಯಿಲು) ಸ್ಥಳದಲ್ಲಾಗುವ ಒಂದು ಖಂಡಿ ಬೆಲ್ಲದಿಂದಾಗಿ ರೂ.90-0 0 ಉತ್ಪನ್ನವಿದೆಯೆಂದಾಯಿತು

ಖರ್ಚೆಷ್ಟು?

ಈಗ ಈ ಒಂದು ಕೊಯಿಲಿನಲ್ಲಿ ಕಬ್ಬು ನೆಟ್ಟು ಬೆಲ್ಲ ಮಾಡುವ ತನಕ ಹಿಡಿಯುವ ಖರ್ಚೆಷ್ಟು ಎಂಬುದನ್ನೂ ನೋಡಿಕೊಂಡಲ್ಲಿ, ಸದ್ಯದ ಬೆಲೆ ನಿಯಂತ್ರಣವು ರೈತರ ಉಸಿರು ಕಟ್ಟಿಸಲು ಆವರ ಕೊರಳಿಗೆ ಹಾಕಿದ ಉರುಳೆಂಬುದನ್ನು ತಿಳಿಯಲಾಸ ಪ್ರಯಾಸವೂ ಇಲ್ಲ. 10 ಸೆಂಟ್ಸುನಷ್ಟು ಸ್ಥಳಕ್ಕೆ ಬೇಕಾಗುವ ಕಬ್ಬಿನ ಬೀಜ ಸಾವಿರಕ್ಕೆ ಈಗಿನ ಬೆಲೆ ರೂ. 5. ಅದಕ್ಕೆ ಬೇಕಾಗುವ ಗೊಬ್ಬರದ ಮೌಲ್ಯ ರೂ.5. ಎಂಟು ದಿನಕ್ಕೊಂದು ಬಾರಿ ನೀರು ಬಿಡಬೇಕಾದಂತೆ ಏತ ಹೊದಲಾದುವುಗಳ ಕೆಲಸಗಾರರಹಾಗೂ ನೆಡುವು, ಅಗೆಯುವ ಇತ್ಯಾದಿ ಶ್ರಮಜೀವಿಗಳ ಸಾರ್ವಿಕ ಜುಮ್ಲಾ ಕೂಲಿ ಕಡಿಮೆಯೆಂದರೆ ರೂ. 16–ಹೀಗೆ ಒಟ್ಟು 26 ರೂಪಾಯಿ ವೆಚ್ಚ ಕಬ್ಬು ಕಡಿಯುವ ವರೆಗೇನೇ ಇದೆ. ಇನ್ನಾ ಕಬ್ಬನ್ನು ಬೆಲ್ಲ ಮಾಡಲಿಕ್ಕೆ ಒಡಿಯುವ ವೆಚ್ಚವನ್ನು ಲೆಕ್ಕಿಸೋಣ. ಒಂದು ಗಾಣದಲ್ಲಿ ದಿನಕ್ಕೆ 10 ಮಣ ಬೆಲ್ಲ ಮಾತ್ರ ತಯಾರಾಗಬಲ್ಲುದು. ಮೊದಲು 8 ಆಡೆಯ ದ್ದ ಗಾಣದ ಬಾಡಿಗೆ ಈಗ ದಿನಕ್ಕೆ ರೂ. 2. ಬೆಲ್ಲ ಮಾಡುವ ತಜ್ಞನಿಗೆ ಊಟ, ವೆಚ್ಚ, ಸಂಬಳ ಕೂಡಿ ದಿನಕ್ಕೆ 3 ರೂ. ಗಾಣ ತಿರುಗಿಸಲು ಬೇಕಾಗುವ ಎರಡು ಜತೆ ಕೋಣಗಳ ದಿನ ಬಾಡಿಗೆ 3 ರೂ. ಮತ್ತಾದಿನದ 5 ಜನ ಕೂಲಿಗಳ ಮಜೂರಿ 7½ ರೂ. ದಿನಪ್ರೊಂದಕ್ಕೆ ಬೇಕಾಗುವ ಕನಿಷ್ಟಪಕ್ಷ ಒಂದು ಗಾಡಿ ಕಟ್ಟಿಗೆಯ ಮೌಲ್ಯ 14 ರೂ. ಹೀಗೆ ಅರ್ಧ ಖಂಡಿ ಬೆಲ್ಲ ತಯಾರಿಯ ಆಧಿನಾ ಒಂದು ದಿನದ ಗಾಣದ ಒಟ್ಟು ನೆಚ್ಚ ರೂ. 29-8 0. ಒಂದು ಕೊಯಿಲು ಗದ್ದೆಯಲ್ಲಾಗುವ ಖಂಡಿ ಬೆಲ್ಲ ತಯಾರಿಗೆ 59 ರೂಪಾಯಿ ವೆಚ್ಚವಿದೆ ಮೇಲ್ಪಡೆ ಕಾಣಿಸಿದ ಕಬ್ಬು ತಯಾರಿಯ ವೆಚ್ಚ 26 ರೂಪಾಯಿ ಕೂಡಿ ಹಿಂಡೀ ಬೆಲ್ಲ ತಯಾರಾಗಿ ಅದಿಯಂದಂತ್ಯದ ವರೆಗೆ ಒಟ್ಟು ಖರ್ಚು ರೂಪಾಯಿ 85-0 0. ಆ ಬಯಲು ಗದ್ದೆ ಕೊಯಿಲೊಂದಕ್ಕೆ ಸರ್ವಸಾಧಾರಣ 4 ಕಳಸಿಗೆ ಅಕ್ಕಿ ಗೇಣಿಯಿವ. ಆದರ ಬೆಲೆ ಈಗಿನ ನಿಯಂತ್ರಿತ ಧಾರಣೆಯಂತೆ 13 ರೂಪಾಯಿಯನ್ನೂ ಕೂಡಿಸಿದರೆ ರೂ. 98 ವೆಚ್ಚ ಬೀಳುತ್ತದೆ. ಮೇಲ್ಪಡೆ ನಮೂದಿಸಿರುವಂತೆ ಬೆಲ್ಲದ ಈಗಿನ ನಿಯಂತ್ರಿತ ಬೆಲೆ ಖಂಡಿಗೆ 90 ರೂಪಾಯಿ-ಆದರ ತಯಾರಿ ವೆಚ್ಚ 98 ರೂಪಾಯಿಯೆಂದಾದರೆ ಕೊಯಿಲಿಗೆ 8 ರೂಪಾಯಿಯಂತಾಗುವ ನಷ್ಟವನ್ನು ರೈತನೆಲ್ಲಿಂದ ತುಂಬಿಸಿಕೊಳ್ಳಬೇಕು? ಇನ್ನಾ ಕಬ್ಬು ಒತ್ತಲೊಂದಕ್ಕೆ 5 ರೂಪಾಯಿಯಂತೆ ಜಿಲ್ಲಾ ಬೋರ್ಡಿಗೆ 'ಲೈಸೆನ್ಸ್ ಫೀ'ಯಾಗಿ ಪೆಟ್ಟಿಗೆ ಕಾದುಪು ಪ್ರತ್ಯೇಕವಿದೆ. ಈ ಅಪತ್ತಿಗೂಜೆಲೆ ನಿಯಂತ್ರಣವೆಂದು ಹೆಸರಿಟ್ಟಿರುವ 'ಬೆಲ್ಲದ ನಿರ್ನಾಮ' ಮೇನೇ ಬೇಳಿದಂತಾಗದೆ? ಕಲ್ಲಿ ಒಂದೆರಡು ವರುಷಗಳಲ್ಲಿ ಬಲ್ಲದ ಬೆಲೆ ತುಸು ಏರಿದ್ದರೆಂದಲೂ, ರೈತರು ಸ್ವತಹ ಹೆಚ್ಚಿಯುವುದರಿಂದ ಕೂಲಿ ವೆಚ್ಚವೊಂದು ಗೋಚರಕ್ಕೆ ಬಾರದ್ದರಿಂದಲೂ ಇತ್ತೀಚೆಗೆ ಆಹಾರದಾನ್ಯ ಬೆಳೆಸುವ ಗದ್ದೆಗಳಲ್ಲಿ ಕಬ್ಬು ಬೆಳೆಸುವ ಚಟವು ಹಲವು ರೈತರಲ್ಲಿ ಹಬ್ಬಿರಬಹುದು. ಅದನ್ನುತಡೆಗಟ್ಟುವ ಉದ್ದೇಶದಿಂದಲೇ ಸರಕಾರವೀ

ಚರ್ಚಿಲ್-ಜಿನ್ನಾ ಏಕಾಭಿಮತ!

ಲಂಡನಿನಲ್ಲೇ ಉಳಿದಿದ್ದ ಜಿನ್ನರು ಮತ್ತವರ ಸಂಗಡವು ಇದೇ ತಾ. 15ರಲ್ಲಿ ವಿಮಾನ ಹತ್ತಿ ಮೂಲ್ಯಾದಲ್ಲಿಳಿದು ಮರು ದಿನ ಕೈರೋವಿಗೆ ತಲ್ಪಿದ್ದಾರೆ. ಅಲ್ಲಿ ಎರಡು ಮೂರು ದಿನ ನಿಂತು ಭಾರತಕ್ಕೆ ಬರಲಿದ್ದಾರೆ. ತಾ. 14ರಲ್ಲಿ ಲಂಡನಿನಲ್ಲಿ ಪತ್ರಿಕಾ ಹೇಳಿಕೆ ಕೊಡುತ್ತಾ, 'ಪ್ರಾಂತಿಕ ಪಂಗಡಗಳ ಸಂಬಂಧದಲ್ಲಿ ಬ್ರಿಟಿಷರು ವಿವರಿಸಿದ ಅರ್ಥವನ್ನು ಕಾಂಗ್ರೆಸು ಸ್ಪಷ್ಟವಾಗಿ ಅಂಗೀಕರಿಸಿಕೊಂಡರೆ ಮಾತ್ರ ನಾನು ನಿರ್ಧಾರ ಬದಲಾಯಿಸಲು ಲೀಗ್ ಕೌನ್ಸಿಲಿನ ಸಭೆ ಕರೆಯುತ್ತೇನೆ' ಎಂಬ ಶರತ್ತು ಹಾಕಿದ್ದಾರೆ. "ಫೆರೆಡಲ್ ಕೋರ್ಟಿನ ತೀರ್ಮಾನವನ್ನು ನಾವೆಂದಿಗೂ ಗಣಿಸುವಂತಿಲ್ಲ ಭಾರತದಲ್ಲಿ ಬಹು ಮತದ ಅಳ್ವಿಕೆಯೆಂದರೆ ಮುಸಲ್ಮಾನರ ಮೇಲೆ ಬಹು ಸಂಖ್ಯಾಕ ಹಿಂದುಗಳ ಅಳ್ವಿಕೆಯಾಗುವದರಿಂದ ಆ ತತ್ವವು ಅಲ್ಲಿಗೆ ಲಗಾಪಲ್ಲ. ಪಾಕಿಸ್ತಾನ್ ಮತ್ತು ಹಿಂದುಸ್ಥಾನಗಳಿಗಾಗಿ ಎರಡು ಪ್ರತ್ಯೇಕ ಘಟನಾ ಸಮಿತಿಗಳಾಗಬೇಕೆಂಬುದೇ ನನ್ನ ಇಚ್ಛೆ. ಬ್ರಿಟಿಸು ಎದೆಗಾರಿಕೆಯಿಂದ ವರ್ತಿಸಿದ್ದರೆ ಇಷ್ಟೊತ್ತು ಅನಾಹುತವಾಗುವದೆಂಬ ಚರ್ಚಿಲ್ಲರ ವಾದ ಸರಿ ಭಾರತದಲ್ಲಿ ದೊಡ್ಡ ಪರಿಮಾಣದ ಅಂತರ್ಯುದ್ಧವಾಗುವದನ್ನು ತಪ್ಪಿಸಬೇಕಾದರೆ ಪಾಕಿಸ್ತಾನವನ್ನೇ ಕೊಡಬೇಕು" ಎಂದು ಘೋಷಿಸಿದರು. 'ನೀವೊಮ್ಮೆ ಕಾಂಗ್ರೆಸಿಗರಾಗಿದ್ದಿರಾ?' ಎಂದು ಪ್ರಶ್ನೆ ಸಲ್ಪಟ್ಟಾಗ ಜಿಗುಪ್ಸೆಯೊಡನೆ "ಹೌದು; ಒಮ್ಮೆ ನಾನು ಪೂರ್ವ ತಯಾರಿ ರಾಲೆಯಲ್ಲಿದ್ದೆ" ಎಂದು ಬೆಟ್ಟರು. "ಅವರ ಘಟನಾಸಮಿತಿಯನ್ನು ದೇವರು ಉದ್ಧರಿಸಲಿ; ಅದು ಗೆಲ್ಲಲಿ. ನಮ್ಮ ಪಾಕಿಸ್ತಾನ್ ಘಟನೆ ನಾವು ತಯಾರಿಸಿಕೊಳ್ಳುವೆವು ಎಂದಿದ್ದಾರೆ ಜಿನ್ನ.

ಉದ್ರೇಕಕಾರೀ ಭಾಷಣ

ತಾ. 10ರಲ್ಲಿ ಲಂಡನಿನ ಕಿಂಗ್ಸ್ಲೆ ಭವನದಲ್ಲಿ ಮಿ. ಜಿನ್ನರಿತ್ಯ ಭಾಷಣವಂತೂ ಕಾಂಗ್ರೆಸಿನ ಹೇಯ ಖಂಡನೆ, ಹಿಂದೂ ಧರ್ಮದ ಅವಹೇಳನಗಳಿಂದ ತುಂಬಿತ್ತು. ಭಾರತದ ಗಲಭೆಗಳಿಗೆ ಕಾಂಗ್ರೆಸನ್ನು ನಡುಗಾಲ ಸರಕಾರಕ್ಕೆ ಕರೆದ ಬ್ರಿಟಿಷರೇ ಹೊಣೆಗಾರರೆಂಬ ಚರ್ಚಿಲ್ಲರ ಮಾತನ್ನೇ ಇವರೂ ಪುನರುಚ್ಚರಿಸಿದರು. ಹಿಂದೂ ಕಾಂಗ್ರೆಸೆಂದರೆ ಮುಸ್ಲಿಮರನ್ನು ನುಂಗುವ ನರಭಕ್ಷಕನೆಂಬಂತೆ ತರೇಹರ ನಾಣೆಗಳಿಂದ ಜಿನ್ನರು ಟೀಕಿಸಿದಾಗಲೆಲ್ಲಾ ಹೆಚ್ಚಾಗಿ ಲೀಗ್ ಮುಸ್ಲಿಮರಿದ್ದ ಆ ಸಭೆಯಲ್ಲಿ ಜಯಘೋಷಗಳೇಳುತ್ತಿದ್ದುವು. ಅಪರೂಪವಾಗಿ ಅಕ್ಕೆಪ ಧ್ವನಿಗಳೂ ಇದ್ದುವು. ಭಾರತದ ಜಾತೀಯ ಗೊಂದಲಗಳನ್ನು ವರ್ಣಿಸಿ 'ಇದಕ್ಕೆ ಜವಾಬ್ದಾರರಾರು?' ಎಂದು ಜಿನ್ನರು ದುಸ್ಪಾರ್ತಿಯಿಂದ ಪ್ರಶ್ನಿಸಿದಾಗ 'ನೀವೇ' ಎಂದೊಂದು ಸ್ವರ ಕೇಳಿಬಂತು. ಹಾಗೆ ಉತ್ತರಿಸಿದವನ ಮೇಲೆ ಬಿದ್ದು, ಮುಸ್ಲಿಂ ನಾಯಕರು ಸಭೆಯಿಂದವನನ್ನು ಹೊರದೂಡಿದರು ಎರಡು ಕೋಟಿ ಜನರಿರುವ ಉತ್ತಮ ಭಾಗವನ್ನು ತಾವು ಹಿಡಿಮಾಡಿಕೊಂಡು ಒಂದು ಕೋಟಿಜನರ ಪಾಕಿಸ್ತಾನ್ಕಪಾಲನ್ನು ತನಗೆ ಕೊಡಲು ನಿರಾಕರಿಸುತ್ತಿರುವ ಹಿಂದುಗಳನ್ನು ಜಿನ್ನರು ಮನಸೇಚ್ಛೆ ನಿಂದಿಸಿದರು. ಅಮೇರಿಕತ್ತಿ ಆಕಾಶವಾಣಿ ಭಾಷಣದಲ್ಲೂ ಹಿಂದೂ-ಮುಸ್ಲಿಮರು ಎರಡೂ ರಾಷ್ಟ್ರೀಯರೆಂದು ತಿಳಿಸಿ ಬ್ರಿಟಿಷ್ ಸರಕಾರವನ್ನು ಶ್ಲಾಘಿಸಿ, ಪಾಕಿಸ್ತಾನ ದೊರೆಯದಿದ್ದರೆ ಆನಾಹುತವಾಗುವದೆಂಬ ಜಿನ್ನರಂದಿದ್ದರು.

ಕಳೆದ ವಾರ ಬ್ರಿಟಿಷ್ ಪಾರ್ಲಿಮೆಂಟಿನ ಕಾಮನ್ಸ್ ಮತ್ತು ಲೋರ್ಡ್ಸ್ ಸಭೆಗಳಲ್ಲಿ ಹಿಂದೀ ಪರಿಸ್ಥಿತಿಯ ಕುರಿತು ಸ್ವಾರಸ್ಯನಾದ ಚರ್ಚೆ ನಡೆಯಿತು. ಈ ಕುರಿತು ಚರ್ಚೆ ನಡೆಸುವದರಿಂದ ಕೆಲಸಕ್ಕೆ ಹಾನಿಯಿದೆಯೆಂದು ಅಟ್ಲೀ ಸರಕಾರದ ಲಭಿಮತವಿದ್ದರೂ ಚರ್ಚಿಲ್ಲರು ಒತ್ತಾಯದಿಂದ ದನ್ನು ಚರ್ಚೆಗೆ ಹುರಿಸಿದರು.

ಲಾರೆನ್ಸ್-ಕ್ರಿಪ್ಸ್ ಹೇಳಿಕೆಗಳು

ಭಾರತ ಕಾರ್ಯದರ್ತಿ ಪೆಥಿಕ್ ಲಾರೆನ್ಸರು ಲೋರ್ಡ್ಸ್ ಸಭೆಯಲ್ಲಿ ಬ್ರಿಟಿಷ್ ಯೋಜನೆಯನ್ನು ಪ್ರಸ್ತಾಪಿಸಿ, ಅದರ ಪ್ರಾಂತಿಕ ಪಂಗಡಗಳ ಸಂಬಂಧದಲ್ಲಿ ಇತ್ತೀಚಿಗಿನ ಬ್ರಿಟಿಷ್ ಹೇಳಿಕೆಯ ಅರ್ಥವೇ ಮೊದಲಿನಿಂದ ಇತ್ತೆಂದೂ ಕಾಂಗ್ರೆಸು ಮಾತ್ರ ಭಿನ್ನಾರ್ಥಕಟ್ಟಿದ್ದಿತೆಂದೂ ವಿವರಿಸಿದರು. ಸರ್ವ ಸಮ್ಮತಿಯನ್ನೇ ಆಧರಿಸಿರುವ ಘಟನಾ ಸಮಿತಿಯ ಕಾರ್ಯ ಜಯ[illegible] ಪಕ್ಷಗಳು ಒಂದುಗೂಡಬೇಕೆಂದು ಸ್ಪಷ್ಟೀಕರಿಸಿದರು. ಕಾಮನ್ಸ್ ಸಭೆಯಲ್ಲಿ ಸರ್. ಸ್ಟಾಫೋರ್ಡ್ ಕ್ರಿಪ್ಸರು ಅದನ್ನೇ ವಿವರಿಸಿ 'ಬ್ರಿಟಿಷ್ ಯೋಜನೆಯೊಂದೇ ಪರಿಹಾರೋಪಾಯ. ಅದು ವಿನಹಾ ಬೇರೆ ಹಾದಿಯೇ ಇಲ್ಲ' ಎಂದರು. ಹಿಂಸಾತ್ಮಕ ಪ್ರಚಾರಗಳನ್ನು ಖಂಡಿಸಿ, ಭಾರತದ ಜಾತೀಯ ಗೊಂದಲಗಳನ್ನೂ ನಿರ್ಣಿಸಿ, ಪ್ರಾಂತಿಕ ಪಂಗಡಗಳ ತಮ್ಮ ಸ್ವಪ್ರೇರಣೆಯಂತೆ ಲೀಗೂ ಘಟನಾ ಸಮಿತಿಗೆ ಬರಲಿದೆಯೆಂದು ತಿಳಿಸಿದರು.

ಚರ್ಚಿಲ್ಲರ ಭಾಷಣ

ಮಿ ಚರ್ಚಿಲ್ಲರು ಹುಟ್ಟು ಸ್ವಭಾವಕ್ಕನುಸರಿಸಿ-ಆದರೆ ಮೊದಲಿಗಿಂತ ನಾಲ್ಕಡಿ ಕರೋರತೆಯಿಂದ - ಸವರ್ಣ ಹಿಂದೂ ಕಾಂಗ್ರೆಸಿನ ಅತಿರೇಕಗಳನ್ನು ಟೀಕಿಸಿದರು ನಡುಗಾಲ ಸರಕಾರಕ್ಕೆ 'ಕಾಂಗ್ರೆಸನ್ನು ನೇಮಿಸಿಕೊಂಡುದೇ ಭಾರತದ ಜನಹತ್ಯಾಕಾಂಡಕ್ಕೆ ಕಾರಣವೆಂದು ಹೇಳಿ, ಮುಸ್ಲಿಮ್ ಮತ್ತು ದಳಿತ ವರ್ಗದವರ ಹಿತಸಾಧನೆಯ ಹಲ್ಲವಿ ಹಾಡಿ, ಕಾಂಗ್ರೆಸಿಗರು ಈಗ ನಡೆಸುತ್ತಿರುವ ಘಟನಾ ಸಮಿತಿಯೊಂದು ನಾಟಕವೆಂದು ಪರಿಹಾಸ್ಯ ಮಾಡಿದರು. ತಾನು ಅಧಿಕಾರದಲ್ಲಿದ್ದಾಗ ಕ್ರಿಪ್ಸರನ್ನು ಭಾರತಕ್ಕೆ ಕಳುಹಿ ಕೊನೆಗೆ ಹಿಂದಕ್ಕೆಳೆದುದನ್ನು ಜ್ಞಾಪಿಸಿ, ಈಗಲೂ ಹಾಗೆಯೇ ಮಾಡತಕ್ಕದ್ದೆಂದು ಸೂಚಿಸಲು ಹೋಗಿ ಸರ್. ಕ್ರಿಪ್ಸರ ಮಾತಿನಿಂದ ಬಾಯಿ ಮುಚ್ಚಿಸಲ್ಪಟ್ಟರು.

ಅಲೆಕ್ಸಾಂಡರರ ಭಾಷಣ

ಮಿ. ಎ. ವಿ ಅಲೆಕ್ಸಾಂಡರರು ಚರ್ಚಿಲ್ಲರ ಅನಾಹುತದಾಯೀ ಬೇಜವಾಬ್ದಾರೀ ಮಾತುಗಳನ್ನು ತೀಕ್ಷ್ಣ ವಾಣಿಗಳಿಂದ ಖಂಡಿಸಿದರು. ನ್ಯಾಯದತ್ತ ಸರಿದಂತಿದ್ದ ಏಕಮಾತ್ರ ಪಾರ್ಲಿಮೆಂಟ್ ಭಾಷಣವೆಂಸಗೆ ಅಲೆಕ್ಸಾಂಡರರದೆನ್ನಬಹುದು. 'ಘಟನಾ ಸಮಿತಿಗೆ ಜನಾವಣ ಹೊಂದಿರುವ ಲೀಗ್ ಸದಸ್ಯರು ಹಾಜರಾಗದಿದ್ದ ಮಾತ್ರಕ್ಕೆ ಸಮಿತಿ ನಿಲ್ಲುವಂತಿಲ್ಲ'ವೆಂದೂ, ಅವರೊಪ್ಪದಿದ್ದರೆ 'ಮುಸ್ಲಿಂ ಬಹುಮತವಿರುವ ಭಾಗಗಳಿಗೆ ಮಾತ್ರ ಘಟನೆಯನ್ನು ಹೇರಲಾಗುವದಿಲ್ಲ'ವೆಂದೂ ಅಲೆಕ್ಸಾಂಡರರು ಸ್ಪಷ್ಟಪಡಿಸಿದರು. ಚರ್ಚಿಯಲ್ಲಿ ಹಲವಾರು ಭಾಗವಹಿಸಿದ್ದು ಹೀವು ಉಭಯಪ್ರಾಯಗಳು ಪ್ರಕಟವಾಗಿದ್ದುವು.

ಘಟನಾ ಸಮಿತಿ ಸಭೆಯು ಇದೇ ನೋಮವಾರದಿಂದ ನೆಹರುಗಳ ರಿಪಬ್ಲಿಕ್ ರಾಯಿನ ಚರ್ಚಿನಡೆಯುತ್ತಿದೆ. ಹೆಚ್ಚಿನ ಉಪಸೂಚನೆಗಳು ಹಿಂದೆಗೆಯಲ್ಪಟ್ಟು ಡಾ। ಜಯಕರ ಸೂಚನೆಯ ಚರ್ಚೆ ನಡೆಯುತ್ತಿದೆ, ಅಲ್ಲಾಡಿ, ಖಯಿಕರ್, ಮುನ್ಷಿ, ಶರತ್ ಬೋಸ್ ಮೊದಲಾದ ವ್ಯಸಿದ್ಧ ವಕೀಲರನ್ನು ಮುಂದೆ ಮಾಡಿ ಪ್ರಾಂತಿಕ ಪಂಗಡ ಪ್ರತ್ಯೇಕತೆಯನ್ನು ಫೆಡರಲ್ ಕೋರ್ಟಿಗೊಪ್ಪಿಸುವ ಯೋಚನೆ ಕಾಂಗ್ರೆಸಿಗರಲ್ಲಿ ಪುನಃ ಮೂಡಿದೆ ಆದರೆ ಕೋರ್ಟು ತೀರ್ಮಾನಕ್ಕೆ ಲೀಗೂ, ಸರಕಾರವೂ ಒಪ್ಪಬೇಕೆಂಬ ಶರ್ತ ಹಾಕಲಾಗಿದೆ ಆದು ತಮಗೆ ಸಿಂಧುವಲ್ಲವೆಂದು ಜಿನ್ನರಂತೆಯೇ ಸೆಥಿಕ್ ಲಾರೆನ್ಸರೂ ಈಗ ಜೇಳಿದ್ದಾರೆ.

ಗವಾಕ್ಷ್ರಪಾರವಾಡಿಪಂತೆ ತೋರುತ್ತಪೆಯಾವರೀತಿಲ್ಲಿ ಹೊಟ್ಟಿಗೇನೇ ಬಡ್ಡಿದ. ಇದರಿಂದಾಗಿ ಬೆಲ್ಲಪ್ಪ ಮಿತವಾಗಿ ನಿರ್ಮಾಣವಾಗುವ ಬಯಲಿಗೆ ಯಾರೂ ಕಬ್ಬುಬೆಳೆಸುವ ಸಾಹಸಕ್ಕೇ ಸೇ ಹೋಗದಂತಾಗಿದೆ. ಇವನ್ನೂಪಿಸಿ ಈಗಲೇ ಬೆಲ್ಲದ ಆಭಾವದ ಮಾತೆದ್ದಿರೆ ಸರಕಾರವು ಸಾವಯವಸ್ಥ ಮಾಣದ ಸಿಯಂತ್ರಣ ಬೆಲೆಯನ್ನು ರೂ. 6ಕ್ಕಾದರೂ ಏರಿಸಲಿಪ್ಪಲ್ಲಿ ನಿಜಕ್ಕೂ ಬೆಲ್ಲದ ಆಭಾವ ಮಾತ್ರವಲ್ಲ ಬೆಲ್ಲಸೇ ಅಂತರ್ಧಾನವಾಗುವ ಅಪಾಯವಿದೆ.

---ಕೃತ.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ

ನಡೆಯುವ ಚಿತ್ರ

ಜುಪಿಟರ್ ಚಿತ್ರದವರ

"ಕ್ರಿಸ್ತೋ ವಾಲಾ"

ಊರ್ವಿಳಾ, ನವಿನಯಾಜ್ಞಿಕ್, ಹಿಮಾಲಯನಾಲ.

ಬರುವ ಚಿತ್ರ—

ಪ್ರಕಾಶದವರ "ಸ್ಟೇಷನ್ ಮಾಸ್ಟರ್"

ಪ್ರೇಮ ಅದೀಜ್, ನತ್ನ ಮೂಲಾ, ಜೀವನ್,

ಉಮಾಕಾಂತ್, ಕೌಸಲ್ಯ.

ಮಂಗಳೂರು ಮಂತ್ರಿಯವರ ಸಂಚಾರ ಕಾರ್ಯಕ್ರಮ ರದ್ದಾಗಿದೆ-

ಸಾರ್ವಜನಿಕ ಆರೋಗ್ಯಖಾತೆಯ ಮಂತ್ರಿ ಶ್ರೀಮತಿ ರುಕ್ಮಿಣಿ ಲಕ್ಷ್ಮಿಪತಿಯವರು ತಾ 17ಕ್ಕೆ ಮಂಗಳೂರಿಗೆ ಬರತಕ್ಕ ಕಾರ್ಯಕ್ರಮವನ್ನಿಟ್ಟುಕೊಂಡಿದ್ದರಷ್ಟೆ. ಅದರೆ ಅನಾರೋಗ್ಯದ ನಿಮಿತ್ತ ಅವರು ಬರುವುದಿಲ್ಲವೆಂದು ಗೊತ್ತಾಗಿದೆ ತಾ 18ರ ಅವರ ಕಾರ್ಯಕ್ರಮವು ಸಮರಸದು ಸೋಕಲಾಗಿವೆಯೆಂದು ವರ್ತಮಾನ

ದ. ಕ. ಜಿಲ್ಲಾ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯು

ತಾ. 15ರಲ್ಲು ಅಪರಾಹ್ನ 3ಗಂಟೆಗೆ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಶ್ರೀ. ಎ. ಸಿ. ನಾರಾಯಣರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಆಕ್ಕಿ, ಭತ್ತಕ್ಕೆ ಸಂಬಂಧಪಟ್ಟ ಬೋನಸ್ಸು ಒಕ್ಕಲು ಗಳಿಗೇನೇ ಸಿಕ್ಕುವಂತಾಗಬೇಕು ಅವಲಕ್ಕಿ ತಯಾರಿಸುವ ಪದ್ಧತಿಯನ್ನು ಪುನರುಜ್ಜೀವನಗೊಳಿಸುವದು ಅತ್ಯಾವಶ್ಯಕವೆಂದು ಲೆಕ್ಕ ಪೆಲ್ಲಿ ಬೇಕಾದವರಿಗೆ ಅವಲಕ್ಕಿಯನ್ನು ಪೊಟ್ಟಿಯ ಬದಲಾಗಿ ವಿತರಣೆ ಮಾಡಿಸಬೇಕೆನ್ನುವ ಇತ್ಯಾದಿ ಇತ್ಯಾದಿ ನಿರ್ಣಯಗಳಾದುವು

ಉಡುಪಿ ಕರ್ನಾಟಕ ಸಂಘದ ಮಹಾಸಭೆ

ಯು ತಾ. 15ರಲ್ಲು ಸಂಜೆ ಮುನಿಸಿಪಲ್ ನ್ಯೂಸ್ ಶಾಲೆಯಲ್ಲಿ ಸಂಘದ ಅಧ್ಯಕ್ಷ ಶ್ರೀ ಎನ್. ರಾಜಗೋಪಾಲಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಜರಗಿತು ಈರ್ತೀರಸಿ ಕೈಲಾಸಂ ಅವರ ಸಧನದಕುರಿತು ದುಃಖಪ್ರದರ್ಶಿಸುವ ನಿರ್ಣಯವಾಯಿತು. ಚಾಲ್ತಿ ವರುಷಕ್ಕೆ ಕಾರ್ಯಕಾರಿ ಸಮಿತಿಯು ಸದಸ್ಯರ ಚುನಾವಣೆಯಾಗಿ ಸಭಾಂತ್ಯವಾಯಿತು.

ಕಾಪು ಫಿರ್ಕಾ ಗ್ರಾಮ ಕಮಿಟಿ ಪ್ರೆಸಿಡೆಂಟುಗಳ ಸಭೆ-

ತಾ 15ರಲ್ಲು ಕಾಪು ಪಂಚಾಯತ ಕೋರ್ಟು ಆಫೀಸಿನಲ್ಲಿ ಅಪರಾಹ್ನ 3 ಗಂಟೆಗೆ ಕಾಪು ಸರ್ಕಲ್ ಇನ್ಸ್ಪೆಕ್ಟರ್ ಶ್ರೀ. ಪಿ. ರಾಘವೇಂದ್ರ ರಾವ್ ರವರ ಅಧ್ಯಕ್ಷತೆಯಲ್ಲಿ ಜರಗಿತು. ಸಭೆ ಕರೆದುದರ ಉದ್ದೇಶವನ್ನೂ, ತಾಲೂಕು ಆಹಾರ ಸಮಿತಿಯ ಕಾರ್ಯಕಲಾಪಗಳನ್ನೂ ತಾಲೂಕು ಕಮಿಟಿ ಮೆಂಬರ್ ಶ್ರೀ ಕುರ್ಕಾಲ ಗಣಪಯ್ಯ ಶೆಟ್ಟರು ಸವಿವರವಾಗಿ ತಿಳಿಸಿದರು. ತದನಂತರ ಗ್ರಾಮಸ್ಥರಿಗೆ ಸರಕಾರವಾಗಿ ಸರಕಾರು ಕೊಡ್ಬರಿಯು ಪೊರೆಯುವಂತೆ ಪ್ರತಿ ಗ್ರಾಮದಲ್ಲೂ ಗ್ರಾಮ ಕಮಿಟಿಯು ನೇತೃತ್ವದಲ್ಲಿ ಒಂದೊಂದು ದಿಪೋವನ್ನು ತೆರೆಯಬೇಕೆನ್ನುವ, ಜನರು ತಿಂಗಳಲ್ಲಿ ಉಡುಪಿ ತಾಲೂಕಿನ ಅವಗಾಣಿಯಾಗಬೇಕೆನ್ನುವ ಹಾಗೂ ಇತರ ರೇಶನ್ ವಸ್ತುಗಳಿಗೆ ಸಂಬಂಧಿಸಿದ ನಿರ್ಣಯಗಳಾದುವು.

ಪ್ರಕಟಣೆ

ಕಟ್ಟಿಂಗೆರೆ ಗ್ರಾಮದಲ್ಲಿರುವ ಶ್ರೀ ಬ್ರಹ್ಮಲಿಂಗೇಶ್ವರ ದೇವಸ್ಥಾನದ ಜೀರ್ಣೋದ್ಧಾರ ಗೋಸ್ಕರವೆಂದು ದೇವರ ದರುಶನ ಮಾಡ್ಪಿ ಗಂಧಪ್ರಸಾದ ತೆಗೆಯಿಕೊಂಡು ಪರವೂರಿಗೆ ಹೋಗಿ ಬೇರಳ ಧನ ಸಂಗ್ರಹಮಾಡಿದ ಸುಬ್ರಾಯ ಪೆಜ್ರಾರರ ಮಗ ವೆಂಕಪ್ಪ ಪೆಜ್ರಾರರು ಈ ವರೆಗೂ ಸದ್ರಿ ಜೀರ್ಣೋದ್ಧಾರವನ್ನು ನೂಡಿಸದೆಯೂ ಸದ್ರಿ ಹಣವ ಕೈಸುಪಂತೆ ವಿಳಿವಾಲ ಪಡಿಸದೆಯೂ ಇರುತ್ತಾರೆ. ಆ ಬಾಬಿನಲ್ಲಿ ಸದ್ರಿ ದೇವಸ್ಥಾನಕ್ಕೆ ಸಂಬಂಧಿಸಿದ ಬಲಿ ಸಾನಿರ ಮೊಗಕಾಯವರೆಲ್ಲರೂ ಇದೇ ತಿಂಗಳ ತಾ 31 12-46ರಲ್ಲಿ ಅಪರಾಹ್ನ ಗಂಟೆ 2ಕ್ಕೆ ಸದ್ರಿ ದೇವಸ್ಥಾನದ ವರೆಸರೆ ಬಾಕ್ಕಾರು ಗದ್ದೆಯಲ್ಲಿ ಸಭೆ ಸೇರಿ ಸದ್ರಿ ವೆಂಕಪ್ಪ ಪೆಜ್ರಾರರಿಂದ ದೇವರ ಹೆಸರಲ್ಲಿ ಜಮೆಯಾದ ಲೆಕ್ಕ ಕೇಳಿ ಅವರಿಂದ ಅವನ್ನು ವಸೂಲು ಪಡಿಯುವ ಯೋರ್ಪಾಡುಮಾಡುವ ಒಸ್ಕೆ ಸಭೆ ಸೇರಬೇಕಾಗಿ ವಿನಂತಿ.

ಶ್ರೀ ರಾಮಪ್ಪ ಹೆಬ್ಬಾರ,

ಶ್ರೀ ಬ್ರಹ್ಮಲಿಂಗ ದೇವಸ್ಥಾನದ ಜೀರ್ಣೋದ್ಧಾರ ಸಕೇಲ, ಕಟ್ಟಿಂಗೆರೆ ಗ್ರಾಮ.

[ಸನೇ ಪುಟದಿಂದ]

ದ್ದ ಹೊಸ ನಿಬಂಧಗಳನ್ನು ಹೇರಲಾಗಿದೆ; ಹೊಸ ಕಾರ್ಯಕ್ರಮ, ವಿಧಾನಗಳನ್ನು ಸೂಚಿಸಲಾಗಿದೆ. ಯಾವನೊಬ್ಬನ ಯಥಾರ್ಥತೆಯ ಮೇಲಾದರೂ ಶಂಕೆಸ್ಪದರ್ಶಿಸಲು ನಾನಿಲ್ಲಿ ನಿಂತಿಲ್ಲ. ಆದರೆ ಇಷ್ಟೊಂದನ್ನು ಹೇಳಬಲ್ಲೆ. ಒಂದು ವಿಷಯದ ಕಾನೂನು ಸ್ವರೂಪ ಹೇಗಿದ್ದರೂ ಕಾನೂನೆಂಬುದು ಆಧರಿಸಲಾಗದ ಅವಾಸ್ತವ ಅಲ್ಪ ಸಂಗತಿಯಾಗುವ ಸಂದರ್ಭಗಳೊದಗುವದಿದೆ. ಸ್ವಾತಂತ್ರ್ಯಕ್ಕಾಗಿ ಅವೇಗಗೊಂಡಿರುವ ಒಂದು ರಾಷ್ಟ್ರದ ಸಂಬಂಧದಲ್ಲಂತೂ ಈ ಮಾತು ವಿಶೇಷತಃ ಅನ್ವಯಿಸುತ್ತದೆ. ಇಲ್ಲಿಂದವರೆಲ್ಲಿ ಹಿಚ್ಚಿನವರು ಒಂದು ತಲೆಮಾರಿಗೂ ಮಿಕ್ಕಿದ ಹಲವು ವರುಷಗಳಿಂದ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದವರೇ, ನಾವಾ ಭಾಯಾವರಿಕ ಕಣಿವೆಯಲ್ಲಿ ಈ ಮೊದಲು ನಾಗಿದ್ದೇನು: ಅಗತ್ಯಬಿದ್ದರೆ ಇನ್ನೊಂದು ಬಾರಿ ಅದರಲ್ಲಿ ಧುಮುಕಲಿರುವೆವು. (ಉತ್ಸಾಹ ಧ್ವನಿ)

ಉಪದೇಶಿಗಳು ಬೇಕಾಗಿಲ್ಲ

"ದೀರ್ಘಾವಧಿಯಿಂದ ನಾವು ಕೇವಲ ಹೋರಾಟ, ನಿರ್ನಾಮನಿರತರೇ ಆಗಿರಲಿಲ್ಲ. ಸಂದರ್ಭಾನುಸಾರವಾಗಿ ನಿರ್ಮಾಣ ಕಾರ್ಯಗಳನ್ನೂ ನಡೆಸಿದ್ದೆವು. ಈಗ ಬಿದಿಗಿರುವ ಸ್ವತಂತ್ರ ಭಾರತ ನಿರ್ಮಾಣದ ಸುಸಂದರ್ಭವನ್ನು ನಾವು ಅನಂದಹೃದಯದಿಂದ; ಆಶಾದೃಷ್ಟಿಯಿಂದ ನೋಡಿದೆವು. ಇಂತಹ ಸಂತೋಷ ಸಂದರ್ಭದಲ್ಲಿ ನಮ್ಮ ಹಾದಿಯ ಮೇಲೆ ಹೊಸಾತಂಕಗಳನ್ನು ತೂರಿದ್ದನ್ನು ಕಂಡು ಎದೆನೋಯುತ್ತಿದೆ; ಸಮರ್ಥರು ಮತ್ತು ಬುದ್ಧಿವಂತರಾಗಿರುವ ಅಧಿಕಾರಸ್ಥಾನಗಳಲ್ಲಿರುವವರಲ್ಲಿ ದೊಡ್ಡ ಅಧಿಕಾರಿಗಳಲ್ಲಿರಬೇಕಾದ ಊಹಾ ವೈಶಾಲ್ಯ ವಿರುವವಿಲ್ಲವೆಂಬುದೂ ನಮಗೀಗ ಮಂದಟ್ಟಾಗಿದೆ. ಯಾವುದಾದರೊಂದು ಜನತೆಯೊಡನೆ ವ್ಯವಹರಿಸುವ ಸಂದರ್ಭ ಬಂದಲ್ಲಿ ನೀವಾ ಜನತೆಯೊಡನೆ ಊಹಾಬಲದಿಂದ, ಭಾವ ವೈಶಾಲ್ಯದಿಂದ, ಅಂತೆಯೇ ಬುದ್ಧಿವಂತಿಕೆಯಿಂದ ವ್ಯವಹರಿಸಬೇಕು. ಗತ ಕಾಲದ ದುರ್ದೈವಗಳಲ್ಲೊಂದೆಂದರೆ ಭಾರತೀಯ ಸಮಸ್ಯೆಯನ್ನು ಊಹಾವಿಶ್ವಾಸದಿಂದ ನೋಡಲು ಬ್ರಿಟಿಷರಿಗೆ ತಿಳಿಯದಿದ್ದುದೇ. ಇಂದಿನ ಭಾರತವು ಯಾವನೊಬ್ಬನ ಉಪದೇಶಕ್ಕೆ ಕಿವಿಕೊಡುವ, ಹೇರಾಟಕ್ಕೆ ತಲೆಕೊಡುವ ಸ್ಥಿತಿಯಲ್ಲಿಲ್ಲವೆಂಬುದನ್ನರಿಯದವರು ನಮಗೆ ಉಪದೇಶಿಸುವ ಜಂಭತೋರಿಸುವದಿದೆ ('ಕೇಳಿರಿ, ಕೇಳಿರಿ') ಮೈತ್ರಿ, ಸಹಕಾರ, ಸದ್ಭಾವನೆಯೊಂದನ್ನು ಮಾತ್ರ ಭಾರತವು ಗಣಿಸಬಲ್ಲುದು ಒತ್ತಾಯದಿಂದ ಗೆಲ್ಲಿಸುವ ಆಧಿಪತ್ಯೋಪಕರಣಕ್ಕೆ ನಟಿಸುವ ಅವಮಾತ್ರ ಚಿಕ್ಕಕಂಡುಬಂದಲ್ಲಿ ಅದಕ್ಕೆ ತಿರಸ್ಕಾರವೇ ಸರಿ." (ಉತ್ಸಾಹ ಧ್ವನಿ)

ಹಾಜರಿಲ್ಲದವರಿಗೆ

ತಾವು ಇದು ವರೆಗೆ ಶಾಂತಿ ಸಂಧಾನಕ್ಕಾಗಿ ಒದ್ದಾಡಿದುದನ್ನು ವರ್ಣಿಸಿ, ಘೋರ ಯುದ್ಧಾನಂತರದ ಈ ಚರಿತ್ರಾರ್ಹ ಸನ್ನಿವೇಶದಲ್ಲಿ ಹೊಸ ಭಾರತವನ್ನು ಕಟ್ಟಲಿರುವ ತಾವು ಅಲ್ಪ ಲಾಭಗಳನ್ನು ಗಣಿಸಿ ನಿಲ್ಲಲಾರೆವೆಂದು ಪಂಡಿತ ನೆಹರುಗಳಂದರು. ಆಶ್ರಿತ ರಾಜ್ಯಗಳ ಸಂಬಂಧವಾಗಿ ತನ್ನ ವ್ಯಕ್ತಿಗತ ಅಭಿವ್ಯಾಯವೇನಿದ್ದರೂ ಅಲ್ಲಿಯ ಪ್ರಜಾಭಿಪ್ರಾಯಕ್ಕನುಸಾರವಾದ ಯಾವ ರಾಜ್ಯಭಾರ ಬರುವದಕ್ಕೂ ತನ್ನಾಕ್ಷೇಪವಿಲ್ಲವೆಂದರು. 'ಪ್ರಜೆಗಳಿಗೆ ಬೇಕೆಂದು ತೋರಿದರೆ ರಾಜಶಾಹಿಯಿರಲಿ; ಆದರೆ ಸಂಪೂರ್ಣ ಪ್ರಜಾಪ್ರಭುತ್ವಾನುಸಾರವಾಗಿ ಎಲ್ಲವೂ ಪ್ರಜೆಗಳ ಅಭಿಮತದಂತಾಗಬೇಕು' ಎಂದರು. ಮುಸ್ಲಿಂ ಲೀಗ್ ಸದಸ್ಯರ ಗೈರು ಹಾಜರಿಗಾಗಿ ಸಂತಾಪ ಸೂಚಿಸುತ್ತಾ "ನಾವೀಗ ಹೊಂಟಿರುವದು ಧಾರ್ಮಿಕವಾರು, ಪಂಗಡವಾರು, ಪ್ರಾಂತ್ಯವಾರು ಅಥವಾ ಇತರ ಗುಂಪುವಾರು ಸ್ವಾತಂತ್ರ್ಯ ಸಾಧನೆಗಾಗಿರದೆ 400 ಮಿಲಿಯ ಜನತೆಗಾಗಿ; ಆದ್ದರಿಂದ ಎಲ್ಲರ ಸಹಕಾರಬೇಕು; ಇಡೀ ರಾಷ್ಟ್ರಕ್ಕಾಗಿ ಕೂಡಿರುವ ನಾವಿಲ್ಲಿ, ಆ ಗೈರು ಹಾಜರೀ ಅನುಯಾಯಿಗಳನ್ನು ನೆನಪಿನಲ್ಲಿಟ್ಟುಕೊಂಡೇ ಕೆಲಸ ಮುಂದೊತ್ತಬೇಕು; ಸಂಕುಚಿತ ಪಕ್ಷಾವರಣವನ್ನು ದಾಟಿ ಅಖಿಲ ರಾಷ್ಟ್ರದ ದೃಷ್ಟಿಯಿಂದ' ನೋಡಬೇಕು" ಎಂದರು. "ರಾಷ್ಟ್ರದೊಂದು ಮೂಲೆಯಲ್ಲಿ ತನ್ನ ತತ್ವಪ್ರಚಾರದಲ್ಲಿ ನಿರತನಾಗಿರುವ ನಮ್ಮ ಜನತೆಯ ಮಹಾ ನಾಯಕ, ನಮ್ಮೀ ರಾಷ್ಟ್ರದ ಬಾಪು (ಉತ್ಸಾಹ ಧ್ವನಿ) ಇಲ್ಲಿ ಗೈರು ಹಾಜರಿದ್ದರೂ ಹೀಗೆ ನಿಂತಲ್ಲೀ ನನ್ನ ಮನಸ್ಸಿನಲ್ಲಿರುವಂತೆ, ಇಲ್ಲಿಯ ಹಿಚ್ಚಿನವರ ಮನಸ್ಸಿನಲ್ಲೂ ಇಂಬಾಗಿರುವದು. ಅವರ ಗೈರು ಹಾಜರಿಯಲ್ಲೂ ಅವರ ಸ್ಫೂರ್ತಿಯು ಇಲ್ಲಿ ನಮ್ಮನ್ನು ಹುರಿದುಂಬಿಸುತ್ತಿದೆ; ನಮ್ಮ ವ್ಯವಹಾರಗಳಿಗೆ ಅವರ ಆಶೀರ್ವಾದವಿದೆ ಎಂಬ ಕುರಿತು ನನಗಿನ್ನುಮಾನವಿಲ್ಲ (ವಿಶೇಷ ಉತ್ಸಾಹ ಧ್ವನಿ)" ಎಂದು ಗಾಂಧೀ ಸ್ಮರಣೆ ಮಾಡಿದರು. ಈ ಮೊದಲಿನ ಪರರಾಷ್ಟ್ರೀಯ ಘಟನಾ ಸಮಿತಿಗಳ ನಿದರ್ಶನಗಳನ್ನು ಕೊಟ್ಟು, ತನ್ನ ಶಂಕೆಗೆ ಬಂದಿರುವ ತಿದ್ದುಪಡಿ ಸೂಚನೆಗಳ ಮಾರ್ಮಿಕ ವಿವರ್ಶೆ ನಡಿಸಿ ಪಂಡಿತಜೀ ಮುಕ್ತಾಯಗೊಳಿಸಿದರು: "ನಾವೀಗ ಸ್ವಾತಂತ್ರ್ಯದ ಹೊಸ್ತಿಲಲ್ಲಿದ್ದೇವೆ. ನಮ್ಮ ಇಲ್ಲಿಯ ನಿರ್ಮಾಣ ಕಾರ್ಯವು ಜಗತ್ತಿನ ಮೇಲೆಲ್ಲಾ ತನ್ನ ಪರಿಣಾಮವನ್ನು ಬೀರಲಿದೆ. ನಾವಿದನ್ನು ತಿಳಿದಿರಬೇಕು. ನಮಗೆ ಎಲ್ಲಾ ರಾಷ್ಟ್ರಗಳ ಸ್ನೇಹಾಚಾರಬೇಕು; ಗತ ಕಾಲದಲ್ಲಿ ದೀರ್ಘಾವಧಿಯ ತಿಕ್ಕಾಟ ನಡೆಸಿದವರಾಗಿದ್ದರೂ ಕೂಡಾ ಬ್ರಿಟನ್ನಿನೊಡನೆಯೂ ನಮಗೆ ಮೈತ್ರಿ ಬೇಕು."

ಬಾಬು ಪುರುಷೋತ್ತಮದಾಸ ಠಂಡನರು ನೆಹರು ರಂಗವನ್ನು ಅನುಮೋದಿಸಿದ ಮೇಲೆ ಅಧ್ಯಕ್ಷ ಸಭಾದರು ಸಭೆಯನ್ನು ತಾ. 6ನೇ ಸೋಮವಾರಕ್ಕೆ ಮುಂದರಿಸಿದರು.

ಪಂಡಿತ ನೆಹರು ಮತ್ತು ಬಾಬು ರಾಜೇಂದ್ರ ಪ್ರಸಾದರು ತಾ 15ರಲ್ಲಿ ವಿಮಾನ ಮೂಲಕ ಕಾಶಿಗೆ ಬಂದಿದ್ದಾರೆ. ನೆಹರುಗಳು ಕಲ್ಕತ್ತಕ್ಕಾಗಮಿಸಿ "ಎಸೋಸಿಯೇಟೆಡ್ ಚೇಂಬರ್ಸ್ ಒಫ್ ಕಾಮರ್ಸಿ"ನ ವಾರ್ಷಿಕಾಧಿವೇಶನದ ಭಾಷಣವಿತ್ತರು. "ಭವಿಷ್ಯವನ್ನು ಕೆಡಿಸುವ ವಿಷ ಬೆರೆಯದಿದ್ದರೆ ಸ್ವತಂತ್ರ ಭಾರತ ಮತ್ತು ಬ್ರಿಟನ್ನುಗಳೊಳಗಿನ ಸಂಬಂಧವು ನೂರಾರು ಹಾದಿಗಳಿಂದ ಮುಂದೊತ್ತಲಿದೆ" ಎಂದು ಘೋಷಿಸಿದರು. ಬ್ರಿಟಿಷರ ಮುಖ್ಯ ವ್ಯಾಪಾರೀ ಸಂಸ್ಥೆಯಾದ ಇದರವಾರ್ಷಿಕ ಭಾಷಣಗಳನ್ನು ಕಳದ 25 ವರುಷಗಳಿಂದ ವೈಸರಾಯಿನಿಹಾಬೇರಾರೂಢಕೊಟ್ಟಿದ್ದಿಲ್ಲ. ಇಲ್ಲಿ ಭಾಷಣವಿತ್ತ ಹಿಂದೀಯರಲ್ಲಿ ನೆಹರುಗಳು ಮೊದಲಿಗರು. 'ನಡುಗಾಲ ಸರಕಾರ್ಕೆ ತಮ್ಮ ಬೆಂಬಲವಿದೆ ಎಂದು ಆಡೀಂಬರದಿನ ಅಧ್ಯಕ್ಷರಂದರು. ಇದೇ ತಾ. 17ರಲ್ಲಿ ಕೊಮಿಲ್ಲಾದಲ್ಲಿ ನಡೆಯಲಿದ್ದ ಗಾಂಧೀ-ನೆಹರೂ ಸಂಭಾಷಣೆಯು ಕಾರ್ಯಬಾಹುಳ್ಯದಿಂದ ಮುಂದುವರಿಸಲ್ಪಟ್ಟಿತೆಂದು ತಿಳಿದು ಬರುತ್ತದೆ.

KAILAS HILLS HERB *(Regd)*
Relieves Asthma completely by one dose to be taken on 7-1-'47 (Full Moon).
Note.—Mr. Sambhu Dayal Naib Dewan and Judge, Makrai State writes that 18 out 20 Patients have been cured by this wonderfull herb
Apply to English—
Brahmacahri G. Das,
Sri Sidh Brahmacharya Seva Ashram,
POST CHITRAKOT (Banda Dt, U. P.)

The Famous Life Insurance Co., Ltd.,
H. O.: BOMBAY.
ಈ ಕಂಪೆನಿಯ ದಕ್ಷಿಣ ಕನ್ನಡದ ಪ್ರತಿನಿಧಿಗಳಾಗಿ ವಿಮಾ ವ್ಯವಸಾಯದಲ್ಲಿ ಅನುಭವಶಾಲಿಗಳಾದ ಶ್ರೀ. ಎಂ. ರತ್ನಾಕರ ಶೆಟ್ಟರು ನೇಮಿಸಲ್ಪಟ್ಟಿರುವರು.
ವಿಮೆ ಮಾಡಲಿಚ್ಛಿಸುವವರೂ, ಏಜಂಟರು ಆಗ ಸ್ಪೆಶಲ್ ಏಜಂಟರಾಗಲು ಬಯಸುವವರೂ ಕೆಳಗಿನ ವಿಳಾಸಕ್ಕೆ ಬರೆಯಬಹುದು
ಎಂ. ರತ್ನಾಕರ ಶೆಟ್ಟಿ,
ಚೀಫ್ ಏಜಂಟ್,
ದಿ ಫೇಮಸ್ ಲೈಫ್ ಇನ್ಶ್ಯೂರೆನ್ಸ್ ಕೊ., ಲಿಮಿಟೆಡ್,
ಮೂಲ್ಕಿ.

● ಮಗ್ಗದ ಮ್ಯಾಲಿಕರಿಗೆ ಸುಸಂದರ್ಭ ●
ನಂಬ್ರ P II ಪರ್ಮಿಟುದಾರರಾದ ನಮ್ಮಗದ ಮ್ಯಾಲಿಕರು ತಮ್ಮ ನೂಲಿಗೆ ಬೇಕಾಗುವ ರಂಗುಗಳಿಗೆ ಮಂಗಳೂರು ಇಲ್ಲವೆ ಕಣ್ಣಾನೂರು ರಂಗಿನ ವ್ಯಾಪಾರಸ್ಥರನ್ನು ಅವಲಂಬಿಸಬೇಕಾಗಿತ್ತು. ಈಗ ಅವರಿಗೆ ಬೇಕಾಗುವ ಎಲ್ಲಾ ತರದ ರಂಗುಗಳನ್ನು ಒದಗಿಸಲು ನಾವು ಲೈಸನ್ಸನ್ನು ಪಡೆದಿರುತ್ತೇವೆ.
ಪಿ. ಎ. ಪೈ ಬ್ರದರ್ಸ್, ಉಡುಪಿ.

ದೇಶಕಾಲಕ್ಕೊಪ್ಪುವ ನವೀನ ಪುಸ್ತಕ
ಸ್ವಾತಂತ್ರ್ಯವೀರ ಸಾವರಕರರು
ಹಿಂದೂ ಸಂಸ್ಕೃತಿ ಮತ್ತು ಹಿಂದೂರಾಷ್ಟ್ರಕ್ಕಾಗಿ ಸರ್ವತ್ಯಾಗ ಮಾಡಿದ ವೀರ ಸಾವರಕರರ ಉಜ್ವಲಜೀವನ ಚರಿತ್ರೆ
ಮೈಜುಮ್ಮೆನ್ನಿಸುವ ಹಲವು ಸನ್ನಿವೇಶಗಳು!
ವಿಚಾರ ಕ್ರಾಂತಿಯನ್ನುಂಟುಮಾಡುವ ಘಟನೆಗಳು!
ಪ್ರಸಿದ್ಧ ಹಿಂದೀ ಲೇಖಕ ಪಂಡಿತ ಚಂದ್ರಗುಪ್ತ ವೇದಾಲಂಕಾರ ಇವರ ಹಿಂದೀ ಗ್ರಂಥದ ಕನ್ನಡ ಅನುವಾದ.
ಕನ್ನಡಿಸಿದವರು- ಶ್ರೀಮತಿ ಇಂದಿರಾಬಾಯಿ,
ಮೈಸೂರು, ಸಂಸ್ಥಾನ.
ಬೆಲೆ ಒರೇ ರೂ. 1—4—0
ರೂ. 1—8—0 ಕಳಿಸಿದರೆ 1 ಪ್ರತಿಯನ್ನು ರಿಜಿಸ್ಟರ್ ಮಾಡಿ ಕಳಿಸಲಾಗುವುದು.
ಪ್ರತಿಗಳು ಸಿಗುವ ಸ್ಥಳಗಳು:—
1. ಸ್ಕೂಲ್ ಬುಕ್ ಕಂಪೆನಿ, ಮಂಗಳೂರು. 2. ಸತ್ಯಕೋಧನ ಪುಸ್ತಕ ಭಂಡಾರ, ಬೆಂಗಳೂರು. 3. ನವಭಾರತ ಪುಸ್ತಕ ಭಂಡಾರ, ಉಡುಪಿ. 4. ಪಾವಂಜೆ ಗುರುರಾಯ, ಉಡುಪಿ. 5. ನವಯುಗ ಆಫೀಸು, ಉಡುಪಿ.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ
ಬಾಲಚಂದ್ರ
ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕಾರಿಯಾರುಗಳೂ ಪ್ರಕಟವಾಗುತ್ತವೆ.
ವಾರ್ಷಿಕ ಚಂದಾ
ರೂ. 2-0-೨ ನಾತ್ರ.
ಜೈಂಡು ಮಾಡಿದ ಪ್ರತಿಯೊಂದು ಸಂಪುಟಕ್ಕೆ ರೂ. 2½/-
ಪೆಟ್ಟಿನ ವಿಚಾರಕ್ಕೆ ಬರೆಯಿರಿ—
ಬಾಲಚಂದ್ರ ಆಫೀಸು, ಉಡುಪಿ

ಇಂದಿಗೆ ತಕ್ಕ ನಾಟಕ
ದೇಶಭಕ್ತ
ಶ್ರೀ. ಕೆ. ಕೆ. ಶೆಟ್ಟರು ಸುಲಭವಾದ ಶೈಲಿಯಲ್ಲಿ ಎಲ್ಲರಿಗೂ ಮಂದಟ್ಟಾಗುವಂತೆ ಬರೆದ ಬೋಧಪ್ರದ ಸಾಮಾಜಿಕ ನಾಟಕ.
ದೇಶಭಕ್ತನು ಹೇಗಿರಬೇಕು? ಅವನ ಧ್ಯೇಯ ಧೋರಣ ಹೇಗೆ ಆದರ್ಶವಾಗಿರಬೇಕು? ಜನತಾ ಜನಾರ್ದನನ ಸೇವೆ ಎಂದರೇನು? ಎಂಬತ್ಯಾದಿಗಳನ್ನು ಅತಿ ಕೌಶಲ್ಯದಿಂದ ಚಿತ್ರಿಸಿ, ಸಂಸ್ಥಾನವೆಲ್ಲಿ ನರೇಂದ್ರರು ಮಾಡುತ್ತಿರುವ ದೌರ್ಜನ್ಯಗಳಿಂದ ಭೀಕರ ಚಿತ್ತವನ್ನು ಮುಂದಿಟ್ಟು ಪ್ರಜಾಸ್ವಾತಂತ್ರ್ಯವು ಹೇಗೆ ಸಾಧ್ಯವೆಂಬುದನ್ನು ವಿವರಿಸುವ ರಾಜಕೀಯ-ಸಾಮಾಜಿಕ ನಾಟಕ.
ಬೆಲೆ ರೂ. 1—4—0
ನವಭಾರತ ಬುಕ್ ಡಿಪೊ,
ಉಡುಪಿ.

ದಕ್ಷಿಣ ಕನ್ನಡ

ದ. ಕ. ಜಿಲ್ಲಾ ರೈತರ ಯಾ ಭೂ ಮ್ಯಾಲಕರ ಸಂಘ– ನಮ್ಮ ಕೊಂಗ್ರೆಸು ಮಂತ್ರಿಮಂಡಲದವರು ನಮ್ಮ ಜಲ್ಲೆಯ ವ್ಯವಸಾಯ ಅಭಿವೃದ್ಧಿ ಬಗ್ಗೆ ಹೆಚ್ಚಿನ ನೀರಾ ನರಿ ಕೆಲ್ಸಗಳನ್ನು ಕೈಕೊಳ್ಳಲಿದ್ದಾರೆ. ಆದೇ ರೀತಿ ನಮ್ಮ ರೆವಿನ್ಯೂ ಮಂತ್ರಿಗಳಾಳಿಕಳ ಬಾರಿ ಇಲ್ಲಿಗೆ ಬಂದಲ್ಲಿ ಭರವಸೆಯನ್ನು ಕೊಟ್ಟಿದ್ದಾರೆ. ಈ ಸಂಬಂಧ ನಮ್ಮ ಜಿಲ್ಲೆಯ ಯಾವ ಯಾವ ಕಡೆಗಳಲ್ಲಿ ನೀರಾವರಿ ಕೆಲ್ಸ ಕೈಕೊಳ್ಳಬಹುದೆಂದು ತಿಳಿಯುವದು; ಅತ್ಯಾವಶ್ಯಕವಿದೆ. ಇದ್ದರಿಂದ ತಾಲೂಕು ಯಾ ಗ್ರಾಮಗಳಲ್ಲಿ ಯಾವ ಕೆರೆ, ಮದಗ, ಕಟ್ಟುಗಳನ್ನು ಪೊರಸ್ತಿ ಯಾ ಹೊಸದಾಗಿ ಕೈಕೊಳ್ಳಬಹುದು. ಅಂಥಾ ನೀರಾವರಿ ಕೆಲ್ಸ ಕೈಕೊಂದಲ್ಲಿ ಎಷ್ಟು ಅಂದಾಜು ಖರ್ಚು ಆಬೀತು. ಎಷ್ಟು ನಿಸ್ತಾರವಾದ ಭೂಮಿಯಲ್ಲಿ ಅದರ ಪ್ರಯೋಜನ ಯೊಂದಬಹುದು. ಅಂಥಾ ಕೆರೆ, ಮದಗ ಯಾ ಕಟ್ಟಿಜ ಸ್ಥಳದ ಸರ್ವೆ, ಸಬ್ ಡಿವಿಜನ್ ನಂಬ್ರ ಯಾವುದು ಎಂಬ ವಿವರವನ್ನು ಆದಷ್ಟು ಬೇಗನೆ ನೋಟಿನ ಸಂಘದ ಕಾರ್ಯದರ್ಶಿಗಳಿಗೆ ತಿಳಿಸಬೇಕಾಗಿ ಕಾರ್ಯದರ್ಶಿ ಶ್ರೀ. ಕೆ. ಸದಾನಂದ ಹೆಗ್ಡೆಯವರು ಬರೆಯುತ್ತಾರೆ.

ಪುತ್ತೂರು– ಅಕ್ಟೋಬರ ತಿಂಗಳಲ್ಲಿ ತಮ್ಮ ಉಟಿದ ಬಗ್ಗೆ ಅಕ್ಕಿ ತೆರಿಸಿಕೊಳ್ಳಲು ನೈಥಪತ್ರಿಕೆ ಸಹಿತ ತಹಶೀಲ್ದಾರರಿಗೂ ಸಂಬಂಧಪಟ್ಟ ಸಪ್ಲೈ ಅಧೀಕರಿಗಳಿಗೂ ಅರ್ಜಿ ಮಾಡಿತೊಂಡಿರುತ್ತಿದ್ದರೂ ಈವರೆಗೂ ಪರ್ಮಿಟು ಸಿಗದಿರುವ ಸಮಿತ್ತ ಕೆಲ ಸೀಟಿಯ ವರ್ಗದಾರರಿಗೆ ಅಕ್ಕಿ ನುಗಿಸುವ ರೇಶನ್ ಕಾರ್ಡಿನ ಮೂಲಕ ವ್ಯವಸ್ಥೆ ಮಾಡಿಕೊಳ್ಳುವ ಸಂಬಂಧ ಪಟ್ಟಿಜೆ. ಸಮ್ಮುಖೇ ಅಕ್ಕಿ ತಯಾರಾಗಿದ್ದರೂ ಈ ಪುಸ್ಥಿತಿಯಿಂದ ಅನ್ಯಾಯ ಹೊಂದುವ ಸಂಗ ಬಂದಿರುತ್ತಿದ್ದ ಇನ್ನಾದರೂ ಸಂಬಂಧಪಟ್ಟ ಅಧಿಕಾರಿಗಳು ಅಷ್ಟು ಬೇಗನೇ ಕನ್ಸ್ ನಡಿಸಿ ಅಕ್ಕಿ ತರಿಸಿಕೊಳ್ಳಲು ಪರ್ಮಿಟು ದಯಪಾಲಿಸಬೇಕಾಗಿ ಪ್ರಾರ್ಥನ

ಕಾರ್ಕಳ–ಸ್ಥಳೀಯ [illegible]ಕು ಸಪ್ಲೈ ಆಫೀಸರರಾದ ಶ್ರೀ. H. ನರಸಿಂಹರ ಪರಿಗೆ ಡಿಸ್ಟ್ರಿಬ್ಯೂಟಿ ಕಲೆಕ್ಟರಾಗಿ ನೀಲಗಿರಿಗೆ ವರ್ಗವಾಗಿದ್ದು ಶ್ರೀ. ಆರ್. ಎಸ್. ಸುಬ್ರಹ್ಮಣ್ಯಂರವರು ತಾಲೂಕು ಸಪ್ಲೈ ಆಫಿಸರರಾಗಿ ನೇಮಕ ಹೊಂದಿದ್ದು ಚಾರ್ಜು ವಹಿಸಿರುವರು.

ಬೆಂಕಿ ಹೆಟ್ಟಗೆಯ ಅಭಾವವಿರುವ

ದರಿಂದ ಸಮ್ಮಂಧಪಟ್ಟ ಅಧಿಕಾರಿಗಳು ತಕ್ಕ ವ್ಯವಸ್ಥೆ ಮಾಡಬೇಕಾಗಿ ಅಪೇಕ್ಷಿಸೋಣಾಗಿನೆ

ಕಾರ್ಕಳ ತಾಲೂಕು ವಾಲ್ಪಾಡಿ ಗ್ರಾಮದ ಆರದ ಎಂಬಲ್ಲಿ ಹೊಳೆಯ ಸಂಕ ನುರಿದು ಹೋದುದರಿಂದ ಸಮ್ಮಂಧಪಟ್ಟವರು ತೀವ್ರ ಗಮನಿಸಬೇಕಾಗಿ ಗ್ರಾಮಸ್ಥರು ವಿನಂತಿಸಿಕೊಳ್ಳುತ್ತಾರೆ.

ಕಾರ್ಕಳ ತಾಲೂಕು ಸೋಲ್ಜರ್ಸ್, ಸೈಲರ್ಸ್, ಏರಮೆನ್ಸ್ ಕಮಿಟಿಯ ನೂತನ ಸಭೆ ತಹಸೀಲ್ದಾರ ಶ್ರೀ. ಕೆ. ನಾರಾಯಣರಾವ್, ಬಿ. ಎ. ರವರ ಅಧ್ಯಕ್ಷತೆಯಲ್ಲಿ ಸ್ರುತೀ ತಿಂಗಳ ತಾರೀಕು 27ಕ್ಕೆ ಜರಗುವುದು.

ನಂದಳ್ಳಿ—ಸ್ಥಳೀಯ ಬೋ[illegible]ಹಾ[illegible] ಶಾಲಾ ಕಟ್ಟಿಡ ನಿಸ್ತಾರಣಕ್ಕೆ ಜೊಂಜಾಮಿಯಲ್ಲಿ ಸುಮಾರು ನೂರು ಸಾವಿರ ರೂಪಾಯಿ ನಗದಿ ನುತ್ತು ಅಸ್ಟೇ ರೂಪಾಯಿ ವಾಗ್ದಾನ ಕೂಡಾ ಆಗಿರುವುದೆಂದೂ ಸಹಾಯಕ ಕೆಲ್ಲರಿಗೂ ತುಂಬಾ ಕೃತಜ್ಞತೆಗಳೆಂದೂ ಸಂಬಂಧ ಪಟ್ಟವರು ತಿಳಿಸುತ್ತಾರೆ

ಮಂಗಳೂರು.

ಸಾರ್ವಜನಿಕ ಸಭೆ–ತಾ [illegible]ರಲ್ಲಿ ದಕ್ಷಿಣ ಕನ್ನಡ ಕಾಂಗ್ರೆಸ್ ಸಮಿತಿಯ ನೇತೃತ್ವದಲ್ಲಿ ಶ್ರೀ. ಉಮೇಶರಾಯರು ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿದು. ಅಧ್ಯಕ್ಷರು ಇಂದಿನ ದೇಶದ ಪರಿಸ್ತಿತಿಯ ಸೂಕ್ಷ್ಮ ಪರಿಚಯ ಮಾಡಿದರು. ಶ್ರೀ. ಸರ್ವೋತ್ತಮ ನಾರಾಯಣರಾಯರು ಕಿಸಾನ ಜಳನಳ ಸಮಸ್ಯೆಗಳ ಕುರಿತು ಮಾತನಾಡಿದರು ಕಿಸಾನ್ ಸುಧಾರಣೆಯಲ್ಲಿ ಕಾಂಗ್ರೆಸ್ ಧೋರಣೆ, ಅದನ್ನು ಕಾರ್ಯರೂಪಕ್ಕೆ ತರುವ ರೀತಿನೀತಿಗಳನ್ನು ವಿವರಿಸಿದರು. ಕಾಂಗ್ರೆಸ್ ಸರಕಾರಕ್ಕೆ ಕಿಸಾನರೂ, ಕಿಸಾನ ಸಂಘಟನೆಯೂ ಯಾವ ರೀತಿಯಿಂದ ಸಹಾಯಮಾಡಬೇಕು; ಸರಕಾರದಿಂದ ಯಾವ ಸಹಕಾರ ಪಡೆಯಬೇಕೆಂಬುದನ್ನು ತಿಳಿಸಿದರು.

ಸ್ವತಂತ್ರ ಭಾರತದ ರಾಜ್ಯ ಘಟನೆಯ ರೂಪರೇಖೆಗಳನ್ನು ಬರೆಯುವ್ ರಾಸನ ತಯಾರಿಸುವ ಘಟನಾ ಸಮಿತಿಯು ಸೇರುವಾಗಲೇ ನ್ರಿಟಿಷರ ವಿಭಜಿಸಿ ಆಳುವ ಧೋರಣೆಯ ನಗ್ನತೆ ಲೋಕಕ್ಕೆ ತೋರಿ" ಬಂತೆಂಬ ಅರ್ಥ ಸೂಪಿಸಿ ಶ್ರೀ. ಎಂ. ಶಿ. ಅಧಿಕಾರಿಯವರು ಇಂದಿನ ರಾಜಕೀಯ ವಸ್ಥಿತಿಯನ್ನು ವಿವರಿಸಿದರು. ಮುಂದಿನ ದಿನಗಳಲ್ಲಿ ಜನರು ಹೆಚ್ಚಿನ ಜಾಗರೂಕತೆಯಿಂದಿರಬೇಕೆಂದೂ, ಸ್ವತಂತ್ರ ಭಾರತದಲ್ಲಿ ಭೇದ ಭಾನವಿಲ್ಲದೆ ರಾಂತಿಯಿರುವಂತಾಗುವುದೆಂದೂ ತಿಳಿಸಿದರು.

ಶ್ರೀ. ಕೆ. ಕೆ. ಶೆಟ್ಟಿಯವರು ಇಂದಿನ ಮಜೂರ ಪರಿಸ್ಥಿತಿಯನ್ನು ವಿಮರ್ಶಿಸಿದರು. ಇದು ಮಜೂರರು ತಮ್ಮ ಸಾಯಕತ್ವದಿಂದಾಗಿ ಜನತೆಯ ಒತ್ತ ಸಾಧಿಸುವುದರ ಬದಲಿಗೆ ಆಪತ ಸಾಧಿಸಿದಂತಾಗಿದೆ. ಅವರೂ ಜನತೆಯೂ ಕಷ್ಟಕ್ಕೀಡಾಗುವ ಸಂಭವವಿದೆ" ಯೆಂದು ತಿಳಿಸಿದರಲ್ಲದೆ ಮಜೂರ ಸಂಘಟನೆ ಎಂತಾಗಬೇಕೆಂಬುದು ತಿಳಿಸಿದರು.

ಅಧ್ಯಕ್ಷರ ಸಮಾರೋಪ ಭಾಷಣವಾದ ಮೇಲೆ ವಂದನೆ. ರಾಷ್ಟ್ರಗೀತೆಯೊಡನೆ ಸಭೆಯು ಮುಕ್ತಾಯಗೊಂಡಿತು.

ಹೋಟೆಲುಗಳಿಗೆ ಜೋಳದ ಕಡ್ಡಾಯ– ಉಟಿದ ಹೋಟೆಲುಗಳು ವಿನಾಯಿತರ ಉಪಹಾರ ಮಂದಿರಗಳ ಉಪಯೋಗಕ್ಕೆ ಒಬ್ಬು ಕೊಡತಕ್ಕ ರೇಶನಿನ ರೇಶಿನಲ್ಲಿ ಸ್ವಲ್ಪ ಜೋಳದ ರೂಪದಲ್ಲಿ ಕಡ್ಡಾಯವಾಗಿ ಕೊಡತಕ್ಕದ್ದೆಂದೂ ಮದ್ರಾಸು ಸರಕಾರವು ಪಿಥಿಸಿದೆ. ಇದರ ಜತೆಗೆ ರೇಶದ ಇತರಪ್ಪು ಬಾರ್ಲಿ ಅಕ್ಕಿನ ರೂಪದಲ್ಲಿ ಕಡ್ಡಾಯವಾಗಿ ಕೊಡತಕ್ಕದ್ದು. ಜೋರ್ತಿಲಾ ಹೋಟೆಲ್, ಅನಾಥಾಲಯ ಮುಂತಾದ ಸಂಸ್ಥೆಗಳಿಗೆ ಅರಿಸಿಯ ಒಂದರ ಎಂತ್ರ ಜೋಳ ಅಥವಾ ಮಿಶ್ರತರ ಜನಪ್ರಿಯವಲ್ಲದ ಧಾನ್ಯರೂಪದಲ್ಲಿ ಕೊಡಲಾಗುವುದು. ಈ ನಿಯಮವು ಹೆಚ್ಚಿಗಿಲೂ ನಗರಗಳಿಗೂ ಅನ್ವಯಿಸುವುದೆಂದು ಹೇಳಲಾಗಿದೆ.

ಉಡುಪಿ

ಕಲಾವೃಂದ—೧೨—೧೨—೪೬ರಂದು ಕಲಾವೃಂದದ ಕೆಲಗೆಳೆಯರು ಪರ್ಯಾಯ ಮಠೀಯ ಶ್ರೀ ಶ್ರೀ ಲಕ್ಷ್ಮೀಂದ್ರ ತೀರ್ಥ ಶ್ರೀಯವರ ಆಶ್ರಯತ್ವದಲ್ಲಿ ಸಂಸ್ಕೃತ ಕಾಲೇಜು ಗಳ ಸುಪರಿಂಡೆಂಟ್ ಶ್ರೀ. ಟಿ. ಪಾಲ ಸುಬ್ರಹ್ಮಣ್ಯಂ ಆಯ್ಯರ್ ಎಂ. ಎ. ಎಲ್ ಟಿ. ಆಸರ ನೇತೃತ್ವದಲ್ಲಿ 'ಮೊಮ್ಮಗನ ಮದುವೆ' ಯೆಂಬ ಏಕಾಂಕ ಕನ್ನಡ ನಾಟಕವನ್ನು ಅಭಿನಯಿಸಿದರು. ಜೊತೆಯಲ್ಲೇ ಸಂಸ್ಕೃತ ಕಾಲೇಜಿನ ವಿದ್ಯಾರ್ಥಿಗಳಿಂದ 'ಚಂದ್ರಹಾಸ' ಮತ್ತು 'ನೇಣಸಂಹಾರ' ಸಂಸ್ಕೃತ ನಾಟಕಗಳು ನಟಿಸಲ್ಪಟ್ಟವು.

ಕನ್ನಡ "ಜಾಣ" "ಕಾವ" ಪರೀಕ್ಷೆಗಳು–ದಿನ ೧೪ರಿಂದ ೧೬ ೧೨ ೪೬ರ ತನಕ ಕಲಾವೃಂದದಲ್ಲಿ ಶ್ರೀ ಕಡೆಕಾರು ರಾಜಗೋಪಾಲಕೃಷ್ಣರಾಯರ ನೇತೃತ್ವದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಜರಗುತ್ತಿರುವ ಕನ್ನಡ "ಜಾಣ" ಮತ್ತು "ಕಾವ" ಪರೀಕ್ಷೆಗಳು ಜರಗಿದವು.

ಹರಿಕಥಾ ಕಾಲಕ್ಷೇಪಗಳು–ಪ್ರಸಿದ್ಧ ಕೀರ್ತನಕಾರರಾದ ಶ್ರೀ. ಬಾಲಎಲ ಕೇಶವದಾಸರು, ಶ್ರೀ ಕೃಷ್ಣಮಂ. ಶ್ರೀ ಅನಂತೇಶ್ವರ ದೇವಾಲಯ, ಒತ್ತಿಗ ಮಠರು, ಶ್ರೀ ವೆಂಕಟ್ರಮಣ ದೇವಾಲಯ ಮೊದಲಾದ ಕಡೆಗಳಲ್ಲಿ ಹರಿಕಥೆಗಳನ್ನು ನಡೆಸಿರುವರು. ಶ್ರೀ. ಹರಿದಾಸ ಶ್ರೀಪಾದದಾಸರ 48 ದಿನಗಳ ಹರಿಕಥೆಗಳು ಅನಂತೇಶ್ವರ ದೇವಾಲಯದಲ್ಲಾದುವು. ಇದೇ ತಾರೀಖಿಂದ ತಾ 17ರಲ್ಲಿ 'ನಾರಕಾಲೀ ಸಹಾಯಾರ್ಥ' ಕಥಾಕಾಲಕ್ಷೇಪ ನಡೆಯಿತು.



ಕುಟುಂಬಿ ದೊಳಗಿನ ಚಿಲ್ಲರೆ ಬೇನೆ

ಮಲಬದ್ಧತೆ, ಹೊಟ್ಟೆ ಉಬ್ಬರ, ಹುಳಿತೇಗು, ಎದೆಯುರಿ, ಹಸಿವಾಗದಿರುವಿಕೆ, ಮಲಬದ್ಧತೆಯಿಂದ ಉಂಟಾಗುವ ತಲೆನೋವು, ಮೈಕೈ ನೋವು, ಹೊಟ್ಟೆ ನೋವು, ಹೊಟ್ಟೆ ಹುಳ, ಜಂತುಹುಳ, ಕ್ರಿಮಿಗಳು, ಅಜೀರ್ಣ, ಅತಿಸಾರ, ಭೇದಿ, ಕಾಲರಾ, ಪ್ಲೇಗ್, ಮಲೇರಿಯಾ ಜ್ವರ, ಮಲಬದ್ಧತೆಯಿಂದ ಉಂಟಾಗುವ ಮೂಲವ್ಯಾಧಿ, ಭಗಂದರ, ಪಿತ್ತ, ಕಫ, ವಾತ ಮತ್ತು ಸನ್ನಿಪಾತ ಜ್ವರಗಳಿಗೆ ಅತ್ಯುತ್ತಮ ಔಷಧಿ.

ಸಾಮಾನ್ಯ ಮಲಬದ್ಧತೆಯಿಂದ ಹಿಡಿದು ಮಾರಣಾಂತಿಕ ಕಾಯಿಲೆಗಳವರೆಗೆ ಎಲ್ಲಾ ರೋಗಗಳಿಗೂ ಒಂದೇ ಔಷಧಿ. ಮಕ್ಕಳಿಂದ ಹಿಡಿದು ಮುದುಕರವರೆಗೆ ಎಲ್ಲರಿಗೂ ಒಂದೇ ಔಷಧಿ. ಹೆಂಗಸರಿಗೆ ಹೆರಿಗೆಯಾದ ಮೇಲೆ ಮತ್ತು ಮಕ್ಕಳಿಗೆ ಹಾಲುಣಿಸುವ ತಾಯಂದಿರಿಗೆ ಅತ್ಯುತ್ತಮ ಔಷಧಿ. ಮಕ್ಕಳ ಕಾಯಿಲೆಗಳ

ಮಂಗಳೂರು

ರಾಷ್ಟ್ರೀಯ ಬೀಡಿ ಕೆಲಸಗಾರರ ಸಂಘ–ತಾ. 6-12-46ರಲ್ಲಿ ಬೀಡಿ ಕೆಲಸಗಾರರ ಸಭೆಯೊಂದು ಕಾಂಗ್ರೆಸ್ ಭವನದಲ್ಲಿ ಜರಗಿತು. ಡಾಕ್ಟರ್ ಸಂಜೀವನಾಥರು ಅಧ್ಯಕ್ಷತೆ ವಹಿಸಿದ್ದರು. ಪ್ರತ್ಯೇಕ ಸಂಘ ಸ್ಥಾಪನೆಯ ಅವಶ್ಯಕತೆ ಕುರಿತು ಚರ್ಚೆಯಾಗಿ, ಒಮ್ಮತದಿಂದ ಸಂಘ ಸ್ಥಾಪಿಸುವದೆಂದಾಯಿತು. ಸಂಘಟನೆಯ ಕುರಿತು ಶ್ರೀಗಳಾದ ಸಿ. ಗೋವಿಂದನ್, ಕೆ.ಅನಂದನ್, ಎ. ಬಾಲಪ್ಪ, ಕೆ. ಬಾಸ ಮೊದಲಾದವರು ಮಾತಾಡಿದರು. ಹೊಸ ಸಂಘಕ್ಕೆ ರಾಷ್ಟ್ರೀಯ ಬೀಡಿ ಕೆಲಸಗಾರರ ಸಂಘವೆಂದು ನಾಮಕರಣ ಮಾಡಲಾಯಿತು ಅನಂತರ ಅಧಿಕಾರಿ ವರ್ಗ ಮತ್ತು ಕಾರ್ಯಕಾರಿ ಸಮಿತಿಯನ್ನು ಚುನಾಯಿಸಲಾಯಿತು.

ಕಮ್ಯೂನಿಸ್ಟ್ ನಿಯಂತ್ರಿತ ಬೀಡಿ ಲೇಬರ್ ಯೂನಿಯನ್‌ಗೆ 69 ಮಂದಿ ಬೀಡಿ ಕೆಲಸಗಾರರು ರಾಜೀನಾಮೆ ಕೊಟ್ಟಿರುವರು.

ಭಜನೆ ಸಭೆ– ತಾ. 9-12-46ರಲ್ಲಿ ಬಸವನ ಗುಡಿ ನೇವಸ್ಥಾನದೊಳಗೆ ಮಂಗಳೂರು (ಉಪ್ಪಾರ) ನೀರಕೆರೆಯ ಸಮಾಜದವರ ಭಜನೆ ಸಭೆಯೊಂದು ಜರಗಿತ್ತು. ಶ್ರೀ ಹೋಟ್ಟಾಪುರ ಮಠದ ಸ್ಥಿರಾಧ್ಯಕ್ಷರಾದ ಶ್ರೀ. ರೇವಣ ಸಿದ್ಧ ಶಿವಾಚಾರ್ಯ ಸ್ವಾಮಿಜಿಯವರು ಶ್ರೀ. ಎಸ್. ಸಿ. ಪುಟ್ಟಪ್ಪ ಶೆಟ್ಟರವರ ಗೃಹವನ್ನು ಕೆಲವು ಲಿಂಗಾಯತ ಗೃಹಸ್ಥರೂ ನೆರೆದಿದ್ದರು. ಭಜನಾಂತ್ಯದಲ್ಲಿ ಶ್ರೀ. ಶ್ರೀ. ಸ್ವಾಮಿಜಿಯವರು ನೆರೆದ ಶಿಷ್ಯ ವರ್ಗಕ್ಕೆ ದೇವರ ಭಕ್ತಿಯ ವಿಷಯ ವಿಷಯ ಭೋದನೆ ಕೊಟ್ಟರು ಶ್ರೀ ಸೀತಾರಾಮ ಪದಕಣ್ಣಾಯರು ಶ್ರೀ ಶ್ರೀ ಸ್ವಾಮಿಜಿಯವರು $1\frac{1}{2}$ ವರ್ಷದಿಂದ ಸದರಿ ಮನೆಯಲ್ಲಿದ್ದುಕೊಂಡು ಉಪ್ಪಾರ ಸಮಾಜದ (ವೀರಕೈವ ಸಮಾಜದ) ಏಕೀಕರಣಕ್ಕೆ ಮಾಡಿದ ಕಾರ್ಯವನ್ನು ಶ್ಲಾಘಿಸಿ ಧನ್ಯವಾದ ಲೋಕನದೂರಿ ಸ್ವಾಮಿಜಿಯವರನ್ನು ಹೃದಯ ಪೂರ್ವಕವಾಗಿ ಅಭಿನಂದಿಸಿದರು.

NOTICE

ಉಡ್ಪಿ. ಡಿ. ಮು. ಕೋರ್ಟಿನಲ್ಲಿ.

O. P. No. 57/1946

1. ಸುಭದ್ರೆ ಯಾನೆ ದೇವಮ್ಮ-ಕಲ್ಯಾಣಪುರ ರಾಮಕೃಷ್ಣ ಅವಧಾನರ ಪತ್ನಿ, 2 ರಾಮಕೃಷ್ಣ ಅವಧಾನ-ವೆಂಕಟೇಶ ಅವಧಾನರ ಮಗ, 3. ಜನಾರ್ಧನ ಅವಧಾನ 1, 2ನೇ ಅರ್ಜಿದಾರರ ಮಗ, ಉಡ್ಪಿ ತಾಲೂಕು ಮೂಡುತೋನ್ಸೆ ಗ್ರಾಮದ ಕಲ್ಯಾಣಪುರದಲ್ಲಿರುವವರು—ಅರ್ಜಿದಾರರು

ಯಾ ಮೂಲಕ ಸರ್ವಜನರಿಗೆ ತಿಳಿಯಪಡಿಸುವದೇನಂದ್ರೆ.

1, 2ನೇ ಅರ್ಜಿದಾರರ ಮಗ ವ 3ನೇ ಅರ್ಜಿದಾರನ ಸಹೋದರ ಸದ್ರಿ ಕಲ್ಯಾಣಪುರದಲ್ಲಿ ತಾ 19-10-46ರಲ್ಲಿ ವ್ಯತಿಪಟ್ಟ ಮೋಹನ ಅವಧಾನಿಯು "The United Karnata Insurance Co.,Ltd., Dharwar" ಯಾ ಕಂಪೆನಿಯಲ್ಲಿ ಪಡೆದ ನಂಬ್ರ 3306ನೇ ಪೊಲಿಶಿ ಬಾಬ್ತು ಬರತಕ್ಕ ರೂಪ್ಯಾ 1000-ನ್ನು ಸ್ವಲ ಮಾಡುವರೆ 1ನೇ ಅರ್ಜಿದಾರಳಿಗೋಸ್ಕರ 2ನೇ ಅರ್ಜಿದಾರರಿಗೆ ನೆಕ್ಷೆಶನ್ ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರರು ಪಾಕ್ಸು ಮಾಡಿದ ಸದ್ರಿ ಅರ್ಜಿಯು ತಾ 16-1-47ಕ್ಕೆ ಸದ್ರಿ ಕೋರ್ಟಿನಲ್ಲಿ ತಪ್ಪಿಗೆ ಬಿಟ್ಟಿರುವದ್ರಿಂದ ಆ ಕುರಿತು ಆಕ್ಷೇಪ ಹೇಳುವವರು ಸದ್ರಿ ತಾರೀಕಿನ ದಿವ್ಸ ಸದ್ರಿ ಅರ್ಜಿ ತಪ್ಪಿ ಸಮಯ ಸದ್ರಿ ಕೋರ್ಟುಮುಂದೆ ಸ್ವತಹಾ ಅಥವಾ ವಕೀಲರ ಮುಖಾಂತ್ರ ಹಾಜ್ರಾಗಿ ತಮ್ಮ ಆಕ್ಷೇಪಗಳನ್ನು ಜ್ಞಾಪೀರು ಮಾಡಿಕೊಳ್ಳಬೇಕಾಗಿ ಯಾ ಮೂಲಕ ಎಲ್ಲಾ ಜನರಿಗೆ ತಿಳಿಯಪಡಿಸೋಹಾಗುತ್ತದೆ.

H. Ramanath Pai
Advocate for Petitioners.
Udipi, South Kanara
Dated 13-12-1946—

ಕ್ರಿಸ್ಮಸಿಗೆ ಸಕ್ಕರೆ–ಮಂಗಳೂರು ರೇಶನ್ ಪ್ರದೇಶದೊಳಗಿರುವ ಎಲ್ಲ ಕ್ರೈಸ್ತರಿಗೆ, ಈ ತಿಂಗಳಲ್ಲಿ ಕ್ರಿಸ್ಮಸ್ ಮತ್ತು ಹೊಸ ವರ್ಷದ ಬಗ್ಗೆ, ಅವರ ರೇಶನ್ ಕಾರ್ಡಿನಲ್ಲಿ ಕಾಣಿಸಿರುವುದರ ದುಬಾರಿ ಸಕ್ಕರೆ ಸಿಗುವುದು. ಮಂಗಳೂರು ರೇಶನ್ ಪ್ರದೇಶದೊಳಗಿನ ಎಲ್ಲ ಅಧಿಕೃತ ಚಿಲ್ಲರೆ ವ್ಯಾಪಾರಿಗಳು ತಮ್ಮ ಅಂಗಡಿಗಳಲ್ಲಿ ಒಂದು ಬೋರ್ಡನ್ನಿರಿಸಬೇಕು. ಮತ್ತು ತಾ. ೨೦ನೇ ತಾರೀಕಿನೊಳಗೆ ಅವರಿಗೆ ಸಕ್ಕರೆ ಒದಗಿಸಬೇಕು. ಚಿಲ್ಲರೆ ವ್ಯಾಪಾರಿಗಳು ಕೂಡಲೇ, ಈ ವಿಭಾಗದಲ್ಲಿ ಆವಶ್ಯಕವಿರುವ ಅಧಿಕ ಸಕ್ಕರೆಯ ಮೊತ್ತ ಸಹಿತ ತಮ್ಮ ಇಂಡೆಂಟುಗಳನ್ನು ಕಳಿಸತಕ್ಕದ್ದು.

ಕಲಾಪ್ರದರ್ಶನ–ದಿವಂಗತ ಪಾ ವಂಜೆ ಗೋಪಾಲಕೃಷ್ಣಯ್ಯ ಸ್ಮಾರಕ ಚಿತ್ರಕಲಾ ಮತ್ತು ಕೈಗಾರಿಕಾ ಪ್ರದರ್ಶನವು, ಅವರ ಕೆಲವು ಶಿಷ್ಯರ ಶ್ರಮದಿಂದ, ಕೆನರಾ ಹೈಸ್ಕೂಲ್ ಹಳೇ ವಿದ್ಯಾರ್ಥಿ ಸಂಘದ ಆಶ್ರಯದಲ್ಲಿ ಇದೇ ತಾ. ೨೦ನೇ ರವಿವಾರ ಆರಂಭವಾಗಿ, ತಾ. ೪ರ ತನಕ ಜರಗುವುದು. ಈ ಮೊದಲು ಪ್ರಕಟಿಸಿದಂತೆ, ವಿವಿಧ ಆಕರ್ಷಕ ವಸ್ತುಗಳನ್ನು ಪ್ರದರ್ಶಿಸುವ ಯತ್ನಗಳು ನಡೆದಿದ್ದು, ಪ್ರದರ್ಶನವು ಆತ್ಯಂತ ಯಶಸ್ವಿಯಾಗಿ ಜರಗುವ ಭರವಸೆ ತೋರುತ್ತಿದೆ. ಶ್ರೇಷ್ಠ ಕರ ಹಾಸಲು ಎರಡಾಣೆಯಂತೆ ನಿಶ್ಚಯಿಸಲ್ಪಟ್ಟಿದೆ; ಒಂಭತ್ತೂ ದಿನಗಳ ಸೀಝನ್ ಟಿಕೇಟಿಗೆ ಎಂಟಾಣೆ. ಉಲಾಭಿಮಾನಿಗಳ ಪ್ರೋತ್ಸಾಹ-ಸಹಕಾರಗಳನ್ನು ನಿರೀಕ್ಷಿಸಲಾಗಿದೆ

ಮಳೆ–ಪೂರ್ವ ಕರಾವಳಿಯಲ್ಲಾಂಟಾದ ಅತಿವೃಷ್ಟಿಯ ಕೊಂಚ ಪ್ರಭಾವವು ನಿನ್ನೆಯ ಕರಾವಳಿ ತನಕವೂ ಕಂಡು ಬಂತು. ಕಳೆದ ವಾರ ಕೆಲವು ಬಲವಾದ ಮಳೆಗಳಾಗಿವೆ. ಈ ವಾರ ಆಕಾಶವು ರುಭುವಿದೆ.

ನಾಟಕ ಕಂಪೆನಿ–ಕೆಲವು ವರ್ಷಗಳ ನಂತರ ಇದೀಗ ಮೊದಲ ಬಾರಿ ಮಂಗಳೂರು ಸೆಂಟ್ರಲ್ ಮೈದಾನಿನಲ್ಲಿ ನಾಟಕ ಥಿಯೇಟರೊಂದು ರಚನೆಯಾಗಿ, ಸಂಪ್ರಸಿದ್ಧ ಚಾಮುಂಡೇಶ್ವರಿ ನಾಟಕ ಸಭೆಯವರು ಕಳೆದ ತಾ. ೧೧ರಿಂದ ಅಲ್ಲಿ ತಮ್ಮ ನಾಟಕ ಪ್ರದರ್ಶನಗಳನ್ನು ಆರಂಭಿಸಿರುವರು ಆರಂಭ ದಿನದಿಂದ ಜನರ ಪ್ರೋತ್ಸಾಹವು ಯಥೇಚ್ಛವಿದೆ. ನಾಟಕಗಳನ್ನೂ ಜನರು ಮೆಚ್ಚುರುವರು.

ರೈಲು ಓಡಾಟಕ್ಕೆ ಪಡೆ– ಮಂಡ್ಯಾಸು ಮಂಗಳೂರು ರೈಲುಮಾರ್ಗದ ಮಸ್ಕೆ ಮೊರಪ್ಪುರುಸ್ಟೇಶನಿನ ಬಳಿಯಲ್ಲಿ ರೈಲು ಮಾರ್ಗವು ನೆರೆನೀರಿನಿಂದ ಕೊಚ್ಚಿಹೋಗಿದ್ದುದರಿಂದ ಮಂಡ್ಯಾಸಿನಿಂದ ನೇರವಾಗಿ ಮಂಗಳೂರಿಗೆ ಬರತಕ್ಕ ಮೈಲುಗಾಡಿಯ ಓಡಾಟವು ನಾಲ್ಕು ದಿನ ತಡೆಯಲ್ಪಟ್ಟು, ಬುಧವಾರದಿಂದ ಕ್ರಮವಾಗಿ ಆರಂಭವಾಗಿದೆ.

ಮೋಟಾರು ಸರ್ವಿಸುಗಳಿಗೆ ಹಂಗಾಮಿ ಲೈಸೆನ್ಸ್–ಮೋಟಾರು ವಾಹನ ಚಲಾವಣೆಯನ್ನು, ಶಾಂತಿಪ ಎಲ್ಲ ಕಡೆಗಳಲ್ಲಿಯೂ, ಸರಕಾರವೇ ವಹಿಸುವ ಕುರಿತು ಯೋಜನೆಯಾಗುತ್ತಿದೆ. ಈ ದೆಸೆಯಿಂದ, ಎಲ್ಲ ಬಸ್ಸು ಸರ್ವಿಸುಗಳಿಗೂ ಲೋರಿ ಸರ್ವಿಸುಗಳಿಗೂ ಕೊಟ್ಟ ಮತ್ತು ಕೊಡುವ ಲೈಸೆನ್ಸುಗಳನ್ನು ಹಂಗಾಮಿಯಾಗಿ ಪರಿಗಣಿಸಬೇಕೆಂದೂ, ಮೋಟಾರು ಸರ್ವಿಸುಗಳೆಲ್ಲವೂ ಬೇಗನೆ ಸರಕಾರದಿಂದ ನಡೆಸಲ್ಪಡುವುದರಲ್ಲಿ ಬರುವುದೆಂಬುದನ್ನು ಸರ್ವಿಸು ನ್ಯೂಹಲಕರೂ ಕಂಪೆನಿಗಳೂ ತಿಳಿದಿರುವುದು ಲೇಸೆಂದೂ ವಿವರಿಸಿ ಮದರಾಸು ಸರಕಾರದ ಪ್ರಕಟಣೆಯೊಂದು ತಿಳಿಸುತ್ತಿದೆ.

ಬೆಲ್ಲ–ವ ಬೆಲೆಯನ್ನು ಇದೇ ತಾ. ೧೮ರಿಂದ ನಿಯಂತ್ರಿಸಲಾಗಿದೆ. ಮಣಕ್ಕೆ ಲಾರ್ರೂಗಳಿಗೂ ಮೇಲ್ಪಟ್ಟು ವಿಕ್ರಯವಾಗುತ್ತಿದ್ದ ಬೆಲ್ಲ ಕ್ಕೆ ಗಣ. ನೆಲಗಡಲೆ ಮತ್ತು ಅದರ ಎಣ್ಣೆಯ ಬೆಲೆಯನ್ನೂ ನಿಯಂತ್ರಿಸಲಾಗಿದೆ.

ಗ್ರಾಮ ಉದ್ಯೋಗಸ್ಥರ ಸಂಘ–ಒಂದನ್ನು ಏರ್ಪಡಿಸಿ, ಗ್ರಾಮ ಉದ್ಯೋಗಸ್ಥರ ಸಂಕಷ್ಟ ನಿವಾರಣಾ ಯತ್ನವನ್ನು ಆದಷ್ಟು ಬೇಗನೆ ಕೈಕೊಂಡು, ಹೆಚ್ಚಿನ ಅಧಿವದ್ಧಿಯಾಗುವಂತೆ ಯತ್ನಿಸಬೇಕೆಂದು ಹಲವು ಗ್ರಾಮ ಉದ್ಯೋಗಸ್ಥರ ತಾತ್ಕಾಲಿಕ ಸಮಿತಿಯೊಂದರಲ್ಲಿ ನಿಶ್ಚಯವಾಗಿರುವದರಿಂದ ಇದೇ ತಾರೀಕು ಭಾನುವಾರದಂದು ಅಪರಾಹ್ನ ಘಂಟೆ ೧ಕ್ಕೆ ಮಂಗಳೂರು ಶ್ರೀ. ರಥವು ಮಹಾಗಣಪತಿ ದೇವಸ್ಥಾನದ ಗೋಪುರದ ಮುಂಭಾಗದಲ್ಲಿ ಶ್ರೀಮಾನ್ ಕೆ. ಬಾಲಕೃಷ್ಣರಾವ್ ಎಡ್ವೋಕೇಟ್, ಇವರ ಅಧ್ಯಕ್ಷತೆಯಲ್ಲಿ ಜಲ್ಲೆಯ ಗ್ರಾಮ ಉದ್ಯೋಗಸ್ಥರ ಮಹಾಸಭೆಯೊಂದು ಜರಗಲಿರುವುದು.

NOTICE

ಉಡ್ಪಿ. ಡಿ. ಮೇ. ಕೋರ್ಟಿನಲ್ಲಿ

O. P. No. 52/1946

ನೀಲು ಮರಕಾಲ್ತಿ ಅರ್ಜದಾರಳು.

ಮತ್ತು

ನರ್ವ ಮರಕಾಲ ಕೂಡಾ —ಎದ್ರಿರು.

ಯವರೊಳಗೆ.

ದಿ. ಕೆನರಾ ಮ್ಯುಚುವಲ್ ಎಕ್ಸ್ಪ್ಲೋಸೆನ್ಸ್ ಕಂಪೆನಿ ಲಿಮಿಟೆಡ್ ಉಡ್ಪಿ ಎಂಬ ಕಂಪೆನಿಯ ನಂಬ್ರ 15363ನೇ ಪೊಲಿಶಿ ಬಾಬು ಅರ್ಜದಾರಳ ಮಗ ಹಾಲ್ ಮೃತಪಟ್ಟ ಕೆ. ಕೊಂಬ ಮರಕಾಲಗೆ ಸಿಕ್ಕತಕ್ಕ ರೂ. 979-4-0ನ್ನು ವಸೂಲು ಪಡಿಯುವರೆ ಅರ್ಜದಾರಳಿಗೆ ಸಕ್ಸೇಶನ್ ಸರ್ಟಿಫಿಕೇಟು ಕೊಡಬೇಕಾಗಿ ಅರ್ಜದಾರಳು ಪಾಕಲ್ತಾಡಿದ ಮೇಲ್ಕಂಡ ಅರ್ಜಿಯು ತಾರೀಕು 20-12-1946ಕ್ಕೆ ತಪ್ಪಿಗೆ ಬಿಟ್ಟಿದೆ. ಆ ಕುರಿತು ಆಕ್ಷೇಪವುಳ್ಳವರು ಸದ್ರಿ ದಿವ್ಸ 11 ಗಂಟೆಗೆ ಕೋರ್ಟುಮುಂದೆ ಹಾಜ್ರಾಗಿ ಜ್ಞಾಪೀರುಮಾಡಿಕೊಳ್ಳತಕ್ಕದ್ದು.

B. S. Hegde.
ಅರ್ಜದಾರಳ ಕಡೆ ವಕೀಲ್.

ತಾ 8-12-1946.



ಕ್ಷಣಿಕ ಗುಣಕೊಡುವ ಔಷಧದ ಬೆನ್ನು ಹತ್ತಿ ಮರುಳಾಗಬೇಡಪ್ಪಾ.

ಪುರೋಹಿತ ಶ್ವಾಸಹಾರೀ ಔಷಧ ಮಾತ್ರ ಬೇರೆ ಅದು ದಮ್ಮನ್ನು ಬರೇ ಪಂ - ಇಡದೆ ಅದನ್ನು ಬೇರುಸಹಿತ ಕಿತ್ತು ಹಿಗೆಯುವುದು. ಈ ವಿವಿಧ ಸುರುಪು ಮೂಡಿದಾಗಲೇ ಕೆಮ್ಮೂ ತೇಕೂ ನಿಲ್ಲುವವು; ಮೊಟ್ಟೆ ಹಸನಾಗುವದು; ಪಚನಕ್ರಿಯೆಯು ಕಿದ್ದುವದು. ಪುಷ್ಪುಸಗಳು ಗಟ್ಟಿಯಾಗುವುವು ಆ ಮೇಲೆ ದಮ್ಮಿರಲಿಕ್ಕೆ ಸ್ಥಳವೇ ಸಿಗುವದಿಲ್ಲ.

ದಮ್ಮು, ತೇಕು, ಬೆನ್ನು ನೋವು, ಗಂಟಲ ಉರಿಯುವಂಥ ಕೆಮ್ಮು ಮುಂತಾದ ವಿಕಾರಕ್ಕೆ ಪುರೋಹಿತಶ್ವಾಸಹಾರೀ ಸ್ಪೆಶಲ್ (ಏಲೀಕ್ಸ್ಯಾಕಿಂಗ್) ತೆಗೆದುಕೊಳ್ಳಬೇಕು. ಅಜೀರ್ಣ ಮತ್ತು ಅನ್ನಪಿತ್ತದಿಂದ ಬಳಲುವ ದನ್ಮುನ ವರು ಶ್ವಾಸಹಾರೀ ಕಂಪೌಂಡ (ಕೆಂಪು ಪ್ಯಾಕಿಂಗ್) ತೆಗೆದುಕೊಳ್ಳಬೇಕು.

೧ ಔನ್ಸ್, ೪ ಔನ್ಸ್‌ಗೂ ಔನ್ಸ್ ಬಾಟ್ಲಿಗೆ ಕ್ರಮವಾಗಿ ರೂ.೪-೬-೦; ೫.೧೨-೦ ಮತ್ತು ೧೦ ೦.೦

ಪುರೋಹಿತ ಫಾರ್ಮಸಿ, ಕೊಲ್ಹಾಪುರ

ಸ್ಟಾಕಿಸ್ಟರು-ಪೊಪ್ಯುಲರ್ ಸ್ಟೋರ್ಸ್, ಮಂಗಳೂರು; ಟಿ.ಸಿ.ನಟರಾಜನ್ & ಕೊ.ಮೈಸೂರು.

ಮುಂಬಯಿ ಸೋಲ ಏಜಂಟರು:-



ವನಮಾಲೀ ಭಿಕಾ ಮತ್ತು ಕಂಪನಿ,
ಪ್ರಿನ್ಸೆಸ್ ಸ್ಟ್ರೀಟ್,
ಮುಂಬಯಿ ೨.

ಧಾತುವುಷ್ಟಿ ಲೇಹ

ಇದುಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ ಧಾತುಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ,ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ಬೆರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಔಷಧೀಯವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ಪುಂಬಿಸುವುದು. ರಕ್ತಧಾತುವು ಅಧಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; $\frac{1}{2}$ ಪೌಂಡು ರೂ. 3—0—0.

ಮಹಾಮದನಕಾಮೇಶ್ವರೀ ಲೇಹ

(ಬಂಗಾರ, ಪುಸುಗು, ಕಸ್ತೂರಿ ಮಿಶ್ರಿತವಾದದ್ದು.)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ನಾಯು ಉದಾಸ್ರ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು.

ರಾತ್ಲು 1ರ 10-0-0, $\frac{1}{2}$ ರಾತ್ಲು 5-4-0, $\frac{1}{4}$ ರಾತ್ಲು 2-12-0.

ಎಲ್ಲಾ ಹಪೂನೆಯ ಔಷಧಿಗಳು ದೊರೆಯುತ್ತವೆ.

— ಏಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ಸಂಬ್ಯ, 10 ಮಂಗಳೂರು.

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ. ಇಲ್ಲಿ ತಂಗಿ ಬರದಿದ್ದಲ್ಲಿ ಕೋಗಳ್ಳೆ, ಕಳ್ಳತಾದ ಔಷಧ ರವಾನಿಸಲಾಗುವುದು. (1) ಉಡುಪಿ ವಿಜಯದಲ್ಲಿ:— ನವಭಾರತ ಬುಕ್ ಡಿಪೊ, (2) ಬೊಂಬಾಯಿ ವಿಜಯದಲ್ಲಿ:- ಪೊಪ್ಯುಲರ್ ಸ್ಟೋರ್ಸ್, ಕೆಂಪ್ಸ್ 183, ಸುಕಾರಿಬಾಗ್ ರೋಡ್, ಪಿ. ಪಿ. ಪಿ ಕ್ಯೂಕ್ ವರ್ಕ್ ಶೀವ್ ಎದುರುಗಡೆ, ಪರೇಲ್. (3) ಜನರಲ್ ಸ್ಟೋರ್ಸ್, ಕೆನಿಸ್ಟ್, ಜಿ. ಐ. ಪಿ. ರೈಲ್ವೆ ಮಾಹಿಂರಾಡ್.

(೨ನೇ ಪುಟದಿಂದ)

ಮೂರನೇ ಗುಂಪಿನ ಅಸ್ಸಾಮು ಪ್ರಾಂತ್ಯವೂ ಬಹುಮತವುಳ್ಳ ಲೀಗ್ ಪ್ರತಿನಿಧಿಗಳ ಬಯಕೆಯ ರಾಜ್ಯಭಾರ ತನಗೆ ಬೇಡವೆನ್ನುತ್ತಿದೆ; ಬಂಗಾಳದ ಸುಮಾರು ಅರೆ ವಾಸಿ ಭಾಗವೂ ಹಾಗೆನ್ನುತ್ತಿದೆ. ಆದರೂ ಬ್ರಿಟಿಷ್ ಹೇಳಿಕೆಯ ಪ್ರಕಾರ ಆದೇ ಜ್ಯಾರಿಕೆ ಬರಬೇಕು.

ಈಗ ಈ ಮೂರು ಗುಂಪುಗಳೊಳಗಿನ ಸಂಖ್ಯಾಬಲ ಮತ್ತು ಸ್ಥಿತಿಗತಿಗಳನ್ನೊಮ್ಮೆ ನೋಡೋಣ.

'ಎ' ಗುಂಪು

ಮದ್ರಾಸ್, ಬೊಂಬಾಯಿ, ಸಂಯುಕ್ತ ಪ್ರಾಂತ್ಯ, ಬಿಹಾರ್, ಮಧ್ಯಪ್ರಾಂತ್ಯ, ಒರಿಸ್ಸಾ, ಈ ಆರು ಸೇರಿ 'ಎ' ಗುಂಪಾಗುತ್ತದೆ. ಪ್ರತಿಯೊಂದು ಪ್ರಾಂತ್ಯದಲ್ಲೂ ಹಿಂದುಗಳೇ ಬಹುಸಂಖ್ಯಾಕರು. ಕಾಂಗ್ರೆಸಿನದೇ ಬಹುಮತ. ಇದೀ ಘಟನಾ ಸಮಿತಿಯ ಆಶ್ರಿತ ರಾಜ್ಯಗಳನ್ನು ಬಿಟ್ಟುಳಿವ 298 ಪ್ರತಿನಿಧಿಗಳ ಪೈಕಿ 190 ಪ್ರತಿನಿಧಿಗಳು ಈ 'ಎ' ಗುಂಪಿನಲ್ಲಿ ಕುಳಿತುಕೊಳ್ಳತಕ್ಕವರು. ಇವರಲ್ಲಿ 164 ಮಂದಿ ಕಾಂಗ್ರೆಸಿಗರೆ; 19 ಮುಸ್ಲಿಂ ಲೀಗ್, 7 ಸ್ವತಂತ್ರರು. ನೆಹರು, ವಲ್ಲಭಭಾಯಿ, ರಾಜಾಜಿ, ಕೃಪಲಾನಿ, ಸೈತಾಬ್, ವಿಜಯಲಕ್ಷ್ಮಿ ಪಂಡಿತ್, ಶುಕ್ಲಾಶಯ್ಯ, ರಾಧಾಕೃಷ್ಣನ್, ಪಂತ್, ಧಂಡನ್, ಮೊದಲಾದ ಆ ಪ್ರತಿಮರೆಲ್ಲಾ ಈ ಗುಂಪಿನಲ್ಲಿದ್ದಾರೆ. ವಿಶೇಷ ತಿಕ್ಕಾಟವಾಪುದೂ ನಡೆಯುವಂತಿಲ್ಲ. ಆಂಧ್ರ, ತಮಿಳು, ಕರ್ನಾಟಕ, ಮಹಾರಾಷ್ಟ್ರಗಳನ್ನು ಭಾಷಾವಾರಾಗಿ ಪ್ರತ್ಯೇಕಿಸಿಕೊಳ್ಳುವ ಒಂದು ವಿಶೇಷ ಕಲಸ ಈ ಗುಂಪಿನಿದೆ. ಅದು ಸುಗುಮವಾಗಿ ನಡೆಯುವ ಭರವಸೆಯೂ ಇದೆ. ಆ ಮೇಲೆ ಆರ್ಥಿಕ, ರಾಜಕೀಯ, ಸಾಮಾಜಿಕ, ವೀಕ್ಷ್ಯ ಪ್ರತಿಯೊಂದು ಪ್ರಾಂತ್ಯಕ್ಕೂ ಸ್ವತಂತ್ರ ರಾಜ್ಯಭಾರ ರಚಿಸಿದರಾಯಿತು-ಇಲ್ಲಿ ಅದು ಆತಂಕ ವಿನಹಾ ನಡೆಯಲಿದೆ.

'ಬಿ' ಗುಂಪು

ಪಂಜಾಬ್, ಸಿಂಧ್, ಗಡಿನಾಡು ಲೂಚಿಸ್ತಾನ ಈ ನಾಲ್ಕು ಸೇರಿ 'ಬಿ' ಗುಂಪಾಗುತ್ತದೆ. ಇಲ್ಲಿ ಪ್ರಾಂತಿಕವಾರಾಗಿ ಪ್ರತ್ಯೇಕಿಸಿ ನೋಡಿದರೆ ಗಡಿನಾಡಿನ ಮೂರು ಸ್ಥಾನಗಳ ಪೈಕಿ 2 ಕಾಂಗ್ರೆಸಿಗೂ 1 ಲೀಗಿಗೂ ದೊರೆತಿವೆ. ಪಂಜಾಬಿಗಿರುವ 28 ಸ್ಥಾನಗಳ ಪೈಕಿ ಮುಸ್ಲಿಂ ಲೀಗಿಗೆ 15 ಕಾಂಗ್ರೆಸಿಗೆ 6, ಸಿಖ್ಖರಿಗೆ 4, ಯೂನಿಯನಿಸ್ಟ್ ಪಕ್ಷಕ್ಕೆ 3 ದೊರೆತಿನೆ. ಗುಂಪಿನಲ್ಲಿ ಸೇರುವ ಸೇರದಿರುವ-ಪ್ರಶ್ನೆ ಬಂದಾಗ ಸೇರಬೇಕೆಂಬ ಲೀಗ್ ಪಕ್ಷಕ್ಕೆ 16 ಮತಗಳೂ ಸೇರ ಕೂಡದೆಂಬ ಸಿಖ್-ಕಾಂಗ್ರೆಸ್ ಪಕ್ಷಕ್ಕೆ 12 ಮತಗಳೂ ದೊರೆಯಬಹುದು. ಸಿಂಧಿಗಿರುವ 1 ಸ್ಥಾನಗಳ ಪೈಕಿ 3 ಮುಸ್ಲಿಂ ಲೀಗ್, 1 ಕಾಂಗ್ರೆಸ್. ಬಲೂಚಿ ಸ್ಥಾನಕ್ಕಿದುವದು. ಲೀಗಿಗೆ ದೊರೆತ ಒಂದೇ ಸ್ಥಾನ. ಆದರೆ ಬ್ರಿಟಿಷ್ ಹೇಳಿಕೆಯಂತೆ 'ಬಿ' ಗುಂಪೆಂಬುದು ಏಕ ರೂಪಿಯೆಂದಾದರೆ ಅಲ್ಲಿ 36 ಪ್ರತಿನಿಧಿಗಳಾಗುತ್ತಾರೆ. ಆ ಪೈಕಿ 22 ಮುಸ್ಲಿಂ ಲೀಗ್ ಕಡೆಗೂ 14 ಕಾಂಗ್ರೆಸ್ ಸಿಖ್ ಕಡೆಗೂ ನಿಲ್ಲಬಹುದು. ಆಗ ಮತಕ್ಕೆ ಬೀಳುವ ಪ್ರತಿಯೊಂದು ವಿಷಯದಲ್ಲೂ ಲೀಗಿನ ಬಹುಮತವೇ ಮಾನ್ಯವಾಗಿ ಗುಂಪಿಗೆ ಸೇರಲೊಪ್ಪದ ಗಡಿನಾಡು ಪ್ರಾಂತ್ಯದ ಅಭಿಪ್ರಾಯವೂ, ಪಂಜಾಬಿನ ಸಿಖ್ ಪಂತ್ತು ಹಿಂದುಗಳ ಅಭಿಪ್ರಾಯವೂ ಅಮಾನ್ಯವಾಗುವದು. ಆ ನಾಲ್ಕು ಪ್ರಾಂತ್ಯಗಳ ಮೇಲೂ ಈ 22 ಮಂದಿ ಲೀಗಿನವರ ಅಭಿಪ್ರಾಯದ ರಾಜ್ಯ ಶಾಸನವೇ ಹೇರಲ್ಪಡುವದು ಅಂತೆಯೇ ಈ 22 ಮಂದಿ ಅವೆಲ್ಲ ಕ್ಯೂಂದು ಕೇಂದ್ರವಾಗಿ 'ಬಿ' ಗುಂಪಿನ ಕೇಂದ್ರ ಸರಕಾರವೊಂದನ್ನು ಸ್ಥಾಪಿಸಿಕೊಂಡು ಪ್ರಾಂತ್ಯಗಳ ಮುಖ್ಯವಾದ ಕೆಲವು ಖಾತೆಗಳನ್ನು ಈ 'ಗುಂಪು ಕೇಂದ್ರ' ಸರಕಾರಕ್ಕೊಪ್ಪಿಸಿ ಬಿಡಬಹುದು. ಬೆನ್ನಲ್ಲೇ ಪ್ರಾಂತಿಕ ಜುನಾವಣೆಗಳು ನಡೆಯುವಾಗ, ಯಾವ ಪ್ರಾಂತ್ಯವೂ ಗುಂಪಿನಿಂದ ಸಿಡಿದು ಹೋಗುವ ನಿರ್ಧಾರಕ್ಕೆ ಬರಲಾಗದಂತಹ ಒಂದು ಜುನಾವಣಾ ಪದ್ಧತಿಯನ್ನು ಈ 22 ಮಂದಿ ಪ್ರತಿಯೊಂದು ಪ್ರಾಂತ್ಯದ ಮೇಲೂ ಹೊರಿಸಿ ಬಿಟ್ಟರೆ 'ಹೊಸ ಪ್ರಾಂತಿಕ ಎಸೆಂಬ್ಲಿಗಳು ಮನಸ್ಸಿದ್ದರೆ ಹೊರಗೆ ಹೋಗುವ ನಿರ್ಧಾರಮಾಡಬಹುದು' ಎಂದು ಬ್ರಿಟಿಷ್ ಹೇಳಿಕೆಯಲ್ಲಿರುವ ರಿಯಾಯಿತಿಗೆ ಮತ್ತೆ ಅನುಕೂಲವಿದೆಯೆ? ಮಿ. ಜಿನ್ನಾ. 30 ಕೋಟಿಯನ್ನೂ ಮುಸ್ಲಿಮರನ್ನಾಗಿಮಾಡಬೇಕೆಂದ ಗಜ್ನಾಫರ್ ಅಲಿ ಮೊದಲಾದ ಲೀಗ್ ನಾಯಕರು ಈ ಗುಂಪಿನಲ್ಲೇ ಕುಳಿತುಕೊಳ್ಳಲಿದ್ದಾರೆ. ಕಾಂಗ್ರೆಸ್ ಕಡೆಯಿಂದ ಮೌಲಾನಾ ಆಜಾದ್, ಖಾನ್ ಅಬ್ದುಲ್ ಗಫರ್ ಖಾನರಂಥವರಿದ್ದರೂ ಬಹುಮತವೇ ವಿಜಯವೆಂದಿರುವ ಈ ಯುದ್ಧದಲ್ಲಿ 14 ಮಂದಿಯನ್ನು ಕಟ್ಟಿಕೊಂಡು 22 ಮಂದಿಯ ದಿರು ಇವರು ಹೋರಾಡಿ ಗೆಲ್ಲುವದೆಂದರೆ ಹೇಗೆ?

"ಸಿ" ಗುಂಪು

ಬಂಗಾಳ-ಅಸ್ಸಾಮು-ಇವೆರಡು ಸೇರಿ 'ಸಿ' ಗುಂಪಾಗುತ್ತದೆ. ಪ್ರಾಂತ್ಯವಾರಾಗಿ ನೋಡುವದಾದರೆ ಬಂಗಾಳದ 60 ಸ್ಥಾನಗಳ ಪೈಕಿ ಪ್ರಥಮತಃ 32 ಸ್ಥಾನಗಳು ಲೀಗಿಗೂ 25 ಸ್ಥಾನಗಳು ಕಾಂಗ್ರೆಸಿಗೂ ದೊರೆತಿದ್ದುವು. ಉಳಿದ ಮೂರು ಸ್ಥಾನಗಳು ಫಜಲುಲ್‌ಹಕ್, ಡಾ ಅಂಬೇಡ್ಕರ್, ಕಮ್ಯೂನಿಸ್ಟ್ ಸೋಮನಾಥ ಲಾಹಿರಿಯವರಿಗೆ ದೊರೆತಿದ್ದುವು. ಈಗ ಮೊದಲನೆಯವರು ಲೀಗಿಗೆ ಸೇರಿದ್ದಾರೆ; ಉಳಿಗಿಬ್ಬರೂ ಲೀಗಿನ ಸಮರ್ಥಕರೇ. ಆದ್ದರಿಂದ 35 ಲೀಗ್ ಪಕ್ಷ—25 ಕಾಂಗ್ರೆಸ್ ಪಕ್ಷ ಎನ್ನಬಹುದು. ಅಸ್ಸಾಮಿನಲ್ಲಿರುವ 10 ಸ್ಥಾನಗಳ ಪೈಕಿ 7 ಕಾಂಗ್ರೆಸಿಗೂ 3 ಮುಸ್ಲಿಂ ಲೀಗಿಗೂ ದೊರೆತಿವೆ. ಆ ಸ್ಸಾಮು 'ಸಿ' ಗುಂಪಿಗೆ ಸೇರಕೂಡದೆಂದು ಅಲ್ಲಿಯ ಎಸೆಂಬ್ಲಿ ತನ್ನ ಪ್ರತಿನಿಧಿಗಳಿಗಾಜ್ಞಾಪಿಸಿದೆ; ಪ್ರಾಂತ್ಯವಾರಾಗಿ ಅದಕ್ಕೇನೇ ಬಹುಮತವಿದೆ. ಆದರೆ ಬ್ರಿಟಿಷ್ ಹೇಳಿಕೆ ಪ್ರಕಾರ ಇಡೀ "ಸಿ" ಗುಂಪು ಏಕರೂಪಿಯೆಂದಾದರೆ ಅಲ್ಲಿ 38 ಲೀಗಿನವರೂ 32 ಕಾಂಗ್ರೆಸಿನವರೂ ಆಗುತ್ತಾರೆ. ಅರು ವೋಟುಗಳ ಬಹುಮತದಿಂದ ಲೀಗಿನ ಅಭಿಮತದ ಸರಕಾರವೇ ಎಪ್ಪಕ್ಕೂ ಒಪ್ಪದ ಅಸ್ಸಾಮಿನ ಮೇಲೆ ಜ್ಯಾರಿಯಾಗುತ್ತದೆ. B ಗುಂಪಿನಂತೆ ಇಲ್ಲಿಯೂ 36 ಮಂದಿ ಲೀಗಿನವರ ಅಭಿಪ್ರಾಯದ ಪ್ರಾಂತಿಕ ಶಾಸನಗಳೇ ಅವೆರಡು ಪ್ರಾಂತ್ಯಗಳಲ್ಲೂ ಜ್ಯಾರಿಗೆ ಬರುವವು. ಮುಖ್ಯ ಖಾತೆಗಳು C ಗುಂಪಿನ ಕೇಂದ್ರ ಸರಕಾರಕ್ಕೆ ಸೇರಿಸಲ್ಪಡುವವು. ಹೊಸ ಶಾಸನಾನುಸಾರ ಚುನಾಯಿಸಲ್ಪಡುವ ಅಸ್ಸಾಮು ಪ್ರಾಂತಿಕ ಎಸೆಂಬ್ಲಿಯು "ಸಿ" ಗುಂಪಿನಿಂದ ಸಿಡಿಯುವ ನಿರ್ಧಾರ ಮಾಡಲಿಕ್ಕಾಗದಂತಹ ಚಿ.ನಾವಣಾ ಪದ್ಧತಿ ಹೇರಲ್ಪಡುವದು. ಅಂದ ಮೇಲೆ ಮುಂದಕ್ಕಾದರೂ ಬಿಡುಗಡೆ ಹೇಗೆ? ತರಬ್ಬಂದ್ರ ಬೋಸ್, ಶ್ಯಾಮಪ್ರಸಾದ ಮುಖರ್ಜಿಗಳಂಥವರು ಇಲ್ಲಿರುವ ದೇನೋ ನಿಜ. ಆದರೆ ಬಹುಮತದ ತೀರ್ಪೇ ವಿಜಯವೆಂದಿರುವ ಈ ಹೋರಾಟ ರಂಗದಲ್ಲಿ ಈ ಕಟ್ಟಾಳುಗಳು 32 ಮಂದಿಯನ್ನು ಕಟ್ಟಿಕೊಂಡು, ಇದಿರು ಕಡೆಯ ಲಿಯಾಖತ್ ಅಲೀಖಾನ್, ಸುಹ್ರವರ್ದಿಗಳಂಥವರ ಸೇನಾನಿತ್ವದ ಆ 38 ಮಂದಿಯನ್ನು ಗೆಲ್ಲುವದಾದರೂ ಹೇಗೆ?

ಈ ರೀತಿ ಕೇಂದ್ರಕ್ಕೆ ಬಿಡಲ್ಪಟ್ಟ ಕೆಲವೇ ವಿಷಯಗಳನ್ನು ಬಿಟ್ಟರೆ ಉಳಿದೆಲ್ಲಾ ವಿಷಯಗಳಲ್ಲೂ ಪೂರ್ಣಾಧಿಕಾರವಿರುವ ಎರಡು ಪಾಕಿಸ್ತಾನ್ ತುಂಡುಗಳು ಮುಸ್ಲಿಂ ಲೀಗಿಗೆ ದೊರೆತಂತಾಗಿದೆ. ಪೂರ್ಣ ಪಾಕಿಸ್ತಾನವೆಂಬ ಹೆಸರಿರುತ್ತಿದ್ದರೆ, ಸಂಪೂರ್ಣ ಹಿಂದೂ ಬಹುಮತವುಳ್ಳ ಅಸ್ಸಾಮನ್ನು ಸೇರಿಸಿಕೊಳ್ಳಲಾಗುತ್ತಿರಲಿಲ್ಲ; ಆ ಹೆಸರಿಲ್ಲದ ದೆಸೆಯಿಂದಾಗಿ ಈಗ ಅಸ್ಸಾಮನ್ನೂ ಸೇರಿಸಿಕೊಳ್ಳಲಿಕ್ಕಾದುದು ಲೀಗಿಗೆ ವಿಶೇಷ ಅನುಕೂಲ.

ಈ ಗುಂಪುವಾರು ಅಡಳಿತೆ ಜ್ಯಾರಿಗೆ ಬರುವಾಗ, 'ಎ' ಪಂಗಡ ಮತ್ತು 'ಬಿ' 'ಸಿ' ಪಂಗಡಗಳು ಪ್ರತ್ಯೇಕ ರಾಷ್ಟ್ರಗಳೆಂದೇ ತೋರಲಿವೆ. ಗುಂಪುವಾರು ಸರಕಾರ ಅಡಳಿತೆ ನಡೆಸುತ್ತಾ ಹೋದಂತೆ ಈ ಪ್ರತ್ಯೇಕತೆ ಬೆಳೆಯುತ್ತಾ ಹೋಗಲಿದೆ. ಆಗ ಕೇಂದ್ರವ್ಯೋ? ಅದು ತನ್ನ ಪಾಲಿನ ಎರಡು ಮೂರು ಖಾತೆಗಳನ್ನು ಹಿಡಿದುಕೊಂಡು ಮೂಲದಲ್ಲಿದ್ದರಾಯಿತು. ಯುದ್ಧ ಕಾಲವಂತಹ ವಿಶೇಷ ಸನ್ನಿವೇಶಗಳಲ್ಲಿ ಮಾತ್ರ, ರಕ್ಷಣಾಧಿಕಾರವುಳ್ಳ ಕೇಂದ್ರ ಸರಕಾರವು ಸರ್ವಾಧಿಕಾರ ವಹಿಸಬಹುದು. ಆದರೆ ಯುದ್ಧವೇ ಬೇಡವೆನ್ನುವ ನಾವು ಈಯೊಂದು ಅಧಿಕಾರವನ್ನು ಕಾಣಬೇಕೆಂಬುದಕ್ಕಾಗಿ ಯುದ್ಧ ಹೂಡಲೆ?

ಆದ್ದರಿಂದ ಬೇಡ- ಬ್ರಿಟಿಷರ ಅರ್ಥವನ್ನೋ ಅನರ್ಥವನ್ನೋ ಸ್ವಾರ್ಥವನ್ನೋ ಅರ್ಥವಿಸಿರುವ ಈ ಪ್ರಾಂತಿಕ ಪಂಗಡದ ವ್ಯವಸ್ಥೆ ಹಾಗಿದ್ದುಕೊಳ್ಳಲಿ; ಕಾಂಗ್ರೆಸು ತನ್ನ ಗುರಿಯಾದ 'ಸ್ವತಂತ್ರ ಸರ್ವಾಧಿಕಾರೀ ರಿಪಬ್ಲಿಕ್ ಸರಕಾರ"ವನ್ನು ಈ ಘಟನಾ ಸಮಿತಿಯಲ್ಲಿ ರೂಪಿಸಿಕೊಳ್ಳಲಿ. ಇದರ ಪ್ರತಿಫಲವಾಗಿ 'ಬಂದದ್ದೆಲ್ಲಾ ಬರಲಿ; ಜನತೆಯ ಬೆಂಬಲವೊಂದಿರಲಿ!'

ಜೈ ಹಿಂದ್!

ಕಿರಿಯರ ಪ್ರಪಂಚದ ಪ್ರಕಟಣೆಗಳು

ಸ್ವತಂತ್ರ ಜೀವನೋಪಾಯ	(ಕೆ ಹೊನ್ನಯ್ಯ ಶೆಟ್ಟಿ)	0	3	0
ಸಂಶಯ ಪಿಶಾಚಿ	(ಕೆ. ಕ ಶೆಟ್ಟಿ)	0	8	0
ನಾಡ ಕತೆಗಳು	(ಸಂಕಲನ)	0	3	0
ಕುಶಲವ	(ಕೆ. ಕೆ. ಶೆಟ್ಟಿ)	0	5	0
ಕಾವ್ಯ ಸಾಮ್ರಾಜ್ಯ	(ಕವಿತಾ ಸಂಗ್ರಹ)	1	0	0
ಎಸ ದೇವರು	(ಕೆ. ಕೆ ಶೆಟ್ಟಿ)	0	3	0
ವೈಭೋಗದರಿಣಿ ಯಾರು	(,,)	1	0	0
ಪೆಂಡ್ತಿ ಗಂಡನಾದರ	(,,)	0	4	0
ಪುರುಷ ವಧು	(,,)	0	4	0
ಸನ್ಯಾಸಿಯ ಸೋಗಿನಲ್ಲಿ	(,,)	0	8	0
ನಂದಾ ದೀಪ	(ಕೊಡಪ್ಪಲ್ ಶ್ರೀನಿವಾಸ ರಾವ್)	0	10	0
ದೇವಭಕ್ತ	(ಕೆ. ಕೆ. ಶೆಟ್ಟಿ)	1	4	0
ಪ್ರೇಮ ವಿಜಯ	(,,)	1	0	0
ರಂಗಭೂಮಿ	(ಎಸ್ ನೆಂಕಟರಾಜ)	0	8	0
ಸೇನಾಪಥ	(ಎಸ್. ಎಲ್ ಸುಬ್ರಹ್ಮಣ್ಯಂ)	0	8	0
ನಾರೀ ಹೃದಯ	(,,)	0	14	0
ಭಾರತೀಯ ಕತೆಗಳು	(ಕೊಂಡ್ಯಲ್ ಶ್ರೀನಿವಾಸ ರಾವ್)	0	14	0
ಪ್ರಕಾರ	(ಸರಸ್ವತಿ ಬಾಯಿ ರಾಜವಾಡೆ)	2	4	0
ಮೂರು ಪ್ರಹಸನಗಳು	(ಕೂರಡ್ಕುಲ್ ಶ್ರೀನಿವಾಸರಾವ್)	0	14	0
ನಗೆ ನೋಟಗಳು	(ಕೆ ವಿಟ್ಠಲ ಶೆಣೈ, ಬಿ ಎ. ಎಲ್ ಟಿ.)	0	14	0
ಅನ್ನದೇವರು ಮತ್ತು ಇತರ ಕತೆಗಳು	(ಕಯ್ಯಾರ ಕಿಂಞಣ್ಣ ರೈ)	1	0	0
ಮಾನವರಲ್ಲಿ ಜಾತಿಭೇದ	(ಎಸ್. ಎಲ್. ಸುಬ್ರಹ್ಮಣ್ಯಂ)	1	0	0
ವಿಷ್ಣು ವಿನ ದಶಾವತಾರಗಳು ಆರ್ಥಾತ್ ದಶಾವತಾರಗಳು	(ಎಂ. ವಿ ಸೆಟ್ಟಿ)	0	12	0
ಆಕಾಶಗಂಗೆ	(ಎಸ್ ವೆಂಕಟರಾಜ)	1	12	0
ಸ್ವಾತಂತ್ರ್ಯವೀರ ಸಾವರಕರರು	(ಇಂದಿರಾಬಾಯಿ)	1	4	0
ಜೀವನ ಸಂಗ್ರಾಮ	(ಪಿ. ಜೀನ ಶೆಟ್ಟಿ)	1	8	0

ಪುಸ್ತಕಗಳು ಸಿಕ್ಕುವ ಸ್ಥಳ—

ನವಭಾರತ ಪುಸ್ತಕ ಭಂಡಾರ, ಉಡುಪಿ.

ಶಾಲೋಪಯೋಗಿ ಸಾಹಿತ್ಯಗಳು

ಡ್ರಾಯಿಂಗ್ ನುತ್ತು ಮೇಪ್ ಡ್ರಾಯಿಂಗ್ ಪುಸ್ತಕಗಳು, ಲೇಖನ ಪುಸ್ತಕಗಳು, ಹಾಜರಿ ರಿಜಿಸ್ಟ್ರಿಗಳು, ಮಂತ್ಲಿ ರಿಟರ್ನ್ ಫಾರ್ಮುಗಳು, ರಿಕಾರ್ಡು ಶೀಟ್‌ಗಳು. ಮಗ್ಗಿ ಪುಸ್ತಕಗಳು ಚಿಲ್ಲರೆಯಾಗಿಯೂ ರಟ್ಟು ಆಗಿಯೂ ದೊರೆಯುತ್ತವೆ. ವಿದ್ಯಾರ್ಥಿಗಳಿಗೂ ಉಪಾಧ್ಯಾಯರಿಗೂ ಸುಸಂದರ್ಭ!

ನವಯುಗ ಪ್ರೆಸ್
ಉಡುಪಿ.

FOR LIFE ASSURANCE
CONSULT
The New Gaurdian of India Life Insrce. Co., Ltd.,
(Chairman:- The Hon'ble Mr. M. CT. M. Chidambaram Chettiyar.)
A policy in this progressive Life Office is a good investment; its Agency is a valuable business connection.

LOCAL OFFICES IN SOUTH KANARA.	HEAD OFFICE.
MANGALORE & KARKALA.	"United India Life Bldg" Esplanade, Post Box No. 142, MADRAS.

ಗೆನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ
೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಛೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಹೊಯವಾಗಿದ್ದರೆ,....ಚಟ್ಟಿ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಕೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕಂಪು ಸೆರಗು ಹೋಗುತ್ತಿದ್ದರೆ, ಹೊಲಿ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಛೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನನ್ನ ಔಷಧವು ಇದಿವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ನೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆದ್ದೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೪ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ಡಾವಣಗೆರೆ:ಡಾವಣಗೆರೆ ಪೈನ್ಸ್. ಶಕ್ತಿವರ್ಧಕ ಮಾದಕಪಾಕ ಮಾಡಲಿಕ್ಕೆ ಮಜಲಿನ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ, ಡಾವಣಗೇರಿ,
ಆಯುರ್ವೇದ ಔಷಧಾಲಯ, ಗದಗ.
Ayurveda Oushadalaya GADAG

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಲಕ್ಷಿಸಿ ತಯಾರಿಸಲ್ಪಟ್ಟ ಅಮೋಘ ವಾವ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಜಿಸ್ಟರು ಮಾಡಲ್ಪಟ್ಟಿದೆ.)

೪ ಔನ್ಸಿನ ಬಾಟ್ಲಿಗಳು ಹೆಚ್ಚುಕಡಿಮೆ ಅರವಿವಸಗಳಿಗೆ ಬರುವವು. ಅಂದರೆ ಕೇವಲ ೪ ರೂಪ್ಯಾಗಳು ಒಂದು ಬಾಣಂತಿತನಕ್ಕೆ ಸಾಕಾಗುವವು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ.ವಿ.ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ.ಕ.

ಸ್ಥಾನೀಯರು- ಡಾ| ಐ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಸ್ವರ್ಗಸ್ಥ ಡಾಕ್ಟರ್ ಎಂ. ಮಾಧವಾಚಾರ್ಯರಿಂದ ರಚಿಸಲ್ಪಟ್ಟ ಎರಡು ಅತ್ಯುತ್ತಮ ನಾಟಕಗಳು.

ಸರಸ್ವತಿ ಬೆಲೆ **0-12-0**

ಅಲ್ಪ ಶಿಕ್ಷಣದಿಂದುಂಟಾಗುವ ಅನರ್ಥ ಪರಂಪರೆಗಳನ್ನು ಪ್ರತ್ಯಕ್ಷವಾಗಿ ಹೃದಯದ್ರಾವಕವಾದ ರೀತಿಯಲ್ಲಿ ಕಾಣಿಸುವ ಸಾಮಾಜಿಕ ನಾಟಕ.

ಮೀರಾಬಾಯಿ ಬೆಲೆ **0-10-0**

ಶ್ರೀಕೃಷ್ಣ ಪರಮಾತ್ಮನ ಆರಾಧನೆಗೆ ಸಂಸಾರಿಗಳಾಗಿರುವವರಿಗೂ ಅವಕಾಶವಿದೆ. ಕಪಟ, ವಿಶ್ವಾಸಘಾತಕತನ, ಅವಿಚಾರ, ಪ್ರಮಾದ ಇವು ಗಳಿಂದುಂಟಾದ ದುಃಖವನ್ನು ದೂರೀಕರಿಸಲು ಭಗವದ್ಭಕ್ತಿಯೊಂದೇ ಉತ್ತಮ ಸಾಧನವೆಂಬುದನ್ನು ಸಾರುವ ಭಕ್ತಿಪ್ರಾಧಾನ್ಯ ನಾಟಕ.

ಎರಡೂ ಪ್ರತಿ ಬೇಕಾದವರು ರೂ. 1-8-0 ಕಳಿಸಬೇಕು.

ನವಭಾರತ ಪುಸ್ತಕ ಭಂಡಾರ, ಉಡುಪಿ. ಕಿರಿಯರ ಪ್ರಪಂಚ, ಉಡುಪಿ.

'ಇಂಗ್ಲಿಷ್ ಬರುವುದಿಲ್ಲವಲ್ಲಾ' ಎಂದು ಚಿಂತಿಸುವಿರೇಕೆ?
ಸುಲಭದಲ್ಲಿ ಇಂಗ್ಲಿಷ್ ಕಲಿಯಲು ಅನುಕೂಲವಾದ ಪುಸ್ತಕ ಇಲ್ಲಿದೆ-

ಸುಲಭದಲ್ಲಿ ಇಂಗ್ಲಿಷ್

ಶ್ರೀ. ಕೊರಡ್ಕಲಗ ಇಂಗ್ಲಿಷ್ ಸ್ವಯಂಬೋಧಿನಿ

ENGLISH MADE EASY

ಈ ಪುಸ್ತಕದಿಂದ ನೂರಾರು ಜನರು ತಾವಾಗಿ ಸುಲಭದಲ್ಲಿ ಇಂಗ್ಲಿಷ್ ಕಲಿತುಕೊಂಡಿದ್ದಾರೆ.

ನೀವೇಕೆ ಕಾಲಹರಣ ಮಾಡಬೇಕು? ಇಂದೇ ಒಂದು ಪ್ರತಿಯನ್ನು ಕೊಂಡುಕೊಳ್ಳಿರಿ.

ಬೆಲೆ ಬರೇ ರೂ. 1-8-0 ಪೋಸ್ಟಲು ಖರ್ಚು 0-4-0 ಪ್ರತ್ಯೇಕ

ವ್ಯವಹಾರಕ್ಕೆ ಬರೆಯಿರಿ—

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

EDITED, PRINTED & PUBLISHED BY K. H. SHETTY AT THE NAVAYUGA PRESS UDIPI, S. INDIA.

Regd. No. M. 3618. Estd. 1921 ಸ್ಥಾಪನೆ. ಬೆಲೆ: 0—1—6.

ನವಯುಗ

ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ 4—8—0
6 ತಿಂಗಳಿಗೆ ರೂ. 2—8—0
6 ತಿಂಗಳಿಗಿಂತ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ.
ಮಾದರಿ ಸಂಚಿಕೆಗೆ ಬರೆಯಿರಿ.
ಮೆನೇಜರ್,
ನವಯುಗ, ಉಡುಪಿ, ದ. ಕ.



ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ.

ವರ್ಷ ೨೬ ಸಂಖ್ಯೆ ೦೭ | FOUNDER: SRI. A. B. SHETTY, M.L.A. | Vol. 26 No 17

ಉಡುಪಿ • 26—12—1946 • ಮಂಗಳೂರು.

ಅಮೃತಾಂಜನ.
ತಲೆನೋವೆನ್ನೆ, ಶಿರೋವೇದನೆ, ಉಳುಕು, ಉತ್ತಿಗೆ, ಘುಡು ಘುಡು ವೇದನೆಗಳಿಗೂ ಎದೆನೋವು, ಧ್ವಾಯಗಳು ಬಾತು ಕೊಳ್ಳುವದು, ಜೇಳು ಬಿಷ ಮುಂತಾದ ಬೆನೆ ಕಜ್ಜಿ ದಾದ್ರ ಮೊಡಿನ. ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧ.
REGD.
ಉಪಯೋಗಿಸಿದ್ದಲ್ಲಿ ಮತ್ತು ನಕಲಿ ಸಮ್ಮಿಲ್ಲಿ ಸಿಕ್ಕುತ್ತದೆ.
ಅಮೃತಾಂಜನ ಲಿಮಿಟೆಡ್.
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

Vijaya Construction & Commercial Corporation Ltd.
UDIPI, S K.

AUTHORISED CAPITAL Rs. 5,00,000
Divided into 5,000 Ordinary Shares of Rs. 100/ each

RADIO HOUSE, Jayant Buildings, Mangalore. | Vijaya Tile Works & Kallianpura Saw Mills, Kallianpura

Engineers, Contractors, Radio Dealers, Tile Manufacturers, Radio Servicing, Timber Sawing etc. etc etc

Sri Krishna Agencies Ltd. Managing Agents | K. Sadananda Heade, M.A.B.L. Advocate, (Chairman)

Life is full of Opportunities.

Life is full of events and opportunities created by God for man and by man for himself and his fellowmen. Normal life presupposes a prosperous family, a happy home, good education, congenial vocation, good relations, friends, a cultured society and also a few ups and downs to spice them all with. Have you made sure that your family too can reasonably aspire to lead such a life even in your absence?

The Canara Mutual Assurance Co., td.,
HEAD OFFICE: **UDIPI.** (S. India.)

Chief Agents for the Bombay and Madras Presidencies including States and the States of Mysore and Hydrabad

The Commercial Corporation of India, Ltd.,
UDIPI. (S. India.)

THE
Bombay Life Assurance Company Ltd.
(ESTD 1908)
A PREMIER INSURANCE COMPANY.

New Business in 1945 - - 2,77,23,100.

KOCHIKAR BROTHERS, LTD.
(ESTD. 1910)
Chief Agents for South India including
Travancore, Cochin and Mysore

New Business in 1945 in our area:— **Over 5 Millions.**

OUR Expert advice gained by 35 years Experience is at your door FREE.

Drop a card to any of our Offices at —
MADRAS * BANGALORE * MADURA * CALICUT
TRIVENDRUM * UDIPI * AND BOMBAY.

The best preventive in epidemics of CHOLERA
"BHUVANENDRA"
CHANDRAMAS
Also a sovereign remedy for diarrhoea, Stomachache, Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ'
ಚಂದ್ರಮಸ್
ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅಕ್ಕುತ್ಯಮ ಔಷಧಿ.

ದೊಡ್ಡವರಿಗೆ 4ರಿಂದ 8ಬೊಟ್ಟು, ಸಣ್ಣಮಕ್ಕಳಿಗೆ 1ರಿಂದ 2ಬೊಟ್ಟು ಲವಂಗ ಯಾ ಓಕುಪ ಕಷಾಯವಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಆತಿಸಾರ, ಹೊಟ್ಟಿನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್, ಕಟಪಾಡಿ, ದ. ಕ

ಉಡುಪಿ ಸ್ಪಾಕಿಸ್ಟರು—ಡಾ। ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮೆಸಿ; ಡಿ। ಆರ್। ಎಸ್। ಶೆಣೈ, ರಥಬೀದಿ; ಡಾ। ಪಿ. ಜಿ. ಅಚಾರ್ಯ ಫಾರ್ಮೆಸಿ; ಡಾ। ಕೆ. ಶೇಷ ಗಿರಿ ಪೈ, L.I.M.; ಡಾ। ಮೆಕಟೆರಾವ್, ಕೊರಡ್ಡಲ್; ನವಭಾರತ ಬುಕ್ ಡಿಪೊ

—ಮಕ್ಕಳನ್ನು ಹಡೆಯುವುದು ಸಾಕು—
ಅತಿಕ್ಕ ಸ್ತ್ರೀಯರಿಗೆ **ಬರ್ಥ ಕಂಟ್ರೋಲ್** ರೋಗಗ್ರಸ್ತ ಹಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ ಅಲ್ಲದೆ ಸ್ತ್ರೀಯರ ಬಿಳಿಶೇರಗು, ಪ್ರದರದೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು

ಕಿಮ್ಮತ್ತು:—ಹರಿವೀಪಲ್ಲಿ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ್ ಚಾರ್ಜು ೧೫ಆಣೆ.

ಮಾಲಕರು:—**ಹಾಲಪ್ಪ ಶಕೀರಪ್ಪ ಜಾನಣಗೇರಿ**
ಆಯುರ್ವೇದ ಔಷಧಾಲಯ, ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಫಾರ್ಮಸಿ—ಹುಬ್ಬಳ್ಳಿ, ಗದಗ್ ಬಾಗಲಕೋಟೆ ಧಾರವಾಡ, ವಿಜಾಪುರ—ಬಾಪಟ್ಟ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪುರ. ಬೆಳ್ಳಿಕ್ಕೇರಿಯಲ್ಲಿ:—ಹುಂಬರವಾಡಿ ಸ್ಟೋರ್ಸ್. ಹಾವೇರಿಗೇರಿ:—ಹಾವಣಗೇರಿ ಪ್ರೆಸ್ಸ್, ಆರ್. ಎಲ್. ಕನಲಿಯಾನ, ಕೆಮಿಸ್ಟ್. ಜುವೇರಿ, ಬ್ಯಾಂಡಿ

Ayurveda Oushadalaya, GADAG CITY.

ಭದ್ರತೆ ಮತ್ತು ಸೇವೆ

ಇದೇ ಬೇಂಕಿನ ತಳಹದಿ ಮತ್ತು ನಮ್ಮ ಮುಖ್ಯ ಗುರಿ.

ನಿಮ್ಮ ಸೇವೆಯನ್ನು ಪ್ರಾರಂಭಿಸಿ ಇಂದಿಗೆ ಹದಿನೈದು ವರ್ಷಗಳು ಸಂದವು. ಮುಂದಿನ ವರ್ಷಗಳಲ್ಲಿ ನವೀನ ಮುಂಜಿನಿಂದ ವ್ಯವಹಾರಗಳನ್ನು ನಡಿಸಿ ಹೆಚ್ಚಿಸಬೇಕೆಂದು ಸಂಕಲ್ಪಿಸಿದ್ದೇವೆ. ಈ ನಮ್ಮ ಧ್ಯೇಯಸಾಧನೆಗೆ ನಿಮ್ಮೆಲ್ಲರ ಸಹಕಾರವನ್ನು ಹಿಂದಿಗಿಂತಲೂ ಹೆಚ್ಚಾಗಿ ನೀಡುವಿರೆಂದು ನಂಬುತ್ತೇವೆ. ಶೇವಕಾತಿಗೆ ಉತ್ತಮ ದರದ ಬಡ್ಡಿ ಕೊಡಲ್ಪಡುವುದಲ್ಲದೆ ಸಾಲಗಳನ್ನು ಕೊಡುವಂತಹ ಎಡ್ಡಿಯಾವುದೂ ಬೇಂಕಿನ ಇತರ ಸಕಲ ಸಲಕರಣೆಗಳನ್ನೂ ಜನರಿಗೆ ಒದಗಿಸಿಕೊಡುವುದೇ ನಮ್ಮ ಕಾರ್ಯಕ್ರಮ.

ದಿ ವಿಜಯಾ ಬೇಂಕ್, ಲಿಮಿಟೆಡ್.
ಹೆಡ್ ಆಫೀಸು: ಮಂಗಳೂರು.

ಶಾಖೆಗಳು: ಬೈಂದೂರು, ಕುಂದಾಪುರ, ಬ್ರಹ್ಮಾವರ, ಉಡ್ಪಿ, ಕಾಪು, ಕಾರ್ಕಳ, ಸಿಟಿ-ಮಂಗಳೂರು, ಕಾಸರಗೋಡು, ಕಾಣಿಯೂರು, ಪುತ್ತೂರು, ಮಡಿಕೇರಿ ಮತ್ತು ಮುಂಬಾಯಿ.

ವ್ಯಂಗ್ಯ—ಕಲ್ಪಿತ

ರಾಜಕೀಯ ಗುಪ್ತ ಪ್ರಣಯಿಗಳಿಬ್ಬರ ಪ್ರೇಮ ಪತ್ರಗಳು

(ಬಹಿರಂಗವಡಿಸಿದುದು—'ಕುಚೋದ್ಯಗಾರ')



ಜಿನ್ನಿರಿಂದ ಚರ್ಚಿಲ್ಲರಿಗೆ

16 12-46, ಕೈರೋ,

ಪ್ರಿಯತಮ–ಚಾರು-ಶೀಲ!

ನಿನ್ನೆ ಲಂಡನ್ನಿನಿಂದ ಹಾರಿದ ನಾವು ಸಂಜೆ ವಗಾಲ್ಪಾದಲ್ಲಿಳಿದು ಈಗ ತಾನೇ ಕೈರೋವಿಗೆ ಬಂದು ಮುಟ್ಟಿದ್ದೇವೆ ಹೃದಯೇಶ್ವರ; ನನ್ನ ಸ್ವಂತ ಗೃಹದಲ್ಲಿ ಕ್ಷಣ ಕಾಲದ ಶಾಂತಿಯೂ ಇರದ ನನಗೆ ನೀವೀಯಲಿರುವ ಬಾವೀ ಸುಖದ ಸ್ಮರಣೆಯೊಂದೇ ಆಶಾಧಾರವಾಗಿತ್ತು–ನನ್ನ ಹೃದಯದಲ್ಲಿ ನಿರಾತಂಕ ಕತ್ತಲು ಕವಿದಾಗಲೆಲ್ಲಾ ನನ್ನವರಾಗಿ ನೀವಿದ್ದೀರೆಂಬ ಭರವಸೆಯ ಜ್ಯೋತಿಯೊಂದೇ ಬೆಳಕು ಬೀರುತ್ತಿತ್ತು, ಎಂದು ನಾನೀ ಸಂದರ್ಭದಲ್ಲಿ ನಿವೇದಿಸಿಕೊಳ್ಳಲೆ? ಈ ಬಾರಿ ಲಂಡನ್ನಿನಲ್ಲಿದ್ದ ಸುಮಾರು ಹನ್ನೆರಡು ದಿನಗಳಲ್ಲಿ ನಿಮ್ಮನ್ನು ನಾನು ಸ್ಮರಿಸದ ಕ್ಷಣವೂ ಇರಲಿಲ್ಲ; ವಿಮಾನದಲ್ಲಿರುವಾಗಲೂ ನಿಮ್ಮ ಸ್ಮರಣೆಯೊಂದೇ ತಗೆಯಲ್ಲಿ ಸುತ್ತುತ್ತಿತ್ತು ಈ ಆತುರವು ಅದಮ್ಯವಾದ್ದರಿಂದ ಕೈರೋದಲ್ಲಿಳಿದೊಡನೆ ನಿಮಗೊಂದು ಪತ್ರವನ್ನಾದರೂ ಬರೆಯೋಣವೆಂದು ಇದನ್ನೀಗ ಬರೆಯುತ್ತಿದ್ದೇನೆ ಆದರೆ ಕದುಳಗಂಟೆಕೊಂಡಿರುವ ಪ್ರೇಮವನ್ನು ಕಾಗದದಲ್ಲಿ ಸರಿಯಾಗಿ ಚಿತ್ರಿಸಲು ಸಾಧ್ಯವೇ? ರಕ್ತಾಣುವಿನಲ್ಲಿ ಸೇರಿರುವ ಮೈತ್ರಿಯೊಂದನ್ನು ನಾಯಿ-ಬಂದುವಿನ ಮೂಲಕ ಹೊರಗೆಡಹಲಾದೀತೆ? ಈ ಪತ್ರವು ನನ್ನ ಹೃದಯದೊಂದು ಛಾಯೆಯೆಂದಷ್ಟೇ ಭಾವಿಸಿಕೊಳ್ಳಿ; ಹೃದಯದಲ್ಲಿರುವದೇ ಇಷ್ಟೆಂದು ನೆನಸುವ ಕರೋಡಾಗಬೇಡಿರೆಂದು ಬೊಗಸೆಯೊಡ್ಡಿ ಕೇಳಿಕೊಳ್ಳುತ್ತೇನೆ.

'ಖಂಡಾಂತರತಕ್ಕವರೆಂಬ ಸಂತಲ್ಪದಿಂದ ದೇವರೇ ನಿವ್ವಿಸಿಲಿವವರನ್ನು ಬೆರ್ಪಡಿಸಲು ಯಾರಿಂದಲೂ ಸಾಧ್ಯವಿಲ್ಲ' ಎಂಬ ನಾಣ್ನುಡಿಯಿದೆ ಈ ಮಾತು ನನ್ನ ವೈರಿ ದಾಯಾದಿ ಕಾಂಗ್ರೆಸಿನ ಅಧ್ಯಕ್ಷೆ ಕ್ರಿಪ್ಸಲಾನಿಯ ಬಾಯಿಯಿಂದ ಕೂಡಾ ಬಂದಿದೆ. ಆಂದಮೇಲೆ ಅಲ್ಲಾನು ಏಕಂಭಿರುಚಿ, ಏಕಾಖಿಲಾಪೆ, ಏಕಧೋರಣೆ, ಏಕ ಸ್ವಭಾವ, ಏಕ ರೀತಿಯ ನಾಲಿಗೆ ಕೊಟ್ಟು ಏಕ ಜೀವವಾಗಿರಬೇಕೆಂದು ನಿರ್ಮಿಸಿರುವ ನಮ್ಮಿಬ್ಬರನ್ನು ವಿಂಗಡಿಸಲು ಕಾಂಗ್ರೆಸಿಗರಂತಹ ಚಾಡಿಕೋರರಿಂದ ಸಾಧ್ಯವೆ? ಆ ಹೆದರಿಕೆಯೇ ನನಗಿಲ್ಲ; ಭಾರತ ಮಾತೃಕೆಯ ಬ್ಯಾಗವಂಗುವಂತಹದು ಹೊತು ನಮ್ಮಿಬ್ಬರ ಪ್ರೇಮ ಸಂಬಂಧವೆಂದಿಗೂ ಒಡೆಯದ. ನಮ್ಮೊಳಗಿನ ಭಾವೈಕ್ಯತೆಯೆಂಬುದು ಸಮಾನ ಸಂಸ್ಕಾರ, ಏಕ ಸ್ವಭಾವವನ್ನಾಧರಿಸಿದ, ಆದರೆ ಭಾರತದ ಇಂದಿನ ಕೃತಕ ಅಖಂಡತ್ವದಲ್ಲಿ ಭಿನ್ನ ಸಂಸ್ಕೃತಿ, ಭಿನ್ನ ಸ್ವಭಾವಗಳ ಹಿಂದ –ಮುಸಲ್ಮಾನರಿದ್ದಾರೆ. ಆದ್ದರಿಂದ ಅದು ಶಾಶ್ವತ; ಇದು ಅಶಾಶ್ವತ. ಇಂತಹ ಗೂಢಗಳನ್ನೆಲ್ಲಾ ಸರಿಯಾಗಿ ತಿಳಿದಿರುವ ನಿಮಗೆ ನಾನಾಕುರಿತು ಹೆಚ್ಚಿಗೆ ಹೇಳಬೇಕೆಂದಿಲ್ಲ.

ನನ್ನ ಪ್ರಾಣಪ್ರಿಯ ಚಾರುಶೀಲರೇ, ನನ್ನ ಮಾತಾಧಾರರೇ; ಇದೇ ತಾ. 11ರ ಕಾಮನ್ಸ್ ಸಭೆಯಲ್ಲಿ ಹಿಂದೀ ಪ್ರಶ್ನೆಯನ್ನು ಚರ್ಚೆಗಿಡಲೇಬೇಕೆಂದು ನೀವು ನನಗಾಗಿ ಸೊಂಟಕಟ್ಟಿ ಹರ ಹಿಡಿದಾಗ ಪ್ರೇಕ್ಷಕ ಗೆಲರಿಯಲ್ಲಿದ್ದು ಆ ಅಪೂರ್ವ ದೃಶ್ಯವನ್ನು ಕಾಣುವ ಸುಯೋಗ ನನಗೊದಗಿದ್ದಿತು; 'ಸವರ್ಣ ಹಿಂದೂ ಕಾಂಗ್ರೆಸಿನ' ಛೇಸಿಸ್ಟ್ ಮನೋವೃತ್ತಿಯನ್ನು ಖಂಡಿಸುತ್ತಾ ನೀವು ನನ್ನ ಕಡೆಗೆ ಬೀರಿದ ಆ ಮಧುರ ಓರೆನೋಟದ ಸುಧೆಯು ನನ್ನ ಹೃದಯಕಲಶವನ್ನು ತುಂಬಿತು. ಆ ಉಪಕಾರವನ್ನು ನಾನೆಂದಿಗೂ ಮರೆಯಲಾರೆ "ನನ್ನ ಮೇಲೆ ಇಷ್ಟೊಂದು ಮನಸೋತವಳು ಲಂಡನ್ನಿನಲ್ಲಿರುವಾಗ ಭೇಟಿಮಾಡಲಿಲ್ಲವೇಕೆ?" ಎಂದು ನೀವು ಕೇಳಬಹುದು ಹಾದ, ಪ್ರಿಯಕರು; ಒಂದು ಭವ್ಯ ಏಕಾಂತ ಕೋಣೆಯಲ್ಲಿ ಒಂದು ಉದ್ಯಾನದಲ್ಲಿ ಏಧವಾ ಮಳಲದಂಡೆಯಲ್ಲಿ ನಾವಿಬ್ಬರೇ ಕುಳಿತು ಪರಸ್ಪರ ಹೃದಯ ಬಿಚ್ಚಿ ಮಾತಾಡಿ ನಮ್ಮೊಳಗಿನ ಭಾವೀ ಸಂಬಂಧ ನಿಶ್ಚಯಿಸುವ ಸುಯೋಗವೊದಗುತ್ತಿದ್ದರೆ ಅದೆಷ್ಟು ಆನಂದದಾಯಕವಿತ್ತು! ಇಷ್ಟೊಂದು ಗಾಢ ಪ್ರಣಯ ಸಂಬಂಧವಿರುವ ನಾವು ನಮ್ಮ ಜೀವಮಾನದಲ್ಲಿ ಇದುವರೆಗೂ ಪರಸ್ಪರ ಏಕಾಂತ ಸಂಭಾಷಣೆ ನಡೆಸಿದುದಿಲ್ಲ; ಮುಖಮುಖಿ ಮಾತಾಡಿಕೊಂಡುದೇ ಇಲ್ಲವೆಂದರೆ ಲೋಕವೇ ಆಶ್ಚರ್ಯಪಡಬಹುದು ಆದರೆ ನಮ್ಮಿಬ್ಬರ ಹೃದಯ ಪೀಠಗಳಿಗೆ ಆಧಾರವೊಂದೇ ಎಂದಾದ ಮೇಲೆ ಏಕಾಸನದಲ್ಲಿ ಮಂಡಿಸಿ ನಾವು ನಿರ್ಮಿಸಿಕೊಳ್ಳಬೇಕಾದ ಬೇರೆ ಸಂಬಂಧವೇನಿದೆ? ಪ್ರಿಯಕರ, ಭಾರತದ ರಾಜಕೀಯವೆಷ್ಟೊಂದು ಹೇಯವಿದೆಯೆಂಬುದನ್ನು ನೀವು ತಿಳಿದಿರುವಷ್ಟು ಬೇರಾರೂ ಅರಿತಿಲ್ಲ. ಬ್ರಿಟನ್ನಿನಂತೆ ಜಾಹೀರಾಗಿ ಪ್ರಣಯ ಸಂಬಂಧವಿಟ್ಟುಕೊಳ್ಳುವ ಅನುಕೂಲತೆ ಅಲ್ಲಿಲ್ಲ.ಆದ್ದರಿಂದಲೇ ನಮ್ಮ ಪ್ರೇಮವು ಗುಪ್ತಮಾರ್ಗ ಹಿಡಿಯಬೇಕಾಯಿತು. ಈ ಗುಟ್ಟಿನ ಸಂಬಂಧವನ್ನಾದರೂ ಹಿಂದೂ ಕಾಂಗ್ರೆಸಿನ ಕೊಳಕು ಪತ್ರಿಕೆಗಳು ಬಯಲಿಗೆಳೆದು ಎಂತಹ ಪರಿಹಾಸ್ಯ ಮಾಡುತ್ತಿವೆ-ಏನೆಲ್ಲಾ ನಿಂದು ಮಾತುಗಳನ್ನಾಡುತ್ತಿವೆ-ಎಂಬುದನ್ನು ನೀವು ಬಲ್ಲಿರಿ. ನಿಮ್ಮೊಡನೆ ಮಿಲನಗೊಳ್ಳುವ ಕಾಮುಕತೆಯಿಂದಲೇ ನಾನು ಲಂಡನ್ನಿಗೆ ಹೊರಡಲು ಉಮೇದು ಗೊಂಡೆನೆಂದು ಆ ಚಾಡಿಖೋರ ಪತ್ರಿಕೆಗಳಂದಿದ್ದುವು. ಭಾರತದಲ್ಲಿ ಎಲ್ಲರ ಬಾಯಿಯಲ್ಲೂ ನನ್ನನ್ನಿಮ್ಮ ಸಂಬಂಧದ ಮಾತುಕತೆಗಳೇ ಇದ್ದುವಂತೆ. ನಿಮಗೆ ಸರಿಯಾಗಿ ತಿಳಿದಿರುವಂತೆ, ನಿಮ್ಮ ಜನಾಂಗದ ಸಂಬಂಧವೆಂದರೇನೇ ಜಿಗುಪ್ಸೆಪಡುತ್ತಿರುವ, ಋಣಾಯ ವೈರಾಗ್ಯ ಬಡಿದು ಮಾತೃಸೇವೆಯೊಂದರಲ್ಲೇ ನಿರತವಾಗಿರುವ ಆ ಕಾಂಗ್ರೆಸಂತೂ ದಾಯಾದಿ ಮತ್ಸರದಿಂದ ಏನೇನೋ ಅಪಪ್ರಚಾರ ಪಡೆಸುತ್ತಿದೆ. ಮೇಲಾಗಿ ಸದ್ಯ ನನ್ನ ರಕ್ಷಕರಾಗಿರುವ ಆಟ್ಲೀ ಸರಕಾರಕ್ಕೆ ನಮ್ಮೊಳಗಿನ ಪ್ರಣಯ ಸಂಬಂಧವು ಒಪ್ಪಿಗೆಯಾಗದೆಂಬುದೂ ನಿಮಗೆ ಗೊತ್ತಿದೆ. ನೀವು ಸಂಪ್ರದಾಯ ಬದ್ಧವಾಗಿ ನನ್ನ ಕೈಹಿಡಿಯುವ ಕಾಲ ಬರುವವರೆಗೆ ನಾನು ರಕ್ಷಕರ ಆಗ್ರಹಕ್ಕೆ ಗುರಿಯಾಗಬಾರದಲ್ಲವೆ? ನಾವು ಪರಿಸ್ಥಿತಿಗನುಗುಣವಾಗಿ ವರ್ತಿಸಬೇಕು ತಾನೇ? ಈಗಂತೂ ಅವರು ಸಂಪೂರ್ಣವಾಗಿ ನಾನು ಹೇಳಿದಂತಿದ್ದಾರೆ. ದಾಯಾದಿಗಳೊಡನೆ ಹೋರಾಡಿ ಪಾಲು ಪಡೆಯುವ ನನ್ನ ಕಾರ್ಯವನ್ನು ಸಾಧಿಸಿಕೊಡುವ ಹೊಣೆಯು ಈ ರಕ್ಷಕರ ಮೇಲಿದ್ದು ಅವರದನ್ನು ನಿರ್ವಹಿಸಲು ತೊಡಗಿರುವಾಗಲೇ ಆ ವರ ಮನನೋಯಿಸುವ ಕೆಲಸ ಮಾಡಿ ಬಂಧನಕ್ಕೆ ಬರಲೆಂದು ನಾನು ನಿಮ್ಮ ಭೇಟಿಗೆ ಬರಲಿಲ್ಲ ಅದಕ್ಕಾಗಿ ನನ್ನನ್ನು ಕ್ಷಮಿಸಲಾರಿರಾ? ನೀವು ಪಟ್ಟಕ್ಕೇರಿ ನನ್ನ ವಾಗ್ರಹಣಮಾಡಿಕೊಂಡಾಗಲೇ ನನ್ನ ಕೆಲಸ ಸಂಪೂರ್ಣಗೊಳ್ಳವದು. ನನ್ನ ಪಾಲು ನನಗೆ ದೊರೆಯುವವರೆಂಬ ದನ್ನು ನಾನು ಬಲ್ಲೆ. ಆದರೆ ನನ್ನ ಮದ್ಯೆವದಿಂದ ಆ ಕಾಲ ಸಾಕಷ್ಟು ಸಮೀಪದಲ್ಲಿಲ್ಲ. ಆದು ವರೆಗೂ ಪಾಲು ಪಡೆಯುವ ದಾಯಾದೀ



CANARA BANK LIMITED
ಕೆನರಾ ಬ್ಯಾಂಕ್ ಲಿಮಿಟೆಡ್
(ಸ್ಥಾಪನೆ 1906)
ಹೆಡ್ ಆಫೀಸು – ಬಾವಟಿಗುಡ್ಡೆ, ಮಂಗಳೂರು
ಜನರಲ್ ಮೆನೇಜರರ ಆಫೀಸ :–ಎಸ್ಪ್ಲನೇಡ್ ಸ್ಟ್ರೀಟ್, ಫೋರ್ಟ್, ಬೊಂಬಾಯಿ.
ಶಾಖೆಗಳು :
ಬೊಂಬಾಯಿ ಅಧಿಪತ್ಯ
ಬೆಳಗಾಂವ್
ಧಾರವಾಡ
ಹುಬ್ಬಳ್ಳಿ
ತೋಲಾಪುರ
ಕಲ್ಯಾಣ
ಬೊಂಬಾಯಿ ಶಹರಿನಲ್ಲಿ
ಫೋರ್ಟ್
ಮಾಂಡ್ವಿ
ಗಿರಗಾಂವ್
ಕಾಲಬಾದೇವಿ
ಮೈಸೂರು ಸಂಸ್ಥಾನ
ಅರಸಿಕೆರೆ
ಬೆಂಗಳೂರು
ಚಿಕ್ಕಮಗಳೂರು
ಧಾರವಾಡ
ತಿವಮೊಗ್ಗಾ
ಕೊಚ್ಚಿ ಸಂಸ್ಥಾನ
ಕೊಚ್ಚಿ
ಎರ್ನಾಕುಲಮ್
ತಿರುವಾಂಕೂರು ಸಂಸ್ಥಾನ
ಅಲಪ್ಪಿ
ಕ್ವಿಲೋನ್
ಹೈದರಾಬಾದು ಸಂಸ್ಥಾನ
ಸಿಕಂದರಾಬಾದು
ಮದ್ರಾಸು ಅಧಿಪತ್ಯ
ಬಂಟ್ವಾಳ
ಕಲ್ಲಿಕೋಟೆ
ಕಣ್ಣಾನ್ನೂರು
ಕೊಯಮುತ್ತೂರು
ಕುಂದಾಪುರ
ಇರೋಡ್
ಗಂಗೊಳ್ಳಿ
ಕಾರ್ಕಳ
ಕಾಸರಗೋಡು
ಮದರಾಸು
ಮಧುರೆ
ಮಂಗಳೂರು ಬಂದರು
ಮಂಗಳೂರು ಸಿಟಿ
ಮಂಡ್ಯ
ಪಯ್ಯನ್ನೂರು
ಪುತ್ತೂರು
ಉಡುಪಿ
ಮೂಲಧನ ೨೪ ಲಕ್ಷ.] [ಕ್ಷೇಮನಿಧಿ ೧೧ ಲಕ್ಷ.

ಹೋರಾಟವನ್ನು ಸಾಗಿಸುತ್ತಾ ಹೋಗಬೇಕು. ನನ್ನ ಕೆಲಸವೇ ನಿಮ್ಮ ಕೆಲಸವಲ್ಲವೆ? ಪದ್ಯದ ರಕ್ಷಣೆಯಾದ ಆಟ್ಲೀ ಸರಕಾರವು ಸಂಕಾಲದಲ್ಲಿ ಕೈಕೊಡದಿರುತ್ತಿದ್ದರೆ ನನ್ನ ಹಾಗೂ ನಿಮ್ಮ ಉದ್ದೇಶವೇ ವಿಫಲವಾಗಿ ಹೋಗುತ್ತಿತ್ತು. ನನಗಾವ ಹಾದಿಯೂ ತೋರಿಲ್ಲ. ನನ್ನ ದಾಯಾದೀ ಕಾಂಗ್ರೆಸು ನನ್ನ ವಾದಕ್ಕೆ ಬಗ್ಗುವದನ್ನು ಬಿಟ್ಟಿತು; ನಾನು ಕೇಳಿದಂತೆ ಕೊಡುವದನ್ನು ನಿಲ್ಲಿಸಿತು. ಬಲಾತ್ಕಾರದ ಮಟ್ಟಿಗಾದರೂ ನಾನು ಬಲಶಾಲಿಯೆಂದು ಭಾವಿಸಿದ್ದೆ. ನಮಗೆ ತಿಳಿದಿರುವಂತೆ ಇತ್ತೀಚಿಗಿನ ಜಗಳಗಳಲ್ಲಿ ನನಗೇನೇ ಹೆಚ್ಚಿನ ಹೊಡೆತ ಬಿದ್ದಿದೆ. ಆಟ್ಲೀಮಂಡಲದ ಆಧಾರಪೊಂದಲ್ಲದಿರುತ್ತಿದ್ದರೆ ನಾನು ಇದುವರೆಗೆ ಆಡಿದ್ದು ಮಾಡಿದ್ದೆಲ್ಲಾ ಗಾಳೀಪಾಲಾಗಿ ಹೋಗುತಿತ್ತು. ಆದ್ದರಿಂದ ಪ್ರಿಯತಮಾ, ನೀವು ಸಟ್ಟಕ್ಕೇರಿ ನನ್ನ ಪಾಣಿಗ್ರಹಣಮಾಡುವವರೆಗೂ ನಮ್ಮೊಳಗೆ ಹೃದಯ ಸಂಬಂಧ ನಾತ್ರವಿರಲಿ; ಅದು ಬೆಳೆಯುತ್ತಾ ಹೋಗಲಿ, ಆ ಮೇಲೆ....ಅದನ್ನು ಹೇಳಬೇಕೆಂದಿಲ್ಲ; ಪ್ರಿಯೆಯ ಹೆಸರನಲ್ಲಿ ಆಸ್ತಿ ಮನೆ ಮಾಡಿಸುವ ಕರ್ತವ್ಯವನ್ನು ನೀವರಿಯದವರಲ್ಲ. ಅಲ್ಲಾ ಕಣ್ಣಿ ತೆರೆದರೆ ನಮ್ಮ ಪಾಣಿಗ್ರಹಣವಾಗುವ ಹಾಗೂ ಪಾಕಿಸ್ತಾನದೊಕ್ಕಲಾಗುವ ಸುವರ್ಣ ಸಂದರ್ಭವು ಅತಿ ಬೇಗನೇ ಒದಗುವದೆಂದು ಆಶಿಸುತ್ತೇನೆ. ಅಲ್ಲಾ ನಿಮಗೆ ಆಯುರಾರೋಗ್ಯ ಕೊಡಲಿ!

ಇತಿ ನಿಮ್ಮ
ಜಿನ್ನಾ.

ಚರ್ಚಿಲ್ಲರಿಂದ ಜಿನ್ನರಿಗೆ

I8-12-46, ಲಂಡನ್.

ಪ್ರಿಯತಮೆ-ಜಿನ್ನಾ!

ನಿನ್ನ ಪತ್ರ ತಲಪಿತು; ಮೂರುಮೂರು ಬಾರಿ ಓದಿಕೊಂಡೆ. ಓದಿದಷ್ಟು ಸಲವೂ ಹೃದಯವುಕ್ಕಿ ಬಂತು. ಪ್ರೇಮಸುಧೆಯನ್ನೇ ಸುರಿಸಿಬಿಟ್ಟಿದ್ದೀಯೆ! ನೀನು ರಕ್ತಪ್ರವಾಹ ಹರಿಸುವವಳನ್ನುತ್ತಿರುವ ಕೆಲವು ಹುಚ್ಚರ ಬಾಯಿಮುಚ್ಚಿಸಲು-"ಅಲ್ಲಲ್ಲ; ಪ್ರೇಮಪ್ರವಾಹವನ್ನೇ ಹರಿಸುವವಳು; ಇದನ್ನು ನೋಡಿ" ಎಂದು ಕಾಮನ್ಸ್ ಸಭೆಯ ಮುಂದೆ ಈ ಪತ್ರವನ್ನಿಟ್ಟರಾಗಬೇಡ, ಎಂದೊಮ್ಮೆ ಹೊಳೆಯಿತು. ಆದರೆ ನಿನ್ನ ಬಯಕೆಯಂತೆ ಆ ಕಾಲ ಬರುವ ವರೆಗೆ ನಮ್ಮೊಳಗೆ ಗುಪ್ತ ಪ್ರಣಯವೇ ಇರುವದೊಳ್ಳಿತು ಎಂದು ಸುಮ್ಮಗಾದೆ. ನಿನ್ನಾ ನೆಯಾದಿ ಕಾಂಗ್ರೆಸಿನ ಮಾತು ಹಾಗಿರಲಿ. ನನ್ನ ಮಿಸೆಸ್ ನಿನ್ನ ಪತ್ರವನ್ನು ನೋಡುತ್ತಿದ್ದರೆ ಅವಳು ಕೂಡಾ ನಿನ್ನೊಡನೆ ಮತ್ಸರಿಸುವ ಸವತಿಯಾಗಿ ವಾರ್ಪಡುತ್ತಿದ್ದಳು. ನೀನೆಂದಿರುವಂತೆ, ಯಾರು ಏನನ್ನೇ ಆಡಿದರೂ ಮಾಡಿದರೂ ಹೃದಯೈಕ್ಯತೆ ಹೊಂದಿರುವ ನಮ್ಮನ್ನು ಬೇರ್ಪಡಿಸಲು ಸಾಧ್ಯವೇ ಇಲ್ಲ. ನಿನ್ನ ಪತ್ರದಲ್ಲಿರುವ ಎಲ್ಲಾ ಅಭಿಪ್ರಾಯ, ಆಶೆ, ಊಹೆಗಳಿಗೆ ನನ್ನ ಸಂಪೂರ್ಣ ಸಮ್ಮತಿಯಿದೆ, ಎಂಬ ಒಂದೇ ವಾಕ್ಯದಲ್ಲಿ ನನ್ನ ಹೃದಯ ಪರಿಚಯ ಮಾಡಿಕೊಟ್ಟರೆ ಸಾಕಲ್ಲವೆ?

ನೀನೆಂದಂತೆ ದೇವರೇ ಏಕಾಭಿರುಚಿ, ಏಕ ಧೋರಣೆ, ಏಕಾಭಿಪ್ರಾಯ, ಏಕ ಗುಣ ನಡತೆಗಳನ್ನು ಎರಡು ಪಾತ್ರಗಳಲ್ಲಿ ತುಂಬಿಸಿ ನಿರ್ಮಿಸಿದವರಂತಿರುವವು ನಾವಿಬ್ಬರೂ. ಅಂದಮೇಲೆ ನೀನೇ ನಾನು-ನಾನೇ ನೀನು. ಅಂತೆಯೇ ನೀನು ಪ್ರದರ್ಶಿಸಿದ್ದ ಪ್ರೇಮಕ್ಕೆ ಸ್ಪತಿಯಾಗಿ ನಿನ್ನ ಪತ್ರದ ವಾಕ್ಯಗಳನ್ನೇ ಅದ್ಯಂತವಾಗಿ ನನ್ನದಾಗಿ ಮಾಡಿಕೊಂಡು (ಸಹಮಾತ್ರ ಬದಲಾಯಿಸಿ) ನಿನಗೆ ಮರುರವಾನಿಸುವದೇ ಯೋಗ್ಯವೆಂದು ನನಗೆ ತೋರಿದ್ದಿತೆಂದರೆ ಸಾಲದೆ? ಯಾಕಾಗಬಾರದು? ಮೊದಲಿನಿಂದಿರುವ ರೀಗೂ ನಮ್ಮಿಬ್ಬರಿ ಬಾಯಿಗಳಿಂದ ಬರುತ್ತಿದ್ದ ಮಾತುಗಳೂ ನಾವು ಮುಂದಾಗಿ ಮಾತಾಡಿಕೊಂಡಿದ್ದವೇನೋ ಎಂಬಂತೆ ಒಂದೇ ಆಗುತ್ತಿದ್ದವು; ನಾವಿಬ್ಬರೂ ಒಂದೇ ನೈರಿಯನ್ನು ದ್ವೇಷಿಸುತ್ತಾ ಬಂದಿದ್ದೆವು; ನಾನು ಕಾರ್ಯಸಾಧನೆಗಾಗಿ ಯಾವ ನೆವಹೇಳುತ್ತಿದ್ದೆನೋ ನೀನೂ ಅದೇ ನೆವ ಹೇಳುತ್ತಿದ್ದಿ; ನಾನು ಜಗಳ್ಪೆ ಪ್ರದರ್ಶಿಸಿದುದರ ಮೇಲೆಯೇ ನಿನ್ನ ಜಗಳ್ಪೆ ಕೂಡಾ; ನಾನು ತುಳಿದುದನ್ನೇ ನೀನೂ ತುಳಿದಿ--ನಾನು ಒಲಿದುದಕ್ಕೇನೇ ನೀನೂ ಒಲಿದಿ. ಅಂದಮೇಲೆ ನಿನ್ನ ಚಿತ್ತವೇ ನನ್ನ ಚಿತ್ತ; ನಿನ್ನ ಪತ್ರವೇ ನನ್ನ ಪತ್ರ; ನೀನೇ ನಾನು! ನಾನೇ ನೀನು!

ಪ್ರಿಯ ಜಿನ್ನಾ! "ಬ್ರಿಟಿಷ್ ಸಾಮ್ರಾಜ್ಯ ಬರ್ಖಾಸ್ತಾಗಲು ಬಿಡಲಾರೆ" ನೆಂಬುದೇ ನನ್ನ ಶಪಥ; ಸಾಮ್ರಾಜ್ಯದ ಮುಖ್ಯ ಭಾಗವಾಗಿರುವ ಹಿಂದುಸ್ಥಾನದಲ್ಲಿ ಆದು ಬರ್ಖಾಸ್ತಾಗದಂತೆ ನೋಡುವದೇ ನಿನ್ನ ಕೆಲಸ. 'ಆರೆಬತ್ತಲೆ ಫಕೀರ' ಎಂದು ಆ ಗಾಂಧಿಯನ್ನು ನಾನಂದಂತೆಯೇ 'ಕಪಟ ಸನ್ಯಾಸಿ' ಎಂದು ಅವರೂ ಹೇಳುವ. ಆರೆಬತ್ತಲೆಯಿರುವವನ ಮೇಲೆ ಜಿಗುಪ್ಸೆ ಮೂಡಿದ ಅಭಿರುಚಿಗನುಗುಣವಾಗಿ ಆತ ನಾಜೂಕಿನ ಪೋಷಾಕಿನವನೆಂದು ಸರ್ವ ಯುರೋಪಿಯನರಿಂದಲೂ ಮೆಚ್ಚಿಗೆ ಪಡೆದ ನಿನ್ನ ನೋಲೆ ಮಮತೆ ಮೂಡುವದು ಸಹಜ ತಾನೆ? ಪ್ರಿಯತಮೆ; ಕಂಡೆಯಾ-ಎಂತಹ ಹೃದಯ ಸಾಮ್ಯತೆ! "ಪರ್ವಣ ಹಿಂದುಗಳ ಕಾಂಗ್ರೆಸ್" 'ಜಾತಿದ್ವೇಷ ವಿಷಪೂರಿತವಾಗಿರುವ ಹಿಂದುಗಳ ದಾಡೆಯೆಡೆಯಿಂದ 6 ಕೋಟಿ ದಲಿತ ವರ್ಗದವರನ್ನು ಹೊರಗೆಳೆದು ರಕ್ಷಿಸಬೇಕು' 'ಬ್ರಿಟಿಷ್ ಸರಕಾರವು ನೆಹರೂ ನಾಯಕತ್ವದ ನಡುಗಾಲ ಸರಕಾರ ಸ್ಥಾಪಿಸಿದ್ದರಿಂದಲೇ ಭಾರತದಲ್ಲಿ ರಕ್ತದ ಕೋಡಿ ಹರಿಯುವಂತಾಯಿತು' 'ಬ್ರಿಟಿಷ್ ಬೆಯೊನೆಟಿನ ಬಲವಿಲ್ಲದಿರುತ್ತಿದ್ದರೆ ಕಾಂಗ್ರೆಸ್ ಸರಕಾರಗಳ ಅವತಾರ ಕ್ಷಣಾರ್ಧದಲ್ಲಿ ಮುಗಿಯುತಿತ್ತು.- ಅದ್ದರಿಂದ ಜಾತಿ ಜಗಳದಲ್ಲಿ ಬ್ರಿಟಿಷ್ ಸೇನೆಯ ಬೆಂಬಲ ಕೊಡಬಾರದು"—ಇವೆಲ್ಲಾ ಮಾತುಗಳನ್ನು ನಿನಗೆ ನಾನು ಕಲಿಸಿದ್ದೆನೆ? ನನಗೆ ನೀನು ಕಲಿಸಿದ್ದುಂಟೆ? ಆದರೂ ಏಕಕಾಲದಲ್ಲಿ ಆಕ್ಷರಶಃ ಏಕಪ್ರಕಾರವಾಗಿ ನಮ್ಮಿಬ್ಬರ ಬಾಯಿಯಿಂದಲೂ ಅವು ಸಿಡಿಯಬೇಕಾದರೆ ನಮ್ಮೊಳಗಿನ ಸಾಮ್ಯತೆ ಹೇಗಿರಬೇಕು ಜಿನ್ನಾ! ನಮ್ಮಿಬ್ಬರಿಗಲ್ಲದೆ ಇಂತಹ ಮಾತುಗಳನ್ನಾಡುವ ಧೈರ್ಯ ಇಡೀ ಲೋಕದಲ್ಲಿ ಬೇರಾರಿಗಾದರೂ ಇದೆಯೆ? ಅಂದನೇಲೆ, ಜಿನ್ನಾ, ನನ್ನರಗಿಣಿ, ಪಾಕಿಸ್ತಾನ್ ರಾಣಿ, ನಿನ್ನನ್ನಲ್ಲದೆ ನಾನು ಬೇರಾರನ್ನು ಕೈಹಿಡಿಯಲಿ! ನಾವು ಅಸಾಮಾನ್ಯ ಜತೆಯೆಂಬುದನ್ನು ಲೋಕವೇ ಒಪ್ಪಿದೆ. ನಿನ್ನ ರಕ್ಷಕರೇ ಈಗ ನನ್ನ ಇದಿರುವಾದಿಗಳು. ಆದರೆ ನಿಜವಾದ ಪ್ರೇಮವು ನಿರ್ಬಂಧಗಳಿಂದಾಗಿ ನಿರ್ನಾಮಗೊಂಡ ನಿದರ್ಶನವೆಲ್ಲಿಯಾದರೂ ಉಂಟೆ? ಇಲ್ಲ ಜಿನ್ನಾ. ನೀನು ಆಲ್ಲಿಯ ನಿನ್ನ ದಾಯವಾದಿಗಳಿಗೆ ಕಿರುಕುಳ ಕೊಡು.ತ್ತಾ ಹೋಗು--ಹೋರಾಡುತ್ತಾ ಇರು. ನಾನು, ಇಲ್ಲಿಯ ನನ್ನ ದಾಯವಾದಿಗಳನ್ನೂ ಹಾಗೆಯೇ ಪೀಡಿಸುತ್ತಾ ಹೆಣ್ಣು ಮಾಡುತ್ತಾ ಹೋಗುವೆ. ಕಾಲ ಬರಬಹುದು-ಬರಲಿದೆ-ನಿನ್ನ ಪುಣ್ಯ ವಿಶೇಷ, ಮಾಂಗಲ್ಯ ಪ್ರಭಾವದಿಂದಾದರೂ ಆ ಕಾಲ ಬಂದೇ ತೀರುವದು. ಆಗ ನಾನು ಪಟ್ಟಕ್ಕೇರಿ ನಿನ್ನ ಪಾಣಿಗ್ರಹಣ ಮಾಡಿಕೊಳ್ಳಲಿರುವೆನು. ಆ ಸುಮುಹೂರ್ತ ಬಾರದೆ ತಪ್ಪಿಸಿಕೊಳ್ಳುವದೆಂದರೆ ಹೇಗದು?

ಸದ್ಯ ಜಿನ್ನಾ, ನಿನ್ನ ವೈರಿ ಬಾಯಾದಿಗಳ ಕೂಟದಲ್ಲಿ-ಆ ಘಟನಾ ಸಮಿತಿಯಲ್ಲಿ ಇನ್ನಾದರೂ ಸೇರಬೇಡ; ಸೇರಿದರೂ ನಿನ್ನ ಹಠಬಿಟ್ಟು ಒಂದಿಂಚು ಅಲುಗಾಡಬೇಡ. ಬೇಡ ಜಿನ್ನಾ, ನಾನಿರುವಾಗ ಅರ್ಧರೊಟ್ಟಿಗೆ ಕೈನೀಡುವ ಬಡತನ ನಿನಗೆಲ್ಲಿಂದ? ಇಗೋ-ಈ ಬ್ರಿಟಿಷ್ ಗಂಡು ತನ್ನ ಪ್ರಿಯತಮೆಯ ಮನದಿಚ್ಛೆಯನ್ನು ಪೂರ್ತಿಸಲ್ಲಿ ಸದೆ ಎಂದಿಗೂ ಶಾಂತನಾಗಲಾರನೆಂಬುದನ್ನು ಖಂಡಿತವಾಗಿ ತಿಳಿದುಕೋ.

ಈಬಾರಿಯ ಕಾಮನ್ಸ್ ಸಭೆಯಲ್ಲಿ ಮಾತಾಡುತ್ತಾ ಕಾಂಗ್ರೆಸಿಗರ ಆ ಘಟನಾ ಸಮಿತಿಯನ್ನು-'ಮದುಮಗಳಿಲ್ಲದ ಮದುವೆ ಸಮಾರಂಭ'ವೆಂದು ನಾನು ಹೇಳಿದ್ದು ನೆನಪುಂಟಷ್ಟೆ? ಆ ಮದುಮಗಳು ನೀನು-ಮದುಮಗ ನಾನು! 'ಮದುಮಗನಿಲ್ಲದ ಮದುವೆ ಕೂಟ' ಎಂದು ಈಗಿನ ಬ್ರಿಟಿಷ್ ಸಮಿತಿಯನ್ನು ನೀನೂ ತಿಳಿದಿದ್ದೀಯೆ! ವಧೂವರರಿಬ್ಬರೂ ಇರುವ ಸಮಾರಂಭ ನೆರವೇರಿಸಲು ದೇವರಿದ್ದಾನೆ ಹೆದರಬೇಡ.

ಜಿನ್ನಾ, ಆರಗಿಣಿ ಯಾನೆ ಅರೆಗ ಜ್ಯದರಾಣಿ-ನಿನ್ನ ಪ್ರೇಮಕಾಣಿಕೆಯಾಗಿ ದಯೆದಾಕ್ಷಿಣ್ಯಾನೇನನ್ನೂ ಮಾಡದೆ ನೀನು ಸೆನ್ಸಿಂದ ಬಯೆಕ್ಷಿಸುವ ಆ ಪಾಕಿಸ್ತಾನದ ಸಕಾಶೆಯೊಂದನ್ನು ತಯಾರಿಸಿ ನನಗೆ ಕಳುಹುವೆಯಾ?

ಇತಿ ನಿನ್ನ
ಚರ್ಚಿಲ್.

CHAMPAE'S
Snow & Lastrex
(Sole Distributers for Tnaia.)
Prop: K. G. NAYAK,
Santhekatte, UDIPI, S. K.

ಅಂತರಂಗವು ಮನಸೆಳೆವ—
ಬಹಿರಂಗವು ಕಣ್ಸೆಳೆವ—
ಅಂತರಂಗ ಪತ್ರಿಕೆಯಿಂದ ಆಯ್ದು ಪ್ರಕಟಿಸಿದ 2 ಕಥಾಸಂಗ್ರಹಗಳು.

ಅಂತರಂಗದ ಕಥೆಗಳು
ಶ್ರೀಗಳಾಜ ಪಿ. ವೆಂಕಟರಮಣಾಚಾರ್ಯ; ಎಸ್. ವೆಂಕಟರಾಜ; ಎಂ. ವಿ. ಹೆಗ್ಡೆ, ದೇವದಾಸ; ಕೆ. ಹೈದರ್; ಬಿ. ಎಸ್. ಆರಾಧ್ಯ ಮೊದಲಾದವರ ೧೩ ಉತ್ತಮ ಕತೆಗಳ ಸಂಗ್ರಹ.
ಬೆಲೆ 0-12-0. ಟಿ. ಖರ್ಚು 0-2-0.

ಪ್ರೇಮ-ಪ್ರವಾಹ
ಶ್ರೀಗಳಾದ ಎಂ. ವಿ. ಹೆಗ್ಡೆ; ಎಸ್.ಎಲ್. ಸುಬ್ರಹ್ಮಣ್ಯಂ; ಶ್ರೀಮತಿ ಸರಸ್ವತಿ ಬಾಯಿ ರಾಜವಾಡೆ ಮೊದಲಾದವರು ಬರೆದ ೫ ಕತೆಗಳ—ಪ್ರಣಯ ಪ್ರಲಯದ ಕತೆಗಳ ಸಂಗ್ರಹ.
ಬೆಲೆ 0-8-0. ಟಿ ಖರ್ಚು 0-2-0.

ಎರಡೂ ಪುಸ್ತಕಗಳನ್ನು ಒಮ್ಮೆ ತರಿಸಿಕೊಳ್ಳುವವರಿಗೆ ಟಪ್ಪಾಲು ಖರ್ಚು ಮುಕ್ತ.

ಪ್ರತಿಗಳಿಗೆ ಬರೆಯಿರಿ—
1. ಅಂತರಂಗ ಆಫೀಸು, ಉಡುಪಿ.
2. ನವಭಾರತ ಬುಕ್ ಡಿಪೊ, ಉಡುಪಿ.
3. ಯು. ಆರ್. ಶೆಣೈ ಎಂಡ್ ಸನ್ಸ್, ಮಂಗಳೂರು.

ವಿವಿಧ ಪಾತ್ರೆಗಳು

ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾನ್ಯಿಗಳೂ ರಿಯಾಯಿತಿ ಬೆಲ್ಲರಿಯಾಗಿಯೂ ದೊರೆಯುತ್ತವೆ

ಕಲ್ಲಂಜೆ ವ್ಯಾಸಾಚಾರ್ಯ,
ಕಡೆಕಾರು, ಉಡುಪಿ.

Greetings

This season of Deepavali
I greet you heartily,
And wish all through
New Year there be
Joy, Happiness, Prosperity.

Rao Bahadur B. S. SAWHAR, B. A. L.L. B.,
Chairman Board of Directors,
UNITED KARNATAK INSURANCE Co., Ltd.
DHARWAR.

ಘಟನಾಸಮಿತಿ ಸಭೆಯಲ್ಲಿ ನೆಹರು ಠರಾವು

'ಬ್ರಿಟಿಷ್ ಹೊಸ ಹೇಳಿಕೆಯು ಅಧಿಕಪ್ರಸಂಗಕ್ಕೆ ನಮ್ಮ ಅಂಗೀಕಾರವಿಲ್ಲ' —ಪಠೇಲ್.

ಘಟನಾ ಸಮಿತಿಯು ಉದ್ದೇಶ ನಿರೂಪಣೆಯಾಗಿ, ಸ್ವತಂತ್ರ ಸಾರ್ವಭೌಮಾಧಿಕಾರೀ ರಿಪಬ್ಲಿಕ್ ಸರಕಾರದ ಮೂಲ ಸೂತ್ರಗಳನ್ನು ನಮೂದಿಸಿರುವ ಪಂಡಿತ ನೆಹರುಗಳ ಮುಖ್ಯ ಠರಾವಿನ ಚರ್ಚೆಯು ಇದೇ ತಾ.16ನೇ ಸೋಮವಾರದಿಂದಾರಂಭಿಸಿತು. ಈ ಠರಾವಿನ ಚರ್ಚೆಯು ಲೀಗ್ ಮತ್ತು ಆಶ್ರಿತ ರಾಜ್ಯಗಳ ಪ್ರತಿನಿಧಿಗಳೂ ಹಾಜರಿರುವ ಸಭೆಯಲ್ಲಾಗುವಂತೆ, ಇದನ್ನು ಮುಂದುವರಿಸಬೇಕೆಂದು ಸೂಚಿಸುವ-'ರಿಪಬ್ಲಿಕ್' ಪದದ ಬದಲಿಗೆ 'ಪ್ರಜಾಪ್ರಭುತ್ವ'ವೆಂಬ ತಿದ್ದುಪಡಿಯುಳ್ಳ— ಡಾ। ಜಯಕರರ ಉಪಸೂಚನೆಯೊಂದೇ ರಂಗಕ್ಕೆ ಬಂದಿತ್ತು. ಉಳಿದ 40ಕ್ಕೂ ಮಿಕ್ಕಿದ ತಿದ್ದುಪಡಿಗಳಲ್ಲಿ ಹೆಚ್ಚಿನವು ಹಿಂದೆಗೆಯಲ್ಪಟ್ಟಿದ್ದುವು, ಕೆಲವನ್ನು ಅಧ್ಯಕ್ಷರು ನಿಯಮಬಾಹಿರಗೊಳಿಸಿದರು.

ಡಾ। ಜಯಕರರ ಭಾಷಣ

ತನ್ನ ತಿದ್ದುಪಡಿಯನ್ನು ಮಂಡಿಸುತ್ತಾ ಡಾ। ಜಯಕರರು ಅಮೋಘ ಭಾಷಣವಿತ್ತರು. ಸಭೆಯ ಕಣ್ಣು ತೆರೆಯ ಸಮಸರ್ವರಿಗೂ ಮುಂಜಾಗ್ರತೆ ಕೊಡುವ-ಉಪಯುಕ್ತ ಸೂಚನೆಗಳು ಅದರಲ್ಲಿದ್ದುವು. ಒಂದೆರಡು ಸಂದರ್ಭಗಳಲ್ಲಿ ಸರ್ದಾರ್ ಪಠೇಲರನ್ನು ಚುಚ್ಚು ಮಾತುಗಳಿಂದಿರಿಸುವ ಸಂದರ್ಭವೂ ಡಾ। ಜಯಕರರಿಗೆ ಬಂದಿತ್ತು. ಡಾ। ಜಯಕರರ ಸೂಚನೆಗೂ ನಾವಕ್ಕೂ ಇರುವ ಅಂತರವನ್ನು ಗಮನಿಸಿ ಕೆರಣಶಂಕರ ರೋಯಿಯವರು ವಿಧಿ ಬಿಂದುವನ್ನೆತ್ತಿ ಹಟ್ಟಾಭಿ, ಸಂತಾನಮ್ ಮೊದಲಾದವರೂ ವಾದ ಭಾಗಿಗಳು ಗಿ, ಚರ್ಚೆಯ ಚರ್ಚೆ ನಡೆಯಿತು ಅಂತೂ ಜಯಕರರ ಮಾರ್ಮಿಕ ವಾದವೂಂದು ಕುಡುಗೋಲಾಗಿ ಸಭೆಯ ಅಭಿಪ್ರಾಯ ಮಥನ ಮಾಡಿತು. ಸರ್ವರ ಶ್ಲಾಘನ ಮತ್ತು ಕರಚಪ್ಪಾಳೆ ಪಡೆಯಿತು. ಪಂಡಿತ ನೆಹರುಗಳ ಅಮೋಘವಾದ ಸ್ಫೂರ್ತಿಯನ್ನು ಡಾ। ಜಯಕರರು ಅಭಿನಂದಿಸಿ, 'ಘಟನಾ ಸಮಿತಿಯು ವ್ಯರ್ಥವಾಗದಂತೆಯಿದರ ಕಾರ್ಯಗಳು ನೀರೆಲ್ಲ ಮಾಡಿದ ಹೋಮವಾಗದಂತೆ-ಮಾಡುವದೇ ತನ್ನ ಉಪಸೂಚನೆಯ ಉದ್ದೇಶ' ಎಂದರು.

'ಅಧಿಕ'ಕ್ಕೆ ಕಾಂಗ್ರೆಸಿನ ಧಿಕ್ಕಾರ

"ಬ್ರಿಟಿಷ್ ಸರಕಾರವು ತನ್ನ ಹಿಂದಿನ ವಾಗ್ದಾನಗಳನ್ನೆಲ್ಲ ಮುರಿದುಕೊಂಡಿದೆ. ಈ ಬಾರಿಯ ಹೇಳಿಕೆಯಿಂದ ರಾಷ್ಟ್ರವು ಪ್ರಗತಿಯನ್ನು ತಡೆಗಟ್ಟುವ ವಿಶೇಷಾಧಿಕಾರವನ್ನಿದು ಅಲ್ಪಸಂಖ್ಯಾಕರಿಗೆ ಕೊಟ್ಟಿದೆ. ಇದರ ಸರಿಣಾಮವಾಗಿ ಪಾಕಿಸ್ತಾನ್ ಮತ್ತು ರಾಜಸ್ತಾನ್ ನಿರ್ಮಾಣಗೊಳ್ಳುವಂತಾದೀತು ಮುಸ್ಲಿಂ ಲೀಗಿಗೆ ವಿಶೇಷ ತರದ ಮೂರು ನಾಲ್ಕು ರಿಯಾಯಿತಿಗಳು ದೊರೆತಿವೆ. 'ಅಲ್ಪಸಂಖ್ಯಾಕರಿಗೆ ರಕ್ಷಣೆ ಕೊಡುತ್ತೇವಾದರೂ ಅಲ್ಪಸಂಖ್ಯಾಕರು ಬಹುಸಂಖ್ಯಾಕರ ಪ್ರಗತಿಗಡ್ಡ ಕಾಲಿಡಲು ಬಿಡಲಾರೆವು' ಎಂದು ಪ್ರಧಾನಿ ಆಟ್ಲಿಗಳು ಮಾರ್ಚಿ 1ರಲ್ಲಿ ಹೇಳಿದ್ದು ಮಾತಿಗೆ ದಶಂಬರ್ 6ರಲ್ಲಿ ಹೊರಡಿಸಿದ ಹೇಳಿಕೆ ವಿರುದ್ಧವಿದೆ' ಎಂದು ಡಾ. ಜಯಕರರಂದಾಗ ಸರ್ದಾರ್ ವಲ್ಲಭಾಯಿಗಳು ಮಧ್ಯದಲ್ಲೇ ಕೇಳಿದರು. "ಇದೇನು ಡಾ ಜಯಕರರು ಚಕ್ರವರ್ತಿ ಸರಕಾರದ ಘೋರಣೆಯ ಆರ್ಥವರ್ಣನೆ ಮಾಡುತ್ತಿರುವರೆ? ಅವರೆತ್ತಿಕೊಂಡ ಈ ರಿಯಾಯಿತಿಗಳೆಲ್ಲಾ ಶ್ವೇತಪತ್ರದ ಮೂಲ ಹೇಳಿಕೆಗೊಂದು ಪುರವಣಿಯಾಗಿವೆ; ಅಭಿನಾ ಉದಾ ಮೇಲೆ ಹೊಸತನ್ನು ಹೇರಿದಂತಿವೆ. ನಾವದನ್ನು ಅಂಗೀಕರಿಸಿಕೊಂಡಿಲ್ಲ, ಈ ಸಭೆಯು ಹೆಚ್ಚಿನದಾವುದನ್ನೂ ಅಂಗೀಕರಿಸಲು ಹೊರಟಿಲ್ಲ." ಪ್ರತಿಯಾಗಿ ಡಾ ಜಯಕರರಂದರು: "ಹೆಚ್ಚಿನದೊಂದನ್ನು ಅಂಗೀಕರಿಸಿಕೊಳ್ಳಿರೆಂದು ಸರ್ದಾರರೊಡನೆ ನಾನು ಕೇಳಿಕೊಂಡಿಲ್ಲ ಪಥದಲ್ಲಿರುವ ತೊಂದರೆಗಳನ್ನು ನಾನು ತೋರಿಸಿಕೊಟ್ಟುದಷ್ಟೆ. ತಾವು ನಿರಾಕರಿಸುವ ಅನಪೇಕ್ಷಿತ ಅಧಿಕಾಂಶವೆಂದು ಬ್ರಿಟಿಷ್ ಅರ್ಥದ ಕುರಿತು ಸರ್ದಾರ್ ಪಠೇಲರ ಧೋರಣೆಯಿದ್ದರೆ ಇದು ವರೆಗೆ ನಾನಾ ಕುರಿತು ಏನನ್ನೂ ಕೇಳಿದ್ದಿಲ್ಲ. ಎಸೆಂಬ್ಲಿ ಹಾಗೆ ಮಾಡಲಿಪಯಾದರೆ ಅದಕ್ಕೆ ಸ್ವಾಗತವಿದೆ. ಮೇ 16ರ ಬ್ರಿಟಿಷ್ ಹೇಳಿಕೆಯಲ್ಲಿದ್ದುದಕ್ಕಿಂತ ಹೆಚ್ಚಾಗಿ ಮುಸ್ಲಿಂ ಲೀಗ್ ಸಂವಾದಿಸಿದ ವಿಷಯವಿದು-ಮತ್ತಿದು ತೊಂದರೆಯನ್ನು ನಿರ್ಮಿಸಿದೆ- ಎಂದು ಹೇಳುವ ಅಧಿಕಾರವು ಸದ್ಯಕ್ಕಂತೂ ನನಗಿದೆ."

ಕೋರ್ಟಿನಾರ್ಜ್ಯ ನಿರರ್ಥಕ

'ಬ್ರಿಟಿಷರ ಇತ್ತೀಚೆಗಿನ ಸ್ಪಷ್ಟೀಕರಣದ ಆಧಾರದಿಂದ, ಲೀಗು ಗೈರು ಹಾಜರಿದ್ದಾಗ ಆದ ಘಟನಾ ಸಮಿತಿ ತೀರ್ಮಾನಗಳಿವುಗಳು ಆದಕ್ಕೆ ಲಗಾಮಾಗಲಾರವು. ಅವರ ಗೈರುಹಾಜರಿಯಲ್ಲಿ ನಡೆದವುಗಳೆಲ್ಲಾ ಪ್ರಾಯಶಃ "ಎ" ಗುಂಪಿಗೆ ಮಾತ್ರ ಹೊಂದಿಕೆಯಾಗಲಿವೆ, 'ಬಿ' ಮತ್ತು 'ಸಿ' ಗುಂಪುಗಳಿಗದು ಲಗಾಮಾಗದು ಅಸಂಭವ. ಲೀಗು ಒಳಗೆ ಬಾರದಿದ್ದಲ್ಲಿ ಆಶ್ರಿತ ರಾಜ್ಯಗಳೂ ಒಳ ಬರಲಾರವು ಅವರೀ ವಿಷಯವನ್ನು ಮೇಲಿಂದ ಮೇಲೆ ಸುಸ್ಪಷ್ಟ ಪಡಿಸಿದ್ದಾರೆ. ಘಟನಾ ಸಮಿತಿಯು ಕೇವಲ ಒಂದು ಪಕ್ಷದ್ದೇ ಆಗಿದ್ದರೆ ಆಶ್ರಿತ ರಾಜ್ಯಗಳು ಅದರೊಡನೆ ವ್ಯವಹರಿಸಬೇಕೆಂದಿಲ್ಲವೆಂದು ಕಾಮನ್ಸ್ ಸಭೆಯಲ್ಲಿ ಒತ್ತಿ ಹೇಳಲಾಗಿದೆ." ಎಂದು ಡಾ. ಜಯಕರರಂದಾಗ, ಸರ್ದಾರ್ ಪಠೇಲರು ತಡೆಗಟ್ಟಿ ನುಡಿದರು: 'ಡಾ. ಜಯಕರರು ಆಶ್ರಿತರಾಜ್ಯಗಳ ಪ್ರತಿನಿಧಿಯಾಗಿ ಇಲ್ಲಿ ನಿಂತಿಲ್ಲಿ. ಲೀಗು ಹಾಜರಾಗದಿದ್ದಲ್ಲಿ ಆಶ್ರಿತ ರಾಜ್ಯಗಳೂ ಹಾಜರಾಗುವಂತಿಲ್ಲವೆಂದು ಸಂಸ್ಥಾನಗಳ ಪ್ರತಿನಿಧಿ ಯಾರೂ ಹೇಳಿದ್ದಿಲ್ಲ" ಜಯಕರರು ಪಠೇಲರ ಕಡೆಗೆ ತಿರುಗಿ ಮಾನ್ಯುಡಿದರು: 'ನಾನು ನಿಮ್ಮ ಸಮಕ್ಷಮದಲ್ಲಿ ಸಂಸ್ಥಾನಗಳನ್ನು ಪ್ರತಿನಿಧಿಸುತ್ತಿಲ್ಲ; ನಿಜ. ಕಾಮನ್ಸ್ ಸಭೆಯಲ್ಲಿ ಹೇಳಲ್ಪಟ್ಟುದನ್ನೇ ನಾನಿಲ್ಲಿ ಹೇಳುತ್ತಿದ್ದೇನೆ. ನಾನಿದನ್ನು ಮಾಡಬಾರದೇಕೆ?'

ಇನ್ನೊಂದು ಘಟನಾ ಸಮಿತಿ?

ಡಾ। ಜಯಕರ ಮುಂದುವರಿಸಿದರು: "ಇವೆಲ್ಲವುಗಳ ಪರಿಣಾಮವಾಗಿ, ಮಿ. ಜಿನ್ನರಂದಂತೆ 'ಬಿ' ಮತ್ತು 'ಸಿ' ಪಂಗಡಗಳಿಗಾಗಿ ಎರಡನೇ ಘಟನಾ ಸಮಿತಿಯೊಂದು ನಿರ್ಮಾಣವಾಗಬಹುದು. ಸಂಸ್ಥಾನಗಳಿಗಾಗಿ ಮೂರನೆಯದೊಂದು ಪ್ರತ್ಯೇಕ ರೂಪುಗೊಳ್ಳಬಹುದು. 'ಸಮ್ಮತಿಸದ ಭಾಗಗಳ ಮೇಲೆ ಹೇರುವಂತಿಲ್ಲ' ಎಂದು ಸರ್ವೈಕ್ಯ ಮಂತ್ರಿಮಂಡಲದ ಮಟ್ಟಿಗೆ ವಾತ್ಸರ್ಯವಿರುವ ಭರವಸೆಯನ್ನು ಪಂಜಾಬಿನ ಹಿಂದೂ ಮತ್ತು ಸಿಖ್ಖರೂ, ಬಂಗಾಳ ಅಸ್ಸಾಮುಗಳ ಹಿಂದೂಗಳೂ ತಮಗೂ ಆಸ್ವಾಸಿಸಿಕೊಳ್ಳುವರೋ ಎಂಬ ಕುರಿತು ನಾನೀಗ ಏನನ್ನೂ ಹೇಳಲಾರೆ. ಆದರೆ ಇಷ್ಟೊಂದನ್ನು ಹೇಳಬಲ್ಲೆ:—ನಾವು ಏಕ ಹಿಂದುಸ್ತಾನ ಸಂವಾದಿಸುವ ಬದಲಿಗೆ ಪ್ರತ್ಯೇಕ ಹಿಂದುಸ್ತಾನ್ ಘಟನೆಯೊಂದನ್ನು ರೂಪಿಸುವ ಆವಶ್ಯಕತೆಗೊಳಗಾಗಬಹುದು. ಅಂತೆಯೇ ಸಾದಾ ರೀತಿಯ ಆಧವಾ ಸಡಿಲಾದ ಪಾಕಿಸ್ತಾನ್ ಘಟನೆಯನ್ನೂ, ರಾಜಸ್ತಾನ್ ಘಟನೆ ಮತ್ತೊಂದನ್ನೂ ತಯಾರಿಸಬೇಕಾಗಿಬರಬಹುದು ಕೇಂದ್ರದಲ್ಲಿ ನಿಮ್ಮ ಸಂಯುಕ್ತಾಧಿಕಾರವೆಂಬುದು ಆಂತರ್ಧಾನವಾಗುವದೇ ಸರಿ; ಅದು ಅಸ್ತಿತ್ವಕ್ಕೆ ಬರಲಾರದು. ಸದ್ಯಕ್ಕೆ ಅಲ್ಪೌಧಿಕಾರದ್ದಾದರೂ ಸಂಯುಕ್ತ ಕೇಂದ್ರಾಧಿಕಾರಸ್ಥಾಪನೆಯು ಅನುಕೂಲತೆಯೊಂದಿದೆ. ನೀವಿನ್ನು ಸಭೆ ಸೇರುವದು ಜನವರಿ 20ಕ್ಕೆಂದು. ಕೇಳುತ್ತೇನೆ. ಈ ರದ್ದಾವಿನ ಮತಗಣನೆಯನ್ನು ಆ ತಾರೀಕಿಗೆ ಮುಂದುವರಿಸಿಟ್ಟ ಮಾತ್ರಕ್ಕಾಗುವ ಹಾನಿಯೇನು? ಆಕಾರ ಕಳಚಿಬಿದ್ದೀತೇನು? ಆ ಅವಧಿಯೊಳಗೆ ಲೀಗ್ ಒಂದು ನಿರ್ಧಾರಕ್ಕೆ ಬರಬಹುದು; ಬರಲಿಲ್ಲವಾದರೆ ಆಗ ನಿಮ್ಮಿಚ್ಛೆಯಂತೆ ಮಾಡಿ. ಆದರೆ ಅಲ್ಪಾವಧಿ ಕಾದು ನಿಂತು, ಲೀಗಿನ ಸ್ರವೇಶಕ್ಕಾಸ್ಪದ ಮಾಡಿಕೊಡಬಾರದೇಕೆ? ಯಾರ ಹೆಜ್ಜೆಯನ್ನನುಕರಿಸಬೇಕೆಂದು ನಮ್ಮ ಬಯಕೆಯೋ ಆ ಮಹಾ ಮಹಾತ್ಮ ಆ ಏಕಾಕಿ-ಇಲ್ಲಿಗೆ ನೂರಾರು ಮೈಲು ದೂರದಲ್ಲೇ ಗುಡಿಯುತಿದ್ದಾನೆ. ಸಿದ್ರಿ ಕೆಡಿಸಿಕೊಂಡು, ಆಹಾರ ಸಂಸ್ಕಾರಿಸಿಕೊಂಡು, ಆರೋಗ್ಯ ಕುಗ್ಗಿಸಿಕೊಂಡು, ಸಹಕಾರ ಮತ್ತು ಸಾಹಾರ್ದತೆಯ ಎಸ್ಪೆಸ್ಟ್ರಾಂಜೋಸ್ ಕೊಟ್ಟಾದರೂ ಮುಸ್ಲಿಂ ಸಮಾಜದ ಮನವೊಲಿಸಬೇಕೆಂದು ಅಲ್ಲಿ ಒದ್ದಾಡುತಿದ್ದಾನೆ ಇಲ್ಲಿ ನಾವು ಅವಂ ಮಾದರಿಯನ್ನೇಕೆ ಅನುಕರಿಸಬಾರದು' ಎನ್ನುತ್ತಾ ಡಾ. ಜಯಕರರು ಕೊನೆಯಲ್ಲಿ 'ಈಗಾಗಲೇ ಈ ರೋಷವನ್ನು ಮಂಜೂರು ಮಾಡಿಸಿಕೊಂಡರದು ತಪ್ಪು, ಕಾನೂನಿನ ಬಾಹಿರ, ದುರವಸರ, ಅಪಾಯಕರ, ಮತ್ತು ಕೊಂದರೆದಾಯಿ" ಎಂದು ಮುಗಿಸಿದರು.



Approved firm by the Govt.of Mysore
Certified by the Agent of the Govt. of Cylone & Indian.

ಇಂದ್ರಭವನ ಕಾಫಿ ಹೊಟೆಲ್

ಬಲ್ಮಠ * * * * ಮಂಗಳೂರು.

ಹೊಸ ವ್ಯವಸ್ಥೆ—ಯೋಗ್ಯ ಬ್ರಾಹ್ಮಣರಿಂದ ತಿಂಡಿ ವಾನಿಂಯಗಳ ತಯಾರಿಕೆಗಳು-ವಿದ್ಯುದ್ದೀಪ, ರೇತಿಯೊಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ

ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ

ಬಿ. ಬಾಬು ಶೆಟ್ಟಿ

Indra Bhavan Coffee Hotel,
Balmatta Road, Mangalore.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕಾರಿ ಅಧಿಕಾರಿಗಳೂ ಪ್ರಕಟಿಸುವುದು ಗೌರವ.

ವಾರ್ಷಿಕ ಚಂದಾ ರೂ. 2-0-0 ಮಾತ್ರ.

ಬೈಂಡು ಮಾಡಿದ ಪ್ರತಿಯೊಂದು ಸಂಪುಟಕ್ಕೆ ರೂ. 2½/-

ಹೆಚ್ಚಿನ ವಿಚಾರಕ್ಕೆ ಬರೆಯಿರಿ—

ಬಾಲಚಂದ್ರ ಆಫೀಸು, ಉಡುಪಿ

ಗೌರ್, ಲಾಹಿರಿ ಸೂಚನೆಗಳು

ಪಾಕಿಸ್ತಾನ್ ಬೇಡಿಕೆಯು ಆತ್ಮಹತ್ಯೆಗೆ ಸಮಾನ– ಮುಸ್ಲಿಂ ಮತ್ತಿರ ಅಲ್ಪ ಸಂಖ್ಯಾಕರಿಗೆ ಸ್ಥಾನಗಳನ್ನು ಕಾದಿಟ್ಟು ಮುಂದಿನ ೫ ವರುಷ ಸರಿಯಂತರ ಸಮ್ಮಿಶ್ರ ಮತದಾನ ಪದ್ಧತಿ ಜ್ಯಾರಿಗೆ ತಂದೀಕು– ಬೇರೊಂದು ಜಾತಿಯ ಇಂತಿಸ್ಟೇ ಮತ ಸಂಪಾದಿಸಿಕೊಳ್ಳದೆ ಒಂದು ಜಾತಿಯ ಸದಸ್ಯನು ಆರಿಸಲ್ಪಡಕೂಡದೆಂಬ ನಿಯಮ ಬರಬೇಕು– ಎಂದು ಸರ್. ಹರಿ ಸಿಂಗ್ ಗೌರರು ಕಂದಿದ್ದ ಉಪಸೂಚನೆಯೊಂದನ್ನು ಅಧ್ಯಕ್ಷ ಪ್ರಸಾದರು ನಿಯಮವಿರುದ್ಧಗೊಳಿಸಿದರು. ಭಾರತವೀಗಲೇ ರಿವಲ್ಯೂಷನ್ ಎಂದು ಘೋಷಣಾ ಸಮಿತಿಯು ಇಲ್ಲಿಂದಿಲ್ಲಿಯೇ ಘೋಷಿಸತಕ್ಕದ್ದೆಂದು ಸೂಚಿಸಿ, ನಡುಗಾಲ ಸರಕಾರವು ಪೂರ್ಣ ಸ್ವತಂತ್ರ ಸರಕಾರದಂತೆ ಈಗಿನಿಂದಲೇ ವರ್ತಿಸಬೇಕೆಂದು ಸಲಹೆಕೊಡುವ ಕಮ್ಯೂನಿಸ್ಟ್ ಸದಸ್ಯ ಸೋಮನಾಥ ಲಾಹಿರಿಯವರ ಮತ್ತೊಂದು ಉಪಸೂಚನೆಯೂ ನಿಯಮಬಾಹಿರವಾಯಿತು ರಾಜೇಂದ್ರ ಪ್ರಸಾದರ ಅಧ್ಯಕ್ಷತೆಯಲ್ಲೇ ಎ. ಐ. ಸಿ. ಸಿ. ಸಭೆಯೊಂದರಲ್ಲಿ ಪಂಡಿತ ನೆಹರುಗಳ ಠರಾವೊಂದಕ್ಕೆ ಇದೇ ಮಾದರಿಯ ಉಪಸೂಚನೆಯನ್ನು ತಾನು ತಂದಿದ್ದಾಗ ಇದೇ ಅಧ್ಯಕ್ಷರು ಅನುಮತಿಕೊಟ್ಟಿದ್ದರೆಂದು ಲಾಹಿರಿ ನೆನಪು ಕೊಟ್ಟಾಗ ಬೇರೆ ಕಡೆಯ ಘಟನೆಗಳು ಇಲ್ಲಿಗೆ ಮೇಲ್ಪಂಕ್ತಿಯಾಗಲಾರವೆಂದು ಅಧ್ಯಕ್ಷರಂದರು.

ಶ್ರೀ. ಕೃಷ್ಣಸಿಂಹರ ಸಮರ್ಥನೆ

ಬಿಹಾರಿನ ಪ್ರಧಾನ ಮಂತ್ರಿ ಶ್ರೀ. ಕೃಷ್ಣ ಸಿಂಹರು ನೆಹರು ಠರಾವನ್ನು ಸಮರ್ಥಿಸಿ, ಸ್ವತಂತ್ರ ಭಾರತಕ್ಕಾಗಿ ಇದು ವರೆಗೆ ಆದ ರಕ್ತಾವುಗಳು, ತ್ಯಾಗ ಮತ್ತು ರಕ್ತ ಪಾತಗಳನ್ನು ನೆಹರೂ ಸೂಚನೆಯು ಯಥಾರ್ಥವಾಗಿ ಬಿಂಬಿಸಿದೆ ಎಂದರು. ಬಿಹಾರ್ ಗಲಭೆಗಳ ಕುರಿತು ಚರ್ಚಿಲ್ಲರು ಪಾರ್ಲಿಮೆಂಟಿನಲ್ಲಿ ಮಾಡಿದ್ದ ಟೀಕೆಗುತ್ತರ ಕೊಡುತ್ತಾ "ಬಿಹಾರ್ ಸರಕಾರವು ಬಲ ಪ್ರಯೋಗಕ್ಕೆ ಕ್ಷಣಮಾತ್ರ ಕೂಡಾ ಶಂಕಿಸಿದ್ದಿಲ್ಲ' ಅದು [illegible] ನರ ಜೀವಳಿಸಿದೆ" ಎಂದರು. "ಬಿಹಾರಿನದು ಹೆಗ್ಗಳಿಕೆಯ ಸರಕಾರ. ಕೇಂದ್ರಸರಕಾರವೆಂಬುದು 1935ರ ಶಾಸನಾನುಸಾರವಿದ್ದಿರುವ ತನಕ, ನಮ್ಮ ನಾಯಕ ಮತ್ತು ಸ್ಫೂರ್ತಿ ದಾಯಕನಾಗಿರುವ ನೆಹರುಗಳಂಥ ಧುರಂಧರರಲ್ಲಿದ್ದರೂ ಕೂಡಾ ಬಿಹಾರ್ ಸರಕಾರವು ಭಾರತ ಸರಕಾರದ ಅಧಿಕಾರಾಜ್ಞೆಯಂತೆ ವರ್ತಿಸಲು ತಯಾರಿಲ್ಲ. ನಮ್ಮ ಪ್ರಾಂತ್ಯದ ಆ ಅದೃಷ್ಟ ದಾಯೀ ಸಂಚಾರದಲ್ಲಿ ಪಂಡಿತ ನೆಹರುಗಳು ತನ್ನ ಮನಸ್ಸಿನ

ದಿ ಮೂಲ್ಕಿ ಬೇಂಕ್,
ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೊಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,
Moolky, S. K.

ಸಂಯುಕ್ತ ಭಾರತದ ರಚನೆಗೆ–

ಸಿಖ್, ಕೆಥೋಲಿಕ್, ಪಾರ್ಶಿ, ಆದಿವಾಸಿ, ಘೂರ್ಕ, ಹರಿಜನ್—ಪ್ರತಿನಿಧಿಗಳ ಬೆಂಬಲ.

ನಲ್ಲೇನಿದೆ ಎಂಬುದನ್ನು ಜನತೆಯಿದಿರ್ಪು ಬಿಚ್ಚಿದರೆಂದು ನಾನು ಚರ್ಚಿಲ್ಲರಿಗನ್ನುತ್ತೇನೆ. ಪಂಡಿತ ನೆಹರು ಮತ್ತು ರಾಜೇಂದ್ರ ಪ್ರಸಾದರು ಕುಣ್ಮಂದಿದ್ದುದು–ಬಿಹಾರಿನ ಹುಚ್ಚಾಟದ ಪರಿಣಾಮವಾಗಿ ಮಹಾತ್ಮಾ ಗಾಂಧಿ ಸಾಯುತ್ತಾರೆಂಬ ಹೆದರಿಕೆ ಹುಟ್ಟಿದುದು–ಇವೆರಡಲ್ಲವಾಗಿದ್ದರೆ ನನಗಥಿಕಾರವಿದ್ದೂ ಕೂಡಾ ಪ್ರಾಂತ್ಯದ ಮುಸಲ್ಮಾನರ ಪ್ರಾಣ ರಕ್ಷಿಸಲು ನನ್ನಿಂದ ಆಗುತ್ತಿರಲಿಲ್ಲ. ಬಿಹಾರಿನಕಾಂಗ್ರೆಸ್ ಸರಕಾರವು ಸ್ಥಾಪಿಸಿದ ಹಪ್ಪು ಫಕ್ಕನೆ ಶಾಂತಿಸ್ಥಾಪಿಸಲು ನಿಮ್ಮಿಂದಾದರಾಗುತ್ತಿರಲಿಲ್ಲವೆಂದು ನಾನು ಈ ದೇಶದ ಸರ್ವ ಪ್ರಥಮ ಅಧಿಕಾರಿಯೊಡನೆಯೇ (ವೈಸರಾಯರಿಗಿರಬಹುದು) ಹೇಳಿದ್ದೆ" ಎಂದುಶ್ರೀ. ಕೃಷ್ಣಸಿಂಹರು ಬಹಿರಂಗಪಡಿಸಿದರು.

ಡಾ|| ಮುಕರ್ಜಿಗಳ ಬೆಂಬಲ

ತಾ. 17ರ ಸಭೆಯಲ್ಲಿ ನೆಹರೂ ಠರಾವನ್ನು ಸಮರ್ಥಿಸಿ ಹಿಂದೂ ಮಹಾಸಭಾ ಧ್ಯಕ್ಷ ಡಾ. ಶ್ಯಾಮಪ್ರಸಾದ ಮುಕರ್ಜಿಯವರಿತ್ತ ಭಾಷಣವು ಸಭೆಯ ಪ್ರಥಮ ಎಂಗ್ಲಿಷ್ಕಾರ್ಯಗಳಲ್ಲೊಂದಾಗಿತ್ತು. ಲೀಗ್ ಪ್ರವೇಶಕ್ಕಾಗಿ ನಿರ್ಣಯ ಮುಂದುವರಿಸುವದರಲ್ಲಿರುವ ಅಪಾಯವನ್ನು ಒತ್ತಿಹೇಳಿ ಮುಂದಕ್ಕಾದರೂ ಅವರು ಬರುವರೆಂಬ ಭರವಸೆಯಿದೆಯೇ ಎಂದವರು ಪ್ರಶ್ನಿಸಿದರು. 'ಔತಣ ಕೂಟಪೊಂದು ನೆರೆದಿದೆ, ಆಮಂತ್ರಿತರಲ್ಲಿ ಕೆಲವರು ಬಂದಿಲ್ಲವಾದ್ದರಿಂದ ನಾವು ಉಣ್ಣುವದು ಹೇಗೆ, ಎಂದು ಜಯಕರರು ಲಡ್ಡಿ ಮಾಡುತಿದ್ದಾರೆ ನನ್ನ ಪ್ರಶ್ನೆ ತದ್ವಿರುದ್ಧ— ಈಗ ಬಂದು ಕೂಡಿರುವಂಥಹ ಆತಿಥಿಗಳ ಗತಿಯೇನು?" (ಸಭೆಯಲ್ಲಿ ನಗು) ಎಂದರು. ಡಾ. ಮುಕರ್ಜಿ. 'ಮದುಮಗಳಿಲ್ಲದ ಮದುವೆ ಎಂದು ಚರ್ಚಿಲ್ ನವ್ಮೀ ಸಭೆಗೆ ಹೆಸರಿಟ್ಟಿದ್ದಾರೆ. ಆಗಲಿ, ಘೋಟನಾ ಸಮಿತಿಯಲ್ಲಿರುವ ಮದುಮಗಳಂದಿರೆಷ್ಟು? ಒಬ್ಬಳು ಆಸ್ಪ್ರಿತ ರಾಜ್ಯಗಳು, ಮತ್ತೊಬ್ಬಳು ಮುಸ್ಲಿಂ ಲೀಗ್? ಲೀಗು ಮದುಮಗಳಾದರೆ, ಘೋಟನಾ ಸಮಿತಿಗೆ ಹೋಗಲು ಹೇಳುವಒದಲಿಗೆ ಈ ವಿಧಾನ ತೊಟ್ಟು, ಚರ್ಚಿಲ್ಲರು ಆದನ್ನು ದುರ್ಮಾಗಕ್ಕೆಳೆಯುವ ಪಾಪ ಮಾಡುತ್ತಿಲ್ಲವೇ ಲೀಗ್ ಬರುವದು ಬೇಡವೆಂದು ಯಾರೂ ಹೇಳಿಲ್ಲ ತಾನೆ" ಎಂದು ಡಾ| ಶ್ಯಾಮಪ್ರಸಾದರ ಮಾದ, ಬ್ರಿಟಿಷ್ ಹೇಳಿಕೆಗೊಪ್ಪಿಗೆಯಿಲ್ಲವೆಂದ ಹರೇಲರ ಮಾತಿನಿಂದ ತನಗಾದ ಸಂತೃಪ್ತಿಯನ್ನು ತಿಳಿಸಿ, ಹಿಂದುಗಳೂ ನಾಲ್ಕು ಪ್ರಾಂತ್ಯಗಳಲ್ಲಿ ಆಲ್ಪಸಂಖ್ಯಾಕರೇ ಎಂಬುದನ್ನು ವರ್ಣಿಸಿ, ಸದ್ಯದ ಘೋಟನಾ ಸಮಿತಿಯ ಹನ್ನೆಲೆಯು ಹಿಂದೀ ಜನತೆ ಕೊರತು ಬ್ರಿಟಿಷ್ ಪಾರ್ಲಿಮೆಂಟಲ್ಲವೆಂದೂ ಶಂಕೆಯನ್ನು ಮುಂದುವರಿಸಿ ಆ ಜನತೆಗನ್ಯಾಯವಾಡಬಾರದು, ಜಿಗುಪ್ಸೆ ಮೂಡಿಸಬಾರದೆಂದೂ ಡಾ| ಮುಖರ್ಜಿ ಆಗ್ರಹದ ವಿನಂತಿಮಾಡಿಕೊಂಡರು.

ಡಾ|| ಅಂಬೇಡ್ಕರರ ಭಾಷಣ

ಜಯಕರ್ ಸೂಚನೆಯನ್ನು ಸಮರ್ಥಿಸಲು ಡಾ| ಅಂಬೇಡ್ಕರರೆದ್ದಾಗ ಸಭೆಯಲ್ಲಿ ಉತ್ಸಾಹರವವೆದ್ದಿತ್ತು. ಡಾಕ್ಟರರ ಆ ಭವ್ಯಾಯಗಳೂ ನಿರೀಕ್ಷೆಗೆ ವಿರುದ್ಧವಾಗಿ ಶ್ಲಾಘನೀಯವಿದ್ದವು. 'ನಾವೀ ದಿನ ರಾಜಕೀಯತ', ಸಾಮಾಜಿಕವಾಗಿ, ಆರ್ಥಿಕವಾಗಿ ವಿಭಾಗಿಸಲ್ಪಟ್ಟಿದ್ದೇವೆ; ಭಿನ್ನ ಸಮರ ಪಾಳಯಗಳಲ್ಲಿದ್ದೇವೆ, ಎಂಬುದನ್ನು ನಾನು ಬಲ್ಲೆ, ಪ್ರಾಯಶಃ ನಾನೂ ಆಯುದ್ಧ ಪಾಳಯನಾಯಕರಲ್ಲೊಬ್ಬ. ಹೀಗಿದ್ದರೂ ನಮಗೆ ಸಮಯ ಸಂದರ್ಭಗಳಿದಗಿದಲ್ಲಿ, ದೇಶವು ಏಕರೂಪಿಯಾಗ ದಂತೆ ಪ್ರತಿಬಂಧಿಸುವ ಶಕ್ತಿಯಿರುವಂತಹದು ಪ್ರಪಂಚದಲ್ಲೇ ಇಲ್ಲ; ಇಷ್ಟೆಲ್ಲಾ ಜಾತಿಮತಗಳ ಗೊಂದಲವದ್ದರೂ, ನಾವು ಕೆಲವೊಂದು ವಿಧಾನಗಳಲ್ಲಿ ಒಗ್ಗಟ್ಟಿನ ಜನತೆಯಾಗಿ ರಾಜಿಸಬಲ್ಲೆವು-ಎನ್ನಲು ನನಗೆ ಎಳ್ಳಷ್ಟು ಶಂಕೆಯಿಲ್ಲ(ಉತ್ಸಾಹ ಧ್ವನಿ) ಭಾರತದ ವಿಭಾಗಕ್ಕೆ ನುಸ್ಲಿಂ ಲೀಗ್ ಹೂಡಿರುವ ಚಳವಳದ ಪೂರ್ಣ ಅರಿವಿದ್ದೇ ನಿಸ್ಸಂದೇಹವಾಗಿ ಹೇಳುತಿದ್ದೇನೆ-ಕೆಲವೊಂದು ದಿನಗಳಲ್ಲಿ ಮುಸಲ್ಮಾನರಲ್ಲೂ ಜ್ಞಾನೋದಯವಾಗಿ ಸಂಯುಕ್ತ ಭಾರತವು ಪ್ರತಿಯೊಬ್ಬರಿಗೂ ಹಿತಕರವೆಂಬುದನ್ನು ಎಲ್ಲರಂತೆ ಅವರೂ ಮನಗಾಣುವಂತಾಗಲಿದೆ. (ಉತ್ಸಾಹ ಧ್ವನಿ)" ಎಂದೇ ಡಾ| ಅಂಬೇಡ್ಕರರ ಆಮರ ವಾಣಿ. ಜನರನ್ನು ದಿಗಿಲುಗೊಳಿಸುವ ಘೋಷಣೆಗಳನ್ನು ನಿಲ್ಲಿಸಬೇಕೆಂದು ವಿನಂತಿಸಿಕೊಂಡು ಲೀಗಿನ ಸಹಕಾರಕ್ಕನುಕೂಲತೆಯೊದಗಿಸಬೇಕೆಂದೂ, ಹೋರಾಟದ ಮಾತಾಡುವವರು, ಆ ಹೋರಾಟವು ಜಾತಿಬಂಧುಗಳಾದ ಲೀಗಿನೊಡನೆ ಆಥವಾ ಲೀಗ್ ಮತ್ತು ಸರಕಾರದ ಸಮ್ಮಿಶ್ರ ಕೂಟದೊಡನೆ ಎಂಬುದನ್ನು ತಿಳಿದಿರಬೇಕೆಂದೂ ಎಚ್ಚರಿಸಿದರು, "ವ್ಯಕ್ತಿಶಃ ನನ್ನ ಮಟ್ಟಿಗೆ ಪ್ರಾಂತಿಕ ಸಂಗಡಗಳು ಸಮ್ಮತವಲ್ಲ (ಉತ್ಸಾಹ ಧ್ವನಿ) ಬಲವಾದ ಸಂಯುಕ್ತ ಕೇಂದ್ರವನ್ನು—1935ರ ಕಾನೂನಿನನ್ವಯದ ಕೇಂದ್ರಕ್ಕಿಂತ ಎಷ್ಟೋ ಬಲವಾದ ಒಂದು ಕೇಂದ್ರವನ್ನು—ನಾನಪೇಕ್ಷಿಸುತ್ತೇನೆ (ಉತ್ಸಾಹ ಧ್ವನಿ)" ಎನ್ನುತ್ತಾ, "ಆದರೂ ಕಾಂಗ್ರೆಸಿಗೆ ಸ್ವತಃ ತಿಳಿದಿರುವ ಕಾರಣಗಳಿಂದಾಗಿ ದುರ್ಬಲ ಕೇಂದ್ರ ರಚನೆಗೂ ಪ್ರಾಂತಿಕ ಪಂಗಡಗಳ ರಚನೆಗೂ ಒಪ್ಪಿರುವ ಕಾಂಗ್ರೆಸು ಈ ಠರಾವಿನಲ್ಲಿ ಆ ಪಂಗಡಗಳ ಪ್ರಸ್ತಾಪವನ್ನೇ ಎತ್ತದಿರುವದೇಕೆ" ಎಂದು ಅಂಬೇಡ್ಕರ್ ಆಕ್ಷೇಪಿಸಿದರು 'ನಿಯಮ ಬದ್ಧತೆಗೂ ನಿನ್ನೆಯ ವೀಲತೆಗೂ ವ್ಯತ್ಯಾಸವಿದೆ; ರಾಜ್ಯ ರಚನೆಯು ಕಾಯಿದೆಯ ಮಿತಿಯೊಳಗಿನದಿರದೆ ವಿಶಾಲ ಭಾವನೆಯಿಂದ ವರ್ತಿಸುವಂತಹದಿದೆ' ಎನ್ನುತ್ತಾ ಲೀಗ್ ಪ್ರವೇಶಕ್ಕನುಕೂಲವಾಗುವಂತೆ ಆದಕ್ಕೆ ಸಮಯಕೊಡಬೇಕೆಂದು ಒತ್ತಾಯದಿಂದ ಕೇಳಿಕೊಂಡರು.

ಸಿಖ್ಖರ ಬೆಂಬಲ

ಸಿಖ್ಖರ ಪರವಾಗಿ ಸರ್ದಾರ್ ಉಜ್ಜಲ ಸಿಂಗರು ಪಂಡಿತ ನೆಹರುಗಳ ಠರಾವನ್ನು ಸ್ವಾರ್ಹಿದಾಯಕ ಭಾಷಣದಿಂದ ಸಮರ್ಥಿಸಿದರು. "ಲೀಗ್ ಬರಬೇಕೆಂಬುದನ್ನೇ ಮಿಕ್ಕವರಂತೆ ನಾನೂ ಬಯಸುವವ;ಆದರದು ಬಾರದಿರುವ ತಪ್ಪು ನಮ್ಮದಲ್ಲ. ಇನ್ನಾದರೂ ಅದು ಬರುವ ಭರವಸೆಯಿಲ್ಲ. ಡಾ. ಜಯಕರರ ಇಂದಿನ ವಾದವೇ ಜನವರಿ ತಾ. 20ರ ಸಭೆಯಲ್ಲೂ ಮುಂದೆ ಬರುವ ಪರಿಸ್ಥಿತಿಯುಳಿದೀತು. ("ಕೇಳಿರಿ ಕೇಳಿರಿ)" ಎನ್ನುತ್ತಾ ಆಶ್ರಿತ ರಾಜ್ಯಗಳು ಹೆದರುವ ಅಂತವೇ ಠರಾವಿನಲ್ಲಲ್ಲವೆಂಬುದನ್ನು ನಿದರ್ಶನಕೊಟ್ಟು ನಿರೂಪಿಸಿದರು. ಸಿಖ್ಖರು ಇದು ವರೆಗನುಭವಿಸಿದ ಘೋರಜೆಯನ್ನು ವರ್ಣಿಸಿ, ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಅಶ್ವಾಸನೆಯನ್ನು ನಂಬಿಯೇ ತಾವು ಘೋಟನಾ ಸಮಿತಿಗೆ ಪ್ರವೇತಿಸಿದೆವೆಂದು ತಿಳಿಸಿ ಆ ವಿಶ್ವಾಸಕ್ಕೆಡೆ ದಂತಾಗಬೇಕೆಂದರು. 'ಸಿಖ್ಖರಿಗೆ ಸರಿಯಾದ ರಕ್ಷಣೆಬೇಕು ಈ ಮಹಾ

[ಮುಂದಿನ ಪುಟ ನೋಡಿರಿ]

ಉಡುಪಿ ಬೋರ್ಡಿಂಗ್
ಎಂಡ್
ಲೋಜಿಂಗ್ ಮಧುರಾ.

ತಾ. 8—8—1945ರಲ್ಲು ಜರಗಿದ ಆರನೆ ಹುಟ್ಟುಹಬ್ಬದ ಸಮಾರಂಭದ ಸಂತೋಷ ಕಾಲದಲ್ಲಿ ನಮಗೆ ಸಕಲ ವಿಧದಿಂದಲೂ ಬೆಂಬಲವಿತ್ತು ಪ್ರೋತ್ಸಾಹಿಸಿದ ಮಹನೀಯರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇವೆ. ಇದಕ್ಕಿಂತಲೂ ದ್ವಿಗುಣಿತವಾಗಿ ನಮ್ಮ ಸೇವೆಯನ್ನು ಹೊಸ ವರುಷದಲ್ಲಿ ಸಲ್ಲಿಸಲು ಮಹಾಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನೀಯುವರೆಂದು ನಿರೀಕ್ಷೆ

ಎಲ್. ನರಸಿಂಗ ರಾವ್,
ಪ್ರೊಪ್ರೈಟರ್.

1947ನೇ ಇಸವಿಯ
ಡೈರಿಗಳು
ಸಿಗುತ್ತವೆ.

ಬೆಲೆ ರೂ 1—4—0.
ಟಪ್ಪಾಲು ಖರ್ಚು 0-2-0 ಪ್ರತ್ಯೇಕ.
ನವಭಾರತ ಬುಕ್ ಡಿಪೊ, ಉಡುಪಿ.

The Canara Banking Corporation Limited.

(Incorporated in British India, with limited Liability)

Estd 1906.

Head Office: **UDIPI**, South Kanara.

Authorised Capital	...	Rs 25,00,000
Issued & Subscribed	...	,, 16,00,000
Paid up	...	,, 15,87,600
Reserves	...	,, 1,60,000
Total Resources Around		,, 24 Crores.

Branches at– Bombay, Madras, Bangalore, Coimbatore, Salem, Calicut, Hubli, Mysore, Cochin, Mangalore, Madras etc., etc

Banking Business of Every Description Transacted.

ನವಯುಗ

ಉಡುಪಿ, ಗುರುವಾರ, ೨೬-೧೨-'೪೬

ಒಂದು ಹಾದಿ

